॥ ಓಂ ॥

॥ ಪಿಬತ ಭಾಗವತಂ ರಸಮಾಲಯಂ ॥

ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ ।
ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ ಶುಶ್ರೂಷುಭಿಸ್ತತ್ಕ್ಷಣಾತ್ ॥

ಶ್ರೀಮದ್ವೇದವ್ಯಾಸಪ್ರಣೀತಂ

ಶ್ರೀಮದ್ಭಾಗವತಮ್

ವಿಜಯಧ್ವಜೀ ಟೀಕಾನುಸಾರಿ
ಮೂಲಶ್ಲೋಕ, ಅನ್ವಯಾನುಸಾರ ಪ್ರತಿಪದಾರ್ಥ, ವಿಶೇಷಾರ್ಥ
ಸರಳ ಕನ್ನಡ ಕಥಾನುವಾದ ಸಹಿತವಾದುದು

ಷಷ್ಠಸ್ಕಂಧ

※

ಲೇಖಕರು :

ವಿದ್ವಾನ್ ಎನ್. ಕೃಷ್ಣಮೂರ್ತಿ, M.A., B.O.L.

ಪ್ರಥಮ ಮುದ್ರಣ ೧೯೭೪

ಬೆಲೆ: ಒಂಬತ್ತು ರೂಪಾಯಿಗಳು
ರೂ. 9-00
(ಅಂಚೆ ವೆಚ್ಚ ಬೇರೆ)

ಪ್ರತಿಗಳು ದೊರೆಯುವ ಸ್ಥಳ:

ಮ್ಯಾನೇಜರ್
ಶ್ರೀ ಸುಧಾ ಕಾರ್ಯಾಲಯ
ಉತ್ತರಾದಿಮಠ
ಬೆಂಗಳೂರು-560004

ವಿದ್ವಾನ್ ಎನ್. ಕೃಷ್ಣಮೂರ್ತಿ, ಎಂ.ಎ.
'ಶ್ಯಾಮಪ್ರಸಾದ'
105, 5ನೆಯ ರಸ್ತೆ, ಚಾಮರಾಜಪೇಟೆ
ಬೆಂಗಳೂರು-560018

ಮುದ್ರಕರು:
ಪ್ರಭಾ ಮುದ್ರಣಾಲಯ
22-A, ಡಾ॥ ಡಿ. ವಿ. ಗುಂಡಪ್ಪ ರಸ್ತೆ
ಬಸವನಗುಡಿ, ಬೆಂಗಳೂರು-560004

H K. SRINIVASA RAO.
No. 26, 2nd Floor, 15th Cro
Near Vidhyapeeta Circle,
Ashok Nagar, BANGALORE-56

ಅಧ್ಯಾಯ ವಿಷಯ ಸೂಚಿಕೆ

ಶ್ರೀಮದ್ಭಾಗವತಮ್

ಷಷ್ಠಸ್ಕಂಧ—ಪ್ರಥಮೋಽಧ್ಯಾಯಃ

ರಾಜೋವಾಚ—

ನಿವೃತ್ತಿಮಾರ್ಗಃ ಕಥಿತಃ ಆದೌ ಭಗವತಾ ಯಥಾ ।
ಕ್ರಮಯೋಗೋಪಲಬ್ಧೇನ ಬ್ರಹ್ಮಣಾ ಯದಸಂಸೃತಿಃ ॥ ೧ ॥

ಅಧ್ಯಯನ ಮಾಡುವವರಿಗೂ ಹೇಳುವವರಿಗೂ ಕೇಳುವವರಿಗೂ ಅಧಿಕ ಫಲವು ಬರುವುದೆಂದು ತಿಳಿಸಲು ಈ ಸ್ಕಂಧದಲ್ಲಿ ಹಿಂದಿನ ಸ್ಕಂಧಗಳಲ್ಲಿ ಹೇಳಿದ ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸುತ್ತಾರೆ. ಅದರಲ್ಲಿಯೂ ಪ್ರಾರಂಭಿಸಲಿರುವ ಈ ಅಧ್ಯಾಯದಲ್ಲಿ ಮುಕ್ತಿಯೋಗ್ಯರಾದ ಎಲ್ಲ ಅಧಿಕಾರಿಗಳೂ ಅನುಷ್ಠಿಸಬಹುದಾದ, ಸುಖವಾಗಿ ಮಾಡಬಹುದಾದ, ಶ್ರೀಹರಿಯ ಪ್ರಸಾದವನ್ನು ತಂದುಕೊಡುವ ಜ್ಞಾನಕ್ಕೆ ಸಾಧನವಾದ ಭಕ್ತಿಯುಕ್ತ ಹರಿನಾಮಸಂಕೀರ್ತನೆಯೂ ಪಾಪವನ್ನು ಹೋಗಲಾಡಿಸುವುದರಮೂಲಕ ಆವಶ್ಯಕ ಮುಕ್ತಿಗೆ ಸಾಧನವೆಂಬುದನ್ನು ನಿರೂಪಿಸುತ್ತಾರೆ. ಇದಕ್ಕಾಗಿ ಜ್ಞಾನವಿಲ್ಲದ ಜನರಲ್ಲಿ ಕೃಪೆಯುಳ್ಳ ಪರೀಕ್ಷಿದ್ರಾಜರು ತಮಗೆ ತಿಳಿದಿದ್ದರೂ ಯಾವುದಿಲ್ಲದಿದ್ದರೆ ಪಾಪವು ನಾಶವಾಗುವುದಿಲ್ಲವೋ ಪಾಪ ನಾಶವಾಗದಿದ್ದರೆ ಜ್ಞಾನವೇ ಹುಟ್ಟುವುದಿಲ್ಲವೋ, ಪಾಪವಿದ್ದರೆ ಮೋಕ್ಷ ಸಾಮಾನ್ಯವೂ ಆಗುವುದಿಲ್ಲವೋ ಆ ಕಾರಣದಿಂದ ತಾವು ಆ ಪಾಪನಾಶಕ ಉಪಾಯವನ್ನೇ ಅವಶ್ಯಕವಾಗಿ ಹೇಳಬೇಕು ಎಂದೀ ರೀತಿಯಲ್ಲಿ ಈ ವಿಷಯವನ್ನೇ ಶುಕಾಚಾರ್ಯರ ಬಾಯಿಯಿಂದ ಹೇಳಿಸುವುದಕ್ಕಾಗಿ ದ್ವಿತೀಯ ಸ್ಕಂಧದಲ್ಲಿ ಹೇಳಿದ ವಿಷಯವನ್ನು ಅನುವಾದ ಮಾಡುತ್ತಾರೆ. ಭಗವತಾ=ಪೂಜ್ಯರಾದ ತಮ್ಮಿಂದ ಆದೌ=ದ್ವಿತೀಯ ಸ್ಕಂಧದ ಪ್ರಾರಂಭದಲ್ಲಿ 'ವರೀಯಾನೇಷ ತೇ ಪ್ರಶ್ನಃ' ಇತ್ಯಾದಿ ವಾಕ್ಯಗಳಿಂದ ಯತ್=ಯಾವ ನಿವೃತ್ತಿಮಾರ್ಗದ ಅನುಷ್ಠಾನದಿಂದ ತಿಳಿಯಲ್ಪಟ್ಟ, ಕ್ರಮಯೋಗೋಪಲಬ್ಧೇನ=ಕ್ರಮವಾಗಿ ಅನುಷ್ಠಿಸಿದ ವೈರಾಗ್ಯ, ಭಕ್ತಿ, ನಿರಂತರಧ್ಯಾನ, ಜ್ಞಾನವೆಂಬ ಉಪಾಯದಿಂದ ಸಾಕ್ಷಾತ್ಕೃತನಾದ ೨) ಮೊದಲು ಸ್ಮರಣ, ಅನಂತರ ಒಂದೊಂದೇ ಅವಯವಗಳ ಧ್ಯಾನ, ಅನಂತರ ಎಲ್ಲ ಅವಯವಗಳ ಧ್ಯಾನ ಎಂಬೀ ಕ್ರಮದ

ಮೊದಲನೆಯ ಅಧ್ಯಾಯ

ಪರೀಕ್ಷಿದ್ರಾಜರು :—ಪೂಜ್ಯರಾದ ತಾವು ದ್ವಿತೀಯ ಸ್ಕಂಧದ ಪ್ರಾರಂಭದಲ್ಲಿ ಸ್ವರೂಪಾನಂದಾವಿರ್ಭಾವರೂಪ ಮೋಕ್ಷಕ್ಕೆ ಸಾಧನವಾದ ನಿವೃತ್ತಿ ಮಾರ್ಗವನ್ನು ವಿವರಿಸಿದಿರಿ. ಅದನ್ನು ಅನುಷ್ಠಾನ ಮಾಡುವುದರಿಂದ ವೈರಾಗ್ಯ, ಭಕ್ತಿ, ನಿರಂತರಧ್ಯಾನ ಮತ್ತು ಜ್ಞಾನಗಳು ಕ್ರಮವಾಗಿ ತಿಳಿಯುವುವು. ಅವುಗಳಿಂದ

ಉಪಾಯದಿಂದ ಅಪರೋಕ್ಷೀಕೃತನಾದ ಬ್ರಹ್ಮಣಾ= ಸರ್ವಗುಣಪರಿಪೂರ್ಣನಾದ ನಾರಾಯಣನಿಂದ (ಜೀವಸ್ಯ)=ಜೀವರಿಗೆ, ಅಸಂಸೃತಿಃ=ಸಂಸಾರವಿಲ್ಲದೆ ಹೋಗುವುದೆಂಬ (ಮೋಕ್ಷವೆಂಬ) ಫಲವು ಆಗುವುದೋ (ಸಃ) ನಿವೃತ್ತಿಮಾರ್ಗಃ=ಸ್ವಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷದ ಸಾಧನ ವಿಶೇಷವು, ಯಥಾ=ಯಥಾವತ್ತಾಗಿ ಅವ್ಯಾಪ್ತಿ ಮೊದಲಾದ ಮೂರು ದೋಷಗಳೂ ಇಲ್ಲದ ಸೃಷ್ಟಿ ಮೊದಲಾದ ಲಕ್ಷಣಗಳಿಂದ ಲಕ್ಷಿತನಾದ ನಾರಾಯಣನ ಸ್ವರೂಪವು ಮೋಕ್ಷರೂಪ ಪುರುಷಾರ್ಥಕ್ಕೆ ಮುಖ್ಯೋಪಯೋಗಿಯೆಂದು, ಕಥಿತಃ=ವಿಸ್ತರಿಸಲ್ಪಟ್ಟಿತು. ವಿ.ಅ. ಯಥಾ ಎಂದು ಹೇಳಿದ್ದರಿಂದ ನಿವೃತ್ತಿಮಾರ್ಗವನ್ನು ವಿಸ್ತರಿಸದೆ ಸೃಷ್ಟಿ ಮೊದಲಾದುವನ್ನು ಹೇಳಿದ್ದು ಯಾವುದಕ್ಕೆ ಉಪಯೋಗಿಯಾಗಿ ಸಂಗತವಾಗಿದೆ? ಎಂಬ ಆಶಂಕೆಗೆ ಉತ್ತರ ಕೊಟ್ಟಿರುವರು. ಉತ್ತರಾರ್ಧದಿಂದ ಅದರ ಫಲವನ್ನೇ ಹೇಳಿರುವರು. ಬ್ರಹ್ಮಣಾ ಎಂದು ತೃತೀಯಾ ವಿಭಕ್ತಿಯನ್ನು ಹೇಳಿದ್ದರಿಂದ ಕರ್ತೃವಾಗಿಯೂ ಕರಣವಾಗಿಯೂ ಶ್ರೀಹರಿಯು ಮುಖ್ಯನೆಂದು ಪ್ರಕಟಪಡಿಸಿರುವರು. ಬ್ರಹ್ಮ ಪದ ಪ್ರಯೋಗದಿಂದ 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋ ಹ್ಯಸ್ಮಿನ್ ಗುಣಾ' ಎಂಬ ಶ್ರುತಿಯಂತೆ ಗುಣಪೂರ್ಣನೆಂದು ತಿಳಿದರೇನೇ ಶ್ರೀಹರಿಯು ಮೋಕ್ಷಪ್ರದನು. ಗುಣರಹಿತನೆಂದು ತಿಳಿದರೆ ಅಲ್ಲವೆಂದು ತಿಳಿಸಿರುವರು. ಹೀಗೂ ಅರ್ಥವನ್ನು ಮಾಡಿರುವರು. ನಿವೃತ್ತಿಮಾರ್ಗಃ=ನಿವೃತ್ತಿ ಧರ್ಮದಿಂದ ಹೊಂದಬಹುದಾದ ಅರ್ಚಿರಾದಿ ಮಾರ್ಗವು 'ವೈಶ್ವಾನರಂ ಯಾತಿ' ಇತ್ಯಾದಿ ವಾಕ್ಯಗಳಿಂದ ಯಥಾವತ್ತಾಗಿ ಹೇಳಲ್ಪಟ್ಟಿತು. ಯತ್=ಯಾವ ಮಾರ್ಗದಿಂದ ಹೋದವರಿಗೆ, ಕ್ರಮಯೋಗೋಪಲಬ್ಧೇನ= ಅರ್ಚಿರಾದಿ ಮಾರ್ಗದಿಂದ ಹೊಂದಲ್ಪಟ್ಟ, ಬ್ರಹ್ಮಣಾ (ಸಹ)=ಚತುರ್ಮುಖಬ್ರಹ್ಮದೇವರೊಂದಿಗೆ ಅಸಂಸೃತಿಃ =ಶ್ರೀಹರಿಯನ್ನು ಸೇರುವಿಕೆಯೆಂಬ ಮೋಕ್ಷವು ಭವಿಷ್ಯತಿ=ಆಗುವುದೋ ಅಂತಹ ನಿವೃತ್ತಿಮಾರ್ಗ ಎಂದನ್ವಯ. 'ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ | ಪರಸ್ಯಾಂತೇ ಕೃತಾತ್ಮಾನಃ ಪ್ರವಿಶಂತಿ ಪರಂ ಪದಂ' || (ಪ್ರಳಯವು ಪ್ರಾಪ್ತವಾದಾಗ ಬ್ರಹ್ಮಕಲ್ಪದ ಕೊನೆಯಲ್ಲಿ ಸಾಧನೆ ಮುಗಿದು ಧನ್ಯರಾದ ಅವರೆಲ್ಲರೂ ಬ್ರಹ್ಮದೇವರೊಂದಿಗೆ ಶ್ರೀಹರಿಯನ್ನು ಪ್ರವೇಶಿಸುವರು) ಎಂಬುದರಿಂದ ಇದು ಸ್ಪಷ್ಟವು. || ೧ ||

ಶ್ರೀಹರಿಯ ಅಪರೋಕ್ಷವಾಗುವುದು. ಅಪರೋಕ್ಷಕ್ಕೆ ವಿಷಯನಾದ ಸರ್ವಗುಣಪರಿಪೂರ್ಣನಾದ ನಾರಾಯಣನು ಜೀವರಿಗೆ ಸಂಸಾರವಿಲ್ಲದಂತೆ ಮಾಡುವನು— ಮೋಕ್ಷ ಕೊಡುವನು. ಇವನನ್ನು ಅವ್ಯಾಪ್ತಿ ಮೊದಲಾದ ದೋಷಗಳಿಲ್ಲದ 'ಸೃಷ್ಟಿಗೆ ಕಾರಣ' ಮುಂತಾದ ಲಕ್ಷಣಗಳಿಂದ ತಿಳಿಯುವುದು ಮೋಕ್ಷಕ್ಕೆ ಮುಖ್ಯೋಪಯೋಗಿಯೆಂದು ವಿಸ್ತರಿಸಿದಿರಿ. ಮುನಿಗಳೇ, ಪ್ರವೃತ್ತಿಮಾರ್ಗಕ್ಕೆ ಕಾಮ ಕರ್ಮಗಳಿಂದ

ಪ್ರವೃತ್ತಿಲಕ್ಷಣಶ್ಚೈವ ತ್ರೈಗುಣ್ಯವಿಷಯೋ ಮುನೇ ।
ಯೋಽಸಾವಲೀನಪ್ರಕೃತೇರ್ಗುಣಸರ್ಗಃ ಪುನಃ ಪುನಃ ॥ ೨ ॥

ಮುನೇ = ಮನನಶೀಲರಾದ ಶುಕಾಚಾರ್ಯರೇ, ಯಃ = ಯಾವ ಪ್ರವೃತ್ತಿ ಧರ್ಮಾಚರಣೆಯೆಂಬ ಮಾರ್ಗವು ಅಲೀನಪ್ರಕೃತೇಃ=ಕಾಮ್ಯಕರ್ಮಗಳಿಂದ ದೂಷಿತ ವಾದ ಮನಸ್ಸಿನ ದೋಷವನ್ನು ಹೋಗಲಾಡಿಸುವ ಸಾಮರ್ಥ್ಯವಿಲ್ಲದ್ದರಿಂದ ಪ್ರಕೃತಿ (ಲಿಂಗಶರೀರ) ಶಕ್ತಿಯು ನಷ್ಟವಾಗದಿರುವ ಜೀವನಿಗೆ ಪುನಃ ಪುನಃ= ಮತ್ತೆ ಮತ್ತೆ ಗುಣಸರ್ಗಃ = ಗುಣಕಾರ್ಯವಾದ ದೇಹದ ಉತ್ಪತ್ತಿಗೆ ಕಾರಣವೋ, ಸತ್ವಾದಿ ಗುಣಗಳಿಂದ ಸೃಷ್ಟಿಗೆ ಕಾರಣವೋ ಅಸೌ=ಆ ಈ ತ್ರೈಗುಣ್ಯವಿಷಯಃ=ಪ್ರಾಕೃತ ಗಳಾದ ಇಂದ್ರ ಮೊದಲಾದ ದೇವತಾಸ್ಥಾನಗಳನ್ನು ತಂದುಕೊಡುವ, ಸ್ವರ್ಗಾದಿ ಗಳನ್ನು ಕೊಡುವ ಪ್ರವೃತ್ತಿ ಲಕ್ಷಣಃ ಏವ = ಪ್ರವೃತ್ತಿಧರ್ಮಾಚರಣೆಯೆಂಬ ಮಾರ್ಗವೂ ಚ= ಹೇಳಲ್ಪಟ್ಟಿತು. 'ಬ್ರಹ್ಮವರ್ಚಸಕಾಮಸ್ತು ಯಜೇತ ಬ್ರಹ್ಮಣ-ಸ್ಪತಿಮ್' ಇತ್ಯಾದಿ ಕಾಮ್ಯಕರ್ಮಗಳು ಪ್ರವೃತ್ತಿ ಕರ್ಮಗಳು. ತ್ರೈಗುಣ್ಯ ಎಂದು ಹೇಳಿದ್ದರಿಂದ ಸ್ವರ್ಗಾದಿ ಅನಿತ್ಯ ಫಲಗಳೇ ಅವುಗಳಿಗೆ ಫಲವೆಂದು ತಿಳಿಸಿರುವರು. 'ಅಲೀನ ಪ್ರಕೃತೇಃ' ಎಂಬುದರಿಂದ ಆ ಫಲವೂ ಅನಿತ್ಯವೆಂದು ಹೇಳಿದಂತಾಯಿತು. 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ', ಮತ್ತೆ ಮತ್ತೆ ಹುಟ್ಟು-ಸಾವುಗಳನ್ನು ತಂದುಕೊಟ್ಟು ಚಕ್ರದಂತೆ ಸುತ್ತುವ ಫಲವನ್ನು ಕೊಡುವವುದೆಂದರ್ಥ. ಅಥವಾ ಪೂರ್ವಾರ್ಧ ಬೇರೆ ವಾಕ್ಯ. ಉತ್ತರಾರ್ಧ ಬೇರೆ ವಾಕ್ಯ. ಪ್ರಕೃತಿಶಕ್ತಿಯು ಕುಗ್ಗದಿರುವ ಜೀವನ ಸತ್ವಾದಿಗುಣನಿಮಿತ್ತಕ ಉತ್ಪತ್ತಿಯನ್ನೂ ಮೂರನೆಯ ಸ್ಕಂಧದಲ್ಲಿ ಹೇಳಿದಿರಿ ಎಂದನ್ವಯ. ಅಥವಾ ಪ್ರವೃತ್ತಿ ಲಕ್ಷಣಃ=ಪಿತೃಯಾನವೆಂಬ ಮಾರ್ಗವು 'ದಕ್ಷಿಣೇನ ಪಥಾಽರ್ಯಮ್ಣಃ ಪಿತೃಲೋಕಂ ವ್ರಜಂತಿ ತೇ' ಇತ್ಯಾದಿ ವಾಕ್ಯದಿಂದ ಮೂರನೆಯ ಸ್ಕಂಧದಲ್ಲಿ ಹೇಳಲ್ಪಟ್ಟಿತು ಎಂದೂ ಅರ್ಥ. ॥ ೨ ॥

ಅಧರ್ಮಲಕ್ಷಣಾ ನಾನಾ ನರಕಾಶ್ಚೋಪವರ್ಣಿತಾಃ ।
ಮನ್ವಂತರಶ್ಚ ವ್ಯಾಖ್ಯಾತ ಆದ್ಯಃ ಸ್ವಾಯಂಭುವೋ ಯತಃ ॥ ೩ ॥

ಅಧರ್ಮಲಕ್ಷಣಾಃ = ಪಾಪದಿಂದ ತಿಳಿದುಬರುವ, ಅನುಭವಿಸಲ್ಪಡುವ, ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುವ ಅಥವಾ ಅಧರ್ಮವನ್ನು ತಿಳಿಸಿಕೊಡುವ

ದುಷ್ಟವಾದ ಮನಸ್ಸನ್ನು ಶುದ್ಧಪಡಿಸುವುದು ಸಾಧ್ಯವಿಲ್ಲ. ಆದ್ದರಿಂದ ನಷ್ಟವಾಗದಿರುವ ಲಿಂಗ ಶರೀರವು ಜೀವನಿಗೆ ಮತ್ತೆ ಮತ್ತೆ ಪ್ರಾಕೃತ ದೇಹದ ಉತ್ಪತ್ತಿಗೆ ಕಾರಣವಾಗುವುದು. ಆದ್ದರಿಂದಲೇ ಆ ಪ್ರವೃತ್ತಿ ಧರ್ಮವು ಪ್ರಾಕೃತ ಇಂದ್ರಾದಿ ಸ್ಥಾನಗಳನ್ನು ಮಾತ್ರ ತಂದುಕೊಡುವುದು. ಇಂತಹ ಪ್ರವೃತ್ತಿ ಮಾರ್ಗದ ವಿಷಯವನ್ನೂ ಹೇಳಿರುವಿರಿ. ಆಯಾಯಾ ಜೀವರು ಮಾಡಿರುವ ಪಾಪಗಳನ್ನು ಸೂಚಿಸುವ ನಾನಾ ವಿಧ ನರಕಗಳನ್ನೂ ಐದನೆಯ ಸ್ಕಂಧದಲ್ಲಿ ವರ್ಣಿಸಿದಿರಿ.

*

ನಾನಾ ನರಕಾಃ ಚ=ಅನೇಕ ಬಗೆಯ ನರಕಗಳೂ (ಯಾವ ರತಿಯೂ-ಸುಖವೂ-ಇಲ್ಲದವು) ಉಪವರ್ಣಿತಾಃ=ಪಂಚಮಸ್ಕಂಧದ ಕೊನೆಯಲ್ಲಿ ತಮ್ಮಿಂದ ವಿವರಿಸಲ್ಪಟ್ಟವು. ಯತಃ=ಯಾವ ಮನ್ವಂತರದಲ್ಲಿ ಸ್ವಾಯಂಭುವಃ=ಬ್ರಹ್ಮದೇವರಿಂದ ಹುಟ್ಟಿದ ಸ್ವಾಯಂಭುವ ಮನುರಾಜರು ಇದ್ದರೋ ಅಂತಹ ಬ್ರಹ್ಮದೇವರಿಂದ ಸೃಷ್ಟವಾದ ಆದ್ಯಃ=ಮೊದಲನೆಯ ಮನ್ವಂತರಃ ಚ=ಮನ್ವಂತರದ ವಿಚಾರವೂ ಚತುರ್ಥಸ್ಕಂಧದ ಆರಂಭದಲ್ಲಿ ಉಪವರ್ಣಿತವಾಯಿತು. ಅಥವಾ ಬ್ರಹ್ಮದೇವರಿಂದ ಸೃಷ್ಟರಾದ ಮನುರಾಜರು ಆದ್ಯಃ=ಹದಿನಾಲ್ಕು ಮನುಗಳಲ್ಲಿ ಮೊದಲನೆಯ ಮನುಗಳಾದರೋ ಆ ಮನ್ವಂತರವೂ ಎಂದಾದರೂ ಅರ್ಥ. ಇಲ್ಲಿ ಸ್ಕಂಧ ಕ್ರಮವನ್ನು ತಪ್ಪಿಸಿ ಅನುವಾದ ಮಾಡಿದ್ದರಿಂದ ಎಲ್ಲ ಪ್ರಮೇಯಗಳೂ ಎಲ್ಲ ಸ್ಕಂಧಗಳಲ್ಲಿಯೂ ಯಥಾಸಂಭವವಾಗಿ ಸಂಕ್ಷೇಪವಾಗಿಯೋ ವಿಸ್ತಾರವಾಗಿಯೋ ಹೇಳಿದೆಯೆಂದು ತಿಳಿಸಿದಂತಾಯಿತು. || ೩ ||

ಪ್ರಿಯವ್ರತೋತ್ತಾನಪದೋರ್ವಂಶಸ್ತಚ್ಚರಿತಾನಿ ಚ ।
ದ್ವೀಪವರ್ಷಸಮುದ್ರಾದ್ರಿನದೀನದವನಾನಿ ಚ ॥ ೪ ॥

ಹಿಂದಿನ ಶ್ಲೋಕದಲ್ಲಿ ಇರುವ ಯತಃ ಎಂಬುದನ್ನು ಇಲ್ಲಿಗೂ ಅನ್ವಯಿಸಿಕೊಳ್ಳಬೇಕು. ಯತಃ=ಯಾವ ಸ್ವಾಯಂಭುವ ಮನುರಾಜರಿಂದ ಹುಟ್ಟಿದ ಪ್ರಿಯವ್ರತೋತ್ತಾನಪದೋಃ=ಪ್ರಿಯವ್ರತರಾಜರ ಮತ್ತು ಉತ್ತಾನಪಾದರಾಜರ ವಂಶಃ=ಸಂತತಿಯೂ ತಚ್ಚರಿತಾನಿ ಚ=ಅವರ ಚರಿತ್ರೆಯೂ (ಉಪವರ್ಣಿತಾನಿ)= ಚತುರ್ಥ ಪಂಚಮ ಸ್ಕಂಧಗಳಲ್ಲಿ ತಮ್ಮಿಂದ ವರ್ಣಿಸಲ್ಪಟ್ಟವು. ಯತಃ ಎಂಬುದನ್ನು ಅನ್ವಯಮಾಡಿಕೊಂಡದ್ದರಿಂದ ಹಿಂದಿನ ಶ್ಲೋಕದಲ್ಲಿ ಹೇಳಲ್ಪಟ್ಟವರು ಸ್ವಾಯಂಭುವ ಮನುರಾಜರೇ ಎಂದು ಸ್ಥಿರಪಟ್ಟಿತು. ಇಲ್ಲದೆ ಹೋಗಿದ್ದರೆ ಸ್ವಾಯಂಭುವ ಶಬ್ದವು ಬ್ರಹ್ಮದೇವರ ಮಕ್ಕಳೆಲ್ಲರಿಗೂ ಸಾಧಾರಣವಾದ್ದರಿಂದ ಆ ಒಬ್ಬ ಮನುರಾಜರನ್ನೇ ಹೇಗೆ ಹೇಳುವುದೆಂಬ ಆಶಂಕೆಯು ಬರುತ್ತಿತ್ತು. ಸ್ವಾಯಂಭುವ ಶಬ್ದವೇ ಆ ಮನುರಾಜರನ್ನು ಹೇಳುವುದು ಎನ್ನುವಹಾಗಿಲ್ಲ. ವಿಶೇಷ ಗಮಕವಿಲ್ಲದೆ ಹೀಗೆ ರೂಢಿಯನ್ನೂ ಇಟ್ಟುಕೊಳ್ಳುವಂತಿಲ್ಲ. ಅದೂ ಅಲ್ಲದೆ 'ಸ್ವಾಯಂಭುವ! ಕಯಾ ವೃತ್ತ್ಯಾ' ಎಂಬಲ್ಲಿ ನಾರದರನ್ನೂ ಸ್ವಾಯಂಭುವ ಶಬ್ದದಿಂದ ಕರೆದಿರುವುದರಿಂದ ಆ ಶಬ್ದವು ಸ್ವಾಯಂಭುವ ರಾಜರಲ್ಲಿಯೇ ರೂಢವೆಂದೂ ಹೇಳುವಂತಿಲ್ಲ. ಆದ್ದರಿಂದ ಹಿಂದಿನ ಶ್ಲೋಕದಲ್ಲಿ ಸ್ವಾಯಂಭುವ ಶಬ್ದವು

ಬ್ರಹ್ಮದೇವರ ಮಕ್ಕಳಾದ ಸ್ವಾಯಂಭುವ ಮನುಗಳು ರಾಜರಾಗಿದ್ದ ಮೊದಲನೆಯ ಮನ್ವಂತರವನ್ನೂ ನಾಲ್ಕನೆಯ ಸ್ಕಂಧದ ಆರಂಭದಲ್ಲಿ ವರ್ಣಿಸಿದಿರಿ. ಆ ಸ್ವಾಯಂಭುವ ಮನುರಾಜರ ಮಕ್ಕಳಾದ ಪ್ರಿಯವ್ರತ ಉತ್ತಾನಪಾದ ರಾಜರ ಸಂತತಿಯನ್ನೂ ಅವರ ಚರಿತ್ರೆಗಳನ್ನೂ ಚತುರ್ಥ ಪಂಚಮಗಳಲ್ಲಿ ವಿವರಿಸಿದಿರಿ

ಮನುರಾಜರನ್ನೇ ಹೇಳುವುದೆಂದು ತಿಳಿಯುವುದು ಹೇಗೆ? ಎಂಬ ಆಶಂಕೆಯು ಇರುತ್ತಲೇ ಇತ್ತು. ಪ್ರಿಯವ್ರತ-ಉತ್ತಾನಪಾದರ ವಂಶಕ್ಕೆ ಕಾರಣರೆಂದು ಹೇಳಿದ್ದರಿಂದ ಆಶಂಕೆಗೆ ಅವಕಾಶವಿಲ್ಲ. ದ್ವೀಪ-ವರ್ಷ (ಖಂಡ)-ಸಮುದ್ರ-ಬೆಟ್ಟ-ನದೀ-ನದ-ವನಗಳನ್ನೂ ಪಂಚಮಸ್ಕಂಧದಲ್ಲಿ ಹೇಳಿದಿರಿ. || ೪ ||

ಧರಾಮಂಡಲಸಂಸ್ಥಾನಂ ಭಾಗಲಕ್ಷಣಮಾನತಃ ।
ಜ್ಯೋತಿಷಾಂ ವಿವರಾಣಾಂ ಚ ಯಥೇದಮಸೃಜದ್ವಿಭುಃ ॥ ೫ ॥

ಭಾಗಲಕ್ಷಣಮಾನತಃ – ವಿಭಾಗದಿಂದಲೂ ಲಕ್ಷಣದಿಂದಲೂ ಮತ್ತು ಪರಿಮಾಣದಿಂದಲೂ ಧರಾಮಂಡಸಂಸ್ಥಾನಂ = ಭೂಮಂಡಲ ಸನ್ನಿವೇಶವೂ, ಜ್ಯೋತಿಷಾಂ (ಸ್ವರೂಪಂ) – ಸೂರ್ಯ ಮೊದಲಾದ ಜ್ಯೋತಿರ್ಗಣಗಳ ಸ್ವರೂಪವೂ ವಿವರಾಣಾಂ (ಸಂಸ್ಥಾನಂ) ಚ=ಕೆಳಲೋಕಗಳ ಸನ್ನಿವೇಶವೂ ಹೆಚ್ಚೇನು ವಿಭುಃ=ಶ್ರೀಹರಿಯು ಇದಂ–ಈ ಜಗತ್ತನ್ನು ಯಥಾ ಅಸೃಜತ್=ಹೇಗೆ ಸೃಷ್ಟಿಸಿದನೋ ಅದನ್ನೂ ಪಂಚಮ ದ್ವಿತೀಯ ತೃತೀಯಸ್ಕಂಧಗಳಲ್ಲಿ ಹೇಳಿದಿರಿ. || ೫ ||

ಅಧುನೇಹ ಮಹಾಭಾಗ! ಯಥೈವ ನರಕಾನ್ನರಃ ।
ನಾನೋಗ್ರಯಾತನಾನ್ನೇಯಾತ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೬ ॥

ಹೇಳುವವರು ವಿವರಿಸಬೇಕಾದರೆ ಹೆಚ್ಚು ಸಂತೋಷವಿರಬೇಕು. ಅದಕ್ಕಾಗಿ ತಮಗೆ ಹೇಳಿದ್ದನ್ನು ಗ್ರಹಿಸುವ ಸಾಮರ್ಥ್ಯವನ್ನು (ಅನುವಾದದಿಂದ) ಪ್ರಕಟಪಡಿಸಿ ಮುಂದೆ ಹೇಳಲಿಚ್ಛಿಸುವ ವಿಷಯವನ್ನು ಪ್ರಶ್ನೆ ಮಾಡುತ್ತಾರೆ. ಅಧುನಾ=ಈಗ (ತಮ್ಮನ್ನು ಈ ಮುಂದೆ ಹೇಳುವ ವಿಷಯವನ್ನು ಪ್ರಶ್ನೆ ಮಾಡುತ್ತೇನೆ.) ಮಹಾ-ಭಾಗ! = ಮಹನೀಯರೇ, ಇಹ – ಈ ಜೀವಲೋಕದಲ್ಲಿ ನರಃ = ದುಷ್ಕರ್ಮ ಮಾಡಿದ ಜೀವನೂ ಯಥಾ=ಯಾವ ಸಾಧನದಿಂದ ನಾನೋಗ್ರಯಾತನಾನ್= ಅನೇಕಬಗೆಯ ತೀವ್ರಯಾತನೆಯನ್ನು ಅನುಭವಿಸಬೇಕಾದ ನರಕಗಳನ್ನು ನೇಯಾತ್ ಏವ=ಹೊಂದುವುದಿಲ್ಲವೋ ತತ್=ಅಂತಹ ದುಷ್ಕರ್ಮವನ್ನು ಹೋಗಲಾಡಿಸುವಲ್ಲಿ ಅತ್ಯಂತ ಸಮರ್ಥವಾದ ಉಪಾಯವನ್ನು ಅಧುನಾ=ಈಗ ಮೇ–

ದ್ವೀಪ, ಖಂಡ (ವರ್ಷ), ಸಮುದ್ರ, ಪರ್ವತ, ನದೀ, ನದ ಮತ್ತು ವನಗಳನ್ನೂ ಐದನೆಯ ಸ್ಕಂಧದಲ್ಲಿ ವರ್ಣಿಸಿರುವಿರಿ. ವಿಭಾಗ, ಲಕ್ಷಣ, ಪರಿಮಾಣಗಳಿಂದ ಭೂಮಂಡಲ ಸನ್ನಿವೇಶ, ಸೂರ್ಯ ಮೊದಲಾದ ಜ್ಯೋತಿಃ ಸ್ವರೂಪ, ಕೆಳಲೋಕಗಳ ಸನ್ನಿವೇಶ—ಇವೇ ಮೊದಲಾದ ಎಲ್ಲ ಜಗತ್ತನ್ನೂ ಶ್ರೀ ಹರಿಯು ಸೃಷ್ಟಿಸಿದ ರೀತಿಯನ್ನೂ ಪಂಚಮ, ದ್ವಿತೀಯ ಮತ್ತು ತೃತೀಯ ಸ್ಕಂಧಗಳಲ್ಲಿ ಹೇಳಿರುವಿರಿ. ಮಹನೀಯರೆ, ಈ ಜೀವರಲ್ಲಿ ಪಾಪಿಯು ಏನು ಮಾಡಿದರೆ ಈ ತೀವ್ರ ಯಾತನೆ

ನನಗಾಗಿ ವ್ಯಾಖ್ಯಾತುಂ=ವಿವರಿಸಲು ಅರ್ಹಸಿ=ತಾವು ಸಮರ್ಥರಾಗಿರುವಿರಿ. ಇಹ =ಪಾಪಿಗಳಲ್ಲಿ ನರಃ=ಪಶ್ಚಾತ್ತಾಪವುಳ್ಳ ಮನುಷ್ಯನು ಎಂದಾದರೂ ಅರ್ಥ. || ೬ ||

ಶ್ರೀ ಶುಕ ಉವಾಚ—

ನ ಚೇದಿಹೈವಾಪಚಿತಿಂ ಯಥಾಂಹಸಃ
ಕೃತಸ್ಯ ಕುರ್ಯಾನ್ಮನ ಉಕ್ತಿಪಾಣಿಭಿಃ ।
ಧ್ರುವಂ ಸ ವೈ ಪ್ರೇತ್ಯ ನರಕಾನುಪೈತಿ
ಯೇ ಕೀರ್ತಿತಾ ಮೇ ಭವತಸ್ತಿಗ್ಮಯಾತನಾಃ || ೭ ||

'ನಚೇದಿಹಾವೇದೀನ್ಮಹತೀ ವಿನಷ್ಟಿಃ' (ಇಹ=ಪಾಪ ಮಾಡಿದ ಜನ್ಮದಲ್ಲಿಯೇ ನ ಅವೇದೀತ್ ಚೇತ್=ಪಾಪದ ಪ್ರಾಯಶ್ಚಿತ್ತವನ್ನು ತಿಳಿಯದೆ ಹೋದಲ್ಲಿ ಮಹತೀ=ಅತಿಶಯವಾದ ವಿನಷ್ಟಿಃ=ಹಾನಿಯು) ಎಂಬ ಶ್ರುತ್ಯರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಯಶ್ಚಿತ್ತಗಳಿಲ್ಲದೆ ನರಕಗಳನ್ನು ತಪ್ಪಿಸಿಕೊಳ್ಳಲಾಗುವುದಿಲ್ಲವೆಂದು ಹೇಳುತ್ತಾರೆ. (ಯಃ)=ಯಾವನಾದರೆ ಮನ ಉಕ್ತಿಪಾಣಿಭಿಃ=ಮನಸ್ಸು ಮಾತು ಮತ್ತು ಕೈ (ದೇಹ) ಗಳಿಂದ ಕೃತಸ್ಯ=ಮಾಡಿದ ಅಂಹಸಃ=ಪಾಪಕ್ಕೆ ಯಥಾ=ಯಥಾವತ್ತಾಗಿ ಅಂದರೆ ಹೆಚ್ಚು ಪಾಪಕ್ಕೆ ಹೆಚ್ಚಿಕೆ, ಸ್ವಲ್ಪ ಪಾಪಕ್ಕೆ ಸ್ವಲ್ಪ ಅಪಚಿತಿಂ=ಪ್ರಾಯಶ್ಚಿತ್ತ ಪ್ರಯುಕ್ತ ನಾಶವನ್ನು ಇಹೈವ=ಈ ದೇಹದಲ್ಲಿಯೇ (ಪಾಪಮಾಡಿದ ಮನೋವಾಕ್ಕಾಯಗಳಿಂದಲೇ ನ ಕುರ್ಯಾತ್ ಚೇತ್=ಮಾಡದೆ ಹೋದಲ್ಲಿ (ಮಾಡದಿರುವನೋ) ಸಃ=ಆ ಪಾಪಿಯು ಪ್ರೇತ್ಯ=ಸತ್ತಮೇಲೆ ಮೇ=ನನ್ನಿಂದ ಭಾವತಃ=ನಿನಗಾಗಿ ಯೇ=ಯಾವ ತಿಗ್ಮಯಾತನಾಃ=ತೀವ್ರ ಯಾತನೆಯನ್ನು ಕೊಡುವ ನರಕಗಳು ಕೀರ್ತಿತಾಃ=ವಿವರಿಸಲ್ಪಟ್ಟವೋ (ತಾನ್) ನರಕಾನ್=ಅಂತಹ ನರಕಗಳನ್ನು ವೈ=ಪರಂಪರೆಯಿಂದ ಉಪೈತಿ=ಹೊಂದುವನು. ಧ್ರುವಂ=ನಿಶ್ಚಯವು (ಔಪಚಾರಿಕವಲ್ಲ.) 'ಏವ' ಎಂದು ಹೇಳಿದ್ದರಿಂದ ಪಾಪಮಾಡಿದ ಜನ್ಮದಲ್ಲಿಯೇ ಮಾಡಿಕೊಂಡ ಪ್ರಾಯಶ್ಚಿತ್ತವು ಸ್ವಲ್ಪವಾದರೂ ಜಾಗ್ರತೆಯಾಗಿ ದೊಡ್ಡಪಾಪವನ್ನೂ ಹೋಗಲಾಡಿಸುವುದು ಎಂದು ಫಲವನ್ನು ಸೂಚಿಸಿರುವರು. ಯಥಾ ಎಂಬುದರಿಂದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವು ಆವಶ್ಯಕವೆಂದು ತಿಳಿಸಿದಂತಾಯಿತು. || ೭ ||

ಗಳನ್ನು—ನರಕಗಳನ್ನು ಹೊಂದದಿರುವನೋ ಅಂತಹ ಪಾಪ ಪರಿಹಾರಕ ಉಪಾಯವನ್ನು ಈಗ ವಿವರಿಸಿರಿ.

ಶುಕಾಚಾರ್ಯರು :—ಮನೋ ವಾಕ್ಕಾಯಗಳಿಂದ ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಈ ದೇಹದಲ್ಲಿಯೇ ಮಾಡಿಕೊಳ್ಳದೆ ಹೋದಲ್ಲಿ ದೇಹಿಯು ಸತ್ತಮೇಲೆ ಈ ನಾನು ಹೇಳಿದ ತೀವ್ರ ಯಾತನೆಯ ನರಕಗಳನ್ನು ಹೊಂದುವನು.

ತಸ್ಮಾತ್ಪುರೈವಾಶ್ವಿಹ ಪಾಪನಿಷ್ಕೃತೌ
ಯತೇತ ಮೃತ್ಯೋರವಿಪದ್ಯತಾತ್ಮನಃ ।
ದೋಷಸ್ಯ ದೃಷ್ಟ್ವಾ ಗುರುಲಾಘವಂ ಯಥಾ
ಭಿಷಕ್ ಚಿಕಿತ್ಸೇತ ರುಜಾಂ ನಿದಾನವಿತ್ ॥ ೮ ॥

ತಸ್ಮಾತ್=ಮೇಲೆ ಹೇಳಿದಂತೆ ಅನರ್ಥ ಪ್ರಾಪ್ತಿಯಾಗುವ ಕಾರಣದಿಂದ ಮೃತ್ಯೋಃ= ದೇಹವಿಯೋಗಕ್ಕೆ ಪುರಾ ಏವ=ಮೊದಲೇ ಆಶು = ತಡಮಾಡದೆ ರುಜಾಂ=ರೋಗಗಳ ನಿದಾನವಿತ್=ಮೂಲಕಾರಣವನ್ನು ತಿಳಿದ ಭಿಷಕ್=ವೈದ್ಯನು ಯಥಾ=ಹೇಗೆ ದೋಷಸ್ಯ=ವಾತ ಮೊದಲಾದ ದೋಷದ ಗುರುಲಾಘವಂ= ಅತಿಶಯ ಅನತಿಶಯಗಳನ್ನು ದೃಷ್ಟ್ವಾ=ವಿಚಾರಮಾಡಿ ಚಿಕಿತ್ಸೇತ=ರೋಗಕ್ಕೆ ಚಿಕಿತ್ಸೆ ಮಾಡುವನೋ (ತಥಾ)=ಹಾಗೆ ಆತ್ಮನಃ=ದೇಹಕ್ಕೆ, ತನಗೆ ಯದಾ= ಯಾವಾಗ ಅವಿಪತ್=ವಿಪತ್ತು ಬರದಿರುವುದೋ ಆಗಲೇ ಅಂದರೆ ಮಧ್ಯವಯಸ್ಸಿ ನಲ್ಲಿಯೇ ಆತ್ಮನಃ=ತನ್ನ ದೋಷಸ್ಯ=ಪಾಪದ ಗುರುಲಾಘವಂ=ಗುರುತ್ವ ಲಘುತ್ವ ಗಳನ್ನು ದೃಷ್ಟ್ವಾ=ವಿಚಾರಮಾಡಿ ಅದಕ್ಕೆ ತಕ್ಕಂತೆ ಪಾಪ ನಿಷ್ಕೃತೌ=ಪಾಪದ ಪ್ರಾಯಶ್ಚಿತ್ತದಲ್ಲಿ (ಪರಿಹಾರದಲ್ಲಿ) ಯತೇತ=ಪ್ರಯತ್ನಿಸಬೇಕು. ಬಾಲ್ಯದಲ್ಲಿಯೂ ಮುದಿತನದಲ್ಲಿಯೂ ದುರ್ಬಲತೆ ಎಂಬ ವಿಪತ್ತು ಸಂಭವಿಸುವುದರಿಂದ ಯೌವನದಲ್ಲಿ ಅದಿಲ್ಲವಾಗಿ ಸಮರ್ಥನಾಗಿರುವನಾದ್ದರಿಂದ ಆಗಲೇ ದ್ರವ್ಯ ಮೊದಲಾದುವನ್ನು ಸಂಪಾದಿಸಿ ಪಾಪಪರಿಹಾರಮಾಡಿಕೊಳ್ಳಬೇಕೆಂದು ಅಭಿಪ್ರಾಯ. ವೈದ್ಯನ ದೃಷ್ಟಾಂತದಿಂದ ತನಗೆ ದೋಷದ ಗುರುಲಾಘವ ಜ್ಞಾನವಿಲ್ಲದೆ ಹೋದಲ್ಲಿ ದೊಡ್ಡವ ರಿಂದಲಾದರೂ ಅದನ್ನು ತಿಳಿದು ಮಾಡಬೇಕೆಂದು ಸೂಚಿಸಿರುವರು. ಅಥವಾ ಯತ್=ಎದುವರೆಗೆ ಆತ್ಮನಃ= ದೇಹಕ್ಕೆ ಮೃತ್ಯೋಃ= ಮೃತ್ಯುದೇವತೆಯಿಂದ ಅವಿಪತ್ = ಮರಣವೆಂಬ ವಿಪತ್ತು ಬರುವುದಿಲ್ಲವೋ ತಸ್ಮಾತ್ = ಅಷ್ಟರೊಳಗೆ ಮೊದಲೇ ಗುರುಲಾಘವಜ್ಞಾನಪೂರ್ವಕ ಪಾಪಪರಿಹಾರದಲ್ಲಿ ಪ್ರಯತ್ನಿಸಬೇಕು ಎಂದಾದರೂ ಅರ್ಥ. ಈ ವಿಷಯವನ್ನೇ ಉದಾಹರಣೆಯ ಮೂಲಕ ದೋಷಸ್ಯ ಇತ್ಯಾದಿ ಉತ್ತರಾರ್ಧದಿಂದ ಹೇಳಿರುವರು. ಆಶು ಎಂದು ಹೇಳಿದ್ದರಿಂದ ಕಾಲಾತೀತ ವಾದಮೇಲೆ 'ದ್ವಿಗುಣಂ ವ್ರತಮರ್ಹತಿ' ಎಂಬ ವಾಕ್ಯದಂತೆ ಎರಡರಷ್ಟು ಪ್ರಾಯಶ್ಚಿತ್ತವಾಗಬೇಕಾಗುವುದೆಂಬುದನ್ನು ನೆನಪುಮಾಡಿಕೊಟ್ಟಿರುವರು. ॥ ೮ ॥

ಇದು ನಿಜ. ಆದ್ದರಿಂದ ರೋಗದ ಮೂಲ ಕಾರಣವನ್ನು ಬಲ್ಲ ವೈದ್ಯನು ವಾತಾದಿ ದೋಷಗಳ ಗುರುಲಾಘವಗಳನ್ನು ವಿಚಾರಮಾಡಿ ರೋಗಕ್ಕೆ ಚಿಕಿತ್ಸೆ ಮಾಡುವಂತೆ ದೇಹಿಯೂ ದೇಹಕ್ಕೆ ವಿಪತ್ತು ಬರುವುದಕ್ಕೆ ಮೊದಲೇ ತನ್ನ ಪಾಪದ ಗುರುಲಾಘವ ಗಳನ್ನು ವಿಮರ್ಶಿಸಿ ಪರಿಹಾರಕ ಪ್ರಾಯಶ್ಚಿತ್ತದಲ್ಲಿ ತೊಡಗಬೇಕು.

ರಾಜೋವಾಚ—

ದೃಷ್ಟಶ್ರುತಾಭ್ಯಾಂ ಯತ್ಪಾಪಂ ಜಾನನ್ನಪ್ಯಾತ್ಮನೋಽಹಿತಮ್ ।
ಕರೋತಿ ಭೂಯೋ ವಿವಶಃ ಪ್ರಾಯಶ್ಚಿತ್ತಮಥೋ ಕಥಮ್ ॥ ೯ ॥

ಪರೀಕ್ಷಿದ್ರಾಜರು ಪ್ರಾಯಶ್ಚಿತ್ತದ ವ್ಯರ್ಥತೆಯನ್ನು ಆಶಂಕಿಸುತ್ತಾರೆ. ಯತ್=ಯಾವ ಕಾರಣದಿಂದ ದೃಷ್ಟ ಶ್ರುತಾಭ್ಯಾಂ=ಕಳ್ಳತನ ಮೊದಲಾದುವನ್ನು ಮಾಡಿದವರಿಗೆ ರಾಜರಿಂದ ಶಿಕ್ಷೆ ಮೊದಲಾದುವನ್ನು ನೋಡಿಯೂ 'ಮೃತೋ ನರಕಮಭ್ಯೇತಿ ಹ್ಯಗಮ್ಯಾಗಮನಾನ್ನರಃ' ಎಂಬ ಶ್ರುತಿಯಿಂದ ನರಕವಾಗುವುದೆಂದು ತಿಳಿದೂ ಪಾಪಂ=ಪಾಪವು ಆತ್ಮನಃ=ತನಗೆ ಅಹಿತಂ=ಅನರ್ಥಕವೆಂದು ಜಾನನ್ನಪಿ=ತಿಳಿದೂ ಮನುಷ್ಯನು ವಿವಶಃ ಸನ್=ಕರ್ಮಕ್ಕೆ (ಕರ್ಮಫಲದಾಯಕ ಹರಿಗೆ) ವಶನಾಗಿ ಭೂಯಃ=ಮತ್ತೆ ಮತ್ತೆ ಪಾಪಂ ಕರೋತಿ=ಪಾಪವನ್ನು ಮಾಡುವನೋ ಅಥೋ=ಆ ಕಾರಣದಿಂದ ಪ್ರಾಯಶ್ಚಿತ್ತಂ=ಪ್ರಾಯಶ್ಚಿತ್ತವು ಕಥಂ (ಭವತಿ)=ಪಾಪ ಪರಿಹಾರಕವೆಂಬುದು ಹೇಗೆ? ವಿ.ಅ. 'ಸ ಕಾರಯೇತ್ಪುಣ್ಯಂ ಅಥಾಪಿ ಪಾಪಂ' ಎಂಬ ಶ್ರುತಿಯು ಶ್ರೀಹರಿಯು ಕರ್ಮಾನುಗುಣವಾಗಿ ಪುಣ್ಯಪಾಪಗಳನ್ನು ಮಾಡಿಸುವನೆಂದು ತಿಳಿಸುತ್ತದೆ. ವಿವಶಃ=ರಾಗಾದಿವಶನೆಂದಾದರೂ ಅರ್ಥ. 'ಅಥಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ । ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥ ಎಂಬ ಅರ್ಜುನರ ಪ್ರಶ್ನೆಗೆ ಉತ್ತರವಾಗಿ ಭಗವಂತನು 'ಕಾಮ ಏಷ ಕ್ರೋಧ ಏಷ' ಎಂದು ಗೀತೆಯಲ್ಲಿ ಹೇಳಿರುವನು. ಇಲ್ಲಿ ಆಶಂಕೆ ಮಾಡುವ ರಾಜರ ಅಭಿಪ್ರಾಯವಿದು. ಅನುಷ್ಠಾನ ಮಾಡಿದ ಪ್ರಾಯಶ್ಚಿತ್ತವು ಸಂಪೂರ್ಣ ಪಾಪಪರಿಹಾರಕವಾಗಿದ್ದಲ್ಲಿ ಸಫಲವೆನ್ನಬಹುದಾಗಿತ್ತು. ಹಾಗಿಲ್ಲ. ನರಕವು ತಪ್ಪುವುದಿಲ್ಲ. ಹಾಗೇನಾದರೂ ಸಕಲ ಪಾಪವೂ ಹೋಗಿದ್ದಲ್ಲಿ ದುರಿತವಾಸನೆಯೂ ಹೋಗುವುದರಿಂದ ಕಾರಣವೇ ಇಲ್ಲವಾಗಿ ಮುಂದೆ ಪಾಪವೇ ಹುಟ್ಟದೆ ಹೋಗಬೇಕಾಗುವುದು. ಆದರೆ ಲೋಕದಲ್ಲಿ ಪ್ರಾಯಶ್ಚಿತ್ತ ಮಾಡಿಕೊಂಡ ಮೇಲೂ ನೂರಾರು ಸಲ ಪಾಪಮಾಡುವುದು ಕಂಡುಬರುತ್ತಿರುವುದು. ಆದ್ದರಿಂದ ಪಾಪವನ್ನು ತಡೆಯುವಂತಿಲ್ಲ. ನರಕವೂ ತಪ್ಪುವಂತಿಲ್ಲ. ಅಧಿಕಾರಿಗಳೇ ಇಲ್ಲವಾದ್ದರಿಂದ ಧರ್ಮಶಾಸ್ತ್ರಗಳಲ್ಲಿ ಹೇಳಿರುವ ಪ್ರಾಯಶ್ಚಿತ್ತ ಪ್ರಕರಣವು ವ್ಯರ್ಥ. ॥ ೯ ॥

ಪರೀಕ್ಷಿದ್ರಾಜರು :— ಕಳ್ಳತನ ಮೊದಲಾದುವನ್ನು ಮಾಡಿದವರನ್ನು ರಾಜರು ಶಿಕ್ಷಿಸುವುದು ಲೋಕದಲ್ಲಿ ಕಂಡಿದೆ. ಅಗಮ್ಯಾಗಮನಾದಿಗಳಿಂದ ಮನುಷ್ಯನು ಮರಣಾನಂತರ ನರಕವನ್ನು ಹೊಂದುವನೆಂಬ ವಿಷಯ ಶ್ರುತಿಗಳಿಂದ ತಿಳಿದುಬಂದಿದೆ. ಆದರೂ ಪಾಪವು ತನಗೆ ಅನರ್ಥಕರವೆಂದು ತಿಳಿದೂ ದೇಹಿಯು ಕರ್ಮಕ್ಕೆ ವಶನಾಗಿ ಮತ್ತೆ ಮತ್ತೆ ಪಾಪಗಳನ್ನು ಮಾಡುತ್ತಲೇ ಇರುವನು. ಅಂದ ಮೇಲೆ ಪ್ರಾಯಶ್ಚಿತ್ತವು ಪಾಪಪರಿಹಾರಕವೆಂಬುದು ಹೇಗೆ? ಒಂದುಸಲ

ಕ್ವಚಿನ್ನಿವರ್ತತೇಽಭದ್ರಾತ್ಕ್ವಚಿಚ್ಚರತಿ ತತ್ಪುನಃ ।
ಪ್ರಾಯಶ್ಚಿತ್ತಮಥೋಽಪಾರ್ಥಂ ಮನ್ಯೇ ಕುಂಜರಶೌಚವತ್ ॥

ಹೇಳಿದುದನ್ನೇ ವಿವರಿಸುತ್ತಾರೆ. ಕ್ವಚಿತ್=ಒಂದು ಕಡೆ ಪ್ರಾಯಶ್ಚಿತ್ತದಿಂದ ಅಭದ್ರಾತ್ = ಪಾಪದಿಂದ ನಿವರ್ತತೇ = ದೂರ ಸರಿಯುವನು. ಕ್ವಚಿತ್ = ಮತ್ತೊಂದುಕಡೆ ಪುನಃ=ಮತ್ತೆ ತತ್=ಅಂತಹ ಪಾಪವನ್ನು ಚರತಿ=ಮಾಡುವನು. ಅಥೋ=ಆ ಕಾರಣದಿಂದ ಕುಂಜರಶೌಚವತ್=ಆನೆಯ ಸ್ನಾನದಂತೆ (ಆನೆಯು ಸ್ನಾನಮಾಡಿದಮೇಲೆ ಮತ್ತೆ ಮಣ್ಣು ಹಾಕಿಕೊಳ್ಳುತ್ತದೆಯಾಗಿ ದೇಹವು ಮತ್ತೆ ಕೊಳೆಯಾಗುವುದು.) ಪ್ರಾಯಶ್ಚಿತ್ತವು ಅಪಾರ್ಥಂ = ನಿಷ್ಪ್ರಯೋಜನವೆಂದು ಮನ್ಯೇ=ತಿಳಿಯುತ್ತೇನೆ. ಶೌಚಶಬ್ದದಿಂದ ಇಲ್ಲಿ ಸ್ನಾನವನ್ನು ಇಟ್ಟುಕೊಳ್ಳಬೇಕು. ‖ ೧೦ ‖

ಶ್ರೀ ಶುಕ ಉವಾಚ—

ಕರ್ಮಣಾ ಕರ್ಮನಿರ್ಹಾರೋ ನ ಹ್ಯಾತ್ಯಂತಿಕ ಇಷ್ಯತೇ ।
ಅವಿದ್ವದಧಿಕಾರಿತ್ವಾತ್ ಪ್ರಾಯಶ್ಚಿತ್ತಂ ವಿಮರ್ಶನಮ್ ‖ ೧೧ ‖

ಪ್ರಾಯಶ್ಚಿತ್ತವೆಂಬ ಕರ್ಮವು ವ್ಯರ್ಥವೆಂದು ಹೇಳುವವರು ಜ್ಞಾನವಿಲ್ಲದೆ ಮಾಡಿದ್ದು ವ್ಯರ್ಥವೆಂದು ಹೇಳುವರೇ? ಅಥವಾ ಜ್ಞಾನಿಗಳು ವಿಮರ್ಶೆಮಾಡಿ ಹೇಳಿದ್ದು ವ್ಯರ್ಥವೆಂದು ಅವರ ಅಭಿಪ್ರಾಯವೇ? ಅಥವಾ ಜ್ಞಾನಪೂರ್ವಕವಾಗಿ ಮಾಡಿದ್ದೂ ಸಾರ್ಥಕವಲ್ಲವೆಂದು ಅಭಿಪ್ರಾಯಪಡುವರೇ? ಎಂದು ವಿಕಲ್ಪಮಾಡಿಕೊಂಡು ಕ್ರಮವಾಗಿ ಉತ್ತರಕೊಡುತ್ತಾ ಮೊದಲನೆಯ ಪಕ್ಷವಾದಲ್ಲಿ ಹೇಳಿದ್ದು ಸರಿ ಎನ್ನುತ್ತಾರೆ. ಕರ್ಮಣಾ=ಅಜ್ಞಾನದಿಂದ ಮಾಡಿದ ಪ್ರಾಯಶ್ಚಿತ್ತವೆಂಬ ಕರ್ಮದಿಂದ ಕರ್ಮನಿರ್ಹಾರಃ = ಪಾಪಕರ್ಮನಾಶವು ಆತ್ಯಂತಿಕಃ = ಸಂಪೂರ್ಣವಾಗಿ (ಸಮೂಲನಾಶವು) ಅವಿದ್ವಧಿಕಾರಿತ್ವಾತ್ = ಅಜ್ಞಾನಿಯು ಮಾಡಿದ್ದಾದ್ದರಿಂದ ನ ಇಷ್ಯತೇ=ಒಪ್ಪಿತವಲ್ಲ. ಅಂದರೆ ವ್ಯರ್ಥವೆಂಬುದು ಸರಿ ಎಂದರ್ಥ. ಎರಡನೆಯ ವಿಕಲ್ಪದಲ್ಲಿ ವ್ಯರ್ಥವೆಂಬುದನ್ನು ಒಪ್ಪಲಾಗುವುದಿಲ್ಲವೆಂದು ಹೇಳುತ್ತಾರೆ. ವಿದ್ವಾಂಸರಿಂದ ಅವಿದ್ವದಧಿಕಾರಿತ್ವಾತ್=ಅಜ್ಞಾನಿಗಳನ್ನು ಉದ್ದೇಶಿಸಿ ವಿಮರ್ಶನಂ=ವಿಮರ್ಶಾಪೂರ್ವಕವಾಗಿ ವಿಹಿತವಾದ ಪ್ರಾಯಶ್ಚಿತ್ತಂ = ಪ್ರಾಯಶ್ಚಿತ್ತವು ನ ಅಪಾರ್ಥಂ ಇಷ್ಯತೇ=ವ್ಯರ್ಥವೆಂದು ಒಪ್ಪಲಾಗುವುದಿಲ್ಲ. ಎಂದು ಹಿಂದಕ್ಕೆ ಅನ್ವಯ ‖ ೧೧ ‖

ಪ್ರಾಯಶ್ಚಿತ್ತದ ಫಲವಾಗಿ ಪಾಪದಿಂದ ದೂರ ಸರಿದರೂ ಮತ್ತೊಂದು ಸಲ ಅಂತಹ ಪಾಪವನ್ನು ಮಾಡುತ್ತಲೇ ಇರುವನು. ಆನೆಯು ಸ್ನಾನ ಮಾಡಿದರೂ ಮತ್ತೆ ಮಣ್ಣೆರಚಿಕೊಳ್ಳುವುದರಿಂದ ಅದರ ಸ್ನಾನವು ವ್ಯರ್ಥವಾದಂತೆ ಇವನು ಮಾಡಿಕೊಳ್ಳುವ ಪ್ರಾಯಶ್ಚಿತ್ತವು ವ್ಯರ್ಥವೆಂದೇ ನನ್ನ ಭಾವನೆ.

ಶುಕಾಚಾರ್ಯರು :—ಅಜ್ಞಾನಿಯು ಅಜ್ಞಾನದಿಂದ ಮಾಡಿದ ಪ್ರಾಯಶ್ಚಿತ್ತ ಕರ್ಮದಿಂದ ಪಾಪವು ಸಮೂಲ ನಾಶವಾಗುವುದೆಂಬುದು ಒಪ್ಪತಕ್ಕದ್ದಲ್ಲ. ಆಗ

ನಾಶ್ನತಃ ಪಥ್ಯಮೇವಾನ್ನಂ ವ್ಯಾಧಯೋಽಭಿಭವಂತಿ ಹಿ ।
ಏವಂ ನಿಯಮಕೃದ್ರಾಜನ್ಶನೈಃ ಕ್ಷೇಮಾಯ ಕಲ್ಪತೇ ॥ ೧೨ ॥

ಜ್ಞಾನಪೂರ್ವಕ ಮಾಡುವುದೆಂಬ ಮೂರನೆಯ ವಿಕಲ್ಪದಲ್ಲಿಯೂ ಇದು ಪಾಪವೆಂದು ತಿಳಿದು ಅದಕ್ಕೆ ಪ್ರಾಯಶ್ಚಿತ್ತವೆಂದು ತಿಳಿಯದೆ ವಿಹಿತವನ್ನು ಮಾಡುವುದೇ ? ಅಥವಾ ತಾನು ಪಾಪಮಾಡಿದ್ದನ್ನು ತಿಳಿದು ಅದಕ್ಕೆ ಇದು ಪ್ರಾಯಶ್ಚಿತ್ತವೆಂದು ತಿಳಿದು ವಿಹಿತವನ್ನು ಮಾಡುವುದೇ ? ಎಂದು ವಿಕಲ್ಪಿಸಿ ಈ ಎರಡು ಪಕ್ಷದಲ್ಲಿಯೂ ಕರ್ಮ ವ್ಯರ್ಥವಲ್ಲ ಸಾರ್ಥಕವೇ ಸರಿ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಮುಂದೆ ಏವಂ ಎಂದಿದೆಯಾದ್ದರಿಂದ ಯಥಾ ಎಂದು ಅಧ್ಯಾಹಾರಮಾಡಿಕೊಳ್ಳಬೇಕು. ರಾಜನ್—ಪರೀಕ್ಷಿದ್ರಾಜನೇ, ಪಥ್ಯಂ ಏವ—ಆರೋಗ್ಯಕ್ಕೆ ಹಿತಕರವಾದುದೇ ಅನ್ನಂ—ಆಹಾರವನ್ನು ಅಶ್ನತಃ=ಉಣ್ಣುವ (ಪುಂಸಃ)—ಮನುಷ್ಯನ (ದೇಹಂ)=ಶರೀರವನ್ನು ವ್ಯಾಧಯಃ=ರೋಗಗಳು (ಯಥಾ)—ಹೇಗೆ ನ ಅಭಿಭವಂತಿ =ಹಾಳುಮಾಡುವುದಿಲ್ಲವೋ ಏವಂ—ಇದರಂತೆ ನಿಯಮಕೃತ್=ಪಾಪಕರ್ಮವನ್ನು ಮಾಡದೆ ವಿಹಿತಕರ್ಮವನ್ನೇ ಮಾಡುವ ಅಧಿಕಾರಿಯು ಶನೈಃ=ಅನೇಕ ಜನ್ಮಗಳನ್ನು ಕಳೆದು ಪುಣ್ಯವನ್ನು ಹೆಚ್ಚಿಸಿಕೊಂಡು ಜ್ಞಾನವನ್ನು ತಂದುಕೊಂಡು ಕ್ಷೇಮಾಯ—ಮೋಕ್ಷಕ್ಕೆ ಕಲ್ಪತೇ—ಸಮರ್ಥನಾಗುವನು. ಹಿ—ಶಾಸ್ತ್ರಪ್ರಸಿದ್ಧವು. 'ಅತ್ಯಂಬುಪಾನಾತ್ ನ ವಿಪಚ್ಯತೇಽನ್ನಂ ಅನಂಬುಪಾನಾಚ್ಚ ಸ ಏವ ದೋಷಃ । ತಸ್ಮಾತ್ ನರೋ ವಹ್ನಿವಿವರ್ಧನಾಯ ಮುಹುರ್ಮುಹುರ್ವಾರಿ ಪಿಬೇದಭೂರಿ' ॥ (ಹೆಚ್ಚಿಗೆ ನೀರು ಕುಡಿಯುವುದರಿಂದ ಆಹಾರವು ಜೀರ್ಣಿಸುವುದಿಲ್ಲ. ನೀರನ್ನು ಕುಡಿಯದೆಯೇ ಇದ್ದರೂ ಇದೇ ದೋಷ. ಆದ್ದರಿಂದ ಜೀರ್ಣಶಕ್ತಿಯು ಹೆಚ್ಚಲು ಮನುಷ್ಯನು ಆಗಾಗ ಸ್ವಲ್ಪ ಸ್ವಲ್ಪ ನೀರನ್ನು ಕುಡಿಯಬೇಕು.) ಎಂಬ ವೈದ್ಯಶಾಸ್ತ್ರವಚನವನ್ನು ಇಲ್ಲಿ ಇಟ್ಟುಕೊಳ್ಳಬೇಕು. ॥ ೧೨ ॥

ತಪಸಾ ಬ್ರಹ್ಮಚರ್ಯೇಣ ಶಮೇನ ಚ ದಮೇನ ಚ ।
ತ್ಯಾಗೇನ ಸತ್ಯಶೌಚಾಭ್ಯಾಂ ನಿಯಮೇನ ಯಮೇನ ಚ ॥ ೧೩ ॥
ದೇಹವಾಗ್ಬುದ್ಧಿಜಂ ಧೀರಾ ಧರ್ಮಜ್ಞಾಃ ಶ್ರದ್ಧಯಾಽನ್ವಿತಾಃ ।
ಕ್ಷಪಂತ್ಯಘಂ ಮಹದಪಿ ವೇಣುಗುಲ್ಮಮಿವಾನಲಃ ॥ ೧೪ ॥

ಧರ್ಮಜ್ಞಾಃ—ತಾವು ಮಾಡಿದ ಪಾಪಕ್ಕೆ ಇದು ಪ್ರಾಯಶ್ಚಿತ್ತವೆಂದು ತಿಳಿದ ಶ್ರದ್ಧಯಾ=ಆಸ್ತಿಕ್ಯ ಬುದ್ಧಿಯಿಂದ ಅನ್ವಿತಾಃ=ಕೂಡಿದ (ಕೇಚಿತ್) ಧೀರಾಃ= ಕೆಲವರು ಜ್ಞಾನಿಗಳು ತಪಸಾ=(೧) ಕೃಚ್ಛ್ರ ಚಾಂದ್ರಾಯಣಾದಿ ತಪಸ್ಸಿನಿಂದಲೂ

ಅದು ವ್ಯರ್ಥವೇ. ಆದರೆ ತಿಳಿದವರು ಅಜ್ಞಾನಿಗಳನ್ನುದ್ದೇಶಿಸಿ ವಿಮರ್ಶಾಪೂರ್ವಕವಾಗಿ ಹೇಳಿದ ಪ್ರಾಯಶ್ಚಿತ್ತವು ವ್ಯರ್ಥವೆನ್ನಲಾಗುವುದಿಲ್ಲ. ಆರೋಗ್ಯಕರವಾದ

(೨) ಸಚ್ಛಾಸ್ತ್ರಾಲೋಚನದಿಂದಲೂ (ತಪ ಆಲೋಚನಂ ಪ್ರೋಕ್ತಂ) ಬ್ರಹ್ಮ-ಚರ್ಯೇಣ=ಅಷ್ಟ ವಿಧವಾದ ಬ್ರಹ್ಮಚರ್ಯೆಯಿಂದಲೂ (ಸ್ಮರಣಂ, ಕೀರ್ತನಂ, ಕೇಳಿಃ, ಪ್ರೇಕ್ಷಣಂ, ಗುಹ್ಯಭಾಷಣಂ| ಸಂಕಲ್ಪೋ ಅಧ್ಯವಸಾಯಶ್ಚ ಕ್ರಿಯಾ ನಿರ್ವೃತಿರೇವ ಚ|| ಏತನ್ಮೈಥುನಮಷ್ಟಾಂಗಂ ಪ್ರವದಂತಿ ಮನೀಷಿಣಃ| ವಿಪರೀತಂ ಬ್ರಹ್ಮಚರ್ಯಂ ಏತದೇವಾಷ್ಟಲಕ್ಷಣಮ್||) ಶಮೇನ-(೧) ಶ್ರೀ ಹರಿಯಲ್ಲಿ ನಿಷ್ಠೆಯಿಂದಲೂ (೨) ಶತ್ರು ಮಿತ್ರಾದಿ ಬುದ್ಧಿಯನ್ನು ಬಿಟ್ಟಿರುವುದರಿಂದ (ಶಮೋ ಮನ್ನಿಷ್ಠತಾ ಬುದ್ಧೇಃ, ಶಮಃ ಪ್ರಿಯಾದಿ ವೈಧುರ್ಯಂ) ದಮೇನ= ಇಂದ್ರಿಯ ನಿಗ್ರಹದಿಂದಲೂ (ದಮ ಇಂದ್ರಿಯ ನಿಗ್ರಹಃ) ತ್ಯಾಗೇನ-(೧) ಅಹಂತಾ ಮಮತಾ ತ್ಯಾಗದಿಂದಲೂ (ಮಿಥ್ಯಾಭಿಮಾನ ವಿರತಿಸ್ತ್ಯಾಗ ಇತ್ಯಭಿಧೀಯತೇ) (೨) ಕಾಮ್ಯ ಕರ್ಮ ತ್ಯಾಗದಿಂದಲೂ (ಸರ್ವಕರ್ಮ ಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ) ಸತ್ಯದಿಂದಲೂ (ಯತ್ ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ಕಥ್ಯತೇ) ಶುಚಿತ್ವದಿಂದಲೂ (ಅಭಕ್ಷ್ಯ ಪರಿಹಾರಶ್ಚ ಸಂಸರ್ಗಶ್ಚಾಪ್ಯನಿಂದಿತೇಃ ಸ್ವಧರ್ಮೇ ಚ ವ್ಯವಸ್ಥಾನಂ ಶೌಚಮೇತದುದಾಹೃತಮ್||) ನಿಯಮದಿಂದಲೂ (ಶೌಚಂ ತತಃ ತುಷ್ಟಿಃ ಸ್ವಾಧ್ಯಾಯೋ ಹರಿಪೂಜನಂ ನಿಯಮಾಃ) ಯಮದಿಂದಲೂ (ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಾ ಪರಿಗ್ರಹೌ ಯಮಾಃ) ಇತ್ಯಾದಿ ಪ್ರಾಯಶ್ಚಿತ್ತ ದಿಂದ ದೇಹವಾಗ್ಬುದ್ಧಿಜಂ=ಶರೀರ, ಮಾತು ಮನಸ್ಸಿನಿಂದ ಮಾಡಿದ ಮಹದಪಿ ಅಘಂ=ಅತಿಶಯ ಪಾಪವನ್ನೂ ಅನಲಃ=ಕಾಡುಕಿಚ್ಚು ವೇಣುಗುಲ್ಮಂ ಇವ= ಬಿದಿರಿನ ಪೊದೆಯನ್ನು ನಾಶಪಡಿಸುವಂತೆ ಕ್ಷಪಂತಿ=ನಾಶಮಾಡಿಕೊಳ್ಳುವರು.

|| ೧೩, ೧೪ ||

(ವಿ. ಅ. ೧೧ರಿಂದ ೧೪ರವರೆಗಿನ ಶ್ಲೋಕಗಳಿಗೆ ಮತ್ತೊಂದು ರೀತಿಯಿಂದಲೂ ಅರ್ಥ ಮಾಡಿರುವರು. ೧೧) ಪ್ರಾಯಶ್ಚಿತ್ತ ಮಾಡಿಕೊಳ್ಳುವವರು ಜ್ಞಾನಿಗಳೆಂದೂ ಅಜ್ಞಾನಿಗಳೆಂದೂ ಎರಡು ಬಗೆ. ಅಜ್ಞಾನಿಯು ಮಾಡಿದ ಪ್ರಾಯಶ್ಚಿತ್ತವು ಸಂಪೂರ್ಣವಾಗಿ ಪಾಪವನ್ನು ಹೋಗಲಾಡಿಸದಿದ್ದರೂ ಜ್ಞಾನಿಯು ಮಾಡಿದ ಪ್ರಾಯಶ್ಚಿತ್ತವು ಹೋಗಲಾಡಿಸುವುದು. ಆದ್ದರಿಂದ ಪ್ರಾಯಶ್ಚಿತ್ತ ವಿಮರ್ಶನವು ಸಫಲ. ಅಜ್ಞಾನಿಯು ಅಧಿಕಾರಿಯಾದ್ದರಿಂದಲೇ ಹನ್ನೆರಡು ವರ್ಷ ಯಾಗ

ಆಹಾರವನ್ನೇ ಸೇವಿಸುತ್ತಿರುವವನ ದೇಹವನ್ನು ರೋಗಗಳು ತೊಂದರೆಪಡಿಸದಿರು ವಂತೆ ಪಾಪಮಾಡದೆ ವಿಹಿತವನ್ನೇ ಮಾಡುವ ಅಧಿಕಾರಿಯು ಅನೇಕ ಜನ್ಮಗಳಲ್ಲಿ ಪುಣ್ಯವನ್ನು ಗಳಿಸಿ ಮೋಕ್ಷಕ್ಕೆ ಸಮರ್ಥನಾಗುವನು. ಇದು ಶಾಸ್ತ್ರಸಿದ್ಧ. ಜ್ಞಾನಿಗಳು ತಾವು ಮಾಡಿದ ಪಾಪಕ್ಕೆ ಇದೇ ಪ್ರಾಯಶ್ಚಿತ್ತವೆಂದು ತಿಳಿದು ಆ ಪ್ರಾಯಶ್ಚಿತ್ತ ದಿಂದ ಆ ಪಾಪವು ಹೋಗುತ್ತದೆಯೆಂಬ ಆಸ್ತಿಕ್ಯ ಬುದ್ಧಿಯಿಂದ ಕೂಡಿರುವರು. ಇಂತಹ ಕೆಲವರು ತಪಸ್ಸು, ಬ್ರಹ್ಮಚರ್ಯೆ, ಶಮ, ದಮ, ತ್ಯಾಗ, ಸತ್ಯ, ಶೌಚ,

ಮೊದಲಾದ ಪ್ರಾಯಶ್ಚಿತ್ತದಿಂದ ಪಾಪದ ಸಮೂಲ ನಾಶವು ಒಪ್ಪಿತವಲ್ಲ. ಜ್ಞಾನಿಯು ಅಧಿಕಾರಿಯಾದಲ್ಲಿ ಒಪ್ಪಿತವೆಂದರ್ಥ. 'ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತಿ' ಎಂಬ ಶ್ರುತಿಯು ಇದನ್ನು ತಿಳಿಸುವುದು. (೧೨) ಹಾಗಾದರೆ ಅಜ್ಞಾನಿಯು ಮಾಡಿದ ಪ್ರಾಯಶ್ಚಿತ್ತವು ಸಂಪೂರ್ಣ ವ್ಯರ್ಥವೇ ಎಂದರೆ ಅಲ್ಲವೆನ್ನುತ್ತಾರೆ. ಪಥ್ಯವಾದ ಆಹಾರವನ್ನೇ ಸೇವಿಸುವವನಿಗೆ ವ್ಯಾಧಿಗಳು ತೊಂದರೆಮಾಡದಿರುವಂತೆ ನಿಯತ ಪ್ರಾಯಶ್ಚಿತ್ತ ಮಾಡಿಕೊಂಡವನು, ನಿಷಿದ್ಧವನ್ನು ಬಿಟ್ಟು ವಿಹಿತವಾದುದನ್ನೇ ಮಾಡುವವನು ಅಜ್ಞಾನಿಯಾದರೂ ವಿಲಂಬನದಿಂದ ಶ್ರೇಯಸ್ಸಿಗೆ ಸಮರ್ಥನಾಗುವನು. ಅಜ್ಞಾನಿಗೂ ವಿಲಂಬವಾಗಿ ಪಾಪವು ಹೋಗುವುದು ಎಂದರ್ಥ. 'ಅಹನ್ಯಹನ್ಯನುಷ್ಠಾನಂ ಯಜ್ಞಾನಾಂ ಮುನಿಸತ್ತಮ | ಉಪಕಾರಕರಂ ಪುಂಸಾಂ ಕ್ರಿಯಮಾಣಾಘ-ಶಾಂತಿದಮ್ ||' ಎಂಬ ವಿಷ್ಣುಪುರಾಣವಚನವು ಇದಕ್ಕೆ ಪ್ರಮಾಣ. (೧೩-೧೪) ಜ್ಞಾನಿಗಳಿಗೆ ಪ್ರಾಯಶ್ಚಿತ್ತಾನುಷ್ಠಾನದಿಂದ ಪಾಪವು ಸಮೂಲವಾಗಿ ಹೋಗುವುದೆಂದು ಹೇಳಿತಲ್ಲವೇ! ಆದರೆ ಅವರ ಸ್ವಭಾವಸಿದ್ಧ ತಪಸ್ಸು ಮೊದಲಾದ್ದರಿಂದಲೇ ಪಾಪಪರಿಹಾರವಾಗುವುದರಿಂದ ಪ್ರಾಯಶ್ಚಿತ್ತದ ಅಗತ್ಯವೇ ಇಲ್ಲ ಎಂದು ಹೇಳುತ್ತಾರೆ. ಕೆಲವರು ಜ್ಞಾನಿಗಳು ಶ್ರದ್ಧೆಯಿಂದ ಅಂದರೆ ಪ್ರಾಯಶ್ಚಿತ್ತವೇಕೆ? ಸ್ವಭಾವಸಿದ್ಧ ಶಮಾದಿಗಳಿಂದಲೇ ಎಲ್ಲ ಪಾಪಗಳ ಸಮೂಲ ನಾಶವಾಗುವುದೆಂಬ ಆಸ್ತಿಕ್ಯಬುದ್ಧಿಯಿಂದ ಕೂಡಿದವರಾಗಿ ತಪಸ್ಸು ಮೊದಲಾದವುಗಳಿಂದ ತ್ರಿಕರಣ ಜನ್ಯಪಾಪವನ್ನೂ ಕಳೆದುಕೊಳ್ಳುವರು. (೧೫) ಮೇಲೆ ಹೇಳಿದ್ದು ಯೋಗಪ್ರಚುರರಾದ ಜ್ಞಾನಿಗಳ ವಿಷಯ. ಭಕ್ತಿಪ್ರಚುರರಾದ ಜ್ಞಾನಿಗಳು ಭಕ್ತಿಯಿಂದಲೇ ಎಲ್ಲ ಪಾಪಗಳನ್ನೂ ಕಳೆದುಕೊಳ್ಳುವರು. ('ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ.' ||)

ಕೇಚಿತ್ಕೇವಲಯಾ ಭಕ್ತ್ಯಾ ವಾಸುದೇವಪರಾಯಣಾಃ |
ಅಘಂ ಧುನ್ವಂತಿ ಕಾರ್ತ್ಸ್ನ್ಯೇನ ನೀಹಾರಮಿವ ಭಾಸ್ಕರಃ || ೧೫ ||

ಅಶಕ್ತಶರೀರಿಗಳಾಗಿ ತಪಸ್ಸು ಮೊದಲಾದುವನ್ನು ಮಾಡಲಾರದವರಿಗೆ ಏತರಿಂದ ಪಾಪ ನಾಶವಾಗುವುದು? ಎಂದರೆ ಹೇಳುತ್ತಾರೆ. ಕೆಲವರು ಜ್ಞಾನಿಗಳು ವಾಸುದೇವಪರಾಯಣಾಃ ಸಂತಃ=ಶ್ರೀಹರಿಯೇ ಮುಖ್ಯ ಶರಣನೆಂದು ತಿಳಿದವರಾಗಿ ಕೇವಲಯಾ=ತಪಸ್ಸು ಹೊದಲಾದ ಸಹಾಯಾಂತರವನ್ನು ಅಪೇಕ್ಷಿಸದ ಭಕ್ತ್ಯಾ=ಶ್ರೀಹರಿಯಲ್ಲಿ ಮಾಡುವ ನಿರತಿಶಯ ಭಕ್ತಿಯಿಂದ ಭಾಸ್ಕರಃ=ಸೂರ್ಯನು ನೀಹಾರಂ ಇವ=ಮಂಜನ್ನು ಸಂಪೂರ್ಣವಾಗಿ ನಾಶಮಾಡುವಂತೆ ಅಘಂ=ಪಾಪವನ್ನು ಕಾರ್ತ್ಸ್ನ್ಯೇನ=ಸಮೂಲವಾಗಿ ಧುನ್ವಂತಿ=ಕಳೆದುಕೊಳ್ಳುವರು. 'ಜ್ಞಾನಪೂರ್ವಃ ಪರಃ ಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ'. || ೧೫ ||

ನಿಯಮ, ಯಮ—ಇವುಗಳಿಂದ ಬೆಂಕಿಯು ಬಿದಿರು ಪೊದೆಯನ್ನು ನಾಶಪಡಿಸುವಂತೆ ತಮ್ಮ ತ್ರಿಕರಣ ಜನ್ಯ ಪಾಪವನ್ನು—ಮಹತ್ತರವಾದುದಾಗಿದ್ದರೂ—ನಾಶ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವರು ಶ್ರೀ ಹರಿಯೇ ಉತ್ತಮ ಆಶ್ರಯ

ನ ತಥಾ ಹ್ಯಘವಾನ್ ರಾಜನ್ ಪೂಯೇತ ತಪ ಆದಿಭಿಃ ।
ಯಥಾ ಕೃಷ್ಣಾರ್ಪಿತಪ್ರಾಣಸ್ತತ್ಪೂರುಷನಿಷೇವಯಾ ॥ ೧೬ ॥

ಇದು ಅಶಕ್ತರು ಮಾಡುವುದು ಎಂದಾದಲ್ಲಿ ನಿಕೃಷ್ಟವೆಂದಾಯಿತಲ್ಲವೇ? ಎಂದರೆ ಅಲ್ಲ. ಅದಕ್ಕಿಂತಲೂ ಶ್ರೇಷ್ಠವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ರಾಜನ್ = ಪರೀಕ್ಷಿದ್ರಾಜನೇ, ತತ್ಪೂರುಷನಿಷೇವಯಾ = ಶ್ರೀಹರಿಯ ಭಕ್ತರನ್ನು ಭಕ್ತಿಯಿಂದ ಸೇವಿಸುವುದರಿಂದ ಕೃಷ್ಣಾರ್ಪಿತಪ್ರಾಣಃ = ಶ್ರೀಹರಿಗೆ ಸಮರ್ಪಿಸಿದ ಶ್ರೋತ್ರ ಮೊದಲಾದ ಸಮಸ್ತ ಇಂದ್ರಿಯಗಳುಳ್ಳ ಭಕ್ತನು ಯಥಾ=ಎಷ್ಟು ಪೂಯೇತ = ಪಾಪದಿಂದ ಶುದ್ಧನಾಗುವನೋ ತಥಾ = ಅಷ್ಟು ತಪ ಆದಿಭಿಃ= ಭಕ್ತಿರಹಿತ ತಪಸ್ಸು ಮೊದಲಾದವುಗಳಿಂದ ಅಘವಾನ್=ಪಾಪಿಯು ನ ಪೂಯೇತ= ಶುದ್ಧನಾಗುವುದಿಲ್ಲ. ಆದ್ದರಿಂದಲೇ ಹಿಂದಿನ ಶ್ಲೋಕದಲ್ಲಿ 'ಕಾರ್ತ್ಸ್ನ್ಯೇನ' ಎಂದು ಹೇಳಿದ್ದು. ನಿಷೇವಯಾ ಎಂದು ಹೇಳಿದ್ದರಿಂದ ಶ್ರೀಹರಿಯಲ್ಲಿ ಭಕ್ತಿಯು ಹುಟ್ಟ ಬೇಕಾದರೆ ಅವನ ಭಕ್ತರನ್ನು ಸೇವಿಸಬೇಕೆಂದು ಹೇಳಿದಂತಾಯಿತು. ಹಿ=ಇದು ಶಾಸ್ತ್ರಸಿದ್ಧ. 'ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ । ಜ್ಞಾತುಂ ದ್ರಷ್ಟುಂ ಚ ತತ್ವೇನ ಪ್ರವೇಷ್ಟುಂ ಚ ಪರಂತಪ' ॥ ಇತ್ಯಾದಿ ಶಾಸ್ತ್ರ ಪ್ರಸಿದ್ಧವೆಂದು ಅಭಿಪ್ರಾಯ ॥ ೧೬ ॥

ಸಧ್ರೀಚೀನೋ ಹ್ಯಯಂ ಲೋಕೇ ಪಂಥಾಃ ಕ್ಷೇಮೋಽಕುತೋಭಯಃ।
ಸುಶೀಲಾಃ ಸಾಧವೋ ಯತ್ರ ನಾರಾಯಣಪರಾಯಣಾಃ ॥ ೧೭ ॥

ಪಾಪಪರಿಹಾರಕಗಳಾದ ಮೇಲಿನ ಮೂರು ಮಾರ್ಗಗಳಲ್ಲಿ ಭಕ್ತಿಮಾರ್ಗವೇ ಪ್ರಧಾನವೆಂದು ಹೇಳುತ್ತಾರೆ. ಲೋಕೇ=೧) ಪ್ರಾಯಶ್ಚಿತ್ತರೂಪಸಾಧನಗಳ ಗುಂಪಿನಲ್ಲಿ ೨) ಆಲೋಚಿಸಿ ನೋಡಿದರೆ ಯತ್ರ=ಯಾವ ಭಕ್ತಿಮಾರ್ಗದಲ್ಲಿ ಸುಶೀಲಾಃ=ಸ್ವಾಭಾವಿಕವಾಗಿ ಒಳ್ಳೆಯ ನಡತೆಯ ಸಾಧುಗಳಾದ ನಾರಾಯಣ-ಪರಾಯಣಾಃ=ಶ್ರೀಹರಿಯೇ ಪರಮ ಆಶ್ರಯನೆಂದು ಹೊಂದಿರುವ ಭಕ್ತರು (ಪ್ರವರ್ತಂತೇ)=ಪ್ರವರ್ತಿಸುವರೋ ಅಯಂ=ಅಂತಹ ಈ ಕ್ಷೇಮಃ=೧) ಮೋಕ್ಷಕ್ಕೆ ಸಾಧನವಾದ ೨) ಆನಂದರೂಪವಾದ ಅಕುತೋಭಯಃ=ವಿಘ್ನಾದಿಭಯಗಳಿಲ್ಲದ ಪಂಥಾಃ=ಭಕ್ತಿಮಾರ್ಗವು ಸಧ್ರೀಚೀನಃ ಹಿ=ಸಮೀಚೀನವಾದುದಲ್ಲವೇ! 'ಸುಶೀಲಾ' ಇತ್ಯಾದಿಗಳಿಂದ ಭಕ್ತಿಮಾರ್ಗಕ್ಕೆ ಅಧಿಕಾರಿಗಳನ್ನು ತಿಳಿಸಿರುವರು. ಇದರಿಂದ ಭಕ್ತಿಯೇ ಉತ್ತಮ ಪಾಪಶೋಧಕವೆಂಬುದಕ್ಕೆ ಕಾರಣವನ್ನೂ ತಿಳಿಸಿದಂತಾಯಿತು. ಆನಂದರೂಪವಾದ್ದರಿಂದ ಕ್ಷೇಮವೆಂದಿರುವರು ॥ ೧೭ ॥

ವೆಂದರಿತು ಕೇವಲ ಭಕ್ತಿಯಿಂದಲೇ ಸಂಪೂರ್ಣವಾಗಿ ಪಾಪವನ್ನು ಸೂರ್ಯನು ಮಂಜನ್ನು ಹೋಗಲಾಡಿಸುವಂತೆ ಹೋಗಲಾಡಿಸಿಕೊಳ್ಳುವರು. ಪರೀಕ್ಷಿದ್ರಾಜ! ಶ್ರೀ ಹರಿಯ ಭಕ್ತರನ್ನು ಭಕ್ತಿಯಿಂದ ಸೇವಿಸಿ ಶ್ರೀ ಹರಿಯಲ್ಲಿಯೇ ತನ್ನ ಎಲ್ಲ ಇಂದ್ರಿಯಗಳನ್ನೂ ನೆಲೆಗೊಳಿಸಿದ ಭಕ್ತನು ಪಾಪದಿಂದ ಶುದ್ಧನಾಗುವಂತೆ ತಪಸ್ಸು

ಪ್ರಾಯಶ್ಚಿತ್ತಾನಿ ಚೀರ್ಣಾನಿ ನಾರಾಯಣಪರಾಙ್ಮುಖೈಃ ।
ನ ನಿಷ್ಪುನಂತಿ ರಾಜೇಂದ್ರ ಸುರಾಕುಂಭಮಿವಾಪಗಾಃ ॥ ೧೮ ॥

ಭಕ್ತಿಯಿಂದ ಕೂಡಿ ಬಲಿಷ್ಠಗಳಾದ ತಪಸ್ಸು ಮೊದಲಾದುವು ಪಾಪಪರಿಹಾರಕಗಳೇ ಹೊರತು ಅದಿಲ್ಲದವುಗಳಲ್ಲ. ಈ ಕಾರಣದಿಂದಲೂ ಭಕ್ತಿಗೇ ಪ್ರಾಧಾನ್ಯವೆಂದು ಹೇಳುತ್ತಾರೆ. ರಾಜಶ್ರೇಷ್ಠನೇ, ಶ್ರೀಹರಿಯಲ್ಲಿ ಪರಾಙ್ಮುಖರಾದ ಅಂದರೆ ಭಕ್ತರಲ್ಲದ ಜೀವರು ಚೀರ್ಣಾನಿ=ಮಾಡಿದ ಪ್ರಾಯಶ್ಚಿತ್ತಗಳು ಆಪಗಾಃ=ನದಿಗಳು ಸುರಾಕುಂಭಂ ಇವ=ಮದ್ಯದ ಗಡಿಗೆಯನ್ನು ಹೇಗೆ ಶುದ್ಧಮಾಡಲಾರವೋ ಹಾಗೆ ನ ಪುನಂತಿ ವೈ=ಪಾಪಿಯನ್ನು ಶುದ್ಧಿಗೊಳಿಸಲಾರವು. ನದಿಯ ದೃಷ್ಟಾಂತದಿಂದ ದೊಡ್ಡದೊಡ್ಡ ಪ್ರಾಯಶ್ಚಿತ್ತಗಳೂ ಶುದ್ಧಕರಗಳಲ್ಲವೆಂದು ತಿಳಿಸಿರುವರು ॥ ೧೮ ॥

ಸಕೃನ್ಮನಃ ಕೃಷ್ಣಪದಾರವಿಂದಯೋ-
ರ್ನಿವೇಶಿತಂ ತದ್ಗುಣರಾಗಿ ಯೈರಿಹ ।
ನ ತೇ ಯಮಂ ಪಾಶಭೃತಶ್ಚ ತದ್ಭಟಾನ್
ಸ್ವಪ್ನೇಽಪಿ ಪಶ್ಯಂತಿ ಹಿ ಚೀರ್ಣನಿಷ್ಕೃತಾಃ ॥ ೧೯ ॥

ಕೇವಲ ಭಕ್ತಿಯು ಹೇಗೆ ಪಾಪವನ್ನು ಪರಿಹರಿಸುವುದು ? ಎಂದರೆ ಆ ಪ್ರಕಾರವನ್ನು ಹೇಳುತ್ತಾರೆ. ಅಥವಾ ತಪಸ್ಸು ಮೊದಲಾದವು ಪಾಪವನ್ನು ದೀರ್ಘಕಾಲದಲ್ಲಿ ಕಳೆಯುವುವು. ಭಕ್ತಿಯಾದರೋ ಶೀಘ್ರವಾಗಿ ಕಳೆಯುವುದು. ಈ ಕಾರಣದಿಂದಲೂ ಭಕ್ತಿಯೇ ಪ್ರಧಾನವೆಂದು ಹೇಳುತ್ತಾರೆ. ಇಹ=ಜೀವಸಮೂಹದಲ್ಲಿ ಯೈಃ=ಯಾರಿಂದ ತದ್ಗುಣರಾಗಿ=ಶ್ರೀಹರಿಯ ಗುಣಗಳಲ್ಲಿ ಅನುರಾಗವುಳ್ಳ ಮನಃ=ಮನಸ್ಸು ಕೃಷ್ಣನ ಪಾದಾರವಿಂದಗಳಲ್ಲಿ ಸಕೃತ್=ಒಂದು ಸಲ ನಿವೇಶಿತಂ=ಇಡಲ್ಪಟ್ಟಿತೋ ಚೀರ್ಣನಿಷ್ಕೃತಾಃ=ಮಾಡಿದ ಪಾಪದಲ್ಲಿ ಪಶ್ಚಾತ್ತಾಪಪೂರ್ವಕ ಶ್ರೀಹರಿಯ ಪಾದಪದ್ಮಗಳಲ್ಲಿ ಒಂದು ಸಲ ಮನಸ್ಸಿಡೋಣದರಿಂದ ಪ್ರಾಯಶ್ಚಿತ್ತ ಮಾಡಿಕೊಂಡ ತೇ ಆ ಅಧಿಕಾರಿ ಜೀವರು ಸ್ವಪ್ನದಲ್ಲಿಯೂ ಯಮನನ್ನಾಗಲಿ ಪಾಶಭೃತಃ=ಪಾಶಧಾರಿಗಳಾದ ತದ್ಭಟಾನ್ ಚ=ಯಮದೂತರನ್ನಾಗಲಿ ನ ಪಶ್ಯಂತಿ ಹಿ=ನೋಡುವುದಿಲ್ಲವಷ್ಟೆ ! ॥ ೧೯ ॥

ಮೊದಲಾದವುಗಳಿಂದ (ಭಕ್ತಿಯಿಲ್ಲದ) ಪಾಪಿಯು ಶುದ್ಧನಾಗುವುದಿಲ್ಲ. ಸ್ವಾಭಾವಿಕವಾಗಿ ಒಳ್ಳೆಯ ನಡತೆಯ ಸಾಧುಗಳಾದ ಶ್ರೀ ಹರಿಭಕ್ತರು ಆಶ್ರಯಿಸಿರುವ ಈ ಭಕ್ತಿಮಾರ್ಗವು ಕ್ಷೇಮಕರವಾದ್ದರಿಂದಲೂ ಯಾವ ಭಯವೂ ಇಲ್ಲದುದಾದ್ದರಿಂದಲೂ ಪಾಪಪರಿಹಾರಕ ಮಾರ್ಗಗಳಲ್ಲೆಲ್ಲ ಅತ್ಯುತ್ತಮವಾದುದು. ಶ್ರೀ ಹರಿಯ ಭಕ್ತರಲ್ಲದವರು ಮಾಡಿಕೊಂಡ ಪ್ರಾಯಶ್ಚಿತ್ತಗಳು—ಎಷ್ಟೇ ದೊಡ್ಡವಾಗಿದ್ದರೂ ನದಿಗಳು ಮದ್ಯದ ಗಡಿಗೆಯನ್ನು ಹೇಗೆ ಶುದ್ಧಿಗೊಳಿಸಲಾರವೋ ಹಾಗೆ ಪಾಪಗಳನ್ನು ಶುದ್ಧಿಮಾಡಲಾರವು.

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ದೂತಾನಾಂ ವಿಷ್ಣುಯಮಯೋಃ ಸಂವಾದಂ ತಂ ನಿಬೋಧ ಮೇ ॥

ವೇದಾಧಿಕಾರಿಗಳಿಗೆ ಮೇಲೆ ಹೇಳಿದಂತೆ ಪಾಪಪರಿಹಾರವಿದ್ದರೂ ವೇದಾಧಿಕಾರಿಗಳಲ್ಲದ ಸ್ತ್ರೀಶೂದ್ರಾದಿಗಳಿಗೆ ಪಾಪಪ್ರಾಯಶ್ಚಿತ್ತವು ಹೇಗೆ? ಎಂದರೆ ಅವರು ಭಕ್ತಿಯಿಂದ ಶ್ರೀಹರಿನಾಮಸಂಕೀರ್ತನೆ ಮಾಡುವುದರಿಂದಲೇ ಪಾಪಕ್ಕೆ ಪ್ರಾಯಶ್ಚಿತ್ತವಾಗುವುದು ಎಂಬ ಈ ಪ್ರಮೇಯವನ್ನು ಇತಿಹಾಸದ ಮೂಲಕ ತೋರಿಸಿಕೊಡುತ್ತಾರೆ. ಅಥವಾ ಭಕ್ತಿಯಿಂದ ಭಗವನ್ನಾಮಸಂಕೀರ್ತನೆಯಿಂದಲೂ ದುರಿತನಾಶವಾಗುವುದೆಂದಮೇಲೆ ನಿರಂತರ ತದೇಕಮನಸ್ಕರಾಗಿ ಶ್ರೀಹರಿಯ ಪಾದಗಳನ್ನು ಸ್ಮರಿಸುವವರಿಗೆ ಆಗ್ತುತ್ತದೆಂದು ಹೇಳುವುದೇನು ! ಎಂಬ ಕೈಮುತ್ಯನ್ಯಾಯವನ್ನು ಮುಂದಿನ ಕಥೆಯಿಂದ ತೋರಿಸಿಕೊಡುತ್ತಾರೆ. ಅತ್ರ ಏವ=ವೇದಾಧಿಕಾರಿಗಳಿಗೂ ವೇದಾನಧಿಕಾರಿಗಳಿಗೂ ಭಕ್ತಿಯಿಂದ ಶ್ರೀಹರಿಯ ನಾಮಸಂಕೀರ್ತನೆಯಿಂದ ಪಾಪಕ್ಷಯವಾಗಿಯೇ ಆಗುವುದು ಎಂಬ ವಿಷಯದಲ್ಲಿ ಇಮಂ=ಈ ಮುಂದೆ ಹೇಳುವ ಪುರಾತನಂ=ಪ್ರಾಚೀನ ಕಾಲದ ವಿಷ್ಣು ಮತ್ತು ಯಮರಾಜರ ದೂತರುಗಳ (ವಿಷ್ಣುದೂತರ ಮತ್ತು ಯಮದೂತರ) ಸಂವಾದಂ=ಪರಸ್ಪರ ಉತ್ತರ ಪ್ರತ್ಯುತ್ತರ ರೂಪ ಸಂಭಾಷಣಾ ರೂಪವಾದ ಇತಿಹಾಸಂ=ಕಥೆಯನ್ನು ಜ್ಞಾನಿಗಳು ಉದಾಹರಂತಿ=ಹೇಳುವರು. ಮೇ=ನನ್ನಿಂದ ತಂ=ಆ ಇತಿಹಾಸವನ್ನು ನಿಬೋಧ=ತಿಳಿ. ಅದರ ರಹಸ್ಯವನ್ನು ಬಿಡಿಸಿ ಹೇಳುತ್ತೇನೆ ತಿಳಿ ಎಂದರ್ಥ. ಇಲ್ಲಿ ಏವ ಎಂಬುದರಿಂದ ಪಾಪಕ್ಷಯವಾಗಿಯೇ ಆಗುವುದು (ಅಯೋಗ ವ್ಯವಚ್ಛೇದ) ಎಂದರ್ಥ ಮಾಡಬೇಕೇ ಹೊರತು ಇದರಿಂದಲೇ ಪಾಪಕ್ಷಯವಾಗುವುದು (ಅನ್ಯಯೋಗ ವ್ಯವಚ್ಛೇದ) ಮತ್ತೊಂದರಿಂದ ಅಲ್ಲವೆಂದು ಅರ್ಥಮಾಡಬಾರದು. ಹಾಗೆ ಅರ್ಥಮಾಡಿದಲ್ಲಿ ಹಿಂದೆ ಹೇಳಿದ ತಪಸ್ಸು ಮೊದಲಾದುವು ವ್ಯರ್ಥವಾಗಬೇಕಾದೀತು. ॥ ೨೦ ॥

ಕಾನ್ಯಕುಬ್ಜೇ ದ್ವಿಜಃ ಕಶ್ಚಿದ್ದಾಸೀಪತಿರಜಾಮಿಲಃ ।
ನಾಮ್ನಾ ನಷ್ಟಸದಾಚಾರೋ ದಾಸ್ಯಾಃ ಸಂಸರ್ಗದೂಷಿತಃ ॥ ೨೧ ॥
ಬಂದ್ಯಕ್ಷೈಃ ಕೈತವೈಶ್ಚೌರ್ಯೈರ್ಗರ್ಹಿತಾಂ ವೃತ್ತಿಮಾಶ್ರಿತಃ ।
ಬಿಭ್ರತ್ಕುಟುಂಬಮಶುಚಿರ್ಯಾತಯಾಮಾಸ ದೇಹಿನಮ್ ॥ ೨೨ ॥

ಇತಿಹಾಸವನ್ನು ಹೇಳುತ್ತಾರೆ. ಕಾನ್ಯಕುಬ್ಜವೆಂಬ ದೇಶದಲ್ಲಿ ಕನ್ಯಾಕುಬ್ಜವೆಂಬ ಊರಿನಲ್ಲಿ ನಾಮ್ನಾ ಅಜಾಮಿಲಃ=ಅಜಾಮಿಳನೆಂಬ ದಾಸ್ಯಾಃ ಸಂಸರ್ಗ-

---

ಜೀವರಾಶಿಗಳಲ್ಲಿ ಯಾರಾದರೆ ಶ್ರೀ ಹರಿಯ ಗುಣಗಳನ್ನು ಅರಿತು ಅವನಲ್ಲಿ ಸ್ನೇಹಪೂರಿತವಾದ ತಮ್ಮ ಮನಸ್ಸನ್ನು ಒಮ್ಮೆ ಪರಮಾತ್ಮನ ಪಾದಾರವಿಂದಗಳಲ್ಲಿ ನಿವೇಶಗೊಳಿಸುವರೋ ಅವರು ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡವರೇ. ಅವರು ಸ್ವಪ್ನದಲ್ಲಿಯೂ ಯಮನನ್ನಾಗಲಿ ಪಾಶಧಾರಿಗಳಾದ ಯಮಭಟರನ್ನಾಗಲಿ ನೋಡುವುದಿಲ್ಲ. ಈ ವಿಷಯದಲ್ಲಿಯೇ ಬಹಳ ಹಿಂದಿನ ವಿಷ್ಣುದೂತ ಯಮ

ದೂಷಿತಃ=ದಾಸಿಯ ಸಂಪರ್ಕದಿಂದ ಪತಿತನಾದ ನಷ್ಟಸದಾಚಾರಃ=ಸಮೀಚೀನ ವಾದ ಆಚಾರದಿಂದ ಭ್ರಷ್ಟನಾದ ದಾಸೀಪತಿಃ=ದಾಸಿಯ ಗಂಡನಾದ ಕಶ್ಚಿತ್ ದ್ವಿಜಃ=ದ್ವಿಜನೊಬ್ಬನು ಬಂದ್ಯಕ್ಷೈಃ=ಜನರನ್ನು ಸೆರೆಹಿಡಿಯುವುದು, ಜೂಜಾಡು ವುದು, ಕೈತವೈಃ=ಸುಳ್ಳು ಹೇಳುವುದು ಚೌರ್ಯೈಃ=ಕಳ್ಳತನ ಮಾಡುವುದು—ಇವು ಗಳಿಂದ ಗರ್ಹಿತಾಂ=ನಿಂದಿತವಾದ ವೃತ್ತಿಂ=ಜೀವನೋಪಾಯವನ್ನು ಆಶ್ರಿತಃ (ಸ್ಸ)=ಆಶ್ರಯಿಸಿದವನಾಗಿ ಕುಟುಂಬಂ ಬಿಭ್ರತ್=ಕುಟುಂಬಭರಣ ಮಾಡುತ್ತಾ ಅಶುಚಿಃ (ಸ್ಸ)=ಅಪರಿಶುದ್ಧನಾಗಿ ದೇಹಿನಂ=ಆ ದೇಹವನ್ನು ಹೊಂದಿದ್ದ ಜೀವನನ್ನು (ತನ್ನನ್ನು) ಯಾತಯಾಮಾಸ=೧) ನರಕಕ್ಕೆ ಹೋಗಲು ಸಿದ್ಧನನ್ನಾಗಿ ಮಾಡಿ ದ್ದನು ೨) ಶರೀರಯಾತ್ರೆಯನ್ನು ಹೊಂದಿದವನನ್ನಾಗಿ ಮಾಡಿದ್ದನು. ವಿ. ಅ. ಅಜಾ ಮಿಲಃ ಎಂಬ ಹೆಸರು ಅವನ ಎರಡು ಅವಸ್ಥೆಗಳನ್ನೂ ತಿಳಿಸುತ್ತದೆ. ಅಜಾ ಎಂದರೆ ಪ್ರಕೃತಿಯಿಂದ ಮಿಲ (ಮೀಲ)=ಜ್ಞಾನದ ತಿರೋಭಾವ ಉಳ್ಳವನು. ಅನಂತರ ಅಜ ಅಂದರೆ ಜನನವಿಲ್ಲದವನಾದ ಶ್ರೀಹರಿಯಿಂದ ಆಮಿಲ (ಆಮೀಲನ) ಜ್ಞಾನದ ಉನ್ಮೀಲನವುಳ್ಳವನು. ಕಾನ್ಯಕುಬ್ಜವೆಂಬ ದೇಶವನ್ನು 'ಯತ್ರ ಚ ಬ್ರಾಹ್ಮಣಾ- ಭಾಸಾ ಮಾನವಾ ಮತ್ಸ್ಯ ಹಾರಿಣಃ । ತಮುಬ್ಧೇರ್ನಿಕಟಂ ದೇಶಂ ಕಾನ್ಯಕುಬ್ಜಂ ವದಂತಿ ಹಿ ॥ ಮತ್ಸ್ಯಹಾರಿಗಳಾದ ಬ್ರಾಹ್ಮಣಾಭಾಸರಿರುವ ಸಮುದ್ರತೀರದೇಶ ವೆಂದು ವರ್ಣಿಸಿರುವರು. ॥ ೨೧, ೨೨ ॥

ಏವಂ ನಿವಸತಸ್ತಸ್ಯ ಲಾಲಯಾನಸ್ಯ ತತ್ಸುತಾನ್ ।
ಕಾಲೋಽತ್ಯಗಾನ್ಮಹಾನ್ ರಾಜನ್ನಷ್ಟಾಶೀತ್ಯಾಯುಷಃ ಸಮಾಃ ॥

ಏವಂ=ಹೀಗೆ ನಿವಸತಃ=ವಾಸಿಸುತ್ತಿದ್ದ ತತ್ಸುತಾನ್=ಆ ದಾಸಿಯ ಮಕ್ಕಳನ್ನು ಲಾಲಯಾನಸ್ಯ=ಲಾಲಿಸುತ್ತಿದ್ದ ತಸ್ಯ=ಆ ಅಜಾಮಿಳನಿಗೆ ಅಷ್ಟಾಶೀತ್ಯಾಯುಷಃ= ಎಂಬತ್ತೆಂಟು ಆಯುಸ್ಸಿನ ಸಮಾಃ=ವರ್ಷಗಳಷ್ಟು ಸಂಖ್ಯೆಯ ಮಹಾನ್=ದೀರ್ಘ ವಾದ ಕಾಲಃ=ಕಾಲವು ಅತ್ಯಗಾತ್=ಕಳೆಯಿತು. ॥ ೨೩ ॥

ದೂತರ ಸಂವಾದರೂಪವಾದ ಕಥೆಯೊಂದಿದೆ. ಅದನ್ನು ಹೇಳುತ್ತೇನೆ ಕೇಳು. ಅದರ ರಹಸ್ಯವನ್ನು ತಿಳಿ.

ಕಾನ್ಯಕುಬ್ಜ ದೇಶದಲ್ಲಿ (ಊರಿನಲ್ಲಿ) ಅಜಾಮಿಳನೆಂಬ ಒಬ್ಬ ದ್ವಿಜನಿದ್ದನು. ದಾಸೀಪತಿಯಾಗಿದ್ದ ಅವನು ದಾಸಿಯ ಸಂಬಂಧದಿಂದ ಪತಿತನಾಗಿದ್ದನು. ಅನುಸರಿಸುತ್ತಿದ್ದ ಸದಾಚಾರಗಳೆಲ್ಲವನ್ನೂ ತೊರೆದಿದ್ದನು. ನಿಂದಿತಗಳಾದ ದಾರಿಹೋಕರನ್ನು ಸೆರೆಹಿಡಿಯುವಿಕೆ, ಜೂಜಾಟ, ಸುಳ್ಳು ಹೇಳುವಿಕೆ, ಕಳ್ಳತನ— ಈ ವೃತ್ತಿಗಳಿಂದ ಕುಟುಂಬವನ್ನು ಪೋಷಿಸುತ್ತಿದ್ದನು. ಹೀಗೆ ಅಶುದ್ಧನಾಗಿದ್ದ ಅವನು ನರಕಕ್ಕೆ ದಾರಿ ಮಾಡಿಕೊಂಡಿದ್ದನು. ರಾಜನ್, ಹೀಗೆ ಜೀವನ ನಡೆಸುತ್ತಾ ಆ ದಾಸಿಯ ಮಕ್ಕಳನ್ನೇ ಲಾಲಿಸುತ್ತಾ ವಾಸಿಸುತ್ತಿದ್ದ ಅವನಿಗೆ ಎಂಭತ್ತೆಂಟು

ತಸ್ಯ ಪ್ರವಯಸಃ ಪುತ್ರಾ ದಶ ತೇಷಾಂ ತು ಯೋಽವಮಃ ।
ಬಾಲೋ ನಾರಾಯಣೋ ನಾಮ್ನಾ ಪಿತ್ರೋಶ್ಚ
ದಯಿತೋ ಭೃಶಮ್ ॥ ೨೪ ॥

ಪ್ರವಯಸಃ=ವೃದ್ಧನಾದ ತಸ್ಯ=ಅವನಿಗೆ ದಶಪುತ್ರಾಃ=ಹತ್ತು ಮಕ್ಕಳು (ಆಸ)=ಇದ್ದರು. ತೇಷಾಂ=ಅವರಲ್ಲಿ ಯಃ ತು=ಯಾವನಾದರೆ ಅವಮಃ= ಕೊನೆಯುವನೋ (ಸಃ)=ಆ ನಾಮ್ನಾ=ಹೆಸರಿನಿಂದ ನಾರಾಯಣನೆಂಬ ಬಾಲಕನು ಪಿತ್ರೋಃ=ತಂದೆತಾಯಿಗಳಿಗೆ ಭೃಶಂ=ಬಹಳ ದಯಿತಃ ಚ=ಪ್ರೀತಿವಿಷಯನೂ (ಆಸೀತ್)=ಆಗಿದ್ದನು. ॥ ೨೪ ॥

ಸ ಬದ್ಧಹೃದಯಸ್ತಸ್ಮಿನ್ನರ್ಭಕೇ ಕಲಭಾಷಿಣಿ ।
ನಿರೀಕ್ಷಮಾಣಸ್ತಲ್ಲೀಲಾಂ ಮುಮುದೇ ಜರಠೋ ಭೃಶಮ್ ॥ ೨೫ ॥

ಕಲಭಾಷಿಣಿ=ಅವ್ಯಕ್ತ ಮಧುರವಾಗಿ ಮಾತನಾಡುತ್ತಿದ್ದ ತಸ್ಮಿನ್=ಆ ಅರ್ಭಕೇ=ಶಿಶುವಿನಲ್ಲಿ ಬದ್ಧಹೃದಯಃ=ಸೇರಿಕೊಂಡ ಮನಸ್ಸುಳ್ಳ (ಪ್ರೀತಿಯುಳ್ಳ) ಸಃ=ಆ ಜರಠಃ=ಮುದುಕನು ತಲ್ಲೀಲಾಂ=ಆ ಹುಡುಗನ ಆಟಪಾಟಗಳನ್ನು ನಿರೀಕ್ಷಮಾಣಃ ಸನ್=ನೋಡುತ್ತಿರುವನಾಗಿ ಮುಮುದೇ=ಬಹಳ ಆನಂದಿಸಿದನು. ॥ ೨೫ ॥

ಭುಂಜಾನಃ ಪ್ರಪಿಬನ್ ಖಾದನ್ ಬಾಲಕಸ್ನೇಹಯಂತ್ರಿತಃ ।
ಭೋಜಯನ್ ಪಾಯಯನ್ ಮೂಢೋ ನ ವೇದಾಗತಮಂತಕಮ್
॥ ೨೬ ॥

ಬಾಲಕನಮೇಲಿನ ಪ್ರೀತಿಗೆ ಅಧೀನನಾದ ಆ ಮೂಢನು ಭುಂಜಾನಃ= ಊಟಮಾಡುತ್ತಾ ಪ್ರಪಿಬನ್=ಕುಡಿಯುತ್ತಾ ಖಾದನ್=ತಿನ್ನುತ್ತಾ ಭೋಜಯನ್ =ಆ ಹುಡುಗನಿಗೆ ಊಟಮಾಡಿಸುತ್ತಾ ಪಾಯಯನ್=ಕುಡಿಸುತ್ತಾ ಇದ್ದು ಆಗತಂ= ತನಗೆ ಒದಗಿಬಂದ ಅಂತಕಂ=ಮೃತ್ಯುವನ್ನು ನ ವೇದ=ತಿಳಿಯಲಿಲ್ಲ. ॥ ೨೬ ॥

ವರ್ಷಗಳ ಆಯುಸ್ಸಿನಷ್ಟು ದೀರ್ಘಕಾಲವು ಕಳೆದುಹೋಯಿತು. ಆ ಮುದುಕನಿಗೆ ಹತ್ತು ಮಕ್ಕಳು. ಅವರಲ್ಲಿ ಕೊನೆಯುವನಾದ ನಾರಾಯಣನೆಂಬುವನು ಬಾಲಕ. ತಂದೆತಾಯಿಗಳ ಅತ್ಯಂತ ಪ್ರೀತಿಗೆ ಅವನು ಪಾತ್ರ. ಅಸ್ಪಷ್ಟ ಮಧುರಭಾಷಿಯಾದ ಆ ಮಗುವಿನಲ್ಲಿ ಸ್ನೇಹಪೂರ್ಣನಾದ ಆ ವೃದ್ಧನು ಅವನ ಆಟಪಾಟಗಳನ್ನು ನೋಡುತ್ತಾ ಅತಿಹರ್ಷಗೊಳ್ಳುತ್ತಿದ್ದನು. ಆ ಹುಡುಗನಮೇಲಿನ ಪ್ರೀತಿಗೆ ವಶನಾಗಿ ಊಟಮಾಡುತ್ತಾ ಕುಡಿಯುತ್ತಾ ತಿನ್ನುತ್ತಾ ಆ ಮೂಢನು ಆ ಹುಡುಗನಿಗೆ ಊಟಮಾಡಿಸುತ್ತಾ ಕುಡಿಸುತ್ತಾ (ತಿನ್ನಿಸುತ್ತಾ) ತನಗೆ ಬಂದ ಮೃತ್ಯುವನ್ನು ತಿಳಿಯದೆ ಹೋದನು.

ಸ ಏವಂ ವರ್ತಮಾನೋಽಜ್ಞೋ ಮೃತ್ಯುಕಾಲ ಉಪಸ್ಥಿತೇ ।
ಮತಿಂ ಚಕಾರ ತನಯೇ ಬಾಲೇ ನಾರಾಯಣಾಹ್ವಯೇ ॥ ೨೭ ॥

ಏವಂ ವರ್ತಮಾನಃ= ಹೀಗೆ ಇರುತ್ತಿದ್ದ ಸಃ ಅಜ್ಞಃ= ಆ ಅಜ್ಞಾನಿಯು ಮೃತ್ಯುಕಾಲೇ=ದೇಹವನ್ನು ಬಿಡುವುದೆಂಬ ಮರಣಕಾಲವು ಉಪಸ್ಥಿತೇ (ಸತಿ)= ಬಂದಿರಲು, ನಾರಾಯಣನೆಂಬ ಬಾಲಕನಾದ ಮಗನಲ್ಲಿ ಮತಿಂ= ಮನಸ್ಸನ್ನು ಚಕಾರ=ಇಟ್ಟನು. ಅಂತರಾರ್ಥ : ಹೀಗೆ ಇದ್ದ ಸಃ ಅಜ್ಞಃ–ಆ ಪರಮಾತ್ಮಜ್ಞಾನಿಯು ಮೃತ್ಯುಕಾಲೇ=ಎಲ್ಲ ದೋಷವನ್ನೂ ಅಪಹರಿಸುವ ಶ್ರೀಹರಿಯು ಅನುಗ್ರಹದಿಂದ ಜ್ಞಾನ ಉಂಟಾಗಿರಲು ಉಪಸ್ಥಿತೇ=ಹೃದಯದಲ್ಲಿ ಪ್ರಕಾಶಿತನಾದ ತನಯೇ–ಜ್ಞಾನ ಪೂರ್ಣನಾದ (ತನು–ವಿಸ್ತಾರವಾದ ಯ=ಜ್ಞಾನವುಳ್ಳ) ಬಾಲೇ=ಐದುವರ್ಷದವ ನಂತೆ ಸಣ್ಣ ಪ್ರಾದೇಶ ಮಾತ್ರವಿರುವ ನಾರಾಯಣಾಹ್ವಯೇ=ನಾರಾಯಣನೆಂಬ ಮೂರ್ತಿವಿಶೇಷದಲ್ಲಿ ಮತಿಂ=ಸ್ಮರಣೆ ಸಾಮರ್ಥ್ಯವುಳ್ಳ ಮನಸ್ಸನ್ನು ಚಕಾರ= ಮಾಡಿದನು. ಭಕ್ತಿಯಿಂದ ಸ್ಮರಿಸಿದನೆಂದರ್ಥ. ಈ ಅರ್ಥವು ಮುಂದಿನ ಅಧ್ಯಾಯದ ೧೪ನೆಯ ಪದ್ಯದ 'ಅಶೇಷಾಘಹರಂ ವಿದುಃ' ಎಂಬ ಶ್ಲೋಕದಲ್ಲಿ ಆಚಾರ್ಯರು ಉದಾಹರಿಸಿರುವ 'ಅಜಾಮಿಲೋಽಪಿ ಸ್ಮರಣಾದ್ಭಕ್ತ್ಯಾ ಮೃತ್ಯೋರ- ಮುಚ್ಯತ' ಎಂಬ ವಾಕ್ಯವನ್ನನುಸರಿಸಿ ಮಾಡಿದ್ದಾಗಿದೆ. ಆ ಪ್ರಮಾಣವನ್ನು ಇಲ್ಲಿಯೂ ಇಟ್ಟುಕೊಳ್ಳಬೇಕು. ॥ ೨೭ ॥

ಹೀಗಿರುತ್ತಿದ್ದ ಆ ಅಜ್ಞಾನಿಯು ಮರಣಕಾಲವು ಸಮೀಪಿಸಿರಲು ಮಗನಾದ ನಾರಾಯಣನೆಂಬ ಆ ಹುಡುಗನಲ್ಲಿಯೇ ಮನಸ್ಸಿಟ್ಟನು. ಇಲ್ಲಿ ಭಕ್ತಿಯಿಂದ ಹರಿಯಲ್ಲಿ ಮನಸ್ಸಿಟ್ಟವರಿಗೆ ಪಾಪ ಪರಿಹಾರವಾಗುವುದೆಂಬ ಹಿನ್ನೆಲೆಯಲ್ಲಿ ಈ ಕಥೆಯು ಪ್ರವೃತ್ತವಾಗಿರುವುದರಿಂದ, ಅಜಾಮಿಳನು—ಪ್ರಕೃತಿಯ ಪ್ರಭಾವದಿಂದ ಜ್ಞಾನ ತಿರೋಹಿತವಾಗಿದ್ದು ನಂತರ ಶ್ರೀಹರಿಯ ಅನುಗ್ರಹದಿಂದ ಜ್ಞಾನವು ಉದ್ಬುದ್ಧ ವಾದವನು—ಎಲ್ಲ ದೋಷವನ್ನೂ ಹೋಗಲಾಡಿಸುವ ಶ್ರೀಹರಿಯಿಂದ ಜ್ಞಾನವು ಸ್ಫೂರ್ತಿಗೆ ಬಂದಿರಲು ತನ್ನ ಹೃದಯದಲ್ಲಿ ಪ್ರಕಾಶಿತನಾಗಿದ್ದ ಜ್ಞಾನದಿಂದ ಪೂರ್ಣ ನಾದ ಹುಡುಗನಂತೆ ಪ್ರಾದೇಶ ಮಾತ್ರ ಪರಿಮಿತನಾದ ನಾರಾಯಣನೆಂಬ (ದೇಹ ಬಿಂಬ) ಶ್ರೀಹರಿಯ ಮೂರ್ತಿಯಲ್ಲಿ ಸ್ಮರಿಸುವ ಸಾಮರ್ಥ್ಯವುಳ್ಳ ಮನಸ್ಸನ್ನು ಮಾಡಿದನು. (ಮರಣಕಾಲದಲ್ಲಿ ಶ್ರೀಹರಿಯು ಅನುಗ್ರಹದಿಂದ ಜ್ಞಾನೋದಯ ವಾಗಿ ದೇಹಸ್ಥ ನಾರಾಯಣನನ್ನು ಸ್ಮರಿಸಿದನು.)

ಸ ಪಾಶಹಸ್ತಾಂಸ್ತ್ರೀನ್ ದೃಷ್ಟ್ವಾ ಪುರುಷಾನ್ ಭೃಶದಾರುಣಾನ್ ।
ವಕ್ರತುಂಡಾನೂರ್ಧ್ವರೋಮ್ಣ ಆತ್ಮಾನಂ ನೇತುಮಾಗತಾನ್ ॥ ೨೮ ॥

ಸಃ = ಆ ಅಜಾಮಿಳನು ಆತ್ಮಾನಂ = ತನ್ನನ್ನು ನೇತುಂ = ಕರೆದುಕೊಂಡು ಹೋಗಲು ಆಗತಾನ್ – ಬಂದಿದ್ದ ವಕ್ರತುಂಡಾನ್ – ಸೊಟ್ಟಮುಖದ ಊರ್ಧ್ವರೋಮ್ಣಃ–ಮೇಲಕ್ಕೆ ಎದ್ದಿದ್ದ ಕೂದಲಿನ ಪಾಶಹಸ್ತಾನ್=ಕೈಯಲ್ಲಿ ಯಮಪಾಶವನ್ನು ಹಿಡಿದಿರುವ ಭೃಶದಾರುಣಾನ್=ಬಹಳ ಭಯಂಕರರಾದ ತ್ರೀನ್ ಪುರುಷಾನ್– ಮೂವರು ಪುರುಷರನ್ನು ದೃಷ್ಟ್ವಾ=ನೋಡಿ ॥ ೨೮ ॥

ದೂರೇ ಕ್ರೀಡನಕಾಸಕ್ತಂ ಪುತ್ರಂ ನಾರಾಯಣಾಹ್ವಯಮ್ ।
ಪ್ಲಾವಿತೇನ ಸ್ವರೇಣೋಚ್ಚೈರಾಜುಹಾವಾಕುಲೇಂದ್ರಿಯಃ ॥ ೨೯ ॥

ಆಕುಲೇಂದ್ರಿಯಃ ಸನ್ = ದುರ್ಬಲಗಳಾದ ಇಂದ್ರಿಯಗಳುಳ್ಳವನಾಗಿ ಪ್ಲಾವಿತೇನ = ನಾಲ್ಕು ಮಾತ್ರೆಗಳಷ್ಟು ದೀರ್ಘಕಾಲೋಚ್ಚಾರಣೆಯ ಉಚ್ಚೈಃ ಸ್ವರೇಣ – ಘಟ್ಟಿಯಾದ ಧ್ವನಿಯಿಂದ ದೂರೇ = ದೂರದಲ್ಲಿ ಕ್ರೀಡನಕಾಸಕ್ತಂ= ಆಟದಲ್ಲಿ ಮಗ್ನನಾಗಿದ್ದ ನಾರಾಯಣಾಹ್ವಯಂ = ನಾರಾಯಣನೆಂಬ ಪುತ್ರಂ = ಮಗನನ್ನು ಆಜುಹಾವ–ನಾರಾಯಣಾ ಎಂದು ಕರೆದನು. ಆಗ ಆ ಹೆಸರಿನ ಮುಖ್ಯಸ್ವಾಮಿಯಾದ ಶ್ರೀಮನ್ನಾರಾಯಣನ ಸ್ಮರಣೆಯುಂಟಾಗಿ ತಾನು ಹಿಂದೆ ಮಾಡಿದ ಪುಣ್ಯಕರ್ಮಗಳ ಪ್ರಭಾವದಿಂದ ಹುಟ್ಟಿದ ನಿರತಿಶಯ ಭಕ್ತಿಯಿಂದ ಆಕುಲೇಂದ್ರಿಯಃ = ಶ್ರೀಹರಿಯಲ್ಲಿಯೇ ಆಸಕ್ತಗಳಾದ ಇಂದ್ರಿಯಗಳುಳ್ಳವನಾಗಿ ಪ್ಲುತಸ್ವರದಿಂದ ಗಟ್ಟಿಯಾಗಿ ದೂರೇ – ಬ್ರಹ್ಮಾಂಡದ ಹೊರಗೂ ಇರುವ, ಕ್ರೀಡನಕಾಸಕ್ತಂ – ಜಗತ್ಸೃಷ್ಟಿ ಮೊದಲಾದ ಲೀಲಾವಿಲಾಸಗಳಿಂದ ಕೂಡಿದ, ಪುತ್ರಂ=ಪುತ್ ಎಂಬ ನರಕದಿಂದ ರಕ್ಷಣೆ ಮಾಡುವ ನಾರಾಯಣನೆಂಬ ಹೆಸರುಳ್ಳ ಶ್ರೀಹರಿಯನ್ನು (ನಾರಾಯಣನನ್ನು) ಆಜುಹಾವ = ಮೂರ್ತಿ ವಿಶೇಷವನ್ನು

ಅಜಾಮಿಳನನ್ನು ಕರೆದುಕೊಂಡು ಹೋಗಲು ಮೂವರು ಪುರುಷರು ಬಂದಿದ್ದರು. ಸೊಟ್ಟ ಮುಖದ ಉದ್ದಕೂದಲಿನ ಬಹು ಭಯಂಕರ ರೂಪದ ಅವರು ಕೈಯಲ್ಲಿ ಯಮಪಾಶವನ್ನು ಹಿಡಿದಿದ್ದರು. ಅವರನ್ನು ನೋಡಿ ಅಜಾಮಿಳನ ಇಂದ್ರಿಯಗಳು ದುರ್ಬಲಗಳಾದುವು. ಅವನು ಪ್ಲುತಸ್ವರದಿಂದ ಗಟ್ಟಿಯಾಗಿ ದೂರದಲ್ಲಿ ಆಟದಲ್ಲಿ ಮಗ್ನನಾಗಿದ್ದ ನಾರಾಯಣನೆಂಬ ಹೆಸರಿನ ಮಗನನ್ನು ನಾರಾಯಣಾ....ಎಂದು ಕೂಗಿದನು. ಆ ಹೆಸರಿನ ಮುಖ್ಯಸ್ವಾಮಿಯಾದ ನಾರಾಯಣನ ಸ್ಮರಣೆ ಬಂದು ಹಿಂದಿನ ಸುಕೃತದ ಪ್ರಭಾವದಿಂದ ಶ್ರೀಹರಿಯಲ್ಲಿ ನಿರತಿಶಯ ಭಕ್ತಿ ಹುಟ್ಟಿ ಇಂದ್ರಿಯಗಳು ಭಗವಂತನಲ್ಲಿ ಆಸಕ್ತವಾದುವು. ಬ್ರಹ್ಮಾಂಡದ ಹೊರಗೆ ಜಗತ್ಸೃಷ್ಟಿ ಮೊದಲಾದ ಕ್ರೀಡೆಗಳಿಂದ ಕೂಡಿದ, ಪುನ್ನಾಮ ನರಕದಿಂದ ರಕ್ಷಿಸುವ, ನಾರಾಯಣ

ಧ್ಯಾನಿಸಿ ಅವಯವಾರ್ಥಪೂರ್ವಕ ಅನುಸಂಧಾನ ಮಾಡುತ್ತಾ ಉಪಾಸನೆ ಮಾಡಿದರು. ದೂರೇ ಎಂಬುದರಿಂದ ಪ್ಲುತಸ್ವರದಿಂದ ಕರೆಯುವುದಕ್ಕೆ ಕಾರಣ ಕೊಟ್ಟಂತಾಯಿತು. 'ಬಾಲಃ ಕ್ರೀಡನಕೈರ್ಯದ್ವತ್ ಕ್ರೀಡತೇಽಸ್ಮಾಭಿರಚ್ಯುತಃ' ಎಂಬ ಪ್ರಮಾಣದಂತೆ ಸೃಷ್ಟ್ಯಾದಿಗಳು ಶ್ರೀಹರಿಗೆ ಆಟ. 'ತ್ರಾತಾ ಪುತ್ರಃ ತ್ವಮೇವ ಮೇ' ಎಂಬುದರಿಂದ ಮುಖ್ಯ ಪುತ್ರ ಶಬ್ದವಾಚ್ಯನು ಶ್ರೀಹರಿಯೇ. 'ಯತ್ ತಸ್ಯ ವ್ಯಾಪಕಂ ರೂಪಂ ಪರಂ ನಾರಾಯಣಾಭಿಧಮ್' ಎಂಬ ಪ್ರಮಾಣದಂತೆ ವ್ಯಾಪಕಮೂರ್ತಿವಿಶೇಷಕ್ಕೆ ನಾರಾಯಣನೆಂದು ಹೆಸರು. ಆ ಮೂರ್ತಿ ವಿಶೇಷವನ್ನು ಸ್ಮರಿಸಿಕೊಂಡರು. 'ನಾಮಸ್ವಾಮಿತಯಾ ತಸ್ಯ ಸ್ಮರಣಂ ಜಾಯತೇ ಯತಃ || ಅಜಾಮಿಳೋಽಪಿ ಸ್ಮರಣಾದ್ಭಕ್ತ್ಯಾ ಮೃತ್ಯೋರಮುಚ್ಯತ ||' ಎಂಬ ಪ್ರಮಾಣವನ್ನನುಸರಿಸಿ ಈ ಅರ್ಥವನ್ನೂ ತಿಳಿಯಬೇಕು. || ೨೯ ||

ನಿಶಮ್ಯ ಮ್ರಿಯಮಾಣಸ್ಯ ಮುಖತೋ ಹರಿಕೀರ್ತನಮ್ ।
ಭರ್ತುರ್ನಾಮ ಮಹಾರಾಜ! ಪಾರ್ಷದಾಃ ಸಹಸಾಽಽಪತನ್
|| ೩೦ ||

ಅಜಾಮಿಳನು ಮಾಡಿದ ಹರಿನಾಮಕೀರ್ತನೆಯು ಅಪ್ರಧಾನವಾಗಿತ್ತೇ? ಎಂದರೆ ಇಲ್ಲ, ಪ್ರಧಾನವಾಗಿಟ್ಟಿತೆಂದು ತಿಳಿಸುತ್ತಾರೆ. ಹೇ ಮಹಾರಾಜ= ಪರೀಕ್ಷಿದ್ರಾಜನೇ ಮ್ರಿಯಮಾಣಸ್ಯ ಮುಖತಃ=ಸಾಯಲಿದ್ದ ಅಜಾಮಿಳನ ಬಾಯಿಯಿಂದ ಹರಿಕೀರ್ತನಂ=(೧) ಶ್ರೀಹರಿಯ ಕೀರ್ತನೆಯಾದ (೨) ದೋಷಹರಣ ಸ್ವಭಾವದ ಕೀರ್ತನೆಯುಳ್ಳ ಭರ್ತುಃ ನಾಮ=ತಮ್ಮ ಸ್ವಾಮಿಯಾದ ಶ್ರೀಮನ್ನಾರಾಯಣನ ಹೆಸರನ್ನು (ಹೆಸರಿನ ಭಕ್ತಿಪೂರ್ವಕೋಚ್ಚಾರಣೆಯನ್ನು) ನಿಶಮ್ಯ= ಕೇಳಿ, ಪಾರ್ಷದಾಃ=ಶ್ರೀಹರಿಯ ದ್ವಾರಪಾಲಕರು (ವಿಷ್ಣುದೂತರು) ಸಹಸಾ= ಕೂಡಲೇ ಆಪೇತುಃ=ಬಂದರು. ಅಥವಾ ಸ್ವಾಮಿಯ ನಾರಾಯಣನೆಂಬ ಹೆಸರಿನ ರೂಪದ ಹರಿಸ್ಮರಣೆಯನ್ನು ಎಂದಾದರೂ ಅರ್ಥ. ಹರಿ ಎಂಬುದು ಎರಡಕ್ಷರ, ನಾರಾಯಣನೆಂಬುದು ನಾಲ್ಕಕ್ಷರ ಅಜಾಮಿಳ ಹೇಳಿದ್ದು ಎಂದು ತಿಳಿಸಲು ಅನನ್ವಿತವಾಗಿರುವಂತೆ ಪ್ರಯೋಗಿಸಿರುವರು. ಇದರಿಂದ ಮಗನಮೇಲೆ ಪ್ರೀತಿಯಿಲ್ಲದೆಯೇ ಹಿಂದಿನ ಪುಣ್ಯದ ಫಲವಾಗಿ ಶ್ರೀಹರಿಯು ಅನುಗ್ರಹಿಸಿದ ಭಕ್ತಿವಿಶೇಷದಿಂದ ಭಗವನ್ನಾಮಸಂಕೀರ್ತನೆಯನ್ನು ಮಾಡಿದರೆಂದು ತಿಳಿದುಬರುವುದು. ಆದ್ದರಿಂದ ಹರಿಕೀರ್ತನೆಯೇ ಪ್ರಧಾನವಾಗಿತ್ತು ಎಂದು ತಾತ್ಪರ್ಯ. (ಈ ರಹಸ್ಯವನ್ನು ತಿಳಿಯದವರಿಗೆ ಮಾತ್ರ ಅದು ಮಗನ ಕರೆಯಾಗಿತ್ತು.) || ೩೦ ||

ನೆಂಬ ಅವನ ವ್ಯಾಪಕರೂಪವನ್ನು ಗಟ್ಟಿಯಾಗಿ ಪ್ಲುತಸ್ವರದಿಂದ ಕೂಗಿ ಉಪಾಸಿಸಿದರು. ಮಹಾರಾಜ! ಸಾಯಲಿದ್ದ ಅಜಾಮಿಳನ ಮುಖದಿಂದ ದೋಷಹಾರಕ ಶ್ರೀಹರಿಯ ಹೆಸರು ಭಕ್ತಿಯಿಂದ ಉಚ್ಚರಿತವಾದುದನ್ನು ಕೇಳಿ ವಿಷ್ಣುದೂತರು

ವಿಕರ್ಷತೋಽಂತರ್ಹೃದಯಾದ್ದಾಸೀಪತಿಮಜಾಮಿಲಂ ।
ಯಮಪ್ರೇಷ್ಯಾನ್ ವಿಷ್ಣುದೂತಾ ವಾರಯಾಮಾಸುರೋಜಸಾ ॥

ದಾಸೀಪತಿಯಾದ ಅಜಾಮಿಳನನ್ನು ಅಂತರ್ಹೃದಯಾತ್=ಹೃದಯದ ಒಳ ಭಾಗದಿಂದ ವಿಕರ್ಷತಃ = ಎಳೆಯುತ್ತಿದ್ದ ಯಮಪ್ರೇಷ್ಯಾನ್ = ಯಮದೂತರನ್ನು ವಿಷ್ಣುದೂತರು ಓಜಸಾ = ಅವಷ್ಟಂಭದಿಂದ, ಬಲದಿಂದ ವಾರಯಾಮಾಸುಃ= ತಡೆದರು. ॥ ೩೧ ॥

ಊಚುರ್ನಿಷೇಧಿತಾಸ್ತಾಂಸ್ತೇ ವೈವಸ್ವತಪುರಃಸರಾಃ ।
ಕೇ ಯೂಯಂ ಪ್ರತಿಷೇದ್ಧಾರೋ ಧರ್ಮರಾಜಸ್ಯ ಶಾಸನಮ್ ॥

ನಿಷೇಧಿತಾಃ = ವಿಷ್ಣುದೂತರಿಂದ ತಡೆಯಲ್ಪಟ್ಟ ತೇ=ಆ ವೈವಸ್ವತಪುರಃ-ಸರಾಃ=ಯಮಭೃತ್ಯರು ತಾನ್=ಆ ವಿಷ್ಣುದೂತರನ್ನು ಕುರಿತು ಊಚುಃ=ಹೇಳಿದರು. ಧರ್ಮರಾಜನ ಶಾಸನಂ = ಅಪ್ಪಣೆಯನ್ನು ಪ್ರತಿಷೇದ್ಧಾರಃ = ತಡೆಯುತ್ತಿರುವ ಯೂಯಂ=ನೀವು ಕೇ=ಯಾರು? ॥ ೩೨ ॥

ಕಸ್ಯ ವಾ ಕುತ ಆಯಾತಾಃ ಕಸ್ಮಾದಸ್ಯ ನಿಷೇಧಥ ।
ಕಿಂ ದೇವಾ ಉಪದೇವಾ ವಾ ಯೂಯಂ ಕಿಂ ಸಿದ್ಧಸತ್ತಮಾಃ ॥

ನೀವು ಕಸ್ಯ ವಾ=ಯಾರ ಕಡೆಯವರು? ಕುತಃ=ಎಲ್ಲಿಂದ ಆಯಾತಾಃ= ಬಂದಿರಿ? ಅಸ್ಯ= ಈ ಅಜಾಮಿಳನ (ನಯನಂ) = ಕರೆದುಕೊಂಡು ಹೋಗುವಿಕೆ ಯನ್ನು ಕಸ್ಮಾತ್ = ಏಕೆ ನಿಷೇಧಥ= ತಡೆಯುತ್ತಿರುವಿರಿ? ದೇವತೆಗಳೇ? ಕಿಂ ಉಪದೇವಾಃ=ಗಂಧರ್ವರೇ? ಸಿದ್ಧಸತ್ತಮಾಃ=ಸಿದ್ಧರೇ? ॥ ೩೩ ॥

ಸರ್ವೇ ಪದ್ಮಪಲಾಶಾಕ್ಷಾಃ ಪೀತಕೌಶೇಯವಾಸಸಃ ।
ಕಿರೀಟಿನಃ ಕುಂಡಲಿನೋ ಲಸತ್ಪುಷ್ಕರಮಾಲಿನಃ ॥ ೩೪ ॥
ಸರ್ವೇ ಚ ನೂತ್ನವಯಸಃ ಸರ್ವೇ ಚಾರುಚತುರ್ಭುಜಾಃ ।
ಧನುರ್ನಿಷಂಗಾಸಿಗದಾ ಶಂಖಚಕ್ರಾಂಬುಜಶ್ರಿಯಃ ॥ ೩೫ ॥

ನೀವೆಲ್ಲರೂ ಕಮಲದಳದಂತೆ ಕಣ್ಣುಗಳುಳ್ಳವರು, ಹಳದಿಯ ರೇಷ್ಮೆಯ ಬಟ್ಟೆಯುಳ್ಳವರು. ಕಿರೀಟಧಾರಿಗಳು. ಕುಂಡಲವಿಟ್ಟಿರುವವರು. ಶೋಭಿಸುವ

ಕೂಡಲೆ ಅಲ್ಲಿಗೆ ಬಂದರು. ಯಮದೂತರು ಅಜಾಮಿಳನನ್ನು ಹೃದಯದಿಂದ ಎಳೆಯುತ್ತಿದ್ದರು. ತಮ್ಮ ಶಕ್ತಿಯಿಂದ ವಿಷ್ಣುದೂತರು ಅವರನ್ನು ತಡೆದರು. ನಿಷೇಧಿತರಾದ ಯಮದೂತರು 'ಯಮಧರ್ಮನ ಆಜ್ಞೆಯನ್ನು ತಡೆಯುತ್ತಿರುವ ನೀವು ಯಾರು? ಯಾರ ಕಡೆಯವರು? ಎಲ್ಲಿಂದ ಬಂದಿದ್ದೀರಿ? ಇವನನ್ನು ಕರೆದುಕೊಂಡು ಹೋಗುವುದನ್ನೇಕೆ ತಡೆಯುತ್ತಿದ್ದೀರಿ? ನೀವೇನು ದೇವತೆಗಳೇ? ಗಂಧರ್ವರೇ? ಸಿದ್ಧರೇ? ನಿಮ್ಮೆಲ್ಲರ ಕಣ್ಣುಗಳೂ ಕಮಲದಳದಂತೆ ಇವೆ; ನೀವೆಲ್ಲರೂ ಪೀತಾಂಬರ ಧರಿಸಿರುವಿರಿ; ಕುಂಡಲ ಧಾರಿಗಳು; ಸರಸವಾದ ಕಮಲ

ಕಮಲದ ಹಾರವನ್ನು ಹಾಕಿಕೊಂಡವರು. ನೀವೆಲ್ಲರೂ ನೂತ್ನವಯಸಃ=ಹದಿನಾರು ವರ್ಷಪ್ರಾಯದವರು. ಎಲ್ಲರೂ ಸುಂದರಗಳಾದ ನಾಲ್ಕು ತೋಳುಗಳುಳ್ಳವರು. ಧನುಃ=ಧನುಸ್ಸು ನಿಷಂಗ= ಬಾಣಬತ್ತಳಿಕೆ ಅಸಿ= ಖಡ್ಗ ಗದಾ= ಗದೆ ಶಂಖ ಚಕ್ರ ಮತ್ತು ಅಂಬುಜ=ಕಮಲಗಳಿಂದ ಶೋಭಿತರು. ॥ ೩೪-೩೫ ॥

ದಿಶೋ ವಿತಿಮಿರಾಲೋಕಾಃ ಕುರ್ವಂತಃ ಸ್ವೇನರೋಚಿಷಾ ।
ಕಿಮರ್ಥಂ ಧರ್ಮಪಾಲಸ್ಯ ಕಿಂಕರಾನ್ನೋ ನಿಷೇಧಥ ॥ ೩೬ ॥

ನೀವೆಲ್ಲರೂ ಸ್ವೇನ=ನಿಮ್ಮ ನಿಮ್ಮ ರೋಚಿಷಾ=ಕಾಂತಿಯಿಂದ ದಿಶಃ-ದಿಕ್ಕುಗಳನ್ನು ವಿತಿಮಿರಾಲೋಕಾಃ= (ವಿತಿಮಿರಾಃ) ಕತ್ತಲೆ ಇಲ್ಲದವುಗಳನ್ನಾಗಿಯೂ (ವಿ ಆಲೋಕಾಃ)= ಮತ್ತೊಂದರ ಪ್ರಕಾಶ ಇಲ್ಲದವುಗಳನ್ನಾಗಿಯೂ ಕುರ್ವಂತಃ (ಸಂತಃ)=ಮಾಡುವವರಾಗಿ ಧರ್ಮಪಾಲಸ್ಯ= ಧರ್ಮರಕ್ಷಕರಾದ ಯಮಧರ್ಮರಾಜರ ಕಿಂಕರಾನ್= ದೂತರಾದ ನಃ= ನಮ್ಮನ್ನು ಕಿಮರ್ಥಂ= ಏತಕ್ಕಾಗಿ ನಿಷೇಧಥ=ತಡೆಯುತ್ತಿರುವಿರಿ. ಇದು ನಿಮಗೆ ಅನುಚಿತವೆಂದು ಅಭಿಪ್ರಾಯ. ॥ ೩೬ ॥

ಶ್ರೀ ಶುಕ ಉವಾಚ—

ಇತ್ಯುಕ್ತೇ ಯಮದೂತೈಸ್ತೇ ವಾಸುದೇವೋಕ್ತಕಾರಿಣಃ ।
ತಾನ್ ಪ್ರತ್ಯೂಚುಃ ಪ್ರಹಸ್ಯೇದಂ ಮೇಘನಿರ್ಹ್ರಾದಯಾ ಗಿರಾ ॥

ಯಾರು ದಂಡಕ್ಕೆ ಅರ್ಹರು? ಯಾರಲ್ಲ? ಎಂಬ ಅರಿವಿಲ್ಲದ ಇವರು ಎಷ್ಟು ಮಾತ್ರ ಧರ್ಮವನ್ನು ಉಳಿಸಿಯಾರು? ಎಂದು ವಿಸ್ಮಿತರಾಗಿ ನಕ್ಕರೆಂದು ಹೇಳುತ್ತಾರೆ. ಯಮದೂತರಿಂದ ಇತಿ=ಮೇಲೆ ಹೇಳಿದಂತೆ ಉಕ್ತೇ ಸತಿ=ಹೇಳಲ್ಪಡಲು ವಾಸುದೇವೋಕ್ತಕಾರಿಣಃ= ಶ್ರೀಹರಿಯ ಕಿಂಕರರಾದ ತೇ= ಅವರು ಪ್ರಹಸ್ಯ= ಗಹಗಹಿಸಿ ನಕ್ಕು ಮೇಘನಿರ್ಹ್ರಾದಯಾ=ಮೋಡದ ಗುಡುಗಿನಂತೆ ಗಂಭೀರವಾದ ಗಿರಾ=ಮಾತಿನಿಂದ ತಾನ್ ಪ್ರತಿ=ಅವರನ್ನು ಕುರಿತು ಇದಂ=ಮುಂದೆ ಹೇಳುವ ಮಾತುಗಳನ್ನು ಊಚುಃ=ಹೇಳಿದರು. ॥ ೩೭ ॥

ಪುಷ್ಪಮಾಲೆಯನ್ನು ಹಾಕಿಕೊಂಡಿದ್ದೀರಿ; ಹದಿನಾರರ ಹರೆಯದ ನಿಮಗೆ ನಾಲ್ಕು ತೋಳುಗಳಿವೆ. ಅವುಗಳಲ್ಲಿ ಧನುಸ್ಸು, ಬಾಣ, ಖಡ್ಗ, ಗದೆ, ಶಂಖ, ಚಕ್ರ ಮತ್ತು ಕಮಲಗಳು ಶೋಭಿಸುತ್ತಿವೆ; ನಿಮ್ಮ ಕಾಂತಿಯಿಂದ ದಿಕ್ಕುಗಳಲ್ಲಿ ಕತ್ತಲೆಯಿಲ್ಲದಂತೆಯೂ, ಮತ್ತೊಂದು ಪದಾರ್ಥದ ಪ್ರಕಾಶವು ಕಾಣದಂತೆಯೂ ಮಾಡಿದ್ದೀರಿ. ನಾವು ಯಮರಾಜನ ಕಿಂಕರರು. ನಮ್ಮನ್ನೇಕೆ ತಡೆಯುತ್ತಿರುವಿರಿ? (ಇದು ನಿಮಗೆ ತಕ್ಕದ್ದಲ್ಲ.)' ಎಂದರು.

ಹೀಗೆ ಯಮದೂತರಿಂದ ಹೇಳಿಸಿಕೊಂಡ ವಿಷ್ಣುದೂತರು ಬಿರುನಗೆ ನಕ್ಕು ಗುಡುಗಿನಂತೆ ಗಂಭೀರವಾದ ಮಾತಿನಿಂದ ಅವರನ್ನು ಕುರಿತು 'ನೀವು ಯಮಧರ್ಮನ

ವಿಷ್ಣುದೂತಾ ಊಚುಃ—

ಯೂಯಂ ವೈ ಧರ್ಮರಾಜಸ್ಯ ಯದಿ ನಿರ್ದೇಶಕಾರಿಣಃ ।
ಬ್ರೂತ ಧರ್ಮಸ್ಯ ನಸ್ತತ್ತ್ವಂ ಯಚ್ಚಾಧರ್ಮಸ್ಯ ಲಕ್ಷಣಮ್ ॥ ೩೮ ॥

ಯೂಯಂ=ನೀವು ಧರ್ಮರಾಜನ ನಿರ್ದೇಶಕಾರಿಣಃ=ದೂತರು ಯದಿ=ಆಗಿದ್ದಲ್ಲಿ ನಃ=ನಮಗೆ ಧರ್ಮಸ್ಯ=ಧರ್ಮದ ಅಧರ್ಮಸ್ಯ ಚ=ಪಾಪದ ತತ್ತ್ವಂ=ಅನಾರೋಪಿತವಾದ ಸ್ವರೂಪವನ್ನು ಬ್ರೂತ=ಹೇಳಿರಿ. ಯತ್ = ಯಾವುದು ಲಕ್ಷಣಂ = ಅವುಗಳ ವ್ಯಾವರ್ತಕ ಧರ್ಮವೋ, ಪ್ರಮಾಣವೋ (ತತ್) ಚ = ಅದನ್ನೂ ಬ್ರೂತ=ಹೇಳಿರಿ. ವೈ=ನೋಡೋಣ ಎಂದರ್ಥ. ॥ ೩೮ ॥

ಕಥಂಸ್ವಿದ್ಧ್ರಿಯತೇ ದಂಡಃ ಕಿಂ ವಾಸ್ಯ ಸ್ಥಾನಮೀಪ್ಸಿತಮ್ ।
ದಂಡ್ಯಾಃ ಕಿಂ ಕಾರಿಣಃ ಸರ್ವೇ ಆಹೋಸ್ವಿತ್ಕತಿಚಿನ್ನೃಣಾಮ್ ॥ ೩೯ ॥

ಕಥಂಸ್ವಿತ್ = ಯಾವ ಪ್ರಕಾರದಿಂದ ದಂಡಃ = ಶಿಕ್ಷೆಯು ಧ್ರಿಯತೇ = ಕೊಡಲ್ಪಡುವುದು? ಅಸ್ಯ=ಈ ಶಿಕ್ಷೆಗೆ ಈಪ್ಸಿತಂ=ನಿಮಗೆ ಇಷ್ಟವಾದ ಸ್ಥಾನಂ-ವಾ=ಪ್ರದೇಶವಾಗಲಿ, ವಿಷಯವಾಗಲಿ ಕಿಂ=ಏನು? ನೃಣಾಮ್=ಮನುಷ್ಯರಲ್ಲಿ ಕಾರಿಣಃ=ಕರ್ಮಮಾಡುವ ಸರ್ವೇ=ಎಲ್ಲರೂ ದಂಡ್ಯಾಃ ಕಿಂ=ಶಿಕ್ಷೆಗೆ ಅರ್ಹರೇನು? ಆಹೋಸ್ವಿತ್ = ಅಥವಾ ಕತಿಚಿತ್ = ಕೆಲವರೇ ಅಂದರೆ ಕ್ರೂರ ಸ್ವಭಾವದವರು ಮಾತ್ರವೇ ದಂಡ್ಯಾಃ ಕಿಂ = ಶಿಕ್ಷಾರ್ಹರೇ? ಅವರಲ್ಲಿಯೂ ಕಿಂ ಕಾರಿಣಃ ವಾ = ಮಾಡಿದವರು ಮಾತ್ರವೇ ಅಥವಾ ಅಕಾರಿಣಃ ವಾ = ಮಾಡದೆ ಇದ್ದವರೇ? ಬ್ರೂತ=ಹೇಳಿರಿ. ॥ ೩೯ ॥

ಯಮದೂತಾ ಊಚುಃ—

ವೇದಪ್ರಣಿಹಿತೋ ಧರ್ಮೋ ಹ್ಯಧರ್ಮಸ್ತದ್ವಿಪರ್ಯಯಃ ।
ವೇದೋ ನಾರಾಯಣಃ ಸಾಕ್ಷಾತ್ಸ್ವಯಂಭೂರಿತಿ ಶುಶ್ರುಮ ॥ ೪೦ ॥

'ಬ್ರೂತ ಧರ್ಮಸ್ಯ ನಸ್ತತ್ತ್ವಂ ಯಚ್ಚಾಧರ್ಮಸ್ಯ ಲಕ್ಷಣಂ' ಎಂದದ್ದಕ್ಕೆ ಉತ್ತರ ಕೊಡುತ್ತಾರೆ. (ಯಃ) ಯಾವುದು ವೇದಪ್ರಣಿಹಿತಃ=ವೇದದಲ್ಲಿ ಕರ್ತವ್ಯ

ದೂತರಾಗಿದ್ದಲ್ಲಿ ಧರ್ಮ-ಅಧರ್ಮಗಳ ತತ್ತ್ವವನ್ನೂ, ಲಕ್ಷಣಗಳನ್ನೂ ಪ್ರಮಾಣಗಳನ್ನೂ ಹೇಳಿ. ನೋಡೋಣ! ಶಿಕ್ಷೆಯನ್ನು ವಿಧಿಸುವ ಪ್ರಕಾರವೇನು? ಶಿಕ್ಷೆಗೆ ಸ್ಥಾನವಾವುದು? ವಿಷಯ ರಾರು? ಕರ್ಮ ಮಾಡುವ ಮನುಷ್ಯರೆಲ್ಲರೂ ಶಿಕ್ಷಾರ್ಹರೇ? ಅಥವಾ ಕೆಲವರು ಮಾತ್ರವೇ? ಮಾಡಿದವರೇ? ಮಾಡದಿದ್ದವರೇ?' ಎಂದು ಪ್ರಶ್ನಿಸಿದರು.

ಯಮದೂತರು :—ವೇದದಲ್ಲಿ ಕರ್ತವ್ಯವೆಂದು ಬೋಧಿತವಾದುದೇ ಧರ್ಮ; ನಿಷಿದ್ಧವಾದುದೇ ಅಧರ್ಮ. ಇವುಗಳ ವಿಷಯದಲ್ಲಿ ವೇದವೇ ಪ್ರಮಾಣ.

ವೆಂದು ಬೋಧಿತವಾಗಿದೆಯೋ ಅದು ಧರ್ಮಃ=ಧರ್ಮವು ತದ್ವಿಪರ್ಯಯಃ=ವೇದದಲ್ಲಿ ನಿಷಿದ್ಧವಾದದ್ದು ಅಧರ್ಮಃ=ಅಧರ್ಮವು. ಇದರಿಂದ ಧರ್ಮಾಧರ್ಮಗಳ ಸ್ವರೂಪವನ್ನು ಹೇಳಿದಂತಾಯಿತು. ಇದನ್ನೇ ತಿರುಗಿಸಿ ಅನ್ವಯಮಾಡಿದರೆ ಯಾವುದು ಧರ್ಮವೋ ಅದು ವೇದದಿಂದ ವಿಹಿತವಾದುದು. ಯಾವುದು ಅಧರ್ಮವೋ ಅದು ವೇದದಿಂದ ಪ್ರತಿಷಿದ್ಧವಾದುದು ಎಂದು ಹೇಳಿದಾಗ ವೇದವೇ ಧರ್ಮಾಧರ್ಮಗಳನ್ನು ಪರಸ್ಪರ ಬಿಡಿಸಿ ತೋರಿಸುವುದು ಎಂಬುದರಿಂದ ಇವೆರಡರಲ್ಲಿ ಪ್ರಮಾಣವನ್ನೂ ಹೇಳಿದಂತಾಯಿತು. ಧರ್ಮದ ತತ್ತ್ವವನ್ನು ಹೇಳಿ ಎಂದದ್ದಕ್ಕೆ ಉತ್ತರ ಕೊಡುತ್ತಾರೆ. ಸಾಕ್ಷಾತ್=ಔಪಚಾರಿಕವಲ್ಲದೆ ಸ್ವಯಂಭೂಃ=ಅನಾದಿಯಿಂದ ತಾನೇ ಸಿದ್ಧವಾಗಿರುವ ವೇದಃ=ವೇದವು ಸಾಕ್ಷಾತ್=ತಪಶ್ಶಕ್ತಿಯಿಂದ ವೇದಗಳನ್ನು ಕಂಡ ಋಷಿಗಳಂತಲ್ಲದೆ ಸ್ವಾಭಾವಿಕವಾಗಿಯೇ ಕಂಡ ಸ್ವಯಂಭೂಃ=ಮಾತೃಪಿತೃಗಳಿಂದ ದೇಹಾದಿಗಳನ್ನು ಪಡೆಯದೆ ಸ್ವತಃ ಜ್ಞಾನಾನಂದಾದಿ ದೇಹನಾದ ನಾರಾಯಣಃ=ನಾರಾಯಣನೇ ಪ್ರಥಮ ವಕ್ತೃವಾಗಿ ಉಳ್ಳದ್ದು. ಇತಿ=ಎಂದು ಶುಶ್ರುಮ=ಕೇಳಿದ್ದೇವೆ. ವಿ.ಅ 'ವೇದೋ ನಾರಾಯಣಃ' ಎಂದದ್ದರಿಂದ ವೇದವೂ ನಾರಾಯಣನೂ ಒಂದೇ ಎಂದು ಹೇಳಿದೆಯೆಂದು ತಿಳಿಯಬಾರದು. 'ವೇದಾನಾಂ ಪ್ರಥಮೋ ವಕ್ತಾ ಹರಿರೇವ ಯತೋ ವಿಭುಃ | ಅತೋ ವಿಷ್ಣ್ವಾತ್ಮಕಾ ವೇದಾಃ ಇತ್ಯಾಹುರ್ವೇದವಾದಿನಃ ||' ಎಂಬ ಪ್ರಮಾಣವು ನಾರಾಯಣನೇ ಮೊದಲ ವಕ್ತೃವಾದ್ದರಿಂದ ಹಾಗೆ ವ್ಯವಹಾರವೆಂದು ತಿಳಿಸುತ್ತದೆ. ಸಾಕ್ಷಾತ್ ಸ್ವಯಂಭೂಃ ಈ ಪದಗಳನ್ನು ವೇದ ವಿಶೇಷಣವಾಗಿ ಹೇಳಿದ್ದರಿಂದ 'ಋಚಃ ಸಾಮಾನಿ ಜಜ್ಞಿರೇ' ಇತ್ಯಾದಿ ಉತ್ಪತ್ತಿವಾಕ್ಯಗಳಿರುವುದರಿಂದ ವೇದವು ಪೌರುಷೇಯವಾಯಿತಾಗಿ ಅದರ ಪ್ರಮಾಣವು ಸಂದಿಗ್ಧವಾದ್ದರಿಂದ ಧರ್ಮಾಧರ್ಮಗಳಲ್ಲಿ ಅದಕ್ಕೆ ಪ್ರಾಮಾಣ್ಯವು ಕೂಡುವುದಿಲ್ಲವೆಂಬ ಶಂಕೆಯನ್ನು ಪರಿಹರಿಸಿರುವರು. ಈ ಶಬ್ದಗಳನ್ನು ಶ್ರೀಹರಿಗೆ ವಿಶೇಷಣಮಾಡಿದ್ದರಿಂದ ಶ್ರೀಹರಿಯು ಮಿಕ್ಕ ಋಷಿಗಳಂತೆ ತಪಸ್ಸಿನಿಂದ ವೇದಗಳ ಕೆಲಕೆಲಭಾಗಗಳನ್ನು ಮಾತ್ರ ಕಂಡವನಲ್ಲವೆಂದೂ ದೇವದತ್ತಾದಿಗಳಂತೆ ಮಾತೃಪಿತೃಗಳಿಂದ ದೇಹ ಪಡೆದವನಲ್ಲವೆಂದೂ ತಿಳಿಸಿರುವರು. ನಾರಾಯಣವಕ್ತೃಕವೆಂದು ಅರ್ಥಮಾಡಿದ್ದರಿಂದ ವೇದಗಳ ಉತ್ಪತ್ತಿ ಎಂದರೆ ಅಭಿವ್ಯಕ್ತಿಯೇ ಹೊರತು ಹೊಸ ರಚನೆಯಲ್ಲ. ಪುರಾಣಗಳಂತೆ ಅನ್ಯಥಾ ರಚನೆಯೂ ಅಲ್ಲ. ಎಂದು ತಿಳಿಸಿದಂತಾಯಿತು. 'ಯಾವದ್ಬ್ರಹ್ಮ ವಿಷ್ಠಿತಂ ತಾವತೀ ವಾಕ್' 'ವಾಚಾ ವಿರೂಪ ನಿತ್ಯಯಾ' ಇತ್ಯಾದಿ ಶ್ರುತಿಗಳೇ ವೇದ ನಿತ್ಯತೆಯಲ್ಲಿ ಪ್ರಮಾಣಗಳು. ಸಾಕ್ಷಾತ್ ಎಂಬುದರಿಂದ ಈ ನಿತ್ಯವಾಕ್ಯಗಳಿಗೆ ಔಪಚಾರಿಕವಾಗಿ ಬಹುಕಾಲವಿರುವುದು ಇತ್ಯಾದಿ

ನಿಜವಾಗಿಯೂ ಅನಾದಿಕಾಲದಿಂದ ಸಿದ್ಧವಾಗಿರುವ ವೇದವು ಶ್ರೀಹರಿಯಿಂದಲೇ ಪ್ರಥಮತಃ ಉಚ್ಚರಿತವಾದುದು. ಶ್ರೀಹರಿಯಾದರೋ ಇತರ ಋಷಿಗಳಂತೆ ತಪಶ್ಶಕ್ತಿಯಿಂದ ವೇದವನ್ನು ಕಂಡವನಲ್ಲ. ಸ್ವಾಭಾವಿಕವಾಗಿಯೇ ಕಂಡವನು.

ಅರ್ಥವಲ್ಲವೆಂದೂ ತಿಳಿಸಿರುವರು. ಒಟ್ಟಿನಲ್ಲಿ ವೇದವು ಅಪೌರುಷೇಯವೆಂದೂ ಆದ್ದರಿಂದ ಪುರುಷನಿಮಿತ್ತಕ ದೋಷಗಳು ಅವುಗಳಲ್ಲಿ ಸಂಭವಿಸುವುದಿಲ್ಲವಾದ್ದರಿಂದ ಅನಾರೋಪಿತಗಳೆಂದೂ ಆದ್ದರಿಂದ ಧರ್ಮಾಧರ್ಮಗಳಲ್ಲಿ ಪ್ರಮಾಣಗಳಾಗಬಹುದೆಂದೂ ತಾತ್ಪರ್ಯ. ॥ ೪೦ ॥

ಯೇನ ಸ್ವಧಾಮ್ನ್ಯಮೀ ಭಾವಾ ರಜಃ ಸತ್ತ್ವತಮೋ ಮಯಾಃ ।
ಗುಣನಾಮಕ್ರಿಯಾರೂಪೈರ್ವಿಭಾವ್ಯಂತೇ ಯಥಾತಥಮ್ ॥ ೪೧ ॥

ಇಷ್ಟುಮಾತ್ರದಿಂದ ನಾರಾಯಣನು ಇತರ (ಪದಾರ್ಥಗಳಿಂದ) ವ್ಯಾವೃತ್ತ (ಭಿನ್ನ)ನಾಗಿ ಹೇಗೆ ತಿಳಿದುಬರುವನು? ಎಂದರೆ ಅದಕ್ಕಾಗಿ ಅವನ ಲಕ್ಷಣವನ್ನು ಹೇಳುತ್ತಾರೆ. ಯೇನ=ಯಾವ ನಾರಾಯಣನಿಂದ ಸ್ವಧಾಮ್ನಿ = ತನ್ನ ಆಧಾರವುಳ್ಳವುಗಳಾಗಿ ರಜಸ್ಸು, ಸತ್ತ್ವ ಮತ್ತು ತಮೋ ಗುಣಗಳ ವಿಕಾರಗಳಾದ ಅಮೀ=ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಗೆ ವಿಷಯಗಳಾದ ಭಾವಾಃ=ಚೇತನಾಚೇತನ ಪದಾರ್ಥಗಳು ಗುಣ=(೧) ಶಬ್ದಾದಿ ಗುಣಗಳು, (೨) ಶುಕ್ಲ ಪೀತಾದಿ ಬಣ್ಣಗಳು (೩) ಶಮದಮಾದಿ ಗುಣಗಳು ನಾಮ=ಬ್ರಾಹ್ಮಣ, ಕುದುರೆ, ಮಹಿಷ, ದೇವದತ್ತ ಇತ್ಯಾದಿ ಹೆಸರುಗಳು, ಘಟ ಮೊದಲಾದ ಹೆಸರುಗಳು, ಕ್ರಿಯಾ= ಬೇಯಿಸುತ್ತಾನೆ, ಓದುತ್ತಾನೆ, ಎಸೆಯುತ್ತಾನೆ (ಉತ್ಕ್ಷೇಪಣ, ಅಪಕ್ಷೇಪಣ, ಆಕುಂಚನ, ಪ್ರಸಾರಣ, ಗಮನ) ಇತ್ಯಾದಿ ಕ್ರಿಯೆಗಳು ರೂಪೈಃ= ಎರಡು ಕಾಲಿರುವುವು, ನಾಲ್ಕು ಕಾಲಿನವು ಇತ್ಯಾದಿ ಅವಯವ ಆಕಾರಗಳಿಂದ ಕೂಡಿದವುಗಳಾಗಿ ಯಥಾತಥಮ್ = ಸಂಕರವಿಲ್ಲದಿರುವಂತೆ ಯಥಾಯೋಗ್ಯ ವ್ಯಸ್ತಸಮಸ್ತ ಸೃಷ್ಟಿ, ಸ್ಥಿತಿ, ಸಂಹಾರಾದಿಗಳಿಂದ ವಿಭಾವ್ಯಂತೇ=ವಿವಿಧ ರೀತಿಯಲ್ಲಿ ಉತ್ಪಾದಿತವಾಗುವುವೋ, ರಕ್ಷಿತವಾಗುವುವೋ ಸಂಹೃತವಾಗುವುವೋ ಅವನೇ ನಾರಾಯಣನು. 'ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ಭಾವನಂ ಸಮುದಾಹೃತಮ್' ॥ ೪೧ ॥

ಅವನ ಜ್ಞಾನಾನಂದಾತ್ಮಕ ದೇಹವೂ ಮತ್ತೊಬ್ಬರಿಂದ ಬಂದದ್ದಲ್ಲ. ಹೀಗೆಂದೇ ನಾವು ಕೇಳಿದ್ದೇವೆ. ಈ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಪ್ರಮಿತಗಳಾದ ಸತ್ತ್ವ, ರಜಸ್ತಮೋ ಗುಣಾತ್ಮಕ ಚೇತನಾಚೇತನ ಪದಾರ್ಥಗಳು ಶ್ರೀಹರಿಯನ್ನೇ ಆಶ್ರಯಿಸಿಕೊಂಡಿರುವುವು. ಅವನೇ ಅವುಗಳನ್ನು ಗುಣ, ನಾಮ, ಕ್ರಿಯಾ, ರೂಪಗಳಿಂದ ಪರಸ್ಪರ ಸಾಂಕರ್ಯವಿಲ್ಲದಂತೆ ಉಚಿತ ಸಮಸ್ತ ವ್ಯಸ್ತ ಸೃಷ್ಟಿ, ಸ್ಥಿತಿ, ಸಂಹಾರಾದಿಗಳಿಂದ ವಿವಿಧ ರೀತಿಯಲ್ಲಿ ಸೃಷ್ಟಿಸುವನು; ರಕ್ಷಿಸುವನು; ಸಂಹಾರಾದಿ

ಸೂರ್ಯೋಽಗ್ನಿಃ ಖಂ ಮರುದ್ಗಾವಃ ಸೋಮಃ ಸಂಧ್ಯಾಹನೀ ದಿಶಃ
ಕಾಲಃ ಸ್ವಯಂ ಧರ್ಮ ಇತಿ ಏತೇ ಧರ್ಮಸ್ಯ ಸಾಕ್ಷಿಣಃ ॥ ೪೨ ॥

'ಕಿಂ ವಾಸ್ಯಸ್ಥಾನಮೀಪ್ಸಿತಂ' ಎಂದು ಕೇಳಿದ್ದಕ್ಕೆ ಉತ್ತರ ಕೊಡುತ್ತಾರೆ. ಸೂರ್ಯನು, ಬೆಂಕಿ, ಆಕಾಶ, ವಾಯು, ನೀರು (ಗಾವಃ), ಚಂದ್ರ, ಸಂಜೆ, ಹಗಲು, ದಿಕ್ಕುಗಳು, ಕಾಲಾಭಿಮಾನಿದೇವತೆ, (ಕಾಲನಿಯಾಮಕ ಶ್ರೀಹರಿ), ಸ್ವಯಂ – ಪಾಪ ಪುಣ್ಯಗಳ ಕರ್ತನಾದ ಜೀವ, ಧರ್ಮಃ–ಯಮಧರ್ಮರಾಜರು ಧರ್ಮಸ್ಯ – ಧರ್ಮ ಅಧರ್ಮಗಳಿಗೆ ಸಾಕ್ಷಿಗಳು. ಗಾವಃ ಎಂಬುದರಿಂದ ಸ್ವರ್ಗ ಭೂಮಿಗಳನ್ನೂ ಅಹನೀ ಎಂಬುದರಿಂದ ರಾತ್ರಿಯನ್ನೂ ಕಾಲ ಶಬ್ದದಿಂದ ಕಾಲ ಎಂದು ಕರೆಯಲ್ಪಡುವ ದೇವತೆಗಳನ್ನೂ ಸ್ವಯಂ ದಂಡಧಾರಿಯಾದ ಯಮನನ್ನೂ ಹೇಳಬಹುದು. 'ಹರಿಶ್ಚ ಪ್ರಕೃತಿಶ್ಚೈವ ಬ್ರಹ್ಮಾ ವಾಯುಸ್ತಥೈವ ಚ । ಸುಪರ್ಣ ಶೇಷರುದ್ರಾಶ್ಚ ಶಕ್ರಃ ಸೂರ್ಯಯಮಾವಪಿ । ಅಗ್ನಿರ್ಯಮಾನುಜಶ್ಚೈವ ಕಾಲ ಶಬ್ದೋದಿತಾಃ ಕ್ರಮಾತ್ ॥' ಜಡಗಳನ್ನು ಹೇಳಿರುವೆಡೆ ಅದರ ಅಭಿಮಾನಿಗಳನ್ನು ಇಟ್ಟುಕೊಳ್ಳಬೇಕು. ಸ್ವಯಂ ಎಂಬುದರಿಂದ ಹೃದಯವನ್ನೂ ಮನಸ್ಸನ್ನೂ ಹೇಳಿರುವರು. 'ಆದಿತ್ಯಚಂದ್ರಾವನಿಲೋಽನಲಶ್ಚ ದ್ಯೌರ್ಭೂಮಿರಾಪೋ ಹೃದಯಂ ಮನಶ್ಚ । ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ ಧರ್ಮಶ್ಚ ಜಾನಾತಿ ನರಸ್ಯ ವೃತ್ತಮ್ ॥' ಎಂಬ ಪ್ರಮಾಣವೂ ಇದನ್ನೇ ಹೇಳುವುದು. ಮುಂದೆ ಪಾಪಿಗಳಿಗೆ ದಂಡವನ್ನು ಹೇಳುವರಾಗಿ ಜೀವರು ಅನಂತರಾದ್ದರಿಂದ ಅವರು ಮಾಡಿದ ಧರ್ಮಾಧರ್ಮಗಳನ್ನು ತಿಳಿಯಲಶಕ್ಯವಾಗಿರಲು ಇವರೇ ಪಾಪಿಗಳು ಎಂದು ವಿವಿಚ್ಯ ತಿಳಿಯಲು ಸಾಧ್ಯವಿಲ್ಲವಾಗಿ ಶಿಕ್ಷೆಗೆ ಇವರು ಅರ್ಹರು ಎಂದು ಹೇಗೆ ಹೇಳುವುದು? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಮೊದಲು ಧರ್ಮಾಧರ್ಮಗಳ ಸಾಕ್ಷಿಗಳನ್ನು ಹೇಳಿದ್ದಾರೆಂದು ತಿಳಿಯಬೇಕು. ॥ ೪೨ ॥

ಏತೈರಧರ್ಮೋ ವಿಜ್ಞಾತಃ ಸ್ಥಾನಂ ದಂಡಸ್ಯ ಯುಜ್ಯತೇ ।
ಸರ್ವೇ ಕ್ರಮಾನುರೋಧೇನ ದಂಡಮರ್ಹಂತಿ ಕಾರಿಣಃ ॥ ೪೩ ॥

ದಂಡದ ಸ್ಥಾನವನ್ನು ಹೇಳುತ್ತಾರೆ. ಏತೈಃ–ಧರ್ಮಾಧರ್ಮಗಳೆಂಬ ಪುಣ್ಯ ಪಾಪಗಳನ್ನು ನೋಡುತ್ತಿರುವ ಈ ಸೂರ್ಯ ಮೊದಲಾದವರಿಂದ ಅಧರ್ಮಃ

ಗಳನ್ನು ಮಾಡುವನು. (ಇಂತಹ ನಾರಾಯಣನಿಂದ ಉಚ್ಚರಿತಗಳಾದ ವೇದಗಳಿಂದ ಬೋಧಿತಗಳಾದ) ಧರ್ಮ ಅಧರ್ಮಗಳನ್ನು ಇಂತಿಂತಹ ಜೀವರೇ ಮಾಡಿದ್ದಾರೆಂಬಲ್ಲಿ ಸೂರ್ಯ, ಅಗ್ನಿ, ಆಕಾಶಾಭಿಮಾನಿ, ವಾಯು, ನೀರಿಗಭಿಮಾನಿ, ಚಂದ್ರ, ಸಂಜೆಗಭಿಮಾನಿ, ಹಗಲಿಗಭಿಮಾನಿ, ದಿಕ್ಕುಗಳ ಅಭಿಮಾನಿಗಳು, ಕಾಲಾಭಿಮಾನಿ, ಪಾಪಪುಣ್ಯಕರ್ತ ಜೀವ, ಯಮಧರ್ಮ (ಅಥವಾ ಸ್ವಯಂ ಯಮಧರ್ಮ)—ಇವರು ಸಾಕ್ಷಿಗಳು. ಇವರು ಪಾಪಿಯೆಂದು ಯಾವನನ್ನು ಹೇಳುವರೋ ಅವನೇ ಶಿಕ್ಷೆಗೆ

(ಇತಿ) = ಧರ್ಮವಿಲ್ಲದವನೆಂದು ಪಾಪಮಾಡಿದವನೆಂದು ವಿಜ್ಞಾತಃ = ತಿಳಿದು ಬಂದವನೇ ದಂಡಸ್ಯ=ಶಿಕ್ಷೆಗೆ ಸ್ಥಾನಂ=ಪಾತ್ರನೆಂದು (ದಂಡ್ಯನೆಂದು) ಯುಜ್ಯತೇ= ಯುಕ್ತವಾದುದು. ಯಮಧರ್ಮರಾಜರಾದರೋ ಶಿಕ್ಷೆಮಾಡುವುದಕ್ಕೆ ಮಾತ್ರ ನಿಯುಕ್ತರು. 'ಕಥಂ ಸ್ವಿತ್ ಧ್ರಿಯತೇ ದಂಡಃ' ಎಂಬುದಕ್ಕೆ ಉತ್ತರ ಹೇಳು ತ್ತಾರೆ. ಕಾರಿಣಃ=ಪಾಪಮಾಡಿದ ಸರ್ವೇ=ಎಲ್ಲರೂ ಕ್ರಮಾನುರೋಧೇನ = ಪಾಪಕರ್ಮದ ತಾರತಮ್ಯಕ್ಕೆ ತಕ್ಕಂತೆ ಶಿಕ್ಷೆಗೆ ಅರ್ಹರು. ಅಥವಾ 'ದಂಡ್ಯಾಃ ಕಿಂ ಕಾರಿಣಃ ಸರ್ವೇ' ಎಂಬುದಕ್ಕೆ ಉತ್ತರ ಕೊಡುತ್ತಾರೆ. ಪಾಪ ಮಾಡಿದವ ರೆಲ್ಲರೂ ಕ್ರಮಾನುರೋಧೇನ – 'ರೌರವೋಽಥ ಮಹಾಂಶ್ಚೈವ ವಹ್ನಿರ್ವೈತರಣೀ ತಥಾ | ಕುಂಭೀಪಾಕ ಇತಿ ಪ್ರೋಕ್ತಾನಿ ಅನಿತ್ಯನರಕಾಣಿ ತು | ಏತಾನಿ ಕ್ರಮಶೋ ಗತ್ವಾ' ಎಂಬ ಕ್ರಮದಂತೆ ಶಿಕ್ಷೆಯನ್ನು ಹೊಂದಲು ಅರ್ಹರು. ಪಾಪ ಮಾಡಿದವ ರೆಲ್ಲ ಎಂದು ಹೇಳಿದ್ದರಿಂದ ಪಾಪಿಗಳೇ ಯಮದೇವರಿಂದ ದಂಡ್ಯರೇ ಹೊರತು ಪುಣ್ಯಕರ್ಮಿಗಳಲ್ಲವೆಂದು ತಿಳಿಯಬೇಕು. || ೪೩ ||

ಸಂಭವಂತಿ ಹ್ಯಭದ್ರಾಣಿ ವಿಪರೀತಾನಿ ಚಾನಘಾಃ |
ಕಾರಣಂ ಗುಣಸಂಗೋಽಸ್ತಿ ದೇಹವಾನ್ನ ಹ್ಯಕರ್ಮಕೃತ್ || ೪೪ ||

ಸುಕೃತಿದುಷ್ಕೃತಿಗಳು ಪ್ರತ್ಯಕ್ಷ ಆಗಮಗಳಿಂದ ಐಹಿಕದಲ್ಲಿಯೇ ಸುಖ-ದುಃಖ ಗಳನ್ನು ಫಲಗಳಾಗಿ ತಿಳಿದಿರುವುದರಿಂದ ಪುಣ್ಯ-ಪಾಪಗಳು ಸಂಭವಿಸುವುದು ಹೇಗೆ? ಎಂದರೆ ಹೇಳುತ್ತಾರೆ. ಅನಘಾಃ = ದೋಷರಹಿತರಾದ ವಿಷ್ಣುದೂತರೇ, ಹಿ = ಯಾವ ಕಾರಣದಿಂದ ಎಲ್ಲ ಕರ್ಮಿಗಳಿಗೂ ಅಭದ್ರಾಣಿ = ದುಃಖಫಲಕಗಳಾದ ಪಾಪಗಳೂ ವಿಪರೀತಾನಿ=ಅದಕ್ಕೆ ವಿರುದ್ಧವಾಗಿ ಸುಖಫಲಕಗಳಾದ (ರಾಜ್ಯಾದಿ ಪ್ರಾಪ್ತಿ ನಿಮಿತ್ತ ಸುಖಕೊಡುವ) ಪುಣ್ಯಗಳೂ ಸಂಭವಂತಿ = ಸಂಭವಿಸುವುವೋ ಆ ಕಾರಣದಿಂದ ಎಲ್ಲರೂ ದಂಡ್ಯರೆಂದು ಹಿಂದಕ್ಕೆ ಅನ್ವಯ. ಕಾರಣಂ=ಪುಣ್ಯ ಪಾಪಗಳ ಸಂಭವಿಸುವಿಕೆಗೂ ಕಾರಣವು ಗುಣಸಂಗಃ = ಸತ್ವ ಮೊದಲಾದ ತ್ರಿಗುಣಗಳ ಸಂಬಂಧವು ಅಸ್ತಿ=ಇರುವುದು. ಪ್ರಾಕೃತಗುಣ ಸಂಬಂಧವೇ ಪುಣ್ಯ ಪಾಪಕರಣಕ್ಕೆ ಕಾರಣವೆಂದು ಅಭಿಪ್ರಾಯ. ಕೇವಲ ಲಿಂಗಶರೀರಯುಕ್ತರಾಗಿ

ವಿಷಯನು. ಅವನನ್ನು ಶಿಕ್ಷಿಸುವವರು ಯಮಧರ್ಮರಾಜರು. ಪಾಪಮಾಡಿದವ ರೆಲ್ಲ ತಮ್ಮ ತಮ್ಮ ಪಾಪಕ್ಕೆ ತಕ್ಕಂತೆ ರೌರವಾದಿ ನರಕಗಳಲ್ಲಿ ಕ್ರಮವಾಗಿ ಶಿಕ್ಷೆ ಹೊಂದಲು ಅರ್ಹರು. ದೋಷರಹಿತರೇ, ಕರ್ಮಮಾಡುವರೆಲ್ಲರಿಗೂ ಪಾಪಗಳೂ ಪುಣ್ಯಗಳೂ ಸಂಭವಿಸುವುವು. ಆ ಕಾರಣದಿಂದ ಎಲ್ಲರೂ ದಂಡ್ಯರೇ. ಸತ್ವ ಮೊದಲಾದ ತ್ರಿಗುಣಸಂಬಂಧವೇ ಈ ಪಾಪಪುಣ್ಯಗಳ ಸಂಭವಿಸುವಿಕೆಗೆ ಕಾರಣ. ಸ್ಥೂಲದೇಹಿಯು ಯಾರೂ ಕರ್ಮಮಾಡದೆ ಇರುವುದಿಲ್ಲ. ಇದು 'ನ ಹಿ ಕಶ್ಚಿತ್

ದ್ದಾಗಲೂ ತ್ರಿಗುಣಸಂಬಂಧವಿದೆ. ಆದರೆ ಅಲ್ಲಿ ಸ್ಥೂಲಕರ್ಮಕರಣವಿಲ್ಲವಲ್ಲಾ, (ಈ ಕಾರ್ಯಕಾರಣಭಾವ ವ್ಯಭಿಚರಿತವಾಯಿತು) ಎಂದರೆ ಸ್ಥೂಲದೇಹಸಂಬಂಧವನ್ನಿಟ್ಟುಕೊಂಡು ಹೇಳಿದ್ದೆಂದು ಸಮಾಧಾನ ಹೇಳುತ್ತಾರೆ. ದೇಹವಾನ್=ಸ್ಥೂಲದೇಹಿಯು ಯಾರೂ ಅಕರ್ಮಕೃತ್=ಕರ್ಮಮಾಡದಿರುವವನು ನಹಿ = ಇಲ್ಲ. ಅಥವಾ ಗುಣಸಂಗವಿದ್ದೂ ಪುಣ್ಯಶಾಲಿಯೊಬ್ಬ ಜ್ಞಾನದಿಂದ ಕರ್ಮ ಮಾಡದೆ ಹೋದಾಗ ಈ ಕಾರ್ಯಕಾರಣ ಭಾವಕ್ಕೆ ಭಂಗ ಬಂದಿತಲ್ಲವೇ? ಎಂದರೆ ಹೇಳುತ್ತಾರೆ. ದೇಹಿಯೆಂದಮೇಲೆ ಕರ್ಮ ಮಾಡದಿರುವವನು ಇಲ್ಲವೇ ಇಲ್ಲ. ಗುಣಗಳ ಶಕ್ತಿಯೇ ಅಂತಹುದು. ಹಿ=ಇದು 'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ | ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ' ಇತ್ಯಾದಿ ಪ್ರಮಾಣಸಿದ್ಧವು. 'ಆಚತುರ್ದಶಮಾದ್ವರ್ಷಾತ್ ಕರ್ಮಾಣಿ ನಿಯಮೇನ ತು | ದಶಾವರಾಣಾಂ ದೇಹಾನಾಂ ಕಾರಣಾನಿ ಕರೋತ್ಯಸೌ ||' ಎಂಬುದನ್ನೂ 'ಸಂಭವಂತಿ ಹಿ' ಎಂಬಲ್ಲಿನ 'ಹಿ' ಎಂಬುದರಿಂದ ಇಟ್ಟುಕೊಳ್ಳಬಹುದು. || ೪೪ ||

ಯೇನ ಯಾವಾನ್ ಯಥಾ ಧರ್ಮೋ ಹ್ಯಧರ್ಮೋ ವಾ ಸಮಾಹಿತಃ
ಸ ಏವ ತತ್ಫಲಂ ಭುಂಕ್ತೇ ತಥಾ ತಾವದಮುತ್ರ ವೈ || ೪೫ ||

'ಕಥಂ ಸ್ವಿತ್ ಧ್ರಿಯತೇ ದಂಡಃ' ಎಂಬುದಕ್ಕೆ ಉತ್ತರವಾಗಿ ಹೇಳುತ್ತಾರೆ. ಯೇನ=ಯಾವನಿಂದ ಯಾವಾನ್ - ಎಷ್ಟು ಯಥಾ - ಹೇಗೆ ಧರ್ಮಃ - ಪುಣ್ಯಕೆಲಸವು ಸಮಾಹಿತಃ - ಮಾಡಲ್ಪಟ್ಟಿತೋ ತಾವತ್ - ಅಷ್ಟು ತಥಾ = ಹಾಗೆ ಸಃ ಏವ=ಪುಣ್ಯಮಾಡಿದ ಜೀವನೇ ತತ್ಫಲಂ=ಆ ಪುಣ್ಯದ ಫಲವನ್ನು-ಸುಖವನ್ನು, ಅಮುತ್ರ=ಪರಲೋಕದಲ್ಲಿ ಭುಂಕ್ತೇ=ಅನುಭವಿಸುವನೋ ವಾ=ಅದರಂತೆ ಯಾವನಿಂದ ಎಷ್ಟು ಹೇಗೆ ಅಧರ್ಮ ಕೆಲಸವು ಮಾಡಲ್ಪಟ್ಟಿತೋ ಅಷ್ಟು ಹಾಗೆ ಆ ಅಧರ್ಮಕಾರಿಯೇ ಅದರ ಫಲವಾದ ದಂಡವನ್ನು ಪರಲೋಕದಲ್ಲಿ ಅನುಭವಿಸುವನು. ವೈ = ಅಧರ್ಮಾನುಸಾರ ಶಿಕ್ಷೆ ಪಡೆಯುವನೆಂಬುದು ಪ್ರಸಿದ್ಧವು. ಕರ್ಮಮಾಡಲಿ ಅದರಿಂದೇನು? ಎಂದರೆ ಫಲಿತವನ್ನು ಹೇಳಿದಂತಾಯಿತು. || ೪೫ ||

ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್' ಇತ್ಯಾದಿ ಪ್ರಮಾಣಸಿದ್ಧ. ಯಾವನು ಎಷ್ಟು ಮತ್ತು ಹೇಗೆ ಪುಣ್ಯಕೆಲಸವನ್ನು ಮಾಡುವನೋ ಅಷ್ಟು ಮತ್ತು ಹಾಗೆ ಅವನೇ ಆ ಪುಣ್ಯದ ಫಲವನ್ನು ಪರಲೋಕದಲ್ಲಿ ಅನುಭವಿಸುವಂತೆ ಯಾವನು ಎಷ್ಟು ಮತ್ತು ಹೇಗೆ ಪಾಪಕೆಲಸವನ್ನು ಮಾಡುವನೋ ಅಷ್ಟು ಮತ್ತು ಹಾಗೆ ಅವನೇ ಆ ಪಾಪದ ಫಲವನ್ನು ಪರಲೋಕದಲ್ಲಿ ಅನುಭವಿಸುವನು. ಪಾಪಕ್ಕೆ ತಕ್ಕ

ಯಥೇಹ ದೇವಪ್ರವರಾಸ್ತ್ರೈವಿಧ್ಯಮುಪಲಭ್ಯತೇ ।
ಭೂತೇಷು ಗುಣವೈಚಿತ್ರ್ಯಾತ್ತಥಾಽನ್ಯತ್ರಾನುಮೀಯತೇ ॥ ೪೭ ॥

'ಯಾವಜ್ಜೀವಂ ಸುಖಂ ಜೀವೇತ್' 'ಋಣಂ ಕೃತ್ವಾ ಘೃತಂ ಪಿಬೇತ್' 'ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ' (ಬದುಕಿರುವವರೆಗೂ ಸುಖವಾಗಿ ಬದುಕಬೇಕು, ಸಾಲವಾದರೂ ಮಾಡಿ ಮೃಷ್ಟಾನ್ನ ತಿನ್ನಬೇಕು. ಬೂದಿಯಾದ ದೇಹವು ಮತ್ತೆ ಬರುವುದು ಹೇಗೆ?) ಎಂಬ ಮಾತುಗಳಂತೆ ಕರ್ಮಮಾಡಿದವನೇ ತಾನು ಮಾಡಿದ್ದನ್ನು ಪರಲೋಕದಲ್ಲಿ ಅನುಭವಿಸು[illegible]ನು ಎಂಬುದು ಕೂಡುವುದಿಲ್ಲವಲ್ಲವೇ ಎಂದರೆ ಉತ್ತರ ಕೊಡುತ್ತಾರೆ. ದೇವಶ್ರೇಷ್ಠರೇ, ಇಹ= ಈ ಲೋಕದಲ್ಲಿ, ಈ ಜನ್ಮದಲ್ಲಿ ತಾವು ಮಾಡಿದ್ದಕ್ಕೆ ಫಲ ಕೊಡುವವರು ಪ್ರಮಾಣದಿಂದ ಹೇಗೆ ಕಂಡುಬಂದಿರುವರೋ ಮತ್ತು ಗುಣವೈಚಿತ್ರ್ಯಾತ್=ಸತ್ತ್ವಾದಿಗುಣಗಳ ವಿಚಿತ್ರತೆಯಿಂದ ಭೂತೇಷು=ಜೀವರಲ್ಲಿ ತ್ರೈವಿಧ್ಯಂ=ಉತ್ತಮ, ಮಧ್ಯಮ, ಅಧಮ ಭೇದದಿಂದ ಮೂರು ಪ್ರಕಾರದ ಕರ್ಮವು ಉಪಲಭ್ಯತೇ = ಪ್ರತ್ಯಕ್ಷದಿಂದ ಹೇಗೆ ತಿಳಿದುಬಂದಿರುವುದೋ ತಥಾ=ಹಾಗೆ ವಾಕ್ಯವನ್ನು ಪ್ರಮಾಣವೆಂದು ಒಪ್ಪದಿದ್ದರೂ ಪ್ರತ್ಯಕ್ಷದಿಂದ ಕಂಡ ವ್ಯಾಪ್ತಿಯುಳ್ಳ ಅನುಮಾನದಿಂದ ಅನ್ಯತ್ರ = ಮತ್ತೊಂದು ಜನ್ಮದಲ್ಲಿಯೂ, ಪರಲೋಕದಲ್ಲಿಯೂ ಸ್ವಕೃತಕರ್ಮಫಲಕೊಡುವವರು, ಕರ್ಮ ತ್ರೈವಿಧ್ಯವು ಅನುಮೀಯತೇ=ಲೌಕಿಕರಿಂದಲೂ ಅನುಮಾನದಿಂದ ತಿಳಿಯಲಾಗುವುದು. (ಊಹಿಸಲಾಗುವುದು). ತಾನು ಮಾಡಿದ್ದನ್ನು ತಾನೇ ಅನುಭವಿಸುವನೆಂಬಲ್ಲಿ ಅನುಮಾನವೂ ಪ್ರಮಾಣವೆಂದು ಹೇಳಿದಂತಾಯಿತು. ಇದರಿಂದ ಸೂರ್ಯಾದಿಗಳು ಸಾಕ್ಷಿಗಳಷ್ಟೇ ಅಲ್ಲ, ಲೌಕಿಕರಿಗೂ ಅನುಮಾನದಿಂದ ಧರ್ಮಾದಿ ಜ್ಞಾನ ಬರುವುದೆಂದು ತಿಳಿಸಿ ಹಿಂದೆ ಹೇಳಿದ್ದನ್ನೇ ಸ್ಥಿರಪಡಿಸಿದಂತಾಯಿತು. ॥ ೪೭ ॥

ವರ್ತಮಾನೋಽನ್ಯಯೋಃ ಕಾಲೋ ಗುಣಾಭಿಜ್ಞಾಪಕೋ ಯಥಾ
ಏವಂ ಜನ್ಮಾನ್ಯಯೋರೇತದ್ಧರ್ಮಾಧರ್ಮನಿದರ್ಶನಮ್ ॥ ೪೮ ॥

ಅನುಮಾನದ ಪ್ರಾಮಾಣ್ಯವನ್ನು ತಿಳಿಸಲು ಮೇಲೆ ಹೇಳಿದುದನ್ನೇ ಉದಾಹರಣೆಯಿಂದ ಉಪಪಾದಿಸುತ್ತಾರೆ. ಯಥಾ=ಹೇಗೆ ವರ್ತಮಾನಃ ಕಾಲಃ=

ಶಿಕ್ಷೆಯನ್ನು ಪಡೆಯುವನು. ದೇವಶ್ರೇಷ್ಠರೇ, ಈ ಲೋಕದಲ್ಲಿ ಈ ಜನ್ಮದಲ್ಲಿ ಫಲ ಕೊಡುವವರು ಪ್ರಮಾಣದಿಂದ ಕಂಡುಬಂದಿರುವರು. ಸತ್ತ್ವಾದಿಗುಣಗಳ ವೈಚಿತ್ರ್ಯದಿಂದ ಜೀವರಲ್ಲಿ ಉತ್ತಮ ಮಧ್ಯಮ ಮತ್ತು ಅಧಮ ಕರ್ಮಗಳೂ ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾಗಿರುವುವು. ಇದರಂತೆಯೇ ಪ್ರತ್ಯಕ್ಷಸಿದ್ಧ ವ್ಯಾಪ್ತಿಯುಕ್ತ ಅನುಮಾನದಿಂದ ಮತ್ತೊಂದು ಜನ್ಮದಲ್ಲಿಯೂ ಪರಲೋಕದಲ್ಲಿಯೂ ಕರ್ಮಫಲಕೊಡುವವರೂ ತ್ರಿವಿಧ ಕರ್ಮಗಳೂ ಜನರಿಂದ ತಿಳಿಯಬಹುದಾಗಿವೆ. ನಡೆಯುತ್ತಿರುವ ವಸಂತಋತುವೆಂಬ ಕಾಲವು ಹೇಗೆ ಕಳೆದುಹೋದ ಮತ್ತು

ತೋರುತ್ತಿರುವ (ನಡೆಯುತ್ತಿರುವ) ವಸಂತಋತುವೆಂಬ ಕಾಲವು ಅನ್ಯಯೋಃ= ಕಳೆದುಹೋದ ಮತ್ತು ಮುಂಬರಲಿರುವ ವಸಂತಋತುಗಳ ಗುಣಾಭಿಜ್ಞಾಪಕಃ= ಹಣ್ಣು ಹೂ ಮೊದಲಾದ ಕಾರ್ಯಗಳನ್ನು ತಿಳಿಸಿಕೊಡುವುದೋ ಏವಂ=ಹಾಗೆಯೇ ಏತತ್ ಜನ್ಮ=ಈ ಜನ್ಮವು ಅನ್ಯಯೋಃ=ಕಳೆದುಹೋದ ಮತ್ತು ಮುಂಬರಲಿರುವ ಜನ್ಮಗಳ ಧರ್ಮ ಮತ್ತು ಅಧರ್ಮಗಳನ್ನು ಚನ್ನಾಗಿ ತಿಳಿಸಿಕೊಡುವುದು. || ೪೭ ||

ಮನಸ್ಯೈವ ಪುರೇ ದೇವಃ ಪೂರ್ವರೂಪಂ ವಿಪಶ್ಯತಿ ।
ಅನುಮೀಮಾಂಸತೇಽಪೂರ್ವಂ ಮನಸಾ ಭಗವಾನಜಃ || ೪೮ ||

(೧) ಈ ಕಾರಣದಿಂದಲೂ ಅನುಮಾನವು ಪ್ರಮಾಣವೆಂದು ತಿಳಿಸಲು ಜೀವನಿಗೆ ಸಂಬಂಧಿಸಿದ ಧರ್ಮ ಮತ್ತು ಅಧರ್ಮಗಳಿವೆಯೆಂಬುದಕ್ಕೆ ಶ್ರೀಹರಿಯ ಪ್ರತ್ಯಕ್ಷವನ್ನೇ ಪ್ರಮಾಣವೆಂದು ಹೇಳುತ್ತಾರೆ. ಪುರೇ (ಸ್ಥಿತಃ)=ಜೀವನ ಶರೀರದಲ್ಲಿ ಇರುವ ದೇವಃ=ಶ್ರೀಮನ್ನಾರಾಯಣನು ಪೂರ್ವರೂಪಂ=ಜೀವನ ಹಿಂದಿನ ಸ್ಥಿತಿಯನ್ನೂ ಅಪೂರ್ವಂ=ಮುಂದಿನ ಸ್ಥಿತಿಯನ್ನೂ (ಜೀವನಲ್ಲಿರುವ ಪುಣ್ಯಪಾಪಗಳನ್ನು) ಮನಸ್ಯೈವ=ತನ್ನ ಮನಸ್ಸಿನಿಂದಲೇ ವಿಪಶ್ಯತಿ=ಅಪರೋಕ್ಷ ದಿಂದ ಕಾಣುತ್ತಿರುವನು. ಪಶ್ಯತಿ ಎಂದು ವರ್ತಮಾನ ಕಾಲ ಪ್ರಯೋಗದಿಂದ ಶ್ರೀಹರಿಯ ಪ್ರತ್ಯಕ್ಷಕ್ಕೆ ಎಂದೂ ಬಾಧವಿಲ್ಲವೆಂದು ತಿಳಿಸಿರುವರು. ಹಾಗಾದರೆ ಶ್ರೀಹರಿಯನ್ನು ಬಿಟ್ಟು ಇತರರಿಗೆ ತಿಳಿದುಬರುವುದೇ ಇಲ್ಲವೇ ? ಎಂದರೆ ತಿಳಿಯುವು ದೆಂದು ಹೇಳುತ್ತಾರೆ. ಅಜಃ ಭಗವಾನ್=ಪೂಜ್ಯರಾದ ಬ್ರಹ್ಮದೇವರು ಮನಸಾ= ಮನಸ್ಸಿನಿಂದ ಅನುಮೀಮಾಂಸತೇ=ಶ್ರೀಹರಿಯ ಅನುಗ್ರಹದಿಂದ ಜೀವನ ಹಿಂದಿನ ಮುಂದಿನ ಸ್ಥಿತಿಗಳನ್ನು ಪುಣ್ಯ ಪಾಪಗಳನ್ನು ಆಲೋಚಿಸಿ ತಿಳಿಯುವರು. ಎಲ್ಲ ಜೀವರಿಗೂ ಸಾಧಾರಣವಾದ ಅಜ ಶಬ್ದವನ್ನು ಹೇಳಿದ್ದರಿಂದ ಮಿಕ್ಕ ದೇವತೆಗಳೂ

ಬರಲಿರುವ ವಸಂತಋತುಗಳ ಹೂ ಹಣ್ಣು ಮೊದಲಾದ ಕಾರ್ಯಗಳನ್ನು ತೋರಿಸಿ ಕೊಡುವುದೋ ಹಾಗೆ ಈ ಜನ್ಮವು ಹಿಂದಿನ ಮತ್ತು ಮುಂದಿನ ಜನ್ಮಗಳ ಧರ್ಮಾ ಧರ್ಮಗಳನ್ನು ತಿಳಿಸಿಕೊಡುವುದು. ಜೀವರ ಶರೀರದಲ್ಲಿರುವ ಶ್ರೀಹರಿಯು ಜೀವನ ಹಿಂದಿನ ಸ್ಥಿತಿಯನ್ನೂ ಮುಂದಿನ ಸ್ಥಿತಿಯನ್ನೂ ತನ್ನ ಮನಸ್ಸಿನಿಂದಲೇ ಅಪರೋಕ್ಷ ದಿಂದ ಕಾಣುವನು. ಪೂಜ್ಯರಾದ ಬ್ರಹ್ಮದೇವರು ಅವನ ಅನುಗ್ರಹದಿಂದ ಆಲೋಚಿಸಿ ತಿಳಿಯುವರು. ಮಿಕ್ಕ ದೇವತೆಗಳೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ತಿಳಿಯುವರು. ಜೀವನು ಪೂರ್ವಾನುಭವ ಸಂಸ್ಕಾರದಿಂದ ಸಂಸ್ಕೃತವಾದ ಮನಸ್ಸಿನಿಂದ ಧರ್ಮಾಧರ್ಮ ಸಮೂಹರೂಪದ ಹಿಂದಿನ ಸ್ಥಿತಿಯನ್ನು ತಿಳಿಯುವನು. ಮುಂದಿನ ಸ್ಥಿತಿಯನ್ನು ಮನಸ್ಸಿನಿಂದ ವಿಚಾರಮಾಡಿ ಅನುಮಾನ ದಿಂದ ತಿಳಿಯುವನು. ತಮ್ಮ ಪಟ್ಟಣದಲ್ಲಿರುವ ಯಮಧರ್ಮರಾಜರು ಜೀವನ ಹಿಂದಿನ ಸ್ಥಿತಿಯನ್ನು ಪ್ರತ್ಯಕ್ಷದಿಂದ ಕಾಣುವರು. ಅನಂತರ ಅದಕ್ಕೆ ತಕ್ಕ

ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ತಿಳಿಯುವರೆಂದು ಇಟ್ಟುಕೊಳ್ಳಬೇಕು. (೨) ಮತ್ತು ಜೀವಾತ್ಮನಿಗೂ ಧರ್ಮಾಧರ್ಮಗಳಿಂದ ಕೂಡಿದ ಪೂರ್ವ ಮತ್ತು ಅಪರ ರೂಪಗಳು ವರ್ತಮಾನ ರೂಪದಿಂದ ತಿಳಿದುಬರುವುವೆಂದು ಹೇಳುತ್ತಾರೆ. ಪುರೇ = ದೇವ-ಮನುಷ್ಯ-ತಿರ್ಯಗ್ಜಂತುಗಳ ದೇಹಗಳಲ್ಲಿ ದೇವಃ = ಕ್ರೀಡಿಸುವ ಭಗವಾನ್ – ಭಾಗ್ಯಗುಣಶಾಲಿಯಾದ ಅಜಃ – ಅನಾದಿಸಿದ್ಧನಾದ ಜೀವನು ಪೂರ್ವರೂಪಂ=ಧರ್ಮಾಧರ್ಮ ಸಮೂಹರೂಪದ ಹಿಂದಿನ ಸ್ಥಿತಿಯನ್ನು ಮನಸಾ ಏವ–ಪೂರ್ವಾನುಭವ ಸಂಸ್ಕಾರದಿಂದ ಸಂಸ್ಕೃತವಾದ ಮನಸ್ಸಿನಿಂದಲೇ ವಿಪಶ್ಯತಿ= ತಿಳಿಯುವನು. ಅಪೂರ್ವಂ= ಮುಂದಿನ ಸ್ಥಿತಿಯನ್ನು ಮನಸಾ ಅನುಮೀಮಾಂಸತೇ– ಮನಸ್ಸಿನಿಂದ ವಿಚಾರ ಮಾಡಿ ಅನುಮಾನದಿಂದ ತಿಳಿಯುವನು. 'ಅಜೋ ಹ್ಯೇಕೋ ಜುಷಮಾಣೋನುಶೇತೇ' ಎಂಬ ಶ್ರುತಿಯಲ್ಲಿ ಜೀವನಲ್ಲಿ 'ಅಜ' ಶಬ್ದವು ಪ್ರಯುಕ್ತವಾಗಿರುವುದನ್ನು ಕಾಣಬಹುದು. (೩) ಯಮಧರ್ಮರಾಜರು ಮನಸ್ಸಿನಿಂದಲೇ ಎಲ್ಲವನ್ನೂ ತಿಳಿಯುವರೆಂದು ಹೇಳುತ್ತಾರೆ. ಪುರೇ–ಸಂಯಮಿನೀ ಪಟ್ಟಣದಲ್ಲಿ ಇರುವ ದೇವಃ–ಯಮಧರ್ಮರು ಜೀವನ ಪೂರ್ವರೂಪವನ್ನು ಮನಸಾ–ಪ್ರತ್ಯಕ್ಷದಿಂದಲೇ ಕಾಣುವರು. ಅನು–ಅನಂತರ ಅಪೂರ್ವಂ=ಇದಕ್ಕೆ ತಕ್ಕದ್ದೇನೆಂಬುದನ್ನು ಮೀಮಾಂಸತೇ–ವಿಚಾರಮಾಡುವರು. ಭಗವಾನ್–ಜೀವನ ಅಂತರ್ಯಾಮಿಯಾದ ಅಜಃ–ಶ್ರೀಹರಿಯು (ಯಥಾ)–ಹೇಗೆ ತಿಳಿಯುವನೋ (ತಥಾ)–ಹಾಗೆ ಎಂದು ಅಧಿಕ ದೃಷ್ಟಾಂತವನ್ನು ಕೊಟ್ಟಿರುವರು. || ೪೮ ||

ಯಥಾಽಜ್ಞಸ್ತಮಸಾ ಯುಕ್ತ ಉಪಾಸ್ತೇ(ऽ)ವ್ಯಕ್ತಮೇವ ಹಿ ।
ನ ವೇದ ಪೂರ್ವಮಪರಂ ನಷ್ಟಜನ್ಮಸ್ಮೃತಿಸ್ತಥಾ ॥ ೪೯ ॥

ಹಿಂದಿನ ಮುಂದಿನ ಸ್ಥಿತಿಯನ್ನು ತಿಳಿದಿರುವುದಾದರೆ 'ನಾನು ಹಿಂದೆ ಇಂತಹ ಕಡೆ ಮೃತನಾದೆ, ಇಂತಹ ಕಡೆ ಹುಟ್ಟಿದೆ' ಎಂದೇಕೆ ತಿಳಿಯುತ್ತಿಲ್ಲ? ಎಂದಾಶಂಕಿಸಿ ಶ್ರೀಹರಿಯ ಅನುಗ್ರಹವಿಲ್ಲದೆ ಎಲ್ಲರಿಗೂ ಅಂತಹ ತಿಳಿವಳಿಕೆ ಸುಲಭವಲ್ಲವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ತಮಸಾ ಯುಕ್ತಃ – ವಿಪರೀತ ಜ್ಞಾನವನ್ನು ಹುಟ್ಟಿಸುವ ತಮೋಗುಣದಿಂದ ಯುಕ್ತನಾದ ಅಜ್ಞಃ=ಅವಿವೇಕಿಯು ಅವ್ಯಕ್ತಂ ಏವ=ಪ್ರಕೃತಿಯ ವಿಕಾರವಾದ ದೇಹವನ್ನೇ ಉಪಾಸ್ತೇ ಹಿ=ತಾನೆಂದು ಉಪಾಸಿಸುವನು. ಅಥವಾ ವ್ಯಕ್ತಂ ಏವ=ಕಾಣುತ್ತಿರುವುದನ್ನೇ (ಈಗಿನ ದೇಹವನ್ನೇ) ಉಪಾಸಿಸುವನು. ಹಿಂದಿನದು ಮುಂದಿನದನ್ನು ತಿಳಿಯುತ್ತಿಲ್ಲವೆಂದಾದರೂ ಅರ್ಥ.

ಶಿಕ್ಷೆಯನ್ನು ವಿಚಾರ ಮಾಡುವರು. ವಿಪರೀತ ಜ್ಞಾನವನ್ನು ಹುಟ್ಟಿಸುವ ತಮೋಗುಣದಿಂದ ಯುಕ್ತನಾಗಿ ಜೀವನು ಅವಿವೇಕಿಯಾಗಿರುವನು. ಪ್ರಕೃತಿಯ ವಿಕಾರವಾದ ದೇಹವನ್ನೇ ತಾನೆಂದು ತಿಳಿಯುವನು. ಈಗಿನ ದೇಹವನ್ನು ಮಾತ್ರ ಬಲ್ಲನು. ಹಿಂದಿನ ಮತ್ತು ಮುಂದಿನ ದೇಹಗಳನ್ನು ಅರಿತಿಲ್ಲ. ಇದರಂತೆಯೇ

ಆದ್ದರಿಂದಲೇ ಪೂರ್ವಂ ಅಪರಂ ಚ = ಹಿಂದಿದ್ದ, ಮುಂದೆ ಬರುವ ದೇಹಗಳನ್ನು ನ ವೇದ ಯಥಾ = ಹೇಗೆ ತಿಳಿದಿಲ್ಲವೋ ತಥಾ = ಹಾಗೆ ನಷ್ಟಜನ್ಮಸ್ಮೃತಿಃ= ಇಂತಹ ಕಡೆ ಹುಟ್ಟಿದ್ದೆ ಇತ್ಯಾದಿ ಸ್ಮರಣೆಯಿಲ್ಲದವನು (ಭವತಿ)=ಆಗಿರುವನು, 'ತಮಸಾ ಯುಕ್ತಃ' ಎಂಬ ವಿಶೇಷಣದಿಂದ ಜೀವನಿಗೆ ಪೂರ್ವಾಪರ ಜನ್ಮಜ್ಞಾನ ವಿಲ್ಲದಿರಲು ತಮೋಗುಣ ವಿಶಿಷ್ಟನಾಗಿರುವುದೇ ಕಾರಣವೆಂದು ಹೇಳಿದಂತಾಯಿತು. ಇದರಿಂದ 'ಯಾವಜ್ಜೀವಂ ಸುಖಂ ಜೀವೇತ್' ಎಂಬುದು ಚಾರ್ವಾಕಮತ, ಅದು ಅಜ್ಞಾನಿಗಳ ಪ್ರಲಾಪವೆಂದು ತಿಳಿದುಬರುವುದೆಂದು ಅಭಿಪ್ರಾಯ. ವಿ.ಅ. ತಮಸಾ ಯುಕ್ತಃ ಯಥಾ ಎಂದು ದೃಷ್ಟಾಂತವಾಗಿಯೂ ಅನ್ವಯ ಮಾಡಿರುವರು. ಆಗ ಅಂಧಕಾರದಿಂದ ಯುಕ್ತನಾದ ಪುರುಷನು ವ್ಯಕ್ತವಾದುದನ್ನೇ ಮುಟ್ಟಿ ತಿಳಿಯು ವನು. ಎದುರಿಗಿರುವುದನ್ನೂ ಹಿಂದಿರುವುದನ್ನೂ ಮುಟ್ಟದೆ ತಿಳಿಯಲಾರ ಆದರಂತೆ ಎಂದರ್ಥ. ಅಥವಾ ನಿದ್ರೆಯಿಂದ ಯುಕ್ತನಾದವನು ಸ್ವಪ್ನದಲ್ಲಿ ಅಭಿವ್ಯಕ್ತವಾದು ದನ್ನೇ-ವಾಸನಾಮಯ ಪದಾರ್ಥಗಳನ್ನೇ-ತಿಳಿಯುವನು. ಸ್ವಪ್ನಕ್ಕೆ ಪೂರ್ವದಲ್ಲಿ ಅಥವಾ ಸ್ವಪ್ನಾನಂತರ ಜಾಗ್ರದವಸ್ಥೆಯಲ್ಲಿ ಇರುವ ಸ್ಥೂಲ ಪದಾರ್ಥಗಳನ್ನು ಹೇಗೆ ತಿಳಿಯುವುದಿಲ್ಲವೋ ಹಾಗೆ ಎಂದರ್ಥ. || ೪೯ ||

ಪಂಚಭಿಃ ಕುರುತೇ ಸ್ವಾರ್ಥಾನ್ ಪಂಚ ವೇದಾಥ ಪಂಚಭಿಃ ।
ಏಕಸ್ತು ಷೋಡಶೇನ ತ್ರೀನ್ ಸ್ವಯಂ ಸಪ್ತದಶೋಽಶ್ನುತೇ ॥ ೫೦ ॥

ಪ್ರಾಸಂಗಿಕವಾಗಿ ಜೀವನ ಸಂಸಾರರೀತಿಯನ್ನು ಮುಂದಿನ ಐದು ಶ್ಲೋಕ ಗಳಿಂದ ತಿಳಿಸುತ್ತಾರೆ. ದೇಹಿಯಾದವನು ಕರ್ಮಮಾಡಿಯೇ ಮಾಡುವನು ಎಂದು ಹೇಳಲಾಗಿತ್ತು. ಅವನು ಕರ್ಮಮಾಡುವ ಪ್ರಕಾರವನ್ನು ಹೇಳುತ್ತಾರೆ. ಸ್ವಯಂ = ತಾನು ಸಪ್ತದಶಃ = ಹದಿನೇಳನೆಯವನಾದ ಏಕಃ – ಒಬ್ಬನೇ ಆದ ಜೀವನು ಪಂಚಭಿಃ = ಐದು ಕರ್ಮೇಂದ್ರಿಯಗಳಿಂದ ಸ್ವಾರ್ಥಾನ್ = ಆಯಾ ಇಂದ್ರಿಯಗಳ ಕಾರ್ಯಗಳಾದ ಮಾತನಾಡುವುದು, ಶಿಲ್ಪ, ಗತಿ, ಮಲವಿಸರ್ಜನೆ, ಆನಂದ — ಈ ಕಾರ್ಯಗಳನ್ನು ಕುರುತೇ = ಮಾಡುವನು. ಅಥ – ಮತ್ತು ಪಂಚಭಿಃ = ಐದು ಜ್ಞಾನೇಂದ್ರಿಯಗಳಿಂದ ಪಂಚ – ಶಬ್ದ, ಸ್ಪರ್ಶ, ರೂಪ, ರಸ,

---

ಇಂತಹ ಕಡೆ ಹುಟ್ಟಿದ್ದೆ, ಇತ್ಯಾದಿ ಸ್ಮರಣೆ ಶೂನ್ಯನೂ ಆಗಿರುವನು. ಹದಿನಾರು ಕಲೆಗಳಿರುವ ಲಿಂಗಶರೀರಕ್ಕಿಂತ ಭಿನ್ನನಾದ ಜೀವನು ಹದಿನೇಳನೆಯವನು. ಶರೀರ ದಲ್ಲಿ ಇರುವ ಈ ಒಬ್ಬ ಜೀವನು ಐದು ಕರ್ಮೇಂದ್ರಿಯಗಳಿಂದ ಅವುಗಳ ಕಾರ್ಯ ಗಳನ್ನು ಮಾಡುವನು. ಐದು ಜ್ಞಾನೇಂದ್ರಿಯಗಳಿಂದ ಐದು ವಿಷಯಗಳನ್ನು ತಿಳಿಯುವನು. ಲಿಂಗಶರೀರದಿಂದ ಸತ್ವ ಮೊದಲಾದ ಗುಣಗಳಿಂದ ಮೂರು ವಿಧ ಗಳಾದ ಸುಖ, ದುಃಖ, ಮಿಶ್ರ ಫಲಗಳನ್ನು ಅನುಭವಿಸುವನು. ಮನಸ್ಸಿನಿಂದ ಜಾಗ್ರ ದಾದಿ ಮೂರು ಅವಸ್ಥೆಗಳನ್ನು (ಆ ಕಾಲಗಳ ವಿಷಯಗಳನ್ನು) ಅನುಭವಿಸುವನು.

ಗಂಧಗಳೆಂಬ ಐದು ವಿಷಯಗಳನ್ನು ವೇದ = ತಿಳಿಯುವನು. ಷೋಡಶೇನ = ಹದಿನಾರು ಭೇದದಿಂದ ಕೂಡಿದ ಲಿಂಗಶರೀರದಿಂದ (೨) ಮನಸ್ಸಿನಿಂದ ತ್ರಿಭಿಃ = (೧) ಸತ್ವ ಮೊದಲಾದ ಗುಣಗಳಿಂದ ಮೂರು ರೀತಿಯಲ್ಲಿ ವಿಭಕ್ತಗಳಾದ ಸುಖ, ದುಃಖ, ಮಿಶ್ರ ಫಲಗಳನ್ನು (೨) ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥಾಕಾಲಗಳ ವಿಷಯಗಳನ್ನು ಅಶ್ನುತೇ=ಅನುಭವಿಸುವನು (ವಾಕ್, ಪಾಣಿ, ಪಾದ, ಪಾಯು, ಉಪಸ್ಥ-ಐದು ಕರ್ಮೇಂದ್ರಿಯಗಳು, ಶ್ರೋತ್ರ, ಚಕ್ಷುಸ್ಸು, ತ್ವಕ್, ರಸನ ಮತ್ತು ಘ್ರಾಣ-ಐದು ಜ್ಞಾನೇಂದ್ರಿಯಗಳು). ೫ ಜ್ಞಾನೇಂದ್ರಿಯ, ೫ ಕರ್ಮೇಂದ್ರಿಯ, ೫ ಆಕಾಶ ಮೊದಲಾದ ಭೂತಗಳು, (೧) ಮನಸ್ಸು-ಹದಿನಾರು ಕಲೆಗಳು (ಭೇದಗಳು) 'ಸತ್ವಂ ಸುಖಂ ಸಂಜನಯತಿ' ಇತ್ಯಾದಿಗಳಿಂದ ಸತ್ವಾದಿಗಳು ಸುಖಾದಿ ಜ್ಞಾನಜನಕಗಳೆಂದು ತಿಳಿದುಬರುವುವು. ಸಪ್ತದಶಃ ಎಂದು ಹೇಳಿದ್ದರಿಂದ ದೇಹ-ಆತ್ಮಗಳು ಭಿನ್ನಗಳೆಂದು ಪ್ರಕಟಿಸಿರುವರು. || ೫೦ ||

ತದೇತತ್ ಷೋಡಶಕಲಂ ಲಿಂಗಂ ಶಕ್ತಿತ್ರಯಂ ಮಹತ್ ।
ಧತ್ತೇऽನುಸಂಸೃತಿಂ ಪುಂಸಿ ಹರ್ಷಶೋಕಭಯಾರ್ತಿದಮ್ || ೫೧ ||

ಹಾಗಾದರೆ ಜೀವನಿಗೆ ಸಂಸಾರವು ಏತರಿಂದ? ಎಂದರೆ ಹೇಳುತ್ತಾರೆ. ಷೋಡಶಕಲಂ=ಮೇಲೆ ಹೇಳಿದ ಹದಿನಾರು ಕಲೆಗಳುಳ್ಳ ಶಕ್ತಿತ್ರಯಂ=ಪ್ರಕಾಶ, ಕ್ರಿಯಾ, ಆವರಣಗಳೆಂಬ ಮೂರು ಶಕ್ತಿಗಳುಳ್ಳ (ಸತ್ವ ಮೊದಲಾದ ಗುಣಗಳ ಶಕ್ತಿಗಳಿಂದ ಕೂಡಿರುವ) ಮಹತ್=ಆದ್ದರಿಂದಲೇ ಮಹಾಪುರುಷಾರ್ಥವಾದ ಮೋಕ್ಷಕ್ಕೆ ಪ್ರತಿಬಂಧಕವಾಗಿರುವ, (೨) ಶ್ರೀಹರಿಯ ಅನುಗ್ರಹವಿಲ್ಲದೆ ಹೋಗದಿರುವ ಹರ್ಷಶೋಕಭಯಾರ್ತಿದಂ=ಸಂತೋಷ, ದುಃಖ, ಭಯಾದಿಗಳನ್ನು ಕೊಡುವ ತದೇತತ್ ಲಿಂಗಂ=ಈ ಲಿಂಗಶರೀರವು ಪುಂಸಿ=ಜೀವನಲ್ಲಿ ಅನು=ಅವನವನ ಕರ್ಮಕ್ಕೆ ತಕ್ಕಂತೆ ಸಂಸೃತಿಂ=ಸಂಸಾರವನ್ನು ಧತ್ತೇ=ಕೊಡುವುದು (ಉಂಟುಮಾಡುವುದು) ಪುಂಸಿ ಎಂಬ ಸಪ್ತಮಿಯು ಜೀವನು ಅಧಿಕರಣವಷ್ಟೇ ಎಂದು ತಿಳಿಸುವುದು. ಆದ್ದರಿಂದ ಇದೆಲ್ಲವೂ ಅಭಿಮಾನ ನಿಮಿತ್ತಕವೆಂದು ಹೇಳಿದಂತಾಯಿತು. || ೫೧ ||

ಲಿಂಗಶರೀರಕ್ಕೆ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಭೂತಗಳು ಮತ್ತು ಮನಸ್ಸು ಎಂದು ಹದಿನಾರು ಕಲೆಗಳು. ಪ್ರಕಾಶ, ಕ್ರಿಯಾ, ಆವರಣಗಳೆಂಬ ಮೂರು ಶಕ್ತಿಗಳು. (ಸತ್ವ ಮೊದಲಾದ ಮೂರು ಗುಣಗಳ ಶಕ್ತಿಗಳು.) ಇದು ಜೀವನಿಗೆ ಹರ್ಷ, ಶೋಕ, ಭಯ ಮತ್ತು ಆರ್ತಿಗಳನ್ನು ಉಂಟುಮಾಡುವುದು. ಮಹಾಪುರುಷಾರ್ಥಕ್ಕೆ ಇದು ಪ್ರತಿಬಂಧಕ. ಶ್ರೀಹರಿಯ ಅನುಗ್ರಹವಾಗದೆ ಹೋಗುವುದಿಲ್ಲ. ಈ ಲಿಂಗಶರೀರವೇ ಜೀವನಿಗೆ ಅವನವನ ಕರ್ಮಾನುಗುಣವಾಗಿ ಸಂಸಾರಕ್ಕೆ ಕಾರಣವಾಗಿರುವುದು. ಅಭಿಮಾನದಿಂದ ಜೀವನು ಹುಟ್ಟು ಸಾವುಗಳಿಗೆ ಅಧಿಕರಣವಾಗಿರುವನು. ಜ್ಞಾನೇಂದ್ರಿಯ

ದೇಹ್ಯಜ್ಞೋಽಜಿತ ಷಡ್ವರ್ಗೋಽನಿಚ್ಛನ್ ಕರ್ಮಾಣಿ ಕಾರ್ಯತೇ ।
ಕೋಶಕಾರ ಇವಾತ್ಮಾನಂ ಕರ್ಮಣಾಽಽಚ್ಛಾದ್ಯ ಮುಹ್ಯತಿ ॥ ೫೨

ಜೀವನ ಸಂಸಾರದ ರೀತಿಯನ್ನು ಹೇಳುತ್ತಾರೆ. ಅಜಿತಷಡ್ವರ್ಗಃ=ಐದು ಜ್ಞಾನೇಂದ್ರಿಯ ಮನಸ್ಸು ಎಂಬ ಆರರ ಸಮೂಹವನ್ನು ಜಯಿಸದಿರುವ ದೇಹೀ= ಲಿಂಗಶರೀರವುಳ್ಳ ಅಜ್ಞಃ=ಭಗವಂತನ ಜ್ಞಾನವಿಲ್ಲದ ಜೀವನು ಅನಿಚ್ಛನ್ನಪಿ=ಇಷ್ಟ ಪಡದಿದ್ದರೂ ಕರ್ಮಾಣಿ=ಕರ್ಮಗಳನ್ನು ಕಾರ್ಯತೇ ಗುಣಾಧೀನಗಳಾದ ಈ ಆರು ಇಂದ್ರಿಯಗಳಿಂದ ಮಾಡಿಸಲ್ಪಡುವನು. ಭೂತಾವಿಷ್ಟನಂತೆ ಬಲಾತ್ಕಾರವಾಗಿ ಮಾಡಿಸಲ್ಪಡುವನಾದರೆ ಅದರಿಂದ ತನಗೆ ಉಂಟಾಗುವ ಸಂಪತ್ತು ವಿಪತ್ತುಗಳನ್ನು ತಿಳಿಯುವುದಿಲ್ಲವೇ? ಎಂದರೆ ಇಲ್ಲವೆಂದು ಹೇಳುತ್ತಾರೆ. ಕೋಶಕಾರಃ ಇವ= ಹೇಗೆ ಗೂಡುಕಟ್ಟಿಕೊಳ್ಳುವ ಹುಳು ತನ್ನ ಕರ್ಮದಿಂದ ಗೂಡನ್ನು ನಿರ್ಮಿಸಿ ಅದರಿಂದ ತನ್ನನ್ನು ಆವರಿಸಿಕೊಂಡು ಅದರಲ್ಲಿಯೇ ಇದ್ದುಕೊಂಡು ಮುಹ್ಯತಿ= ಆ ಗೂಡಿನ ನಾಶ ಅನಾಶಗಳನ್ನು ತಿಳಿಯುವುದಿಲ್ಲವೋ ಅದರಂತೆ ದೇಹಿಯೂ ಕರ್ಮಣಾ=ಕರ್ಮದಿಂದ ಆತ್ಮಾನಂ=ತನ್ನನ್ನು ಆಚ್ಛಾದ್ಯ=ಮುಚ್ಚಿಕೊಂಡು ಮುಹ್ಯತಿ=ಸಂಪದ್ವಿಪತ್ ಜ್ಞಾನಶೂನ್ಯನಾಗಿರುವನು. ॥ ೫೨ ॥

ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥ ೫೩ ॥

ಜೀವನು ಮೋಹಗೊಂಡಿರುವನೆಂಬುದು ಹೇಗೆ ಗೊತ್ತು? ಎಂದರೆ ಮತ್ತೆ ಮತ್ತೆ ಕರ್ಮಮಾಡುವುದರಿಂದಲೇ ಎಂಬ ಅಭಿಪ್ರಾಯವುಳ್ಳವರಾಗಿ ತಾವು ಹೇಳಿದ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ. ಕಶ್ಚಿತ್=ಯಾವನೂ ಅಕರ್ಮಕೃತ್= ಕರ್ಮಮಾಡದೆ ಕ್ಷಣಮಪಿ=ಕ್ಷಣವಾದರೂ ಜಾತು=ಎಂದೂ ನಹಿ ತಿಷ್ಠತಿ= ಇರುವುದಿಲ್ಲ. ಅವಶಃ=ಶ್ರೀಹರಿಯ ವಶನಾದ ಸರ್ವಃ=ಎಲ್ಲ ಜೀವರೂ ಪ್ರಕೃತಿಜೈಃ=ಸ್ವಭಾವಸಿದ್ಧಗಳಾದ (ಪೂರ್ವಜನ್ಮ ಸಂಸ್ಕಾರದಿಂದ ಬಂದ) ಗುಣೈಃ=ಗುಣಕಾರ್ಯಗಳಾದ ರಾಗಾದಿಗಳಿಂದ ಕರ್ಮ=ಕರ್ಮವನ್ನು ಕಾರ್ಯತೇ= ಮಾಡಿಸಲ್ಪಡುವನು. ಅನುಭವವೇ ಪ್ರಮಾಣವೆಂದು ತಿಳಿಸಿದಂತಾಯಿತು ॥ ೫೩ ॥

ಮತ್ತು ಮನಸ್ಸೆಂಬ ಆರನ್ನೂ ಗೆಲ್ಲದಿರುವ (ರಾಗಾದಿಗಳನ್ನು ಗೆಲ್ಲದಿರುವ) ಲಿಂಗ ಶರೀರಿಯಾದ ಜೀವನು ಭಗವಂತನ ಜ್ಞಾನವಿಲ್ಲದವನಾಗಿ ತನಗಿಷ್ಟವಿಲ್ಲದಿದ್ದರೂ ಕರ್ಮಗಳನ್ನು ಇಂದ್ರಿಯವಶನಾಗಿ ಮಾಡುವನು. ತನ್ನ ಸುತ್ತ ಗೂಡು ಕಟ್ಟಿಕೊಳ್ಳುವ ಹುಳು ಆ ಗೂಡಿನಿಂದ ಆವೃತವಾಗಿ ಆ ಗೂಡಿನ ನಾಶಾನಾಶಗಳನ್ನು ತಿಳಿಯದಿರುವಂತೆ ಲಿಂಗದೇಹಿಯೂ ತನ್ನ ಕರ್ಮಗಳಿಂದ ತನ್ನನ್ನು ಮುಚ್ಚಿಕೊಂಡು ಸಂಪದ್ವಿಪತ್ ಜ್ಞಾನವಿಲ್ಲದಿರುವನು. ಯಾವನೂ ಕರ್ಮ ಮಾಡದೆ ಒಂದು ಕ್ಷಣ ವಾದರೂ ಎಂದೂ ಇರುವುದಿಲ್ಲ. ಶ್ರೀಹರಿಯ ವಶರಾದ ಎಲ್ಲ ಜೀವರೂ ತಮ್ಮ

ಲಬ್ಧ್ವಾ ನಿಮಿತ್ತಮವ್ಯಕ್ತಂ ವ್ಯಕ್ತಾವ್ಯಕ್ತಂ ಭವತ್ಯುತ ।
ಯಥಾಯೋನಿ ಯಥಾಬೀಜಂ ಸ್ವಭಾವೇನ ಬಲೀಯಸಾ ॥ ೫೪ ॥

ಹುಟ್ಟುಸಾವುಗಳು ದೇಹಕ್ಕೇಯೇ. ದೇಹಾಭಿಮಾನದಿಂದ ಅಭಿಮಾನಿ ಜೀವನಿಗೆ ಅವು ಔಪಚಾರಿಕವಾಗಿ ಹೇಳಲ್ಪಡುತ್ತವೆಯೆನ್ನುತ್ತಾರೆ. ನಿಮಿತ್ತಂ= (೧) ಸಂಸಾರನಿಮಿತ್ತವಾದ (೨) ನಿಮಿತ್ತ ಕಾರಣವಾದ ಅವ್ಯಕ್ತಂ ಲಬ್ಧ್ವಾ= (೧) ಪ್ರಕೃತಿ ಕಾರ್ಯವಾದ ಶರೀರವನ್ನು (೨) ಪ್ರಕೃತಿಯನ್ನು (೩) ಅದೃಷ್ಟವನ್ನು ಹೊಂದಿ ಯಥಾಯೋನಿ=(೧) ಪಶು ಮೊದಲಾದ ಯೋನಿಗಳಿಗೆ ತಕ್ಕಂತೆ (೨) ಮಾತೃ ಸದೃಶವಾದ ಯಥಾಬೀಜಂ = (೧) ಕರ್ಮರಾಶಿಗನುಗುಣವಾಗಿ (೨) ಪಿತೃ ಸದೃಶವಾದ ಬಲೀಯಸಾ=ಅತ್ಯಂತ ಬಲಿಷ್ಠವಾದ ಸ್ವಭಾವೇನ= (೧) ಸತ್ತ್ವಾದಿ ಗುಣಸ್ವಭಾವದಿಂದ (೨) ವಾಸನೆಗೆ ತಕ್ಕಂತೆ ವ್ಯಕ್ತಾವ್ಯಕ್ತಂ ಉತ= (೧) ಜನನ ಮರಣಗಳೂ (೨) ಜನನ ಮರಣಾತ್ಮಕ ಶರೀರವೂ (೩) ಸ್ಥೂಲ, ಸೂಕ್ಷ್ಮ ಶರೀರಗಳೂ ಭವತಿ=(೧) ಜೀವನಲ್ಲಿ ಉಪಚರಿತವಾಗಿರುವುವು. (೨) ಜೀವನಿಗೆ ಬರುವುವು. 'ದೇಹಸ್ಯ ಸರ್ವಥಾ ನಾಶಾತ್, ಅನಾಶಾತ್ ಚೇತನಸ್ಯ ಚ' ಶುಕ್ಲಶೋಣಿತಗಳೊಂದೇ ರೀತಿಯಂತೆ ಕಂಡರೂ ಕರ್ಮವಾಸನೆಯಿಂದ ಮಾತಾ ಪಿತೃಸದೃಶ ದೇಹವನ್ನು ಹೊಂದುವನು. 'ಶರೀರಾಕೃತಿ ಭೇದಾಸ್ತು ಭೂಪತೇ ಕರ್ಮಯೋನಯಃ' ಎಂಬ ವಿಷ್ಣುಪುರಾಣ ವಚನವು ಇರುವುದು. ॥ ೫೪ ॥

ಏಷ ಪ್ರಕೃತಿಸಂಗೇನ ಪುರುಷಸ್ಯ ವಿಪರ್ಯಯಃ ।
ಆಸೀತ್ಸ ಏವ ನಚಿರಾದೀಶಸಂಗಾದ್ವಿಲೀಯತೇ ॥ ೫೫ ॥

ಹೀಗೆ ಸಂಸಾರವು ಬರುವ ರೀತಿಯನ್ನು ಹೇಳಿ ಅದು ಹೋಗುವುದಕ್ಕೆ- ಮೋಕ್ಷಕ್ಕೆ-ಉಪಾಯವನ್ನು ಹೇಳುತ್ತಾರೆ. ಪುರುಷಸ್ಯ=ಜೀವನಿಗೆ ಪ್ರಕೃತಿ ಸಂಗೇನ=ಪ್ರಕೃತಿಯ ಸಂಬಂಧದಿಂದ (ಲಿಂಗದೇಹದಿಂದ) (ಯಃ)=ಯಾವ ಏಷಃ= ಈ ವಿಪರ್ಯಯಃ=ಅವನ ಸ್ವರೂಪಕ್ಕೆ ವಿರುದ್ಧವಾದ ಸಂಸಾರವು ಆಸೀತ್= ಬಂದಿದೆಯೋ ಸ(ಏಷ)=ಅದು ಈಶಸಂಗಾತ್=ಸರ್ವನಿಯಾಮಕನಾದ ಶ್ರೀಹರಿಯ ಸಂಬಂಧದಿಂದ (ಸೇವೆಯಿಂದ) ನಚಿರಾತ್=ವಿಲಂಬವಿಲ್ಲದೆ ಕ್ಷಿಪ್ರವಾಗಿ ವಿಲೀಯತೇ= ಸಮೂಲನಾಶವಾಗುವುದು ಮೋಕ್ಷವಾಗುವುದೆಂದರ್ಥ. ॥ ೫೫ ॥

ತಮ್ಮ ಸ್ವಭಾವಸಿದ್ಧ ಗುಣಕಾರ್ಯಗಳಾದ ರಾಗದ್ವೇಷಾದಿಗಳಿಂದ ಕರ್ಮ ಮಾಡಿಸಲ್ಪಡುವರು. ಸಂಸಾರನಿಮಿತ್ತವಾದ ಪ್ರಕೃತಿ ಕಾರ್ಯ ಶರೀರವನ್ನು ಹೊಂದಿ ಆಯಾಯಾ ಯೋನಿಗೆ ತಕ್ಕಂತೆ ಆಯಾಯಾ ಕರ್ಮಕ್ಕನುಗುಣವಾಗಿ ಬಲಿಷ್ಠವಾದ ಸ್ವಭಾವದಿಂದ ಜನನ ಮರಣಗಳನ್ನು ಜೀವನು ಔಪಚಾರಿಕವಾಗಿ ಹೊಂದುವನು. ತಾಯಿಗೆ ತಕ್ಕಂತೆ ತಂದೆಗೆ ತಕ್ಕಂತೆ ಕರ್ಮವಾಸನೆಯಿಂದ ದೇಹಗಳನ್ನು ಹೊಂದುವನು. ಹೀಗೆ ಪ್ರಕೃತಿ (ಲಿಂಗಶರೀರ) ಸಂಬಂಧದಿಂದ ಜೀವನಿಗೆ

ಅಯಂ ಚ ಶ್ರುತಸಂಪನ್ನಃ ಶೀಲವೃತ್ತಗುಣಾಲಯಃ ।
ಧೃತವ್ರತೋ ಮೃದುರ್ದಾಂತಃ ಸತ್ಯವಾನ್ಮಂತ್ರವಿಚ್ಛುಚಿಃ ॥ ೫೬ ॥
ಗುರ್ವಗ್ನ್ಯತಿಥಿವೃದ್ಧಾನಾಂ ಶಿ(ಶು)ಶ್ರೂಷುರ್ನಿರಹಂಕೃತಿಃ ।
ಸರ್ವಭೂತಸುಹೃತ್ಸಾಧುರ್ಮಿತವಾಗನಸೂಯಕಃ ॥ ೫೭ ॥

ಹೀಗೆ ಸಾಮಾನ್ಯವಾಗಿ ಧರ್ಮನಿರ್ಣಯವನ್ನು ಹೇಳಿ ಪ್ರಕೃತನಾದ ಅಜಾಮಿಳನ ಅಧರ್ಮವನ್ನು ತಿಳಿಸಿ ಅವನು ಶಿಕ್ಷೆಗೆ ಅರ್ಹನೆಂದು ಅಧ್ಯಾಯದ ಕೊನೆಯವರೆಗೂ ಸಮರ್ಥಿಸುತ್ತಾರೆ. ಇವನು ವಿದ್ವತ್ತೆ ಮೊದಲಾದ ಗುಣಸಂಪನ್ನ ನಾದ್ದರಿಂದ ಬುದ್ಧಿಪೂರ್ವಕವಾಗಿಯೇ ಪಾಪಮಾಡಿರುವನಾದ್ದರಿಂದ ಪ್ರಾಯಶ್ಚಿತ್ತಕ್ಕೆ ಅಧಿಕಾರಿಯಲ್ಲ. ನಾಮೋಚ್ಚಾರಣೆ ಮಾತ್ರವೇ ಪ್ರಾಯಶ್ಚಿತ್ತವಾದಲ್ಲಿ ಎಲ್ಲರಿಗೂ ಮುಕ್ತಿಯಾಗಬೇಕಾದೀತು. ಆಗ ದಂಡ್ಯರಾದ ಜೀವರೇ ಇಲ್ಲದೆ ಹೋಗಿ ನಿಮ್ಮ ಸ್ವಾಮಿಯ (ವಿಷ್ಣುವಿನ) ಆಜ್ಞೆಯನ್ನೇ ನಡೆಸುವ ಯಮದೇವರಿಗೆ ಆಜ್ಞೋಲ್ಲಂಘನ ದೋಷವು ಬಂದು ಅಧಿಕಾರಹಾನಿಯೆಂಬ ಅನರ್ಥವು ಬರುವುದು. ಆದ್ದರಿಂದ ಇವನು ಯಮನ ಬಳಿಗೆ ಹೋಗಿ ಅಲ್ಲಿ ಶಿಕ್ಷೆಯನ್ನು ಹೊಂದಿ ಶುದ್ಧನಾಗಲಿ ಎಂದು ಹೇಳಿದರೆನ್ನುತ್ತಾರೆ. ಈ ಅಜಾಮಿಳನು ಶ್ರುತಸಂಪನ್ನಃ=ವೇದಾದಿ ವಿದ್ಯಾ ಸಂಪನ್ನನು. ಶೀಲ–ಸುಸ್ವಭಾವ ವೃತ್ತ=ಸದಾಚಾರ ಗುಣ–ಕ್ಷಮಾ ಮೊದಲಾದ ಗುಣ—ಇವುಗಳಿಗೆ ಆಲಯಃ–ಆಶ್ರಯನು. ವ್ರತಧಾರಿಯು, ಮೃದುಸ್ವಭಾವ ದವನು. ದಾಂತಃ=ಇಂದ್ರಿಯ ನಿಗ್ರಹವಂತನು, ಸತ್ಯವಂತನು. ಮಂತ್ರವಿತ್– ವೇದಗಳನ್ನು ಬಲ್ಲವನು (ವೇದಾರ್ಥಜ್ಞಾನಿ). ದೊಡ್ಡವರನ್ನೂ ಅಗ್ನಿಯನ್ನೂ ಅತಿಥಿ ಗಳನ್ನೂ ವೃದ್ಧರನ್ನೂ ಸೇವಿಸುವವನು, ಅಹಂಕಾರವಿಲ್ಲದವನು, ಎಲ್ಲ ಪ್ರಾಣಿಗಳಿಗೂ ಸ್ನೇಹಿತನು, ಸಾಧುವು. ಮಿತವಾಕ್=ಅಗತ್ಯವಿದ್ದಷ್ಟೇ ಮಾತನಾಡುವವನು. ಅನಸೂಯಕಃ–ಅಸೂಯಾರಹಿತನು. (ಇದು ಇವನ ಪೂರ್ವಸ್ಥಿತಿ. ಇದನ್ನು ಅನುವಾದ ಮಾಡಿದ್ದು ಅವನು ಮಾಡಿದ್ದು ಅತ್ಯಂತ ಅನ್ಯಾಯವೆಂದು ತಿಳಿಸು ವುದಕ್ಕಾಗಿ.) ॥ ೫೬, ೫೭ ॥

ಬಂದಿರುವ ಅನ್ಯಥಾ ಭಾವವು–ಸಂಸಾರಾವಸ್ಥೆಯು–ಸರ್ವ ನಿಯಾಮಕನಾದ ಶ್ರೀ ಹರಿಯ ಸಂಗ (ಸೇವೆ)ದಿಂದ ಕ್ಷಿಪ್ರವಾಗಿ ಮತ್ತೆ ಆವೃತ್ತಿ ಇಲ್ಲದಂತೆ ಸಂಪೂರ್ಣವಾಗಿ ಹೋಗುವುದು. ಅದೇ ಮೋಕ್ಷ.

ಇವನು ವೇದಾದಿ ವಿದ್ಯಾಸಂಪನ್ನ; ಒಳ್ಳೆಯ ಸ್ವಭಾವ–ಸದಾಚಾರ–ಕ್ಷಮಾ ಮೊದಲಾದ ಗುಣ–ಇವುಗಳಿಗೆ ಆಶ್ರಯ; ವ್ರತಧಾರಿ; ಮೃದು; ಜಿತೇಂದ್ರಿಯ; ಸತ್ಯವಂತ; ವೇದಾರ್ಥಜ್ಞಾನಿ; ಹಿರಿಯರು–ಅಗ್ನಿ–ಅತಿಥಿ–ವೃದ್ಧರು–ಇವರ ಸೇವಕ; ನಿರಹಂಕಾರಿ; ಸರ್ವಭೂತ ಸುಹೃತ್; ಸಾಧು; ಮಿತಭಾಷಿ; ಅಸೂಯಾರಹಿತ.

ಏಕದಾಸೌ ವನಂ ಯಾತಃ ಪಿತೃಸಂದೇಶಕೃದ್ದ್ವಿಜಃ ।
ಆದಾಯ ತತ ಆವೃತ್ತಃ ಫಲಪುಷ್ಪ ಸಮಿತ್ಕುಶಾನ್ ॥ ೫೮ ॥

ಏಕದಾ=ಒಂದು ದಿನ ಪಿತೃಸಂದೇಶಕೃತ್=ತಂದೆಯ ಮಾತನ್ನು ನಡೆಸುವನಾಗಿ ಅಸೌ ದ್ವಿಜಃ=ಈ ದ್ವಿಜನು ವನಂ ಯಾತಃ (ಸ್ಸ)=ಅರಣ್ಯಕ್ಕೆ ಹೋದವನಾಗಿ ಹಣ್ಣು, ಹೂ, ಸಮಿತ್ತು ಮತ್ತು ದರ್ಭೆಗಳನ್ನು ಆದಾಯ=ತೆಗೆದುಕೊಂಡು ತತಃ=ಆ ವನದಿಂದ ಆವೃತ್ತಃ=ಹಿಂತಿರುಗಿದನು. ॥ ೫೮ ॥

ದದರ್ಶ ಕಾಮಿನಂ ಕಂಚಿಚ್ಛೂದ್ರಂ ಸಹ ಭುಜಿಷ್ಯಯಾ ।
ಪೀತ್ವಾ ಚ ಮಧು ಮೈರೇಯಂ ಮದಾಘೂರ್ಣಿತನೇತ್ರಯಾ ॥
ಮತ್ತಯಾ ವಿಶ್ಲಥನ್ನೀವ್ಯಾ ಹ್ಯಪೇತಂ ನಿರಪತ್ರಪಮ್ ।
ಕ್ರೀಡಂತಮನುಗಾಯಂತಂ ಹಸಂತಮನಯಾಂತಿಕೇ ॥ ೬೦ ॥

ಬರುತ್ತಾ ದಾರಿಯಲ್ಲಿ ಭುಜಿಷ್ಯಯಾ ಸಹ=ಭೋಗಾನುಕೂಲೆಯಾದ ದಾಸಿಯೊಂದಿಗೆ ಮೈರೇಯಂ ಮಧು=ಹಿಟ್ಟಿನಿಂದ ಮಾಡಿದ ಮೈರೇಯವೆಂಬ ಮದ್ಯವನ್ನು ಪೀತ್ವಾ=ಕುಡಿದು ಮದದಿಂದ ತುಂಬಿದ ಚಂಚಲ ಕೆಂಗಣ್ಣುಗಳುಳ್ಳ ಮತ್ತಳಾದ ವಿಶ್ಲಥನ್ನೀವ್ಯಾ=ಸೀರೆಯ ಗಂಟು ಕಳಚಿಹೋಗಿದ್ದ (ನಗ್ನಳಾದ) ಅವಳೊಡನೆ ಉಪೇತಂ=ಕೂಡಿದ್ದ ನಿರಪತ್ರಪಂ=ನಾಚಿಕೆಯಿಲ್ಲದ ಅಂತಿಕೇ=ಸಮೀಪದಲ್ಲಿ ಕ್ರೀಡಂತಂ=ಕ್ರೀಡಿಸುತ್ತಿದ್ದ ಅನುಗಾಯಂತಂ=ಅವಳ ಜೊತೆಗೆ ಹಾಡುತ್ತಿದ್ದ ಹಸಂತಂ=ನಗುತ್ತಿದ್ದ ಕಾಮಿನಂ=ಕಾಮುಕನಾದ ಕಂಚಿತ್ ಶೂದ್ರಂ=ಶೂದ್ರನೊಬ್ಬನನ್ನು ದದರ್ಶ=ನೋಡಿದನು. ॥ ೫೯, ೬೦ ॥

ದೃಷ್ಟ್ವಾ ತಾಂ ಕಾಮಲಿಪ್ತೇನ ಬಾಹುನಾ ಪರಿರಂಭಿತಾಮ್ ।
ಜಗಾಮ ಹೃಚ್ಛಯವಶಂ ಸಹಸೈವ ವಿಮೋಹಿತಃ ॥ ೬೧ ॥

ಕಾಮಲಿಪ್ತೇನ=ಬೆವರು ನಡುಕ ಮೊದಲಾದುವನ್ನು ಉಂಟುಮಾಡುವ ಮನ್ಮಥೇಚ್ಛೆಯಿಂದ ವಶೀಕೃತವಾದ ಅಥವಾ ಕಾಮೋದ್ದೀಪಿತನಾದ ಶೂದ್ರನಿಂದ ಬಾಹುನಾ=ತೋಳಿನಿಂದ ಪರಿರಂಭಿತಾಂ=ಆಲಿಂಗಿತಳಾದ ಅವಳನ್ನು ನೋಡಿ ಸಹಸಾ ಏವ=ಕೂಡಲೇ ವಿಮೋಹಿತನಾಗಿ ಹೃಚ್ಛಯವಶಂ=ಮನ್ಮಥನ ಅಧೀನತೆಯನ್ನು ಜಗಾಮ=ಹೊಂದಿದನು. ಮನ್ಮಥವಶನಾದನು. ॥ ೬೧ ॥

ಈ ದ್ವಿಜನೊಂದು ದಿನ ತನ್ನ ತಂದೆಯ ಮಾತಿನಂತೆ ಅರಣ್ಯಕ್ಕೆ ಹೋದವನು ಫಲ-ಪುಷ್ಪ-ಸಮಿತ್ತು-ದರ್ಭೆಗಳನ್ನು ಶೇಖರಿಸಿಕೊಂಡು ಆ ವನದಿಂದ ಹಿಂತಿರುಗುತ್ತಿದ್ದನು. ಬರುತ್ತಾ ದಾರಿಯಲ್ಲಿ ಭೋಗಾನುಕೂಲೆಯಾದ ದಾಸಿಯೊಂದಿಗೆ ಕಾಮಾಸಕ್ತನಾಗಿದ್ದ ಶೂದ್ರನೊಬ್ಬನನ್ನು ಕಂಡನು. ಮದ್ಯಪಾನ ಮಾಡಿದ್ದ ಆ ದಾಸಿಯ ಕಣ್ಣುಗಳು ಮದದಿಂದ ಚಂಚಲಗಳಾಗಿದ್ದುವು. ಮತ್ತಳಾದ ಅವಳು ವಸನರಹಿತಳಾಗಿದ್ದಳು. ಅವಳೊಂದಿಗೆ ಲಜ್ಜಾರಹಿತನಾಗಿ ಈ ಶೂದ್ರನು ಕ್ರೀಡಿಸುತ್ತಿದ್ದನು; ಅವಳೊಡನೆ

ಸ್ತಂಭಯನ್ನಾತ್ಮನಾತ್ಮಾನಂ ಯಾವತ್ಸತ್ವಂ ಯಥಾಶ್ರುತಮ್ ।
ನ ಶಶಾಕ ಸಮಾಧಾತುಂ ಮನೋ ಮದನವೇಪಿತಮ್ ॥ ೬೨ ॥

ಯಾವತ್ಸತ್ವಂ = ಶಕ್ತಿಯಿದ್ದಷ್ಟೂ ಯಥಾಶ್ರುತಂ = 'ಶೂದ್ರ್ಯಾಂ ಯೋನೌ ಪತೇದ್ರೇತಃ' ಇತ್ಯಾದಿ ಶಾಸ್ತ್ರಶ್ರವಣವನ್ನು ಅನುಸರಿಸಿ ಆತ್ಮನಾ = ಮನಸ್ಸಿನಿಂದ ಆತ್ಮಾನಂ=ತನ್ನನ್ನು ಸ್ತಂಭಯನ್ ಅಪಿ=ತಡೆಹಿಡಿದರೂ ಮದನವೇಪಿತಂ=ಮನ್ಮಥಾವೇಶದಿಂದ ಕಂಪಿತವಾದ ಅಥವಾ ಕಾಮಬೀಜವನ್ನು ಹಾಕುವ ಕ್ಷೇತ್ರವಾಗಿದ್ದ ಮನಸ್ಸನ್ನು ಸಮಾಧಾತುಂ = ಸಮಾಧಾನಪಡಿಸಲು (ಹಿಂತಿರುಗಿಸಲು) ನ ಶಶಾಕ = ಸಮರ್ಥನಾಗಲಿಲ್ಲ. ॥ ೬೨ ॥

ತನ್ನಿಮಿತ್ತಸ್ಮರವ್ಯಾಜಗ್ರಹಗ್ರಸ್ತೋ ವಿಚೇತನಃ ।
ತಾಮೇವ ಮನಸಾ ಧ್ಯಾಯನ್ ಸ್ವಧರ್ಮಾದ್ವಿರರಾಮ ಹ ॥ ೬೩ ॥

ಅವಳ ದರ್ಶನವೇ ನಿಮಿತ್ತವಾಗುಳ್ಳ ಮನ್ಮಥನೆಂಬ ಗ್ರಹದಿಂದ ಗ್ರಸ್ತನಾಗಿ ವಿಚೇತನಃ (ಸನ್)=ಶಾಸ್ತ್ರವಿರುದ್ಧ ಜ್ಞಾನವನ್ನು ಹೊಂದಿ ಶಾಸ್ತ್ರಜ್ಞಾನವನ್ನು ಕಳೆದು ಕೊಂಡು ಆ ದಾಸಿಯನ್ನೇ ಮನಸ್ಸಿನಿಂದ ಧ್ಯಾನಮಾಡುತ್ತಾ ತನ್ನ ಧರ್ಮದಿಂದ ವಿರರಾಮ = ವಿರತನಾದನು. ಹ = ಕರ್ಮ ವಿಪಾಕವು ! ॥ ೬೩ ॥

ತಾಮೇವ ತೋಷಯಾಮಾಸ ಪಿತ್ರ್ಯೇಣಾರ್ಥೇನ ಯಾವತಾ ।
ಗ್ರಾಮ್ಯೈರ್ಮನೋರಮೈಃ ಕಾಮೈಃ ಪ್ರಸೀದೇತ ಯಥಾ ತಥಾ ॥

ಯಥಾ=ಹೇಗೆ ಯಾವತಾ = ಸಮಗ್ರವಾದ ಮನೋರಮೈಃ = ಮನಸ್ಸನ್ನು ಸಂತೋಷಪಡಿಸುವ ಗ್ರಾಮ್ಯೈಃ=ಕಾಮಭೋಗ ಸಾಧನಗಳಾದ ಕಾಮೈಃ =

ಹಾಡುತ್ತಿದ್ದನು; ನಗುತ್ತಿದ್ದನು. ಅವನೂ ಮಧುಪಾನ ಮಾಡಿ ಮತ್ತನಾಗಿದ್ದನು. ಆ ಶೂದ್ರನ ತೋಳು ಕಾಮಾತುರತೆಯಿಂದ ಬೆವರಿ ನಡುಗುತ್ತಿತ್ತು. ಆ ತೋಳಿನಿಂದ ಕಾಮಿಯಾದ ಅವನು ಅವಳನ್ನು ಆಲಿಂಗಿಸಿಕೊಂಡಿದ್ದನು. ಇದನ್ನು ಕಂಡ ಈ ದ್ವಿಜನು ಕೂಡಲೇ ವಿಮೋಹಿತನಾಗಿ ಮನ್ಮಥಾಧೀನನಾದನು. (ಆ ಶೂದ್ರಿಯ ಮೇಲೆ ಇವನ ಮನಸ್ಸು ಹೋಯಿತು.) ತನ್ನ ಶಕ್ತಿಯಿದ್ದಷ್ಟೂ, ತನಗೆ ಶಾಸ್ತ್ರ ಜ್ಞಾನವಿದ್ದಷ್ಟೂ ತನ್ನ ಮನಸ್ಸನ್ನು ಆ ಮನ್ಮಥೇಚ್ಛೆಯಿಂದ ತಡೆಹಿಡಿಯಲು ಪ್ರಯತ್ನಿಸಿದನು. ಆದರೆ ಆ ಕಾಮೋದ್ದೀಪಿತ ಚಿತ್ತವನ್ನು ಸಮಾಧಾನಪಡಿಸುವಲ್ಲಿ ಅವನಿಗೆ ಸಾಧ್ಯವಿಲ್ಲವಾಯಿತು. ಅವಳ ದರ್ಶನವನ್ನೇ ನಿಮಿತ್ತಮಾಡಿಕೊಂಡು ಸ್ಮರನೆಂಬ ಗ್ರಹವು ಅವನನ್ನು ಆವರಿಸಿತ್ತು. ಇದರ ಫಲವಾಗಿ ಅವನ ಶಾಸ್ತ್ರ ಜ್ಞಾನವು ಭ್ರಷ್ಟವಾಯಿತು. • ಶಾಸ್ತ್ರ ವಿರುದ್ಧ ಜ್ಞಾನವನ್ನು ಹೊಂದಿದ ಅವನು ಅವಳನ್ನೇ ಧ್ಯಾನಿಸುತ್ತಾ ತನ್ನ ಧರ್ಮಗಳಿಂದ ದೂರ ಸರಿದನು. ಹಿರಿಯರಿಂದ ಬಂದಿದ್ದ ಹಣವನ್ನು ಕೊಟ್ಟು ಅವಳನ್ನು ಸಂತೋಷಪಡಿಸಿದನು. ಪ್ರಸನ್ನ ಮನಸ್ಕಳಾದ ಅವಳಿಂದ ಎಲ್ಲ ಮನೋಹರ ಗ್ರಾಮ್ಯ ಕಾಮುಗಳನ್ನು ಹೊಂದಿ

ವಿಷಯಗಳಿಂದ ಪ್ರಸೀದೇತ– ಮನಸ್ಸು ತೃಪ್ತವಾಗುವುದೋ ತಥಾ – ಹಾಗೆ ತಾಂ ಏವ=ಆ ದಾಸಿಯನ್ನೇ ಪೈತ್ರೇಣ ಅರ್ಥೇನ=ತಂದೆಯು ಸಂಪಾದಿಸಿದ ದ್ರವ್ಯ ದಿಂದ ತೋಷಯಾಮಾಸ=ಸಂತೋಷಪಡಿಸಿದನು. || ೬೪ ||

ವಿಪ್ರಾಂ ಸ್ವಭಾರ್ಯಾಮಪ್ರೌಢಾಂ ಕುಲೇ ಮಹತಿ ಲಂಭಿತಾಮ್ ।
ವಿಸಸರ್ಜಾಚಿರಾತ್ಪಾಪಃ ಸ್ವೈರಿಣ್ಯಾಪಾಂಗವಿದ್ಧಧೀಃ || ೬೫ ||

ಸ್ವೈರಿಣ್ಯಾಃ – ವ್ಯಭಿಚಾರಿಣಿಯಾದ ಆ ದಾಸಿಯ ಅಪಾಂಗವಿದ್ಧಧೀಃ= ಕಟಾಕ್ಷದಿಂದ ಹೊಡೆಯಲ್ಪಟ್ಟ ಮನಸ್ಸುಳ್ಳ ಪಾಪಃ–ಪಾಪಿಯಾದ ಇವನು ಅಚಿರಾತ್–ಸ್ವಲ್ಪ ಕಾಲದಲ್ಲಿಯೇ ಮಹತಿ ಕುಲೇ–ದೊಡ್ಡ ವಂಶದಲ್ಲಿ ಲಂಭಿತಾಂ= ಬಂದಿದ್ದ ಅಪ್ರೌಢಾಂ–ಪ್ರೌಢೆಯಲ್ಲದ (ಯೌವನವನ್ನು ಹೊಂದದಿದ್ದ) ವಿಪ್ರಾಂ= ವ್ಯಭಿಚಾರಿಣಿಯಲ್ಲದ ಸಾಧ್ವಿಯಾದ ಸ್ವಾಂ ಭಾರ್ಯಾಂ–ತನ್ನ ಹೆಂಡತಿಯನ್ನು ವಿಸಸರ್ಜ–ಸಂಪೂರ್ಣವಾಗಿ ಬಿಟ್ಟನು. 'ವಿಪ್ರಾ ಚಾವ್ಯಭಿಚಾರಿಣೀ' || ೬೫ ||

ಇತಸ್ತತಶ್ಲೋಪನಿನ್ಯೇ ನ್ಯಾಯತೋಽನ್ಯಾಯತೋ ಧನಮ್ ।
ಬಭಾರಾಸ್ಯಾಃ ಕುಟುಂಬಿನ್ಯಾಃ ಕುಟುಂಬಂ ಮಂದಧೀರಯಮ್ ||

ಈ ಮಂದಧೀಃ–ಮಂದಬುದ್ಧಿಯು ಇತಸ್ತತಃ–ಈ ದೇಶದಿಂದ ಆ ದೇಶದಿಂದ ನ್ಯಾಯತಃ–ನ್ಯಾಯ ರೀತಿಯಲ್ಲಿ ಅನ್ಯಾಯತಃ–ಅನ್ಯಾಯ ರೀತಿಯಲ್ಲಿ ಹಣವನ್ನು ಉಪನಿನ್ಯೇ=ತಂದನು. ಚ–ಮತ್ತು ಕುಟುಂಬಿನ್ಯಾಃ–ಮಕ್ಕಳು ಮುಂತಾದ ಕುಟುಂಬಯುಕ್ತಳಾಗಿದ್ದ ಅಸ್ಯಾಃ–ಈ ದಾಸಿಯ ಕುಟುಂಬವನ್ನು ಬಭಾರ= ರಕ್ಷಿಸಿದನು. || ೬೬ ||

ಯದಸೌ ಶಾಸ್ತ್ರಮುಲ್ಲಂಘ್ಯ ಸ್ವೈರಚಾರ್ಯಾರ್ಯಗರ್ಹಿತಃ ।
ಅವರ್ತತ ಚಿರಂ ಕಾಲಮಘಾಯುರಶುಚಿರ್ಮಲಾತ್ || ೬೭ ||

ತತ ಏನಂ ದಂಡಪಾಣೇಃ ಸಕಾಶಂ ಕೃತಕಿಲ್ಬಿಷಮ್
ನೇಷ್ಯಾಮೋಽಕೃತನಿರ್ವೇಶಂ ಯತ್ರ ದಂಡೇನ ಶುದ್ಧ್ಯತಿ || ೬೮ ||

ತೃಪ್ತನಾದನು. ಅಪ್ರೌಢೆಯೂ ಸಾಧ್ವಿಯೂ ಆಗಿದ್ದ, ದೊಡ್ಡವಂಶದಲ್ಲಿ ಉತ್ಪನ್ನ ಳಾಗಿದ್ದ ತನ್ನ ಹೆಂಡತಿಯನ್ನು ಈ ಪಾಪಿಯು ಸ್ವಲ್ಪ ಕಾಲದಲ್ಲಿಯೇ ತ್ಯಜಿಸಿದನು. ಇವನ ಮನಸ್ಸು ಆ ವ್ಯಭಿಚಾರಿಣಿಯ ಕುಡಿನೋಟದಿಂದ ತತ್ತರಿಸಿಹೋಗಿತ್ತು. ಈ ಮಂದಬುದ್ಧಿಯು ಎಲ್ಲೆಡೆಯಿಂದಲೂ ನ್ಯಾಯವಾಗಿಯೋ ಅನ್ಯಾಯವಾಗಿಯೋ ಹಣವನ್ನು ಸಂಪಾದಿಸಿ ತಂದು ಆ ಕುಲಟೆಯ ಕುಟುಂಬವನ್ನು ಪೋಷಿಸುತ್ತ ಬಂದನು.

'ಹೀಗೆ ಶಾಸ್ತ್ರವನ್ನು ಅತಿಕ್ರಮಿಸಿ ನಿರಂಕುಶವಾಗಿ ಜೀವನ ನಡೆಸಿದ ಇವನು ಆರ್ಯರಿಂದ ಗರ್ಹಿತನಾಗಿರುವನು. ರಾಗಾದಿ ದೋಷಗಳಿಂದ ಅಶುಚಿ

ಸ್ವೈರಚಾರೀ–ಶಾಸ್ತ್ರವಿಧಿಯನ್ನು ಬಿಟ್ಟು ನಿರಂಕುಶನಾಗಿ ಇದ್ದ. ಆದ್ದರಿಂದಲೇ ಆರ್ಯಗರ್ಹಿತಃ–ಜ್ಞಾನಿಗಳಿಂದ ನಿಂದ್ಯನಾದ ಮಲಾತ್–ರಾಗಾದಿ ದೋಷಗಳಿಂದ ಅಶುಚಿಯಾದ ಅಸೌ=ಇವನು ಯತ್–ಯಾವ ಕಾರಣದಿಂದ ಅಘಾಯುಃ (ಸ್ಸ)= ಪಾಪಜೀವನನಾಗಿ ಚಿರಂ ಕಾಲಂ=ಬಹು ವರ್ಷಗಳು ಆವರ್ತತ=ಇದ್ದನೋ ತತಃ– ಆ ಕಾರಣದಿಂದ ಕೃತಕಿಲ್ಬಿಷಂ=ಪಾಪಮಾಡಿದ ಅಕೃತನಿರ್ವೇಶಂ–ಪಾಪಶುದ್ಧಿಗೆ ತಕ್ಕಷ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳದ ಏನಂ=ಈ ಪಾಪಿಯನ್ನು ದಂಡಪಾಣೇಃ– ಯಮರಾಜರ ಸಕಾಶಂ–ಸಮೀಪಕ್ಕೆ ನೇಷ್ಯಾಮಃ–ಎಳೆದುಕೊಂಡು ಹೋಗುವೆವು. ಯತ್ರ=ಯಾವ ಈ ಯಮಪಟ್ಟಣಕ್ಕೆ (ನೀತಃ)–ಕರೆದುಕೊಂಡು ಹೋಗಲ್ಪಟ್ಟ ಇವನು ದಂಡೇನ=ಯಮದೂತರು ಕೊಟ್ಟ ಶಿಕ್ಷೆಯಿಂದ ಶುದ್ಧ್ಯತಿ–ಶುದ್ಧ ನಾಗುವನು. ಆದ್ದರಿಂದ ಇವನ ಹಿತಕ್ಕಾಗಿಯೇ ನಾವು ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಅಭಿಪ್ರಾಯ. || ೬೭, ೬೮ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಪ್ರಥಮೋಽಧ್ಯಾಯಃ

ಅಥ ದ್ವಿತೀಯೋಽಧ್ಯಾಯಃ

ಶ್ರೀ ಬಾದರಾಯಣಿರುವಾಚ—

ಏತತ್ತೇ ಭಗವದ್ದೂತಾ ಯಮದೂತಾಭಿಭಾಷಿತಮ್ ।
ಉಪಧಾರ್ಯಾಥ ತಾನ್ ರಾಜನ್ ಪ್ರತ್ಯಾಹುರ್ನಯಕೋವಿದಾಃ ॥

ಶ್ರೀಹರಿಯ ನಾಮವನ್ನು ಭಕ್ತಿಯಿಂದ ಕೀರ್ತನಮಾಡುವುದರ ಮಹಿಮೆಯನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ. ಇದಕ್ಕಾಗಿ ವಿಷ್ಣುದೂತರು ಯಮದೂತರನ್ನು ಕುರಿತು ಉಪೋದ್ಘಾತವನ್ನು ರಚಿಸುತ್ತಾರೆ ಎಂದು ಹೇಳುತ್ತಾರೆ. ರಾಜನ್=

ಯಾಗಿರುವನು. ಪಾಪಜೀವನನಾದ ಇವನು ಬಹು ವರ್ಷಗಳು ಹೀಗೆ ಜೀವನ ನಡೆಸಿರುವನು. ಆದ್ದರಿಂದ ಪಾಪಮಾಡಿದ ಇವನನ್ನು ದಂಡಪಾಣಿಯ ಸಮೀಪಕ್ಕೆ ಸೆಳೆದೊಯ್ಯುತ್ತಿದ್ದೇವೆ. ಪಾಪಕ್ಕೆ ತಕ್ಕಷ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳದ ಇವನು ಅಲ್ಲಿ ಶಿಕ್ಷೆಗೆ ಒಳಪಟ್ಟು ಶುದ್ಧನಾಗುವನು.'

ಎರಡನೆಯ ಅಧ್ಯಾಯ

ಶ್ರೀ ಶುಕಾಚಾರ್ಯರು—ರಾಜ್ಞ, ವಿಷ್ಣುದೂತರು ಪ್ರಾಯಶ್ಚಿತ್ತ ಶಾಸ್ತ್ರದ ನ್ಯಾಯಗಳ ರಹಸ್ಯವನ್ನು ಬಲ್ಲವರು. ಅವರು ಯಮದೂತರ ಮಾತನ್ನು ಕೇಳಿ ಅವರಿಗೆ ಉತ್ತರ ಕೊಡುತ್ತ ಬಂದರು. 'ಆಹಾ! ಧರ್ಮಜ್ಞರಾದ ಸಜ್ಜನರ ಸಭೆಗೂ

ಪರೀಕ್ಷಿದ್ರಾಜನೇ, ನಯಕೋವಿದಾಃ=ಪ್ರಾಯಶ್ಚಿತ್ತಶಾಸ್ತ್ರದ ನ್ಯಾಯಗಳ ರಹಸ್ಯವನ್ನು ಚನ್ನಾಗಿ ತಿಳಿದಿರುವ ತೇ ಭಗವದ್ದೂತಾಃ=ಆ ವಿಷ್ಣುದೂತರು ಏತತ್=ಈ ಯಮದೂತರ ಅಭಿಭಾಷಿತಂ=ಮಾತನ್ನು ಉಪಧಾರ್ಯ=ಕೇಳಿ ಅಥ=ಅದೆಲ್ಲಕ್ಕೂ ಕ್ಕೆರ್ತಾ ಪ್ರತ್ಯಾಹುಃ=ಅವರಿಗೆ ಉತ್ತರ ಕೊಟ್ಟರು. ‖ ೧ ‖

ವಿಷ್ಣುದೂತಾ ಊಚುಃ—

ಅಹೋ ಕಷ್ಟಂ ಧರ್ಮದೃಶಾಮಧರ್ಮಃ ಸ್ಪೃಶತೇ ಸತಾ(ಭಾ)ಮ್
ಯತ್ರಾದಂಡ್ಯೇಷ್ವಪಾಪೇಷು ದಂಡೋ ಯೈರ್ಧ್ರಿಯತೇ ವೃಥಾ ‖

ಯತ್ರ=ಯಾವ ಧರ್ಮಜ್ಞಾನಿಗಳ ಸಭೆಯಲ್ಲಿ ಯೈಃ=ಯಾವ ಧರ್ಮಜ್ಞಾನಿಗಳಿಂದ ಅದಂಡ್ಯೇಷು=ಶಿಕ್ಷೆಗೆ ಅನರ್ಹರಾದ ಅಪಾಪೇಷು=ಪಾಪಿಗಳಲ್ಲದವರಲ್ಲಿ ವೃಥಾ = ನಿಷ್ಕಾರಣವಾಗಿ ದಂಡಃ ಧ್ರಿಯತೇ=ಶಿಕ್ಷೆಯು ವಿಧಿಸಲಾಗುತ್ತಿದೆಯೋ ಆ ಕಾರಣದಿಂದ (ತೇಷಾಂ) ಧರ್ಮದೃಶಾಂ=ಆ ಧರ್ಮಜ್ಞಾನಿಗಳಾದ ಸತಾಂ=ಸಜ್ಜನರ (ಸಭಾಂ)=ಸಭೆಯನ್ನು ಅಧರ್ಮಃ ಸ್ಪೃಶತೇ=ಅಧರ್ಮವು ಆಶ್ರಯಿಸುತ್ತಿದೆ. ಅಹೋ=ಆಶ್ಚರ್ಯವು! ಕಷ್ಟಂ=ಅನ್ಯಾಯವು! ‖ ೨ ‖

ಪ್ರಜಾನಾಂ ಪಿತರೋ ಯೇ ಚ ಶಾಸ್ತಾರಃ ಸಾಧವಃ ಸಮಾಃ ।
ಯದಿ ಸ್ಯಾತ್ತೇಷು ವೈಷಮ್ಯಂ ಕಂ ಯಾಂತಿ ಶರಣಂ ಪ್ರಜಾಃ ‖ ೩ ‖

ಯೇ = ಯಾವ ಸಾಧುಗಳು ಪ್ರಜೆಗಳ ಪಿತರಃ = ತಂದೆಯಂತೆ ಪಾಲಕರೋ ಶಾಸ್ತಾರಃ = ಶಾಸಕರೋ ಸಮಾಃ = ಶಿಕ್ಷಾರ್ಹರಿಗೆ ಮಾತ್ರ ಶಿಕ್ಷೆ ಕೊಡುವರೋ ತೇಷು=ಆ ಸಾಧುಗಳಲ್ಲಿಯೇ ವೈಷಮ್ಯಂ=ಶಿಕ್ಷಾನರ್ಹರಿಗೂ ಶಿಕ್ಷೆ ವಿಧಿಸುವಿಕೆಯೆಂಬ ವಿಷಮತೆಯು ಯದಿ ಸ್ಯಾತ್=ಉಂಟಾದಲ್ಲಿ ಪ್ರಜೆಗಳು ಕಂ=ಮತ್ತೆ ಯಾರನ್ನು ತಾನೇ ಶರಣಂ=ರಕ್ಷಕರನ್ನಾಗಿ ಯಾಂತಿ=ಹೊಂದುವರು? ‖ ೩ ‖

ಯದ್ಯದಾಚರತಿ ಶ್ರೇಯಾನಿತರಸ್ತತ್ತದೀಹತೇ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ‖ ೪ ‖

ಅಧರ್ಮದ ಸ್ಪರ್ಶವೇ! ಅನ್ಯಾಯ! ಪಾಪಿಗಳಲ್ಲದವರಿಗೆ-ಆದ್ದರಿಂದಲೇ ಶಿಕ್ಷಾನರ್ಹರಿಗೆ-ಇಂತಹ ಸಭೆಯಲ್ಲಿ ಧರ್ಮಜ್ಞರಿಂದ ನಿಷ್ಕಾರಣವಾಗಿ ಶಿಕ್ಷೆಯು ವಿಧಿಸಲ್ಪಡುತ್ತಿದೆಯಲ್ಲ!! ತಂದೆಗಳಂತೆ ಪ್ರಜೆಗಳ ಪಾಲಕರೂ ಶಾಸಕರೂ ನಿಷ್ಪಕ್ಷಪಾತಿಗಳೂ ಆದ ಸಾಧುಗಳಲ್ಲಿಯೇ ಇಂತಹ ವಿಷಮತೆಯು ತಲೆದೋರುವುದಾದರೆ ಪ್ರಜೆಗಳು ಯಾರನ್ನು ಶರಣು ಹೊಂದಬೇಕು? ಉತ್ತಮರು ಮಾಡಿದುದನ್ನು ಕನಿಷ್ಠರು ಅನುಸರಿಸುವರು. ಉತ್ತಮರಿಗೆ ಪ್ರಮಾಣವಾದುದೇ ಕನಿಷ್ಠರಿಗೂ ಪ್ರಮಾಣವು. ಉತ್ತಮರ ಆಚರಣೆಯೇ ಕನಿಷ್ಠರಿಗೆ ಪ್ರಮಾಣ. ಉತ್ತಮರೇ ಅಧರ್ಮ ಮಾಡಿದಲ್ಲಿ ಅಧಮರು ಅದೇ ಧರ್ಮವೆಂಬ ಭ್ರಾಂತಿಯಿಂದ ಮಾಡುತ್ತ

ಶ್ರೇಯರ್ಾ=ಶ್ರೇಷ್ಠರಾದವರು ಯದ್ಯತ್=ಏನೇನನ್ನು ಆಚರತಿ=ಮಾಡುವರೋ ಇತರಃ=ಕನಿಷ್ಠರಾದವರು ತತ್ತತ್=ಅದದನ್ನೇ ಈಹತೇ=ಮಾಡಬಯಸುವರು. ಸಃ=ಶ್ರೇಷ್ಠರು ಯತ್(ವಾಕ್ಯಂ)=ಯಾವ ವಾಕ್ಯವನ್ನು ಪ್ರಮಾಣವೆಂದು ಕುರುತೇ=ಒಪ್ಪಿ ನಡೆಯುವರೋ ಲೋಕಃ=ಜನವು ತತ್=ಅದೇ ವಾಕ್ಯವನ್ನೇ ಅನುವರ್ತತೇ = ಅನುಸರಿಸುವರು. ಅಥವಾ ಯತ್ = ಯಾವುದನ್ನು ಕುರುತೇ= ಮಾಡುವರೋ ಜನವು ತತ್ = ಅದನ್ನು ಪ್ರಮಾಣಂ ಇತಿ = ಪ್ರಮಾಣವೆಂದು ಅನುಸರಿಸುವರು. ಅವರು ಮಾಡಿದ್ದು ಅಧರ್ಮವಾದರೂ ಇತರರೂ ಅದನ್ನೇ ಧರ್ಮವೆಂಬ ಭ್ರಾಂತಿಯಿಂದ ಮಾಡುವರು. ಬಹಳ ಅನ್ಯಾಯ ಎಂದು ತಾತ್ಪರ್ಯ. || ೪ ||

ಯಸ್ಯಾಂಕೇ ಶಿರ ಆಧಾಯ ಲೋಕಃ ಸ್ವಪಿತಿ ನಿರ್ವೃತಃ ।
ಸ್ವಯಂ ಧರ್ಮಮಧರ್ಮಂ ವಾ ನಹಿ ವೇದ ಯಥಾ ಪಶುಃ || ೫ ||
ಸ ಕಥಂ ನ್ಯರ್ಪಿತಾತ್ಮಾನಂ ಕೃತಮೈತ್ರಮಚೇತನಮ್ ।
ವಿಸ್ರಂಭಣೀಯೋ ಭೂತಾನಾಂ ಸಘೃಣೋ ದ್ರೋಗ್ಧುಮರ್ಹತಿ ||

ವಿಶ್ವಾಸಘಾತುಕತನದಿಂದಲೂ ಮಹಾಕಷ್ಟವೆಂದು ಹೇಳುತ್ತಾರೆ. ಸ್ವಯಂ= ಮತ್ತೊಬ್ಬರ ಉಪದೇಶವಿಲ್ಲದೆ ಪಶುಃ ಯಥಾ=ಪೂರ್ವ ಪಶ್ಚಿಮ ದಿಕ್ಕೆಂದು ತಿಳಿಯದಿರುವ ಪಶುವಿನಂತೆ ಧರ್ಮ ಅಧರ್ಮವನ್ನು ಯಾವ ಜನವು ನಹಿ ವೇದ= ತಿಳಿಯದೋ ಆ ಜನವು ಯಸ್ಯ ಅಂಕೇ=ಯಾವ ಶ್ರೇಷ್ಠನ ತೊಡೆಯಲ್ಲಿ ಶಿರಃ= ತಲೆಯನ್ನು ಆಧಾಯ ಇಟ್ಟು ನಿರ್ವೃತಃ=ನಿಶ್ಚಿಂತನಾಗಿ ಸ್ವಪಿತಿ=ಮಲಗಿರುವುದೋ (ಧರ್ಮಜ್ಞನೆಂದು ಯಾರನ್ನು ನಂಬಿದೆಯೋ) ಭೂತಾನಾಂ = ಪ್ರಾಣಿಗಳಿಗೆ ವಿಸ್ರಂಭಣೀಯಃ=ವಿಶ್ವಾಸಾರ್ಹನಾದ ಸಘೃಣಃ=ಪರಕ್ಲೇಶವನ್ನು ನೋಡಿ ಮನಕರಗುವ ಸಃ=ಆ ಶ್ರೇಷ್ಠನು (ಪ್ರಮಾಣಭೂತನಾದ ಜ್ಞಾನಿಯು) ಅರ್ಪಿತಾತ್ಮಾನಂ= ತನ್ನಲ್ಲಿಯೇ ಸರ್ವಸ್ವವನ್ನೂ ಒಪ್ಪಿಸಿರುವ ಕೃತಮೈತ್ರಂ=ತನ್ನನ್ನೇ ಸ್ನೇಹಿತನೆಂದು ನಂಬಿರುವ ಅಚೇತನಂ=ಅಜ್ಞಾನಿಯನ್ನು ಕಥಂ ಹಿ=ಹೇಗೆ ತಾನೇ ದ್ರೋಗ್ಧುಂ= ಮೋಸಪಡಿಸಲು ಅರ್ಹತಿ=ಅರ್ಹನಾಗುವನು? ಧರ್ಮದ ವಿಷಯದಲ್ಲಿ ಇವನೇ

ಹೋದರೆ ಬಹಳ ಅನ್ಯಾಯವೇ ಆಗುವುದು. ಉಪದೇಶವಿಲ್ಲದೆ ಧರ್ಮಾಧರ್ಮಗಳನ್ನು ತಿಳಿಯಲಾಗದ ಜನರು ಪಶುವಿನಂತಿರುವರು. ಇಂತಹ ಅಜ್ಞರು ಶ್ರೇಷ್ಠರನ್ನೇ ಧರ್ಮಿಷ್ಠರೆಂದು ನಂಬಿ ನಿಶ್ಚಿಂತರಾಗಿರುವರು. ಹೀಗೆ ಪಾಮರರ ವಿಶ್ವಾಸಕ್ಕೆ ಪಾತ್ರರಾದ ಕರುಣಿಗಳಾದ ಜ್ಞಾನಿಗಳು ತಮ್ಮಲ್ಲಿಯೇ ಸರ್ವಸ್ವವನ್ನೂ ಒಪ್ಪಿಸಿರುವ, ತಮ್ಮನ್ನೇ ಸ್ನೇಹಿತರೆಂದು ನಂಬಿರುವ ಅಜ್ಞಾನಿಗೆ ದ್ರೋಹ ವೆಸಗಬಹುದೇ?

ಪ್ರಮಾಣವೆಂದು ನಂಬಿರುವ ಅಜ್ಞಾನಿಗಳಿಗೆ ತಾನು ಅಧರ್ಮವಮಾಡಿ ಅದೇ ಧರ್ಮ ವೆಂದು ಮೋಸಮಾಡುವುದು ಮಹಾ ಅನ್ಯಾಯವೆಂದು ತಾತ್ಪರ್ಯ. || ೫, ೬ ||

ಅಯಂ ಹಿ ಕೃತನಿರ್ವೇಶೋ ಜನ್ಮಕೋಟ್ಯಂಹಸಾಮಪಿ ।
ಯದ್ವ್ಯಾಜಹಾರ ವಿವಶೋ ನಾಮ ಸ್ವಸ್ತ್ಯಯನಂ ಹರೇಃ ॥ ೭ ॥

'ಅಕೃತ ನಿರ್ವೇಶಂ' ಎಂದು ಹೇಳಿದುದಕ್ಕೆ ಉತ್ತರ ಕೊಡುತ್ತಾರೆ. ಅಯಂ– ಈ ಅಜಾಮಿಳನು ಯತ್–ಯಾವ ಕಾರಣದಿಂದ ವಿವಶಃ (ಸನ್)=ಭಕ್ತಿಪರವಶನಾಗಿ ಸ್ವಸ್ತ್ಯಯನಂ=ಮೋಕ್ಷಕ್ಕೂ ಸಾಧನವಾದ ಹರೇಃ ನಾಮ=ಶ್ರೀಹರಿಯ ಹೆಸರನ್ನು ವ್ಯಾಜಹಾರ=ಉಚ್ಚರಿಸಿದನೋ (ತತ್)–ಆ ಕಾರಣದಿಂದ ಜನ್ಮಕೋಟ್ಯಂಹಸಾ- ಮಪಿ=ಈ ಜನ್ಮದ್ದಷ್ಟೇ ಅಲ್ಲ, ಅನೇಕ ಕೋಟಿ ಜನ್ಮಗಳ ಪಾಪಗಳಿಗೂ ಕೃತ- ನಿರ್ವೇಶಃ=ಪ್ರಾಯಶ್ಚಿತ್ತವನ್ನು ಮಾಡಿಕೊಂಡಿರುವನು. ಹಿ–ಯಮದೂತರನ್ನು ನೋಡಿ ಮಗನ ಹೆಸರಾಗಿಟ್ಟದ್ದ ನಾರಾಯಣನಾಮವನ್ನು ಸ್ಮರಿಸಿ ಈ ನಾಮಕ್ಕೆ ಶ್ರೀಹರಿಯೇ ಮುಖ್ಯಾರ್ಥವೆಂದು ಹಿಂದಿನ ಪುಣ್ಯವಶದಿಂದ ಕೂಡಲೇ ಜ್ಞಾನವು ಬಂದು ಭಕ್ತಿಯೂ ಉತ್ಪನ್ನವಾಗಿ ಅದಕ್ಕೆ ವಶನಾಗಿರುವನು. ಏಕೆಂದರೆ 'ಅಭಕ್ತ್ಯೋ ದಾಹೃತಂ ನೈವ ಫಲದಾತೃ ಭವಿಷ್ಯತಿ' ಭಕ್ತಿಯಿಲ್ಲದೆ ಉಚ್ಚರಿಸಿದ್ದು ಫಲದಾಯಕ ವಲ್ಲ. 'ಸ್ವಸ್ತ್ಯಯನಂ' ಎಂದು ಹೇಳಿದ್ದರಿಂದ ಶ್ರೀಹರಿಯ ಹೆಸರು ಪ್ರಾಯಶ್ಚಿತ್ತ ವಷ್ಟೇ ಅಲ್ಲ, ಮೋಕ್ಷಕ್ಕೂ ಕಾರಣವೆಂದು ತೋರಿಸಿರುವರು. ಇದರಿಂದ ಇವನು ಮೋಕ್ಷಸಾಧನವನ್ನೂ ಮಾಡಿಕೊಂಡಿರುವನೆಂದು ಹೇಳಿದಂತಾಯಿತು. 'ಆಪನ್ನಃ ಸಂಸೃತಿಂ ಘೋರಾಂ ಯನ್ನಾಮ ವಿವಶೋ ಗೃಣನ್ | ತತಃ ಸದ್ಯೋ ವಿಮುಚ್ಯೇತ ಯಂ ಬಿಭೇತಿ ಸ್ವಯಂ ಭವಃ' ಎಂಬ ಪ್ರಮಾಣವು ಈ ವಿಷಯವನ್ನು ಸಮರ್ಥಿಸು ವುದು. || ೭ ||

ಏತೇನೈವ ಹ್ಯಘೋ ನೋ(ನಾ)ಽಸ್ಯ ಕೃತಂ ಸ್ಯಾದಘನಿಷ್ಕೃತಮ್ ।
ಯದಾ ನಾರಾಯಣ ಇತಿ ಜಗಾದ ಚತುರಕ್ಷರಮ್ ॥ ೮ ॥

ವಿಶ್ವಾಸ ಹುಟ್ಟಿಸುವುದಕ್ಕಾಗಿ ಹೇಳಿದ ವಿಷಯವನ್ನೇ ದೃಢಪಡಿಸುತ್ತಾರೆ. ಅಯಂ= ಈ ಅಜಾಮಿಳನು ಚತುರಕ್ಷರಂ– ನಾಲ್ಕು ಅಕ್ಷರಗಳುಳ್ಳ ನಾರಾಯಣ ಎಂಬ ಯತ್–ಯಾವ ಶ್ರೀಹರಿಯ ಹೆಸರನ್ನು ಆಜಗಾದ=ಭಕ್ತಿಯಿಂದ ಉಚ್ಚರಿಸಿ ದನೋ ಏತೇನ ಏವ=ಪ್ರಧಾನವಾದ ಈ ಭಗವನ್ನಾಮೋಚ್ಚಾರಣೆಯಿಂದಲೇ ಅಸ್ಯ=

'ಈ ಅಜಾಮಿಳನು ಭಕ್ತಿಪರವಶನಾಗಿ ಮೋಕ್ಷ ಮೊದಲಾದ ಎಲ್ಲ ಪುರುಷಾರ್ಥ ಗಳಿಗೂ ಸಾಧನವಾದ ಶ್ರೀ ಹರಿಯ ನಾಮವನ್ನು ಉಚ್ಚರಿಸಿರುವನು. ಆದ್ದರಿಂದ ಅನೇಕ ಕೋಟಿ ಜನ್ಮಗಳ ಪಾಪಗಳಿಗೂ ಪ್ರಾಯಶ್ಚಿತ್ತಮಾಡಿಕೊಂಡೇ ಇರುವನು ! ಇವನು ನಾಲ್ಕು ಅಕ್ಷರಗಳುಳ್ಳ ನಾರಾಯಣ ಎಂಬ ಹರಿನಾಮವನ್ನು ಭಕ್ತಿಯಿಂದ ಉಚ್ಚರಿಸಿದ್ದರಿಂದಲೇ ಇವನ ಪಾಪ ಪ್ರಾಯಶ್ಚಿತ್ತವು ಮಾಡಿದಂತಾಯಿತು. ಅಂದ

ಇವನ ಅಘ ನಿಷ್ಕೃತಂ=ಪಾಪ ಪ್ರಾಯಶ್ಚಿತ್ತವು ಕೃತಂ ಸ್ಯಾತ್=ಮಾಡಿದಂತಾಯಿತು. ಹಿ=ಆ ಕಾರಣದಿಂದ ಇವನಿಗೆ ಅಘಃ=ಪಾಪವು ನೋ=ಇಲ್ಲ. ಅಘ ಶಬ್ದವು ಸಕಾರಾಂತ ನಪುಂಸಕಲಿಂಗ ಮನಶ್ಶಬ್ದದಂತೆ. ಅಥವಾ ಅಘಃ ನಾ=ಪಾಪಿಯಾದ ಈ ಅಜಾಮಿಳನೆಂಬ ಪುರುಷನು ಯಾವ ಶ್ರೀಹರಿಯ ಹೆಸರನ್ನು ಉಚ್ಚರಿಸಿದನೋ ಅದರಿಂದಲೇ ಪಾಪ ಪ್ರಾಯಶ್ಚಿತ್ತವಾಯಿತು ಎಂದಾದರೂ ಅರ್ಥ. ಪಾಪಿಯಲ್ಲದವನನ್ನು ದಂಡಕ್ಕೆ ಗುರಿಪಡಿಸುತ್ತಿರುವರೆಂದೇ ನಮ್ಮ ಈ ಆಕ್ರೋಶವೆಂದು ಹೇಳಿದಂತಾಯಿತು. || ೮ ||

ಸ್ತೇನಃ ಸುರಾಪೋ ಮಿತ್ರಧ್ರುಕ್ ಬ್ರಹ್ಮಹಾ ಗುರುತಲ್ಪಗಃ |
ಸ್ತ್ರೀ-ರಾಜ-ಪಿತೃ-ಗೋಹಂತಾ ಯೇ ಚ ಪಾತಕಿನೋಽಪರೇ || ೯ ||
ಸರ್ವೇಷಾಮಪ್ಯಘವತಾಮಿದಮೇವ ಸುನಿಷ್ಕೃತಮ್ |
ನಾಮವ್ಯಾಹರಣಂ ವಿಷ್ಣೋರ್ಯತಸ್ತದ್ವಿಷಯಾ ಮತಿಃ || ೧೦ ||

ಹರಿನಾಮ ಕೀರ್ತನೆಯು ದಾಸೀ ಸಂಗದಿಂದ ಪ್ರಾಪ್ತವಾದ ಪಾಪವನ್ನಷ್ಟೇ ಪರಿಹರಿಸುವುದಲ್ಲ. ಕಳ್ಳತನ ಮೊದಲಾದವುಗಳಿಂದ ಬಂದ ಎಲ್ಲ ಪಾಪಗಳನ್ನೂ ಹೋಗಲಾಡಿಸುವುದೆಂದು ಹೇಳುತ್ತಾರೆ. ಸ್ತೇನಃ=ಕಳ್ಳ, ಸುರಾಪಃ=ಮದ್ಯಪಾನ ಮಾಡುವವನು, ಮಿತ್ರಧ್ರುಕ್=ಸ್ನೇಹಿತನಿಗೆ ದ್ರೋಹಮಾಡುವವ, ಬ್ರಹ್ಮಹಾ=ಬ್ರಹ್ಮಹತ್ಯೆಗಾರ ಗುರುತಲ್ಪಗಃ=ಗುರುಗಳ ಹೆಂಡತಿಯನ್ನು ಸೇರುವವ, ಸ್ತ್ರೀ ಹಂತಕ, ರಾಜಹಂತಕ, ಪಿತೃಹಂತಕ, ಗೋಹಂತಕ, ಅಪರೇ=ಇನ್ನೂ ಇತರ ಯೇ ಪಾತಕಿನಃ ಚ=ಯಾವ ಪಾಪಿಗಳುಂಟೋ ಈ ಎಲ್ಲ ಪಾಪಿಗಳಿಗೂ ಯತಃ=ಯಾವ ನಾಮದ ಉಚ್ಚಾರಣೆಯಿಂದ ತದ್ವಿಷಯಾ=ಶ್ರೀ ಹರಿವಿಷಯಕವಾದ ಮತಿಃ=ಬುದ್ಧಿಯು (ಭವತಿ)=ಉಂಟಾಗುವುದೋ ಭಕ್ತಿಯು ಹುಟ್ಟುವುದೋ ಅಂತಹ ಶ್ರೀ ಹರಿಯ ನಾಮವ್ಯಾಹರಣಂ=ನಾಮೋಚ್ಚಾರಣೆ ಇದಂ ಏವ=ಎಂಬ ಇದೇಯೋ ಸುನಿಷ್ಕೃತಂ=ಸಂಪೂರ್ಣ ಪಾಪಪರಿಹಾರಕ ಪ್ರಾಯಶ್ಚಿತ್ತವು. ತದ್ವಿಷಯಾ ಎಂದು ಹೇಳಿದ್ದರಿಂದ ಭಕ್ತಿಪೂರ್ವಕ ಉಚ್ಚಾರಣೆಯೇ ಪಾಪಪರಿಹಾರಕವೆಂದು ತಿಳಿಸಿರುವರು. ಯತಃ=ಯಾವ ಉಚ್ಚಾರಣೆಯಿಂದ ವಿಷ್ಣೋಃ=ಶ್ರೀ ಹರಿಗೆ ತದ್ವಿಷಯಾ=ಇವನು ನನ್ನವನು. ಇವನನ್ನು ನಾನು ರಕ್ಷಿಸಬೇಕು ಎಂದು ಉಚ್ಚರಿಸುವ ಪುರುಷನ ವಿಷಯಕವಾದ ಮತಿಃ=ಮನಸ್ಸು ಬರುವುದೋ ಎಂದೂ ಅರ್ಥ ಮಾಡಿರುವು

ಮೇಲೆ ಇವನಿಗೆ ಈಗ ಪಾಪವಿಲ್ಲ. ಕಳ್ಳ, ಮದ್ಯಪ, ಮಿತ್ರದ್ರೋಹಿ, ಬ್ರಹ್ಮಹಂತಕ, ಗುರುತಲ್ಪಗಾಮಿ, ಸ್ತ್ರೀ-ರಾಜ-ಪಿತೃ-ಗೋವುಗಳ ಹಂತಕ, ಬೇರೆ ಪಾಪ ಮಾಡಿದವರು—ಈ ಎಲ್ಲ ಪಾಪಿಗಳಿಗೂ ಭಕ್ತಿಯಿಂದ ಶ್ರೀ ಹರಿನಾಮೋಚ್ಚಾರಣೆಯೊಂದೇ-ಇದುವೇ-ಪಾಪ ಪರಿಹಾರಕ ಪ್ರಾಯಶ್ಚಿತ್ತವು. ಆ ಉಚ್ಚಾರಣೆಯಿಂದ ಶ್ರೀ ಹರಿಯಲ್ಲಿ ಭಕ್ತಿಯು ವ್ಯಕ್ತವಾಗಬೇ[illegible]ತಹ ಉಚ್ಚಾರಣೆಯೇ ಪ್ರಾಯಶ್ಚಿತ್ತ.

ದುಂಟು. ಇದರಿಂದ ಬುದ್ಧಿಪೂರ್ವಕ ಮಾಡಿದ, ಸಾವಿರಾರು ಸಲ ಮಾಡಿದ, ಬೇರೆ ಪ್ರಾಯಶ್ಚಿತ್ತಗಳಿಂದ ಕಳೆದುಕೊಳ್ಳಲಾಗದಿರುವ ಎಲ್ಲ ಪಾಪಗಳಿಗೂ ಇದೊಂದೇ ಪ್ರಾಯಶ್ಚಿತ್ತವೆಂದು ಹೇಳಿದಂತಾಯಿತು. || ೯, ೧೦ ||

ನ ನಿಷ್ಕೃತೈರುದಿತೈರ್ಬ್ರಹ್ಮವಾದಿಭಿಸ್ತಥಾ
ವಿಶುದ್ಧ್ಯತ್ಯಘವಾನ್ ವ್ರತಾದಿಭಿಃ ।
ಯಥಾ ಹರೇರ್ನಾಮ ಪದೈರುದಾಹೃತೈ-
ಸ್ತದುತ್ತಮಶ್ಲೋಕ ಗುಣೋಪಲಂಭಕಮ್ || ೧೧ ||

ಭಕ್ತಿಯಿಂದ ಭಗವನ್ನಾಮೋಚ್ಚಾರಣೆಯೇ ಶ್ರೇಷ್ಠವಾದ ಪ್ರಾಯಶ್ಚಿತ್ತವೆಂದು ಉಪಪಾದಿಸುತ್ತಾರೆ. ಅಘವಾನ್–ಪಾಪಿಯು ಯಥಾ–ಹೇಗೆ ಉದಾಹೃತೈಃ–ಭಕ್ತಿಯಿಂದ ಉಚ್ಚರಿಸಿದ ಹರೇಃ ನಾಮಪದೈಃ–ಶ್ರೀ ಹರಿಯ ನಾಮಗಳಿಂದ ವಿಶುದ್ಧ್ಯತಿ–ಸಂಪೂರ್ಣವಾಗಿ ಶುದ್ಧನಾಗುವನೋ ತಥಾ–ಹಾಗೆ ಬ್ರಹ್ಮವಾದಿಭಿಃ–ವೇದವಾದಿಗಳಿಂದ ಉದಿತೈಃ–ಹೇಳಲ್ಪಟ್ಟ ವ್ರತಾದಿಭಿಃ–ಕೃಚ್ಛ್ರ, ಚಾಂದ್ರಾಯಣ ಮೊದಲಾದ ವ್ರತಗಳೆಂಬ ನಿಷ್ಕೃತೈಃ–ಪ್ರಾಯಶ್ಚಿತ್ತಗಳಿಂದ ನ ವಿಶುದ್ಧ್ಯತಿ–ಶುದ್ಧನಾಗುವುದಿಲ್ಲ. ತತ್–ಶ್ರೀ ಹರಿನಾಮೋಚ್ಚಾರಣೆಯು ಉತ್ತಮ ಶ್ಲೋಕ ಗುಣೋಪಲಂಭಕಂ=ಶ್ರೇಷ್ಠ ಕೀರ್ತಿವಂತನಾದ ಪರಮಾತ್ಮನ ಜ್ಞಾನಾನಂದ ಮೊದಲಾದ ಗುಣಗಳನ್ನು ಅವನ ಪ್ರತಿಬಿಂಬರಾದ ಜೀವರಿಗೆ (ಸ್ಮರಣೆಗೆ) ತಂದು ಕೊಡುವುದು. ಕೃಚ್ಛ್ರಾದಿಗಳಂತೆ ಕೇವಲ ಪ್ರಾಯಶ್ಚಿತ್ತವಲ್ಲವೆಂದು ತಿಳಿಸಿದಂತಾಯಿತು. ನಾಮಭಿಃ ಎಂದು ಹೇಳದೆ ನಾಮಪದೈಃ ಎಂದು ಹೇಳಿದ್ದರಿಂದ ವಾಕ್ಯವಾಗಲು ಬೇಕಾದ ನಮಸ್ಕರಿಸುತ್ತೇನೆ ಇತ್ಯಾದಿ ಕ್ರಿಯಾಪದಗಳಿಲ್ಲದಿದ್ದರೂ ಎಲ್ಲ ಪಾಪನಿವರ್ತಕವಾದ ಶ್ರೀ ಹರಿಯ ನಾಮದ ಮಹಿಮೆಯು ಅತ್ಯಾಶ್ಚರ್ಯಕರವೆಂದು ಅಭಿಪ್ರಾಯಪಟ್ಟಿರುವರು. || ೧೧ ||

ನೈಕಾಂತಿಕಂ ತದ್ಧಿ ಕೃತೇಽಪಿ ನಿಷ್ಕೃತೇ
ಮನಃ ಪುನರ್ಧಾವತಿ ಚೇದಸತ್ಪಥೇ ।
ತತ್ಕರ್ಮ ನಿರ್ಹಾರಮಭೀಪ್ಸತಾಂ ಹರೇ-
ರ್ಗುಣಾನುವಾದಃ ಖಲು ಸತ್ತ್ವಭಾವನಃ || ೧೨ ||

ಆದರಿಂದ ಶ್ರೀಹರಿಗೆ ಇವನನ್ನು ಉದ್ಧರಿಸಬೇಕೆಂಬ ಮನವಾಗುವುದು. ಪಾಪಿಯು ಭಕ್ತಿಯಿಂದ ಉಚ್ಚರಿಸಿದ ಶ್ರೀ ಹರಿನಾಮಗಳಿಂದ ಸಂಪೂರ್ಣವಾಗಿ ಶುದ್ಧನಾಗುವಂತೆ ವೇದವಾದಿಗಳು ಹೇಳಿದ ಕೃಚ್ಛ್ರ ಚಾಂದ್ರಾಯಣ ಮೊದಲಾದ ವ್ರತಗಳೆಂಬ ಪ್ರಾಯಶ್ಚಿತ್ತಗಳಿಂದ ಸಂಪೂರ್ಣವಾಗಿ ಶುದ್ಧನಾಗುವುದಿಲ್ಲ. ಭಕ್ತಿಯಿಂದ ಮಾಡಿದ ಶ್ರೀ ಹರಿನಾಮೋಚ್ಚಾರಣೆಯು ಜೀವರಿಗೆ ಉತ್ತಮ ಕೀರ್ತಿವಂತನಾದ ಶ್ರೀ ಹರಿಯ ಜ್ಞಾನಾನಂದಾದಿ ಗುಣಗಳನ್ನು (ಸ್ಮರಣೆಗೆ) ತಂದುಕೊಡುವುದು. ಪ್ರಾಯಶ್ಚಿತ್ತ ಮಾಡಿಕೊಂಡಮೇಲೂ ಮನಸ್ಸು ಮತ್ತೆ ಪಾಪಕ್ಕೆಳಸುವುದಾದರೆ ಅದು ಸಂಪೂರ್ಣ

ಶ್ರೀ ಹರಿಯ ನಾಮಸಂಕೀರ್ತನೆಯಿಂದಲೇ ಪಾಪನಿರ್ಮೂಲನವೇ ಹೊರತು ತಪಸ್ಸು ಮೊದಲಾದವುಗಳಿಂದಲ್ಲವೆಂಬುದನ್ನು ಉಪಪಾದಿಸುತ್ತಾರೆ. (ಯಸ್ಮಿನ್)= ಯಾವ ನಿಷ್ಕೃತೇ=ಪ್ರಾಯಶ್ಚಿತ್ತವು (ವನ್ನು) ಕೃತೇ ಅಪಿ=ಮಾಡಿದರೂ ಮನಸ್ಸು ಮತ್ತೆ ಅಸತ್ಪಥೇ=ಪಾಪಮಾರ್ಗದಲ್ಲಿ ಧಾವತಿ ಚೇತ್=ಹೋಗುವುದಾದರೆ ತತ್= ಆ ಪ್ರಾಯಶ್ಚಿತ್ತವು ಐಕಾಂತಿಕಂ=ತಪ್ಪದೆ ಸಂಪೂರ್ಣ ಪಾಪಶೋಧಕವು ನಹಿ= ಅಲ್ಲವು. ತತ್=ಆ ಕಾರಣದಿಂದ ಕರ್ಮನಿರ್ಹಾರಂ=ಪಾಪಗಳ ಸಂಪೂರ್ಣ ನಾಶ ವನ್ನು ಅಭೀಪ್ಸತಾಂ=ಅಪೇಕ್ಷಿಸುವ ಜೀವರಿಗೆ ಶ್ರೀ ಹರಿಯ ಗುಣಾನುವಾದಃ= ನಾಮಕ್ಕೆ ಕಾರಣಗಳಾದ ಗುಣಗಳ ಅನುಸಂಧಾನಪೂರ್ವಕವಾದ ನಾಮೋಚ್ಚಾರಣೆ ಯು ಮಾತ್ರವೇ ಏಕಾಂತಿಕಃ=ನಿಯತವಾಗಿ ಪಾಪಪರಿಹಾರಕವು. (ಸಃ)=ಆ ಬಗೆಯ ನಾಮೋಚ್ಚಾರಣೆಯು ಸತ್ತ್ವಭಾವನಃ ಖಲು=ಅಂತಃಕರಣಶುದ್ಧಿಗೆ ಕಾರಣ ವಲ್ಲವೇ! ಮನಶ್ಶೋಧಕವೆಂದು ಪ್ರಸಿದ್ಧವು. ಹೀಗೆ ಹೇಳಿದ್ದರಿಂದ ಇದರಿಂದಲೂ ಮನಸ್ಸಿನ ದೋಷವು ನಾಶವಾಗದಿದ್ದಲ್ಲಿ ಮಿಕ್ಕ ಪ್ರಾಯಶ್ಚಿತ್ತಗಳಿಗಿಂತ ಇದಕ್ಕೆ ಏನೂ ವೈಶಿಷ್ಟ್ಯವಿಲ್ಲದೆ ಹೋಗುವುದೆಂಬ ಶಂಕೆಗೆ ಅವಕಾಶವಿಲ್ಲ. ಮನಶ್ಶುದ್ಧ ವಾಗುವುದರಿಂದ ಮನಸ್ಸು ಮತ್ತೆ ಪಾಪಮಾರ್ಗದಲ್ಲಿ ಹೋಗುವುದಿಲ್ಲವೆಂದು ಇದೇ ಉತ್ತಮ ಪ್ರಾಯಶ್ಚಿತ್ತವೆಂದರ್ಥ. || ೧೨ ||

ಅಥೈನಂ ಮಾಪನಯತ ಕೃತಾಶೇಷಾಘನಿಷ್ಕೃತಮ್ ।
ಯದಸೌ ಭಗವನ್ನಾಮ ಮ್ರಿಯಮಾಣಃ ಸಮಗ್ರಹೀತ್ || ೧೩ ||

ಭಗವನ್ನಾಮೋಚ್ಚಾರಣೆ ಮಾತ್ರವೇ ಪಾಪನಿವರ್ತಕವಲ್ಲ. ಮತ್ತೇನೆಂದರೆ, ಭಕ್ತಿಪೂರ್ವಕವಾದ ಅದು ಪಾಪನಿವರ್ತಕ. ಅಜಾಮಿಳನು ಹಾಗೆ ಉಚ್ಚರಿಸಿಲ್ಲ ವೆಂಬ ಆಶಂಕೆಯನ್ನು ಪರಿಹರಿಸುತ್ತಾರೆ. ಯತ್=ಯಾವ ಕಾರಣದಿಂದ ಅಸೌ= ಅಜಾಮಿಳನು ಮ್ರಿಯಮಾಣಃ=ಸಾಯುಲಿದ್ದವನು ಭಗವನ್ನಾಮ=ಶ್ರೀ ಹರಿಯ ಹೆಸರನ್ನು ಸಮಗ್ರಹೀತ್=ಭಕ್ತಿಯಿಂದ ಉಚ್ಚರಿಸಿದನೋ ಅಥ=ಆ ಕಾರಣದಿಂದ ಕೃತಾಶೇಷಾಘನಿಷ್ಕೃತಂ=ಎಲ್ಲ ಪಾಪಗಳ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿರುವ ಏನಂ=ಇವನನ್ನು ಮಾ ಅಪನಯತ=ನರಕಮಾರ್ಗದಿಂದ ಕರೆದುಕೊಂಡು ಹೋಗ ಬೇಡಿ. ಮ್ರಿಯಮಾಣಃ ಎಂದು ಹೇಳಿದ್ದರಿಂದ ಅಂತ್ಯಕಾಲದಲ್ಲಿ ಹರಿಸ್ಮರಣೆಯು ಜನ್ಮದ ಪರಮ ಲಾಭವೆಂದು ಸೂಚಿಸಿರುವರು. 'ಜನ್ಮಲಾಭಃ ಪರಃ ಪುಂಸಾಮಂತೇ ನಾರಾಯಣಸ್ಮೃತಿಃ' || ೧೩ ||

ಪಾಪಶೋಧಕವಲ್ಲ. ಆದ್ದರಿಂದ ಸಂಪೂರ್ಣ ಪಾಪಶುದ್ಧಿಯನ್ನು ಬಯಸುವವರಿಗೆ ಶ್ರೀ ಹರಿಗುಣಾನುಸಂಧಾನಪೂರ್ವಕ ನಾಮೋಚ್ಚಾರಣೆಯೊಂದೇ ಸಂಪೂರ್ಣ ಪಾಪ ಪರಿಹಾರಕ ಪ್ರಾಯಶ್ಚಿತ್ತ. ಏಕೆಂದರೆ, ಅದು ಅಂತಃಕರಣವನ್ನೇ ಶುದ್ಧಿ ಗೊಳಿಸುವುದು.

'ಸಾಯುಲಿದ್ದ ಇವನು ಶ್ರೀ ಹರಿನಾಮವನ್ನು ಭಕ್ತಿಯಿಂದ ಉಚ್ಚರಿಸಿರುವನು. ಅಂದಮೇಲೆ ಎಲ್ಲ ಪಾಪಗಳ ಪ್ರಾಯಶ್ಚಿತ್ತವನ್ನೂ ಮಾಡಿಕೊಂಡೇ ಇರುವನು.

ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ।
ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ ॥ ೧೪ ॥

ಇವನು ಶ್ರೀ ಹರಿಯ ನಾಮವನ್ನು ಉಚ್ಚರಿಸಲಿಲ್ಲ; ಮಗನ ಹೆಸರನ್ನೇ ಉಚ್ಚರಿಸಿದನೆಂದರೆ ಹೇಳುತ್ತಾರೆ. ಸಾಂಕೇತ್ಯಂ=ಮಕ್ಕಳು ಮೊದಲಾದವರಿಗೆ ಅಂಕಿತನಾಮವಾಗಿ ಇಟ್ಟಿರುವುದನ್ನಾಗಲಿ, ಪಾರಿಹಾಸ್ಯಂ=ಪರಿಹಾಸ ಮಾಡುವುದಕ್ಕಾಗಿಯಾಗಲಿ (ದೇವ, ಸ್ತ್ರೀ ಸ್ವಭಾವದಿಂದ ನಾವೇನೋ ಭಗವತಿಯರು. ನೀನು ಯಾವ ಕಾರಣದಿಂದ ಭಗವಂತ? ಎಂಬ ರೀತಿಯಲ್ಲಿ, ಸ್ತೋಭಂ ವಾ= (೧) ಹಾಡುವಾಗ ವಿಲಾಸ (ಆಲಾಪ) ಪೂರ್ಣಾರ್ಥವಾಗಿಯಾಗಲಿ, (೨) ಕೋಪ ಗೊಳಿಸಲು ನರ್ಮವಚನದಿಂದಾಗಲಿ ಹೇಲನಂ ಏವ ವಾ=ತಿರಸ್ಕಾರ ಮಾಡು ವುದಕ್ಕಾಗಿಯಾಗಲಿ (ನಾರಾಯಣ ಎಂಬ ಹೆಸರಿನ ಪುರುಷನಲ್ಲಿ ತಿರಸ್ಕಾರಭಾವನೆ ಯಿಂದ ಸರ್ವ ದೋಷಾಶ್ರಯನಾದ ನೀನು ನಾರಾಯಣನೆಂಬುದು ಹೇಗೆ? ಎಂಬೀ ರೀತಿಯಲ್ಲಿ.) ವೈಕುಂಠನಾಮಗ್ರಹಣಂ=ಉಚ್ಚರಿಸಿದ ಶ್ರೀ ಹರಿಯ ನಾಮವು ಮುಖ್ಯವಾಗಿ ಶ್ರೀ ಹರಿವಾಚಕವೆಂದು ಅವನ ಸ್ಮರಣೆಗೆ ಕಾರಣವಾಗಿ ಅವನಲ್ಲಿ ಭಕ್ತಿಯನ್ನು ಹುಟ್ಟಿಸಿ (ಯೋಗ್ಯ ಅಧಿಕಾರಿಗಳಿಗೆ) ಅಶೇಷಾಘಹರಂ=ಸಮಸ್ತ ಪಾಪ ಗಳನ್ನೂ ಹೋಗಲಾಡಿಸುವುದೆಂದು ವಿದುಃ=ಜ್ಞಾನಿಗಳು ತಿಳಿದಿರುವರು. ವಿ. ಅ. 'ಸಕೃನ್ಮನಃ ಕೃಷ್ಣಪದಾರವಿಂದಯೋಃ ನಿವೇಶಿತಂ ತದ್ಗುಣರಾಗಿ ಯೈರಿಹ' ಎಂದು ಹೇಳಿದ್ದನ್ನು ಪ್ರತಿಪಾದಿಸುವುದಕ್ಕಾಗಿಯೇ ಅಜಾಮಿಳೋಪಾಖ್ಯಾನವು ಹೊರಟಿದೆ ಯಾಗಿ ಶ್ರೀ ಹರಿಯ ನಾಮವು ಹೇಗಾದರೂ ಉಚ್ಚರಿತವಾದರೆ ಸಾಕು. ಪಾಪ ಹರವೆಂದು ಹೇಳುವ ಅರ್ಥವು ಸರಿಯಲ್ಲ. ಭಕ್ತಿಪೂರ್ವಕ ಭಗವನ್ನಾಮ ಸ್ಮರಣೆಯೇ ಸಮಸ್ತ ಪಾಪಪರಿಹಾರಕವೆಂದು ಹೇಳಿದಾಗಲೇ ಅದನ್ನು ಪ್ರತಿಪಾದಿಸಿ ದಂತಾಗುವುದು. ಆದ್ದರಿಂದ ಶ್ರೀಮದಾಚಾರ್ಯರು ಪ್ರಮಾಣಪುರಸ್ಸರವಾಗಿ ಭಕ್ತಿ ಪೂರ್ವಕ ಉಚ್ಚಾರಣೆಯೆಂದೇ ಅರ್ಥಮಾಡಿರುವರು. ಕೇವಲ ಸಂಕೇತವಾದಲ್ಲಿ ದೊಡ್ಡವರು ಚಿಕ್ಕವನಿಗೆ ಇಟ್ಟ ಹೆಸರಾಗುತ್ತದೆಯಾಗಿ ಅದು ವೈಕುಂಠನಾಮ ವಾಗುವುದು ಸಾಧ್ಯವಿಲ್ಲ. ಪರಿಹಾಸ ಮತ್ತು ಸ್ತೋಭಗಳು ನಾರಾಯಣನ ನಾಮ ವಾದಲ್ಲಿ ಮಹಾಪಾಪವೇ ಬರುವುದು. ಪಾಪಹರಣವಾಗುವುದಿಲ್ಲ. ಮುಖವಿಕಾರ ರೂಪವಾದ ಹೇಳನವೂ ವೈಕುಂಠನಾಮ ಗ್ರಹಣವಾಗುವುದಿಲ್ಲ. ಇವನು ನಾರಾಯಣನು! ಎಂದು ಯಾವನೋ ಒಬ್ಬ ಅಧಮನನ್ನು ಹೀಯಾಳಿಸಲು ಉಕ್ತ ವಾದುದು ಎಂದು ಹೇಳಿದ್ದರಿಂದ ಮಿಕ್ಕ ಸಂಕೇತಾದಿಗಳನ್ನೂ ವಿವರಿಸಿದಂತಾಯಿತು.

ಆದ್ದರಿಂದ ಇವನನ್ನು ನರಕಮಾರ್ಗದಿಂದ ಕರೆದುಕೊಂಡು ಹೋಗಬೇಡಿ. ಯಾರಾದರೊಬ್ಬನ ಹೆಸರಿನ ರೂಪದಲ್ಲಾಗಲೀ, ಪರಿಹಾಸಕ್ಕಾಗಿಯಾಗಲೀ, ಆಲಾಪ ಪೂರ್ಣತೆಗಾಗಲೀ, ಸಿಟ್ಟಿಗೆಬ್ಬಿಸುವ ಸಲುವಾಗಿಯಾಗಲೀ, ಮತ್ತೊಬ್ಬನನ್ನು

'ಸರ್ವಥಾ ಅಘಹರಂ ವಿಷ್ಣೋರ್ನಾಮ ತದ್ಭಕ್ತಿಪೂರ್ವಕಂ| ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ||' ವಿಷ್ಣುವಿನಲ್ಲಿ ಭಕ್ತಿಪುರಸ್ಸರವಾಗಿ ಉದಾಹೃತ ವಾದ ವಿಷ್ಣುನಾಮವೇ ಸರ್ವಪ್ರಕಾರದಿಂದಲೂ ಪಾಪಹರವು. ಭಕ್ತಿಯಿಲ್ಲದೆ ಉಚ್ಚರಿಸಿದ್ದು ಪಾಪಹರವಲ್ಲ. 'ನಾಮಸ್ವಾಮಿತಯಾ ತಸ್ಯ ಸ್ಮರಣಂ ಜಾಯತೇ ಯತಃ| ಭಕ್ತಸ್ಯ ಅತೋ ನಾಮಕೀರ್ತಿಃ ಸಂಕೇತಾದಾವಪಿ ಈರಿತಾ||' ವಿಷ್ಣುವಿನ ಹೆಸರು ಬೇರೆಯವನಲ್ಲಿ ಸಂಕೇತಾದಿರೂಪದಲ್ಲಿದ್ದರೂ ವಿಷ್ಣುಭಕ್ತನಿಗೆ ಅದನ್ನು ಉಚ್ಚರಿಸಿದ ಮಾತ್ರದಿಂದ ಆ ಹೆಸರಿನ ಮುಖ್ಯ ಸ್ವಾಮಿಯಾದ ಶ್ರೀ ಹರಿಯೇ ಆ ಶಬ್ದದ ಮುಖ್ಯ ವಾಚ್ಯನೆಂದು ಸ್ಮರಣೆ ಬರುತ್ತದೆಯಾಗಿ ಸಂಕೇತಾದಿ ರೀತಿಯಿಂದ ಲಾದರೂ ನಾಮಗ್ರಹಣವನ್ನು ಹೇಳಿದುದು. ಸಂಕೇತರೂಪವಾದ ನಾರಾಯಣ ನಾಮೋಚ್ಚಾರಣೆಯಿಂದ ಅಜಾಮಿಳನಿಗೆ ಪಾಪ ಪರಿಹಾರವಾಗಬೇಕಾದರೆ ಆಗ ಅವನಿಗೆ ಶ್ರೀ ಹರಿಯಲ್ಲಿ ಭಕ್ತಿಯಿದ್ದಿತೇ? ಎಂದರೆ 'ಅಜಾಮಿಳೋಽಪಿ ಸ್ಮರಣಾದ್ಭಕ್ತ್ಯಾ ಮೃತ್ಯೋರಮುಚ್ಯತ||' ಎಂದು ಪ್ರಮಾಣವು ಮುಂದುವರಿದು ತಿಳಿಸುತ್ತದೆ. ಭಕ್ತಿಪೂರ್ವಕ ಸ್ಮರಣೆಯಿಂದಲೇ ಅಜಾಮಿಳನೂ ಮೃತ್ಯುವಿನಿಂದ ಪಾರಾದನು. ಇಲ್ಲಿ ಸ್ಮರಣ ಪ್ರಾಚುರ್ಯವನ್ನು ತಿಳಿಸುವುದಕ್ಕಾಗಿ ಸಂಕೇತಾದಿ ಬಹು ಸ್ಥಳಗಳನ್ನು ಹೇಳಿದ್ದು. ಸಂಕೇತವು ರೂಢಿಯಿಂದ ವ್ಯವಹಾರ ನಿರ್ವಾಹ ವಾದ್ದರಿಂದ ಪರಿಹಾಸದಲ್ಲಿ ಅದಕ್ಕಿಂತ ಹೆಚ್ಚು ಸ್ಮರಣೆಗೆ ಅವಕಾಶ. ಅಲ್ಲಿ ಚಿತ್ತ ವಿಕಾಸವು ಹೆಚ್ಚಾಗುವುದು. ಅದಕ್ಕಿಂತ ಸ್ತೋಭದಲ್ಲಿ ಸ್ಮರಣೆ ಹೆಚ್ಚು. ಕೋಪ ಹುಟ್ಟಿಸುವಂತೆ ಆಡುವ ಹಾಸ್ಯದ ಮಾತೇ ಸ್ತೋಭ. ಇದಕ್ಕಿಂತಲೂ ಹೇಳನದಲ್ಲಿ ಹೆಚ್ಚು ಸ್ಮರಣೆಗೆ ಅವಕಾಶ. ಮಧು ಮಕ್ಷಿಕವನ್ನೇ (ಜೇನುಹುಳು) ಸಾಯಿಸಲು ಅಸಮರ್ಥನಾದ ನೀನು ಮಧುವನ್ನು ಕೊಂದವನೋ? ಶ್ರೀ ಹರಿಯಾದರೋ ಮಧುವೆಂಬ ರಾಕ್ಷಸನನ್ನು ಕೊಂದದ್ದರಿಂದ ಮಧುಸೂದನನೆಂಬುದು ಸರಿ' ಎಂದು ಹೇಳಿದಾಗ ನಾಮ ಸ್ವಾಮಿಯಾಗಿ ಶ್ರೀ ಹರಿಯ ಸ್ಮರಣೆಯು ಹೆಚ್ಚು. ಹೀಗೆಯೇ ಹರಿಯಲ್ಲದವನೊಬ್ಬನನ್ನು ಅವರ ತಂದೆಯು ಇಟ್ಟಿರುವ ನಾರಾಯಣನೆಂಬ ಹೆಸರಿನಿಂದ ಔಪಚಾರಿಕವಾಗಿ ಕರೆದು ನಿಂದಿಸಿ ಸಾಕ್ಷಾತ್ಪಯೋಧಿಶಾಯಿಯು ನಾರಾಯಣನು ಅಲ್ಲವೇ! ಎನ್ನುವಾಗಲೂ ತಿಳಿಯಬೇಕು. ಅಭಕ್ತ್ಯಾ ಇತ್ಯಾದಿ ಪ್ರಮಾಣದಿಂದ ಹರಿದ್ವೇಷದಿಂದ ಹೇಳಿದ ಹರಿನಾಮ ಕೀರ್ತನೆಯು ಪಾಪ ಪರಿಹಾರಕವಲ್ಲವೆಂದಾಯಿತು. ನಾಮಸ್ವಾಮಿಯಾದ ಶ್ರೀ ಹರಿಸ್ಮರಣೆಯಿಲ್ಲದಿದ್ದಲ್ಲಿ ಬೇರೆಯವರಲ್ಲಿ ಆ ನಾಮಕ್ಕೆ ಅನ್ವರ್ಥತೆಯು ಬರಲು ಸಾಧ್ಯವಿಲ್ಲ. ಶ್ರೀ ಹರಿಯಲ್ಲಿಯೇ ಅದು ಅನ್ವರ್ಥ. ಆದ್ದರಿಂದ ಅಜಾಮಿಳನು ಭಕ್ತಿಯಿಂದ ನಾರಾಯಣ ನಾಮದ ಮುಖ್ಯ ಸ್ವಾಮಿಯನ್ನು ಸ್ಮರಿಸಿಕೊಂಡು ನಾರಾಯಣ ನಾಮಸಂಕೀರ್ತನೆ

ತಿರಸ್ಕರಿ(ಮೂದಲಿ)ಸುವುದಕ್ಕಾಗಲೀ ಉಚ್ಚರಿಸಿದ ಶ್ರೀ ಹರಿನಾಮವು ಭಕ್ತನಿಗೆ ಆ ಶಬ್ದದ ಮುಖ್ಯ ವಾಚಕನಾದ ಶ್ರೀ ಹರಿಯನ್ನು ನೆನಪಿಗೆ ತಂದುಕೊಟ್ಟು ಭಕ್ತಿ

ಮಾಡಿದನೆಂದೇ ತಿಳಿಯಬೇಕು. ವೈಕುಂಠನಾಮ ಎಂದು ಹೇಳಿದ್ದರಿಂದ ಶ್ರೀಹರಿಯ ಎಲ್ಲ ಹೆಸರುಗಳೂ ಪಾಪವನ್ನು ಕಳೆಯುವ ಸಾಮರ್ಥ್ಯವುಳ್ಳವುಗಳೆಂದು ತಿಳಿಸಿರುವರು. ಮುಂದಿನ ಶ್ಲೋಕದಲ್ಲಿಯೇ 'ಹರಿರಿತ್ಯವಶೇನಾಹ' ಎಂದು ಹೇಳುವುದೂ ಇದನ್ನೇ ತಿಳಿಸುವುದು. 'ವಿದುಃ' ಎಂದು ಹೇಳಿದ್ದರಿಂದ ಜ್ಞಾನ ಪೂರ್ವಕವಾದ ಸ್ಮರಣೆಯೇ ಅಪೇಕ್ಷಿತವೆಂದೂ ಹೇಳಿದಂತಾಯಿತು. || ೧೪ ||

ಪತಿತಃ ಸ್ಖಲಿತೋ ಭಗ್ನಃ ಸಂದಷ್ಟಸ್ತಪ್ತ ಆಹತಃ ।
ಹರಿರಿತ್ಯವಶೇನಾಹ ಪುಮಾನ್ನಾರ್ಹತಿ ಯಾತನಾಮ್ || ೧೫ ||

'ಸ್ಮರಣಂ ಸರ್ವದಾ ಯೋಗ್ಯಂ ಧ್ಯಾನೋಪಾಸನಮಾಸನೇ' ಎಂಬ ಪ್ರಮಾಣದಂತೆ ಆಸನಾದಿ ನಿಯಮಾಪೇಕ್ಷೆಯುಳ್ಳ ಧ್ಯಾನೋಪಾಸನೆಗಳಿಗಿಂತ ಆ ಬಗೆಯ ನಿಯಮವಿಲ್ಲದ ನಾಮಸ್ಮರಣೆಯು ಸುಲಭೋಪಾಯವೆಂಬ ಅಭಿಪ್ರಾಯ ದಿಂದ ಹೇಳುತ್ತಾರೆ. ಪತಿತಃ=ಮಹಡಿ ಮೊದಲಾದ ಎತ್ತರ ಸ್ಥಳದಿಂದ ಬಿದ್ದ, ಸ್ಖಲಿತಃ=ದಾರಿಯಲ್ಲಿ ಎಡವಿ ಮುಗ್ಗರಿಸಿ ಬಿದ್ದ, ಭಗ್ನಃ=ಅವಯವ ಭಂಗವನ್ನು ಹೊಂದಿದ, ಸಂದಷ್ಟಃ=ಹಾವು ಮೊದಲಾದ ಪ್ರಾಣಿಗಳಿಂದ ಕಚ್ಚಲ್ಪಟ್ಟ, ತಪ್ತಃ= ಜ್ವರ ಮೊದಲಾದವುಗಳಿಂದ ತಾಪಗೊಂಡ, ಆಹತಃ=ದೊಣ್ಣೆ, ಮೊದಲಾದವುಗಳಿಂದ ಪೆಟ್ಟು ತಿಂದ (ಯಃ) ಪುಮಾನ್=ಯಾವ ಶ್ರೀಹರಿಯ ಭಕ್ತನು ಅವಶೇನ=ಭಕ್ತಿ ಪಾರವಶ್ಯದಿಂದ ಹರಿಃ ಇತಿ='ಹರಿ' ಎಂದು ಆಹ=ಉಚ್ಚರಿಸುವನೋ (ಸಃ)=ಅವನು ಯಾತನಾಂ=ದುಃಖವನ್ನು ನ ಅರ್ಹತಿ=ಹೊಂದಲು ಅರ್ಹನಲ್ಲ (ಹೊಂದುವುದಿಲ್ಲ). ಪುಮಾ್ನ ಎಂದು ಹೇಳಿದ್ದರಿಂದ ನಾಮಸ್ಮರಣೆಯಲ್ಲಿ ವರ್ಣಾಶ್ರಮ ನಿಯಮಗಳಿಲ್ಲ ವೆಂದು ತಿಳಿಸಿರುವರು. || ೧೫ ||

ಗುರೂಣಾಂ ಚ ಲಘೂನಾಂ ಚ ಗುರೂಣಿ ಚ ಲಘೂನಿ ಚ ।
ಪ್ರಾಯಶ್ಚಿತ್ತಾನಿ ಪಾಪಾನಾಂ ಜ್ಞಾತ್ವೋಕ್ತಾನಿ ಮಹರ್ಷಿಭಿಃ ||
ತೈಸ್ತಾನ್ಯಘಾನಿ ಪೂಯಂತೇ ತಪೋದಾನವ್ರತಾದಿಭಿಃ ।
ನಾಧರ್ಮಜಂ ತದ್ಧೃದಯಂ ತದಪೀಶಾಂಘ್ರಿಸೇವಯಾ || ೧೭ ||

ಯನ್ನು ಹುಟ್ಟಿಸಿ ಸಮಸ್ತ ಪಾಪಗಳನ್ನೂ ಹೋಗಲಾಡಿಸುವುದೆಂದು ಜ್ಞಾನಿಗಳು ಬಲ್ಲರು. ಎತ್ತರದಿಂದ ಬಿದ್ದ, ಎಡವಿ ಮುಗ್ಗರಿಸಿದ, ಅವಯವ ಭಂಗ ಹೊಂದಿದ, ಸರ್ಪಾದಿ ದಷ್ಟನಾದ, ಜ್ವರಾದಿಗಳಿಂದ ತಾಪಗೊಂಡ, ಮತ್ತೊಬ್ಬರಿಂದ ಹೊಡೆಸಿ ಕೊಂಡ (ಈ ಬಗೆಯ ಯಾವ ದುಃಖಕ್ಕಾದರೂ ಈಡಾದ) ಶ್ರೀಹರಿಭಕ್ತನು ಭಕ್ತಿ ಪರವಶನಾಗಿ 'ಹರಿ' ಎಂದು ಉಚ್ಚರಿಸಿದಲ್ಲಿ ದುಃಖಕ್ಕೆ ಅರ್ಹನಾಗುವುದಿಲ್ಲ. ಧರ್ಮಾ ಪರೋಕ್ಷಿಗಳಾದ ಮಹರ್ಷಿಗಳು ಜ್ಞಾನದಿಂದ ತಿಳಿದು ದೊಡ್ಡ ಪಾಪಗಳಿಗೆ ದೊಡ್ಡ ಪ್ರಾಯಶ್ಚಿತ್ತಗಳನ್ನೂ ಚಿಕ್ಕ ಪಾಪಗಳಿಗೆ ಚಿಕ್ಕ ಪ್ರಾಯಶ್ಚಿತ್ತಗಳನ್ನೂ ಮನ್ವಾದಿ ಸ್ಮೃತಿಗಳಲ್ಲಿ ಹೇಳಿರುವರು. ತಪಸ್ಸು, ದಾನ, ವ್ರತ ಮೊದಲಾದ ಆ ಪ್ರಾಯಶ್ಚಿತ್ತ

ನಾಮಸಂಕೀರ್ತನದಿಂದ ಪಾಪವು ಹೋಗುವಾಗ ದೊಡ್ಡ ಮತ್ತು ಸಣ್ಣ ಪಾಪಗಳ ಪರಿಹಾರಕ್ಕಾಗಿ ದೊಡ್ಡ ಮತ್ತು ಸಣ್ಣ ಪ್ರಾಯಶ್ಚಿತ್ತಗಳನ್ನು ವಿಧಿಸಿದ್ದು ವ್ಯರ್ಥವಲ್ಲವೇ ? ಎಂದಾಶಂಕಿಸಿ ಪ್ರಾಯಶ್ಚಿತ್ತದಿಂದ ಆಯಾಯಾ ಪಾಪ ಪರಿಹಾರ ವಾದರೂ ಸಂಸಾರಕ್ಕೆ ಕಾರಣವಾದುದೂ ಪಾಪಸಂಸ್ಕಾರವನ್ನು ತೋರಿಸಿಕೊಡು ವುದೂ ಆದ ಪ್ರಕೃತಿಮಯವಾದ ಲಿಂಗಶರೀರ-ಮನಸ್ಸು-ಶ್ರೀಹರಿಯ ಅನುಗ್ರಹ ದಿಂದಲೇ ಲೀನವಾಗುವುದೇ ಹೊರತು ಬೇರೆ ಯಾವುದರಿಂದಲೂ ಹೋಗುವುದಿಲ್ಲ ವೆಂದು ಹೇಳುತ್ತಾರೆ. ಗುರೂಣಾಂ-ದೊಡ್ಡ ದೊಡ್ಡ ಪಾಪಾನಾಂ-ಪಾಪಗಳಿಗೆ ಗುರೂಣಿ-ದೊಡ್ಡ ದೊಡ್ಡ ಪ್ರಾಯಶ್ಚಿತ್ತಗಳೂ, ಲಘೂನಾಂ-ಸಣ್ಣ ಸಣ್ಣ ಪಾಪ ಗಳಿಗೆ ಲಘೂನಿ ಚ-ಸಣ್ಣ ಸಣ್ಣ ಪ್ರಾಯಶ್ಚಿತ್ತಗಳೂ ಜ್ಞಾತ್ವಾ-ತಾರತಮ್ಯವನ್ನು ಅರಿತು ಮಹರ್ಷಿಭಿಃ-ಜ್ಞಾನಿಗಳಿಂದ ಮನ್ವಾದಿಸ್ಮೃತಿಗಳಲ್ಲಿ ಉಕ್ತಾನಿ-ಹೇಳಲ್ಪ ಟ್ಟವೆ. (ಆದ್ದರಿಂದ ಆ ವಿಷಯದಲ್ಲಿ ಅದೇ ವ್ಯವಸ್ಥೆ. ಹರಿಸಂಕೀರ್ತನೆಯಿಂದ ಲಾದರೋ 'ಮುಚ್ಯತೇ ಸರ್ವ ಪಾತಕೈಃ' ಎಂದು ಹೇಳಿರುವುದರಿಂದ ಎಲ್ಲ ಪಾಪ ಗಳೂ ಹೋಗುವುವೆಂದೇ ವ್ಯವಸ್ಥೆ. ಈ ಮಾತು ಕೇವಲ ಔಪಚಾರಿಕ ಎನ್ನುವು ದಾದರೆ ಮದ್ಯದ ಬಿಂದುವನ್ನು ಪಾನಮಾಡಿದರೂ ಮಹಾಪಾತಕವೆಂದು ಹೇಳುವ ವಾಕ್ಯವೂ ಔಪಚಾರಿಕವೆಂದೇ ಹೇಳಬೇಕಾಗುವುದು.) ತಪಸ್ಸು, ದಾನ ಮತ್ತು ವ್ರತಗಳೇ ಮೊದಲಾದ ತೈಃ-ಆ ಪ್ರಾಯಶ್ಚಿತ್ತಗಳಿಂದ ತಾನಿ ಅಘಾನಿ-ಆಯಾಯಾ ಪಾಪಗಳು ಪೂಯಂತೇ-ಪರಿಹಾರವಾಗಿ ಶುದ್ಧಿಯಾಗುವುದು. ಆದರೆ ಅಧರ್ಮ ಬೀಜಂ-ಪಾಪಸಂಸ್ಕಾರವನ್ನು ತೋರಿಸಿಕೊಡುವ ಪಾಪದ ಉತ್ಪತ್ತಿಗೆ ಕಾರಣವಾದ ಹೃದಯಂ-ಲಿಂಗಶರೀರಾತ್ಮಕವಾದ ಮನಸ್ಸು ನ ಪೂಯತೇ-ನಾಶವಾಗುವುದಿಲ್ಲ. ತದಪಿ-ಪಾಪಗಳಷ್ಟೇ ಅಲ್ಲ, ಆ ಮನಸ್ಸೂ ಕೂಡ ಈಶಾಂಘ್ರಿ ಸೇವಯಾ-ಶ್ರೀ ಹರಿಯ ಪಾದಸೇವಾರೂಪವಾದ ಹರಿನಾಮಸಂಕೀರ್ತನೆ ಮೊದಲಾದವುಗಳಿಂದ ಪೂಯತೇ-ನಾಶವಾಗುವುದು (ಶುದ್ಧವಾಗುವುದು). ॥ ೧೬, ೧೭ ॥

ಧರ್ಮೋಽಯಮುಪನ್ಯಸ್ತಃ ಪರಮಸ್ತು ಸನಾತನಃ ।
ಕ್ರಿಯತೇಽಹರಹಃ ಶುದ್ಧಿರಾತ್ಮನೋ ವಾಸಸೋ ಯಥಾ ॥ ೧೮ ॥

ಗಳಿಂದ ಆ ಪಾಪಗಳು ಮಾತ್ರವೇ ಹೋಗುವುವು. ಪಾಪ ಸಂಸ್ಕಾರಸೂಚಕವಾದ-ಪಾಪಜನಕವಾದ-ಲಿಂಗ ಶರೀರಾತ್ಮಕ ಮನಸ್ಸನ್ನು ಅವು ನಾಶಮಾಡಲಾರವು. ನಾಮಸಂಕೀರ್ತನೆ ಇತ್ಯಾದಿ ರೂಪ ಶ್ರೀಹರಿ ಪಾದಸೇವೆಯಿಂದಲಾದರೋ ಎಲ್ಲ ಬಗೆಯ ಪಾಪಗಳೇ ಅಲ್ಲದೆ ಲಿಂಗಾತ್ಮಕ ಮನಸ್ಸೂ ನಾಶವಾಗುವುದು. ಮುಂದೆ ಪಾಪಕ್ಕೆ ಕಾರಣವೇ ಇಲ್ಲದೆ ಶುದ್ಧನಾಗುವನು.

'ನಾವು ಹೇಳಿದ ಭಗವನ್ನಾಮಸಂಕೀರ್ತನೆ ಮೊದಲಾದ ಧರ್ಮವು ಅತ್ಯುತ್ತಮ ಮತ್ತು ಸನಾತನವಾದುದು. ಇದು ಸಾಧನೆಯು ಪೂರ್ಣವಾಗುವ

ಅಜಾಮಿಳನಿಗಾದರೂ ಒಂದು ಸಲ ಹರಿನಾಮಕೀರ್ತನೆಯಿಂದ ಶೂದ್ರ ಸ್ತ್ರೀ ಸಂಬಂಧದಿಂದ ಬಂದ ಪಾಪವು ಹೋಗಿ ದೇಹವಿಯೋಗರೂಪವಾದ ಮರಣವು ತಪ್ಪಿತೇ ಹೊರತು ಸಂಸಾರದಿಂದ ಮುಕ್ತಿಯಾಗಲಿಲ್ಲ. ಹಾಗೆ ಮುಕ್ತಿಯಾಗಬೇಕಾದರೆ ಭಗವನ್ನಾಮಸಂಕೀರ್ತನೆ ಮೊದಲಾದ ಶ್ರೀಹರಿಪಾದಸೇವೆಯನ್ನು ಪ್ರತಿನಿತ್ಯವೂ ಮಾಡಬೇಕೆಂದು ವಿಧಿಸುತ್ತಾರೆ. ಪರಮಃ=ಅತ್ಯುತ್ತಮವಾದ ಸನಾತನಃ-ಎಲ್ಲ ಕಾಲದಲ್ಲಿಯೂ ಇರುವ ಯಃ-ಯಾವ ಧರ್ಮಃ-ಭಗವನ್ನಾಮಸಂಕೀರ್ತನೆ ಮೊದಲಾದ ಧರ್ಮವು ಉಪನ್ಯಸ್ತಃ=ಹೇಳಲ್ಪಟ್ಟಿತೋ ಅಯಂ=ಇದು ಅಹರಹಃ=ಪ್ರತಿನಿತ್ಯವೂ ಸಾಧನೆಯು ಪೂರ್ಣವಾಗುವವರೆಗೂ ಕ್ರಿಯತೇ ತು=ಮಾಡಿದ್ದೇ ಆದರೆ ಯಥಾ-ಹೇಗೆ (ನಿರ್ಣೇಜನೇನ)-ಒಗೆಯುವುದರಿಂದ ವಾಸಸಃ-ಬಟ್ಟೆಗೆ ಶುದ್ಧಿಃ=(ಭವತಿ)-ಶುದ್ಧಿಯಾಗುವುದೋ (ತಥಾ)-ಹಾಗೆ ಆತ್ಮನಃ ಶುದ್ಧಿಃ-ಜಡ ಮನಸ್ಸು ನಾಶವಾಗಿ ಚಿನ್ಮನಸ್ಸಿಗೆ ಕೈವಲ್ಯರೂಪವಾದ ಶುದ್ಧಿಯು ಭವತಿ-ಆಗುವುದು. ವಿ.ಅ. 'ಶರೀರಾದ್ವಾಚಿಕಾಭ್ಯಾಸೋ ವಾಚಿಕಾನ್ಮಾನಸೋ ಭವೇತ್ | ಮಾನಸಾದ್ವಿವಶಾನ್ಮುಚ್ಯೇತ್ ನಾನ್ಯಥಾ ಮುಕ್ತಿರಿಷ್ಯತೇ ||' ಎಂಬ ಪ್ರಮಾಣದಂತೆ ಒಂದು ಬಾರಿ ಸ್ಮರಣೆಯಿಂದಲೂ ಮೋಕ್ಷವಾಗುವುದು ಕೆಲವು ಅಧಿಕಾರಿ ಜೀವರಿಗೆ ಮಾತ್ರ. ಎಲ್ಲರಿಗೂ ಅಲ್ಲ. ಅಜಾಮಿಳನು ಆ ಬಗೆಯ ಅಧಿಕಾರಿಯಲ್ಲವಾದ್ದರಿಂದ ಅವನಿಗೆ ಆಗಲೇ ಮೋಕ್ಷವಾಗಲಿಲ್ಲ. ಆದ್ದರಿಂದ ಅಧಿಕಾರಿಯ ಸಾಧನೆ ಪರಿಪಕ್ವವಾಗುವವರೆಗೂ ಶ್ರೀಹರಿಪಾದಸೇವೆಯನ್ನು ಆವೃತ್ತಿಮಾಡುತ್ತಲೇ ಇರಬೇಕು. || ೧೮ ||

ನೈಕಾಂತಶುದ್ಧಿಃ ಸ್ಯಾತ್ಕರ್ತುಃ ಕ್ರಿಯಯಾಽಕರ್ತೃತಾ ಯತಃ |
ಅಕರ್ತುರಾತ್ಮನಸ್ತಸ್ಮಾದ್ಭಜೇತಾನೀಹಯಾ ಹರಿಮ್ || ೧೯ ||

ಶ್ರೀಹರಿಯ ಸೇವೆಯಿಂದ ಮನಃಶುದ್ಧಿಯಾಗುವಂತೆ ನಿರಂತರ ಪ್ರಾಯಶ್ಚಿತ್ತ ಕ್ರಿಯೆಯಿಂದ ಏಕಾಗಬಾರದು? ಎಂದರೆ ಹೇಳುತ್ತಾರೆ. (೧) ಅಕರ್ತುಃ-ಸ್ವತಂತ್ರ ಕರ್ತೃತ್ವವಿಲ್ಲದ ಆತ್ಮನಃ-ಜೀವನಿಗೆ ಯತಃ-ಯಾವ ಕಾರಣದಿಂದ ಅಕರ್ತೃತಾ=ಸ್ವತಂತ್ರ ಕರ್ತೃತ್ವವಿಲ್ಲವೋ (ತತಃ)-ಆ ಕಾರಣದಿಂದ ಕರ್ತುಃ-ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಳ್ಳುವವನ ಕ್ರಿಯಯಾ = ಪ್ರಾಯಶ್ಚಿತ್ತ ಮೊದಲಾದ ಕ್ರಿಯೆಯಿಂದ ಏಕಾಂತಶುದ್ಧಿಃ=ಮನಃಶುದ್ಧಿಪೂರ್ವಕವಾದ ಶುದ್ಧಿಯು ನ ಸ್ಯಾತ್=ಆಗುವುದಿಲ್ಲ. ತಸ್ಮಾತ್-ಆ ಕಾರಣದಿಂದ ಅನೀಹಯಾ=ನಿಷಿದ್ಧಕರ್ಮ ಮಾಡದೆ

ವರೆಗೂ ಪ್ರತಿನಿತ್ಯವೂ ಮಾಡಬೇಕಾದುದು. ಬಟ್ಟೆಯು ಒಗೆಯುವುದರಿಂದ ಶುದ್ಧವಾಗುವಂತೆ ಈ ಧರ್ಮಾಚರಣೆಯಿಂದ ಜಡಮನಸ್ಸು ನಾಶವಾಗಿ ಚಿನ್ಮನಸ್ಸಿಗೆ ಕೈವಲ್ಯ ರೂಪ ಶುದ್ಧಿಯುಂಟಾಗುವುದು. ಸ್ವತಂತ್ರ ಕರ್ತನಲ್ಲದ ಜೀವನು (ಸ್ವಾತಂತ್ರ್ಯಾಭಿಮಾನದಿಂದ) ಮಾಡುವ ಪ್ರಾಯಶ್ಚಿತ್ತ ಕರ್ಮವು ಮನಃಶುದ್ಧಿಪೂರ್ವಕ ಶುದ್ಧಿಗೆ ಕಾರಣವಾಗುವುದಿಲ್ಲ. ಆದ್ದರಿಂದ ನಿರಂತರ ಹರಿನಾಮ ಕೀರ್ತನೆ

ನಿರಂತರ ಹರಿನಾಮಕೀರ್ತನವೆಂಬ ಕ್ರಿಯೆಯಿಂದ ಹರಿಂ=ಶ್ರೀಹರಿಯನ್ನು ಭಜೇತ-ಸೇವಿಸಬೇಕು. (೨) ಕರ್ತೃತಾ ಯತಃ ಎಂಬ ಪಾಠದಲ್ಲಿ ಕರ್ತುಃ=ಜೀವನ ಕ್ರಿಯಯಾ=ಪ್ರಾಯಶ್ಚಿತ್ತ ಮೊದಲಾದ ಕರ್ಮಗಳಿಂದ ಏಕಾಂತಶುದ್ಧಿಃ=ಆತ್ಯಂತಿಕ ಶುದ್ಧಿಯು ನ ಸ್ಯಾತ್=ಆಗುವುದಿಲ್ಲ. ತಸ್ಮಾತ್=ಆ ಕಾರಣದಿಂದ ಅಕರ್ತುಃ-ಕರ್ತನಿಲ್ಲದ ಆತ್ಮನಃ=ಪರಮಾತ್ಮನಿಗೆ ಯತಃ=ಯಾವ ಕಾರಣದಿಂದ ಕರ್ತೃತಾ-ಸ್ವಾತಂತ್ರ್ಯವೋ (ತತಃ)=ಆ ಕಾರಣದಿಂದ ಅನೀಹಯಾ=ನಿಷ್ಕಾಮನೆಯಿಂದ ಹರಿಯನ್ನು(ನ್ನೇ) ಭಜೇತ=ಸೇವಿಸಬೇಕು. ಅಸ್ವತಂತ್ರನಾದ ಜೀವನು ಸ್ವಾತಂತ್ರ್ಯಾಭಿಮಾನದಿಂದ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಂಡರೆ ಅದರಿಂದ ಮನಃಶುದ್ಧಿಯಾಗುವುದಿಲ್ಲ. ಮತ್ತೇನೆಂದರೆ ಶ್ರೀಹರಿಯೇ ಸ್ವತಂತ್ರನೆಂಬ ಜ್ಞಾನ ಪೂರ್ವಕ ಮಾಡಬೇಕು. ಆಗ ಹರಿನಾಮ ಕೀರ್ತನೆ ಮಾಡಿದಂತಾಗಿ ಅದರಿಂದ ಏಕಾಂತಶುದ್ಧಿಯಾಗುವುದೆಂದು ತಿಳಿಯಬೇಕು. || ೧೯ ||

ಅಜ್ಞಾನಾದಥವಾ ಜ್ಞಾನಾದುತ್ತಮಶ್ಲೋಕನಾಮ ಯತ್ ।
ಸಂಕೀರ್ತಿತಮಘಂ ಪುಂಸೋ ದಹತ್ಯೇಧೋ ಯಥಾನಲಃ ॥

ಹರಿನಾಮಸಂಕೀರ್ತನೆಯು ಕರ್ತವ್ಯವೆಂದು ತಿಳಿಸಲು ಅರ್ಥವಾದ(ಪ್ರಶಂಸೆ) ರೀತಿಯಿಂದ ಮುಗಿಸುತ್ತಾರೆ. ಅಜ್ಞಾನಾತ್=(೧) ಅವಯವಾರ್ಥವನ್ನು ತಿಳಿಯದೆ (೨) ಪಾಪಹರವೆಂದು ತಿಳಿಯದೆ ಅಥವಾ ಜ್ಞಾನಾತ್=(೧) ಅವಯವಾರ್ಥವನ್ನು ತಿಳಿದು (೨) ಪಾಪಹರವೆಂದು ತಿಳಿದು ಯತ್=ಯಾವ ಶ್ರೀಹರಿಯ ನಾಮವು ಸಂಕೀರ್ತಿತಂ=ಭಕ್ತಿಯಿಂದ ಉಚ್ಚರಿತವಾಯಿತೋ (ತತ್)=ಆ ಉತ್ತಮಶ್ಲೋಕ-ನಾಮ=ಪವಿತ್ರಕೀರ್ತಿಯುಳ್ಳ ಶ್ರೀಹರಿಯ ನಾಮವು ಅನಲಃ=ಸುಡುತ್ತದೆಂದು ತಿಳಿಯದೆ ಅಥವಾ ತಿಳಿದು ಹಾಕಿದ ಬೆಂಕಿಯು ಯಥಾ=ಹೇಗೆ ಏಧಃ=ಸುಡಲು ಯೋಗ್ಯವಾದ ಕಟ್ಟಿಗೆಯನ್ನು ದಹತಿ=ಸುಡುವುದೋ (ತಥಾ)=ಹಾಗೆ ಪುಂಸಃ=ಅಧಿಕಾರಿ ಜೀವನ ಅಘಂ=ಪಾಪವನ್ನು ದಹತಿ=ಸುಡುವುದು. ವಿ.ಆ. ಅಜ್ಞಾನಾತ್ ಎಂಬುದಕ್ಕೆ ಶ್ರೀಹರಿಯ ಜ್ಞಾನವಿಲ್ಲದೆ ಎಂದರ್ಥ ಮಾಡಬಾರದು. ಮತ್ತೇನೆಂದರೆ ಅರ ವಿರುದ್ಧಗಳಾದ್ದರಿಂದ ನಾರಾ ಎಂದರೆ ಗುಣಗಳು ಅವುಗಳಿಗೆ ಆಶ್ರಯನು ನಾರಾಯಣ ಎಂಬೀ ರೀತಿಯ ಯೌಗಿಕಾರ್ಥವನ್ನು ತಿಳಿಯದೆ ಎಂದರ್ಥ ಮಾಡ

ಮಾಡುತ್ತಾ ಕರ್ತನಿಲ್ಲದ ಹರಿಯೇ ಸ್ವತಂತ್ರಕರ್ತನೆಂದು ತಿಳಿದು ಶ್ರೀಹರಿಯನ್ನು ನಿಷ್ಕಾಮನೆಯಿಂದ ಸೇವಿಸಬೇಕು. ಯೌಗಿಕಾರ್ಥವನ್ನು ತಿಳಿಯದೆ, ಪಾಪ ಪರಿಹಾರಕವೆಂಬ ಜ್ಞಾನವಿಲ್ಲದೆಯಾಗಲಿ, ಅವಯವಾರ್ಥವನ್ನು ತಿಳಿದು ಪಾಪ ಪರಿಹಾರಕವೆಂಬ ಜ್ಞಾನದಿಂದಲಾಗಲಿ ಶ್ರೀಹರಿನಾಮವನ್ನು ಭಕ್ತಿಯಿಂದ ಉಚ್ಚರಿಸಿದರೆ ಆ ನಾಮವು (ಆ ನಾಮಸ್ವಾಮಿಯಾದ ಶ್ರೀಹರಿಯು) ಬೆಂಕಿಯು ಸುಡಬಹುದಾದ ಕಟ್ಟಿಗೆಯನ್ನು ಸುಡುವಂತೆ ಭಕ್ತನ ಪಾಪವನ್ನು ಸುಡುವುದು(ವನು.)

ಬೇಕು. ಹಾಗಲ್ಲದಿದ್ದರೆ ಶ್ರೀಹರಿಯು ಸರ್ವಶಬ್ದವಾಚ್ಯನಾದ್ದರಿಂದ ಘಟ, ಪಟ ಮೊದಲಾದ ಶಬ್ದಗಳೂ ಅವನ ಹೆಸರುಗಳೇ ಆಗಿರುವಾಗ ಅವುಗಳನ್ನು ಬಿಟ್ಟು ನಾರಾಯಣ ಮೊದಲಾದ ಹೆಸರುಗಳನ್ನೇ ಕೀರ್ತಿಸಬೇಕೆಂಬುದಕ್ಕೆ ಕಾರಣವೇ ಇಲ್ಲವಾಗುವುದು. ಆದ್ದರಿಂದ ಅಜ್ಞಾನಾತ್ ಎಂಬುದು ಔಪಚಾರಿಕವೆಂದು ತಿಳಿಯಬೇಕು. ಹುಡುಗನು ಸುಡುತ್ತದೆಂದು ತಿಳಿಯದೆ ಹಾಕಿದ ಬೆಂಕಿಯು ಕಟ್ಟಿಗೆಯನ್ನು ಸುಡುವಂತೆ ಎಂದು ಹೇಳಿದ್ದರಿಂದ ಪಾಪಹರವೆಂದು ತಿಳಿಯದೆ ಭಕ್ತಿಯಿಂದ ಉಚ್ಚರಿಸಿದ ಹರಿನಾಮವೂ ಭಕ್ತನ ಪಾಪವನ್ನು ಹೋಗಲಾಡಿಸುವುದೆಂದು ಅರ್ಥವಾಯಿತು. ಕಟ್ಟಿಗೆ ಎಂದು ಹೇಳಿದ್ದರಿಂದ ಸುಡಬಹುದಾದುದನ್ನೇ ಬೆಂಕಿಯು ಸುಡುವುದೇ ಹೊರತು ಸುಡಲಾಗದ ಕಲ್ಲನ್ನು ಅಲ್ಲ. ಅದರಂತೆ ಭಕ್ತನ ಪಾಪವನ್ನು ಹರಿನಾಮವು ಹೋಗಲಾಡಿಸುವುದೇ ಹೊರತು ಭಕ್ತಿಯಿಲ್ಲದವನ ಪಾಪವನ್ನಲ್ಲವೆಂದು ವಿವಿಚ್ಯ ತಿಳಿಯಬೇಕು. || ೨೦ ||

ಯಥಾಽಗದಂ ವೀರ್ಯಯುತಂ ಸೂಪಯುಕ್ತಂ ಯದೃಚ್ಛಯಾ ।
ಅಜಾನತೋಽಪ್ಯಾತ್ಮಗುಣಂ ಕುರ್ಯಾನ್ಮಂತ್ರೋಽಪ್ಯುದಾಹೃತಃ ॥

ಎಲ್ಲ ಶಬ್ದಗಳೂ ಶ್ರೀಹರಿಯ ನಾಮವೇ ಆದರೂ ಘಟ ಮೊದಲಾದ ಶಬ್ದಗಳ ಆವೃತ್ತಿಯಿಂದ ಫಲ ಬರದೆ ನಾರಾಯಣ ಮೊದಲಾದ ಶಬ್ದಗಳ ಆವೃತ್ತಿಯಿಂದಲೇ ಫಲ ಬರುತ್ತಿರುವುದರಿಂದ ಇವೆರಡಕ್ಕೂ ಇರುವ ಈ ಬಗೆಯ ವಿಶೇಷಕ್ಕೆ ಕಾರಣವೇನು? ಎಂದಾಶಂಕಿಸಿ ಮಂತ್ರೌಷಧಿಗಳಂತೆ ಎಂದು ಹೇಳುತ್ತಾರೆ. ಯಥಾ= ಹೇಗೆ ವೀರ್ಯಯುತಂ=ರೋಗ ಪರಿಹಾರಕ ಸಾಮರ್ಥ್ಯವುಳ್ಳ ಸೂಪಯುಕ್ತಂ= ಉಪದೇಶಾದಿಗಳಿಂದ ಸರಿಯಾಗಿ ಪ್ರಯೋಗಿಸಲ್ಪಟ್ಟ ಅಗದಂ= ಔಷಧವು ಆತ್ಮಗುಣಂ=ತನ್ನ ರೋಗ ಪರಿಹಾರಕ ಗುಣವನ್ನು ಅಜಾನತಃ ಅಪಿ=ತಿಳಿಯದಿರುವವನಿಗೂ ಯದೃಚ್ಛಯಾ=ಶ್ರೀಹರಿಯ ಇಚ್ಛೆಯಿಂದ ಕುರ್ಯಾತ್=ರೋಗವನ್ನು ಪರಿಹರಿಸುವುದೋ ಯಥಾ=ಹೇಗೆ ವೀರ್ಯಯುಕ್ತವಾದ ಉಪದೇಶಾದಿಗಳಿಂದ ಸರಿಯಾಗಿ ಜಪಿಸಲ್ಪಟ್ಟ ಮಂತ್ರಃ ಅಪಿ=ಮಂತ್ರವೂ ತನ್ನ ಪಾಪಪರಿಹಾರಕ

ರೋಗ ಪರಿಹಾರಕ ಸಾಮರ್ಥ್ಯವುಳ್ಳ ಔಷಧವು ಉಪದೇಶಾದಿಗಳಿಂದ ಸರಿಯಾಗಿ ಪ್ರಯುಕ್ತವಾದುದು (ಸೇವಿಸಲ್ಪಟ್ಟದ್ದು) ಅದರ ರೋಗ ಪರಿಹಾರಕ ಗುಣವನ್ನು ತಿಳಿಯದಿರುವವನಿಗೂ ಶ್ರೀಹರಿಯ ಇಚ್ಛೆಯಂತೆ ರೋಗವನ್ನು ಹೋಗಲಾಡಿಸುವುದು. ಅಭೀಷ್ಟಫಲವನ್ನು ಕೊಡುವ ಸಾಮರ್ಥ್ಯವುಳ್ಳ ಮಂತ್ರವು ಗುರೂಪದೇಶಾದಿಗಳಿಂದ ಸರಿಯಾಗಿ ಜಪಿಸಲ್ಪಟ್ಟದ್ದು ಅದರ ಪಾಪಪರಿಹಾರಕ ಸಾಮರ್ಥ್ಯವನ್ನು ತಿಳಿಯದೆ ಇರುವವನಿಗೂ ಶ್ರೀಹರಿಯ ಇಚ್ಛೆಯಿಂದ ಪಾಪವನ್ನು ಪರಿಹರಿಸುವುದು. ಅದರಂತೆಯೇ ಹರಿನಾಮ ಸಂಕೀರ್ತನೆಯೂ ಪಾಪಪರಿಹಾರಕವೆಂದು ಜ್ಞಾನಿಗಳು ಹೇಳುವರು.

ಸಾಮರ್ಥ್ಯವನ್ನು ತಿಳಿಯದಿರುವವನಿಗೂ ಶ್ರೀಹರಿಯು ಇಚ್ಛೆಯಿಂದ ಪಾಪವನ್ನು ಹೋಗಲಾಡಿಸುವುದೋ ತಥಾ=ಹಾಗೆ (ಅತ್ರಾಪಿ) ನಾರಾಯಣ ಮೊದಲಾದ ನಾಮಸಂಕೀರ್ತನೆಯ ವಿಷಯದಲ್ಲಿಯೂ ಪಾಪಪರಿಹಾರಕವೆಂದು ಉದಾಹೃತಃ=ಜ್ಞಾನಿಗಳಿಂದ ಹೇಳಲ್ಪಟ್ಟಿರುವುದು. ಹೇಗೆ ಬೇರೆ ತೃಣಕ್ಕಿಂತ ಮೂಲಿಕೆಯು ರೋಗಪರಿಹಾರಕವೋ ಇತರ ಶಬ್ದಗಳಿಗಿಂತ ಮಂತ್ರವು ಪರಿಹಾರಕವೋ ಹಾಗೆ ಘಟ ಮೊದಲಾದ ಶಬ್ದಗಳಿಗಿಂತ ನಾರಾಯಣಾದಿ ಶಬ್ದಗಳು ವಿಶಿಷ್ಟ ಫಲದಾಯಕಗಳೆಂದು ಅಭಿಪ್ರಾಯ. ಅಜಾನತಃ ಎಂಬಲ್ಲಿಯೂ ಉಪದೇಶ ಮೊದಲಾದವುಗಳಿಂದ ಸಾಮಾನ್ಯ ಜ್ಞಾನವು ಇದ್ದೇ ಇರಬೇಕು. ಇಲ್ಲದಿದ್ದರೆ ಸೂಪಯುಕ್ತಂ ಎಂಬುದರಿಂದ ಹೇಳಿದ ಉಪದೇಶ ಮೊದಲಾದವುಗಳ ಆವಶ್ಯಕತೆಯು ತಪ್ಪಾಗುವುದು. ಯದೃಚ್ಛಯಾ ಎಂದದ್ದರಿಂದ ಎಲ್ಲವೂ ಸಮಾನವಾಗಿದ್ದರೂ ಮೂಲಿಕೆಗಳಲ್ಲಿ ಮಂತ್ರಗಳಲ್ಲಿ ಶ್ರೀಹರಿಯು ಇಚ್ಛೆಯಿಂದ ಕ್ಲೃಪ್ತವಾದ ದೇವತಾ ಸನ್ನಿಧಾನದಿಂದ ವಿಶೇಷ ಫಲ ಬರುವಂತೆ ಘಟಾದಿ ಶಬ್ದಗಳಿಗಿಂತ ನಾರಾಯಣಾದಿ ಶಬ್ದಗಳಲ್ಲಿ ಶ್ರೀಹರಿ ತನ್ನ ಇಚ್ಛೆಯಿಂದ ದೇವತಾ ಸನ್ನಿಧಾನವನ್ನು ಹೆಚ್ಚಿಕೆ ಇಟ್ಟು ವಿಶೇಷ ಫಲ ಕೊಡುವಂತೆ ಮಾಡಿರುವನೆಂದು ತಾತ್ಪರ್ಯ ತೋರಿಸಿರುವರು. || ೨೧ ||

ಪತಿಂ ವಃ ಪೃಚ್ಛತ ಭಟಾ ಧರ್ಮೇಽಸ್ಮಿನ್ ಯದಿ ಸಂಶಯಃ ।
ಸ ವೇದ ಪರಮಂ ಗುಹ್ಯಂ ಧರ್ಮಸ್ಯ ಭಗವಾನ್ ಯಮಃ || ೨೨ ||

ನೀವು ನಾವು ಹೇಳಿದ ವಿಷಯದಲ್ಲಿ ವಿಶ್ವಾಸವಿಡಬೇಕು. ಏಕೆಂದರೆ ನಿಮ್ಮಿಂದ ಪ್ರಶ್ನೆ ಮಾಡಿಸಿಕೊಂಡ ನಿಮ್ಮ ಸ್ವಾಮಿಯೂ ಹೀಗೆಯೇ ಹೇಳುವನು ಎಂಬ ಅಭಿಪ್ರಾಯದಿಂದ ಹೇಳಿದರೆಂದು ಹೇಳುತ್ತಾರೆ. ಹೇ ಭಟಾಃ=ಯಮದೂತರೇ, ಅಸ್ಮಿನ್=ನಾವು ಹೇಳಿದ ಧರ್ಮೇ=ಧರ್ಮಸೂಕ್ಷ್ಮದಲ್ಲಿ ಸಂಶಯಃ ಯದಿ=ಸಂಶಯವಿದ್ದಲ್ಲಿ ವಃ= ನಿಮ್ಮ ಪತಿಂ= ಸ್ವಾಮಿಯಾದ ಯಮಧರ್ಮರನ್ನೇ ಪೃಚ್ಛತ=ಪ್ರಶ್ನೆ ಮಾಡಿ ಕೇಳಿರಿ. ಆ ಪೂಜ್ಯರಾದ ಯಮದೇವರು ಧರ್ಮದ ಪರಮಂ ಗುಹ್ಯಂ=ಅತ್ಯಂತ ರಹಸ್ಯವನ್ನು ವೇದ=ಬಲ್ಲರು. ಅವರೂ ಹೀಗೆಯೇ ಹೇಳುವರೆಂದು ಅಭಿಪ್ರಾಯ. || ೨೨ ||

‘ ಯಮಭಟರೇ, ನಾವು ಹೇಳಿದ ಧರ್ಮಸೂಕ್ಷ್ಮದಲ್ಲಿ ನಿಮಗೆ ಸಂಶಯವಿದ್ದಲ್ಲಿ ನಿಮ್ಮ ಸ್ವಾಮಿಯಾದ ಯಮರಾಜರನ್ನೇ ಕೇಳಿರಿ. ಆ ಪೂಜ್ಯರು ಧರ್ಮದ ಪರಮ ರಹಸ್ಯವನ್ನು ಅರಿತವರು.’ ಎಂದು ವಿಷ್ಣುದೂತರು ನಿರ್ಣಾಯಕ ಉತ್ತರವಿತ್ತರು.

ಶ್ರೀ ಶುಕ ಉವಾಚ—

ಏವಂ ತೇ ಸುವಿನಿರ್ಣೀಯ ಧರ್ಮಂ ಭಾಗವತಂ ನೃಪ ।
ತಂ ಯಾಮ್ಯಪಾಶಾನ್ನಿರ್ಮುಚ್ಯ ವಿಪ್ರಂ
ಮೃತ್ಯೋರಮೂಮುಚನ್ ॥ ೨೩ ॥

ನೃಪ–ಪರೀಕ್ಷಿದ್ರಾಜನೇ, ತೇ–ಆ ವಿಷ್ಣುದೂತರು ಏವಂ–ಮೇಲೆ ಹೇಳಿದಂತೆ ಭಾಗವತಂ=(೧) ಭಗವದ್ಭಕ್ತರ (೨) ಭಗವಂತನ ಧರ್ಮವನ್ನು ಕಟ್ಟಳೆಯನ್ನು ಸುವಿನಿರ್ಣೀಯ–ಶಾಸ್ತ್ರಾಧಾರಗಳಿಂದ ನಿಶ್ಚಯಿಸಿ ತಂ ವಿಪ್ರಂ–ಆ ಅಜಾಮಿಳನನ್ನು ಯಾಮ್ಯಪಾಶಾತ್–ಯಮಪಾಶದಿಂದ ನಿರ್ಮುಚ್ಯ–ಬಿಡಿಸಿ ಮೃತ್ಯೋಃ=ದೇಹ ವಿಯೋಗರೂಪವಾದ ಸಾವಿನಿಂದ ಅಮೂಮುಚನ್–ತಪ್ಪಿಸಿದರು. ‖ ೨೩ ‖

ಇತಿ ಪ್ರತ್ಯುದಿತಾ ಯಾಮ್ಯಾ ದೂತಾ ಯಾತಾ ಯಮಾಂತಿಕಮ್ ।
ಯಮರಾಜ್ಞೇ ಯಥಾ ಸರ್ವಮಾಚಚಕ್ಷುರರಿಂದಮ ॥ ೨೪ ॥

ವಿಷ್ಣುದೂತರಿಂದ ಸದುತ್ತರಗೊಂಡ ಯಮದೂತರು ಮತ್ತೆ ಏನು ಮಾಡಿದರು? ಎಂದರೆ ಹೇಳುತ್ತಾರೆ. ಇತಿ–ಮೇಲೆ ಹೇಳಿದಂತೆ ವಿಷ್ಣುದೂತರಿಂದ ಪ್ರತ್ಯುದಿತಾಃ–ಸರಿಯಾಗಿ ಉತ್ತರಕೊಡಲ್ಪಟ್ಟ, ನಿರಾಕೃತರಾದ ಯಾಮ್ಯಾಃ= ಯಮರಾಜರ ದೂತರು ಹೇ ಅರಿಂದಮ!=ಶತ್ರುಸಂಹಾರಕನಾದ ಪರೀಕ್ಷಿದ್ರಾಜನೇ, ಯಮಾಂತಿಕಂ=ಯಮನ ಸಮೀಪಕ್ಕೆ ಯಾತಾಃ ಸಂತಃ–ಹೋದವರಾಗಿ ಯಮರಾಜರಿಗೆ ಸರ್ವವನ್ನೂ ಯಥಾ–ನಡೆದ ರೀತಿಯಲ್ಲಿ ಆಚಚಕ್ಷುಃ– ಹೇಳಿದರು. ‖ ೨೪ ‖

ದ್ವಿಜಃ ಪಾಶಾದ್ವಿನಿರ್ಮುಕ್ತೋ ಗತಭೀಃ ಪ್ರಕೃತಿಂ ಗತಃ ।
ವವಂದೇ ಶಿರಸಾ ವಿಷ್ಣೋಃ ಕಿಂಕರಾನ್ ದರ್ಶನೋತ್ಸುಕಃ (ಕಾನ್) ॥

ಸಾವಿನಿಂದ ತಪ್ಪಿಸಿಕೊಂಡ ಅಜಾಮಿಳನು ಏನು ಮಾಡಿದನು? ಎಂದರೆ ಹೇಳುತ್ತಾರೆ. ಯಮಪಾಶದಿಂದ ಬಿಡಲ್ಪಟ್ಟ ಆದ್ದರಿಂದಲೇ ಗತಭೀಃ–ಭಯವು

ಶುಕಾಚಾರ್ಯರು—ಪರೀಕ್ಷಿದ್ರಾಜ! ವಿಷ್ಣುದೂತರು ಮೇಲೆ ಹೇಳಿದಂತೆ ಭಾಗವತ ಧರ್ಮವನ್ನು ಪ್ರಮಾಣಗಳಿಂದ ನಿರ್ಣಯಿಸಿ ಆ ಅಜಾಮಿಳನನ್ನು ಯಮ ಪಾಶದಿಂದ ಬಿಡಿಸಿದರು. ದೇಹವಿಯೋಗವನ್ನೂ ತಪ್ಪಿಸಿದರು.

ವಿಷ್ಣುದೂತರಿಂದ ಸದುತ್ತರದ ಮೂಲಕ ನಿರಾಕೃತರಾದ ಯಮದೂತರು ತಮ್ಮ ಸ್ವಾಮಿಯ ಸಮೀಪಕ್ಕೆ ಮರಳಿ ನಡೆದುದೆಲ್ಲವನ್ನೂ ಯಥಾವತ್ತಾಗಿ ತಿಳಿಸಿದರು.

ಇತ್ತ ಯಮಪಾಶದಿಂದ ಮುಕ್ತರಾದ ಅಜಾಮಿಳರು ಭಯರಹಿತರಾಗಿ ತಮ್ಮ ಸ್ವಾಭಾವಿಕ ಸಾತ್ವಿಕ ಸ್ಥಿತಿಯನ್ನು ಮತ್ತೆ ಹೊಂದಿದರು. ತಮ್ಮನ್ನು ಬದುಕಿಸಿದ ವಿಷ್ಣುದೂತರನ್ನು ನೋಡುವ ಕುತೂಹಲದಿಂದ ಅವರಿಗೆ ತಲೆಬಗ್ಗಿಸಿ ವಂದಿಸಿದರು.

ಹೋದ, ಪ್ರಕೃತಿಂ–ತನ್ನ ಸ್ವಭಾವವಾದ ಸಾತ್ವಿಕಾವಸ್ಥೆಯನ್ನು ಗತಃ–ಹೊಂದಿದ ದ್ವಿಜಃ–ಆ ದ್ವಿಜನಾದ ಅಜಾಮಿಳನು ದರ್ಶನೋತ್ಸುಕಃ (ಸನ್)=ಅವರನ್ನು ನೋಡುವ ಕುತೂಹಲದಿಂದ ಕೂಡಿದವನಾಗಿ ವಿಷ್ಣುದೂತರನ್ನು ಶಿರಸಾ=ತಲೆಯಿಂದ (ತಲೆತಗ್ಗಿಸಿ) ವವಂದೇ=ವಂದಿಸಿದನು. ದರ್ಶನೋತ್ಸವಃ ಎಂಬ ಪಾಠದಲ್ಲಿ ದರ್ಶನದಿಂದ ಸಂತೋಷಕರರಾದ ಎಂದರ್ಥ. || ೨೫ ||

ತಂ ವಿವಕ್ಷುಮಭಿಪ್ರೇತ್ಯ ಮಹಾಪುರುಷಕಿಂಕರಾಃ ।
ಸಹಸಾ ಪಶ್ಯತಸ್ತಸ್ಯ ತತ್ರಾಂತರ್ದಧಿರೇಽನಘ ॥ ೨೬ ॥

ಮನುಷ್ಯದೇಹದಲ್ಲಿರುವ ಅಜಾಮಿಳನೊಂದಿಗೆ ಮಾತನಾಡಬಾರದಾದ್ದರಿಂದ ವಿಷ್ಣುದೂತರು ಏನುಮಾಡಿದರೆಂದರೆ ಹೇಳುತ್ತಾರೆ. ಅನಘ!=ಪಾಪರಹಿತನಾದ ಪರೀಕ್ಷಿದ್ರಾಜನೇ! ಮಹಾಪುರುಷಕಿಂಕರಾಃ–ಪುರುಷೋತ್ತಮನಾದ ಶ್ರೀಹರಿಯ ದೂತರು ತಂ–ಆ ಅಜಾಮಿಳನನ್ನು ವಿವಕ್ಷುಂ–ಮಾತನಾಡ ಬಯುಸುವವನನ್ನು ಅಭಿಪ್ರೇತ್ಯ=ತಿಳಿದು ತಸ್ಯ=ಅವನು ಪಶ್ಯತಃ (ಸತಃ) ನೋಡುತ್ತಿರಲು ತತ್ರ=ಅಲ್ಲಿ ಸಹಸಾ–ಇದ್ದಕ್ಕಿದ್ದಂತೆಯೇ ಅಂತರ್ದಧಿರೇ–ಅದೃಶ್ಯರಾದರು. || ೨೬ ||

ಅಥಾಜಾಮಿಲ ಆಕರ್ಣ್ಯ ದೂತಾನಾಂ ಯಮಕೃಷ್ಣಯೋಃ ।
ಧರ್ಮಂ ಭಾಗವತಂ ಶುದ್ಧಂ ತ್ರೈವಿದ್ಯಂ ಚ ಗುಣಾಶ್ರಯಮ್ ॥
ಭಕ್ತಿಮಾನ್ ಭಗವತ್ಯಾಶು ಮಾಹಾತ್ಮ್ಯಶ್ರವಣಾದ್ಧರೇಃ ।
ಅನುತಾಪೋ ಮಹಾನಾಸೀತ್ಸ್ಮರತೋಽಶುಭಮಾತ್ಮನಃ ॥ ೨೭ ॥

'ಪ್ರಕೃತಿಂ ಗತ' ಎಂದು ಹೇಳಿದ್ದನ್ನೇ ವಿವರಿಸುತ್ತಾರೆ. ಅಥ–ವಿಷ್ಣುದೂತರು ಅದೃಶ್ಯರಾದಮೇಲೆ ಅಜಾಮಿಳರು ಯಮ-ಮತ್ತು ವಿಷ್ಣುವಿನ ದೂತಾನಾಂ (ಸಕಾಶಾತ್)–ದೂತರ ಕಡೆಯಿಂದ ಕ್ರಮವಾಗಿ ಗುಣಾಶ್ರಯಂ–ಸತ್ವ

ಪುರುಷೋತ್ತಮನ ಕಿಂಕರರು ಏನನ್ನೋ ಮಾತನಾಡಲಿರುವ ಆ ಅಜಾಮಿಳರನ್ನು ತಿಳಿದು (ಮನುಷ್ಯರೊಂದಿಗೆ ಮಾತನಾಡಬಾರದ್ದರಿಂದ) ನೋಡುತ್ತಿದ್ದಂತೆಯೇ ಅಲ್ಲಿಯೇ ಆಗಲೇ ಅಂತರ್ಹಿತರಾದರು. (ಕಣ್ಣಿಗೆ ಕಾಣದಂತಾದರು.) ಯಮದೂತರ ಮಾತುಗಳಿಂದ ವೇದಗಳಿಂದ ಅಮುಖ್ಯವಾಗಿ ಪ್ರತಿಪಾದಿತಗಳಾದ ಪ್ರಾಕೃತ ಸ್ವರ್ಗಾದಿ ಪ್ರಯೋಜನವುಳ್ಳ ಕರ್ಮಗಳನ್ನೂ, ವಿಷ್ಣುದೂತರ ಮಾತುಗಳಿಂದ ವೇದಗಳಿಂದ ಮುಖ್ಯವಾಗಿ ಪ್ರತಿಪಾದಿತವಾದ ಮೋಕ್ಷ ಪ್ರಯೋಜನವುಳ್ಳ ಭಗವತ್ಸಂಕೀರ್ತನಾದಿರೂಪ ಭಾಗವತ ಧರ್ಮಗಳನ್ನೂ ತಿಳಿದ ಅಜಾಮಿಳರಿಗೆ ಶ್ರೀಹರಿಯ ಮಾಹಾತ್ಮ್ಯಶ್ರವಣದಿಂದ ಜಾಗ್ರತೆಯಾಗಿ ಭಗವಂತನಲ್ಲಿ ಭಕ್ತಿಯು ಉದ್ಬುದ್ಧವಾಯಿತು. ತಾವು (ಆ ಜನ್ಮದಲ್ಲಿ) ಮಾಡಿದ ಪಾಪಕಾರ್ಯಗಳನ್ನು

ರಜಸ್ತಮೋಗುಣಗಳಿಂದ ಕೂಡಿದ ಸ್ವರ್ಗಾದಿ ಫಲಗಳುಳ್ಳ ತ್ರೈವಿದ್ಯಂ ಧರ್ಮಂ= ಮೂರು ವೇದಗಳಲ್ಲಿ ಅಮುಖ್ಯವಾಗಿ ಹೇಳಿದ ಧರ್ಮವನ್ನೂ ಶುದ್ಧಂ= ಮೋಕ್ಷ ಸಾಧನವಾದ ಮೂರು ವೇದಗಳಲ್ಲಿ ಮುಖ್ಯವಾಗಿ ಹೇಳಿದ ಭಾಗವತಂ= ಭಗವತ್ಕೀರ್ತನಾದಿರೂಪವಾದ ಧರ್ಮಂ ಚ=ಧರ್ಮವನ್ನೂ (ಯಮದೂತರಿಂದ ಸ್ವರ್ಗಾದಿಫಲಕ ಧರ್ಮಗಳನ್ನೂ ವಿಷ್ಣುದೂತರಿಂದ ಮೋಕ್ಷಜನಕ ಭಾಗವತ ಧರ್ಮ ವನ್ನೂ) ಆಕರ್ಣ್ಯ=ಭಕ್ತಿಯಿಂದ ಕೇಳಿ, ಹರೇಃ= ಶ್ರೀಹರಿಯ ಮಾಹಾತ್ಮ್ಯ-ಶ್ರವಣಾತ್=ಸಮಸ್ತ ಪಾಪ ಪರಿಹಾರಕ ಮಹಿಮೆಯನ್ನು ಕೇಳಿದ್ದರಿಂದ ಭಗವಂತನಲ್ಲಿ ಆಶು= ಕೂಡಲೇ (ತಾಮಸಾವರಕವು ಹೋದ್ದರಿಂದ) ಭಕ್ತಿಯುಳ್ಳವರು (ಅಭೂತ್)= ಆದರು. ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದಲ್ಲಿ ಶ್ರೀಹರಿಯಲ್ಲಿ ಭಕ್ತಿಯು ಅತ್ಯಂತ ದೃಢವಾಗುವುದಿಲ್ಲವಾಗಿ ಅದರ ಪ್ರಾಯಶ್ಚಿತ್ತ ಕ್ರಿಯಾ ಪ್ರಕಾರವನ್ನು ಹೇಳುತ್ತಾರೆ. ಆತ್ಮನಃ= ತಮ್ಮ ಅಶುಭಂ=ಪಾಪವನ್ನು ಸ್ಮರತಃ=ಸ್ಮರಿಸಿಕೊಂಡ ಆ ಅಜಾಮಿಳರಿಗೆ ಮಹಾನ್ ಅನುತಾಪಃ=ಅತಿಶಯವಾದ ಪಶ್ಚಾತ್ತಾಪವು ಆಸೀತ್=ಆಯಿತು. || ೨೮ ||

ಅಹೋ ಮೇ ಪರಮಂ ಕಷ್ಟಮಭೂದವಿಜಿತಾತ್ಮನಃ ।
ಯೇನ ವಿಪ್ಲಾವಿತಂ ಬ್ರಹ್ಮ ವೃಷಲ್ಯಾಂ ಜಾಯತಾಽಽತ್ಮನಾ ॥ ೨೯ ॥

ಮುಂದಿನ ನಾಲ್ಕು ಶ್ಲೋಕಗಳಿಂದ ಪಶ್ಚಾತ್ತಾಪವನ್ನೇ ವಿವರಿಸುತ್ತಾರೆ. ಯೇನ ಆತ್ಮನಾ=ಯಾವ ನನ್ನಿಂದ ವೃಷಲ್ಯಾಂ=ಶೂದ್ರಸ್ತ್ರೀಯಲ್ಲಿ ಜಾಯತಾ= ರೇತೋರೂಪದಿಂದ ಪ್ರವೇಶಿಸಿ ಮಗನನ್ನು ಪಡೆಯುವುದರಿಂದ ಬ್ರಹ್ಮ=ಬ್ರಾಹ್ಮಣ ಜಾತಿಯು ವಿಪ್ಲಾವಿತಂ=ವಿನಾಶ ಮಾಡಲ್ಪಟ್ಟಿತೋ ಅವಿಜಿತಾತ್ಮನಃ= ಮನಸ್ಸ ಗೆಲ್ಲದಿರುವ ಮೇ= ಅಂತಹ ನನಗೆ ಪರಮಂ ಕಷ್ಟಂ= ಅತ್ಯಂತ ಅಧರ್ಮವು ಅಭೂತ್=ಆಯಿತು. ಅಹೋ=ಅಯ್ಯೋ! || ೨೯ ||

ಧಿಙ್ಮಾಂ ವಿಗರ್ಹಿತಂ ಸದ್ಭಿರ್ದುಷ್ಕೃತಂ ಕುಲಕಜ್ಜಲಮ್ ।
ಹಿತ್ವಾ ಬಾಲಾಂ ಸತೀಂ ಯೋಽಹಂ ಸುರಾಪಾಮಸತೀಮಗಾಮ್ ॥

ಯಃ ಅಹಂ=ಯಾವ ನಾನು ಸತೀಂ=ಪತಿವ್ರತೆಯಾದ ಬಾಲಾಂ=ಅಪ್ರೌಢೆ ಯಾದ ಹೆಂಡತಿಯನ್ನು ಹಿತ್ವಾ=ಬಿಟ್ಟು ಸುರಾಪಾಂ=ಮದ್ಯವನ್ನು ಕುಡಿಯುವ ಅಸತೀಂ=ವ್ಯಭಿಚಾರಿಣಿಯಾದ ಈ ಶೂದ್ರಿತಿಯನ್ನು ಅಗಾಂ=ಸೇರಿದೆನೋ (ತಂ)=

ಸ್ಮರಿಸಿಕೊಂಡ ಅವರಿಗೆ ಅತಿಶಯವಾದ ಪಶ್ಚಾತ್ತಾಪವು ಉಂಟಾಯಿತು. 'ಅಯ್ಯೋ! ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳದ ನನಗೆ ಅತ್ಯಂತ ಅಧರ್ಮವೇ ಒದಗಿತು! ಶೂದ್ರಸ್ತ್ರೀಯಲ್ಲಿ ರೇತಸ್ಸನ್ನು ಸೇರಿಸಿ ಮಕ್ಕಳನ್ನು ಪಡೆದು ಬ್ರಾಹ್ಮಣ್ಯವನ್ನೇ ಹಾಳುಮಾಡಿದೆ! ಪತಿವ್ರತೆಯೂ ಬಾಲೆಯೂ ಆದ ಧರ್ಮಪತ್ನಿಯನ್ನು ತೊರೆದು ಮದ್ಯಪಾನಾಸಕ್ತಳಾದ ವ್ಯಭಿಚಾರಿಣಿಯನ್ನು ಸೇರಿದೆ! ಪಾಪಕಾರಿಯಾದ ನನ್ನನ್ನು

ಅಂತಹ ದುಷ್ಕೃತಂ=ಪಾಪಕಾರಿಯಾದ ಆದ್ದರಿಂದಲೇ ಸದ್ಭಿಃ = ಸದಾಚಾರಿಗಳಿಂದ ವಿಗರ್ಹಿತಂ = ನಿಂದಿತನಾದ ಆದ್ದರಿಂರಿದಲೇ ಕುಲಕಜ್ಜಲಂ = ಬ್ರಾಹ್ಮಣ ವಂಶಕ್ಕೇ ಮಸಿಯಾದ (ಕಳಂಕನಾದ) ಮಾಂ=ನನಗೆ ಧಿಕ್=ಧಿಕ್ಕಾರ! || ೩೦ ||

ವೃದ್ಧಾವನಾಥೌ ಪಿತರೌ ನಾನ್ಯಬಂಧೂ ತಪಸ್ವಿನೌ ।
ಅಹೋ ಮಯಾಽಧುನಾ ತ್ಯಕ್ತಾವಕೃತಜ್ಞೇನ ನೀಚವತ್ || ೩೧ ||

ಅಧುನಾ=ಕೂಡಲೇ ಅನಾಥೌ=ಪಾಲಕರಿಲ್ಲದ ನಾನ್ಯಬಂಧೂ=ನನ್ನನ್ನು ಬಿಟ್ಟರೆ ಬೇರೊಬ್ಬ ಮಗನೆಂಬ ಬಂಧುವಿಲ್ಲದ ತಪಸ್ವಿನೌ=ವೃದ್ಧರಾದ್ದರಿಂದ ಶೋಚನೀಯರಾದ, ಸಂತಪ್ತರಾದ ವೃದ್ಧೌ ಪಿತರೌ = ಮುದಿ ತಂದೆ ತಾಯಿಗಳು ಅಕೃತಜ್ಞೇನ=ಅವರ ಉಪಕಾರವನ್ನು ಸ್ಮರಿಸದ ಮಯಾ=ನನ್ನಿಂದ ನೀಚವತ್=ಅಧಮನಂತೆ ತ್ಯಕ್ತೌ=ಬಿಡಲ್ಪಟ್ಟರು. ಅಹೋ=ಅಯ್ಯೋ !! || ೩೧ ||

ಸೋಽಹಂ ವ್ಯಕ್ತಂ ಪತಿಷ್ಯಾಮಿ ನರಕೇ ಭೃಶದಾರುಣೇ ।
ಧರ್ಮಘ್ನಾಃ ಕಾಮಿನೋ ಯತ್ರ ವಿಂದಂತಿ ಯಮಯಾತನಾಃ ||

ಸಃ ಅಹಂ=ಹೀಗೆ ಕಾಮಾತುರತೆಯಿಂದ ಕುಲದ್ರೋಹಿ ಪಿತೃದ್ರೋಹಿಯಾದ ನಾನು ವ್ಯಕ್ತಂ=ನಿಶ್ಚಯವಾಗಿಯೂ ಯತ್ರ=ಯಾವ ನರಕದಲ್ಲಿ ಧರ್ಮಘ್ನಾಃ=ಧರ್ಮವನ್ನು ಕೊಂದ (ಧರ್ಮಭ್ರಷ್ಟರಾದ) ಕಾಮಿನಃ=ಕಾಮಾತುರರು ಯಮಯಾತನಾಃ=ಯಮಭಟರು ಕೊಡುವ ಕ್ರೂರ ಹಿಂಸೆಗಳನ್ನು ವಿಂದಂತಿ=ಅನುಭವಿಸುವರೋ (ತತ್ರ)=ಅಂತಹ ಭೃಶದಾರುಣೇ=ಅತ್ಯಂತ ಭಯಂಕರ ನರಕೇ=ನರಕದಲ್ಲಿ ಪತಿಷ್ಯಾಮಿ=ಬಿದ್ದೇ ಬೀಳುತ್ತೇನೆ. || ೩೨ ||

ಕಿಮಿದಂ ಸ್ವಪ್ನಮಾಹೋಸ್ವಿತ್ಸಾಕ್ಷಾದ್ದೃಷ್ಟಮಿಹಾದ್ಭುತಮ್ ।
ಕ್ವ ಯಾತಾ ಅದ್ಯ ತೇ ಯೇ ಮಾಂ ವ್ಯಕರ್ಷನ್ ಪಾಶಪಾಣಯಃ ||

ಈಗ ಅವರ ವಿಮರ್ಶಾಪೂರ್ವಕವಾದ ಮೋಕ್ಷಮಾರ್ಗಾನುಸರಣೆಯನ್ನು ಹೇಳುತ್ತಾರೆ. ಇದಂ = ನಾನು ಇದುವರೆಗೂ ನೋಡಿದ ಇದು ಕಿಂ ಸ್ವಪ್ನಂ=

ಸಜ್ಜನರು ನಿಂದಿಸುವರು! ಕುಲಕಲಂಕನಾದ ನನಗೆ ಧಿಕ್ಕಾರ! ನನ್ನ ತಂದೆ ತಾಯಿಗಳು ಮುದುಕರು. ಅವರಿಗೆ ಬೇರೆ ರಕ್ಷಕರಿಲ್ಲ. ಮಗನೆಂಬ ಬಂಧು ನಾನೊಬ್ಬನೇ. ಇಂತಹ ಶೋಚನೀಯ ಸ್ಥಿತಿಯಲ್ಲಿದ್ದ ಅವರನ್ನೂ ಕೃತಘ್ನನಾದ ನಾನು ನೀಚಪುತ್ರನಂತೆ ಅಂದೇ ತ್ಯಜಿಸಿದೆ. ಅಯ್ಯೋ! ಧರ್ಮಭ್ರಷ್ಟರಾದ ಕಾಮುಕರು ಯಮಯಾತನೆಯನ್ನು ಅನುಭವಿಸುವ ಅತಿ ಭಯಂಕರ ನರಕದಲ್ಲಿ ನಾನು ನಿಶ್ಚಯವಾಗಿಯೂ ಬೀಳುವೆನು!' ಎಂದವರು ತಮ್ಮನ್ನು ಹಳಿದುಕೊಂಡರು.

'ಇದುವರೆಗೂ ನಾನು ನೋಡಿದುದೆಲ್ಲವೂ ಸ್ವಪ್ನವೇ? ಅಥವಾ ಜಾಗ್ರದವಸ್ಥೆಯಲ್ಲಿಯೇ ಸಾಕ್ಷಾತ್ತಾಗಿ ಈ ಅದ್ಭುತವನ್ನು ಕಂಡೆನೇ? ನನ್ನನ್ನು ಎಳೆದ ಆ ಪಾಶ

ಸ್ವಪ್ನವೇ ? ಆಹೋ ಸ್ವಿತ್=ಅಥವಾ ಇಹ=ಜಾಗ್ರದವಸ್ಥೆಯಲ್ಲಿ ಸಾಕ್ಷಾತ್=ಇಂದ್ರಿಯ ಸನ್ನಿಕರ್ಷದಿಂದ ಪ್ರತ್ಯಕ್ಷವಾಗಿ ದೃಷ್ಟಂ=ಕಂಡ ಅದ್ಭುತಂ ಕಿಂ=ಆಶ್ಚರ್ಯಕರ ಘಟನೆಯೇನು ? ಯೇ=ಯಾವ ಪಾಶಪಾಣಯಃ=ಕೈಯಲ್ಲಿ ಯಮಪಾಶಧಾರಿಗಳಾಗಿದ್ದ ಜನರು ಮಾಂ=ನನ್ನನ್ನು ವ್ಯಕರ್ಷನ್=ಈ ದೇಹದಿಂದ ಎಳೆದರೋ ತೇ=ಅವರು ಅದ್ಯ=ಈಗ ಕ್ವ ಯಾತಾಃ=ಎಲ್ಲಿಗೆ ಹೋದರು ? ‖ ೩೩ ‖

ಅಥ ತೇ ಕ್ವ ಗತಾಃ ಸಿದ್ಧಾಶ್ಚತ್ವಾರಶ್ಚಾರುದರ್ಶನಾಃ ।
ವ್ಯಮೋಚಯನ್ನೀಯಮಾನಂ ಬದ್ಧ್ವಾ ಪಾಶೈರಧೋ ಭುವಃ ‖

ಅಥ=ಮತ್ತು ಚಾರುದರ್ಶನಾಃ=ನೋಡಲು ಸುಂದರರಾದ ಯೇ=ಯಾವ ಚತ್ವಾರಃ=ನಾಲ್ವರು ಪಾಶೈಃ=ಯಮಪಾಶಗಳಿಂದ ಬದ್ಧ್ವಾ=ಕಟ್ಟಿ ಯಮಭಟರಿಂದ ಭುವಃ ಅಧಃ=ಭೂಮಿಯ ಕೆಳಗಿರುವ ನರಕ(ಲೋಕ)ಕ್ಕೆ ನೀಯಮಾನಂ=ಒಯ್ಯಲ್ಪಡುತ್ತಿದ್ದ ನನ್ನನ್ನು ವ್ಯಮೋಚಯನ್=ಬಿಡಿಸಿದರೋ ತೇ ಸಿದ್ಧಾಃ=ಆ ಸಿದ್ಧ ಪುರುಷರು ಕ್ವ ಗತಾಃ=ಈಗ ಎಲ್ಲಿ ಹೋದರು ? ‖ ೩೪ ‖

ಅಥಾಪಿ ಮೇ ದುರ್ಭಗಸ್ಯ ವಿಬುಧೋತ್ತಮದರ್ಶನೇ ।
ಭವಿತವ್ಯಂ ಮಂಗಲೇನ ಯೇನಾತ್ಮಾ ಮೇ ಪ್ರಸೀದತಿ ‖ ೩೫ ‖

ವಿಷ್ಣುದೂತರನ್ನು ನೋಡುವುದಕ್ಕೆ ಕಾರಣವಾದ ಪುಣ್ಯವಿದ್ದಲ್ಲಿ ಇದೂ ಆಗಲಿ ಎಂದು ಪ್ರಾರ್ಥಿಸುತ್ತಾರೆ. ಅಥ=ಮತ್ತು ದುರ್ಭಗಸ್ಯ ಅಪಿ=ಈ ಜನ್ಮದಲ್ಲಿ ಪಾಪಿಯಾದರೂ ಮೇ=ನನಗೆ ವಿಬುಧೋತ್ತಮದರ್ಶನೇ=ದೇವಶ್ರೇಷ್ಠರ ದರ್ಶನವಾಗಬೇಕಾದರೆ ಮಂಗಲೇನ=ಜನ್ಮಾಂತರದಲ್ಲಿ ಸುಕೃತವು (ಪುಣ್ಯವು) ಭವಿತವ್ಯಂ=ಇರಲೇಬೇಕು. ಯೇನ=ಆ ದರ್ಶನಪುಣ್ಯದಿಂದ ಮೇ=ನನ್ನ ಆತ್ಮಾ=ಮನಸ್ಸು ಪ್ರಸೀದತಿ=ಪ್ರಸನ್ನವಾಗುವುದು. ಅಥವಾ ಮೇ=ನನ್ನ ವಿಷಯದಲ್ಲಿ ಆತ್ಮಾ=ಶ್ರೀಹರಿಯು ಪ್ರಸನ್ನನಾಗುವನು. ಇದರಿಂದ ಜನ್ಮಾಂತರದಲ್ಲಿ ಪುಣ್ಯವಂತನಿರಬೇಕೆಂದು ಅನುಮಾನ (ಊಹೆ) ದಿಂದ ನಿಶ್ಚಯಿಸಿದಂತಾಯಿತು. ‖ ೩೫ ‖

ಅನ್ಯಥಾ ಮ್ರಿಯಮಾಣಸ್ಯ ನಾಶುಚೇರ್ವೃಷಲೀಪತೇಃ ।
ವೈಕುಂಠನಾಮಗ್ರಹಣಂ ಜಿಹ್ವಾ ವಕ್ತುಮಿಹಾರ್ಹತಿ ‖ ೩೬ ‖

ಪಾಣಿಗಳು ಈಗೆಲ್ಲಿ ಹೋದರು ? ಆ ಸಿದ್ಧಪುರುಷರು ನಾಲ್ವರು ನೋಡಲು ಸುಂದರರಾಗಿದ್ದರು. ಅವರು ಯಮಪಾಶಗಳಿಂದ ಕಟ್ಟಿ ನನ್ನನ್ನು ನರಕಕ್ಕೆ ಒಯ್ಯುತ್ತಿದ್ದ ಯಮಭಟರಿಂದ ಬಿಡಿಸಿದರು. ಅವರೆಲ್ಲಿಗೆ ಹೋದರು ? ನಾನೇನೋ ಈ ಜನ್ಮದಲ್ಲಿ ಪಾಪಿ. ಆದರೂ ನನಗೆ ಆ ದೇವಶ್ರೇಷ್ಠರ ದರ್ಶನವಾಯಿತು. ಇದಾಗಬೇಕಾದರೆ ನನಗೆ ಜನ್ಮಾಂತರದ ಪುಣ್ಯವಿರಲೇಬೇಕು. ಅವರ ದರ್ಶನ ಪುಣ್ಯದಿಂದ ನನ್ನ ಮನಸ್ಸು ಪ್ರಸನ್ನವಾಯಿತು. ಶ್ರೀಹರಿಯು ನನ್ನಲ್ಲಿ ಪ್ರಸನ್ನನಾಗುವನು. ಈ ಜನ್ಮದಲ್ಲಿ ದಾಸೀಪತಿಯೂ ಆದ್ದರಿಂದ ಅಶುಚಿಯೂ ಆದ ನಾನು

ಅನ್ಯಥಾ ಹಿಂದಿನ ಜನ್ಮದಲ್ಲಿ ನಾನು ಮಾಡಿದ ಪುಣ್ಯವಿಲ್ಲದಿದ್ದರೆ ಅಶುಚೇಃ= ಈ ಜನ್ಮದಲ್ಲಿ ಶುಚಿಯಲ್ಲದ ಮ್ರಿಯಮಾಣಸ್ಯ=ಸಾಯಲಿದ್ದ ವೃಷಲೀಪತೇಃ= ಶೂದ್ರಸ್ತ್ರೀ ಪತಿಯಾದ (ಮೇ)=ನನ್ನ ಜಿಹ್ವಾ=ನಾಲಗೆಯು ಇಹ=ಈ ಜನ್ಮದಲ್ಲಿ ವೈಕುಂಠನಾಮಗ್ರಹಣಂ= ಶ್ರೀಹರಿಯ ನಾಮದ ಉಚ್ಚಾರಣೆಯನ್ನು ವಕ್ತುಂ= ಹೇಳಲು (ಮಾಡಲು) ನ ಅರ್ಹತಿ=ಯೋಗ್ಯವಲ್ಲವು. || ೩೬ ||

ಕ್ವ ಚಾಹಂ ಕಿತವಃ ಪಾಪೋ ಬ್ರಹ್ಮಘ್ನೋ ನಿರಪತ್ರಪಃ ।
ಕ್ವ ಚ ನಾರಾಯಣೇತ್ಯೇತದ್ಭಗವನ್ನಾಮ ಮಂಗಲಮ್ || ೩೭ ||

ಕಿತವಃ=ಧೂರ್ತನೂ ಪಾಪಃ = ಪಾಪಿಯೂ ಬ್ರಹ್ಮಘ್ನಃ = ಬ್ರಾಹ್ಮಣ ಜಾತಿಯನ್ನು ಕಳೆದುಕೊಂಡವನೂ ನಿರಪತ್ರಪಃ ಚ = ನಾಚಿಕೆಯಿಲ್ಲದವನೂ ಆದ ಅಹಂ=ನಾನು ಕ್ವ=ಎಲ್ಲಿ? ಮಂಗಲಮ್=ಮೋಕ್ಷಾದಿ ಸಕಲ ಶುಭದಾಯಕವಾದ ನಾರಾಯಣನೆಂಬ ಶ್ರೀಹರಿಯನಾಮವು ಕ್ವ ಚ=ಅದರೋ ಎಲ್ಲಿ? || ೩೭ ||

ಸೋಽಹಂ ತಥಾ ಯತಿಷ್ಯಾಮಿ ಯತಚಿತ್ತೇಂದ್ರಿಯಾನಿಲಃ ।
ಯಥಾ ನ ಭೂಯ ಆತ್ಮಾನಮಂಧೇ ತಮಸಿ ಮಜ್ಜಯೇ || ೩೮ ||

ಸಃ ಅಹಂ = ಹೀಗೆ ಭಕ್ತಿಯಿಂದ ಭಗವನ್ನಾಮೋಚ್ಚಾರಣೆಯ ಫಲವಾಗಿ ವಿಷ್ಣುದೂತರಿಂದ ಮೃತ್ಯುವಿನಿಂದ ರಕ್ಷಿತನಾದ ನಾನು ಭೂಯಃ=ಮತ್ತೆ ಯಥಾ= ಹೇಗೆ ಅಂಧೇ ತಮಸಿ = ಅಂಧ ತಮಸ್ಸೆಂಬ ನರಕದಲ್ಲಿ ಆತ್ಮಾನಂ = ನನ್ನನ್ನು ನ ಮಜ್ಜಯೇ = ಮುಳುಗಿಸುವುದಿಲ್ಲವೋ (ಬೀಳಿಸುವುದಿಲ್ಲವೋ) ತಥಾ = ಹಾಗೆ ಯತಚಿತ್ತೇಂದ್ರಿಯಾನಿಲಃ (ಸನ್) = ಮನಸ್ಸು, ಇಂದ್ರಿಯಗಳು, ಮತ್ತು ಶ್ವಾಸ ವಾಯುವನ್ನು ನಿಗ್ರಹಮಾಡಿದನಾಗಿ ಯತಿಷ್ಯಾಮಿ=ಪ್ರಯತ್ನಿಸುತ್ತೇನೆ. || ೩೮ ||

ವಿಮುಚ್ಯ ತಮಿಮಂ ಬಂಧಮವಿದ್ಯಾಕಾಮಕರ್ಮಜಮ್ ।
ಸರ್ವಭೂತಸುಹೃಚ್ಛಾಂತೋ ಮೈತ್ರಃ ಕರುಣ ಆತ್ಮವಾನ್ || ೩೯ ||

ಸಾಯಲಿದ್ದಾಗ ನನ್ನ ನಾಲಿಗೆಯು, ಹಿಂದಿನ ಜನ್ಮದ ಪುಣ್ಯವಿಲ್ಲದೆ ಹೋಗಿದ್ದಲ್ಲಿ, ಶ್ರೀಹರಿಯ ನಾಮವನ್ನು ಉಚ್ಚರಿಸಲು ಅರ್ಹವಾಗುತ್ತಿರಲಿಲ್ಲ. ಧೂರ್ತನೂ ಪಾಪಿಯೂ ಬ್ರಾಹ್ಮಣ್ಯವನ್ನು ಕಳೆದುಕೊಂಡವನೂ ಲಜ್ಜಾರಹಿತನೂ ಆದ ನಾನೆಲ್ಲಿ? ಮೋಕ್ಷ ಮೊದಲಾಗಿ ಎಲ್ಲ ಶುಭಗಳನ್ನೂ ಕೊಡುವ ನಾರಾಯಣನೆಂಬ ಹರಿನಾಮವೆಲ್ಲಿ? ವಿಷ್ಣುದೂತರಿಂದ ರಕ್ಷಿತನಾದ ನಾನು ಮತ್ತೆ ನರಕಕ್ಕೆ ಬೀಳದಿರುವಂತೆ ಮನಸ್ಸನ್ನೂ ಇಂದ್ರಿಯಗಳನ್ನೂ ಶ್ವಾಸವನ್ನೂ ಜಯಿಸಿ ಪ್ರಯತ್ನಿಸುತ್ತೇನೆ. ಎಲ್ಲ ಪ್ರಾಣಿಗಳಿಗೆ ಸ್ನೇಹಿತನಾಗಿಯೂ ದಾಂತನಾಗಿಯೂ ಸಮಾನರಲ್ಲಿ ಸ್ನೇಹ ಮಾಡುವನಾಗಿಯೂ ನನಗಿಂತ ಹೀನರಲ್ಲಿ ಕರುಣಾವಂತನಾಗಿಯೂ ಮನಸ್ವಿಯಾಗಿಯೂ ಆಗುತ್ತೇನೆ. ಅವಿದ್ಯೆ, ರಾಗ ಮತ್ತು ಕರ್ಮಫಲವಾಗಿ ಬಂದಿರುವ

ಮೋಚಯೇ ಗ್ರಸ್ತಮಾತ್ಮಾನಂ ಯೋಷಿನ್ಮಯ್ಯಾಽಽತ್ಮಮಾಯಯಾ
ವಿಕ್ರೀಡಿತೋ ಯಥೈವಾಹಂ ಕ್ರೀಡಾಮೃಗ ಇವಾಧಮಃ ॥ ೪೦ ॥

ಸರ್ವಭೂತಸುಹೃತ್ = ಎಲ್ಲ ಪ್ರಾಣಿಗಳಿಗೂ ಸ್ನೇಹಿತನೂ ದಾಂತಃ = ಇಂದ್ರಿಯನಿಗ್ರಹವುಳ್ಳವನೂ ಮೈತ್ರಃ = ಸಮಾನರಲ್ಲಿ ಸ್ನೇಹಪರನೂ ಕರುಣಃ = ಕೆಳಗಣವರಲ್ಲಿ ಕರುಣಾವಂತನೂ ಆತ್ಮವಾನ್ = ಮನಸ್ಸನ್ನು ವಶಪಡಿಸಿಕೊಂಡವನೂ (ಭೂತ್ವಾ) = ಆಗಿ ಅವಿದ್ಯಾಕಾಮಕರ್ಮಜಂ – ಅವಿದ್ಯೆಯಿಂದಲೂ ರಾಗದಿಂದಲೂ ಕರ್ಮದಿಂದಲೂ ಬಂದಿರುವ ಇಮಂ ಬಂಧಂ – ಈ ಬಂಧನ (ಸಂಸಾರ) ವನ್ನು ವಿಮುಚ್ಯ – ಹೋಗಲಾಡಿಸಿಕೊಂಡು ಯೋಷಿನ್ಮಯ್ಯಾ – ಹೆಂಗಸಿನ ರೂಪದಲ್ಲಿರುವ ಆತ್ಮಮಾಯಯಾ – ಶ್ರೀಹರಿಯ ಅಧೀನವಾದ ಲೋಕಮೋಹನಶಕ್ತಿಯಿಂದ (ಶ್ರೀಹರಿಯ ಬಂಧಕಶಕ್ತಿಯಿಂದ) ಗ್ರಸ್ತಂ = ಹಿಡಿಯಲ್ಪಟ್ಟಿರುವ (ಬಂಧಕಶಕ್ತಿಗೆ ಸಿಕ್ಕಿಬಿದ್ದಿರುವ) ಆತ್ಮಾನಂ = ನನ್ನನ್ನು ಮೋಚಯೇ = ಶ್ರೀಹರಿಯ ಅನುಗ್ರಹದಿಂದ ಆ ಬಂಧಕಶಕ್ತಿಯಿಂದ ಬಿಡಿಸಿಕೊಳ್ಳುತ್ತೇನೆ. ಅಧಮಃ ಅಹಂ – ಶ್ರೀಹರಿಯನ್ನು ಮರೆತ ಪಾಪಿಯಾದ ನಾನು ಯಥಾ – ಯಥಾವತ್ತಾಗಿ ಕ್ರೀಡಾಮೃಗಃ ಇವ = ಆಟದ ಜಿಂಕೆಯಂತೆ ವಿಕ್ರೀಡಿತಃ ಏವ – (ಆ ಬಂಧಕ ಶಕ್ತಿಯಿಂದ) ಅನೇಕ ಬಗೆಯಲ್ಲಿ ಆಟವಾಡಿಸಲ್ಪಟ್ಟವನೇ ಆಗಿರುವೆನು. ॥ ೩೯, ೪೦ ॥

ಮಮಾಹಮಿತಿ ದೇಹಾದೌ ಹಿತ್ವಾ ಮಿಥ್ಯಾರ್ಥಧೀರ್ಮತಿಮ್ ।
ಧಾಸ್ಯೇ ಮನೋ ಭಗವತಿ ಶುದ್ಧಂ ತತ್ಕೀರ್ತನಾದಿಭಿಃ ॥ ೪೧ ॥

ಅರ್ಥಧೀಃ = ಮೋಕ್ಷವೆಂಬ ಪುರುಷಾರ್ಥದಲ್ಲಿ ಮನಸ್ಸುಳ್ಳ (ಅಹಂ) – ನಾನು ದೇಹಾದೌ – ಶರೀರ, ಹೆಂಡತಿ, ಮಕ್ಕಳು, ಮನೆ ಮೊದಲಾದವುಗಳಲ್ಲಿ ಅಹಂ ಮಮ ಇತಿ = ನಾನು ನನ್ನದು ಎಂಬ ಮಿಥ್ಯಾ ಮತಿಂ = ಸ್ವಾತಂತ್ರ್ಯಾಭಿಮಾನವನ್ನು ಹಿತ್ವಾ = ಬಿಟ್ಟು ತತ್ಕೀರ್ತನಾದಿಭಿಃ – ಶ್ರೀಹರಿಯ ನಾಮಕೀರ್ತನೆ ಮೊದಲಾದವುಗಳಿಂದ ಶುದ್ಧಂ – ಪವಿತ್ರವಾದ ಮನಃ – ಮನಸ್ಸನ್ನು ಭಗವತಿ = ಶ್ರೀಹರಿಯಲ್ಲಿ ಧಾಸ್ಯೇ – ಇಡುತ್ತೇನೆ. ॥ ೪೧ ॥

ಈ ಬಂಧನವನ್ನು ಹೋಗಲಾಡಿಸಿಕೊಳ್ಳುತ್ತೇನೆ. ಶ್ರೀಹರಿಯ ಅಧೀನವಾದ ಲೋಕಮೋಹನ ಶಕ್ತಿಯೇ ಹೆಂಗುಸಿನ ರೂಪದಲ್ಲಿದೆ. ಅದಕ್ಕೆ ಸಿಕ್ಕಿಹೋಗಿರುವ ಈ ಜೀವವನ್ನು ಶ್ರೀಹರಿಯ ಅನುಗ್ರಹದಿಂದ ಅದರಿಂದ ತಪ್ಪಿಸಿಕೊಳ್ಳುತ್ತೇನೆ. ಶ್ರೀಹರಿಯನ್ನು ಮರೆತು ಪಾಪಿಯಾದ ನಾನು ಕ್ರೀಡಾಮೃಗದಂತೆ ನಿಜವಾಗಿಯೂ ಆ ಬಂಧಕಶಕ್ತಿಯಿಂದ ಅನೇಕ ರೀತಿಯಲ್ಲಿ ಕುಣಿಸಲ್ಪಟ್ಟೆನು. ಮೋಕ್ಷಾಪೇಕ್ಷಿಯಾದ ನಾನು ದೇಹ ಮೊದಲಾದವುಗಳಲ್ಲಿ ನಾನು ನನ್ನದು ಎಂಬ ಸ್ವಾತಂತ್ರ್ಯಾಭಿಮಾನವನ್ನು ಬಿಟ್ಟು ಶ್ರೀಹರಿನಾಮಕೀರ್ತನೆಯಿಂದ ಶುದ್ಧವಾಗಿರುವ ಈ ಮನಸ್ಸನ್ನು ಪರಮಾತ್ಮನಲ್ಲಿಯೇ ಇಡುತ್ತೇನೆ.' ಎಂದುಕೊಂಡರು ಅಜಾಮಿಳರು.

ಇತಿ ಜಾತಸುನಿರ್ವೇದಃ ಕ್ಷಣಸಂಗೇನ ಸಾಧುಷು ।
ಗಂಗಾದ್ವಾರಮುಪೇಯಾಯ ಮುಕ್ತಸರ್ವಾನುಬಂಧನಃ ॥ ೪೨ ॥

ಸಾಧುಷು = ವಿಷ್ಣುಭಕ್ತರಲ್ಲಿ ಕ್ಷಣಸಂಗೇನ = ಸ್ವಲ್ಪಕಾಲದ ಸಂಬಂಧದಿಂದ (ಸಂಬಂಧದ ಫಲವಾಗಿ) ಇತಿ = ಮೇಲೆ ಹೇಳಿದಂತೆ ಜಾತಸುನಿರ್ವೇದಃ = ಸ್ಥಿರ ವೈರಾಗ್ಯ ಹುಟ್ಟಿದ ಆದ್ದರಿಂದಲೇ ಮುಕ್ತಸರ್ವಾನುಬಂಧನಃ (ಸನ್) ಮಕ್ಕಳಲ್ಲಿ ಅಭಿಮಾನ ಮೊದಲಾದ ಎಲ್ಲ ಅಭಿಮಾನಗಳನ್ನೂ ಬಿಟ್ಟವರಾಗಿ (ಸಃ) = ಆ ಅಜಾಮಿಳರು ಗಂಗಾದ್ವಾರವೆಂಬ ತೀರ್ಥಕ್ಕೆ (ಹರಿದ್ವಾರ ?) ಉಪೇಯಾಯ = ಬಂದರು. ॥ ೪೨ ॥

ಸ ತಸ್ಮಿನ್ ದೇವಸದನ ಆಸೀನೋ ಯೋಗಮಾಸ್ಥಿತಃ ।
ಪ್ರತ್ಯಾಹೃತೇಂದ್ರಿಯಗ್ರಾಮೋ ಯುಯೋಜ ಮನ ಆತ್ಮನಿ ॥ ೪೩ ॥

ತಸ್ಮಿನ್ = ಆ ಗಂಗಾದ್ವಾರದಲ್ಲಿ ದೇವಸದನೇ = ತ್ರಿವಿಕ್ರಮ ದೇವರ ಗುಡಿಯಲ್ಲಿ ಆಸೀನಃ = ಇದ್ದ ಸಃ = ಅವರು ಯೋಗಂ = ಪ್ರಾಣಾಯಾಮಾದಿ ಯೋಗಾಭ್ಯಾಸವನ್ನು ಆಸ್ಥಿತಃ (ಸನ್) = ಹೊಂದಿದವರಾಗಿ ಪ್ರತ್ಯಾಹೃತೇಂದ್ರಿಯಗ್ರಾಮಃ (ಸನ್) = ಇಂದ್ರಿಯಸಮೂಹವನ್ನು ವಶಪಡಿಸಿಕೊಂಡವರಾಗಿ ಮನಸ್ಸನ್ನು ಆತ್ಮನಿ = ತಮ್ಮ ಅಂತರ್ಯಾಮಿ ಶ್ರೀಹರಿಯಲ್ಲಿ ಯುಯೋಜ = ನೆಲೆಗೊಳಿಸಿದರು. ಇದರಿಂದ ಅವರ ಉಪಾಸನಾಪ್ರಕಾರವನ್ನು ಹೇಳಿದಂತಾಯಿತು. ॥ ೪೩ ॥

ತತೋ ಗುಣೇಭ್ಯ ಆತ್ಮಾನಂ ವಿಯುಜ್ಯಾತ್ಮಸಮಾಧಿನಾ ।
ಯುಯೋಜ ಭಗವದ್ಧಾಮ್ನಿ ಬ್ರಹ್ಮಣ್ಯನುಭವಾತ್ಮನಿ ॥ ೪೪ ॥

ತತಃ = ತಮ್ಮ ಅಂತರ್ಯಾಮಿಯನ್ನು ಉಪಾಸಿಸಿದ ಮೇಲೆ ಆತ್ಮಸಮಾಧಿನಾ = ಚಿತ್ತದ ಏಕಾಗ್ರತೆಯಿಂದ ಆತ್ಮಾನಂ = (೧) ತಮ್ಮ ಸ್ವರೂಪವನ್ನು (೨) ಅಂತರ್ಯಾಮಿಯಾದ ಶ್ರೀಹರಿಯನ್ನು ಗುಣೇಭ್ಯಃ = ಪ್ರಾಕೃತ ಗುಣ ಕಾರ್ಯಗಳಾದ ದೇಹೇಂದ್ರಿಯಾದಿಗಳಿಂದ ವಿಯುಜ್ಯ = ವಿಲಕ್ಷಣವೆಂದು ಸ್ಪಷ್ಟವಾಗಿ ತಿಳಿದು ಭಗವದ್ಧಾಮ್ನಿ = ಸಮಗ್ರ ಐಶ್ವರ್ಯಕ್ಕೆ ಆಶ್ರಯನಾದ, ಐಶ್ವರ್ಯಸ್ವರೂಪನಾದ ಅನುಭವಾತ್ಮನಿ = ಜ್ಞಾನಸ್ವರೂಪನಾದ ಬ್ರಹ್ಮಣಿ = ಗುಣಪೂರ್ಣವಾದ ವ್ಯಾಪ್ತರೂಪದಲ್ಲಿ ಯುಯೋಜ = (೧) ನೆಲೆಗೊಳಿಸಿದರು. ವ್ಯಾಪ್ತರೂಪವನ್ನು ಉಪಾಸಿಸಿದರು. (೨) ಅಂತರ್ಯಾಮಿಯೂ ವ್ಯಾಪ್ತನೂ ಒಂದೆಂದು ಭಗವದ್ರೂಪಗಳಿಗೆ ಐಕ್ಯಚಿಂತನೆ ಮಾಡಿದರು. ॥ ೪೪ ॥

ಸಾಧುಗಳ ಸ್ವಲ್ಪಕಾಲದ ಸಹವಾಸದಿಂದ ಅಜಾಮಿಳರಿಗೆ ಈ ಬಗೆಯ ವೈರಾಗ್ಯವು ಉತ್ಪನ್ನವಾಯಿತು. ಮಕ್ಕಳು ಮೊದಲಾಗಿ ಎಲ್ಲದರಲ್ಲಿಯೂ ಅನುರಾಗವನ್ನು ತೊರೆದರು. ಗಂಗಾದ್ವಾರವೆಂಬ ತೀರ್ಥಕ್ಕೆ ಬಂದರು. ಅಲ್ಲಿ ದೇವರ ಗುಡಿಯಲ್ಲಿ ಇರುತ್ತಾ ಯೋಗಾಭ್ಯಾಸರತರಾದರು. ಇಂದ್ರಿಯಗಳನ್ನೆಲ್ಲ

ಯರ್ಹ್ಯುಪಾರತಧೀಸ್ತಸ್ಮಿನ್ನದ್ರಾಕ್ಷೀತ್ಪುರುಷಾನ್ ಪುರಃ ।
ಉಪಲಭ್ಯೋಪಲಬ್ಧಾನ್ ಪ್ರಾಗ್ವವಂದೇ ಶಿರಸಾ ದ್ವಿಜಃ ॥ ೪೫ ॥

ಯರ್ಹಿ = ಯಾವಾಗ ಉಪಾರತಧೀಃ (ಅಭೂತ್) = ಬಾಹ್ಯ ವಿಷಯಗಳನ್ನು ಬಿಟ್ಟು ಶ್ರೀಹರಿಯಲ್ಲಿಯೇ ನಿರತವಾದ ಬುದ್ಧಿಯುಳ್ಳವರಾದರೋ ತಸ್ಮಿನ್ = ಆ ಕಾಲ ದಲ್ಲಿ ಅಥವಾ ತಸ್ಮಿನ್ = ಆ ಶ್ರೀಹರಿಯ ರೂಪದಲ್ಲಿ ಉಪಾರತ = ನಿಶ್ಚಿತವಾದ ಧೀಃ (ಅಭೂತ್) = ಬುದ್ಧಿಯುಳ್ಳವರಾದರೋ (ತರ್ಹಿ) = ಆ ಕಾಲದಲ್ಲಿ ಪುರಃ = ತಮ್ಮ ಎದುರಿನಲ್ಲಿ ಪುರುಷರನ್ನು ಅದ್ರಾಕ್ಷೀತ್ = ಕಂಡರು. ಪ್ರಾಕ್ = ಹಿಂದೆಯೇ ಉಪ-ಲಬ್ಧಾನ್ = ಕಂಡಿದ್ದ ಅವರನ್ನು ಉಪಲಭ್ಯ = ಗುರುತು ಹಿಡಿದು ಆ ದ್ವಿಜರು ಶಿರಸಾ = ತಲೆಯಿಂದ ವವಂದೇ = ನಮಸ್ಕರಿಸಿದರು. ॥ ೪೫ ॥

ಹಿತ್ವಾ ಕಲೇವರಂ ತೀರ್ಥೇ ಗಂಗಾಯಾಂ ದರ್ಶನಾದನು ।
ಸದ್ಯಃ ಸ್ವರೂಪಂ ಜಗೃಹೇ ಭಗವತ್ಪಾರ್ಶ್ವವರ್ತಿನಾಮ್ ॥ ೪೬ ॥

ದರ್ಶನಾತ್ ಅನು = ವಿಷ್ಣುದೂತರನ್ನು ಕಂಡಮೇಲೆ ತೀರ್ಥೇ = ಆ ಗಂಗಾದ್ವಾರ ದಲ್ಲಿ ಗಂಗಾಯಾಂ = ಗಂಗಾನದಿಯಲ್ಲಿ ಕಲೇವರಂ = ತಮ್ಮ ದೇಹವನ್ನು ಹಿತ್ವಾ = ಬಿಟ್ಟು ಸದ್ಯಃ = ಕೂಡಲೇ ಭಗವತ್ಪಾರ್ಶ್ವವರ್ತಿನಾಂ = ಮುಕ್ತರ ಸ್ವರೂಪಂ = ನಿರ್ದೋಷತ್ವ ಮೊದಲಾದ ರೀತಿಯನ್ನು ಜಗೃಹೇ = ಹೊಂದಿದರು. ಅಥವಾ ಭಗವಂತನ ಪಾರ್ಷದರಂತೆ ಸಾರೂಪ್ಯ ಮೋಕ್ಷವನ್ನು ಹೊಂದಿದರು. (ಇಲ್ಲಿ ಸದ್ಯಃ ಎಂಬುದಕ್ಕೆ ಮೋಕ್ಷವಾದಾಗ ಎಂದರ್ಥ ಮಾಡಿಕೊಳ್ಳಬೇಕು.) ॥ ೪೬ ॥

ವಿಷಯಗಳಿಂದ ಹಿಂದಕ್ಕೆ ಸೆಳೆದು ವಶದಲ್ಲಿಟ್ಟುಕೊಂಡರು. ಮನಸ್ಸನ್ನು ತಮ್ಮ ಅಂತರ್ಯಾಮಿ ಶ್ರೀಹರಿಯಲ್ಲಿ ನೆಲೆಗೊಳಿಸಿದರು. ಅನಂತರ ಏಕಾಗ್ರಮನಸ್ಸಿನಿಂದ ದೇಹಾದಿಗಳಿಂದ ಆತ್ಮನು ಭಿನ್ನನೆಂದೂ ಶ್ರೀಹರಿಯು ಸರ್ವವಿಲಕ್ಷಣನೆಂದೂ ಉಪಾಸಿಸಿ ಅಂತರ್ಯಾಮಿರೂಪವೂ ವ್ಯಾಪ್ತರೂಪವೂ ಒಂದೇ ಎಂದು ಚಿಂತಿಸಿದರು. ಶ್ರೀಹರಿಯು ಸಮಸ್ತ ಐಶ್ವರ್ಯಕ್ಕೂ ಆಶ್ರಯನು. ಜ್ಞಾನಸ್ವರೂಪನು. ಅಜಾಮಿಳರ ಮನಸ್ಸು ಬಾಹ್ಯವಿಷಯಗಳನ್ನು ಬಿಟ್ಟು ಶ್ರೀಹರಿಯಲ್ಲಿಯೇ ಆಸಕ್ತ ವಾದಾಗ–ಶ್ರೀಹರಿಯ ರೂಪದಲ್ಲಿ ನಿಶ್ಚಿತಮನಸ್ಕರಾದಾಗ–ಅವರು ಮತ್ತೆ ಪುರುಷ ರನ್ನು ಕಂಡರು. ಹಿಂದೆ ನೋಡಿದ್ದ ಪುರುಷರೇ ಅವರೆಂದು ಗುರುತಿಸಿ ಅವರಿಗೆ ತಲೆತಗ್ಗಿಸಿ ನಮಸ್ಕರಿಸಿದರು. ಅನಂತರ ಅಲ್ಲಿಯೇ ಗಂಗೆಯಲ್ಲಿ ತಮ್ಮ ಭೌತಿಕ ದೇಹವನ್ನು ತ್ಯಜಿಸಿದರು. ಕೂಡಲೆ ಮುಕ್ತರ ನಿರ್ದೋಷತೆಯನ್ನು ಹೊಂದಿದರು. ಭಗವಂತನ ಪಾರ್ಶ್ವವರ್ತಿಗಳ ಸಾರೂಪ್ಯವನ್ನು ಹೊಂದಿದರು (ಹೊಂದುವರು).

ಸಾಕಂ ವಿಹಾಯಸಾ ವಿಪ್ರೋ ಮಹಾಪುರುಷಕಿಂಕರೈಃ ।
ಹೈಮಂ ವಿಮಾನಮಾರುಹ್ಯ ಯಯೌ ಯತ್ರ ಶ್ರಿಯಃಪತಿಃ ॥

ವಿಪ್ರಃ=ಅಜಾಮಿಳರು ಮಹಾಪುರುಷಕಿಂಕರೈಃ ಸಾಕಂ=ವಿಷ್ಣುದೂತರೊಂದಿಗೆ ಹೈಮಂ=ಬಂಗಾರದ ವಿಮಾನವನ್ನು ಆರುಹ್ಯ=ಏರಿ ವಿಹಾಯಸಾ=ಆಕಾಶಮಾರ್ಗದಿಂದ ಯತ್ರ=ಯಾವ ವೈಕುಂಠದಲ್ಲಿ ಶ್ರಿಯಃಪತಿಃ=ಲಕ್ಷ್ಮೀಪತಿಯಾದ ಹರಿಯು ಇರುವನೋ ತತ್ರ=ಆ ವೈಕುಂಠಲೋಕದಲ್ಲಿ ಅಮುಕ್ತಸ್ಥಾನಕ್ಕೆ ಯಯೌ=ಹೋದರು. ॥ ೪೭ ॥

ಏವಂ ಸ ವಿಪ್ಲಾವಿತಸರ್ವಧರ್ಮಾ
ದಾಸ್ಯಾಃ ಪತಿಃ ಪತಿತೋ ಗರ್ಹ್ಯಕರ್ಮಾ ।
ನಿಪಾತ್ಯಮಾನೋ ನಿರಯೇ ಹತವ್ರತಃ
ಸದ್ಯೋ ವಿಮುಕ್ತೋ ಭಗವನ್ನಾಮ ಗೃಹ್ಣನ್ ॥ ೪೮ ॥

ಶ್ರೀಹರಿಯ ನಾಮಸಂಕೀರ್ತನೆಯಲ್ಲಿ ಅತಿಶಯ ಶ್ರದ್ಧೆಯನ್ನು ಹುಟ್ಟಿಸುವರಾಗಿ ಕಥೆಯನ್ನು ಮುಗಿಸುತ್ತಾರೆ. ಎಲ್ಲ ಧರ್ಮಗಳನ್ನೂ ಹಾಳುಮಾಡಿದ ಗರ್ಹ್ಯಕರ್ಮಾ=ಸಜ್ಜನರಿಂದ ನಿಂದ್ಯವಾದ ಕರ್ಮ ಮಾಡಿದ ಆದ್ದರಿಂದಲೇ ಪತಿತಃ=ಜಾತಿಭ್ರಷ್ಟರಾದ ಹತವ್ರತಃ=ನಿಯಮಗಳನ್ನು ಹಾಳುಮಾಡಿಕೊಂಡ ನಿರಯೇ=ಪಾಪದ ಫಲವಾಗಿ ನರಕದಲ್ಲಿ ನಿಪಾತ್ಯಮಾನಃ=ತಳ್ಳಲ್ಪಡಲಿದ್ದ ಸಃ ದಾಸ್ಯಾಃ ಪತಿಃ=ಆ ದಾಸೀಪತಿಯಾದ ಅಜಾಮಿಳರು ಭಗವಂತನ ನಾಮವನ್ನು ಗೃಹ್ಣನ್=ಭಕ್ತಿಯಿಂದ ಉಚ್ಚರಿಸುತ್ತಾ ಸದ್ಯಃ=ತತ್‌ಕ್ಷಣದಲ್ಲಿಯೇ ವಿಮುಕ್ತಃ=ಮೃತ್ಯುವಿನಿಂದ ಬಿಡುಗಡೆ ಹೊಂದಿದರು. ದಾಸ್ಯಾಃ ಪತಿಃ ಎಂಬಲ್ಲಿ ಷಷ್ಠಿಯು ಜನರ ಆಕ್ರೋಶವನ್ನು ಸೂಚಿಸುತ್ತದೆ. ಅಜಾಮಿಳನೆಂಬ ಹೆಸರನ್ನು ಬಿಟ್ಟು ದಾಸೀಪತಿಯೆಂದು ಜನರು ಕರೆಯುತ್ತಿದ್ದರೆಂದರ್ಥ. ॥ ೪೮ ॥

ವಿಷ್ಣುದೂತರೊಂದಿಗೆ ಚಿನ್ನದ ವಿಮಾನವನ್ನೇರಿ ಆಕಾಶಮಾರ್ಗದಿಂದ ಶ್ರೀಹರಿಯು ವ್ಯಕ್ತನಾಗಿ ಇರುವ ವೈಕುಂಠವನ್ನು ಸೇರಿ ಅಲ್ಲಿ ಅಮುಕ್ತಸ್ಥಾನದಲ್ಲಿ ಇರುವರಾದರು. (ಮುಂದೆ ಮುಕ್ತಿಯಾದಮೇಲೆ ಮುಕ್ತಸ್ಥಾನವನ್ನು ಸೇರುವರು).

ಅಜಾಮಿಳರು ದಾಸೀಪತಿಯಾಗಿ ಎಲ್ಲ ಧರ್ಮಗಳನ್ನೂ ಹಾಳುಮಾಡಿಕೊಂಡಿದ್ದರು. ಸಜ್ಜನನಿಂದ್ಯವಾದ ಕರ್ಮವನ್ನು ಮಾಡಿದ ಅವರು ಪತಿತರಾಗಿದ್ದರು. ಹೀಗೆ ವ್ರತಭ್ರಷ್ಟರಾದ ಅವರನ್ನು ನರಕಕ್ಕೆ ತಳ್ಳುವುದರಲ್ಲಿದ್ದರು ಯಮಭಟರು. ಇಂತಹವರೂ ಕೂಡ ಭಕ್ತಿಯಿಂದ ಶ್ರೀಹರಿನಾಮವನ್ನು ಉಚ್ಚರಿಸಿ

ನಾತಃ ಪರಂ ಕರ್ಮನಿಬಂಧಕೃಂತನಂ
ಮುಮುಕ್ಷತಾಂ ತೀರ್ಥಪದಾನುಕೀರ್ತನಾತ್ ।
ನ ಯತ್ಪುನಃ ಕರ್ಮಸು ಸಜ್ಜತೇ ಮನೋ
ರಜಸ್ತಮೋಭ್ಯಾಂ ಕಲಿಲಂ ನ ಚಾನ್ಯಥಾ ॥ ೪೯ ॥

ಮುಮುಕ್ಷತಾಂ = ಮೋಕ್ಷವನ್ನು ಅಪೇಕ್ಷಿಸುವವರಿಗೆ ಅತಃ–ಈ ತೀರ್ಥಪದಾನುಕೀರ್ತನಾತ್=ಪವಿತ್ರಕರ ಪಾದಗಳುಳ್ಳ ಶ್ರೀಹರಿಯ ನಾಮವನ್ನು ಭಕ್ತಿಯಿಂದ ಕೀರ್ತಿಸುವುದಕ್ಕಿಂತ ಪರಂ=ಮತ್ತೊಂದು ಉತ್ತಮವಾದ ಕರ್ಮನಿಬಂಧಕೃಂತನಂ=ಪಾಪಕರ್ಮಕ್ಕೆ ಕಾರಣವಾದ ದುಷ್ಟಮನಸ್ಸನ್ನು ನಾಶಮಾಡುವ ವಸ್ತುವು ನ(ಅಸ್ತಿ) = ಇಲ್ಲವು. ಯತ್ – ಏಕೆಂದರೆ, ರಜೋಗುಣ ತಮೋಗುಣಗಳಿಂದ ಕಲಿಲಂ=ದುಷ್ಟವಾದ ಮನಃ=ಮನಸ್ಸು ಪುನಃ=ಶ್ರೀಹರಿನಾಮಸಂಕೀರ್ತನೆಯನಂತರ ಮತ್ತೆ ಕರ್ಮಸು–ಪಾಪಕರ್ಮಗಳಲ್ಲಿ ನ ಸಜ್ಜತೇ=ಆಸಕ್ತವಾಗುವುದಿಲ್ಲ. ಅನ್ಯಥಾ=ತೀರ್ಥಪಾದನಾದ ಶ್ರೀಹರಿಯನ್ನು ಭಕ್ತಿಯಿಂದ ಕೀರ್ತಿಸದಿದ್ದರೆ ನ ಚ–ಪಾಪಕರ್ಮಗಳಲ್ಲಿ ಆಸಕ್ತವಾಗುವುದಿಲ್ಲವೆಂಬುದು ಇಲ್ಲ. ಆಸಕ್ತವಾಗಿಯೇ ಆಗುವುದೆಂದರ್ಥ. ಆದ್ದರಿಂದ ಇದೇ ಪಾಪಮೂಲನಾಶಕವೆಂದು ತಾತ್ಪರ್ಯ. ॥ ೪೯ ॥

ಯ ಏವಂ (ನಂ) ಪರಮಂ ಗುಹ್ಯಮಿತಿಹಾಸಮಘಾಪಹಮ್ ।
ಶೃಣುಯಾಚ್ಛ್ರದ್ಧಯಾ ಯುಕ್ತೋ ಯಶ್ಚ
ಭಕ್ತ್ಯಾಽನುಕೀರ್ತಯೇತ್ ॥ ೫೦ ॥
ನ ವೈ ಸ ನರಕಂ ಗಚ್ಛೇನ್ನೇಕ್ಷಿತೋ ಯಮಕಿಂಕರೈಃ ।
ಯದ್ಯಪ್ಯಮಂಗಲೋ ಮರ್ತ್ಯೋ ವಿಷ್ಣುಲೋಕೇ ಮಹೀಯತೇ ॥

ಸದ್ಯಃ ಮೃತ್ಯುವಿನಿಂದ ಮುಕ್ತರಾದರು. ಮುಮುಕ್ಷುಗಳಿಗೆ ಪವಿತ್ರಪಾದನಾದ ಶ್ರೀಹರಿಯ ಭಕ್ತಿಯುಕ್ತ ನಾಮಕೀರ್ತನೆಗಿಂತ ಬೇರೊಂದು ಸಾಧನವು ದುಷ್ಟಮನೋನಾಶಕವಾದುದು ಇಲ್ಲವೇ ಇಲ್ಲವು. ರಜಸ್ತಮೋದುಷ್ಟಮನಸ್ಸೇ ಪಾಪಕರ್ಮಕ್ಕೆ ಕಾರಣ ಶ್ರೀಹರಿನಾಮಸಂಕೀರ್ತನೆಯನ್ನು ಭಕ್ತಿಯಿಂದ ಮಾಡಿದ್ದೇ ಆದರೆ ಮತ್ತೆ ಈ ಮನಸ್ಸು ಪಾಪಕರ್ಮಗಳಲ್ಲಿ ತೊಡಗುವುದಿಲ್ಲ. ಶ್ರೀಹರಿನಾಮಸಂಕೀರ್ತನೆ ಮಾಡದಿದ್ದಲ್ಲಿ ಅದು ಪಾಪಕರ್ಮಗಳಲ್ಲಿ ಆಸಕ್ತವಾಗಿಯೇ ಆಗುವುದು. ಅಜಾಮಿಳರ ಆಖ್ಯಾನವು ಈ ರಹಸ್ಯ ಧರ್ಮವನ್ನು ತಿಳಿಸುವುದು. ಪಾಪಹರವಾದ ಈ ಇತಿಹಾಸವನ್ನು ಶ್ರದ್ಧೆಯಿಂದ ಕೇಳುವ ಅಥವಾ ಭಕ್ತಿಯಿಂದ ಹೇಳುವ ಮಾನವನು ಪಾಪಿಯಾಗಿದ್ದರೂ ನರಕಕ್ಕೆ ಹೋಗುವುದಿಲ್ಲ. ಯಮದೂತರನ್ನು ನೋಡುವುದೇ ಇಲ್ಲ. ಮುಕ್ತನಾಗಿ ಪರಮಾತ್ಮನ ಲೋಕದಲ್ಲಿ ತನಗಿಂತ ಕೆಳಗಣ ಜೀವರಿಂದ ಪೂಜಿತನಾಗುವನು.

ಪರಮಂ=ಅತ್ಯಂತ ಗುಹ್ಯಂ=ರಹಸ್ಯವಾದ ಧರ್ಮವನ್ನು ತಿಳಿಸುವ ಅಘಾಪಹಂ=ಪಾಪವನ್ನು ಹೋಗಲಾಡಿಸುವ ಏವಂ (ನಂ)=ಈ (ಪ್ರಕಾರದ) ಇತಿಹಾಸವನ್ನು ಯಃ=ಯಾವನು ಶ್ರದ್ಧೆಯಿಂದ ಕೂಡಿದವನಾಗಿ ಕೇಳುವನೋ ಚ=ಮತ್ತು ಯಾವನು ಭಕ್ತಿಯಿಂದ ಮೇಲಿಂದಮೇಲೆ ಹೇಳುವನೋ ಸಃ ಮರ್ತ್ಯಃ=ಆ ಮನುಷ್ಯನು ಅಮಂಗಲಃ ಯದ್ಯಪಿ=ಪಾಪಿಯೇ ಆಗಿದ್ದರೂ ನರಕಕ್ಕೆ ನ ಗಚ್ಛೇತ್=ಹೋಗುವುದಿಲ್ಲ. ಯಮದೂತರಿಂದ ಈಕ್ಷಿತಃ=ನೋಡಲ್ಪಟ್ಟವನು ನ (ಭವೇತ್)=ಆಗುವುದಿಲ್ಲ. ಇಷ್ಟೇ ಅಲ್ಲ. ವಿಷ್ಣುಲೋಕವಾದ ವೈಕುಂಠದಲ್ಲಿ ಮಹೀಯತೇ ವೈ=ಮುಕ್ತನಾಗಿ ತನಗಿಂತ ಕೆಳಗಣ ಜೀವರಿಂದ ಪೂಜಿತನಾಗುವನು. ಇದು ಶಾಸ್ತ್ರಸಿದ್ಧವು. ಇದರಿಂದ ಈ ಕಥೆಯನ್ನು ಕೇಳುವವರಿಗೂ ಹೇಳುವವರಿಗೂ ಆಗುವ ಫಲವನ್ನು ತಿಳಿಸಿದಂತಾಯಿತು. || ೪೦, ೪೧ ||

ಮ್ರಿಯಮಾಣೋ ಹರೇರ್ನಾಮ ಗೃಹ್ಣನ್ ಪುತ್ರೋಪಚಾರಿತಮ್ ।
ಅಜಾಮಿಲೋಽಪ್ಯಗಾದ್ಧಾಮ ಕಿಮುತ ಶ್ರದ್ಧಯಾ ಗೃಣನ್ ॥ ೪೨ ॥

ಕೈಮುತ್ಯನ್ಯಾಯವನ್ನು ಹೇಳುತ್ತಾರೆ. ಅಜಾಮಿಳಃ ಅಪಿ=ಎಂಭತ್ತೆಂಟು ವರ್ಷಗಳ ಆಯುಸ್ಸನ್ನು ವ್ಯರ್ಥಮಾಡಿಕೊಂಡ ಆದರೂ ಮರಣಕಾಲದಲ್ಲಿ ನಾರಾಯಣಸ್ಮರಣೆಯು ದಾಸೀ ಸಹವಾಸದಿಂದ ಬಂದ ಪಾಪವನ್ನು ಹೋಗಲಾಡಿಸುವುದೆಂದು ತಿಳಿದ ಅಜಾಮಿಳನೂ ಮ್ರಿಯಮಾಣಃ=ಸಾಯಲಿದ್ದವನು ಪುತ್ರೋಪಚಾರಿತಂ (ಕೃತ್ವಾ)=ನಿತ್ಯಾಭ್ಯಾಸದಿಂದ ಮರಣಕಾಲದಲ್ಲಿಯೂ ನಾಮ ಸ್ಮರಣೆಗಾಗಿ ಮಗನ ನೆಪ ಮಾಡಿಕೊಂಡು ಶ್ರದ್ಧಯಾ=ಪ್ರಾರಬ್ಧ ಕರ್ಮವು ಮುಗಿದದ್ದರಿಂದ ಬಂದ ಅನುಸಂಧಾನದಿಂದ ಅಭಿವ್ಯಕ್ತವಾದ ಶ್ರದ್ಧೆಯಿಂದ ನಾಮ=ಶ್ರೀಹರಿಸ್ವಾಮಿಕವಾದ ಹೆಸರನ್ನು ಗೃಹ್ಣನ್=ಮಗನನ್ನು ಕರೆಯುವ ವ್ಯಾಜದಿಂದ ಕೀರ್ತಿಸಿ ಹರೇಃ ಧಾಮ=ವೈಕುಂಠವನ್ನು-ಮುಕ್ತಿಯನ್ನು ಅಗಾತ್=ಹೊಂದಿದನು. ಪುತ್ರಸ್ನೇಹದಿಂದಲ್ಲ. ಮುಂದಿನ ಅಧ್ಯಾಯದ ೨೨ನೆಯ ಶ್ಲೋಕದಲ್ಲಿ 'ಭಗವತಿ (ಶ್ರದ್ಧಯಾ) ಭಕ್ತಿಯೋಗೋ ಭವತಿ ತನ್ನಾಮ ಗ್ರಹಣಾದಿಭಿಃ' ಎಂದು ಹೇಳುವುದರಿಂದ ಹೀಗೇ ಅರ್ಥಮಾಡುವುದು ಯುಕ್ತ. ಮಕ್ಕಳು ಮೊದಲಾದವರಿಗಿಟ್ಟದ್ದ ಶ್ರೀಹರಿನಾಮವನ್ನು ಹೇಳಿ ಪ್ರಾರಬ್ಧಕರ್ಮ ಮುಗಿದು ಶ್ರೀಹರಿಯ ನಾಮವನ್ನು ಶ್ರದ್ಧಯಾ=ಸ್ವಾಭಾವಿಕವಾದ ನಿರಂತರ ಭಗವಂತನ ಶ್ರದ್ಧೆಯಿಂದ ಗೃಣನ್=ಕೀರ್ತಿ

ಅಜಾಮಿಳರು ಆ ಜನ್ಮದಲ್ಲಿ ಪಾಪ ಮಾಡಿದ್ದರೂ ಸಾಯುವ ಕಾಲದಲ್ಲಿ ಮಗನ ಹೆಸರನ್ನು ಕರೆಯುವ ಮೂಲಕ ಹುಟ್ಟಿದ ಭಕ್ತ್ಯತಿಶಯದಿಂದ ಶ್ರೀಹರಿನಾಮವನ್ನು ಉಚ್ಚರಿಸಿ ವೈಕುಂಠವನ್ನು ಸೇರಿದರು. ಅಂದಮೇಲೆ ಸ್ವಾಭಾವಿಕ ನಿರಂತರ ಶ್ರದ್ಧೆಯಿಂದ ಶ್ರೀಹರಿನಾಮವನ್ನು ಉಚ್ಚರಿಸುವವರು ಮುಕ್ತರಾಗುವರೆಂದು ಬೇರೆಯಾಗಿ ಹೇಳಬೇಕಾದ್ದೇ ಇಲ್ಲ.

ಸುತ್ತಾ ಮುಕ್ತನಾಗುವನೆಂದು ಕಿಮುತ=ಹೇಳುವುದೇನು? ಬೇರೆಯಾಗಿ ಹೇಳಿದ್ದು ನಿರಂತರ ಶ್ರದ್ಧೆಯಿಂದ ಮಾಡಿದ ಶ್ರೀಹರಿಸೇವೆಗೆ ಫಲ ಅಧಿಕವೆಂದು ತಿಳಿಸುವುದಕ್ಕಾಗಿ. || ೩೨ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ದ್ವಿತೀಯೋಽಧ್ಯಾಯಃ

ಅಥ ತೃತೀಯೋಽಧ್ಯಾಯಃ

ರಾಜೋವಾಚ—

ನಿಶಮ್ಯ ದೇವಃ ಸ್ವಭಟೋಪವರ್ಣಿತಂ
ಪ್ರತ್ಯಾಹ ಕಿಂ ತಾನಪಿ ಧರ್ಮರಾಜಃ ।
ಏವಂ ಹತಾಜ್ಞೋ ವಿಹತಾನ್ ಮುರಾರೇ-
ರ್ನೈದೇಶಿಕೈರ್ಯಸ್ಯ ವಶೇ ಜನೋಽಯಮ್ ॥ ೧ ॥

ಭಕ್ತಿಪೂರ್ವಕವಾದ ನಾಮಸಂಕೀರ್ತನವು ಮುಕ್ತಿಗೆ ಸಾಧನವೆಂಬುದನ್ನು ಯಮದೇವರ ಮತ್ತು ಅವರ ಭಟರ ಸಂವಾದದ ನೆಪದಲ್ಲಿ ನಿರ್ವಿವಾದವಾದ ಶ್ರೀಹರಿಯ ಸ್ವಾತಂತ್ರ್ಯವನ್ನು, ಈ ಅಧ್ಯಾಯದಲ್ಲಿ ಹೇಳುತ್ತಾರೆ. ಯಮರಾಜರಿಗೆ ಯಥಾವತ್ತಾಗಿ ಎಲ್ಲವನ್ನೂ ಕೇಳಿದರೆಂದು ಹಿಂದೆ ಹೇಳಲಾಗಿತ್ತು. ಆ ವಿಷಯದಲ್ಲಿ ಮುಂದೆ ಏನಾಯಿತೆಂದು ಪರೀಕ್ಷಿದ್ರಾಜರು ಶುಕಾಚಾರ್ಯರನ್ನು ಪ್ರಶ್ನಿಸುತ್ತಾರೆ. ಅಯಂ ಜನಃ = (೧) ಈ ಸಾಯುವ ಮನುಷ್ಯರೆಲ್ಲರೂ (೨) ಈ ಯಮದೂತರು ಯಸ್ಯ – ಯಾವ ಯಮರಾಜರ ವಶೇ – ಅಧೀನದಲ್ಲಿ (ವರ್ತತೇ) – ಇರುವರೋ (ಸಃ) ಧರ್ಮರಾಜಃ – ಆ ಯಮಧರ್ಮರಾಜರು ಏವಂ – ಮೇಲೆ ಹೇಳಿದಂತೆ ಹತಾಜ್ಞಃ (ಸನ್) – ಅಜಾಮಿಳನನ್ನು ಕರೆದು ತರಬೇಕೆಂಬ ಅಪ್ಪಣೆಯು ನಡೆಯದೆ ಹೋದವನು ಸ್ವಭಟೋಪವರ್ಣಿತಂ=ತನ್ನ ಭಟವರ್ಗದಿಂದ ವರ್ಣಿತವಾದ ಘಟನೆಯನ್ನು ನಿಶಮ್ಯ–ಕೇಳಿ ಮುರಾರೇಃ – ಶ್ರೀಹರಿಯ ನೈದೇಶಿಕೈಃ–ಆಜ್ಞಾಕಾರಿಗಳಾದ ದೂತರಿಂದ ವಿಹತಾನ್ = ನಿವಾರಿತರಾದ ತಮ್ಮ ಯಜಮಾನನ ಅಪ್ಪಣೆ

ಮೂರನೆಯ ಅಧ್ಯಾಯ

ಪರೀಕ್ಷಿದ್ರಾಜರು—ಪೂಜ್ಯರೇ, ಸಾಯುವವರೆಲ್ಲರೂ ಯಮರಾಜರ ಅಧೀನರು. ಯಮಭಟರೂ ಅವರ ಅಧೀನ. ಅಂತಹ ಯಮರಾಜರ ಆಜ್ಞೆಯನ್ನು ವಿಷ್ಣುದೂತರು ಭಂಗಪಡಿಸಿದರು. ತಮ್ಮ ಭಟರು ವರ್ಣಿಸಿದ ಈ ವಿಷಯವನ್ನು ಕೇಳಿದ ಯಮಧರ್ಮರಾಜರು ಅವರಿಗೆ ಏನು ಉತ್ತರ ಕೊಟ್ಟರು? ಋಷಿಗಳೇ, ಯಮದೇವರ ದಂಡವು ಯಾರಿಂದಲಾದರೂ ಭಂಗವಾಯಿತೆಂಬುದು ಎಂದೂ ಕೇಳದ

ಯನ್ನು ನಡೆಸಲಾಗದೆ ದುಃಖಿತರಾದ ತಾನ್ ಅಪಿ=ಆ ಭಟರನ್ನು ಕುರಿತು ಆದರೋ ಕಿಂ ಪ್ರತ್ಯಾಹ=ಏನು ಉತ್ತರ ಕೊಟ್ಟರು? ॥ ೧ ॥

ಯಮಸ್ಯ ದೇವಸ್ಯ ನ ದಂಡಭಂಗಃ
ಕುತಶ್ಚನರ್ಷೇ ಶ್ರುತಪೂರ್ವ ಆಸೀತ್ ।
ಏವಂ ಮುನೇ ವೃಶ್ಚತಿ ಲೋಕಸಂಶಯಂ
ನ ಹಿ ತ್ವದನ್ಯ ಇತಿ ಮೇ ವಿನಿಶ್ಚಿತಮ್ ॥ ೨ ॥

ಇದು ಅತ್ಯಾಶ್ಚರ್ಯವೆನ್ನುತ್ತಾರೆ. ಹೇ ಋಷೇ=ಪರಮಾತ್ಮನ ಅಪರೋಕ್ಷ ಜ್ಞಾನಿಗಳಾದ ಶುಕಾಚಾರ್ಯರೇ ಕುತಶ್ಚನ=ಯಾರದೆಶೆಯಿಂದಲೂ ಯಮದೇವರ ದಂಡಭಂಗಃ=ಶಿಕ್ಷೆಯ ಭಂಗವು ಆದುದು ಶ್ರುತಪೂರ್ವಃ=ಹಿಂದೆ ಕೇಳಿದ್ದು ನ ಆಸೀತ್=ಇಲ್ಲವು. ಇದರಿಂದ ಯಮದೇವರ ಆಜ್ಞೆಗೆ ಭಂಗವಿಲ್ಲವೆಂಬುದು ಒಂದು ಕೋಟಿ (ವಿಷಯ). ಹಿಂದೆ ಶುಕಾಚಾರ್ಯರು ಹೇಳಿದಂತೆ ಭಂಗವಾಯಿ ತೆಂಬುದು ಮತ್ತೊಂದು ಕೋಟಿ. ಹೀಗೆ ಯಮದೇವರ ಆಜ್ಞೆಗೆ ಭಂಗವಿಲ್ಲವೋ? ಇದೆಯೋ? ಎಂಬುದು ಸಂಶಯಾಕಾರವೆಂದು ತಿಳಿಸಿದಂತಾಯಿತು. ಹೇ ಮುನೇ=ಮನನಶೀಲರಾದ ಶುಕಾಚಾರ್ಯರೇ, ಏವಂ=ಈ ಮೇಲೆ ಹೇಳಿದ ಲೋಕ ಸಂಶಯಂ=ಜನಸಾಮಾನ್ಯರ ಸಂದೇಹವನ್ನು ತ್ವದನ್ಯಃ=ನಿಮಗಿಂತ ಬೇರೆಯವರು ನ ವೃಶ್ಚತಿ=ಹೋಗಲಾಡಿಸಲಾರರು. ಇತಿ=ಎಂದು ವಿನಿಶ್ಚಿತಂ=ನಿಶ್ಚಿತವು. ಹಿ=ಆ ಕಾರಣ ದಿಂದ ಮೇ=ನನಗಾಗಿ (ಕಥಯ)=ವಿಶೇಷಾರ್ಥವನ್ನು ತಿಳಿಸಲು ಹೇಳಿರಿ. ಲೋಕ ಸಂಶಯಂ ಎಂದು ಹೇಳಿದ್ದರಿಂದ ಜನರಿಗೆ ವಿಶೇಷಾರ್ಥವನ್ನು ತಿಳಿಸುವುದಕ್ಕಾಗಿ ಈ ನನ್ನ ಪ್ರಶ್ನೆಯೆಂದು ತೋರಿಸಿರುವರು. 'ಜಾನಂತೋಽಪಿ ವಿಶೇಷಾರ್ಥ ಜ್ಞಾನಾಯ ಸ್ಥಾಪನಾಯ ವಾ । ಪೃಚ್ಛಂತಿ ಸಾಧವಃ....॥' ಎಂಬ ಪ್ರಮಾಣವೂ ಇದನ್ನೇ ತಿಳಿಸುವುದು. ॥ ೨ ॥

ಶ್ರೀ ಬಾದರಾಯಣಿರುವಾಚ—

ಭಗವತ್ಪುರುಷೈ ರಾಜನ್ ಯಾಮ್ಯಾಃ ಪ್ರತಿಹತೋದ್ಯಮಾಃ ।
ಪತಿಂ ವಿಜ್ಞಾಪಯಾಮಾಸುರ್ಯಮಂ ಸಂಯಮನೀಪತಿಮ್ ॥ ೩ ॥

ವಿಷಯ. ನೀವಾದರೋ ಭಂಗವಾಯಿತೆಂದು ಹೇಳಿದಿರಿ. ಆದ್ದರಿಂದ ಜನರಿಗೆ ಸಹಜವಾಗಿ ಸಂಶಯವು ಬಂದೇ ಬರುವುದು. ಮುನಿಗಳೇ, ಆ ಸಂಶಯವನ್ನು ತಮ್ಮ ವಿನಹ ಮತ್ತೊಬ್ಬರು ಹೋಗಲಾಡಿಸಲಾರರೆಂಬುದೇ ನನ್ನ ನಿಶ್ಚಯ. ಆದ್ದರಿಂದ ವಿಶೇಷಾರ್ಥವನ್ನು ತಿಳಿಸಲು ದಯವಿಟ್ಟು ಹೇಳಿ.

ಶ್ರೀ ಶುಕಾಚಾರ್ಯರು—ರಾಜನ್, ಯಮದೂತರ ಪ್ರಯತ್ನವು ವಿಷ್ಣುದೂತ ರಿಂದ ಪ್ರತಿಹತವಾಯಿತು. ಆಗವರು ಸಂಯಮನೀಪುರದ ಅಧಿಪತಿಗಳಾದ ತಮ್ಮ

ಪರೀಕ್ಷಿದ್ರಾಜನೇ, ಭಗವತ್ಪುರುಷೈಃ = ವಿಷ್ಣುದೂತರಿಂದ ಪ್ರತಿಹತೋ-ದ್ಯಮಾಃ = ತಿರಸ್ಕೃತವಾದ ತಮ್ಮ ಪ್ರಯತ್ನವುಳ್ಳ ಯಾಮ್ಯಾಃ = ಯಮದೂತರು ಪತಿಂ = ತಮ್ಮ ಸ್ವಾಮಿಯಾದ ಸಂಯಮನೀಪತಿಂ = ಸಂಯಮನೀ ಪಟ್ಟಣದ ಪಾಲಕರಾದ ಯಮಂ = ಯಮಧರ್ಮರಾಜರಿಗೆ ವಿಜ್ಞಾಪನೆ ಮಾಡಿಕೊಂಡರು. ಯಮಶಬ್ದಕ್ಕೆ ಬೇರೆ ಅರ್ಥವೂ ಇರುವುದರಿಂದ ಸಂದೇಹ ಬರಬಾರದೆಂದು ಸಂಯಮನೀಪತಿಯೆಂದು ವಿಶೇಷಣ ಕೊಟ್ಟಿದ್ದು. ॥ ೩ ॥

ಯಮದೂತಾ ಊಚುಃ—

ಕತಿ ಸಂತೀಹ ಶಾಸ್ತಾರೋ ಜೀವಲೋಕಸ್ಯ ವೈ ಪ್ರಭೋ ।
ತ್ರೈವಿಧ್ಯಂ (ದ್ಯಂ) ಕುರ್ವತಃ ಕರ್ಮ ಫಲಾಭಿವ್ಯಕ್ತಿಹೇತವಃ ॥ ೪ ॥

ಪ್ರಭುವೇ, ಇಹ = ಈ ಜಗತ್ತಿನಲ್ಲಿ ತ್ರೈವಿಧ್ಯಂ = ಸಾತ್ವಿಕ, ರಾಜಸ ಮತ್ತು ತಾಮಸ ಭೇದಗಳುಳ್ಳ ತ್ರೈವಿದ್ಯಂ ಎಂಬ ಪಾಠದಲ್ಲಿ ವೇದವಿಹಿತವಾದ ಎಂದರ್ಥ. ಕರ್ಮ = ಕೆಲಸಗಳನ್ನು ಕುರ್ವತಃ = ಮಾಡುವ ಜೀವಲೋಕಸ್ಯ = ತ್ರಿವಿಧ ಜೀವ ಸಮುದಾಯಕ್ಕೆ ಫಲಾಭಿವ್ಯಕ್ತಿಹೇತವಃ = ಅವರ ಕರ್ಮಗಳಿಗೆ ಫಲವು ಬರುವಂತೆ ಮಾಡುವ (ಫಲಕೊಡುವ) ಶಾಸ್ತಾರಃ=ಶಾಸಕರು ಕತಿ=ಎಷ್ಟು ಮಂದಿ ಸಂತಿ= ಇರುವರು? ಒಬ್ಬನೇ ಶಾಸಕನೇ? ಬಹು ಶಾಸಕರೇ? ಬಹು ಜನರಿದ್ದಲ್ಲಿ ಇಷ್ಟೇ ಎಂದು ಸಂಖ್ಯಾನಿಯಮವಿದೆಯೋ? ಇಲ್ಲವೇ? ಎಂದು ಪ್ರಶ್ನೆಯ ಅರ್ಥ. ಅನೇಕ ಶಾಸಕರು ಇರುವಂತಿಲ್ಲ ಎಂದು ಅಭಿಪ್ರಾಯ. ॥ ೪ ॥

ಯದಿ ಸ್ಯುರ್ಬಹವೋ ಲೋಕೇ ಶಾಸ್ತಾರೋ ದಂಡಧಾರಿಣಃ ।
ಕಸ್ಯ ಸ್ಯಾತಾಂ ನ ವಾ ಕಸ್ಯ ಮೃತ್ಯುಶ್ಚಾಮೃತಮೇವ ಚ ॥ ೫ ॥

ಬಹು ಶಾಸಕರೆಂಬ ಪಕ್ಷವನ್ನು ನಿರಾಕರಿಸುತ್ತಾರೆ ಎಂದು ಹೇಳುತ್ತಾರೆ. ಲೋಕದಲ್ಲಿ ದಂಡಧಾರಿಣಃ = ಶಿಕ್ಷೆ ಮಾಡುವ ಶಾಸಕರು ಬಹುಸಂಖ್ಯಾಕರು ಯದಿ ಸ್ಯುಃ = ಇರುವುದಾದರೆ ಇಷ್ಟೇ ಎಂದು ಸಂಖ್ಯೆಯುಳ್ಳ ಆ ಬಹು ಶಾಸಕರು ಮೃತ್ಯುವನ್ನೂ ಅಮೃತವನ್ನೂ ಕೊಡುವ ಸಾಮರ್ಥ್ಯವುಳ್ಳವರೇ? ಅಲ್ಲವೇ? ಎರಡನೆಯ

ಸ್ವಾಮಿ ಯಮರಾಜರಿಗೆ ವಿಜ್ಞಾಪನೆ ಮಾಡಿಕೊಂಡರು. 'ಪ್ರಭುವೇ, ಎಷ್ಟು ಜನ ಶಾಸಕರಿರುವರು? ವೇದೋಕ್ತ ಕರ್ಮಗಳನ್ನು-ಸಾತ್ವಿಕಾದಿ ತ್ರಿವಿಧ ಕರ್ಮಗಳನ್ನು ಜೀವರು ಮಾಡುವರು. ಶಾಸಕರು ಆ ಕರ್ಮಗಳಿಗೆ ಫಲ ಬರುವಂತೆ ಮಾಡುವರು. ದಂಡಧಾರಿಗಳಾದ ಅನೇಕ ಶಾಸಕರು ಲೋಕದಲ್ಲಿ ಇರುವರಾದರೆ ಅವರವರಲ್ಲಿ ಪರಸ್ಪರ ಅಭಿಪ್ರಾಯ ವಿರೋಧವಿದ್ದಲ್ಲಿ ದುಃಖವಾಗಲಿ (ಸಂಸಾರವಾಗಲಿ) ಸುಖ ವಾಗಲಿ (ಮೋಕ್ಷವಾಗಲಿ) ಯಾರಿಂದಲೂ ಯಾರಿಗೂ ಆಗುವಂತಿಲ್ಲ. ಪರಸ್ಪರ ಅಭಿಪ್ರಾಯೈಕ್ಯವಿದ್ದಲ್ಲಿ ಎಲ್ಲರಿಗೂ ಯಾವಾಗಲೂ ಸುಖದುಃಖಗಳು ಆಗಲೇಬೇಕು.

ಪಕ್ಷದಲ್ಲಿ (ಸಾಮರ್ಥ್ಯವಂತರಲ್ಲ ಎಂದಲ್ಲಿ) ಮೃತ್ಯುಃ ಚ – ಬಂಧವೂ ಅಮೃತಂ ಏವ ಚ – ಮೋಕ್ಷವೂ ಕಸ್ಯ – ಯಾವ ಜೀವನಿಗೆ ತಾನೇ ಸ್ಯಾತಾಂ = ಆದಾವು? ಅವುಗಳನ್ನು ಕೊಡುವ ಸಮರ್ಥನೇ ಇಲ್ಲವಾದ್ದರಿಂದ ಯಾರಿಗೂ ಬಂಧಮೋಕ್ಷ ಗಳಾಗುವಂತಿಲ್ಲವೆಂದರ್ಥ. ಎಲ್ಲರೂ ಸಮರ್ಥರೇ ಎಂದು ಹೇಳುವುದಾದರೆ ಬಾಧಕ ವನ್ನು ಹೇಳುತ್ತಾರೆ ಕಸ್ಯ ವಾ – ಯಾರಿಗೆ ತಾನೇ ನ ಸ್ಯಾತಾಂ = ಆಗದೆ ಹೋದಾವು? ಎಲ್ಲರೂ ಸಮರ್ಥರಾದ್ದರಿಂದ ಎಲ್ಲರಿಗೂ ಆಗಬೇಕಾದೀತು ಎಂದರ್ಥ. ಮತ್ತೊಂದು ರೀತಿಯಲ್ಲಿಯೂ ಈ ಶ್ಲೋಕಕ್ಕೆ ಅಭಿಪ್ರಾಯ ಹೇಳಿರುವುದುಂಟು. ಅನೇಕ ಶಾಸಕರಿದ್ದಲ್ಲಿ ಅವರಿಗೆ ಪರಸ್ಪರ ವಿರೋಧವಿದೆಯೇ? ಐಕಮತ್ಯವೇ? ಪರಸ್ಪರ ವಿರೋಧವಿದ್ದಲ್ಲಿ ಮೃತ್ಯುಃ = ದುಃಖವಾಗಲಿ ಅಮೃತಂ = ಸುಖವಾಗಲಿ ಯಾರಿಗೆ ತಾನೇ ಆದೀತು. ಪರಸ್ಪರ ವಿರೋಧದಿಂದ ಒಬ್ಬರ ಆಜ್ಞೆಗೆ ಮತ್ತೊಬ್ಬರ ಆಜ್ಞೆಯು ಪ್ರತಿಬಂಧಕವಾಗುವುದರಿಂದ ಯಾರಿಗೂ ಸುಖವೂ ಆಗುವಂತಿಲ್ಲ, ದುಃಖವೂ ಆಗುವಂತಿಲ್ಲ. ಇನ್ನು ಐಕಮತ್ಯವಿರುವುದಾದರೆ ಸುಖದುಃಖಗಳು ಕಸ್ಯ ವಾ= ಯಾವನಿಗೆ ತಾನೇ ನ ಸ್ಯಾತಾಂ=ಒಟ್ಟಿಗೇ ಆಗದೇ ಇದ್ದೀತು? ಒಬ್ಬ ಶಾಸಕನು ಕೊಡುವ ಸುಖವನ್ನು ಮತ್ತೊಬ್ಬನೂ, ಅವನು ಕೊಡುವ ದುಃಖವನ್ನು ಇವನೂ ಅನುಮೋದಿಸುವುದರಿಂದ ಜೀವರಿಗೆ ಸುಖದುಃಖಗಳು ಒಟ್ಟಿಗೇ ಆಗ ಬೇಕಾದೀತು ಎಂದಭಿಪ್ರಾಯ. || ೫ ||

ಕಿಂತು ಶಾಸ್ತೃ ಬಹುತ್ವೇ ಸ್ಯಾದ್ಬಹೂನಾಮಿಹ ಕರ್ಮಿಣಾಮ್ ।
ಶಾಸ್ತೃತ್ವಮುಪಚಾರೋ ಹಿ ಯಥಾ ಮಂಡಲವರ್ತಿನಾಮ್ ॥

ಅನೇಕ ಶಾಸಕರಿದ್ದಲ್ಲಿ ಪರಸ್ಪರ ವಿರೋಧವು ಬರುವುದರಿಂದ ಶಾಸನವೇ ಅಸಂಭಾವಿತವಾಗುವುದರಿಂದ ಇದು ಯುಕ್ತವಲ್ಲವೆಂದು ಹೇಳುತ್ತಾರೆ. ಕಿಂ ತು= ಮತ್ತೇನೆಂದರೆ, ಇಹ= ಈ ಜಗತ್ತಿನಲ್ಲಿ ಬಹೂನಾಂ ಕರ್ಮಿಣಾಂ–ಕರ್ಮ ಮಾಡುವ ಅನೇಕ ಜೀವರಿಗೆ ಶಾಸ್ತೃಬಹುತ್ವೇ=ಅನೇಕ ಶಾಸಕರಿದ್ದಲ್ಲಿ ಮಂಡಲವರ್ತಿನಾಂ ಯಥಾ–ಅನೇಕ ಮಂಡಲೇಶ್ವರರಿಗೆ ಹೇಗೋ ಹಾಗೆ ಶಾಸ್ತೃತ್ವಂ = ಶಾಸಕತ್ವವು ಉಪಚಾರಃ=ಔಪಚಾರಿಕವಾಗಿ ಸ್ಯಾತ್ ಹಿ=ಆಗುವುದಷ್ಟೆ! ಮತ್ತೊಂದು ರೀತಿ ಯಲ್ಲಿಯೂ ಅರ್ಥಮಾಡಿರುವರು. ಬಹುಕರ್ಮಿಗಳಿಗೆ ವ್ಯವಸ್ಥೆಯಿಂದ (ಇಂತಹವ ರಿಗೆ ಇಂತಹವರೇ ಎಂಬ ವ್ಯವಸ್ಥೆಯಿಂದ) ಅನೇಕ ಶಾಸಕರಿರಲಿ. ಆಗ ದೋಷವಿಲ್ಲ ವಲ್ಲವೇ? ಎಂದರೆ ಹೇಳುತ್ತಾರೆ. ಬಹುಕರ್ಮಿಗಳಿಗೆ ವ್ಯವಸ್ಥೆಯಿಂದ ಬಹುಶಾಸಕ

ಅನೇಕ ಕರ್ಮಿಗಳಿಗೆ ಅನೇಕ ಶಾಸಕರಿರುವುದಾದರೆ ಮಂಡಲೇಶ್ವರರಂತೆ ಆ ಶಾಸಕ ತನವು ಕೇವಲ ಔಪಚಾರಿಕವೆಂದಾಗುವುದು. (ಇಂತಿಂತಹ ಕರ್ಮಿಗಳಿಗೆ ಇಂತಿಂತಹ ಶಾಸಕರೆಂದು ವ್ಯವಸ್ಥೆಯಿದ್ದರೂ ಸರ್ವ ಶಾಸಕನೊಬ್ಬನ ಅಧೀನರಾದ ಈ ಶಾಸಕರ ಶಾಸಕತನವು ಚಕ್ರವರ್ತಿಯ ಅಧೀನರಾದ ಮಂಡಲೇಶ್ವರರ ರಾಜತನದಂತೆ

ರಿದ್ದಲ್ಲಿ ಶಾಸಕತ್ವವು ಸ್ಯಾತ್=ಯುಕ್ತವಾದೀತು. ಕಿಂತು=ಆದರೆ, ಆ ಶಾಸಕತ್ವವು ಮಂಡಲೇಶ್ವರರಿಗೆ ಇದ್ದ ಶಾಸಕತನದಂತೆ ಉಪಚಾರಃ ಸ್ಯಾತ್=ಔಪಚಾರಿಕ (ಅಮುಖ್ಯ)ವಾಗುವುದು. ಚಕ್ರವರ್ತಿಯಲ್ಲಿರುವ ಶಾಸಕತ್ವವು ಮುಖ್ಯವಾಗಿರುವಂತೆ ಎಲ್ಲರಿಗೂ ಶಾಸಕನಾದ ಸರ್ವಶಾಸಕನ ಶಾಸಕತ್ವವೇ ಮುಖ್ಯವಾಗುವುದೆಂದು ಅಭಿಪ್ರಾಯ. ಆದ್ದರಿಂದ ಒಬ್ಬ ಶಾಸಕನೇ ಮುಖ್ಯ ಶಾಸಕನು ಎಂಬುದೇ ಯುಕ್ತವೆಂದು ತಾತ್ಪರ್ಯ. || ೬ ||

ಅತಸ್ತ್ವಮೇಕೋ ಭೂತಾನಾಂ ಸೇಶ್ವರಾಣಾಮಧೀಶ್ವರಃ ।
ಶಾಸ್ತಾ ದಂಡಧರೋ ನೃಣಾಂ ಶುಭಾಶುಭವಿವೇಚನಃ ॥ ೭ ॥

ಬಹು ಶಾಸಕರೆಂಬ ಪಕ್ಷದಲ್ಲಿ ಮೇಲೆ ಹೇಳಿದಂತೆ ದೋಷವಿರುವುದರಿಂದ ಒಬ್ಬನೇ ಶಾಸಕನೆಂಬುದೇ ಸರಿಯಾದುದು. ಆ ಒಬ್ಬನು ನೀನೇ. ಎಂಬೀ ಮೊದಲ ಪಕ್ಷವೇ ಅಭಿಮತವೆಂದು ಹೇಳುತ್ತಾರೆ. ಅತಃ–ಹೀಗೆ ಶಾಸಕಬಹುತ್ವವು ಯುಕ್ತವಲ್ಲವಾದ್ದರಿಂದ ಸೇಶ್ವರಾಣಾಂ=ನಿಯಾಮಕರಿಂದ ಕೂಡಿದ ಭೂತಾನಾಂ=ಜೀವರಿಗೆ ಅಧೀಶ್ವರಃ=ಅಧಿಕ ನಿಯಾಮಕರಾದ ತ್ವಂ ಏಕಃ=ನೀವು ಒಬ್ಬರೇ ನೃಣಾಂ= ಮನುಷ್ಯರ ಶುಭಾಶುಭ ವಿವೇಚನಃ=ಪುಣ್ಯ ಪಾಪಗಳನ್ನು ಬೇರೆಬೇರೆ ತಿಳಿಯುವ ಆದ್ದರಿಂದಲೇ ದಂಡಧರಃ=ಶಿಕ್ಷೆಯನ್ನು ಕೊಡುವ ಶಾಸ್ತಾ=ಶಾಸಕರು ಆಗಿರುವಿರಿ. || ೭ ||

ತಸ್ಯ ತೇ ವಿಹತೋ ದಂಡೋ ನೃಲೋಕೇ ವರ್ತತೇಽಧುನಾ ।
ಚತುರ್ಭಿರದ್ಭುತೈಃ ಸಿದ್ಧೈರಾಜ್ಞಾ ತೇ ವಿಪ್ರಲಂಭಿತಾ ॥ ೮ ॥

ತಸ್ಯ ತೇ=ಅಂತಹ ಏಕೈಕ ಶಾಸಕರಾದ ನಿಮ್ಮ ದಂಡಃ=ಶಿಕ್ಷೆಯು (ಶಾಸನವು) ಅಧುನಾ=ಈಗ ನೃಲೋಕೇ=ಮನುಷ್ಯಲೋಕದಲ್ಲಿ ವಿಹತಃ=ತಿರಸ್ಕೃತವಾದುದಾಗಿ ವರ್ತತೇ=ಇರುವುದು. ಅದನ್ನೇ ವಿವರಿಸುತ್ತಾರೆ. ಅದ್ಭುತೈಃ=ಆಶ್ಚರ್ಯಕರ ರೂಪವುಳ್ಳ ಚತುರ್ಭಿಃ=ನಾಲ್ವರು ಸಿದ್ಧೈಃ=ಸಿದ್ಧಪುರುಷರಿಂದ ತೇ=ನಿಮ್ಮ ಆಜ್ಞಾ=ಅಪ್ಪಣೆಯು ವಿಪ್ರಲಂಭಿತಾ=ವಂಚಿಸಲ್ಪಟ್ಟಿತು. ಲಂಘಿತವಾಯಿತೆಂದರ್ಥ. || ೮ ||

ಅಪ್ರಧಾನವೆಂದೇ ಆಗುವುದು.) ಆದ್ದರಿಂದ ನಿಯಾಮಕರಿಗೂ ಅಧಿಕ ನಿಯಾಮಕರಾದ ನೀವು ಒಬ್ಬರೇ ಎಲ್ಲ ಪ್ರಾಣಿಗಳಿಗೂ ದಂಡಧಾರಿಗಳಾದ ಶಾಸಕರು. ಮನುಷ್ಯರ ಶುಭಾಶುಭ ಕರ್ಮಗಳನ್ನು ವಿವೇಕಿಸಿ ತಿಳಿಯುವವರು ನೀವೇ. ಅಂತಹ ಏಕೈಕ ಶಾಸಕರಾದ ನಿಮ್ಮ ದಂಡವು ಇಂದು ಮನುಷ್ಯ ಲೋಕದಲ್ಲಿ ತಿರಸ್ಕೃತವಾಗಿದೆ. ವಿಸ್ಮಯಕರರೂಪಿಗಳಾದ ನಾಲ್ವರು ಸಿದ್ಧರು ನಿಮ್ಮ ಆಜ್ಞೆ

ನೀಯಮಾನಂ ತವಾದೇಶಾದಸ್ಮಾಭಿರ್ಯಾತನಾಗೃಹಮ್ ।
ವ್ಯಮೋಚಯನ್ ಪಾತಕಿನಂ ಛಿತ್ವಾ ಪಾಶಾನ್ ಪ್ರಸಹ್ಯ ತೇ ॥ ೯ ॥

ತವ=ನಿಮ್ಮ ಆದೇಶಾತ್=ಅಪ್ಪಣೆಯಂತೆ ಅಸ್ಮಾಭಿಃ=ನಮ್ಮಿಂದ ಯಾತನಾಗೃಹಂ=ನರಕಕ್ಕೆ ನೀಯಮಾನಂ=ತರಲ್ಪಡುತ್ತಿದ್ದ ಪಾತಕಿನಂ=ಪಾಪಿಯೊಬ್ಬನನ್ನು ತೇ=ಆ ನಾಲ್ವರು ಸಿದ್ಧರು ಪ್ರಸಹ್ಯ=ಬಲಾತ್ಕಾರವಾಗಿ ಪಾಶಾನ್=ಆ ಪಾಪಿಗೆ ಹಾಕಿದ್ದ ತಮ್ಮ ಪಾಶಗಳನ್ನು ಛಿತ್ವಾ=ಕತ್ತರಿಸಿ ವ್ಯಮೋಚಯನ್=ಬಿಡುಗಡೆ ಮಾಡಿದರು. ॥ ೯ ॥

ತಾಂಸ್ತೇ ವೇದಿತುಮಿಚ್ಛಾಮೋ ಯದಿ ನೋ ಮನ್ಯಸೇ ಕ್ಷಮಮ್।
ನಾರಾಯಣೇತ್ಯಭಿಹಿತೇ ಮಾ ಭೈರಿತ್ಯಾಯಯುರ್ದ್ರುತಮ್ ॥

(ಪಾತಕಿನಾ)=ಆ ಪಾಪಿಯಿಂದ ನಾರಾಯಣನೆಂದು ಅಭಿಹಿತೇ (ಸತಿ)=ಉಚ್ಚರಿತವಾಗಲು ಮಾ ಭೈಃ=ಹೆದರಬೇಡ ಇತಿ=ಎಂದು ಹೇಳುತ್ತಾ ಅವರು ದ್ರುತಂ=ಜಾಗ್ರತೆಯಾಗಿ ಆಯಯುಃ=ಬಂದರು. ನಃ=ನಮ್ಮ ಕ್ಷಮಂ=ಹಿತವನ್ನು ಮನ್ಯಸೇ ಯದಿ=ತಿಳಿಯುವಿರಾದರೆ ತೇ=ನಿಮ್ಮಿಂದ ತಾನ್=ಅವರು ಯಾರೆಂಬುದನ್ನು ವೇದಿತುಂ=ತಿಳಿದುಕೊಳ್ಳಲು ಇಚ್ಛಾಮಃ=ಅಪೇಕ್ಷಿಸುತ್ತೇವೆ. ಹೀಗೆ ಆಶ್ಚರ್ಯಕರ ಪ್ರಭಾವವುಳ್ಳ ಅವರನ್ನು ತಿಳಿಯದೆ ನಾವು ತಿರಸ್ಕರಿಸಿದರೆ ಭೃತ್ಯರಾದ ನಾವು ಮಾಡಿದ ತಿರಸ್ಕಾರದಿಂದ ಸ್ವಾಮಿಯಾದ ತಮಗೂ ಅನರ್ಥವಾಗುವುದೆಂದು ಅಭಿಪ್ರಾಯ ॥ ೧೦ ॥

ಶ್ರೀ ಶುಕ ಉವಾಚ—

ಇತಿ ದೇವಃ ಸ ಆಪೃಷ್ಟಃ ಪ್ರಜಾಸಂಯಮನೋ ಯಮಃ ।
ಪ್ರೀತಃ ಸ್ವದೂತಾನ್ ಪ್ರತ್ಯಾಹ ಸ್ಮರನ್ ಪಾದಾಂಬುಜಂ ಹರೇಃ ॥

ಇತಿ=ಈ ರೀತಿಯಲ್ಲಿ ಆಪೃಷ್ಟಃ=ಪ್ರಶ್ನೆ ಮಾಡಿಸಿಕೊಂಡ ಪ್ರಜಾಸಂಯಮನಃ=ಪ್ರಾಣಿಗಳನ್ನು ಶಿಕ್ಷಾದಿಗಳಿಂದ ನಿಯಮನ ಮಾಡುವ ಸಃ=ಆ ಯಮದೇವರು

ಯನ್ನು ಉಲ್ಲಂಘಿಸಿರುವರು. ನಿಮ್ಮ ಅಪ್ಪಣೆಯಂತೆ ನಾವು ಪಾಪಿಯನ್ನು ಯಾತನಾಗೃಹಕ್ಕೆ ಒಯ್ಯುತ್ತಿದ್ದೆವು. ಅವರು ಬಲಾತ್ಕಾರವಾಗಿ ಪಾಶಗಳನ್ನು ಕಡಿದುಹಾಕಿ ಅವನನ್ನು ಬಿಡಿಸಿದರು. ಅವರು ಯಾರೆಂಬುದನ್ನು ತಿಳಿಯ ಬಯಸುತ್ತೇವೆ. ನಮಗೆ ತಿಳಿಸಬಹುದಾದಲ್ಲಿ ತಿಳಿಸಿರಿ. ಆ ಪಾಪಿಯು ನಾರಾಯಣ ಎಂದು ಉಚ್ಚರಿಸಿದ ಮಾತ್ರಕ್ಕೇ ಅವರು 'ಹೆದರಬೇಡ ಎಂದು ಹೇಳುತ್ತಾ ಜಾಗ್ರತೆ ಯಾಗಿ ಬಂದರು.' ಎಂದು ಭಟರು ಬಿನ್ನವಿಸಲು ಪ್ರಜೆಗಳನ್ನು ನಿಯಮನಮಾಡುವ ಯಮರಾಜರು ಪ್ರೀತರಾಗಿ ಶ್ರೀ ಹರಿಯ ಪಾದಕಮಲಗಳನ್ನು ಸ್ಮರಿಸುತ್ತಾ ತಮ್ಮ ಭಟರಿಗೆ ಉತ್ತರ ಕೊಟ್ಟರು.

ಪ್ರೀತಃ (ಸ್ಸ)=ಸಂತುಷ್ಟರಾಗಿ ಶ್ರೀ ಹರಿಯ ಪಾದಕಮಲಗಳನ್ನು ಸ್ಮರಿಸುತ್ತಾ ತಮ್ಮ ದೂತರನ್ನು ಕುರಿತು ಪ್ರತ್ಯಾಹ=ಉತ್ತರ ಕೊಟ್ಟರು. ॥ ೧೧ ॥

ಯಮ ಉವಾಚ—

ಪರೋ ಮದನ್ಯೋ ಜಗತಸ್ತಸ್ಥುಷಶ್ಚ
ಓತಂ ಪ್ರೋತಂ ಪಟವದ್ಯತ್ರ ವಿಶ್ವಮ್ ।
ಯದಂಶತೋಽಸ್ಯ ಸ್ಥಿತಿಜನ್ಮನಾಶಾ
ನಸ್ಯೋತವದ್ಯಸ್ಯ ವಶೇ ಚ ಲೋಕಃ ॥ ೧೨ ॥

ನಾನೊಬ್ಬನೇ ಶಾಸಕನೆಂದು ನೀವು ಹೇಳಿದ್ದು ವಿಚಾರಮಾಡದೆ ಹೇಳಿದ ಮಾತು. ನನಗಿಂತ ಭಿನ್ನನಾದ ಅತ್ಯುತ್ತಮ ಶಾಸಕನಿರುವನೆಂದು ಹೇಳುತ್ತಾರೆ. ಯತ್ರ=ಯಾವ ಪರಮಾತ್ಮನಲ್ಲಿ ವಿಶ್ವಂ=ಈ ಜಗತ್ತು ಪಟವತ್=ದಾರದಲ್ಲಿ ಕಂಥಾ ಪಟವು ಉದ್ದಕ್ಕೂ ಅಡ್ಡಕ್ಕೂ ಇದ್ದುಕೊಂಡು ದಾರವನ್ನೇ ಆಧಾರವಾಗಿ ಹೊಂದಿರು ವಂತೆ ಓತಂ ಪ್ರೋತಂ=ಉದ್ದಕ್ಕೂ ಅಡ್ಡಕ್ಕೂ ಇದ್ದುಕೊಂಡು ಅವನನ್ನೇ ಆಧಾರ ವಾಗಿ ಹೊಂದಿರುವುದೋ, ಅಸ್ಯ=ಈ ಜಗತ್ತಿನ ಸ್ಥಿತಿಜನ್ಮನಾಶಾಃ=ಪಾಲನೆ, ಹುಟ್ಟು ಮತ್ತು ಸಂಹಾರಗಳು ಯದಂಶತಃ=(೧) ಯಾವ ಪರಮಾತ್ಮನ ಸ್ವರೂಪಾಂಶಗಳಾದ ವಾಸುದೇವ ಮೊದಲಾದವುಗಳಿಂದ ಬ್ರಹ್ಮನಲ್ಲಿರುವ ಬ್ರಹ್ಮ ರೂಪ, ವಿಷ್ಣು, ಶಿವನಲ್ಲಿರುವ ಶಿವರೂಪಗಳಿಂದ (೨) ಭಿನ್ನಾಂಶಗಳಾದ ಬ್ರಹ್ಮ ರುದ್ರಾದಿಗಳಿಂದ (ಭವಂತಿ)=ಆಗುವುವೋ ಚ='ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ' ಎಂಬ ಸ್ಮೃತಿಯಂತೆ ವ್ಯಾಸಾದಿ ರೂಪಗಳಿಂದಲೂ ಧೃತವಾಗಿರುವುದೋ, ಯಸ್ಯ=ಯಾವ ಪರಮಾತ್ಮನ ವಶೇ=ಅಧೀನದಲ್ಲಿ ಲೋಕಃ=ಲಕ್ಷ್ಮೀ ಬ್ರಹ್ಮಾದಿ ಸರ್ವ ಜಗತ್ತೂ ನಸಿ=ಮೂಗಿನಲ್ಲಿ ಓತವತ್=ದಾರವು ಪೋಣಿಸಲ್ಪಟ್ಟಿರುವ ಎತ್ತಿ ನಂತೆ (ವರ್ತತೇ)=ಇರುವುದೋ (ಸಃ)=ಅಂತಹ ಜಗತಃ=ಜಂಗಮ ಪ್ರಾಣಿಗಳಿಗೂ ತಸ್ಥುಷಶ್ಚ=ಸ್ಥಾವರ ಪ್ರಾಣಿಗಳಿಗೂ (ಶಾಸ್ತಾ)=ಶಾಸಕನು ಮದನ್ಯಃ=ನನಗಿಂತ ಭಿನ್ನನಾದ ಪರಃ=ಸರ್ವೋತ್ತಮನಾದ ಪರಮಾತ್ಮನು (ಅಸ್ತಿ)=ಇರುವನು. ವಿ.ಅ. 'ಜಗತಃ ತಸ್ಥುಷಶ್ಚ' ಎಂದು ಹೇಳಿದ್ದರಿಂದ ಆ ಶಾಸಕನಾದ ಪರಮಾತ್ಮನು ಜಂಗಮ ಸ್ಥಾವರಗಳಿಗೆ ಶಾಸಕನೆಂದೂ ನಾನು ಜಂಗಮಗಳಿಗೆ ಮಾತ್ರ, ಅದರಲ್ಲಿಯೂ ಮನುಷ್ಯರಿಗೆ ಮಾತ್ರ, ಅವರಲ್ಲಿಯೂ ಪಾಪಿಗಳಿಗೆ ಮಾತ್ರ, ಅದೂ ಆ ಪರಮಾತ್ಮನ

ಯಮರಾಜರು—'ಚರಾಚರ ಜಗತ್ತಿನ ಶಾಸಕನು ನನಗಿಂತ ಭಿನ್ನನೊಬ್ಬ ನಿರುವನು. ಅವನೇ ಪರಮಾತ್ಮ. ಬಟ್ಟೆಯು ಕಂತೆಯು ಹೊಲಿದ ದಾರವನ್ನು ಆಶ್ರಯಿಸಿರುವಂತೆ ಜಗತ್ತು ಅವನನ್ನು ಓತಪ್ರೋತವಾಗಿ ಆಶ್ರಯಿಸಿಕೊಂಡಿದೆ. ಅವನು ತನ್ನ ಸ್ವರೂಪಾಂಶಗಳಾದ ವಾಸುದೇವಾದಿ ರೂಪಗಳಿಂದಲೂ ಬ್ರಹ್ಮ

ಕಿಂಕರನಾಗಿ ಶಾಸಕನೇ ಹೊರತು ಸರ್ವೋತ್ತಮ ಶಾಸಕನಲ್ಲವೆಂದೂ ಯಮದೇವರು ಹೇಳಿಕೊಂಡಿರುವರು. 'ಪರಃ' ಎಂದು ಹೇಳಿದ್ದರಿಂದ ಆ ಶಾಸಕನ ಹೆಸರು ಪರಮಾತ್ಮನೆಂದು ಹೇಳಿದಂತಾಯಿತು. ಪಟವತ್ ಎಂಬಲ್ಲಿ ಬಂತೆಯನ್ನು ನಿರ್ಮಿಸಲು ಚೂರು ಚೂರು ಬಟ್ಟೆಗಳು ಮೂರು ಹುರಿದಾರದಲ್ಲಿ ಓತಪ್ರೋತವಾಗಿರುವಂತೆ ಶ್ರೀಹರಿಯಲ್ಲಿ ಜಗತ್ತು ಓತಪ್ರೋತವಾಗಿ ಇದೆಯೆಂದು ಅರ್ಥ. ಇದರಿಂದ ಪಟಕ್ಕೂ ತಂತುವಿಗೂ ಭೇದಾಭೇದವಿದ್ದಂತೆ ಜಗತ್ತಿಗೂ ಪರಮಾತ್ಮನಿಗೂ ಭೇದಾಭೇದವೆಂಬ ಶಂಕೆಗೆ ಅವಕಾಶವಿಲ್ಲ. 'ಯಸ್ಮಿನ್ನಿದಂ ಸಂ ಚ ವಿ ಚೈತಿ ಸರ್ವಂ' ಎಂಬ ಶ್ರುತಿಯೂ 'ಯಥಾ ಕಂಥಾಪಟಾಃ ಸೂತ್ರ ಓತಾಃ ಪ್ರೋತಾಶ್ಚ ಸಂಸ್ಥಿತಾಃ। ಏವಂ ವಿಷ್ಣಾವಿದಂ ವಿಶ್ವಂ ಓತಂ ಪ್ರೋತಂ ಚ ಸಂಸ್ಥಿತಮ್ ॥' ಎಂಬೀ ಮೊದಲಾದ ಸ್ಮೃತಿಗಳೂ ಇರುವುದರಿಂದ ಈ ಲಕ್ಷಣವು ಶ್ರೀಹರಿಗೆ ಯಾವ ಬಗೆಯ ಅವ್ಯಾಪ್ತಿ ಮತ್ತು ಅತಿ ವ್ಯಾಪ್ತಿ ದೋಷಗಳಿಲ್ಲದ್ದೆಂದು ತಿಳಿಯಬೇಕು. ಉಪಾದಾನೋಪಾದೇಯ ಭಾವ ವಿಲ್ಲದ ಈ ದೃಷ್ಟಾಂತದಿಂದ ಜಗತ್ತಿಗೂ ಶ್ರೀಹರಿಗೂ ಉಪಾದಾನೋಪಾದೇಯ ಭಾವವಿಲ್ಲವೆಂದು ಹೇಳಿದಂತಾಯಿತು. ಇದಕ್ಕೆ ಧಾರಕನಿಲ್ಲದೆ ಹೋಗಿದ್ದಲ್ಲಿ ಇದು ಬಿದ್ದುಹೋಗುತ್ತಿತ್ತು; ವೇಗವಿಲ್ಲದ ಬಾಣದಂತೆ ಎಂಬ ತರ್ಕದಿಂದಲೂ ಶ್ರೀಹರಿಯ ಧಾರಕತ್ವವು ಸಿದ್ಧವಾಗುವುದು. ಯದಂಶತಃ ಎಂಬುದು ಮತ್ತೊಂದು ಲಕ್ಷಣ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ' ಎಂಬ ಶ್ರುತಿಯೂ 'ಬ್ರಹ್ಮ ವಿಷ್ಣ್ವೀಶ ರೂಪಾಣಿ ತ್ರೀಣಿ ವಿಷ್ಣೋರ್ಮಹಾತ್ಮನಃ। ಬ್ರಹ್ಮಣಿಷ್ಟಃ ಸೃಜೇದ್ವಿಷ್ಣುಃ ಸ್ಥಿತ್ವಾ ರುದ್ರೇತ್ವ-ಭಕ್ಷಯೇ। ಪೃಥಕ್ ಸ್ಥಿತ್ವಾ ಜಗತ್ಪಾತಿ ತದ್ಬ್ರಹ್ಮಾದ್ಯಾಹ್ವಯೋ ಹರಿಃ। ಸ್ರಷ್ಟಾ ಪಾತಾ ಚ ಸಂಹರ್ತಾ ಸ ಏಕೋ ಹರಿರೀಶ್ವರಃ। ಸ್ರಷ್ಟೃತ್ವಾದಿಕಮನ್ಯೇಷಾಂ ದಾರುಯೋಷಾವದಿಷ್ಯತೇ ॥' ಎಂಬ ಸ್ಮೃತಿಯೂ ಪರಮಾತ್ಮನಿಗೆ ಸೃಷ್ಟ್ಯಾದಿ ಕರ್ತೃತ್ವವನ್ನು ಹೇಳುತ್ತವೆ. ಜನ್ಮಕರ್ತೃತ್ವ, ನಾಶಕರ್ತೃತ್ವ ಇತ್ಯಾದಿ ಬೇರೆಬೇರೆ ಲಕ್ಷಣಗಳು. ರೆಕ್ಕೆಯು ಬಂದ ಹಕ್ಕಿಯಂತೆ ಹುಟ್ಟಿದ ಜಗತ್ತು ಇವನ ಅಧೀನವಲ್ಲದೆ ಇರಬಹುದು ಎಂಬ ಶಂಕೆಯನ್ನು 'ನಸ್ಯೋತ'ವೆಂಬುದರಿಂದ ಪರಿಹರಿಸಿರುವರು. ॥ ೧೨ ॥

ಯೋ ನಾಮಭಿರ್ವಾಚಿ ಜನಂ ನಿಜಾಯಾಂ
ಬಧ್ನಾತಿ ತಂತ್ಯಾಮಿವ ದಾಮಭಿರ್ಗಾಃ ।

ರುದ್ರಾದಿಗಳಲ್ಲಿರುವ ಬ್ರಹ್ಮರುದ್ರನಾಮಕ ರೂಪಗಳಿಂದಲೂ ವಿಭಿನ್ನಾಂಶರಾದ ಬ್ರಹ್ಮಾದಿಗಳಿಂದಲೂ ಈ ಜಗತ್ತಿನ ಪಾಲನೆ, ಸೃಷ್ಟಿ, ನಾಶ ಮೊದಲಾದುವನ್ನು ಮಾಡುತ್ತಿರುವನು. ಮೂಗುದಾರ ಪೋಣಿಸಿರುವ ಎತ್ತಿನಂತೆ ಈ ಜೀವರು ಅವನ ಅಧೀನರಾಗಿರುವರು. ಯಜಮಾನನು ಗೋವುಗಳನ್ನು ಹಗ್ಗದಿಂದ ಕಟ್ಟಿಹಾಕುವಂತೆ

ಯಸ್ಮೈ ಬಲಿಂ ತ ಇಮೇ ನಾಮಕರ್ಮ-
ಭಿರ್ನಿಬಂಧಬದ್ಧಾಶ್ಚಕಿತಾ ವಹಂತಿ ॥ ೧೩ ॥

ಶ್ರೀಹರಿಯ ಶಾಸಕತ್ವವು ದಂಡಧರನು ದಂಡದಿಂದ ಮಾಡುವಂತೆ ಅಲ್ಲ. ಮತ್ತೇನೆಂದರೆ, ವೇದವೆಂಬ ವಾಕ್ಕಿನಿಂದ ಶಾಸನ ಮಾಡುತ್ತಿರುವನೆಂದು ಹೇಳುತ್ತಾರೆ. ಯಃ=ಯಾವ ಸರ್ವೋತ್ತಮನಾದ ಶ್ರೀಹರಿಯು ದಾಮಭಿಃ=ಹಗ್ಗಗಳಿಂದ ಗಾಃ ಇವ = ಗೋವುಗಳನ್ನು ಅವುಗಳ ಯಜಮಾನನು ಕಟ್ಟಿಹಾಕುವಂತೆ ನಿಜಾಯಾಂ=ತನ್ನಿಂದ ಅಭಿವ್ಯಕ್ತವಾದ ವಾಚಿ=ವಿಧಿ, ನಿಷೇಧ ರೂಪವಾದ ವೇದ ವಾಕ್ಯೆಂಬ ತಂತ್ಯಾಂ = ಹಗ್ಗದಲ್ಲಿ ಜನಂ = ಜೀವರನ್ನು ನಾಮಭಿಃ = ಬ್ರಾಹ್ಮಣ್ಯ (ಬ್ರಹ್ಮ) ಮೊದಲಾದ ಹೆಸರುಗಳಿಂದ ಬಧ್ನಾತಿ = ಕಟ್ಟಿಹಾಕುವನೋ (ಹೆಸರುಗಳೆಂಬ ಹಗ್ಗಗಳಿಂದ ಎಂದರ್ಥ) ನಾಮಕರ್ಮಭಿಃ = ಬ್ರಾಹ್ಮಣಾದಿ ಹೆಸರುಗಳಿಂದಲೂ ಶಮ ಮೊದಲಾದ ಕರ್ಮಗಳಿಂದಲೂ ನಿಬಂಧಬದ್ಧಾಃ = ಅತ್ಯಂತ ದೃಢವಾಗಿ ಕಟ್ಟಿಹಾಕಲ್ಪಟ್ಟ ತೇ ಇಮೇ=ಈ ಜೀವರು ಚಕಿತಾಃ (ಸಂತಃ)=ಹೆದರಿದವರಾಗಿ ಯಸ್ಮೈ=ಯಾವ ಸರ್ವೋತ್ತಮನಾದ ಶ್ರೀಹರಿಗಾಗಿ ಬಲಿಂ=ಪೂಜೆಯನ್ನು ವಹಂತಿ=ಮಾಡುತ್ತಿರುವರೋ ಅಂತಹ ಪರಮಾತ್ಮನು ಶಾಸಕನಿರುವನೆಂದು ಹಿಂದಕ್ಕೆ ಅನ್ವಯ. ಗೋವುಗಳು ಗೋವಿನ ಯಜಮಾನನ ಅಧೀನವಾಗಿ ಅವನಿಗಾಗಿ ಕರ್ಮ ಮಾಡುವಂತೆ ಬ್ರಹ್ಮ (ಬ್ರಾಹ್ಮಣ) ಮೊದಲಾದವರು ಶ್ರೀಹರಿಯ ಅಧೀನರಾಗಿ ತಮ್ಮ ತಮ್ಮ ಕರ್ಮ ನಿರ್ವಹಿಸುವ ಮೂಲಕ ಪೂಜಿಸುತ್ತಿರುವರೆಂದು ತಾತ್ಪರ್ಯ. ನಾಮಕರ್ಮಗಳಿಂದ ಜೀವರು ಅನಂತರೆಂದು ತಿಳಿಸುವುದಕ್ಕಾಗಿ ನಾಮಕರ್ಮಭ್ಯಾಂ ಎಂದು ಹೇಳದೆ ನಾಮಕರ್ಮಭಿಃ ಎಂದು ಬಹುವಚನವನ್ನು ಪ್ರಯೋಗಿಸಿರುವರು. 'ಭೀಷಾಸ್ಮಾದ್ವಾತಃ ಪವತೇ' ಇತ್ಯಾದಿ ಶ್ರುತಿಗಳು ಚಕಿತಾ ಎಂಬುದನ್ನು ಸಮರ್ಥಿಸುವುವು. ॥ ೧೩ ॥

ಅಹಂ ಮಹೇಂದ್ರೋ ನಿರ್ಋತಿಃ ಪ್ರಚೇತಾಃ
ಸೋಮೋಽಗ್ನಿರೀಶಃ ಪವನೋ ವಿರಿಂಚಿಃ ।
ಆದಿತ್ಯ ವಿಶ್ವೇ ವಸವೋಽಥ ಸಾಧ್ಯಾ
ಮರುದ್ಗಣಾ ರುದ್ರಗಣಾಃ ಸಸಿದ್ಧಾಃ ॥ ೧೪ ॥

ಆ ಪರಮಾತ್ಮನು ವಿಧಿ ನಿಷೇಧಾತ್ಮಕ ವೇದಗಳೆಂಬ ತನ್ನಿಂದ ಅಭಿವ್ಯಕ್ತ ಮಾತುಗಳಿಂದ ಜನರನ್ನು (ಬ್ರಹ್ಮ) ಬ್ರಾಹ್ಮಣ ಮೊದಲಾದ ಹೆಸರುಗಳಿಂದ ನಿಯಮಗೊಳಿಸಿರುವನು. ಈ ಜೀವರು ಬ್ರಾಹ್ಮಣಾದಿ ನಾಮಗಳಿಂದಲೂ ಶಮ ಮೊದಲಾದ ಕರ್ಮಗಳಿಂದಲೂ ದೃಢವಾಗಿ ಬದ್ಧರಾಗಿ ಭಯಗೊಂಡು ಆ ಪರಮಾತ್ಮನಿಗಾಗಿ ಪೂಜೆ(ಬಲಿ)ಯನ್ನು ಮಾಡುತ್ತಿರುವರು. ಯಮನಾದ ನಾನು, ಮಹೇಂದ್ರರೆನ್ನಿಸಿಕೊಂಡ ಇಂದ್ರದೇವರು, ನಿರ್ಋತಿ, ವರುಣ, ಚಂದ್ರ, ಅಗ್ನಿ, ರುದ್ರದೇವರು, ವಾಯು

ಅನ್ಯೇ ಚ ಯೇ ವಿಶ್ವಸೃಜೋಽಮರೇಶಾ
ಭೃಗ್ವಾದಯೋಽಸ್ಪೃಷ್ಟರಜಸ್ತಮಸ್ಕಾಃ ।
ಯಸ್ಯೇಹಿತಂ ನ ವಿದುಃ ಸ್ಪೃಷ್ಟಮಾಯಾಃ
ಸತ್ವಪ್ರಧಾನಾ ಅಪಿ ಕಿಂ ತತೋಽನ್ಯೇ ॥ ೧೫ ॥

ಸಾಮಾನ್ಯ ಜನರ ದೃಷ್ಟಿಯಲ್ಲಿ ಸರ್ವಜ್ಞರೆನ್ನಿಸಿಕೊಂಡ ನಮಗೆ ಶ್ರೀಹರಿ ವಿಷಯಕ ಜ್ಞಾನವನ್ನು ಕೊಡುವ ಮಹಿಮೆಯೂ ಶ್ರೀ ಹರಿಗೇ ಸೇರಿದ್ದು (ಅವನ ಲಕ್ಷಣವೇ) ಎಂದು ಹೇಳುತ್ತಾರೆ. ನಾನು (ಯಮನು), ಮಹೇಂದ್ರರು, ನಿರ್ಋತಿಯು, ಪ್ರಚೇತಾಃ=ವರುಣನು, ಚಂದ್ರ, ಅಗ್ನಿ, ರುದ್ರದೇವರು, (ಪವನ) ವಾಯುದೇವರು, (ವಿರಿಂಚಃ) ಬ್ರಹ್ಮದೇವರು, ಆದಿತ್ಯಃ=ಸೂರ್ಯನು ವಿಶ್ವೇ ದೇವತೆಗಳು, ವಸುಗಳು, ಸಾಧ್ಯರು, ಮರುದ್ಗಣಗಳು, ಸಿದ್ಧರಿಂದ ಕೂಡಿದ ರುದ್ರಗಣಗಳು, ಇತರರಾದ ವಿಶ್ವಸೃಜಃ=ಪ್ರಜೇಶ್ವರರು ಅಮರೇಶಾಃ=ದೇವತೆಗಳು ಅಸ್ಪೃಷ್ಟರಜಸ್ತಮಸ್ಕಾಃ = ರಜೋಗುಣ, ತಮೋಗುಣಗಳಿಂದ ಸ್ಪೃಷ್ಟರಲ್ಲದ ಶುದ್ಧ ಸಾತ್ವಿಕರಾದ ಭೃಗು ಮೊದಲಾದವರು ಸತ್ವಪ್ರಧಾನಾಃ=ಸತ್ವಗುಣವೇ ಹೆಚ್ಚಾಗಿರುವ (ಸ್ವಲ್ಪ ರಜಸ್ತಮೋಗುಣಗಳುಳ್ಳ) ತತಃ=ಭೃಗು ಮೊದಲಾದವರಿಗಿಂತ ಅನ್ಯೇ ಅಪಿ=ಇತರರಾದ ಮನು ಮೊದಲಾದವರೂ ಸ್ಪೃಷ್ಟಮಾಯಾಃ (ಸಂತಃ)=ಶ್ರೀಹರಿಯ ಇಚ್ಛೆಯಿಂದ ಆವೃತರಾಗಿ ಯಸ್ಯ=ಯಾವ ಈ ಸರ್ವೋತ್ತಮ ಶಾಸಕ ಶ್ರೀಹರಿಯ ಈಹಿತಂ = ಅಭಿಪ್ರಾಯವನ್ನು ನ ವಿದುಃ ಕಿಂ=ತಿಳಿಯುತ್ತಿಲ್ಲವೇನು? ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ತಿಳಿಯುತ್ತಿರುವರೆಂದು ಅರ್ಥ. ಅಥವಾ ಸತ್ವಪ್ರಧಾನಾ ಅಪಿ=ಇವರೆಲ್ಲರೂ ಸತ್ವಗುಣಪ್ರಚುರರೇ (ಸಾತ್ವಿಕರೇ) ಆದರೂ ಯಾವ ಶ್ರೀಹರಿಯ ಅಭಿಪ್ರಾಯವನ್ನು ಚೇಷ್ಟಿತವನ್ನು ಸಂಪೂರ್ಣವಾಗಿ ನ ವಿದುಃ=ತಿಳಿಯುವುದಿಲ್ಲವೋ ಅವನು ಎಂದು ಹಿಂದಕ್ಕೆ ಅನ್ವಯ. ತತೋ ಅನ್ಯೇ = ಸಾತ್ವಿಕರಲ್ಲದವರು ತಿಳಿಯುವುದಿಲ್ಲವೆಂದು ಕಿಂ (ವಕ್ತವ್ಯಂ) = ಹೇಳುವುದೇನಿದೆ? ಶ್ರೀಹರಿಯ ಲೀಲೆಯು ಎಂತಹವರಿಗೂ ತಿಳಿಯಲಸಾಧ್ಯವೆಂದರ್ಥ. ॥ ೧೪-೧೫ ॥

ದೇವರು, ಬ್ರಹ್ಮದೇವರು, ಸೂರ್ಯ, ವಿಶ್ವೇದೇವತೆಗಳು, ವಸುಗಳು, ಸಾಧ್ಯರು, ಮರುದ್ಗಣಗಳು, ಸಿದ್ಧರನ್ನೊಳಗೊಂಡ ರುದ್ರಗಣಗಳು, ಇತರರಾದ ಪ್ರಜೇಶ್ವರರು, ದೇವತೆಗಳು, ರಜಸ್ತಮೋಗುಣ ಸ್ಪರ್ಶವಿಲ್ಲದ ಶುದ್ಧ ಸಾತ್ವಿಕ ಗುಣವಂತರಾದ ಭೃಗು ಮೊದಲಾದವರು, ಸಾತ್ವಿಕ ಗುಣಪ್ರಧಾನರಾದ ಮನು ಮೊದಲಾದವರು— ಇವರೆಲ್ಲರೂ ಶ್ರೀ ಹರಿಯ ಇಚ್ಛೆಯಿಂದ ಆವೃತರಾಗಿ ಆ ಸರ್ವೋತ್ತಮ ಶ್ರೀಹರಿಯ ಇಚ್ಛೆಯನ್ನು ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ತಿಳಿಯುತ್ತಿರುವರು. ಇಂತಹ ಸಾತ್ವಿಕರೂ ಸಂಪೂರ್ಣವಾಗಿ ತಿಳಿಯುತ್ತಿಲ್ಲ. ಸಾತ್ವಿಕರಲ್ಲದವರು ತಿಳಿಯುವುದಿಲ್ಲವೆಂದು

**ಯಂ ವೈ ನ ಗೋಭಿರ್ಮನಸಾಽಸುಭಿರ್ವಾ
ಹೃದಾ ಗಿರಾ ವಾಽಸುಭೃತೋ ವಿಚಕ್ಷತೇ ।
ಆತ್ಮಾನಮಂತರ್ಹೃದಿ ಸಂತಮಾತ್ಮನಾಂ
ಚಕ್ಷುರ್ಯಥೈವಾಕೃತಯಸ್ತತಃ ಪರಮ್ ॥ ೧೬ ॥**

ಕಾಣದಿರುವ ಗುರಿಯನ್ನು ಹೊಡೆಯುವುದು ಹೇಗೆ ಕಷ್ಟಸಾಧ್ಯವೋ ಹಾಗೆಯೇ ಕಣ್ಣು ಮೊದಲಾದ ಇಂದ್ರಿಯಗಳಿಗೆ ವಿಷಯನಲ್ಲವಾದ್ದರಿಂದ ಶ್ರೀಹರಿಯ ವಿಷಯಕ ಜ್ಞಾನವು ಅವನ ಅನುಗ್ರಹವಿಲ್ಲದೆ ದುಸ್ಸಾಧ್ಯವೆಂದು ಹೇಳುತ್ತಾರೆ. (೧) ಅಸುಭೃತಃ=ಜೀವರು ಆತ್ಮನಾಂ=ಜೀವರ ಆತ್ಮಾನಂ=ಅಂತರ್ಯಾಮಿಯನ್ನು ದ್ರಷ್ಟಾರನನ್ನು ಅಂತರ್ಹೃದಿ=ಹೃದಯದೊಳಗೆ ಇರುವನನ್ನು (ಇದು ಪರಮಾತ್ಮನ ಮತ್ತೊಂದು ರೂಪವೆಂದಾದರೂ ಇಟ್ಟುಕೊಳ್ಳಬಹುದು. ಅಥವಾ ಹೃದಯದಲ್ಲಿರುವ ಅಂತರ್ಯಾಮಿಯನ್ನು ಎಂದು ಒಂದೇ ರೂಪವನ್ನಾದರೂ ಇಟ್ಟುಕೊಳ್ಳಬಹುದು.) ತತಃ=ಇಂದ್ರಿಯಗಳಿಗೆ ಪರಂ=ವಿಷಯನಲ್ಲದ ಯಂ=ಯಾವನನ್ನು ಆಕೃತಯಃ=ರೂಪಗಳು ಚಕ್ಷುಃ=ತಮಗೆ ವಿಷಯವಲ್ಲದ ಕಣ್ಣನ್ನು ಯಥೈವ=ಹೇಗೆ ನೋಡಲಾರವೋ (ತಥೈವ)=ಹಾಗೆಯೇ ಗೋಭಿಃ=ಇಂದ್ರಿಯಗಳಿಂದ, ಮನಸಾ=ಬುದ್ಧಿಯಿಂದ ಅಸುಭಿಃ=ಪ್ರಾಣಗಳಿಂದ ವಾ=ಮತ್ತು ಹೃದಾ=ಮನಸ್ಸಿನಿಂದ ಗಿರಾ=ಮಾತಿನಿಂದ ನ ವಿಚಕ್ಷತೇ=ತಿಳಿಯಲಾರರೋ (ಅವನ ಅನುಗ್ರಹವಾದರೆ ತಮ್ಮ ಯೋಗ್ಯತೆಗೆ ತಕ್ಕಷ್ಟು ಸ್ವಲ್ಪ ಮಾತ್ರ ತಿಳಿಯುವರೋ) ಅಂತಹ ನನಗಿಂತ ಭಿನ್ನನಾದ ಶಾಸಕನಿರುವನೆಂದು ಹಿಂದಕ್ಕೆ ಅನ್ವಯ. ಇದರಿಂದ ಸಮೀಪದಲ್ಲಿರುವ ಚಕ್ಷುಸ್ಸು ಮೊದಲಾದ ಇಂದ್ರಿಯಾಭಿಮಾನಿದೇವತೆಗಳಿಗೂ ಶ್ರೀ ಹರಿಯ ವಿಷಯಕ ಜ್ಞಾನವು ಸಂಪೂರ್ಣವಾಗಿ ಇಲ್ಲವೆಂದು ಹೇಳಿದಂತಾಯಿತು. ಆಕೃತಿಗಳು ತಮ್ಮ ಸ್ವರೂಪವಾದ್ದರಿಂದ ಚಕ್ಷುರಿಂದ್ರಿಯವನ್ನು ತಿಳಿಯಲಿಲ್ಲವೆಂಬುದೂ ಇಲ್ಲವೆಂದು 'ತತಃ ಪರಂ' ಎಂಬುದರಿಂದ ಹೇಳಿರುವರು. ಆಕೃತಿಗಳಿಗಿಂತ ಚಕ್ಷುರಿಂದ್ರಿಯವು ಭಿನ್ನವೆಂದರ್ಥ. ಹೀಗೆ ಇಂದ್ರಿಯಾವಿಷಯತ್ವವು ಶ್ರೀಹರಿಯ ಲಕ್ಷಣವೆಂದು ತಿಳಿಯಬೇಕು. (೨) ಗೋಭಿಃ=ಇಂದ್ರಿಯಾಭಿಮಾನಿಗಳಾದ ಇಂದ್ರ ಮೊದಲಾದವರೊಂದಿಗೆ, ಮನಸಾ=ಚಂದ್ರನೊಂದಿಗೆ, ಅಸುಭಿಃ=ಮುಖ್ಯ ಪ್ರಾಣ ಮೊದಲಾದ

ಹೇಳುವುದೇನಿದೆ? ಜೀವರ ಹೃದಯದಲ್ಲಿ ಅವರವರ ಅಂತರ್ಯಾಮಿಯು—ದ್ರಷ್ಟಾರನು ಇಂದ್ರಿಯಾವಿಷಯನಾಗಿ ನೆಲೆಸಿರುವನು. ರೂಪಗಳು ತಮಗೆ ವಿಷಯವಲ್ಲದ ಚಕ್ಷುಸ್ಸನ್ನು ಕಾಣದಿರುವಂತೆ ಈ ಜೀವರು ತಮ್ಮ ಇಂದ್ರಿಯಗಳಿಂದ, ಬುದ್ಧಿಯಿಂದ, ಪ್ರಾಣಗಳಿಂದ ಮತ್ತು ಮನಸ್ಸು ಮಾತುಗಳಿಂದ ಆ ಅಂತರ್ಯಾಮಿ ಶ್ರೀ ಹರಿಯನ್ನು ಕಾಣುತ್ತಿಲ್ಲ. ಅವನ ಅನುಗ್ರಹದಿಂದ ಮಾತ್ರ ತಮ್ಮ ಯೋಗ್ಯತಾನುಗುಣವಾಗಿ ತಿಳಿಯಬಲ್ಲರು. (ಇಂದ್ರಿಯಾಭಿಮಾನಿಗಳೂ ತಮಗಿಂತ

ಮರುತ್ತುಗಳೊಂದಿಗೆ ಹೃದಾ=ಅಂತಃಕರಣಾಭಿಮಾನಿ ರುದ್ರದೇವರೊಂದಿಗೆ ಗಿರಾ=ವಾಗಭಿಮಾನಿ ಉಮಾದೇವಿ, ವೇದಾಭಿಮಾನಿ ಸರಸ್ವತಿ ಲಕ್ಷ್ಮೀಯರೊಂದಿಗೆ ಕೂಡಿದ ಅಸುಭೃತಃ=ಎಲ್ಲ ಜೀವರೂ ತತಃ ಪರಂ=ಎಲ್ಲ ಜೀವರಿಗಿಂತ ಉತ್ತಮನೂ ವಿಲಕ್ಷಣನೂ ಆದ ಯಾವನನ್ನು ನ ವಿಚಕ್ಷತೇ=ವಿಶೇಷವಾಗಿ ತಿಳಿಯಲಾರರೋ ಅಂತಹ ಎಂದನ್ವಯ. ಇದಕ್ಕೆ ದೃಷ್ಟಾಂತ. ಆಕೃತಯಃ=ರೂಪಾಭಿಮಾನಿಗಳು (ರುದ್ರಪುತ್ರರು ಮತ್ತು ವ್ಯಾನವಾಯು) ತತಃ ಪರಂ=ತಮಗಿಂತ ಉತ್ತಮನಾದ ಚಕ್ಷುಃ=ಚಕ್ಷುರಭಿಮಾನಿ ಸೂರ್ಯನನ್ನು ಹೇಗೆ ತಿಳಿಯಲಾರರೋ ಹಾಗೆ ಎಂದರ್ಥ. ಸಾಕಲ್ಯೇನ ಭಗವದ್ವಿಷಯಕ ಜ್ಞಾನವಿಲ್ಲದಿದ್ದರೂ ಅವನ ಅನುಗ್ರಹದಿಂದ ತಮ್ಮ ಯೋಗ್ಯತೆಗೆ ತಕ್ಕಷ್ಟು ತಿಳಿಯುವರು ಎಂದಾದ್ದರಿಂದ 'ತಮೇವಂ ವಿದ್ವಾನಮೃತ ಇಹ ಭವತಿ' ಎಂಬ ಶ್ರುತಿಗೂ ವಿರೋಧವಿಲ್ಲ. ಈ ರೀತಿಯ ಅರ್ಥಕ್ಕೆ ಪ್ರಮಾಣಗಳನ್ನು 'ಚಿಟ್ಟೇ' ವ್ಯಾಖ್ಯಾನದಲ್ಲಿ ನೋಡಬಹುದು. || ೧೬ ||

ತಸ್ಯಾತ್ಮತಂತ್ರಸ್ಯ ಹರೇರಧೀಶಿತುಃ
ಪರಸ್ಯ ಮಾಯಾಧಿಪತೇರ್ಮಹಾತ್ಮನಃ ।
ಪ್ರಾಯೇಣ ದೂತಾ ಇಹ ವೈ ಮನೋಹರಾ-
ಶ್ಚರಂತಿ ತದ್ರೂಪಗುಣಸ್ವಭಾವಾಃ || ೧೭ ||

'ತಾಂಸ್ತು ವೇದಿತುಮಿಚ್ಛಾಮಹೇ' ಎಂದು ಕೇಳಿದ್ದಕ್ಕೆ ಉತ್ತರ ಹೇಳುತ್ತಾರೆ. ಆತ್ಮತಂತ್ರಸ್ಯ=ಸ್ವತಂತ್ರನಾದ, ಅಧೀಶಿತುಃ=ಸರವೈಶ್ವರ್ಯವಂತನಾದ, ಆದ್ದರಿಂದಲೇ ಪರಸ್ಯ=ಪೂರ್ಣನಾದ ಮಾಯಾಧಿಪತೇಃ=ಲಕ್ಷ್ಮೀಪತಿಯಾದ ಮಹಾತ್ಮನಃ=ಸರ್ವೋತ್ತಮನಾದ ತಸ್ಯ ಹರೇಃ=ಆ ಶ್ರೀ ಹರಿಯ ಪ್ರಾಯೇಣ=ಬಹುವಾಗಿ ತದ್ರೂಪಗುಣಸ್ವಭಾವಾಃ=ಶ್ರೀ ಹರಿಯಂತೆ ಶ್ಯಾಮವರ್ಣ, ವಿಪ್ರಪ್ರಿಯತೆ ಮೊದಲಾದ ಗುಣ, ಶಾಶ್ವತವಾದ ನಿರ್ದೋಷತ್ವ, ಭಕ್ತವಾತ್ಸಲ್ಯಾದಿ ಸ್ವಭಾವಗಳಿಂದ ಕೂಡಿದ, ಆದ್ದರಿಂದಲೇ ಮನೋಹರಾಃ=ಸುಂದರರಾದ ದೂತರು ಇಹ=ಭೂಲೋಕದಲ್ಲಿ ಚರಂತಿ ವೈ=ಸಂಚರಿಸುವರಷ್ಟೆ. ಲಕ್ಷ್ಮೀಪತಿತ್ವ ಸ್ವತಂತ್ರತ್ವಗಳನ್ನು ಹೇಳಿದ್ದು ಹಿಂದೆ ಹೇಳಿದ ಲಕ್ಷಣಗಳು ಶ್ರೀ ಹರಿಯಲ್ಲಿ ಇವೆಯೆಂದು ಸಾಧಿಸುವುದಕ್ಕಾಗಿ. ಪ್ರಾಯೇಣ ಎಂದು ಹೇಳಿದ್ದರಿಂದ ಯಮದೂತರು ಹೇಳಿದ ವಿಷಯವನ್ನು ನಿರ್ಧರಿಸಿರುವರು || ೧೭ ||

ಭಿನ್ನನಾದ ಶ್ರೀ ಹರಿಯನ್ನು ಸಾಕಲ್ಯದಿಂದ ತಿಳಿಯುತ್ತಿಲ್ಲ). ಆ ಶ್ರೀಹರಿಯು ಸ್ವತಂತ್ರನು; ಅಧೀಶ್ವರನು; ಪೂರ್ಣನು; ಲಕ್ಷ್ಮೀಪತಿಯು. ಸರ್ವೋತ್ತಮನಾದ ಇವನ ದೂತರು ಪ್ರಾಯಿಕವಾಗಿ ಇವನಂತೆ ಶ್ಯಾಮವರ್ಣ, ವಿಪ್ರಪ್ರಿಯತೆ; ದೋಷರಾಹಿತ್ಯ, ಭಕ್ತವಾತ್ಸಲ್ಯ ಮೊದಲಾದ ಸ್ವಭಾವ-ಇವುಗಳಿಂದ ಕೂಡಿದವರಾಗಿ ಮನೋಹರರಾಗಿ ಇರುವರು. ಈ ಲೋಕದಲ್ಲಿ ಸಂಚರಿಸುತ್ತಿರುವರು.

ಭೂತಾನಿ ವಿಷ್ಣೋಃ ಸುರಪೂಜಿತಾನಿ
ದುರ್ದರ್ಶಲಿಂಗಾನಿ ಮಹಾದ್ಭುತಾನಿ ।
ರಕ್ಷಂತಿ ತದ್ಭಕ್ತಿಮತಃ ಪರೇಭ್ಯೋ
ಮತ್ತಶ್ಚ ಮರ್ತ್ಯಾನಥ ಸರ್ವತಶ್ಚ ॥ ೧೮ ॥

ಭೂಮಿಯಲ್ಲಿ ಸಂಚರಿಸುವ ಅವರಿಗೆ ಕೃತ್ಯವೇನೆಂದರೆ ಹೇಳುತ್ತಾರೆ. ಸುರಪೂಜಿತಾನಿ=ದೇವತೆಗಳಿಂದ ಗೌರವಿತರಾದ ದುರ್ದರ್ಶಲಿಂಗಾನಿ=ಕಣ್ಣಿನಿಂದ ಕಾಣಲು ಯೋಗ್ಯವಲ್ಲದ ಲಕ್ಷಣಗಳುಳ್ಳ ಆದ್ದರಿಂದಲೇ ಮಹಾದ್ಭುತಾನಿ=ಅತ್ಯಾಶ್ಚರ್ಯಕರರಾದ ವಿಷ್ಣೋಃ ಭೂತಾನಿ=ಶ್ರೀಹರಿ ಪಾರ್ಷದರು (ಭೃತ್ಯರು) ತದ್ಭಕ್ತಿಮತಃ=ಶ್ರೀಹರಿಯಲ್ಲಿ ಭಕ್ತಿಮಾಡುವ ಮರ್ತ್ಯಾ=ಮನುಷ್ಯರನ್ನು ಪರೇಭ್ಯಃ=ಶತ್ರುಗಳಿಂದಲೂ ಮತ್ತಃ ಚ=ನನ್ನ ಕಡೆಯಿಂದಲೂ ಅಥ=ಮತ್ತು ಸರ್ವತಃ ಚ=ಬೆಂಕಿ ಮೊದಲಾದ ಎಲ್ಲ ವಿಪತ್ತುಗಳಿಂದಲೂ ರಕ್ಷಂತಿ=ಕಾಪಾಡುವರು. ॥ ೧೮ ॥

ಧರ್ಮಂ ತು ಸಾಕ್ಷಾದ್ಭಗವತ್ಪ್ರಣೀತಂ
ನ ವೈ ವಿದುರ್ಋಷಯೋ ನಾಪಿ ದೇವಾಃ ।
ನ ಸಿದ್ಧಮುಖ್ಯಾ ಅಸುರಾ ಮನುಷ್ಯಾಃ
ಕುತೋ ನು ವಿದ್ಯಾಧರಚಾರಣಾದಯಃ ॥ ೧೯ ॥

ವಿಷ್ಣುದೂತರಾದರೆ ಪಾಪಿಯನ್ನೇಕೆ ಬಿಡಿಸಿದರು? ಎಂದರೆ ಅದಕ್ಕೆ ಉತ್ತರ ಹೇಳುತ್ತಾರೆ. ಸಾಕ್ಷಾತ್ ಶ್ರೀಹರಿಯೇ ರಕ್ಷಿಸಿಕೊಂಡು ಬಂದಿರುವ ಧರ್ಮವನ್ನು (ರಹಸ್ಯವನ್ನು) ಋಷಯಃ=ಸಾಮಾನ್ಯ ಋಷಿಗಳು ನ ವಿದುಃ ವೈ=ತಿಳಿದಿಲ್ಲವು. ದೇವಾಃ ಅಪಿ=ಸಾಮಾನ್ಯ ದೇವತೆಗಳೂ ನ (ವಿದುಃ)=ತಿಳಿದಿಲ್ಲ. ಸಿದ್ಧಮುಖ್ಯಾಃ=ಸಿದ್ಧಶ್ರೇಷ್ಠರು ವಿದ್ಯಾಧರ ಚಾರಣ ಮೊದಲಾದವರು ನ ವಿದುಃ = ತಿಳಿದಿಲ್ಲ. ಮನುಷ್ಯರೂ ಅಸುರರೂ ಕುತಃ ನು=ಹೇಗೆ ತಾನೇ ತಿಳಿದಾರು! ತು=ಅದರ ಸೂಕ್ಷ್ಮಜ್ಞಾನವು ನಿಮಗೂ ಇಲ್ಲ. ॥ ೧೯ ॥

ದೇವತೆಗಳಿಂದಲೂ ಮಾನ್ಯರಾದ ಇವರ ಲಕ್ಷಣವನ್ನು ಕಣ್ಣಿನಿಂದ ಕಾಣಲಾಗುವುದಿಲ್ಲ. ಆಶ್ಚರ್ಯಕರರಾದ ಇವರು ಶ್ರೀ ಹರಿಯ ಭಕ್ತರಾದ ಮಾನವರನ್ನು ಶತ್ರುಗಳಿಂದಲೂ ನನ್ನಿಂದಲೂ ಮತ್ತು ಎಲ್ಲ ವಿಪತ್ತುಗಳಿಂದಲೂ ಕಾಪಾಡುವರು.

'ಸಾಕ್ಷಾತ್ ಶ್ರೀ ಹರಿಯು ರಕ್ಷಿಸಿಕೊಂಡು ಬಂದಿರುವ ಧರ್ಮ(ರಹಸ್ಯ)ವನ್ನು ಸಾಮಾನ್ಯರಾದ ಋಷಿಗಳು ತಿಳಿದಿಲ್ಲ. ಸಾಮಾನ್ಯ ದೇವತೆಗಳೂ ತಿಳಿಯರು. ಸಿದ್ಧಶ್ರೇಷ್ಠರೂ ವಿದ್ಯಾಧರರೂ ಚಾರಣರೂ ಅರಿಯರು. ಅಸುರರೂ ಮನುಷ್ಯರೂ ಅರಿಯರೆಂದು ಹೇಳುವುದಾದರೂ ಏನು? ಧರ್ಮಸೂಕ್ಷ್ಮವನ್ನು ನೀವೂ ಅರಿಯರಿ.

ಸ್ವಯಂಭೂರ್ನಾರದಃ ಶಂಭುಃ
ಕುಮಾರಃ ಕಪಿಲೋ ಮುನಿಃ ।
ಪ್ರಹ್ಲಾದೋ ಜನಕೋ ಭೀಷ್ಮೋ
ಬಲಿರ್ವೈಯಾಸಕಿರ್ವಯಮ್ ॥ ೨೦ ॥

ದ್ವಾದಶೈತೇ ವಿಜಾನೀಮೋ ಧರ್ಮಂ ಭಾಗವತಂ ಭಟಾಃ ।
ಗುಹ್ಯಂ ವಿಶುದ್ಧಂ ದುರ್ಬೋಧಂ ಯಜ್ಜ್ಞಾತ್ವಾಽಮೃತಮಶ್ನುತೇ॥

ಹಾಗಾದರೆ ಯಾರು ತಿಳಿದಿರುವರು? ಯಾರೂ ತಿಳಿಯದಿದ್ದಲ್ಲಿ ಅದು ಇದೆ ಎನ್ನುವುದರಲ್ಲಿ ಪ್ರಮಾಣವಾದರೂ ಏನು? ಎಂದರೆ ತಿಳಿದವರನ್ನು ಹೇಳುತ್ತಾರೆ. ಸ್ವಯಂಭೂಃ=ಬ್ರಹ್ಮದೇವರು, ನಾರದರು, ರುದ್ರದೇವರು, ಕುಮಾರಃ=ಸನತ್ಕುಮಾರರು, ಕಪಿಲಋಷಿಗಳು, ಮನುಃ ಎಂಬ ಪಾಠದಲ್ಲಿ ಸ್ವಾಯಂಭುವ ಮನುಗಳು, ಪ್ರಹ್ಲಾದರು, ಜನಕರು, ಭೀಷ್ಮರು, ಬಲಿಚಕ್ರವರ್ತಿಗಳು, ವೈಯಾಸಕಿಃ=ಶುಕಾಚಾರ್ಯರು ವಯಂ=ನಾನು (ಯಮದೇವರು) ಏತೇ ದ್ವಾದಶ=ಈ ಹನ್ನೆರಡು ಮಂದಿ ಗುಹ್ಯಂ=ರಹಸ್ಯವೂ ವಿಶುದ್ಧಂ=ಶುದ್ಧವೂ (ಮೋಕ್ಷಜನಕವೂ) ದುರ್ಬೋಧಂ=ಶ್ರೀಹರಿಯ ಅನುಗ್ರಹವಿಲ್ಲದೆ ತಿಳಿಯಲಾಗದುದೂ ಆದ ಭಾಗವತಂ ಧರ್ಮಂ=ಭಗವತ್ಪ್ರೀತಿಕರ ಧರ್ಮವನ್ನು ಜಾನೀಮಃ=ತಿಳಿದಿರುವೆವು. ಯತ್=ಯಾವ ಈ ಧರ್ಮಸೂಕ್ಷ್ಮವನ್ನು ಜ್ಞಾತ್ವಾ=ತಿಳಿದು ಆಚರಿಸಿದರೆ ಅಮೃತಂ=ಮೋಕ್ಷವನ್ನು ಅಶ್ನುತೇ=ಅನುಭವಿಸುವನು. ॥ ೨೦, ೨೧ ॥

ಏತಾವಾನೇವ ಲೋಕೇಽಸ್ಮಿನ್ ಪುಂಸಾಂ ಧರ್ಮಃ ಪರಃ ಸ್ಮೃತಃ ।
ಭಕ್ತಿಯೋಗೋ ಭಗವತಿ ತನ್ನಾಮಗ್ರಹಣಾದಿಭಿಃ ॥ ೨೨ ॥

ಧರ್ಮದ ಸ್ವರೂಪವನ್ನು ತಾವು ತಿಳಿಸಿರಿ ಎಂದು ಅವರು ಪ್ರಾರ್ಥಿಸಿದರೆಂದು ಆಶಂಕಿಸಿ ಉತ್ತಮವಾದ ಧರ್ಮವನ್ನು ಹೇಳುತ್ತೇನೆ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ತನ್ನಾಮಗ್ರಹಣಾದಿಭಿಃ=ಶ್ರೀಹರಿಯ ನಾಮೋಚ್ಚಾರಣೆ ಮೊದಲಾದವುಗಳಿಂದ ಭಗವತಿ=ಶ್ರೀಹರಿಯಲ್ಲಿ ಭಕ್ತಿಯೋಗಃ=ಭಕ್ತಿಯೆಂಬ

ಬ್ರಹ್ಮದೇವರು, ನಾರದರು, ರುದ್ರದೇವರು, ಸನತ್ಕುಮಾರರು, ಕಪಿಲರು, ಸ್ವಾಯಂಭುವ ಮನುರಾಜರು, ಪ್ರಹ್ಲಾದ, ಜನಕ, ಭೀಷ್ಮ, ಬಲಿಚಕ್ರವರ್ತಿ, ಶುಕಾಚಾರ್ಯರು, ನಾನು (ಯಮ)—ಈ ಹನ್ನೆರಡು ಮಂದಿ ರಹಸ್ಯವೂ, ಶುದ್ಧವೂ ಶ್ರೀ ಹರಿಯ ಅನುಗ್ರಹೈಕಗಮ್ಯವೂ ಆದ ಭಾಗವತ ಧರ್ಮವನ್ನು ಬಲ್ಲೆವು. ಈ ಧರ್ಮಸೂಕ್ಷ್ಮವನ್ನು ಅರಿತು ಆಚರಿಸಿದರೆ ಮೋಕ್ಷವೇ ಅನುಭವಕ್ಕೆ ಬರುವುದು. ಶ್ರೀ ಹರಿಯ ನಾಮೋಚ್ಚಾರಣೆ ಮುಂತಾದವುಗಳಿಂದ ಶ್ರೀ ಹರಿಯಲ್ಲಿ ಮಾಡುವ ಭಕ್ತಿಯೋಗವೇ ಈ ಪ್ರಪಂಚದಲ್ಲಿ ಅಧಿಕಾರಿಚೇತನರಿಗೆ ಉತ್ತಮ ಧರ್ಮವೆಂದು ಸ್ಮೃತಿ ಪ್ರಮಾಣಗಳಲ್ಲಿ ಉಕ್ತವಾಗಿದೆ.

ಮೋಕ್ಷೋಪಾಯವು (ಯಃ ಅಸ್ತಿ)=ಯಾವುದಿದೆಯೋ ಏತಾವಾನ್ ಏವ–ಇದೇ (ಇಷ್ಟೇನೇ) ಅಸ್ಮಿನ್ ಲೋಕೇ=ಈ ಪ್ರಪಂಚದಲ್ಲಿ ಪುಂಸಾಂ=ಅಧಿಕಾರಿ ಚೇತನರಿಗೆ ಪರಃ=ಉತ್ತಮವಾದ ಧರ್ಮವೆಂದು ಸ್ಮೃತಃ–'ಏಷ ಮೇ ಸರ್ವ ಧರ್ಮಾಣಾಂ ಧರ್ಮೋಽಧಿಕತಮೋ ಮತಃ | ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ||' ಇತ್ಯಾದಿ ಸ್ಮೃತಿಪ್ರಮಾಣಗಳಲ್ಲಿ ಉಕ್ತವಾಗಿದೆ. || ೨೨ ||

ನಾಮೋಚ್ಚಾರಣಮಾಹಾತ್ಮ್ಯಂ ಹರೇಃ ಪಶ್ಯತ ಪುತ್ರಕಾಃ |
ಅಜಾಮಿಳೋಽಪಿ ಯೇನೈವ ಮೃತ್ಯುಪಾಶಾದಮುಚ್ಯತ || ೨೩ ||

ಹೇ ಪುತ್ರಕಾಃ – ಮಕ್ಕಳಿರಾ ! ಹರೇಃ – ಶ್ರೀಹರಿಯ ನಾಮೋಚ್ಚಾರಣ ಮಾಹಾತ್ಮ್ಯಂ=ನಾಮದ ಉಚ್ಚಾರಣೆಯ ಮಹಿಮೆಯನ್ನು ಪಶ್ಯತ–ನೋಡಿರಿ. ಅಜಾಮಿಳಃ ಅಪಿ=ಪಾಪಮಾಡಿದ ಅಜಾಮಿಳನೂ ಕೂಡ ಯೇನ ಏವ–ಭಕ್ತಿ ಪೂರ್ವಕ ನಾಮೋಚ್ಚಾರಣೆಯಿಂದಲೇ ಮೃತ್ಯುಪಾಶಾತ್=ಯಮಪಾಶದಿಂದ ಅಮುಚ್ಯತ=ಬಿಡುಗಡೆ ಹೊಂದಿದನು. ಪ್ರತ್ಯಕ್ಷ ಉದಾಹರಣೆ ಇರುವಾಗ ಬೇರೆ ಪ್ರಮಾಣ ಬೇಕಾಗಿಲ್ಲವೆಂದರ್ಥ. || ೨೩ ||

ಏತಾವತಾಽಲಮಘನಿರ್ಹರಣಾಯ ಪುಂಸಾಂ
ಸಂಕೀರ್ತನಂ ಭಗವತೋ ಗುಣಕರ್ಮನಾಮ್ನಾಮ್ |
ವಿಕ್ರುಶ್ಯ ಪುತ್ರಮಘವಾನ್ ಯದಜಾಮಿಳೋಽಪಿ
ನಾರಾಯಣೇತಿ ಮ್ರಿಯಮಾಣ ಇಯಾಯ ಮುಕ್ತಿಮ್ ||

ಪುಂಸಾಂ–ಅಧಿಕಾರಿ ಚೇತನರ ಅಘನಿರ್ಹರಣಾಯ–ಪಾಪವನ್ನು ಸಂಪೂರ್ಣ ವಾಗಿ ಹೋಗಲಾಡಿಸಲು ಭಗವತಃ=ಶ್ರೀಹರಿಯ ಗುಣಕರ್ಮನಾಮ್ನಾಂ– (೧) ನಾರಾಯಣ ಮೊದಲಾದ ಗುಣವಾಚಕ ನಾಮಗಳ ಮತ್ತು ಮಧುಸೂದನ ಮೊದಲಾದ ಕ್ರಿಯಾವಾಚಕ ನಾಮಗಳ (೨) ಗುಣಗಳ, ಕ್ರಿಯೆಗಳ ಮತ್ತು ಹೆಸರುಗಳ ಸಂಕೀರ್ತನಂ=ಭಕ್ತಿಯುಕ್ತ ಉಚ್ಚಾರಣೆಯು ಏತಾವತಾ=ಇಷ್ಟುಮಾತ್ರ ದಿಂದಲೇ ಅಲಂ–ಸಮರ್ಥವಾದುದು. ಮತ್ತೊಂದು ಸಾಧನವು ಅಪೇಕ್ಷಿತವಲ್ಲ ವೆಂದರ್ಥ. ಯತ್–ಏಕೆಂದರೆ, ಮ್ರಿಯಮಾಣಃ–ಸಾಯಲಿದ್ದ ಅಘವಾನ್=ಪಾಪಿ

'ಮಕ್ಕಳಿರಾ!' ಶ್ರೀಹರಿನಾಮೋಚ್ಚಾರಣೆಯ ಮಹಿಮೆಯನ್ನಾದರೂ ನೋಡಿರಿ! ಪಾಪಿಯಾದ ಅಜಾಮಿಳನೂ ಭಕ್ತಿಯಿಂದ ನಾಮೋಚ್ಚಾರಣೆ ಮಾಡಿದ ಮಾತ್ರದಿಂದಲೇ ನನ್ನ ಪಾಶದಿಂದ ಬಿಡುಗಡೆ ಹೊಂದಿದನು. ಅಧಿಕಾರಿ ಚೇತನರು ಪಾಪವನ್ನು ನಿರ್ಮೂಲಮಾಡಿಕೊಳ್ಳಬೇಕಾದರೆ ಶ್ರೀಹರಿಯ ಗುಣಗಳನ್ನೂ ಕರ್ಮ ಗಳನ್ನೂ ನಾಮಗಳನ್ನೂ ಭಕ್ತಿಯಿಂದ ಉಚ್ಚರಿಸಿದರೆ ಸಾಕು. (ಮತ್ತೇನೂ ಮಾಡ ಬೇಕಾಗಿಲ್ಲ.) ಸಾಯಲಿದ್ದ ಪಾಪಿ ಅಜಾಮಿಳನು ನಾರಾಯಣ ಎಂದು ಮಗನನ್ನು ಕರೆದು ಅದರಿಂದ ಉಂಟಾದ ಭಕ್ತಿಯಿಂದ ಶ್ರೀಹರಿನಾಮವನ್ನು ಉಚ್ಚರಿಸಿ ಮೃತ್ಯುವಿ

ಯಾದ ಅಜಾಮಿಳನು ನಾರಾಯಣ ಎಂದು ಪುತ್ರನನ್ನು ವಿಕ್ರುಶ್ಯ ಅಪಿ=ಕರೆದೂ ಕೂಡ (ಅದರ ಫಲವಾಗಿ ಉಂಟಾದ ಭಕ್ತಿಯಿಂದ ಉಚ್ಚರಿತವಾದ ಶ್ರೀಹರಿನಾಮ ಸ್ಮರಣೆಯಿಂದ) ಮುಕ್ತಿಂ=ಮೃತ್ಯುವಿನಿಂದ ಬಿಡುಗಡೆಯನ್ನು, ಮುಂದೆ ಮೋಕ್ಷ ವನ್ನು ಅವಾಪ=ಹೊಂದಿದನು (ಹೊಂದುವನು). ಅಥವಾ ಅಜಾಮಿಳನೂ ಪುತ್ರ ನನ್ನು ಕರೆದು ಮುಕ್ತಿಯನ್ನು ಅಗಾತ್ ಯತ್=ಪಡೆದನೇನು? ಇಲ್ಲ. ಮತ್ತೇನೆಂದರೆ ಏತಾವತಾ=ಹಿಂದೆ ಹೇಳಿದ ಭಕ್ತಿಪೂರ್ವಕ ಸಂಕೀರ್ತನದಿಂದಲೇ ಹೊಂದಿದನು ಎಂದರ್ಥ. (ಈ ಶ್ಲೋಕದಲ್ಲಿ ಭಕ್ತಿರಹಿತ ಕೀರ್ತನೆಯೂ ಸಮಸ್ತ ಪಾಪಪರಿಹಾರಕ ವೆಂದು ಸಮರ್ಥಿಸುವ ವ್ಯಾಖ್ಯಾನಗಳು ಸರಿಯಲ್ಲ. ಶ್ರದ್ಧಾಭಕ್ತ್ಯಾದಿಗಳನ್ನು ವಿಧಿಸುವ ಎಲ್ಲ ಶಾಸ್ತ್ರಗಳೂ ವ್ಯರ್ಥವಾಗುವುವು. ಪ್ರಾಯಶ್ಚಿತ್ತಾದಿ ವಿಧಾನಗಳೂ ವ್ಯರ್ಥವಾಗುವುವು. 'ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ', ಇತ್ಯಾದಿ ಹಿಂದೆ ಹೇಳಿದ ಪ್ರಮಾಣವಿರೋಧವೂ ಬರುವುದು. 'ಸಂಕೀರ್ತನಂ ಅಘನಿರ್ಹರ- ಣಾಯ ಅಲಂ' ಎಂದು ಅನ್ವಯ ಮಾಡುವುದರಿಂದ ತೃತೀಯಾ ಅನುಪಪತ್ತಿ ರೂಪ ದೋಷವೂ ಇಲ್ಲ. ಯೋಗ್ಯತಾ ಇರುವಾಗ ದೂರಾನ್ವಯವೂ ದೋಷವಲ್ಲ.) || ೨೪ ||

ಪ್ರಾಯೇಣ ವೇದ ತದಿದಂ ನ ಮಹಾಜನೋಽಯಂ
ದೇವ್ಯಾ ವಿಮೋಹಿತಮತಿರ್ಬತ ಮಾಯಯಾಽಲಮ್ ।
ತ್ರಯ್ಯಾಂ ಜಡೀಕೃತಮತಿರ್ಮಧುಪುಷ್ಪಿತಾಯಾಂ
ವೈತಾನಿಕೇ ಮಹತಿ ಕರ್ಮಣಿ ಯುಜ್ಯಮಾನಃ || ೨೫ ||

ಭಕ್ತಿಪೂರ್ವಕ ನಾಮಸ್ಮರಣೆಯು ಮುಕ್ತಿದಾಯಕವಾಗಿದ್ದಲ್ಲಿ ಎಲ್ಲರೂ ಏಕೆ ಅದನ್ನು ಅನುಷ್ಠಾನಮಾಡುತ್ತಿಲ್ಲವೆಂದರೆ ಹೇಳುತ್ತಾರೆ. ಪ್ರಾಯೇಣ=ಬಹುವಾಗಿ ಮಹಾಜನಃ ಅಯಂ=ಬಹುಸಂಖ್ಯೆಯ ಈ ಮಂದಜನವು ದೇವ್ಯಾ=ದ್ಯೋತಮಾನ ವಾದ, ಬಹುವಿಧ ವಿಲಾಸವುಳ್ಳ ಮಾಯಯಾ=ಭಗವದಿಚ್ಛೆಯಿಂದ ಅಲಂ= ಸಂಪೂರ್ಣವಾಗಿ ವಿಮೋಹಿತಮತಿಃ (ವರ್ತತೇ)=ವಿಶೇಷವಾಗಿ ವಿವೇಕರಹಿತ ಬುದ್ಧಿ ಯುಳ್ಳದ್ದಾಗಿ ಇದೆ. ಆದ್ದರಿಂದಲೇ ಮಧುಪುಷ್ಪಿತಾಯಾಂ=ಆಪಾತತಃ ಸ್ವರ್ಗ

ನಿಂದ ದೂರವಾದನು. ಮುಂದೆ ಮುಕ್ತನೂ ಆಗುವನು. ಪ್ರಾಯಿಕವಾಗಿ ಬಹುಸಂಖ್ಯೆಯ ಮಂದಜನಕ್ಕೆ ವೇದಗಳು ಮೋಕ್ಷಫಲವನ್ನೂ ತತ್ಸಾಧನೆಯಾಗಿ ಭಗವಂತನ ಅನುಸ್ಮರಣೆಯನ್ನೂ ವಿಧಿಸುವುವೆಂಬುದು ತಿಳಿಯದು. ಪ್ರಕಾಶಮಾನವೂ ಬಹುವಿಧವಿಲಾಸಯುಕ್ತವೂ ಆದ ಭಗವದಿಚ್ಛೆಯಿಂದ ಸಂಪೂರ್ಣವಾಗಿ ಆ ಜನರ ಬುದ್ಧಿಯು ವಿವೇಕರಹಿತವಾಗಿದೆ. ಆದ್ದರಿಂದಲೇ ಆ ಜನರು ಆಪಾತತಃ ಸ್ವರ್ಗಫಲ ಗಳನ್ನು ಹೇಳುವ ವೇದಗಳಲ್ಲಿ ಸ್ವರ್ಗಫಲ, ಯಾಗಾದಿಗಳೇ ಮುಖ್ಯಾರ್ಥವೆಂಬ ಅಭಿನಿವೇಶದಿಂದ ಯುಕ್ತರಾಗಿ ಬಹುವಿತ್ತವ್ಯಯ ಮತ್ತು ಬಹು ಶ್ರಮ ಸಾಧ್ಯವಾದ

ಮೊದಲಾದ ಪುಷ್ಪಸದೃಶ(ಫಲ)ಗಳನ್ನು ಹೇಳುವ ತ್ರಯ್ಯಾಂ=ವೇದಗಳಲ್ಲಿ ಜಡೀಕೃತಮತಿಃ ಸ್ವರ್ಗಾದಿ ಫಲ, ತತ್ಸಾಧನೆಯಾದ ಯಾಗ ಮೊದಲಾದುವೇ ಮುಖ್ಯಾರ್ಥವೆಂದು ಅಭಿನಿವೇಶಯುಕ್ತಬುದ್ಧಿಯುಳ್ಳದ್ದಾಗಿ ಮಹತಿ=ಬಹು, ವಿತ್ತವ್ಯಯ ಮತ್ತು ಶ್ರಮಸಾಧ್ಯವಾದ ವೈತಾನಿಕೇ ಕರ್ಮಣಿ=ವೇದವಿಹಿತವಾದ ಯಜ್ಞಸಂಬಂಧಿ ಕರ್ಮದಲ್ಲಿ ಯುಜ್ಯಮಾನಃ=ಪ್ರೇರಿತವಾಗಿ, ಆಸಕ್ತವಾಗಿ ತತ್ ಇದಂ=ವೇದವು ಮುಖ್ಯವಾಗಿ ಮೋಕ್ಷಫಲವನ್ನೂ ತತ್ಸಾಧನೆಯಾದ ಭಗವದನುಸ್ಮರಣೆಯನ್ನೂ ವಿಧಿಸುವುದೆಂಬುದನ್ನು ನ ವೇದ=ತಿಳಿದಿಲ್ಲ. ಆದ್ದರಿಂದ ಎಲ್ಲರೂ ಆಚರಿಸುತ್ತಿಲ್ಲವೆಂದು ಅಭಿಪ್ರಾಯ. ವೇದವು ಅಮುಖ್ಯವಾಗಿ ಸ್ವರ್ಗಾದಿ ಫಲವನ್ನೂ ಅದರ ಸಾಧನೆಯನ್ನೂ ಹೇಳಲು ಕಾರಣ ಮಂದಾಧಿಕಾರಿಗಳಿಗೆ ಅದರಲ್ಲಿ ಪ್ರವೃತ್ತಿಯನ್ನುಂಟುಮಾಡುವುದು. ಆದರೆ ಉತ್ತಮಾಧಿಕಾರಿಗಳಿಗೆ ಜ್ಞಾನವನ್ನೇ ಮುಖ್ಯವಾಗಿ ತಿಳಿಸುವುದು. 'ಮಂದಾಧಿಕಾರಿಣಾ ನಿತ್ಯಂ ತಪಸ್ಯೈವ ಪ್ರತೀಕ್ಷಿತುಂ | ಮೋಕ್ಷೋ ನ ಶಕ್ಯತೇ ಧೈರ್ಯಾತ್ ತತಃ ಸ್ವರ್ಗಾದಿಕಂ ವದನ್ | ಸ್ವರ್ಗಾದಿ ಪುಷ್ಪ ಫಲತಾಂ ಜ್ಞಾಪಯಿತ್ವಾ ವಿಮೋಕ್ಷದಂ | ಜ್ಞಾನಂ ವಕ್ತುಂ ತೂತ್ತಮಾನಾಂ ನಿತ್ಯೋ ವೇದಃ ಪ್ರವರ್ತತೇ | ಇಕ್ಷುದಂಡಂ ದದಾಸೀತಿ ಯಥಾ ಭೈಷಜ್ಯ ರೋಚನಂ | ಏವಂ ಮಂದೇಷೂತ್ತಮೇಷು ಮೋಕ್ಷಮಾಹಾತ್ಮ್ಯಮುಚ್ಯತೇ | ನಹ್ಯನ್ಯಫಲಭಾಗ್ವೇದೋ ವಾಸುದೇವೈಕ ಸಂಶ್ರಯಃ ||' ಎಂಬ ಪ್ರಮಾಣವು ಈ ಅರ್ಥವನ್ನು ಸ್ಪಷ್ಟಪಡಿಸುತ್ತದೆ. || ೨೫ ||

ಏವಂ ವಿಮೃಶ್ಯ ಸುಧಿಯೋ ಭಗವತ್ಯನಂತೇ
ಸರ್ವಾತ್ಮನಾ ವಿದಧತೇ ಖಲು ಭಾವಯೋಗಮ್ |
ತೇ ಮೇ ನ ದಂಡಮರ್ಹಂತ್ಯಥ ಯದ್ಯಮೀಷಾಂ
ಸ್ಯಾತ್ಪಾತಕಂ ತದಪಿ ಹಂತ್ಯುರುಗಾಯವಾದಃ || ೨೬ ||

ಬಹುವಾಗಿ ಎಂದು ಹೇಳಿದ್ದರಿಂದ ಕೆಲವರು ತಿಳಿಯುತ್ತಾರೆ ಎಂದಾಯಿತು. ಅವರು ಯಾರು? ಎಂದರೆ ಹೇಳುತ್ತಾರೆ. ಸುಧಿಯಃ=ಜ್ಞಾನಿಗಳು ಏವಂ=ಭಕ್ತಿಸಹಿತವಾದ ಕೀರ್ತನೆಯೇ ಪಾಪಪರಿಹಾರಕ ಮತ್ತು ಮುಕ್ತಿಸಾಧಕವೆಂದು

ಯಾಗಾದಿ ವೇದೋಕ್ತಕ್ರಮದಲ್ಲಿ ಆಸಕ್ತರಾಗಿರುವರು. ಆದರೆ ಜ್ಞಾನಿಗಳು ಮಾತ್ರ ಭಕ್ತಿಯುಕ್ತಕೀರ್ತನೆಯೇ ಪಾಪಪರಿಹಾರಕ ಮತ್ತು ಮುಕ್ತಿಸಾಧಕವೆಂದು ಸರಿಯಾಗಿ ವಿಮರ್ಶಿಸಿ ತಿಳಿದು ಎಲ್ಲ ರೀತಿಯಿಂದಲೂ ಸಮಸ್ತೈಶ್ವರ್ಯಸಂಪನ್ನನಾದ ಶ್ರೀಹರಿಯಲ್ಲಿ ಭಕ್ತಿಯೋಗವನ್ನು ವಿಶೇಷವಾಗಿ ಮಾಡುವರು. ಇಂತಹ ಭಗವದ್ಭಕ್ತರು ಪಾಪಮಾಡುವುದೇ ಇಲ್ಲ. ಒಂದು ವೇಳೆ ಮಾಡಿದರೂ ನನ್ನಿಂದ ಶಿಕ್ಷೆಗೆ ಅರ್ಹರಲ್ಲ. ಅವರಿಗೆ ಪಾಪವು ಬಂದಿದ್ದರೂ ಅದನ್ನು ಬ್ರಹ್ಮಾದಿಗೇಯ ಮಹಿಮೆಯುಳ್ಳ ಶ್ರೀಹರಿಯ ನಾಮಸಂಕೀರ್ತನೆಯು ಹೋಗಲಾಡಿಸುವುದು.

ವಿಮೃಶ್ಯ = ಸರಿಯಾಗಿ ವಿಚಾರಮಾಡಿ ಸರ್ವಾತ್ಮನಾ - ಎಲ್ಲ ರೀತಿಯಿಂದಲೂ ಭಗವತಿ-ಸಮಗ್ರೈಶ್ವರ್ಯಸಂಪನ್ನನಾದ ಅನಂತೇ=ಶ್ರೀಹರಿಯಲ್ಲಿ ಭಾವಯೋಗಂ-ಭಕ್ತಿಯ ಸಂಬಂಧವನ್ನು ವಿದಧತೇ ಖಲು=ವಿಶೇಷವಾಗಿ ಮಾಡುವರು. ನಿಶ್ಚಿತವು. ತೇ-ಆ ಭಗವದ್ಭಕ್ತರು (ಪಾಪಮಾಡಿದರೂ) ಮೇ=ನನ್ನ ಕಡೆಯಿಂದ ದಂಡಂ=ಶಿಕ್ಷೆಯನ್ನು ನಾರ್ಹಂತಿ = ಹೊಂದಲು ಅರ್ಹರಲ್ಲ. ಅಮೀಷಾಂ = ಈ ಭಕ್ತರಿಗೆ ಪಾತಕಂ=ಪಾಪವು ಸ್ಯಾತ್ ಯದಿ-ಬಂದಿದ್ದರೂ ತದಪಿ-ಆ ಪಾಪವನ್ನೂ ಉರುಗಾಯವಾದಃ-ಬ್ರಹ್ಮಾದಿಗಳಿಂದ ಗೀತವಾದ ಮಹಾಮಹಿಮೆಯುಳ್ಳ ಶ್ರೀಹರಿಯ ನಾಮಸಂಕೀರ್ತನೆಯು ಹಂತಿ=ಹೋಗಲಾಡಿಸುವುದು. 'ಸ್ಯಾತ್ ಯದಿ' ಎಂದು ಹೇಳಿದ್ದರಿಂದ ಭಗವದ್ಭಕ್ತರು ಪಾಪಮಾಡುವುದಿಲ್ಲವೆಂದೂ ಒಂದುವೇಳೆ ಕರ್ಮಾನುಸಾರ ಮಾಡಿದರೂ ಅದೂ ಹೋಗುವುದೆಂದೂ ಹೇಳಿದಂತಾಯಿತು. ‖ ೨೬ ‖

ತೇ ವೇದಸಿದ್ಧಪರಿಗೀತಪವಿತ್ರಗಾಥಾ
ಯೇ ಸಾಧವಃ ಸಮದೃಶೋ ಭಗವತ್ಪ್ರಪನ್ನಾಃ ।
ತಾನ್ನೋಪಸೀದತ ಹರೇರ್ಗದಯಾಽಭಿಗುಪ್ತಾ-
ನ್ನೈಷಾಂ ಭಯಂ ನ ಚ ವಯಂ ಪ್ರಭವಾಮ ದಂಡೇ ‖ ೨೭ ‖

ಆ ಧರ್ಮತತ್ವವನ್ನೇ ನಿರ್ಣಯಮಾಡಿ ಭೃತ್ಯರಿಗೆ ಅನುಶಾಸನ ಮಾಡುತ್ತಾರೆ. ಯೇ - ಯಾರು ಸಾಧವಃ - ಸಾಧುಸ್ವಭಾವದವರೋ ಸಮದೃಶಃ = ಎಲ್ಲ ಕಡೆಯಲ್ಲಿಯೂ ನಿರ್ದೋಷನಾದ ಶ್ರೀಹರಿಯನ್ನು ಕಾಣುವರೋ ಆದ್ದರಿಂದಲೇ ಭಗವಂತನನ್ನೇ ಶರಣುಹೊಂದಿರುವರೋ ತೇ=ಅವರು ವೇದ....ಗಾಥಾಃ-ವೇದಗಳಿಂದ ಯಾವಾಗಲೂ ಹೇಳಲ್ಪಟ್ಟ ಪುಣ್ಯಕಥೆಯುಳ್ಳವರು. ಅಥವಾ ವೇದಗಳಿಂದ ಯಾವಾಗಲೂ ಹೇಳಲ್ಪಟ್ಟ ಶ್ರೀಹರಿಯ ಪುಣ್ಯಕಥೆಯುಳ್ಳವರು. ದೇವ ಎಂಬ ಪಾಠದಲ್ಲಿ ದೇವತೆಗಳಿಂದ ಸಿದ್ಧರಿಂದ ಗೀತವಾದ ಪವಿತ್ರಕಥೆಯುಳ್ಳವರು ಎಂದರ್ಥ. ಆದ್ದರಿಂದಲೇ ಹರಿಯ ಗದಯಾ-ಕೌಮೋದಕೀ ಗದೆಯಿಂದ ಅಭಿಗುಪ್ತಾನ್=ಸರ್ವರೀತಿಯಿಂದ ರಕ್ಷಿತರಾದ ತಾನ್-ಅಂತಹ ಭಗವದ್ಭಕ್ತರನ್ನು ನ ಉಪಸೀದತ=ನೀವು ಸಮೀಪಿಸಬೇಡಿ. ಏಷಾಂ=ಇಂತಹ ಭಗವದ್ಭಕ್ತರಿಗೆ ನ ಭಯಂ=ಯಾವ ಭಯವೂ

'ಸಾಧು ಸ್ವಭಾವದವರೂ, ಎಲ್ಲೆಡೆಯಲ್ಲಿಯೂ ಶ್ರೀಹರಿಯನ್ನು ನಿರ್ದೋಷನನ್ನಾಗಿ ಕಾಣುವವರೂ, ಅವನನ್ನೇ ಶರಣುಹೊಂದಿರುವವರೂ ಆದ ಆ ಭಗವದ್ಭಕ್ತರ ಪುಣ್ಯಕಥೆಗಳನ್ನು ವೇದಗಳು ಯಾವಾಗಲೂ ಹೇಳುವುವು. ವೇದಗೀತ ಪುಣ್ಯಕಥೆಯುಳ್ಳ ಶ್ರೀಹರಿಯನ್ನು ಅವರು ಯಾವಾಗಲೂ ಕೀರ್ತಿಸುವರು. ಅವರನ್ನು ಶ್ರೀಹರಿಯ ಗದೆಯು ಯಾವಾಗಲೂ ರಕ್ಷಿಸುತ್ತಿರುವುದು. ಅವರ ಸಮೀಪಕ್ಕೇ ನೀವು ಹೋಗಬೇಡಿ. ಅವರಿಗೆ ಯಾವ ಭಯವೂ ಯಾರ ಭಯವೂ ಇಲ್ಲ. ಅವರನ್ನು

ಇಲ್ಲ. ಚ=ಮತ್ತು ವಯಂ=ನಾನು ದಂಡೇ=ಅವರನ್ನು ಶಿಕ್ಷಿಸುವಲ್ಲಿ ನ ಪ್ರಭವಾಮ=ಸಮರ್ಥನಲ್ಲ. ಭಗವದ್ಭಕ್ತರಲ್ಲದ ಪಾಪಿಗಳಿಗೆ ನಾನು ಶಿಕ್ಷಕನೆಂದರ್ಥ. || ೨೭ ||

ತಾನಾನಯಧ್ವಮಸತೋ ವಿಮುಖಾನ್ಮುಕುಂದ-
ಪಾದಾರವಿಂದಮಕರಂದರಸಾದಜಸ್ರಮ್ ।
ನಿಷ್ಕಿಂಚನೈಃ ಪರಮಹಂಸಕುಲೈ ರಸಜ್ಞೈ-
ರ್ಜುಷ್ಟಾದ್ಗೃಹೇ ನಿರಯವರ್ತ್ಮನಿ ಬದ್ಧತೃಷ್ಣಾನ್ || ೨೮ ||

ಹಾಗಾದರೆ ಶಿಕ್ಷೆಗಾಗಿ ಯಾರನ್ನು ಕರೆದುತರಬೇಕೆಂದರೆ ಎರಡು ಶ್ಲೋಕಗಳಿಂದ ಹೇಳುತ್ತಾರೆ. ನಿಷ್ಕಿಂಚನೈಃ=ಯಾವ ಆಸೆಯೂ ಇಲ್ಲದ ರಸಜ್ಞೈಃ=ಶ್ರೀಹರಿಯ ಮಹಿಮಾರಸವನ್ನು ಬಲ್ಲ ಪರಮಹಂಸರ ಸಮೂಹಗಳಿಂದ ಅಜಸ್ರಂ=ಯಾವಾಗಲೂ ಜುಷ್ಟಾತ್=ಸೇವಿತವಾದ ಮುಕುಂದ....ರಸಾತ್=ಮೋಕ್ಷಪ್ರದನಾದ ಶ್ರೀಹರಿಯ ಪಾದಕಮಲಗಳ ಮಕರಂದರಸದಿಂದ ವಿಮುಖಾನ್=ಹಿಮ್ಮುಖರಾದ (ರಸವನ್ನು ಸೇವಿಸದಿರುವ) ಆದ್ದರಿಂದಲೇ ನಿರಯವರ್ತ್ಮನಿ=ನರಕಕ್ಕೆ ಮಾರ್ಗವಾದ ಗೃಹೇ=ಹೆಂಡತಿ ಮೊದಲಾದವುಗಳಲ್ಲಿ ಬದ್ಧತೃಷ್ಣಾನ್=ಅತ್ಯಂತ ಆಸಕ್ತರಾದ ಅಸತಃ=ಲೋಕನಿಂದಿತ ಕರ್ಮನಿರತರಾದ ತಾನ್=ಭಗವದ್ಭಕ್ತರಲ್ಲದವರನ್ನು ಆನಯಧ್ವಂ=ಕರೆತನ್ನಿರಿ. || ೨೮ ||

ಜಿಹ್ವಾ ನ ವಕ್ತಿ ಭಗವದ್ಗುಣನಾಮಧೇಯಂ
ಚೇತಶ್ಚ ನ ಸ್ಮರತಿ ತಚ್ಚರಣಾರವಿಂದಮ್ ।
ಕೃಷ್ಣಾಯ ನೋ ನಮತಿ ಯಚ್ಛಿರ ಏಕದಾಽಪಿ
ತಾನಾನಯಧ್ವಮಸತೋಽಕೃತವಿಷ್ಣುಕೃತ್ಯಾನ್ || ೨೯ ||

ಶಿಕ್ಷಿಸಲು ನಾನು ಸಮರ್ಥನಲ್ಲ. ಅಭಕ್ತರಿಗೆ ಮಾತ್ರ ನಾನು ಶಿಕ್ಷಕ. ಯಾರಾದರೆ ಶ್ರೀಹರಿಯ ಪಾದಕಮಲಗಳ—ನಿರಾಶರೂ ಶ್ರೀಹರಿಯ ಮಹಿಮಾರಸಜ್ಞರೂ ಆದ ಪರಮಹಂಸರ ಸಮೂಹಗಳಿಂದ ಯಾವಾಗಲೂ ಸೇವಿತವಾದವುಗಳ—ಮಕರಂದ ರಸದಿಂದ ಹಿಮ್ಮುಖರೋ ಆ ಕಾರಣದಿಂದಲೇ ನರಕಕ್ಕೆ ಕಾರಣರಾದ ಹೆಂಡತಿ ಮೊದಲಾದವರಲ್ಲಿ ಅತ್ಯಂತ ಆಸಕ್ತರೋ ಲೋಕನಿಂದಿತ ಕರ್ಮಗಳಲ್ಲಿಯೇ ನಿರತರೋ ಅವರನ್ನು ಮಾತ್ರ ಶಿಕ್ಷೆಗಾಗಿ ನನ್ನ ಬಳಿಗೆ ತನ್ನಿರಿ. ಒಂದು ಸಲವಾದರೂ ಯಾರ ನಾಲಿಗೆಯು ಶ್ರೀಹರಿಯ ಗುಣನಾಮಗಳನ್ನು ಹೇಳುವುದಿಲ್ಲವೋ, ಯಾರ ಮನಸ್ಸು ಒಂದು ಸಲವಾದರೂ ಶ್ರೀಹರಿಯ ಪಾದಾರವಿಂದಗಳನ್ನು ಸ್ಮರಿಸುವುದಿಲ್ಲವೋ, ಯಾರ ಶಿರಸ್ಸು ಒಂದು ಸಲವಾದರೂ ಶ್ರೀಹರಿಗೆ ನಮಸ್ಕರಿಸುವುದಿಲ್ಲವೋ ಮತ್ತು ಯಾರು ಒಂದು ಸಲವಾದರೂ ಶ್ರೀಹರಿಪಾದಾರ್ಚನೆ ಮೊದಲಾದುವನ್ನು ಮಾಡುವುದಿಲ್ಲವೋ ಆ ಸ್ವಾಭಾವಿಕ ಅಭಕ್ತರನ್ನು ಮಾತ್ರ ಕರೆತನ್ನಿರಿ.

ಏಕದಾ ಅಪಿ = ಒಂದು ಸಲವಾದರೂ ಯಜ್ಜಿಹ್ವಾ—ಯಾರ ನಾಲಿಗೆಯು (ವಾಗಿಂದ್ರಿಯವು) ಶ್ರೀಹರಿಯ ಗುಣಗಳನ್ನು ಹೇಳುವ ನಾಮಗಳನ್ನು ನ ವಕ್ತಿ—ಹೇಳುವುದಿಲ್ಲವೋ, ಯಚ್ಚೇತಃ ಚ=ಯಾರ ಮನಸ್ಸಾದರೆ ಆ ಶ್ರೀಹರಿಯ ಪಾದಾರವಿಂದಗಳನ್ನು ನ ಸ್ಮರತಿ=ಸ್ಮರಿಸುವುದಿಲ್ಲವೋ, ಯಚ್ಛಿರಃ=ಯಾರ ಶಿರಸ್ಸು ಶ್ರೀಹರಿಗೆ ನಮಸ್ಕಾರ ಮಾಡುವುದಿಲ್ಲವೋ ಅಕೃತ ವಿಷ್ಣುಕೃತ್ಯಾ—ಶ್ರೀಹರಿಯ ಪಾದಾರ್ಚನೆ ಮೊದಲಾದುವನ್ನು ಮಾಡದಿರುವ ಆದ್ದರಿಂದಲೇ ಅಸತಃ—ದುಷ್ಟರಾದ ತಾ—ಆ ಭಗವದ್ಭಕ್ತರಲ್ಲದವರನ್ನು ಕರೆತನ್ನಿರಿ. ಇಲ್ಲಿ ಕೀರ್ತನ, ವಂದನ, ಸ್ಮರಣಗಳನ್ನು ಸಾಕ್ಷಾತ್ತಾಗಿ ಹೇಳಿ ಉಳಿದ ಶ್ರವಣ, ಪಾದಸೇವನ, ಅರ್ಚನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನಗಳನ್ನು ವಿಷ್ಣುಕೃತ್ಯವೆಂಬ ಪದದಿಂದ ತಿಳಿಸಿರುವರೆಂದು ತಿಳಿಯಬೇಕು. || ೨೯ ||

ಕೃಷ್ಣಾಂಘ್ರಿಪದ್ಮಮಧುಲಿಟ್ ನ ಪುನರ್ವಿಸೃಷ್ಟ-
ಮಾಯಾಗುಣೇಷು ರಮತೇ ವೃಜಿನಾವಹೇಷು ।
ಅನ್ಯಸ್ತು ಕಾಮಹತ ಆತ್ಮರಜಃ ಪ್ರಮಾರ್ಷ್ಟು-
ಮೀಹೇತ ಕರ್ಮ ಯತ ಏವ ರಜಃ ಪುನಃ ಸ್ಯಾತ್ || ೩೦ ||

ಮೇಲೆ ಹೇಳಿದಂತೆ ತಮ್ಮಿಂದ ದಂಡ್ಯರನ್ನು ತಿಳಿಸಿ ಶ್ರೀ ಹರಿಭಜನೆಯೇ ಸಮಸ್ತ ಪಾಪನಿವರ್ತಕವೆಂದೂ ಕೇವಲ ಕರ್ಮಾದಿಗಳಲ್ಲವೆಂದೂ ಹೇಳಿ ತಮ್ಮ ಉಪದೇಶವನ್ನು ಮುಗಿಸುತ್ತಾರೆ. ಕೃಷ್ಣಾಂಘ್ರಿ ಕಮಲಗಳ ಮಕರಂದ ರಸವನ್ನು ಆಸ್ವಾದಿಸುವ ಅಧಿಕಾರಿಚೇತನನು ಪುನಃ=ಆದರೋ ವೃಜಿನಾವಹೇಷು—ಸಂಸಾರಕ್ಕೆ ಕಾರಣಗಳಾದ (ಪಾಪಕಾರಣಗಳಾದ) ವಿಸೃಷ್ಟ ಮಾಯಾಗುಣೇಷು=ತನ್ನ ಕರ್ಮದ ಫಲವಾಗಿ ನಿರ್ಮಿತಗಳಾದ ಪ್ರಾಕೃತವಿಷಯಗಳಲ್ಲಿ ನ ರಮತೇ—ವಿಷಯಾನುಭವವೇ ಪರಮ ಪುರುಷಾರ್ಥವೆಂದು ತಿಳಿದು ಆಸಕ್ತನಾಗುವುದಿಲ್ಲ. ಅನ್ಯಃ ತು—ಶ್ರೀಹರಿಯ ಪಾದವನ್ನು ಸೇವಿಸದಿರುವವನಾದರೋ ಕಾಮಹತಃ (ಸ್ಸ)—ವಿಷಯ ರಾಗಾದಿಗಳಿಂದ ಅಭಿಭೂತನಾಗಿ ಯತಃ—ಯಾವ ಕರ್ಮದಿಂದ ಪುನಃ—ಮತ್ತೆ ರಜಃ ಏವ ಸ್ಯಾತ್=ರಾಗವು, ಪಾಪವು ಬರುವುದೋ (ತತ್) ಕರ್ಮ=ಅಂತಹ

'ಶ್ರೀಹರಿಯ ಪಾದಪದ್ಮಗಳ ಮಧುವನ್ನು ಆಸ್ವಾದಿಸುವ ಭಕ್ತಚೇತನನಾದರೋ ಪಾಪಜನಕಗಳೂ ಕರ್ಮಫಲವಾಗಿ ಒದಗಿಬಂದವುಗಳೂ ಆದ ಪ್ರಾಕೃತವಿಷಯಗಳಲ್ಲಿ ಇವೇ ಪರಮ ಪುರುಷಾರ್ಥವೆಂದು ಎಂದೂ ಆಸಕ್ತನಾಗುವುದಿಲ್ಲ. ಇವನಿಗಿಂತ ಭಿನ್ನನಾದ ಅಭಕ್ತನಾದರೋ ವಿಷಯರಾಗದಿಂದ ಹಾಳಾದವನಾಗಿ ಪಾಪಗಳನ್ನು ಸಮೂಲನಾಶಮಾಡಿಕೊಳ್ಳಬಯಸಿ ಭಕ್ತಿರಹಿತ ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಮಾಡಬಯಸುವನು. ಆದರೆ ಇವು ಮತ್ತೆ ಮತ್ತೆ ಪಾಪಕ್ಕೇ ಕಾರಣವಾಗುವುವು. (ಆದ್ದರಿಂದ ಭಕ್ತಿಯುಕ್ತ ಹರಿಭಜನೆಯೇ ಸಮೂಲಪಾಪನಿವರ್ತಕ.) ದೂತರೇ,

ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಆತ್ಮರಜಃ=ತನ್ನ ರಾಗಾದಿಗಳನ್ನು ಪಾಪಗಳನ್ನು ಪ್ರಮಾಷ್ಟುಂ=ಸಮೂಲ ನಾಶಮಾಡಿಕೊಳ್ಳಲು ಈಹೇತ=ಮಾಡಬಯಸುವನು. ತುಶಬ್ದದಿಂದ ಕೆಸರಿನಿಂದ ಕೆಸರನ್ನು ತೊಳೆದುಕೊಂಡಂತೆ ಪಾಪಪರಿಹಾರಕವೆಂದು ಮಾಡಿಕೊಂಡ ಭಗವದ್ಭಕ್ತಿಶೂನ್ಯ ಪ್ರಾಯಶ್ಚಿತ್ತಾದಿಗಳಿಂದ ಪವಿತ್ರನಾಗುವುದಿಲ್ಲ ವೆಂದು ಸೂಚಿಸಿರುವರು. ಸಮೂಲವಾಗಿ ಪಾಪವು ನಾಶವಾಗುವುದಿಲ್ಲವೆಂದು ತಾತ್ಪರ್ಯ. || ೩೦ ||

ತತ್ ಕ್ಷಮ್ಯತಾಂ ಸ ಭಗವಾನ್ ಪುರುಷಃ ಪುರಾಣೋ
ನಾರಾಯಣಃ ಸ್ವಪುರುಷೈರ್ಯದಸತ್ಕೃತಂ ನಃ ।
ಸ್ವಾನಾಮಹೋ ನ ವಿದುಷಾಂ ರಚಿತಾಂಜಲೀನಾಂ
ಕ್ಷಾಂತಿರ್ಗರೀಯಸಿ ನಮಃ ಪುರುಷಾಯ ಭೂಮ್ನೇ || ೩೧ ||

ಕ್ಷಮಿಸೆಂದು ಶ್ರೀ ಹರಿಯನ್ನು ಪ್ರಾರ್ಥಿಸುತ್ತಾರೆ. ಪುರಾಣಃ ಪುರುಷಃ= ಪುರಾತನ ಪುರುಷನೂ ಭಗವಾನ್=ಸಮಗ್ರ ಐಶ್ವರ್ಯವಂತನೂ ಆದ ಸಃ ನಾರಾಯಣಃ=ಭಕ್ತರಿಂದ ಉಪಾಸ್ಯನಾಗಿ ಸಮಸ್ತ ಪಾಪಗಳನ್ನೂ ಪರಿಹರಿಸುವ ಶ್ರೀ ಹರಿಯು ಸ್ವಪುರುಷೈಃ=ನನ್ನ ಭೃತ್ಯರಿಂದ ಯತ್ ಅಸತ್ಕೃತಂ=ಶ್ರೀ ಹರಿ ಭಕ್ತಿಯುಕ್ತ ನಾಮೋಚ್ಚಾರಣೆಯಿಂದ ಶುದ್ಧನಾದ ಅಜಾಮಿಳನನ್ನು ಶಿಕ್ಷೆಗಾಗಿ ಕರೆ ತರುವುದೆಂಬ ಅನ್ಯಾಯವು ನಡೆಯಿತೋ ನಃ=ನಮ್ಮ ತತ್=ಆ ಅಪರಾಧವನ್ನು ಕ್ಷಮ್ಯತಾಂ=ಕ್ಷಮಿಸಲಿ. ಭೃತ್ಯರು ಮಾಡಿದ್ದು ನಾನು ಮಾಡಿದಂತೆಯೇ; ಆದ್ದರಿಂದ ನನ್ನ ಈ ಅಪರಾಧವನ್ನು ಕ್ಷಮಿಸಲಿ ಎಂಬರ್ಥ. ಕೇಳಿಕೊಂಡ ಮೇಲೆಯಂತೂ ಕ್ಷಮಿಸಿಯೇ ಕ್ಷಮಿಸುವನೆಂಬ ಭರವಸೆಯನ್ನು ಹೇಳುತ್ತಾರೆ. ನವಿದುಷಾಂ=ಶ್ರೀ ಹರಿಯ ಮಾಹಾತ್ಮ್ಯವನ್ನು (ಸಂಪೂರ್ಣವಾಗಿ) ಅರಿಯದ ಆದರೆ ಭೂಮ್ನೇ=ಗುಣ ಪರಿಪೂರ್ಣನಾದ ಪುರುಷಾಯ=ಅತಿಶಯ ಫಲದಾಯಕನಾದ ಶ್ರೀ ಹರಿಗೆ ನಮಸ್ಕಾರವು (ಇತಿ)=ಎಂದು ರಚಿತಾಂಜಲೀನಾಂ=ಕೈಮುಗಿದಿರುವ ಸ್ವಾನಾಂ= ತನ್ನ ಭಕ್ತರ ವಿಷಯದಲ್ಲಿ ಗರೀಯಸಿ=ಸರ್ವೋತ್ತಮನಾದ ಶ್ರೀ ಹರಿಯಲ್ಲಿ ಕ್ಷಾಂತಿಃ=ಕ್ಷಮಾಗುಣವು (ಭವತಿ)=ಇದ್ದೇ ಇದೆ. ಅಹೋ=ಆಶ್ಚರ್ಯವು. ಮಹಾಂತರಲ್ಲಿಯೇ ಕ್ಷಮಾಗುಣವು ಸ್ವಾಭಾವಿಕವಾಗಿರುವಾಗ ಮಹತ್ತಮನಾದ

ನೀವು ಮಾಡಿದ ಅಪರಾಧವು ನಾನು ಮಾಡಿದಂತೆಯೇ. ಆ ಪುರಾಣಪುರುಷನಾದ ಭಗವನ್ನಾರಾಯಣನು ಇದನ್ನು ಕ್ಷಮಿಸಲಿ. ನಾವು ಅವನ ಭಕ್ತರು; ಅವನ ಮಹಿಮೆಯನ್ನರಿಯದವರು; ಆದರೆ ಬದ್ಧಾಂಜಲಿಗಳು. ಸರ್ವೋತ್ತಮನಾದ ಅವನಲ್ಲಿ ಯಾವಾಗಲೂ ಕ್ಷಮಾಗುಣವಿದ್ದೇ ಇದೆ. ಗುಣಪೂರ್ಣಪುರುಷನಾದ ಶ್ರೀಹರಿಗೆ ನಮಸ್ಕಾರ. ಇಷ್ಟರಿಂದಲೇ ಶ್ರೀಹರಿಯು ಪ್ರಸನ್ನನಾಗುವನು. ಇದು ಆಶ್ಚರ್ಯ' ಎಂದು ಭೃತ್ಯರಿಗೆ ಉಪದೇಶಿಸಿದರು.

ಶ್ರೀ ಹರಿಯಲ್ಲಿ ಇದ್ದೇ ಇರುವುದೆಂದು 'ವರೀಯಸಿ' ಎಂಬುದರಿಂದ ತಿಳಿಸಿರುವರು. ಸಪ್ತಮೀ ವಿಭಕ್ತಿಯನ್ನು ಹೇಳಿದ್ದರಿಂದ ಮಹಾಂತರಲ್ಲಿ ಕ್ಷಮೆಯು ಯಾವಾಗಲೂ ಸನ್ನಿಹಿತವಾಗಿ ಇದ್ದೇ ಇರುವುದೆಂದು ಸೂಚಿಸಿರುವರು. ಯದ್ಯಪಿ ಯಮದೇವರು ಶ್ರೀ ಹರಿಯ ಮಹಿಮೆಯನ್ನು ಬಲ್ಲರು. ಭೃತ್ಯರಿಗೆ ಅವರು ಮಾಡಿದ ಮೇಲಿನ ಉಪದೇಶದಿಂದಲೇ ಇದು ವ್ಯಕ್ತವಾಗುವುದು. ಆದರೂ ತಾವು ತಮಗಿಂತ ಉತ್ತಮರು ತಿಳಿದಷ್ಟು ತಿಳಿದಿಲ್ಲವೆಂದಾಗಲಿ, ಅಪರಾಧ ಮಾಡಿದ ತಮ್ಮ ಭೃತ್ಯರಿಗೆ ತಿಳಿಯದೆಂದಾಗಲಿ ಹಾಗೆ ಹೇಳಿರುವರೆಂದು ತಿಳಿಯಬೇಕು. ಅಂಜಲಿರಚನೆಯೇ ಕ್ಷಮೆಗಾಗಿ ಕೊಡುವ ದಂಡವೆಂದು ಆ ಪದದಿಂದಲೂ ಅನಾಯಾಸವಾದ ಈ ದಂಡವೇ ಸಾಕೆಂದು ನಮಃ ಪದದಿಂದಲೂ ಸ್ವಾಭಾವಿಕ ಕ್ಷಮಾಶೀಲನಾದ ಶ್ರೀ ಹರಿಗೆ ದ್ರವ್ಯಾದಿ ದಂಡಕ್ಕಿಂತ ಇದರಿಂದಲೇ ಹೆಚ್ಚು ತೃಪ್ತಿಯೆಂದು ಕ್ಷಾಂತಿಯೆಂಬ ಪದದಿಂದಲೂ ತಿಳಿಸಿರುವರು. 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಎಂಬ ಶ್ರುತಿಯು ಇದನ್ನೇ ಪ್ರತಿಪಾದಿಸುತ್ತದೆ. ಇಲ್ಲಿ ಅಪರಾಧ ಕ್ಷಮೆಗೆ ಮೂರು ಕಾರಣಗಳನ್ನು ಹೇಳಿರುವರು. (೧) ಶ್ರೀ ಹರಿಯ ಭಕ್ತರಾದ್ದರಿಂದ (೨) ಹರಿಯ ಮಹಿಮೆಯನ್ನು ಅರಿಯದವರಾದ್ದರಿಂದ (೩) ನಮಃ ಎಂದು (ಮತ್ತೇನೂ ಕೊಡಲು ಸಾಧ್ಯವಿಲ್ಲವಾಗಿ) ಕೈ ಜೋಡಿಸಿ ಕೇಳಿಕೊಳ್ಳುತ್ತಿರುವುದರಿಂದ ಎಂದು ತಿಳಿಯಬೇಕು. ಅಹೋ ಎಂಬುದರಿಂದ ಕೇವಲ ನಮಃ ಎಂಬ ಉಕ್ತಿಮಾತ್ರದಿಂದಲೇ ದೊಡ್ಡವರು ಕ್ಷಮಿಸುವರೆಂಬ ಆಶ್ಚರ್ಯವನ್ನು ಹೇಳಿರುವರು. || ೩೧ ||

ಶ್ರೀ ಶುಕ ಉವಾಚ—

ಇತ್ಥಂ ಸ್ವಭರ್ತೃಗದಿತಂ ಭಗವನ್ಮಹಿತ್ವಂ
ಸಂಸ್ಮೃತ್ಯ ವಿಸ್ಮಿತಧಿಯೋ ಯಮಕಿಂಕರಾಸ್ತೇ ।
ತೇನಾಚ್ಯುತಾಶ್ರಯಜನಂ ಪ್ರತಿ ಶಂಕಮಾನಾ
ದ್ರಷ್ಟುಂ ಚ ಬಿಭ್ಯತಿ ತತಃ ಪ್ರಭೃತಿ ಸ್ಮ ರಾಜನ್ || ೩೨ ||

ರಾಜನೇ, ಆ ಯಮಭಟರು ಇತ್ಥಂ—ಮೇಲೆ ಹೇಳಿದಂತೆ ಸ್ವಭರ್ತೃಗದಿತಂ—ತಮ್ಮ ಸ್ವಾಮಿ ಯಮದೇವರು ಹೇಳಿದ ಭಗವಂತನ ಮಹಿಮೆಯನ್ನು ಸಂಸ್ಮೃತ್ಯ—ಭಕ್ತಿಯಿಂದ ಸ್ಮರಿಸಿದವರಾಗಿ ವಿಸ್ಮಿತಧಿಯಃ—ಅಚ್ಚರಿಗೊಂಡ ಮನಸ್ಕರಾಗಿ ಆದರು. ತೇನ—ಆ ಮಾಹಾತ್ಮ್ಯಜ್ಞಾನದಿಂದ ತತಃ ಪ್ರಭೃತಿ—ಅಂದು ಮೊದಲುಗೊಂಡು

ಶುಕಾಚಾರ್ಯರು—ಆ ಯಮದೂತರು ತಮ್ಮ ಸ್ವಾಮಿಯಿಂದ ಉಪದಿಷ್ಟವಾದ ಈ ಬಗೆಯ ಶ್ರೀಹರಿಮಹಿಮೆಯನ್ನು ಮತ್ತೆ ಮತ್ತೆ ಸ್ಮರಿಸಿಕೊಂಡು ಆಶ್ಚರ್ಯಭರಿತ ಮನಸ್ಕರಾದರು. ಈ ಮಹಿಮಾಜ್ಞಾನದಿಂದ ಅವರಿಗೆ ಶ್ರೀಹರಿಯ ಆಶ್ರಯವನ್ನು ಪಡೆದಿರುವ ಭಕ್ತರನ್ನು ಮುಟ್ಟುವುದೆಂದರೆ ಎಲ್ಲಿ ಅಪರಾಧವಾಗುವುದೋ ಎಂಬ ಶಂಕೆಯುಂಟಾಯಿತು. ಪರೀಕ್ಷಿದ್ರಾಜ! ಅಂದಿನಿಂದ ಅವರು ಭಕ್ತರನ್ನು (ಶಿಕ್ಷೆಗೆ

ಶ್ರೀಹರಿಯನ್ನು ಆಶ್ರಯಿಸಿದ ಭಕ್ತಜನರ ಪ್ರತಿ=ವಿಷಯದಲ್ಲಿ ಶಂಕಮಾನಾಃ (ಸಂತಃ)=ಎಲ್ಲಿ ಅಪರಾಧವಾಗುವುದೋ ಎಂದು ಶಂಕಿಸುವರಾಗಿ ಆ ಶ್ರೀಹರಿಯ ಭಕ್ತಜನರನ್ನು ದ್ರಷ್ಟುಂ ಚ=ನೋಡಲು ಸಹ ಬಿಭ್ಯತಿ ಸ್ಮ=ಹೆದರುತ್ತಿರುವರು. ಮುಟ್ಟುವುದಂತೂ ಇಲ್ಲವೇ ಇಲ್ಲವೆಂದು ತಾತ್ಪರ್ಯ. || ೩೨ ||

ತಸ್ಮಾತ್ಸಂಕೀರ್ತನಂ ವಿಷ್ಣೋರ್ಜಗನ್ಮಂಗಲಮಂಹಸಾಮ್ ।
ಮಹತಾಮಪಿ ಕೌರವ್ಯ ವಿದ್ಧ್ಯೈಕಾಂತವಿನಿಷ್ಕೃತಮ್ ॥ ೩೩ ॥

ಫಲಿತವನ್ನು ಹೇಳುತ್ತಾರೆ—ಕುರುವಂಶದ ರಾಜನೇ, ತಸ್ಮಾತ್=ಸರ್ವಪಾಪ ನಿರ್ಮೂಲನಕರವಾದ್ದರಿಂದ ಜಗನ್ಮಂಗಲಂ=ಜಗತ್ತಿನ ಎಲ್ಲ ಅಧಿಕಾರಿಗಳಿಗೂ ಮೋಕ್ಷಾದಿ ಪುರುಷಾರ್ಥದಾಯಕವಾದ ವಿಷ್ಣುವಿನ ಭಕ್ತಿಯುಕ್ತ ನಾಮೋಚ್ಚಾರಣೆಯು ಮಹತಾಂ ಅಪಿ=(೧) ಸ್ತ್ರೀ ಶೂದ್ರಾದಿಗಳಿಗೇ ಅಲ್ಲ. ಉತ್ತಮಾಧಿಕಾರಿಗಳಿಗೂ (೨) ಪ್ರಾಯಶ್ಚಿತ್ತಾದಿಗಳಿಂದ ಹೋಗದಿರುವ ಅತಿದೊಡ್ಡ ಅಂಹಸಾಂ=ಪಾಪಗಳಿಗೆ ಏಕಾಂತವಿನಿಷ್ಕೃತಂ=ನಿಯತ ಪ್ರಾಯಶ್ಚಿತ್ತವೆಂದು (ಆತ್ಯಂತಿಕ ಪ್ರಾಯಶ್ಚಿತ್ತವೆಂದು) ವಿದ್ಧಿ=ತಿಳಿ. || ೩೩ ||

ಶೃಣ್ವತೋ ಗೃಣತೋ ವೀರ್ಯಾಣ್ಯುದ್ದಾಮಾನಿ ಹರೇರ್ಮುಹುಃ ।
ಯಥಾ ಸುಜಾತಯಾ ಭಕ್ತ್ಯಾ ಶುದ್ಧ್ಯೇನ್ನಾತ್ಮಾ ವ್ರತಾದಿಭಿಃ ॥೩೪॥

ಅನುಷ್ಠಾನ ಮಾಡುವ ಎಲ್ಲ ಸಾಧನಗಳೂ ಭಗವದ್ಭಕ್ತಿಯುಕ್ತಗಳಾಗಿದ್ದರೆ ಮಾತ್ರ ಬಲಿಷ್ಠಗಳೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಶ್ರೀಹರಿಯ ಉದ್ದಾಮಾನಿ=ನಿರ್ದೋಷಗಳೂ ಸರ್ವೋತ್ತಮಗಳೂ ಆದ ವೀರ್ಯಾಣಿ=ಮಹಿಮೆಗಳನ್ನು ಮುಹುಃ=ಮತ್ತೆ ಮತ್ತೆ ಶೃಣ್ವತಃ=ಶ್ರವಣಮಾಡುವ ಗೃಣತಃ=ಮನನಮಾಡುವ=ಅಧಿಕಾರಿಚೇತನನಿಗೆ ಸುಜಾತಯಾ=ಶ್ರೀಹರಿಯ ಅನುಗ್ರಹದಿಂದ ಚೆನ್ನಾಗಿ ಉತ್ಪನ್ನವಾದ ಭಕ್ತಿಯಿಂದ ಆತ್ಮಾ=ಮನಸ್ಸು ಯಥಾ ಶುದ್ಧ್ಯೇತ್=ಎಷ್ಟೊಂದು ಪವಿತ್ರವಾಗುವುದೋ ತಥಾ=ಅಷ್ಟೊಂದು ವ್ರತಾದಿಭಿಃ=ಭಕ್ತಿರಹಿತ

ಸೆಳೆದೊಯ್ಯಲು) ಹೆದರುತ್ತಿರುವರು. ಕುರುವಂಶೋತ್ಪನ್ನನೇ! ಸಮೂಲ ಸರ್ವಪಾಪಪರಿಹಾರಕವಾದ್ದರಿಂದ ಜಗತ್ತಿನ ಎಲ್ಲ (ಮುಕ್ತಿಯೋಗ್ಯ) ಜೀವರಿಗೂ ಮೋಕ್ಷಾದಿ ಪುರುಷಾರ್ಥದಾಯಕವಾದ ಭಕ್ತಿಯುಕ್ತ ಶ್ರೀಹರಿನಾಮೋಚ್ಚಾರಣೆಯು ಉತ್ತಮಾಧಿಕಾರಿಗಳಿಗೂ ಕೂಡ ಮಹತ್ತರ ಪಾಪಗಳ ನಿಯತಪ್ರಾಯಶ್ಚಿತ್ತವೆಂದು ತಿಳಿ. ನಿರ್ದೋಷಗಳೂ ಸರ್ವೋತ್ತಮಗಳೂ ಆದ ಶ್ರೀಹರಿಮಹಿಮೆಗಳನ್ನು ಮತ್ತೆ ಮತ್ತೆ ಕೇಳುವ, ಹೇಳುವ, ಮನನಮಾಡುವ ಭಕ್ತನಿಗೆ ಶ್ರೀಹರಿಯ ಅನುಗ್ರಹದಿಂದ ಭಕ್ತಿಯು ದೃಢವಾಗಿ ಉತ್ಪನ್ನವಾಗುವುದು. ಇದರಿಂದ ಮನಸ್ಸು ಶುದ್ಧಿಯಾಗುವಂತೆ ಭಕ್ತಿರಹಿತ ಉಪವಾಸಾದಿ ವ್ರತಗಳಿಂದ ಶುದ್ಧಿಯಾಗುವುದಿಲ್ಲ.

ಕೇವಲ ಉಪವಾಸಾದಿ ವ್ರತಗಳಿಂದ ನ(ಶುದ್ಧ್ಯೇತ್) = ಶುದ್ಧಿಯಾಗುವುದಿಲ್ಲ. ಸಿದ್ಧ್ಯೇತ್ ಎಂಬ ಪಾಠದಲ್ಲಿ ಸಿದ್ಧಿಸುವುದಿಲ್ಲವೆಂದರ್ಥ. || ೩೪ ||

ಇತಿಹಾಸಮಿಮಂ ಗುಹ್ಯಂ ಭಗವಾನ್ ಕುಂಭಸಂಭವಃ ।
ಕಥಯಾಮಾಸ ಮಲಯ ಆಸೀನೋ ಹರಿಮರ್ಚಯನ್ || ೩೫ ||

ಮಲಯೇ=ಮಲಯ ಪರ್ವತದಲ್ಲಿ ಆಸೀನಃ=ನೆಲಸಿರುವ ಭಗವಾನ್=ಪೂಜ್ಯರಾದ ಕುಂಭಸಂಭವಃ=ಅಗಸ್ತ್ಯರು ಹರಿಂ=ಶ್ರೀಹರಿಯನ್ನು ಅರ್ಚಯನ್=ಪೂಜಿಸುತ್ತಾ ಇಮಂ=ಈ ಗುಹ್ಯಂ=ರಹಸ್ಯ ಧರ್ಮವನ್ನು ತಿಳಿಸುವ ಇತಿಹಾಸಂ=ಅಜಾಮಿಳೋಪಾಖ್ಯಾನವನ್ನು ನನಗೆ ಕಥಯಾಮಾಸ=ಹೇಳಿದರು. ಹರಿಮರ್ಚಯನ್ ಎಂದು ಹೇಳಿದ್ದರಿಂದ ಉಪಾಖ್ಯಾನದಲ್ಲಿ ಹೇಳಿದ ಧರ್ಮಸೂಕ್ಷ್ಮವಾದ ಭಗವದ್ಭಕ್ತಿಯಲ್ಲಿ ವಿಶ್ವಾಸವಿಡಬೇಕೆಂದು ತಿಳಿಸಿದಂತಾಯಿತು. || ೩೫ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ತೃತೀಯೋಽಧ್ಯಾಯಃ

ಅಥ ಚತುರ್ಥೋಽಧ್ಯಾಯಃ

ರಾಜೋವಾಚ—

ದೇವಾಸುರಾಣಾಂ ಸರ್ಗೋ ನಾಗಾನಾಂ ಮೃಗಪಕ್ಷಿಣಾಮ್ ।
ಸಾಮಾಸಿಕಸ್ತ್ವಯಾ ಪ್ರೋಕ್ತೋ ಯಸ್ತು ಸ್ವಾಯಂಭುವೇಽಂತರೇ
ತಸ್ಯೈವ ವ್ಯಾಸಮಿಚ್ಛಾಮಿ ಜ್ಞಾತುಂ ತೇ ಭಗವನ್ಯಥಾ ।
ಅನುಸರ್ಗಂ ಯಥಾಶಕ್ತ್ಯಾ ಸಸರ್ಜ ಭಗವಾನ್ ಪರಃ || ೨ ||

'ಮುಹ್ಯಂತಿ ಯಂ ಸೂರಯಃ' ಎಂಬಲ್ಲಿ ಬ್ರಹ್ಮಾದಿ ಜ್ಞಾನಿಗಳಿಂದಲೂ ತಿಳಿಯಲಾಗದ ಮಹಿಮೆಯುಳ್ಳವನೆಂದು ಹೇಳಿತ್ತು. 'ಜನ್ಮಾದ್ಯಸ್ಯ ಯತಃ'

ನನಗೀ ರಹಸ್ಯಧರ್ಮಬೋಧಕ ಅಜಾಮಿಳೋಪಾಖ್ಯಾನವನ್ನು ಮಲಯ ಪರ್ವತದಲ್ಲಿ ನೆಲಸಿದ್ದು ಶ್ರೀಹರಿಯನ್ನು ಪೂಜಿಸುವ ಅಗಸ್ತ್ಯರು ಹೇಳಿದರು. (ಅದನ್ನೇ ನಿನಗೆ ಹೇಳಿದೆನು.)

ನಾಲ್ಕನೆಯ ಅಧ್ಯಾಯ

ಪರೀಕ್ಷಿದ್ರಾಜರು—ಪೂಜ್ಯರೇ, ಸ್ವಾಯಂಭುವ ಮನ್ವಂತರದಲ್ಲಿ ದೇವತೆಗಳ, ಅಸುರರ, ನಾಗರ, ಮೃಗಗಳ, ಪಕ್ಷಿಗಳ ಸೃಷ್ಟಿಯನ್ನು ಸಂಕ್ಷೇಪವಾಗಿ ಹೇಳಿದಿರಿ. ಅದರ ವಿಸ್ತಾರವನ್ನೇ ತಮ್ಮಿಂದ ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ. ಸರ್ವೋತ್ತಮ

ಎಂಬಲ್ಲಿ ಸೃಷ್ಟ್ಯಾದಿ ಕಾರ್ಯಗಳು ಯಾರಿಂದ ನಡೆಯುತ್ತವೆಯೋ ಎಂದು ಪ್ರತಿಜ್ಞೆ ಮಾಡಲಾಗಿತ್ತು. ಇವೆರಡೂ ಶ್ರೀಹರಿಯಲ್ಲಿಯೇ ಹೊರತು ಮತ್ತೊಬ್ಬರಲ್ಲಿ ಅಲ್ಲ ವೆಂದು ಈ ಅಧ್ಯಾಯದಲ್ಲಿ ಪ್ರತಿಪಾದಿಸುತ್ತಾರೆ. ತೃತೀಯ ಮೊದಲಾದ ಸ್ಕಂಧಗಳಲ್ಲಿ ಹೇಳಿದ ಸೃಷ್ಟಿಕಾರ್ಯವು ಶ್ರೀಹರಿಯಲ್ಲಿ ಮಾತ್ರವೇ ಇದೆಯೋ? ಮತ್ತೆ ಯಾರಲ್ಲಿ ಯಾದರೂ ಇದೆಯೋ? ಮತ್ತು ಮತ್ತೊಬ್ಬರಲ್ಲಿ ಇದ್ದರೂ ಶ್ರೀಹರಿಯ ಅನುಗ್ರಹಾ-ಧೀನವೇ? ಎಂಬ ಅಭಿಪ್ರಾಯದಿಂದ ಪರೀಕ್ಷಿದ್ರಾಜರು ಹಿಂದೆ ಹೇಳಿದ್ದನ್ನು ಅನುವಾದ ಮಾಡಿ ಅದನ್ನೇ ವಿಸ್ತರಿಸಿರೆಂದು ಕೇಳುತ್ತಾರೆ. ಭಗವನ್=ಪೂಜ್ಯರೇ, ಸ್ವಾಯಂಭುವ ಮನ್ವಂತರದಲ್ಲಿ ಯಾವ ದೇವತೆಗಳ, ಅಸುರರ, ನಾಗರ, ಮೃಗಗಳ, ಪಕ್ಷಿಗಳ ಸಾಮಾಸಿಕಃ= ಸಂಕ್ಷೇಪ ರೀತಿಯಲ್ಲಿ ಸರ್ಗಃ= ಸೃಷ್ಟಿಯು ತ್ವಯಾ=ತಮ್ಮಿಂದ ಪ್ರೋಕ್ತಃ= ಹೇಳಲ್ಪಟ್ಟಿತೋ ತಸ್ಯೈವ= ಅದರದೇ ವ್ಯಾಸಂ= ವಿಸ್ತಾರವನ್ನು ಯಥಾ= ಯಥಾವತ್ತಾಗಿ ತೇ= ತಮ್ಮಿಂದ ಶ್ರೋತುಂ=ಕೇಳಿ ತಿಳಿಯಲು ಇಚ್ಛಾಮಿ=ಇಷ್ಟಪಡುತ್ತೇನೆ. ಪರಃ=ಸರ್ವೋತ್ತಮನಾದ ಭಗವಾನ್=ಶ್ರೀಹರಿಯು ಶಕ್ತ್ಯಾ=ತನ್ನ ಸಾಮರ್ಥ್ಯದಿಂದ ಯಥಾ=ಹೇಗೆ ಅನುಸರ್ಗಂ=ಅವಾಂತರ ಸೃಷ್ಟಿ ಯನ್ನು (ಮಹತ್ತತ್ವಾದಿ ಬ್ರಹ್ಮಾಂಡಾಂಶ ಮತ್ತು ಅದರಲ್ಲಿ ಬ್ರಹ್ಮದೇವರ ಸೃಷ್ಟಿ ಯನ್ನು) ಸಸರ್ಜ=ಸೃಷ್ಟಿಸಿದನೋ ಅದನ್ನೂ ತಮ್ಮಿಂದ ಕೇಳಬಯಸುತ್ತೇನೆ. ॥ ೧, ೨ ॥

ಸೂತ ಉವಾಚ—

ಇತಿ ಸಂಪ್ರಶ್ನಮಾಕರ್ಣ್ಯ ರಾಜರ್ಷೇರ್ಬಾದರಾಯಣಿಃ ।
ಪ್ರತಿನಂದ್ಯ ಮಹಾಯೋಗೀ ಜಗಾದ ಮುನಿಸತ್ತಮಾಃ ॥ ೩ ॥

ರಾಜರ ಪ್ರಶ್ನೆಗೆ ಶುಕಾಚಾರ್ಯರು ಉತ್ತರಕೊಟ್ಟರೇ? ಅಥವಾ ಅದನ್ನು ಪರಿಗಣಿಸದೆ ಬೇರೆ ಕಥೆಯನ್ನು ಹೇಳತೊಡಗಿದರೇ? ಅಥವಾ ಪ್ರಶ್ನೆಯನ್ನು ಕೇಳಿ ನಕ್ಕು ಸುಮ್ಮನೆ ಇದ್ದುಬಿಟ್ಟರೇ? ಎಂಬೀರೀತಿಯ ಶೌನಕಾದಿಗಳ ಮನಸ್ಸಿನಲ್ಲಿರುವ ಪ್ರಶ್ನೆಗೆ ಸೂತರು ಉತ್ತರಕೊಡುತ್ತಾರೆಂದು ಹೇಳುತ್ತಾರೆ. ಮುನಿಸತ್ತಮಾಃ= ಶೌನಕಾದಿಗಳೇ, ರಾಜರ್ಷೇಃ=ಪರೀಕ್ಷಿದ್ರಾಜರ ಇತಿ=ಮೇಲೆ ಹೇಳಿದ ಸಂಪ್ರಶ್ನಂ= ಭಕ್ತಿಯುಕ್ತ ಪ್ರಶ್ನೆಯನ್ನು ಆಕರ್ಣ್ಯ=ಕೇಳಿ ಮಹಾಯೋಗೀ=ಶ್ರೀಹರಿಯನ್ನು ಸರ್ವೋತ್ತಮನೆಂದು ಧ್ಯಾನಮಾಡುವ ಬಾದರಾಯಣಿಃ= ಬಾದರಾಯಣರ

ನಾದ ಶ್ರೀಹರಿಯು ಅವಾಂತರ ಸೃಷ್ಟಿಯನ್ನು ತನ್ನ ಸಾಮರ್ಥ್ಯದಿಂದ ಹೇಗೆ ಸೃಷ್ಟಿಸಿದನೋ ಅದನ್ನೂ ಕೇಳಬಯಸುತ್ತೇನೆ.

ಸೂತರು—ಶೌನಕಾದಿಗಳೇ, ಪರೀಕ್ಷಿದ್ರಾಜರ ಈ ಭಕ್ತಿಯುತ ಪ್ರಶ್ನೆಯನ್ನು ಕೇಳಿ ಮಹಾಯೋಗಿಗಳಾದ ಶುಕಾಚಾರ್ಯರು ರಾಜರನ್ನು ಅಭಿನಂದಿಸಿ ಹೇಳಲಾರಂಭಿಸಿದರು.

ಮಕ್ಕಳಾದ ಶುಕಾಚಾರ್ಯರು ಪ್ರತಿನಂದ್ಯ=ರಾಜರನ್ನು ಶ್ಲಾಘಿಸಿ ಜಗಾದ=ಹೇಳಿದರು. ಇಲ್ಲಿ ಸೂತ ಶೌನಕ ಸಂವಾದವನ್ನು ಹೇಳಿದ್ದರಿಂದ ಇನ್ನೂ ಅವರ ಸಂವಾದವು ಮುಗಿದಿಲ್ಲವೆಂದೂ ಶೌನಕಾದಿಗಳ ಪ್ರಶ್ನೆಯೂ ಇದೇ ಬಗೆಯದೆಂದೂ ಅದಕ್ಕೆ ಉತ್ತರವೂ ಮುಂದೆ ಹೇಳುವುದೇ ಎಂದೂ ಸೂಚಿಸಿದಂತಾಯಿತು. || ೩ ||

ಋಷಿರುವಾಚ—

ಯದಾ ಪ್ರಚೇತಸಃ ಪುತ್ರಾ ದಶ ಪ್ರಾಚೀನಬರ್ಹಿಷಃ ।
ಅಂತಃಸಮುದ್ರಾದುನ್ಮಗ್ನಾ ದದೃಶುರ್ಗಾಂ ದ್ರುಮೈರ್ವೃತಾಮ್ ॥

ಶುಕಾಚಾರ್ಯರು ಹೇಳುತ್ತಾರೆ. ಸೃಷ್ಟಿಕರ್ತೃತ್ವ ಲಕ್ಷಣವು ಅಜ್ಞಾನಿಗಳ ದೃಷ್ಟಿಯಿಂದ ಶ್ರೀ ಹರಿಗಿಂತ ಭಿನ್ನರಲ್ಲಿ ಇದೆಯೆಂದು ಕಂಡುಬಂದರೂ ಆ ಸೃಷ್ಟಿಯು ಭಗವದನುಗ್ರಹಾಧೀನವೇ ಆದ್ದರಿಂದ ಶ್ರೀ ಹರಿಯೊಬ್ಬನಲ್ಲಿಯೇ ಇದ್ದಂತಾಯಿತಾಗಿ ಲಕ್ಷಣಕ್ಕೆ ಅತಿವ್ಯಾಪ್ತಿಯಿಲ್ಲವೆಂದು ತೋರಿಸುವುದಕ್ಕಾಗಿ ಚತುರ್ಥ ಸ್ಕಂಧದ ಕೊನೆಯಲ್ಲಿ ಪ್ರಸಕ್ತವಾಗಿದ್ದ ವಿಷಯವನ್ನು ಅನುವಾದ ಮಾಡುತ್ತಾ ಪ್ರಾರಂಭಿಸುತ್ತಾರೆ. ಪ್ರಚೇತಸಃ=ಪ್ರಚೇತಸರೆಂದು ಎಲ್ಲರಿಗೂ ಒಂದೇ ಹೆಸರುಳ್ಳ ಪ್ರಾಚೀನಬರ್ಹಿರಾಜರ ಹತ್ತು ಮಕ್ಕಳು ಯದಾ=ಯಾವಾಗ ಅಂತಃ ಸಮುದ್ರಾತ್=ಸಮುದ್ರದ ಮಧ್ಯದಿಂದ ಉನ್ಮಗ್ನಾಃ=ಮೇಲಕ್ಕೆ ಬಂದರೋ (ಬಂದು) (ತದಾ=ಆಗ) ಗಾಂ=ಭೂಮಿಯನ್ನು ದ್ರುಮೈಃ=ಗಿಡಗಳಿಂದ ದಟ್ಟವಾಗಿ ವೃತಾಂ=ತುಂಬಿದುದನ್ನಾಗಿ ದದೃಶುಃ=ಕಂಡರು. ರಾಜರಿಲ್ಲದೆ ಕೃಷಿಯಿಲ್ಲದೆ ಹೋಗಿ ಎಲ್ಲೆಲ್ಲೂ ಕಾಡು ಬೆಳೆದಿತ್ತು ಎಂದರ್ಥ. || ೪ ||

ದ್ರುಮೇಭ್ಯಃ ಕ್ರುಧ್ಯಮಾನಾಸ್ತೇ ತಪೋದೀಪಿತಮನ್ಯವಃ ।
ಮುಖತೋ ವಾಯುಮಗ್ನಿಂ ಚ ಸಸೃಜುಸ್ತದ್ದಿಧಕ್ಷಯಾ ॥ ೫ ॥

ತಪೋದೀಪಿತ ಮನ್ಯವಃ=ತಪಸ್ಸಿನಿಂದ ಉದ್ದೀಪ್ತವಾದ ಕೋಪವುಳ್ಳ ತೇ=ಆ ಪ್ರಚೇತಸರು (ತದಾ=ಆಗ) ದ್ರುಮೇಭ್ಯಃ=ಗಿಡಗಳ ಮೇಲೆ ಕ್ರುಧ್ಯಮಾನಾಃ (ಸಂತಃ)=ಕೋಪಮಾಡುವವರಾಗಿ ತದ್ದಿಧಕ್ಷಯಾ=ಆ ಗಿಡಗಳನ್ನು ಸುಡಬೇಕೆಂಬ ಇಚ್ಛೆಯಿಂದ ಮುಖತಃ=ತಮ್ಮ ಬಾಯಿಯಿಂದ ಗಾಳಿಯನ್ನೂ ಬೆಂಕಿಯನ್ನೂ ಸಸೃಜುಃ=ಸೃಷ್ಟಿಸಿದರು. || ೫ ||

ಶುಕಾಚಾರ್ಯರು—ಪ್ರಾಚೀನಬರ್ಹಿರಾಜರ ಹತ್ತು ಮಕ್ಕಳಾದ ಪ್ರಚೇತಸರು ಸಮುದ್ರದ (ಸರೋವರದ) ಮಧ್ಯದಿಂದ ಮೇಲಕ್ಕೆ ಬಂದಾಗ ಗಿಡಗಳಿಂದ ದಟ್ಟವಾಗಿ ತುಂಬಿದ ಭೂಮಿಯನ್ನು ಕಂಡರು. ತಪಸ್ಸಿನಿಂದ ಕೋಪೋದ್ದೀಪಿತರಾದ ಅವರು ಗಿಡಗಳಮೇಲೆ ಕುಪಿತರಾಗಿ ಅವುಗಳನ್ನು ಸುಟ್ಟುಬಿಡುವ ಬಯಕೆಯಿಂದ ತಮ್ಮ

ತಾಭ್ಯಾಂ ನಿರ್ದಹ್ಯಮಾನಾಂಸ್ತಾನುಪಲಭ್ಯ ಕುರೂದ್ವಹ ।
ರಾಜೋವಾಚ ಮಹಾನ್ ಸೋಮೋ ಮನ್ಯುಂ ಪ್ರಶಮಯನ್ನಿವ ॥

ಆ ಸಂದರ್ಭದಲ್ಲಿ ಚಂದ್ರನಿಂದ ಆ ಪ್ರಚೇತಸರ ಕೋಪವು ಪರಿಹೃತವಾದ ರೀತಿಯನ್ನು ಹೇಳುತ್ತಾರೆ. ಕುರೂದ್ವಹ=ಪರೀಕ್ಷಿದ್ರಾಜನೇ, ತಾಭ್ಯಾಂ=ಅವರಿಂದ ಸೃಷ್ಟವಾದ ಗಾಳಿ-ಬೆಂಕಿಗಳಿಂದ ನಿರ್ದಹ್ಯಮಾನಾನ್=ಸಮೂಲವಾಗಿ ಸುಟ್ಟು ಹೋಗುತ್ತಿರುವ ತಾನ್=ಆ ಹೆಮ್ಮರಗಳನ್ನು ಉಪಲಭ್ಯ=ನೋಡಿ ರಾಜಾ=ವನಸ್ಪತಿಗಳಿಗೆ ರಾಜರಾದ ಮಹಾನ್=ಗುಣವಂತರಾದ ಸೋಮಃ=ಚಂದ್ರದೇವರು ಅವರ ಮನ್ಯುಂ=ಕೋಪವನ್ನು ಪ್ರಶಮಯನ್ನಿವ=ಹೋಗಲಾಡಿಸುವರಂತೆ ಉವಾಚ=ಹೇಳಿದರು. ॥ ೬ ॥

ಮಾ ದ್ರುಮೇಭ್ಯೋ ಮಹಾಭಾಗಾ ದೀನೇಭ್ಯೋ ದ್ರೋಗ್ಧುಮರ್ಹಥ ।
ವಿವರ್ಧಯಿಷವೋ ಯೂಯಂ ಪ್ರಜಾನಾಂ ಪತಯಃ ಸ್ಮೃತಾಃ ॥

ಅವರು ಏನು ಹೇಳಿದರೆಂದರೆ ಮುಂದಿನ ಒಂಭತ್ತು ಶ್ಲೋಕಗಳಿಂದ ಹೇಳುತ್ತಾರೆ. ಮಹಾಭಾಗಾಃ=ಪುಣ್ಯಶಾಲಿಗಳೇ ದೀನೇಭ್ಯಃ=ವಿಪತ್ತನ್ನು ತಪ್ಪಿಸಿಕೊಳ್ಳಲು ಸಾಮರ್ಥ್ಯವಿಲ್ಲದ ದ್ರುಮೇಭ್ಯಃ=ಗಿಡಗಳ ಮೇಲೆ ದ್ರೋಗ್ಧುಂ=ದ್ರೋಹ ಮಾಡಲು ಮಾ ಅರ್ಹಥ=ನೀವು ಅರ್ಹರಲ್ಲ. ಏಕೆಂದರೆ (ಪ್ರಜಾನಾಂ)=ಪ್ರಜಾಸೃಷ್ಟಿಯನ್ನು ವಿವರ್ಧಯಿಷವಃ=ವಿವಿಧವಾಗಿ ವೃದ್ಧಿಮಾಡಲು ಇಚ್ಛಿಸುವ ಯೂಯಂ=ನೀವು ಪ್ರಜಾನಾಂ ಪತಯಃ=ಪ್ರಜೆಗಳ ಪಾಲಕರೆಂದು ಸ್ಮೃತಾಃ=ಹೇಳಲ್ಪಟ್ಟಿರುವಿರಿ. ಆದ್ದರಿಂದ ದ್ರೋಹ ಮಾಡಬೇಡಿರೆಂದರ್ಥ. ॥ ೭ ॥

ಆದೌ ಪ್ರಜಾಪತಿಪತಿರ್ಭಗವಾನ್ ಹರಿರವ್ಯಯಃ ।
ವನಸ್ಪತೀನೋಷಧೀಶ್ಚ ಸಸರ್ಜೋರ್ಜಮಿಷಂ ವಿಭುಃ ॥ ೮ ॥

ಸುಟ್ಟದ್ದೇ ಆದರೆ ಶ್ರೀ ಹರಿಯ ಅನುಗ್ರಹಕ್ಕೆ ದೂರರಾಗುವಿರಿ ಎಂದು ಹೇಳುತ್ತಾರೆ. ವಿಭುಃ=ಸಮರ್ಥನೂ ಅವ್ಯಯಃ=ನಾಶರಹಿತನೂ ಆದ ಪ್ರಜಾಪತಿ-

---

ಮುಖದಿಂದ ಗಾಳಿಬೆಂಕಿಗಳನ್ನು ಸೃಷ್ಟಿಸಿದರು. ಕುರುವಂಶೋತ್ಪನ್ನನೇ, ಆ ಗಾಳಿ ಬೆಂಕಿಗಳಿಂದ ಎಲ್ಲ ಮರಗಿಡಗಳೂ ಸುಟ್ಟುಹೋಗುತ್ತ ಬಂದುವು. ಆಗ ಓಷಧಿಗಳ ರಾಜರಾದ ಚಂದ್ರದೇವರು ಅವರ ಕೋಪವನ್ನು ಪ್ರಶಾಂತಗೊಳಿಸುವರಂತೆ, ಹೀಗೆಂದು ಹೇಳಿದರು. 'ಮಹಾಭಾಗ್ಯಶಾಲಿಗಳೇ, ಅಸಮರ್ಥಗಳಾದ ಗಿಡಗಳ ವಿಷಯದಲ್ಲಿ ನೀವು ದ್ರೋಹಮಾಡಬಾರದು. ಪ್ರಜಾಸೃಷ್ಟಿಯನ್ನು ಬೆಳೆಸಬೇಕೆಂಬುದೇ ನಿಮ್ಮ ಇಷ್ಟ. ನೀವು ಪ್ರಜಾಪಾಲಕರು. ಸಮರ್ಥನೂ ನಾಶರಹಿತನೂ ಪ್ರಜೇಶ್ವರರಿಗೂ ಪಾಲಕನೂ ಆದ ಶ್ರೀಹರಿಯು ಮೊದಲು ಈ ಮರಗಳನ್ನೂ ಓಷಧಿಗಳನ್ನೂ

ಪತಿಃ=ಪ್ರಜೇಶ್ವರರಿಗೂ ಪಾಲಕನಾದ ಭಗವಂತನಾದ ಶ್ರೀ ಹರಿಯು ಆದ್ಯಾ=ಪ್ರಾರಂಭದಲ್ಲಿ ವನಸ್ಪತೀನ್=ಹೆಮ್ಮರಗಳನ್ನೂ ಓಷಧೀಃ ಚ=ಒಂದೇ ಸಲ ಫಲ ಕೊಟ್ಟು ಒಣಗುವ ಪೈರುಗಳನ್ನು ಊರ್ಜಂ=ಪಿತೃಗಳಿಗೆ ಅನ್ನವಾಗಿಯೂ ಇಷಂ=ದೇವತಾನ್ನವಾಗಿಯೂ ಸಸರ್ಜ=ಸೃಷ್ಟಿಸಿದನು. || ೮ ||

ಅನ್ನಂ ಚರಾಣಾಮಚರಾ ಹ್ಯಪದಃ ಪಾದಚಾರಿಣಾಮ್ ।
ಅಹಸ್ತಾ ಹಸ್ತಯುಕ್ತಾನಾಂ ದ್ವಿಪದಾಂ ಚ ಚತುಷ್ಪದಃ || ೯ ||

ವನಸ್ಪತಿ ಮತ್ತು ಓಷಧಿಗಳು ಪಿತ್ರನ್ನ ದೇವಾನ್ನಗಳು ಹೇಗೆ? ಎಂದರೆ ಹೇಳುತ್ತಾರೆ. ಅಚರಾಃ=ಸ್ಥಾವರಗಳು ಚರಾಣಾಂ=ಜಂಗಮ ಪ್ರಾಣಿಗಳಿಗೆ ಅನ್ನಂ=ಆಹಾರವು. ಅಪದಃ=ಚರಪ್ರಾಣಿಗಳಲ್ಲಿ ಕಾಲಿಲ್ಲದವು ಪಾದಚಾರಿಣಾಂ=ಕಾಲಿನಿಂದ ತಿರುಗಾಡುವ ಪ್ರಾಣಿಗಳಿಗೆ ಆಹಾರವು. ಅಹಸ್ತಾಃ=ಕೈಯಿಲ್ಲದವು ಹಸ್ತಯುಕ್ತಾನಾಂ=ಕೈಯಿರುವ ಪ್ರಾಣಿಗಳಿಗೆ ಆಹಾರವು. ಚತುಷ್ಪದಃ ಚ=ನಾಲ್ಕು ಕಾಲಿನವು ದ್ವಿಪದಾಂ=ಎರಡು ಕಾಲಿನ ಪ್ರಾಣಿಗಳಿಗೆ ಆಹಾರವು. || ೯ ||

ಯೂಯಂ ಚ ಪಿತ್ರಾನ್ವಾದಿಷ್ಟಾ ದೇವದೇವೇನ ಚಾನಘಾಃ ।
ಪ್ರಜಾಸರ್ಗಾಯ ಹಿ ಕಥಂ ವೃಕ್ಷಾನ್ನಿರ್ದಗ್ಧುಮರ್ಹಥ || ೧೦ ||

ಅನಘಾಃ=ಪಾಪರಹಿತರೆ, ಪಿತ್ರಾ=ನಿಮ್ಮ ತಂದೆ ಪ್ರಾಚೀನಬರ್ಹಿರಾಜರಿಂದಲೂ ಚ=ಮತ್ತು ದೇವದೇವೇನ=ಬ್ರಹ್ಮದೇವರಿಂದಲೂ ಪ್ರಜಾಸರ್ಗಾಯ=ಪ್ರಜೆಗಳ ಸೃಷ್ಟಿಗಾಗಿ ಅನ್ವಾದಿಷ್ಟಾಃ=ಆಜ್ಞಪ್ತರಾದ ಯೂಯಂ ಚ=ನೀವಾದರೋ ವೃಕ್ಷಾನ್=ಪ್ರಜಾ ಭೋಗ್ಯಗಳಾದ ಗಿಡಗಳನ್ನು ಕಥಂ ಹಿ=ಹೇಗೆ ತಾನೇ ನಿರ್ದಗ್ಧುಂ=ಸುಡಲು ಅರ್ಹಥ=ಅರ್ಹರು. ಅರ್ಹರಲ್ಲವೆಂದು ಭಾವ. ಪ್ರಜಾಪಾಲಕರಾದ ನಿಮಗೆ ಪ್ರಜಾ ಭೋಗ್ಯವಸ್ತುಗಳ ದಾಹವು ಅನುಚಿತವೆಂದು ತಾತ್ಪರ್ಯ. || ೧೦ ||

ಆತಿಷ್ಠತ ಸತಾಂ ಮಾರ್ಗಂ ಕೋಪಂ ಯಚ್ಛತ ದೀಪಿತಮ್ ।
ಪಿತ್ರಾ ಪಿತಾಮಹೇನಾಪಿ ಜುಷ್ಟಂ ವಃ ಪ್ರಪಿತಾಮಹೈಃ || ೧೧ ||

ಪಿತೃದೇವತಾನ್ನವಾಗಿ ಸೃಷ್ಟಿಸಿದನು. ಸ್ಥಾವರಗಳು ಜಂಗಮಗಳಿಗೂ, ಜಂಗಮಗಳಲ್ಲಿಯೂ ಕಾಲಿಲ್ಲದವು ಕಾಲಿರುವವುಗಳಿಗೂ, ಕೈಯಿಲ್ಲದವು ಕೈಯಿರುವವುಗಳಿಗೂ, ನಾಲ್ಕು ಕಾಲಿನವು ಎರಡು ಕಾಲಿನವುಗಳಿಗೂ ಆಹಾರವಾಗಿರುವುವು, ಪಾಪರಹಿತರೇ, ನಿಮ್ಮ ತಂದೆಯಿಂದಲೂ ಬ್ರಹ್ಮದೇವರಿಂದಲೂ ಪ್ರಜಾಸೃಷ್ಟಿಗಾಗಿ ಆಜ್ಞಪ್ತರಾದ ನೀವು ಪ್ರಜೆಗಳ ಆಹಾರಗಳಾದ ವೃಕ್ಷಗಳನ್ನು ಹೇಗೆ ತಾನೇ ಸುಡುವಿರಿ? ಆದ್ದರಿಂದ ನಿಮ್ಮ ತಂದೆ, ತಾತ ಮತ್ತು ಮುತ್ತಾತಂದಿರು ಅನುಸರಿಸಿದ ಸಜ್ಜನರ ದಾರಿಯನ್ನು

(ತಸ್ಮಾತ್)–ಆದ್ದರಿಂದ ವಃ=ನಿಮ್ಮ ಪಿತ್ರಾ=ತಂದೆಯಿಂದಲೂ ಪಿತಾಮಹೇನ=ತಾತನಿಂದಲೂ ಪ್ರಪಿತಾಮಹೈಃ ಅಪಿ=ಮುತ್ತಾತಂದಿರಿಂದಲೂ ಜುಷ್ಟಂ=ಸೇವಿತವಾದ (ಅನುಸೃತವಾದ) ಸತಾಂ ಮಾರ್ಗಂ=ಸಜ್ಜನರ ಮಾರ್ಗವನ್ನು – ಉಪಶಾಂತಿಯನ್ನು – ಆತಿಷ್ಠತ=ಆಶ್ರಯಿಸಿರಿ. ದೀಪಿತಂ=ಉದ್ದೀಪಿತವಾಗಿರುವ ಕೋಪಂ=ಕ್ರೋಧವನ್ನು ಯಚ್ಛತ–ತಡೆಹಿಡಿಯಿರಿ. || ೧೧ ||

ತೋಕಾನಾಂ ಪಿತರೌ ಬಂಧೂ ದೃಶಃ ಪಕ್ಷ್ಮ ಸ್ತ್ರಿಯಃ ಪತಿಃ ।
ನೃಪಃ ಪ್ರಜಾನಾಂ ಭಿಕ್ಷೂಣಾಂ ಗೃಹ್ಯಜ್ಞಾನಾಂ ಬುಧಃ ಸುಹೃತ್ ॥

ಮತ್ತೊಬ್ಬರು ಶರಣರಿಲ್ಲದ ವೃಕ್ಷಗಳನ್ನು ಸುಟ್ಟಲ್ಲಿ ಶರಣಾಗತವಧವೆಂಬ ಪಾತಕವೂ ನಿಮಗೆ ಇರುವುದೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ತೋಕಾನಾಂ=ಮಕ್ಕಳಿಗೆ ಪಿತರೌ=ತಂದೆತಾಯಿಗಳು ಬಂಧೂ=ಬಂಧುಗಳು. ದೃಶಃ=ಕಣ್ಣಿಗೆ ಪಕ್ಷ್ಮ=ರೆಪ್ಪೆಯು ಬಂಧುವು. ಭಿಕ್ಷೂಣಾಂ=ಸನ್ಯಾಸಿಗಳಿಗೆ ಗೃಹೀ–ಗೃಹಸ್ಥನು ಬಂಧುವು. ಅಜ್ಞಾನಾಂ=ಜ್ಞಾನವಿಲ್ಲದವರಿಗೆ ಬುಧಃ=ಜ್ಞಾನಿಯು ಸುಹೃತ್=ಜ್ಞಾನದಾನವೆಂಬ ಜೀವನದಿಂದ ಸ್ನೇಹಿತನು. (ನಿರ್ವ್ಯಾಜ ಬಂಧುವು.) ಪ್ರಜೆಗಳಿಗೆ ಪ್ರಜೇಶ್ವರನು ಬಂಧುವಾದ್ದರಿಂದ ಪ್ರಜೆಗಳ ಜೀವಿಕೆಯನ್ನು ನಾಶಮಾಡಬಾರದೆಂಬಲ್ಲಿ ಐದು ಉದಾಹರಣೆಗಳನ್ನು ಕೊಟ್ಟಿರುವರೆಂದು ತಿಳಿಯಬೇಕು. || ೧೨ ||

ಅಂತರ್ದೇಹೇಷು ಭೂತಾನಾಮಾತ್ಮಾಽಽಸ್ತೇ ಹರಿರೀಶ್ವರಃ ।
ಸರ್ವಂ ತದ್ಧಿಷ್ಣ್ಯಮೀಕ್ಷಧ್ವಮೇವಂ ವಸ್ತೋಷಿತೋ ಹ್ಯಸೌ ॥೧೩॥

ಇದರಿಂದ ಶ್ರೀ ಹರಿಯ ದ್ರೋಹವನ್ನೂ ಮಾಡಿದಂತೆ ಆಗುತ್ತದೆ ಎನ್ನುತ್ತಾರೆ. ಭೂತಾನಾಂ=ಪ್ರಾಣಿಗಳ ದೇಹೇಷು–ದೇಹಗಳಲ್ಲಿ ಅಂತಃ=ಒಳಗೆ ಆತ್ಮಾ=ಅಂತರ್ಯಾಮಿಯೂ ಈಶ್ವರಃ–ನಿಯಾಮಕನೂ ಆದ ಹರಿಃ=ಶ್ರೀ ಹರಿಯು ಆಸ್ತೇ–ಇರುವನು. ಭೂತಾನಾಂ ಎಂದು ವಿಶೇಷಣ ಕೊಟ್ಟದ್ದರಿಂದ ವೃಕ್ಷಗಳನ್ನು ಸುಟ್ಟದ್ದರಿಂದ ಈಶ್ವರ ದ್ರೋಹವು ಹೇಗಾಯಿತು ? ನಾವೇನೂ ಭೂತಗಳನ್ನು ಸುಡಲಿಲ್ಲವಲ್ಲಾ ! ಎಂಬ ಶಂಕೆಯನ್ನು ಪರಿಹರಿಸಿರುವರು. ವೃಕ್ಷದಾಹವೂ ಈಶ್ವರ ದ್ರೋಹವೇ ಎಂಬುದನ್ನು ಸಮರ್ಥಿಸುತ್ತಾರೆ. ಸರ್ವಂ–ಎಲ್ಲ ಪದಾರ್ಥಗಳನ್ನೂ ತದ್ಧಿಷ್ಣ್ಯಂ = ಶ್ರೀಹರಿಯ ವಾಸಸ್ಥಾನವೆಂದು ಈಕ್ಷಧ್ವಂ = ತಿಳಿಯಿರಿ. ಹಾಗೆ ತಿಳಿಯುವುದರಿಂದ ಪ್ರಯೋಜನವೇನು ? ಎಂದರೆ ಹೇಳುತ್ತಾರೆ ಏವಂ=ಹೀಗೆ

ಉಪಶಾಂತಿಯನ್ನು–ಆಶ್ರಯಿಸಿರಿ. ಈ ದೀಪ್ತವಾದ ಕೋಪವನ್ನು ನಿಗ್ರಹಿಸಿರಿ. ಶಿಶುಗಳಿಗೆ ತಂದೆತಾಯಿಗಳು ಬಂಧುಗಳು; ಕಣ್ಣಿಗೆ ರೆಪ್ಪೆ; ಹೆಂಗುಸಿಗೆ ಗಂಡ; ಪ್ರಜೆಗಳಿಗೆ ರಾಜ; ಭಿಕ್ಷುಗಳಿಗೆ ಗೃಹಸ್ಥ; ಅಜ್ಞಾನಿಗೆ ಜ್ಞಾನಿ ಸ್ನೇಹಿತ. ಅದೂ ಅಲ್ಲದೆ ಪ್ರಾಣಿಗಳ ದೇಹಗಳೊಳಗೆ ಅಂತರ್ಯಾಮಿಯೂ ನಿಯಾಮಕನೂ ಆದ ಶ್ರೀಹರಿ ಇರುವನು. ಎಲ್ಲವೂ ಅವನ ವಾಸಸ್ಥಳವೆಂದರಿಯಬೇಕು. ಹೀಗೆ

ತಿಳಿದಲ್ಲಿ ಅಸೌ=ಈ ಶ್ರೀಹರಿಯು ವಃ=ನಿಮ್ಮ ವಿಷಯದಲ್ಲಿ ತೋಷಿತಃ=ಸಂತೋಷ ಗೊಂಡವನು (ನಿಮ್ಮಿಂದ ಸಂತೋಷಿತನು) (ಭವತಿ) ಹಿ=ಆಗುವನು. ಇದರಿಂದ ಈಶ್ವರಾಧಿಷ್ಠಾನವಾದ್ದರಿಂದ ಭೂತದ್ರೋಹವೂ ಮಾಡತಕ್ಕದ್ದಲ್ಲವೆಂದು ವಿವರಿಸಿ ದಂತಾಯಿತು. || ೧೩ ||

ಯಃ ಸಮುತ್ಪತಿತಂ ದೇಹ ಆಕಾಶಾನ್ಮನ್ಯುಮುಲ್ಬಣಮ್ ।
ಆತ್ಮಜಿಜ್ಞಾಸಯಾ ಯಚ್ಛೇತ್ಸ ಗುಣಾನತಿವರ್ತತೇ || ೧೪ ||

ಈ ಕಾರಣದಿಂದಲೂ ಕೋಪಮಾಡಬಾರದೆಂದು ಹೇಳುತ್ತಾರೆ. ಯಃ= ಯಾವನಾದರೆ ದೇಹೇ=ಶರೀರದಲ್ಲಿ ಆಕಾಶಾತ್=ಹೃದಯಾಕಾಶದಿಂದ ಸಮುತ್ಪತಿತಂ=ಪ್ರಜ್ವಲಿತವಾದ ಅಥವಾ ಆಕಾಶಾತ್=ಆಕಸ್ಮಿಕವಾಗಿ ದೇಹದಲ್ಲಿ ಉಜ್ವಲವಾದ ಉಲ್ಬಣಮ್=ಅತಿಶಯವಾದ ಮನ್ಯುಂ=ಕೋಪವನ್ನು ಆತ್ಮಜಿಜ್ಞಾಸಯಾ=ಶ್ರೀಹರಿಯ ವಿಚಾರದಿಂದ 'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂಬ ಶ್ರುತ್ಯರ್ಥವನ್ನು ಪರ್ಯಾಲೋಚಿಸಿ ಭೂತದ್ರೋಹದಿಂದ ಶ್ರೀಹರಿಯ ದ್ರೋಹವೇ ಆಗುವುದೆಂಬ ಭಾವನೆಯಿಂದ ಯಚ್ಛೇತ್=ಉಪಶಮ ಮಾಡಿಕೊಳ್ಳುವನೋ ಸಃ=ಅವನು ಗುಣಾನ್=ಸಂಸಾರಕ್ಕೆ ಕಾರಣಗಳಾದ ಪ್ರಾಕೃತ ಗುಣಗಳನ್ನು ಅತಿವರ್ತತೇ=ಅತಿಕ್ರಮಿಸುವನು. ಮುಕ್ತನಾಗುವನು. ಎಂದು ತಾತ್ಪರ್ಯ. ಶ್ರೀಹರಿಯೇ ಸ್ವತಂತ್ರನು. ಅವನೇ ಎಲ್ಲಕ್ಕೂ ಸ್ವಾಮಿಯೆಂಬ ವಿಚಾರದಿಂದ ಪ್ರಾಣಿಗಳಲ್ಲಿ ಕೋಪವನ್ನು ಬಿಡಬೇಕೆಂದು ಅಭಿಪ್ರಾಯ. || ೧೪ ||

ಅಲಂ ದಗ್ಧೈರ್ದ್ರುಮೈರ್ದೀನೈಃ ಖಿಲಾನಾಂ ಶಿವಮಸ್ತು ವಃ ।
ವಾರ್ಕ್ಷೀ ಹ್ಯೇಷಾ ವರಾ ಕನ್ಯಾ ಪತ್ನೀತ್ವೇ ಪ್ರತಿಗೃಹ್ಯತಾಮ್ ||

ದಗ್ಧೈಃ=ಸುಡಲ್ಪಟ್ಟ ದೀನೈಃ=ರಕ್ಷಕರಿಲ್ಲದ ದ್ರುಮೈಃ=ಮರಗಳಿಂದ ಅಲಂ= ಸಾಕು. ಇವುಗಳನ್ನು ಸುಟ್ಟಿದ್ದು ಸಾಕು. ಖಿಲಾನಾಂ (ದ್ರುಮಾಣಾಂ)=ಕಳೆದುಳಿ ದಿರುವ ಗಿಡಗಳಿಗೂ ವಃ=ನಿಮಗೂ ಶಿವಂ ಅಸ್ತು=ಮಂಗಳವಾಗಲಿ. ಏಷಾ=ಈ ಎದುರಿಗಿರುವ ವಾರ್ಕ್ಷೀ=ವೃಕ್ಷಗಳಿಂದ ರಕ್ಷಿತಳಾದ್ದರಿಂದ ಅವುಗಳ ಮಗಳು ವರಾ= ನಿಮ್ಮಿಂದ ವರಿಸಲು ಯೋಗ್ಯಳಾದ ಕನ್ಯಾಹಿ=ಕನ್ಯೆಯಷ್ಟೆ. (ತಾಂ)=ಅವಳನ್ನು ಪತ್ನೀತ್ವೇ=ಹೆಂಡತಿಯಾಗಿ ಪ್ರತಿಗೃಹ್ಯತಾಂ=ಪರಿಗ್ರಹಿಸಿರಿ. ವಃ=ನಿಮ್ಮಿಂದ ಉಳಿದ

ತಿಳಿದಲ್ಲಿ ಶ್ರೀಹರಿಯು ನಿಮ್ಮ ವಿಷಯದಲ್ಲಿ ತುಷ್ಟನಾಗುವನು. ದೇಹದ ಹೃದಯಾ- ಕಾಶದಲ್ಲಿ ಪ್ರಜ್ವಲಿತವಾದ ಉಗ್ರಕ್ರೋಧವನ್ನು ಶ್ರೀಹರಿಯ ವಿಚಾರದಿಂದ ಉಪಶಮ ಮಾಡಿಕೊಳ್ಳುವವನು ಪ್ರಾಕೃತ ಗುಣಗಳನ್ನು ಅತಿಕ್ರಮಿಸಿ ಮುಕ್ತನಾಗುವನು. ದೀನಗಳಾದ ಗಿಡಗಳನ್ನು ಸುಟ್ಟಿದ್ದು ಸಾಕು. ಉಳಿದ ಗಿಡಗಳಿಗೂ ನಿಮಗೂ ಒಳ್ಳೆಯದಾಗಲಿ. ವೃಕ್ಷಸಂಬಂಧಿಯಾದ ಈ (ಮಾರಿಷಳೆಂಬ) ಕನ್ಯೆಯನ್ನು

ಗಿಡಗಳಿಗೆ ಒಳ್ಳೆಯದಾಗಲಿ ಎಂದಾದರೂ ಅರ್ಥ. ವೃಕ್ಷಗಳ ರಕ್ಷಣೆಗಾಗಿ ವೃಕ್ಷಸಂಬಂಧಿ ಕನ್ಯೆಯನ್ನು ಕೊಟ್ಟಿರುವರೆಂದು ತಿಳಿಯಬೇಕು. ॥೧೫॥

ಇತ್ಯಾಮಂತ್ರ್ಯ ವರಾರೋಹಾಂ ಕನ್ಯಾಮಾಪ್ಸರಸೀಂ ನೃಪ ।
ಸೋಮೋ ರಾಜಾ ಯಯೌ ದತ್ವಾ ತೇ ಧರ್ಮೇಣೋಪ-
ಯೇಮಿರೇ ॥ ೧೬ ॥

ನೃಪ=ಪರೀಕ್ಷಿದ್ರಾಜನೇ, ರಾಜಾ=ವೃಕ್ಷಗಳನ್ನು ಕಿರಣಗಳಿಂದ ಸಂತೋಷಪಡಿಸುವ ಸೋಮಃ ಚಂದ್ರದೇವರು ಇತಿ=ಮೇಲೆ ಹೇಳಿದಂತೆ ಆಮಂತ್ರ್ಯ=ಪ್ರಾಚೇತಸರನ್ನು ಸಮಾಧಾನಪಡಿಸಿ ವರಾರೋಹಾಂ=ಸುಂದರಳಾದ ಸುಂದರ ನಿತಂಬವತಿಯಾದ ಆಪ್ಸರಸೀಂ=ಅಪ್ಸರಸ ಸ್ತ್ರೀಯ ಜಾತಿಯ ಕನ್ಯಾಂ=ಕನ್ಯೆಯನ್ನು ದತ್ವಾ ಕೊಟ್ಟು ಯಯೌ=ಹೊರಟುಹೋದರು. ತೇ=ಆ ಪ್ರಾಚೇತಸರು (ತಾಂ)=ಆಕೆಯನ್ನು ಧರ್ಮೇಣ=ವಿಧಿಪೂರ್ವಕವಾಗಿ ಉಪಯೇಮಿರೇ=ಎಲ್ಲರೂ ಮದುವೆಯಾದರು. ಕಂಡು ಋಷಿಯಿಂದ ಪ್ರಮ್ಲೋಚೆಯಲ್ಲಿ ಜನಿಸಿದ್ದರಿಂದ ಅಪ್ಸರಸೆಯೆಂದು ಭಾವ. ॥ ೧೬ ॥

ತೇಭ್ಯಸ್ತಸ್ಯಾಮಭೂದ್ರಾಜನ್ ದಕ್ಷಃ ಪ್ರಾಚೇತಸಃ ಕಿಲ ।
ಯಸ್ಯ ಪ್ರಜಾವಿಸರ್ಗೇಣ ಲೋಕಾ ಆಪೂರಿತಾಸ್ತ್ರಯಃ ॥ ೧೭ ॥

ರಾಜನೇ, ತೇಭ್ಯಃ=ಆ ಪ್ರಾಚೇತಸರಿಂದ ತಸ್ಯಾಂ=ಆ ವೃಕ್ಷಕನ್ಯೆಯಲ್ಲಿ ಪ್ರಾಚೇತಸಃ=ಪ್ರಾಚೇತಸರ ಮಗನಾಗಿ ದಕ್ಷಃ=ದಕ್ಷಪ್ರಜೇಶ್ವರರು (ಹಿಂದೆ ಬ್ರಹ್ಮದೇವರಿಂದ ಸೃಷ್ಟರಾಗಿದ್ದವರು) ಅಭೂತ್ ಕಿಲ=ಮತ್ತೆ ಹುಟ್ಟಿದರಲ್ಲವೆ! ಯಸ್ಯ=ಯಾವ ಈ ದಕ್ಷರ ಪ್ರಜಾವಿಸರ್ಗೇಣ=ಪ್ರಜೆಗಳ ವಿವಿಧ ಸೃಷ್ಟಿಯಿಂದ ತ್ರಯಃ ಲೋಕಾಃ=ಮೂರು ಲೋಕಗಳೂ ಆಪೂರಿತಾಃ ತುಂಬಿದುವು. ॥ ೧೭ ॥

ಯಥಾ ಸಸರ್ಜ ಭೂತಾನಿ ದಕ್ಷೋ ದುಹಿತೃವತ್ಸಲಃ ।
ರೇತಸಾ ಮನಸಾ ಚೈವ ತನ್ಮಮಾವಹಿತಃ ಶೃಣು ॥ ೧೮ ॥

ದುಹಿತೃವತ್ಸಲಃ=ಹೆಣ್ಣುಮಕ್ಕಳಲ್ಲಿ ವಾತ್ಸಲ್ಯವುಳ್ಳ (ಇದರಿಂದ ಇವರ ಕನ್ಯಾವಂಶವೇ ಅನಂತರದ ಜಗತ್ತೆಂದು ಸೂಚಿತವಾಯಿತು.) ದಕ್ಷರು ಭೂತಾನಿ=ಪ್ರಾಣಿ

ಪತ್ನಿಯನ್ನಾಗಿ ಪರಿಗ್ರಹಿಸಿರಿ' ಎಂದು ಹೇಳಿ ಸುಂದರಿಯಾದ ಅಪ್ಸರೆಯರ ಜಾತಿಯ ಕನ್ಯೆಯನ್ನು ಅವರಿಗೆ ಕೊಟ್ಟು ಚಂದ್ರದೇವರು ಹೊರಟುಹೋದರು. ಅವರಾಕೆಯನ್ನು ವಿಧಿವತ್ತಾಗಿ ಮದುವೆಯಾದರು.

ರಾಜನ್, ಅವರಿಗವಳಲ್ಲಿ ದಕ್ಷರು ಪ್ರಚೇತಸರ ಪುತ್ರರಾಗಿ ಮತ್ತೆ ಹುಟ್ಟಿದರು. ಇವರ ವಿವಿಧ ಪ್ರಜಾಸೃಷ್ಟಿಯಿಂದ ಮೂರು ಲೋಕಗಳೂ ತುಂಬಿದವು. ಹೆಣ್ಣುಮಕ್ಕಳ ಮೇಲೆ ವಾತ್ಸಲ್ಯವಂತರಾದ ದಕ್ಷರು ಮನಸ್ಸಿನಿಂದಲೂ ರೇತಸ್ಸಿನಿಂದಲೂ ಹೇಗೆ ಪ್ರಾಣಿಗಳನ್ನು ಸೃಷ್ಟಿಸಿದರೆಂಬುದನ್ನು ಹೇಳುತ್ತೇನೆ. ಅವಹಿತನಾಗಿ ಕೇಳು.

ಗಳನ್ನು ಕ್ಲೇಶಸ್ಸಿನಿಂದಲೂ ಮನಸ್ಸಿನಿಂದಲೂ ಯಥಾ=ಹೇಗೆ ಸಸರ್ಜ=ಸೃಷ್ಟಿಸಿ ದರೋ ತತ್=ಅದನ್ನು ಮಮ(ಸಕಾಶಾತ್)=ನನ್ನಿಂದ ಅವಹಿತಃ(ಸ್ಸ)=ಮನಸ್ಸಿಟ್ಟು ಶೃಣು=ಕೇಳು. || ೧೮ ||

ಮನಸೈವಾಸೃಜತ್ಪೂರ್ವಂ ಪ್ರಜಾಪತಿರಿಮಾಃ ಪ್ರಜಾಃ ।
ದೇವಾಸುರಮನುಷ್ಯಾದೀನ್ನಭಃಸ್ಥಲಜಲೌಕಸಃ || ೧೯ ||

ಪ್ರಜಾಪತಿಃ=ಬ್ರಹ್ಮದೇವರು ಪೂರ್ವಂ=ಮೊದಲ ಸೃಷ್ಟಿಯಲ್ಲಿ ಇಮಾಃ=ಈ ನಭಃಸ್ಥಲಜಲೌಕಸಃ=ಆಕಾಶ, ಭೂಮಿ ಮತ್ತು ನೀರಿನಲ್ಲಿ ವಾಸಿಸುವ ಪ್ರಜಾಃ=ಪ್ರಾಣಿಗಳನ್ನೂ ದೇವತೆಗಳನ್ನೂ ಅಸುರರನ್ನೂ ಮನುಷ್ಯ ಮೊದಲಾದವರನ್ನೂ ಮನಸಾ ಏವ=ಮನಸ್ಸಿನಿಂದಲೇ ಅಸೃಜತ್ ಸೃಷ್ಟಿಸಿದರು. ಅಥವಾ ಪ್ರಜಾಪತಿಃ=ದಕ್ಷಪ್ರಜೇಶ್ವರರು ಪೂರ್ವಂ=ಮೊದಲು ಈ ಪ್ರಜೆಗಳನ್ನು ಸೃಷ್ಟಿಸಿದರೆಂದಾದರೂ ಅರ್ಥ. || ೧೯ ||

ತಮಬೃಂಹಿತಮಾಲೋಕ್ಯ ಪ್ರಜಾಸರ್ಗಂ ಪ್ರಜಾಪತಿಃ ।
ವಿಂಧ್ಯಪಾದಾನುಪವ್ರಜ್ಯ ಸೋಽಚರದ್ದುಶ್ಚರಂ ತಪಃ || ೨೦ ||

ತಂ=ಮನಸ್ಸಿನಿಂದ ಸೃಷ್ಟವಾದ ಆ ಪ್ರಜಾಸರ್ಗಂ=ಪ್ರಾಣಿಸೃಷ್ಟಿಯನ್ನು ಅಬೃಂಹಿತಂ=ಅಭಿವೃದ್ಧಿಯಾಗದಿರುವುದನ್ನು ಆಲೋಕ್ಯ=ನೋಡಿ ಸಃ ಪ್ರಜಾಪತಿಃ=ಆ ದಕ್ಷಪ್ರಜೇಶ್ವರರು ವಿಂಧ್ಯಪಾದಾನ್=ವಿಂಧ್ಯಪರ್ವತದ ತಪ್ಪಲು ಪ್ರದೇಶಗಳನ್ನು ಉಪವ್ರಜ್ಯ=ಹೊಂದಿ ದುಶ್ಚರಂ=ಮಾಡಲಶಕ್ಯವಾದ ತಪಃ=ತಪಸ್ಸನ್ನು ಅಚರತ್=ಮಾಡಿದರು. ಮೊದಲ ಅರ್ಥದಲ್ಲಿ ಬ್ರಹ್ಮದೇವರಿಂದ ಅನುಜ್ಞಾತರಾದ ದಕ್ಷರು ತಪಸ್ಸುಮಾಡಿದರೆಂದೂ ಎರಡನೆಯ ಅರ್ಥದಲ್ಲಿ ಮನಸ್ಸಿನಿಂದ ಪ್ರಜೆಗಳನ್ನು ಸೃಷ್ಟಿಸಿದ ದಕ್ಷಪ್ರಜೇಶ್ವರರು ತಪಸ್ಸುಮಾಡಿದರೆಂದೂ ಅನ್ವಯವನ್ನು ತಿಳಿಯಬೇಕು. ಎರಡನೆಯ ಅರ್ಥದಲ್ಲಿ ಏಕವಾಕ್ಯತೆಯು ಬರುವುದು. ಪರ್ವತದ ಬುಡದಲ್ಲಿ ಇರುವ ಸಣ್ಣ ಸಣ್ಣ ಬೆಟ್ಟಗುಡ್ಡಗಳಿಗೆ ಪಾದಗಳೆಂದು ಹೆಸರು. || ೨೦ ||

ತತ್ರಾಘಮರ್ಷಣಂ ನಾಮ ತೀರ್ಥಂ ಪಾಪಹರಂ ಪರಮ್ ।
ಉಪಸ್ಪೃಶ್ಯಾನುಸವನಂ ತಪಸಾಽತೋಷಯದ್ಧರಿಮ್ || ೨೧ ||

ಬ್ರಹ್ಮದೇವರು ಮೊದಲು ಈ ಆಕಾಶ-ಭೂ-ಜಲವಾಸಿ ಪ್ರಾಣಿಗಳನ್ನೂ ದೇವ-ಅಸುರ-ಮನುಷ್ಯ ಮೊದಲಾದವರನ್ನೂ ಮನಸ್ಸಿನಿಂದಲೇ ಸೃಷ್ಟಿಸಿದರು. ಆ ಸೃಷ್ಟಿಯು ಬೆಳೆಯಲಿಲ್ಲ. ಅದನ್ನು ನೋಡಿ ಅವರು ದಕ್ಷರಿಗೆ ಸೃಷ್ಟಿಯನ್ನು ಬೆಳೆಸುವಂತೆ ಆಜ್ಞೆಮಾಡಿದರು (ಅಥವಾ ದಕ್ಷರು ಮೊದಲು ಪ್ರಾಣಿಗಳನ್ನು ಮನಸ್ಸಿನಿಂದ ಸೃಷ್ಟಿಸಿದರು. ಅದು ಬೆಳೆಯದಿದ್ದನ್ನು ನೋಡಿ). ಅವರು ವಿಂಧ್ಯಪರ್ವತದ ತಪ್ಪಲಿಗೆ ಬಂದು ದುಶ್ಚರವಾದ ತಪಸ್ಸನ್ನು ಮಾಡಿದರು. ಅಲ್ಲಿ ಪಾಪಹರವಾದ

ತತ್ರ = ಆ ತಪ್ಪಲುಪ್ರದೇಶದಲ್ಲಿ ಅಘಮರ್ಷಣವೆಂಬ ಪಾಪಹರಂ = ಪಾಪಗಳನ್ನು ಹೋಗಲಾಡಿಸುವ ಪರಂ ತೀರ್ಥಂ = ಉತ್ತಮವಾದ ತೀರ್ಥವು (ಅಸ್ತಿ) = ಇರುವುದು. ತತ್ರ = ಅದರಲ್ಲಿ ಅನುಸವನಂ = ಪ್ರತಿ ಸಂಧ್ಯಾಕಾಲದಲ್ಲಿಯೂ (ಮೂರು ಸಂಧ್ಯೆಗಳಲ್ಲಿಯೂ) ಉಪಸ್ಪೃಶ್ಯ = ಸ್ನಾನಮಾಡಿ ತಪಸಾ = ತಪಸ್ಸಿನಿಂದ ಶ್ರೀಹರಿಯನ್ನು ಅತೋಷಯತ್ = ಸಂತೋಷಪಡಿಸಿದರು. || ೨೧ ||

ಅಸ್ತೌಷೀದ್ಧಂಸಗುಹ್ಯೇನ ಭಗವಂತಮಧೋಕ್ಷಜಮ್ ।
ತುಭ್ಯಂ ತದಭಿಧಾಸ್ಯಾಮಿ ಕಸ್ಯಾತುಷ್ಯದ್ಯತೋ ಹರಿಃ ॥ ೨೨ ॥

ಭಗವಂತನಾದ ಶ್ರೀಹರಿಯನ್ನು ಹಂಸಗುಹ್ಯೇನ = ಹಂಸಗುಹ್ಯವೆಂಬ ಸ್ತೋತ್ರದಿಂದ ಅಸ್ತೌಷೀತ್ = ಸ್ತೋತ್ರಮಾಡಿದರು. ಯತಃ = ಯಾವ ಸ್ತೋತ್ರದಿಂದ ಶ್ರೀಹರಿಯು ಕಸ್ಯ = ದಕ್ಷಪ್ರಜೇಶ್ವರರಿಗೆ ಅತುಷ್ಯತ್ = ಸಂತುಷ್ಟನಾದನೋ ತತ್ = ಅದನ್ನು ತುಭ್ಯಂ = ನಿನಗಾಗಿ ಅಭಿಧಾಸ್ಯಾಮಿ = ಹೇಳುತ್ತೇನೆ. || ೨೨ ||

ಪ್ರಜಾಪತಿರುವಾಚ—

ನಮಃ ಪರಾಯಾವಿತಥಾನುಭೂತಯೇ
ಗುಣತ್ರಯಾಭಾಸನಿಮಿತ್ತಬಂಧವೇ ।
ಅದೃಷ್ಟಧಾಮ್ನೇ ಗುಣತತ್ತ್ವಬುದ್ಧಿಭಿ-
ರ್ನಿವೃತ್ತಮಾನಾಯ ದಧೇ ಸ್ವಯಂಭುವೇ ॥ ೨೩ ॥

ಆ ಸ್ತೋತ್ರವನ್ನೇ ಮುಂದಿನ ಹನ್ನೆರಡು ಪದ್ಯಗಳಿಂದ ಹೇಳುತ್ತಾರೆ. ಅವಿತಥಾನುಭೂತಯೇ - (೧) ಎಲ್ಲಿಯೂ ಯಾವಾಗಲೂ ತಡೆಯಿಲ್ಲದ ಅನುಭವವುಳ್ಳ (೨) ಸತ್ಯಜ್ಞಾನನಾದ ('ಸತ್ಯಂ ಜ್ಞಾನಂ' ಎಂಬ ಶ್ರುತಿಯು ಇದಕ್ಕೆ

ಅಘಮರ್ಷಣವೆಂಬ ಉತ್ತಮ ತೀರ್ಥ. ಅದರಲ್ಲಿ ತ್ರಿಕಾಲಗಳಲ್ಲಿಯೂ (ಪ್ರಾತಃ, ಮಧ್ಯಾಹ್ನ ಮತ್ತು ಸಂಜೆ) ಸ್ನಾನಮಾಡಿ ತಪಸ್ಸುಮಾಡಿ ಶ್ರೀಹರಿಯನ್ನು ಸಂತೋಷಪಡಿಸಿದರು. 'ಹಂಸಗುಹ್ಯ(ರಹಸ್ಯ)'ವೆಂಬ ಮಂತ್ರದಿಂದ ಭಗವಂತನನ್ನು ಸ್ತೋತ್ರಮಾಡಿದರು. ಅದರಿಂದ ಶ್ರೀಹರಿಯು ದಕ್ಷರಿಗೆ ಪ್ರಸನ್ನನಾದನು. ಅದನ್ನು ನಿನಗಾಗಿ ಹೇಳುತ್ತೇನೆ.

'ಎಲ್ಲಿಯೂ ಯಾವಾಗಲೂ ತಡೆಯಿಲ್ಲದ ಅನುಭವವುಳ್ಳವನೂ, ಸತ್ಯಜ್ಞಾನನೂ, ಮೂರು ಗುಣಗಳಿಂದಾಗುವ ಸೃಷ್ಟಿಗೆ ಕಾರಣಭೂತವಾದ ಪ್ರಕೃತಿ ಪುರುಷರಿಗೆ ಬಂಧುವೂ, ಮೂರು ಗುಣಗಳ ಪ್ರತೀತಿಗೆ ನಿಮಿತ್ತವಾದ ಅವ್ಯಕ್ತ ತತ್ತ್ವಕ್ಕೆ ಅಭಿಮಾನಿ ಲಕ್ಷ್ಮೀದೇವಿಗೆ ಆಶ್ರಯನೂ, ಶಬ್ದ ಮೊದಲಾದ ಗುಣಗಳೇ ಪುರುಷಾರ್ಥಗಳೆಂದು ತಿಳಿದಿರುವ ವಿಷಯಲಂಪಟರಿಗೆ ಅರಿಯಲಾಗದ ಸ್ವರೂಪವುಳ್ಳವನೂ, ಅಪರಿಮಿತನೂ, ಅಪ್ರಮೇಯನೂ, ಪ್ರಮಾಣ-ಪರಿಮಿತಿಗಳಿಗೆ ನಿಲುಕ

ಪ್ರಮಾಣ.) ಗುಣತ್ರಯಾ....ಬಂಧವೇ-(೧) ಸತ್ವ ಮೊದಲಾದ ಮೂರು ಗುಣಗಳಿಂದ ಆಗುವ (ಆಭಾಸ) ಸೃಷ್ಟಿಗೆ ನಿಮಿತ್ತರಾದ ಪ್ರಕೃತಿ ಮತ್ತು ಪುರುಷರಿಗೆ ಬಂಧುವಾದ, (ಅವರಲ್ಲಿ ಇದ್ದುಕೊಂಡು ಸೃಷ್ಟಿಗೆ ಪ್ರವರ್ತಕನಾದ) (೨) ಸತ್ವ ಮೊದಲಾದ ಮೂರು ಗುಣಗಳ (ಆಭಾಸ) ಪ್ರತೀತಿಗೆ ನಿಮಿತ್ತವಾದ ಅವ್ಯಕ್ತಕ್ಕೆ (ತದಭಿಮಾನಿ ಲಕ್ಷ್ಮಿಗೆ) ಆಶ್ರಯನಾದ ('ಸತೋ ಬಂಧುಮಸತಿ ನಿರವಿಂದನ್' ಎಂಬ ಶ್ರುತಿಯು ಇದಕ್ಕೆ ಪ್ರಮಾಣ), ಗುಣತತ್ತ್ವಬುದ್ಧಿಭಿಃ-(೧) ಶಬ್ದ ಮೊದಲಾದ ಗುಣಗಳಲ್ಲಿ ಯಥಾರ್ಥಬುದ್ಧಿಯುಳ್ಳ ಬಹಿರ್ಮುಖರಿಗೆ (೨) ಶಬ್ದಾದಿ ವಿಷಯಗಳೇ ಪುರುಷಾರ್ಥವೆಂದು ತಿಳಿದ ವಿಷಯಲಂಪಟರಿಗೆ ಅದೃಷ್ಟಧಾಮ್ನೇ-ತಿಳಿಯದಿರುವ ಸ್ವರೂಪವುಳ್ಳ ('ನ ಚಕ್ಷುಷಾ ಪಶ್ಯತಿ ಕಶ್ಚಿದೇನಂ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ.) ನಿವೃತ್ತಮಾನಾವಧಯೇ-(೧) ಪರಿಮಾಣದ ಅವಧಿಯಿಂದ ನಿವೃತ್ತನಾದ (ಅಪರಿಮಿತನಾದ), (೨) ಜ್ಞಾನದ ಅವಧಿಯಿಲ್ಲದ (ಅಪ್ರಮೇಯನಾದ) ('ಅನಂತಂ ಬ್ರಹ್ಮ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ.) (೩) ನಿವೃತ್ತಗಳಾದ ಪ್ರಮಾಣ ಪರಿಮಿತಿಗಳುಳ್ಳ ('ಯತೋ ವಾಚೋ ನಿವರ್ತಂತೇ' ಎಂಬ ಶ್ರುತಿಯು ಇದಕ್ಕೆ ಆಧಾರ.) ಸ್ವಯಂಭುವೇ-ಸ್ವತಃಸಿದ್ಧನಾದ ('ಸ ಭಗವಾನ್ ಕಸ್ಮಿನ್ ಪ್ರತಿಷ್ಠಿತಃ? ಇತಿ. ಸ್ವೇ ಮಹಿಮ್ನಿ ಇತಿ' ಎಂಬ ಶ್ರುತಿಯು ಇದನ್ನು ತಿಳಿಸುವುದು.) ಪರಾಯ-ನಿರ್ದೋಷಗುಣಪೂರ್ಣನಾದ ಪರಮಾತ್ಮನಿಗೆ ನಮಸ್ಕಾರವು. ಸರ್ವನಾಮಸಂಜ್ಞೆಯಿಲ್ಲದ್ದರಿಂದ ಪರಸ್ಮೈ ಎಂದು ಹೇಳದೆ ಪರಾಯ ಎಂದು ಪ್ರಯೋಗಿಸಿರುವರು. ಇದರಿಂದ ಶ್ರೀಹರಿಯು ಲೋಕವಿಲಕ್ಷಣನೆಂದು ತಿಳಿಸಿರುವರು. ಅವಿತಥ ಮುಂತಾದ ವಿಶೇಷಣಗಳು ಶ್ರೀಹರಿಯ ಪರತ್ವ ಪ್ರತಿಪಾದನೆಗಾಗಿ ಹೇಳಿದವುಗಳು. ಪರಿಮಾಣರಹಿತನಾಗಿ ವ್ಯಾಪ್ತನಾಗಿದ್ದರೆ ಏಕೆ ಸಿಗುತ್ತಿಲ್ಲವೆಂಬುದನ್ನು ಅದೃಷ್ಟಧಾಮ್ನೇ ಎಂಬುದರಿಂದಲೂ ಜನ್ಮಾದಿಗಳುಳ್ಳವನು ಅನಂತನು ಹೇಗೆ ಎಂಬುದನ್ನು ಸ್ವಯಂಭುವೇ ಎಂಬುದರಿಂದಲೂ ಪರಿಹರಿಸಿರುವರು. || ೨೩ ||

ನ ಯಸ್ಯ ಸಖ್ಯಂ ಪುರುಷೋ ವೇತ್ತಿ ಸಖ್ಯುಃ
ಸಖಾ ವಸನ್ ಸಂವಸತಃ ಪುರೇಽಸ್ಮಿನ್ ।
ಗುಣೋ ಯಥಾ ಗುಣಿನೋಽವ್ಯಕ್ತದೃಷ್ಟಿ-
ಸ್ತಸ್ಮೈ ಮಹೇಶಾಯ ನಮಸ್ಕರೋಮಿ || ೨೪ ||

ದವನೂ, ಸ್ವತಃಸಿದ್ಧನೂ, ನಿರ್ದೋಷಗುಣಪೂರ್ಣನೂ ಸಾರನೂ ಆದ ಪರಮಾತ್ಮನಿಗೆ ನಮಸ್ಕಾರ. ಸಖನಾದ ಜೀವನು ತನ್ನ ಕರ್ಮಾನುಗುಣವಾಗಿ ಶ್ರೀಹರಿಯು ಕೊಟ್ಟ ದೇಹದಲ್ಲಿ ಇದ್ದುಕೊಂಡು ಅದೇ ದೇಹದಲ್ಲಿ ತನ್ನೊಡನೆ ಇದ್ದರೂ ದುಃಖಾದ್ಯನುಭವರಹಿತನಾಗಿರುವ ಸಖನಾದ ಶ್ರೀಹರಿಯ ಸಖ್ಯವನ್ನು ತಿಳಿಯದಿರುವನು. ಸ್ಥೂಲದೃಷ್ಟಿಯ ಭೃತ್ಯನು ರಾಜನ ಸ್ನೇಹವನ್ನು ತಿಳಿಯದಿರುವಂತೆ

'ಗುಣತತ್ತ್ವಬುದ್ಧಿಭಿಃ ಅದೃಷ್ಟಧಾಮ್ನೇ' ಎಂದು ಹೇಳಿದ್ದನ್ನು ಪ್ರತಿಪಾದಿಸುತ್ತಾರೆ. ಸಖಾ = ಸ್ನೇಹಿತನಾದ ಪುರುಷಃ = ಜೀವನು ಅಸ್ಮಿನ್ ಪುರೇ = ತನ್ನ ಕರ್ಮಾನುಗುಣವಾಗಿ ಶ್ರೀಹರಿಯಿಂದ ದತ್ತವಾದ ದೇಹದಲ್ಲಿ ವರ್ಸ=ಇರುತ್ತಾ ಅಸ್ಮಿನ್ ಪುರೇ = ಈ ದೇಹದಲ್ಲಿ ಸಂವಸತಃ = ದುಃಖಾದ್ಯನುಭವರಹಿತನಾಗಿ ವಾಸಿಸುವ ಸಖ್ಯುಃ=ಸ್ನೇಹಿತನಾದ ಯಸ್ಯ=ಯಾವ ಶ್ರೀಹರಿಯ ಸಖ್ಯಂ=ಶರೀರೇಂದ್ರಿಯ ಪ್ರವರ್ತಕತ್ವರೂಪವಾದ ಸ್ನೇಹವನ್ನು ಅವ್ಯಕ್ತದೃಷ್ಟಿಃ = ಸ್ಥೂಲದೃಷ್ಟಿಯುಳ್ಳ ಗುಣಃ = ಅಪ್ರಧಾನನು ಅಂದರೆ ಭೃತ್ಯನು ಗುಣಿನಃ=ಪ್ರಧಾನನ ಅಂದರೆ ರಾಜನ ಸಖ್ಯಂ ಯಥಾ=ಸ್ನೇಹವನ್ನು ಹೇಗೆ ತಿಳಿಯುವುದಿಲ್ಲವೋ ಹಾಗೆ ನ ವೇತ್ತಿ= ತಿಳಿಯುವುದಿಲ್ಲವೋ ತಸ್ಮೈ = ಅಂತಹ ಮಹೇಶಾಯ = ಶಿವನಿಗಿಂತಲೂ ಉತ್ತಮನಾದ, ಸರ್ವೋತ್ತಮ ನಿಯಾಮಕನಾದ ಶ್ರೀಹರಿಗೆ ನಮಸ್ಕಾರ ಮಾಡುತ್ತೇನೆ. 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ' ಎಂಬ ಶ್ರುತಿಯು ಒಂದೇ ಶರೀರದಲ್ಲಿ ಇಬ್ಬರೂ ಇರುವುದರಿಂದ ಪರಸ್ಪರ ಸಖರೆಂದು ತಿಳಿಸುವುದು. 'ತದ್ದೂರೇ ತದ್ವಂತಿಕೇ' ಎಂಬ ಶ್ರುತಿಯೂ ಸಹವಾಸವನ್ನು ತಿಳಿಸುವುದು. ಹೇಗೆ ಎದುರಿಗಿದ್ದರೂ ಭೃತ್ಯನು ರಾಜನ ಸ್ನೇಹವನ್ನು [ಇವನು ನನ್ನ ಸ್ನೇಹಿತನೆಂಬ ರಾಜನ ಗಂಭೀರಾಭಿಪ್ರಾಯವನ್ನು (ಇಂಗಿತವನ್ನು) ಸ್ಥೂಲಜ್ಞಾನಿಯಾದ್ದರಿಂದ] ತಿಳಿಯುವುದಿಲ್ಲವೋ ಹಾಗೆ ಶ್ರೀಹರಿಯು ಮುಕ್ತಿಯೋಗ್ಯ ಜೀವನನ್ನು ತನ್ನ ಸ್ನೇಹಿತನೆಂದು ತಿಳಿದಿರುವ ಅಭಿಪ್ರಾಯವನ್ನು ಜೊತೆಯಲ್ಲಿಯೇ ಇರುವ ಸ್ಥೂಲದೃಷ್ಟಿಯಾದ ಸಾತ್ವಿಕಜೀವನು ಅರಿತಿಲ್ಲವೆಂದು ಉದಾಹರಣೆಯ ಅಭಿಪ್ರಾಯ. ಇದಕ್ಕೆ ಪ್ರಮಾಣ 'ಯಥಾ ರಾಜ್ಞಃ ಪ್ರಿಯತ್ವಂ ತು ಭೃತ್ಯೋ ವೇದ ನ ಚಾತ್ಮನಃ | ತಥಾ ಜೀವೋ ನ ಯತ್ಸಖ್ಯಂ ವೇತ್ತಿ ತಸ್ಮೈ ನಮೋಽಸ್ತುತೇ ||' ಆದ್ದರಿಂದ ಅವ್ಯಕ್ತದೃಷ್ಟಿಃ= ದೃಷ್ಟಿ ಇಲ್ಲದ ಜಡವಾದ ಗುಣಃ = ರೂಪ ಮೊದಲಾದುವು ಗುಣಿನಃ=ದ್ರವ್ಯದ ಸಂಬಂಧವನ್ನು ಹೇಗೆ ತಿಳಿಯುವುದಿಲ್ಲವೋ ಎಂಬ ವ್ಯಾಖ್ಯಾನವು ಪ್ರಮಾಣಬಾಧಿತವೆಂದು ತಿಳಿಯಬೇಕು. || ೨೪ ||

ದೇಹೋಽಸವೋಽಕ್ಷಾ ಮನವೋ ಭೂತಮಾತ್ರಾ
ನಾತ್ಮಾನಮನ್ಯಂ ಚ ವಿದುಃ ಪರಂ ಯತ್ ।
ಸರ್ವಂ ಪುಮಾನ್ ವೇದ ಗುಣಾಂಶ್ಚ ತಜ್ಜ್ಞೋ
ನ ವೇದ ಸರ್ವಜ್ಞಮನಂತಮೀಡೇ ॥ ೨೫ ॥

ಈ ಜೀವನೂ ಶ್ರೀಹರಿಯ ಸ್ನೇಹವನ್ನು ತಿಳಿಯದಿರುವನು. ಅಂತಹ ರುದ್ರಾದಿಗಳಿಗಿಂತ ಉತ್ತಮನೂ ಸರ್ವೋತ್ತಮ ನಿಯಾಮಕನೂ ಆದ ಶ್ರೀಹರಿಗೆ ಸಮಸ್ಕಾರ. ದೇಹಾಭಿಮಾನಿ ಕುಬೇರ, ಪ್ರಾಣಾಭಿಮಾನಿಗಳಾದ ಮರುತರು, ಇಂದ್ರಿಯಾಭಿಮಾನಿಗಳಾದ ಇಂದ್ರ-ಅಗ್ನಿ-ವರುಣ ಮೊದಲಾದವರು, ಅಂತಃಕರಣದ ವ್ಯಾಪಾರಗಳಿಗೆ

'ಮುಹ್ಯಂತಿ ಯಂ ಸೂರಯಃ' ಎಂದು ಹೇಳಿದ್ದನ್ನು ಈಗ ಸ್ಪಷ್ಟಪಡಿಸುತ್ತಾರೆ. 'ತಾ ಆಪ ಐಕ್ಷಂತ' ಎಂಬಲ್ಲಿ ಹೇಳಿದಂತೆ ದೇಹ ಮೊದಲಾದ ಜಡಪದಾರ್ಥಗಳಿಗೆ ಜ್ಞಾತೃತ್ವ ಮೊದಲಾದ ಧರ್ಮಗಳು ಕೂಡುವುದಿಲ್ಲವಾದ್ದರಿಂದ ದೇಹಾದಿಗಳಿಗಿಂತ ಭಿನ್ನನಾದ ಜ್ಞಾನಕ್ಕೆ ಆಶ್ರಯನಾದ ಚೇತನನನ್ನು ಹೇಳಬೇಕು. ಆ ಚೇತನನು ಸಾಮಾನ್ಯ ಜೀವನೆಂದು ಹೇಳುವಂತಿಲ್ಲ. ಸಾಮಾನ್ಯ ಜೀವನು ಜ್ಞಾನಕ್ಕೆ ಆಶ್ರಯನಾದರೂ ಅವನು ಚೆನ್ನಾಗಿ ತನ್ನನ್ನೂ ತನಗಿಂತ ಉತ್ತಮ ವಸ್ತುವನ್ನೂ ತಿಳಿದಿಲ್ಲವಾದ್ದರಿಂದ ಇವನ ಪ್ರತ್ಯಕ್ಷಕ್ಕೆ ಶ್ರೀಹರಿಯು ಅವಿಷಯನೆಂದು ಹೇಳಿದ್ದರಿಂದ ಶ್ರೀಹರಿಯ ಮಹಿಮೆಯೇನೂ ಹೇಳಿದಂತಾಗುವುದಿಲ್ಲ. ಆದ್ದರಿಂದ ಎಲ್ಲ ವಿಷಯವನ್ನೂ ಬಲ್ಲ ವಿಶಿಷ್ಟ ಜೀವನೊಬ್ಬನನ್ನು ಒಪ್ಪಲೇ ಬೇಕಾಗುವುದು. ಇದರಂತೆ ಇನ್ನೂ ಇತರ ಸರ್ವಜ್ಞ ಜೀವರೂ ಇರುವಲ್ಲಿ ಯಾವ ಬಾಧಕವೂ ಇಲ್ಲ. ಈ ಎಲ್ಲ ಸರ್ವಜ್ಞರೆನಿಸಿಕೊಂಡವರಿಂದಲೂ ಸಂಪೂರ್ಣವಾಗಿ ತಿಳಿಯಲಾಗದ ಮಹಾಮಹಿಮನು ಶ್ರೀಹರಿ ಎಂದಲ್ಲಿ ಶ್ರೀಹರಿಯ ನಿರತಿಶಯ ಮಹಿಮೆಯು ತಿಳಿದು ಬರುವುದು. ಆದ್ದರಿಂದ ಈ ಸಲುವಾಗಿ ದೇಹ ಮೊದಲಾದ ಶಬ್ದಗಳಿಂದ ಅವುಗಳಿಗೆ ಅಭಿಮಾನಿಗಳಾದ ಉತ್ತಮ ಜೀವರು ಆ ಸಂಬಂಧದಿಂದ ಲಕ್ಷಣಾವೃತ್ತಿಯಿಂದ ಅರ್ಥವಾಗಿ ಹೇಳಲ್ಪಟ್ಟಿರುವರು. ವೈಶ್ರವಣ ಮೊದಲಾದವರು ಆಯಾಯ ಪದಾರ್ಥಗಳಿಗೆ ಪ್ರಧಾನಾಭಿಮಾನಿಗಳಾದ್ದರಿಂದ ಒಂದೇ ವಿಭಕ್ತಿಯಲ್ಲಿ ಹೇಳಲ್ಪಟ್ಟಿರುವರು. ಅಷ್ಟೇ ಹೊರತು ಅವರು ಆಯಾಯಾ ಪದಾರ್ಥಾತ್ಮಕರೆಂದಲ್ಲ. ದೇಹಃ=ದೇಹಾಭಿಮಾನಿಯಾದ ಕುಬೇರ. ಅಸವಃ = ಪ್ರಾಣಗಳಿಗೆ ಅಭಿಮಾನಿಗಳಾದ ಮರುತರು. ಅಕ್ಷಾಃ= ಇಂದ್ರಿಯಗಳ ಅಭಿಮಾನಿಗಳಾದ ಇಂದ್ರ ಅಗ್ನಿ ವರುಣ ಮೊದಲಾದವರು. ಮನವಃ ಅಂತಃಕರಣದ ವೃತ್ತಿಗಳಿಗೆ ಅಭಿಮಾನಿಯಾದ ರುದ್ರದೇವರು (ಅಂತಃಕರಣದ ವೃತ್ತಿಗಳು ಅನೇಕವಾದ್ದರಿಂದ ಬಹುವಚನ) ಭೂತ = ಪಂಚಭೂತಗಳಿಗೆ ಅಭಿಮಾನಿಗಳಾದ ಪೃಥಿವೀ ಮೊದಲಾದ ಅಥವಾ ಸುಪರ್ಣ ಮೊದಲಾದ ದೇವತೆಗಳು ಮಾತ್ರಾಃ = ಶಬ್ದ ಮೊದಲಾದವುಗಳಿಗೆ ಅಭಿಮಾನಿಗಳಾದ ರುದ್ರಪುತ್ರರು ಅಥವಾ ಸೌಪರ್ಣಾದಿಗಳು— ಈ ಎಲ್ಲ ದೇವತೆಗಳೂ ಆತ್ಮಾನಂ= ತಮ್ಮನ್ನೂ (ತಮ್ಮ ಸ್ವರೂಪವನ್ನೂ) ಅನ್ಯಂ ಚ= ತಮಗಿಂತ ಭಿನ್ನವಾದ ಪ್ರಪಂಚವನ್ನೂ ನ ವಿದುಃ= ತಿಳಿದಿಲ್ಲ. ಅಂದಮೇಲೆ ಯತ್ ಯಾವುದು ಪರಂ= ಈ ದೇವತೆಗಳಿಗಿಂತಲೂ ತದ್ಭಿನ್ನ ಪ್ರಪಂಚಕ್ಕಿಂತಲೂ ಉತ್ತಮವಾದ ವಿಷ್ಣುವೆಂಬ

ಅಭಿಮಾನಿಗಳಾದ ರುದ್ರದೇವರು, ಪಂಚಭೂತಗಳಿಗೆ ಅಭಿಮಾನಿಗಳಾದ ಸುಪರ್ಣ-ಪೃಥಿವೀ ಮೊದಲಾದ ದೇವತೆಗಳು, ಶಬ್ದ ಮೊದಲಾದ ತನ್ಮಾತ್ರಗಳಿಗೆ ಅಭಿಮಾನಿಗಳಾದ ರುದ್ರಪುತ್ರರು—ಇವರೆಲ್ಲರೂ ತಮ್ಮ ಸ್ವರೂಪವನ್ನೂ ತಮಗಿಂತ ಭಿನ್ನವಾದ ಪ್ರಪಂಚವನ್ನೂ ಅರಿಯರು. ಅಂದಮೇಲೆ ಎಲ್ಲಕ್ಕಿಂತ ಉತ್ತಮನಾದ ವಿಷ್ಣುವನ್ನು ಹೇಗೆ ತಾನೇ (ಸಂಪೂರ್ಣವಾಗಿ) ಅರಿಯಬಲ್ಲರು! ಜೀವಾಭಿಮಾನಿಗಳಾದ ಬ್ರಹ್ಮ

ಪರಬ್ರಹ್ಮವಸ್ತುವೋ ಅದನ್ನು ತಿಳಿದಿಲ್ಲವೆಂದು (ಕಿಮುತ)– ಹೇಳುವುದೇನು! ಶ್ರೀಹರಿಯ ಅನುಗ್ರಹವಿಲ್ಲದೆ ಅವನನ್ನು ತಿಳಿಯಲಾರರೆಂದರ್ಥ. ಪುಮಾನ್ – ಜೀವಾಭಿಮಾನಿಗಳಾದ ಬ್ರಹ್ಮದೇವರು ಸರ್ವಂ – ತಮ್ಮನ್ನೂ ತಮಗಿಂತ ಭಿನ್ನ ಪ್ರಪಂಚವನ್ನೂ ವೇದ - ತಿಳಿದಿರುವರು. ಅಷ್ಟೇ ಅಲ್ಲ. ಗುಣಾನ್ ಚ=ಆಯಾಯ ಪದಾರ್ಥಗಳಲ್ಲಿನ ಗುಣಗಳನ್ನೂ ಶಬ್ದಾದಿಗಳನ್ನೂ ಅವುಗಳ ವಿಶೇಷಗಳನ್ನೂ ಕ್ರಿಯೆ ಮೊದಲಾದುವನ್ನೂ ವೇದ ತಿಳಿದಿರುವರು. ಹಾಗಾದರೆ ಇವರು ಸಂಪೂರ್ಣವಾಗಿ ಪರಮಾತ್ಮನನ್ನು ತಿಳಿದಿರುವರೇ? ಎಂದರೆ ಇಲ್ಲವೆಂದು ಹೇಳುತ್ತಾರೆ. ತಜ್ಜ್ಞಃ– ಇವೆಲ್ಲವನ್ನೂ ತಿಳಿದಿದ್ದರೂ ಬ್ರಹ್ಮದೇವರು (ತಂ) ಆ ಸರ್ವೋತ್ತಮ ವಸ್ತುವನ್ನು ಸಂಪೂರ್ಣವಾಗಿ ನ ವೇದ– ಅರಿಯರು. ಶ್ರೀಹರಿಯು ತನ್ನನ್ನೂ ತನಗಿಂತ ಭಿನ್ನವಾದ ಎಲ್ಲವನ್ನೂ ಹೇಗೆ ಅರಿತಿರುವನೋ ಹಾಗೆ ಅರಿತಿಲ್ಲವೆಂಬರ್ಥ. ಅನಂತಂ– ತನ್ನನ್ನು ಅನಂತನಾದ್ದರಿಂದ ಅಪರಿಚ್ಛಿನ್ನನೆಂದು ತಿಳಿದಿರುವ. ಸರ್ವಜ್ಞಂ– ಅವನ ಜ್ಞಾನವು ಯಥಾರ್ಥವಾದ್ದರಿಂದ ಎಲ್ಲರಿಗಿಂತ ಮುಖ್ಯ ಸರ್ವಜ್ಞನಾದ ಶ್ರೀಹರಿಯನ್ನು ಈಡೇ – ಸ್ತೋತ್ರಮಾಡುತ್ತೇನೆ. ಇದರಿಂದ ಬ್ರಹ್ಮದೇವರೂ ಶ್ರೀಹರಿಯಷ್ಟು ಸರ್ವಜ್ಞರಲ್ಲವೆಂದಾಯಿತು. 'ತದ್ವ್ರಹ್ಮಾಸ್ಮೈತ್ ಅಹಂ ಬ್ರಹ್ಮಾಸ್ಮಿ' 'ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ' ಇತ್ಯಾದಿ ಶ್ರುತಿಗಳು ಮೇಲಿನ ಅರ್ಥವನ್ನು ಸಮರ್ಥಿಸುತ್ತವೆ. ಆತ್ಮಾ ಎಂಬಲ್ಲಿ ಲಿಂಗವ್ಯತ್ಯಾಸವು ಸರ್ವತ್ರ ಅಭಿಮಾನಿಗಳನ್ನೇ ತೆಗೆದುಕೊಳ್ಳಬೇಕೆಂಬುದಕ್ಕೆ ಸೂಚಕವಾಗಿದೆ. ಅನಂತಂ ಎಂಬುದರಿಂದ ಸಾಕಲ್ಯೇನ ಬ್ರಹ್ಮಾದಿಗಳು ತಿಳಿದಿಲ್ಲವೇ ಹೊರತು ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ತಿಳಿದಿರುವರೆಂದೂ ಯಾರೂ ಸಾಕಲ್ಯೇನ ತಿಳಿಯದಿದ್ದಲ್ಲಿ ಅಂತಹ ಸಕಲತೆಯು ಶ್ರೀಹರಿಯಲ್ಲಿ ಇದೆಯೆಂಬುದು ಸುಳ್ಳಲ್ಲವೇ ಎಂಬುದಕ್ಕೆ 'ಸರ್ವಜ್ಞಂ' ಎಂಬುದರಿಂದ ಶ್ರೀಹರಿಯ ಜ್ಞಾನವೇ ಪ್ರಮಾಣನೆಂದು ಹೇಳಿರುವರೆಂದೂ ಹೇಳಿರುವರು. ಇದೆಲ್ಲವನ್ನೂ 'ದೇಹಾಭಿಮಾನೀ ವೈಶ್ರವಣೋ ಮರುತಃ ಪ್ರಾಣಮಾನಿನಃ । ಇಂದ್ರಾದ್ಯಾ ಇಂದ್ರಿಯಾತ್ಮಾನೋ ರುದ್ರೋಽಂತಃಕರಣಾತ್ಮಕಃ । ನೈತೇ ವಿದಂತಿ ಸ್ವಾತ್ಮಾನಂ ಪರಂ ಚಾಪಿ ವಿಮೋಹಿತಾಃ ॥ ಜೀವಾಭಿಮಾನೀ ಬ್ರಹ್ಮಾ ತು ಸರ್ವಂ ವೇದ ಪ್ರಜಾಪತಿಃ । ಸೋಽಪಿ ವೇದ ಹರಿಂ ನೈವ ಸಮ್ಯಕ್ ಸ್ವೈವ ಹಿ ಸರ್ವವಿತ್ ॥' ಎಂಬ ಪ್ರಮಾಣವು ಸಿದ್ಧಪಡಿಸುವುದು. ಜಡಗಳಾದ ದೇಹಾದಿಗಳಿಗೆ ಜ್ಞಾನಪ್ರಸಕ್ತಿಯೇ

ದೇವರು ತಮ್ಮನ್ನೂ ತಮಗಿಂತ ಭಿನ್ನಪ್ರಪಂಚವನ್ನೂ ಅದರ ಗುಣಗಳನ್ನೂ ಅವುಗಳ ವಿಶೇಷಗಳನ್ನೂ ಕ್ರಿಯೆಗಳನ್ನೂ (ಶ್ರೀಹರಿಯ ಅನುಗ್ರಹದಿಂದ) ಅರಿತಿರುವರು ಹೀಗೆ ಎಲ್ಲವನ್ನೂ ತಿಳಿದಿದ್ದರೂ ಅವರು ಸಂಪೂರ್ಣವಾಗಿ ಸರ್ವೋತ್ತಮನನ್ನು ತಿಳಿದಿಲ್ಲ. ನಿರುಪಚರಿತ ಅನಂತನೂ ಸರ್ವಜ್ಞನೂ ಆದ ಶ್ರೀಹರಿಯೊಬ್ಬನೇ ತನ್ನನ್ನು ತಾನು ಸಂಪೂರ್ಣವಾಗಿ ಬಲ್ಲ. ಅಂತಹ ಶ್ರೀಹರಿಯನ್ನು ಸ್ತೋತ್ರಮಾಡು

ಇಲ್ಲವಾಗಿ 'ನವಿದುಃ' ಎಂದು ಹೇಳಿದ್ದೇ ಅಸಂಗತವೆಂಬ ಶಂಕೆಗೆ ಇಲ್ಲಿ ಆ ಪದಗಳಿಂದ ತದಭಿಮಾನಿಗಳೇ ವಿವಕ್ಷಿತವಾದ್ದರಿಂದ ಅಸಾಂಗತ್ಯವಿಲ್ಲವೆಂದೂ ಉತ್ತರ ಕೊಟ್ಟಂತಾಯಿತು. || ೨೫ ||

ಯದೋಪರಾಮೋ ಮನಸೋ ನಾಮರೂಪ-
ರೂಪಸ್ಯ ದೃಷ್ಟಿಸ್ಮೃತಿಸಂಪ್ರಮೋಷಾತ್ ।
ಯ ಈಯತೇ ಕೇವಲಯಾ ಸ್ವಸಂಸ್ಥಯಾ
ಹಂಸಾಯ ತಸ್ಮೈ ಶುಚಿಸದ್ಮನೇ ನಮಃ || ೨೬ ||

ಅನುಮಾನ ಪ್ರಮಾಣದಿಂದಲೂ ಶ್ರೀಹರಿಯ ಜ್ಞಾನವು ಸುಲಭವೆಂದು ಹೇಳುತ್ತಾರೆ. ಯದಾ=ಸ್ವಪ್ನ, ಸುಷುಪ್ತಿ ಮೊದಲಾದ ಅವಸ್ಥೆಗಳಲ್ಲಿ ನಾಮರೂಪ-ರೂಪಸ್ಯ ನಾಮ ಮತ್ತು ರೂಪಾತ್ಮಕ ಪ್ರಪಂಚದ ಜ್ಞಾನವನ್ನು ಉಂಟುಮಾಡುವ ಮನಸಃ=ಮನಸ್ಸಿನ ದೃಷ್ಟಿಸ್ಮೃತಿಸಂಪ್ರಮೋಷಾತ್=ಚಕ್ಷು ಮೊದಲಾದ ಇಂದ್ರಿಯಜನ್ಯ ಜ್ಞಾನ (ಅನುಭವ) ಮತ್ತು ಸ್ಮರಣವೆಂಬ ಮಾನಸಜ್ಞಾನಗಳ ಸಂಪೂರ್ಣವಾದ ಅಪಹಾರದಿಂದ (ಅಪಹಾರವಾಗಿ) ಉಪರಾಮಃ=ಯಾವ ಯಾವ ವ್ಯಾಪಾರವೂ ಇಲ್ಲದಿರುವ ಅವಸ್ಥೆಯೋ (ತದಾ) ಆಗ ಯಃ=ಯಾವ ಶ್ರೀಹರಿಯು ಕೇವಲಯಾ=ಜೀವನು ಅಸ್ವತಂತ್ರನಾದ್ದರಿಂದಲೂ ಸ್ವಪ್ನ, ಎಚ್ಚರಿಕೆ ಮೊದಲಾದುವು ಕಂಡುಬರುತ್ತಿರುವುದರಿಂದಲೂ ಜೀವನ ಇಚ್ಛೆಯಿಲ್ಲದೆ ಶುದ್ಧವಾದ ಸ್ವಸಂಸ್ಥಯಾ=ಸ್ವರೂಪಸತ್ತೆ (ಸ್ಥಿತಿ) ಯಿಂದ (ಪ್ರಬುದ್ಧೇನ ಜೀವೇನ)=ಎಚ್ಚರಗೊಂಡ ಜೀವನಿಂದ ಈಯತೇ=ತನಗಿಂತ ಭಿನ್ನನೂ ಸ್ವಪ್ನಾದಿ ಅವಸ್ಥೆಗಳಿಗೆ ನಿಯಾಮಕನೂ ಆದ ಶ್ರೀಹರಿಯು ಇರುವನೆಂದು ಊಹಿಸಲ್ಪಡುವನೋ (ಅನುಮಾನ ಪ್ರಮಾಣದಿಂದ ತಿಳಿಯಲ್ಪಡುವನೋ) ತಸ್ಮೈ=ಅಂತಹ ಶುಚಿಸದ್ಮನೇ=ವಾಯುದೇವರೇ ನಿವಾಸಸ್ಥಾನವಾಗಿಯುಳ್ಳ (ವಾಯ್ವಧಿಷ್ಠಾನಗತನಾದ) ಹಂಸಾಯ=(೧) ನಿತ್ಯನಿರ್ದೋಷ ಸ್ವರೂಪನಿಗೆ (೨) ಶ್ವಾಸರೂಪನಿಗೆ (೩) ನಿತ್ಯ ನಿರ್ದೋಷಸಾರರೂಪನಿಗೆ ನಮಃ=ನಮಸ್ಕಾರವು. ಜೀವನಿಗೆ ನಾಮ ರೂಪಾತ್ಮಕ ಪ್ರಪಂಚವಿಷಯದಲ್ಲಿ ಚಾಕ್ಷುಷ ಮಾನಸ ಜ್ಞಾನಗಳು ಇಲ್ಲದಂತೆ

ತ್ತೀನೆ. ಸ್ವಪ್ನ-ಸುಷುಪ್ತಿ ಅವಸ್ಥೆಗಳಲ್ಲಿ ಮನಸ್ಸು ಉಪರತವಾಗುವುದು. ನಾಮರೂಪಾತ್ಮಕ ಪ್ರಪಂಚದ ಜ್ಞಾನವನ್ನು ಉಂಟುಮಾಡುವ ಮನಸ್ಸಿನ ಅನುಭವ-ಸ್ಮರಣೆಯೆಂಬ ವ್ಯಾಪಾರಗಳು ಸಂಪೂರ್ಣವಾಗಿ ನಿಂತುಹೋಗುವುವು. ಅಸ್ವತಂತ್ರನಾದ ಜೀವನಿಗೆ ಸ್ವಪ್ನ ಎಚ್ಚರಿಕೆ ಮೊದಲಾದುವು ಕಂಡುಬರುತ್ತಿವೆ. ಜೀವನ ಇಚ್ಛೆಯಿಲ್ಲದೆ ನಡೆಯುತ್ತಿರುವ ಈ ಅವಸ್ಥೆಗಳು ಶ್ರೀಹರಿಯ ಸ್ವರೂಪಸ್ಥಿತಿಯಿಂದಲೇ ಆಗುತ್ತಿವೆಯೆಂದು ಎಚ್ಚರಗೊಂಡ ಜೀವನು ಊಹಿಸಿಯೇ ಊಹಿಸುವನು. ವಾಯ್ವಂತಃ ಇರುವವನೂ ನಿತ್ಯ ನಿರ್ದೋಷ ಸ್ವರೂಪನೂ, ಶ್ವಾಸರೂಪನೂ,

ಮಾಡುವುದರಿಂದ ಮನಸ್ಸಿಗೆ ಉಪರಮವೋ ಎಂದಾದರೂ ಅರ್ಥ. ಅಸ್ವತಂತ್ರನಾದ ಜೀವನ ಇಚ್ಛೆಯಿಲ್ಲದಿದ್ದರೂ ಮನೋವ್ಯಾಪಾರೋಪರಮವಾಗಿ ಸುಷುಪ್ತಿ, ಸ್ವಪ್ನ, ಜಾಗ್ರತಾದಿ ಅವಸ್ಥೆಗಳು ಕಂಡುಬರುತ್ತಿರುವುದರಿಂದ ಈ ಅವಸ್ಥೆಗಳಿಗೆ ನಿಯಾಮಕನಾದ ಜೀವಭಿನ್ನನಾದ ಶ್ರೀಹರಿಯೊಬ್ಬನಿರುವನೆಂದು ಅರ್ಥಾಪತ್ತಿ (ಅನುಮಾನ)ದಿಂದ ತಿಳಿದುಬರುವುದೆಂದು ತಾತ್ಪರ್ಯ. 'ಅತಃ ಪ್ರಬೋಧೋ ಅಸ್ಮಾತ್', 'ಯದೋಪರಾಮೋ ಮನಸಃ ಸ್ವಪ್ನ ಸುಪ್ತಿ ಲಯಾದಿಷು | ತದಾऽವಸ್ಥಾ ಪ್ರಬೋಧಾದಿಕಾರಣತ್ವೇನ ಕೇಶವಃ | ಅಸ್ವಾತಂತ್ರ್ಯಾತ್ತು ಜೀವಸ್ಯ ವಿದ್ಯತೇऽನ್ಯೋ ನಿಯಾಮಕಃ | ಜೀವಪ್ರವೃತ್ತ್ಯಾನುಕೂಲ್ಯಾತ್ ಜ್ಞಾಯತೇऽಸೌ ಸದಾ ವಿಭುಃ ||' ಎಂಬ ಪ್ರಮಾಣಗಳು ಹೇತು ಸಾಧ್ಯಗಳಿಗೆ ವ್ಯಾಪ್ತಿಯನ್ನು ಸ್ಥಿರಪಡಿಸುವುದರಿಂದ ಹೇತುವು ವ್ಯಭಿಚಾರಿ(ದುಷ್ಟ)ವಲ್ಲ. 'ಶುಚಿಸದ್ಮ' ಎಂಬುದರಿಂದ ವಿಶಿಷ್ಟವಾದ(ಉತ್ತಮವಾದ)ಅಧಿಷ್ಠಾನದಲ್ಲಿ ಶ್ರೀಹರಿಯನ್ನು ಉಪಾಸಿಸಬೇಕೆಂದು ಸೂಚಿಸಿರುವರು. ಜೀವಭಿನ್ನನೆಂದು ಹೇಳಿದ್ದರಿಂದ 'ದೋಷಿಯೆಂದು ಅನುಭವವಿಷಯನಾದ ಜೀವನಿಗಿಂತ ಭಿನ್ನನಲ್ಲದ ಶ್ರೀಹರಿಗೆ ಬ್ರಹ್ಮಾದಿ ದೇವತೆಗಳಿಂದಲೂ ಸಾಕಲ್ಯೇನ ತಿಳಿಯಲಾಗದ ಮಹಿಮೆಯೆಲ್ಲಿ ಬಂತು?' ಎಂಬ ಶಂಕೆಯನ್ನೂ ಪರಿಹರಿಸಿದಂತಾಯಿತು. || ೨೬ ||

ಮನೀಷಿಣೋऽಂತರ್ಹೃದಿ ಸನ್ನಿವೇಶಿತಂ
ಸ್ವಶಕ್ತಿಭಿರ್ನವಭಿಶ್ಚ ತ್ರಿವೃದ್ಭಿಃ |
ವಹ್ನಿಂ ಯಥಾ ದಾರುಣಿ ಪಾಂಚದಶ್ಯಂ
ಮನೀಷಯಾ ನಿಷ್ಕೃಷಂತೀಹ ಗೂಢಮ್ || ೨೭ ||

ಜ್ಞಾನಿಪ್ರತ್ಯಕ್ಷವೂ ಈ ವಿಷಯದಲ್ಲಿ ಇದೆಯಾದ್ದರಿಂದ ಮೇಲಿನ ಅನುಮಾನವು ಮತ್ತೂ ಬಲಿಷ್ಠವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಇಹ=ಜೀವರಾಶಿಯಲ್ಲಿ ಮನೀಷಿಣಃ=ಮನಸ್ಸನ್ನು ನಿಯಮನ ಮಾಡುವ ಸಾಮರ್ಥ್ಯವುಳ್ಳ ಧೀರರು ತ್ರಿವೃದ್ಭಿಃ=ಇಚ್ಛಾ, ಜ್ಞಾನ ಮತ್ತು ಕ್ರಿಯೆಯೆಂದು ಮೂರು ಬಗೆಯಾಗಿರುವ ನವಭಿಃ ವಿಮಲಾ, ಉತ್ಕರ್ಷಿಣೀ, ಜ್ಞಾನಕ್ರಿಯಾ, ಇತ್ಯಾದಿ ಒಂಬತ್ತು ಸಂಖ್ಯೆಯ ಸ್ವಶಕ್ತಿಭಿಃ=ಸ್ವರೂಪಭೂತಗಳಾದ ಶಕ್ತಿಗಳಿಂದ ಲಕ್ಷಿತನಾದ ಪಾಂಚದಶ್ಯಂ=

ಸಾರನೂ ಆದ ಅಂತಹ ಶ್ರೀಹರಿಗೆ ನಮಸ್ಕಾರ. ಈ ಜೀವರಾಶಿಗಳಲ್ಲಿ ಮನಸ್ಸನ್ನು ಗೆದ್ದಿರುವ ಧೀರರು ಜೀವರ ದೇಹಗಳಲ್ಲಿ ಗೂಢನಾಗಿರುವ ಶ್ರೀಹರಿಯನ್ನು ಅರಣಿಯಲ್ಲಿ ಗೂಢವಾಗಿರುವ ಬೆಂಕಿಯನ್ನು ಅದನ್ನು ಬಲ್ಲವರು ಕಡೆದು ಕಾಣುವಂತೆ ಕಾಣುವರು. ಆ ಶ್ರೀಹರಿಯು ಇಚ್ಛಾ-ಜ್ಞಾನ-ಕ್ರಿಯೆಗಳೆಂದು ಮೂರು ಬಗೆಯಾದ ವಿಮಲಾ ಉತ್ಕರ್ಷಿಣೀ ಇತ್ಯಾದಿ ಒಂಭತ್ತು ಸ್ವರೂಪ ಶಕ್ತಿಗಳಿಂದ ಲಕ್ಷಿತನಾಗಿರುವನು. ದಶೇಂದ್ರಿಯಗಳು, ಮನಸ್ಸು, ಬುದ್ಧಿ, ಪ್ರಾಣ ಮತ್ತು **ಪ್ರಧಾನಗಳಿಗಿಂತ**

(೧) ಹತ್ತು ಇಂದ್ರಿಯಗಳು, ಮನಸ್ಸು, ಬುದ್ಧಿ, ಪ್ರಾಣ ಮತ್ತು ಪ್ರಧಾನಗಳೆಂಬ ಹದಿನಾಲ್ಕು ತತ್ತ್ವಗಳಿಗಿಂತ ಉತ್ತಮನಾಗಿ ಹದಿನೈದನೆಯವನಾಗಿರುವ (೨) ದಶೇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಮತ್ತು ಚೇತನಗಳೆಂಬ ಹದಿನೈದರಲ್ಲಿ ಅವುಗಳಿಗೆ ಪ್ರೇರಕನಾಗಿ ಇದ್ದು ತತ್ಸಂಬಂಧಿಯಾದ್ದರಿಂದ ಪಾಂಚದಶ್ಯನೆನಿಸಿದ ಹೃದಿ=ಹೃದಯದಲ್ಲಿ ಅಂತಃ=ಒಳಗೆ ಸನ್ನಿವೇಶಿತಂ=ದುಃಖಾದಿ ಸಂಬಂಧವಿಲ್ಲದೆ ನೆಲಸಿರುವ ಆದರೆ ಇಹ=ಜೀವರಾಶಿಗಳ ಶರೀರದಲ್ಲಿ ಗೂಢಂ=ಅನುಗ್ರಹವಿಲ್ಲದೆ ತಿಳಿಯಲಾಗದವನಾಗಿ ಅಂತರ್ಹಿತನಾಗಿರುವ ಶ್ರೀಹರಿಯನ್ನು ದಾರುಣಿ=ಅರಣಿಯಲ್ಲಿ ಸಿಗೂಢವಾಗಿರುವ ವಹ್ನಿಂ=ಬೆಂಕಿಯನ್ನು ಯಥಾ=ಅದನ್ನು ತಿಳಿದವರು ಮಥನಮಾಡಿ ಕಾಣುವಂತೆ ಮನೀಷಯಾ=ತಮ್ಮ ಬುದ್ಧಿಯಿಂದ ನಿಷ್ಣಷಂತಿ=ವಿಚಾರಮಾಡಿ ನಿಷ್ಕರ್ಷೆಯಿಂದ ತಿಳಿಯುವರು. 'ಇಚ್ಛಾದಿತ್ರಯೇಣ ತ್ರಿವಿಧಾ ವಿಮಲಾದ್ಯಾಸ್ತು ಶಕ್ತಯಃ| ವಿಷ್ಣೋಃ ಸ್ವರೂಪಭೂತಾಃ' ಎಂಬ ಪ್ರಮಾಣವು ಈ ಅರ್ಥವನ್ನು ಸ್ಪಷ್ಟಪಡಿಸುವುದು. ನವಭಿಶ್ಚ ಎಂಬಲ್ಲಿನ ಚಕಾರವು ಈ ಸ್ವರೂಪಶಕ್ತಿಗಳಿಗಿಂತ ಭಿನ್ನಗಳಾದ ಮತ್ತು ಅವುಗಳಿಂದ ಹುಟ್ಟಿದ ಬೇರೆ ಶಕ್ತಿಗಳೂ ಇವೆಯೆಂಬುದನ್ನು ಸೂಚಿಸುವುದು. 'ಯಾಃ ತಾಭ್ಯಃ ತನ್ನಾಮಿಕಾಃ ಪರಾಃ | ಜಾಯಂತೇ ತತ್ಪ್ರಸಾದೇನ. ತಾಶ್ಚ ಸೀತೇ ಪ್ರಪೂಜಯೇತ್ ||' ಎಂಬ ಮುಂದುವರಿದ ಆ ಪ್ರಮಾಣವೇ ಇದನ್ನೂ ಸ್ಪಷ್ಟಪಡಿಸುವುದು. ವಿಷ್ಣುವಿಗಿಂತ ಭಿನ್ನರಾದ ಆ ಶಕ್ತಿಸ್ವರೂಪರಾದ ಜೀವರು ಅವನ ಅನುಗ್ರಹದಿಂದ ಅವನ ಸಮೀಪದಲ್ಲಿ ಇರುವರೆಂದು ತಿಳಿಯಬೇಕು. ಹೀಗೆ ಪ್ರಮಾಣ ಹೇಳಿದ್ದರಿಂದ 'ನವಭಿಃ=ನವದ್ವಾರಾಭಿವ್ಯಕ್ತಗಳಾದ ತ್ರಿವೃದ್ಭಿಃ=ಗುಣತ್ರಯಾತ್ಮಕಗಳಾದ' ಎಂಬ ವ್ಯಾಖ್ಯಾನವು ಸರಿಯಲ್ಲವೆಂದಾಯಿತು. 'ಪಾಂಚದಶ್ಯ' ಎಂಬುದಕ್ಕೆ ಮೇಲೆ ಮಾಡಿದ ಅರ್ಥವು ಸರಿಯೆಂಬುದಕ್ಕೆ 'ದಶೇಂದ್ರಿಯಾಣಿ ಚ ಮನೋಬುದ್ಧಿಪ್ರಾಣಪ್ರಧಾನಕಾಃ| ಚದುರ್ದಶೈಷಾಂ ಪರಮಃ ಪಾಂಚದಶ್ಯೋ ಹರಿಃ ಸ್ಮೃತಃ | ಬುದ್ಧೇರ್ಭೇದೇನ ಚೈತೇಷು ಪಾಂಚದಶ್ಯೋಥ ಸಂಸ್ಥಿತೇಃ ||' ಎಂಬ ಪ್ರಮಾಣವು ಆಧಾರವಾಗಿದೆ. ಆದ್ದರಿಂದ 'ಪಂಚದಶೀ ಎಂಬ ಸಂಖ್ಯೆಯ ತಿಥಿಯಲ್ಲಿ ಇರುವುದರಿಂದ ಪಾಂಚದಶ್ಯ'ನೆಂದು ಮಾಡುವ ಅರ್ಥವು ಸರಿಯಲ್ಲವೆಂದಾಯಿತು. ಈ ಶ್ಲೋಕದಿಂದ ಶ್ರೀಹರಿಯು ಜೀವಭಿನ್ನನೆಂಬುದರಲ್ಲಿ ವಿದ್ವತ್ಪ್ರತ್ಯಕ್ಷವೂ ಪ್ರಮಾಣವೆಂದು ಹೇಳಿದಂತಾಯಿತು. || ೨೭ ||

ಉತ್ತಮನಾಗಿ ದಶೇಂದ್ರಿಯಗಳಿಗೂ ಬುದ್ಧ್ಯಾದಿ ಪಂಚಕಕ್ಕೂ ಪ್ರೇರಕನಾಗಿ 'ಹದಿನೈದನೆ'ಯವನೆನಿಸಿ ಕರೆಯಲ್ಪಡುವವನು. ಜೀವರ ಹೃದಯದಲ್ಲಿ ಒಳಗೆ ದುಃಖಾದಿ ಸಂಬಂಧವಿಲ್ಲದೆ ನೆಲಸಿರುವನು. ಇಂತಹವನನ್ನು ಧೀರರು ವಿಚಾರಮಾಡಿ ನಿಷ್ಕರ್ಷೆಯಿಂದ ತಿಳಿಯುವರು. ಆ ಶ್ರೀಹರಿಯು ಅಪರಿಮಿತವೂ ಅಪ್ರಾಕೃತವೂ

ಸ ವೈ ಮಮಾಶೇಷ ವಿಶೇಷಮಾಯಾ-
ನಿಷೇಧನಿರ್ವಾಣಸುಖಾನುಭೂತಿಃ ।
ಸ ಸರ್ವನಾಮಾ ಸ ಚ ವಿಶ್ವರೂಪಃ
ಪ್ರಸೀದತಾಮನಿರುಕ್ತಾತ್ಮಶಕ್ತಿಃ ॥ ೨೮ ॥

ಈ ಶ್ಲೋಕದಲ್ಲಿ ಸಃ ಎಂದಿರುವುದರಿಂದ ಹಿಂದಿನ ಶ್ಲೋಕದಲ್ಲಿ 'ಯಂ' ಎಂದು ಸೇರಿಸಿಕೊಳ್ಳಬೇಕು. ಯಾವನನ್ನು ಮನೀಷಿಗಳು ಮಥನಮಾಡಿ ತಿಳಿಯುವರೋ ಆ ಶ್ರೀಹರಿಯು ಪ್ರಸನ್ನನಾಗಲಿ ಎಂದನ್ವಯ. ಅಶೇಷ ವಿಶೇಷ .... ಸುಖಾನುಭೂತಿಃ — ಎಲ್ಲ ರೀತಿಯ ಇಷ್ಟ್ಯೇ ಎಂಬ ಅವಧಿ (ವಿಶೇಷ) ಮತ್ತು ಪ್ರಕೃತಿಯ (ಮಾಯಾ) ರಾಹಿತ್ಯ(ನಿಷೇಧ)ವುಳ್ಳ ಅಶರೀರ(ನಿರ್ವಾಣ)ದಿಂದ ಅನುಭವಿಸಲು ಯೋಗ್ಯವಾದ ಸುಖದ ಅನುಭವವುಳ್ಳ ಎಂದರೆ ಅಪರಿಮಿತ ಅಪ್ರಾಕೃತ ಶರೀರದಿಂದ ಅನುಭವಿಸಲರ್ಹವಾದ ಆನಂದಾನುಭವರೂಪನಾದ ಸಃ— ಆ ಶ್ರೀಹರಿಯು ಸರ್ವನಾಮಾ— ಪ್ರಜಾಪತಿ ಮೊದಲಾದ ಎಲ್ಲ ಶಬ್ದಗಳಿಂದ ಮುಖ್ಯವಾಚ್ಯನಾದ ಸಃ— ಆ ಶ್ರೀಹರಿಯು ವಿಶ್ವರೂಪಃ ಚ ಜಗತ್ತನ್ನೇ ತನ್ನ ಪ್ರತಿಮಾರೂಪವಾಗಿ ಹೊಂದಿರುವ (ವಿಶ್ವರೂಪದಂತೆ ರೂಪವುಳ್ಳ) ಅನಿರುಕ್ತಾತ್ಮಶಕ್ತಿಃ — (೧) ವಿಚಿತ್ರವಾದ ಆತ್ಮಶಕ್ತಿಯುಳ್ಳ, (೨) ಸಮಸ್ತವಾಗಿ ನಿರ್ವಚನ ಮಾಡಲಾಗದ ತನ್ನ ಜ್ಞಾನಶಕ್ತಿಯುಳ್ಳ ಸಃ— ಆ ಶ್ರೀಹರಿಯು ಮಮ ನನಗೆ ಪ್ರಸೀದತಾಂ ವೈ— ಪ್ರಸನ್ನನಾಗಲಿ. ವಿ.ಅ.—ಮಿಕ್ಕ ಎಲ್ಲರನ್ನೂ ಬಿಟ್ಟು ಈ ಶ್ರೀಹರಿಯ ಪ್ರಸಾದವನ್ನೇ ಏಕೆ ಪ್ರಾರ್ಥಿಸಬೇಕು? ಎಂದರೆ 'ಪ್ರಜಾಪತೇ ನ ತ್ವದೇತಾನ್ಯನ್ಯೋ ವಿಶ್ವಾ ಜಾತಾನಿ ಪರಿತಾ ಬಭೂವ' ಎಂಬ ಶ್ರುತಿಯಂತೆ ಮಿಕ್ಕ ಎಲ್ಲರಿಗಿಂತ ಅತಿಶಯಿತವಾದ ಮಾಹಾತ್ಮ್ಯಯುಳ್ಳವನಿವನು ಎಂದು ತಿಳಿಸಿರುವರು. 'ಏಷ ಹ್ಯೇವ ಶತಾನಂದಃ' ಎಂಬ ಶ್ರುತಿಯಂತೆ ಬ್ರಹ್ಮಾದಿಗಳ ಆನಂದಕ್ಕೆ ಅವಧಿಯುಂಟು. ಆದರೆ ಶ್ರೀಹರಿಯು ಅಪರಿಮಿತ ಆನಂದಾನುಭವರೂಪನು. 'ಏತಸ್ಯಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ' 'ನ ತೇ ವಿಷ್ಣೋ ಜಾಯಮಾನೋ ನ ಜಾತಃ ದೇವ ಮಹಿಮ್ನಃ ಪರಮಂತಮಾಪ' ಎಂಬ ಶ್ರುತಿಗಳು ಅವನ ಅತಿಶಯ ಮಹಿಮೆಯನ್ನು ತಿಳಿಸುವುವು. 'ಅಪರಿಮಿತ ಅಪ್ರಾಕೃತಶರೀರಭೋಗ್ಯ ಆನಂದಸ್ವರೂಪನು ನಾನೆ'ಂದು ಶ್ರೀಹರಿಯು ಸರ್ವದಾ ತಿಳಿದಿರುವುದರಿಂದ ಅನುಭವ ಸ್ವರೂಪನವನು. 'ಇಯತ್ತಾ ತು ವಿಶೇಷಃ ಸ್ಯಾತ್ ಆನಂದಾದೌ ತದುಜ್ಝಿತೇಃ । ಸರ್ವೈರ್ವಿಶೇಷೈ ರಹಿತಃ ಉಚ್ಯತೇ ಹರಿರವ್ಯಯಃ । ಅಪ್ರಾಕೃತ ಸ್ವರೂಪತ್ವಾತ್ ನಿರ್ಮಾಯಶ್ಚೇತಿ ಕಥ್ಯತೇ ॥' ಎಂಬ ಪ್ರಮಾಣದಂತೆ ಮೇಲಿನ ಅರ್ಥವೇ ಸರಿಯಾದುದು. 'ಸರ್ವನಾಮಾ' ಎಂಬುದರಿಂದ 'ಪ್ರಜಾಪತೇ' ಇತ್ಯಾದಿ ಶ್ರುತಿಗಳಲ್ಲಿನ ಆಯಾಯಾ

ಆದ ಶರೀರದಿಂದ ಅನುಭವಿಸಲಾಗುವ ಆನಂದವುಳ್ಳವನು. ಎಲ್ಲ ಶಬ್ದಗಳ ಮುಖ್ಯವಾಚ್ಯನು. ವಿಶ್ವದ ರೂಪದಂತೆ ರೂಪವುಳ್ಳವನು. ಅವನ ವಿಚಿತ್ರಶಕ್ತಿಯನ್ನು-

ಶಬ್ದಗಳ ಮುಖ್ಯಾರ್ಥವೂ ಶ್ರೀಹರಿಯೇ ಎಂದೂ ಆ ಶಬ್ದಗಳು ಶ್ರೀಹರಿಯಲ್ಲಿ ಸಾವಕಾಶಗಳೆಂದೂ ತಿಳಿಸಿರುವರು. 'ಯೋ ದೇವಾನಾಂ ನಾಮಧಾ ಏಕ ಏವ' ಎಂಬ ಶ್ರುತಿಯೂ ಇದನ್ನೇ ತಿಳಿಸುವುದು. 'ವಿಶ್ವರೂಪ' ಎಂಬುದರಿಂದ ರೂಪವಿಲ್ಲದವನಿಗೆ ಸರ್ವನಾಮತ್ವವು ಹೇಗೆ? ಎಂಬ ಶಂಕೆಯನ್ನು ಪರಿಹರಿಸಿರುವರು. 'ತದ್ರೂಪಸದೃಶಂ ರೂಪಂ ಯತಃ ಸರ್ವಸ್ಯ ಸರ್ವದಾ| ಸರ್ವರೂಪೋ ಯತಃ ಶಬ್ದಮುಖ್ಯಾರ್ಥಃ ಸರ್ವನಾಮಕಃ ||' ಎಂಬ ಸ್ಮೃತಿಯು ಸಮಾಖ್ಯೆಯು ವಿಶ್ವರೂಪ ಶಬ್ದಕ್ಕೆ ಮೇಲೆ ಮಾಡಿರುವ ಅರ್ಥವೇ ಸರಿಯೆಂದು ತಿಳಿಸುವುದು. ಮೂಲದಲ್ಲಿನ 'ಚ' ಶಬ್ದವು ಈ ಸ್ಮೃತಿಯನ್ನೇ ಸೂಚಿಸುವುದು ಸಃ ಸಃ ಎಂದು ಎರಡು ತಚ್ಛಬ್ದಗಳು ಆಯಾಯಾ ಶ್ರುತಿಗಳು ಹೇಳಿದ ಸರ್ವನಾಮತ್ವ, ಸರ್ವರೂಪತ್ವಗಳನ್ನು ತಿಳಿಸುವುವು. ಒಬ್ಬನಿಗೆ ಸರ್ವನಾಮತೆಯು ಎಲ್ಲಿಯೂ ಕಂಡಿಲ್ಲವಾದ್ದರಿಂದ ಹೇಗೆ ಕೂಡುವುದು? ಶ್ರುತಿಯಲ್ಲಿ ಹೇಳಿದೆಯಾದ್ದರಿಂದ ಎಂಬ ಉತ್ತರವೂ ಸೂಕ್ತವಲ್ಲ. ಶ್ರುತಿಗಳು ಅನಂತವಾದ್ದರಿಂದ ಯಾವುದಾದರೊಂದರಲ್ಲಿ ಇದಕ್ಕೆ ವಿರುದ್ಧವಾಗಿ ಹೇಳಿದ್ದರೂ ಹೇಳಿರಬಹುದು. ಎಂಬ ಶಂಕೆಗೆ ಉತ್ತರವನ್ನು 'ಅನಿರುಕ್ತಾತ್ಮಶಕ್ತಿ' ಎಂಬುದರಿಂದ ಕೊಟ್ಟಿರುವರು. 'ವಿಚಿತ್ರ ಶಕ್ತಿಃ ಪುರುಷಃ ಪುರಾಣಃ' ಎಂಬ ಶ್ರುತಿಯು ಪರಮಾತ್ಮನ ಶಕ್ತಿಯು ವಿಚಿತ್ರ (ಆಶ್ಚರ್ಯ) ಕರವಾದುದೆಂದು ತಿಳಿಸುವುದು. 'ಗತಿಸಾಮಾನ್ಯಾತ್' ಎಂಬ ಸೂತ್ರದಲ್ಲಿ ಕೃಷ್ಣದ್ವೈಪಾಯನರು ಎಲ್ಲ ಶ್ರುತಿಗಳೂ ಒಂದೇವಿಷಯಕವಾದ ಜ್ಞಾನವನ್ನು ಹುಟ್ಟಿಸುವುವೆಂದು ನಿರ್ಣಯಿಸಿರುವುದರಿಂದ ವಿರುದ್ಧವಾಗಿ ಹೇಳಬಹುದೆಂಬ ಶಂಕೆಗೆ ಅವಕಾಶವಿಲ್ಲ. ಶ್ರೀಹರಿಗೆ ಎಲ್ಲ ಹೆಸರುಗಳೂ ಇರುವುದಾದರೆ 'ಅವಚನೇನೈವ ಪ್ರೋವಾಚ' ಎಂಬ ಶ್ರುತಿಯ ಗತಿಯೇನು? ಎನ್ನಬಹುದು. ಅದಕ್ಕೆ ಉತ್ತರವಾಗಿಯೇ ಸಾಕಲ್ಯೇನ ನಿರ್ವಚನ ಮಾಡಲಾಗದ ತನ್ನ ಜ್ಞಾನಶಕ್ತಿಯುಳ್ಳವನೆಂದು 'ಅನಿರುಕ್ತಾತ್ಮಶಕ್ತಿಃ' ಎಂಬ ವಿಶೇಷಣವನ್ನು ಕೊಟ್ಟಿರುವುದು. ಇದರಿಂದ 'ಅವಚನೇನ' ಎಂಬ ಮೇಲಿನ ಶ್ರುತಿಯು ಗುಣವನ್ನು ಹೇಳಿತೇ ಹೊರತು ದೋಷವನ್ನು ಹೇಳಲಿಲ್ಲವಾಗಿಯೂ ಇದೇ ಅರ್ಥವನ್ನೇ 'ಅಲೌಕಿಕತ್ವಾನ್ನೋ ವಿಷ್ಣುರ್ನಿರುಕ್ತೋ ಶೋ ನಿರೂಪಿತಃ | ತಥಾಪಿ ವೇದೇಷೂಕ್ತತ್ವಾದುಕ್ತೋ ರೂಪೀ ಸ ಏವ ಚ'|| [ಅಲೌಕಿಕನಾದ್ದರಿಂದ ಶ್ರೀಹರಿಯು ನಿರುಕ್ತನೆಂದು ಹೇಳಲ್ಪಟ್ಟಿಲ್ಲ. ಆದರೂ ವೇದಗಳಲ್ಲಿ ಹೇಳಿರುವುದರಿಂದ ಉಕ್ತನೂ (ನಿರುಕ್ತನೂ) ರೂಪಿಯೂ ಆಗಿರುವನು] ಎಂಬ ಪ್ರಮಾಣವು ಹೇಳುವುದಾದ್ದರಿಂದಲೂ 'ಅನಿರ್ವಾಚ್ಯ ಆತ್ಮಶಕ್ತಿ' ಎಂಬ ಅರ್ಥವು ಅಸಂಗತವೂ ಪ್ರಮಾಣ ವಿರುದ್ಧವೂ ಆಗಿದೆಯೆಂದು ತಿಳಿಯಬೇಕು. ಈ ಕಾರಣ, ಮೇಲೆ ಹೇಳಿದ ಅರ್ಥವೇ ಸಂಗತವೂ ಪ್ರಮಾಣಸಮ್ಮತವೂ ಆದುದೆಂದು ಸ್ಪಷ್ಟವು. || ೩೪ ||

ಸ್ವರೂಪವಾಗಿರುವುದನ್ನು-ಸಂಪೂರ್ಣವಾಗಿ ಯಾರೂ ನಿರ್ವಚನ ಮಾಡಲಾರರು. ಆ ಶ್ರೀಹರಿಯು ನನಗೆ ಪ್ರಸನ್ನನಾಗಲಿ.

ಯದ್ಯನ್ನಿರುಕ್ತಂ ವಚಸಾ ನಿರೂಪಿತಂ
ಧಿಯಾಽಕ್ಷಭಿರ್ವಾ ಮನಸೋತ ಯಸ್ಯ ।
ಮಾ ಭೂತ್ಸ್ವರೂಪಂ ಗುಣರೂಪಬೃಂಹಿತಂ
ಸ ವೈ ಗುಣಾಪಾಯನಿಸರ್ಗಲಕ್ಷಣಃ ॥ ೨೯ ॥

'ಸ ಚ ವಿಶ್ವರೂಪಃ' ಎಂದು ಹೇಳಿದ ಬಿಂಬ ಪ್ರತಿಬಿಂಬ (ಪ್ರತಿಮಾ) ಭಾವವನ್ನು ಸ್ಪಷ್ಟಪಡಿಸುತ್ತಾರೆ. ಯದ್ಯತ್= ಜಗತ್ತಿನಲ್ಲಿರುವ ಯಾವ ಯಾವುದು ವಚಸಾ='ಘಟ' ಮೊದಲಾದ ಮಾತುಗಳಿಂದ ನಿರುಕ್ತಂ - ಪ್ರತಿಪಾದಿತವೋ ಉತ= ಮತ್ತು ಧಿಯಾ ಬುದ್ಧಿಯಿಂದಾಗಲಿ ಅಕ್ಷಭಿಃ - ಇಂದ್ರಿಯಗಳಿಂದಲಾಗಲಿ ಮನಸ್ಸಿನಿಂದಾಗಲಿ ನಿರೂಪಿತಂ - ತಿಳಿಯಲ್ಪಟ್ಟಿದೆಯೋ ಗುಣರೂಪಬೃಂಹಿತಂ = ಸತ್ವ ಮೊದಲಾದ ಗುಣಸಮೂಹದಿಂದ ಅಭಿವೃದ್ಧವಾದ ತತ್ತತ್ = ಅದೆಲ್ಲವೂ ಯಸ್ಯ= ಯಾವ ಶ್ರೀಹರಿಯ ಸ್ವರೂಪಂ = ನಿಜರೂಪವು ಮಾ ಭೂತ್ = ಅಲ್ಲವೇ ಅಲ್ಲವು. ಪ್ರತಿಬಿಂಬ (ಪ್ರತಿಮಾ) ರೂಪವೆಂದರ್ಥ. ಸಃ - ಶ್ರೀಹರಿಯು ಗುಣಾಪಾಯ= ಸತ್ವಾದಿಗುಣರಾಹಿತ್ಯವೇ ನಿಸರ್ಗಲಕ್ಷಣಃ = ಸ್ವಾಭಾವಿಕ ಲಕ್ಷಣವಾಗಿ ಉಳ್ಳವನು. ವೈ - ಹೀಗೆಂದು 'ಕೇವಲೋ ನಿರ್ಗುಣಶ್ಚ' ಎಂಬ ಶ್ರುತ್ಯಾದಿಗಳಲ್ಲಿ ಪ್ರಸಿದ್ಧನು. 'ಗುಣರೂಪ ಬೃಂಹಿತಂ' 'ಗುಣಾಪಾಯ ನಿಸರ್ಗ ಲಕ್ಷಣಃ' ಎಂದು ವಿರುದ್ಧ ಧರ್ಮಗಳನ್ನು ಹೇಳಿದ್ದರಿಂದ ಜಗದ್ರೂಪವು ತ್ರಿಗುಣಾತ್ಮಕವೆಂದೂ ಭಗವದ್ರೂಪವು ಅಪ್ರಾಕೃತವೆಂದೂ ನಿರ್ಣಯಿಸಿ ಪರಸ್ಪರ ಭಿನ್ನಗಳೆಂದು ತಿಳಿಸಿರುವರು. 'ಮಾ ಭೂತ್' ಎಂದು ಹೇಳಿದ್ದರಿಂದ ಜಗತ್ತನ್ನು ಸಾಕ್ಷಾದ್ಭಗವದ್ರೂಪವೆಂದು ತಿಳಿಯಬೇಡವೆಂದು ಸೂಚಿಸಿರುವರು. ॥ ೨೯ ॥

ಯಸ್ಮಿನ್ ಯತೋ ಯೇನ ಚ ಯಸ್ಯ ಯಸ್ಮೈ
ಯಂ ಯೋ ಯಥಾ ಕುರುತೇ ಕಾರ್ಯತೇ ವಾ ।
ಪರಾವರೇಷಾಂ ಪರಮಂ ಪ್ರಾಕ್ಪ್ರಸಿದ್ಧಂ
ತದ್ಬ್ರಹ್ಮ ತದ್ಧೇತುರನನ್ಯದೇಕಮ್ ॥ ೩೦ ॥

ಕಾಲಕ್ಕೆ ಕಾರಣನೆಂಬುದೂ ಬ್ರಹ್ಮನ (ಶ್ರೀಹರಿಯ) ಸ್ವರೂಪ ಲಕ್ಷಣವೆಂದು ಹೇಳುತ್ತಾರೆ. ಯಸ್ಮಿನ್ = ಯಾವ ಅಧಿಕರಣವಾದ ಕಾಲದಲ್ಲಿ ಇದು ಇದೆಯೋ,

---

ಘಟ ಮೊದಲಾದ ಶಬ್ದಗಳಿಂದ ಪ್ರತಿಪಾದಿತವಾದ ಪದಾರ್ಥಗಳೂ ಬುದ್ಧಿಯಿಂದ, ಇಂದ್ರಿಯಗಳಿಂದ, ಮನಸ್ಸಿನಿಂದ ತಿಳಿಯಲ್ಪಟ್ಟ ಪದಾರ್ಥಗಳೂ ಆದ ಪ್ರಾಕೃತಗುಣಗಳಿಂದ ಅಭಿವೃದ್ಧವಾದ ಪದಾರ್ಥಗಳಾವುವೂ ಶ್ರೀಹರಿಯ ನಿಜರೂಪಗಳಲ್ಲ. ಪ್ರತಿಮಾರೂಪಗಳು ಮಾತ್ರ, ಸತ್ವಾದಿ ಪ್ರಾಕೃತಗುಣರಾಹಿತ್ಯವೇ ಶ್ರೀಹರಿಯ ಸ್ವಾಭಾವಿಕ ಲಕ್ಷಣವು. ಇದು ಶ್ರುತಿಪ್ರಸಿದ್ಧವು. ಅಧಿಕರಣವಾದ, ಅಪಾದಾನವಾದ, ಕಾರಣವಾದ, ಸಂಬಂಧವಾದ, ಸಂಪ್ರದಾನವಾದ, ಕರ್ಮವಾದ,

ಯತಃ= ಯಾವ ಅಪಾದಾನವಾದ ಕಾಲದಿಂದ ಇದು ಆಯಿತೋ ಯೇನ= ಯಾವ ಕಾರಣವಾದ ಕಾಲದಿಂದ ಹುಟ್ಟಿತೋ ಯಸ್ಯ = ಯಾವ ಸಂಬಂಧವಾದ ಕಾಲಕ್ಕೆ ಇದು ಅಧೀನವಾಗಿದೆಯೋ ಯಸ್ಮೈ=ಯಾವ ಸಂಪ್ರದಾನವಾದ ಕಾಲಕ್ಕಾಗಿ ಇದು ಇರುವುದೋ (ಯೋಗ್ಯವೋ), ಯಂ=ಯಾವ ಕರ್ಮವಾದ ಕಾಲವನ್ನು ಪ್ರತೀಕ್ಷಿಸುವುದೋ ಯಃ=ಯಾವ ಕರ್ತೃವಾದ ಕಾಲವು ಪ್ರೇರಿಸುವುದೋ ಯಥಾ=ಯಾವ ರೀತಿಯಲ್ಲಿ ಪುರುಷಃ=ಜೀವನು ಕುರುತೇ=ಕರ್ಮವನ್ನು ಮಾಡುವನೋ ವಾ= ಅಥವಾ ಕಾರ್ಯತೇ=ಸ್ವಯಂ ಇನ್ನೊಬ್ಬರಿಂದ ಮಾಡಿಸಲ್ಪಡುವನೋ ತದ್ಧೇತುಃ= ಆ ಏಳು ವಿಭಕ್ತ್ಯರ್ಥವಾದ ಕಾಲಕ್ಕೂ ಪ್ರಕಾರಗಳಿಗೂ ಕರ್ತೃವಿಗೂ ಪ್ರೇರಕನಿಗೂ ಯಾವುದು ಕಾರಣವೋ ಯಾವುದು ಪರಾವರೇಷಾಂ=ಬ್ರಹ್ಮಾದಿಗಳಿಗಿಂತಲೂ ಪ್ರಾಕ್=ಮೊದಲೇ ಅನಾದಿಯಾಗಿ ಸಿದ್ಧಂ=ಕಾರ್ಯಕಾರಣಾತ್ಮಕ ಪ್ರಪಂಚಕ್ಕಿಂತ ವ್ಯತಿರಿಕ್ತವಾಗಿ ತಾನಾಗಿಯೇ ಸಿದ್ಧವಾಗಿದೆಯೋ ಆದ್ದರಿಂದಲೇ ಪರಮಂ= ಸರ್ವೋತ್ತಮವೋ ಅನನ್ಯತ್=ಮತ್ತೊಂದು ಸದೃಶವಾದುದಿಲ್ಲದುದೋ ಏಕಂ= ಅವತಾರ ಮೊದಲಾದ ರೂಪಗಳಲ್ಲಿ ಭೇದವಿಲ್ಲದುದೋ ತತ್ ಅದೇ ಬ್ರಹ್ಮ=ಗುಣಪೂರ್ಣವಾದ ನಾರಾಯಣನೆಂಬ ವಸ್ತುವು. ಅಥವಾ ಶ್ರುತ್ಯಾದಿ ಶಾಸ್ತ್ರಗಳಲ್ಲಿ ಪ್ರಸಿದ್ಧವಾದ ಪರಬ್ರಹ್ಮವಸ್ತುವು ಅವುಗಳಿಗೆ ಕಾರಣವು ಎಂದಾದರೂ ಅನ್ವಯ. ಆಯಾಯಾ ಕಾಲಕ್ಕೆ ಸದಾತನವಾದ ಸತ್ತೆಯನ್ನು ಕೊಡುವಿಕೆಯು ವಿಷ್ಣುವಿಗೇ ಸೇರಿದ್ದು ಮತ್ತೊಬ್ಬನಿಗಲ್ಲವೆಂದು ತಿಳಿಸುವುದಕ್ಕಾಗಿ ಏಳು ವಿಭಕ್ತ್ಯರ್ಥವಾಗಿ ಕಾಲವನ್ನು ವಿಶಿಷ್ಯ ಹೇಳಿದುದು. ಇಲ್ಲವೇ ಯೋಗಿದ್ದಲ್ಲಿ ಕಾಲಕ್ಕೆ ಕಾರಣವು ಬ್ರಹ್ಮವೆಂದು ಹೇಳಿದ್ದರೂ ಸಾಕಾಗುತ್ತಿತ್ತು. ಇದಕ್ಕೆ ಪ್ರಮಾಣ 'ವಿಭಕ್ತ್ಯರ್ಥಸ್ಯ ಕಾಲಸ್ಯ ಪ್ರಕಾರಾಣಾಂ ಚ ಕಾರಣಮ್ | ಏಕ ಏವ ಪರೋ ವಿಷ್ಣುಃ ಸರ್ವಸತ್ತಾಪ್ರದತ್ವತಃ' || ಆಯಾಯಾ ಕಾಲದ ಎಲ್ಲ ವಸ್ತುಗಳಿಗೂ ಸತ್ತಾಪ್ರದನಾದ್ದರಿಂದ ಎಂದಾದರೂ ಅರ್ಥ. ಇದರಿಂದ 'ಯಸ್ಮಿನ್ನಿತ್ಯಾದಿಗಳಿಂದ ಮಾಡುವ ಕಾರಕಫಲವಾಗಿ ಬ್ರಹ್ಮನೇ ಇರುವನು' ಎಂಬ ಅರ್ಥವು ಸರಿಯಲ್ಲವೆಂದು ತಿಳಿಯಬೇಕು. (ಪ್ರಾತಿಪದಿಕಾರ್ಥ, ಕರ್ಮತ್ವ, ಕರ್ತೃತ್ವ, ಕರಣತ್ವ, ಸಂಪ್ರದಾನತ್ವ, ಅಪಾದಾನತ್ವ, ಸ್ವಸ್ವಾಮಿಭಾವ ಸಂಬಂಧ, ಆಧಾರಾಧೇಯಭಾವ ಇತ್ಯಾದಿ ಏಳು ವಿಭಕ್ತ್ಯರ್ಥಕ್ಕೂ ಕುರುತೇ ಇತ್ಯಾದಿ ತಿಙರ್ಥಕ್ಕೂ (ಭೂತಭವಿಷ್ಯದ್ವರ್ತಮಾನಕಾಲಕ್ಕೂ) ಸುಪ್ತಿಙರ್ಥಗಳಲ್ಲಿರುವ ಏಕತ್ವ, ದ್ವಿತ್ವ ಮತ್ತು ಬಹುತ್ವಗಳಿಗೂ ಯಥಾ ಎಂದು ಹೇಳಿದ ಪ್ರಕಾರಗಳಿಗೂ ಬ್ರಹ್ಮನೇ ಕಾರಣನೆಂದರ್ಥ. ಉಳಿದವರ ಕರ್ತೃತ್ವಾದಿಗಳು ಭಗವದಧೀನವೆಂಬುದನ್ನು 'ಪರಾವರೇಷಾಂ ಪರಮಂ' ಎಂಬುದರಿಂದಲೂ ಬ್ರಹ್ಮವ್ಯತಿರಿಕ್ತವಾದ ಜಗತ್ತೇ

ಕರ್ತೃವಾದ ಕಾಲಕ್ಕೂ ಪ್ರಕಾರಗಳಿಗೂ ಕರ್ತೃವಿಗೂ ಪ್ರೇರಕನಿಗೂ ಶ್ರೀಹರಿಯು ಕಾರಣನು. ಬ್ರಹ್ಮಾದಿಗಳಿಗಿಂತ ಮೊದಲೇ ಪ್ರಪಂಚಭಿನ್ನನಾಗಿ ಸಿದ್ಧನು,

ಇಲ್ಲವಾದ್ದರಿಂದ ಜಗತ್ಕಾರಣತ್ವವೇ ಕೂಡುವುದಿಲ್ಲವೆಂಬ ಶಂಕಾಪರಿಹಾರವನ್ನೇ 'ಅನನ್ಯ' ಎಂಬುದರಿಂದಲೂ ನರಸಿಂಹಾದಿಗಳು ಸಂಹಾರಕರಾದ್ದರಿಂದ ಪರಬ್ರಹ್ಮನೇ ಸರ್ವಕಾರಣನೆಂಬುದು ಹೇಗೆ ಎಂಬ ಶಂಕೆಗೆ ಪರಿಹಾರವನ್ನು 'ಏಕಂ' ಎಂಬುದ ರಿಂದಲೂ ತಿಳಿಸಿರುವರು. 'ಅನನ್ಯಃ ಸದೃಶಾಭಾವಾತ್ ಏಕಃ ರೂಪಾದ್ಯಭೇದತಃ' ಎಂಬ ಪ್ರಮಾಣವು ಮೇಲಿನ ಅರ್ಥವನ್ನು ಸಮರ್ಥಿಸುತ್ತದೆ. ತಸ್ಮೈ ನಮಃ ಎಂದು ಮುಂದಕ್ಕೆ ಅನ್ವಯ. || ೩೦ ||

ಯಚ್ಛಕ್ತಯೋ ವದತಾಂ ವಾದಿನಾಂ ವೈ
ವಿವಾದಸಂವಾದಭುವೋ ಭವಂತಿ
ಕುರ್ವಂತಿ ತೇಷಾಂ ಮುಹುರಾತ್ಮಮೋಹಂ
ತಸ್ಮೈ ನಮೋಽನಂತಗುಣಾಯ ಭೂಮ್ನೇ || ೩೧ ||

'ಅಸಿರುಕ್ತಾತ್ರಶಕ್ತಿಃ' ಎಂದು ಹೇಳಿದುದನ್ನೇ ವಿವರಿಸುತ್ತಾರೆ. ವದತಾಂ= ಬ್ರಹ್ಮಸಗುಣ ನಿರ್ಗುಣ ಎಂದು ವಿವಾದ ಮಾಡುವ ವಾದಿನಾಂ = ವಾದಿ ಪ್ರತಿವಾದಿ ಗಳಿಗೆ **ಯಚ್ಛಕ್ತಯಃ** = ಯಾವ ಶ್ರೀಹರಿಯ ಶಕ್ತಿ ಮೊದಲಾದ ಗುಣಗಳು ವಿವಾದ ಸಂವಾದಭುವಃ = ವಿಪ್ರತಿಪತ್ತಿ ಸಂಪ್ರತಿಪತ್ತಿಗಳಿಗೆ ವಿಷಯಗಳಾಗಿ ಭವಂತಿ = ಆಗಿರುವುವೋ ತೇಷಾಂ= ಆ ವಾದಿಗಳಿಗೆ (ಸಗುಣ ನಿರ್ಗುಣ ಎಂದು ಹೇಳುವವರಿಗೆ) ಯಾವನ ಗುಣಗಳು ಮುಹುಃ = ಮತ್ತೆ ಮತ್ತೆ ಆತ್ಮಮೋಹಂ = ಗುಣಿವಿಷಯಕ ಅಜ್ಞಾನವನ್ನು ಕುರ್ವಂತಿ= ಉಂಟುಮಾಡುವುವೋ ಅನಂತಗುಣಾಯ= ಅಪರಿಮಿತ ಗುಣಪೂರ್ಣನಾದ **ಭೂಮ್ನೇ** = ಸರ್ವೋತ್ತಮನಾದ ತಸ್ಮೈ = ಆ ಶ್ರೀಹರಿಗೆ **ನಮಃ**= ನಮಸ್ಕಾರವು. ವಾದಿಗಳ ಮತವು ಅಜ್ಞಾನಮೂಲಕವೆಂದು ಹೇಳಿದಂತಾ ಯಿತು. ಯೋಗ್ಯರಾದವರು ಗುಣಗಳು ಅನಂತವಾದ್ದರಿಂದ ಸಂಪೂರ್ಣವಾಗಿ ತಿಳಿಯುವುದಿಲ್ಲವೆಂದೂ ಅಯೋಗ್ಯರು ಗುಣಗಳನ್ನೇ ತಿಳಿಯುವುದಿಲ್ಲವೆಂದೂ ಅಭಿಪ್ರಾಯ. || ೩೧ ||

ಸರ್ವೋತ್ತಮನು, ಸದೃಶ ವಸ್ತುರಹಿತನು, ಅವತಾರಾದಿ ರೂಪಗಳಲ್ಲಿ ಭೇದ ರಹಿತನು. ಗುಣಪೂರ್ಣನು. ಅವನೇ ನಾರಾಯಣನು. ಶ್ರೀಹರಿಯ ಶಕ್ತಿ ಮೊದಲಾದ ಗುಣಗಳು ಸಗುಣ ನಿರ್ಗುಣ ಎಂದು ವಿವಾದಮಾಡುವ ವಾದಿ ಪ್ರತಿ ವಾದಿಗಳಿಗೆ ವಿವಾದಕ್ಕೂ ಸಂವಾದಕ್ಕೂ ವಿಷಯಗಳಾಗಿರುವುವು. ಅವರನ್ನು ಮತ್ತೆ ಮತ್ತೆ ಗುಣವಿಷಯದಲ್ಲಿ ಅಜ್ಞಾನಿಗಳನ್ನಾಗಿ ಮಾಡುವುವು. (ಯೋಗ್ಯರು ಸಾಕಲ್ಯೇನ ತಿಳಿಯದೆ ಅಜ್ಞಾನಿಗಳು. ಅಯೋಗ್ಯರು ಗುಣಗಳನ್ನೇ ತಿಳಿಯದೆ ಅಜ್ಞಾನಿಗಳು.) ಗುಣಪೂರ್ಣನೂ ಸರ್ವೋತ್ತಮನೂ ಆದ ಶ್ರೀಹರಿಗೆ ನಮಸ್ಕಾರ.

ಅಸ್ತೀತಿ ನಾಸ್ತೀತಿ ಚ ವಸ್ತುನಿಷ್ಠಯೋ-
ರೇಕಸ್ಥಯೋರ್ಭಿನ್ನವಿರುದ್ಧಧರ್ಮಯೋಃ ।
ಅಪೇಕ್ಷಿತಂ ಕಿಂಚನ ಸಾಂಖ್ಯಯೋಗಯೋಃ
ಸಮಂ ಪರಂ ಹ್ಯನುಕೂಲಂ ಬೃಹತ್ತತ್ ॥ ೩೨ ॥

ವಿವಾದ ಸಂವಾದಗಳು ಹೇಗೆ ಆಗುವುವು ? ಎಂದರೆ ಹೇಳುತ್ತಾರೆ. ಯತ್- ಯಾವುದು ಅಸ್ತಿ ಇತಿ ನನಗಿಂತ ಭಿನ್ನವಾದ ಈಶ್ವರನೆಂಬ ವಸ್ತುವಿದೆಯೆಂದು ದ್ವೈವ ಮತಾನುಯಾಯಿಗಳೂ ನಾಸ್ತಿ ಇತಿ - ನನಗಿಂತ ಭಿನ್ನವಾದ ಈಶ್ವರನೆಂಬ ವಸ್ತುವಿಲ್ಲ ವೆಂದು ಆಸುರಮತಾನುಯಾಯಿಗಳೂ ಪ್ರತಿಪಾದಿಸುವ ವಸ್ತುನಿಷ್ಠಯೋಃ=ಭಿನ್ನ ವಸ್ತುಗಳಲ್ಲಿರುವ ಏಕಸ್ಥಯೋಃ = ಒಂದೇ ವಸ್ತುವಿನಲ್ಲಿರುವ ಭಿನ್ನವಿರುದ್ಧ ಧರ್ಮಯೋಃ=ಭಿನ್ನಗಳೂ ಮತ್ತು ವಿರುದ್ಧಗಳೂ ಆದ ಸ್ವರೂಪ ಸತ್ತ್ವಾಸತ್ತ್ವಧರ್ಮ ಗಳಿಗೆ ಅಪೇಕ್ಷಿತಂ=ವಿಷಯವೋ, ಕಿಂಚನ - ಲೋಕವಿಲಕ್ಷಣವಾದುದೋ, ಸಾಂಖ್ಯ ಯೋಗಯೋಃ = ಯಥಾರ್ಥಜ್ಞಾನಸಾಧನ ವೇದಾಂತದಲ್ಲಿ ವಿಚಾರಿತವೂ ಕರ್ಮಾನುಷ್ಠಾನವೆಂಬ ಯೋಗವನ್ನು ಪ್ರತಿಪಾದಿಸುವ ಕರ್ಮಕಾಂಡದಲ್ಲಿ ಅದಕ್ಕೆ ಫಲದಾತೃವೆಂದು ಪ್ರತಿಪಾದಿತವೂ ಆಗಿ ಜ್ಞಾನ-ಕರ್ಮಯೋಗಗಳೆರಡಕ್ಕೂ ವಿಷಯವೋ, ಅನುಕೂಲಂ - ಎಲ್ಲರಿಗೂ ಪ್ರಿಯತಮವೋ, ಅಥವಾ ಆಯಾಯಾ ವಾದಿ ಗಳಿಗೆ ಆಯಾಯಾ ಬುದ್ಧಿಯನ್ನು ಹುಟ್ಟಿಸಿ ಅದದಕ್ಕೆ ಅನುರೂಪವಾದ ಫಲವನ್ನು ಕೊಡುತ್ತಲಿದೆಯೋ, ತತ್ - ಅಂತಹ ಪರಂ ಬೃಹತ್ = ಪರಬ್ರಹ್ಮವಸ್ತುವನ್ನು (ಪ್ರಪದ್ಯೇ)=ಶರಣುಹೊಂದುವೆನು. ಅಥವಾ ಅಂತಹ ಪರಬ್ರಹ್ಮವಸ್ತುವು ಪ್ರಸೀದತು ಎಂದು ಮುಂದಿನ ಶ್ಲೋಕದ ಪದದೊಡನೆಯಾದರೂ ಅನ್ವಯ. ವಿ.ಅ. ಸತ್ತ್ವಾಸತ್ತ್ವಗಳು ಭಿನ್ನವಸ್ತುನಿಷ್ಠವಾದ್ದರಿಂದ ಭಿನ್ನಗಳೆಂದೂ ಒಂದೇ ವಸ್ತುನಿಷ್ಠ ವಾದಾಗ ವಿರುದ್ಧಗಳೆಂದೂ ತಿಳಿಯಬೇಕು. ಒಂದೇ ವಸ್ತುವಿಗೆ ತನ್ನ ರೂಪದಿಂದ ಸತ್ತ್ವವೂ ಅನ್ಯರೂಪದಿಂದ ಅಸತ್ತ್ವವೂ ಹೇಳಬಹುದಾದ್ದರಿಂದ ಅಂತಹ ಸತ್ತ್ವಾಸತ್ತ್ವ ಗಳನ್ನು ಇಲ್ಲಿ ಹೇಳಲಿಲ್ಲ. ತನ್ನ ಸ್ವರೂಪದಿಂದಲೇ ಸತ್ತ್ವಾಸತ್ತ್ವಗಳನ್ನು ಹೇಳಿದೆ ಯೆಂದು ತಿಳಿಸುವುದಕ್ಕಾಗಿ ವಸ್ತುನಿಷ್ಠ ಮತ್ತು ಏಕಸ್ಥ ಎಂಬ ಎರಡು ಪದಗಳನ್ನು ಹೇಳಿರುವರು. ಬೃಹತ್ ಎಂಬ ಪದದಿಂದ ಯಾವಾಗಲೂ ವರ್ಧಿಸುವುದೇ

ನಮಗಿಂತ ಭಿನ್ನನಾದ ಈಶ್ವರನಿರುವನೆಂದು ದ್ವೈವಮತಾನುಯಾಯಿಗಳೂ ನಮಗಿಂತ ಭಿನ್ನನಾದ ಈಶ್ವರನಿಲ್ಲವೆಂದು ಆಸುರ ಮತಾನುಯಾಯಿಗಳೂ ಪ್ರತಿಪಾದಿಸುವ ಭಿನ್ನವಸ್ತುಗಳಲ್ಲಿರುವುದರಿಂದ ಭಿನ್ನಗಳೂ ಏಕವಸ್ತುವಿನಲ್ಲಿ ವಿರುದ್ಧಗಳೂ ಆದ ಸ್ವರೂಪದಿಂದ ಇದೆ, ಇಲ್ಲವೆಂಬ ಧರ್ಮಗಳಿಗೆ ಎರಡಕ್ಕೂ ಶ್ರೀಹರಿಯು ವಿಷಯ ನಾಗಿರುವನು. ಲೋಕವಿಲಕ್ಷಣನು. ವೇದಾಂತವಿಚಾರವಿಷಯನು. ಕರ್ಮಫಲ ದಾತನಾಗಿ ಕರ್ಮಕಾಂಡ ಪ್ರತಿಪಾದಿತನು. ಆಯಾಯಾ ವಾದಿಗಳಿಗೆ ಆಯಾಯಾ

(ಪೂರ್ಣವೇ) ಹೊರತು ಎಂದೂ ಕ್ಷಯಿಸುವುದು (ಅಪೂರ್ಣವು) ಅಲ್ಲವೆಂದು ತೋರಿಸಿರುವರು. ಸಾಂಖ್ಯಯೋಗಯೋಃ ಎಂದು ವಿಶೇಷಣ ಕೊಟ್ಟದ್ದರಿಂದ ಅಸ್ತಿ ಎಂಬ ಮತವೇ ಶ್ರೇಯಸ್ಕರವೆಂದೂ ನಾಸ್ತಿ ಎಂಬುದಲ್ಲವೆಂದೂ ವಿಶದಪಡಿಸಿರುವರು. 'ಹಿ' ಎಂಬುದರಿಂದ 'ಸರ್ವೇ ವೇದಾ ಯತ್ಪದಮಾಮನಂತಿ' ಎಂಬ ಶ್ರುತಿಯನ್ನು ಸೂಚಿಸಿರುವರು. ಅಥವಾ ಸಾಂಖ್ಯಯೋಗಗಳಿಗೆ ಜಗದ್ಭಿನ್ನ ಈಶ್ವರನೆಂಬ ವಸ್ತುವಿದೆಯೆಂಬುದರಲ್ಲಿ ನಿಷ್ಠೆಯೆಂದೂ ಆಸುರ ಮತಕ್ಕೆ ಜಗದ್ಭಿನ್ನ ವಸ್ತುವಿಲ್ಲ, ಜಗದಭಿನ್ನ ವಸ್ತುವೇ ಇರುವುದೆಂಬುದರಲ್ಲಿ ನಿಷ್ಠೆಯೆಂದೂ ತಿಳಿಸುವ ಪ್ರಮಾಣವಾಕ್ಯವನ್ನು ಸೂಚಿಸಿರುವರು. 'ಮದನ್ಯೋ ನಾಸ್ತಿ ಸರ್ವೇಶ ಇತಿ ವಿದ್ಯಾಸುರಂ ಮತಂ | ಅಸ್ತೀತಿ ದೈವಂ, ಉಭಯೋರ್ಹರಿರೇವ ಹ್ಯಪೇಕ್ಷಿತಃ || ನಿಷೇಧ ವಿಧ್ಯೋರ್ವಿಷಯಃ ಫಲದಾತಾ ಚ ಕೇಶವಃ ತಾದೃಗ್ಬುದ್ಧೇಃ ಕಾರಣಂ ಚ ಸ್ಥಾನಯೋಶ್ಚೋಚ್ಚನೀಚಯೋಃ ||' ಎಂಬ ಪ್ರಮಾಣವು ಇದೇ ಅರ್ಥವನ್ನು ಸ್ಪಷ್ಟಪಡಿಸುವುದು. (ಭಿನ್ನವಿರುದ್ಧ ಧರ್ಮ ಪ್ರತಿಪಾದಕ, ಏಕವಸ್ತುವಿಷಯಕ, ನನಗಿಂತ ಭಿನ್ನ ಈಶ್ವರನಿರುವನು ಎಂಬ ದೈವಮತ ಮತ್ತು ಅಂತಹ ಈಶ್ವರನಿಲ್ಲವೆಂಬ ಆಸುರಮತಗಳಿಗೆ ವಿಷಯವೂ ಸಮಂ=ಉಚ್ಚ ನೀಚ ಸ್ಥಾನಗಳಿಗೆ ಯಥಾಯೋಗ್ಯ ಫಲ ಕೊಡುವುದೂ ಅನುಕೂಲಂ = ಆ ಬಗೆಯ ಮತಭೇದದಿಂದ ಎರಡು ಬಗೆಯ ಬುದ್ಧಿಯನ್ನು ಕೊಡುವುದೂ ಜ್ಞಾನಕರ್ಮಯೋಗಗಳಿಗೆ ಪರಂ = ಮುಖ್ಯತಾತ್ಪರ್ಯವೂ ಆದುದು ಯಾವುದೋ ತತ್=ಅದೇ ಬ್ರಹ್ಮವಸ್ತುವು ಎಂದೂ ಶ್ಲೋಕಕ್ಕೆ ಅರ್ಥಮಾಡಿರುವರು.) || ೩೨ ||

ಯೋಽನುಗ್ರಹಾರ್ಥಂ ಭಜತಾಂ ಪಾದಮೂಲ-
ಮನಾಮರೂಪೋ ಭಗವಾನನಂತಃ ।
ನಾಮಾನಿ ರೂಪಾಣಿ ಚ ಜನ್ಮಕರ್ಮಭಿ-
ರ್ಭೇಜೇ ಸ ಮಹ್ಯಂ ಪರಮಃ ಪ್ರಸೀದತು || ೩೩ ||

ಮುಂದೆ ಹೇಳುವ ಕಾರಣದಿಂದಲೂ 'ನನಗಿಂತ ಭಿನ್ನನಾದ ಈಶ್ವರನಿರುವನು' ಎಂಬ ಪಕ್ಷವೇ ಶ್ರೇಯಸ್ಕರವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಯಃ=ಯಾವ ಅನಂತಃ=ದೇಶ-ಕಾಲ-ಗುಣಗಳಿಂದ ಅನಂತನಾದ ಅನಾಮರೂಪಃ=(೧) ಮಿಕ್ಕ ಜೀವರ ಕರ್ಮದಂತೆ ದೃಷ್ಟವಾದ ಕರ್ಮವಿಲ್ಲದ್ದರಿಂದ ಅನಾಮನೆಂದೂ ಮಿಕ್ಕ ಜೀವರ ರೂಪದಂತೆ ರೂಪವಿಲ್ಲದವನಾದ್ದರಿಂದ ಅರೂಪನೆಂದೂ (೨) ಇತರರಲ್ಲಿ ಉಪಪನ್ನ

ಬುದ್ಧಿಗಳನ್ನು ಕೊಟ್ಟು ಅದಕ್ಕೆ ತಕ್ಕ ಫಲ ಕೊಡುವವನು. ಪರಬ್ರಹ್ಮನಾದ ಆ ಶ್ರೀಹರಿಯನ್ನು ಶರಣುಹೊಂದುವೆನು. ಅವನು ನನಗೆ ಪ್ರಸನ್ನನಾಗಲಿ. ದೇಶಕಾಲಗುಣಗಳಿಂದ ಅನಂತನೂ, ದೃಷ್ಟಕರ್ಮವಿಲ್ಲದ ಅನಾಮನೂ, ಎಲ್ಲರಂತೆ ರೂಪರಹಿತನೂ, ಅಧಿಕಾರ್ಥಕನಾಮನೂ ಅವ್ಯಕ್ತರೂಪನೂ ಆದ ಶ್ರೀಹರಿಯು

ವಲ್ಲದ ಅರ್ಥವನ್ನು ಹೇಳುವ ನಾಮವುಳ್ಳವನಾದ್ದರಿಂದ ಅನಾಮನೆಂದೂ, ಅವ್ಯಕ್ತನಾದ್ದರಿಂದ ಅರೂಪನೆಂದೂ ಕರೆಸಿಕೊಳ್ಳುವ ಭಗವಾನ್=ಶ್ರೀಹರಿಯು ಪಾದಮೂಲಂ=ತನ್ನ ಪಾದಗಳನ್ನು ಭಜತಾಂ=ಸೇವಿಸುವ ಭಕ್ತರ ವಿಷಯದಲ್ಲಿ ಅನುಗ್ರಹಾರ್ಥಂ=ಅನುಗ್ರಹಮಾಡಲು ಜನ್ಮಕರ್ಮಭಿಃ=ಅವತಾರ ಮತ್ತು ಅವುಗಳಲ್ಲಿ ಮಾಡುವ ಕರ್ಮಗಳಿಂದ ನಾಮಾನಿ=ಕಂಸ ಮೊದಲಾದವರ ನಿಗ್ರಹದಿಂದ ಬಂದ ವಾಚ್ಯಾರ್ಥಕ್ಕೆ ಸಮಾನವಾದ ಕಂಸಾರಿ, ಮುರಾರಿ ಮೊದಲಾದ ಹೆಸರುಗಳನ್ನೂ ರೂಪಾಣಿ ಚ=ವ್ಯಕ್ತನಾಗುವುದರಿಂದ ರೂಪಗಳನ್ನೂ ಭೇಜೇ=ಸ್ವೀಕರಿಸಿದನೋ ಪರಮಃ=ಸರ್ವೋತ್ತಮನಾದ ಸಃ=ಆ ಶ್ರೀಹರಿಯು ಮಹ್ಯಂ=ನನಗೆ ಪ್ರಸೀದತು=ಪ್ರಸನ್ನನಾಗಲಿ. ವಿ. ಅ. 'ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ' 'ಅಥೈನಮಾಹುಃ ಸತ್ಯಕರ್ಮೇತಿ' 'ಸರ್ವಕರ್ಮಾ ಸರ್ವನಾಮಾ ಸರ್ವರೂಪಃ' ಇತ್ಯಾದಿ ಶ್ರುತಿಗಳಿಂದಲೂ ಅವತಾರಗಳಲ್ಲಿ ಕಂಡುಬಂದಿರುವ ನಾಮಕರ್ಮಗಳಿಂದಲೂ ಶ್ರೀಹರಿಯು ಸ್ವರೂಪಕರ್ಮರಹಿತನೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ 'ಅನಾಮರೂಪ'ನೆಂಬುದಕ್ಕೆ ಮೇಲೆ ಹೇಳಿದ ಅರ್ಥವನ್ನೇ ಹೇಳಬೇಕು. ಮುಂದೆ ಹೇಳುವ ಪ್ರಮಾಣವೂ ಇದೇ ಅರ್ಥವನ್ನೇ ಸ್ಪಷ್ಟಪಡಿಸುವುದು. 'ತತ್ಕರ್ಮಣಾಮದೃಷ್ಟತ್ವಾದನಾಮಾ ಚಾಪ್ಯದರ್ಶನಾತ್ । ಅರೂಪಸ್ತು, ಅವತಾರೇಣ ರೂಪಕರ್ಮಾಣಿ ದರ್ಶಯನ್ ॥ ನಿತ್ಯರೂಪೋ ನಿತ್ಯಕರ್ಮಾಽಪ್ಯವ್ಯಕ್ತತ್ವಮಪೇಕ್ಷ್ಯ ತತ್ ಅರೂಪಕರ್ಮೇತ್ಯುದಿತಃ ರೂಪಕರ್ಮೋಜ್ಝಿತೇರ್ನ ತು ॥ 'ಮುಕ್ತಾನಾಂ ಪರಮಾಗತಿಃ' 'ಕಮಲಾಕಾಂತಃ' ಮೊದಲಾದ ಹೆಸರುಗಳು ಮತ್ತೊಬ್ಬರಲ್ಲಿ ಉಪಪನ್ನಾರ್ಥಗಳಲ್ಲ. ಅಂತಹ ಹೆಸರುಳ್ಳವನಾದ್ದರಿಂದ ಅನಾಮನು. ಮೂಲರೂಪದಿಂದ ಅವ್ಯಕ್ತನಾದ್ದರಿಂದ ಅರೂಪನು. ಕಂಸಾರಿ ಇತ್ಯಾದಿ ವಾಚ್ಯಾರ್ಥಸಮನಾಮನಾದ್ದರಿಂದ ಸನಾಮನು. ಅವತಾರದಲ್ಲಿ ವ್ಯಕ್ತರೂಪನಾದ್ದರಿಂದ ಸರೂಪನು. ಶ್ರೀಹರಿಯ ಮೂಲನಾಮಗಳು ಲೋಕದೃಷ್ಟಿಗಿಂತ ಅಧಿಕಾರ್ಥಗಳು. ದಾಮೋದರ ಮೊದಲಾದವು ಉದರದಲ್ಲಿ ದಾಮ (ಹಗ್ಗ) ಬಂಧನಕರ್ಮದಿಂದ ಬಂದವು. ಅವ್ಯಕ್ತರೂಪ ಮೂಲರೂಪ. ವ್ಯಕ್ತವಾದ ರೂಪವೇ ಅವತಾರರೂಪ. 'ಅನಾಮಾಸೋಽಧಿಕಾರ್ಥತ್ವಾತ್, ಅವ್ಯಕ್ತತ್ವಾದರೂಪಕಃ । ಕಂಸಾರಿತ್ವಾದಿಸಾಮ್ಯಾರ್ಥೋ ವ್ಯಕ್ತರೂಪೋಽವತಾರಗಃ ॥' 'ಲೋಕದೃಷ್ಟ್ಯಧಿಕಾರ್ಥಾನಿ ಮೂಲನಾಮಾನಿ ಕೇಶವೇ ಅಥ ದಾಮೋದರಾದೀನಿ ಲೋಕದೃಷ್ಟ್ಯಾ ಸಮಾನಿತು ॥ ಆನಂದೋಽವ್ಯಕ್ತರೂಪಸ್ತು ಮೂಲರೂಪಮುದಾಹೃತಮ್ । ಸ ಏವ ವ್ಯಕ್ತಿಮಾಪನ್ನಃ ಪ್ರಾದುರ್ಭಾವ ಉದಾಹೃತಃ ॥' ಎಂಬ ಪ್ರಮಾಣಗಳು ಮೇಲಿನ

ತನ್ನನ್ನು ಸೇವಿಸುವ ಭಕ್ತರ ಮೇಲಿನ ಅನುಗ್ರಹಕ್ಕಾಗಿ ಅವತಾರ-ಕರ್ಮಗಳಿಂದ ಅನ್ವರ್ಥಕ ಕಂಸಾರಿ ಮೊದಲಾದ ಹೆಸರುಗಳನ್ನೂ ವ್ಯಕ್ತರೂಪಗಳನ್ನೂ ಸ್ವೀಕರಿಸು

ಸ್ಮೃತ್ಯರ್ಥವನ್ನು ಸ್ಪಷ್ಟಮಾಡುವುವು. ಭಕ್ತರ ಅನುಗ್ರಹಕ್ಕಾಗಿ ಎಂದು ಹೇಳಿದ್ದರಿಂದ 'ಪೂರ್ಣಕಾಮನಾಗಿ ಉದಾಸೀನನಾದವನನ್ನು ಪ್ರಾರ್ಥಿಸಿ ತಾನೇ ಲಾಭವೇನು?' ಎಂಬ ಶಂಕೆಯನ್ನೂ ಪರಿಹರಿಸಿರುವರು. || ೩೩ ||

ಯಃ ಪ್ರಾಕೃತೈರ್ಜ್ಞಾನಪಥೈರ್ಜನಾನಾಂ
ಯಥಾಶಯಂ ದೇಹಗತೋ ವಿಭಾತಿ ।
ಯಥಾಽನಿಲಃ ಪಾರ್ಥಿವಮಾಶ್ರಿತೋ ಗುಣಂ
ಸ ಈಶ್ವರೋ ಮೇ ಕುರುತಾನ್ಮನೋರಥಮ್ ॥ ೩೪ ॥

ಆಯಾಯಾ ಜೀವರ ಅಧಿಕಾರಕ್ಕೆ ತಕ್ಕಂತೆ ಶ್ರೀಹರಿಯ ಜ್ಞಾನವು ಅವರವರ ತಾರತಮ್ಯಕ್ಕೆ ಕಾರಣವೆಂದು ಪ್ರಮಾಣಸಿದ್ಧವಾದ್ದರಿಂದ ನನಗಿಂತ ಭಿನ್ನನಾದ ಈಶ್ವರನಿಲ್ಲವೆಂಬ ಮತವು ಅಸುರಮತವೆಂಬ ಅಭಿಪ್ರಾಯದಿಂದ ಹೇಳುತ್ತಾರೆ— ಯಃ=ಯಾವ ಶ್ರೀಹರಿಯು ಯಥಾ=ಹೇಗೆ ಪಾರ್ಥಿವಂ ಗುಣಂ=ಪೃಥಿವೀಕಾರ್ಯವಾದ ಸುಖದುಃಖಭೋಗಸಾಧನ ಶರೀರವನ್ನು ಆಶ್ರಿತಃ=ಆಶ್ರಯಿಸಿರುವ ಅನಿಲಃ=ಪ್ರಾಣವಾಯುವು ಜನಾನಾಂ=ಅಧಮ, ಮಧ್ಯಮ ಮತ್ತು ಉತ್ತಮ ಜನರಿಗೆ ಪ್ರಾಕೃತೈಃ=ಪ್ರಕೃತಿ ವಿಕಾರಗಳಾದ ಜ್ಞಾನಪಥೈಃ=ಜ್ಞಾನಸಾಧನಗಳಾದ ಇಂದ್ರಿಯಗಳಿಂದ ಯಥಾಶಯಂ=ಅವರವರ ಬುದ್ಧಿಗೆ ತಕ್ಕಂತೆ ದೇಹಗತಃ=ದೇಹದಲ್ಲಿರುವ ಶ್ವಾಸವೆಂದೂ ಶರೀರಧಾರಕ ಪ್ರಾಣವಾಯುವೆಂದೂ ಸರ್ವದೇವಶ್ರೇಷ್ಠ ಸೂತ್ರಾತ್ಮಕವಾಯುವೆಂದೂ ವಿಭಾತಿ=ತೋರುವುದೋ ತಥಾ=ಅದರಂತೆ ಜನಾನಾಂ=ಅಧಮಜೀವರಿಗೆ ಪ್ರಾಕೃತೈಃ=ಅಸರ್ವಜ್ಞಜನರಿಂದ ನಿರ್ಮಿತಗಳಾದ ಜ್ಞಾನಪಥೈಃ=ಆಗಮಗಳ (ದುರಾಗಮಗಳ) ಪ್ರಕಾರ ದೇಹಗತಃ=ದೇಹದಲ್ಲಿರುವ ಜೀವನೆಂದು ಅಂದರೆ ಜೀವಾಭಿನ್ನನಾಗಿ 'ಅಹಂ ಬ್ರಹ್ಮಾಸ್ಮಿ' ಎಂದೂ ಜನಾನಾಂ=ಮಧ್ಯಮ (ನಿತ್ಯಸಂಸಾರಿ) ಜೀವರಿಗೆ ಪ್ರಾಕೃತೈಃ ಜ್ಞಾನಪಥೈಃ=ಅವರವರ ಬುದ್ಧಿಗನುಗುಣವಾದ ಸಿದ್ಧಾಂತಗಳಿಂದ ದೇಹಗತಃ=ಜೀವನೋ ಜೀವಭಿನ್ನನೋ ಎಂಬ

ವನು. ಆ ಸರ್ವೋತ್ತಮ ಶ್ರೀಹರಿಯು ನನಗೆ ಪ್ರಸನ್ನನಾಗಲಿ. ಪಾರ್ಥಿವ ಶರೀರವನ್ನು ಆಶ್ರಯಿಸಿರುವ ಪ್ರಾಣವಾಯುವನ್ನು ಅಧಮ ಮಧ್ಯಮ ಉತ್ತಮ ಜನರು ಜ್ಞಾನಸಾಧನ ಇಂದ್ರಿಯಗಳಿಂದ ಅವರವರ ಬುದ್ಧಿಗೆ ತಕ್ಕಂತೆ ಕ್ರಮವಾಗಿ ದೇಹದಲ್ಲಿರುವ ಶ್ವಾಸವೆಂದೂ, ಶರೀರಧಾರಕ ಪ್ರಾಣವಾಯುವೆಂದೂ, ಸರ್ವಶ್ರೇಷ್ಠ ಸೂತ್ರನಾಮಕ ವಾಯುವೆಂದೂ ತಿಳಿಯುವಂತೆ ಅಧಮ ಮಧ್ಯಮ ಉತ್ತಮ ಜೀವರು ಕ್ರಮವಾಗಿ ಶ್ರೀಹರಿಯನ್ನು ದೇಹಗತ ಜೀವಾಭಿನ್ನನೆಂದೂ, ಜೀವಭಿನ್ನಾಭಿನ್ನನೆಂದೂ, ಜೀವಭಿನ್ನ ಈಶ್ವರನೆಂದೂ ತಮ್ಮ ತಮ್ಮ (ಸ್ವರೂಪ) ವಾಸನೆಗೆ ತಕ್ಕಂತೆ ತಿಳಿಯುವರು. ಇಂತಹ ಸರ್ವೋಚ್ಚನಿಯಾಮಕ ಶ್ರೀಹರಿಯು ನನ್ನ ಮನೋರಥವನ್ನು ನೆರವೇರಿಸಲಿ' ಎಂದು ಸ್ತೋತ್ರಮಾಡಿದರು ದಕ್ಷರು.

ಸಂದೇಹವಿಷಯನಾಗಿ ಅಂದರೆ ನಿರ್ಣಯವಿಲ್ಲದೆಯೂ ಜನಾನಾಂ=ಮುಕ್ತಿಯೋಗ್ಯ ಜೀವರಿಗೆ ಪ್ರಾಕೃತೈಃ=ಸಂಪೂರ್ಣವಾಗಿ ಮಾಡದಿರುವ ಅಂದರೆ ಸಹಜವಾದ (ಸ್ವರೂಪಭೂತವಾದ) ಜ್ಞಾನಪಥೈಃ=ಜ್ಞಾನವೆಂಬ ಮಾರ್ಗಗಳಿಂದ ದೇಹಗತಃ=ದೇಹದಲ್ಲಿರುವ ಜೀವನಿಗಿಂತ ಭಿನ್ನನಾದ (ದೇಹಗಾತ್ ಭಿನ್ನ) ಈಶ್ವರಃ=ಪೂರ್ಣಾನಂದಾದಿಗುಣನೆಂದೂ ಯಥಾಶಯಂ=ಅವರವರ ಅನಾದಿವಾಸನಾವಾಸಿತ ಅಂತಃಕರಣಕ್ಕೆ ಅನುಸಾರವಾಗಿ ವಿಭಾತಿ=ತೋರುವನೋ ಸಃ ಈಶ್ವರಃ=ಆ ಸರ್ವೋಚ್ಚ ನಿಯಾಮಕ ಶ್ರೀಹರಿಯು ಮೇ=ನನ್ನ ಮನೋರಥಂ=ಇಚ್ಛೆಯನ್ನು ಕುರುತಾತ್=ನೆರವೇರಿಸಲಿ. ಮುಂದೆ ಉದಹರಿಸುವ ಸ್ಮೃತಿಪ್ರಮಾಣಕ್ಕೆ ಅನುಗುಣವಾದ್ದರಿಂದ ಮೇಲೆ ಮಾಡಿದ ಅರ್ಥವು ಯುಕ್ತವಾದುದು. 'ಸ್ವದೇಹಸ್ಥಂ ಹರಿಂ ಪ್ರಾಹುರಧಮಾ ಜೀವಮೇವ ತು ಮಧ್ಯಮಾಶ್ಚಾಪ್ಯ ನಿರ್ಣೀತಂ, ಜೀವಾದ್ಭಿನ್ನಂ ಜನಾರ್ದನಮ್ || ಪೂರ್ಣಾನಂದಾದಿಗುಣಕಂ ಸರ್ವಜೀವವಿಲಕ್ಷಣಮ್ ಉತ್ತಮಾಸ್ತು ಹರಿಂ ಪ್ರಾಹುಸ್ತಾರತಮ್ಯೇನ ತೇಷು ಚ ಬುದ್ಧಿಶುದ್ಧ್ಯನುಸಾರೇಣ ಯಥಾ ಪ್ರಾಣಂ ಶರೀರಿಣಾಂ ಶ್ವಾಸಮಾತ್ರಂ ಜನಾಃ ಪ್ರಾಹುಃ, ಅನಿರ್ಣೀತಂ ಚ ಮಧ್ಯಮಾಃ ದೇವದೇವೇಶ್ವರಂ ಸೂತ್ರಮಾನಂದಂ ಪ್ರಾಣವೇದಿನಃ' || ೩೪ ||

ಶ್ರೀ ಶುಕ ಉವಾಚ—

ಇತಿ ಸ್ತವೈಃ ಸಂಸ್ತುವತಃ ಸ ತಸ್ಮಿನ್ನಘಮರ್ಷಣೇ ।
ಪ್ರಾದುರಾಸೀತ್ಕುರುಶ್ರೇಷ್ಠ ಭಗವಾನ್ ಭಕ್ತವತ್ಸಲಃ || ೩೫ ||

ಈ ಸ್ತುತಿಯು ನಾಲಗೆಯ ಕೊನೆಯ ಬೆಲ್ಲದಂತಲ್ಲ. ಶ್ರೀಹರಿಯ ಚಿತ್ತವನ್ನು ದ್ರವೀಕರಿಸುವಲ್ಲಿ ಕಾರಣವಾಯಿತೆಂಬ ಅಭಿಪ್ರಾಯದಿಂದ ಹೇಳುತ್ತಾರೆ— ಕುರುಶ್ರೇಷ್ಠನೇ, ತಸ್ಮಿನ್=ಆ ಅಘಮರ್ಷಣೇ=ಅಘಮರ್ಷಣ ಸರಸ್ಸಿನಲ್ಲಿ ಇತಿ=ಮೇಲೆ ಹೇಳಿದ ರೀತಿಯ ಸ್ತವೈಃ=ಸ್ತೋತ್ರಗಳಿಂದ ಸಂಸ್ತುವತಃ=ಭಕ್ತಿಯಿಂದ ಸ್ತೋತ್ರ ಮಾಡುತ್ತಿದ್ದ (ತಸ್ಯ ಪುರಃ)=ಆ ದಕ್ಷರ ಎದುರಿನಲ್ಲಿ ಭಕ್ತವತ್ಸಲನಾದ ಸಃ ಭಗವಾನ್=ಆ ಭಗವಂತನು ಪ್ರಾದುರಾಸೀತ್=ವ್ಯಕ್ತನಾಗಿ ಕಾಣಿಸಿಕೊಂಡನು. || ೩೫ ||

ಕೃತಪಾದಃ ಸುಪರ್ಣಾಂಸೇ ಪ್ರಲಂಬಾಷ್ಟಮಹಾಭುಜಃ ।
ಶಂಖಚಕ್ರಾಸಿಚರ್ಮೇಷುಧನುಃಪಾಶಗದಾಧರಃ || ೩೬ ||

ಶ್ರೀ ಶುಕಾಚಾರ್ಯರು—ಕುರುಶ್ರೇಷ್ಠ! ಅಘಮರ್ಷಣ ಸರಸ್ಸಿನಲ್ಲಿ ಮೇಲೆ ಹೇಳಿದಂತೆ ಸ್ತೋತ್ರಗಳಿಂದ ಭಕ್ತಿಯಿಂದ ಸ್ತುತಿಸುತ್ತಿದ್ದ ಆ ದಕ್ಷರಿಗೆ ಭಕ್ತವತ್ಸಲನಾದ ಶ್ರೀಹರಿಯು ವ್ಯಕ್ತನಾಗಿ ಕಾಣಿಸಿಕೊಂಡನು. ಗರುಡನ ಹೆಗಲಮೇಲೆ ಪಾದಗಳನ್ನಿಟ್ಟು ನೀಳವಾದ ಎಂಟುತೋಳುಳ್ಳ ಆ ಶ್ರೀಹರಿಯು ಶಂಖ, ಚಕ್ರ, ಖಡ್ಗ, ಚರ್ಮ (ಗುರಾಣಿ), ಬಾಣ, ಧನುಸ್ಸು, ಪಾಶ ಮತ್ತು ಗದೆಗಳನ್ನು ಧರಿಸಿದ್ದನು.

ಪೀತವಾಸಾ ಘನಶ್ಯಾಮಃ ಪ್ರಸನ್ನವದನೇಕ್ಷಣಃ ।
ವನಮಾಲಾನಿವೀತಾಂಗೋ ಲಸಚ್ಛ್ರೀವತ್ಸಕೌಸ್ತುಭಃ ॥ ೩೭ ॥

ಮಹಾಕಿರೀಟಕಟಕಸ್ಫುರನ್ಮಕರಕುಂಡಲಃ ।
ಕಾಂಚ್ಯಂಗುಲೀಯವಲಯನೂಪುರಾಂಗದಭೂಷಿತಃ ॥ ೩೮ ॥

ತ್ರೈಲೋಕ್ಯಮೋಹನಂ ರೂಪಂ ಬಿಭ್ರತ್ತ್ರಿಭುವನೇಶ್ವರಃ
ವೃತೋ ನಾರದನಂದಾದ್ಯೈಃ ಪಾರ್ಷದೈಃ ಸುರಯೂಥಪೈಃ ।
ಸ್ತೂಯಮಾನೋಽನುಗಾಯದ್ಭಿಃ ಸಿದ್ಧಗಂಧರ್ವಚಾರಣೈಃ ॥ ೩೯ ॥

ಶ್ರೀಹರಿಯ ರೂಪವನ್ನು ವರ್ಣಿಸುತ್ತಾರೆ - ಸುಪರ್ಣಾಂಸೇ - ಗರುಡನ ಹೆಗಲ ಮೇಲೆ ಕೃತಪಾದಃ = ಪಾದಗಳನ್ನಿಟ್ಟಿರುವ. ಪ್ರಲಂಬ = ಉದ್ದವಾದ ಎಂಟು ದೊಡ್ಡ ತೋಳುಗಳುಳ್ಳ. ಶಂಖ. ಚಕ್ರ. ಅಸಿ - ಖಡ್ಗ. ಚರ್ಮ. ಇಷು = ಬಾಣ. ಧನುಸ್ಸು. ಪಾಶ. ಗದೆಗಳನ್ನು ಧರಿಸಿದ. ಪೀತವಾಸಾಃ - ಹಳದಿ ಬಟ್ಟೆಯುಳ್ಳ. ಘನಶ್ಯಾಮಃ - ಮೋಡದಂತೆ ಶ್ಯಾಮವರ್ಣವುಳ್ಳ. ಪ್ರಸನ್ನವದನೇಕ್ಷಣಃ ಪ್ರಸನ್ನಗಳಾದ ಮುಖ ಮತ್ತು ಕಣ್ಣುಗಳುಳ್ಳ. ವನಮಾಲೆಯಿಂದ ನಿವೀತಾಂಗಃ - ಕೊರಳಿಗೆ ಹಾರವಾಗಿ ಹೊಂದಿರುವ ಅವಯವವುಳ್ಳ. ಲಸತ್ - ಪ್ರಕಾಶಿಸುವ ಶ್ರೀವತ್ಸ ಮತ್ತು ಕೌಸ್ತುಭ ರತ್ನಗಳುಳ್ಳ, ದೊಡ್ಡ ಕಿರೀಟವೂ ಕಡಗವೂ ಹೊಳೆಯುವ ಮಕರ ಕುಂಡಲಗಳೂ ಉಳ್ಳ, ಕಾಂಚೀ - ನಡುಪಟ್ಟಿ. ಅಂಗುಲೀಯ - ಉಂಗುರ. ವಲಯ - ಕಾಲ್ಕಡಗ, ನೂಪುರ ಮೊದಲಾದ ಒಡವೆಗಳಿಂದ ಅಲಂಕೃತನಾದ. ಮೂರುಲೋಕಗಳನ್ನೂ ಮೋಹಗೊಳಿಸುವ ರೂಪವನ್ನು ಹೊಂದಿರುವ ತ್ರಿಲೋಕಸ್ವಾಮಿಕನಾದ. ನಾರದ ನಂದ ಮೊದಲಾದ ಪಾರ್ಷದೈಃ - ದ್ವಾರಪಾಲರಿಂದಲೂ ಸುರಯೂಥಪೈಃ - ದೇವ ಸಮೂಹಪಾಲಕರಿಂದಲೂ ವೃತಃ - ಸುತ್ತುವರೆಯಲ್ಪಟ್ಟ. ಅನುಗಾಯದ್ಭಿಃ - ಅನುಸರಿಸಿ ಗಾನಮಾಡುವ ಸಿದ್ಧ - ಚಾರಣ ಗಂಧರ್ವರಿಂದ ಸ್ತೋತ್ರಮಾಡಿಸಿಕೊಳ್ಳುವ ಭಕ್ತವತ್ಸಲನಾದ ಭಗವಂತನು ಎಂದು ಹಿಂದಕ್ಕೆ ಅನ್ವಯ. ॥ ೩೭-೩೯ ॥

ಪೀತಾಂಬರನಾಗಿ ಮೋಡದಂತೆ ಶ್ಯಾಮವರ್ಣದಿಂದಿದ್ದನು. ಮುಖ ಮತ್ತು ನೇತ್ರಗಳು ಪ್ರಸನ್ನವಾಗಿದ್ದುವು. ವನಮಾಲೆಯನ್ನು ಕೊರಳಿಗೆ ಹಾರವಾಗಿ ಧರಿಸಿದ್ದನು. ಶ್ರೀವತ್ಸ ಮತ್ತು ಕೌಸ್ತುಭಗಳು ಪ್ರಕಾಶಿಸುತ್ತಿದ್ದುವು. ಬೆಲೆಬಾಳುವ ಕಿರೀಟ, ಕೈಕಡಗ, ಹೊಳೆವ ಮಕರಕುಂಡಲ, ನಡುಪಟ್ಟಿ, ಉಂಗುರಗಳು, ಕಾಲ್ಕಡಗ, ನೂಪುರಗಳನ್ನು ಅಲಂಕರಿಸಿಕೊಂಡಿದ್ದನು. ಅವನ ರೂಪವು ಮೂರು ಲೋಕಗಳನ್ನೂ ಮೋಹಗೊಳಿಸುತ್ತಿತ್ತು. ನಾರದ, ನಂದ ಮೊದಲಾದ ದ್ವಾರ ಪಾಲಕರೂ, ಸುರಗಣ ನಾಯಕರೂ ಅವನನ್ನು ಸುತ್ತುವರೆದಿದ್ದರು. ಅನುಗಾನ

ರೂಪಂ ತನ್ಮಹದಾಶ್ಚರ್ಯಂ ವಿಲಕ್ಷ್ಯ ಗತಸಾಧ್ವಸಃ ।
ನನಾಮ ದಂಡವದ್ಭೂಮೌ ಪ್ರಹೃಷ್ಟಾತ್ಮಾ ಪ್ರಜಾಪತಿಃ ॥ ೪೦ ॥

ಈ ರೂಪವು ಮಾಯಾಕಲ್ಪಿತವಲ್ಲ. ಅರ್ಥಕ್ರಿಯಾಕಾರಿಯಾದ್ದರಿಂದ ನಿಜವಾದ ರೂಪವೇ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಮಹದಾಶ್ಚರ್ಯಂ– ಅತ್ಯಂತ ಆಶ್ಚರ್ಯಕರವಾದ ತದ್ರೂಪಂ= ಆ ಶ್ರೀಹರಿಯ ನಿಜರೂಪವನ್ನು ವಿಲಕ್ಷ್ಯ= ನೋಡಿ ಗತಸಾಧ್ವಸಃ= ಭಯ ಹೋದ ಪ್ರಜಾಪತಿಃ– ದಕ್ಷ ಪ್ರಜೇಶ್ವರರು ಪ್ರಹೃಷ್ಟಾತ್ಮಾ (ನಃ)– ಹರ್ಷಗೊಂಡವರಾಗಿ ಭೂಮಿಯಲ್ಲಿ ದಂಡದಂತೆ ಉದ್ದವಾಗಿ ಮಲಗಿ ಸಾಷ್ಟಾಂಗವಾಗಿ ನಮಸ್ಕರಿಸಿದರು. ॥ ೪೦ ॥

ನ ಕಿಂಚನೋದೀರಯಿತುಮಶಕತ್ತೀವ್ರಯಾ ಮುದಾ ।
ಆಪೂರಿತಮನೋದ್ವಾರೋ ಹ್ರದಿನ್ಯ ಇವ ನಿರ್ಝರೈಃ ॥ ೪೧ ॥

ನಿರ್ಝರೈಃ– ಪ್ರವಾಹಗಳಿಂದ ಹ್ರದಿನ್ಯಃ ಇವ– ತುಂಬಿದ ನದಿಗಳಂತೆ, ನದಿಯ ಕಾಲುವೆಗಳಂತೆ, ತೀವ್ರಯಾ– ಅತಿಶಯವಾದ ಮುದಾ– ಸಂತೋಷದಿಂದ ಆಪೂರಿತಮನೋದ್ವಾರಃ= ತುಂಬಿದ ಮನಸ್ಸೆಂಬ ದ್ವಾರವುಳ್ಳ ಆ ದಕ್ಷರು ಕಿಂಚನ– ಏನನ್ನೂ ಉದೀರಯಿತುಂ= ಉಚ್ಚರಿಸಲು (ಹೇಳಲು) ನ ಅಶಕತ್= ಶಕ್ತರಾಗಲಿಲ್ಲ. ॥ ೪೧ ॥

ತಂ ತಥಾಽವನತಂ ಭಕ್ತಂ ಪ್ರಜಾಕಾಮಂ ಪ್ರಜಾಪತಿಮ್ ।
ಚಿತ್ತಜ್ಞಃ ಸರ್ವಭೂತಾನಾಮಿದಮಾಹ ಜನಾರ್ದನಃ ॥ ೪೨ ॥

ಇದು ಕೂಡ ನಿಜರೂಪವೆಂಬುದಕ್ಕೆ ಸಾಧಕವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಸರ್ವಭೂತಾನಾಂ= ಎಲ್ಲ ಪ್ರಾಣಿಗಳ ಚಿತ್ತಜ್ಞಃ– ಮನಸ್ಸಿನಲ್ಲಿರುವುದನ್ನು ಬಲ್ಲ ಜನಾರ್ದನಃ= ಶ್ರೀಹರಿಯು ತಥಾ= ಆರೀತಿಯಲ್ಲಿ ಅವನತಂ= ಬಗ್ಗಿರುವ ಪ್ರಜಾಕಾಮಂ= ಮಕ್ಕಳನ್ನು ಪಡೆಯಬಯಸುವ ತಂ ಪ್ರಜಾಪತಿಂ = ಆ ದಕ್ಷರನ್ನು ಕುರಿತು ಇದಂ= ಮುಂದೆ ಹೇಳುವ ಮಾತನ್ನು ಆಹ– ಹೇಳಿದನು. ಅವರು ಏನೂ

ಮಾಡುತ್ತಿದ್ದ ಸಿದ್ಧ ಗಂಧರ್ವ ಚಾರಣರು ಸ್ತೋತ್ರಮಾಡುತ್ತಿದ್ದರು. ಅತ್ಯಂತ ಆಶ್ಚರ್ಯಕರವಾದ ಆ ಶ್ರೀಹರಿಯ ನಿಜರೂಪವನ್ನು ನೋಡಿ ದಕ್ಷಪ್ರಜೇಶ್ವರರಿಗೆ ಭಯವು ಪರಿಹಾರವಾಯಿತು. ಸಂತೋಷಗೊಂಡ ಅವರು ಭೂಮಿಯಲ್ಲಿ ದಂಡದಂತೆ ಪ್ರಣಾಮಮಾಡಿದರು. ಪ್ರವಾಹಗಳಿಂದ ತುಂಬಿದ ನದಿಗಳಂತೆ ಅವರ ಮನೋದ್ವಾರವು ಅತಿಶಯವಾದ ಆನಂದದಿಂದ ತುಂಬಿತ್ತು. ಅವರು ಏನನ್ನೂ ಉಚ್ಚರಿಸಲು ಶಕ್ತರಾಗಲಿಲ್ಲ.

ಪ್ರಜಾಕಾಮಿಗಳಾದ ಪ್ರಜೇಶ್ವರರು– ಭಕ್ತರು– ಆ ರೀತಿಯಲ್ಲಿ ತಲೆತಗ್ಗಿಸಿ ನಿಂತಿರುವುದನ್ನು ಶ್ರೀಹರಿಯು ಕಂಡನು. ಸರ್ವಪ್ರಾಣಿಗಳ ಮನೋವ್ಯಾಪಾರವನ್ನು ಬಲ್ಲ ಅವನು—

ಹೇಳದಿದ್ದರೂ ಚಿತ್ತಜ್ಞನಾದ ಶ್ರೀಹರಿಯು ಅಭಿಪ್ರಾಯವನ್ನು ಅರಿತು ಉತ್ತರಕೊಟ್ಟ ನೆಂದು ತಾತ್ಪರ್ಯ. ‖ ೪೨ ‖

ಶ್ರೀ ಭಗವಾನುವಾಚ—

ಪ್ರಾಚೇತಸ ಮಹಾಭಾಗ ಸಂಸಿದ್ಧಸ್ತಪಸಾ ಭವಾನ್ ।
ಯಚ್ಛ್ರದ್ಧಯಾ ಮತ್ಪರಯಾ ಮಯಿ ಭಾವಂ ಪರಂ ಗತಃ ‖ ೪೩ ‖

ಮಹಾಭಾಗ=ಮಹಾಪುಣ್ಯಶಾಲಿಯಾದ ಪ್ರಾಚೇತಸ – ಪ್ರಚೇತಸರ ಮಗ ನಾದ ದಕ್ಷನೇ, ತಪಸಾ=ತಪಸ್ಸಿನಿಂದ ಭವಾನ್=ನೀನು ಸಂಸಿದ್ಧಃ=ಸರಿಯಾದ ಸಿದ್ಧಿಯನ್ನು ಹೊಂದಿದವನಾಗಿರುವೆ. ಯತ್=ಏಕೆಂದರೆ, ಮತ್ಪರಯಾ=ನನ್ನ ವಿಷಯಕವಾದ ಶ್ರದ್ಧೆಯಿಂದ ಮಯಿ=ನನ್ನಲ್ಲಿ ಪರಂ = ನನ್ನ ಪ್ರಸನ್ನತೆ ಕಾರಣ ವಾದಷ್ಟು ಉತ್ತಮವಾದ ಭಾವಂ=ಭಕ್ತಿಯನ್ನು ಗತಃ=ಹೊಂದಿರುವೆ. ‖ ೪೩ ‖

ಪ್ರೀತೋಽಹಂ ತೇ ಪ್ರಜಾನಾಥ ಯತ್ತೇ ಸ್ಯಾದ್ಬೃಂಹಣಂ ತಪಃ ।
ಮಮೈಷ ಕಾಮೋ ಭೂತಾನಾಂ ಯದ್ಭೂಯಾಸು-
ರ್ವಿಭೂತಯಃ ‖ ೪೪ ‖

ಪ್ರಜೇಶ್ವರನೇ, ನಾನು ತೇ=ನಿನ್ನ ವಿಷಯದಲ್ಲಿ ಪ್ರೀತಃ=ಪ್ರಸನ್ನನಾಗಿರು ವೆನು. ಯತ್=ಆ ಪ್ರೀತಿಯಿಂದ ತೇ ತಪಃ=ನಿನ್ನ ತಪಸ್ಸು ಬೃಂಹಣಂ–ಪ್ರಜಾ ವೃದ್ಧಿಕರವಾಗಿ ಸ್ಯಾತ್=ಆಗುವುದು. ಭೂತಾನಾಂ=ಪ್ರಾಣಿಗಳ ವಿಭೂತಯಃ= ಸಮೃದ್ಧಿಗಳು ಭೂಯಾಸುಃ = ಆಗಲಿ (ಇತಿ) ಯತ್=ಹೀಗೆಂಬುದೇನುಂಟೋ ಏಷಃ=ಇದು ಮಮ ಕಾಮಃ=ನನ್ನ ಇಚ್ಛೆಯು. ‖ ೪೪ ‖

ಬ್ರಹ್ಮಾ ಭವೋ ಭವಂತಶ್ಚ ಮನವೋ ವಿಬುಧೇಶ್ವರಾಃ ।
ವಿಭೂತಯೋ ಮಮ ಹ್ಯೇತಾ ಭೂತಾನಾಂ ಭೂತಿಹೇತವಃ ‖ ೪೫ ‖

ಬ್ರಹ್ಮದೇವರು, ರುದ್ರದೇವರು, ಭವಂತಃ=ಪ್ರಜೇಶ್ವರರು, ಮನುಗಳು, ದೇವಶ್ರೇಷ್ಠರು ಏತಾಃ=ಇವರು ಮಮ=ನನ್ನ ವಿಭೂತಯಃ ಹಿ= ವಿಶೇಷ ಸನ್ನಿಧಾನ ಸ್ಥಾನಗಳೆಂದು ಶಾಸ್ತ್ರಗಳಲ್ಲಿ ಪ್ರಸಿದ್ಧವು. ಆದ್ದರಿಂದಲೇ ಏತಾಃ=ಇವು (ಇವರು) ಪ್ರಜೆಗಳ ಭೂತಿಹೇತವಃ = ಉತ್ಪತ್ತಿಗೆ ಕಾರಣರು. ವಿ. ಅ. 'ವಿಶೇಷ ವ್ಯಕ್ತಿ

'ಮಹಾಭಾಗ್ಯಶಾಲಿಯಾದ ಪ್ರಾಚೇತಸನೇ, ನೀನು ತಪಸ್ಸಿನಿಂದ ಸಂಪೂರ್ಣ ಸಿದ್ಧಿಯನ್ನು ಪಡೆದಿರುವೆ. ನನ್ನಲ್ಲಿ ಶ್ರದ್ಧೆಯಿದ್ದು ನಿನಗೆ ಯೋಗ್ಯವಾದ ಭಕ್ತಿಯನ್ನು ಹೊಂದಿರುವೆ. ಪ್ರಜಾನಾಥ! ನಿನ್ನ ವಿಷಯದಲ್ಲಿ ನಾನು ಪ್ರೀತ ನಾಗಿದ್ದೇನೆ. ನಿನ್ನ ತಪಸ್ಸು ಪ್ರಜಾವೃದ್ಧಿಗೆ ಕಾರಣವಾಗಿ ಸಫಲವಾಗಿದೆ. ಪ್ರಜೆಗಳ ವೃದ್ಧಿಯಾಗಬೇಕೆಂಬುದು ನನ್ನ ಇಚ್ಛೆ. (ಅದಕ್ಕನುಗುಣವಾಗಿ ನೀನೂ ಇಚ್ಛಿಸುತ್ತಿರುವೆಯಾದ್ದರಿಂದ ನಿನ್ನಲ್ಲಿ ಪ್ರೀತನಾಗಿದ್ದೇನೆ). ಬ್ರಹ್ಮನು, ಈಶ್ವರ, ಪ್ರಜೇಶ್ವರರಾದ ನೀವು, ಮನುಗಳು, ದೇವತೆಗಳು—ಇವು ನನ್ನ ವಿಶೇಷ ಸನ್ನಿಧಾನ

ಪಾತ್ರತ್ವಾತ್ ಬ್ರಹ್ಮಾದ್ಯಾಸ್ತು ವಿಭೂತಯಃ | ತದಂತರ್ಯಾಮಿಣಶ್ಚೈವ ಮತ್ಸ್ಯಾದ್ಯಾ ವಿಭವಾಃ ಸ್ಮೃತಾಃ ||' (ಬ್ರಹ್ಮಾದಿಗಳು ಶ್ರೀಹರಿಯ ವಿಶೇಷಾಭಿವ್ಯಕ್ತಿಗೆ ಪಾತ್ರರಾದ್ದರಿಂದ ವಿಭೂತಿಗಳೆನಿಸುವರು. ಅವರ ಅಂತರ್ಯಾಮಿರೂಪಗಳೂ ಮತ್ತು ಮತ್ಸ್ಯಾದಿ ಅವತಾರರೂಪಗಳೂ ವಿಭವಗಳೆನಿಸುವುವು) ಎಂಬ ಪ್ರಮಾಣದಂತೆ ಮೇಲಿನ ಅರ್ಥವೇ ಯುಕ್ತವಾದುದು. || ೪೫ ||

ತಪೋ ಮೇ ಹೃದಯಂ ಬ್ರಹ್ಮ ತನುರ್ವಿದ್ಯಾ ಕ್ರಿಯಾಽಽಕೃತಿಃ |
ಅಂಗಾನಿ ಕ್ರತವೋ ಜಾತಾ ಧರ್ಮ ಆತ್ಮಾಽಸವಃ ಸುರಾಃ || ೪೬ ||

ಶ್ರೀಹರಿಯ ಇಷ್ಟವಾದ ವಿಶ್ವಸೃಷ್ಟಿಗಾಗಿ ತಪಸ್ಸುಮಾಡಿದ್ದರಿಂದ ನಾನು ಪ್ರೀತನಾಗಿದ್ದೇನೆ ಎಂದು ಹೇಳಿದ ಭಗವಂತನು ತಪಸ್ಸನ್ನು ಸ್ತೋತ್ರಮಾಡುತ್ತಾ ಪ್ರಾಸಂಗಿಕವಾಗಿ ಲೋಕವೃದ್ಧಿಕರಗಳಾದ ವಿದ್ಯಾದಿಗಳನ್ನೂ ಸ್ತೋತ್ರಮಾಡುತ್ತಾನೆ. ಬ್ರಹ್ಮ=ಪೂರ್ಣವಾದ ತಪಃ=ತಪಸ್ಸು ಮೇ=ನನಗೆ ಹೃದಯಂ=ಪ್ರಿಯವಾದುದು. ಏಕೆಂದರೆ, ತಪಃ=ತಪಸ್ಸಿಗೆ ಅಭಿಮಾನಿಯಾದ ರುದ್ರದೇವರು ನನ್ನ ಹೃದಯಂ=ಹೃದಯದಿಂದ ಹುಟ್ಟಿದವರು ಮತ್ತು ಅದನ್ನು ಆಶ್ರಯಿಸಿಕೊಂಡಿರುವರು. ವಿದ್ಯಾ=ವಿದ್ಯೆಯು ನನ್ನ ತನುಃ=ಸ್ವರೂಪವು. ಏಕೆಂದರೆ, ವಿದ್ಯಾ=ವಿದ್ಯಾಭಿಮಾನಿಯಾದ ಉಮಾದೇವಿಯು ನನ್ನ ತನುಃ ಶರೀರದಿಂದ ಹುಟ್ಟಿದವಳು ಮತ್ತು ಅದನ್ನು ಆಶ್ರಯಿಸಿರುವಳು. ಕ್ರಿಯಾ=ಕೆಲಸವು ನನ್ನ ಆಕೃತಿಃ=ಆಕಾರವು. ಏಕೆಂದರೆ, ಕ್ರಿಯಾ=ಕ್ರಿಯೆಗೆ ಅಭಿಮಾನಿಯಾದ ಇಂದ್ರನು ಆಕೃತಿಃ=ನನ್ನ ಶೃಂಗಾರಾದಿ ಆಕಾರದಿಂದ ಹುಟ್ಟಿದವನು ಮತ್ತು ಅದನ್ನು ಆಶ್ರಯಿಸಿಕೊಂಡಿರುವನು. ಕ್ರತವಃ=

ಸ್ಥಾನಗಳು. ಇವರು ಪ್ರಜಾವೃದ್ಧಿಗೆ ಕಾರಣರು. ಪೂರ್ಣತಪಸ್ಸು ನನಗೆ ಪ್ರಿಯವಾದುದು. ತಪೋಭಿಮಾನಿ ರುದ್ರನು ನನ್ನ ಹೃದಯದಿಂದ ಹುಟ್ಟಿ ಹೃದಯವನ್ನಾಶ್ರಯಿಸಿ ಹೃದಯನೆನಿಸಿಕೊಂಡಿರುವನು. ಹಾಗೆಯೇ ವಿದ್ಯೆಯು ನನ್ನ ಸ್ವರೂಪ. ವಿದ್ಯಾಭಿಮಾನಿ ಉಮಾದೇವಿಯು ನನ್ನ ತನುವಿನಿಂದ ಹುಟ್ಟಿ ತನುವನ್ನಾಶ್ರಯಿಸಿ ತನುವೆನಿಸಿಕೊಂಡಿರುವಳು. ಕ್ರಿಯೆಯೇ ನನ್ನ ಆಕೃತಿ. ಕ್ರಿಯಾಭಿಮಾನಿಯಾದ ಇಂದ್ರದೇವನು ನನ್ನ ಶೃಂಗಾರಾದಿ ಆಕಾರದಿಂದ ಹುಟ್ಟಿ ಅದನ್ನು ಆಶ್ರಯಿಸಿ ಆಕಾರವೆನಿಸಿರುವನು. ಯಾಗಗಳು, ಸಂಕಲ್ಪಗಳು ನನ್ನ ಅವಯವಗಳು. ಯಾಗಾಭಿಮಾನಿದೇವತೆಗಳು ನನ್ನ ಅವಯವಗಳಿಂದ ಹುಟ್ಟಿ ಅವುಗಳನ್ನು ಆಶ್ರಯಿಸಿ ಅಂಗಗಳೆನಿಸಿರುವರು. ಧರ್ಮವು ನನ್ನ ಮಧ್ಯದೇಹ. ಧರ್ಮಾಭಿಮಾನಿ ಯಮಧರ್ಮನು ನನ್ನ ಮಧ್ಯದೇಹದಿಂದ ಹುಟ್ಟಿ ಅದನ್ನೇ ಆಶ್ರಯಿಸಿ ಆತ್ಮವೆನಿಸಿರುವನು. 'ಸುರಾಃ' ಎಂಬ ವಾಯುದೇವನು ನನ್ನ ಮನಸ್ಸಿನಲ್ಲಿದ್ದು ಅತಿ ಪ್ರಿಯನಾಗಿ ಪ್ರಾಣನೆನಿಸಿರುವನು. ಆ ವಾಯುವು ನನ್ನ ಪ್ರಾಣದಿಂದ ಹುಟ್ಟಿ ಅದನ್ನೇ ಆಶ್ರಯಿಸಿರುವನು. ಬ್ರಹ್ಮಾದಿ ದೇವತೆಗಳು ನನ್ನ ಶ್ರೋತ್ರಾದಿ

ಯಾಗಗಳು, ಸಂಕಲ್ಪಗಳು ಅಂಗಾನಿ=ಅವಯವಗಳಾಗಿ ಜಾತಾಃ=ಇರುವುವು. ಏಕೆಂದರೆ, ಕ್ರತವಃ=ಯಜ್ಞಾಭಿಮಾನಿ ದೇವತೆಗಳು ಅಂಗಾನಿ=ನನ್ನ ಅವಯವಗಳಿಂದ ಜಾತಾಃ=ಹುಟ್ಟಿದವರು ಮತ್ತು ಅದನ್ನೇ ಆಶ್ರಯಿಸಿರುವರು. ಧರ್ಮಃ=ಧರ್ಮವು ನನ್ನ ಆತ್ಮಾ=ಮಧ್ಯದೇಹವು. ಏಕೆಂದರೆ ಧರ್ಮಃ=ಧರ್ಮಾಭಿಮಾನಿಯಾದ ಯಮಧರ್ಮನು ಆತ್ಮಾ=ನನ್ನ ಮಧ್ಯದೇಹದಿಂದ ಹುಟ್ಟಿದವನು ಮತ್ತು ಅದನ್ನು ಆಶ್ರಯಿಸಿಕೊಂಡಿರುವನು. (೧) ಸುರಾಃ=ಶೋಭಮಾನವಾದ ಲಾತವ್ಯಕುಲಯೋಗ್ಯಾನ್ನವುಳ್ಳ ವಾಯುದೇವರು ಅಸವಃ=ನನ್ನ ಮನಸ್ಸಿನಲ್ಲಿದ್ದು ಅತಿಪ್ರಿಯನಾದ್ದರಿಂದ ಪ್ರಾಣವು. ಏಕೆಂದರೆ ಸುರಾಃ=ವಾಯುವು ಅಸವಃ=ನನ್ನ ಪ್ರಾಣದಿಂದ ಹುಟ್ಟಿದವರು ಮತ್ತು ಅದನ್ನು ಆಶ್ರಯಿಸಿಕೊಂಡಿರುವರು. (೨) ಸುರಾಃ=ಬ್ರಹ್ಮಾದಿ ದೇವತೆಗಳು ನನ್ನ ಅಸವಃ=ಇಂದ್ರಿಯಗಳು. ಏಕೆಂದರೆ ಅಸವಃ=ನನ್ನ ಶ್ರೋತ್ರಾದಿ ಇಂದ್ರಿಯಗಳಿಂದ ಹುಟ್ಟಿದವರು ಮತ್ತು ಅವುಗಳನ್ನು ಆಶ್ರಯಿಸಿಕೊಂಡಿರುವರು. (ವಾಯು ಎಂಬರ್ಥದಲ್ಲಿ ಸುರಾಃ ಎಂದು ಏಕವಚನ. ಸುರಾಃ ಸುರಾಯೌ ಸುರಾಯಃ ಇತ್ಯಾದಿ. ಅಸವಃ ಎಂಬುದು ನಿತ್ಯಬಹುವಚನವಾದ್ದರಿಂದ ಏಕವಚನಾರ್ಥದಲ್ಲಿ ಪ್ರಯುಕ್ತವೆಂದು ತಿಳಿಯಬೇಕು.) 'ಯದಾಶ್ರಯಂ ಯದ್ಭವತಿ ತತ್ ತನ್ನಾಮಕಮೀರಿತಂ' ಎಂಬ ಕೋಶವನ್ನನುಸರಿಸಿ ಆಶ್ರಯಿಸಿಕೊಂಡಿರುವ ವಸ್ತುವನ್ನು ಆಶ್ರಯನಾಮದಿಂದಲೇ 'ತಪಃ ಹೃದಯಂ' ಇತ್ಯಾದಿ ಹೇಳಿದೆ. ಮೇಲೆ ಹೇಳಿದ ಅರ್ಥವು 'ತಪೋಽಭಿಮಾನೀ ರುದ್ರಶ್ಚ ವಿಷ್ಣೋರ್ಹೃದಯಮಾಶ್ರಿತಃ | ವಿದ್ಯಾರೂಪೀ ತಥಾಚೋಮಾ ವಿಷ್ಣೋಸ್ತನುಮುಪಾಶ್ರಿತಾ || ಶೃಂಗಾರಾದ್ಯಾಕೃತಿಗತಃ ಕ್ರಿಯಾತ್ಮಾ ಪಾಕಶಾಸನಃ ಅಂಗೇಷು ಕ್ರತವಃ ಸರ್ವೇ, ಮಧ್ಯದೇಹೇ ಚ ಧರ್ಮರಾಟ್ || ಪ್ರಾಣೋ ವಾಯುಶ್ಚಿತ್ತಗತೋ ಬ್ರಹ್ಮಾದ್ಯಾಃ ಖೇಷು ದೇವತಾಃ ||' ಎಂಬ ಪ್ರಮಾಣಕ್ಕನುಗುಣವಾಗಿದೆ. ಯಜ್ಞಗಳು ಶ್ರೀಹರಿಯ ಅಂಗಗಳೆಂಬುದಕ್ಕೆ 'ಶಿರೋ ವೈ ತದ್ಯಜ್ಞಸ್ಯ ಯತ್ಪ್ರವರ್ಗ್ಯೋ ಗ್ರೀವೋಪಸದಶ್ಚಕ್ಷುಷ್ಯಾದ್ಯಭಾಗೌ' ಮುಂತಾದ ಶ್ರುತಿಗಳನ್ನು ನೋಡಬಹುದು. || ೪೬ ||

ಅಹಮೇವೇದಮಾಸಾಗ್ರೇ ನಾನ್ಯತ್ಕಿಂಚಾಂತರಂ ಬಹಿಃ |
ಸಂಜ್ಞಾನಮಾತ್ರಮವ್ಯಕ್ತಂ ಪ್ರಸುಪ್ತಮಿವ ವಿಶ್ವತಃ || ೪೭ ||

ಇಲ್ಲಿ ಅದ್ವೈತವಾದಿಗಳು ವಾಙ್ಮನಸ್ಸುಗಳಿಗೆ ಅಗೋಚರವಾದ ನಿರ್ಗುಣ, ಮತ್ತು ಜಗತ್ಕಾರಣವಾದ ಸಗುಣ ಎಂದು ಎರಡು ಬಗೆ ಬ್ರಹ್ಮವಸ್ತುವನ್ನು ಕಲ್ಪಿಸು

ಇಂದ್ರಿಯಗಳಿಂದ ಹುಟ್ಟಿ ಅವುಗಳನ್ನು ಆಶ್ರಯಿಸಿ ಇಂದ್ರಿಯಗಳೆನಿಸುವರು. ನೀನು ನೋಡುತ್ತಿರುವ ಈ ರೂಪವು ಎಲ್ಲದರ ಒಳಗೂ ಹೊರಗೂ ಇರುವುದು. ಶುದ್ಧ ಜ್ಞಾನಸ್ವರೂಪವು. ಅತಿ ಸೂಕ್ಷ್ಮವಾಗಿ ನನ್ನ ಅನುಗ್ರಹವಿಲ್ಲದೆ ಕಾಣಲಾಗದುದರಿಂದ ಅವ್ಯಕ್ತವು, ವಿಶ್ವವಿಲಕ್ಷಣವು. ಇದೇ ನನ್ನ ರೂಪವೇ ಪ್ರಳಯಕಾಲದಲ್ಲಿ

ತ್ತಾರೆ. ಆ ಮತವನ್ನು ನಿರಾಕರಿಸಲು ಹೇಳುತ್ತಾರೆ. ಅಂತರಂ=ಎಲ್ಲರ ಒಳಗೂ ಇರುವ ಬಹಿಃ=ಎಲ್ಲದರ ಹೊರಗೂ ಇರುವ (ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ) ಸಂಜ್ಞಾನಮಾತ್ರಂ= ಪ್ರಕೃತಿ ಪ್ರಾಕೃತರೂಪರಹಿತವಾಗಿ ಶುದ್ಧಜ್ಞಾನಸ್ವರೂಪವಾದ ಅವ್ಯಕ್ತಂ=(೧) ಅತಿಸೂಕ್ಷ್ಮವಾದ (೨) ಶ್ರೀಹರಿಯ ಅನುಗ್ರಹವಿಲ್ಲದೆ ನೋಡಲಾಗದ ವಿಶ್ವತಃ(ಭಿನ್ನಂ)=ಲಕ್ಷ್ಮೀ ಬ್ರಹ್ಮಾದಿ ಜಗತ್ತಿಗಿಂತ ಭಿನ್ನವಾದ ಪ್ರಸುಪ್ತಂ ಇವ=ಕೇವಲ ಕಣ್ಣುಮುಚ್ಚಿದ್ದರಿಂದ ನಿದ್ರೆಮಾಡುವಂತೆ ಇದ್ದ ಅಹಂ=ನನ್ನ ಇದಂ ಏವ=ನೀನು ತಪಸ್ಸುಮಾಡಿ ಈಗ ಕಾಣುತ್ತಿರುವ ಈ ವರ್ಣ ಮತ್ತು ಕರಚರಣಾದಿ ಅವಯವ ವಿಶಿಷ್ಟರೂಪವೇ ಅಗ್ರೇ=ಸೃಷ್ಟಿಗೆ ಮೊದಲು ಪ್ರಳಯದಲ್ಲಿ ಆಸ=ಇದ್ದಿತು. ಅನ್ಯತ್ ಕಿಂಚ=ವಾಙ್ಮನಸಗೋಚರವಲ್ಲದ ನಿರ್ಗುಣವಾದ ಮತ್ತೊಂದು ಯಾವ ವಸ್ತುವೂ ನ ಆಸ=ಇರಲಿಲ್ಲ. ವಿ. ಟ. ಅಹಂ ಎಂದು ಷಷ್ಠೀ ವಿಭಕ್ತಿಯ ಅರ್ಥದಲ್ಲಿ ಹೇಳಿರುವ ಪ್ರಥಮಾ (ಸಪ್ತಸು ಪ್ರಥಮಾ ಎಲ್ಲ ವಿಭಕ್ತಿಗಳಲ್ಲಿಯೂ ಪ್ರಥಮಾ ವಿಭಕ್ತಿಯು ಬರುವುದು ಎಂದು ಸೂತ್ರವಿದೆ.) 'ಸತೋ ಬಂಧುಂ ಅಸತಿ (ಪ್ರಳಯದಲ್ಲಿ) ನಿರವಿಂದನ್' ಎಂಬುದರಿಂದ ಇದೇ ಪ್ರಳಯದಲ್ಲಿಯೂ ಇದ್ದುದೆಂದು ಶ್ರುತಿಯು ತಿಳಿಸುವುದು. ಸಂಜ್ಞಾನಮಾತ್ರಂ ಎಂಬುದರಿಂದ ತಪಃ ಫಲವಾಗಿ ವ್ಯಕ್ತವಾದ ಶ್ರೀಹರಿಯ ರೂಪವು ಪ್ರಾಕೃತವಲ್ಲವಾದ್ದರಿಂದ ಅನುಪಪತ್ತಿಯಿಲ್ಲವೆಂದು ತಿಳಿಸಿರುವರು. ಸಂ ಎಂಬುದು ಜ್ಞಾನಕ್ಕೂ ಸ್ವರೂಪಕ್ಕೂ ಅಭೇದವನ್ನು ಸೂಚಿಸುವುದು. ಮಾತ್ರವೆಂಬುದರಿಂದ ಅವತಾರ ರೂಪಗಳೂ ಶುದ್ಧಜ್ಞಾನಾತ್ಮಕಗಳೇ ಎಂದು ಸೂಚಿತವಾಯಿತು. 'ಸತ್ಯಂ ಜ್ಞಾನಂ' ಎಂದು ಶ್ರುತಿಯಿದೆ. 'ತದವ್ಯಕ್ತಮಾಹ ಹಿ' ಎಂಬ ಸೂತ್ರವು ಅವ್ಯಕ್ತವೆಂದು ಸಮರ್ಥಿಸುವುದು. ಪ್ರಸುಪ್ತಂ ಇವ ಎಂದು ಹೇಳಿದ್ದರಿಂದ ಶ್ರೀಹರಿಯು ಮಲಗುವನೆಂಬ ಮಾತು ಲೋಕವ್ಯಾಮೋಹನಕ್ಕೆಂದೂ ಅಜ್ಞಾನಾತ್ಮಕ ನಿದ್ರೆಯವನಿಗಿಲ್ಲವೆಂದೂ ಲಕ್ಷ್ಮಿಯನ್ನು ಬಿಟ್ಟಿರುವುದೇ ಸ್ವಾಪಾವಸ್ಥೆಯೆಂದೂ ಸೂಚಿತವಾಯಿತು. ವಿಶ್ವತಃ ಎಂದು ಹೇಳಿದ್ದರಿಂದ ಎಲ್ಲವೂ ಶ್ರೀಹರಿಯಲ್ಲಿ ಮುಖ್ಯವಾಗಿ ಲೀನವಾದಲ್ಲಿ ಅವನಿಗೂ ಅದಕ್ಕೂ ವಿಶೇಷವೇ (ಭೇದವೇ) ಇಲ್ಲದೆ ಹೋಗುವುದೆಂಬ ಶಂಕೆಯನ್ನು ನಿವಾರಿಸಿರುವರು. ಪ್ರಳಯಕಾಲದಲ್ಲಿ ಜಡಪ್ರಕೃತಿಯು ಸ್ಥೂಲರೂಪವನ್ನು ಕಳೆದುಕೊಂಡು ಸೂಕ್ಷ್ಮರೂಪದಿಂದ ಶ್ರೀಹರಿಯಲ್ಲಿರುವುದು. ಅದರ ಅಭಿಮಾನಿ ಲಕ್ಷ್ಮಿಯೂ ವಿಷ್ಣುವಿಗಿಂತ ಬೇರೆಯದರಲ್ಲಿ ಆದರವಿಲ್ಲದ್ದರಿಂದ ಲೀನಳೆನಿಸುವಳು. ಮುಖ್ಯವಾಗಿ ಲೀನಳಲ್ಲ. ಇವೆಲ್ಲವನ್ನೂ 'ನಾನಾವರ್ಣೋ ಹರಿಸ್ತ್ವೇಕಃ ಬಹುಶೀರ್ಷಭುಜೋರುಪಾತ್ ॥ ಆಸೀಲ್ಲಯೇ ತದನ್ಯತ್ತು ಸೂಕ್ಷ್ಮರೂಪಂ ಶ್ರಿಯಂ ವಿನಾ ॥ ಅಸುಪ್ತಃ ಸುಪ್ತ ಇವ ಚ ಮೀಲಿತಾಕ್ಷೋ ಭವೇದ್ಧರಿಃ । ಅನ್ಯತ್ರಾನಾದರಾತ್

ಕಣ್ಣುಮುಚ್ಚಿ ಇದ್ದುದರಿಂದ ಪ್ರಸುಪ್ತವೋ ಎಂಬಂತೆ ಇದ್ದಿತು. ಎಲ್ಲವೂ ಇದರಲ್ಲಿ ಲೀನವಾಗಿತ್ತು. ಲಕ್ಷ್ಮಿಯು ಅನ್ಯತ್ರ ಅನಾದರಳಾಗಿದ್ದುದರಿಂದ ಲೀನಳೋ

ಶ್ರೀಶ್ಚ ವಿಷ್ಣೌ ಲೀನೇವ ಕಥ್ಯತೇ || ಸೂಕ್ಷ್ಮತ್ವೇನ ಹರೌ ಸ್ಥಾನಾತ್ ಲೀನಮನ್ಯದಪೀಷ್ಯತೇ ||' ಎಂಬ ಪ್ರಮಾಣವು ತಿಳಿಸುತ್ತದೆಯಾಗಿ ಇದು ಹೇಗೆ? ಎಂಬ ಆಶಂಕೆಗೆ ಅವಕಾಶವಿಲ್ಲ. ಅಂತೂ ಸೃಷ್ಟಿಕಾಲದಲ್ಲಿ ನಾನಾ ವರ್ಣ ಸ್ವೀಕರಿಸಿ ಜ್ಞಾನಾತ್ಮಕಾವಯವಗಳುಳ್ಳ ಯಾವ ಶ್ರೀಹರಿಯ ರೂಪವು ವ್ಯಕ್ತವಾಗುವುದೋ ಅದೇ ಪ್ರಳಯದಲ್ಲಿ ತನ್ನ ಉದರದಲ್ಲಿ ಪ್ರಪಂಚವನ್ನು ಲೀನಮಾಡಿಕೊಂಡು ಯಾವಾಗಲೂ ಪ್ರಬುದ್ಧವಾಗಿದ್ದರೂ ತನ್ನಲ್ಲಿ ಲೀನವಾದಂತಿದ್ದ ಶ್ರೀ ತತ್ವದೊಂದಿಗೆ ಕಣ್ಣುಮುಚ್ಚಿ ಅಪರಿಚ್ಛಿನ್ನವಾಗಿರುವ ಶ್ರೀಹರಿಯ ರೂಪವೆಂದು ಅಭಿಪ್ರಾಯ. ಆದ್ದರಿಂದ ನಿರ್ಗುಣ ಸಗುಣ ರೂಪದ್ವಯ ಕಲ್ಪನೆಯು ಅಪ್ರಾಮಾಣಿಕವೆಂದು ಹೇಳಿರುವರು. || ೪೭ ||

ಮಯ್ಯನಂತಗುಣೇಽನಂತೇ ಗುಣತೋಽನಂತವಿಗ್ರಹೇ ।
ಯದಾಸೀತತ್ತ ಏವಾದ್ಯಃ ಸ್ವಯಂಭೂಃ ಸಮಭೂದಜಃ || ೪೮ ||

ಲಯವನ್ನು ಹೇಳಿ ಸೃಷ್ಟಿಯನ್ನು ಹೇಳುತ್ತಾರೆ. ಅನಂತಗುಣೇ= ಅಸಂಖ್ಯಾತ ಜ್ಞಾನಾದಿ ಗುಣಗಳುಳ್ಳ ಗುಣತಃ= ಒಂದೊಂದು ಗುಣದಿಂದಲೂ ಅನಂತೇ= ಅಸಂಖ್ಯಾತನಾದ ಅನಂತವಿಗ್ರಹೇ= ಅಸಂಖ್ಯಾತರೂಪವುಳ್ಳ ಮಯಿ - ನನ್ನ ಸಂಬಂಧಿಯಾದ ನಾಭಿಯಿಂದ ಯತ್= ಯಾವ ಪದ್ಮವು ಆಸೀತ್= ಆಯಿತೋ ತತಃ ಏವ= ಆ ಪದ್ಮದಿಂದಲೇ ಆದ್ಯಃ - ಜಗದಾದಿಯಲ್ಲಿ ಹುಟ್ಟಿದ ಸ್ವಯಂಭೂಃ= ಈ ಹೆಸರಿನ ಅಜಃ= ಚತುರ್ಮುಖ ಬ್ರಹ್ಮದೇವರು ಸಮಭೂತ್= ಹುಟ್ಟಿದರು. ಆದ್ಯಃ ಎಂಬುದರಿಂದ ಅಜ ಪದದ ಅರ್ಥವನ್ನು ನಿರ್ಣಯಿಸಿಕೊಟ್ಟಿರುವರು. ಮೇಲಿನ ಅರ್ಥವನ್ನು 'ಪ್ರತ್ಯೇಕತೋ ಗುಣಾನಾಂ ತು ನಿಸ್ಸೀಮತ್ವಮುದೀರ್ಯತೇ ಅನಂತತ್ವಂ ತು ಗುಣತಃ, ತೇ ಚಾನಂತಾ ಹಿ ಸಂಖ್ಯಯಾ || ಅತೋಽನಂತಗುಣೋ ವಿಷ್ಣುಃ ಗುಣತೋಽನಂತ ಏವ ಚ ||' ಎಂಬ ಪ್ರಮಾಣವು ಸ್ಪಷ್ಟಪಡಿಸುತ್ತವೆ. || ೪೮ ||

ಸ ವೈ ಯದಾ ಮಹಾದೇವೋ ಮಮ ವೀರ್ಯೋಪಬೃಂಹಿತಃ ।
ಮೇನೇಽಕಲ್ಪಮಿವಾತ್ಮಾನಮುದ್ಯತಃ ಸರ್ಗಕರ್ಮಣಿ || ೪೯ ||
ಅಥ ಮೇಽಭಿಹಿತೋ ದೇವಸ್ತಪೋಽತಪ್ಯತ ದಾರುಣಮ್ ।
ನವ ವಿಶ್ವಸೃಜೋ ಯುಷ್ಮಾನ್ ಯೇನಾದಾವಸೃಜದ್ವಿಭುಃ || ೫೦ ||

ಎಂಬಂತೆ ಇದ್ದಳು. ನನ್ನ ಜ್ಞಾನಾದಿಗುಣಗಳು ಅನಂತ. ಆ ಗುಣಗಳು ಒಂದೊಂದೂ ಅನಂತ (ನಿರವಧಿಕ). ನನ್ನ ರೂಪಗಳು ಅನಂತ. ಅಂತಹ ನನ್ನ ನಾಭಿಯಿಂದ ಒಂದು ಪದ್ಮವು ಹುಟ್ಟಿತು. ಅದರಿಂದ ಎಲ್ಲರಿಗೂ ಮೊದಲಿಗನಾದ ಸ್ವಯಂಭುವೆಂಬ ಚತುರ್ಮುಖ ಬ್ರಹ್ಮನು ಹುಟ್ಟಿದನು. ನನ್ನ ಶಕ್ತಿಯಿಂದ ಉಪಬೃಂಹಿತನಾದ ಆ ದೇವೋತ್ತಮನು ಸೃಷ್ಟಿಕರ್ಮದಲ್ಲಿ ಉದ್ಯುಕ್ತನಾಗಿ ಸೃಷ್ಟಿ ಮಾಡಲು ಅಸಮರ್ಥನೆಂದು ಬಗೆದಾಗ ನಾನು ತಪಸ್ಸುಮಾಡೆಂದು ಅವನಿಗೆ

ಸರ್ಗಕರ್ಮಣಿ - ಸೃಷ್ಟಿಕಾರ್ಯದಲ್ಲಿ ಉದ್ಯತಃ=ಉದ್ಯುಕ್ತರಾದ, ಮಮ=ನನ್ನ ವೀರ್ಯೋಪಬೃಂಹಿತಃ=ಸಾಮರ್ಥ್ಯದಿಂದ ಅಭಿವ್ಯಕ್ತವಾದ ಸ್ವರೂಪಶಕ್ತಿಯುಳ್ಳ ಮಹಾದೇವಃ ದೇವೋತ್ತಮರಾದ ಸಃ=ಬ್ರಹ್ಮದೇವರು ಯದಾ=ಯಾವಾಗ ಆತ್ಮಾನಂ=ತಮ್ಮನ್ನು ಅಕಲ್ಪಂ ಇವ ಸೃಷ್ಟಿಕಾರ್ಯದಲ್ಲಿ ಅಸಮರ್ಥನೋ ಎಂಬಂತೆ ಮೇನೇ=ತಿಳಿದರೋ ಅಥ=ಆಗ ಮೇ=ನನ್ನಿಂದ ಅಭಿಹಿತಃ=ಹೇಳಲ್ಪಟ್ಟವರಾಗಿ ದೇವಃ=ಬ್ರಹ್ಮದೇವರು ದಾರುಣಂ ತಪಃ=ಭಯಂಕರ (ಮತ್ತೊಬ್ಬರಿಂದ ಮಾಡಲಾಗದ) ತಪಸ್ಸನ್ನು ಅತಪ್ಯತ ವೈ=ಮಾಡಿದರು ಅಲ್ಲವೆ! ಯೇನ=ಆ ತಪಸ್ಸಿನ ಪ್ರಭಾವದಿಂದ ವಿಭುಃ=ಸಮರ್ಥರಾದ ಬ್ರಹ್ಮದೇವರು ಆದೌ=ಎಲ್ಲಕ್ಕೂ ಮೊದಲು ನವ ವಿಶ್ವಸೃಜಃ - ಒಂಬತ್ತು ಪ್ರಜೇಶ್ವರರಾದ ಯುಷ್ಮಾನ್=ನಿಮ್ಮನ್ನು ಅಸೃಜತ್=ಸೃಷ್ಟಿಸಿದರು. || ೪೯, ೫೦ ||

ಏಷಾ ಪಂಚಜನಸ್ಯಾಂಗ ದುಹಿತಾ ವೈ ಪ್ರಜಾಪತೇಃ ।
ಅಸಿಕ್ನೀ ನಾಮ ಪತ್ನೀತ್ವೇ ಪ್ರಜೇಶ ಪ್ರತಿಗೃಹ್ಯತಾಮ್ ॥ ೫೧ ॥

ಅಂಗ ಪ್ರಜೇಶ=ವತ್ಸ! ಪ್ರಜೇಶ್ವರನೇ, ಏಷಾ=ಇವಳು ಪಂಚಜನನೆಂಬ ಪ್ರಜೇಶ್ವರನ ಅಸಿಕ್ನೀ=ಎಂಬ ದುಹಿತಾ ವೈ=ಮಗಳು. ಇವಳನ್ನು ಹೆಂಡತಿಯಾಗಿ ಸ್ವೀಕರಿಸು. || ೫೧ ||

ಮಿಥುನವ್ಯವಾಯಧರ್ಮಸ್ತ್ವಂ ಪ್ರಜಾಸರ್ಗಮಿಮಂ ಪುನಃ ।
ಮಿಥುನವ್ಯವಾಯಧರ್ಮಿಣ್ಯಾಂ ಭೂರಿಶೋ ಭಾವಯಿಷ್ಯಸಿ ॥ ೫೨ ॥

ತ್ವಂ ಪುನಃ - ನೀನಾದರೋ ಮಿಥುನವ್ಯವಾಯಧರ್ಮಃ (ಸನ್)=ಸ್ತ್ರೀಪುರುಷರ ಸಂಭೋಗವೇ ಧರ್ಮವುಳ್ಳವನಾಗಿ ಅದೇ ಧರ್ಮವುಳ್ಳ ಈ ಅಸಿಕ್ನಿಯಲ್ಲಿ ಇಮಂ=ನೀನು ಮಾಡಬಯಸಿರುವ ಪ್ರಜಾಸೃಷ್ಟಿಯನ್ನು ಭೂರಿಶಃ=ಅನೇಕವಾಗಿ ಭಾವಯಿಷ್ಯಸಿ=ಉತ್ಪತ್ತಿಮಾಡುವೆ. || ೫೨ ||

ತ್ವತ್ತೋಽಧಸ್ತಾತ್ಪ್ರಜಾಃ ಸರ್ವಾ ಮಿಥುನೀಭೂಯ ಮಾಯಯಾ ।
ಮದೀಯಯಾ ಭವಿಷ್ಯಂತಿ ಹರಿಷ್ಯಂತಿ ಚ ಮೇ ಬಲಿಮ್ ॥ ೫೩ ॥

ಹೇಳಿದೆನು. ಆಗ ಬ್ರಹ್ಮದೇವನು ಅನನ್ಯ ಸಾಧಾರಣ ತಪಸ್ಸನ್ನು ಮಾಡಿದನು. ಆ ತಪಸ್ಸಿನಿಂದ ಮೊದಲು ನಿಮ್ಮನ್ನು– ಒಂಭತ್ತು ಪ್ರಜೇಶ್ವರರನ್ನು– ಸೃಷ್ಟಿಸಿದನು. ಈಕೆ ಪಂಚಜನನೆಂಬ ಪ್ರಜೇಶ್ವರನ ಮಗಳು. ಅಸಿಕ್ನಿ ಎಂಬುವಳು. ಪ್ರಜೇಶ್ವರ, ಇವಳನ್ನು ಹೆಂಡತಿಯನ್ನಾಗಿ ಸ್ವೀಕರಿಸು. ಸ್ತ್ರೀಪುರುಷರ ಸಂಭೋಗವನ್ನೇ ಧರ್ಮವಾಗಿ ಹೊಂದಿದ ನೀನು ಅದೇ ಧರ್ಮದ ಈಕೆಯಲ್ಲಿ ಈ ಪ್ರಜಾಸೃಷ್ಟಿಯನ್ನು ಅನೇಕ ರೀತಿಯಲ್ಲಿ ಬೆಳೆಸು. ನಿನ್ನ ಅನಂತರ ಬಂದ ಪ್ರಾಣಿಗಳೆಲ್ಲ ನನ್ನಿಂದ ಸೃಷ್ಟವಾದ ಸ್ತ್ರೀಯೆಂಬ ಪ್ರಕೃತಿಯೊಂದಿಗೆ ಮಿಥುನಭಾವವನ್ನು ಹೊಂದಿ ನನ್ನ ಸಾಮರ್ಥ್ಯದಿಂದ ಮಕ್ಕಳಾಗಿ ಹುಟ್ಟುವರು. ನನಗೆ ಬಲಿಯನ್ನು ಕೊಡುವರು.'

ತ್ವತ್ತಃ=ನಿನ್ನಿಂದ ಅಧಸ್ತಾತ್=ಈಚಿನ (ಅನಂತರದ) ಸರ್ವಾಃ ಪ್ರಜಾಃ= ಎಲ್ಲ ಪ್ರಾಣಿಗಳೂ ಮದೀಯಯಾ=ನನ್ನಿಂದ ಸೃಷ್ಟವಾದ ಮಾಯಯಾ=ಸ್ತ್ರೀ ಯೆಂಬ ಪ್ರಕೃತಿಯೊಂದಿಗೆ ಮಿಥುನೀಭೂಯ=ಮಿಥುನ ಭಾವವನ್ನು ಹೊಂದಿ ಮದೀಯಯಾ ಮಾಯಯಾ=ನನ್ನ ಸಾಮರ್ಥ್ಯದಿಂದ ಭವಿಷ್ಯಂತಿ=(ಮಕ್ಕಳಾಗಿ) ಹುಟ್ಟುವರು. ಮೇ=ನನಗೆ ಬಲಿಂ=ಪೂಜೆಯನ್ನು (ಕಾಣಿಕೆಯನ್ನು) ಹರಿಷ್ಯಂತಿ= ಮಾಡುವರು (ಕೊಡುವರು.) || ೫೩ ||

ಇತ್ಯುಕ್ತ್ವಾ ಮಿಷತಸ್ತಸ್ಯ ಭಗವಾನ್ ವಿಶ್ವಭಾವನಃ ।
ಸ್ವಪ್ನೋಪಲಬ್ಧಾರ್ಥ ಇವ ತತ್ರೈವಾಂತರ್ದಧೇ ಹರಿಃ || ೫೪ ||

ವಿಶ್ವಭಾವನಃ=ಜಗತ್ತಿನ ಸೃಷ್ಟಿಕರ್ತನಾದ ಭಗವಂತನಾದ ಶ್ರೀಹರಿಯು ಹೀಗೆಂದು ಹೇಳಿ ತಸ್ಯ ಮಿಷತಃ=ದಕ್ಷರು ನೋಡುತ್ತಿದ್ದಂತೆಯೇ ತತ್ರೈವ=ಕಾಣಿಸಿ ಕೊಂಡ ಸ್ಥಳದಲ್ಲಿಯೇ ಸ್ವಪ್ನದಲ್ಲಿ ಕಂಡ ಪದಾರ್ಥದಂತೆ ಅಂತರ್ಹಿತನಾದನು. (ಕಾಣದಾದನು). || ೫೪ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಚತುರ್ಥೋಽಧ್ಯಾಯಃ

ಅಥ ಪಂಚಮೋಽಧ್ಯಾಯಃ

ಶ್ರೀ ಬಾದರಾಯಣಿರುವಾಚ—

ತಸ್ಯಾಂ ಸ ಪಾಂಚಜನ್ಯಾಂ ವೈ ವಿಷ್ಣುಮಾಯೋಪಬೃಂಹಿತಃ ।
ಹರ್ಯಶ್ವಸಂಜ್ಞಾನಯುತಂ ಪುತ್ರಾನಜನಯದ್ವಿಭುಃ || ೧ ||

ಜ್ಞಾನವಿಲ್ಲದ ಕೇವಲ ಕರ್ಮಕ್ಕೆ ಪರಮಶ್ರೇಯಸ್ಸಾದ ಮೋಕ್ಷದ ಸಾಧನತ್ವವು ಇಲ್ಲವೆಂದು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಆ ವಿಷಯದಲ್ಲಿ ಉಪೋದ್ಘಾತ ವನ್ನು ರಚಿಸುತ್ತಾರೆ. ವಿಷ್ಣುಮಾಯೋಪಬೃಂಹಿತಃ=ಶ್ರೀಹರಿಯ ಶಕ್ತಿಯಿಂದ

ಎಂದು ಹೇಳಿ ಆ ವಿಶ್ವಸರ್ಜಕನಾದ ಶ್ರೀಹರಿಯು ದಕ್ಷರು ನೋಡುತ್ತಿದ್ದಂತೆಯೇ ಸ್ವಪ್ನದಲ್ಲಿ ಕಂಡ ಪದಾರ್ಥದಂತೆ ಅಲ್ಲಿಯೇ ಕಣ್ಣಿಗೆ ಕಾಣದಾದನು.

ಐದನೆಯ ಅಧ್ಯಾಯ

ಶ್ರೀ ಶುಕಾಚಾರ್ಯರು—ಶ್ರೀಹರಿಯ ಮಹಿಮೆಯಿಂದ ಸಾಮರ್ಥ್ಯವನ್ನು ಪಡೆದ ಪ್ರಜಾಸೃಷ್ಟಿಯಲ್ಲಿ ಸಮರ್ಥರಾದ ಆ ದಕ್ಷರು ಪಂಚಜನರೆಂಬ ಪ್ರಜೇಶ್ವರರ

ಅಭಿವೃದ್ಧ ಸಾಮರ್ಥ್ಯವುಳ್ಳ ಸಮರ್ಥರಾದ ಆ ದಕ್ಷರು ಆ ಪಾಂಚಜನ್ಯಾಂ-ಪಂಚಜನ ಪ್ರಜೇಶ್ವರರ ಪುತ್ರಿಯಲ್ಲಿ ಹರ್ಯಶ್ವರೆಂಬ ಹತ್ತುಸಾವಿರ ಮಕ್ಕಳನ್ನು ಪಡೆದರು. || ೧ ||

ಅಪೃಥಕ್ ಧರ್ಮಶೀಲಾಸ್ತೇ ಸರ್ವೇ ದಾಕ್ಷಾಯಣಾ ನೃಪ ।
ಪಿತ್ರಾ ಪ್ರೋಕ್ತಾಃ ಪ್ರಜಾಸರ್ಗೇ ಪ್ರತೀಚೀಂ
ಪ್ರಯಯುರ್ದಿಶಮ್ || ೨ ||

ಹೇ ನೃಪ= ಪರೀಕ್ಷಿದ್ರಾಜನೇ, ಪಿತ್ರಾ-ತಂದೆಗಳಾದ ದಕ್ಷರಿಂದ ಪ್ರಜಾಸರ್ಗೇ ಪ್ರೋಕ್ತಾಃ-ಪ್ರಜೆಗಳ ಸೃಷ್ಟಿಗಾಗಿ ಹೇಳಲ್ಪಟ್ಟ ಅಪೃಥಕ್‌ಧರ್ಮಶೀಲಾಃ=ಒಂದೇ ಆಚಾರದ ಸ್ವಭಾವದವರಾದ ದಾಕ್ಷಾಯಣಾಃ = ದಕ್ಷಪುತ್ರರಾದ ತೇ ಸರ್ವೇ-ಆ ಹತ್ತುಸಾವಿರ ಹರ್ಯಶ್ವರೆಲ್ಲರೂ ಪಶ್ಚಿಮದಿಕ್ಕಿಗೆ ಪ್ರಯಯುಃ ಪ್ರಯಾಣಮಾಡಿದರು. || ೨ ||

ತತ್ರ ನಾರಾಯಣಸರಸ್ತೀರ್ಥಂ ಸಿಂಧುಸಮುದ್ರಯೋಃ ।
ಸಂಗಮೋ ಯತ್ರ ಸುಮಹನ್ಮುನಿಸಿದ್ಧನಿಷೇವಿತಮ್ || ೩ ||

ತತ್ರ = ಆ ಪಶ್ಚಿಮದಿಕ್ಕಿನಲ್ಲಿ ಸಿಂಧುಸಮುದ್ರಯೋಃ = ಸಿಂಧುನದಿ ಮತ್ತು ಸಮುದ್ರಗಳ ಸಂಗಮವು (ಅಸ್ತಿ) = ಇದೆ. ಯತ್ರ = ಯಾವ ಈ ಸಂಗಮದಲ್ಲಿ ಸುಮಹನ್ಮುನಿಸಿದ್ಧ ನಿಷೇವಿತಮ್-ಅತ್ಯಂತ ಮಹನೀಯರಾದ ಮುನಿಗಳೂ ಸಿದ್ಧರೂ-ಇವರಿಂದ ಅತಿಶಯವಾಗಿ ಸೇವಿತವಾದ ನಾರಾಯಣಸರೋವರವೆಂಬ ತೀರ್ಥವು (ಅಸ್ತಿ)-ಇದೆ. ಅಥವಾ ಆ ನಾರಾಯಣತೀರ್ಥವನ್ನು ಕುರಿತು ಪ್ರಯಾಣ ಮಾಡಿದರು ಎಂದು ಹಿಂದಕ್ಕೆ ಅನ್ವಯ || ೩ ||

ತದುಪಸ್ಪರ್ಶನಾದೇವ ವಿನಿರ್ಧೂತಮಲಾಶಯಾಃ ।
ಧರ್ಮೇ ಪಾರಮಹಂಸ್ಯೇ ಚ ಪ್ರೋತ್ಪನ್ನಮತಯೋಽಪ್ಯುತ || ೪ ||

ಮಗಳಾದ ತಮ್ಮ ಪತ್ನಿಯಲ್ಲಿ ಹರ್ಯಶ್ವರೆಂಬ ಹತ್ತುಸಾವಿರ ಮಕ್ಕಳನ್ನು ಪಡೆದರು. ತಂದೆ ದಕ್ಷರು ಅವರಿಗೆ ಪ್ರಜೆಗಳನ್ನು ಸೃಷ್ಟಿಸುವಂತೆ ಹೇಳಿದರು. ಒಂದೇ ಆಚಾರದ ಸ್ವಭಾವವುಳ್ಳ ಆ ದಕ್ಷಪುತ್ರರು ಹತ್ತುಸಾವಿರ ಹರ್ಯಶ್ವರೂ ಪಶ್ಚಿಮ ದಿಕ್ಕಿಗೆ ಪ್ರಯಾಣಮಾಡಿದರು. ಅಲ್ಲಿ ಸಿಂಧುನದಿ ಮತ್ತು ಸಮುದ್ರಸಂಗಮ. ಆ ಸಂಗಮದಲ್ಲಿ ನಾರಾಯಣ ಸರೋವರ. ಇದನ್ನು ಅತಿ ಮಹನೀಯರಾದ ಮುನಿಗಳೂ ಸಿದ್ಧರೂ ಯಾವಾಗಲೂ ಸೇವಿಸುತ್ತಿದ್ದರು. ಆ ಸರೋವರದಲ್ಲಿ ಸ್ನಾನ ಆಚಮನಾದಿಗಳಿಂದ ಅವರ ಮನಸ್ಸಿನ ಕೊಳೆ-ರಾಗದ್ವೇಷಾದಿಗಳು ಸಂಪೂರ್ಣವಾಗಿ ಹೋದುವು. ಪರಮಹಂಸ ಸನ್ಯಾಸಿಗಳ ಧರ್ಮಗಳಲ್ಲಿ ಊರ್ಧ್ವ

ತೇಪುಸ್ತೇ ತಪ ಏವೋಗ್ರಂ ಪಿತ್ರಾದೇಶೇನ ಯಂತ್ರಿತಾಃ ।
ಪ್ರಜಾವಿವೃದ್ಧಯೇ ಯತ್ತಾನ್ ದೇವರ್ಷಿಸ್ತಾನ್ ದದರ್ಶ ಹ ॥ ೫ ॥

ತದುಪಸ್ಪರ್ಶನಾತ್ ಏವ=ಆ ನಾರಾಯಣಸರೋವರದ ನೀರಿನಲ್ಲಿ ಸ್ನಾನ ಆಚಮನಾದಿಗಳಿಂದಲೇ ವಿನಿರ್ಧೂತಮಲಾಶಯಾಃ = ಸಂಪೂರ್ಣವಾಗಿ ಹೋಗಲಾಡಿಸಲ್ಪಟ್ಟ ರಾಗದ್ವೇಷಾದಿ ಕೊಳೆಯುಳ್ಳ ಮನಸ್ಸನ್ನು ಹೊಂದಿದ ಚ=ಮತ್ತು ಪಾರಮಹಂಸ್ಯೇ = ಪರಮಹಂಸ ಸನ್ಯಾಸಿಗಳ ಧರ್ಮೇ = ಧರ್ಮವಾದ ಊರ್ಧ್ವರೇತಸ್ಕತೆ ಮೊದಲಾದವುಗಳಲ್ಲಿ ಪ್ರೋತ್ಪನ್ನಮತಯಃ = ನಿಶ್ಚಯಮಾಡಿದ ಮನಸ್ಸುಳ್ಳವರು ಅಪಿ=ಆಗಿದ್ದರೂ ಪಿತ್ರಾದೇಶೇನ=ಪ್ರಜಾಸೃಷ್ಟಿಯಲ್ಲಿ ತೊಡಗಿರಿ ಎಂಬ ದಕ್ಷರ ಅಪ್ಪಣೆಯಿಂದ ಯಂತ್ರಿತಾಃ = ನಿಯಮಿತರಾದ ತೇ ಉತ = ಅವರಾದರೋ ಪ್ರಜಾವಿಶೇಷವೃದ್ಧಿಗಾಗಿ ಉಗ್ರಂ=ತೀವ್ರವಾದ ತಪಃ ಏವ= ತಪಸ್ಸನ್ನೇ ತೇಪುಃ = ಮಾಡಿದರು. ಪ್ರಜಾವಿಶೇಷವೃದ್ಧಿಗಾಗಿ ಯತ್ತಾನ್=ಉದ್ಯುಕ್ತರಾದ (ಸನ್ನದ್ಧರಾದ) ತಾನ್= ಅವರನ್ನು ದೇವರ್ಷಿಗಳಾದ ನಾರದರು ನೋಡಿದರು. ಹ=ಅಲ್ಲವೇ ! ॥ ೪, ೫ ॥

ಉವಾಚ ಚಾಥ ಹರ್ಯಶ್ವಾಃ ಕಥಂ ಸ್ರಕ್ಷ್ಯಥ ವೈ ಪ್ರಜಾಃ ।
ಅದೃಷ್ಟ್ವಾಂತಂ ಭುವೋ ಯೂಯಂ ಬಾಲಿಶಾ ಬತ ಬಾಲಕಾಃ ॥ ೬ ॥

ಮೋಕ್ಷಮಾರ್ಗಾಧಿಕಾರಿಗಳಾದ ಇವರು ಪ್ರವೃತ್ತಿಕರ್ಮಕ್ಕೆ ಒಳಗಾಗಿ ಭ್ರಷ್ಟರಾಗುವರಲ್ಲಾ ಎಂದು ಕೃಪೆಯಿಂದ ನಾರದರು ಇವರಿಗೆ ರಹಸ್ಯಾರ್ಥಕ ಮಾತುಗಳಿಂದ ಉಪದೇಶಿಸಿದರೆಂದು ಹೇಳುತ್ತಾರೆ. ಅಥ= ನೋಡಿದ ಮೇಲೆ ಉವಾಚ ಚ= ಹೇಳಿಯೂ ಹೇಳಿದರು. ಬಾಲಕಾಃ = ಹುಡುಗರಾದ ಹರ್ಯಶ್ವರೇ, ಬಾಲಿಶಾಃ ಯೂಯಂ = ಹುಡುಗರಾದ್ದರಿಂದಲೇ (ಅಜ್ಞಾನಿಗಳಾದ ನೀವು ಭುವಃ ಅಂತಂ= ಭೂಮಿಯ ಕೊನೆಯನ್ನು ಅದೃಷ್ಟ್ವಾ=ತಿಳಿಯದೆ ಪ್ರಜೆಗಳನ್ನು ಕಥಂ=ಯಾವ ಪ್ರಯೋಜನಕ್ಕಾಗಿ, ಹೇಗೆ ತಾನೇ ಸ್ರಕ್ಷ್ಯಥ= ಸೃಷ್ಟಿಮಾಡುವಿರಿ? ಸೃಷ್ಟಿಯೆಂಬ ಕರ್ಮವು ಜ್ಞಾನವೆಂಬ ಪ್ರಯೋಜನಕ್ಕಾಗಿ ಆಗಬೇಕು. ಆ ಜ್ಞಾನವೆಂಬ ಪ್ರಯೋಜನವು ಇಲ್ಲವಾದ್ದರಿಂದ ಸೃಷ್ಟಿಯು ಹೇಗೆ ತಾನೇ ಸಿದ್ಧಿಕರವಾದೀತು? ಸರ್ವಥಾ ಆಗುವುದಿಲ್ಲವೆಂದು ಅರ್ಥ. ವೈ=ಆ ಜ್ಞಾನವು ಆತ್ಮಾನಾತ್ಮವಿವೇಕರೂಪ

ರೇತಸ್ಕತೆ ಮೊದಲಾದವುಗಳಲ್ಲಿ ಅವರ ಮನಸ್ಸು ಸ್ಥಿರಗೊಂಡಿತು. ಆದರೂ ತಂದೆಯ ಅಪ್ಪಣೆಯಿಂದ ನಿಯಂತ್ರಿತರಾಗಿದ್ದ ಅವರು ಪ್ರಜೆಗಳ ವಿಶೇಷ ವೃದ್ಧಿಗಾಗಿ ತೀವ್ರ ತಪಸ್ಸು ಮಾಡಿದರು. ಪ್ರಜಾವೃದ್ಧಿಕಾರ್ಯದಲ್ಲಿ ಉದ್ಯುಕ್ತರಾಗಿದ್ದ ಅವರನ್ನು ದೇವರ್ಷಿ ನಾರದರು ನೋಡಿ 'ಹರ್ಯಶ್ವರೇ, ನೀವಿನ್ನೂ ಬಾಲಕರು. ಆದ್ದರಿಂದಲೇ ಜ್ಞಾನರಹಿತರು. ಭೂಮಿಯ ಕೊನೆಯನ್ನು ಕಾಣದೆ ಪ್ರಜೆಗಳನ್ನು ಹೇಗೆ ತಾನೇ

ವಾದುದು. (ಅದನ್ನು ಸಂಪಾದಿಸಿಕೊಂಡು ಸೃಷ್ಟಿಯಲ್ಲಿ ತೊಡಗಿರಿ ಎಂದು ಅಭಿಪ್ರಾಯ.) 'ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ' ದೇವತೆಗಳು ಪರೋಕ್ಷಪ್ರಿಯರು. ಪ್ರತ್ಯಕ್ಷದ್ವೇಷಿಗಳು ಎಂದು ಶ್ರುತಿ ಇರುವುದರಿಂದಲೂ ಮತ್ತೊಬ್ಬರಿಗೆ ತಿಳಿಯಬಾರದಾದ್ದರಿಂದಲೂ ಹರ್ಯಶ್ವರಿಗೆ ಸ್ವಾಭಾವಿಕವಾಗಿ ಜ್ಞಾನ ವಿದೆಯೆಂಬುದನ್ನು ಪ್ರಕಟಮಾಡುವುದಕ್ಕಾಗಿಯೂ ನಾರದರು ಭುವೋ ಅಂತಂ ಇತ್ಯಾದಿ ರಹಸ್ಯಾರ್ಥಕ ಮಾತುಗಳಿಂದ ಹರ್ಯಶ್ವರ ಜ್ಞಾನಾಭಾವವನ್ನು ತೋರಿ ಸಿದ್ದಾರೆಂದು ತಿಳಿಯಬೇಕು. ಈ ಹಿನ್ನೆಲೆಯಲ್ಲಿ ಬಾಲಿಶಾ ಎಂದುದು ಔಪಚಾರಿಕ ವೆಂದು ಅರ್ಥವಾಗುವುದು. ||೬||

ತಥೈಕಪುರುಷಂ ರಾಜ್ಯಂ ಬಿಲಂ ಚಾದೃಷ್ಟನಿರ್ಗಮಮ್ ।
ಬಹುರೂಪಾಂ ಸ್ತ್ರಿಯಂ ಚಾಪಿ ಪುಮಾಂಸಂ
ಪುಂಶ್ಚಲೀಪತಿಮ್ ॥ ೭ ॥
ನದೀಮುಭಯತೋ ವಾಹಾಂ ಪಂಚಪಂಚಾದ್ಭುತಂ ಗೃಹಮ್ ।
ಕ್ವಚಿದ್ಧಂಸಂ ಚಿತ್ರಕಥಂ ಕ್ಷೌರಾಂತಂ ಚ ಸ್ವಯಂಭ್ರಮಿಂ ॥ ೮ ॥
ಕಥಂ ಸ್ವಪಿತುರಾದೇಶಮವಿದ್ವಾಂಸೋ ವಿಪಶ್ಚಿತಃ ।
ಅನುರೂಪಮವಿಜ್ಞಾಯ ಅಹೋ ಸರ್ಗಂ ಕರಿಷ್ಯಥ ॥ ೯ ॥

ತಥಾ = ಅದರಂತೆಯೇ ಏಕಪುರುಷಂ ರಾಜ್ಯಂ = ಒಬ್ಬನೇ ಪುರುಷನಿರುವ ರಾಜ್ಯವನ್ನೂ ಅದೃಷ್ಟನಿರ್ಗಮಂ ಬಿಲಂ ಚ = ಹೊರಹೋಗಲು ದಾರಿಯಿಲ್ಲದ ಬಿಲ ವನ್ನೂ ಬಹುರೂಪಾಂ ಸ್ತ್ರಿಯಂ ಚ = ಅನೇಕರೂಪಳಾದ ಹೆಂಗುಸನ್ನೂ ಪುಂಶ್ಚಲೀ-ಪತಿಂ ಪುಮಾಂಸಂ ಅಪಿ = ಸ್ವೈರಿಣಿಯ ಗಂಡನಾದ ಗಂಡುಸನ್ನೂ ಉಭಯತೋ ವಾಹಾಂ ನದೀಂ = ಎರಡು (ಮೇಲಕ್ಕೂ ಕೆಳಕ್ಕೂ) ಕಡೆಗೂ ಹರಿಯುವ ನದಿಯನ್ನೂ ಪಂಚಪಂಚಾದ್ಭುತಂ ಗೃಹಂ = ಇಪ್ಪತ್ತೈದು ಸಂಖ್ಯೆಯುಳ್ಳ ಆಶ್ಚರ್ಯಕರ ಮನೆ ಯನ್ನೂ ಕ್ವಚಿತ್ = ಅಲ್ಲಲ್ಲಿ ಚಿತ್ರಕಥಂ = ಆಶ್ಚರ್ಯಕರ ಕಥೆ ಹೇಳುವ ಹಂಸಂ =

ಸೃಷ್ಟಿಸುವಿರಿ? ಆದರಿಂದ ನಿಮಗೆ ಪ್ರಯೋಜನವಾದರೂ ಹೇಗಾದೀತು? ವಿವೇಕ ಜ್ಞಾನವನ್ನು ಸಂಪಾದಿಸಿಕೊಂಡು ಸೃಷ್ಟಿಯಲ್ಲಿ ತೊಡಗಿರಿ. ಅದರಂತೆಯೇ ಏಕಪುರುಷರಾಜ್ಯವನ್ನೂ, ಹೋಗಲು ಮಾರ್ಗವಿಲ್ಲದ ಬಿಲವನ್ನೂ ಬಹುರೂಪಳಾದ ಸ್ತ್ರೀಯನ್ನೂ ಪುಂಶ್ಚಲೀಪತಿಯಾದ ಪುರುಷನನ್ನೂ ಎರಡು ಕಡೆಗೂ ಹರಿಯುವ ನದಿಯನ್ನೂ ಇಪ್ಪತ್ತೈದು ಆಶ್ಚರ್ಯ ಗೃಹವನ್ನೂ ಚಿತ್ರಕಥೆ ಹೇಳುವ ಒಂದೆಡೆ ಹಂಸ ವನ್ನೂ ಕತ್ತಿಯಧಾರೆಯಂತೆ ತೀಕ್ಷ್ಣವಾದ ಸ್ವಯಂ ತಿರುಗುವ ಚಕ್ರವನ್ನೂ ಮತ್ತು ಜ್ಞಾನಿ ನಿಮ್ಮ ತಂದೆಯ ಅನುರೂಪ ಆದೇಶವನ್ನೂ ತಿಳಿಯದೆ ನೀವು ಪ್ರಜಾಸೃಷ್ಟಿ ಯನ್ನು ಹೇಗೆ ಮಾಡುವಿರಿ? ಆಶ್ಚರ್ಯ! ಅಯ್ಯೋ! ಖೇದವಾಗುವುದು!' ಎಂದು ಗೂಢಾರ್ಥದ ಮಾತನ್ನಾಡಿದರು.

ಹಂಸವನ್ನೂ ಕ್ಷುರಾಂತಂ=ಕತ್ತಿಯ ಒಳಭಾಗದಂತೆ ತೀಕ್ಷ್ಣವಾದ ಸ್ವಯಂಭ್ರಮಿಂ-ಸ್ವತಂತ್ರವಾಗಿ ಸುತ್ತುಹಾಕುವ ವಸ್ತುವನ್ನೂ ಅನುರೂಪಂ-ಆತ್ಮಾನಾತ್ಮವಿವೇಕವೆಂಬ ಅನುಗುಣವಾದ ಜ್ಞಾನವನ್ನೂ ಅವಿಜ್ಞಾಯ=ತಿಳಿಯದೆ ಅವಿದ್ವಾಂಸಃ-ಅಜ್ಞಾನಿಗಳಾದ ನೀವು ವಿಪಶ್ಚಿತಃ-ಜ್ಞಾನಿಗಳಾದ ಸ್ವಪಿತುಃ=ನಿಮ್ಮ ತಂದೆ ದಕ್ಷರ ಆದೇಶಂ=ಅಪ್ಪಣೆಯಾದ ಸರ್ಗಂ-ಪ್ರಜಾಸೃಷ್ಟಿಕರ್ಮವನ್ನು ಕಥಂ ಕರಿಷ್ಯಥ=ಹೇಗೆ ಮಾಡುವಿರಿ? ಅಹೋ = ಆಶ್ಚರ್ಯವು. ಅನ್ಯಾಯವಾಗಿ ನೀವು ಭ್ರಷ್ಟರಾಗುವಿರಿ! ಬತ-ಖೇದವಾಗುವುದು. || ೬-೯ ||

ಶ್ರೀ ಶುಕ ಉವಾಚ—

ತನ್ನಿಶಮ್ಯಾಥ ಹರ್ಯಶ್ವಾ ಔತ್ಪತ್ತಿಕಮನೀಷಯಾ ।
ವಾಚಃ ಕೂಟಂ ಚ ದೇವರ್ಷೇಃ ಸ್ವಯಂ ವಿಮಮೃಶುರ್ಧಿಯಾ ॥

ಅಥ-ಅನಂತರ ಹರ್ಯಶ್ವರು ದೇವರ್ಷಿಗಳಾದ ನಾರದರ ತತ್=ಇದುವರೆಗೂ ಅವರು ಹೇಳಿದ ವಾಚಃ ಕೂಟಂ=(೧) ಮಾತಿನ ಸಮೂಹವನ್ನು (೨) ಗುಹ್ಯಭಾಷೆಯಿಂದ ಹೇಳಿರುವುದರಿಂದ ಮೋಸಗೊಳಿಸುವ ಮಾತಿನಂತೆ ತೋರುವ (೩) ಅಲ್ಪಬುದ್ಧಿಗಳಿಂದ ತಿಳಿಯಲಾಗದ ಪರೋಕ್ಷ ಕಥನದಿಂದ ಅರ್ಥಾಂತರ ಪ್ರತೀತಿಯುಳ್ಳ ಮಾತನ್ನು ನಿಶಮ್ಯ=ಕೇಳಿ ಸ್ವಯಂ=ತಾವೇ ಪರೋಪದೇಶವಿಲ್ಲದೆಯೇ ಔತ್ಪತ್ತಿಕಮನೀಷಯಾ=ಸಹಜವಾದ (ಸ್ವಾಭಾವಿಕವಾದ) ಜ್ಞಾನಸಂಪತ್ತುಳ್ಳ (ವಿಚಾರಶಕ್ತಿಯುಳ್ಳ) ಧಿಯಾ=ಬುದ್ಧಿಯಿಂದ ಅಥವಾ ಸ್ವಾಭಾವಿಕ ಜ್ಞಾನದಿಂದ (ನಿರೂಪ್ಯ)-ವಿಚಾರಮಾಡಿ ಬುದ್ಧಿಯಿಂದ ವಿಮಮೃಶುಃ ಚ-ಆಲೋಚಿಸಿ ನಿಶ್ಚಯಿಸಿದರು. ವಿಮರ್ಶೆಯಿಂದ ಗೂಢಾರ್ಥವನ್ನು ನಿಶ್ಚಯಮಾಡಿಕೊಂಡರೆಂದು ಅರ್ಥ. || ೧೦ ||

ಭೂಃ ಕ್ಷೇತ್ರಂ ಬೀಜಸಂಜ್ಞಸ್ಯ ಯದನಾದಿನಿಬಂಧನಮ್ ।
ಅದೃಷ್ಟ್ವಾ ತಸ್ಯ ನಿರ್ವಾಣಂ ಕಿಮಸತ್ಕರ್ಮಭಿರ್ಭವೇತ್ ॥ ೧೧ ॥

ಹೇಗೆ ನಿಶ್ಚಯಿಸಿದರೆಂದರೆ ಮುಂದಿನ ಹತ್ತು ಶ್ಲೋಕಗಳಿಂದ ನಾರದರು ಹೇಳಿದ ಹತ್ತು ವಾಕ್ಯಗಳಿಗೂ ಅವರು ವಿಮರ್ಶಿಸಿ ನಿರ್ಣಯಿಸಿದ ಅರ್ಥವನ್ನು

ನಾರದರ ಮಾತುಗಳ ಗುಂಪು ಗುಹ್ಯಭಾಷೆಯದಾಗಿ ಮೋಸಗೊಳಿಸುವುದಕ್ಕಾಗಿ ಆಡಿದುದೋ ಎಂಬಂತೆ ಇತ್ತು. ಅಲ್ಪಮತಿಗಳಿಂದ ಅದರ ಅಂತರಾರ್ಥವನ್ನು ತಿಳಿಯಲಾಗುತ್ತಿರಲಿಲ್ಲ. ಅಂತಹ ಮಾತುಗಳನ್ನು ಕೇಳಿದ ಹರ್ಯಶ್ವರು ತಮಗೆ ಸಹಜವಾದ ವಿಚಾರಶಕ್ತಿಯುಳ್ಳ ಬುದ್ಧಿಯಿಂದ ವಿಚಾರಮಾಡಿ ತಾವೇ ಆ ಮಾತುಗಳ ಅರ್ಥವನ್ನು ಆಲೋಚಿಸಿ ನಿಶ್ಚಯಮಾಡಿಕೊಂಡರು.

ಸಂಸಾರಕ್ಕೆ ಬೀಜದಂತಿರುವವನು ಜೀವ. ಅವನಿಗೆ ಅನಾದಿಕಾಲದಿಂದ ಅತಿಶಯ ಬಂಧಕ್ಕೆ ಕಾರಣವಾದ ಲಿಂಗವೆಂದು ಕರೆಸುವ ಸೂಕ್ಷ್ಮಶರೀರವೇ

ತಿಳಿಸುತ್ತಾರೆ. 'ಅದೃಷ್ಟ್ವಾ ಅಂತಂ ಭುವಃ' ಎಂಬುದರ ಅರ್ಥವನ್ನು ಹೇಳುತ್ತಾರೆ. ಭೂಃ=ನಾರದರು ಹೇಳಿದ ಭೂ ಶಬ್ದದಿಂದ ಬೀಜಸಂಜ್ಞಸ್ಯ=(ಸಂಸಾರಕ್ಕೆ) ಬೀಜವೆಂದು ಕರೆಸುವ ಜೀವನಿಗೆ ಯತ್=ಯಾವುದು ಅನಾದಿನಿಬಂಧನಂ=ಅನಾದಿಕಾಲದಿಂದಲೂ ಅತಿಶಯವಾದ ಬಂಧಕ್ಕೆ ಕಾರಣವಾಗಿದೆಯೋ ತತ್=ಆ ಕ್ಷೇತ್ರಂ=ಲಿಂಗಶಬ್ದವಾಚ್ಯವಾದ ಸೂಕ್ಷ್ಮಶರೀರವು (ಉಚ್ಯತೇ)=ಹೇಳಲ್ಪಡುವುದು. 'ಭೂ ಸತ್ತಾಯಾಂ' ಎಂಬ ಧಾತುವಿನಿಂದ ಉತ್ಪನ್ನವಾದ ಭೂ ಶಬ್ದವು ಸತ್ತೆ (ಇರುವಿಕೆ) ಯನ್ನು ತಿಳಿಸುವುದರಿಂದ ಅದು ಎಂದು ಆರಂಭವಾಯಿತೆಂದು ಹೇಳಲಾಗುವುದಿಲ್ಲವಾಗಿ ಅನಾದಿಸತ್ತಾತ್ಮಕ ಲಿಂಗಶರೀರವು ಭೂಶಬ್ದವಾಚ್ಯವೆಂಬುದು ಯುಕ್ತವು. ತಸ್ಯ=ಆ ಬಂಧಕ ಲಿಂಗಶರೀರದ ನಿರ್ವಾಣಂ=ಆತ್ಯಂತಿಕ ನಾಶವನ್ನು ಅದೃಷ್ಟ್ವಾ=ತಿಳಿಯದೆ ಈ ಉಪಾಯದಿಂದ ನಾಶವಾಗುವುದೆಂಬುದನ್ನು ತಿಳಿದುಕೊಳ್ಳದೆ ಅಸತ್ಕರ್ಮಭಿಃ=(೧) ಆತ್ಮಾನಾತ್ಮ ವಿವೇಕವನ್ನು ಹುಟ್ಟಿಸದ (೨) ಮೋಕ್ಷೋಪಯೋಗಿಯಲ್ಲದ ಸೃಷ್ಟಿರೂಪವಾದ ಕರ್ಮಗಳಿಂದ ಕಿಂ (ಫಲಂ) ಭವೇತ್=ಏನು ಪ್ರಯೋಜವಾದೀತು ? ಮೋಕ್ಷೋಪಯೋಗಿ ಜ್ಞಾನರಹಿತ ಪ್ರಜಾಸೃಷ್ಟಿಯಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಅರ್ಥ. ಜೀವಸ್ಯ ಎಂದು ಹೇಳದೆ ಬೀಜಸಂಜ್ಞಸ್ಯ ಎಂದು ಹೇಳಿದ್ದರಿಂದ ಹೊಟ್ಟನಿಂದ ಕೂಡಿದ ಬೀಜವೇ ಹೇಗೆ ಅಂಕುರೋತ್ಪಾದಕವೋ ಹಾಗೆ ಅನಾದಿ ಲಿಂಗಶರೀರದಿಂದ ಕೂಡಿದ ಜೀವನೇ ಅನೇಕ ಶರೀರಧಾರಣೆಗೆ ಕಾರಣಗಳಾದ ಕರ್ಮಗಳನ್ನು ಮಾಡುವನಾದ್ದರಿಂದ ಅದರ ನಾಶಕ್ಕಾಗಿ ಪ್ರಯತ್ನವು ಅವಶ್ಯ ಕರ್ತವ್ಯವೆಂದು ತಿಳಿಸಿರುವರು. || ೧೧ ||

ಏಕ ಏವೇಶ್ವರಸ್ತುರ್ಯೋ ಭಗವಾನ್ ಸ್ವಾಶ್ರಯಃ ಪರಃ ।
ತಮದೃಷ್ಟ್ವಾಽಭವಂ ಪುಂಸಃ ಕಿಮಸತ್ಕರ್ಮಭಿರ್ಭವೇತ್ || ೧೨ ||

'ತಥೈಕಪುರುಷಂ ರಾಜ್ಯಂ' ಎಂಬ ಮಾತಿನ ನಿರ್ಣೀತಾರ್ಥವನ್ನು ಹೇಳುತ್ತಾರೆ. ತುರ್ಯಃ=ಜಾಗ್ರದಾದಿ ಅವಸ್ಥಾತ್ರಯ ರಹಿತನಾದ ಸ್ವಾಶ್ರಯಃ=

ಭೂ ಶಬ್ದದಿಂದ ಉಕ್ತವಾದುದು. ಆ ಲಿಂಗಶರೀರದ ಆತ್ಯಂತಿಕ ನಾಶವನ್ನು (ನಾಶೋಪಾಯವನ್ನು) ತಿಳಿಯದೆ ಇದ್ದಲ್ಲಿ ಆತ್ಮ-ಅನಾತ್ಮ ವಿವೇಕವನ್ನು ತಂದು ಕೊಡದ, ಮೋಕ್ಷೋಪಯೋಗಿಯಲ್ಲದ ಪ್ರಜಾಸೃಷ್ಟಿ ಕರ್ಮಗಳಿಂದ ಏನು ತಾನೇ ಪ್ರಯೋಜನವಾದೀತು ? (ಇದನ್ನೇ ನಾರದರು 'ಭೂಮಿಯ ಅಂತವನ್ನು ಕಾಣದೆ' ಎಂದು ಹೇಳಿದ್ದು.

ಶ್ರೀಹರಿಯು ಒಬ್ಬನೇ ಈ ಜಗತ್ತಿನ ಪ್ರಧಾನನಿಯಾಮಕನು. ಅವನು ಜಾಗ್ರದಾದಿ ಅವಸ್ಥಾತ್ರಯರಹಿತನು ; ತನಗೆ ತಾನೇ ಆಶ್ರಯನು ; ಸ್ವತಂತ್ರನು ; ಆದ್ದರಿಂದಲೇ ಸರ್ವೋತ್ತಮನು. ಅವನಿಗೆ ಸಂಸಾರವಿಲ್ಲ, ಉತ್ಪತ್ತಿಯಿಲ್ಲ. ನಿತ್ಯ ಮುಕ್ತನಾದ ಅವನನ್ನು ತಿಳಿಯದೆ ಅಧಿಕಾರಿ ಚೇತನನಿಗೆ ಕರ್ಮಗಳಿಂದ ಭಗವ-

ತನಗೆ ತಾನೇ ಆಶ್ರಯನಾದ, ಸ್ವತಂತ್ರನಾದ, ಆದ್ದರಿಂದಲೇ ಪರಃ=ಸರ್ವೋತ್ತಮನಾದ ಭಗವಾನ್=ಶ್ರೀಹರಿಯು ಏಕಃ ಏವ=ಒಬ್ಬನೇ ಈಶ್ವರಃ=ಈ ಜಗತ್ತಿನ ಪ್ರಧಾನ ನಿಯಾಮಕನು. ಅಭವಂ=(೧) ಸಂಸಾರವಿಲ್ಲದ (೨) ಉತ್ಪತ್ತಿಯಿಲ್ಲದ ನಿತ್ಯಮುಕ್ತನಾದ ತಂ=ಆ ಶ್ರೀಹರಿಯನ್ನು ಅದೃಷ್ಟ್ವಾ=ತಿಳಿಯದೆ ಪುಂಸಃ=ಅಧಿಕಾರಿಚೇತನನಿಗೆ ಅಸತ್ಕರ್ಮಭಿಃ=ಶ್ರೀಹರಿಯನ್ನು ತಿಳಿಯದಿದ್ದುದರಿಂದ ಅವನಿಗೆ ಸಮರ್ಪಿಸದ ಆದ್ದರಿಂದಲೇ ಕೇವಲ ಪಶುಹಿಂಸಾರೂಪವಾದ ಯಾಗಾದಿಕರ್ಮಗಳಿಂದ ಕಿಂ (ಫಲಂ) ಭವೇತ್=ನಿತ್ಯಫಲರೂಪವಾದ ಮೋಕ್ಷವು ಏನಾದೀತು ! ಆಗುವುದಿಲ್ಲವೆಂದರ್ಥ. ಪುಂಸಃ=ಅಧಿಕಾರಿ ಚೇತನರಿಗೆ ಅಭವಂ=ಮುಕ್ತಿಪ್ರದನಾದ ಎಂದಾದರೂ ಅರ್ಥ. ಇದರಿಂದ 'ಏಕಪುರುಷಂ ರಾಜ್ಯಂ ಅವಿಜ್ಞಾಯ' ಎಂಬ ಮಾತಿಗೆ ಶ್ರೀಹರಿಯೊಬ್ಬನೇ ಪ್ರಧಾನ ನಿಯಾಮಕನಾಗಿರುವ ಜಗತ್ತನ್ನು ಅರಿಯದೆ ಎಂದರ್ಥ ಹೇಳಿದಂತಾಯಿತು. || ೧೨ ||

ಪುಮಾನ್ನಾಪೈತಿ ಯದ್ಗತ್ವಾ ಬಿಲಂ ಸ್ವರ್ಗಗತೋ ಯಥಾ ।
ಪ್ರತ್ಯಗಾತ್ಮಾವಿದ ಇಹ ಕಿಮಸತ್ಕರ್ಮಭಿರ್ಭವೇತ್ || ೧೩ ||

'ಬಿಲಂ ಚಾದೃಷ್ಟನಿರ್ಗಮಂ' ಎಂಬ ಮಾತಿಗೆ ಆಲೋಚಿತವಾದ ಅರ್ಥವನ್ನು ಹೇಳುತ್ತಾರೆ. ಪುಮಾನ್=ಪುರುಷನು ಯತ್=ಯಾವ ಪ್ರತ್ಯಗಾತ್ಮ=ಸರ್ವರೀತಿಯಿಂದಲೂ ಅನುಗತ(ವ್ಯಾಪ್ತ)ವಾದ ಬ್ರಹ್ಮಸ್ವರೂಪವನ್ನು ಗತ್ವಾ=ಹೊಂದಿ ಯಥಾ ಸ್ವರ್ಗಗತಃ=ಸ್ವರ್ಗಕ್ಕೆ ಹೋದವನು ಹಿಂತಿರುಗಿ ಬರುವಂತೆ ನ ಅಪೈತಿ=ಬಿಟ್ಟು ಬರುವುದಿಲ್ಲವೋ ತತ್=ಆ ಬಿಲಂ=ಅತ್ಯಂತ ಬಲಿಷ್ಠವಾದ್ದರಿಂದ ಬಿಲ ಶಬ್ದದಿಂದ ಕರೆಸುವ ಬ್ರಹ್ಮವಸ್ತುವನ್ನು ಅವಿದಃ=ತಿಳಿಯದೆ ಇರುವವನಿಗೆ ಇಹ=ಈ ಜೀವಲೋಕದಲ್ಲಿ ಅಸತ್ಕರ್ಮಭಿಃ=ನಶ್ವರೈಶ್ವರ್ಯ ಸ್ವರ್ಗಾದಿ ಸಾಧನಗಳಾದ ನಿತ್ಯನೈಮಿತ್ತಿಕ ಮೊದಲಾದ ಕರ್ಮಗಳಿಂದ ಕಿಂ ಭವೇತ್=ಏನು ತಾನೇ ಫಲ

ದರ್ಪಣಮಾಡದ ಆದ್ದರಿಂದಲೇ ಹಿಂಸಾರೂಪವಾದ ಯಾಗಾದಿಗಳಿಂದ ನಿತ್ಯಫಲವಾದೀತೇ ? (ಇದನ್ನೇ ನಾರದರು 'ಏಕಪುರುಷಂ ರಾಜ್ಯಂ ಅವಿಜ್ಞಾಯ' ಎಂದು ಹೇಳಿದ್ದು.)

ಸ್ವರ್ಗಕ್ಕೆ ಹೋದವನು ಹಿಂತಿರುಗಿ ಬರುವನು. ಆದರೆ ಸರ್ವರೀತಿಯಿಂದಲೂ ವ್ಯಾಪ್ತನಾದ ಶ್ರೀಹರಿಯನ್ನು ಹೊಂದಿದವನು ಮತ್ತೆ ಬಿಟ್ಟು ಬರುವುದಿಲ್ಲ. ಅತ್ಯಂತ ಬಲಿಷ್ಠನಾದ ಆ ಪರಬ್ರಹ್ಮನು 'ಬಿಲ' ಎಂದು ಕರೆಸಿಕೊಳ್ಳುವನು. ಇವನನ್ನು ಅರಿಯದ ಪುರುಷನಿಗೆ ಈ ಜೀವಲೋಕದಲ್ಲಿ ನಶ್ವರ ಐಶ್ವರ್ಯ ಸ್ವರ್ಗಾದಿಗಳನ್ನು ಕೊಡುವ ನಿತ್ಯನೈಮಿತ್ತಿಕ ಕರ್ಮಗಳಿಂದ ಆಗುವ ಫಲವಾದರೂ ಏನು ? (ಇದನ್ನೇ ನಾರದರು 'ಹೋಗಲು ಮಾರ್ಗವಿಲ್ಲದ ಬಿಲ'ವೆಂಬ ಮಾತಿನಿಂದ ಹೇಳಿದ್ದು.)

ವಾದೀತು ? ಪ್ರತ್ಯಕ್ ಧಾಮ ಎಂಬ ಪಾಠದಲ್ಲಿ ಸರ್ವಾಂತರ್ಯಾಮಿಯಾದ ತೇಜೋರೂಪವಾದ ಎಂದರ್ಥ. ಸ್ವರ್ಗಗತನೆಂಬ ದೃಷ್ಟಾಂತವು ವ್ಯತಿರೇಕ (ವಿರುದ್ಧ)ವಾದ ಅರ್ಥದಲ್ಲಿ ಕೊಟ್ಟಿದೆ. ಇದರಿಂದ ಅದೃಷ್ಟ ನಿರ್ಗಮಂ ಎಂಬಲ್ಲಿ ಪುನರಾವೃತ್ತಿಶೂನ್ಯವೆಂದು ಒಂದು ಕಡೆ ಅರ್ಥವೆಂದೂ ಮತ್ತೊಂದು ಕಡೆ ಬಿಟ್ಟು ಬರದಿರುವುದು ಅರ್ಥವೆಂದೂ ಸೂಚಿಸಿದಂತಾಯಿತು. ಬಿಲಂ ಸ್ವರ್ಗಂ= ಪಾತಾಳ ವನ್ನು ಹೊಂದಿದವನು ಎಂದೂ ಅರ್ಥ ಮಾಡಿರುವರು. || ೧೩ ||

ನಾನಾರೂಪಾತ್ಮನೋ ಬುದ್ಧಿಃ ಸ್ವೈರಿಣೀವ ಗುಣಾನ್ವಿತಾ ।
ತನ್ನಿಷ್ಠಾಮಗತಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೪ ॥

'ಬಹುರೂಪಾಂ ಸ್ತ್ರಿಯಂ' ಎಂಬ ಮಾತಿಗೆ ಸರಿಯಾದ ಅರ್ಥವನ್ನು ಹೇಳುತ್ತಾರೆ. ಆತ್ಮನಃ=ಜೀವನ ಗುಣಾನ್ವಿತಾ=ಸತ್ತ್ವಾದಿಗುಣಗಳಿಂದ ಕೂಡಿದ ವಿಕೃತ ವಾದ ನಾನಾರೂಪಾ=ಆದ್ದರಿಂದಲೇ (೧) ಅನೇಕ ಬಣ್ಣಗಳುಳ್ಳ (ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ ಎಂಬ ಶ್ವೇತಾಶ್ವತರ ಶ್ರುತಿಯಂತೆ) (೨) ನಾನಾವಿಧ ಸಂಸ್ಕಾರದಿಂದ ವಾಸನಾವಿಶಿಷ್ಟವಾದ ಸ್ವೈರಿಣೀ ಇವ= ತನ್ನ ಇಷ್ಟದಂತೆ ಹೋಗುವ ಸ್ತ್ರೀಯಂತೆ ಇರುವ ಯಾ ಬುದ್ಧಿಃ= ಚೇತನಾತ್ಮಕ (ಸ್ವರೂಪಭೂತ) ಮತ್ತು ಅಚೇತನಾತ್ಮಕ ಬುದ್ಧಿ ಯಾವುದಿದೆಯೋ ತನ್ನಿಷ್ಠಾಂ= ಆ ಚೇತನಾತ್ಮಕಬುದ್ಧಿಯು ಭಗವಂತನಲ್ಲಿ ಆಸಕ್ತವಾಗುವಂತೆ ಅಚೇತನಾತ್ಮಕ ಬುದ್ಧಿಯು ನಾಶವಾಗುವಂತೆ ಅಗತಸ್ಯ= ಭಗವಂತನಲ್ಲಿ ಭಕ್ತಿ ಮೊದಲಾದ ಸಾಮಗ್ರಿಯನ್ನು ಸಂಪಾದಿಸಿಕೊಳ್ಳ ದಿರುವ ಪುರುಷನಿಗೆ ಅಸತ್ಕರ್ಮಭಿಃ= ಬುದ್ಧಿದೋಷಗಳನ್ನು ನಾಶಮಾಡುವಲ್ಲಿ ಅಸಮರ್ಥಗಳಾದ ದಾನ ಮೊದಲಾದ ನಶ್ವರಕರ್ಮಗಳಿಂದ ಕಿಂ ಭವೇತ್= ಏನು ಫಲವಾದೀತು? ಏನೂ ಆಗುವುದಿಲ್ಲವೆಂದರ್ಥ. || ೧೪ ||

ತತ್ಸಂಗಭ್ರಂಶಿತೈಶ್ವರ್ಯಂ ಸಂಸರಂತಂ ಕುಭಾರ್ಯವತ್ ।
ತದ್ಗತೀರಬುಧಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೫ ॥

'ಪುಮಾಂಸಂ ಪುಂಶ್ಚಲೀ ಪತಿಂ' ಎಂಬುದರ ಗೂಢಾರ್ಥವನ್ನು ಹೇಳುತ್ತಾರೆ. ತತ್ಸಂಗ=ಆ ರಜಸ್ತಮೋಗುಣ ವಿಶಿಷ್ಟ ಬುದ್ಧಿಯ ವಶನಾಗಿ ಭ್ರಂಶಿತೈಶ್ವರ್ಯಂ=

ಜೀವನ ಬುದ್ಧಿಯು ಸತ್ವ ಮೊದಲಾದ ಗುಣವಿಶಿಷ್ಟವು ಮತ್ತು ಗುಣವಿಕಾರ ವಾದುದು. ಆದ್ದರಿಂದಲೇ ಅದು ಅನೇಕ ರೂಪ; ನಾನಾ ವಿಧವಾದ ವಾಸನಾ ವಿಶಿಷ್ಟ. ತನ್ನಿಷ್ಟಬಂದೆಡೆಗೆ ಹೋಗುವ ಸ್ವೈರಿಣಿಯಂತೆ ಇರುವ ಆ ಬುದ್ಧಿಯನ್ನು ಜಡವಾದುದನ್ನು ನಾಶಪಡಿಸಿ ಚೇತನಾತ್ಮಕವಾದುದನ್ನು ಶ್ರೀಹರಿಯಲ್ಲಿ ಆಸಕ್ತ ವಾಗುವಂತೆ ಮಾಡಬೇಕು. ಇದಕ್ಕೆ ಬೇಕಾದ ಭಗವದ್ಭಕ್ತಿ ಮೊದಲಾದ ಸಾಮಗ್ರಿ ಯನ್ನು ಸಂಪಾದಿಸಿಕೊಳ್ಳದಿರುವ ಪುರುಷನಿಗೆ ಬುದ್ಧಿದೋಷಗಳನ್ನು ನಾಶಪಡಿಸಲು ಅಸಮರ್ಥಗಳಾದ ದಾನಾದಿ ನಶ್ವರ ಫಲಕ ಕರ್ಮಗಳಿಂದ ಏನು ತಾನೇ ಫಲ

ಭ್ರಷ್ಟವಾದ ಶ್ರೀಹರಿಯ ಜ್ಞಾನವೆಂಬ ಐಶ್ವರ್ಯವುಳ್ಳ, ಶಮದಮಾದಿ ಸಂಪತ್ತನ್ನು ಕಳೆದುಕೊಂಡ ಆದ್ದರಿಂದಲೇ ಕುಭಾರ್ಯವತ್=ಶಾಸ್ತ್ರನಿಂದಿತಳೂ ಲೋಕನಿಂದಿತಳೂ ಆದ ಹೆಂಡತಿಯನ್ನು ಹೊಂದಿದವನಂತೆ ಸಂಸರಂತಂ=ಅನೇಕ ಜನ್ಮಗಳನ್ನೆತ್ತಿ ಸುಖದುಃಖಗಳನ್ನು ಅನುಭವಿಸುವ ಜೀವನನ್ನು ಮತ್ತು ತದ್ಗತೀಃ-ಅವನು ಹೊಂದುವ ಸ್ವರ್ಗ ನರಕ ಮೊದಲಾದ ಗತಿಗಳನ್ನೂ ಅಬುಧಸ್ಯ-ತಿಳಿಯದಿರುವ ಪುರುಷನಿಗೆ ಇಹ = ಈ ಜೀವಲೋಕದಲ್ಲಿ ಅಸತ್ಕರ್ಮಭಿಃ = ಭಗವಂತನನ್ನು ಉದ್ದೇಶಿಸದೆ ಪ್ರಸಕ್ತಗಳಾದ ತೀರ್ಥಸ್ನಾನ ಮೊದಲಾದ ಕರ್ಮಗಳಿಂದ (ರಾಜಸ ತಾಮಸ ಕರ್ಮಗಳಿಂದ) (ಫಲಂ) ಭವೇತ್ ಕಿಂ=ದುಃಖನಿವೃತ್ತಿರೂಪ ಫಲ ವಾಗುವುದೇ ? ಆಗುವುದಿಲ್ಲವೆಂದರ್ಥ. 'ಕುಭಾರ್ಯವತ್' ಎಂದು ಹೇಳಿದ್ದರಿಂದ 'ಪುಂಶ್ಚಲೀಪತಿ' ಶಬ್ದದ ಅರ್ಥವನ್ನು ಹೇಳಿರುವರು. || ೧೫ ||

ಸೃಷ್ಟ್ಯಪ್ಯಯಕರೀಂ ಮಾಯಾಂ ವೇಲಾಕೂಲಾಂತವೇಗಿತಾಮ್ ।
ಮತ್ತಸ್ಯ ತದವಿಜ್ಞಾನಾತ್ ಕಿಮಸತ್ಕರ್ಮಭಿರ್ಭವೇತ್ || ೧೬ ||

'ನದೀಮುಭಯತೋ ವಾಹಾಂ' ಎಂಬುದಕ್ಕೆ ಅಭಿಪ್ರೇತವಾದ ಅರ್ಥವನ್ನು ಹೇಳುತ್ತಾರೆ. ವೇಲಾಕೂಲಾಂತವೇಗಿತಾಂ = (೧) ವೇಲಾಕೂಲ ಶಬ್ದಗಳಿಂದ

ವಾದೀತು ? (ಇದನ್ನೇ ನಾರದರು 'ಬಹುರೂಪಳಾದ ಸ್ತ್ರೀಯನ್ನು ತಿಳಿಯದೆ' ಎಂಬ ಮಾತಿನಿಂದ ಹೇಳಿದ್ದು.)

ಆ ರಜಸ್ತಮೋಗುಣ ವಿಶಿಷ್ಟ ಬುದ್ಧಿಯ ವಶನಾಗಿ ಜೀವನು ಶ್ರೀಹರಿಜ್ಞಾನ ವೆಂಬ ಐಶ್ವರ್ಯವನ್ನು ಕಳೆದುಕೊಳ್ಳುವನು. ಶಮದಮಾದಿ ಸಂಪತ್ತೂ ಹೋಗು ವುದು. ಅದರಿಂದ ಶಾಸ್ತ್ರ-ಲೋಕನಿಂದಿತ ಭಾರ್ಯೆಯನ್ನು ಹೊಂದಿದವನಂತೆ ಅನೇಕ ಜನ್ಮಗಳೆತ್ತಿ ಸುಖದುಃಖಗಳನ್ನು ಅನುಭವಿಸುವನು. ಅಂತಹ ಜೀವನನ್ನೂ ಅವನು ಹೊಂದುವ ಸ್ವರ್ಗ ನರಕ ಮೊದಲಾದ ಗತಿಗಳನ್ನೂ ತಿಳಿಯದಿರುವ ಚೇತನ ನಿಗೆ ಈ ಲೋಕದಲ್ಲಿ ಭಗವದುದ್ದೇಶವಿಲ್ಲದೆ ಮಾಡಿದ ತೀರ್ಥಸ್ನಾನ ಮೊದಲಾದ ರಾಜಸ-ತಾಮಸ ಕರ್ಮಗಳಿಂದ ದುಃಖನಿವೃತ್ತಿಯೆಂಬ ಫಲವಾಗುವುದೇ ? (ಇದನ್ನೇ ನಾರದರು 'ಪುಂಶ್ಚಲೀಪತಿಯಾದ ಪುರುಷನನ್ನು ತಿಳಿಯದೆ' ಎಂದು ಹೇಳಿದ್ದು.)

ನದಿಯು ಸಮುದ್ರ ಸಂಗಮದಲ್ಲಿ ಸಮುದ್ರವೃದ್ಧಿಯಾದಾಗ ಮೇಲಕ್ಕೂ ಇಲ್ಲದಿದ್ದಾಗ ಕೆಳಕ್ಕೂ ಹರಿಯುವಂತೆ ಶ್ರೀಹರಿಯ ಇಚ್ಛೆಯು ಸೃಷ್ಟಿಸಂಹಾರಗಳಲ್ಲಿ ಕ್ರಮ-ವ್ಯುತ್ಕ್ರಮದಿಂದ ವೇಗಯುಕ್ತವಾಗಿ (ಸ್ಥಿತಿಕಾಲದಲ್ಲಿ ಮೆಲ್ಲಗೆ) ಪ್ರವರ್ತಿಸಿ, ಸಂಸಾರ ಪ್ರವಾಹ ಪತಿತರಿಗೆ ಹೊರಬರಲು ಅನುಕೂಲಪಡಿಸುವ ತಪೋವಿದ್ಯೆಗಳಲ್ಲಿ ಕಾಮಕ್ರೋಧಾದಿಗಳನ್ನುಂಟುಮಾಡಿ ಹೊರಬರದಂತೆ ಮಾಡುವುದು, ಸೃಷ್ಟಿಸಂಹಾರ (ಸ್ಥಿತಿ) ಕಾರಕ ಭಗವದಿಚ್ಛೆಯನ್ನು ವಿಷಯಾಸಕ್ತಿಯಿಂದ ಮರೆತ ಅಂದರೆ ಶ್ರವಣ

ಸೃಷ್ಟಿಸಂಹಾರಗಳನ್ನು ಇಟ್ಟುಕೊಳ್ಳಬೇಕು. ಅವುಗಳ ಅಂತ(ಕೊನೆ)ದಲ್ಲಿ ವೇಗ ಯುಕ್ತವಾದ(ವಾಹ ಶಬ್ದದ ಲಕ್ಷ್ಯಾರ್ಥವಿದು.) ಸ್ಥಿತಿಕಾಲದಲ್ಲಿ ಮೆಲ್ಲಗೆ ಪ್ರವರ್ತಿಸುವ ಎಂದೂ ಇಟ್ಟುಕೊಳ್ಳಬೇಕು. (೨) ಸಂಸಾರ ಪ್ರವಾಹದಲ್ಲಿ ಬಿದ್ದವರಿಗೆ ಹೊರಬರುವ ಸ್ಥಳವಾದ ತಪೋವಿದ್ಯೆ ಮೊದಲಾದವುಗಳಲ್ಲಿ ಕಾಮಕ್ರೋಧಾದಿಗಳನ್ನುಂಟುಮಾಡಿ ಹೊರಬರಲು ಅವಕಾಶ ಕೊಡದಿರುವ ಸೃಷ್ಟ್ಯಪ್ಯಯಕರೀಂ= ಸೃಷ್ಟಿಸಂಹಾರಗಳನ್ನು ಮಾಡುವ ಮಾಯಾಂ- ಶ್ರೀಹರಿಯ ಇಚ್ಛೆಯನ್ನು ಮತ್ತಸ್ಯ (೧) ವಿಷಯಾಸಕ್ತಿ ಯಿಂದ ಮರೆತ, (೨) ಕುರಿತು ಶ್ರವಣ ಮನನ ಮೊದಲಾದುವನ್ನು ಮಾಡದ ಆದ್ದರಿಂದಲೇ ತದವಿಜ್ಞಾನಾತ್- (೧) ಅದನ್ನು ತಿಳಿಯದಿರುವುದರಿಂದ (೨) ಜನನ ಮರಣ ರೂಪವಾದ ಸಂಸಾರವನ್ನು ಹೊಂದಿಸುವ ಭಗವದಿಚ್ಛೆಯನ್ನು ಅಭಿಮುಖ ಮಾಡಿಕೊಳ್ಳುವ ಉಪಾಯಗಳ ಜ್ಞಾನವಿಲ್ಲದ್ದರಿಂದ ಅಸತ್ಕರ್ಮಭಿಃ- ಅಶ್ರದ್ಧೆಯಿಂದ ಮಾಡಿದ ತಪಸ್ಸೇ ಮೊದಲಾದ ಕಾಮಕ್ರೋಧಾದಿ ಕಲುಷಿತ ಕರ್ಮಗಳಿಂದ ಕಿಂ ಭವೇತ್- ಮಾಯಾ ನಿವೃತ್ತಿಯೆಂಬ ಫಲವು ಆದೀತೇ? ಆಗುವುದಿಲ್ಲವೆಂದರ್ಥ. ಸೃಷ್ಟಿಯು ಆಕಾಶದಿಂದ ವಾಯು ಇತ್ಯಾದಿ ಕ್ರಮದಿಂದಲೂ ಲಯವು ಪೃಥ್ವಿಯು ತನಗೆ ಕಾರಣವಾದ ಜಲತತ್ತ್ವದಲ್ಲಿ ಲಯವಾಗುವುದು ಇತ್ಯಾದಿ ವಿಪರೀತ ಕ್ರಮ ದಿಂದಲೂ ಆಗುವುದರಿಂದ ಉಭಯತೋವಾಹ ಎರಡು ಕಡೆಗೂ ಹರಿಯುವುದೆಂದು ಅಭಿಪ್ರಾಯ. ನದಿಯಾದರ ಸಮುದ್ರಕ್ಕೆ ಸೇರುವ ಸ್ಥಳದಲ್ಲಿ ಸಮುದ್ರದ ನೀರು ವೃದ್ಧಿಯಾಗಿ ನುಗ್ಗಿದಾಗ ಹಿಂದಕ್ಕೂ ಇಲ್ಲದಿದ್ದಾಗ ಮುಂದಕ್ಕೂ ಹರಿಯುವುದರಿಂದ ಎರಡೂ ಕಡೆಗೂ ಹರಿಯುವುದು. ಸಾಧಾರಣ ಪ್ರವಾಹ ಕಾಲದಲ್ಲಿ ಸಸ್ಯಗಳ ಹುಟ್ಟುವಿಕೆಗೂ ಅತಿ ಪ್ರವಾಹಕಾಲದಲ್ಲಿ ಸಸ್ಯನಾಶಕ್ಕೂ ನದಿಯು ಕಾರಣವಾಗು ವುದರಿಂದ ಸೃಷ್ಟಿನಾಶಕರಿಯೆಂದು ತಿಳಿಯಬೇಕು. ॥ ೧೬ ॥

ಪಂಚವಿಂಶತಿತತ್ತ್ವಾನಾಂ ಪುರುಷೋಽದ್ಭುತದರ್ಶನಃ ।
ಅಧ್ಯಾತ್ಮಮಬುಧಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೭ ॥

'ಪಂಚಪಂಚಾದ್ಭುತಂ ಗೃಹಂ' ಎಂಬುದನ್ನು ವಿಮರ್ಶಿಸಿದ ರೀತಿಯನ್ನು ಹೇಳುತ್ತಾರೆ. ಪಂಚವಿಂಶತಿ ತತ್ತ್ವಾನಾಂ= ಇಪ್ಪತ್ತೈದು ತತ್ತ್ವಗಳ (ಹನ್ನೊಂದು

ಮನನಾದಿಗಳನ್ನು ಮಾಡದ ಪುರುಷನಿಗೆ ಭಗವದಿಚ್ಛೆಯನ್ನು ತಿಳಿಯದ್ದರಿಂದ— ಅದನ್ನು ಅಭಿಮುಖಮಾಡಿಕೊಳ್ಳುವ ಉಪಾಯಜ್ಞಾನವಿಲ್ಲದ್ದರಿಂದ—ಕಾಮ ಕ್ರೋಧಾದಿ ದೋಷದುಷ್ಟ ಅಶ್ರದ್ಧಾಸಹಿತ ತಪಸ್ಸು ಮೊದಲಾದ ಕರ್ಮಗಳಿಂದ ಮಾಯಾನಿವೃತ್ತಿಯೆಂಬ ಫಲವಾಗುವುದೇ? (ಇದನ್ನೇ ನಾರದರು 'ಎರಡು ಕಡೆಗೂ ಹರಿಯುವ ನದಿಯನ್ನು ತಿಳಿಯದೆ' ಎಂಬುದರಿಂದ ತಿಳಿಸಿದ್ದು.)

ಇಪ್ಪತ್ತೈದು ತತ್ತ್ವಗಳ ಅಂದರೆ ಹನ್ನೊಂದು ಇಂದ್ರಿಯಗಳು, ಐದು ಭೂತಗಳು, ಐದು ತನ್ಮಾತ್ರೆಗಳು, ಅಹಂಕಾರತತ್ತ್ವ, ಮಹತ್ತತ್ತ್ವ, ಪ್ರಕೃತಿ ಮತ್ತು ಜೀವರ

ಇಂದ್ರಿಯಗಳು, ಐದು ಭೂತಗಳು, ಐದು ತನ್ಮಾತ್ರೆಗಳು, ಅಹಂಕಾರ, ಮಹತ್ತತ್ತ್ವ, ಪ್ರಕೃತಿ, ಮತ್ತು ಜೀವ—ಇವು ಇಪ್ಪತ್ತೈದು ತತ್ತ್ವಗಳು.) ಅದ್ಭುತದರ್ಶನಃ= ಮಧ್ಯದಲ್ಲಿ ಅದ್ಭುತನಾಗಿ ಕಾಣುವ ಪುರುಷಃ= ಗೃಹದಂತಿರುವ ಪುರುಷನು ಆಧ್ಯಾತ್ಮಂ—ಅವನನ್ನು ಆಶ್ರಯಿಸಿರುವ ಇಂದ್ರಿಯಗಳು ಇವುಗಳನ್ನು ಅಬುಧಸ್ಯ= ತಿಳಿಯದಿರುವ ಜೀವನಿಗೆ ಅಸತ್ಕರ್ಮಭಿಃ=' ಓಂ ಇತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್' ಎಂಬೀ ಮೊದಲಾದ ಸ್ಮೃತಿಗಳಲ್ಲಿ ಹೇಳಿದ ಬ್ರಹ್ಮವಿಷಯಕ ಗಳಲ್ಲದ ಯೋಗಾಭ್ಯಾಸ ಮೊದಲಾದ ಕರ್ಮಗಳಿಂದ ಕಿಂ ಭವೇತ್=ವಾಯು ಪ್ರಸಾದರೂಪ ಫಲವು ಹೇಗೆ ತಾನೇ ಆದೀತು ? ಆಗುವುದಿಲ್ಲವೆಂದರ್ಥ. ಇದರಿಂದ ಪಂಚ ಪಂಚ ಎಂಬುದರಿಂದ ಐದು ಐದುಗಳು ಎಂದರೆ ಇಲ್ಲಿ ಹೇಳಿರುವ ಎರಡು ಐದುಗಳಲ್ಲದೆ ಇನ್ನೂ ಮೂರು ಐದುಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿ ದಂತಾಯಿತು. ಭಗವಂತನ ಪರವಾಗಿಯೂ ಈ ಶ್ಲೋಕಕ್ಕೆ ಅರ್ಥಮಾಡಿರುವರು. ಮೇಲೆ ಹೇಳಿದ ಇಪ್ಪತ್ತೈದು ತತ್ತ್ವಗಳಿಗೆ (ಆಶ್ರಯಃ)=ಆಶ್ರಯನಾದ ಪುರುಷಃ= ಪೂರ್ಣಷಡ್ಗುಣನಾದ ಅದ್ಭುತದರ್ಶನಃ=ಆಶ್ಚರ್ಯಕರ ಜ್ಞಾನವನ್ನುಂಟುಮಾಡುವ ಆಧ್ಯಾತ್ಮಂ ತಂ = ನಿಯಾಮಕನಾಗಿ ದೇಹೇಂದ್ರಿಯಾದಿಗಳಲ್ಲಿ ಅಧಿಷ್ಠಾತನಾದ ಶ್ರೀಹರಿಯನ್ನು ತಿಳಿಯದಿರುವವನಿಗೆ ಅಸತ್ಕರ್ಮಭಿಃ= ತಾನೇ ಸ್ವತಂತ್ರನೆಂಬ ಅಭಿಮಾನದಿಂದ ಮಾಡಿದ ಕರ್ಮಗಳಿಂದ ಏನು ಫಲವಾದೀತು? ಶ್ರೀಹರಿಯು ಇಪ್ಪತ್ತೈದು ತತ್ತ್ವಗಳಿಗೆ ಆಶ್ರಯನಾಗಿ ಜೀವ ದೇಹದಲ್ಲಿ ಇದ್ದು ಜ್ಞಾನಪ್ರದನಾಗಿರು ವನು. 'ಅಂತಸ್ಥಃ ಪುರುಷೋ ನಾಮ ಜ್ಞಾನದಃ ಸರ್ವದೇಹಿನಾಂ, ಬಹಿಃಸ್ಥ ಈಶ್ವರೋ ನಾಮ ಜ್ಞಾನಾದಿ ಫಲದೋ ಹರಿಃ' || ಎಂಬ ಪ್ರಮಾಣವು ಇದನ್ನು ತಿಳಿಸುವುದು. || ೧೭ ||

ಐಶ್ವರಂ ಶಾಸ್ತ್ರಮುತ್ಸೃಜ್ಯ ಬಂಧಮೋಕ್ಷಾನುದರ್ಶನಮ್ ।
ವಿವಿಕ್ತ ಪದಮಜ್ಞಾತ್ವಾ ಕಿಮಸತ್ಕರ್ಮಭಿರ್ಭವೇತ್ ॥ ೧೮ ॥

ಮಧ್ಯದಲ್ಲಿ ಅದ್ಭುತನಾಗಿ ಕಾಣುವ ಗೃಹದಂತಿರುವ ಪುರುಷನು ಮತ್ತು ಅವನನ್ನು ಆಶ್ರಯಿಸಿರುವ ಇಂದ್ರಿಯಗಳು—ಇವುಗಳನ್ನು ತಿಳಿಯದ ಜೀವನಿಗೆ ಬ್ರಹ್ಮವಿಷಯಕ ಗಳಲ್ಲದ ಯೋಗಾಭ್ಯಾಸಾದಿ ಕರ್ಮಗಳಿಂದ ವಾಯು ಪ್ರಸಾದರೂಪ ಫಲವು ಆಗುವು ದೇನು ? (ಇಪ್ಪತ್ತೈದು ತತ್ತ್ವಗಳಿಗೆ ಆಶ್ರಯನೂ, ಪೂರ್ಣಷಡ್ಗುಣನೂ, ಆಶ್ಚರ್ಯಕರ ಜ್ಞಾನವನ್ನು ಕೊಡುವವನೂ, ನಿಯಾಮಕನಾಗಿ ದೇಹೇಂದ್ರಿಯಾದಿಗಳಲ್ಲಿ ಅಧಿಷ್ಠಾತನೂ ಆದ ಶ್ರೀಹರಿಯನ್ನು ತಿಳಿಯದಿರುವವನಿಗೆ ಸ್ವಾತಂತ್ರ್ಯಾಭಿಮಾನ ದಿಂದ ಮಾಡಿದ ಕರ್ಮಗಳಿಂದ ಶ್ರೀಹರಿಯ ಪ್ರಸಾದರೂಪ ಫಲವು ಆದೀತೇ ?) (ಅದನ್ನೇ ನಾರದರು 'ಐದೈದರ ಅದ್ಭುತ ಮನೆ' ಎಂಬುದರಿಂದ ಸೂಚಿಸಿದ್ದು.)

ಬಂಧ ಮೋಕ್ಷಗಳನ್ನು ತೋರಿಸಿಕೊಡುವುದರಿಂದ ಶಾಸ್ತ್ರವು ಹಂಸವೆನಿಸುವುದು. ಇದರಿಂದ ಜೀವನು ಸಾರವಾದುದನ್ನು ಹೊಂದಲು ಅನುಕೂಲವಾಗುವುದು.

'ಕ್ವಚಿದ್ಧಂಸಂ ಚಿತ್ರಕಥಂ' ಎಂಬ ಮಾತಿನ ಅರ್ಥವನ್ನು ತೋರಿಸಿಕೊಡು ತ್ತಾರೆ. ಬಂಧ ಮೋಕ್ಷಗಳನ್ನು ತೋರಿಸಿಕೊಡುವ ಆದ್ದರಿಂದಲೇ ಹಂಸವೆನಿಸಿದ ವಿವಿಕ್ತಪದಂ=(೧) ಎಲ್ಲಕ್ಕಿಂತಲೂ ಸಾರವಾದುದನ್ನು ಪುರುಷನು ಹೊಂದಲನುಕೂಲ ವಾದ (೨) ಪರಾಪರ ತತ್ವಗಳನ್ನು ವಿವಿಚ್ಯ=ತೋರಿಸಿಕೊಡುವ ಐಶ್ವರಂ ಶಾಸ್ತ್ರಂ= ಈಶ್ವರ ಪ್ರತಿಪಾದಕವಾದ ಸಮಾಧಿ, ಗುಹ್ಯ, ದರ್ಶನ ಭಾಷೆಗಳೆಂಬ ಮೂರು ಬಗೆಯ ಕಥನ ರೀತಿಯಿಂದ ಚಿತ್ರಕಥೆಯುಳ್ಳ ಭಾರತಾದಿ ಶಾಸ್ತ್ರವನ್ನು ಉತ್ಸೃಜ್ಯ= ಶ್ರವಣಾದಿ ಅಭ್ಯಾಸ ಮಾಡದೆ ಅಜ್ಞಾತ್ವಾ = ಆದ್ದರಿಂದಲೇ ಅದರರ್ಥವನ್ನು ತಿಳಿಯದೆ ಅಸತ್ಕರ್ಮಭಿಃ=(೧) ಬೌದ್ಧಾದಿ ಶಾಸ್ತ್ರಶ್ರವಣ ಮೊದಲಾದ ಕರ್ಮ ಗಳಿಂದ (೨) ಬಹಿರ್ಮುಖ ಕರ್ಮಗಳಿಂದ ಕಿಂ ಭವೇತ್=ಜ್ಞಾನವೆಂಬ ಫಲವು ಬಂದೀತೇ ? ಬರುವುದಿಲ್ಲ. ಹಂಸವು ಸಾರವಾದ ಕ್ಷೀರವನ್ನೇ ಗ್ರಹಿಸುವಂತೆ ಭಾರತಾದಿ ಶಾಸ್ತ್ರಗಳು ಸಾರಭೂತನಾದ ಶ್ರೀಹರಿಯನ್ನೇ ಹೇಳುವುವೆಂದು ಉಪಮಾ ಲುಪ್ತವಾಗಿದೆಯೆಂದು ತಿಳಿಯಬೇಕು. ‖ ೧೮ ‖

ಕಾಲಚಕ್ರಂ ಭ್ರಮಿಂ ತೀಕ್ಷ್ಣಂ ಸರ್ವಂ ನಿಷ್ಕರ್ಷಯೇಜ್ಜಗತ್ ।
ಸ್ವತಂತ್ರಮಬುಧಸ್ಯೇಹ ಕಿಮಸತ್ಕರ್ಮಭಿರ್ಭವೇತ್ ‖ ೧೯ ‖

'ಕ್ಷುರಾಂತಂ ಚ ಸ್ವಯಂ ಭ್ರಮಿಂ' ಎಂಬುದಕ್ಕೆ ಅನುಗುಣವಾದ ಅರ್ಥವನ್ನು ಹೇಳುತ್ತಾರೆ. ಭ್ರಮಿಂ- ಭ್ರಮಿ ಶಬ್ದದಿಂದ ಹೇಳಲ್ಪಡುವ ಸರ್ವಂ ಜಗತ್-ಎಲ್ಲ ಜಗತ್ತನ್ನೂ ನಿಷ್ಕರ್ಷಯೇತ್- ಹೀಗೆಯೇ ಆಗಬೇಕೆಂದು ನಿಷ್ಕರ್ಷೆ ಮಾಡುವ ('ಭ್ರಾಮಯನ್ ಸರ್ವಭೂತಾನಿ' ಎಂಬ ಸ್ಮೃತಿಯನ್ನು ನೋಡಿ.) ತೀಕ್ಷ್ಣಂ=

ಶಾಸ್ತ್ರವು ಪರಾಪರತತ್ವಗಳನ್ನು ಬಿಡಿಸಿ ತೋರಿಸುವುದು. ಈಶ್ವರ ಪ್ರತಿಪಾದಕವಾದ ಈ ಶಾಸ್ತ್ರವು ಸಮಾಧಿ, ಗುಹ್ಯ, ದರ್ಶನ ಭಾಷೆಗಳಿಂದ ಹೇಳುವುದರಿಂದ ಚಿತ್ರಕಥೆ ಯಾಗಿರುವುದು. ಇಂತಹ ಭಾರತಾದಿ ಶಾಸ್ತ್ರವನ್ನು ಶ್ರವಣ ಮನನಾದಿಗಳಿಂದ ಅಭ್ಯಾಸಮಾಡದೆ—ಅದರ ಅರ್ಥವನ್ನು ತಿಳಿಯದೆ— ಹೋಗಿ ಬೌದ್ಧಾದಿ ಶಾಸ್ತ್ರ ಶ್ರವಣದಿಂದ, ಬಹಿರ್ಮುಖ ಕರ್ಮಗಳಿಂದ ಜ್ಞಾನವೆಂಬ ಫಲವು ಬರುವುದೇ ? (ಇದನ್ನೇ ನಾರದರು 'ಚಿತ್ರಕಥೆ ಹೇಳುವ ಹಂಸವನ್ನು ತಿಳಿಯದೆ' ಎಂಬುದರಿಂದ ಸೂಚಿಸಿದ್ದು.)

ಕಾಲಚಕ್ರವು ಸುತ್ತುತ್ತಾ ಜಗತ್ತು ಹೀಗೆಯೇ ಆಗಬೇಕೆಂದು ನಿಷ್ಕರ್ಷೆ ಮಾಡುವುದು. ಕತ್ತಿಯ ಅಲಗಿನಂತೆ ತೀಕ್ಷ್ಣವಾದುದು. ಶ್ರೀಹರಿಯಿಂದ ಮಾತ್ರವೇ ಪ್ರವರ್ತಿಸಲ್ಪಡುವುದು. ಅದರ ಸ್ವರೂಪವನ್ನು ತಿಳಿಯದಿರುವವನಿಗೆ ಈ ಲೋಕದಲ್ಲಿ ಆಯಾಯಾ ಕಾಲವಿಹಿತವೆಂದು ತಿಳಿಯದೆ ಮಾಡಿದ—ಸ್ವರ್ಗಾದಿ ಫಲಗಳೇ ನಿತ್ಯ ವೆಂದು ತಿಳಿದು ಮಾಡಿದ ಕಾಮ್ಯಕರ್ಮಗಳಿಂದ ಕಾಲಜಯವೆಂಬ ಫಲವಾಗುವುದೇ ? (ಇದನ್ನೇ ನಾರದರು 'ಕತ್ತಿಯ ಧಾರೆಯಂತೆ ತೀಕ್ಷ್ಣವಾದ ಸ್ವಯಂ ತಿರುಗುವ ಚಕ್ರ ವನ್ನು ತಿಳಿಯದೆ' ಎಂಬುದರಿಂದ ಮಾರ್ಮಿಕವಾಗಿ ತಿಳಿಸಿದ್ದು.)

ಕತ್ತಿಯ ಅಲಗಿನಂತೆ ತೀಕ್ಷ್ಣ(ಹರಿತ)ವಾದ ಸ್ವತಂತ್ರಂ=ಶ್ರೀಹರಿಯಿಂದ ಮಾತ್ರವೇ ಪ್ರವರ್ತಿಸಲ್ಪಡುವ (ಸ್ವಯಂ ಎಂಬುದರ ಅರ್ಥ.) ಕಾಲಚಕ್ರಂ = ಹನ್ನೆರಡು ತಿಂಗಳುಗಳೆಂಬ ಅರೆಗಾಲುಗಳುಳ್ಳ (ಚಕ್ರವೆಂದಿರುವುದು ಇದಕ್ಕಾಗಿ) ಕಾಲಚಕ್ರವನ್ನು ಅದರ ಸ್ವರೂಪವನ್ನು ಅಬುಧಸ್ಯ= ತಿಳಿಯದಿರುವವನಿಗೆ ಇಹ - ಈ ಜೀವಲೋಕದಲ್ಲಿ ಅಸತ್ಕರ್ಮಭಿಃ=(೧) ಆಯಾಯಾ ಕಾಲದಲ್ಲಿ ವಿಹಿತ ಕರ್ಮಗಳನ್ನು ತಿಳಿಯದೆ ಮಾಡಿದ (೨) ಸ್ವರ್ಗಾದಿ ಫಲಗಳೇ ನಿತ್ಯವೆಂದು ಭಾವಿಸಿ ಮಾಡಿದ-ಕಾಮ್ಯಕರ್ಮ ಗಳಿಂದ ಕಿಂ ಭವೇತ್= ಕಾಲಜಯರೂಪವಾದ ಫಲವು ಆದೀತೇ ? ಆಗುವುದಿಲ್ಲ ವೆಂದರ್ಥ. || ೧೯ ||

ಶಾಸ್ತ್ರಸ್ಯ ಪಿತುರಾದೇಶಂ ಯೋ ನ ವೇದ ನಿವರ್ತಕಂ ।
ಕಥಂ ತದನುರೂಪಾಯ ಗುಣವಿಸ್ರಂಭ್ಯುಪಕ್ರಮೇತ್ ॥ ೨೦ ॥

'ಕಥಂ ಸ್ವಪಿತುರಾದೇಶಂ' ಎಂಬುದರ ಸರಿಯಾದ ಅರ್ಥವನ್ನು ಹೇಳುತ್ತಾರೆ. ಯಃ= ಯಾವನಾದರೆ ಪಿತುಃ= ತಂದೆಯಂತೆ ಹಿತವನ್ನು ಉಪದೇಶಿಸುವುದರಿಂದ ಪಿತೃ ಶಬ್ದದಿಂದ ಕರೆಯಲ್ಪಡುವ ಶಾಸ್ತ್ರಸ್ಯ= 'ಪ್ರಾತರುತ್ಥಾಯ ಯಥಾ ಸಂಧ್ಯಾಮುಪಾಸೀತ' ಮೊದಲಾದ ಶಾಸ್ತ್ರದ ನಿವರ್ತಕಂ= ಅನುರೂಪವಾದ ಸಂಸಾರವನ್ನು ಹೋಗಲಾಡಿಸುವ ಆದೇಶಂ = ಶಾಸನರೂಪವಾದ ಅಪ್ಪಣೆಯನ್ನು ನ ವೇದ = ತಿಳಿಯುವುದಿಲ್ಲವೋ ಸಃ = ಆ ಗುಣವಿಸ್ರಂಭೀ= ಗುಣ ವಿಶ್ವಾಸಿಯಾದ ಪುರುಷನು ತದನುರೂಪಾಯ= ಶಾಸ್ತ್ರವಿಧಾನಕ್ಕೆ ಅನುಗುಣವಾಗುವುದಕ್ಕಾಗಿ ಕಥಂ ಉಪಕ್ರಮೇತ್ = ಹೇಗೆ ತಾನೇ ಸತ್ಕರ್ಮವನ್ನು ಮಾಡಲು ಉಪಕ್ರಮಿಸಿಯಾನು ? ತಿಳಿದವನಲ್ಲವಾದ್ದರಿಂದ ಉಪಕ್ರಮಿಸಲಾರನೆಂದರ್ಥ. 'ಮಾತೇವ ರಕ್ಷತಿ ಪಿತೇವ ಹಿತೇ ನಿಯುಂಕ್ತೇ' ಎಂಬ ವಚನವು ಶಾಸ್ತ್ರವು ತಂದೆಯಂತೆ ಹಿತಕಾರಿಯೆಂದು ತಿಳಿಸುವುದು. (೨) ಪಿತುಃ = ಎರಡನೆಯ ಜನ್ಮಕ್ಕೆ ಕಾರಣವಾದ ಶಾಸ್ತ್ರದ ತದನುರೂಪಾಯ= ನಿವೃತ್ತಿಮಾರ್ಗಕ್ಕೆ ಅರ್ಹನಾದವನಿಗೆ ನಿವರ್ತಕಂ ಆದೇಶಂ= ನಿವೃತ್ತಿ ಮಾರ್ಗದ ಉಪದೇಶವನ್ನು ಯಾವನು ತಿಳಿದಿಲ್ಲವೋ ಆ ಗುಣವಿಸ್ರಂಭೀ= ಗುಣಮಯವಾದ ಪ್ರವೃತ್ತಿಮಾರ್ಗದಲ್ಲಿಯೇ ವಿಶ್ವಾಸವುಳ್ಳ ಪುರುಷನು ಹೇಗೆ ತಾನೇ

ಹಿತವನ್ನು ಉಪದೇಶಿಸುವವನು ತಂದೆ. ಶಾಸ್ತ್ರವೂ ಹಿತವನ್ನು ಉಪದೇಶಿಸುವುದರಿಂದ ತಂದೆಯೆನಿಸುವುದು. ಅದು ಮುಕ್ತಿಯೋಗ್ಯನಿಗೆ ಅನುರೂಪವಾದ ಸಂಸಾರ ನಿವರ್ತಕ ಶಾಸನವನ್ನು ಮಾಡುತ್ತಿದೆ. ಅದರ ಆ ಅಪ್ಪಣೆಯನ್ನು ತಿಳಿಯದಿರುವವನು ಪ್ರಾಕೃತಗುಣಕಾರ್ಯದಲ್ಲಿಯೇ ವಿಶ್ವಾಸವುಳ್ಳವನು. ಅಂದಮೇಲೆ ಅವನು ಶಾಸ್ತ್ರಕ್ಕೆ ಅನುಗುಣವಾದ ರೀತಿಯಲ್ಲಿ ಸತ್ಕರ್ಮವನ್ನು ಹೇಗೆ ತಾನೇ ಉಪಕ್ರಮಿಸಿಯಾನು ? (ಇದನ್ನೇ ನಾರದರು 'ತಮ್ಮ ತಂದೆಯ ಅಪ್ಪಣೆಯನ್ನು ತಿಳಿಯದೆ' ಎಂಬ ಮಾತಿನಿಂದ ತೋರಿಸಿದ್ದು.)

ನಿವೃತ್ತಿ ಮಾರ್ಗವನ್ನು ಉಪಕ್ರಮಿಸಿಯಾನು? (ಅನುಷ್ಠಾನಮಾಡಿಯಾನು?) ನಿವೃತ್ತಿಮಾರ್ಗ ಅನುಷ್ಠಾನಕ್ಕೆ ಯೋಗ್ಯನಾದವನು ನಿವರ್ತಕಶಾಸ್ತ್ರದ ಅಭಿಪ್ರಾಯವನ್ನು ತಿಳಿದು ಶ್ರೀಹರಿಯನ್ನೇ ಸೇವಿಸಬೇಕೇ ಹೊರತು ಪ್ರಜಾಸೃಷ್ಟಿ ಮೊದಲಾದ ಪ್ರವೃತ್ತಿ ಕರ್ಮದಲ್ಲಿ ತೊಡಗಬಾರದೆಂದು ಅಭಿಪ್ರಾಯ. || ೨೦ ||

ಇತಿ ವ್ಯವಸಿತಾ ರಾಜನ್ ಹರ್ಯಶ್ವಾ ಏಕಮೇಧಸಃ ।
ಪ್ರಯಯುಸ್ತಂ ಪರಿಕ್ರಮ್ಯ ಪಂಥಾನಮನಿವರ್ತಕಮ್ || ೨೧ ||

ಪರೀಕ್ಷಿದ್ರಾಜನೇ, ಇತಿ=ಮೇಲೆ ವಿಮರ್ಶೆ ಮಾಡಿ ತಿಳಿದ ಅರ್ಥವೇ ನಾರದರ ಮಾತಿಗೆ ಅಭಿಪ್ರಾಯವೆಂದು ವ್ಯವಸಿತಾಃ=ನಿಶ್ಚಯ ಮಾಡಿದ ಏಕಮೇಧಸಃ=ಒಂದೇ ಅಭಿಪ್ರಾಯದ ಹರ್ಯಶ್ವರು ತಂ=ಆ ನಾರದರನ್ನು ಪರಿಕ್ರಮ್ಯ=ಪ್ರದಕ್ಷಿಣೆ ಮಾಡಿ ಅನಿವರ್ತಕಂ ಪಂಥಾನಂ=(೧) ಸನ್ಯಾಸವೆಂಬ ಮಾರ್ಗವನ್ನು (೨) ಪುನರಾವೃತ್ತಿಯಿಲ್ಲದ ಮೋಕ್ಷದ ಮಾರ್ಗವನ್ನು ಪ್ರಯಯುಃ=ದೃಢ ಮನಸ್ಸಿನಿಂದ ಆಶ್ರಯಿಸಿದರು. ಪ್ರಜಾಸೃಷ್ಟಿಯಲ್ಲಿ ವಿಮುಖರಾಗಿ ಶ್ರೀಹರಿಯ ತಪಸ್ಸಿನಲ್ಲಿ ನಿರತರಾದರು. ಸನ್ಯಾಸ ತೆಗೆದುಕೊಂಡಮೇಲೆ ಮತ್ತೆ ಮತ್ತೊಂದು ಆಶ್ರಮವನ್ನು ತೆಗೆದುಕೊಳ್ಳುವಂತಿಲ್ಲವಾದ್ದರಿಂದ ಸನ್ಯಾಸಕ್ಕೆ 'ಅನಿವರ್ತಕ'ವೆಂದು ಹೆಸರು. || ೨೧ ||

ಸ್ವರ ಬ್ರಹ್ಮಣಿ ನಿರ್ಭಾತೇ ಹೃಷೀಕೇಶಪದಾಂಬುಜೇ ।
ಅಖಂಡಂ ಚಿತ್ತಮಾವೇಶ್ಯ ಲೋಕಾನನುಚರನ್ಮುನಿಃ || ೨೨ ||

ಸ್ವರಬ್ರಹ್ಮಣಿ=ಷಡ್ಜ ಮೊದಲಾದ ಸ್ವರಗಳೆಂಬ ಗಾಂಧರ್ವ (ಗಾನ) ವಿದ್ಯೆಯು ನಿರ್ಭಾತೇ=ಚನ್ನಾಗಿ ಪ್ರಕಾಶವಾಗಿರಲು ಅಖಂಡಂ=ನಿರಂತರವಾಗಿರುವಂತೆ ಶ್ರೀಹರಿಯ ಪಾದಕಮಲಗಳಲ್ಲಿ ಮನಸ್ಸನ್ನು ಆವೇಶ್ಯ=ಸೇರಿಸಿ ಮುನಿಃ=ನಾರದರು ಲೋಕಗಳನ್ನು ಅನುಚರನ್ (ಬಭೂವ)=ಸುತ್ತುವವರಾದರು. ನಿರ್ಭಾತಂ ಎಂಬ ಪಾಠದಲ್ಲಿ ನಿರ್ಭಾತಂ ಚಿತ್ತಂ=ನಿಪುಣವಾದ ಮನಸ್ಸನ್ನು ಎಂದನ್ವಯ. || ೨೨ ||

ರಾಜನ್, ಹೀಗೆ ವಿಮರ್ಶಿಸಿದ ಅರ್ಥವೇ ಸರಿಯೆಂದು ನಿಶ್ಚಯಮಾಡಿಕೊಂಡ ಏಕಾಭಿಪ್ರಾಯವಂತರಾದ ಹರ್ಯಶ್ವರು ಆ ನಾರದರಿಗೆ ಬಲವಂದು ಮೋಕ್ಷಮಾರ್ಗವಾದ ಸನ್ಯಾಸವೆಂಬ ಹಾದಿಯನ್ನೇ ದೃಢವಾಗಿ ಆಶ್ರಯಿಸಿದರು.

ಷಡ್ಜ ಮೊದಲಾದ ಸ್ವರಗಳೆಂಬ ಗಾಂಧರ್ವವಿದ್ಯೆಯಲ್ಲಿ ನಿಪುಣರಾಗಿ ನಿರಂತರವೂ ಶ್ರೀಹರಿಯ ಪಾದಕಮಲಗಳಲ್ಲಿ ಮನಸ್ಸನ್ನು ಸೇರಿಸಿ ನಾರದರು ಲೋಕಗಳನ್ನು ಸಂಚರಿಸುವರಾದರು.

ನಾಶಂ ನಿಶಮ್ಯ ಪುತ್ರಾಣಾಂ ನಾರದಾಚ್ಛೀಲಶಾಲಿನಾಮ್ ।
ಅನ್ವತಪ್ಯತ ಕಃ ಶೋಚನ್ ಸುಪ್ರಜಾಸ್ತ್ವಂ ಶುಚಾಂ ಪದಮ್ ॥

ಕಃ=ದಕ್ಷರು ಶೀಲಶಾಲಿನಾಂ=ನಡತೆವಂತರಾದ (ಸತ್ಸ್ವಭಾವದಿಂದ ಪ್ರಕಾಶಿಸುವ) ಪುತ್ರಾಣಾಂ=ಹರ್ಯಶ್ವರ ನಾರದರಿಂದ ನಾಶಂ=(೧) ಅದರ್ಶನವನ್ನು (೨) ಪ್ರಜಾಸೃಷ್ಟಿ ವಿಮುಖತೆಯನ್ನು (ನಾರದರ ಮಾತಿನಿಂದ ಹರ್ಯಶ್ವರು ಪ್ರಜಾಸೃಷ್ಟಿಮಾಡದೆ ಸನ್ಯಾಸಿಗಳಾದರೆಂಬುದನ್ನು) ನಿಶಮ್ಯ-ಕೇಳಿ, ಸುಪ್ರಜಾಸ್ತ್ವಂ=ಒಳ್ಳೆಯ ಮಕ್ಕಳನ್ನು ಹೊಂದಿರುವಿಕೆಯು ಶುಚಾಂ=ದುಃಖಗಳಿಗೆ ಪದಂ=ಸ್ಥಾನವು (ಇತಿ ಸಂಚಿಂತ್ಯ) ಎಂದು ಯೋಚಿಸಿ ಶೋಚನ್=ದುಃಖಿಸುತ್ತಾ ಅನ್ವತಪ್ಯತ-ಪಶ್ಚಾತ್ತಾಪಪಟ್ಟರು. 'ಸುಪ್ರಜಾಸ್ತ್ವಮಂಗಿರಸೋ ನ್ಯೋ ಅಸ್ತು' ಎಂಬ ಛಂದಸ್ಸನ್ನು ಅನುಕರಣ ಮಾಡುವ ಪ್ರಯೋಗವಿದು. ಅಥವಾ ದುಃಖಿಸುತ್ತಾ ಪರಿತಪ್ತರಾದರು. ಸುಪುತ್ರರನ್ನು ಹೊಂದಿರುವುದು ದುಃಖಕ್ಕೆ ಎಡೆಯಲ್ಲವೇ! ಎಂದಾದರೂ ಅನ್ವಯ. ಸುಪ್ರಜಾಸ್ತ್ವಂ ಇತ್ಯಾದಿ ಮಾತು ಶುಕಾಚಾರ್ಯರದು. ॥ ೨೩ ॥

ಸ ಭೂಯಃ ಪಾಂಚಜನ್ಯಾಯಾಮಜೇನ ಪರಿಸಾಂತ್ವಿತಃ ।
ಪುತ್ರಾನಜನಯದ್ದಕ್ಷಃ ಶಬಲಾಶ್ವಾನ್ ಸಹಸ್ರಿಣಃ ॥ ೨೪ ॥

ಅಜೇನ-ಚತುರ್ಮುಖರಿಂದ ಪರಿಸಾಂತ್ವಿತಃ=ಸಮಾಧಾನಪಡಿಸಲ್ಪಟ್ಟ ಸಃ ದಕ್ಷಃ=ಆ ದಕ್ಷರು ಭೂಯಃ=ಮತ್ತೆ ಪಾಂಚಜನ್ಯೆಯೆಂಬ ತಮ್ಮ ಪತ್ನಿಯಲ್ಲಿ ಸಹಸ್ರಿಣಃ=ಸಾವಿರಸಂಖ್ಯೆಯುಳ್ಳ ಶಬಲಾಶ್ವರೆಂಬ ಪುತ್ರಾನ್=ಮಕ್ಕಳನ್ನು ಅಜನಯತ್-ಪಡೆದರು. ॥ ೨೪ ॥

ತೇಽಪಿ ಪಿತ್ರಾ ಸಮಾದಿಷ್ಟಾಃ ಪ್ರಜಾಸರ್ಗೇ ಧೃತವ್ರತಾಃ
ನಾರಾಯಣಸರೋ ಜಗ್ಮುರ್ಯತ್ರ ಸಿದ್ಧಾಸ್ಸ್ತು ಪೂರ್ವಜಾಃ ॥ ೨೫ ॥

ಪಿತ್ರಾ-ತಂದೆಗಳಾದ ದಕ್ಷರಿಂದ ಪ್ರಜಾಸೃಷ್ಟಿಯಲ್ಲಿ ಸಮಾದಿಷ್ಟಾಃ=ಆಜ್ಞಪ್ತರಾದ ತೇ ಅಪಿ-ಆ ಸಾವಿರ ಶಬಲಾಶ್ವರೂ ಧೃತವ್ರತಾಃ (ಸಂತಃ)=ವ್ರತವನ್ನು ಹಿಡಿದವರಾಗಿ ಯತ್ರ=ಯಾವ ಸರೋವರದಲ್ಲಿ ಪೂರ್ವಜಾಃ=ಹಿಂದಿನವರು

ನಡತೆವಂತರಾದ ತಮ್ಮ ಮಕ್ಕಳು ನಾರದರಿಂದ ಪ್ರಜಾಸೃಷ್ಟಿ ವಿಮುಖರಾದರು (ಸನ್ಯಾಸಿಗಳಾಗಿ ಕಣ್ಣಿಗೆ ಕಾಣದಾದರು) ಎಂಬುದನ್ನು ಜನರಿಂದ ತಿಳಿದ ದಕ್ಷರು ಸತ್ಪುತ್ರರನ್ನು ಹೊಂದಿರುವುದು ದುಃಖದ ಬೀಡು ಎಂದು ದುಃಖಿಸುತ್ತಾ ಪರಿತಪಿಸಿದರು. ಆಗ ಬ್ರಹ್ಮದೇವರು ಬಂದು ಅವರನ್ನು ಸಮಾಧಾನಪಡಿಸಿದರು. ಮತ್ತೆ ಅವರು ಪಾಂಚಜನ್ಯೆಯಲ್ಲಿ ಶಬಲಾಶ್ವರೆಂಬ ಸಾವಿರ ಮಕ್ಕಳನ್ನು ಪಡೆದರು. ತಂದೆಯಿಂದ ಪ್ರಜಾಸೃಷ್ಟಿಯಲ್ಲಿ ತೊಡಗಿರೆಂದು ಆಜ್ಞಪ್ತರಾದ ಆ ಸಾವಿರಮಂದಿಯೂ ವ್ರತಧಾರಿಗಳಾಗಿ ನಾರಾಯಣ ಸರೋವರಕ್ಕೆ ಹೋದರು. ಆ ಸರೋವರದಲ್ಲಿಯೇ

(ಹಿರಿಯರು) (ಅಣ್ಣಂದಿರು) ಸಿದ್ಧಾಃ= ಸಿದ್ಧಿಯನ್ನು ಪಡೆದರೋ (ತತ್)= ಆ ನಾರಾಯಣ ಸರೋವರಕ್ಕೇ ಜಗ್ಮುಃ=ಹೋದರು. || ೨೫ ||

ತದುಪಸ್ಪರ್ಶನಾದೇವ ವಿನಿರ್ಧೂತಮಲಾಶಯಾಃ ।
ಜಪಂತೋ ಬ್ರಹ್ಮ ಪರಮಂ ತೇಪುಸ್ತತ್ರ ಮಹತ್ತಪಃ ॥ ೨೬ ॥

ತತ್ರ=ಆ ಸರೋವರದಲ್ಲಿ ತದುಪಸ್ಪರ್ಶನಾತ್ ಏವ ಅದರ ನೀರಿನಲ್ಲಿ ಸ್ನಾನ ಪಾನಾದಿಗಳಿಂದಲೇ ವಿನಿರ್ಧೂತಮಲಾಶಯಾಃ=ಹೋಗಲಾಡಿಸಲ್ಪಟ್ಟ ಮನಸ್ಸಿನ ಕೊಳೆಯುಳ್ಳವರಾಗಿ ಪರಮಂ ಬ್ರಹ್ಮ= ಪರಬ್ರಹ್ಮಪ್ರತಿಪಾದಕ ಪ್ರಣವಮಂತ್ರವನ್ನು ಅಥವಾ ಮುಂದೆ ಹೇಳುವ ಮಂತ್ರವನ್ನು ಜಪಿಸುವವರಾಗಿ ಮಹತ್ತಪಃ= ತೀವ್ರ ತಪಸ್ಸನ್ನು ತೇಪುಃ=ಮಾಡಿದರು. || ೨೬ ||

ಅಬ್ಭಕ್ಷಾಃ ಕತಿಚಿನ್ಮಾಸಾನ್ ಕತಿಚಿದ್ವಾಯುಭೋಜನಾಃ ।
ಆರಾಧಯನ್ಮಂತ್ರಮಿಮಮಭ್ಯಸಂತ ಇಡಸ್ಪತಿಮ್ ॥ ೨೭ ॥

ಕೆಲವು ತಿಂಗಳುಗಳು ನೀರೇ ಆಹಾರವಾಗಿರುವವರಾಗಿ ಕೆಲವು ತಿಂಗಳುಗಳು ವಾಯುವೇ ಭೋಜನವಾಗಿಯುಳ್ಳವರಾಗಿ ಅವರು ಇಮಂ ಮಂತ್ರಂ= ಮುಂದೆ ಹೇಳುವ ಓಂ ನಮೋ ಇತ್ಯಾದಿ ಮಂತ್ರವನ್ನು ಅಭ್ಯಸಂತಃ=ಅಭ್ಯಾಸಮಾಡುವವರಾಗಿ (ಜಪಿಸುವವರಾಗಿ), ಇಡಸ್ಪತಿಂ= ಇಳಾಪತಿಯಾದ ಶ್ರೀಹರಿಯನ್ನು ಆರಾಧಯನ್=ಆರಾಧಿಸಿದರು. || ೨೭ ||

ಓಂ ನಮೋ ನಾರಾಯಣಾಯ ಪುರುಷಾಯ ಮಹಾತ್ಮನೇ ।
ವಿಶುದ್ಧಸತ್ವಧಿಷ್ಣ್ಯಾಯ ಮಹಾಹಂಸಾಯ ಧೀಮಹಿ ॥ ೨೮ ॥

ಮುಂದಿನ ಶ್ಲೋಕದಲ್ಲಿರುವ ಇತಿ ಎಂಬುದನ್ನು ಸೇರಿಸಿಕೊಂಡು ಇಮಂ ಮಂತ್ರಂ ಅಭ್ಯಸಂತಃ ಎಂದು ಹಿಂದಕ್ಕೆ ಅನ್ವಯಮಾಡಿಕೊಳ್ಳಬೇಕು. ನಾರಾಯಣಾಯ=ಚಿದಾನಂದ ದೇಹನಾದ ಪುರುಷಾಯ= ಸರ್ವಶರೀರಗಳಲ್ಲಿಯೂ

ಅವರ ಹಿಂದಿನವರೂ ಸಿದ್ಧಿಯನ್ನು ಪಡೆದಿದ್ದರು. ಆ ತೀರ್ಥದಲ್ಲಿ ಸ್ನಾನ ಪಾನಾದಿಗಳಿಂದ ಅವರ ಮನಸ್ಸಿನ ರಾಗದ್ವೇಷಾದಿ ಕೊಳೆಗಳು ಸಂಪೂರ್ಣವಾಗಿ ಕಳೆದು ಹೋದವು. ಮುಂದೆ ಹೇಳುವ (ಈ) ಪರಬ್ರಹ್ಮ ಪ್ರತಿಪಾದಕ ಮಂತ್ರವನ್ನು ಜಪಿಸುತ್ತಾ ತೀವ್ರ ತಪಸ್ಸನ್ನು ಮಾಡಿದರು. ಕೆಲವು ತಿಂಗಳುಗಳು ನೀರನ್ನೇ ಆಹಾರವಾಗಿ ಹೊಂದಿ ಕೆಲವು ತಿಂಗಳು ಗಾಳಿಯನ್ನೇ ಆಹಾರವಾಗಿ ಸೇವಿಸುತ್ತಾ ಮುಂದಿನ ಮಂತ್ರವನ್ನು ಜಪಿಸುತ್ತಾ ಇಳಾಪತಿಯಾದ ಶ್ರೀಹರಿಯನ್ನು ಆರಾಧಿಸುತ್ತಾ ಬಂದರು. ಚಿದಾನಂದದೇಹನೂ ಸರ್ವಶರೀರಗಳಲ್ಲಿಯೂ ನಿಯಾಮಕನೂ ಸರ್ವೋತ್ತಮನೂ ಶುದ್ಧಸತ್ವಗುಣಕ್ಕೆ ಆಶ್ರಯನೂ ನಿರ್ದೋಷ ಬಲಜ್ಞಾನ ಸ್ವರೂಪನೂ ಸಾರಗ್ರಾಹಿ ಶ್ರೇಷ್ಠನೂ ಪರಮಹಂಸನೂ ಸಕಲಗುಣಪೂರ್ಣನೂ ಆದ ಶ್ರೀಹರಿಗೆ ನಮಸ್ಕಾರ

ನಿಯಾಮಕನಾಗಿ ಇರುವ ಮಹಾತ್ಮನೇ=ಸರ್ವೋತ್ತಮತ್ವಾದಿ ಗುಣವಂತನಾದ ವಿಶುದ್ಧಸತ್ವಧಿಷ್ಣ್ಯಾಯ= (೧) ಪರಿಶುದ್ಧ ಸತ್ವಗುಣಕ್ಕೆ ಆಶ್ರಯನಾದ (೨) ನಿರ್ದೋಷಬಲಜ್ಞಾನಸ್ವರೂಪನಾದ ಮಹಾಹಂಸಾಯ=(೧) ಸಾರಗ್ರಾಹಿಗಳಲ್ಲಿ ಶ್ರೇಷ್ಠನಾದ (೨) ಪರಮಹಂಸನಾದ ಓಂ=ಸಕಲಗುಣಪರಿಪೂರ್ಣನಾದ ಶ್ರೀಹರಿಗೆ ನಮಃ=ನಮಸ್ಕಾರವನ್ನು ಧೀಮಹಿ=ಮಾಡುತ್ತೇವೆ. ಅಥವಾ ಓಂ ಧೀಮಹಿ, ನಾರಾಯಣಾಯ ನಮಃ ಎಂದಾದರೂ ಅನ್ವಯ. ಸಕಲಗುಣಪರಿಪೂರ್ಣನನ್ನು ಧ್ಯಾನಮಾಡುತ್ತೇವೆ. ನಾರಾಯಣನಿಗೆ ನಮಸ್ಕಾರ ಎಂದರ್ಥ. ವಿ.ಅ. ನಮಃ ಎಂದು ಹೇಳಿದ್ದರಿಂದ ಜೀವಬ್ರಹ್ಮಾಭೇದದಿಂದ ಉಪಾಸನೆ ಮಾಡಬಾರದೆಂದೂ ಸ್ವಾಮಿಭೃತ್ಯನ್ಯಾಯದಿಂದಲೇ ಮಾಡಬೇಕೆಂದೂ ತಿಳಿಸಿರುವರು. 'ಮಮ ಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವ ಚ ಇತಿ ಧ್ಯೇಯಃ ಸರ್ವದೈವ ಭಗವಾನ್ ವಿಷ್ಣು ರವ್ಯಯಃ ||' 'ಓತಮಸ್ಮಿನ್ ಜಗತ್ಸರ್ವಂ ಅತ್ಯುಚ್ಚಃ ಶ್ವಾಪಿಲೈರ್ಗುಣೈಃ । ಇತ್ಯೋಮಿತಿ ಸದೋಪಾಸ್ಯೋಽಕ್ಷರಃ ಪುರುಷೋತ್ತಮಃ ||' 'ದೇಹೋಽಯಂ ಮೇ ಸದಾನಂದೋ ನಾಯಂ ಪ್ರಕೃತಿನಿರ್ಮಿತಃ ಪರಿಪೂರ್ಣಶ್ಚ ಸರ್ವತ್ರ ತೇನ ನಾರಾಯಣಃ ಸ್ಮೃತಃ ||' 'ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯೋ ನೈನೇನ ಕಿಂಚನಾಸಂವೃತಂ' ಎಂದು ಶ್ರುತಿ. 'ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿತಿ । ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಭಣ್ಯತೇ ||' ಎಂದು ಭಾರತ. 'ಬಲಜ್ಞಾನ ಸಮಾಹಾರಃ ಸತ್ವಮಿತ್ಯುಚ್ಯತೇ ಬುಧೈಃ ||' 'ಪ್ರಾಪ್ಯಂ ಪ್ರಾಪ್ತಂ ಯತೋ ನಿತ್ಯಂ ಪೂರ್ಣಂ ಸರ್ವೋತ್ತಮಂ ಮಯಾ । ಅತಃ ಪರಮ-ಹಂಸೋಹಂ ||' ಇತ್ಯಾದಿ ಪ್ರಮಾಣಗಳು ಮೇಲಿನ ಅರ್ಥವನ್ನು ಸಮರ್ಥಿಸುವುವು. ಎಂಬೀ ಮಂತ್ರವನ್ನು ಅಭ್ಯಾಸಮಾಡುತ್ತಾ ಎಂದನ್ವಯ. || ೨೮ ||

ಇತಿ ತಾನಪಿ ರಾಜೇಂದ್ರ ಪ್ರಜಾಸರ್ಗಧಿಯೋ ಮುನಿಃ ।
ಉಪೇತ್ಯ ನಾರದಃ ಪ್ರಾಹ ವಾಚಃಕೂಟಾನಿ ಪೂರ್ವವತ್ || ೨೯ ||

ಪರೀಕ್ಷಿದ್ರಾಜನೇ, ಮುನಿಗಳಾದ ನಾರದರು ಪ್ರಜಾಸರ್ಗಧಿಯಃ=ತಂದೆಯ ಮಾತಿನಂತೆ ಪ್ರಜಾಸೃಷ್ಟಿಯಲ್ಲಿ ಮನಸ್ಸುಮಾಡಿದ ತಾನ್ ಅಪಿ=ಆ ಸಾವಿರ ಶಬಲಾಶ್ವರನ್ನೂ ಉಪೇತ್ಯ=ಸಮೀಪಿಸಿ ಪೂರ್ವವತ್=ಹರ್ಯಶ್ವರಿಗೆ ಹೇಳಿದ್ದಂತೆ ವಾಚಃ ಕೂಟಾನಿ=ಭೂಮಿಯ ಅಂತವನ್ನು ನೋಡದೆ ಇತ್ಯಾದಿ ಗೂಢಾರ್ಥಕ ವಾಕ್ಯಗಳನ್ನು ಪ್ರಾಹ=ಅವರ ಮನಸ್ಸನ್ನು ಪ್ರಜಾಸರ್ಗದಿಂದ ವಿಮುಖಗೊಳಿಸುವ ರೀತಿಯಲ್ಲಿ ಹೇಳಿದರು. || ೨೯ ||

ಮಾಡುತ್ತೇವೆ ಎಂಬೀ ಮಂತ್ರವನ್ನು ಅಭ್ಯಾಸಮಾಡುತ್ತಾ ಬಂದರು. ತಂದೆಯ ಮಾತಿನಂತೆ ಪ್ರಜಾಸೃಷ್ಟಿಯಲ್ಲಿ ಮನಸ್ಸುಮಾಡಿದ ಅವರನ್ನೂ ನಾರದರು ಸಮೀಪಿಸಿ ಹಿಂದಿನಂತೆಯೇ ಗೂಢಾರ್ಥಕವಾಕ್ಯಗಳನ್ನು ಹೇಳಿ ಅವರ ಮನಸ್ಸನ್ನು ಪ್ರಜಾಸರ್ಗ

ದಾಕ್ಷಾಯಣಾಃ ಸಂಶೃಣುತ ಗದತೋ ನಿಗಮಂ ಮಮ ।
ಅನ್ವಿಚ್ಛತಾನುಪದವೀಂ ಭ್ರಾತೄಣಾಂ ಭ್ರಾತೃವತ್ಸಲಾಃ ॥ ೩೦ ॥

ಆ ವಾಕ್ಯಗಳನ್ನೇ ಅಲ್ಲದೆ ಬೇರೆಯದನ್ನೂ ಹೇಳಿದರೆಂದು ಹೇಳುತ್ತಾರೆ. ದಕ್ಷಪುತ್ರರೇ, ಗದತಃ ಮಮ - ಹೇಳುತ್ತಿರುವ ನನ್ನ ನಿಗಮಂ - ಉಪದೇಶವನ್ನು ಸಂಶೃಣುತ=ಭಕ್ತಿಯಿಂದ ಕೇಳಿರಿ. ಅದೇನೆಂದರೆ ಹೇಳುತ್ತಾರೆ. ಸಹೋದರ ಪ್ರಿಯರೇ, ಭ್ರಾತೄಣಾಂ=ಸಹೋದರರ ಅನುಪದವೀಂ=ಅನುಸರಿಸುವ ಮಾರ್ಗವನ್ನೇ ಅನ್ವಿಚ್ಛತ=ಬಯಸಿರಿ (ನೋಡಿರಿ). ॥ ೩೦ ॥

ಭ್ರಾತೄಣಾಂ ಪ್ರಾಯಣಂ ಭ್ರಾತಾ ಯೋಽನುತಿಷ್ಠತಿ ಧರ್ಮವಿತ್ ।
ಸ ಪುಣ್ಯಬಂಧುಃ ಪುರುಷೋ ಮರುದ್ಭಿಃ ಸಹ ಮೋದತೇ ॥ ೩೧ ॥

ಧರ್ಮವಿತ್- ಧರ್ಮವನ್ನು ಬಲ್ಲ ಯಃ ಭ್ರಾತಾ = ಯಾವ ಸಹೋದರನು ಭ್ರಾತೄಣಾಂ ತನ್ನ ಹಿರಿಯ ಸಹೋದರರ ಪ್ರಾಯಣಂ= ಪ್ರಕೃಷ್ಟವಾದ ಆಚಾರ (ಪ್ರಯಾಣ)ವನ್ನು, ಸನ್ಯಾಸಾಶ್ರಮ ಸ್ವೀಕಾರವೆಂಬ ಮಾರ್ಗವನ್ನು, ಅನುತಿಷ್ಠತಿ- ಅನುಷ್ಠಾನ ಮಾಡುವನೋ (ತಾನೂ ಸನ್ಯಾಸಿಯಾಗುವನೋ) ಪುಣ್ಯಬಂಧುಃ- ಪುಣ್ಯವೇ ಬಂಧುವಾಗಿಯುಳ್ಳ ಸಃ ಪುರುಷಃ=ಆ ಪುರುಷನು ಮರುದ್ಭಿಃ ಸಹ- ದೇವತೆಗಳೊಂದಿಗೆ (ಸ್ವರ್ಗದಲ್ಲಿ) ಮೋದತೇ= ಸುಖಪಡುವನು. (ಸಂತೋಷಪಡುವನು) ॥ ೩೧ ॥

ಏತಾವದುಕ್ತ್ವಾ ಪ್ರಯಯೌ ನಾರದೋಽಮೋಘದರ್ಶನಃ ।
ತೇಽಪಿ ಚಾನ್ವಗಮನ್ಮಾರ್ಗಂ ಭ್ರಾತೄಣಾಮೇವ ಮಾರಿಷ ॥ ೩೨ ॥

ಏತಾವತ್- ಇಷ್ಟುಮಾತ್ರ ಉಕ್ತ್ವಾ=ಹೇಳಿ ಅಮೋಘದರ್ಶನಃ- ಸಾರ್ಥಕವಾದ ತಮ್ಮನ್ನು ನೋಡುವಿಕೆಯುಳ್ಳ ನಾರದರು ಪ್ರಯಯೌ= ಎಂದಿನಂತೆ ಲೋಕ ಸಂಚಾರಕ್ಕಾಗಿ ಹೊರಟರು. ಮಾರಿಷ= ಪರೀಕ್ಷಿದ್ರಾಜನೇ, ತೇ ಅಪಿ-ಆ ಸಾವಿರ ಶಬಲಾಶ್ವರೂ ಭ್ರಾತೄಣಾಂ= ತಮ್ಮ ಅಣ್ಣಂದಿರ ಮಾರ್ಗಮೇವ=ದಾರಿಯನ್ನೇ ಅನ್ವಗಮನ್ ಚ=ಅನುಸರಿಸಿದರು. (ತಾವೂ ಸನ್ಯಾಸಿಗಳಾದರು.) ॥ ೩೨ ॥

ದಿಂದ ವಿಮುಖಗೊಳಿಸಿದರು. ಮತ್ತು 'ದಕ್ಷ ಪುತ್ರರೇ, ನನ್ನ ಉಪದೇಶವನ್ನು ಭಕ್ತಿಯಿಂದ ಕೇಳಿರಿ. ಅಣ್ಣಂದಿರು ಅನುಸರಿಸಿದ ಮಾರ್ಗವನ್ನೇ ಅನುಸರಿಸಿರಿ. ಧರ್ಮವನ್ನು ಬಲ್ಲ ಯಾವನಾದರೆ ತನ್ನ ಅಣ್ಣಂದಿರು ಉತ್ತಮ ಆಚಾರವನ್ನೇ ಅನುಷ್ಠಾನಮಾಡುವನೋ ಅವನಿಗೆ ಪುಣ್ಯವು ಬರುವುದು. ಆ ಪುಣ್ಯಬಂಧುವು ದೇವತೆಗಳೊಂದಿಗೆ ಸ್ವರ್ಗದಲ್ಲಿ ಸಂತೋಷವನ್ನು ಅನುಭವಿಸುವನು'. ಎಂದು ಇಷ್ಟುಮಾತ್ರ ಹೇಳಿ ನಾರದರು ಸಂಚಾರಕ್ಕಾಗಿ ಹೊರಟುಹೋದರು.

ಸಧ್ರೀಚೀನಂ ಪ್ರತೀಚೀನಂ ಪರಸ್ಯಾನುಪಥಂ ಗತಾಃ ।
ನಾದ್ಯಾಪಿ ತೇ ನಿವರ್ತಂತೇ ಪಶ್ಚಿಮಾ ಯಾಮಿನೀರಿವ ॥ ೩೩ ॥

ಸಧ್ರೀಚೀನಂ = ಶೋಭನಕರವಾದ ಪ್ರತೀಚೀನಂ – ಅಭಿಮುಖವಾಗಿರುವ ಪ್ರತ್ಯಗ್ದೃಷ್ಟಿಗಳಿಂದ ಹೊಂದಲಾಗುವ ಪರಸ್ಯ = ಪರಮಾತ್ಮನ ಅನುಪಥಂ= ಅನುಗುಣವಾದ ಮಾರ್ಗವನ್ನು (ಪ್ರಿಯವಾದ ಸನ್ಯಾಸವನ್ನು) ಗತಾಃ=ಹೊಂದಿದ ತೇ– ಆ ಶಬಲಾಶ್ವರು ಪಶ್ಚಿಮಾಃ - ಕಳೆದುಹೋದ ಯಾಮಿನೀಃ ಇವ = ರಾತ್ರಿಗಳಂತೆ ಅದ್ಯಾಪಿ– ಇಂದಿಗೂ ನ ನಿವರ್ತಂತೇ=ಹಿಂತಿರುಗುತ್ತಿಲ್ಲ. ॥ ೩೩ ॥

ಏತಸ್ಮಿನ್ಕಾಲ ಉತ್ಪಾತಾನ್ ಬಹೂನ್ ಪಶ್ಯನ್ ಪ್ರಜಾಪತಿಃ ।
ಪೂರ್ವವನ್ನಾರದಕೃತಂ ಪುತ್ರನಾಶಮುಪಾಶೃಣೋತ್ ॥ ೩೪ ॥

ಈ ಕಾಲದಲ್ಲಿ ಪ್ರಜಾಪತಿಃ = ದಕ್ಷಪ್ರಜೇಶ್ವರರು ಅನೇಕ ಉತ್ಪಾತಗಳನ್ನು ಕಾಣುತ್ತಾ ಪೂರ್ವವತ್- ಹಿಂದಿನಂತೆಯೇ ನಾರದಕೃತಂ ನಾರದರು ಮಾಡಿದ ಪುತ್ರನಾಶಂ = ಮಕ್ಕಳ ಬುದ್ಧಿಭೇದವನ್ನು (ಸನ್ಯಾಸಗ್ರಹಣವನ್ನು) ಉಪಾ- ಶೃಣೋತ್ - ಜನರಿಂದ ಕೇಳಿದರು. ॥ ೩೪ ॥

ಚುಕ್ರೋಧ ನಾರದಾಯಾಸೌ ಪುತ್ರಶೋಕವಿಮೂರ್ಛಿತಃ ।
ದೇವರ್ಷಿಮುಪಲಕ್ಷ್ಯಾಹ ರುಷಾ ಪ್ರಸ್ಫುರಿತಾಧರಃ ॥ ೩೫ ॥

ಪುತ್ರದುಃಖದಿಂದ ಮೋಹಗೊಂಡ ಅಸೌ= ಈ ದಕ್ಷಪ್ರಜೇಶ್ವರರು ನಾರದರಿಗಾಗಿ ಚುಕ್ರೋಧ=ಕೋಪಮಾಡಿಕೊಂಡರು. ಮಕ್ಕಳು ಸನ್ಯಾಸಿಗಳಾದುದನ್ನು ಕೇಳಿ ದಕ್ಷರೂ ಸಂನ್ಯಾಸಿಗಳಾದಾರೆಂದು ಅವರನ್ನು ಅನುಗ್ರಹಿಸಲು ಅಲ್ಲಿಗೆ ಬಂದ ದೇವರ್ಷಿಂ = ನಾರದರನ್ನು ಉಪಲಕ್ಷ್ಯ = ನೋಡಿ ರುಷಾ – ಕೋಪದಿಂದ ಪ್ರಸ್ಫುರಿತಾಧರಃ (ಸನ್)–ನಡುಗುವ ಕೆಳದುಟಿಯುಳ್ಳವರಾಗಿ ಆಹ=ಹೇಳಿದರು. ॥ ೩೫ ॥

ರಾಜನ್, ಆ ಸಾವಿರ ಶಬಲಾಶ್ವರೂ ಅಣ್ಣಂದಿರ ಮಾರ್ಗವನ್ನೇ (ಸನ್ಯಾಸವನ್ನೇ) ಆಶ್ರಯಿಸಿದರು. ಆ ಮಾರ್ಗವು ಶೋಭನಕರವಾದುದು. ಅಭಿಮುಖವಾದುದು. ಪ್ರತ್ಯಗ್ದೃಷ್ಟಿಗಳಿಗೆ ಹೊಂದಲಾಗದುದು. ಶ್ರೀಹರಿಗೆ ಅನುಗುಣವಾದುದು. ಕಳೆದುಹೋದ ರಾತ್ರಿಗಳು ಮತ್ತೆ ಬರುವುದಿಲ್ಲವಲ್ಲವೇ ! ಅದರಂತೆ ಸನ್ಯಾಸಿಗಳಾದ ಶಬಲಾಶ್ವರೂ ಹಿಂತಿರುಗಲಿಲ್ಲ.

ಈ ಕಾಲದಲ್ಲಿ ದಕ್ಷಪ್ರಜೇಶ್ವರರು ಅನೇಕ ಉತ್ಪಾತಗಳನ್ನು ಕಂಡರು. ನಾರದರು ಈ ಮಕ್ಕಳ ಬುದ್ಧಿಯನ್ನೂ ತಿರುಗಿಸಿದರೆಂದು ಜನರಿಂದ ಕೇಳಿ ತಿಳಿದರು. ಪುತ್ರದುಃಖದಿಂದ ಮುಗ್ಧರಾದ ಅವರು ನಾರದರ ವಿಷಯದಲ್ಲಿ ಕುಪಿತರಾದರು.

ದಕ್ಷ ಉವಾಚ—

ಅಹೋ ಅಸಾಧೋ ಸಾಧೂನಾಂ ಸಾಧುಲಿಂಗೇನ ನಸ್ತ್ವಯಾ ।
ಅಸಾಧ್ವಕಾರ್ಯರ್ಭಕಾಣಾಂ ಭಿಕ್ಷೋರ್ಮಾರ್ಗಃ ಪ್ರದರ್ಶಿತಃ ॥

ಹೇ ಅಸಾಧೋ=ಅಸಜ್ಜನನೇ, ಸಾಧುಲಿಂಗೇನ=ಸಜ್ಜನರಂತೆ ವೇಷಧಾರಿಯಾದ, ಜಟಿ ಯಜ್ಞೋಪವೀತ ಶಮದಮಾದಿ ಸಾಧುಜನ ಧರ್ಮದ ಸೋಗಿನ ತ್ವಯಾ=ನಿನ್ನಿಂದ ನಃ=ನಮ್ಮ ಸಾಧೂನಾಂ ಅರ್ಭಕಾಣಾಂ=ಸ್ವಧರ್ಮಪ್ರವೃತ್ತರಾದ ಮಕ್ಕಳಿಗೆ ಭಿಕ್ಷೋಃ=ಸನ್ಯಾಸಿಯ ಮಾರ್ಗವು ಪ್ರದರ್ಶಿತಃ=ಉಪದೇಶಿಸಲ್ಪಟ್ಟಿತು (ಇತಿ ಯತ್)=ಎಂಬುದೇನುಂಟೋ (ಅತಃ)=ಆ ಕಾರಣದಿಂದ ಅಸಾಧು=ಅಮಂಗಲವು ಅಕಾರಿ=ಮಾಡಲ್ಪಟ್ಟಿತು. ಅಹೋ=ಆಶ್ಚರ್ಯವು. ॥೩೬॥

ಋಣೈಸ್ತ್ರಿಭಿರಮುಕ್ತಾನಾಮಮೀಮಾಂಸಿತಕರ್ಮಣಾಮ್ ।
ವಿಘಾತಃ ಶ್ರೇಯಸಃ ಪಾಪ ಲೋಕಯೋರುಭಯೋಃ ಕೃತಃ ॥

'ಸನ್ಯಾಸೇನ ತನುಂ ತ್ಯಜೇತ್' ಎಂಬೀ ಮೊದಲಾದ ವಾಕ್ಯಗಳಿಂದ ಸನ್ಯಾಸ ಮಾರ್ಗ ವಿಹಿತವಾದ್ದರಿಂದ ಅಮಂಗಲ ಮಾಡಿದೆಯೆಂಬುದು ಹೇಗೆ ತಾನೇ ಸರಿಯಾಗುವುದು ? ಎಂದರೆ ಹೇಳುತ್ತಾರೆ. ಪಾಪ=ಪಾಪಿಯೇ, ತ್ರಿಭಿಃ=ಮೂರು ಋಣೈಃ=ದೇವ, ಋಷಿ ಮತ್ತು ಪಿತೃಋಣಗಳಿಂದ ಅಮುಕ್ತಾನಾಂ=ಕ್ರಮವಾಗಿ ಯಜ್ಞ, ಬ್ರಹ್ಮಚರ್ಯ ಮತ್ತು ಪ್ರಜೋತ್ಪತ್ತಿಗಳನ್ನು ಮಾಡದೆ ಇರುವುದರಿಂದ ಮುಕ್ತರಾಗದಿರುವ ಅಮೀಮಾಂಸಿತಕರ್ಮಣಾಂ=ಕರ್ಮಗಳನ್ನು ವಿಚಾರ ಮಾಡದಿರುವ (ನಃ ಅರ್ಭಕಾಣಾಂ)=ನಮ್ಮ ಮಕ್ಕಳ ಉಭಯೋಃ ಲೋಕಯೋಃ=ಇಹ ಮತ್ತು ಪರಲೋಕಗಳಲ್ಲಿ ಹೊಂದಲು ಕಾರಣವಾದ ಶ್ರೇಯಸಃ=ಶ್ರೇಯಸ್ಸಿಗೆ ವಿಘಾತಃ=ವಿಘ್ನವು (ನಾಶವು) (ತ್ವಯಾ)=ನಿನ್ನಿಂದ ಕೃತಃ=ಮಾಡಲ್ಪಟ್ಟಿತು. ಸಂನ್ಯಾಸ ಮಾರ್ಗವು ಮೋಕ್ಷಕ್ಕೆ ಕಾರಣವಾದರೂ ಋಣತ್ರಯವನ್ನು ಕಳೆದುಕೊಳ್ಳದೆ ಹೋದಲ್ಲಿ ಮಹಾ ಅನರ್ಥವಾಗುವುದೆಂದು ಅಭಿಪ್ರಾಯ. 'ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣೀ ವಾ ಜಾಯತೇ । ಬ್ರಹ್ಮಚರ್ಯೇಣ ಋಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ । ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರೀ' । ಎಂಬ ಶ್ರುತಿವಾಕ್ಯವು ಋಣತ್ರಯ ಮತ್ತು ಅದರ ಮುಕ್ತಿ

ತಮ್ಮಲ್ಲಿಗೆ ಬಂದಿದ್ದ ನಾರದರನ್ನು ನೋಡಿ ಕೋಪದಿಂದ ತುಟಿಗಳು ನಡಗುತ್ತಿರಲು 'ನಾರದ, ನೀನು ಅಸಾಧುವು. ಸಾಧುಗಳಂತೆ ವೇಷ ಧರಿಸಿದ ನೀನು ನನ್ನ ಧರ್ಮಿಷ್ಠ ಮಕ್ಕಳಿಗೆ ಸನ್ಯಾಸಿಗಳ ಮಾರ್ಗವನ್ನು ಉಪದೇಶಿಸಿದೆ. ಇದರಿಂದ ಅಮಂಗಳವನ್ನೇ ಮಾಡಿರುವೆ. ಪಾಪಿ ! ದೇವ, ಋಷಿ ಮತ್ತು ಪಿತೃಋಣಗಳನ್ನು ಕ್ರಮವಾಗಿ ಯಜ್ಞ, ಬ್ರಹ್ಮಚರ್ಯ, ಮತ್ತು ಪ್ರಜೋತ್ಪತ್ತಿಗಳಿಂದ ಕಳೆದುಕೊಳ್ಳದೆ, ಕರ್ಮವಿಚಾರ ಮಾಡದೆ ಇದ್ದ ನನ್ನ ಮಕ್ಕಳ ಉಭಯಲೋಕ

ಯನ್ನು ತಿಳಿಸುವುದು. ಕರ್ಮ ವಿಚಾರ ಮಾಡದ್ದರಿಂದ ಋಷಿಋಣ ಹೋಗಲಿಲ್ಲ ವೆಂದೂ ಆದ್ದರಿಂದಲೇ ಅದಾದಮೇಲೆ ಸಂಭವಿಸುವ ಪುತ್ರೋತ್ಪಾದನ ಯಜ್ಞಗಳೂ ಇಲ್ಲವಾದ್ದರಿಂದ ಪಿತೃ, ದೇವಋಣಗಳೂ ಹೋಗಲಿಲ್ಲವೆಂದೂ ಅಭಿಪ್ರಾಯ. ವಿಷಯಭೋಗ ತ್ಯಾಗದಿಂದ ಇಹಲೋಕದಲ್ಲಿ ಶ್ರೇಯಸ್ಸಿಗೆ ವಿಘ್ನವೂ, ಧರ್ಮಾನುಷ್ಠಾನವಿಲ್ಲದ್ದರಿಂದ ಪರಲೋಕದಲ್ಲಿ ಶ್ರೇಯಸ್ಸಿಗೆ ವಿಘ್ನವೂ ಆಯಿತೆಂದು ಅರ್ಥ. ಮೂರು ಋಣಗಳನ್ನು ಕಳೆದುಕೊಳ್ಳದೆ ಮೋಕ್ಷಮಾರ್ಗವನ್ನು ಹಿಡಿಯುವುದು ಅಧಃಪಾತಕ್ಕೆ ಕಾರಣವಾಗುವುದು ಎಂದು ಮನುವಚನವೂ ಇದೆ. 'ಪಾಪ' ಎಂದು ನಾರದರನ್ನು ಕರೆದದ್ದು ಕೋಪದಿಂದಲೇ ಹೊರತು ಪಾಪಯುಕ್ತರೆಂದಲ್ಲ. || ೩೭ ||

ಏವಂ ತ್ವಂ ನಿರನುಕ್ರೋಶೋ ಬಾಲಾನಾಂ ಮತಿಭಿದ್ಧರೇಃ ।
ಪಾರ್ಷದಮಧ್ಯೇ ಚರಸಿ ಯಶೋಹಾನಿರಪತ್ರಪಃ ॥ ೩೮ ॥

ಏವ= ಹೀಗೆ (ವಿಚಾರ್ಯಮಾಣೇ ಸತಿ)= ವಿಚಾರಮಾಡಿದಲ್ಲಿ ತ್ವಂ= ನೀನು ಬಾಲಾನಾಂ= ಕೃತ್ಯಾಕೃತ್ಯಗಳನ್ನು ತಿಳಿಯದ ಹುಡುಗರಿಗೆ ಮತಿಭಿತ್ = ಬುದ್ಧಿಯನ್ನು ಕೆಡಿಸಿದವನು. ಯಶೋಹಾನಿಃ= ಅವರ ಯಶಸ್ಸನ್ನು ನಾಶಮಾಡಿದವನು. ಆದ್ದರಿಂದಲೇ ನಿರನುಕ್ರೋಶಃ = ದಯಾಶೂನ್ಯನು. ಅಪತ್ರಪಃ= ನಾಚಿಕೆಯಿಲ್ಲದ (ತ್ವಂ)= ನೀನು ಹರೇಃ= ಶ್ರೀಹರಿಯ ಪಾರ್ಷದ ಮಧ್ಯೇ = ಪರಿವಾರದವರ ನಡುವೆ ಚರಸಿ= ಸಂಚರಿಸುತ್ತಿರುವೆ. ಶ್ರೀಹರಿಯ ಪರಿವಾರದವರು ಈ ಕೆಲಸಗಳನ್ನು ಎಂದೂ ಮಾಡುವುದಿಲ್ಲವೆಂದರ್ಥ. ಶ್ರೀಹರಿಯ ಯಶೋನಾಶಕನು ಎಂದೂ ಅನ್ವಯಿಸಿರುವರು. || ೩೮ ||

ನನು ಭಾಗವತಾ ನಿತ್ಯಂ ಭೂತಾನುಗ್ರಹಕಾತರಾಃ ।
ಋತೇ ತ್ವಾಂ ಸೌಹೃದಘ್ನಂ ವೈ ವೈರಂಕರಮವೈರಿಣಾಮ್ ॥೩೯॥

ಅದನ್ನೇ ಹೇಳುತ್ತಾರೆ. ಸೌಹೃದಘ್ನಂ= ಪ್ರಾಣಿಗಳಲ್ಲಿ ಪರಸ್ಪರ ಸ್ನೇಹವನ್ನು ಹೋಗಲಾಡಿಸುವ ಅಂದರೆ ಅವೈರಿಣಾಂ= ವೈರವಿಲ್ಲದವರಿಗೂ ವೈರಂಕರಂ= ಪರಸ್ಪರ ಶತ್ರುತನವನ್ನುಂಟುಮಾಡುವ ತ್ವಾಂ ಋತೇ = ನಿನ್ನನ್ನು ಬಿಟ್ಟು ಭಾಗವತಾಃ= ಭಗವದ್ಭಕ್ತರು ನಿತ್ಯಂ= ಯಾವಾಗಲೂ ಭೂತಾನುಗ್ರಹಕಾತರಾಃ ನನು= ಪ್ರಾಣಿಗಳಿಗೆ ಅನುಗ್ರಹಮಾಡಬೇಕೆಂಬುದರಲ್ಲಿ ಆಸಕ್ತರೇ ಅಲ್ಲವೇ! ವೈರಕರ ಎಂದು ಹೇಳದೆ ವೈರಂಕರ ಎಂದು ಹೇಳಿದ್ದು ದಕ್ಷರ ಕೋಪೋದ್ರೇಕವನ್ನು ತೋರಿಸುವುದಕ್ಕಾಗಿ, ಇದನ್ನೇ ಹಿಂದೆ 'ವಿಸ್ಫುರಿತಾಧರ' ಎಂಬುದರಿಂದಲೂ ಸೂಚಿಸಿದ್ದರು. ಭೂತದ್ರೋಹಮಾಡುವ ನಿನಗೆ ನಾಚಿಕೆ ಬೇಡವೇ? ಎಂದಭಿಪ್ರಾಯ. || ೩೯ ||

ಶ್ರೇಯಸ್ಸಿಗೂ ನೀನು ನಾಶಕನಾದೆ. ಕೃತ್ಯಾಕೃತ್ಯಗಳನ್ನು ಅರಿಯದ ಹುಡುಗರ ಬುದ್ಧಿಯನ್ನು ಕೆಡಿಸಿದೆ. ಅವರ ಯಶೋಘಾತುಕನಾದ ನೀನು ದಯಾರಹಿತನು. ನಾಚಿಕೆಯಿಲ್ಲದವನು. ಶ್ರೀಹರಿಯ ಪರಿವಾರದವರಲ್ಲಿ (ನಾನೂ ಒಬ್ಬನೆಂದು) ಸಂಚರಿಸುತ್ತಿರುವೆ. (ಶ್ರೀಹರಿಯ ಯಶಸ್ಸಿಗೂ ಕಳಂಕ ತಂದಿರುವೆ.) ಭಗವದ್ಭಕ್ತರು

**ನೇತ್ಥಂ ಪುಂಸೋ ವಿರಾಗಃ ಸ್ಯಾತ್ತ್ವಯಾ ಕೇವಲಿನಾ ವಿನಾ ।
ಮನ್ಯಸೇ ಯದ್ಯುಪಶಮಂ ಸ್ನೇಹಪಾಶನಿವರ್ತನಮ್ ॥ ೪೦ ॥**

ವಿಷಯಗಳಲ್ಲಿ ಅತಿಶಯವಾದ ಸಂಗದಿಂದ ರಾಗೋದ್ರೇಕವೇ ಆಗಿ ಸಂಸಾರದ ನಿವೃತ್ತಿಯೇ ಆಗುವಂತಿಲ್ಲ. ಆದ್ದರಿಂದ ವೈರಾಗ್ಯಕ್ಕಾಗಿ ನಾನು ಹಿತವನ್ನೇ ಉಪದೇಶಿಸಿದೆನು. ಭೂತದ್ರೋಹವಾದರೂ ಎಲ್ಲಿ ಬಂತು? ಎಂದರೆ ಹೇಳುತ್ತಾರೆ. ಕೇವಲಿನಾ=ಸಂಧ್ಯೋಪಾಸನೆ ಮೊದಲಾದ ಕರ್ಮಗಳಿಲ್ಲದೆ ಭಗವದ್ಭಕ್ತನೆಂಬ ಅಭಿಮಾನವುಳ್ಳ ತ್ವಯಾ ವಿನಾ=ನಿನ್ನನ್ನು ಬಿಟ್ಟು ಇತ್ಥಂ=ಹೀಗೆ ಉಪದೇಶದಿಂದ (ವಿಷಯಾನುಭವವಿಲ್ಲದ ಕೇವಲ ಉಪದೇಶದಿಂದ), ಪುಂಸಃ=ಅಧಿಕಾರಿ ಪುರುಷನಿಗೆ ವಿರಾಗಃ=ವೈರಾಗ್ಯವು ನ ಸ್ಯಾತ್=ಆಗುವುದಿಲ್ಲ. ವಿಷಯಸ್ನೇಹದಿಂದ ರಾಗ. ವಿಷಯೋಪಶಮದಿಂದ ಸ್ನೇಹನಿವೃತ್ತಿಯಾಗಿ ರಾಗವೂ ನಿವೃತ್ತಿಯಾಗುವುದು ಎಂದರೆ ಹೇಳುತ್ತಾರೆ. ಉಪಶಮಂ=ವಿಷಯಾನನುಭವವನ್ನೇ ಸ್ನೇಹಪಾಶದ ನಿವರ್ತಕವೆಂದು ಯದಿ ಮನ್ಯಸೇ=ತಿಳಿದಿರುವೆಯಾದರೆ (ತದಾಪಿ)=ಆಗಲೂ (ಸಃ)=ಉಪಶಮವು (ವ್ಯರ್ಥ ಇತಿ ಮನ್ಯೇ)=ವ್ಯರ್ಥವೆಂದೇ ನಾನು ತಿಳಿದಿರುವೆನು. [ಯದ್ಯಪಿ ನೀನು ಹೀಗೆ ತಿಳಿದಿರುವೆ. ಆದರೂ ಕೇವಲಿನಾ=ಜ್ಞಾನವಿಲ್ಲದಿದ್ದರೂ ಕೇವಲ ವೇಷಧಾರಿಯಾದ ನಿನ್ನಿಂದ ಇತ್ಥಂ (ಕೃತೇ)=ಹೀಗೆ ಬುದ್ಧಿಭೇದವೇ ಮಾಡಲ್ಪಟ್ಟಿದ್ದರೂ ವಿನಾ=ವಿಷಯಾನುಭವವಿಲ್ಲದ ಪುರುಷನಿಗೆ ವೈರಾಗ್ಯವಿಲ್ಲ. ಅದಿಲ್ಲದೆ ಉಪಶಾಂತಿಯಿಲ್ಲ. ಅದಿಲ್ಲದೆ ಸ್ನೇಹಪಾಶ ನಿವೃತ್ತಿಯಿಲ್ಲ ಎಂದೂ ಅರ್ಥಮಾಡಿರುವರು.] ॥ ೪೦ ॥

**ನಾನುಭೂಯ ನ ಜಾನಾತಿ ಪುಮಾನ್ ವಿಷಯತೀಕ್ಷ್ಣತಾಮ್ ।
ನಿರ್ವಿದ್ಯತೇ ಸ್ವಯಂ ತಸ್ಮಾನ್ನ ತಥಾ ಭಿನ್ನಧೀಃ ಪರೈಃ ॥ ೪೧ ॥**

ವ್ಯರ್ಥವೇಕೆ? ಎಂದರೆ ಹೇಳುತ್ತಾರೆ. ಪುಮಾನ್=ಅಧಿಕಾರಿಯು ನಾನುಭೂಯ=ವಿಷಯಗಳನ್ನು ಅನುಭವಿಸದೆ ವಿಷಯತೀಕ್ಷ್ಣತಾಂ=ವಿಷಯಗಳು ಸಂಸಾರವನ್ನು ಹೊಂದಿಸುವಲ್ಲಿ ಸಮರ್ಥಗಳೆಂಬುದನ್ನು ನ ಜಾನಾತಿ=ತಿಳಿಯುವುದಿಲ್ಲ. ಹಾಗಾದರೆ ವಿಷಯ ತೀಕ್ಷ್ಣತೆಯ ಜ್ಞಾನವು ವೈರಾಗ್ಯವನ್ನು ತಂದು ಕೊಡುವುದೇ? ಎಂದರೆ ಹೇಳುತ್ತಾರೆ. ಯಥಾ=ಹೇಗೆ ಸ್ವಯಂ=ವಿಷಯಾನು

ಯಾವಾಗಲೂ ಪ್ರಾಣಿಗಳಿಗೆ ಅನುಗ್ರಹ ಮಾಡಬಯಸುವರಲ್ಲವೆ! ನೀನು ಮಾತ್ರ ಪ್ರಾಣಿಗಳ ಸ್ನೇಹವನ್ನು ಹೋಗಲಾಡಿಸಿ ವೈರವಿಲ್ಲದವರಿಗೂ ವೈರವನ್ನು ಹಚ್ಚಿ ಕೊಡುವೆ. ಸಂಧ್ಯೋಪಾಸನಾದಿ ಕರ್ಮಗಳಿಲ್ಲದೆ ನಿನಗೆ ಮಾತ್ರ ವೈರಾಗ್ಯ ಬಂದಿರಬಹುದು. ಆದರೆ ವಿಷಯಗಳನ್ನು ಅನುಭವಿಸದೆ ಕೇವಲ ಉಪದೇಶದಿಂದ ಯಾರಿಗೂ ವೈರಾಗ್ಯ ಬರುವುದಿಲ್ಲ. ಉಪಶಾಂತಿಯೇ ಸ್ನೇಹಪಾಶನಿವರ್ತಕವೆಂದು

ಭವದಿಂದ ಅದರ ತೀಕ್ಷ್ಣತೆಯನ್ನು ಅರಿತು ಮತ್ತೊಬ್ಬರ ಉಪದೇಶವಿಲ್ಲದೆಯೇ ತಸ್ಮಾತ್–ಆ ವಿಷಯ ಸಮೂಹದಿಂದ ನಿರ್ವಿದ್ಯತೇ=ವಿರಕ್ತನಾಗುವನೋ ತಥಾ= ಹಾಗೆ ಪರೈಃ=ಮತ್ತೊಬ್ಬರಿಂದ ಭಿನ್ನಧೀಃ=ಪ್ರಬೋಧಿತ ಬುದ್ಧಿಯುಳ್ಳವನಾದರೂ ವಿಷಯ ತೀಕ್ಷ್ಣತೆಯನ್ನು ಅರಿಯದಿರುವುದರಿಂದ ನ (ನಿರ್ವಿದ್ಯತೇ)= ವಿರಕ್ತನಾಗುವುದಿಲ್ಲ. ಅನುಭವಿಸದೆ ವಿಷಯಗಳು ದುಃಖಕರಗಳೆಂದು ತಿಳಿಯುವುದಿಲ್ಲ. ಆದ್ದರಿಂದ ಹೇಗೆ ವಿಷಯಾನುಭವದಿಂದ ವಿಷಯಗಳು ದುಃಖಕಾರಕಗಳೆಂದು ತಿಳಿದು ತಾನೇ ವಿರಕ್ತನಾಗುವನೋ ಹಾಗೆ ಮತ್ತೊಬ್ಬರಿಂದ ಬುದ್ಧಿ ಬದಲಾವಣೆ ಮಾಡಲ್ಪಟ್ಟವನು ವಿರಕ್ತನಾಗುವುದಿಲ್ಲ. ॥ ೪೧ ॥

ಯನ್ನಸ್ತ್ವಂ ಕರ್ಮಬಂಧಾನಾಂ ಸಾಧೂನಾಂ ಗೃಹಮೇಧಿನಾಮ್ ।
ಕೃತವಾನಸಿ ದುರ್ಮರ್ಷಂ ವಿಪ್ರಿಯಂ ತವ ಮರ್ಷಿತಮ್ ॥ ೪೨ ॥

ಬಯ್ಯುವುದನ್ನು ಬಿಟ್ಟು ತಮ್ಮ ಕೋಪದ ಫಲವನ್ನು ಹೇಳುತ್ತಾರೆ. ತ್ವಂ= ನೀನು ಕರ್ಮಬಂಧಾನಾಂ–ಪ್ರಜಾಸೃಷ್ಟಿ ಕರ್ಮಮಾಡಬೇಕಾಗಿರುವ ಆದ್ದರಿಂದಲೇ ಸಾಧೂನಾಂ=ಧರ್ಮಪರರಾದ ಗೃಹಮೇಧಿನಾಂ=ಗೃಹಸ್ಥರಾದ ನಃ=ನಮಗೆ ದುರ್ಮರ್ಷಂ= ಸಹಿಸಲಾಗದ ವಿಪ್ರಿಯಂ= ವಿರೋಧವನ್ನು ಕೃತವಾನಸಿ ಇತಿ ಯತ್=ಮಾಡಿರುವೆಯೆಂಬುದೇನುಂಟೋ ಅದು ತವ(ಕರ್ಮ)=ನಿನ್ನ ಕೆಲಸವು ಮರ್ಷಿತಂ=ನಮ್ಮಿಂದ ಸಹಿಸಲ್ಪಟ್ಟಿರುವುದು. ಕ್ಷಮಿಸಿರುವೆವು ಎಂದರ್ಥ. ॥ ೪೨ ॥

ತಂತುಕೃಂತನ ಯನ್ನಸ್ತ್ವಮಭದ್ರಮಚರಃ ಪುನಃ ।
ತಸ್ಮಾಲ್ಲೋಕೇಷು ತೇ ಮೂಢ ನ ಭವೇದ್ಭ್ರಮತಃ ಪದಮ್ ॥

ಹಾಗಾದರೆ ಸಹಿಸದಿರುವುದೇನೆಂದರೆ ಹೇಳುತ್ತಾರೆ. ತನಯಾನಾಂ=ಮಕ್ಕಳ ತಂತುಕೃತ್=ಸಂತತಿಯನ್ನು ಛೇದಿಸಿದ ತ್ವಂ=ನೀನು ಪುನಃ=ಆದರೋ ಅಥವಾ ತಂತುಕೃತ್ತನಯಾನಾಂ=ಸಂತತಿಯನ್ನು ಮಾಡಬೇಕೆಂದಿದ್ದ ಮಕ್ಕಳಿಗೆ ಅಭದ್ರಂ= ಐಹಿಕಸುಖಾನುಭವಕ್ಕೆ ವಿರುದ್ಧವಾದುದನ್ನು ಅಚರಃ=ಉಪದೇಶದಿಂದ ಮಾಡಿರುವೆ.

ನೀನು ತಿಳಿದಿದ್ದರೆ ಅದು ತಪ್ಪೇ ಸರಿ. ವಿಷಯಗಳನ್ನು ಅನುಭವಿಸದೆ ವಿಷಯಗಳ ತೀಕ್ಷ್ಣತೆಯ ಅರಿವಾಗುವುದಿಲ್ಲ. ವಿಷಯಾನುಭವದಿಂದ ಮತ್ತೊಬ್ಬರ ಉಪದೇಶ ವಿಲ್ಲದೆ ವಿರಕ್ತನಾಗುವಂತೆ ಕೇವಲ ಉಪದೇಶದಿಂದ ದೃಢವಿರಕ್ತಿಯು ಹುಟ್ಟುವುದಿಲ್ಲ.

'ನಾವು ಗೃಹಸ್ಥರು. ಪ್ರಜಾಸೃಷ್ಟಿರೂಪಕರ್ಮವನ್ನು ಮಾಡಬೇಕಾದವರು. ಅದು ನಮ್ಮ ಧರ್ಮ. ಹೀಗೆ ಧರ್ಮಿಷ್ಠರಾದ ನಮಗೆ ನೀನು ಸಹಿಸಲಾಗದ ದ್ರೋಹ ವನ್ನು ಮಾಡಿರುವೆ. ಈ ನಿನ್ನ ದ್ರೋಹವನ್ನು (ಮೊದಲನೆಯದನ್ನು) ಕ್ಷಮಿಸಿರು ವೆವು. ಆದರೆ ಮತ್ತೆ ನೀನು ಮಕ್ಕಳಿಗೆ ಕೇಡುಕನ್ನು ಮಾಡಿರುವೆ. ಅವರು ಪ್ರಜಾ ಸೃಷ್ಟಿಗಾಗಿ ಹೊರಟಿದ್ದರು. ಉಪದೇಶದಿಂದ ಅವರ ಬುದ್ಧಿಯನ್ನು ಕೆಡಿಸಿ ಹಾಳ್ಳ

ತಸ್ಮಾತ್=ಆ ಕಾರಣದಿಂದ ಮೂಢ-ನಮ್ಮ ಇಷ್ಟಕ್ಕೆ ವಿರುದ್ಧವಾದುದನ್ನೇ ಬೋಧಿಸಿದ ಮೂರ್ಖ ನಾರದನೇ ಲೋಕೇಷು=ಲೋಕಗಳಲ್ಲಿ ಭ್ರಮತಃ = ಸಂಚರಿಸುವ ತೇ=ನಿನಗೆ ಪದಂ=ಒಂದು ಕಡೆ ಇರುವಿಕೆಯೆಂಬ ಸ್ಥಿತಿಯು (ಸ್ಥಾನವು) ನ ಭವೇತ್=ಇಲ್ಲದೆ ಹೋಗಲಿ. ಪುನಃ=ಮತ್ತೊಮ್ಮೆ ಅಭದ್ರಂ ಅಚರಃ ಎಂದಾದರೂ ಅನ್ವಯ. ಮೊದಲನೆಯ ಅಪರಾಧವನ್ನು ಕ್ಷಮಿಸಿದರೂ ಎರಡನೆಯ ಬಾರಿ ಮಾಡಿದುದನ್ನು ಕ್ಷಮಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ. || ೪೩ ||

ಶ್ರೀ ಶುಕ ಉವಾಚ—

ಪ್ರತಿಜಗ್ರಾಹ ತದ್ಬಾಢಂ ನಾರದಃ ಸಾಧುಸಮ್ಮತಃ ।
ಏತಾವಾನ್ ಸಾಧುವಾದೋ ಹಿ ತಿತಿಕ್ಷೇತೇಶ್ವರಃ ಸ್ವಯಮ್ ॥ ೪೪॥

ಸ್ವಯಂ=ತಾವು ಸಾಧುಸಮ್ಮತಃ - ಸಜ್ಜನರಿಗೆ ಅಭಿಮತರಾದ, ಮಂಗಳ ದೇವತೆಯಾದ ನಾರದರು ಈಶ್ವರಃ (ಅಪಿ)-ಪ್ರತಿಶಾಪವನ್ನು ಕೊಡಲು ಸಮರ್ಥರಾಗಿದ್ದರೂ ತತ್-ಆ ದಕ್ಷರು ಕೊಟ್ಟ ಶಾಪವನ್ನು ಬಾಢಂ (ಇತಿ)=ಆಗಲಿ ಎಂದು ಪ್ರತಿಜಗ್ರಾಹ - ಸ್ವೀಕರಿಸಿದರು. ಪ್ರತಿಶಾಪ ಕೊಡಲಿಲ್ಲ. ಸ್ವಯಂ ಸಮರ್ಥರಾದರೂ ತಿತಿಕ್ಷೇತ ಹಿ - ಸಹಿಸಬೇಕೆಂಬುವೇನುಂಟೋ ಏತಾವಾನ್ - ಇಷ್ಟು ಸಾಧುವಾದಃ- ಸಜ್ಜನರ ಸ್ವಭಾವವೆಂಬ ವಾದವು. ಹಿ ಎಂಬುದರಿಂದ 'ಸಾಧೂನಾಂ ಭೂಷಣಂ ಕ್ಷಮಾ' ಎಂಬುವ ಸ್ಮೃತಿ ಪ್ರಸಿದ್ಧಿಯನ್ನು ಸೂಚಿಸಿರುವರು. (ನಾರದರಿಗಿಂತ ದಕ್ಷರು ತಾರತಮ್ಯದಲ್ಲಿ ಉತ್ತಮರಾದ್ದರಿಂದ ಪ್ರತಿಶಾಪಕೊಟ್ಟು ಸ್ವೋತ್ತಮರ ಆಗ್ರಹವನ್ನು ನಾರದರು ಸಂಪಾದಿಸಿಕೊಳ್ಳಲಿಲ್ಲವೆಂದೂ ಇಲ್ಲಿ ತಿಳಿಯಬೇಕು. ಮೃದುತನವನ್ನು ತೋರಿ ದಕ್ಷರು ಶಪಿಸಿದರು ಮಾತ್ರ. ನಾರದರು ಆಗಲಿ ಎಂದು ಒಪ್ಪಿಕೊಂಡುಬಿಟ್ಟರು. ಇದು ಸಜ್ಜನರ ಸ್ವಭಾವ ಎಂದು ತಾತ್ಪರ್ಯ.) || ೪೪ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಪಂಚಮೋಽಧ್ಯಾಯಃ

ಮಾಡಿರುವೆ. (ಇದನ್ನು ಕ್ಷಮಿಸಲು ಸಾಧ್ಯವೇ ಇಲ್ಲ.) ಮೂಢ! ಲೋಕಗಳಲ್ಲಿ ಸಂಚರಿಸುವ ನಿನಗೆ ಒಂದು ಕಡೆ ಸ್ಥಿರವಾಗಿರುವಿಕೆಯು ಇಲ್ಲದೆ ಹೋಗಲಿ' ಎಂದು ನುಡಿದರು.

ಶ್ರೀ ಶುಕಾಚಾರ್ಯರು—ನಾರದರು ಸಜ್ಜನರಿಗೆ ಅಭಿಮತರು. ಪ್ರತಿಶಾಪವನ್ನು ಕೊಡಲು ಸಮರ್ಥರು. ಆದರೂ ದಕ್ಷರು (ತಮಗಿಂತ ಉತ್ತಮರಾದ್ದರಿಂದ) ಕೊಟ್ಟ ಶಾಪವನ್ನು ಆಗಲಿ ಎಂದು ಸ್ವೀಕರಿಸಿದರು. 'ಸ್ವಯಂ ಸಮರ್ಥರಾದರೂ ಸಹಿಸಬೇಕು' ಎಂಬುದಿಷ್ಟು ಸಜ್ಜನರ ಸ್ವಭಾವವು.

ಅಥ ಷಷ್ಠೋಽಧ್ಯಾಯಃ

ಶ್ರೀ ಶುಕ ಉವಾಚ—

ತತಃ ಪ್ರಾಚೇತಸೋಽಸಿಕ್ನ್ಯಾಮನುನೀತಃ ಸ್ವಯಂಭುವಾ ।
ಷಷ್ಟಿಂ ಸಂಜನಯಾಮಾಸ ದುಹಿತೃಃ ಪಿತೃವತ್ಸಲಾಃ ॥ ೧ ॥

ಸಜ್ಜನ- ಅಸಜ್ಜನರ ತಾರತಮ್ಯಜ್ಞಾನವು ಶ್ರೀಹರಿಯ ಮಾಹಾತ್ಮ್ಯಜ್ಞಾನಕ್ಕೆ ಉಪಯುಕ್ತವೆಂಬ ಅಭಿಪ್ರಾಯದಿಂದ ಈ ಅಧ್ಯಾಯದಲ್ಲಿ ಅಸಿಕ್ನಿದೇವಿಯ ಹೆಣ್ಣು ಮಕ್ಕಳ ಸಂತತಿಯ ವಿಸ್ತಾರವನ್ನು ವಿವರಿಸುತ್ತಾರೆ. ತತಃ=ನಾರದರನ್ನು ಶಪಿಸಿದ ನಂತರ ಸ್ವಯಂಭುವಾ=ಬ್ರಹ್ಮದೇವರಿಂದ ಅನುನೀತಃ = ಸಮಾಧಾನಪಡಿಸಲ್ಪಟ್ಟ ಪ್ರಾಚೇತಸಃ=ದಕ್ಷಪ್ರಜೇಶ್ವರರು ಅಸಿಕ್ನಿದೇವಿಯಲ್ಲಿ ಪಿತೃವತ್ಸಲಾಃ=ತಂದೆಯಲ್ಲಿ ಅಭಿಮಾನವುಳ್ಳ ಷಷ್ಟಿಂ=ಅರವತ್ತು ದುಹಿತೃಃ=ಹೆಣ್ಣುಮಕ್ಕಳನ್ನು ಸಂಜನಯಾ-ಮಾಸ = ಪ್ರಜಾಸೃಷ್ಟಿಗಾಗಿ ಪಡೆದರು. ಗಂಡುಮಕ್ಕಳನ್ನು ಪಡೆದರೆ ಮತ್ತೆ ನಾರದರು ಅವರನ್ನು ಹಾಳುಮಾಡಿಯಾರೆಂದು ಹೆಣ್ಣುಮಕ್ಕಳನ್ನು ಪಡೆದರೆಂದು ಅಭಿಪ್ರಾಯ. ॥ ೧ ॥

ದದೌ ಸ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ।
ಕಾಲಸ್ಯ ನಯನೇ ಯುಕ್ತಾಃ ಸಪ್ತವಿಂಶತಿಮಿಂದವೇ ।
ಭೂತಾಂಗಿರಃ ಕೃಶಾಶ್ವೇಭ್ಯೋ ದ್ವೇ ದ್ವೇ ತಾರ್ಕ್ಷ್ಯಾಯ ಚಾಪರಾಃ ॥ ೨ ॥

ಸಃ = ಆ ದಕ್ಷರು ದಶ = ಹತ್ತು ಹೆಣ್ಣುಮಕ್ಕಳನ್ನು ಧರ್ಮಾಯ = ಯಮಧರ್ಮರಾಜರಿಗೆ ದದೌ=ಮದುವೆಮಾಡಿಕೊಟ್ಟರು. ತ್ರಯೋದಶ=ಹದಿಮೂರು ಹೆಣ್ಣುಮಕ್ಕಳನ್ನು ಕಶ್ಯಪರಿಗೆ ಮದುವೆ ಮಾಡಿಕೊಟ್ಟರು. ಕಾಲಸ್ಯ = ಕಾಲದ ನಯನೇ ತಿಳಿಸುವಿಕೆಯಲ್ಲಿ ಯುಕ್ತಾಃ=ಯೋಗ್ಯರಾದ ಸಪ್ತವಿಂಶತಿಂ=ಇಪ್ಪತ್ತೇಳು ಹೆಣ್ಣುಮಕ್ಕಳನ್ನು ಇಂದವೇ-ಚಂದ್ರನಿಗೆ ಮದುವೆ ಮಾಡಿಕೊಟ್ಟರು. ಭೂತಾಂಗಿರಃ

ಆರನೆಯ ಅಧ್ಯಾಯ

ಶ್ರೀ ಶುಕಾಚಾರ್ಯರು—ಅನಂತರ ಬ್ರಹ್ಮದೇವರು ಬಂದು ದಕ್ಷರನ್ನು ಸಮಾಧಾನಪಡಿಸಿದರು. (ಗಂಡುಮಕ್ಕಳಿಂದ ಸೃಷ್ಟಿಯು ಮುಂದುವರಿಯದೆ ಹೋದುದನ್ನು ಮನಗಂಡು) ದಕ್ಷರು ತಮ್ಮ ಹೆಂಡತಿ ಅಸಕ್ನೀದೇವಿಯಲ್ಲಿ ತಂದೆಯಲ್ಲಿ ವಾತ್ಸಲ್ಯವುಳ್ಳ ಅರುವತ್ತು ಹೆಣ್ಣುಮಕ್ಕಳನ್ನು ಪಡೆದರು. ಅವರಲ್ಲಿ, ಹತ್ತು ಜನರನ್ನು ಯಮಧರ್ಮರಿಗೂ ಹದಿಮೂರು ಜನರನ್ನು ಕಶ್ಯಪರಿಗೂ ಕಾಲವನ್ನು ತಿಳಿಸಲು ಯೋಗ್ಯರಾದ ಇಪ್ಪತ್ತೇಳು ಮಕ್ಕಳನ್ನು ಚಂದ್ರದೇವರಿಗೂ ಒಬ್ಬೊಬ್ಬರಿಗೆ ಇಬ್ಬಿಬ್ಬ

ಕೃಶಾಶ್ವೇಭ್ಯಃ=ಭೂತ, ಆಂಗಿರಸ ಮತ್ತು ಕೃಶಾಶ್ವರಿಗೆ ತಲಾ ದ್ವೇ ದ್ವೇ= ಇಬ್ಬರಿಬ್ಬರು ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟರು. ಅಪರಾಃ = ಈ ಐವತ್ತಾರು ಹೋಗುತ್ತಾ ಉಳಿದ ನಾಲ್ವರನ್ನು ತಾರ್ಕ್ಷ್ಯಾಯ=ಅರಿಷ್ಟನೇಮಿ ಎಂಬುವರಿಗೆ ಮದುವೆ ಮಾಡಿಕೊಟ್ಟರು. ‖ ೨ ‖

ನಾಮಧೇಯಾನ್ಯಮೂಷಾಂ ತ್ವಂ ಸಾಪತ್ಯಾನಾಂ ಚ ಮೇ ಶೃಣು ।
ಯಾಸಾಂ ಪ್ರಸೂತಿಪ್ರಭವೈರ್ಲೋಕಾ ಆಪೂರಿತಾಸ್ತ್ರಯಃ ‖ ೩ ‖

ಯಾಸಾಂ = ಯಾವ ದಕ್ಷಪುತ್ರಿಯರ ಪ್ರಸೂತಿಪ್ರಭವೈಃ = ಮಕ್ಕಳು ಮೊಮ್ಮಕ್ಕಳುಗಳಿಂದ ತ್ರಯಃ ಲೋಕಾಃ=ಮೂರು ಲೋಕಗಳೂ ಆಪೂರಿತಾಃ= ತುಂಬಿಹೋದುವೋ ಸಾಪತ್ಯಾನಾಂ=ಮಕ್ಕಳು ಅವರ ಮಕ್ಕಳು ಮೊದಲಾದವರಿಂದ ಕೂಡಿದ ಅಮೂಷಾಂ= ಈ ದಕ್ಷಪುತ್ರಿಯರ ನಾಮಧೇಯಾನಿ = ಹೆಸರುಗಳನ್ನು ಮೇ=ನನ್ನಕಡೆಯಿಂದ ತ್ವಂ= ನೀನು ಶೃಣು=ಕೇಳು. ‖ ೩ ‖

ಭಾನುರ್ಲಂಬಾ ಕಕುಬ್ಜಾಮಿರ್ವಿಶ್ವಾ ಸಾಧ್ಯಾ ಮರುತ್ವತೀ ।
ವಸುರ್ಮುಹೂರ್ತಾ ಸಂಕಲ್ಪಾ ಧರ್ಮಪತ್ನ್ಯಃ ಸುತಾನ್ ಶೃಣು ‖ ೪ ‖

ಭಾನು, ಲಂಬಾ, ಕಕುಪ್, ಜಾಮಿ, ವಿಶ್ವಾ, ಸಾಧ್ಯಾ, ಮರುತ್ವತೀ, ವಸು, ಮುಹೂರ್ತಾ, ಸಂಕಲ್ಪಾ ಇವರು ಧರ್ಮಪತ್ನ್ಯಃ = ಯಮಧರ್ಮರಾಜರ ಹೆಂಡತಿಯರು. ಸುತಾನ್=ಅವರ ಮಕ್ಕಳ ಹೆಸರನ್ನು ಕೇಳು. ‖ ೪ ‖

ಭಾನೋಸ್ತು ವೇದಋಷಭ ಇಂದ್ರಸೇನಸ್ತತೋ ನೃಪ ।
ವಿದ್ಯೋತ ಆಸೀಲ್ಲಂಬಾಯಾಸ್ತತಶ್ಚ ಸ್ತನಯಿತ್ನವಃ ‖ ೫ ‖

ಪರೀಕ್ಷಿದ್ರಾಜನೇ, ಭಾನು ಎಂಬುವಳಿಗೆ ವೇದಋಷಭನು ಮಗನಾದನು. ತತಃ=ಆ ವೇದರ್ಷಭನಿಗೆ ಇಂದ್ರಸೇನನು ಮಗ. ಲಂಬಾ ಎಂಬುವಳಿಗೆ ವಿದ್ಯೋತ

ರಂತೆ ಆರು ಮಕ್ಕಳನ್ನು ಭೂತ ಪ್ರಜೇಶ್ವರ, ಆಂಗೀರಸ ಪ್ರಜೇಶ್ವರ, ಕೃಶಾಶ್ವ ಪ್ರಜೇಶ್ವರ—ಈ ಮೂವರಿಗೂ ಉಳಿದ ನಾಲ್ವರನ್ನು ಅರಿಷ್ಟನೇಮಿಗಳಿಗೂ ಮದುವೆ ಮಾಡಿಕೊಟ್ಟರು. ಇವರ ಮತ್ತು ಇವರ ಮಕ್ಕಳ ಹೆಸರುಗಳನ್ನು ಹೇಳುತ್ತೇನೆ, ಕೇಳು. ಈ ಹೆಣ್ಣುಮಕ್ಕಳ ಸಂತತಿಯಿಂದಲೇ ಮೂರು ಲೋಕಗಳೂ ತುಂಬಿ ಹೋದುವು.

ಭಾನು, ಲಂಬಾ, ಕಕುಪ್, ಜಾಮಿ, ವಿಶ್ವೆ, ಸಾಧ್ಯೆ, ಮರುತ್ವತೀ, ವಸು, ಮುಹೂರ್ತ ಮತ್ತು ಸಂಕಲ್ಪಾ ಎಂಬುವರು ಯಮಧರ್ಮದೇವರ ಹೆಂಡತಿಯರು. ಭಾನುವಿಗೆ ವೇದರ್ಷಭನೆಂಬ ಮಗ. ಅವನಿಗೆ ಇಂದ್ರಸೇನನು ಮಗ. ಲಂಬೆಗೆ

ನೆಂಬ ಮಗನಾದನು (ಮಿಂಚಿಗೆ ಅಭಿಮಾನಿ) ತತಃ ಚ = ಆ ವಿದ್ಯೋತನಿಂದ ಸ್ತನಯಿತ್ನವಃ=ಗುಡುಗುಗಳು (ಗುಡುಗಿಗೆ ಅಭಿಮಾನಿಗಳು) ಮಕ್ಕಳಾದರು. ||೫||

ಕಕುಭಸ್ಸಂಕಟಿಶ್ಚಾಸೀತ್ ಕೀಕಟಸ್ತನಯೋ ಯತಃ ।
ಭುವೋ ದುರ್ಗಾಣಿ ಜಾಮೇಯಾಃ ಸ್ವರ್ಗೋ ನಂದಿಸ್ತತೋಽ
ಭವತ್ ॥ ೬ ॥

ಕಕುಭಃ = ಕಕುಪ್ ಎಂಬುವಳಿಗೆ ಸಂಕಟಃ = ಸಂಕಟನು (ಸಂಕಟಕ್ಕೆ ಅಭಿಮಾನಿಯು) ಆಸೀತ್ = ಮಗನಾದನು. ಯತಃ=ಆ ಸಂಕಟನಿಂದ ಕೀಕಟನು ತನಯಃ=ಮಗನು ಆದನು. ಭುವಃ=ಭೂಮಿಯಮೇಲಿನ ದುರ್ಗಾಣಿ=ಅಗಮ್ಯ ಸ್ಥಳಗಳಿಗೆ ಅಭಿಮಾನಿಗಳು ಜಾಮೇಯಾಃ = ಜಾಮಿ ಎಂಬುವಳ ಮಕ್ಕಳು. ಸ್ವರ್ಗಃ = ಸ್ವರ್ಗಾಭಿಮಾನಿಯು ಜಾಮಿಯ ಮಗನು. ತತಃ=ಆ ಸ್ವರ್ಗಾಭಿಮಾನಿಯಿಂದ ನಂದಿಃ=ನಂದಿಯು ಅಭವತ್=ಮಗನಾದನು. || ೬ ||

ವಿಶ್ವೇದೇವಾಸ್ತು ವಿಶ್ವಾಯಾಮಪ್ರಜಾಂಸ್ತಾನ್ ಪ್ರಚಕ್ಷತೇ ।
ಸಾಧ್ಯಗಣಸ್ತು ಸಾಧ್ಯಾಯಾಮರ್ಥಸಿದ್ಧಿಸ್ತು ತತ್ಸುತಃ ॥ ೭ ॥

ವಿಶ್ವಾಯಾಂ = ವಿಶ್ವಾ ಎಂಬುವಳಲ್ಲಿ ವಿಶ್ವೇದೇವತೆಗಳು (ಆಸನ್) = ಮಕ್ಕಳಾದರು. ತಾನ್ = ಅವರನ್ನು ಅಪ್ರಜಾನ್ = ಮಕ್ಕಳಿಲ್ಲದವರೆಂದು ಪ್ರಚಕ್ಷತೇ = ಬಲ್ಲವರು ಹೇಳುತ್ತಾರೆ. ಸಾಧ್ಯಾಯಾಂ= ಸಾಧ್ಯಾ ಎಂಬುವಳಲ್ಲಿ ಸಾಧ್ಯಗಣನೆಂಬುವನು ಮಗನಾದನು. ಅರ್ಥಸಿದ್ಧಿಯಾದರೋ ತತ್ಸುತಃ=ಆ ಸಾಧ್ಯಗಣನ ಮಗನು. || ೭ ||

ಮರುತ್ವಾಂಶ್ಚ ಜಯಂತಶ್ಚ ಮರುತ್ವತ್ಯಾಂ ಬಭೂವತುಃ ।
ಜಯಂತೋ ವಾಸುದೇವಾಂಶ ಉಪೇಂದ್ರ ಇತಿ ಯಂ ವಿದುಃ ॥೮॥

ಮರುತ್ವತ್ಯಾಂ = ಮರುತ್ವತೀ ಎಂಬುವಳಲ್ಲಿ ಮರುತ್ವಾನ್, ಜಯಂತ ಎಂಬ ಇಬ್ಬರು ಮಕ್ಕಳು ಬಭೂವತುಃ = ಆದರು. ಯಂ = ಯಾವ ಜಯಂತನನ್ನು ಉಪೇಂದ್ರ ಇತಿ ಉಪೇಂದ್ರ ಎಂದು ವಿದುಃ=ತಿಳಿಯುವರೋ (ಸಃ) ಜಯಂತಃ= ಆ ಜಯಂತನು ವಾಸುದೇವಾಂಶಃ=ಶ್ರೀಹರಿಯ ಅಂಶನು (ಅವತಾರವು.) || ೮ ||

ವಿದ್ಯೋತನೆಂಬ ಮಗ. ಅವನಿಗೆ ಸ್ತನಯಿತ್ನುಗಳು ಮಕ್ಕಳು. ಕಕುಪ್ಪಿಗೆ ಸಂಕಟನು ಪುತ್ರ. ಅವನಿಗೆ ಕೀಕಟನೆಂಬ ಮಗ. ಜಾಮಿಯ ಮಕ್ಕಳೇ ಭೂಮಿಯ ಮೇಲಿನ ದುರ್ಗಸ್ಥಳಗಳ ಅಭಿಮಾನಿಗಳು. ಸ್ವರ್ಗಾಭಿಮಾನಿಯೂ ಈಕೆಯ ಮಗನೇ. ಆ ಸ್ವರ್ಗನಿಗೆ ನಂದಿ ಎಂಬುವನು ಮಗ. ವಿಶ್ವೆಯ ಮಕ್ಕಳೇ ವಿಶ್ವೇದೇವತೆಗಳು. ಅವರಿಗೆ ಮಕ್ಕಳಿಲ್ಲವೆಂದು ಹೇಳುವರು. ಸಾಧ್ಯೆಯ ಮಗನೇ ಸಾಧ್ಯಗಣ. ಅವನ ಮಗ ಅರ್ಥಸಿದ್ಧಿ. ಮರುತ್ವಾನ್, ಜಯಂತ ಇಬ್ಬರೂ ಮರುತ್ವತಿಯ ಮಕ್ಕಳು. ಇವರಲ್ಲಿ ಜಯಂತನು ಶ್ರೀಹರಿಯ ಅಂಶ. ಅವನನ್ನು ಉಪೇಂದ್ರನೆಂದೂ ತಿಳಿಯು

ಮೌಹೂರ್ತಿಕಾ ದೇವಗಣಾ ಮುಹೂರ್ತಾಯಾಶ್ಚ ಜಜ್ಞಿರೇ ।
ಯಥಾಫಲಂ ಪ್ರಯಚ್ಛಂತಿ ಭೂತಾನಾಂ ಸ್ವಸ್ವಕಾಲಜಮ್ ॥ ೯ ॥

ಮುಹೂರ್ತಾ ಎಂಬುವಳಲ್ಲಿಯಾದರೋ ಮೌಹೂರ್ತಿಕಾಃ=ದಿನದ ಅವಯವಗಳಾದ ಮೂವತ್ತು ಮುಹೂರ್ತಗಳ ಅಭಿಮಾನಿಗಳಾದ ದೇವಗಣಾಃ=ದೇವತಾ ಸಮೂಹಗಳು ಜಜ್ಞಿರೇ = ಹುಟ್ಟಿದವು. (ಏತೇ) = ಇವರು ಸ್ವಸ್ವಕಾಲಜಂ – ತಮ್ಮ ತಮ್ಮ ಮುಹೂರ್ತಗಳಲ್ಲಿ ಉಂಟಾಗುವ ಯಥಾಫಲಂ=ಯಥೋಚಿತ ಫಲವನ್ನು ಭೂತಾನಾಂ– ಪ್ರಾಣಿಗಳಿಗೆ ಪ್ರಯಚ್ಛಂತಿ=ಕೊಡುವುವು. ॥ ೯ ॥

ಸಂಕಲ್ಪಾಯಾಶ್ಚ ಸಂಕಲ್ಪಃ ಕಾಮಃ ಸಂಕಲ್ಪಜಃ ಸ್ಮೃತಃ ।
ವಸವೋಽಷ್ಟೌ ವಸೋಃ ಪುತ್ರಾಸ್ತೇಷಾಂ ನಾಮಾನಿ ಮೇ ಶೃಣು ॥ ೧೦ ॥

ಸಂಕಲ್ಪಾ ಎಂಬುವಳಿಗೆ ಸಂಕಲ್ಪಃ=ಸಂಕಲ್ಪಾಭಿಮಾನಿಯು ಮಗನಾದನು. ಕಾಮಃ=ಕಾಮಾಭಿಮಾನಿಯು ಸಂಕಲ್ಪಜಃ = ಸಂಕಲ್ಪನ ಮಗನೆಂದು ಸ್ಮೃತಃ= ಸ್ಮರಿಸಲ್ಪಟ್ಟಿರುವನು. ವಸೋಃ = ವಸು ಎಂಬುವಳಿಗೆ ಅಷ್ಟೌ ವಸವಃ=ಎಂಟು ವಸುಗಳು ಮಕ್ಕಳು. ಅವರ ಹೆಸರುಗಳನ್ನು ನನ್ನ ಕಡೆಯಿಂದ ಕೇಳು. ॥ ೧೦ ॥

ದ್ರೋಣಃ ಪ್ರಾಣೋ ಧ್ರುವೋಽರ್ಕೋಽಗ್ನಿರ್ದೋಷೋ ವಸ್ತು-ರ್ವಿಭಾವಸುಃ ।
ದ್ರೋಣಸ್ಯಾಭಿಮತೇಃ ಪತ್ನ್ಯಾಃ ಹರ್ಷಶೋಕಭಯಾದಯಃ ॥ ೧೧ ॥

ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸ್ತು ಮತ್ತು ವಿಭಾವಸು ಎಂದು ಅವರ ಹೆಸರುಗಳು. ದ್ರೋಣನ ಅಭಿಮತಿ ಎಂಬ ಹೆಂಡತಿಗೆ (ಅಭಿಮಾನದೇವತೆ) ಹರ್ಷ, ಶೋಕ, ಭಯ ಮೊದಲಾದ ಅಂತಃಕರಣ (ಭಾವಗಳ) ದೇವತೆಗಳು ಮಕ್ಕಳಾದರು. ॥ ೧೧ ॥

ವರು. ಮುಹೂರ್ತಾಭಿಮಾನಿ ದೇವಗಣಗಳು ಮುಹೂರ್ತೆಯ ಮಕ್ಕಳು. ತಮ್ಮ ತಮ್ಮ ಕಾಲಗಳಲ್ಲಿ ಉಂಟಾಗುವ ಫಲಗಳನ್ನು ಯಥೋಚಿತವಾಗಿ ಪ್ರಾಣಿಗಳಿಗೆ ಇವರು ಕೊಡುವರು. ಸಂಕಲ್ಪೆಯ ಮಗ ಸಂಕಲ್ಪ. ಇವನ ಮಗನೇ ಕಾಮ. ವಸುವಿನ ಮಕ್ಕಳೇ ಅಷ್ಟವಸುಗಳು. ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸ್ತು ಮತ್ತು ವಿಭಾವಸು ಎಂದು ಇವರ ಹೆಸರು. ದ್ರೋಣನಿಗೆ ಅಭಿಮತಿ ಎಂಬ ಹೆಂಡತಿ. ಇವಳಿಗೆ ಹರ್ಷ, ಶೋಕ, ಭಯ ಮೊದಲಾದವರು ಮಕ್ಕಳು.

ಪ್ರಾಣಸ್ಯೋರ್ಜಸ್ವತೀ ಭಾರ್ಯಾ ಸಹ ಆಯುಃ ಪರೋಜವಃ ।
ಧ್ರುವಸ್ಯ ಭಾರ್ಯಾ ಧರಣೀ ತ್ವಸೂತ ವಿವಿಧಾಃ ಪುರಃ ॥ ೧೨ ॥

ಪ್ರಾಣನಿಗೆ ಊರ್ಜಸ್ವತೀ ಎಂಬ ಹೆಂಡತಿ. ಅವಳಿಗೆ ಸಹ(ಸ್ಸ), ಆಯುಸ್ಸ ಮತ್ತು ಪರೋಜವ ಎಂಬ ಮೂವರು ಮಕ್ಕಳಾದರು. ಧ್ರುವನ ಹೆಂಡತಿ ಧರಣಿಯು ವಿವಿಧಾಃ ಪುರಃ = ಅನೇಕ ಬಗೆಯ ಪಟ್ಟಣಗಳ ಅಭಿಮಾನಿಗಳನ್ನು ಅಸೂತ = ಹಡೆದಳು. ॥ ೧೨ ॥

ಅರ್ಕಸ್ಯ ವಾಸನಾ ಭಾರ್ಯಾ ಪುತ್ರಾಸ್ತರ್ಷಾದಯಃ ಸ್ಮೃತಾಃ ।
ಅಗ್ನೇರ್ಭಾರ್ಯಾ ವಸೋರ್ಧಾರಾ ಪುತ್ರಾ ದ್ರವಿಣಕಾದಯಃ ॥ ೧೩ ॥

ಅರ್ಕನಿಗೆ ವಾಸನಾ ಎಂಬ ಹೆಂಡತಿ, ತರ್ಷ ಮೊದಲಾದವರು ಮಕ್ಕಳೆಂದು ಸ್ಮೃತಿಗಳಲ್ಲಿ ಉಕ್ತರಾಗಿರುವರು. ವಸುವಿನ ಮಗನಾದ ಅಗ್ನಿಯೆಂಬ ವಸುವಿಗೆ ಧಾರಾ (ಸ್ವಾಹಾ) ಎಂಬ ಹೆಂಡತಿ. (ವಸೋರ್ಧಾರಾ ಎಂಬ ಹೆಂಡತಿ ಎಂದಾದರೂ ಅರ್ಥ.) ದ್ರವಿಣಕ ಮೊದಲಾದವರು ಮಕ್ಕಳು. ॥ ೧೩ ॥

ಸ್ಕಂದಶ್ಚ ಕೃತ್ತಿಕಾ ಪುತ್ರೋ ಯೇ ವಿಶಾಖಾದಯಸ್ತತಃ ।
ದೋಷಸ್ಯ ಶರ್ವರೀ ಪುತ್ರಃ ಶಿಂಶುಮಾರೋ ಹರೇಃ ಕಲಾ ॥ ೧೪ ॥

ಸ್ಕಂದನೂ ಅಗ್ನಿಯ ಮಗನು. ಇವನು ಕೃತ್ತಿಕೆಯು ಸಾಕಿದ್ದರಿಂದ ಕೃತ್ತಿಕಾ ಮಗನೆಂದೂ ಕರೆಸಿಕೊಳ್ಳುವನು. ಇದು ಔಪಚಾರಿಕ. ಮುಖ್ಯವಾಗಿಯಾದರೆ ಈಶ್ವರನ ಮಗನು. ಯೇ=ಯಾವ ವಿಶಾಖ ಮೊದಲಾದವರೋ (ತೇ)=ಅವರು ತತಃ=ಆ ಸ್ಕಂದನಿಂದ (ಜಾತಾಃ)=ಹುಟ್ಟಿದವರು. ದೋಷನಿಗೆ ಶರ್ವರೀ ಎಂಬ ಹೆಂಡತಿ. ಅವಳ ಮಗನು ಶಿಂಶುಮಾರನು. ಈ ಶಿಂಶುಮಾರನು ಹರೇಃ = ಶ್ರೀಹರಿಯ ಕಲಾ-ಅಂಶನು. ॥ ೧೪ ॥

ಪ್ರಾಣನಿಗೆ ಊರ್ಜಸ್ವತಿಯೆಂಬ ಹೆಂಡತಿ. ಆಕೆಗೆ ಸಹ, ಆಯು ಮತ್ತು ಪರೋಜವರೆಂಬ ಮೂವರು ಮಕ್ಕಳು. ಧ್ರುವನ ಹೆಂಡತಿ ಧರಣಿ ಎಂಬಾಕೆಯು ಅನೇಕ ಬಗೆಯ ಪಟ್ಟಣಾಭಿಮಾನಿಗಳನ್ನು ಹಡೆದಳು. ಅರ್ಕನಿಗೆ ವಾಸನಾ ಎಂಬ ಹೆಂಡತಿ. ಆಕೆಗೆ ತರ್ಷ ಮೊದಲಾದವರು ಮಕ್ಕಳು. ಅಗ್ನಿಗೆ ವಸೋರ್ಧಾರಾ ಎಂಬ ಭಾರ್ಯೆ. ಆಕೆಗೆ ದ್ರವಿಣಕ ಮೊದಲಾದವರು ಮಕ್ಕಳು. ಸ್ಕಂದನೂ ಔಪಚಾರಿಕವಾಗಿ ಅಗ್ನಿ ಪುತ್ರನು. ಕೃತ್ತಿಕೆಯ ಸಾಕುಮಗನು. ವಿಶಾಖ ಮೊದಲಾದವರು ಆ ಸ್ಕಂದನ ಮಕ್ಕಳು. ದೋಷನಿಗೆ ಶರ್ವರೀ ಎಂಬ ಹೆಂಡತಿ. ಶ್ರೀ ಹರಿಯ ಅವತಾರನಾದ

ವಸ್ತೋರಾಂಗಿರಸೀ ಪುತ್ರೋ ವಿಶ್ವಕರ್ಮಾ ಕೃತೀಪತಿಃ ।
ತತೋ ಮನುಶ್ಚಾಕ್ಷುಷೋಽಭೂದ್ವಿಶ್ವೇಶಾದ್ಯಾ ಮನೋಃ ಸುತಾಃ ॥

ವಸ್ತು ಎಂಬುವನಿಗೆ ಆಂಗೀರಸೀ ಎಂಬುವಳು ಹೆಂಡತಿ. ಕೃತೀಪತಿಃ = (೧) ಶಿಲ್ಪಿಗಳ ಕುಲಾಚಾರ್ಯನಾದ (೨) ಕೃತೀ ಎಂಬುವಳ ಗಂಡನಾದ ವಿಶ್ವಕರ್ಮನು ಪುತ್ರಃ = ಆ ಆಂಗೀರಸಿಯ ಮಗನು. ತತಃ= ಆ ವಿಶ್ವಕರ್ಮನಿಂದ ಚಾಕ್ಷುಷಃ ಮನುಃ = ಚಾಕ್ಷುಷ ಮನ್ವಂತರಾಭಿಮಾನಿಗಳು ಅಭೂತ್= ಹುಟ್ಟಿದರು. ವಿಶ್ವೇಶ ಮೊದಲಾದವರು ಆ ಮನುರಾಜರ ಮಕ್ಕಳು. ॥ ೧೫ ॥

ವಿಭಾವಸೋರಸೂತೋಷಾ ವ್ಯುಷ್ಟಂ ರೋಚಿಷಮಾತಪಂ ।
ಪಂಚಯಾಮೋಽಥ ಭೂತಾನಿ ಯೇನ ಜಾಗ್ರತಿ ಕರ್ಮಸು ॥ ೧೬ ॥

ವಿಭಾವಸುವಿನ ಹೆಂಡತಿ ಉಷಾ ಎಂಬುವಳು ವ್ಯುಷ್ಟ, ರೋಚಿಷ ಮತ್ತು ಆತಪ ಎಂಬುವರನ್ನು ಅಸೂತ= ಹಡೆದಳು. ಅಥ- ಆತಪನಿಂದ ಪಂಚಯಾಮಃ= ದಿವಸಾಭಿಮಾನಿಯು ಹುಟ್ಟಿದನು. ಯೇನ= ಆ ಪಂಚಯಾಮನಿಂದ ಭೂತಾನಿ= ಪ್ರಾಣಿಗಳು ಕರ್ಮಸು = ತಮ್ಮ ಕೆಲಸಗಳಲ್ಲಿ ಜಾಗ್ರತಿ = ಎಚ್ಚರಗೊಳ್ಳುವುವು. ರಾತ್ರಿಗೆ ತ್ರಿಯಾಮಾ ಎಂದು ಹೆಸರು. ಪ್ರದೋಷ ಮತ್ತು ಪ್ರತ್ಯೂಷಗಳು ಹಗಲಿಗೇ ಸೇರಿದ್ದರಿಂದ ಹಗಲನ್ನು ಐದು ಯಾಮವೆಂದು ಕರೆದಿರುವರು. ಇಲ್ಲಿ ಎಲ್ಲ ಕಡೆ ಯಲ್ಲಿಯೂ ಅಭಿಮಾನಿಗಳನ್ನೇ ಇಟ್ಟುಕೊಳ್ಳಬೇಕು. ॥ ೧೬ ॥

ಭೂತಸ್ಯ ಭಾರ್ಯಾ ಭೂತಾಯಾ ರುದ್ರಾ ಏಕಾದಶ ಸ್ಮೃತಾಃ ।
ಸುರೂಪಾಽಸೂತ ಭೂತಸ್ಯ ಭಾರ್ಯಾ ರುದ್ರಾಂಶ್ಚ ಕೋಟಿಶಃ ॥ ೧೭ ॥

ರೈವತೋಽಜೋ ಭವೋ ಭೀಮೋ ವಾಮ ಉಗ್ರೋ ವೃಷಾಕಪಿಃ ।
ಅಜೈಕಪಾದಹಿರ್ಬುಧ್ನ್ಯೋ ಬಹುರೂಪೋ ಮಹಾನಿತಿ ।
ರುದ್ರಾಂಶ್ಚ ಪಾರ್ಷದಾಂಶ್ಚಾನ್ಯಾನ್ ಘೋರಾ ಪ್ರೇತ-
ವಿನಾಯಕಾನ್ ॥ ೧೮ ॥

ಶಿಂಶುಮಾರನು ಆಕೆಯ ಮಗನು. ವಸ್ತುವಿಗೆ ಆಂಗೀರಸೀ ಹೆಂಡತಿ. ಆಕೆಗೆ ಕೃತೀ ಪತಿಯಾದ ಶಿಲ್ಪಿಕುಲಾಚಾರ್ಯ ವಿಶ್ವಕರ್ಮನು ಮಗನು. ಅವನಿಗೆ ಚಾಕ್ಷುಷ (ಮನ್ವಂತರರಾಭಿಮಾನಿ) ಮಗ. ಆತನಿಗೆ ವಿಶ್ವೇಶ ಮೊದಲಾದವರು ಮಕ್ಕಳು. ವಿಭಾವಸುವಿನ ಹೆಂಡತಿ ಉಷಾ. ಆಕೆ ವ್ಯುಷ್ಟ, ರೋಚಿಷ ಮತ್ತು ಆತಪ ಎಂಬುವ ರನ್ನು ಹಡೆದಳು. ಆ ಆತಪನಿಗೆ ದಿವಸಾಭಿಮಾನಿಯು ಮಗನಾದನು. ಇವನಿಂದ ಪ್ರಾಣಿಗಳು ತಮ್ಮ ತಮ್ಮ ಕೆಲಸದಲ್ಲಿ ಎಚ್ಚರಗೊಳ್ಳುವರು.

ಭೂತಪ್ರಜೇಶ್ವರರಿಗೆ ಭೂತಾ ಎಂಬ ಹೆಂಡತಿ. ಆಕೆಗೆ ಹನ್ನೊಂದು ರುದ್ರರು ಮಕ್ಕಳು. ಸುರೂಪಾ ಎಂಬ ಮತ್ತೊಬ್ಬ ಹೆಂಡತಿಯಲ್ಲಿ ಕೋಟಿಗಟ್ಟಲೆ ರುದ್ರ

ಭೂತಪ್ರಜೇಶ್ವರರ ಸಂತತಿಯನ್ನು ಹೇಳುತ್ತಾರೆ. ಭೂತಪ್ರಜೇಶ್ವರರಿಗೆ ಭೂತಾ ಎಂಬ ಹೆಸರಿನ ಹೆಂಡತಿ. ಭೂತಳಿಗೆ ಹನ್ನೊಂದು ರುದ್ರರು (ಮಕ್ಕಳೆಂದು) ಸ್ಮೃತಿಗಳಲ್ಲಿ ಉಕ್ತರಾಗಿರುವರು. ಭೂತನ ಸುರೂಪಳೆಂಬ ಹೆಂಡತಿಯು ಕೋಟಿಗಟ್ಟಲೆ ರುದ್ರಾನ್ ಚ=ರುದ್ರರನ್ನೂ (ರುದ್ರಗಣಗಳನ್ನೂ) ರುದ್ರಪಾರ್ಷದರನ್ನೂ ಅನ್ಯಾ=ಇನ್ನೂ ಬೇರೆ ಘೋರಾ=ಭಯಂಕರ ರೂಪರಾದ ಪ್ರೇತರನ್ನೂ ವಿನಾಯಕರನ್ನೂ (ಆ ಹೆಸರಿನ ಗಣಗಳನ್ನೂ) ಹಡೆದಳು. ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾತ್, ಅಹಿರ್ಬುಧ್ನ್ಯ, ಬಹುರೂಪ ಮತ್ತು ಮಹಾ ಎಂದು ಹನ್ನೊಂದು ರುದ್ರರು ಪ್ರಧಾನರು. ಅಥವಾ ಕೋಟಿಗಟ್ಟಲೆ ರುದ್ರರನ್ನು ಹಡೆದಳು. ರುದ್ರಪಾರ್ಷದರನ್ನೂ ಘೋರರಾದ ಪ್ರೇತವಿನಾಯಕರನ್ನೂ ಅನ್ಯಾ = ಸುರೂಪಳ ಮಕ್ಕಳೆಂದು (ವಿದ್ಧಿ) = ತಿಳಿ ಎಂದಾದರೂ ಅನ್ವಯ. || ೧೭-೧೮ ||

ಪ್ರಜಾಪತೇರಾಂಗಿರಸಃ ಸ್ವಧಾ ಪತ್ನೀ ಪಿತೄನಥ ।
ಅಥರ್ವಾಂಗಿರಸಂ ವೇದಂ ಪುತ್ರತ್ವೇ ಚಾಕರೋತ್ ಸತೀ || ೧೯ ||

ಆಂಗೀರಸರ ವಂಶವನ್ನು ಹೇಳುತ್ತಾರೆ. ಆಂಗೀರಸ ಪ್ರಜಾಪತಿಯ ಸ್ವಧಾ ಎಂಬ ಪತ್ನಿಯು ಪಿತೃಗಳನ್ನು (ಹಡೆದಳು) ಅಥವಾ ಪುತ್ರರನ್ನಾಗಿ ಮಾಡಿಕೊಂಡಳು. ಸತೀ ಚ=ಸತಿ ಎಂಬ ಹೆಂಡತಿಯಾದರೋ ಅಥ=ಮೊದಲನೆಯ ಹೆಂಡತಿಯು ಪಿತೃಗಳನ್ನು ಹಡೆದನಂತರ ಅಥರ್ವಾಂಗಿರಸಂ ವೇದಂ = ಅಥರ್ವವೇದಾಭಿಮಾನಿಯನ್ನು ಅಥವಾ ಅಥರ್ವವೇದ ದ್ರಷ್ಟಾರನಾದ ಋಷಿಯನ್ನು ಪುತ್ರನನ್ನಾಗಿ ಮಾಡಿಕೊಂಡಳು. || ೧೯ ||

ಕೃಶಾಶ್ವೋಽರ್ಚಿಷಿ ಭಾರ್ಯಾಯಾಂ ಧೂಮಕೇತುಮಜೀಜನತ್ ।
ಧಿಷಣಾಯಾಂ ವೇದಶಿರಾ ದೇವಲಂ ಚ ಸುತಂ ಮನುಮ್ ||೨೦||

ಗಣಗಳು ಹುಟ್ಟಿದರು. ರುದ್ರ ದ್ವಾರಪಾಲಕರನ್ನೂ ಭಯಂಕರ ಸ್ವರೂಪರಾದ ಪ್ರೇತರನ್ನೂ ವಿನಾಯಕರನ್ನೂ ಈಕೆ ಪಡೆದಳು. ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾತ್, ಅಹಿರ್ಬುಧ್ನ್ಯ, ಬಹುರೂಪ ಮತ್ತು ಮಹಾ ಎಂಬ ಹನ್ನೊಂದು ಪ್ರಧಾನ ರುದ್ರರು.

ಆಂಗೀರಸಪ್ರಜೇಶ್ವರನ ಹೆಂಡತಿ ಸ್ವಧಾ ಪಿತೃಗಳನ್ನು ಹಡೆದಳು. ಸತೀ ಎಂಬ ಮತ್ತೊಬ್ಬ ಹೆಂಡತಿಯು ಅಥರ್ವವೇದಾಭಿಮಾನಿಯನ್ನು ಮಗನನ್ನಾಗಿ ಮಾಡಿಕೊಂಡಳು.

ಕೃಶಾಶ್ವಪ್ರಜೇಶ್ವರರು ಅರ್ಚಿ ಎಂಬ ಹೆಂಡತಿಯಲ್ಲಿ ಧೂಮಕೇತುವನ್ನೂ ಧಿಷಣಾ ಎಂಬಾಕೆಯಲ್ಲಿ ದೇವಲಮನುವನ್ನೂ ಪಡೆದರು.

ಕೃಶಾಶ್ವರೆಂಬ ಪ್ರಜೇಶ್ವರರು ಅರ್ಚಿ ಎಂಬ ಹೆಂಡತಿಯಲ್ಲಿ ಧೂಮಕೇತುವನ್ನು ಪಡೆದರು. ವೇದಶಿರಾಃ=ಕೃಶಾಶ್ವರು ಧಿಷಣಾಯಾಂ=ಧಿಷಣಾ ಎಂಬ ಮತ್ತೊಬ್ಬ ಹೆಂಡತಿಯಲ್ಲಿ ಮನುವಾದ ದೇವಲನನ್ನು ಮಗನನ್ನಾಗಿ ಪಡೆದರು. || ೨೦ ||

ತಾರ್ಕ್ಷ್ಯಸ್ಯ ವಿನತಾ ಕದ್ರೂಃ ಪತಂಗೀ ಯಾಮಿನೀ ಇತಿ ।
ಪತಂಗ್ಯಸೂತ ಪತಗಾನ್ ಯಾಮಿನೀ ಶಲಭಾನಥ || ೨೧ ||
ವಿನತಾಽಸೂತ ಗರುಡಂ ಸಾಕ್ಷಾದ್ಯಜ್ಞೇಶವಾಹನಮ್ ।
ಸೂರ್ಯಸೂತಮನೂರುಂ ಚ ಕದ್ರೂರ್ನಾಗಾನನೇಕಶಃ || ೨೨ ||

ತಾರ್ಕ್ಷ್ಯಸ್ಯ=ಅರಿಷ್ಟನೇಮಿಯೆಂಬ ತಾರ್ಕ್ಷ್ಯನಿಗೆ ವಿನತಾ, ಕದ್ರೂ, ಪತಂಗೀ ಮತ್ತು ಯಾಮಿನೀ ಎಂದು ನಾಲ್ವರು ಹೆಂಡತಿಯರು. 'ಯಾಮಿನೀ ಇತಿ' ಎಂದು ಸವರ್ಣದೀರ್ಘಸಂಧಿ ಇಲ್ಲದ ಪ್ರಯೋಗದಿಂದ ಮಕ್ಕಳ ಜಾತಿಭೇದವನ್ನು ಸೂಚಿಸಿರುವರು. ಆ ನಾಲ್ವರಲ್ಲಿ ಪತಂಗಿಯು ಪತಗ (ಹಕ್ಕಿ)ಗಳನ್ನೂ ಯಾಮಿನಿಯು ಶಲಭ (ರೆಕ್ಕೆ ಹುಳುಗಳು) ಗಳನ್ನು ಹಡೆದರು. ವಿನತೆಯು ಸಾಕ್ಷಾತ್ ಯಜ್ಞೇಶ-ವಾಹನಂ=ಶ್ರೀಹರಿಯ ವಾಹನವಾದ ಗರುಡದೇವರನ್ನೂ ಚ=ಮತ್ತು ಸೂರ್ಯ-ಸೂತಂ=ಸೂರ್ಯದೇವರ ಸಾರಥಿಯಾದ ಅನೂರುಂ=ತೊಡೆಗಳಿಲ್ಲದ ಅರುಣನನ್ನೂ ಹಡೆದಳು. ಕದ್ರೂದೇವಿಯು ಅನೇಕಶಃ=ಬಗೆಬಗೆಯ ನಾಗಾನ್=ಹಾವುಗಳನ್ನು (ನಾಗರನ್ನು) ಅಸೂತ=ಹಡೆದಳು. || ೨೧-೨೨ ||

ಕೃತ್ತಿಕಾದೀನಿ ನಕ್ಷತ್ರಾಣೀಂದೋಃ ಪತ್ನ್ಯಸ್ತು ಭಾರತ
ದಕ್ಷಶಾಪಾತ್ಸೋಽನಪತ್ಯಸ್ತಾಸು ಯಕ್ಷ್ಮಗ್ರಹಾರ್ದಿತಃ ।
ಪುನಃ ಪ್ರಸಾದ್ಯ ತಂ ಸೋಮಃ ಕಲಾ ಲೇಭೇ ಕ್ಷಯೇಧಿತಾಃ ||೨೩||

ಭಾರತ = ಪರೀಕ್ಷಿದ್ರಾಜನೇ, ಕೃತ್ತಿಕಾ ಮೊದಲಾದ ನಕ್ಷತ್ರಾಣಿ ತು = ನಕ್ಷತ್ರಾಭಿಮಾನಿಗಳು ಇಪ್ಪತ್ತೇಳು ಜನವಾದರೋ ಇಂದೋಃ=ಚಂದ್ರನ ಪತ್ನ್ಯಃ= ಹೆಂಡತಿಯರು. ದಕ್ಷಶಾಪಾತ್ = ರೋಹಿಣಿಯಲ್ಲಿಯೇ ಅತಿಶಯ ಪ್ರೇಮ ಮಾಡಿ

ಅರಿಷ್ಟನೇಮಿಯೆಂಬ ತಾರ್ಕ್ಷ್ಯನಿಗೆ ವಿನತೆ, ಕದ್ರೂ, ಪತಂಗೀ ಮತ್ತು ಯಾಮಿನೀ ಎಂಬ ನಾಲ್ವರು ಪತ್ನಿಯರು. ಅವರಲ್ಲಿ ಪತಂಗಿಯು ಹಕ್ಕಿಗಳನ್ನೂ, ಯಾಮಿನಿಯು ಶಲಭಗಳನ್ನೂ (ದೀಪದ ಹುಳು), ವಿನತೆ ವಿಷ್ಣುವಾಹನವಾದ ಗರುಡ ಮತ್ತು ಸೂರ್ಯಸಾರಥಿ ಅರುಣ (ತೊಡೆಯಿಲ್ಲದವನು) ಇವರಿಬ್ಬರನ್ನೂ, ಕದ್ರುವು ಅನೇಕ ನಾಗರನ್ನೂ ಹಡೆದರು.

ಕೃತ್ತಿಕಾ ಮೊದಲಾದ ನಕ್ಷತ್ರಾಭಿಮಾನಿಗಳು ಚಂದ್ರನ ಹೆಂಡತಿಯರು. ದಕ್ಷರ ಶಾಪದಿಂದ ಕ್ಷಯರೋಗ ಪೀಡಿತರಾದ ಚಂದ್ರದೇವರು ಅವರಲ್ಲಿ ಯಾರಲ್ಲಿಯೂ

ಮಿಕ್ಕವರನ್ನು ಉಪೇಕ್ಷಿಸಿದ್ದರಿಂದ ಸಿಟ್ಟುಗೊಂಡ ದಕ್ಷರ ಶಾಪದಿಂದ ಯಕ್ಷ್ಮಗ್ರಹಾರ್ದಿತಃ= ಕ್ಷಯರೋಗದಿಂದ ಪೀಡಿತರಾದ ಸಃ=ಆ ಚಂದ್ರದೇವರು ತಾಸು= ಆ ಹೆಂಡತಿಯರಲ್ಲಿ ಅನಪತ್ಯಃ- ಯಾವ ಮಕ್ಕಳನ್ನೂ ಪಡೆಯದಾದರು. ಪುನಃ= ಮತ್ತೆ ಸೋಮಃ = ಚಂದ್ರದೇವರು ತಂ=ದಕ್ಷರನ್ನು ಪ್ರಸಾದ್ಯ= ಪ್ರಸನ್ನರನ್ನಾಗಿ ಮಾಡಿಕೊಂಡು ಕ್ಷಯೇಧಿತಾಃ = ಕೃಷ್ಣಪಕ್ಷದಲ್ಲಿ ಕಡಿಮೆಯಾಗುವ, ಶುಕ್ಲಪಕ್ಷದಲ್ಲಿ ಅಭಿವೃದ್ಧಿಯಾಗುವ ಕಲಾಃ (ಏವ) = ಕಲೆಗಳನ್ನೇ (ಮಕ್ಕಳನ್ನು ಅಲ್ಲ) ಲೇಭೇ= ಹೊಂದಿದರು. ಕ್ಷಯೇಧಿತಾಃ ಎಂಬಲ್ಲಿ ಏಧ ಧಾತುವಿನ ರೂಪವೆಂದಿಟ್ಟುಕೊಂಡಾಗ ವೃದ್ಧಿಯಾಗದಿರುವುದಕ್ಕೆ ಛಾಂದಸ ಪ್ರಯೋಗವೇ ಕಾರಣವೆಂದು ತಿಳಿಯಬೇಕು. ಇಧಿ-ದೀಪ್ತೌ ಎಂಬ ಧಾತುವಿನ ಕ್ತಪ್ರತ್ಯಯಾಂತ ರೂಪವೆಂದು ಇಟ್ಟುಕೊಂಡಾಗ ಮಧ್ಯೆ ನೊನ್ನೆ ಲೋಪವಾಗಿ ಇಧಿತ ಎಂದಾಗುವುದು. ಆಗ ಗುಣಸಂಧಿಯಾಗಿದೆ ಯೆಂದು ತಿಳಿಯಬೇಕು. || ೨೩ ||

ಶೃಣು ನಾಮಾನಿ ಲೋಕಾನಾಂ ಮಾತೄಣಾಂ ಶಂಕರಾಣಿ ಚ ।
ಅಥ ಕಶ್ಯಪಪತ್ನೀನಾಂ ಯತ್ಪ್ರಸೂತಮಿದಂ ಜಗತ್ ॥ ೨೪ ॥

ಅಥ- ಇನ್ನುಮುಂದೆ ಇದಂ = ಈ ಪ್ರತ್ಯಕ್ಷಗೋಚರವಾದ ಜಗತ್=ಪ್ರಾಣಿ ಸಮೂಹಾತ್ಮಕ ಪ್ರಪಂಚವು ಯತ್ಪ್ರಸೂತಂ - ಯಾವ ಕಶ್ಯಪರ ಹೆಂಡತಿಯರಿಂದ ಪ್ರಸವಿಸಲ್ಪಟ್ಟಿತೋ (ತಾಸಾಂ)=ಅಂತಹ ಲೋಕಾನಾಂ- ಜನರ ಮಾತೄಣಾಂ= ತಾಯಿಯರಾದ ಕಶ್ಯಪ ಪತ್ನೀನಾಂ ಕಶ್ಯಪ ಪ್ರಜೇಶ್ವರರ ಹೆಂಡತಿಯರ ಶಂಕರಾಣಿ= ಸುಖಕರಗಳಾದ ನಾಮಾನಿ ಚ- ಹೆಸರುಗಳನ್ನೂ ಶೃಣು- ಕೇಳು. || ೨೪ ||

ಅದಿತಿರ್ದಿತಿರ್ದನುಃ ಕಾಷ್ಠಾ ಅರಿಷ್ಟಾ ಸುರಸಾ ಇಲಾ ।
ಮುನಿಃ ಕ್ರೋಧವಶಾ ತಾಮ್ರಾ ಸುರಭಿಃ ಸರಮಾ ತಿಮಿಃ ॥ ೨೫ ॥

ಅದಿತಿ, ದಿತಿ, ದನು, ಕಾಷ್ಠಾ, ಅರಿಷ್ಟಾ, ಸುರಸಾ, ಇಲಾ, ಮುನಿ, ಕ್ರೋಧವಶಾ, ತಾಮ್ರಾ, ಸುರಭಿ, ಸರಮಾ ಮತ್ತು ತಿಮಿ (ಎಂದು ಕಶ್ಯಪರ ಹೆಂಡತಿಯರ ಹೆಸರುಗಳು). ಪರಸ್ಪರ ವಿಲಕ್ಷಣರೆಂದು ತಿಳಿಸುವುದಕ್ಕಾಗಿ ಇಲ್ಲಿಯೂ ಸಂಧಿಕಾರ್ಯವಿಲ್ಲವೆಂದು ತಿಳಿಯಬೇಕು. || ೨೫ ||

ಮಕ್ಕಳನ್ನು ಪಡೆಯಲಿಲ್ಲ. ದಕ್ಷರನ್ನು ಪ್ರಸನ್ನೀಕರಿಸಿಕೊಂಡು ಹ್ರಾಸಾಭಿವೃದ್ಧಿಗಳುಳ್ಳ ಕಲೆಗಳನ್ನು ಮಾತ್ರ ಮತ್ತೆ ಪಡೆದರು.

ಇನ್ನುಮುಂದೆ ಕಶ್ಯಪ ಪ್ರಜೇಶ್ವರರ ಹೆಂಡತಿಯರ ಹೆಸರುಗಳನ್ನು ಹೇಳುತ್ತೇನೆ ಕೇಳು. ಅವು ಸುಖಕಾರಕಗಳು. ಅವರು ಲೋಕಮಾತೆಯರು. ಈ ಕಾಣುವ ಜಗತ್ತೆಲ್ಲವೂ ಅವರ ಸಂತತಿಯೇ. ಅದಿತಿ, ದಿತಿ, ದನು, ಕಾಷ್ಠಾ, ಅರಿಷ್ಟಾ, ಸುರಸಾ, ಇಲಾ, ಮುನಿ, ಕ್ರೋಧವಶಾ, ತಾಮ್ರಾ, ಸುರಭಿ, ಸರಮಾ ಮತ್ತು

ತಿಮೇರ್ಯಾದೋಗಣಾ ಆಸನ್ ಶ್ವಾಪದಾಃ ಸರಮಾಸುತಾಃ ।
ಸುರಭೇರ್ಮಹಿಷಾ ಗಾವೋ ಯೇ ಚಾನ್ಯೇ ದ್ವಿಶಫಾ ನೃಪ ।
ತಾಮ್ರಾಯಾಃ ಶ್ಯೇನಗೃಧ್ರಾದ್ಯಾ ಮುನೇರಪ್ಸರಸಾಂ ಗಣಾಃ ॥೨೬॥

ದಂದಶೂಕಾದಯಃ ಸರ್ಪಾ ರಾಜನ್ ಕ್ರೋಧವಶಾತ್ಮಜಾಃ ।
ಇಲಾಯಾ ಭೂರುಹಾಃ ಸರ್ವೇ ಯಾತುಧಾನಾಶ್ಚ ಸೌರಸಾಃ ।
ಅರಿಷ್ಟಾಯಾಶ್ಚ ಗಂಧರ್ವಾಃ ಕಾಷ್ಠಾಯಾ ದ್ವಿಶಫೇತರಾಃ ॥ ೨೭ ॥

ಸೂಚೀಕಟಾಹ ನ್ಯಾಯವನ್ನು ಅನುಸರಿಸಿ ಸ್ವಲ್ಪವಾದ್ದರಿಂದ ಸುಖವಾಗಿ ತಿಳಿಯಲಾಗುತ್ತದೆಯಾಗಿ ಕೊನೆಯಲ್ಲಿ ಹೇಳಿದವರಿಂದ ಹಿಡಿದು ಹಿಂದೆ ಹಿಂದಿನವರ ಸಂತತಿಯನ್ನು ಹೇಳುತ್ತಾರೆ. ನೃಪ = ರಾಜನೇ ತಿಮೇಃ = ತಿಮಿಯೆಂಬ ಕಶ್ಯಪ ಪತ್ನಿಯಿಂದ ಯಾದೋಗಣಾಃ=ಎಲ್ಲ ಬಗೆಯ ಜಲಜಂತುಗಳು ಆಸನ್=ಹುಟ್ಟಿದವು. ಶ್ವಾಪದಾಃ=ಮಾಂಸಾಹಾರಿ ಕ್ರೂರಪ್ರಾಣಿಗಳು ಸರಮಾಸುತಾಃ - ಸರಮೆಯೆಂಬುವಳ ಮಕ್ಕಳು. ಮಹಿಷಾಃ=ಎಮ್ಮೆಗಳು ಗಾವಃ=ಹಸುಗಳು ಅನ್ಯೇ=ಉಳಿದ ಯೇ ಚ = ಯಾವ ಯಾವ ದ್ವಿಶಫಾಃ = ಸೀಳುಗೊರಸಿನ ಪ್ರಾಣಿಗಳಿವೆಯೋ (ತೇ ಸರ್ವೇ)=ಅವೆಲ್ಲವೂ ಸುರಭೇಃ - ಸುರಭಿಯೆಂಬ ಪತ್ನಿಯಿಂದ ಆಸನ್=ಹುಟ್ಟಿದವು. ರಾಜನೇ, ದಂದಶೂಕ ಮೊದಲಾದ ಸರ್ಪಗಳು ಕ್ರೋಧವಶಾ ಎಂಬುವಳ ಮಕ್ಕಳು. ಸರ್ವೇ=ಎಲ್ಲ ಬಗೆಯ ಭೂರುಹಾಃ = ಗಿಡಗಳು ಇಲಾಯಾಃ = ಇಲಾ ಎಂಬುವಳ (ಆತ್ಮಜಾಃ)=ಮಕ್ಕಳು. ಯಾತುಧಾನರಾದರೋ ಸೌರಸಾಃ=ಸುರಸೆಯ ಮಕ್ಕಳು. ಗಂಧರ್ವರು ಅರಿಷ್ಟಾ ಎಂಬುವಳ ಮಕ್ಕಳು. ದ್ವಿಶಫೇತರಾಃ = ಸೀಳುಗೊರಸಿಲ್ಲದ ಗುಂಡುಗೊರಸಿನ ಕುದುರೆ ಮೊದಲಾದ ಪ್ರಾಣಿಗಳು ಕಾಷ್ಠಾ ಎಂಬುವಳ ಮಕ್ಕಳು. ॥ ೨೬-೨೭ ॥

ಸುತಾ ದನೋರೇಕಷಷ್ಟಿಸ್ತೇಷಾಂ ಪ್ರಾಧಾನಿಕಾ (ಕಂ ಶೃ)
ಣ್ವಿಣು ॥ ೨೮ ॥

ತಿಮಿ ಎಂದು ಅವರ ಹೆಸರುಗಳು. ಸಮಸ್ತ ಜಲಜಂತುಗಳು ತಿಮಿಯಿಂದಲೂ ಮಾಂಸಾಹಾರಿ ಕ್ರೂರಪ್ರಾಣಿಗಳು ಸರಮೆಯಿಂದಲೂ ಎಮ್ಮೆ ಹಸು ಮೊದಲಾದ ಸೀಳುಗೊರಸಿನ ಪ್ರಾಣಿಗಳೆಲ್ಲವೂ ಸುರಭಿಯಿಂದಲೂ ಗಿಡಗ ಹದ್ದು ಮೊದಲಾದುವು ತಾಮ್ರಳಿಂದಲೂ ಅಪ್ಸರೆಯರ ಗಣಗಳು ಮುನಿಯಿಂದಲೂ ದಂದಶೂಕ ಮೊದಲಾದ ಸರಿಯುವ ಸರ್ಪಗಳು ಕ್ರೋಧವಶೆಯಿಂದಲೂ ಎಲ್ಲ ಗಿಡಗಳೂ ಇಳೆಯಿಂದಲೂ ಯಾತುಧಾನರು ಸುರಸೆಯಿಂದಲೂ ಗಂಧರ್ವರು ಅರಿಷ್ಟೆಯಿಂದಲೂ ಗುಂಡು ಗೊರಸಿನ ಪ್ರಾಣಿಗಳು ಕಾಷ್ಠೆಯಿಂದಲೂ ಹುಟ್ಟಿದವು. ದನುವಿಗೆ ಅರವತ್ತೊಂದು

ದ್ವಿಮೂರ್ಧಾ ಶಂಬರೋಽರಿಷ್ಟೋ ಹಯಗ್ರೀವೋ ವಿಭಾವಸುಃ ।
ಅಯೋಮುಖಃ ಶಂಕುಶಿರಾಃ ಸ್ವರ್ಭಾನುಃ ಕಪಿಲೋಽರುಣಃ ॥೨೯॥
ಪುಲೋಮಾ ವೃಷಪರ್ವಾ ಚ ಏಕಚಕ್ರೋಽನುತಾಪನಃ ।
ಧೂಮ್ರಕೇಶೋ ವಿರೂಪಾಕ್ಷೋ ವಿಪ್ರಚಿತ್ತಿಸ್ತು ದುರ್ಜಯಃ ॥ ೩೦ ॥

ದನುದೇವಿಗೆ ಸುತಾಃ=ಮಕ್ಕಳು ಏಕಷಷ್ಟಿಃ=ಅರವತ್ತೊಂದು (ಆಸನ್)=ಆದರು. ತೇಷಾಂ=ಅವರಲ್ಲಿ ಪ್ರಾಧಾನಿಕಾನ್=ಪ್ರಧಾನರಾದವರನ್ನು ಶೃಣು=ಕೇಳು. ದ್ವಿಮೂರ್ಧ, ಶಂಬರ, ಅರಿಷ್ಟ, ಹಯಗ್ರೀವ, ವಿಭಾವಸು, ಅಯೋಮುಖ, ಶಂಕುಶಿರ, ಸ್ವರ್ಭಾನು, ಕಪಿಲ, ಅರುಣ, ಪುಲೋಮ, ವೃಷಪರ್ವ, ಏಕಚಕ್ರ, ಅನುತಾಪನ, ಧೂಮ್ರಕೇಶ, ವಿರೂಪಾಕ್ಷ, ವಿಪ್ರಚಿತ್ತಿ ಮತ್ತು ದುರ್ಜಯ. ॥ ೨೮-೩೦ ॥

ಸ್ವರ್ಭಾನೋಃ ಸುಪ್ರಭಾಂ ಕನ್ಯಾಮುವಾಹ ನಮುಚಿಃ ಕಿಲ ।
ವೃಷಪರ್ವಣಸ್ತು ಶರ್ಮಿಷ್ಠಾಂ ಯಯಾತಿರ್ನಾಹುಷೋ ಬಲೀ ॥ ೩೧ ॥

ಸ್ವರ್ಭಾನುವಿನ ಸುಪ್ರಭಾ ಎಂಬ ಕನ್ಯೆಯನ್ನು ನಮುಚಿ ಎಂಬುವನು ಉವಾಹಕಿಲ = ಮದುವೆಯಾದನಷ್ಟೆ. ವೃಷಪರ್ವನ (ಕನ್ಯೆಯಾದ) ಶರ್ಮಿಷ್ಠೆಯನ್ನಾದರೋ ಬಲೀ = ಬಲಿಷ್ಠರಾದ ನಾಹುಷಃ = ನಹುಷ ಚಕ್ರವರ್ತಿಗಳ ಮಕ್ಕಳಾದ ಯಯಾತಿರಾಜರು ಮದುವೆಯಾದರಷ್ಟೆ. ॥ ೩೧ ॥

ವೈಶ್ವಾನರಸುತಾ ಯಾಶ್ಚ ಚತಸ್ರಶ್ಚಾರುದರ್ಶನಾಃ ।
ಉಪದಾನವೀ ಹಯಶಿರಾ(ಃ) ಪುಲೋಮಾ ಕಾಲಿಕಾ ತಥಾ ॥೩೨॥

ವೈಶ್ವಾನರ (ವಿಭಾವಸು) ನೆಂಬ ದನುಪುತ್ರನ ಮಗಳಿಗೆ ಚಾರುದರ್ಶನಾಃ=ನೋಡಲು ಸುಂದರಿಯರಾದ ಚತಸ್ರಃ = ನಾಲ್ವರು ಹೆಣ್ಣುಮಕ್ಕಳು (ಆಸನ್) = ಆದರು. ಉಪದಾನವೀ, ಹಯಶಿರಾ, ಪುಲೋಮಾ ಮತ್ತು ಕಾಲಿಕಾ ಎಂದು ನಾಲ್ವರು ಹೆಣ್ಣುಮಕ್ಕಳಾದರು ಎಂದನ್ವಯ. ॥ ೩೨ ॥

ಮಕ್ಕಳು. ಅವರಲ್ಲಿ ಪ್ರಧಾನರು ದ್ವಿಮೂರ್ಧ, ಶಂಬರ, ಅರಿಷ್ಟ, ಹಯಗ್ರೀವ, ವಿಭಾವಸು, ಅಯೋಮುಖ, ಶಂಕುಶಿರ, ಸ್ವರ್ಭಾನು, ಕಪಿಲ, ಅರುಣ, ಪುಲೋಮ, ವೃಷಪರ್ವ, ಏಕಚಕ್ರ, ಅನುತಾಪನ, ಧೂಮ್ರಕೇಶ, ವಿರೂಪಾಕ್ಷ, ವಿಪ್ರಚಿತ್ತಿ ಮತ್ತು ದುರ್ಜಯ ಎಂಬ ದಾನವರು. ನಮುಚಿಯು ಸ್ವರ್ಭಾನುವಿನ ಮಗಳಾದ ಸುಪ್ರಭೆಯನ್ನು ಮದುವೆಯಾದನು. ನಹುಷ ಪುತ್ರನೂ ಬಲಿಷ್ಠನೂ ಆದ ಯಯಾತಿಯು ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನು ಮದುವೆಯಾದನು. ವಿಭಾವಸುವಿನ ಮಗಳಿಗೆ ಉಪದಾನವೀ, ಹಯಶಿರೆ, ಪುಲೋಮೆ ಮತ್ತು ಕಾಲಿಕೆಯು

ಉಪದಾನವೀಂ ಹಿರಣ್ಯಾಕ್ಷಃ ಕ್ರತುರ್ಹಯಶಿರಾಂ ನೃಪ ।
ಪುಲೋಮಾಂ ಕಾಲಿಕಾಂ ಚ ದ್ವೇ ವೈಶ್ವಾನರಸುತೇ ನೃಪ ॥ ೩೩ ॥
ಉಪಯೇಮೇ ಚ ಭಗವಾನ್ ಕಶ್ಯಪೋ ಬ್ರಹ್ಮಚೋದಿತಃ ।
ಪೌಲೋಮಾಃ ಕಾಲಿಕೇಯಾಶ್ಚ ದಾನವಾ ಯುದ್ಧಶಾಲಿನಃ ॥೩೪॥
ತಯೋಃ ಷಷ್ಟಿಸಹಸ್ರಾಣಿ ಯಜ್ಞಘ್ನಾಂಸ್ತೇ ಪಿತುಃ ಪಿತಾ ।
ಜಘಾನ ಸ್ವರ್ಗತೋ ರಾಜನ್ನೇಕ ಇಂದ್ರಪ್ರಿಯಂಕರಃ ॥ ೩೫ ॥

ಹಿರಣ್ಯಾಕ್ಷನು ಉಪದಾನವಿಯನ್ನು ಉಪಯೇಮೇ = ಮದುವೆಯಾದನು. ಕ್ರತು ಎಂಬುವನು ಹಯಶಿರೆಯನ್ನು ಮದುವೆಯಾದನು. ರಾಜನೇ, ಬ್ರಹ್ಮಚೋದಿತಃ = ಬ್ರಹ್ಮದೇವರಿಂದ ಪ್ರೇರಿತರಾದ ಭಗವಾನ್ = ಭೂತಗಳ ಉತ್ಪತ್ತಿ ಮೊದಲಾದುವನ್ನು ಬಲ್ಲ ಕಶ್ಯಪರು ವೈಶ್ವಾನರ ಸುತೇ = ವೈಶ್ವಾನರನ ಇಬ್ಬರು ಹೆಣ್ಣುಮಕ್ಕಳು ಪುಲೋಮಾ ಮತ್ತು ಕಾಲಿಕೆಯೆಂಬ ದ್ವೇ ಚ – ಇಬ್ಬರನ್ನೂ ಉಪಯೇಮೇ=ಮದುವೆಯಾದರು. ತಯೋಃ=ಆ ಇಬ್ಬರಿಗೂ ಯುದ್ಧಶಾಲಿನಃ= ಯುದ್ಧಕುಶಲರಾದ ಷಷ್ಟಿಸಹಸ್ರಾಣಿ=ಅರವತ್ತುಸಾವಿರ ಪೌಲೋಮರೂ ಕಾಲಿಕೇಯರೂ ದಾನವರೂ (ಆಸನ್)=ಆದರು. ಪರೀಕ್ಷಿದ್ರಾಜನೇ, ಸ್ವರ್ಗತಃ=ಸ್ವರ್ಗಕ್ಕೆ ಹೋದ, ಇಂದ್ರಪ್ರಿಯಂಕರಃ = ಇಂದ್ರನಿಗೆ ಪ್ರಿಯವನ್ನು ಮಾಡುವ ತೇ–ನಿನ್ನ ಪಿತುಃ=ತಂದೆಯಾದ ಅಭಿಮನ್ಯುವಿಗೆ ಪಿತಾ=ತಂದೆಯಾದ ಅರ್ಜುನನು ಏಕಃ= ಒಬ್ಬನೇ ಯಜ್ಞಘ್ನಾನ್=ಯಜ್ಞಗಳನ್ನು ಹಾಳುಮಾಡುವ (ತಾನ್)=ಆ ಪೌಲೋಮ ಕಾಲಕೇಯರನ್ನು ಜಘಾನ=ಸಂಹರಿಸಿದನು. ಬ್ರಹ್ಮಚೋದಿತಃ ಎಂದು ದಾನವಿಯರನ್ನು ಮದುವೆಯಾಗುವುದಕ್ಕೆ ಕಾರಣವನ್ನು ತಿಳಿಸಿರುವರು. ಅರವತ್ತುಸಾವಿರವೆಂದು ಅವರ ಸಂಖ್ಯೆಯನ್ನು ಹೇಳಿದ್ದು. ಇವರೇ 'ನಿವಾತಕವಚರು.' ॥ ೩೩-೩೫ ॥

ವಿಪ್ರಚಿತ್ತಿಃ ಸಿಂಹಿಕಾಯಾಂ ಶತಂ ಚೈಕಮಜೀಜನತ್ ।
ರಾಹುಜ್ಯೇಷ್ಠಂ ಕೇತುಶತಂ ಗ್ರಹತ್ವಂ ಯ ಉಪಾಗತಃ ॥ ೩೬ ॥

ರೆಂಬ ನಾಲ್ವರು ಸುಂದರಿಯರು ಮಕ್ಕಳಾದರು. ಉಪದಾನವಿಯನ್ನು ಹಿರಣ್ಯಾಕ್ಷನೂ ಹಯಶಿರೆಯನ್ನು ಕ್ರತು ಎಂಬುವನೂ ಪುಲೋಮ ಮತ್ತು ಕಾಲಿಕೆ ಇಬ್ಬರನ್ನೂ ಬ್ರಹ್ಮಪ್ರೇರಿತರಾದ ಕಶ್ಯಪರೂ ಮದುವೆಯಾದರು. ಪುಲೋಮೆ ಕಾಲಿಕೆಯರಿಬ್ಬರಲ್ಲಿ ಯುದ್ಧಕುಶಲರಾದ ಪೌಲೋಮ ಕಾಲಿಕೇಯರೆಂಬ ಅರವತ್ತುಸಾವಿರ ದಾನವರು ಜನಿಸಿದರು. ಆ ಯಜ್ಞಘಾತುಕರನ್ನು ಸ್ವರ್ಗಕ್ಕೆ ಹೋದ ಮತ್ತು ಇಂದ್ರನಿಗೆ ಪ್ರಿಯವಾದದ್ದನ್ನು ಮಾಡುವ ನಿಮ್ಮ ತಾತ ಅರ್ಜುನನೊಬ್ಬನೇ ಸಂಹರಿಸಿದನು. ವಿಪ್ರಚಿತ್ತಿಯು ಸಿಂಹಿಕೆಯಲ್ಲಿ ರಾಹುವೇ ದೊಡ್ಡವನಾದ ನೂರು ಕೇತುಗಳೂ ಸೇರಿ ನೂರೊಂದು ಮಕ್ಕಳನ್ನು ಪಡೆದನು. ಆ ರಾಹುವು ಗ್ರಹಗಳಲ್ಲಿ ಒಂದಾದನು.

ವಿಪ್ರಚಿತ್ತಿಯು ಸಿಂಹಿಕಾ ಎಂಬುವಳಲ್ಲಿ ರಾಹುವು ಜ್ಯೇಷ್ಠನಾಗಿರುವ ಕೇತುಗಳ ನೂರನ್ನು ಶತಂ ಏಕಂ ಚ = ನೂರೊಂದು ಮಕ್ಕಳನ್ನು ಅಜೀಜನತ್ – ಪಡೆದನು. ಯಃ=ಯಾವ ಆ ಜ್ಯೇಷ್ಠನಾದ ರಾಹುವು ಗ್ರಹತ್ವಂ=ಗ್ರಹವಾಗಿರುವಿಕೆಯನ್ನು ಉಪಾಗತಃ=ಹೊಂದಿದನು. || ೩೬ ||

ಅಥಾತಃ ಶ್ರೂಯತಾಂ ವಂಶೋ ಯೋಽದಿತೇರನುಪೂರ್ವಶಃ ।
ಯತ್ರ ನಾರಾಯಣೋ ದೇವಃ ಸ್ವಾಂಶೇನಾವಾತರದ್ವಿಭುಃ || ೩೭ ||

ಅಥ–ಇನ್ನುಮುಂದೆ ಅತಃ – ಶ್ರೇಯಸ್ಸಿಗೆ ಸಾಧನವಾದ್ದರಿಂದ ಅದಿತೇಃ – ಅದಿತಿದೇವಿಯ ಯಃ=ಯಾವ ವಂಶಃ–ವಂಶವು (ಅಸ್ತಿ)=ಇದೆಯೋ (ಸಃ)=ಅದು ಅನುಪೂರ್ವಶಃ–ಕ್ರಮವಾಗಿ ಶ್ರೂಯತಾಂ–ಕೇಳಲ್ಪಡಲಿ. ಯತ್ರ–ಈ ಯಾವ ಅದಿತಿಯ ವಂಶದಲ್ಲಿ ದೇವಃ=ಕ್ರೀಡಾದಿಗುಣವಿಶಿಷ್ಟನಾದ ವಿಭುಃ=ಸರ್ವತ್ರ ವ್ಯಾಪ್ತನಾದ ನಾರಾಯಣನು ಸ್ವಾಂಶೇನ=ತನ್ನ ಸ್ವರೂಪಾಂಶದಿಂದ ಅವಾತರತ್–ವಾಮನನಾಗಿ ಅವತರಿಸಿದನು. ಆದ್ದರಿಂದ ಶ್ರೇಯಸ್ಸಿಗೆ ಸಾಧನವೆಂದು ಅಭಿಪ್ರಾಯ. || ೩೭ ||

ವಿವಸ್ವಾನರ್ಯಮಾ ಪೂಷಾ ತ್ವಷ್ಟಾಽಥ ಸವಿತಾ ಭಗಃ ।
ಧಾತಾ ವಿಧಾತಾ ವರುಣೋ ಮಿತ್ರಶ್ಶಕ್ರ ಉರುಕ್ರಮಃ || ೩೮ ||

ವಿವಸ್ವಾನ್, ಅರ್ಯಮಾ, ಪೂಷಾ, ತ್ವಷ್ಟಾ, ಸವಿತಾ, ಭಗ, ಧಾತಾ, ವಿಧಾತಾ, ವರುಣ, ಮಿತ್ರ, ಶಕ್ರ ಮತ್ತು ಉರುಕ್ರಮ ಎಂಬೀ ಹನ್ನೆರಡು ಜನ ಅದಿತಿಯ ಮಕ್ಕಳು. || ೩೮ ||

ವಿವಸ್ವತಃ ಶ್ರಾದ್ಧದೇವಂ ಸಂಜ್ಞಾಽಸೂಯತ ವೈ ಮನುಮ್ ।
ಮಿಥುನಂ ಚ ಮಹಾಭಾಗಾ ಯಮಂ ದೇವಂ ಯಮೀಂ ತಥಾ ||

ವಿವಸ್ವತಃ=ವಿವಸ್ವಾನ್ ಎಂಬ ಸೂರ್ಯನಿಂದ ಮಹಾಭಾಗಾ=ಅದೃಷ್ಟವಂತೆಯಾದ ಸಂಜ್ಞಾ – ಸಂಜ್ಞೆಯೆಂಬ ಹೆಂಡತಿಯು ಶ್ರಾದ್ಧದೇವನೆಂಬ ವೈವಸ್ವತ ಮನುವನ್ನೂ ಯಮಂ ದೇವಂ–ಯಮದೇವ ತಥಾ=ಮತ್ತು ಯಮೀಂ=ಯಮಿಯೆಂಬುವ ಮಿಥುನಂ ಚ=ಗಂಡುಹೆಣ್ಣು ಅವಳಿಮಕ್ಕಳನ್ನೂ ಅಸೂಯತ=ಪಡೆದಳು. ವೈ–ಇದು ಪ್ರಸಿದ್ಧವು. || ೩೯ ||

ಇನ್ನುಮುಂದೆ ಅದಿತಿಯ ವಂಶ. ಅದನ್ನು ಕೇಳುವುದು ಕೂಡ ಶ್ರೇಯಸ್ಕರ. ಅದನ್ನು ಕ್ರಮವಾಗಿ ಹೇಳುತ್ತೇನೆ ಕೇಳು. ಆ ವಂಶದಲ್ಲಿ ಸರ್ವತ್ರ ವ್ಯಾಪ್ತನಾದ ನಾರಾಯಣನು ತನ್ನ ಅವತಾರ ಮಾಡಿರುವನು. ವಿವಸ್ವಾನ್, ಅರ್ಯಮಾ, ಪೂಷಾ, ತ್ವಷ್ಟೃ, ಸವಿತೃ, ಭಗ, ಧಾತೃ, ವಿಧಾತೃ, ವರುಣ, ಮಿತ್ರ, ಶಕ್ರ ಮತ್ತು ಉರುಕ್ರಮರೆಂಬ ಹನ್ನೆರಡು ಜನ ಅದಿತಿಯ ಮಕ್ಕಳು. ವಿವಸ್ವತನ ಹೆಂಡತಿ ಭಾಗ್ಯವತಿಯಾದ ಸಂಜ್ಞೆಯು ಮನುವಾದ ಶ್ರಾದ್ಧದೇವನನ್ನೂ ಯಮ ಮತ್ತು

ಸೈವ ಭೂತ್ವಾಽಥ ವಡವಾ ನಾಸತ್ಯಾ ಸುಷುವೇ ಭುವಿ
ಛಾಯಾ ಶನೈಶ್ಚರಂ ಲೇಭೇ ಸಾವರ್ಣಿಂ ಚ ಮನುಂ ತತಃ ।
ಕನ್ಯಾಂ ಚ ತಪತೀಂ ಯಾ ವೈ ವವ್ರೇ ಸಂವರಣಂ ಪತಿಮ್ ॥೪೦॥

ಅಥ=ಮತ್ತು ಭುವಿ (ವರ್ತಮಾನಾ) = ಭೂಮಿಯಲ್ಲಿ ಇರುವ ಸಾ ಏವ= ಆ ಸಂಜ್ಞೆಯೇ ನಾಮ್ನಾ=ಹೆಸರಿನಿಂದ ವಡವಾ ಭೂತ್ವಾ=ವಡವಾ ಎಂಬ ಹೆಣ್ಣು ಕುದುರೆಯಾಗಿ ಆ ವಿವಸ್ವಂತನಿಂದ (ಗಂಡುಕುದುರೆಯ ರೂಪ ತಾಳಿದವನಿಂದ) ನಾಸತ್ಯಾ=ಅಶ್ವಿನೀದೇವತೆಗಳನ್ನು ಸುಷುವೇ=ಹಡೆದಳು. ಛಾಯಾ=ಮತ್ತೊಬ್ಬ ಹೆಂಡತಿಯಾದ ಛಾಯಾಯೆಂಬುವಳು ಶನೈಶ್ಚರಂ = ಶನೈಃ ಚರನೆಂಬ ಶನಿದೇವನನ್ನೂ ತತಃ=ಅನಂತರ ಸಾವರ್ಣಿ ಮನುವನ್ನೂ ತಪತೀಂ=ತಪತಿಯೆಂಬ ಕನ್ಯಾಂ ಚ=ಕನ್ಯೆಯನ್ನೂ ತತಃ=ಆ ವಿವಸ್ವತನಿಂದ ಲೇಭೇ=ಪಡೆದಳು. ಯಾ=ಯಾವ ಈ ತಪತಿಯು ಸಂವರಣನನ್ನು ಪತಿಂ=ಗಂಡನನ್ನಾಗಿ ವವ್ರೇ=ವರಿಸಿದಳು. ವೈ= ಪ್ರಸಿದ್ಧವು. (ಯಮೀ ಎಂಬುವಳು ಯಮುನಾ ನದಿಯ ಮತ್ತು ತಪತೀ ಎಂಬುವಳು ತಪತೀ ನದಿಯ ಅಭಿಮಾನಿಗಳು.) ॥ ೪೦ ॥

ಅರ್ಯಮ್ಣೋ ಮಾತೃಕಾ ಪತ್ನೀ ತಯೋಶ್ಚರ್ಷಣಯಃ ಸುತಾಃ ।
ಯತ್ರ ವೈ ಮಾನುಷೀ ಜಾತಿರ್ಬ್ರಹ್ಮಣಾ ಚೋಪಕಲ್ಪಿತಾ ॥ ೪೧ ॥

ಅರ್ಯಮನಿಗೆ ಮಾತೃಕಾ ಎಂಬುವಳು ಹೆಂಡತಿ. ತಯೋಃ=ಆ ಅರ್ಯಮಾ ಮಾತೃಕೆಯರಿಗೆ ಚರ್ಷಣಯಃ=ಚರ್ಷಣಿಗಳೆಂಬ ಸುತಾಃ=ಮಕ್ಕಳು (ಆಸನ್)= ಆದರು. ಯತ್ರ = ಯಾವ ಈ ಚರ್ಷಣಿಗಳಲ್ಲಿ ಬ್ರಹ್ಮಣಾ = ಬ್ರಹ್ಮದೇವರಿಂದ ಮಾನುಷೀ ಜಾತಿಃ ಚ = ಮನುಷ್ಯ ಜಾತಿಯೂ ಉಪಕಲ್ಪಿತಾ = ಸೃಷ್ಟವಾಯಿತು ವೈ=ಪ್ರಸಿದ್ಧವು. ॥ ೪೧ ॥

ಪೂಷಾಽನಪತ್ಯಃ ಪಿಷ್ಟಾದೋ ಭಗ್ನದಂತೋಽಭವತ್ಪುರಾ ।
ಯೋಽಸೌ ದಕ್ಷಾಯ ಕುಪಿತಂ ಜಹಾಸ ವಿವೃತದ್ವಿಜಃ ॥ ೪೨ ॥

ಯಃ=ಯಾವ ಪೂಷನು ಪುರಾ=ಹಿಂದೆ ದಕ್ಷಾಯ=ದಕ್ಷನಿಗಾಗಿ ಕುಪಿತಂ= ಕೋಪಗೊಂಡ ರುದ್ರದೇವರನ್ನು ನೋಡಿ ವಿವೃತ ದ್ವಿಜಃ ಸ= ಹಲ್ಲುಗಳು

ಯಮಿಯೆಂಬ ಅವಳಿಮಕ್ಕಳನ್ನೂ ಹಡೆದಳು. ಆಕೆಯೇ ಹೆಣ್ಣುಕುದುರೆಯಾಗಿ ಭೂಮಿಯಲ್ಲಿರುತ್ತಾ ಅಶ್ವಿನೀದೇವತೆಗಳನ್ನು ಹಡೆದಳು. ಮತ್ತೊಬ್ಬ ಹೆಂಡತಿ ಛಾಯೆಯು ಶನೈಶ್ಚರನನ್ನೂ ಸಾವರ್ಣಿ ಮನುವನ್ನೂ ತಪತಿಯೆಂಬ ಕನ್ಯೆಯನ್ನೂ ಪಡೆದಳು. ಆ ತಪತಿಯು ಸಂವರಣನನ್ನು ಗಂಡನನ್ನಾಗಿ ಹೊಂದಿದಳು. ಅರ್ಯಮನ ಹೆಂಡತಿ ಮಾತೃಕೆ. ಅವಳಲ್ಲಿ ಚರ್ಷಣಿಗಳು ಮಕ್ಕಳಾದರು. ಈ ಚರ್ಷಣಿಗಳಿಂದ ಬ್ರಹ್ಮದೇವರು ಮನುಷ್ಯಜಾತಿಯನ್ನು ಮಾಡಿದರು. ಪೂಷನಿಗೆ ಮಕ್ಕಳಿಲ್ಲ. ಇವನು ಹಿಂದೆ ದಕ್ಷನಮೇಲೆ ಕೋಪಗೊಂಡಿದ್ದ ರುದ್ರದೇವರನ್ನು ನೋಡಿ ಹಲ್ಲುಕಾಣುವಂತೆ

ಕಾಣುವವನಾಗಿ ಜಹಾಸ= ಗಹಗಸಿಹಿ ನಕ್ಕನೋ ಅಸೌ=ಈ ಅನಪತ್ಯಃ ಪೂಷಾ= ಸಂತತಿಯಿಲ್ಲದ ಪೂಷನು ಭಗ್ನದಂತಃ ಸರ್ = ಹಲ್ಲು ಮುರಿದವನಾಗಿ ಪಿಷ್ಟಾದಃ ಅಭವತ್=ಹಿಟ್ಟು ತಿನ್ನುವವನಾದನು. || ೪೨ ||

ತ್ವಷ್ಟುರ್ದೈತ್ಯಾನುಜಾ ಭಾರ್ಯಾ ರಚನಾನಾಮ ಕನ್ಯಕಾ ।
ಸನ್ನಿವೇಶಸ್ತಯಾ ಜಜ್ಞೇ ವಿಶ್ವರೂಪಶ್ಚ ವೀರ್ಯವಾನ್ ॥ ೪೩ ॥

ತ್ವಷ್ಟನಿಗೆ ದೈತ್ಯಾನುಜಾ = ದಿತಿದೇವಿಯ ಮಕ್ಕಳ ತಂಗಿಯಾದ ರಚನಾ ಎಂಬ ಕನ್ನಿಕೆಯು ಭಾರ್ಯೆಯಾಗಿ (ಆಸೀತ್) – ಆದಳು. ತಯಾ = ಅವಳಿಂದ ತ್ವಷ್ಟೃವಿನ ದೆಸೆಯಿಂದ ಸನ್ನಿವೇಶನೆಂಬುವನು ಹುಟ್ಟಿದನು. ವೀರ್ಯವಾನ್ = ವೀರ್ಯವಂತನಾದ ವಿಶ್ವರೂಪನೂ ಹುಟ್ಟಿದನು. || ೪೩ ||

ತಂ ವವ್ರಿರೇ ಸುರಗಣಾಃ ಸ್ವಸ್ರೀಯಂ ದ್ವಿಷತಾಮಪಿ ।
ವಿಮತೇನ ಪರಿತ್ಯಕ್ತಾ ಗುರುಣಾಽಽಂಗಿರಸೇನ ಯತ್ ॥ ೪೪ ॥

ಯತ್=ಯಾವಾಗ ವಿಮತೇನ = ದೇವತೆಗಳಿಂದ ಸಹಿತನಾದ ಇಂದ್ರದೇವರಿಂದ ತಿರಸ್ಕೃತರಾದ ಆಂಗಿರಸೇನ=ಅಂಗೀರಸರ ಮಕ್ಕಳಾದ ಗುರುಣಾ–ಬೃಹಸ್ಪತ್ಯಾಚಾರ್ಯರಿಂದ ಪರಿತ್ಯಕ್ತಾಃ = ಬಿಡಲ್ಪಟ್ಟರೋ ಆಗ ಅಥವಾ ಬಿಡಲ್ಪಟ್ಟರಾದ ಕಾರಣದಿಂದ ಸುರಗಣಾಃ=ದೇವತೆಗಳು ದ್ವಿಷತಾಂ ತಮ್ಮ ದ್ವೇಷಿಗಳಾದ ದೈತ್ಯರ ಸ್ವಸ್ರೀಯಂ ಅಪಿ=ತಂಗಿಯ ಮಗನಾಗಿದ್ದರೂ ಸ್ವಸ್ರೀಯಂ=ತಮಗೂ ತಂಗಿಯ ಮಗನಾದ (ದೇವತೆಗಳೂ ದೈತ್ಯರೂ ಇಬ್ಬರೂ ಕಶ್ಯಪರ ಮಕ್ಕಳೇ ಆದ್ದರಿಂದ ಅಣ್ಣ ತಮ್ಮಂದಿರೆಂಬ ಅಭಿಪ್ರಾಯದಿಂದ ಹೀಗೆ ಹೇಳಿದ್ದು) ತಂ=ಆ ವಿಶ್ವರೂಪಾಚಾರ್ಯನನ್ನು ವವ್ರಿರೇ=ಅಸುರರನ್ನು ಜಯಿಸಲು ಪುರೋಹಿತನನ್ನಾಗಿ ವರಿಸಿದರು. || ೪೪ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಷಷ್ಠೋಽಧ್ಯಾಯಃ

ಗಹಗಹಿಸಿ ನಕ್ಕನು. ಅದರ ಫಲವಾಗಿ ಹಲ್ಲುಮುರಿದವನಾಗಿ ಹಿಟ್ಟುತಿನ್ನುವನಾದನು.

ತ್ವಷ್ಟೃವಿಗೆ ದೈತ್ಯರ ತಂಗಿಯಾದ ರಚನೆಯೆಂಬ ಕನ್ಯೆಯು ಹೆಂಡತಿ. ಅವಳಿಗೆ ಸನ್ನಿವೇಶ ಮತ್ತು ವೀರ್ಯವಂತನಾದ ವಿಶ್ವರೂಪ ಎಂಬ ಇಬ್ಬರು ಮಕ್ಕಳು. ದ್ವೇಷಿಗಳಾದ ದೈತ್ಯರ ತಂಗಿಯ ಮಗನಾಗಿದ್ದರೂ ತಮ್ಮ ತಂಗಿಯ ಮಗನೆಂದೂ ಭಾವಿಸಿ ದೇವತೆಗಳು ಆ ವಿಶ್ವರೂಪಾಚಾರ್ಯನನ್ನು ಪುರೋಹಿತನನ್ನಾಗಿ ಮಾಡಿಕೊಂಡರು. ದೇವತಾಗಣಸಹಿತರಾದ ಇಂದ್ರದೇವರಿಂದ ಅವಮಾನಿತರಾಗಿ ವೈಮನಸ್ಯಹೊಂದಿದ ಬೃಹಸ್ಪತ್ಯಾಚಾರ್ಯರು ದೇವತೆಗಳನ್ನು ಪರಿತ್ಯಜಿಸಿದ್ದರು.

ಅಥ ಸಪ್ತಮೋಽಧ್ಯಾಯಃ

ರಾಜೋವಾಚ—

ಯಸ್ಯ ಹೇತೋಃ ಪರಿತ್ಯಕ್ತಾ ಆಚಾರ್ಯೇಣಾತ್ಮನಃ ಸುರಾಃ ।
ಏತದಾಚಕ್ಷ್ವ ಭಗವನ್ ಶಿಷ್ಯಾಣಾಮಕ್ರಮಂ ಗುರೌ ॥ ೧ ॥

'ಗುರುದ್ವಾರಾ ಅಹಂ ಪ್ರಸಾದಕೃತ್' ಗುರುಗಳ ಮೂಲಕವೇ ನಾನು ಅನುಗ್ರಹಮಾಡುವವನು ಎಂಬ ಸೂಕ್ತಿಯಂತೆ ಭಕ್ತಿಜ್ಞಾನಾದಿಗಳ ಉನ್ನತಿಯು ಸಿದ್ಧಿಸಬೇಕಾದರೆ ಗುರುಗಳ ಅನುಗ್ರಹವೇ ಅತಿಶಯ ಬಲವುಳ್ಳದ್ದು. ಅದಿಲ್ಲದೆ ಹೋದಲ್ಲಿ ಸದ್ಯಃ ಅನರ್ಥಪರಂಪರೆಗೇ ಕಾರಣವಾಗುವುದು. ಆದ್ದರಿಂದ ಜ್ಞಾನಾದಿಗಳನ್ನು ಸಂಪಾದಿಸಬೇಕು ಎಂಬುವವನು ಸ್ವಪ್ನದಲ್ಲಿಯೂ ಗುರುಗಳಿಗೆ ಅವಮಾನ ಮಾಡಬಾರದು. ಮತ್ತೇನೆಂದರೆ ಅವರ ಅನುಗ್ರಹ ಸಮೃದ್ಧಿಗಾಗಿ ಯಾವಾಗಲೂ ಮರ್ಯಾದೆಯಿಂದ ಅವರನ್ನು ಸೇವಿಸಬೇಕು ಎಂಬ ಪ್ರಮೇಯವನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಮೊದಲು ಪರೀಕ್ಷಿದ್ರಾಜರು ಪ್ರಶ್ನೆಮಾಡುತ್ತಾರೆ. ಭಗವನ್= ಪೂಜ್ಯರಾದ ಶುಕಾಚಾರ್ಯರೇ ಸುರಾಃ = ದೇವತೆಗಳು ಆತ್ಮನಃ = ತಮ್ಮ ಆಚಾರ್ಯೇಣ = ಪುರೋಹಿತರಾದ ಬೃಹಸ್ಪತ್ಯಾಚಾರ್ಯರಿಂದ ಯಸ್ಯ = ಯಾವ ಹೇತೋಃ = ಕಾರಣಕ್ಕಾಗಿ ಪರಿತ್ಯಕ್ತಾಃ = ಬಿಡಲ್ಪಟ್ಟರು. ಏತತ್ = ಇದನ್ನು ಆಚಕ್ಷ್ವ= ಹೇಳಿರಿ. ಅಂದರೆ ಗುರೌ = ಬೃಹಸ್ಪತ್ಯಾಚಾರ್ಯರಲ್ಲಿ ಶಿಷ್ಯಾಣಾಂ = ಶಿಷ್ಯರಾದ (ಮಕ್ಕಳಂತೆ ಇದ್ದ) ದೇವತೆಗಳ ಅಕ್ರಮಂ= ಅಪರಾಧವನ್ನು ಆಚಕ್ಷ್ವ= ಹೇಳಿರಿ. ॥ ೧ ॥

ಶ್ರೀ ಶುಕ ಉವಾಚ—

ಇಂದ್ರಸ್ತ್ರಿಭುವನೈಶ್ವರ್ಯಮದೋಲ್ಲಂಘಿತಸತ್ಪಥಃ ।
ಮರುದ್ಭಿರ್ವಸುಭೀ ರುದ್ರೈರಾದಿತ್ಯೈರ್ಋಭುಭಿರ್ನೃಪ ॥ ೨ ॥
ವಿಶ್ವೇದೇವೈಶ್ಚ ಸಾಧ್ಯೈಶ್ಚ ನಾಸತ್ಯಾಭ್ಯಾಂ ಪರಿಶ್ರಿತಃ ।
ಸಿದ್ಧಚಾರಣಗಂಧರ್ವೈರ್ಮುನಿಭಿರ್ಬ್ರಹ್ಮವಾದಿಭಿಃ ॥ ೩ ॥

ಏಳನೆಯ ಅಧ್ಯಾಯ

ಪರೀಕ್ಷಿದ್ರಾಜರು—ಪೂಜ್ಯರೇ, ದೇವತೆಗಳ ಆಚಾರ್ಯರಾದ ಬೃಹಸ್ಪತ್ಯಾಚಾರ್ಯರು ಯಾವ ಕಾರಣಕ್ಕಾಗಿ ದೇವತೆಗಳನ್ನು ಕೈಬಿಟ್ಟರು? ಗುರುಗಳ ವಿಷಯದಲ್ಲಿ ಶಿಷ್ಯರು ಮಾಡಿದ ಅಪರಾಧವಾದರೂ ಏನು? ಹೇಳಿರಿ.

ಶುಕಾಚಾರ್ಯರು—ಇಂದ್ರದೇವರು ತ್ರಿಲೋಕೈಶ್ವರ್ಯಮದದಿಂದ ಸನ್ಮಾರ್ಗದಿಂದ ದೂರಸರಿದರು. ಮರುತ್ತರು, ವಸುಗಳು, ರುದ್ರರು, ಆದಿತ್ಯರು, ಋಭುಗಳು, ವಿಶ್ವೇದೇವತೆಗಳು, ಸಾಧ್ಯರು ಮತ್ತು ಅಶ್ವಿನೀ ದೇವತೆಗಳಿಂದ ಅವರು ಪರಿವೃತ

ವಿದ್ಯಾಧರೋಽಪ್ಸರೋಭಿಶ್ಚ ಕಿನ್ನರೈಃ ಪತಗೋರಗೈಃ ।
ನಿಷೇವ್ಯಮಾಣೋ ಭಗವಾನ್ ಸ್ತೂಯಮಾನಶ್ಚ ಭಾರತ ॥ ೪ ॥

ರಾಜರ ಪ್ರಶ್ನೆಗೆ ಉತ್ತರ ಹೇಳಲು ಪ್ರಾರಂಭಿಸುತ್ತಾರೆ. ಇಂದ್ರದೇವರು ತ್ರಿಭುವನ= ಮೂರು ಲೋಕಗಳ ಐಶ್ವರ್ಯಮದ= ಅಧಿಕಾರದ ಗರ್ವದಿಂದ ಉಲ್ಲಂಘಿತ ಸತ್ಪಥಃ=ಉಲ್ಲಂಘಿತವಾದ ಸಜ್ಜನರ ಮಾರ್ಗವುಳ್ಳವರಾಗಿ (ಆದರು.) ಮದಕ್ಕೆ ಕಾರಣವನ್ನೂ ಸಜ್ಜನರ ಮಾರ್ಗೋಲ್ಲಂಘನೆಯನ್ನೂ ಹೇಳುತ್ತಾರೆ. ಸಃ= ಇಂದ್ರದೇವರು ಮರುದ್ಗಣಗಳಿಂದಲೂ ವಸುಗಣಗಳಿಂದಲೂ ರುದ್ರಗಣಗಳಿಂದಲೂ ಆದಿತ್ಯಗಣಗಳಿಂದಲೂ ಋಭುಗಳಿಂದಲೂ ವಿಶ್ವೇದೇವತೆಗಳಿಂದಲೂ ಸಾಧ್ಯರಿಂದಲೂ ನಾಸತ್ಯಾಭ್ಯಾಂ- ಅಶ್ವಿನೀ ದೇವತೆಗಳಿಂದಲೂ ಸಿದ್ಧ, ಚಾರಣ, ಗಂಧರ್ವರಿಂದಲೂ ಬ್ರಹ್ಮವಾದಿಭಿಃ= ಶ್ರೀಹರಿಯ ವಿಷಯವನ್ನು ಚರ್ಚಿಸುವ ಮುನಿಭಿಃ= ಋಷಿಗಳಿಂದಲೂ ಪರಿಶ್ರಿತಃ (ಸನ್)=ಆಶ್ರಯಿಸಲ್ಪಟ್ಟವರಾಗಿ ವಿದ್ಯಾಧರ-ಅಪ್ಸರ-ಕಿನ್ನರ-ಪತಗ (ಹಕ್ಕಿ), ಉರಗ (ಸರ್ಪ) ರುಗಳಿಂದ ನಿಷೇವ್ಯಮಾಣಃ=ಅತಿಶಯವಾಗಿ ಸೇವಿಸಲ್ಪಟ್ಟವರಾಗಿ ಸ್ತೂಯಮಾನಃ ಚ= ಸ್ತೋತ್ರಮಾಡಲ್ಪಟ್ಟವರಾಗಿಯೂ || ೨-೪ ||

ಉಪಗೀಯಮಾನೋ ಲಲಿತಮಾಸ್ಥಾನಾಧ್ಯಾಸನಾಶ್ರಿತಃ ।
ಪಾಂಡುರೇಣಾತಪತ್ರೇಣ ಚಂದ್ರಮಂಡಲಚಾರುಣಾ ॥ ೫ ॥

ಯುಕ್ತಶ್ಚಾನ್ಯೈಃ ಪಾರಮೇಷ್ಠ್ಯೈಶ್ಚಾಮರವ್ಯಜನಾದಿಭಿಃ ।
ವಿರಾಜಮಾನಃ ಪೌಲೋಮ್ಯಾ ಸಹಾರ್ಧಾಸನಯಾ ಭೃಶಮ್ ॥

ಲಲಿತಂ=ಸುಂದರವಾಗಿರುವಂತೆ ಉಪಗೀಯಮಾನಃ= ಗಾನಮಾಡಲ್ಪಟ್ಟವರಾಗಿ ಆಸ್ಥಾನಾಧ್ಯಾಸನಾಶ್ರಿತಃ= ಸಭೆಯ ಸಿಂಹಾಸನದಲ್ಲಿ ಕುಳಿತವರಾಗಿ ಚಂದ್ರಮಂಡಲದಂತೆ ಸುಂದರವಾದ ಪಾಂಡುರೇಣ= ಬೆಳ್ಳಗಿರುವ ಆತಪತ್ರೇಣ= ಛತ್ರಿಯಿಂದಲೂ ಚಾಮರ ಮತ್ತು ಬೀಸಣಿಗೆ (ವ್ಯಜನ) ಗಳೇ ಮೊದಲಾದ ಅನ್ಯೈಃ= ಇತರ ಪಾರಮೇಷ್ಠ್ಯೈಃ ಚ=(೧) ಶ್ರೇಷ್ಠಗಳಾದ (೨) ಮಹಾರಾಜತ್ವವನ್ನು

ರಾಗಿದ್ದರು. ಸಿದ್ಧರು, ಚಾರಣರು, ಗಂಧರ್ವರು, ಬ್ರಹ್ಮವಾದಿಗಳಾದ ಮುನಿಗಳು, ವಿದ್ಯಾಧರರು, ಅಪ್ಸರೆಯರು, ಕಿನ್ನರರು, ಪತಗರು, ಉರಗರು—ಇವರೆಲ್ಲ ಅವರನ್ನು ಸೇವಿಸುತ್ತಿದ್ದರು. ಮತ್ತು ಗಾನಮಾಡುತ್ತಿದ್ದರು. ಸುಂದರವಾಗಿರುವಂತೆ ಇವರೆಲ್ಲ ಹಾಡುತ್ತಿರಲು ಅವರು ಸಭೆಯಲ್ಲಿ ಸಿಂಹಾಸನದಲ್ಲಿ ಮಂಡಿತರಾಗಿದ್ದರು. ಚಂದ್ರಮಂಡಲದಂತೆ ಮನೋಹರವಾದ ಬಿಳಿ ಛತ್ರಿ ಮತ್ತು ಚಾಮರ, ಬೀಸಣಿಗೆ ಮೊದಲಾದ ಮಹಾರಾಜ ಚಿಹ್ನೆಗಳಿಂದ ಅವರು ಕೂಡಿದ್ದರು. ಅವರೊಂದಿಗೆ ಅರ್ಧಾಸನದಲ್ಲಿ ಕುಳಿತಿದ್ದ ಶಚೀದೇವಿಯೊಂದಿಗೆ ಅವರು ಅತ್ಯಂತ ಪ್ರಕಾಶಮಾನರಾಗಿ

ತೋರಿಸುವ ಚಿಹ್ನೆಗಳಿಂದ ಯುಕ್ತಃ=ಕೂಡಿದವರಾಗಿ ಅರ್ಧಾಸನಯಾ=ಅರ್ಧ ಸಿಂಹಾಸನದಲ್ಲಿ ಕುಳಿತಿರುವ ಪೌಲೋಮ್ಯಾ ಸಹ=ಶಚೀದೇವಿಯೊಂದಿಗೆ ಭೃಶಂ=ಅತ್ಯಂತವಾಗಿ ವಿರಾಜಮಾನಃ=ಪ್ರಕಾಶಮಾನರಾಗಿ || ೫, ೬ ||

ಸ ಯದಾ ಪರಮಾಚಾರ್ಯಂ ದೇವಾನಾಮಾತ್ಮನಶ್ಚ ಹ ।
ನಾಭ್ಯನಂದತ ಸಂಪ್ರಾಪ್ತಂ ಪ್ರತ್ಯುತ್ಥಾನಾಸನಾದಿಭಿಃ ॥ ೭ ॥
ವಾಚಸ್ಪತಿಂ ಮುನಿವರಂ ಸುರಾಸುರನಮಸ್ಕೃತಮ್ ।
ನೋಚ್ಚಚಾಲಾಸನಾದಿಂದ್ರಃ ಪಶ್ಯನ್ನಪಿ ಸಮಾಗತಮ್ ॥ ೮ ॥

ಯದಾ=ಯಾವಾಗ ಸಂಪ್ರಾಪ್ತಂ=ಸಭೆಗೆ ಬಂದ ದೇವಾನಾಂ=ದೇವತೆಗಳಿಗೂ ಆತ್ಮನಃ ಚ=ತನಗೂ ಪರಮಾಚಾರ್ಯಂ=ಶ್ರೇಷ್ಠಗುರುಗಳಾದ ಮುನಿಶ್ರೇಷ್ಠರಾದ ದೇವತೆಗಳಿಂದಲೂ ಅಸುರರಿಂದಲೂ ನಮಸ್ಕೃತರಾದ ವಾಚಸ್ಪತಿಂ=ಬೃಹಸ್ಪತ್ಯಾಚಾರ್ಯರನ್ನು ನ ಅಭ್ಯನಂದತ=ಸಂತೋಷದಿಂದ ಪೂಜಿಸಲಿಲ್ಲವೋ ಸಮಾಗತಂ=ಬಂದವರನ್ನು ಪಶ್ಯನ್=ನೋಡುತ್ತಾ ಆಸನಾತ್=ಸಿಂಹಾಸನದಿಂದ ನ ಉಚ್ಚಚಾಲ ಅಪಿ = ಕದಲಲೂ ಇಲ್ಲವೋ (ಒಂದೊಂದೂ ಗೌರವಕ್ಕೆ ಕಾರಣವೆಂದು ತಿಳಿಸುವುದಕ್ಕಾಗಿ ವಾಚಸ್ಪತಿ ಮೊದಲಾದ ಅನೇಕ ವಿಶೇಷಣಗಳನ್ನು ಕೊಟ್ಟಿರುವರು.) || ೭, ೮ ||

ತತೋ ನಿರ್ಗತ್ಯ ಸಹಸಾ ಕವಿರಾಂಗಿರಸಃ ಪ್ರಭುಃ ।
ಆಯಯೌ ಸ್ವಗೃಹಂ ತೂಷ್ಣೀಂ ವಿದ್ವಾನ್ ಶ್ರೀಮದ-
ವಿಕ್ರಿಯಾಮ್ ॥ ೯ ॥

(ತದಾ)=ಆಗ ಕವಿಃ=ಜ್ಞಾನಿಗಳಾದ ಪ್ರಭುಃ=ಸಮರ್ಥರಾದ ಆಂಗಿರಸಃ=ಬೃಹಸ್ಪತ್ಯಾಚಾರ್ಯರು ಶ್ರೀಮದವಿಕ್ರಿಯಾಂ=ಐಶ್ವರ್ಯನಿಮಿತ್ತಕ ಮದದ ವಿಕಾರವನ್ನು ವಿದ್ವಾನ್ (ಸನ್)=ತಿಳಿದವರಾಗಿ ಸಹಸಾ=ಕೂಡಲೆ ತತಃ=ಇಂದ್ರಸಭೆಯಿಂದ ನಿರ್ಗತ್ಯ=ಹೊರಹೊರಟು ತೂಷ್ಣೀಂ=ಮೌನವಾಗಿ ಸ್ವಗೃಹಂ=ತಮ್ಮ ಮನೆಗೆ ಆಯಯೌ=ಬಂದುಬಿಟ್ಟರು. (ಬೃಹಸ್ಪತ್ಯಾಚಾರ್ಯರು ತಾರತಮ್ಯದಲ್ಲಿ ಇಂದ್ರದೇವರಿಗಿಂತ ಕಡಿಮೆಯಾದರೂ ಪುರೋಹಿತರಾಗಿದ್ದುದರಿಂದ ಸಭಾಮರ್ಯಾದೆಗಾಗಿ

ದ್ದರು. ದೇವತೆಗಳಿಗೂ ತಮಗೂ ಶ್ರೇಷ್ಠ ಆಚಾರ್ಯರಾದ ಬೃಹಸ್ಪತ್ಯಾಚಾರ್ಯರು ಸಭೆಗೆ ಬಂದಾಗ ಅವರು ಇದಿರೆದ್ದಾಗಲಿ ಆಸನ ಕೊಟ್ಟಾಗಲಿ ಗೌರವಿಸಲಿಲ್ಲ. ಸುರರಿಂದಲೂ ಅಸುರರಿಂದಲೂ ನಮಸ್ಕೃತರೂ ಮುನಿವರರೂ ವಾಚಸ್ಪತಿಗಳೂ ಆದ ಬೃಹಸ್ಪತ್ಯಾಚಾರ್ಯರನ್ನು ಸಭೆಗೆ ಬಂದವರನ್ನು ನೋಡಿಯೂ ಸಿಂಹಾಸನದಿಂದ ಕದಲಲೂ ಇಲ್ಲ. ಆಗ ಜ್ಞಾನಿಗಳೂ ಸಮರ್ಥರೂ ಆದ ಬೃಹಸ್ಪತ್ಯಾಚಾರ್ಯರು ಇಂದ್ರದೇವರ ಈ ವರ್ತನೆ ಐಶ್ವರ್ಯಮದದ ವಿಕಾರವೆಂದರಿತು, ಏನೂ ಮಾತನಾಡದೆ ತಮ್ಮ ಮನೆಗೆ ಹಿಂತಿರುಗಿದರು.

ಗೌರವಿಸಬೇಕಾಗಿತ್ತು ಎಂದಭಿಪ್ರಾಯ. ಆದ್ದರಿಂದಲೇ ನೋಚ್ಚಚಾಲ ಎಂದು ಹೇಳಿದ್ದು.) || ೯ ||

ತರ್ಹ್ಯೇವ ಪ್ರತಿಬುಧ್ಯೇಂದ್ರೋ ಗುರುಹೇಲನಮಾತ್ಮನಃ ।
ಗರ್ಹಯಾಮಾಸ ಸದಸಿ ಸ್ವಯಮಾತ್ಮಾನಮಾತ್ಮನಾ ॥ ೧೦ ॥

ತರ್ಹ್ಯೇವ–ಆಗಲೇ ಇಂದ್ರದೇವರು ಆತ್ಮನಃ = ತಮ್ಮ (ತಾವು ಮಾಡಿದ) ಗುರುಹೇಲನಂ=ಗುರುಗಳ ತಿರಸ್ಕಾರವನ್ನು ಪ್ರತಿಬುಧ್ಯ–ತಿಳಿದು ಸದಸಿ=ಸಭೆಯಲ್ಲಿ ಸ್ವಯಂ=ಮತ್ತೊಬ್ಬರಿಂದ ಹೇಳಿಸಿಕೊಳ್ಳದೆ ತಾವಾಗಿಯೇ ಆತ್ಮನಾ–ತಮ್ಮಿಂದಲೇ ಆತ್ಮಾನಂ=ತಮ್ಮನ್ನು ಗರ್ಹಯಾಮಾಸ=ನಿಂದಿಸಿಕೊಂಡರು. ||೧೦||

ಅಹೋ ಬತ ಮಯಾಽಸಾಧು ಕೃತಂ ವೈ ದಭ್ರಬುದ್ಧಿನಾ ।
ಯನ್ಮಯೈಶ್ವರ್ಯಮತ್ತೇನ ಗುರುಃ ಸದಸಿ ಕಾತ್ಕೃತಃ ॥ ೧೧ ॥

ತಮ್ಮನ್ನು ನಿಂದಿಸಿಕೊಂಡ ರೀತಿಯನ್ನೇ ವಿವರಿಸುತ್ತಾರೆ. ಮಯಾ–ನನ್ನಿಂದ ಕೃತಂ=ಮಾಡಲ್ಪಟ್ಟ ಕೆಲಸವು ಅಹೋ ಅಸಾಧು ಬತ = ಅನುಚಿತವಾದುದು ಅಲ್ಲವೇ! ಅಯ್ಯೋ! ಯತ್=ಏಕೆಂದರೆ ದಭ್ರಬುದ್ಧಿನಾ–ಅಲ್ಪಬುದ್ಧಿಯಾದ ಐಶ್ವರ್ಯಮತ್ತೇನ–ಮೂರು ಲೋಕದ ರಾಜ್ಯದ ಐಶ್ವರ್ಯದ ನಿಮಿತ್ತವಾಗಿ ಮತ್ತನಾದ ಮಯಾ–ನನ್ನಿಂದ ಗುರುಃ=ಗುರುಗಳಾದ ಬೃಹಸ್ಪತ್ಯಾಚಾರ್ಯರು ಸದಸಿ=ಸಭೆಯಲ್ಲಿ ಕಾತ್ಕೃತಃ ಧಿಕ್ಕರಿಸಲ್ಪಟ್ಟರು. ಸದಸಿ ಎಂದು ಹೇಳಿದ್ದರಿಂದ ಧಿಕ್ಕಾರದ ಅತಿಶಯವನ್ನು ತೋರಿಸಿದಂತಾಯಿತು. || ೧೧ ||

ಕೋ ಗೃಧ್ಯೇತ್ಪಂಡಿತೋ ಲಕ್ಷ್ಮೀಂ ತ್ರಿವಿಷ್ಟಪಪತೇರಪಿ ।
ಯಯಾಽಹಮಾಸುರಂ ಭಾವಂ ನೀತೋಽದ್ಯ ವಿಬುಧೇಶ್ವರಃ ॥೧೨॥

ಪಂಡಿತಃ=ಹಿತಾಹಿತವನ್ನು ಬಲ್ಲ ಕಃ=ಯಾವನು ತಾನೇ ತ್ರಿವಿಷ್ಟಪಪತೇಃ ಅಪಿ–ಸ್ವರ್ಗಾಧಿಪತಿಯದಾದರೂ ಲಕ್ಷ್ಮೀಂ=ಸಂಪತ್ತನ್ನು ಗೃಧ್ಯೇತ್=ಅಭಿಕಾಂಕ್ಷಿಸಿಯಾನು? ಯಯಾ–ಯಾವ ಸಂಪತ್ತಿನಿಂದ ವಿಬುಧೇಶ್ವರಃ (ಅಪಿ)=ಸಾತ್ವಿಕರಾದ ದೇವತೆಗಳಿಗೆ ರಾಜನಾದರೂ ಅಹಂ=ನಾನು ಅದ್ಯ=ಈಗ ಆಸುರಂ ಭಾವಂ= ದುಷ್ಟಭಾವವನ್ನು (ಗುರುಗಳನ್ನೂ ಗೌರವಿಸದಿರುವ ಮನೋಭಾವವನ್ನು) ನೀತಃ=

ಆ ಕೂಡಲೇ ಇಂದ್ರದೇವರು ತಾವು ಮಾಡಿದ ಗುರುತಿರಸ್ಕಾರವನ್ನು ಮನಗಂಡರು. ತಾವಾಗಿಯೇ ತಮ್ಮನ್ನು ತಾವೇ ಸಭೆಯಲ್ಲಿ ಹಳಿದುಕೊಂಡರು. 'ಅಯ್ಯೋ! ನಾನು ಅನುಚಿತವನ್ನು ಮಾಡಿದೆ. ಅಲ್ಪಬುದ್ಧಿಯಾದ ನಾನು ಐಶ್ವರ್ಯಮತ್ತನಾಗಿ ತುಂಬಿದ ಸಭೆಯಲ್ಲಿ ಗುರುಗಳನ್ನು ಧಿಕ್ಕರಿಸಿದೆ. ಸಾತ್ವಿಕರಾದ ದೇವತೆಗಳಿಗೆ ನಾನು ರಾಜ. ಅಂತಹ ನನಗೇ ಈ ಸಂಪತ್ತು ಆಸುರಭಾವವನ್ನು ತಂದುಕೊಟ್ಟಿತು. ಅಂದಮೇಲೆ ಸ್ವರ್ಗಾಧಿಪತ್ಯದ ಸಂಪತ್ತಾದರೂ ಇದನ್ನು ಯಾವ

ಹೊಂದಿಸಲ್ಪಟ್ಟಿನು. ಆಸುರಭಾವವನ್ನು ತಂದುಕೊಡುವ ಸಂಪತ್ತನ್ನು ವಿವೇಕಿಗಳು ಯಾರೂ ಅಪೇಕ್ಷಿಸುವುದಿಲ್ಲವೆಂದು ತಾತ್ಪರ್ಯ. || ೧೨ ||

ಯೇ ಪಾರಮೇಷ್ಠ್ಯಂ ಧಿಷಣಮಧಿತಿಷ್ಠನ್ನ ಕಂಚನ ।
ಪ್ರತ್ಯುತ್ತಿಷ್ಠೇದಿತಿ ಬ್ರೂಯುರ್ಧರ್ಮಂ ತೇ ನ ಪರಂ ವಿದುಃ ||೧೩||

ರಾಜಯೋಗ್ಯ ಸಿಂಹಾಸನದಲ್ಲಿ ಕುಳಿತವನು ಏಳಬಾರದು ಎಂದು ಶಾಸ್ತ್ರಕಾರರ ಮಾತಿರುವಾಗ ಆಸುರಭಾವವನ್ನು ಹೊಂದಿಸಲ್ಪಟ್ಟಿನು ಎಂದು ಹೇಳಿದುದು ಹೇಗೆ ಸರಿಯಾದುದು? ಎಂದರೆ ಹೇಳುತ್ತಾರೆ. ಪಾರಮೇಷ್ಠ್ಯಂ ಧಿಷಣಂ- ರಾಜಸಿಂಹಾಸನ ದಲ್ಲಿ ಅಧಿತಿಷ್ಠನ್=ಕುಳಿತು ಕಂಚನ-ಯಾರಿಗೂ ನ ಪ್ರತ್ಯುತ್ತಿಷ್ಠೇತ್=ಇದಿರೆದ್ದು ಗೌರವಿಸಬಾರದು ಇತಿ=ಎಂದು ಯೇ=ತಾವೇ ಪಂಡಿತರೆಂದು ತಿಳಿದ ಯಾರು ಬ್ರೂಯುಃ=ಹೇಳುವರೋ ತೇ=ಅವರು ಪರಂ ಧರ್ಮಂ=ಉತ್ತಮವಾದ ಧರ್ಮ ವನ್ನು ನ ವಿದುಃ=ತಿಳಿದವರಲ್ಲ. || ೧೩ ||

ತೇಷಾಂ ಕುಪಥದೇಷ್ಟೄಣಾಂ ಪತತಾಂ ತಮಸಿ ಹ್ಯಧಃ ।
ಯೇ ಶ್ರದ್ದಧ್ಯುರ್ವಚಸ್ತೇ ವೈ ಮಜ್ಜಂತ್ಯಶ್ಮಪ್ಲವಾ ಇವ || ೧೪ ||

ಅಂತಹವರ ಮಾತಿನಲ್ಲಿ ನಂಬುಗೆಯಿಟ್ಟು ನಡೆಯುವವನಿಗೆ ಅನರ್ಥಫಲ ವಾಗುವುದಾದ್ದರಿಂದ ಬುದ್ಧಿವಂತನಾದವನು ಅದನ್ನು ನಂಬಬಾರದೆಂದು ಹೇಳುತ್ತಾರೆ. ಕುಪಥದೇಷ್ಟೄಣಾಂ=ಕೆಟ್ಟಮಾರ್ಗವನ್ನೇ ಕಂಡ ಅದ್ದರಿಂದಲೇ ಅಧಃ=ಕೆಳಗೆ ತಮಸಿ=ತಮಸ್ಸಿನಲ್ಲಿ (ನರಕದಲ್ಲಿ) ಪತತಾಂ=ಬೀಳುವ ತೇಷಾಂ=ಆ ಪಂಡಿತಮಾನಿ ಗಳ ವಚಃ=ಸಿಂಹಾಸನದಲ್ಲಿ ಕುಳಿತವನು ಪ್ರತ್ಯುತ್ಥಾನಮಾಡಬಾರದೆಂಬ ಮಾತನ್ನು ಯೇ=ಯಾರಾದರೆ ಶ್ರದ್ದಧ್ಯುಃ=ನಂಬುವರೋ ತೇ=ಅವರು ಅಶ್ಮಪ್ಲವಾಃ ಇವ= ಕಲ್ಲುದೋಣಿಗಳಲ್ಲಿ ಕುಳಿತವರು ನೀರಿನಲ್ಲಿ ಮುಳುಗುವಂತೆ ಮಜ್ಜಂತಿ ವೈ = ನರಕ ದಲ್ಲಿ ಮುಳುಗುವರಷ್ಟೆ! || ೧೪ ||

ಅಥಾಹಮಮರಾಚಾರ್ಯಮಗಾಧಧಿಷಣಂ ದ್ವಿಜಮ್ ।
ಪ್ರಸಾದಯಿಷ್ಯೇ ನಿಶಠಃ ಶೀರ್ಷ್ಣಾ ತಚ್ಚರಣಂ ಸ್ಪೃಶನ್ || ೧೫ ||

ವಿವೇಕಿಯು ತಾನೇ ಅಪೇಕ್ಷಿಸಿಯಾನು? ಕೆಲವರು ಸಿಂಹಾಸನದಲ್ಲಿ ಕುಳಿತಿರುವ ರಾಜನು ಯಾರಿಗೂ ಇದಿರೆದ್ದು ಗೌರವಿಸಬಾರದೆನ್ನುತ್ತಾರೆ. ಅವರಿಗೆ ಶ್ರೇಷ್ಠವಾದ ಧರ್ಮದ ಅರಿವಿಲ್ಲ. ಅವರು ದುರ್ಮಾರ್ಗ ದ್ರಷ್ಟಾರರು. ಅವರು ಕೆಳಗೆ ತಮಸ್ಸಿ ನಲ್ಲಿ-ನರಕದಲ್ಲಿ-ಬೀಳುವರು. ಅಂತಹವರ ಮಾತನ್ನು ನಂಬುವವರೂ ಕೂಡ ಕಲ್ಲು ದೋಣಿಗಳಲ್ಲಿ ಕುಳಿತವರು ನೀರಿನಲ್ಲಿ ಮುಳುಗುವಂತೆ ನರಕದಲ್ಲಿ ಮುಳುಗುತ್ತಾರೆ. ಆದ್ದರಿಂದ ನಾನೀಗಲೇ ಹೋಗಿ-ನಾಚಿಕೆಯಿಲ್ಲದವನಾಗಿ-ನನ್ನ ತಲೆಯಿಂದ ಅವರ ಪಾದವನ್ನು ಮುಟ್ಟುತ್ತಾ ಆ ಅತ್ಯಂತ ಬುದ್ಧಿಶಾಲಿಗಳೂ ಬ್ರಾಹ್ಮಣರೂ ಆದ ದೇವಾ ಚಾರ್ಯರನ್ನು ಪ್ರಸನ್ನೀಕರಿಸಿಕೊಳ್ಳುತ್ತೇನೆ.'

ಅಥ=ನಾನು ಮಾಡಿದ ಕೆಲಸವು ಹೀಗೆ ಅನರ್ಥಕಾರಿಯಾದ್ದರಿಂದ ಅಹಂ= ನಾನು ವಿಶಠಃ ಸ೯=ನಾಚಿಕೆಯಿಲ್ಲದವನಾಗಿ ಶೀರ್ಷ್ಣಾ=ನನ್ನ ತಲೆಯಿಂದ ತಚ್ಚರಣಂ=ಅವರ ಪಾದಗಳನ್ನು ಸ್ಪೃಶ೯=ಮುಟ್ಟುತ್ತಾ (ತಲೆಯಿಂದ ನಮಸ್ಕರಿಸಿ) ಅಗಾಧಧಿಷಣಂ=ಆಳವಾದ ಬುದ್ಧಿಯುಳ್ಳ ದ್ವಿಜಂ=ಬ್ರಾಹ್ಮಣನಾದ ಅಮರಾ-ಚಾರ್ಯಂ=ದೇವತೆಗಳ ಗುರುವಾದ ಬೃಹಸ್ಪತ್ಯಾಚಾರ್ಯರನ್ನು ಪ್ರಸಾದಯಿಷ್ಯೇ= ಪ್ರಸನ್ನೀಕರಿಸಿಕೊಳ್ಳುವೆನು. || ೧೫ ||

ಏವಂ ಚಿಂತಯತಸ್ತಸ್ಯ ಮಘೋನೋ ಭಗವಾ೯ ಗೃಹಾತ್ ।
ಬೃಹಸ್ಪತಿರ್ಗತೋಽದೃಷ್ಟಾಂ ಗತಿಮಧ್ಯಾತ್ಮಮಾಯಯಾ ॥ ೧೬ ॥

ಏವಂ=ಮೇಲೆ ಹೇಳಿದಂತೆ ತಸ್ಯ=ಆ ಮಘೋನಃ=ಇಂದ್ರದೇವರು ಚಿಂತ-ಯತಃ (ಸತಃ)=ಆಲೋಚಿಸುತ್ತಿರಲು ಭಗವಾ೯=ಉತ್ಪತ್ತ್ಯಾದಿಗಳನ್ನು ಬಲ್ಲ ಬೃಹಸ್ಪತ್ಯಾಚಾರ್ಯರು ಅಧ್ಯಾತ್ಮಮಾಯಯಾ=ತಮ್ಮ ಯೋಗಸಾಮರ್ಥ್ಯದಿಂದ ಗೃಹಾತ್=ಮನೆಯಿಂದ ಅದೃಷ್ಟಾಂ ಗತಿಂ=ಕಣ್ಣಿಗೆ ಕಾಣದಿರುವ ಸ್ಥಿತಿಯನ್ನು ಗತಃ=ಹೊಂದಿದರು. (ಮನೆಯಲ್ಲಿಯೇ ಇದ್ದರೂ ಕಣ್ಣಿಗೆ ಕಾಣದಾದರೆಂದು ತಾತ್ಪರ್ಯ.) || ೧೬ ||

ಗುರೋರ್ನಾಧಿಗತಃ ಸಂಜ್ಞಾಂ ಪರೀಕ್ಷ೯ ಭಗವಾ೯ ಸ್ವರಾಟ್ ।
ಧ್ಯಾಯ೯ ಧಿಯಾ ಸುರೈರ್ಯುಕ್ತಃ ಶರ್ಮ ನಾಲಭತಾತ್ಮನಃ ॥೧೭॥

ಭಗವಾ೯=ಪೂಜ್ಯರಾದ ಸ್ವರಾಟ್=ಸ್ವರ್ಗಾಧಿಪತಿಗಳಾದ ಇಂದ್ರದೇವರು ಧಿಯಾ=ಬುದ್ಧಿಯಿಂದ ಧ್ಯಾಯ೯=ಧ್ಯಾನಮಾಡುತ್ತಾ ಪರೀಕ್ಷ೯=ಪರೀಕ್ಷಿಸುತ್ತಾ ಗುರೋಃ=ಬೃಹಸ್ಪತ್ಯಾಚಾರ್ಯರ ಸಂಜ್ಞಾಂ=ಎಲ್ಲಿರುವರೆಂಬ ಸ್ವರೂಪವಿಷಯಕ ಜ್ಞಾನವನ್ನು ನ ಅಧಿಗತಃ (ಸ೯)=ಹೊಂದದವರಾಗಿ ಸುರೈಃ=ದೇವತೆಗಳಿಂದ ಯುಕ್ತಃ=ಕೂಡಿ ಆತ್ಮನಃ=ತಮ್ಮ(ಲ್ಲಿ) ಶರ್ಮ=ಸುಖವನ್ನು ನ ಅಲಭತ=ಹೊಂದ ಲಿಲ್ಲ. || ೧೭ ||

ತಚ್ಛ್ರುತ್ವೈವಾಸುರಾಃ ಸರ್ವೇ ಆಶ್ರಿತ್ಯೌಶನಸಂ ಮತಮ್ ।
ದೇವಾ೯ ಪ್ರತ್ಯುದ್ಯಮಂ ಚಕ್ರುರ್ದುರ್ಮದಾ ಆತತಾಯಿನಃ ॥ ೧೮ ॥

ಹೀಗೆ ಇಂದ್ರದೇವರು ಆಲೋಚಿಸುತ್ತಿರಲು ಪೂಜ್ಯರಾದ ಬೃಹಸ್ಪತ್ಯಾಚಾರ್ಯರು ತಮ್ಮ ಯೋಗಸಾಮರ್ಥ್ಯದಿಂದ ಮನೆಯಿಂದ ಹೊರಟು ಯಾರಿಗೂ ಕಾಣದಂತಹ ರೀತಿಯಲ್ಲಿ ಇದ್ದುಬಿಟ್ಟರು. ಇಂದ್ರದೇವರು ಪರೀಕ್ಷಿಸಿದರೂ ಗುರುಗಳು ಎಲ್ಲಿರುವ ರೆಂಬುದು ತಿಳಿಯಲಾಗಲಿಲ್ಲ. ಮನಸ್ಸಿನಿಂದ ಆಲೋಚಿಸಿದರು. ದೇವತೆಗಳಿಂದ ಕೂಡಿದ ಅವರಿಗೆ ಮನಃಶಾಂತಿಯು ದೊರೆಯಲಿಲ್ಲ.

ಗುರುಗಳಿಂದ ದೇವತೆಗಳು ಪರಿತ್ಯಕ್ತರಾಗಿರುವರೆಂಬುದನ್ನು ಕೇಳಿದೊಡನೆಯೇ ಎಲ್ಲ ಅಸುರರೂ ಶುಕ್ರಾಚಾರ್ಯರ ಸಲಹೆಯಂತೆ ಯುದ್ಧೋನ್ಮತ್ತರಾಗಿ ಆಯುಧ

ತತ್ – ಇಂದ್ರನ ವಿಷಯದಲ್ಲಿ ಬೃಹಸ್ಪತ್ಯಾಚಾರ್ಯರು ವಿಮುಖರಾಗಿರುವುದನ್ನು ಶ್ರುತ್ವೈವ–ಕೇಳಿದ ಕೂಡಲೆ ಔಶನಸಂ=ಶುಕ್ರಾಚಾರ್ಯರ ಮತಂ=ಅಭಿಪ್ರಾಯವನ್ನು ಆಶ್ರಿತ್ಯ=ಅನುಸರಿಸಿ ದುರ್ಮದಾಃ=ದುಷ್ಟಮದದಿಂದ ಕೂಡಿದ ಸರ್ವೇ ಅಸುರಾಃ–ಎಲ್ಲ ಅಸುರರೂ ಆತತಾಯಿನಃ ಸಂತಃ=ಅಸ್ತ್ರಶಸ್ತ್ರಸನ್ನದ್ಧರಾಗಿ ದೇವಾನ್ ಪ್ರತಿ=ದೇವತೆಗಳಮೇಲೆ ಉದ್ಯಮಂ=ಯುದ್ಧಪ್ರಯತ್ನವನ್ನು ಚಕ್ರುಃ–ಮಾಡಿದರು. || ೧೮ ||

ತೈರ್ವಿಸೃಷ್ಟೇಷುಭಿಸ್ತೀಕ್ಷ್ಣೈರ್ನಿರ್ಭಿನ್ನಾಂಗೋರುಬಾಹವಃ ।
ಬ್ರಹ್ಮಾಣಂ ಶರಣಂ ಜಗ್ಮುಃ ಸಹೇಂದ್ರಾ ನತಕಂಧರಾಃ ॥ ೧೯ ॥

ತೈಃ = ಆ ಅಸುರರಿಂದ ವಿಸೃಷ್ಟೇಷುಭಿಃ – ಬಿಡಲ್ಪಟ್ಟ ಬಾಣಗಳಿಂದ ತೀಕ್ಷ್ಣೈಃ – ಚೂಪಾದವುಗಳಿಂದ ನಿರ್ಭಿನ್ನಾಂಗೋರುಬಾಹವಃ – ಗಾಯಪಡಿಸಲ್ಪಟ್ಟ ಅವಯವಗಳು (ಶಿರಸ್ಸುಗಳು), ತೊಡೆಗಳು ಮತ್ತು ತೋಳುಗಳುಳ್ಳ ಸಹೇಂದ್ರಾಃ=ಇಂದ್ರದೇವರಿಂದ ಸಹಿತರಾದ (ದೇವಾಃ) - ದೇವತೆಗಳು ನತಕಂಧರಾಃ (ಸಂತಃ) – ಕುತ್ತಿಗೆಯನ್ನು ತಗ್ಗಿಸಿದವರಾಗಿ ಬ್ರಹ್ಮದೇವರನ್ನು ಮೊರೆಹೊಕ್ಕರು. || ೧೯ ||

ತಾಂಸ್ತಥಾಭ್ಯರ್ದಿತಾನ್ ವೀಕ್ಷ್ಯ ಭಗವಾನಾತ್ಮಭೂರಜಃ ।
ಕೃಪಯಾ ಪರಯಾ ದೇವ ಉವಾಚ ಪರಿಸಾಂತ್ವಯನ್ ॥ ೨೦ ॥

ಆತ್ಮಭೂಃ–ಶ್ರೀಹರಿಯಿಂದ ಹುಟ್ಟಿದ ಪೂಜ್ಯರಾದ ಅಜಃ ಬ್ರಹ್ಮದೇವರು ತಥಾ–ಆರೀತಿಯಲ್ಲಿ ಅಭ್ಯರ್ದಿತಾನ್–ಅಸುರರಿಂದ ನೋಯಿಸಲ್ಪಟ್ಟ ತಾನ್–ಆ ದೇವತೆಗಳನ್ನು ವೀಕ್ಷ್ಯ–ನೋಡಿ ಪರಯಾ=ಅತಿಶಯವಾದ ಕೃಪಯಾ–ಕರುಣೆಯಿಂದ ಪರಿಸಾಂತ್ವಯನ್=ಅವರನ್ನು ಸಮಾಧಾನಪಡಿಸುತ್ತಾ ಉವಾಚ–ಹೇಳಿದರು. || ೨೦ ||

ಬ್ರಹ್ಮೋವಾಚ—

ಅಹೋ ಬತ ಸುರಶ್ರೇಷ್ಠಾ ಹ್ಯಭದ್ರಂ ವಃ ಕೃತಂ ಮಹತ್ ।
ಬ್ರಹ್ಮಿಷ್ಠಂ ಬ್ರಾಹ್ಮಣಂ ದಾಂತಮೈಶ್ವರ್ಯಾನ್ನಾಭ್ಯನಂದತ ॥೨೧॥

ಗಳನ್ನು ಧರಿಸಿ ದೇವತೆಗಳ ಮೇಲೆ ಯುದ್ಧಹೂಡಿದರು. ಅವರು ಬಿಟ್ಟ ತೀಕ್ಷ್ಣ ಬಾಣಗಳಿಂದ ದೇವತೆಗಳ ಶಿರಸ್ಸು, ತೊಡೆ ಮತ್ತು ತೋಳುಗಳಲ್ಲಿ ಗಾಯಗಳಾದುವು. ಕತ್ತು ಬಗ್ಗಿಸಿದವರಾಗಿ ದೇವತೆಗಳು ಇಂದ್ರದೇವರೊಂದಿಗೆ ಬ್ರಹ್ಮದೇವರ ಮೊರೆ ಹೊಕ್ಕರು.

ಶ್ರೀಹರಿಯ ಮಕ್ಕಳಾದ ಬ್ರಹ್ಮದೇವರು ಅಸುರರಿಂದ ಆ ರೀತಿಯಲ್ಲಿ ಪೀಡಿತರಾಗಿದ್ದ ದೇವತೆಗಳನ್ನು ನೋಡಿದರು. ಅತ್ಯಂತ ಕನಿಕರದಿಂದ ಅವರು ದೇವತೆ

ದೇವಶ್ರೇಷ್ಠರೇ, ಅಹೋ ಬತ=ಬಹಳ ಶೋಚನೀಯವು. ವಃ=ನಿಮ್ಮಿಂದ ಮಹತ್=ಅತಿಶಯವಾದ ಅಭದ್ರಂ=ಅಧರ್ಮವು ಕೃತಂ ಹಿ=ಮಾಡಲ್ಪಟ್ಟಿರುವುದಷ್ಟೆ. ಬ್ರಹ್ಮಿಷ್ಠಂ = ಶ್ರೀಹರಿಯಲ್ಲಿಯೇ ನಿಷ್ಠೆಯುಳ್ಳ ದಾಂತಂ = ಇಂದ್ರಿಯ ನಿಗ್ರಹವುಳ್ಳ ಬ್ರಾಹ್ಮಣಂ = ಬ್ರಹ್ಮಾಪರೋಕ್ಷಿಯಾದ ಬೃಹಸ್ಪತ್ಯಾಚಾರ್ಯನನ್ನು ಐಶ್ವರ್ಯಾತ್=ಸಂಪತ್ತಿನ ಮದದಿಂದ ನೀವು ನಾಭ್ಯನಂದತ=ಅಭಿನಂದಿಸಲಿಲ್ಲ. || ೨೧ ||

ತಸ್ಯಾಯಮನಯಸ್ಯಾಸೀತ್ಪರೇಭ್ಯೋ ವಃ ಪರಾಭವಃ ।
ಪ್ರಕ್ಷೀಣೇಭ್ಯಃ ಸ್ವವೈರಿಭ್ಯಃ ಸಮೃದ್ಧಾನಾಂ ಚ ಯತ್ಸುರಾಃ ॥೨೨॥

ಹೇ ಸುರಾಃ=ದೇವತೆಗಳೇ, ಸಮೃದ್ಧಾನಾಂ ಚ=ಸಂಪತ್ಸಮೃದ್ಧಿಯುಳ್ಳವರಾದರೂ ವಃ=ನಿಮಗೆ ಪ್ರಕ್ಷೀಣೇಭ್ಯಃ=ಸಂಪತ್ತಿಲ್ಲದ ಸ್ವವೈರಿಭ್ಯಃ=ನಿಮ್ಮಿಂದ ವಧ್ಯಶತ್ರುಗಳಾದ ಪರೇಭ್ಯಃ=ಅಸುರರಿಂದಲೇ ಯತ್ (ಅಯಂ) ಪರಾಭವಃ=ಯಾವ ಈ ಸೋಲು ತಸ್ಯ ಅನಯಸ್ಯ=ಆ ಅನ್ಯಾಯಕ್ಕೆ ಆಸೀತ್=ಫಲವಾಗಿರುವುದು. ಇದರಿಂದ ಇದು ಅನ್ಯಾಯದ ಪರಿಪಾಕವೆಂದು ಹೇಳಿದಂತಾಯಿತು. || ೨೨ ||

ಮಘವನ್ ದ್ವಿಷತಃ ಪಶ್ಯ ಪ್ರಕ್ಷೀಣಾನ್ ಗುರ್ವತಿಕ್ರಮಾತ್ ।
ಸಂಪ್ರತ್ಯುಪಚಿತಾನ್ ಭೂಯಃ ಕಾವ್ಯಮಾರಾಧ್ಯ ಭಕ್ತಿತಃ ॥ ೨೩ ॥

ಮಘವನ್=ಇಂದ್ರನೇ, ದ್ವಿಷತಃ=ಶತ್ರುಗಳನ್ನು ಗುರ್ವತಿಕ್ರಮಾತ್=ಗುರುಗಳಾದ ಶುಕ್ರಾಚಾರ್ಯರನ್ನು ಅತಿಕ್ರಮಿಸಿದ್ದರಿಂದ ಪ್ರಕ್ಷೀಣಾನ್=ಕ್ಷಯಹೊಂದಿದ್ದವರನ್ನೂ ಭೂಯಃ=ಮತ್ತೆ ಭಕ್ತಿಯಿಂದ ಕಾವ್ಯಂ=ಶುಕ್ರಾಚಾರ್ಯರನ್ನು ಆರಾಧ್ಯ=ಆರಾಧಿಸಿ ಸಂಪ್ರತಿ=ಈಗ ಉಪಚಿತಾನ್=ಸಂಪತ್ಸಮೃದ್ಧರನ್ನೂ ಪಶ್ಯ=ನೋಡು. ಗುರುತಿರಸ್ಕಾರವು ಅಪಚಯಕ್ಕೂ ಪುರಸ್ಕಾರವು ಉಪಚಯಕ್ಕೂ ಕಾರಣವೆಂಬಲ್ಲಿ ಶತ್ರುಗಳೇ ದೃಷ್ಟಾಂತವೆಂದರ್ಥ. || ೨೩ ||

ಗಳನ್ನು ಸಮಾಧಾನಪಡಿಸುತ್ತಾ 'ಅಯ್ಯೋ! ನೀವು ಬಹಳ ಅಮಂಗಳಕರ ಕೆಲಸವನ್ನು ಮಾಡಿರುವಿರಿ. ವಿಷ್ಣುನಿಷ್ಠನೂ ವಿಷ್ಣುವನ್ನು ಅಪರೋಕ್ಷೀಕರಿಸಿಕೊಂಡವನೂ ಇಂದ್ರಿಯನಿಗ್ರಹವಂತನೂ ಆದ ಗುರುವನ್ನು ಐಶ್ವರ್ಯಮದದಿಂದ ಆದರಿಸದೆ ಹೋದಿರಿ. ಆ ನಿಮ್ಮ ದುರ್ನಡತೆಯ ಫಲವಾಗಿ ನಿಮಗೆ ಶತ್ರುಗಳಿಂದ ಪರಾಜಯವಾಯಿತು. ನೀವು ಸಂಪತ್ಸಮೃದ್ಧರಾಗಿದ್ದರೂ ಕ್ಷೀಣಸಂಪತ್ತಿನ ನಿಮ್ಮ ಶತ್ರುಗಳಿಂದ ನೀವೇ ಸೋತಿರಿ. ಇಂದ್ರದೇವ, ನಿನ್ನ ಶತ್ರುಗಳ ಉದಾಹರಣೆಯನ್ನೇ ತೆಗೆದುಕೊ. ಮೊದಲು ಅವರ ಗುರುಗಳಾದ ಶುಕ್ರಾಚಾರ್ಯರನ್ನು ಅತಿಕ್ರಮಿಸಿದ್ದರಿಂದ ಅವರು ಕ್ಷೀಣಬಲರಾದರು. ಈಗ ಮತ್ತೆ ಭಕ್ತಿಯಿಂದ ಅವರನ್ನು ಆರಾಧಿಸಿ ಬಲಿಷ್ಠರಾಗಿರು

ಆದದೀರನ್ ನಿಲಯನಂ ಮಮಾಪಿ ಭೃಗುದೇವತಾಃ ॥ ೨೪ ॥

ತ್ರಿವಿಷ್ಟಪಂ ಕಿಂ ಗಣಯಂತ್ಯಭೇದ್ಯಂ

ಮಂತ್ರಾ ಭೃಗೂಣಾಮನುಶಿಕ್ಷಿತಾರ್ಥಾಃ ।

ಭೃಗುದೇವತಾಃ-ಶುಕ್ರಾಚಾರ್ಯನನ್ನು ದೇವತೆಯೆಂದೇ ಉಪಾಸಿಸುತ್ತಿರುವ ಈ ಅಸುರರು ಅಭೇದ್ಯವಾದ ಮಮ ನಿಲಯನಂ ಅಪಿ - ನನ್ನ ಸತ್ಯಲೋಕವನ್ನೂ ಸಹ ಆದದೀರ್ರ-ತೆಗೆದುಕೊಳ್ಳುವರು. ನಿಮ್ಮ ವಾಸಸ್ಥಾನವಾದ ಸ್ವರ್ಗವನ್ನು ಕೊಳ್ಳೆಹೊಡೆದದ್ದೇನು ಅತಿಶಯ ? ಎಂದಭಿಪ್ರಾಯ. ಅನುಶಿಕ್ಷಿತಾರ್ಥಾಃ-ಚನ್ನಾಗಿ ಪ್ರಯೋಜನವನ್ನು ಸಾಧಿಸಿದ ಭೃಗೂಣಾಂ-ಶುಕ್ರಾಚಾರ್ಯರ ಮಂತ್ರಾಃ-ನೀತಿಗಳು (ಉಪದೇಶಗಳು) ತ್ರಿವಿಷ್ಟಪಂ-ಸ್ವರ್ಗವನ್ನು ಅಭೇದ್ಯಂ-ಭೇದಿಸಲು ಅಸಾಧ್ಯವೆಂದು ಗಣಯಂತಿ ಕಿಂ-ಪರಿಗಣಿಸುವುವೇ ? ಇಲ್ಲವೆಂದರ್ಥ. ಅಥವಾ ಶುಕ್ರಾಚಾರ್ಯರ ಮಂತ್ರೋಪದೇಶವುಳ್ಳ ಪ್ರಯೋಜನವನ್ನು ಹೇಗೆ ಸಾಧಿಸಬೇಕೆಂಬುದನ್ನು ಚನ್ನಾಗಿ ಅವರಿಂದ ಕಲಿತಿರುವ ಈ ಅಸುರರು ಸ್ವರ್ಗವನ್ನು ಭೇದಿಸಲಾಗದ್ದೆಂದು ತಿಳಿಯುವರೇನು ? ಎಂದಿಗೂ ತಿಳಿಯುವುದಿಲ್ಲವೆಂದರ್ಥ. ಸ್ವರ್ಗವನ್ನು ಗೆಲ್ಲುವುದು ಅವರಿಗೆ ಸುಲಭವೆಂದು ತಾತ್ಪರ್ಯ. ॥ ೨೪ ॥

ನ ವಿಪ್ರಗೋವಿಂದಗವೀಶ್ವರಾಣಾಂ

ಭವಂತ್ಯಭದ್ರಾಣಿ ನರೇಶ್ವರಾಣಾಮ್ ॥ ೨೫ ॥

ಬ್ರಾಹ್ಮಣಶಕ್ತಿಯ ವೈಭವವು ಅಚಿಂತ್ಯವಾದುದೆಂದು ಹೇಳುತ್ತಾರೆ. ವಿಪ್ರ-ಬ್ರಾಹ್ಮಣರೂ ಗೋವಿಂದ-ಶ್ರೀಹರಿಯೂ ಗೋ-ಗೋವುಗಳೂ ಇವೇ ಈಶ್ವರಾಣಾಂ-ಸ್ವಾಮಿಗಳಾಗಿಯುಳ್ಳ ನರೇಶ್ವರಾಣಾಂ (ಏವ) - ರಾಜರಿಗೇ ಅಭದ್ರಾಣಿ-ಸೋಲು ಮೊದಲಾದ ಅಮಂಗಳಗಳು ನ ಭವಂತಿ - ಆಗುವುದಿಲ್ಲ. ಬ್ರಾಹ್ಮಣ, ಶ್ರೀಹರಿ ಮತ್ತು ಗೋವುಗಳ ಅನುಗ್ರಹವಿಲ್ಲದವರಿಗೆ ಅಭದ್ರಗಳು ತಪ್ಪಿದ್ದಲ್ಲವೆಂದು ತಾತ್ಪರ್ಯ. ಬ್ರಾಹ್ಮಣರಲ್ಲಿ ಭಕ್ತಿಯು ಶ್ರೀಹರಿಯಲ್ಲಿ ಭಕ್ತಿಯನ್ನು ಬಿಟ್ಟಿರುವುದಿಲ್ಲವೆಂದು ತಿಳಿಸುವುದಕ್ಕಾಗಿ ಒಟ್ಟಿಗೇ ಹೇಳಿದ್ದು. ಅದೂ ತಾರತಮ್ಯಕ್ಕೆ ತಕ್ಕಂತೆ ಇದ್ದರೆ ಮಾತ್ರ ಶುಭಕರವೆಂದು ತಿಳಿಸಲು ಗೋವನ್ನೂ ಸೇರಿಸಿದರು. ॥೨೫॥

ವರು. ಶುಕ್ರಾಚಾರ್ಯನನ್ನು ದೇವತೆಯೆಂದೇ ಬಗೆದು ಭಕ್ತಿಮಾಡುತ್ತಿರುವ ಇವರು ನನ್ನ ವಾಸಸ್ಥಳವಾದ ಸತ್ಯಲೋಕವನ್ನು ಕೂಡ ತೆಗೆದುಕೊಳ್ಳಬಲ್ಲರು. ಶುಕ್ರಾಚಾರ್ಯರಿಂದ ಎಲ್ಲ ಪ್ರಯೋಜನವನ್ನೂ ಸಾಧಿಸುವ ಮಂತ್ರಾಲೋಚನೆಯುಳ್ಳ ಇವರು ಸ್ವರ್ಗವನ್ನು ಅಭೇದ್ಯವೆಂದು ಪರಿಗಣಿಸುವರೇ ? ಬ್ರಾಹ್ಮಣರು, ಶ್ರೀಹರಿ ಮತ್ತು ಗೋವುಗಳ ಅನುಗ್ರಹಕ್ಕೆ ಪಾತ್ರರಾದ ರಾಜರಿಗೆ ಮಾತ್ರ ಸೋಲು ಮೊದಲಾದ ಯಾವ ಅಮಂಗಳವೂ ಆಗುವುದಿಲ್ಲ. ಆದ್ದರಿಂದ ನೀವು ಈಗಲೇ

ತದ್ವಿಶ್ವರೂಪಂ ಭಜತಾಶು ವಿಪ್ರಂ
ತಪಸ್ವಿನಂ ತ್ವಾಷ್ಟ್ರಮಥಾತ್ಮವಂತಮ್ ।
ಸಭಾಜಿತೋಽರ್ಥಾನ್ ಸ ವಿಧಾಸ್ಯತೇ ವೋ
ಯದಿ ಕ್ಷಮಿಷ್ಯಧ್ವಮುತಾಸ್ಯ ಕರ್ಮ ॥ ೨೬ ॥

ತತ್=ಗುರ್ವನುಗ್ರಹವೇ ಶ್ರೇಯಸ್ಕರವಾದ್ದರಿಂದ ತಪಸ್ವಿನಂ=ತಪೋವಂತನಾದ ಅಥ=ಮತ್ತು ಆತ್ಮವಂತಂ=(೧) ಆತ್ಮಜ್ಞಾನಿಯಾದ (೨) ಮನಸ್ಸನ್ನು ವಶಪಡಿಸಿಕೊಂಡಿರುವ ವಿಪ್ರಂ=ಬ್ರಾಹ್ಮಣನಾದ ತ್ವಾಷ್ಟ್ರಂ=ತ್ವಷ್ಟೃವಿನ ಮಗನಾದ ವಿಶ್ವರೂಪಂ=ವಿಶ್ವರೂಪಾಚಾರ್ಯನನ್ನು ಆಶು = ಕಾಲಕಳೆಯದೆ ಜಾಗ್ರತೆಯಾಗಿ ಭಜತ=ಸೇವಿಸಿರಿ. ಅಸ್ಯ ಈ ವಿಶ್ವರೂಪಾಚಾರ್ಯನ ಕರ್ಮ ಉತ = ಅಸುರಪಕ್ಷಪಾತಿತ್ವರೂಪವಾದ ಕರ್ಮವನ್ನೂ ಯದಿ ಕ್ಷಮಿಷ್ಯಧ್ವಂ = ನೀವು ಸಹಿಸಿಕೊಂಡದ್ದೇ ಆದರೆ ಸಭಾಜಿತಃ=ಇದರಿಂದ ನಿಮ್ಮಿಂದ ಸನ್ಮಾನಿತನಾದ ಸಃ=ಆ ವಿಶ್ವರೂಪಾಚಾರ್ಯನು ವಃ=ನಿಮಗೆ ಅರ್ಥಾನ್=ಇಂದಿನ ಮತ್ತು ಮುಂದಿನ ಎಲ್ಲ ಪ್ರಯೋಜನಗಳನ್ನೂ ವಿಧಾಸ್ಯತೇ=ಮಾಡಿಕೊಡುವನು. ವಿ.ಅ. ಅಥ ಎಂಬುದರಿಂದ ತಪಸ್ವಿತ್ವ ಮೊದಲಾದ ಗುಣಗಳಿಗಿಂತ ಆತ್ಮಜ್ಞಾನವು ಉತ್ತಮ ಗುಣವೆಂದೂ ಅದಕ್ಕಿಂತ ಬೇರೆ ಕಲ್ಯಾಣಗುಣವಿಲ್ಲವೆಂದೂ, ಅರ್ಥಾನ್ ಎಂಬುದರಿಂದ ಒಂದೇ ಪ್ರಯೋಜನವಲ್ಲ ಅಪೇಕ್ಷಿತವಾದ ಎಲ್ಲ ಪ್ರಯೋಜನಗಳನ್ನೂ ಹೊಂದಬಹುದೆಂದೂ, ವಿಧಾಸ್ಯತೇ ಎಂಬುದರಿಂದ ಈಗಲೇ ಅಲ್ಲ ಮುಂದೆಯೂ ನಿಮ್ಮ ಇಷ್ಟಗಳನ್ನು ಸಾಧಿಸಿಕೊಡುವಲ್ಲಿ ವಿಶ್ವರೂಪಾಚಾರ್ಯನೊಬ್ಬನೇ ಸಮರ್ಥನೆಂದೂ ಸೂಚಿಸಿರುವರು. ಯದಿ ಎಂಬುದರಿಂದ ದೇವತೆಗಳು ಅವನನ್ನು ಗೌರವಿಸುವ ರೀತಿಯನ್ನು ಹೇಳಿರುವರು. ॥ ೨೬ ॥

ಶ್ರೀ ಶುಕ ಉವಾಚ—

ತ ಏವಮುದಿತಾ ರಾಜನ್ ಬ್ರಹ್ಮಣಾ ವಿಗತಜ್ವರಾಃ ।
ಋಷಿಂ ತ್ವಾಷ್ಟ್ರಮುಪವ್ರಜ್ಯ ಪರಿಷ್ವಜ್ಯೇದಮಬ್ರುವನ್ ॥ ೨೭ ॥

ರಾಜನೇ, ಬ್ರಹ್ಮದೇವರಿಂದ ಏವಂ=ಈರೀತಿಯಲ್ಲಿ ಉದಿತಾಃ=ಹೇಳಿಸಿಕೊಂಡ ತೇ = ಆ ದೇವತೆಗಳು ವಿಗತಜ್ವರಾಃ (ಸಂತಃ)=ಸಂತಾಪವನ್ನು ಕಳೆದುಕೊಂಡವ

ಬ್ರಾಹ್ಮಣನೂ ತಪಸ್ವಿಯೂ ಆತ್ಮಜ್ಞಾನಿಯೂ ಆದ ತ್ವಷ್ಟೃಪುತ್ರ ವಿಶ್ವರೂಪಾಚಾರ್ಯನನ್ನು ಸೇವಿಸಿರಿ. ಅವನು ಮಾಡುವ ಅಸುರಪಕ್ಷಪಾತಿತ್ವರೂಪ ಕರ್ಮವನ್ನು ನೀವು ಸಹಿಸಿದಲ್ಲಿ ನಿಮ್ಮಿಂದ ಸನ್ಮಾನಿತನಾದ ಅವನು ನಿಮ್ಮೆಲ್ಲ ಪ್ರಯೋಜನಗಳನ್ನೂ ಸಾಧಿಸಿಕೊಡುವನು'-ಎಂದು ನುಡಿದರು.

ಶುಕಾಚಾರ್ಯರು—ರಾಜನ್, ಬ್ರಹ್ಮದೇವರಿಂದ ಹೀಗೆ ಹೇಳಿಸಿಕೊಂಡ ದೇವತೆಗಳಿಗೆ ಮನಸ್ಸಿನ ಬೇಗೆಯು ಹೋಯಿತು. ಜ್ಞಾನಿಯಾದ ತ್ವಷ್ಟೃಪುತ್ರ

ರಾಗಿ ತ್ವಷ್ಟೃಪುತ್ರನಾದ ಋಷಿಂ=ವಿಶ್ವರೂಪಾಚಾರ್ಯನನ್ನು ಉಪವ್ರಜ್ಯ= ಹೊಂದಿ ಪರಿಷ್ವಜ್ಯ=ಆಲಿಂಗಿಸಿಕೊಂಡು ಇದಂ = ಈ ಮುಂದೆ ಹೇಳುವ ಮಾತು ಗಳನ್ನು ಅಬ್ರುವನ್=ಹೇಳಿದರು. || ೨೭ ||

ದೇವಾ ಊಚುಃ—

ವಯಂ ತೇಽತಿಥಯಃ ಪ್ರಾಪ್ತಾ ಆಶ್ರಮಂ ಭದ್ರಮಸ್ತು ತೇ ।
ಕಾಮಃ ಸಂಪಾದ್ಯತಾಂ ತಾತ ಪಿತೄಣಾಂ ಸಮಯೋಚಿತಃ || ೨೮ ||

ಅತಿಥಯಃ=ನಿನ್ನಿಂದ ಆಹೂತರಾಗದೆ ಬರುವ ಅತಿಥಿಗಳಾಗಿ ವಯಂ=ನಿನ್ನ ಸೋದರಮಾವಂದಿರಾದ ನಾವು ತೇ=ನಿನ್ನ ಆಶ್ರಮಂ ನಿವಾಸಸ್ಥಾನವಾದ ಆಶ್ರಮಕ್ಕೆ ಪ್ರಾಪ್ತಾಃ=ಬಂದಿದ್ದೇವೆ. ತೇ=ನಿನಗೆ ಭದ್ರಂ=ಒಳ್ಳೆಯದು ಅಸ್ತು= ಆಗಲಿ. ತಾತ=ಮಗು, ಪಿತೄಣಾಂ=ನಿನ್ನ ತಂದೆಯಂತೆ ಗೌರವಾರ್ಹರಾದ ನಮ್ಮ ಸಮಯೋಚಿತಃ = ಈ ಕಾಲಕ್ಕೆ ತಕ್ಕ ಕಾಮಃ = ಪ್ರಯೋಜನವು (ಅಪೇಕ್ಷೆಯು) ಸಂಪಾದ್ಯತಾಂ=ಪೂರೈಸಲ್ಪಡಲಿ. || ೨೮ ||

ಪುತ್ರಾಣಾಂ ಹಿ ಪರೋ ಧರ್ಮಃ ಪಿತೃಶುಶ್ರೂಷಣಂ ಸತಾಮ್ ।
ಅಪಿ ಪುತ್ರವತಾಂ ಬ್ರಹ್ಮನ್ ಕಿಮುತ ಬ್ರಹ್ಮಚಾರಿಣಾಮ್ || ೨೯ ||

ಸತಾಂ=ಸಜ್ಜನರಾದ ಪುತ್ರಾಣಾಂ=ಮಕ್ಕಳ ಪರಃ ಧರ್ಮಃ=ಉತ್ತಮವಾದ ಧರ್ಮವು ಪಿತೃಶುಶ್ರೂಷಣಂ ಹಿ=ತಂದೆಯ ಸೇವೆಯೇ ಅಲ್ಲವೇ! ಬ್ರಹ್ಮನ್=ಬ್ರಹ್ಮ ಜ್ಞಾನಿಯೇ, ಈ ಪಿತೃಶುಶ್ರೂಷೆಯು ಪುತ್ರವತಾಂ (ಪುತ್ರಾಣಾಂ) ಅಪಿ=ಮಕ್ಕಳನ್ನು ಪಡೆದು ಪಿತೃಋಣಮುಕ್ತರಾದ ಮಕ್ಕಳಿಗೂ ಉತ್ತಮಧರ್ಮವೆಂದಮೇಲೆ ಬ್ರಹ್ಮಚಾರಿಣಾಂ (ಪುತ್ರಾಣಾಂ)=ಮಕ್ಕಳನ್ನು ಪಡೆಯದೆ ಪಿತೃಋಣಮುಕ್ತರಲ್ಲದ ಮಕ್ಕಳಿಗೆ ಪರಮಧರ್ಮವೆಂದು ಕಿಮುತ=ಹೇಳತಕ್ಕದ್ದೇನು? ಮಕ್ಕಳಿದ್ದ ಪಿತೃ ಗಳಿಗೂ ಮಕ್ಕಳಿಲ್ಲದ ಪಿತೃಸ್ಥಾನಾಪನ್ನರಿಗೂ ಇಬ್ಬರಿಗೂ ಪುತ್ರರು ಶುಶ್ರೂಷೆ ಮಾಡುವರು ಎಂದೂ ಅರ್ಥಮಾಡಿರುವರು. || ೨೯ ||

ಆಚಾರ್ಯೋ ಬ್ರಹ್ಮಣೋ ಮೂರ್ತಿಃ ಪಿತಾ ಮೂರ್ತಿಃ ಪ್ರಜಾಪತೇಃ ।
ಭ್ರಾತಾ ಮರುತ್ಪತೇರ್ಮೂರ್ತಿರ್ಮಾತಾ ಸಾಕ್ಷಾತ್ ಕ್ಷಿತೇಸ್ತನುಃ ||

ನನ್ನು ಹೊಂದಿ ಆಲಿಂಗಿಸಿಕೊಂಡು ಹೀಗೆಂದು ನುಡಿದರು. 'ನಾವು ಅತಿಥಿಗಳು ನಿನ್ನ ಆಶ್ರಮಕ್ಕೆ ಬಂದಿದ್ದೇವೆ. ನಿನಗೆ ಒಳ್ಳೆಯದಾಗಲಿ. ತಂದೆಗಳಾದ ನಮ್ಮ- ಈ ಸಮಯಕ್ಕೆ ತಕ್ಕ-ಇಷ್ಟವನ್ನು ನಡೆಸಿಕೊಡು ಮಗು! ಸತ್ಪುತ್ರರಿಗೆ ಪಿತೃಸೇವೆಯೇ ಉತ್ತಮ ಧರ್ಮ. ಬ್ರಹ್ಮಜ್ಞಾನಿಯೇ, ಮಕ್ಕಳಿದ್ದವರಿಗೂ ಪಿತೃಸೇವೆ ಧರ್ಮವಾಗಿರು ವಾಗ ಬ್ರಹ್ಮಚಾರಿಗಳಿಗೆ ಹೇಳತಕ್ಕದ್ದೇನು? ಆಚಾರ್ಯನಲ್ಲಿ ಬ್ರಹ್ಮದೇವರ, ತಂದೆ ಯಲ್ಲಿ ರುದ್ರದೇವರ, ಅಣ್ಣನಲ್ಲಿ ಇಂದ್ರದೇವರ, ತಾಯಿಯಲ್ಲಿ ಭೂದೇವಿಯ,

ದಯಾಯಾ ಭಗಿನೀ ಮೂರ್ತಿರ್ಧರ್ಮಸ್ಯಾತ್ಮಾತಿಥಿಃ ಸ್ವಯಮ್ ।
ಅಗ್ನೇರಭ್ಯಾಗತೋ ಮೂರ್ತಿಃ ಸರ್ವಭೂತಾನಿ ಚಾತ್ಮನಃ ॥ ೩೧ ॥

ತಂದೆ ಮೊದಲಾದವರಲ್ಲಿ ರುದ್ರಾದಿ ದೇವತೆಗಳ ವಿಶೇಷ ಸನ್ನಿಧಾನವಿರುವುದರಿಂದ ಅವರ ಶುಶ್ರೂಷೆಯಿಂದ ರುದ್ರಾದಿ ದೇವತೆಗಳ ಸೇವೆಯನ್ನೂ ಮಾಡಿದಂತಾಗುವುದು ಎಂದು ತಿಳಿಸುತ್ತಾರೆ. ಆಚಾರ್ಯಃ=ಗುರುವು ಬ್ರಹ್ಮಣಃ=ಚತುರ್ಮುಖ ಬ್ರಹ್ಮದೇವರ ಮೂರ್ತಿಃ . ಸನ್ನಿಧಾನ ಸ್ಥಾನವು. ಪಿತಾ=ತಂದೆಯು ಪ್ರಜಾಪತೇಃ=ರುದ್ರದೇವರ ಸನ್ನಿಧಾನ ಸ್ಥಾನವು. ಭ್ರಾತಾ=ಅಣ್ಣನು ಮರುತ್ಪತೇಃ=ಇಂದ್ರದೇವರ ಸನ್ನಿಧಾನ ಸ್ಥಾನವು. ಮಾತಾ=ತಾಯಿಯು ಸಾಕ್ಷಾತ್ ಭೂದೇವಿಯ ತನುಃ=ಆವಾಸಸ್ಥಾನವು. ಭಗಿನೀ=ಅಕ್ಕನು ದಯಾಯಾಃ=ದಯಾಭಿಮಾನಿ ದೇವತೆಯ ಸನ್ನಿಧಾನ ಸ್ಥಾನವು. ಅತಿಥಿಃ=ಕರೆಯದೆಯೇ ಆ ಹೊತ್ತಿಗೆ ಬರುವ ಬ್ರಾಹ್ಮಣನು ಸ್ವಯಂ ತಾನು ಧರ್ಮಸ್ಯ=ಯಮಧರ್ಮರಾಜರ ಆತ್ಮಾ=ಸನ್ನಿಧಾನ ಸ್ಥಾನವು. ಅಭ್ಯಾಗತಃ=ಆಹೂತನಾಗಿ ಆ ವೇಳೆಗೆ ಬಂದ ಬ್ರಾಹ್ಮಣನು ಅಗ್ನೇಃ=ಅಗ್ನಿದೇವರ ಸನ್ನಿಧಾನ ಸ್ಥಾನವು. ಸರ್ವಭೂತಾನಿ ಚ=ಎಲ್ಲ ಪ್ರಾಣಿಗಳೂ ಆತ್ಮನಃ=ಶ್ರೀಹರಿಯ ಸನ್ನಿಧಾನ ಸ್ಥಾನವು. 'ಏಕೋ ದೇವಃ ಸರ್ವಭೂತೇಷು ಗೂಢಃ' ಎಂಬ ಶ್ರುತಿಯಿದೆ. ಆದ್ದರಿಂದ ಆಚಾರ್ಯಾದಿಗಳ ಪೂಜೆಯಿಂದ ಅವರಲ್ಲಿ ಸನ್ನಿಹಿತರಾದ ಬ್ರಹ್ಮಾದಿ ದೇವತೆಗಳೂ ಪ್ರೀತರಾಗುವರೆಂದರ್ಥ. ॥ ೩೦, ೩೧ ॥

ತಸ್ಮಾತ್ಪಿತೄಣಾಮಾರ್ತಾನಾಮಾರ್ತಿಂ ಪರಪರಾಭವಾಮ್ ।
ತಪಸಾಽಪನಯಂಸ್ತಾತ ! ಸಂದೇಶಂ ಕರ್ತುಮರ್ಹಸಿ ॥ ೩೨ ॥

ತಾವು ಹೇಳಿದ ಮಾತು ಕರ್ತವ್ಯವೆಂಬುದರಲ್ಲಿ ಕಾರಣವೆಂದು ತಿಳಿಸಿ ಕೊನೆ ಮಾಡುತ್ತಾರೆ. ಮಗು, ತಸ್ಮಾತ್=ಪಿತೃಪೂಜೆಯಿಂದ ದೇವತೆಗಳೂ ಪ್ರೀತರಾಗುವುದರಿಂದ ಆರ್ತಾನಾಂ=ದುಃಖಿತರಾದ ಪಿತೃಗಳಾದ ನಮ್ಮ ಪರಪರಾಭವಾಂ=ಶತ್ರುಗಳಿಂದಾಗಿರುವ ಸೋಲೆಂಬ ಆರ್ತಿಂ=ದುಃಖವನ್ನು ತಪಸಾ=ನಿನ್ನ ತಪಸ್ಸಾಮರ್ಥ್ಯದಿಂದ ಅಪನಯನ್=ಹೋಗಲಾಡಿಸುವವನಾಗಿ ಸಂದೇಶಂ=ನಮ್ಮ ಅಪ್ಪಣೆಯನ್ನು ಕರ್ತುಂ=ನೆರವೇರಿಸಲು ಅರ್ಹಸಿ=ಯೋಗ್ಯನಾಗಿರುವೆ. ॥ ೩೨ ॥

ಅಕ್ಕನಲ್ಲಿ ದಯಾಭಿಮಾನಿಯ, ಅತಿಥಿಯಲ್ಲಿ ಸ್ವಯಂ ಯಮಧರ್ಮನ, ಅಭ್ಯಾಗತನಲ್ಲಿ ಅಗ್ನಿಯ, ಸರ್ವಪ್ರಾಣಿಗಳಲ್ಲಿಯೂ ಶ್ರೀಹರಿಯ ಸನ್ನಿಧಾನವು ವಿಶೇಷವಾಗಿರುವುದು. ಆದ್ದರಿಂದ ದುಃಖಕ್ಕೀಡಾಗಿರುವ ಪಿತೃಗಳಾದ ನಮ್ಮ ಶತ್ರುಗಳಿಂದ ಪರಾಜಯವೆಂಬ ಈ ದುಃಖವನ್ನು ಮಗು! ನಿನ್ನ ತಪಶ್ಶಕ್ತಿಯಿಂದ ಪರಿಹರಿಸು. ನಮ್ಮೀ ಅಪ್ಪಣೆಯನ್ನು ಮಾಡಲು ನೀನು ಅರ್ಹ. ಬ್ರಹ್ಮನಿಷ್ಠನೂ ಬ್ರಹ್ಮಜ್ಞಾನಿಯೂ ಗುರುವೂ ಆದ ನಿನ್ನನ್ನು ಪುರೋಹಿತನನ್ನಾಗಿ ವರಿಸುತ್ತೇವೆ. ನಿನ್ನ ಸಾಮರ್ಥ್ಯ

ವೃಣೀಮಹೇ ತ್ವೋಪಾಧ್ಯಾಯಂ ಬ್ರಹ್ಮಿಷ್ಠಂ ಬ್ರಾಹ್ಮಣಂ ಗುರುಮ್
ಯಥಾಂಜಸಾ ವಿಜೇಷ್ಯಾಮಃ ಸಪತ್ನಾಂಸ್ತವ ತೇಜಸಾ ॥ ೩೩ ॥

ಯಥಾ=ಹೇಗೆ ತವ=ನಿನ್ನ ತೇಜಸಾ=ಸಾಮರ್ಥ್ಯದಿಂದ ಸಪತ್ನಾನ್=ಶತ್ರುಗಳನ್ನು ಅಂಜಸಾ=ಸಂಪೂರ್ಣವಾಗಿ ವಿಜೇಷ್ಯಾಮಃ=ಗೆಲ್ಲುವೆವೋ ತಥಾ=ಹಾಗೆ ಬ್ರಹ್ಮನಿಷ್ಠನೂ ಬ್ರಹ್ಮಜ್ಞಾನಿಯೂ ಗುರುವೂ ಆದ ತ್ವಾಂ= ಚಿಕ್ಕವನಾದರೂ ನಿನ್ನನ್ನು ಉಪಾಧ್ಯಾಯಂ=ಪುರೋಹಿತನನ್ನಾಗಿ ವೃಣೀಮಹೇ=ವರಿಸುತ್ತೇವೆ. ಇದೇ ನಮ್ಮ ಸಂದೇಶವೆಂದರ್ಥ. ॥ ೩೩ ॥

ನ ಗರ್ಹಯಂತಿ ಹ್ಯರ್ಥೇಷು ಯವಿಷ್ಠಾಂಘ್ರ್ಯಭಿವಾದನಮ್ ।
ಛಂದೋಭ್ಯೋಽನ್ಯತ್ರ ನ ಬ್ರಹ್ಮನ್ ವಯೋ ಜ್ಯೈಷ್ಠ್ಯಸ್ಯ
ಕಾರಣಂ ॥ ೩೪ ॥

ನಾನು ನಿಮ್ಮ ಉಪಾಧ್ಯಾಯನೇ ಆದಲ್ಲಿ (ನೀವು ನನ್ನ ಕಾಲಿಗೆ ನಮಸ್ಕಾರ ಮಾಡಬೇಕಾಗುವುದು.) ನಿಮಗಿಂತ ಚಿಕ್ಕವನಾದ ನನಗೆ ನಮಸ್ಕಾರಮಾಡುವುದು ನಿಮಗೆ ನಿಂದಿತವೆಂದರೆ ಹೇಳುತ್ತಾರೆ. ಅರ್ಥೇಷು=ಪ್ರಯೋಜನವಿರುವಲ್ಲಿ ಯವಿಷ್ಠಾಂಘ್ರ್ಯಭಿವಾದನಂ=ಚಿಕ್ಕವರ ಕಾಲಿಗೆ ನಮಸ್ಕಾರವನ್ನು ನ ಗರ್ಹಯಂತಿ =ಶಾಸ್ತ್ರವೇತ್ತರು ನಿಂದಿಸುತ್ತಿಲ್ಲ. ಹಿ=ಇದು ಶಾಸ್ತ್ರಸಮ್ಮತವು. ಇದೂ ಅಲ್ಲದೆ ಆಚಾರ್ಯರಿಂದ ಕಲಿತ ವಿದ್ಯೆಯೇ ಸಾಧಿಸಬೇಕಾದುದನ್ನು ಸಾಧಿಸಿಕೊಡುವುದು. ವೇದವೇತ್ತನಾದ ಬ್ರಾಹ್ಮಣನಲ್ಲಿ 'ಎಲ್ಲ ದೇವತೆಗಳೂ ನಿವಾಸಿಸುವರು' ಇದೇ ಮೊದಲಾದ ಶ್ರುತಿಗಳಿಂದ ವೇದಾರ್ಥಜ್ಞಾನವೇ ಹಿರಿಯತನಕ್ಕೆ ಕಾರಣವೇ ಹೊರತು ವಯಸ್ಸಲ್ಲವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಬ್ರಹ್ಮನ್=ಬ್ರಹ್ಮಜ್ಞಾನಿಯೇ ಛಂದೋಭ್ಯಃ ಅನ್ಯತ್ರ=ವೇದಗಳಿಲ್ಲದೆ ವಯಃ=ಕೇವಲ ವಯಸ್ಸು ಜ್ಯೈಷ್ಠ್ಯಸ್ಯ= ಹಿರಿಯತನಕ್ಕೆ ನ ಕಾರಣಂ= ಪ್ರಯೋಜಕವಲ್ಲ. ವೇದಗಳೇ ಮುಖ್ಯ ಕಾರಣ. ಅವು ಇದ್ದಾಗ ವಯಸ್ಸೂ ಕಾರಣ. ನೀನು ವೇದಜ್ಞನಾದ್ದರಿಂದ ನಮಗಿಂತ ಹಿರಿಯನೆಂದು ಅಭಿಪ್ರಾಯ. ಛಂದೋಭ್ಯಃ ಎಂಬ ಪದದಿಂದ ವೇದಾರ್ಥಜ್ಞಾನವೆಂದು ಲಾಕ್ಷಣಿಕಾರ್ಥವನ್ನು ತೆಗೆದುಕೊಳ್ಳಬೇಕು. ಪಾಂಡವರು ಧೌಮ್ಯ ಮೊದಲಾದವರಿಗೆ ನಮಸ್ಕರಿಸಿರುವುದು ಕಂಡಿದೆಯಾದ್ದರಿಂದ ವೇದಾಭಿಜ್ಞನಾದ ನಿನ್ನ ಪಾದಾಭಿವಂದನೆಯೂ ನಿಂದಿತವೇನೂ ಅಲ್ಲವೆಂದು ತಾತ್ಪರ್ಯ. ॥ ೩೪ ॥

ದಿಂದ ನಮ್ಮ ಶತ್ರುಗಳಾದ ದೈತ್ಯರನ್ನು ಸಂಪೂರ್ಣವಾಗಿ ಗೆಲ್ಲಬೇಕು (ಇದೇ ನಮ್ಮ ಅಪ್ಪಣೆ). ಪ್ರಯೋಜನಕ್ಕಾಗಿ ಚಿಕ್ಕವನ ಪಾದಾಭಿವಂದನೆಯು ಶಾಸ್ತ್ರದಲ್ಲಿ ನಿಂದಿತವೇನಲ್ಲ. ಬ್ರಾಹ್ಮಣನೇ, ವೇದಗಳಿಲ್ಲದ ಕೇವಲ ವಯಸ್ಸು ಎಂದೂ ಹಿರಿಯತನಕ್ಕೆ ಕಾರಣವಾಗುವುದಿಲ್ಲ.' ಎಂದರು.

ಋಷಿರುವಾಚ—

ಅಭ್ಯರ್ಥಿತಃ ಸುರಗಣೈಃ ಪೌರೋಹಿತ್ಯೇ ಮಹಾತಪಾಃ ।
ಸ ವಿಶ್ವರೂಪಸ್ತಾನಾಹ ಪ್ರಸನ್ನಃ ಶ್ಲಕ್ಷ್ಣಯಾ ಗಿರಾ ॥ ೩೫ ॥

ದೇವತಾ ಸಮೂಹಗಳಿಂದ ಪೌರೋಹಿತ್ಯೇ = ಪೌರೋಹಿತ್ಯಕ್ಕಾಗಿ ಅಭ್ಯರ್ಥಿತಃ=ಯಾಚಿತರಾದ ಮಹಾತಪಾಃ=ಮಹಾತಪಸ್ವಿಗಳಾದ ಆ ವಿಶ್ವರೂಪಾ ಚಾರ್ಯರು ಪ್ರಸನ್ನರಾಗಿ ಶ್ಲಕ್ಷ್ಣಯಾ=ಮಧುರವಾದ ಗಿರಾ=ಮಾತಿನಿಂದ ತಾನ್= ಆ ದೇವತೆಗಳನ್ನು ಕುರಿತು ಆಹ=ಹೇಳಿದರು. || ೩೫ ||

ವಿಶ್ವರೂಪ ಉವಾಚ—

ವಿಗರ್ಹಿತಂ ಧರ್ಮಶೀಲೈರ್ಬ್ರಹ್ಮವರ್ಚ ಉಪವ್ಯಯಮ್ ।
ಕಥಂ ನು ಮದ್ವಿಧೋ ನಾಥಾ ಲೋಕೇಶೈರಭಿಯಾಚಿತಃ ॥
ಪ್ರತ್ಯಾಖ್ಯಾಸ್ಯತಿ ತಚ್ಛಿಷ್ಯಃ ಸ ಏವ ಸ್ವಾರ್ಥ ಉಚ್ಯತೇ ॥ ೩೬ ॥

ನಿಮ್ಮ ಯಾಚನೆಯು ಭಂಗವಾಗುವುದೆಂಬ ಭಯದಿಂದ ನಿಂದಿತವಾಗಿದ್ದರೂ ಈ ಪೌರೋಹಿತ್ಯವನ್ನು ಮಾಡುತ್ತೇನೆಂದು ಹೇಳುತ್ತಾರೆ. ಧರ್ಮಶೀಲೈಃ=ಧರ್ಮ ಕರ್ಮಗಳನ್ನೇ ಮಾಡುವ ಸ್ವಭಾವವುಳ್ಳ ಧರ್ಮಿಷ್ಠರಿಂದ ವಿಗರ್ಹಿತಂ=ಶ್ವಾನ ಯೋನಿಗೆ ಕಾರಣವೆಂದು ನಿಂದಿತವಾದ ಮತ್ತು ಬ್ರಹ್ಮವರ್ಚಸ್ಸನ್ನೇ ಹೋಗಲಾಡಿ ಸುವ ಪೌರೋಹಿತ್ಯವನ್ನು ಹೇ ನಾಥಾಃ=ರಕ್ಷಕರೇ ಲೋಕೇಶೈಃ=ನಿಮ್ಮಂತಹ ಲೋಕಪಾಲಕರಿಂದ ಅಭಿಯಾಚಿತಃ=ಆದರದಿಂದ ಯಾಚಿಸಲ್ಪಟ್ಟ ತಚ್ಛಿಷ್ಯಃ= ಅವರಿಂದ ಶಾಸನಕ್ಕೆ ಅರ್ಹನಾದ ಮದ್ವಿಧಃ=ನನ್ನಂತಹ ಬ್ರಾಹ್ಮಣನು ಕಥಂ ನು= ಹೇಗೆ ತಾನೇ ಪ್ರತ್ಯಾಖ್ಯಾಸ್ಯತಿ=ತಿರಿಸ್ಕರಿಸುವನು ? ಯಾವ ಕಾರಣದಿಂದಲೂ ತಿರಸ್ಕರಿಸುವುದು ಸಾಧ್ಯವಿಲ್ಲವೆಂದರ್ಥ. ಇದರಿಂದ ನಿಂದಿತವಾಗಿದ್ದರೂ ಸಾಧ್ಯವಿಲ್ಲ ವೆಂದು ಹೇಳಲಾಗುವುದಿಲ್ಲವೆಂದು ಅಭಿಪ್ರಾಯ. ಪರರ ಕಾರ್ಯವಾದ್ದರಿಂದ

ಶುಕಾಚಾರ್ಯರು—ಹೀಗೆ ದೇವತೆಗಳು ಮಹಾತಪಸ್ವಿಗಳಾದ ವಿಶ್ವರೂಪಾ ಚಾರ್ಯರನ್ನು ಪುರೋಹಿತತನಕ್ಕಾಗಿ ಕೇಳಿಕೊಂಡರು. ಪ್ರಸನ್ನರಾದ ಅವರು ದೇವತೆಗಳನ್ನು ಕುರಿತು ಮಧುರವಾದ ಮಾತಿನಿಂದ 'ಧರ್ಮಮಾಡುವುದೇ ಸ್ವಭಾವ ವಾಗಿಯುಳ್ಳ ಧರ್ಮವಂತರು ನಾಯಿಯ ಜನ್ಮಕ್ಕೆ ಕಾರಣವೆಂದು ಪೌರೋಹಿತ್ಯ ವನ್ನು ಅಲ್ಲಗಳೆದಿದ್ದಾರೆ. ಅದರಿಂದ ಬ್ರಹ್ಮವರ್ಚಸ್ಸು ನಾಶವಾಗುತ್ತದೆ. ನೀವು ರಕ್ಷಕರು ; ಲೋಕಪಾಲಕರು. ಆದರದಿಂದ ನನ್ನನ್ನು ಕೇಳುತ್ತಿದ್ದೀರಿ. ನಾನಾದರೋ ನಿಮ್ಮ ಶಾಸನಕ್ಕೆ ಅರ್ಹ. ನನ್ನಂತಹವನು ನಿಮ್ಮ ಮಾತನ್ನು ತಿರಸ್ಕರಿಸುವುದಾದರೂ ಹೇಗೆ ? ಗುರುಗಳ ಆಜ್ಞೆಯನ್ನು ಮೀರದಿರುವುದರಿಂದ ಶಿಷ್ಯನಿಗೆ ಪ್ರಯೋಜನವಿದೆ. (ಆದ್ದರಿಂದ ನಿಮ್ಮ ಮಾತನ್ನು ತಿರಸ್ಕರಿಸಿ ನನ್ನ ಪ್ರಯೋಜನವನ್ನೇ ನಾನು ಹಾಳು

ನಿರಾಕರಿಸಬಹುದಲ್ಲಾ ! ಎಂದರೆ ಹೇಳುತ್ತಾರೆ. ಸಃ ಏವ=ಗುರುಗಳ ಆಜ್ಞೆಯನ್ನು ತಿರಸ್ಕರಿಸದಿರುವುದೇ ಸ್ವಾರ್ಥಃ=ಶಿಷ್ಯನ ಸ್ವಾರ್ಥವೆಂದು ಉಚ್ಯತೇ=ಹೇಳಲ್ಪಡುತ್ತದೆ. ಶಿಷ್ಯನೆಂದು ಹೇಳಿದ್ದರಿಂದ ಗುರುಗಳ ಆಜ್ಞೆಯನ್ನು ಉಲ್ಲಂಘಿಸಿದಲ್ಲಿ ದೋಷ ಬರುವುದೆಂದು ಹೇಳಿದಂತಾಯಿತು. ಆ ದೋಷವನ್ನು ತಪ್ಪಿಸಿಕೊಳ್ಳುವುದೇ ಶಿಷ್ಯನ ಸ್ವಾರ್ಥ. ಆದ್ದರಿಂದ ನನ್ನ ಪ್ರಯೋಜನಕ್ಕಾಗಿಯಾದರೂ ನಾನು ತಿರಸ್ಕರಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ. ಬ್ರಹ್ಮವರ್ಚಸ್ಸು ನಾಶವಾಗುತ್ತದೆಯಾದ್ದರಿಂದ ಧರ್ಮಶೀಲರಿಂದ ಪೌರೋಹಿತ್ಯವು ನಿಂದಿತವೆಂದಾದರೂ ಅನ್ವಯ. 'ಪೌರೋಹಿತ್ಯಂ ಚಾರ್ಚಕತ್ವಂ ಮಾಠಾಪತ್ಯಂ ತಥೈವ ಚ । ಯಃ ಕರೋತಿ ಸ ದೇವೋಽಪಿ ಶ್ವಾನಯೋನಿಂ ಸಮಶ್ನುತೇ ||' ಎಂದು ಕರ್ಮವಿಪಾಕ ಗ್ರಂಥದಲ್ಲಿ ಹೇಳಿದೆ. || ೩೭ ||

ಅಕಿಂಚನಾನಾಂ ಹಿ ಧನಂ ಶಿಲೋಂಛನಂ
ಸ ತೇನ ನಿರ್ವರ್ತಿತಸಾಧುಸತ್ಕ್ರಿಯಃ ।
ಕಥಂ ವಿಗರ್ಹ್ಯಂ ತು ಕರೋಮ್ಯಧೀಶ್ವರಾಃ
ಪೌರೋಧಸಂ ಹೃಷ್ಯತಿ ಯೇನ ದುರ್ಮತಿಃ || ೩೮ ||

ಪೌರೋಹಿತ್ಯದಿಂದ ಧನಸಂಪಾದನೆಯಾಗುವುದು. ಅದರಿಂದ ಧರ್ಮ ಮಾಡಿಕೊಳ್ಳಬಹುದು. ಬಡವನಿಗೆ ಧರ್ಮವೆಲ್ಲಿಯದು ? ಆದ್ದರಿಂದಲೇ ಪೌರೋಹಿತ್ಯದಿಂದ ಜನರು ಸಂತೋಷಗೊಳ್ಳುತ್ತಾರೆ ಎಂದರೆ ಉತ್ತರ ಕೊಡುತ್ತಾ ಹೇಳಿದುದನ್ನೇ ಸ್ಪಷ್ಟಪಡಿಸುತ್ತಾರೆ. ಅಧೀಶ್ವರಾಃ=ಲೋಕಪಾಲಕರೇ, ಶಿಲೋಂಛನಂ=ಕೊಯ್ದು ಬಿಟ್ಟ ಗದ್ದೆಯಲ್ಲಿ ಒಂದೊಂದೇ ತೆನೆಯನ್ನು ತೆಗೆದುಕೊಳ್ಳುವುದು ಶಿಲವೃತ್ತಿ; ಅಲ್ಲಿ ಒಂದೊಂದೇ ಭತ್ತದ ಕಾಳನ್ನು ಆರಿಸುವುದು ಉಂಛನವೃತ್ತಿ. ಇವು ಅಕಿಂಚನಾನಾಂ=ಯಾವ ಅಪೇಕ್ಷೆಯೂ ಇಲ್ಲದ ಭಗವದ್ಭಕ್ತರಿಗೆ ಧನಂ ಹಿ—ಧರ್ಮಕ್ಕೆ ಸಾಧನವಾದ ಹಣವಷ್ಟೆ! ತೇನ=ಆ ಬಗೆಯ ಶಿಲೋಂಛ ವೃತ್ತಿಗಳಿಂದ ನಿರ್ವರ್ತಿತಸಾಧುಸತ್ಕ್ರಿಯಃ=ಸಾಧುಗಳ ಸತ್ಯಗಳಾದ ಕೆಲಸಗಳನ್ನು—ಅಗ್ನಿಹೋತ್ರ ಮೊದಲಾದ ಧರ್ಮಗಳನ್ನು—ಚನ್ನಾಗಿ ಮಾಡಿಕೊಂಡು ಬರುತ್ತಿರುವ ಸಃ (ಅಹಂ)=ಆ ನಾನು ಯೇನ=ಯಾವ [ಪ್ರತಿಗ್ರಹಾದಿಗಳಿಂದ ಪಾಪಮಯವಾದ] ಪುರೋಹಿತ ವೃತ್ತಿಯಿಂದ ದುರ್ಮತಿಃ=ದುಃಖಿತ ಮತಿಯುಳ್ಳ ಅಂದರೆ ವಿಷಯಗಳಿಂದ ಆಕೃಷ್ಟವಾದ

ಮಾಡಿಕೊಳ್ಳಲಾರೆ.) ಅಧೀಶ್ವರರೇ, ನಿರಪೇಕ್ಷಿಗಳಾದ ಭಗವದ್ಭಕ್ತರಿಗೆ ಶೀಲ ಮತ್ತು ಉಂಛನವೃತ್ತಿಗಳೇ ಧರ್ಮಸಾಧನವಾದ ಹಣ. ನಾನಾದರೋ ನನ್ನ ಅಗ್ನಿಹೋತ್ರ ಮೊದಲಾದ ಸತ್ಕರ್ಮಗಳನ್ನು ಆ ವೃತ್ತಿಗಳಿಂದಲೇ ನಿರ್ವಹಿಸಿಕೊಂಡು ಬರುತ್ತಿದ್ದೇನೆ. ಪುರೋಹಿತ ವೃತ್ತಿಯಾದರೋ ಪ್ರತಿಗ್ರಹಾದಿಗಳಿಂದ ಪಾಪಮಯವಾದುದು. ಹಣವನ್ನು ಗಳಿಸಬೇಕೆಂಬ ಪಾಮರನಿಗೆ ಅದು ಸಂತೋಷಕರವೇ ಹೊರತು ನಿಃಸ್ಪೃಹನಾದ ಭಗವದ್ಭಕ್ತನಿಗಲ್ಲ. ಆ ವೃತ್ತಿಯನ್ನು ಮಾಡುವುದಕ್ಕೆ

ಮನಸ್ಸುಳ್ಳ ಪಾಮರನು ಹೃಷ್ಯತಿ=ಹರ್ಷಗೊಳ್ಳುವನೋ (ತತ್)=ಅಂತಹ ವಿಗರ್ಹ್ಯಂ = ಶಾಸ್ತ್ರನಿಂದಿತವಾದ ಪೌರೋಧಸಂ = ಪುರೋಹಿತ ವೃತ್ತಿಯನ್ನು ಕಥಂ ತು=ಹೇಗೆ ತಾನೇ ಕರೋಮಿ=ಮಾಡಲಿ ? ಪ್ರತಿಗ್ರಹಾದಿಗಳಿಂದ ಜೀವಿಸದ ನಾನು ಆ ಬಗೆಯ ಜೀವನಕ್ಕೆ ಹೇಗೆ ಮನಸ್ಸುಮಾಡಲಿ ಎಂದು ಅಭಿಪ್ರಾಯ. ||೩೭||

ತಥಾಪಿ ನ ಪ್ರತಿಬ್ರೂಯಾಂ ಗುರುಭಿಃ ಪ್ರಾರ್ಥಿತಂ ಕಿಯತ್ ।
ಭವತಾಂ ಪ್ರಾರ್ಥಿತಂ ಸರ್ವಂ ಪ್ರಾಣೈರರ್ಥೈಶ್ಚ ಸಾಧಯೇ ॥ ೩೮ ॥

ತಥಾಪಿ=ಆದರೂ ನಾನು ನ ಪ್ರತಿಬ್ರೂಯಾಂ=ಏನೂ ಪ್ರತಿಯಾಗಿ ಮಾತನಾಡುವುದಿಲ್ಲ. ಗುರುಭಿಃ = ಹಿರಿಯರಾದ ನಿಮ್ಮಿಂದ ಪ್ರಾರ್ಥಿತಂ = ಯಾಚಿತವಾದುದಾದರೂ ಕಿಯತ್=ಎಷ್ಟು ಮಾತ್ರ. ಅತ್ಯಲ್ಪವೇ ನೀವು ಕೇಳಿದುದು ಎಂದರ್ಥ. ನೀವು ಕೇಳಿದ್ದು ಅಲ್ಪ ಎಂದು ಒಂದು ಕಡೆ ಧಿಕ್ಕಾರದ ಮಾತು. ಮತ್ತೊಂದು ಕಡೆ ಮಾಡುವುದಿಲ್ಲವೆಂದು ಹೇಳುವುದಿಲ್ಲವೆಂದು ಗೌರವ ಪ್ರದರ್ಶನ. ಅಂದ ಮೇಲೆ ನಿರ್ಣಯವೇನು? ಎಂದರೆ ಹೇಳುತ್ತಾರೆ. ಭವತಾಂ = ನಿಮ್ಮಿಂದ ಪ್ರಾರ್ಥಿತಂ ಸರ್ವಂ=ಅಪೇಕ್ಷಿತವಾದ ಎಲ್ಲವನ್ನೂ—ಕೇಳಿದುದಕ್ಕಿಂತ ಹೆಚ್ಚು ಪ್ರಯೋಜನವನ್ನೂ ಪ್ರಾಣೈಃ = ನನ್ನ ಪ್ರಾಣಗಳಿಂದಲೂ ಅರ್ಥೈಶ್ಚ = ನನ್ನ ಸರ್ವಸ್ವದಿಂದಲೂ ಸಾಧಯೇ=ಸಾಧಿಸಿಕೊಡುವೆನು. ಪೌರೋಹಿತ್ಯವನ್ನು ಒಪ್ಪಿಕೊಳ್ಳುವುದಷ್ಟೇ ಅಲ್ಲ. ಸರ್ವ ರೀತಿಯಿಂದಲೂ ನಿಮ್ಮ ಕಾರ್ಯವನ್ನು ಸಾಧಿಸಿಕೊಡುವೆನು ಎಂದು ಅಭಿಪ್ರಾಯ. || ೩೮ ||

ಶ್ರೀ ಶುಕ ಉವಾಚ—

ತೇಭ್ಯ ಏವಂ ಪ್ರತಿಶ್ರುತ್ಯ ವಿಶ್ವರೂಪೋ ಮಹಾತಪಾಃ ।
ಪೌರೋಹಿತ್ಯಂ ತತಶ್ಚಕ್ರೇ ಪರಮೇಣ ಸಮಾಧಿನಾ ॥ ೩೯ ॥

ತೇಭ್ಯಃ=ದೇವತೆಗಳಿಗೆ ಏವಂ=ಮೇಲೆ ಹೇಳಿದಂತೆ ಪ್ರತಿಶ್ರುತ್ಯ=ಮಾತು ಕೊಟ್ಟು ಮಹಾತಪಸ್ವಿಗಳಾದ ವಿಶ್ವರೂಪಾಚಾರ್ಯರು ತತಃ=ಅನಂತರ ಪರಮೇಣ=ಅತಿಶಯವಾದ ಸಮಾಧಿನಾ=ಏಕಾಗ್ರತೆಯಿಂದ, ಶ್ರೀಹರಿಧ್ಯಾನದಿಂದ ಪುರೋಹಿತತನವನ್ನು ಚಕ್ರೇ=ಮಾಡಿದರು. || ೩೯ ||

ನನಗಂತೂ ಇಷ್ಟವಿಲ್ಲ. ಆದರೂ ನಿಮ್ಮ ಮಾತಿಗೆ ಬದಲು ಹೇಳುವುದಿಲ್ಲ. ಹಿರಿಯರಾದ ನೀವು ಕೇಳಿರುವುದಾದರೂ ಅತ್ಯಲ್ಪ. ನಿಮ್ಮ ಅಪೇಕ್ಷೆ ಎಲ್ಲವನ್ನೂ ನನ್ನ ಸರ್ವಸ್ವವನ್ನೂ ಕೊಟ್ಟು ಪ್ರಾಣಗಳನ್ನೂ ಕೊಟ್ಟು ಸಾಧಿಸಿಕೊಡುತ್ತೇನೆ' ಎಂದು ವಚನವಿತ್ತರು.

ಹೀಗೆ ದೇವತೆಗಳಿಗೆ ಮಾತುಕೊಟ್ಟು ಆ ಮಹಾತಪಸ್ವಿಗಳಾದ ವಿಶ್ವರೂಪಾಚಾರ್ಯರು ಅತಿಶಯವಾದ ಏಕಾಗ್ರತೆಯಿಂದ ಶ್ರೀಹರಿಯನ್ನು ಧ್ಯಾನಿಸುತ್ತಾ

*

ಸುರದ್ವಿಷಾಂ ಶ್ರಿಯಂ ಗುಪ್ತಾಮೌಶನಸ್ಯಾಪಿ ವಿದ್ಯಯಾ ।
ಆಚ್ಛಿದ್ಯಾದಾನ್ಮಹೇಂದ್ರಾಯ ವೈಷ್ಣವ್ಯಾ ವಿದ್ಯಯಾ ವಿಭುಃ ॥ ೪೦ ॥

ವಿಭುಃ=ಸಮರ್ಥರಾದ ವಿಶ್ವರೂಪಾಚಾರ್ಯರು ಔಸನಸ್ಯಾ=ಶುಕ್ರಾಚಾರ್ಯರಲ್ಲಿದ್ದ ವಿದ್ಯಯಾ=ಮಂತ್ರಸಿದ್ಧಿಯ ಮೂಲಕ ಗುಪ್ತಾಂ ಅಪಿ=ರಕ್ಷಿತವಾಗಿದ್ದರೂ ಸುರದ್ವಿಷಾಂ=ದೇವದ್ವೇಷಿಗಳಾದ ದೈತ್ಯರ ಶ್ರಿಯಂ=ಸಂಪತ್ತನ್ನು (ದೈತ್ಯರು ಅಪಹರಿಸಿದ್ದ ಸ್ವರ್ಗಾದಿ ಸಂಪತ್ತನ್ನು) ವೈಷ್ಣವ್ಯಾ=ವಿಷ್ಣುದೇವತಾಕವಾದ ವಿದ್ಯಯಾ=ನಾರಾಯಣಕವಚವೆಂಬ ಮಂತ್ರದ ಬಲದಿಂದ ಆಚ್ಛಿದ್ಯ = ಕಸಿದುಕೊಂಡು ಮಹೇಂದ್ರಾಯ=ಇಂದ್ರ ದೇವರಿಗೆ ಅದಾತ್=ಕೊಟ್ಟರು. ॥ ೪೦ ॥

ಯಯಾ ಗುಪ್ತಃ ಸಹಸ್ರಾಕ್ಷೋ ಜಿಗ್ಯೇಽಸುರಚಮೂರ್ವಿಭುಃ ।
ತಾಂ ಪ್ರಾಹ ಸ ಮಹೇಂದ್ರಾಯ ವಿಶ್ವರೂಪ ಉದಾರಧೀಃ ॥ ೪೧ ॥

ಯಯಾ = ಯಾವ ನಾರಾಯಣಕವಚವೆಂಬ ವಿದ್ಯೆಯಿಂದ ಗುಪ್ತಃ = ರಕ್ಷಿತರಾದ ವಿಭುಃ=ಸಮರ್ಥರಾದ ಸಹಸ್ರಾಕ್ಷಃ=ಇಂದ್ರದೇವರು ಅಸುರಚಮೂಃ = ದೈತ್ಯಸೈನ್ಯಗಳನ್ನು ಜಿಗ್ಯೇ=ಗೆದ್ದರೋ ತಾಂ=ಆ ವೈಷ್ಣವೀ ವಿದ್ಯೆಯನ್ನು ಉದಾರಧೀಃ=ಸಚ್ಛಿಷ್ಯರಿಗೆ ವಿದ್ಯಾದಾನ ಮಾಡಬೇಕೆಂಬ ಔದಾರ್ಯವುಳ್ಳ ಆ ವಿಶ್ವರೂಪಾಚಾರ್ಯರು ಮಹೇಂದ್ರಾಯ=ಇಂದ್ರದೇವರಿಗೆ ಪ್ರಾಹ=ಸರಹಸ್ಯವಾಗಿ ಉಪದೇಶಿಸಿದರು. ॥ ೪೧ ॥

ಯಾಂ ಪ್ರವಿಶ್ಯಾಸುರಾ ಇಭಶ್ಯತ್ ಕಕ್ಷ್ಯಾಂ ನಾರಾಯಣಾತ್ಮಿಕಾಮ್
ಅಜೈಷೀದ್ವೃಷಭಸ್ತಾತ ಸಿಂಹಃ ಕ್ಷುದ್ರಮೃಗಾನಿವ ॥ ೪೨ ॥

ಯಾಂ = ಯಾವ ನಾರಾಯಣಾತ್ಮಿಕಾಂ = ನಾರಾಯಣಸ್ವರೂಪವಾದ ಕಕ್ಷ್ಯಾಂ=ಕವಚವೆಂಬ ರಕ್ಷೆಯನ್ನು ಪ್ರವಿಶ್ಯ=ಪ್ರವೇಶಿಸಿ ತಾತ=ಪರೀಕ್ಷಿದ್ರಾಜನೇ,

---

ಪೌರೋಹಿತ್ಯವನ್ನು ಮಾಡಿದರು. ಸಮರ್ಥರಾದ ಅವರು ಶುಕ್ರಾಚಾರ್ಯರ ಮಂತ್ರಸಿದ್ಧಿಯ ಮೂಲಕ ರಕ್ಷಿತವಾದ ಆ ದೈತ್ಯಸಂಪತ್ತನ್ನೂ ತಮ್ಮಲ್ಲಿದ್ದ ವೈಷ್ಣವ ಮಂತ್ರಸಿದ್ಧಿಯ ಮೂಲಕ ಬಲಾತ್ಕಾರದಿಂದ ಕಸಿದುಕೊಂಡು ಇಂದ್ರದೇವರಿಗೆ ಕೊಟ್ಟರು. ಈ ವೈಷ್ಣವ ವಿದ್ಯೆಯಿಂದ ರಕ್ಷಿತರಾದ್ದರಿಂದಲೇ ಸಮರ್ಥರಾದ ಇಂದ್ರದೇವರು ದೈತ್ಯ ಸೈನ್ಯಗಳನ್ನು ಗೆದ್ದರು. ಸಚ್ಛಿಷ್ಯನಿಗೆ ವಿದ್ಯಾದಾನ ಮಾಡಬೇಕೆಂಬ ಉದಾರ ಬುದ್ಧಿಯುಳ್ಳ ವಿಶ್ವರೂಪಾಚಾರ್ಯರು ರಹಸ್ಯದೊಂದಿಗೆ ಈ ವಿದ್ಯೆಯನ್ನು ಇಂದ್ರದೇವರಿಗೆ ಉಪದೇಶ ಮಾಡಿದ್ದರು. ಅದು ನಾರಾಯಣಸ್ವರೂಪವಾದ ಕವಚ. ಆ ರಕ್ಷೆಯನ್ನು ಪ್ರವೇಶಿಸಿದ ಇಂದ್ರ ದೇವರು ಸಿಂಹವು ಕ್ಷುದ್ರ ಮೃಗಗಳನ್ನು ಅನಾಯಾಸವಾಗಿ ಜಯಿಸುವಂತೆ ಸಾರ್ವಕಾಲಿಕವಾಗಿ (ಮತ್ತೆ ಅಸುರರು ತಮ್ಮ ಮೇಲೆ ಯುದ್ಧೋದ್ಯೋಗ ಮಾಡದ ರೀತಿಯಲ್ಲಿ) ದೈತ್ಯರನ್ನು ಜಯಿಸಿದರು.

ವೃಷಭಃ=ಇಂದ್ರದೇವರು ಕ್ಷುದ್ರಮೃಗಗಳನ್ನು ಸಿಂಹವು ಜಯಿಸುವಂತೆ ಶಶ್ವತ್– ಸರ್ವಕಾಲಕ್ಕೂ ಅಸುರಾನ್ = ದೈತ್ಯರನ್ನು ಅಜೈಷೀತ್–ಜಯಿಸಿದರೋ ಅಂತಹ ವಿದ್ಯೆಯನ್ನು ಉಪದೇಶಿಸಿದರೆಂದು ಹಿಂದಕ್ಕೆ ಅನ್ವಯ. || ೪೨ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಸಪ್ತಮೋಽಧ್ಯಾಯಃ

ಅಥ ಅಷ್ಟಮೋಽಧ್ಯಾಯಃ

ರಾಜೋವಾಚ—

ಯಯಾ ಗುಪ್ತಃ ಸಹಸ್ರಾಕ್ಷಃ ಸವಾಹಾನ್ ರಿಪುಸೈನಿಕಾನ್ ।
ಕ್ರೀಡನ್ನಿವ ವಿನಿರ್ಜಿತ್ಯ ತ್ರಿಲೋಕ್ಯಾ ಬುಭುಜೇ ಶ್ರಿಯಮ್ ॥ ೧ ॥

ಅಕಾಮನಾಗಲಿ ಸರ್ವಕಾಮನಾಗಲಿ ಮೋಕ್ಷಕಾಮನಾಗಲಿ ಶ್ರೀಹರಿಯನ್ನು ಪೂಜಿಸಬೇಕು ಎಂದು ಹೇಳಿದ್ದನ್ನು ಈ ಅಧ್ಯಾಯದಲ್ಲಿ ವಿವರಿಸುತ್ತಾರೆ. ರಾಜರು ಹಿಂದಿನ ಅಧ್ಯಾಯದಲ್ಲಿ ಸಂಕ್ಷೇಪವಾಗಿ ತಿಳಿಸಿದ್ದ 'ನಾರಾಯಣ ಕವಚ'ವೆಂಬ ಸ್ತೋತ್ರ ವನ್ನು ಲೋಕೋಪಕಾರಕ್ಕಾಗಿ ವಿಸ್ತಾರವಾಗಿ ಕೇಳಲು ಶುಕಾಚಾರ್ಯರನ್ನು ಪ್ರಶ್ನಿಸುತ್ತಾರೆ. ಯಯಾ=ಯಾವ ನಾರಾಯಣಕವಚವೆಂಬ ವಿದ್ಯೆಯಿಂದ ಗುಪ್ತಃ= ರಕ್ಷಿತರಾದ ಸಹಸ್ರಾಕ್ಷಃ=ಇಂದ್ರದೇವರು ಸವಾಹಾನ್=ವಾಹನಗಳಿಂದ ಕೂಡಿದ ರಿಪುಸೈನಿಕಾನ್ = ಶತ್ರು ಸೇನಾನಾಯಕರನ್ನು ಕ್ರೀಡನ್ನಿವ – ಅನಾಯಾಸವಾಗಿ ವಿನಿರ್ಜಿತ್ಯ–ಗೆದ್ದು ತ್ರಿಲೋಕ್ಯಾಃ=ಮೂರುಲೋಕದ ಶ್ರಿಯಂ=ರಾಜ್ಯೈಶ್ವರ್ಯವನ್ನು ಬುಭುಜೇ–ಅನುಭವಿಸಿದರೋ. || ೧ ||

ಭಗವಂಸ್ತನ್ಮಮಾಖ್ಯಾಹಿ ವರ್ಮ ನಾರಾಯಣಾತ್ಮಕಮ್ ।
ಯಥಾಽಽತತಾಯಿನಃ ಶತ್ರೂನ್ ಯೇನ ಗುಪ್ತೋಽಜಯನ್ಮೃಧೇ ॥

ಭಗವನ್–ಪೂಜ್ಯರೇ ತತ್ = ಆ ನಾರಾಯಣ ಸ್ವರೂಪವಾದ ವರ್ಮ – ಕವಚವನ್ನು ಮಮ=ನನಗೆ ಆಖ್ಯಾಹಿ=ಹೇಳಿರಿ ಯೇನ=ಯಾವ ಈ ಕವಚ

ಎಂಟನೆಯ ಅಧ್ಯಾಯ

ಪರೀಕ್ಷಿದ್ರಾಜರು—ಪೂಜ್ಯರೇ, ನಾರಾಯಣ ವಿದ್ಯೆಯಿಂದ ಗುಪ್ತರಾದ ಇಂದ್ರ ದೇವರು ದೈತ್ಯರ ವಾಹನಗಳನ್ನೂ ಸೇನಾನಾಯಕರನ್ನೂ ಅನಾಯಾಸವಾಗಿ ಗೆದ್ದು ಮೂರು ಲೋಕದ ಆಧಿಪತ್ಯ (ಸಂಪತ್ತು) ವನ್ನು ಅನುಭವಿಸಿದರಷ್ಟೆ! ಯುದ್ಧದಲ್ಲಿ ಆಯುಧಧಾರಿಗಳಾದ ಶತ್ರುಗಳನ್ನು ಯಾವ ನಾರಾಯಣ ಸ್ತೋತ್ರವೆಂಬ ಕವಚ ವನ್ನು ತೊಟ್ಟು ಇಂದ್ರದೇವರು ಗೆದ್ದರೋ ಆ ಸ್ತೋತ್ರವನ್ನೂ, ಹೇಗೆ ಗೆದ್ದರೋ ಆ ಪ್ರಕಾರವನ್ನೂ ನನಗಾಗಿ ಹೇಳಿರಿ.

ದಿಂದ ಗುಪ್ತಃ = ರಕ್ಷಿತರಾಗಿ ಇಂದ್ರ ದೇವರು ಮೃಧೇ = ಯುದ್ಧದಲ್ಲಿ ಆತತಾಯಿನಃ=ಶಸ್ತ್ರಧಾರಿಗಳಾದ ಶತ್ರೂನ್=ಶತ್ರುಗಳನ್ನು ಯಥಾ=ಯಾವ ರೀತಿಯಲ್ಲಿ ಅಜಯತ್=ಗೆದ್ದರೋ ಆ ಪ್ರಕಾರವನ್ನೂ ಹೇಳಿರಿ. ವರ್ಮ ಪದಕ್ಕನುಗುಣವಾಗಿ ತತ್ ಎಂದು ನಪುಂಸಕ ಲಿಂಗವನ್ನು ಪ್ರಯೋಗಿಸಿರುವರು. ಮತ್ತೆ ಯಥಾ ಎಂದು ಹೇಳಿದ್ದು ಪ್ರಕಾರವನ್ನು ತಿಳಿಯುವುದಕ್ಕಾಗಿ. || ೨ ||

ಶ್ರೀ ಶುಕ ಉವಾಚ—

ವೃತಃ ಪುರೋಹಿತಸ್ತ್ವಾಷ್ಟ್ರೋ ಮಹೇಂದ್ರಾಯಾನುಪೃಚ್ಛತೇ ।
ನಾರಾಯಣಾಖ್ಯಂ ವರ್ಮಾಹ ತದಿಹೈಕಮನಾಃ ಶೃಣು ॥ ೩ ॥

ವೃತಃ=ದೇವತೆಗಳಿಂದ ಪುರೋಹಿತತನಕ್ಕೆ ಕೇಳಿಕೊಳ್ಳಲ್ಪಟ್ಟ (ಒಪ್ಪಿಕೊಳ್ಳಲ್ಪಟ್ಟ) ಪುರೋಹಿತರಾದ ತ್ವಾಷ್ಟ್ರಃ=ವಿಶ್ವರೂಪಾಚಾರ್ಯರು ಅನುಪೃಚ್ಛತೇ=ಅನುಸೀತರಾಗಿ ಪ್ರಶ್ನಿಸಿದ ಇಂದ್ರ ದೇವರಿಗೆ (ಯತ್)=ಯಾವ ನಾರಾಯಣನೆಂಬ ವರ್ಮ=ಕವಚವನ್ನು ಆಹ=ಹೇಳಿದರೋ ತತ್=ಅದನ್ನು ಇಹ=ಇಲ್ಲಿ (ಹೇಳುತ್ತೇನೆ) (ಅದನ್ನು) ಏಕಮನಾಃ (ಸನ್)=ಏಕಾಗ್ರಮನಸ್ಕನಾಗಿ ಶೃಣು=ಕೇಳು. || ೩ ||

ವಿಶ್ವರೂಪ ಉವಾಚ—

ಧೌತಾಂಘ್ರಿಪಾಣಿರಾಚಮ್ಯ ಸಪವಿತ್ರ ಉದಙ್ಮುಖಃ ।
ಕೃತಸ್ವಾಂಗಕರನ್ಯಾಸೋ ಮಂತ್ರಾಭ್ಯಾಂ ವಾಗ್ಯತಃ ಶುಚಿಃ ॥ ೪ ॥
ನಾರಾಯಣಮಯಂ ವರ್ಮ ಸನ್ನಹ್ಯೇದ್ಭಯ ಆಗತೇ ।
ದೈವಭೂತಾತ್ಮಕರ್ಮಭ್ಯೋ ನಾರಾಯಣಮಯಃ ಪುಮಾನ್ ॥ ೫ ॥

ಧೌತಾಂಘ್ರಿ ಎಂಬುದರಿಂದ ಪ್ರಾರಂಭಿಸಿ 'ಓಂ ವಿಷ್ಣವೇ ನಮಃ' ಎಂಬ ಗ್ರಂಥದವರೆಗೆ ನಾರಾಯಣ ವರ್ಮವನ್ನು ಧಾರಣೆಮಾಡುವ ಪ್ರಕಾರವನ್ನು ಹೇಳುತ್ತಾರೆ. ದೈವಭೂತಾತ್ಮಕರ್ಮಭ್ಯಃ=ದೈವಿಕವಾಗಿ ಒದಗಿ ಬಂದ ಅನಾವೃಷ್ಟಿ ಮೊದ

ಶುಕಾಚಾರ್ಯರು—ದೇವತೆಗಳು ತ್ವಷ್ಟೃವಿನ ಮಕ್ಕಳಾದ ವಿಶ್ವರೂಪಾಚಾರ್ಯರನ್ನು ಪುರೋಹಿತರನ್ನಾಗಿ ವರಿಸಿದರಷ್ಟೆ! ಆಗ ಅವರನ್ನು ಇಂದ್ರದೇವರು ವಿನಯದಿಂದ ಕೇಳಿಕೊಂಡರು. ಆಚಾರ್ಯರು ಇಂದ್ರ ದೇವರಿಗೆ ನಾರಾಯಣ ಕವಚವನ್ನು ಉಪದೇಶಿಸಿದರು. ಅದನ್ನೇ ನಿನಗೆ ಹೇಳುತ್ತೇನೆ. ಸಾವಧಾನವಾಗಿ ಕೇಳು.

ವಿಶ್ವರೂಪಾಚಾರ್ಯರು—ಮನುಷ್ಯನಿಗೆ ದೈವಿಕವಾಗಿ ಒದಗಿಬರುವ ಅನಾವೃಷ್ಟಿ ಮೊದಲಾದ ಭಯವಾಗಲಿ, ಭೂತಾದಿಗಳಿಂದ ಬರುವ ಉನ್ಮಾದ–ಮೊದಲಾದ ಭಯವಾಗಲಿ, ತನ್ನ ಪಾಪಕರ್ಮದ ಫಲವಾಗಿ ಬರುವ ಕುಷ್ಠಾದಿ ರೋಗ ಭಯವಾಗಲಿ ಬಂದಾಗ ಅದರ ಪರಿಹಾರಕ್ಕಾಗಿ ಅವನು ನಾರಾಯಣವರ್ಮವೆಂಬ

ಲಾದ, ಭೂತಗಳಿಂದ ಬಂದ ಉನ್ಮಾದ (ಹುಚ್ಚು) ಮೊದಲಾದ, ತನ್ನ ಅಪರಾಧ (ಪಾಪಕರ್ಮ) ದಿಂದ ಬಂದ ಕುಷ್ಠ ಭಗಂದರ ಮೊದಲಾದ ಭಯೇ=ಭಯವು ಆಗತೇ=ಬಂದಿರಲು ಅದರ ಪರಿಹಾರವನ್ನು ಅಪೇಕ್ಷಿಸುವ ಪುಮಾ೯=ಪುರುಷನು ಧೌತಾಂಘ್ರಿಪಾಣಿಃ (ಸ೯) = ಪವಿತ್ರಧಾರಿಯಾಗಿ ಉದಙ್ಮುಖಃ (ಉಪವಿಶ್ಯ) = ಉತ್ತರಾಭಿಮುಖವಾಗಿ ಕುಳಿತವನಾಗಿ ಆಚಮ್ಯ=ಆಚಮನಮಾಡಿ ಮಂತ್ರಾಭ್ಯಾಂ= ನಾರಾಯಣಾಷ್ಟಾಕ್ಷರ ಮಂತ್ರ ವಾಸುದೇವ ದ್ವಾದಶಾಕ್ಷರ ಮಂತ್ರಗಳಿಂದ ಕೃತಸ್ವಾಂಗ ಕರನ್ಯಾಸಃ (ಸನ್)=ತನ್ನ ಅಂಗಗಳಲ್ಲಿಯೂ ಕೈಗಳಲ್ಲಿಯೂ ಕವಚ ದೇವತೆಯಾದ ನಾರಾಯಣನನ್ನು ಸನ್ನಿಹಿತನಾಗಿರುವಂತೆ ನ್ಯಾಸಮಾಡಿಕೊಂಡು ವಾಗ್ಯತಃ (ಸನ್) = ಬೇರೆ ಮಾತುಗಳನ್ನಾಡದವನಾಗಿ ಶುಚಿಃ (ಸನ್) = ಹೊರಗೂ ಒಳಗೂ ಶುದ್ಧನಾಗಿ ನಾರಾಯಣಮಯಃ (ಸನ್)=ನಾರಾಯಣನು ಸರ್ವೋತ್ತಮನೆಂಬ ಜ್ಞಾನವುಳ್ಳವನಾಗಿ ನಾರಾಯಣಮಯಂ ವರ್ಮ=ನಾರಾಯಣಾತ್ಮಕವಾದ ಕವಚವನ್ನು ಸನ್ನಹ್ಯೇತ್ = ಕಟ್ಟಿಕೊಳ್ಳಬೇಕು (ತೊಟ್ಟುಕೊಳ್ಳಬೇಕು.) ಕವಚವೆಂಬ ಸ್ತೋತ್ರವನ್ನು ಜಪಿಸಬೇಕೆಂದರ್ಥ. 'ಮಯಂ ಪ್ರಧಾನಮುದ್ದಿಷ್ಟಂ ಪ್ರಾಧಾನ್ಯಂ ಯೈರ್ಹರೇರ್ಮತಮ್ | ಭಗವನ್ಮಯಾಸ್ತೇ ವಿಜ್ಞೇಯಾಸ್ತೇ ಮುಚ್ಯಂತೇ ನ ಚಾಪರೇ' || ಎಂಬ ಪ್ರಮಾಣವನ್ನು ಅನುಸರಿಸಿ ಮೇಲಿನ ಅರ್ಥ ಮಾಡಿದೆ. || ೪, ೫ ||

ಪಾದಯೋರ್ಜಾನುನೋರೂರ್ವೋರುದರೇ ಹೃದ್ಯಥೋರಸಿ ।
ಮುಖೇ ಶಿರಸ್ಯಾನುಪೂರ್ವ್ಯಾದೋಂಕಾರಾದೀನಿ ವಿನ್ಯಸೇತ್ ॥ ೬ ॥
ಓಂ ನಮೋ ನಾರಾಯಣಾಯೇತಿ ವಿಪರ್ಯಯಮಥಾಪಿ ವಾ ॥

ಅಷ್ಟಾಕ್ಷರ ಸ್ವರೂಪವನ್ನು ತಿಳಿಸುತ್ತಾ ಪಾದ ಮೊದಲಾದ ಅಂಗಗಳಲ್ಲಿ ಅದರ ಅಕ್ಷರಗಳ ನ್ಯಾಸವನ್ನು ತಿಳಿಸುತ್ತಾರೆ. ಓಂ ನಮೋ ನಾರಾಯಣಾಯ ಎಂಬ ಮಂತ್ರಕ್ಕೆ

ಈ ಮಂತ್ರಕವಚವನ್ನು ತೊಟ್ಟುಕೊಳ್ಳಬೇಕು. ಇದಕ್ಕಾಗಿ ಮೊದಲು ಕೈಕಾಲುಗಳನ್ನು ತೊಳೆದುಕೊಂಡು ಪವಿತ್ರವನ್ನು ಧರಿಸಿ ಉತ್ತರಾಭಿಮುಖವಾಗಿ ಕುಳಿತು ಆಚಮನ ಮಾಡಬೇಕು. ಅನಂತರ ಮಂತ್ರದೇವತೆಯಾದ ನಾರಾಯಣನನ್ನು ನಾರಾಯಣಾಷ್ಟಾಕ್ಷರ ವಾಸುದೇವ ದ್ವಾದಶಾಕ್ಷರ ಮಂತ್ರಗಳಿಂದ ತನ್ನ ಅಂಗಗಳಲ್ಲಿಯೂ ಕೈಗಳಲ್ಲಿಯೂ ಸನ್ನಿಹಿತನಾಗುವಂತೆ ನ್ಯಾಸಮಾಡಿಕೊಳ್ಳಬೇಕು. ಬೇರೆ ಯಾವ ಮಾತುಗಳನ್ನೂ ಆಡಬಾರದು. ಇದರಿಂದ ಅಂತಃ ಮತ್ತು ಬಹಿಃ ಶುದ್ಧನಾಗುವನು. ನಾರಾಯಣನೇ ಸರ್ವೋತ್ತಮನೆಂಬ ಜ್ಞಾನವನ್ನು ತಂದುಕೊಳ್ಳಬೇಕು. ಅನಂತರ ಈ ನಾರಾಯಣಕವಚವನ್ನು ಜಪಿಸಬೇಕು. ಅದೇ ಕವಚ ಧಾರಣೆ. 'ಓಂ ನಮೋ ನಾರಾಯಣಾಯ' ಎಂಬುದು ಅಷ್ಟಾಕ್ಷರ ಮಂತ್ರ. ಸಂಪ್ರದಾಯ ಕ್ರಮವನ್ನು ಅನುಸರಿಸಿ ಓಂಕಾರವನ್ನು ಪಾದಗಳಲ್ಲಿಯೂ, ನಕಾರ

ಮೊದಲಿನಲ್ಲಿಯೂ ಕೊನೆಯಲ್ಲಿಯೂ ಓಂಕಾರವನ್ನು ಸೇರಿಸಿಕೊಂಡು ಓಂಕಾರ ಮೊದಲಾದ ಮಂತ್ರಾಕ್ಷರಗಳನ್ನು ಆನುಪೂರ್ವ್ಯಾತ್- ೧) ಕ್ರಮವಾಗಿ ೨) ಸಂಪ್ರದಾಯ ಕ್ರಮದಲ್ಲಿ ಪಾದಯೋಃ=ಪಾದಗಳಲ್ಲಿ ಜಾನುನೋಃ=ಮೊಳಕಾಲುಗಳಲ್ಲಿ ಊರ್ವೋಃ=ತೊಡೆಗಳಲ್ಲಿ ಉದರೇ=ಹೊಟ್ಟೆಯಲ್ಲಿ ಹೃದಿ-ಹೃದಯದಲ್ಲಿ ಅಥ ಮತ್ತು ಉರಸಿ=ವಕ್ಷಸ್ಥಳದಲ್ಲಿ ಮುಖೇ-ಮುಖದಲ್ಲಿ ಶಿರಸಿ=ತಲೆಯಲ್ಲಿ ವಿನ್ಯಸೇತ್=ನ್ಯಾಸಮಾಡಿಕೊಳ್ಳಬೇಕು. ಇದು ಸಂಹಾರನ್ಯಾಸ. ವಿಪರ್ಯಯಂ ವಾ-ಶಿರಸ್ಸಿನಿಂದ ಪ್ರಾರಂಭಿಸಿ ಪಾದಪರ್ಯಂತವಾಗಿಯಾಗಲಿ ವಿನ್ಯಸೇತ್=ನ್ಯಾಸ ಮಾಡಿಕೊಳ್ಳಬೇಕು. ಇದಕ್ಕೆ ಸೃಷ್ಟಿನ್ಯಾಸವೆಂದು ಹೆಸರು. ಅಥಾಪಿ-ಮತ್ತು ಸ್ಥಿತಿ ನ್ಯಾಸವನ್ನು ಮಾಡಿಕೊಳ್ಳಬೇಕು. ಇಲ್ಲಿರುವ ವಾಕಾರವು ವಿಕಲ್ಪಾರ್ಥಕವಲ್ಲ. ಸಮುಚ್ಚಯಾರ್ಥಕ. ಎಲ್ಲ ಆಶ್ರಮದವರೂ ಮೂರು ಬಗೆಯ ನ್ಯಾಸಗಳನ್ನೂ ಮಾಡಬೇಕೆಂದು ಹೇಳಿದೆ. 'ಸೃಷ್ಟಿ ಸ್ಥಿತಿ ಲಯನ್ಯಾಸಾಃ ಪ್ರಾತಿಲೋಮ್ಯಾನುಲೋಮತಃ | ಸ್ಥಿತ್ಯಂತಾ ಏವ ವರ್ಣಾನಾಂ ಶ್ರೇಷ್ಠಾ ಏವ ಚತುರ್ದಶ || ಸಂಹೃತ್ಯಂತಾ ಮೋಕ್ಷಿಣಾಂ ಚ ಏಕವಿಶಂತಿರೇವ ವಾ' || ೬ ||

ಕರನ್ಯಾಸಂ ತತಃ ಕುರ್ಯಾದ್ದ್ವಾದಶಾಕ್ಷರವಿದ್ಯಯಾ || ೭ ||
ಪ್ರಣವಾದಿ ಯಕಾರಾಂತಮಂಗುಲ್ಯಂಗುಷ್ಠಪರ್ವಸು |

ಅಂಗನ್ಯಾಸವನ್ನು ಹೇಳಿ ಸಂಕ್ಷೇಪವಾಗಿ ಸೂಚಿಸಿದ್ದ ಕರನ್ಯಾಸವನ್ನು ವಿಸ್ತಾರವಾಗಿ ಹೇಳುತ್ತಾರೆ. ತತಃ=ಅಂಗನ್ಯಾಸ ಮಾಡಿಕೊಂಡ ಮೇಲೆ ದ್ವಾದಶಾಕ್ಷರ ವಿದ್ಯಯಾ=ಆದ್ಯಂತಗಳಲ್ಲಿ ಓಂಕಾರದಿಂದ ಕೂಡಿದ 'ಓಂ ನಮೋ ಭಗವತೇ ವಾಸುದೇವಾಯ' ಎಂಬ ಮಂತ್ರದಿಂದ ಅಂಗುಲ್ಯಂಗುಷ್ಠ ಪರ್ವಸು=ಬಲಗೈ ಹೆಬ್ಬೆರಳಿನಿಂದ ಪ್ರಾರಂಭಿಸಿ ಎಡಗೈ ಬೆರಳುಗಳ ಕೊನೆಯವರೆಗೆ ಹತ್ತು ಬೆರಳುಗಳಲ್ಲಿಯೂ ಎರಡು ಕೈಗಳ ಹೆಬ್ಬೆರಳುಗಳ ಎರಡು ಪರ್ವಗಳಲ್ಲಿಯೂ ಒಟ್ಟು ಹನ್ನೆರಡು ಸ್ಥಾನಗಳಲ್ಲಿ ಪ್ರಣವಾದಿ= ಓಂಕಾರದಿಂದ ಪ್ರಾರಂಭಿಸಿ ಯಕಾರಾಂತಂ = ಯಕಾರದವರೆಗೂ ಕರನ್ಯಾಸಂ=ಕರನ್ಯಾಸವನ್ನು ಕುರ್ಯಾತ್=ಮಾಡಿಕೊಳ್ಳಬೇಕು. ಕೆಲವರು ಬಲತರ್ಜನಿಯಿಂದ ಎಡತರ್ಜನಿಯವರೆಗೆ ಎಂಟು ಸ್ಥಾನಗಳು; ಉಳಿದವು ಎರಡು ಹೆಬ್ಬೆರಳುಗಳ ಎರಡೆರಡು ಪರ್ವಗಳು ಎಂದೂ ಹೇಳುತ್ತಾರೆ. || ೭ ||

ವನ್ನು ಮೊಳಕಾಲುಗಳಲ್ಲಿಯೂ, ಮಕಾರವನ್ನು ಊರುಗಳಲ್ಲಿಯೂ, ನಾಕಾರವನ್ನು ಉದರದಲ್ಲಿಯೂ, ರಾಕಾರವನ್ನು ಹೃದಯದಲ್ಲಿಯೂ, ಯಕಾರವನ್ನು ಉರಸ್ಸಿನಲ್ಲಿಯೂ, ಣಾಕಾರವನ್ನು ಮುಖದಲ್ಲಿಯೂ, ಯಕಾರವನ್ನು ಶಿರಸ್ಸಿನಲ್ಲಿಯೂ ನ್ಯಾಸಮಾಡಿಕೊಳ್ಳಬೇಕು. ಇದಕ್ಕೆ ವಿಪರೀತ ಕ್ರಮದಲ್ಲಿಯೂ ತಲೆಯಿಂದ ಪಾದದವರೆಗೆ ನ್ಯಾಸಮಾಡಿಕೊಳ್ಳಬೇಕು. ಇದು ಅಂಗನ್ಯಾಸ. ಅನಂತರ 'ಓಂ ನಮೋ ಭಗವತೇ ವಾಸುದೇವಾಯ' ಎಂಬ ದ್ವಾದಶಾಕ್ಷರ ಮಂತ್ರದಿಂದ ಕರನ್ಯಾಸಮಾಡಿ

ನ್ಯಸೇದ್ಧೃದಯ ಓಂಕಾರಂ ವಿಕಾರಮನುಮೂರ್ಧನಿ ॥ ೮ ॥
ಷಕಾರಂ ತು ಭ್ರುವೋರ್ಮಧ್ಯೇ ಣಕಾರಂ ಶಿಖಯಾ ದಿಶೇತ್ ।
ವೇಕಾರಂ ನೇತ್ರಯೋರ್ಯುಂಜ್ಯಾನ್ನಕಾರಂ ಸರ್ವಸಂಧಿಷು ॥ ೯ ॥
ಮಕಾರಮಸ್ತ್ರಮುದ್ದಿಶ್ಯ ಮಂತ್ರಮೂರ್ತಿರ್ಭವೇದ್ಬುಧಃ ।
ಸ ವಿಸರ್ಗಂ ಫಡಂತಂ ತು ಸರ್ವದಿಕ್ಷು ವಿನಿರ್ದಿಶೇತ್ ॥ ೧೦ ॥

ಬೇರೆ ಮಂತ್ರದಿಂದ ಷಡಂಗನ್ಯಾಸವನ್ನು ಹೇಳುತ್ತಾರೆ. ಬುಧಃ=ಆಯಾ ಅಕ್ಷರಾಭಿಮಾನಿ ದೇವತೆಗಳ ಸ್ಮರಣೆಯುಳ್ಳ ಜ್ಞಾನಿಯು ಓಂಕಾರಂ= ಓಂ ಅಕ್ಷರಾಭಿಮಾನಿಯನ್ನು ಹೃದಯದಲ್ಲಿ ನ್ಯಾಸಮಾಡಿಕೊಳ್ಳಬೇಕು. ಅನು= ೧) ಅನಂತರ ೨) ಪ್ರತ್ಯೇಕವಾಗಿ ಓಂಕಾರವನ್ನು ಸೇರಿಸಿಕೊಂಡು ಮೂರ್ಧನಿ = ಶಿರಸ್ಸಿನಲ್ಲಿ ಅಥವಾ ಅನುಮೂರ್ಧನಿ=ಹಣೆಯಮೇಲೆ ವಿಕಾರಂ=ವಿ ಎಂಬ ಅಕ್ಷರಾಭಿಮಾನಿಯನ್ನು ನ್ಯಾಸಮಾಡಿಕೊಳ್ಳಬೇಕು. ಭ್ರುವೋಃ=ಹುಬ್ಬುಗಳ ಮಧ್ಯೇ=ನಡುವೆ ಷಕಾರಂತು = ಷ ಎಂಬ ಅಕ್ಷರಾಭಿಮಾನಿಯನ್ನು ನ್ಯಾಸಮಾಡಿಕೊಳ್ಳಬೇಕು. ಶಿಖಯಾ=ತಲೆಕೂದಲಿನ ಮೇಲೆ ಣಕಾರಂ=ಣ ಎಂಬ ಅಕ್ಷರದ ದೇವತೆಯನ್ನು ದಿಶೇತ್=ನ್ಯಾಸಮಾಡಿಕೊಳ್ಳಬೇಕು. ನೇತ್ರಯೋಃ=ಕಣ್ಣುಗಳಲ್ಲಿ ವೇಕಾರಂ= ವೇ ಎಂಬ ಅಕ್ಷರಾಭಿಮಾನಿಯನ್ನು ಯುಂಜ್ಯಾತ್=ಸೇರಿಸಬೇಕು. ಸರ್ವಸಂಧಿಷು= ಎಲ್ಲ ಸಂಧಿಗಳಲ್ಲಿಯೂ ನಕಾರಂ=ನ ಎಂಬಕ್ಷರದ ಪ್ರತಿಪಾದ್ಯ ಶ್ರೀಹರಿ ರೂಪವನ್ನು ಯುಂಜ್ಯಾತ್=ಸೇರಿಸಬೇಕು. ಸವಿಸರ್ಗಂ=ವಿಸರ್ಗದಿಂದ ಯುಕ್ತವಾದ ಮಕಾರವನ್ನು ಫಡಂತಂ ಅಸ್ತ್ರಮುದ್ದಿಶ್ಯ ತು=ಅಸ್ತ್ರಾಯ ಫಟ್ ಎಂದು ಅಸುರನಿರಾಸವನ್ನು ಉದ್ದೇಶಿಸಿ ಸರ್ವದಿಕ್ಷು=ಎಲ್ಲ ದಿಕ್ಕುಗಳಲ್ಲಿಯೂ ವಿನಿರ್ದಿಶೇತ್=ಹೇಳಬೇಕು (ಏವಂ)=ಹೀಗೆ ಅಂಗನ್ಯಾಸ, ಕರನ್ಯಾಸ ಮತ್ತು ಷಡಂಗನ್ಯಾಸಗಳಿಂದ ಮಂತ್ರಮೂರ್ತಿಃ=ಮಂತ್ರದೇವತಾ ಸನ್ನಿಧಾನಯುಕ್ತ ದೇಹವುಳ್ಳವನು ಭವೇತ್=

ಕೊಳ್ಳಬೇಕು. ಓಂಕಾರದಿಂದ ಹಿಡಿದು ಯಕಾರದವರೆಗೆ ಹನ್ನೆರಡು ಅಕ್ಷರಗಳನ್ನೂ ಬಲಗೈ ಹೆಬ್ಬೆರಳಿನಿಂದ ಪ್ರಾರಂಭಿಸಿ ಎಡಗೈ ಕೊನೆಯ ಬೆರಳವರೆಗೆ ಹತ್ತು ಬೆರಳುಗಳಲ್ಲಿಯೂ ಬಲಹೆಬ್ಬೆರಳಿನ ಪರ್ವ ಮತ್ತು ಎಡ ಹೆಬ್ಬೆರಳಿನ ಪರ್ವ ಹೀಗೆ ಹನ್ನೆರಡು ಸ್ಥಾನಗಳಲ್ಲಿಯೂ ನ್ಯಾಸಮಾಡಿಕೊಳ್ಳಬೇಕು. 'ಓಂ ವಿಷ್ಣವೇ ನಮಃ' ಎಂಬುದು ವಿಷ್ಣು ಷಡಕ್ಷರ ಮಂತ್ರ. ಇದರಲ್ಲಿ ಓಂಕಾರವನ್ನು ಹೃದಯದಲ್ಲಿಯೂ, ವಿಕಾರವನ್ನು ಶಿರಸ್ಸಿನಲ್ಲಿ ಅಥವಾ ಹಣೆಯಲ್ಲಿಯೂ, ಷಕಾರವನ್ನು ಹುಬ್ಬುಗಳ ಮಧ್ಯದಲ್ಲಿಯೂ, ಣಕಾರವನ್ನು ತಲೆಗೂದಲಲ್ಲಿಯೂ, ವೇಕಾರವನ್ನು ಕಣ್ಣುಗಳಲ್ಲಿಯೂ, ನಕಾರವನ್ನು ಎಲ್ಲ ಸಂಧಿಗಳಲ್ಲಿಯೂ, ಮಕಾರವನ್ನು ಅಸ್ತ್ರಾಯಫಟ್ ಎಂದು ಅಸುರನಿರಾಸಕ್ಕಾಗಿ ಎಲ್ಲ ದಿಕ್ಕುಗಳಲ್ಲಿಯೂ ನ್ಯಾಸಮಾಡಬೇಕು. ಈ ಮೂರು ಬಗೆಯ ನ್ಯಾಸಗಳಿಂದ ಮಂತ್ರಾರ್ಥ ಜ್ಞಾನಿಯು ಮಂತ್ರದೇವತಾ ಸನ್ನಿಧಾನ

ಆಗುವನು. ಅಂತಂ=ರಾಕ್ಷಸರ ನಾಶಕರವಾದ ಫಟ್ ಎಂಬ ಅಕ್ಷರವನ್ನಾಗಲಿ ತಂ=[ಸ್ವಾಹಾ ವಿಸರ್ಗಸಹಿತವಾದ] ಮಕಾರವನ್ನೂ ಫಟ್ ಎಂಬಕ್ಷರವನ್ನೂ ಎಂದು ಪದಚ್ಛೇದ ಮಾಡಿರುವರು. || ೮–೧೦ ||

ಓಂ ವಿಷ್ಣವೇ ನಮಃ ಇತ್ಯಾತ್ಮಾನಂ ಪರಂ ಧ್ಯಾಯೇದ್ಧ್ಯೇಯಂ ಷಟ್‌ಶಕ್ತಿಭಿರ್ಯುತಂ ।
ವಿದ್ಯಾ ತೇಜಸ್ತಪೋಮೂರ್ತಿರಿಮಂ ಮಂತ್ರಮುದಾಹರೇತ್ ||೧೧||

ಷಕಾರ ಣಕಾರಗಳನ್ನು ಬೇರೆ ಬೇರೆ ಹೇಳಿದ್ದರಿಂದ 'ವಿಷಣವೇ ನಮಃ' ಎಂದು ಮಂತ್ರಾಕಾರವೆಂದು ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ಮಂತ್ರವನ್ನು ಉದ್ಧರಿಸಿ ಹೇಳುತ್ತಾರೆ. 'ಓಂ ವಿಷ್ಣವೇ ನಮಃ' ಎಂದು ಮಂತ್ರವು. ಅನಂತರ ಧ್ಯೇಯವಾದ ದೇವತಾಪ್ರಕಾರವನ್ನು ಹೇಳುತ್ತಾರೆ. **ಷಟ್‌ಶಕ್ತಿಭಿಃ** = ಐಶ್ವರ್ಯ ಮೊದಲಾದ ಆರು ಶಕ್ತಿಗಳಿಂದ (ಭಗವಚ್ಛಬ್ದ ವಾಚ್ಯಗಳಿಂದ) ೨) ಉತ್ಸಾಹ, ಪ್ರಭು, ಮಂತ್ರ, ಜ್ಞಾನ, ಕ್ರಿಯಾ ಮತ್ತು ಇಚ್ಛಾಶಕ್ತಿಗಳಿಂದ **ಯುತಂ=ಕೂಡಿರುವ ಧ್ಯೇಯಂ**=ಧ್ಯಾನಮೂರ್ತಿಯಾದ ಪರಂ ಆತ್ಮಾನಂ=ಪರಮಾತ್ಮನಾದ ಶ್ರೀಹರಿಯನ್ನು ಧ್ಯಾಯೇತ್=ಧ್ಯಾನಮಾಡಬೇಕು. ವಿದ್ಯಾತೇಜಸ್ತ**ಪೋಮೂರ್ತಿಃ** (ಸನ್) =ಶ್ರೀಹರಿಯ ಮತ್ತು ತನ್ನ ಜ್ಞಾನರೂಪವಾದ ವಿದ್ಯೆ, ಬ್ರಹ್ಮವರ್ಚಸ್ಸು, ಶತ್ರು ಸಂತಾಪನಶಕ್ತಿ ಇವುಗಳಿಂದ ಕೂಡಿದ ದೇಹವುಳ್ಳವನಾಗಿ (ಇದರಿಂದ ಅಧಿಕಾರ ಸಂಪತ್ತನ್ನು ಹೇಳಿದಂತಾಯಿತು). ಇಮಂ ಮಂತ್ರಂ=ಮುಂದೆ ಹೇಳುವ ನಾರಾಯಣ ಕವಚ ಮಂತ್ರವನ್ನು ಉದಾಹರೇತ್=ಪಠಿಸಬೇಕು. ಧ್ಯೇಯಂ ಎಂಬುದರಿಂದ ಸಂದೇಹವನ್ನು ಪರಿಹರಿಸಿರುವರು. 'ಈಶ್ವರಸ್ಯಾತ್ಮನಶ್ಚಾಪಿ ಜ್ಞಾನಂ ವಿದ್ಯಾ ಇಹೋಚ್ಯತೇ' 'ಶ್ರುತಮಧ್ಯಯನಂ ಶೀಲಂ ತಪ ಇತ್ಯುಚ್ಯತೇ ಬುಧೈಃ' ಈ ಮಂತ್ರವನ್ನು ಪಠಿಸಬೇಕು. ಇದರಿಂದ ವಿದ್ಯಾತೇಜಸ್ತಪೋಮೂರ್ತಿಯಾಗುವನು ಎಂದೂ ಅನ್ವಯ ಮಾಡಿರುವರು. || ೧೧ ||

ಓಂ|| ಹರಿರ್ವಿದಧ್ಯಾನ್ಮಮ ಸರ್ವರಕ್ಷಾಂ
ನ್ಯಸ್ತಾಂಘ್ರಿಪದ್ಮಃ ಪತಗೇಂದ್ರಪೃಷ್ಠೇ ।

ಯುಕ್ತದೇಹಿಯಾಗಿ ಆಗುವನು. ಅನಂತರ ಐಶ್ವರ್ಯ ಮೊದಲಾದ ಆರು ಶಕ್ತಿಗಳಿಂದ ಕೂಡಿದ ಶ್ರೀ ಹರಿಯನ್ನು ಧ್ಯೇಯಮೂರ್ತಿಯನ್ನಾಗಿ ಧ್ಯಾನಮಾಡಬೇಕು. ಆಗ ಇವನಲ್ಲಿ ಶ್ರೀ ಹರಿಯ ಜ್ಞಾನವೂ, ತನ್ನ ಜ್ಞಾನವೂ, ಬ್ರಹ್ಮವರ್ಚಸ್ಸೂ, ಶತ್ರು ಸಂತಾಪನ ಶಕ್ತಿಯೂ ಉಂಟಾಗುವುದು. ಹೀಗೆ ಅಧಿಕಾರಸಂಪತ್ತನ್ನು ತಂದುಕೊಂಡವನು ಈ ನಾರಾಯಣ ಕವಚ ಮಂತ್ರವನ್ನು ಪಠಿಸಬೇಕು.

ಗರುಡನ ಹೆಗಲಮೇಲೆ ಪಾದಾರವಿಂದಗಳನ್ನು ಇಟ್ಟಿರುವ, ಎಂಟು ಭುಜಗಳುಳ್ಳ, ಅವುಗಳಲ್ಲಿ ಶಂಖ, ಚಕ್ರ, ಗುರಾಣಿ, ಕತ್ತಿ, ಗದೆ, ಬಾಣ, ಧನುಸ್ಸು

ದರಾರಿಚರ್ಮಾಸಿಗದೇಷುಚಾಪ-
ಪಾಶಾನ್ ದಧಾನೋಽಷ್ಟಗುಣೋಽಷ್ಟಬಾಹುಃ ॥ ೧೨ ॥

ಹರಿರ್ವಿದಧ್ಯಾತ್ ಎಂದಾರಂಭಿಸಿ 'ಸ್ವತೇಜಸಾ ಗ್ರಸ್ತಸಮಸ್ತತೇಜಾ' ಎಂಬುದರ ವರೆಗೆ ನಾರಾಯಣ ಕವಚ ಮಂತ್ರ. ಪತಗೇಂದ್ರ ಪೃಷ್ಠೇ=ಗರುಡನ ಬೆನ್ನಿನಮೇಲೆ ನ್ಯಸ್ತಾಂಘ್ರಿಪದ್ಮಃ=ಕಮಲದಂತಿರುವ ಪಾದಗಳನ್ನು ಇಟ್ಟಿರುವ (ಗರುಡಾರೂಢನಾದ) ದರ=ಶಂಖ ಅರಿ=ಚಕ್ರ ಚರ್ಮ=ಗುರಾಣಿ, ಅಸಿ=ಕತ್ತಿ, ಗದಾ=ಗದೆ, ಇಷು=ಬಾಣ, ಚಾಪ=ಧನುಸ್ಸು ಮತ್ತು ಪಾಶಾನ್=ಪಾಶಗಳನ್ನು ದಧಾನಃ=ಎಂಟು ಕೈಗಳಲ್ಲಿಯೂ ಧರಿಸಿರುವ ಅಷ್ಟಬಾಹುಃ=ಎಂಟು ತೋಳುಗಳುಳ್ಳ ಅಷ್ಟಗುಣಃ= ೧) ಅಣಿಮಾದಿ ಎಂಟು ಸಿದ್ಧಿಗಳುಳ್ಳ, ೨) ಸೃಷ್ಟ್ಯಾದಿ ಎಂಟು ಗುಣಗಳುಳ್ಳ ೩) ವ್ಯಾಪ್ತಗಳಾದ ಅಂದರೆ ಪೂರ್ಣಗಳಾದ ಗುಣಗಳುಳ್ಳ ೪) ಸ್ವೀಕರಿಸುವ ಶುಭ ಗುಣಗಳುಳ್ಳ ಹರಿಃ=ಶ್ರೀಹರಿಯು ಸರ್ವರಕ್ಷಾಂ=ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಎಲ್ಲ ಆಪತ್ತುಗಳಿಂದ ರಕ್ಷಣೆಯನ್ನು ವಿದಧ್ಯಾತ್=ಮಾಡಲಿ. ಅಶೂಙ್ ವ್ಯಾಪ್ತೌ ಎಂಬ ಧಾತುವಿನಮೇಲೆ ಆಗಿರುವ ಅಷ್ಟಪದಕ್ಕೆ ವ್ಯಾಪ್ತವೆಂದು ಅರ್ಥ. 'ಅಶ' ಭೋಜನೇ ಎಂಬ ಧಾತುವಿನಿಂದ ಆಗಿರುವ ಅಷ್ಟಪದಕ್ಕೆ ಭೋಜನಮಾಡುವ (ಸ್ವೀಕರಿಸುವ) ಎಂದರ್ಥ. ಶ್ರೀಹರಿಯು ಶುಭವೆಂಬ ಗುಣವನ್ನೇ (ತನ್ನ ರೂಪವನ್ನೇ) ಸ್ವೀಕರಿಸುವನು. ಅಶುಭಲಕ್ಷಣವಾದ ದುಃಖವನ್ನು ಸ್ವೀಕರಿಸುವುದಿಲ್ಲ. 'ಶುಭಂ ಪಿಬತ್ಯಸೌ ನಿತ್ಯಂ ನಾಶುಭಂ ಸ ಹರಿಃ ಪಿಬೇತ್' ಎಂದು ಪ್ರಮಾಣವಿದೆ. ॥ ೧೨ ॥

ಜಲೇಷು ಮಾಂ ರಕ್ಷತು ಮತ್ಸ್ಯಮೂರ್ತಿ-
ರ್ಯಾದೋಗಣೇಭ್ಯೋ ವರುಣಸ್ಯ ಪಾಶಾತ್ ।
ಸ್ಥಲೇ ಚ ಮಾಯಾಬಟುವಾಮನೋಽವ್ಯಾ-
ತ್ತ್ರಿವಿಕ್ರಮಃ ಖೇಽವತು ವಿಶ್ವರೂಪಃ ॥ ೧೩ ॥

ಮತ್ಸ್ಯಮೂರ್ತಿಃ=೧) ಅಸುರರನ್ನು ಸಂಹರಿಸುವ ಶ್ರೀಹರಿಯು ೨) ನೀರನ್ನು ಕಲಕಿ ಸಂಚರಿಸುವ ಮತ್ಸ್ಯರೂಪಿಯು ಜಲೇಷು=ಸಮುದ್ರ, ನದಿ ಮೊದಲಾದ ಎಲ್ಲ ಜಲಾಶಯಗಳಲ್ಲಿಯೂ ಯಾದೋಗಣೇಭ್ಯಃ=ಮೊಸಳೆ ಮೊದಲಾದ ಜಲಚರ

ಮತ್ತು ಪಾಶಗಳನ್ನು ಹಿಡಿದಿರುವ, ಅಣಿಮಾದಿ-ಸೃಷ್ಟಿ ಕರ್ತೃತ್ವಾದಿ ಪೂರ್ಣ ಗುಣಗಳುಳ್ಳ ಶ್ರೀ ಹರಿಯು ಎಲ್ಲ ರೀತಿಯ ರಕ್ಷಣೆಯನ್ನು ಮಾಡಲಿ. ಎಲ್ಲ ಜಲಾಶಯಗಳಲ್ಲಿಯೂ ಮೊಸಳೆ ಮೊದಲಾದ ಜಲಚರ ಪ್ರಾಣಿಗಳಿಂದ ಮತ್ತು ವರುಣ ಪಾಶದಿಂದ ಮತ್ಸ್ಯಮೂರ್ತಿಯು ನನ್ನನ್ನು ರಕ್ಷಿಸಲಿ. ತನ್ನಿಚ್ಛೆಯಂತೆ ವಟುವಾದ ವಾಮನಮೂರ್ತಿಯು ಭೂಮಿಯ ಮೇಲೆ ಎಲ್ಲ ಪ್ರಾಣಿಗಳಿಂದಲೂ, ಸ್ಥೂಲ ಪ್ರಪಂಚವೇ ಪ್ರತಿಮೆಯಾಗಿಯುಳ್ಳ ತ್ರಿವಿಕ್ರಮನು ಆಕಾಶದಲ್ಲಿ ಎಲ್ಲ ಖೇಚರ

ಪ್ರಾಣಿಗಳಿಂದ ವರುಣಸ್ಯ ಪಾಶಾತ್=ವರುಣ ಪಾಶದಿಂದ ಮಾಂ=ನನ್ನನ್ನು ರಕ್ಷತು=ಕಾಪಾಡಲಿ. ಮಾಯಾವಟುವಾಮನಃ ಚ=ತನ್ನ ಇಚ್ಛೆಯಿಂದಲೇ ವಟುವಾಗಿ ಅವತರಿಸಿದ ವಾಮನಮೂರ್ತಿಯು ಸ್ಥಲೇ=ಭೂಮಿಯಮೇಲೆ ಎಲ್ಲ ಪ್ರಾಣಿಗಳಿಂದ ಅವ್ಯಾತ್=ಕಾಪಾಡಲಿ. ವಿಶ್ವರೂಪಃ=ಸ್ಥೂಲ ಪ್ರಪಂಚವೇ ತನ್ನ ಪ್ರತಿಮಾಸ್ಥಾನವಾಗಿಯುಳ್ಳ ತ್ರಿವಿಕ್ರಮರೂಪಿಯು ಖೇ=ಆಕಾಶದಲ್ಲಿ ಅವತು=ರಕ್ಷಿಸಲಿ. ವರುಣ ಪಾಶವೂ ಯಾದೋಗಣದಲ್ಲಿಯೇ ಸೇರಿದ್ದರೂ ವರುಣಪಾಶಕ್ಕೆ ಸಿಕ್ಕಿದವನು ಸಾಯುವುದು ನಿಶ್ಚಿತವಾದ್ದರಿಂದ ಅದರ ಪರಿಹಾರಕ್ಕಾಗಿ ಬೇರೆಯಾಗಿ ಹೇಳಿರುವರೆಂದು ತಿಳಿಯಬೇಕು. 'ಶಿರೋ ಮಮಂಥ ತರಸಾ' ಎಂಬ ಪ್ರಯೋಗದಂತೆ 'ಮಥಿ'ಧಾತುವಿಗೆ ಹಿಂಸೆಯು ಅರ್ಥ. ಹಿಂಸಿಸುವ ಅಸುರನು ಮತ್=ಅವನನ್ನು ಸ್ಯತಿ=ನಾಶಮಾಡುವನು 'ಮತ್ಸ್ಯ' ಎಂದು ಮೊದಲ ಅರ್ಥ. ಮೀನು ಎಂಬರ್ಥದಲ್ಲಿ ಮಥನವೆಂದರೆ ಕಲಕುವುದು. ಸೃ ಗತೌ ಧಾತುವಿನ ಮೇಲೆ ಆದ ಸ್ಯ ಎಂಬುದಕ್ಕೆ ಸರಣವೆಂದರ್ಥ. ವಿಶ್ವವೆಂದರೆ ವ್ಯಾಪ್ತವಾದ ಎಂದರ್ಥ. || ೧೩ ||

ದುರ್ಗೇಷ್ವಟವ್ಯಾಜಿಮುಖಾದಿಷು ಪ್ರಭುಃ
ಪಾಯಾನ್ನೃಸಿಂಹೋಽಸುರಯೂಥಪಾರಿಃ ।
ವಿಮುಂಚತೋ ಯಸ್ಯ ಮಹಾಟ್ಟಹಾಸಂ
ದಿಶೋ ವಿನೇದುರ್ನ್ಯಪತಂಶ್ಚ ಗರ್ಭಾಃ ॥ ೧೪ ॥

ಅಟವೀ=ಅಡವಿ ಆಜಿ=ಯುದ್ಧ ಮಖಾದಿಷು=ಯಜ್ಞ ಮೊದಲಾದ ದುರ್ಗೇಷು=ಸಂಕಟ ಸ್ಥಳಗಳಲ್ಲಿ ಅಸುರಯೂಥಪಾರಿಃ=ದೈತ್ಯಸೇನಾನಾಯಕರ ಶತ್ರುವಾದ ಪ್ರಭುಃ=ಸಮರ್ಥನಾದ ನೃಸಿಂಹರೂಪಿಯು ಪಾಯಾತ್=ಕಾಪಾಡಲಿ. ಯಸ್ಯ=ಯಾವ ಈ ನೃಸಿಂಹನು ಮಹಾಟ್ಟಹಾಸಂ=ಅತಿಶಯವಾದ ಗಹಗಹಿಸುವ ನಗುವನ್ನು ವಿಮುಂಚತಃ (ಸತಃ)=ಮಾಡುತ್ತಿರಲು ದಿಶಃ=ದಿಕ್ಕುಗಳು ವಿನೇದುಃ=ಪ್ರತಿಧ್ವನಿ ಮಾಡಿದುವೋ ಗರ್ಭಾಶ್ಚ=ಅಸುರಸ್ತ್ರೀಯರ ಗರ್ಭಗಳೂ ಕೂಡ ನ್ಯಪತನ್=ಕಳಚಿಬಿದ್ದುವೋ ಅಂತಹ ನೃಸಿಂಹನು ಎಂದು ಹಿಂದಕ್ಕೆ ಅನ್ವಯ. || ೧೪ ||

ರಕ್ಷತ್ವಸೌ ಮಾಽಧ್ವನಿ ಯಜ್ಞಕಲ್ಪಃ
ಸ್ವದಂಷ್ಟ್ರಯೋನ್ನೀತಧರೋ ವರಾಹಃ ।

ಗಳಿಂದಲೂ ಕಾಪಾಡಲಿ. ದೈತ್ಯ ಸೇನಾನಾಯಕರ ಶತ್ರುವೂ ಸಮರ್ಥನೂ ಆದ ನರಸಿಂಹರೂಪಿಯು ಅಡವಿ, ಯುದ್ಧ, ಯಜ್ಞ ಮೊದಲಾದ ಕಠಿಣ ಪ್ರದೇಶಗಳಲ್ಲಿ ಸಲಹಲಿ. ಅವನು ಅತಿಯಾಗಿ ಗಹಗಹಿಸಿ ನಕ್ಕಾಗ ಎಲ್ಲ ದಿಕ್ಕುಗಳೂ ಪ್ರತಿಧ್ವನಿ ಮಾಡಿದುವು; ದೈತ್ಯ ಸ್ತ್ರೀಯರ ಗರ್ಭಗಳು ಪಾತವಾದುವು. ತನ್ನ ಕೋರೆ ಹಲ್ಲಿನಿಂದ ಭೂಮಿಯನ್ನು ಮೇಲಕ್ಕೆ ತಂದ, ತನ್ನ ಅಂಗಗಳಿಂದ ಯಜ್ಞ ಮತ್ತು ಅವುಗಳ

ರಾಮೋಽದ್ರಿಕೂಟೇಷ್ವಥ ವಿಪ್ರವಾಸೇ
ಸಲಕ್ಷ್ಮಣೋಽವ್ಯಾದ್ಭರತಾಗ್ರಜೋ ಮಾಮ್ ॥ ೧೫ ॥

ಸ್ವದಂಷ್ಟ್ರಯಾ=ತನ್ನ ದಾಡೆಹಲ್ಲಿನಿಂದ ಉನ್ನೀತಧರಃ=ಭೂಮಿಯನ್ನು ಎತ್ತಿ ತಂದ ಯಜ್ಞಕಲ್ಪಃ=೧) ತನ್ನ ಅವಯವಗಳಿಂದ ಯಜ್ಞಗಳನ್ನು ಸೃಷ್ಟಿಸಿದ ೨) ವಿಷ್ಣುವಿಗೆ ಸಮನಾದ ೩) ವಿಷ್ಣುವೇ ಆದ ಅಸೌ=ಈ ಪ್ರಸಿದ್ಧನಾದ ವರಾಹ ರೂಪಿಯು ಮಾ=ನನ್ನನ್ನು ಅಧ್ವನಿ=ಮಾರ್ಗದಲ್ಲಿ ರಕ್ಷತು=ರಕ್ಷಿಸಲಿ. ಅದ್ರಿ ಕೂಟೇಷು=ಬೆಟ್ಟಗಳ ಶಿಖರಗಳಲ್ಲಿ ರಾಮಃ=ಪರಶುರಾಮನು ರಕ್ಷಿಸಲಿ. ಅಥ=ಮತ್ತು ವಿಪ್ರವಾಸೇ=ಅನೇಕ ರೀತಿಯ ಪ್ರವಾಸಗಳಲ್ಲಿ ಸಲಕ್ಷ್ಮಣಃ=ಲಕ್ಷ್ಮಣನಿಂದ ಕೂಡಿದ ಭರತಾಗ್ರಜಃ=ಭರತನ ಅಣ್ಣನಾದ ರಾಮನು ದಾಶರಥಿಯು ಮಾಂ=ನನ್ನನ್ನು ರಕ್ಷತು=ರಕ್ಷಿಸಲಿ. ॥ ೧೫ ॥

ಮಾಮುಗ್ರಧನ್ವಾ ಅಖಿಲಪ್ರಮಾದಾ-
ನ್ನಾರಾಯಣಃ ಪಾತು ನರಶ್ಚ ಹಾಸಾತ್ ।
ದತ್ತಸ್ತ್ವಯೋಗಾದಥ ಯೋಗನಾಥಃ
ಪಾಯಾದ್ಗುಣೇಶಃ ಕಪಿಲಃ ಕರ್ಮಬಂಧಾತ್ ॥ ೧೬ ॥

ಉಗ್ರಧನ್ವಾ=ದೈತ್ಯಭಯಂಕರವಾದ ಧನುಸ್ಸನ್ನು ಧರಿಸಿರುವ ನಾರಾಯಣಃ=ನಾರಾಯಣರೂಪಿಯಾದ ಶ್ರೀಹರಿಯು ಅಖಿಲಪ್ರಮಾದಾತ್=ಶ್ರೀಹರಿಯ ವಿಸ್ಮರಣೆ ಮತ್ತು ಅನ್ಯಥಾ ಜ್ಞಾನಾದಿಗಳಿಂದ ಮಾಂ=ನನ್ನನ್ನು ಪಾತು=ರಕ್ಷಿಸಲಿ. ನರಃ ಚ=ನರನಲ್ಲಿ ಆವಿಷ್ಟನಾದ ನರನಾಮಕ ಶ್ರೀಹರಿಯು ಹಾಸಾತ್=ಉನ್ಮಾದದಿಂದ ಉಂಟಾಗುವ ನಗುವಿನಿಂದ ಪಾತು=ಕಾಪಾಡಲಿ ಅಥ=ಮತ್ತು ಯೋಗನಾಥಃ=ಅಷ್ಟಾಂಗಯೋಗ ಪ್ರವರ್ತಕನಾದ ದತ್ತಃ ತು=ದತ್ತಾತ್ರೇಯ ರೂಪಿಯು ಅಯೋಗಾತ್=೧) ಯೋಗಭ್ರಂಶದಿಂದ ೨) ನಾರಾಯಣಸ್ಮರಣೆ ಮೊದಲಾದ ಉಪಾಯವಿಲ್ಲದಿರುವಿಕೆಯಿಂದ ಮಾಂ=ನನ್ನನ್ನು ಪಾಯಾತ್=ಕಾಪಾಡಲಿ. ಗುಣೇಶಃ=ಪ್ರಾಕೃತ ಗುಣಗಳಿಂದ ಬಂದಿರುವ ಈ ಬಂಧವನ್ನು ಹೋಗಲಾಡಿಸಲು

ಸಾಮಗ್ರಿಗಳನ್ನು ಸೃಷ್ಟಿಮಾಡಿದ ಯಜ್ಞವರಾಹನು ಮಾರ್ಗದಲ್ಲಿಯೂ, ಪರಶುರಾಮನು ಗಿರಿ ಶಿಖರಗಳಲ್ಲಿಯೂ, ಲಕ್ಷ್ಮಣನಿಂದ ಕೂಡಿದ ಭರತಾಗ್ರಜ ರಾಮಚಂದ್ರನು ಬಗೆಬಗೆಯ ಪ್ರವಾಸಗಳಲ್ಲಿಯೂ ನನ್ನನ್ನು ರಕ್ಷಿಸಲಿ. ದೈತ್ಯ ಭಯಂಕರ ಧನುರ್ಧಾರಿಯಾದ ನಾರಾಯಣನು ಅವನ ವಿಸ್ಮರಣೆ ಅನ್ಯಥಾ ಜ್ಞಾನಗಳು ಬಾರದಂತೆಯೂ, ನರನಲ್ಲಿ ಆವಿಷ್ಟನಾಗಿರುವ ನರನಾಮಕ ಶ್ರೀಹರಿಯು ಉನ್ಮಾದ ಬಾರದಂತೆಯೂ, ಯೋಗಸಿದ್ಧಿಗಳಿಗೆ ಪ್ರವರ್ತಕನಾದ ದತ್ತಾತ್ರೇಯನು ಯೋಗಭ್ರಂಶವಾಗದಂತೆಯೂ, ಪ್ರಾಕೃತ ಗುಣಕಾರ್ಯವಾದ ಬಂಧವನ್ನು ಪರಿಹರಿಸುವ ಸಾಮರ್ಥ್ಯವುಳ್ಳ ಕಪಿಲರೂಪಿಯು ಕರ್ಮಫಲ ಲೋಪವಾಗದಂತೆಯೂ

ಸಮರ್ಥನಾದ ಕಪಿಲಃ-ಕಪಿಲರೂಪಿ ಶ್ರೀಹರಿಯು ಕರ್ಮಬಂಧಾತ್-ಕರ್ಮಗಳ ಫಲಲೇಪವೆಂಬ ಬಂಧನದಿಂದ ನನ್ನನ್ನು ಪಾಯಾತ್-ಕಾಪಾಡಲಿ. 'ಸದಾ ವಿಷ್ಣೋರನ್ಯಥಾ ಜ್ಞಾನವರ್ಜನಂ| ಶಾಸ್ತ್ರಾಭ್ಯಾಸಃ ಸದೋದ್ಯೋಗಾತ್ ಶ್ರವಣಾಚ್ಚ ವಿಚಾರತಃ| ನಿಷಿದ್ಧಕರ್ಮಣಾಂ ತ್ಯಾಗಃ ಸ್ವಧರ್ಮಸ್ಯ ಕೃತಿಃ ಸದಾ| ಅಪ್ರಮಾದ ಇತಿ ಪ್ರೋಕ್ತಃ' || ಎಂಬ ಪ್ರಮಾಣದಲ್ಲಿ ಹೇಳಿರುವ ಅಪ್ರಮಾದವನ್ನು ಕೊಡಲಿ ಎಂದರ್ಥ. 'ವಿಷ್ಣೋರ್ವಾಯೋರನಂತಸ್ಯ ತ್ರಿಭಿರಂಶೈರ್ನರಃ ಸ್ಮೃತಃ' ಎಂಬುದ ರಂತೆ ವಿಷ್ಣುವಿನ ಆವೇಶವಿದೆಯೆಂದು ತಿಳಿಯಬೇಕು. ಉಗ್ರಧನ್ವಾ ಅಖಿಲ ಎಂದು ಸಂಧಿಮಾಡದಿರುವುದು ಈ ಗ್ರಂಥವು ಛಂದಸ್ಸಿಗೆ ಸಮಾನವೆಂದು ತಿಳಿಸುವುದಕ್ಕಾಗಿ. || ೧೬ ||

ಸನತ್ಕುಮಾರೋಽವತು ಕಾಮದೇವಾ-
ದ್ಧಯಶೀರ್ಷೋ ಮಾಂ ಪಥಿ ದೇವಹೇಲನಾತ್ ।
ದೇವರ್ಷಿವರ್ಯಃ ಪುರುಷಾಂತರಾರ್ಚನಾ-
ತ್ಕೂರ್ಮೋ ಹರಿರ್ಮಾಂ ನಿರಯಾದಶೇಷಾತ್ ॥ ೧೭ ॥

ಸನತ್ಕುಮಾರಃ-ಸನತ್ಕುಮಾರನಲ್ಲಿ ಆವಿಷ್ಟನಾದ ಬ್ರಹ್ಮಚಾರಿಯಾದ ಸನತ್ ಕುಮಾರನಾಮಕ ಶ್ರೀಹರಿಯು ಕಾಮದೇವಾತ್-ಮನ್ಮಥನಿಂದುಂಟಾಗುವ ಮದ್ಯ ಸೇವನೆ ಮೊದಲಾದ ದುರ್ವಿಷಯಗಳಿಂದ (ದುರ್ವಿಷಯೇಚ್ಛೆಯನ್ನು ಮನಸ್ಸಿನಲ್ಲಿ ಹುಟ್ಟಿಸುವ ಮನ್ಮಥಸಿಂದ) ನನ್ನನ್ನು ಅವತು-ಕಾಪಾಡಲಿ. ಹಯಶೀರ್ಷಃ-ಹಯಗ್ರೀವರೂಪಿಯಾದ ಶ್ರೀಹರಿಯು ಪಥಿ-ದಾರಿಯಲ್ಲಿ (ಸಾಧನೆಯ ಮಾರ್ಗದಲ್ಲಿ) ದೇವಹೇಲನಾತ್-ನಮಸ್ಕಾರ್ಯರಾದ ದೇವತೆಗಳ ತಿರಸ್ಕಾರದಿಂದ ನನ್ನನ್ನು ಕಾಪಾಡಲಿ. ದೇವರ್ಷಿವರ್ಯಃ-ಬ್ರಹ್ಮಾದಿ ದೇವತೆಗಳಿಗೂ ಋಷಿಗಳಿಗೂ ಶ್ರೇಷ್ಠ ನಾದ ಮಹಿದಾಸರೂಪಿಯು ಪುರುಷಾಂತರಾರ್ಚನಾತ್-ವಿಷ್ಣುವಿನ ಪರಿವಾರ ವೆಂದಲ್ಲದೆ ಪ್ರಧಾನವಾಗಿ ಬ್ರಹ್ಮಾದಿಗಳನ್ನು ಪೂಜಿಸುವಿಕೆಯಿಂದ ಮತ್ತು ಶ್ರೀಹರಿಗೆ ಅರ್ಪಿಸದಿರುವ ಅರ್ಚನಾರೂಪವಾದ ಕರ್ಮದಿಂದ ಹಾಗೂ ಅವನ ಸ್ಮರಣೆಯಿಲ್ಲದೆ ಮಾಡುವ ಅರ್ಚನೆಯಿಂದ (ಅನರ್ಚನೆಯಿಂದ) ನನ್ನನ್ನು ಕಾಪಾಡಲಿ. ವಿ. ಅ. 'ಸನತ್ಕುಮಾರನಾಮಾ ತು ಬ್ರಹ್ಮಚರ್ಯವಪುರ್ಹರಿಃ| ಸನತ್ಕುಮಾರಮಪರಂ ಬ್ರಹ್ಮಪುತ್ರಂ ವಿವೇಶ ಯಃ| ಸ ಮಾಂ ಯೋಗ್ಯೇತರಾತ್ಕಾಮಾತ್ಪಾತು ವಿಶ್ವೇಶ್ವರಃ

ನನ್ನನ್ನು ಕಾಪಾಡಲಿ. ಸನತ್ಕುಮಾರನಲ್ಲಿ ಆವಿಷ್ಟನಾಗಿರುವ ಸನತ್ಕುಮಾರ ನಾಮಕ ಶ್ರೀಹರಿಯು ಮನ್ಮಥನಿಂದುಂಟಾಗುವ ದುರ್ವಿಷಯೇಚ್ಛೆಯಿಂದಲೂ, ಹಯಗ್ರೀವ ರೂಪಿಯು ಸಾಧನೆಯ ಮಾರ್ಗದಲ್ಲಿ ಪೂಜ್ಯರಾದ ದೇವತೆಗಳನ್ನು ತಿರಸ್ಕರಿಸುವಿಕೆ ಯಿಂದಲೂ, ಬ್ರಹ್ಮ ಮೊದಲಾದ ದೇವತೆಗಳಿಗೂ ಋಷಿಗಳಿಗೂ ಶ್ರೇಷ್ಠನಾದ ಮಹಿದಾಸರೂಪಿಯು ಶ್ರೀಹರಿಯನ್ನು ಬಿಟ್ಟು ಮತ್ತೊಬ್ಬರನ್ನು ಸರ್ವೋತ್ತಮ ವಸ್ತು

ಪ್ರಭುಃ' || ಎಂಬ ಪ್ರಮಾಣವೂ 'ಮಹಿದಾಸಸ್ತು ದೇವರ್ಷಿಃ ಪಾತು ಮಾಂ ವಿಷ್ಣುರವ್ಯಯಃ | ತದನರ್ಪಿತ ಕರ್ಮಭ್ಯಃ ತದಸ್ಮರಣತಸ್ತಥಾ' ಎಂಬ ಪ್ರಮಾಣವೂ ಮೇಲಿನ ಅರ್ಥವನ್ನೇ ಸ್ಪಷ್ಟಪಡಿಸುವುವು. ಮಹಿದಾಸ ಎಂದು ಹೇಳದೆ ಆ ಅರ್ಥ ಬರುವ ದೇವರ್ಷಿ ಪದವನ್ನು ಹಾಕಿದ್ದರಿಂದ ಈ ಎರಡನೆಯ ಪ್ರಮಾಣವನ್ನು ಸೂಚಿಸಿರುವರು. ಇದರಿಂದ ಈ ಕವಚ ವಿದ್ಯೆಯಲ್ಲಿ ವೈಷ್ಣವರಿಗೇ ಅಧಿಕಾರವೆಂದು ತೋರಿಸಿದಂತಾಯಿತು. ಅವರಿಗೇ ಹರಿಯ ವಿಶೇಷ ಸ್ಮರಣೆ, ಜ್ಞಾನಗಳ ಪೂರ್ತಿಯು ಆಗುವುದು. ಇಲ್ಲಿ ಕೆಲವರು 'ಪುರುಷಾರ್ಚನಾಂತರಾತ್' ಎಂದು ಪಠಿಸಿ ಅಂತರವೆಂದರೆ ಅಂತರಾಯ (ವಿಘ್ನ) ವೆಂದು ಅರ್ಥಮಾಡಿರುವರು. ಅದು ಸರಿಯಲ್ಲ. 'ಅಂತರಃ ಪರಿಧಾನೀಯೇ ಬಾಹ್ಯೇ ಸ್ವೀಯೇಽಂತರಾತ್ಮನಿ, ಇತ್ಯಾದಿ ಸ್ಥಳಗಳಲ್ಲಿ ಮೇಲೆ ಹೇಳಿದ ಅರ್ಥದಲ್ಲಿ ಪ್ರಯೋಗವು ಕಂಡುಬಂದಿದೆ. || ೧೭ ||

ಧನ್ವಂತರಿರ್ಭಗವಾನ್ ಪಾತ್ವಪಥ್ಯಾ-
ದ್ದ್ವಂದ್ವಾದ್ಭಯಾದೃಷಭೋ ನಿರ್ಜಿತಾತ್ಮಾ |
ಯಜ್ಞಶ್ಚ ಲೋಕಾದುತ ತತ್ಕೃತಾನ್ನೋ
ಬಲೋ ಗಣಾತ್ಕ್ರೋಧವಶಾದಹೀಂದ್ರಃ || ೧೮ ||

ಭಗವಾನ್ – ಸಮಗ್ರ ಐಶ್ವರ್ಯಸಂಪನ್ನನಾದ ಧನ್ವಂತರಿರೂಪಿಯು ಅಪಥ್ಯಾತ್=ಶರೀರಕ್ಕೆ ರೋಗವನ್ನು ತಂದುಕೊಡುವ ಅಹಿತ ಆಹಾರ ಸೇವನೆಯಿಂದ ನನ್ನನ್ನು ಕಾಪಾಡಲಿ. ನಿರ್ಜಿತಾತ್ಮಾ=ಇಂದ್ರಿಯ ಸಮೂಹವನ್ನು ತನ್ನ ವಶದಲ್ಲಿ ಹೊಂದಿರುವ ಋಷಭಃ=ಋಷಭನಾಮಕನಾದ ಶ್ರೀಹರಿಯು ದ್ವಂದ್ವಾದ್ಭಯಾತ್– ಶೀತೋಷ್ಣ ಮೊದಲಾದ ದ್ವಂದ್ವಗಳ ಭಯದಿಂದ ನನ್ನನ್ನು ಕಾಪಾಡಲಿ. ಯಜ್ಞಃ ಚ=ಯಜ್ಞನಾಮಕನಾದ ಯಾಗಪ್ರವರ್ತಕ ಶ್ರೀಹರಿಯು ತತ್ಕೃತಾತ್= ಯಜ್ಞದ ಫಲವಾಗಿ ಬರುವ ಲೋಕಾತ್–ಅನಿತ್ಯವಾದ ಸ್ವರ್ಗಾದಿ ಲೋಕಗಳಿಂದ (ಲೋಕಾತ್–ಜನಾಪವಾದದಿಂದ ತತ್ಕೃತಾತ್–ಜನರಿಂದಾಗುವ ಉಪಘಾತದಿಂದ) ನಃ=ನಮ್ಮನ್ನು ಕಾಪಾಡಲಿ. ಬಲಃ – ೧) ಬಲರಾಮನಾದ ೨) ಬಲಿಷ್ಠನಾದ ಅಹೀಂದ್ರಃ=ಶೇಷನಾಮಕನು (ಬಲರಾಮನಲ್ಲಿ ಆವಿಷ್ಟನಾದ ಶ್ವೇತಕೇಶಾತ್ಮಕನು, ಶೇಷನಲ್ಲಿ ಆವಿಷ್ಟನಾಗಿರುವ ಶೇಷನಾಮಕನು) ಕ್ರೋಧವಶಾತ್ ಗಣಾತ್–ಸರ್ಪಗಣದಿಂದ ನಮ್ಮನ್ನು ಕಾಪಾಡಲಿ. 'ಶಂಖಚಕ್ರಭೃದೀಶೇಶಃ ಶ್ವೇತವರ್ಣೋ ಮಹಾ-

---

ವೆಂದು ಪೂಜಿಸುವುದರಿಂದಲೂ, ಕೂರ್ಮರೂಪಿಯು ನರಕದಿಂದಲೂ ನನ್ನನ್ನು ರಕ್ಷಿಸಲಿ. ಭಗವಂತನಾದ ಧನ್ವಂತರಿನಾಮಕನು ರೋಗಜನಕ ಅಹಾರಸೇವನೆಯಿಂದಲೂ, ಇಂದ್ರಿಯ ನಿಗ್ರಹವುಳ್ಳ ಋಷಭನು ಶೀತೋಷ್ಣ ಮೊದಲಾದ ದ್ವಂದ್ವಗಳ ಭಯದಿಂದಲೂ ಯಜ್ಞನಾಮಕನು ನಶ್ವರ ಸ್ವರ್ಗಾದಿ ಲೋಕಗಳಿಂದಲೂ, ಶೇಷನಾದ ಬಲರಾಮನಲ್ಲಿ ಆವಿಷ್ಟನಾಗಿರುವ ಶ್ವೇತಕೇಶರೂಪಿಯು ಕೋಪಗೊಳ್ಳುವ

ಭುಜಃ| ಆವಿಷ್ಟಃ ಶ್ವೇತಕೇಶಾತ್ಮಾ ಶೇಷಾಂಶಂ ರೋಹಿಣೀಸುತಂ' || 'ಶೇಷದೇವಃ ಸಹಸ್ರಾಕ್ಷಃ ಸಹಸ್ರಾಂಘ್ರಿಶಿರೋಭುಜಃ' || ಈ ಮೊದಲಾದ ಪ್ರಮಾಣಗಳನ್ನು ಕಾಣಬಹುದು. || ೧೮ ||

ದ್ವೈಪಾಯನೋ ಭಗವಾನಪ್ರಬೋಧಾ-
ದ್ಬುದ್ಧಸ್ತು ಪಾಖಂಡಗಣಾತ್ಪ್ರಮಾದಾತ್ ।
ಕಲ್ಕಿಃ ಕಲೇಃ ಕಾಲಮಲಾತ್ಪ್ರಪಾತು
ಧರ್ಮಾವನಾಯೋರು ಕೃತಾವತಾರಃ || ೧೯ ||

ಭಗವಾನ್ – ಪೂರ್ಣೈಶ್ವರ್ಯನಾದ ದ್ವೈಪಾಯನಃ – ವೇದವ್ಯಾಸರೂಪಿಯು ಅಪ್ರಬೋಧಾತ್=ಅಜ್ಞಾನದಿಂದ ಉರು=ಮತ್ತೆ ಮತ್ತೆ ಪ್ರಪಾತು–ರಕ್ಷಿಸಲಿ. ಸಂಪ್ರಮೋಹಾತ್ ಎಂಬ ಪಾಠದಲ್ಲಿ ಮಿಥ್ಯಾಜ್ಞಾನದಿಂದ ಅಥವಾ ಅಧರ್ಮೇಚ್ಛೆಯಿಂದ ಎಂದರ್ಥ. ಬುದ್ಧಃ ತು=ಬುದ್ಧನಾಮಕನಾದ ಶ್ರೀಹರಿಯು ಪಾಖಂಡಗಣಾತ್=ಪಾಶುಪತ ಮೊದಲಾದ ದುಶ್ಶಾಸ್ತ್ರಗಳನ್ನು ಶ್ರವಣಮಾಡುವುದರಿಂದ ಬಂದ ಪ್ರಮಾದಾತ್=ಅನ್ಯಥಾ ಜ್ಞಾನದಿಂದ ಮತ್ತೆ ಮತ್ತೆ ಕಾಪಾಡಲಿ. ಧರ್ಮಾವನಾಯ–ಧರ್ಮರಕ್ಷಣೆಗಾಗಿ ಕೃತಾವತಾರಃ–ಅವತಾರ ಮಾಡಿದ ಕಲ್ಕಿನಾಮಕನಾದ ಶ್ರೀಹರಿಯು ಕಾಲಮಲಾತ್=ಕಾಲದ ಮಲವೆಂದು ಕರೆಯಲ್ಪಡುವ ಕಲೇಃ–ಕಲಿಯುಗದಿಂದ (ಕಲಿಯ ಪ್ರಭಾವದಿಂದ) ಮತ್ತೆ ಮತ್ತೆ ಕಾಪಾಡಲಿ. ಉರುಕೃತಾವತಾರಃ ಎಂದು ಒಂದೇ ಪದ ಮಾಡಿಕೊಂಡಾಗ ಮಹತ್ತರವಾದ ಅವತಾರ ಮಾಡಿದ ಎಂದರ್ಥ. 'ಬೌದ್ಧಪಾಶುಪತಾದ್ಯಾಸ್ತು ಪಾಖಂಡಾ ಇತಿ ಕೀರ್ತಿತಾಃ' || ೧೯ ||

ಮಾಂ ಕೇಶವೋ ಗದಯಾ ಪ್ರಾತರವ್ಯಾ-
ದ್ಗೋವಿಂದ ಆ ಸಂಗವ ಆತ್ತವೇಣುಃ ।
ನಾರಾಯಣಃ ಪಾತು ಸದಾಽತ್ತಶಕ್ತಿ-
ರ್ಮಧ್ಯಂದಿನೇ ವಿಷ್ಣುರರೀಂದ್ರಪಾಣಿಃ || ೨೦ ||

ಅಹೋರಾತ್ರಿಗಳನ್ನು ಪ್ರಾತಃಕಾಲದಿಂದ ಐದೈದು ಘಳಿಗೆಗಳಂತೆ ವಿಭಾಗ ಮಾಡಿ ಆ ಒಂದೊಂದು ವಿಭಾಗಕ್ಕೂ ಒಂದೊಂದು ಮೂರ್ತಿಯನ್ನು ಸಂಕಲ್ಪಿಸಿ

ಸರ್ಪಗಳಿಂದಲೂ ನಮ್ಮನ್ನು ರಕ್ಷಿಸಲಿ. ಪೂರ್ಣೈಶ್ವರ್ಯವಂತನಾದ ವೇದವ್ಯಾಸರೂಪಿಯು ಅಜ್ಞಾನದಿಂದಲೂ, ಬುದ್ಧರೂಪಿಯು ದುಶ್ಶಾಸ್ತ್ರಶ್ರವಣರೂಪವಾಗಿ ಬರುವ ಅನ್ಯಥಾ ಜ್ಞಾನದಿಂದಲೂ, ಧರ್ಮರಕ್ಷಣೆಗಾಗಿ ಅವತರಿಸಿದ ಕಲ್ಕಿಯು ಕಾಲಗಳಲ್ಲೆಲ್ಲ ಹೇಯವಾದ ಕಲಿಕಾಲದ ಪ್ರಭಾವದಿಂದಲೂ ನಮ್ಮನ್ನು ಕಾಪಾಡಲಿ. ಗದಾಪಾಣಿಯಾದ ಕೇಶವನು ಪ್ರಾತಃಕಾಲದಲ್ಲಿಯೂ, ವೇಣುಧಾರಿಯಾದ ಗೋವಿಂದನು (ಆ) ಸಂಗವ ಕಾಲದಲ್ಲಿಯೂ, ಶಕ್ತ್ಯಾಯುಧಧಾರಿಯಾದ ನಾರಾಯಣನು ಪ್ರಾಹ್ಣ

ಹೇಳುತ್ತಾರೆ. ಗದಯಾ (ಸಹಿತಃ)=ಗದೆಯಿಂದ ಕೂಡಿರುವ ಕೇಶವನು ಪ್ರಾತಃ ಕಾಲದಲ್ಲಿ ನನ್ನನ್ನು ಅವ್ಯಾತ್=ಕಾಪಾಡಲಿ. ಆತ್ತವೇಣುಃ=ಕೊಳಲನ್ನು ಧರಿಸಿದ ಗೋವಿಂದನು ಆಸಂಗವೇ=ಸಂಗವ ಕಾಲವನ್ನು ಸೇರಿಸಿಕೊಂಡು (ಮನೆಯ ಕೊಟ್ಟಿಗೆಗಳಿಂದ ಹೊರಟ ಹಸುಗಳು ಮುಂದೆಯಾಗಿ ಒಂದು ಕಡೆ ಸೇರುವ ಕಾಲಕ್ಕೆ ಆಸಂಗವ ಕಾಲವೆಂದು ಹೆಸರು.) ನನ್ನನ್ನು ಕಾಪಾಡಲಿ. ಆತ್ತಶಕ್ತಿಃ=ಶಕ್ತ್ಯಾಯುಧವನ್ನು ಧರಿಸಿದ ನಾರಾಯಣನು ಸದಾ=ಯಾವಾಗಲೂ (ಪ್ರಾಹ್ಣ ಕಾಲದಲ್ಲಿ) ಪಾತು=ರಕ್ಷಿಸಲಿ. ಅರೀಂದ್ರಪಾಣಿಃ=ಚಕ್ರವನ್ನು ಕೈಯಲ್ಲಿ ಹಿಡಿದಿರುವ ವಿಷ್ಣುವು ಮಧ್ಯಂದಿನೇ=ಮಧ್ಯಾಹ್ನದಲ್ಲಿ ಕಾಪಾಡಲಿ. || ೨೦ ||

ದೇವೋಽಪರಾಹ್ಣೇ ಮಧುಹೋಗ್ರಧನ್ವಾ
ಸಾಯಂ ತ್ರಿಧಾಮಾಽವತು ಮಾಧವೋ ಮಾಮ್ ।
ದೋಷೇ ಹೃಷೀಕೇಶ ಉತಾರ್ಧರಾತ್ರೇ
ನಿಶೀಥ ಏಕೋಽವತು ಪದ್ಮನಾಭಃ || ೨೧ ||

ಉಗ್ರಧನ್ವಾ=ದೈತ್ಯರಿಗೆ ಭಯಂಕರವಾದ ಶಾರ್ಙಧನುಸ್ಸನ್ನು ಧರಿಸಿರುವ ಮಧುಹಾ ದೇವಃ=ಮಧುಸೂದನನು ಅಪರಾಹ್ಣಕಾಲದಲ್ಲಿ ನನ್ನನ್ನು ಅವತು=ಕಾಪಾಡಲಿ. ತ್ರಿಧಾಮಾ=ಅನಂತಾಸನ, ಶ್ವೇತದ್ವೀಪ ಮತ್ತು ವೈಕುಂಠಗಳೆಂಬ ಮೂರು ಮನೆಗಳುಳ್ಳ (ವ್ಯಕ್ತವಾಗಿರುವ ಮೂರು ಸ್ಥಳಗಳುಳ್ಳ) ಮಾಧವರೂಪಿಯು ಸಾಯಂಕಾಲದಲ್ಲಿ ನನ್ನನ್ನು ಕಾಪಾಡಲಿ. ದೋಷೇ=ರಾತ್ರಿ ಭೋಜನಕಾಲದಲ್ಲಿ ಉತ=ಮತ್ತು ಅರ್ಧರಾತ್ರೇ=ನಿಶೀಥಕ್ಕೆ ಮೊದಲ ಯಾಮದಲ್ಲಿ ಹೃಷೀಕೇಶನು ನನ್ನನ್ನು ಕಾಪಾಡಲಿ. ಏಕಃ ಪದ್ಮನಾಭಃ=ಪದ್ಮನಾಭನೇ ನಿಶೀಥೇ=ಹದಿನೈದು ಘಳಿಗೆಗೆ ಸರಿಯಾದ ಮಧ್ಯರಾತ್ರಿಯಲ್ಲಿ ನನ್ನನ್ನು ಕಾಪಾಡಲಿ. (ರಾತ್ರಿ ಎಂದು ಸಾಮಾನ್ಯವಾಗಿ ಹೇಳುವಾಗ ದೋಷಶಬ್ದವು ಅವ್ಯಯ ಅಥವಾ ಸ್ತ್ರೀಲಿಂಗ. ರಾತ್ರಿಯ ಒಂದು ಕಾಲವಿಶೇಷವನ್ನು ಹೇಳುವಾಗ ಪುಲ್ಲಿಂಗ) ಏಕಃ=ಸರ್ವೋತ್ತಮನಾದ ಎಂದು ಅರ್ಥ. || ೨೧ ||

ಶ್ರೀವತ್ಸಲಕ್ಷ್ಮಾಽಪರರಾತ್ರ ಈಶಃ
ಪ್ರತ್ಯೂಷ ಈಶೋಽಸಿಧರೋ ಜನಾರ್ದನಃ ।

ಕಾಲದಲ್ಲಿಯೂ, ಚಕ್ರಪಾಣಿಯಾದ ವಿಷ್ಣುವು ಮಧ್ಯದಿನದಲ್ಲಿಯೂ, ದೈತ್ಯ ಭಯಂಕರ ಶಾರ್ಙ ಧನುರ್ಧಾರಿಯಾದ ಮಧುಸೂದನನು ಅಪರಾಹ್ಣದಲ್ಲಿಯೂ, ಅನಂತಾಸನ-ಶ್ವೇತದ್ವೀಪ-ವೈಕುಂಠಗಳನ್ನು ಮನೆ ಮಾಡಿಕೊಂಡಿರುವ ಮಾಧವನು ಸಾಯಂಕಾಲದಲ್ಲಿಯೂ, ಹೃಷೀಕೇಶ ನಾಮಕನು ರಾತ್ರಿಯ ಮೊದಲ ಎರಡು ಯಾಮಗಳಲ್ಲಿಯೂ, ಸರ್ವೋತ್ತಮನಾದ ಪದ್ಮನಾಭನು ಮಧ್ಯರಾತ್ರಿಯಲ್ಲಿಯೂ, ನಿಯಾಮಕನಾದ ಶ್ರೀವತ್ಸಾಂಕನು ಅಪರರಾತ್ರಿಯಲ್ಲಿಯೂ, ಖಡ್ಗಧಾರಿಯಾದ

ದಾಮೋದರೋಽವ್ಯಾದನುಸಂಧ್ಯಂ ಪ್ರಭಾತೇ
ವಿಷ್ಣುಃ ಶ್ರೀಮಾನ್ ಭಗವಾನ್ ಕಾಲಮೂರ್ತಿಃ ॥ ೨೨ ॥

ಅಪರರಾತ್ರೇ=ಮಧ್ಯರಾತ್ರಿಯ ನಂತರದ ರಾತ್ರಿಕಾಲದಲ್ಲಿ ಈಶಃ=ನಿಯಾಮಕನಾದ ಶ್ರೀವತ್ಸಲಕ್ಷ್ಮಾ=ಶ್ರೀವತ್ಸಚಿಹ್ನೆಯುಳ್ಳ ಶ್ರೀಹರಿಯು ಅವ್ಯಾತ್=ಕಾಪಾಡಲಿ. ಪ್ರತ್ಯೂಷೇ=ಅರುಣೋದಯದ ಪ್ರಾರಂಭದಲ್ಲಿ ಈಶಃ=ಸಮರ್ಥನಾದ ಅಸಿಧರಃ=ಖಡ್ಗಧಾರಿಯಾದ ಜನಾರ್ದನಃ = ಜನಾರ್ದನರೂಪಿಯು ಕಾಪಾಡಲಿ. ಅನುಸಂಧ್ಯಂ = ಸಂಜೆಗೆ ಸಮೀಪಕಾಲದಲ್ಲಿ (ಸಂಧ್ಯಾಕಾಲದಲ್ಲಿ) ದಾಮೋದರನು ಕಾಪಾಡಲಿ. ಪ್ರಭಾತೇ ಸೂರ್ಯೋದಯದ ಸಮೀಪಕಾಲದಲ್ಲಿ ಶ್ರೀಮಾನ್=ಲಕ್ಷ್ಮೀವಂತನಾದ (ಕಾಂತಿಯುಕ್ತನಾದ) ಕಾಲಮೂರ್ತಿಃ = ಸರ್ವಗುಣಾತ್ಮಕದೇಹನಾದ (ಕಾಲಸ್ವರೂಪಿಯಾದ) ಭಗವಾನ್ ವಿಷ್ಣುಃ=ವಿಷ್ಣುವು ರಕ್ಷಿಸಲಿ. ವಿ.ಆ. ಹಗಲಿನ ವಿಭಾಗದ ವಿಷಯದಲ್ಲಿ ಧರ್ಮಶಾಸ್ತ್ರಗಳು ಬೇರೆ ಬೇರೆ ರೀತಿಯನ್ನು ಹೇಳುತ್ತಿವೆ. ಎರಡು ಭಾಗ ಎಂಬ ಮತದಲ್ಲಿ ಸೂರ್ಯನು ತಿರುಗುವವರೆಗೂ ಪೂರ್ವಾಹ್ನ. ಅನಂತರ ಅಪರಾಹ್ಣ. ಮೂರು ಭಾಗ ಎಂಬ ಮತದಲ್ಲಿ ಇವೆರಡಕ್ಕೆ ಮಧ್ಯಾಹ್ನವನ್ನು ಸೇರಿಸಿರುವರು. ಆಗ ಸೂರ್ಯೋದಯದಿಂದ ಹತ್ತು ಘಳಿಗೆ (ಐದು ಮುಹೂರ್ತ) ಪೂರ್ವಾಹ್ಣ, ಅನಂತರ ಹತ್ತು ಘಳಿಗೆ ಮಧ್ಯಾಹ್ನ. ಅನಂತರ ಹತ್ತು ಘಳಿಗೆ ಅಪರಾಹ್ಣ. ಗಾಲವರು ನಾಲ್ಕುಭಾಗ ಮಾಡಿ ಮೊದಲ ಒಂದೂವರೆ ಜಾವವನ್ನು ಪೂರ್ವಾಹ್ಣವೆಂದೂ ಅನಂತರ ಒಂದು ಜಾವ ಮಧ್ಯಾಹ್ನವೆಂದೂ ಅನಂತರದ ಅರ್ಧ ಜಾವ ಅಪರಾಹ್ಣವೆಂದೂ ಅನಂತರದ ಜಾವಕ್ಕೆ ಸಾಯಾಹ್ನವೆಂದೂ ಕರೆದಿರುವರು. (ಒಂದು ಜಾವ=ಮೂರುಗಂಟೆ). ವ್ಯಾಸರ ಮತದಂತೆ ಹಗಲು ಐದು ಭಾಗ ಮೊದಲ ಆರು ಘಳಿಗೆ ಪ್ರಾತಃ, ಎರಡನೆಯ ಆರು ಘಳಿಗೆ ಸಂಗವ, ಮೂರನೆಯ ಆರು ಘಳಿಗೆ ಮಧ್ಯಾಹ್ನ, ಮುಂದಿನ ಆರು ಘಳಿಗೆ ಅಪರಾಹ್ಣ ಮುಂದಿನ ಆರು ಘಳಿಗೆ ಸಾಯಾಹ್ನ. ಇದು ಯಾವ ಕೆಲಸಕ್ಕೂ ಉತ್ತಮವಲ್ಲ. ಹಗಲನ್ನು ಹದಿನೈದುವಿಭಾಗ ಮಾಡಿದ ಶಂಖರು ರೌದ್ರ, ಚೈತ್ರ, ಮೈತ್ರ, ಸಾಲ, ಕಟ, ಸಾವಿತ್ರ, ಜಯಂತ, ಗಾಂಧರ್ವ, ಕುತಪ, ರೋಹಿಣ, ವಿರಂಚ, ವಿಜಿತ್ಯ, ನೈರ್ಋದ, ಮಹೇಂದ್ರ, ವರುಣ ಎಂದು ಹಗಲಿನ ವಿಭಾಗಗಳನ್ನು ಕರೆದಿರುವರು. ಹೀಗೆ ಎರಡು ಮೊದಲಾದ ನಾಲ್ಕು ಋಷಿಮತಗಳಂತೆ ಹಗಲಿನ ವಿಭಾಗಗಳಲ್ಲಿಯೂ ಪ್ರದೋಷ ಮೊದಲಾದ ರಾತ್ರಿ ಭಾಗಗಳಲ್ಲಿಯೂ ರಕ್ಷಣೆಯನ್ನು 'ಮಾಂ ಕೇಶವ' ಇತ್ಯಾದಿ ಮೂರು ಶ್ಲೋಕಗಳಿಂದ ಪ್ರಾರ್ಥಿಸಿದ್ದಾರೆಂದು ತಿಳಿಯಬೇಕು. ॥ ೨೨ ॥

ಜನಾರ್ದನನು ಅರುಣೋದಯಾತ್ಪೂರ್ವಕಾಲದಲ್ಲಿಯೂ, ದಾಮೋದರನು ಸಂಧ್ಯಾಕಾಲಗಳಲ್ಲಿಯೂ, ಕಾಂತಿಯುಕ್ತನೂ ಸರ್ವಗುಣಾತ್ಮಕನೂ ಆದ ವಿಷ್ಣುವು ಸೂರ್ಯೋದಯ ಪೂರ್ವಕಾಲದಲ್ಲಿಯೂ ನಮ್ಮನ್ನು ಪೊರೆಯಲಿ.

ಚಕ್ರಂ ಯುಗಾಂತಾನಲತಿಗ್ಮನೇಮಿ
ಭ್ರಮತ್ಸಮಂತಾದ್ಭಗವತ್ಪ್ರಯುಕ್ತಮ್ ।
ದಂದಗ್ಧಿ ದಂದಗ್ಧ್ಯರಿಸೈನ್ಯಮಾಶು
ಕಕ್ಷಂ ಯಥಾ ವಾತಸಖೋ ಹುತಾಶಃ ॥ ೨೩ ॥

ಯುಗಾಂತಾನಲ= ಪ್ರಳಯಕಾಲದ ಬೆಂಕಿಯಂತೆ ತಿಗ್ಮನೇಮಿ= ತೀಕ್ಷ್ಣವಾದ ಹಲ್ಲುಗಳುಳ್ಳದ್ದು ಚಕ್ರಂ= ಚಕ್ರವು. ಇದು ಅದರ ಸ್ವರೂಪ. ಅದನ್ನು ಸಂಬೋಧಿಸಿ ಎಲೈ ಚಕ್ರವೇ, ನೀನು ಭಗವತ್ಪ್ರಯುಕ್ತಂ (ಸತ್) = ಶ್ರೀಹರಿಯಿಂದ ಪ್ರಯೋಗಿಸಲ್ಪಟ್ಟದ್ದಾಗಿ ಸಮಂತಾತ್ = ಎಲ್ಲ ಕಡೆಗಳಲ್ಲಿಯೂ ಭ್ರಮತ್ = ತಿರುಗುತ್ತಾ ಅರಿಸೈನ್ಯಂ = ಶತ್ರುಸೈನ್ಯವನ್ನು ಯಥಾ = ಹೇಗೆ ವಾತಸಖಃ= ಗಾಳಿಯ ಸಹಾಯ ಪಡೆದ ಹುತಾಶಃ = ಬೆಂಕಿಯು ಕಕ್ಷಂ = ಒಣಹುಲ್ಲನ್ನು ದಂದಗ್ಧಿ = ಸುಡುವುದೋ ತಥಾ= ಹಾಗೆ ಆಶು= ಜಾಗ್ರತೆಯಾಗಿ ದಂದಗ್ಧಿ= ಅತಿಶಯವಾಗಿ ಸುಡು. ಇದರಿಂದ 'ಸುದರ್ಶನ ಮಹಾಜ್ವಾಲ ಕೋಟಿಸೂರ್ಯಸಮಪ್ರಭ । ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥' ಎಂಬ ಮಂತ್ರವನ್ನು ಆರ್ಥಿಕವಾಗಿ ಹೇಳಿದಂತಾಯಿತು. ಅರಿಸೈನ್ಯವನ್ನು ಜಾಗ್ರತೆ ಅತಿಶಯವಾಗಿ ದಹಿಸುವುದು ಎಂದು ಸಂಬೋಧನೆಯಿಲ್ಲದೆಯೂ ಅರ್ಥಮಾಡಿರುವರು. ಆ ಅರ್ಥದಲ್ಲಿ ಚಕ್ರದ ಸ್ವಭಾವವೇ ಇದಾದ್ದರಿಂದ ಅದನ್ನು ಸುಡು ಎಂದು ಪ್ರಾರ್ಥಿಸಬೇಕಾಗಿಲ್ಲವೆಂದು ಅಭಿಪ್ರಾಯ. ॥ ೨೩ ॥

ಗದೇಽಶನಿಸ್ಪರ್ಶನ ವಿಸ್ಫುಲಿಂಗೇ
ನಿಷ್ಪಿಂಢಿ ನಿಷ್ಪಿಂಢ್ಯಜಿತಪ್ರಿಯಾಽಸಿ ।
ಕೂಷ್ಮಾಂಡ ವೈನಾಯಕ ಯಕ್ಷರಕ್ಷೋ-
ಭೂತಗ್ರಹಾಂಶ್ಚೂರ್ಣಯ ಚೂರ್ಣಯಾರೀನ್ ॥ ೨೪ ॥

ಅಶನಿಸ್ಪರ್ಶನವಿಸ್ಫುಲಿಂಗೇ = (೧) ವಜ್ರಾಯುಧದಂತೆ ತಾಪಕರಗಳಾದ ಅಗ್ನಿಕಣಗಳುಳ್ಳ (೨) ವಜ್ರಗಳ ತಿಕ್ಕುವಿಕೆಯಿಂದ ಉಂಟಾದ ಬೆಂಕಿಯ ಕಿಡಿಗಳಂತೆ

ಪ್ರಳಯಾಗ್ನಿಯಂತೆ ತೀಕ್ಷ್ಣಗಳಾದ ನೇಮಿ (ಹಲ್ಲು) ಯುಳ್ಳದ್ದು ಸುದರ್ಶನ ಚಕ್ರ. ಅದರಲ್ಲಿ ಇರುವ ಆ ಹೆಸರಿನ ಶ್ರೀಹರಿಯೇ ! ಭಗವಂತನಿಂದ ಪ್ರಯುಕ್ತವಾಗಿ ಎಲ್ಲೆಡೆಯಲ್ಲಿಯೂ ತಿರುಗುವ ಅದರಲ್ಲಿ ಇದ್ದುಕೊಂಡು ಗಾಳಿಯ ಸಹಾಯವುಳ್ಳ ಬೆಂಕಿಯು ಒಣಹುಲ್ಲನ್ನು ಸುಡುವಂತೆ ನಿರಾಯಾಸವಾಗಿ ಜಾಗ್ರತೆಯಾಗಿ ಶತ್ರುಸೈನ್ಯವನ್ನು ಸಂಪೂರ್ಣವಾಗಿ ಸುಟ್ಟುಬಿಡು. ಸಿಡಿಲಿನಂತೆ ತಾಪಕೊಡುವ ಅಗ್ನಿಕಣಗಳುಳ್ಳ ಗದೆಯು ಅಜಿತನಾದ ಶ್ರೀಹರಿಗೆ ಪ್ರಿಯವಾದುದು. ಅದರಲ್ಲಿರುವ ತನ್ನಾಮಕನಾದ ಶ್ರೀಹರಿಯೇ! ಕೂಷ್ಮಾಂಡ, ವಿನಾಯಕ, ಯಕ್ಷ, ರಾಕ್ಷಸ, ಭೂತ ಮತ್ತು ಗ್ರಹಗಳನ್ನು ಹಿಟ್ಟುಹಿಟ್ಟು ಮಾಡು. ಶತ್ರುಗಳನ್ನು ಪುಡಿಪುಡಿ ಮಾಡು. ಶಂಖಶ್ರೇಷ್ಠ

ಕಿಡಿಗಳುಳ್ಳ (೩) ಸಿಡಿಲಿನ ತಾಪದಂತೆ ದುಃಸಹಗಳಾದ ಅಗ್ನಿಯ ಕಣಗಳುಳ್ಳ ಗದೇ=ಕೌಮೋದಕಿ ಗದೆಯೇ, ನೀನು ಅಜಿತಪ್ರಿಯಾ=ಶ್ರೀಹರಿಗೆ ಪ್ರಿಯಳು ಅಸಿ=ಆಗಿರುವೆ. ಕೂಷ್ಮಾಂಡ, ವಿನಾಯಕ, ಯಕ್ಷ, ರಾಕ್ಷಸ, ಭೂತ ಮತ್ತು ಗ್ರಹಗಳನ್ನು ನಿಷ್ಪಿಂಢಿ = ಸಂಪೂರ್ಣವಾಗಿ ಹಿಟ್ಟುಹಿಟ್ಟುಮಾಡು. ನಿಷ್ಪಿಷ್ಟಿ ಎಂಬ ಪಾಠದಲ್ಲಿ ಅರೆದುಬಿಡು ಎಂದರ್ಥ. ಅರೀನ್ = ಶತ್ರುಗಳನ್ನು ಚೂರ್ಣಯ = ಪುಡಿಪುಡಿಮಾಡು. ಇಲ್ಲಿ ಎಲ್ಲ ಕಡೆಯಲ್ಲಿಯೂ ದ್ವಿರುಕ್ತಿಯು ಶೀಘ್ರತೆಯನ್ನು ಸೂಚಿಸುತ್ತದೆ. || ೨೪ ||

ತ್ವಂ ಯಾತುಧಾನಪ್ರಮಥಪ್ರೇತ ಮಾತೃ-
ಪಿಶಾಚ ವಿಪ್ರ ಗ್ರಹ ಘೋರದೃಷ್ಟೀನ್ ।
ದರೇಂದ್ರ ವಿದ್ರಾವಯ ಕೃಷ್ಣಪೂರಿತೋ
ಭೀಮಸ್ವನೋಽರೇರ್ ಹೃದಯಾನಿ ಕಂಪಯನ್ || ೨೫ ||

ಹೇ ದರೇಂದ್ರ = ಶಂಖಶ್ರೇಷ್ಠವಾದ ಪಾಂಚಜನ್ಯವೇ ಕೃಷ್ಣಪೂರಿತಃ = ಶ್ರೀಹರಿಯಿಂದ ಊದಲ್ಪಟ್ಟ ತ್ವಂ=ನೀನು ಭೀಮಸ್ವನಃ(ಸನ್) = ಭಯಂಕರವಾದ ಧ್ವನಿಯುಳ್ಳದ್ದಾಗಿ ಯಾತುಧಾನರು, ಪ್ರಮಥರು, ಪ್ರೇತಗಳು, ಮಾತೃಗಳು, ಪಿಶಾಚರು, ಬ್ರಹ್ಮರಾಕ್ಷಸರು, ಇವುಗಳ ನೋಟದಂತೆ ಘೋರವಾದ ನೋಟವುಳ್ಳ ಅಥವಾ ಯಾತುಧಾನರೇ ಮೊದಲಾದವರನ್ನೂ ಭಯಂಕರ ನೋಟವುಳ್ಳ ಬೇರೆಯವರನ್ನೂ ಅರೀನ್ = ಶತ್ರುಗಳನ್ನು ಹೃದಯಾನಿ ಕಂಪಯನ್ = ಅವರ ಹೃದಯಗಳನ್ನು ನಡುಗಿಸುತ್ತಾ ವಿದ್ರಾವಯ = ಓಡಿಸು. ಇದರಿಂದ 'ಪಾಂಚಜನ್ಯ ನಿಜಧ್ವಾನ ಧ್ವಸ್ತಪಾತಕಸಂಚಯ । ಪಾಹಿ ಮಾಂ ಪಾಪಿನಂ ಘೋರಂ ಸಂಸಾರಾರ್ಣವ ಪಾತಿನಮ್ || ಎಂಬ ಮಂತ್ರವನ್ನು ಆರ್ಥಿಕವಾಗಿ ಸೂಚಿಸಿರುವರು. || ೨೫ ||

ತ್ವಂ ತಿಗ್ಮಧಾರಾಸಿವರಾರಿಸೈನ್ಯ-
ಮೀಶಪ್ರಯುಕ್ತೋ ಮಮ ಛಿಂಧಿ ಛಿಂಧಿ
ಚಕ್ಷೂಂಷಿ ಚರ್ಮಞ್ಛತಚಂದ್ರ ಛಾದಯ
ದ್ವಿಷಾಮಘಂ ನೋ ಹರ ಪಾಪಚಕ್ಷುಷಾಮ್ || ೨೬ ||

ವಾದುದು ಪಾಂಚಜನ್ಯ. ಅದರಲ್ಲಿ ತನ್ನಾಮಕನಾಗಿ ಇರುವ ಶ್ರೀಹರಿಯೇ, ಶ್ರೀಹರಿಯಿಂದ ನಾದ ಮಾಡಲ್ಪಟ್ಟ ಅದರಲ್ಲಿದ್ದುಕೊಂಡು ಭಯಂಕರ ಧ್ವನಿಮಾಡುತ್ತಾ ಎದೆಗಳನ್ನು ನಡುಗಿಸುತ್ತಾ ಯಾತುಧಾನ, ಪ್ರಮಥ, ಪ್ರೇತ, ಮಾತೃ, ಪಿಶಾಚ, ಬ್ರಹ್ಮರಾಕ್ಷಸ, ಘೋರದೃಷ್ಟಿಗಳು ಮತ್ತು ಶತ್ರುಗಳು–ಇವರನ್ನು ದಿಕ್ಕಾಪಾಲಾಗಿ ಓಡಿಸು. ನಂದಕ ಖಡ್ಗವು ತೀಕ್ಷ್ಣಧಾರೆಯುಳ್ಳದ್ದು. ಅದರಲ್ಲಿರುವ ತದಾಕಾರ ತನ್ನಾಮಕ ಶ್ರೀಹರಿಯೇ, ಶ್ರೀಹರಿಯಿಂದ ಪ್ರಯೋಗಿಸಲ್ಪಟ್ಟ ಅದರಲ್ಲಿ ಇದ್ದು

ಹೇ ತಿಗ್ಮಧಾರ = ಹರಿತವಾದ ಅಲಗುಳ್ಳ ಅಸಿವರ = ಖಡ್ಗಶ್ರೇಷ್ಠವಾದ ನಂದಕ! ಈಶಪ್ರಯುಕ್ತಃ ತ್ವಂ ಶ್ರೀಹರಿಯಿಂದ ಪ್ರಯೋಗಿಸಲ್ಪಟ್ಟ ನೀನು ಮಮ= ನನ್ನ ಅರಿಸೈನ್ಯಂ = ಶತ್ರುಸೈನ್ಯವನ್ನು ಛಿಂಧಿ ಛಿಂಧಿ = ಶೀಘ್ರವಾಗಿ ಕತ್ತರಿಸು. ಹೇ ಶತಚಂದ್ರ=ನೂರು, ಚಂದ್ರಾಕಾರ ಮಂಡಲಗಳುಳ್ಳದ್ದರಿಂದ ಶತಚಂದ್ರ ಎಂಬ ಹೆಸರುಳ್ಳ ಹೇ ಚರ್ಮ = ಗುರಾಣಿಯೇ ದ್ವಿಷಾಂ = ಶತ್ರುಗಳ ಚಕ್ಷೂಂಷಿ=ಕಣ್ಣುಗಳನ್ನು ಛಾದಯ=ಮುಚ್ಚು. ಪಾಪಚಕ್ಷುಷಾಂ=ಪಾಪದಲ್ಲಿಯೇ ದೃಷ್ಟಿಯಿರುವ ನಃ=ನಮ್ಮ ಅಘಂ=ಪಾಪವನ್ನು ಹರ=ಹೋಗಲಾಡಿಸು. ಮಮ ಛಿಂಧಿ ಎಂಬಲ್ಲಿ ವಿಕಲ್ಪವಾದ್ದರಿಂದ ತುಗಾಗಮವು ಬಂದಿಲ್ಲವೆಂದು ತಿಳಿಯಬೇಕು. ವಿ. ಅ. ಇಲ್ಲಿ ಚಕ್ರ ಮೊದಲಾದ ಆಯುಧಗಳಲ್ಲಿ ಚಕ್ರಾದಿ ನಾಮಕ ಶ್ರೀಹರಿಯ ರೂಪಕಗಳನ್ನೂ ಇಟ್ಟುಕೊಳ್ಳಬೇಕು. ಆ ರೂಪಗಳೇ ಮುಖ್ಯವಾಗಿ ಫಲಕೊಡುವವುಗಳು. ಅವು ಆಯಾಯಾ ಆಯುಧಗಳ ಶಕ್ತಿಯನ್ನು ಉದ್ಬೋಧನ ಮಾಡುವುವು. ಪ್ರಮಾಣ : 'ಚಕ್ರಂ ಚಂಕ್ರಮಣಾದ್ವಿಷ್ಣುಃ ವರ್ಜನಾದ್ವಜ್ರ ಉಚ್ಯತೇ । ಖಂಡನಾತ್ ಖಡ್ಗ ಇತ್ಯುಕ್ತೋ ಹೇತಿನಾಮಾ ಸ್ವಯಂ ಹರಿಃ ॥ ತತ್ರ ತತ್ರ ಸ್ಥಿತೋ ವಿಷ್ಣುಃ ತತ್ತಚ್ಛಕ್ತೀಃ ಪ್ರಬೋಧಯನ್ । ಏಕ ಏವ ಮಹಾಶಕ್ತಿಃ ಕುರುತೇ ಸರ್ವಮಂಜಸಾ' ॥ ೨೬ ॥

ಯನ್ನೋ ಭಯಂ ಗ್ರಹೇಭ್ಯೋಽಭೂತ್ಕೇತುಭ್ಯೋ ನೃಭ್ಯ ಏವ ಚ ।
ಸರೀಸೃಪೇಭ್ಯೋ ದಂಷ್ಟ್ರಿಭ್ಯೋ ಭೂತೇಭ್ಯೋಽಘೇಭ್ಯ ಏವ ಚ ॥
ಸರ್ವಾಣ್ಯೇತಾನಿ ಭಗವನ್ನಾಮರೂಪಾಸ್ತ್ರಕೀರ್ತನಾತ್ ।
ಪ್ರಯಾಂತು ಸಂಕ್ಷಯಂ ಸದ್ಯೋ ಯೇಽನ್ಯೇ ಶ್ರೇಯಃ ಪ್ರತೀಪಕಾಃ ॥

ನಃ = ನಮಗೆ ಗ್ರಹಗಳಿಂದಲೂ ಕೇತುಭ್ಯಃ = ಉಲ್ಕಾಪಾತಗಳಿಂದಲೂ (ಗ್ರಹೇಭ್ಯ ಎಂಬುದರಿಂದಲೇ ಕೇತುಗ್ರಹವು ಗೃಹೀತವಾಗಿದೆಯಾಗಿ ಧೂಮಕೇತು ವೆಂದೇ ಅರ್ಥ) ಮನುಷ್ಯರಿಂದಲೂ ಸರೀಸೃಪೇಭ್ಯಃ = ಸರ್ಪಗಳಿಂದಲೂ ದಂಷ್ಟ್ರಿಭ್ಯಃ=ಕೋರೆಹಲ್ಲಿನಿಂದ ಕಿತ್ತು ತಿನ್ನುವ ಕ್ರೂರಪ್ರಾಣಿಗಳಿಂದಲೂ ಭೂತ (ಪ್ರಾಣಿ)ಗಳಿಂದಲೂ ಅಘೇಭ್ಯಃ ಏವ ಚ=ವ್ಯಸನ(ಪಾಪ)ಗಳಿಂದಲೂ ಯತ್=

ಕೊಂಡು ನನ್ನ ಶತ್ರುಸೈನ್ಯವನ್ನು ಜಾಗ್ರತೆಯಾಗಿ ಕತ್ತರಿಸು. ಗುರಾಣಿ(ಹಲಗೆ)ಯು ನೂರು ಚಂದ್ರರಂತೆ ವೃತ್ತಗಳುಳ್ಳದ್ದು. ಅದರಲ್ಲಿರುವ ತನ್ನಾಮಕ ಶ್ರೀಹರಿಯೇ, ಶತ್ರುಗಳ ಕಣ್ಣುಗಳನ್ನು ಮುಚ್ಚು. ಪಾಪದೃಷ್ಟಿಗಳಾದ ನಮ್ಮ ಪಾಪವನ್ನು ಹೋಗಲಾಡಿಸು.

ಗ್ರಹಗಳಿಂದ, ಧೂಮಕೇತುಗಳಿಂದ, ಮನುಷ್ಯರಿಂದ, ಸರ್ಪಗಳಿಂದ, ಕ್ರೂರ ಮಾಂಸಾಹಾರಿ ಪ್ರಾಣಿಗಳಿಂದ, ಭೂತಗಳಿಂದ, ಪಾಪ(ವ್ಯಸನ)ಗಳಿಂದ ಉಂಟಾಗುವ ಈ ಎಲ್ಲ ಭಯಗಳೂ ಶ್ರೀಹರಿಯ ನಾಮವೆಂಬ ಅಸ್ತ್ರದ ಉಚ್ಚಾರಣೆ ಮಾತ್ರದಿಂದಲೇ ಕೂಡಲೆ ಸಂಪೂರ್ಣವಾಗಿ ನಾಶವಾಗಲಿ. ನಮ್ಮ ಶ್ರೇಯಸ್ಸಿಗೆ ಪ್ರತೀಪ(ವಿರೋಧಿ)

ಯಾವ ಭಯಂ ಅಭೂತ್ = ಭಯವು ಬಂದಿದೆಯೋ ಶ್ರೇಯಃ ಪ್ರತೀಪಕಾಃ = ಶ್ರೇಯಸ್ಸಿಗೆ ವಿರೋಧಿಗಳಾದ ಯಾವ ಇತರ ಅಸುರರೋ ಏತಾನಿ ಸರ್ವಾಣಿ= ಇವೆಲ್ಲವೂ ಭಗವಂತನ ನಾಮವೆಂಬ ಅಸ್ತ್ರವನ್ನು ಹೇಳುವುದರಿಂದಲೇ ಸದ್ಯಃ=ತತ್ ಕ್ಷಣದಲ್ಲಿಯೇ ಸಂಕ್ಷಯಂ=ಸಂಪೂರ್ಣವಾಗಿ ನಾಶವನ್ನು ಪ್ರಯಾಂತು=ಹೊಂದಲಿ. || ೨೭, ೨೮ ||

ಗರುಡೋ ಭಗವಾಂಸ್ತೋತ್ರಸ್ತೋಮಶ್ಛಂದೋಮಯಃ ಪ್ರಭುಃ ।
ರಕ್ಷತ್ವಶೇಷಕೃಚ್ಛ್ರೇಭ್ಯೋ ವಿಷ್ವಕ್ಸೇನಃ ಸ್ವನಾಮಭಿಃ || ೨೯ ||

ಸ್ತೋತ್ರಸ್ತೋಮಃ=ಬೃಹದ್ರಥಂತರ ಮೊದಲಾದ ಸಾಮಕ್ಕೆ ಆಧಾರವಾದ (೧) ಋಕ್ಕುಗಳ ಸಮೂಹಕ್ಕೆ ಅಭಿಮಾನಿಗಳಾದ, (೨) ಸ್ತೋತ್ರಸಮೂಹರೂಪವಾದ ಛಂದೋಮಯಃ=(೧) ಸಾಮವೇದ ಪ್ರಧಾನರಾದ (೨) ಅಮುಖ್ಯವಾಗಿ ವೇದಪ್ರತಿಪಾದ್ಯರೂ ವೇದಾಭಿಮಾನಿಗಳೂ ಆದ ಪ್ರಭುಃ=ಸಮರ್ಥರಾದ ಭಗವಾನ್ ಪೂಜ್ಯರಾದ ಗರುಡದೇವರು–ಗರುಡಾಂತರ್ಯಾಮಿ ಶ್ರೀಹರಿಯು. ಅಶೇಷಕೃಚ್ಛ್ರೇಭ್ಯಃ= ಎಲ್ಲ ಕಷ್ಟಗಳಿಂದಲೂ ರಕ್ಷತು= ರಕ್ಷಿಸಲಿ. ವಿಷ್ವಕ್ಸೇನಃ=(೧) ಶ್ರೀಹರಿಗೆ ನಿವೇದಿತವಾದುದನ್ನು ತಿನ್ನುವ ದ್ವಾರಪಾಲಕನಾದ ವಿಷ್ವಕ್ಸೇನನು (೨) ಸರ್ವತ್ರ ಸೇನೆಯುಳ್ಳ ಶ್ರೀಹರಿಯು ಸ್ವನಾಮಭಿಃ=(೧) ತನ್ನ ಅಂತರ್ಯಾಮಿ ಸ್ವಾಮಿ ಶ್ರೀಹರಿಯ ನಾಮಗಳಿಂದ (ಸ್ಮರಣೆಮಾಡಿದ ಕಾರಣದಿಂದ) (೨) ತನ್ನ ನಾಮಗಳಿಂದ ಎಲ್ಲ ವಿಪತ್ತುಗಳಿಂದಲೂ ಕಾಪಾಡಲಿ. || ೨೯ ||

ಸರ್ವಾಪದ್ಭ್ಯೋ ಹರೇರ್ನಾಮರೂಪಯಾನಾಯುಧಾನಿ ನಃ ।
ಬುದ್ಧೀಂದ್ರಿಯಮನಃ ಪ್ರಾಣಾನ್ ಪಾಂತು ಪಾರ್ಷದಭೂಷಣಾಃ ||

ಶ್ರೀಹರಿಯ ನಾಮ, ರೂಪ, ರಥ(ಯಾನ), ಆಯುಧಗಳು ನಃ=ನಮ್ಮನ್ನು ಸರ್ವಾಪದ್ಭ್ಯಃ=ಎಲ್ಲ ಕಷ್ಟಗಳಿಂದಲೂ ಪಾಂತು= ಕಾಪಾಡಲಿ. ಪಾರ್ಷದಭೂಷಣಾಃ=(೧) ದ್ವಾರಪಾಲಶ್ರೇಷ್ಠರು (೨) ದ್ವಾರಪಾಲರೂ ಮತ್ತು ಒಡವೆಗಳೂ

ರಾದ ಅಸುರರು ಬೇರೆ ಯಾರಿದ್ದರೂ ಅವರೆಲ್ಲರೂ ನಾಶವಾಗಲಿ. ಗರುಡದೇವರು ಬೃಹತ್ ರಥಂತರ ಮೊದಲಾದ ಸಾಮವೇದದ ಋಕ್ಕುಗಳ ಸಮೂಹಕ್ಕೆ ಅಭಿಮಾನಿಗಳು. ಸಾಮವೇದ ಪ್ರಧಾನರು. ಅಮುಖ್ಯವಾಗಿ ವೇದಪ್ರತಿಪಾದ್ಯರು ಮತ್ತು ವೇದಕ್ಕೆ ಅಭಿಮಾನಿಗಳು. ಇವರಲ್ಲಿ ಏತನ್ನಾಮಕನಾದ ಶ್ರೀಹರಿಯು ಶಕ್ತಿಪ್ರದನಾಗಿರುವನು. ಅವನು ಎಲ್ಲ ಕಷ್ಟಗಳಿಂದಲೂ ನಮ್ಮನ್ನು ಕಾಪಾಡಲಿ. ಶ್ರೀಹರಿಗೆ ನಿವೇದಿತವಾದುದನ್ನು ಅವನಿಂದ ಪಡೆಯುವ ವಿಷ್ವಕ್ಸೇನನು ಶ್ರೀಹರಿಯ ದ್ವಾರಪಾಲಕನು. ಅವನಲ್ಲಿರುವ ಆ ಹೆಸರಿನ ಶ್ರೀಹರಿಯು ತನ್ನ ನಾಮಗಳಿಂದ ಎಲ್ಲ ವಿಪತ್ತುಗಳನ್ನೂ ಪರಿಹರಿಸಿ ಕಾಪಾಡಲಿ. ಶ್ರೀಹರಿಯ ನಾಮ, ಪ್ರತಿಮಾ, ರಥ, ಆಯುಧಗಳು, ದ್ವಾರಪಾಲಕರು, ಒಡವೆಗಳು—ಇವುಗಳಲ್ಲಿರುವ ಭಗವದ್ರೂಪ

ನಃ=ನಮ್ಮ ಬುದ್ಧಿಗಳನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ಪ್ರಾಣಗಳನ್ನೂ ಕಾಪಾಡಲಿ. ಭೂಷಣ ಶಬ್ದವನ್ನು ಪುಲ್ಲಿಂಗದಲ್ಲಿ ಪ್ರಯೋಗಿಸಿದ್ದರಿಂದ ಭೂಷಣಗಳಿಗೂ ಜ್ಞಾನವಿದೆಯೆಂದು ತಿಳಿಸಿರುವರು. 'ತತ್ಕಂಠಗಂ ಕೌಸ್ತುಭಮಾಸ ಧಾತಾ' ಇತ್ಯಾದಿ ವಾಕ್ಯಗಳು ಇದನ್ನು ಸ್ಪಷ್ಟಪಡಿಸುವುವು. ಕೆಲವರು ಲಿಂಗವ್ಯತ್ಯಾಸವು ಛಾಂದಸಪ್ರಯೋಗವೆಂದಿರುವರು. || ೩೦ ||

ಯಥಾ ಹಿ ಭಗವಾನೇವ ವಸ್ತುತಃ ಸದಸಚ್ಚ ಯತ್ ।
ಸತ್ಯೇನಾನೇನ ನಃ ಸರ್ವೇ ಯಾಂತು ನಾಶಮುಪದ್ರವಾಃ ॥ ೩೧ ॥

ಯಥಾ = ಹೇಗೆ ಸದಸತ್ — ಮೂರ್ತ ಮತ್ತು ಅಮೂರ್ತಾತ್ಮಕವಾದ, ಕಾರ್ಯಕಾರಣರೂಪವಾದ ಯತ್=ಯಾವ ಜಗತ್ತು ವಸ್ತುತಃ— ಪಾರಮಾರ್ಥಿಕವಾಗಿ ಭಗವಾನ್ ಏವ=(೧) ಆ ಜಗತ್ತಿನ ನಿಯಾಮಕನಾದ್ದರಿಂದ ಜಗದ್ರೂಪನೆಂಬುದು (೨) ಭಗವಂತನಿಂದ ನಿಯಮ್ಯವೆಂಬುದು ಹಿ=' ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿ ಪ್ರಸಿದ್ಧವಾಗಿ ಸತ್ಯವೋ ಅನೇನ = ' ತತ್ ಸೃಷ್ಟ್ವಾ ತದೇವ ಅನುಪ್ರಾವಿಶತ್, ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್ ' ಎಂಬ ಶ್ರುತಿ ವಿಹಿತವಾಗಿ ಎಲ್ಲಿಯೂ ಸುಳ್ಳಾಗದಿರುವ ಸತ್ಯೇನ=ಸತ್ಯದಿಂದ (ಸತ್ಯವೆಂದು ತಿಳಿದ ಕಾರಣದಿಂದ ನಮ್ಮ ಸರ್ವೇ — ಎಲ್ಲ ಉಪದ್ರವಾಃ = ತೊಂದರೆಗಳೂ ನಾಶಂ = ನಾಶವನ್ನು ಯಾಂತು=ಹೊಂದಲಿ. ಚ=' ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ | ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ' ಎಂಬ ವಾಕ್ಯವೂ ಹರಿನಿಯಮ್ಯವೆಂಬುದನ್ನು ತಿಳಿಸುವುದು. ಏವಕಾರದಿಂದ ' ಸದಸನ್ನಿಯಾಮಕತಯಾ ಸದಸದ್ರೂಪ ಉಚ್ಯತೇ| ಸತ್ಯೇನಾನೇನ ಮಾಂ ದೇವಃ ಪಾತು ವಿಷ್ಣುಶ್ಚತುರ್ಭುಜಃ||' ಎಂಬ ವಾಕ್ಯವನ್ನೂ ಸ್ಮರಣೆಗೆ ತಂದುಕೊಟ್ಟಿರುವರು. ' ಯಥೇಶ್ವರಶ್ಚ ಜೀವಶ್ಚ ಸತ್ಯಭೇದೌ ಪರಸ್ಪರಮ್ | ತೇನ ಸತ್ಯೇನ ಮಾಂ ದೇವಾಸ್ತ್ರಾಯಂತು ಸಹ ಕೇಶವಾಃ' ಎಂಬ ಗುಹಾಧಿಕರಣಭಾಷ್ಯ ವಾಕ್ಯವನ್ನು ಟೀಕಾಕೃತ್ಪಾದರು ಇದೇ ನ್ಯಾಯದಿಂದ ವ್ಯಾಖ್ಯಾನಮಾಡಿರುವುದನ್ನು ಕಾಣಬಹುದು. || ೩೧ ||

ಯಥೈಕಾತ್ಮ್ಯಾನುಭಾವೇನ ವಿಕಲ್ಪರಹಿತಃ ಸ್ವಯಮ್ ।
ಭೂಷಣಾಯುಧಲಿಂಗಾಖ್ಯಾ ಧತ್ತೇ ಶಕ್ತೀಃ ಸ್ವಮಾಯಯಾ ॥ ೩೨ ॥

ಗಳು, ನಮ್ಮ ಬುದ್ಧಿ, ಇಂದ್ರಿಯ, ಮನಸ್ಸು, ಪ್ರಾಣಗಳನ್ನು ಕಾಪಾಡಲಿ. ಮೂರ್ತ ಮತ್ತು ಅಮೂರ್ತಾತ್ಮಕವಾದ ಕಾರ್ಯ ಮತ್ತು ಕಾರಣಾತ್ಮಕವಾದ ಜಗತ್ತು ಪಾರಮಾರ್ಥಿಕವಾಗಿ ಭಗವಂತನಿಂದ ನಿಯಮ್ಯವೆಂಬುದು ಶ್ರುತಿಪ್ರಸಿದ್ಧವು. ಈ ಸತ್ಯಾಂಶದ ಜ್ಞಾನದಿಂದ ಎಲ್ಲ ಉಪದ್ರವಗಳೂ ನಾಶವಾಗಲಿ. ಆಯಾಯಾ ಪದಾರ್ಥಗಳಲ್ಲಿರುವ ತನ್ನ ರೂಪಗಳು ಮುಖ್ಯ ಮತ್ತು ಸ್ವತಂತ್ರಗಳು ಎಂಬ ಪ್ರತ್ಯಕ್ಷಾನುಭವದಿಂದ ಸ್ವಗತಭೇದ ಶೂನ್ಯನಾದ ಶ್ರೀಹರಿಯು ತನ್ನ ಸಾಮರ್ಥ್ಯದಿಂದ

ತೇನೈವ ಸತ್ಯಮಾನೇನ ಸರ್ವಜ್ಞೋ ಭಗವಾನ್ ಹರಿಃ ।
ಪಾತು ಸರ್ವೈಃ ಸ್ವರೂಪೈರ್ನಃ ಸದಾ ಸರ್ವತ್ರ ಸರ್ವಗಃ ॥ ೩೩ ॥

ಒಡವೆಗಳು ಅಚೇತನಗಳು. ಅವುಗಳಿಗೆ ಚೇತನರಂತೆ ಬೇಡಿದುದನ್ನು ಕೊಡುವ ಸಾಮರ್ಥ್ಯವೆಲ್ಲಿಯದು ? ಎಂದಾಶಂಕಿಸಿ ಅವುಗಳಲ್ಲಿ ಅದರದರ ಕಾರ್ಯವನ್ನು ಮಾಡುವ ಶಕ್ತಿಸ್ವರೂಪನಾಗಿ (ಶಕ್ತಿ ಉದ್ಬೋಧಕ ರೂಪನಾಗಿ) ಶ್ರೀಹರಿಯು ಇರುವುದು ಹೇಗೆ ಸತ್ಯವೋ ಆ ಸತ್ಯದಿಂದ (ತಿಳಿದದ್ದರಿಂದ) ಶ್ರೀಹರಿಯು ನಮ್ಮನ್ನು ಕಾಪಾಡಲಿ ಎಂದು ಹೇಳುತ್ತಾರೆ. ಯಥಾ = ಹೇಗೆ ಐಕಾತ್ಮ್ಯನುಭಾವೇನ = ಆಯಾಯಾ ವಸ್ತುಗಳಲ್ಲಿರುವ ತನ್ನ ರೂಪಗಳ ಮುಖ್ಯ ಮತ್ತು ಸ್ವಾತಂತ್ರ್ಯಗಳ ಪ್ರತ್ಯಕ್ಷಾನುಭವದಿಂದ ಏಕಲ್ಪರಹಿತಃ (ಅಪಿ) = ತನ್ನ ರೂಪಗಳಿಗೂ ಗುಣಗಳಿಗೂ ಕ್ರಿಯೆಗಳಿಗೂ ಭೇದವಿಲ್ಲದವನಾದರೂ ಸ್ವಮಾಯಯಾ= ತನ್ನ ಸ್ವರೂಪಸಾಮರ್ಥ್ಯದಿಂದ, ಸ್ವೇಚ್ಛೆಯಿಂದ ಸ್ವಯಂ= ತಾನೇ ಭೂಷಣಾಯುಧಲಿಂಗಾಖ್ಯಾಃ= ಒಡವೆ, ಆಯುಧಗಳು, ಚಿಹ್ನೆಗಳು ಇವುಗಳಲ್ಲಿದ್ದು ಆಯಾಯಾ ಶಬ್ದಗಳಿಂದ ಕರೆಯಲ್ಪಡುವ ಶಕ್ತೀಃ= ಸ್ವಾಧೀನವಾದ್ದರಿಂದ ಶಕ್ತಿ ಎನಿಸುವ ರೂಪಗಳನ್ನು ಧತ್ತೇ= ಧರಿಸಿರುವುದು ಸತ್ಯವೋ ತೇನ ಏವ ಸತ್ಯಮಾನೇನ= ಅದೇ ಸತ್ಯವೆಂಬ ಪ್ರಮಾಣದಿಂದ (ಸತ್ಯತೆಯ ಜ್ಞಾನದಿಂದ)= ಯಥಾರ್ಥವಾದ್ದರಿಂದ ಸರ್ವಜ್ಞಃ= ಮುಖ್ಯ ಸರ್ವಜ್ಞನೂ ಸರ್ವಗಃ= ಎಲ್ಲದರಲ್ಲಿಯೂ ವ್ಯಾಪ್ತನೂ ಭಗವಾನ್= ಸಮಗ್ರ ಐಶ್ವರ್ಯಶಾಲಿಯೂ ಆದ ಹರಿಯು ಸರ್ವೈಃ ಸ್ವರೂಪೈಃ ತನ್ನ ಎಲ್ಲ ರೂಪಗಳಿಂದಲೂ ಸದಾ= ಎಲ್ಲ ಕಾಲಗಳಲ್ಲಿಯೂ ಸರ್ವತ್ರ= ಎಲ್ಲ ದೇಶಗಳಲ್ಲಿಯೂ ನಃ= ನಮ್ಮನ್ನು ಪಾತು= ರಕ್ಷಿಸಲಿ. ಸರ್ವಜ್ಞನೆಂಬ ವಿಶೇಷಣ ಕೊಟ್ಟದ್ದರಿಂದ ಸತ್ಯವೆಂಬುದರಲ್ಲಿ ಇದೂ ಪ್ರಮಾಣವೆಂದು ಸೂಚಿಸಿರುವರು. ಸರ್ವೈಃ ಸರ್ವತ್ರ ಎಂದು ಹೇಳಿದ್ದರಿಂದ ಆಯುಧಗಳಲ್ಲಿ ಮಾತ್ರವೇ ಸನ್ನಿಹಿತನಲ್ಲ. ಎಲ್ಲ ವಸ್ತುಗಳಲ್ಲಿಯೂ ಸನ್ನಿಹಿತನೆಂದು ಹೇಳಿರುವರು. 'ಏಕ ಏವ ಪರೋ ವಿಷ್ಣುಃ ಭೂಷಾ ಹೇತಿ ಧ್ವಜೇಷ್ವಜಃ । ತತ್ತಚ್ಛಕ್ತಿ ಸ್ವರೂಪೇಣ ಸ್ವಯಮೇವ ವ್ಯವಸ್ಥಿತಃ । ಸತ್ಯೇನಾನೇನ ಮಾಂ ದೇವಃ ಪಾತು ಸರ್ವೇಶ್ವರೋ ಹರಿಃ ॥ ಎಂಬ ಪ್ರಮಾಣವು ಈ ಅರ್ಥವನ್ನು ಸ್ಪಷ್ಟಪಡಿಸುವುದು. ಇದರಿಂದ ಭೂಷಣಾದಿಗಳಲ್ಲಿ ವಿಶೇಷವಾಗಿ ಸನ್ನಿಹಿತನಾಗಿರುವುದರಿಂದ ಹೀಗೆ ಹೇಳಲ್ಪಡುವನೆಂದು ತಿಳಿಯಬೇಕು. ॥ ೩೨, ೩೩ ॥

ತನ್ನ ಇಚ್ಛೆಯಿಂದ ತಾನೇ ಒಡವೆ ಆಯುಧ ಚಿಹ್ನೆಗಳಲ್ಲಿದ್ದು ಆ ಶಬ್ದಗಳಿಂದ ಕರೆಸಿಕೊಳ್ಳುವ ರೂಪಗಳನ್ನು–ಅದರದರ ಶಕ್ತಿಪ್ರವರ್ತಕಗಳನ್ನು–ಧರಿಸಿರುವನು. ಈ ಸತ್ಯತೆಯ ಜ್ಞಾನದಿಂದ ನಿರುಪಚರಿತ ಸರ್ವಜ್ಞನೂ ಸರ್ವತ್ರವ್ಯಾಪ್ತನೂ ಸಮಗ್ರೈಶ್ವರ್ಯಸಂಪನ್ನನೂ ಆದ ಶ್ರೀಹರಿಯು ತನ್ನ ಎಲ್ಲ ರೂಪಗಳಿಂದ ಎಲ್ಲ

ವಿದಿಕ್ಷು ದಿಕ್ಷೂರ್ಧ್ವಮಧಃ ಸಮಂತಾ-
ದಂತರ್ಬಹಿರ್ಭಗವಾನ್ನಾರಸಿಂಹಃ ।
ಪ್ರಹಾಪಯಂಲ್ಲೋಕಭಯಂ ಸ್ವನೇನ
ಸ್ವತೇಜಸಾ ಗ್ರಸ್ತಸಮಸ್ತತೇಜಾಃ ॥ ೩೪ ॥

ಮೂಲರೂಪವು ಸರ್ವತ್ರ ವ್ಯಾಪ್ತ. ಅವತಾರರೂಪವಲ್ಲವೆಂಬ ಶಂಕೆಯನ್ನು ಪರಿಹರಿಸುವವರಾಗಿ ಸರ್ವಗತತ್ವವು ಹೇಗೆ ಸತ್ಯವೋ ಆ ಸತ್ಯದಿಂದ ಹಾಗೆ ನಾರಸಿಂಹನು ಕಾಪಾಡಲಿ, ಎಂಬ ತಾತ್ಪರ್ಯದಿಂದ ವಿಶಿಷ್ಯ ಹೇಳುತ್ತಾರೆ. ಸ್ವತೇಜಸಾ- ತನ್ನ ತೇಜಸ್ಸಿನಿಂದ ಗ್ರಸ್ತಸಮಸ್ತತೇಜಾಃ=ಸೂರ್ಯ ಮೊದಲಾದ ಎಲ್ಲ ತೇಜಃ ಪದಾರ್ಥಗಳನ್ನೂ ಅಭಿಭವಗೊಳಿಸಿದ ಭಗವಾನ್ ನಾರಸಿಂಹನು ಸ್ವನೇನ=ತನ್ನ ಸಿಂಹನಾದದಿಂದ ಲೋಕಭಯಂ- ಜಗತ್ತಿನ ಭಯವನ್ನು (ಸಜ್ಜನರಿಗೆ ಭಯವನ್ನು) ಪ್ರಹಾಪಯನ್= ಪರಿಹರಿಸುವವನಾಗಿ ದಿಕ್ಷು=ದಿಕ್ಕುಗಳಲ್ಲಿ ವಿದಿಕ್ಷು- ವಿದಿಕ್ಕುಗಳಲ್ಲಿ ಊರ್ಧ್ವಂ= ಮೇಲೆ ಅಧಃ =ಕೆಳಗೆ ಸಮಂತಾತ್=ಎಲ್ಲ ಕಡೆಯಲ್ಲಿಯೂ ಒಳಗೂ ಹೊರಗೂ ನಃ-ನಮ್ಮನ್ನು ಪಾತು=ಕಾಪಾಡಲಿ. ಹಿಂದೆ ದುರ್ಗೇಷು ಎಂಬ ಶ್ಲೋಕದಲ್ಲಿ ಪ್ರಾರ್ಥಿತನಾಗಿದ್ದರೂ ಮತ್ತೆ ಪ್ರಾರ್ಥಿಸಿರುವುದು ಆ ರೂಪದಿಂದ ಶ್ರೀಹರಿಯು ಎಲ್ಲ ಪಾಪಗಳನ್ನೂ ಹೋಗಲಾಡಿಸುವುದರಲ್ಲಿ ಅತಿಶಯ ಸಾಮರ್ಥ್ಯವನ್ನು ತೋರಿರುವನೆಂದು ತಿಳಿಸುವುದಕ್ಕಾಗಿ ಎಂದು ತಿಳಿಯಬೇಕು. ॥ ೩೪ ॥

ಮಘವನ್ನಿದಮಾಖ್ಯಾತಂ ವರ್ಮ ನಾರಾಯಣಾತ್ಮಕಮ್ ।
ವಿಜೇಷ್ಯಸ್ಯಂಜಸಾ ಯೇನ ದಂಶಿತೋಽಸುರಯೂಥಪಾನ್ ॥ ೩೫ ॥

ಮಘವನ್=ಇಂದ್ರನೇ ಇದಂ= ಈ ನಾರಾಯಣಾತ್ಮಕಂ= ನಾರಾಯಣಸ್ವರೂಪವಾದ ವರ್ಮ- ಕವಚವು ಆಖ್ಯಾತಂ= ನನ್ನಿಂದ ಹೇಳಲ್ಪಟ್ಟಿತು. ಯೇನ-ಯಾವ ಈ ಕವಚದಿಂದ ದಂಶಿತಃ-ಕವಚಿತನಾದ (ರಕ್ಷಿತನಾದ) ನೀನು ಅಂಜಸಾ= ಸಂಪೂರ್ಣವಾಗಿ ಅಸುರಯೂಥಪಾನ್=ದೈತ್ಯರ ಸೇನಾನಾಯಕರನ್ನು ವಿಜೇಷ್ಯಸಿ= ಗೆಲ್ಲುವೆ. ॥ ೩೫ ॥

ಕಾಲಗಳಲ್ಲಿ ಎಲ್ಲ ದೇಶಗಳಲ್ಲಿ ನಮ್ಮನ್ನು ರಕ್ಷಿಸಲಿ. ತನ್ನ ತೇಜಸ್ಸಿನಿಂದ ಸೂರ್ಯನೇ ಮೊದಲಾದ ಎಲ್ಲ ತೇಜಃಪದಾರ್ಥಗಳನ್ನೂ ನಿಸ್ತೇಜಗೊಳಿಸಿರುವ ಭಗವಾನ್ನಾರಸಿಂಹನು ವಿದಿಕ್ಕುಗಳಲ್ಲಿಯೂ ದಿಕ್ಕುಗಳಲ್ಲಿಯೂ ಮೇಲೂ ಕೆಳಗೂ ಒಳಗೂ ಹೊರಗೂ ಎಲ್ಲ ಕಡೆಯಲ್ಲಿಯೂ ತನ್ನ ನಾದದಿಂದ ಜಗತ್ತಿನ ಭಯವನ್ನು ಪರಿಹರಿಸುವನಾಗಿ ನಮ್ಮನ್ನು ಕಾಪಾಡಲಿ.

ಇಂದ್ರ ! ಈ ನಾರಾಯಣಸ್ವರೂಪವಾದ ಕವಚವನ್ನು ಹೇಳಿದ್ದೇನೆ. ಇದರಿಂದ ಕವಚಿತನಾದ ನೀನು ಅಸುರಸೇನಾನಾಯಕರನ್ನು ಪೂರ್ಣವಾಗಿ ಗೆಲ್ಲುವೆ. ಈ ಕವಚ

ಏತದ್ಧಾರಯಮಾಣಸ್ತು ಯಂ ಯಂ ಪಶ್ಯತಿ ಚಕ್ಷುಷಾ ।
ಪದಾ ವಾ ಸಂಸ್ಪೃಶೇತ್ಸದ್ಯಃ ಸಾಧ್ವಸಾತ್ಸ ವಿಮುಚ್ಯತೇ ॥ ೩೬ ॥

ಏತತ್ = ಈ ಕವಚವನ್ನು ಧಾರಯಮಾಣಃ = ಧರಿಸಿರುವವನು (ವಿದ್ಯಾ ಸಿದ್ಧಿಯುಳ್ಳವನು) ಯಂ ಯಂ=ಯಾರು ಯಾರನ್ನು ಚಕ್ಷುಷಾ=ಕಣ್ಣಿನಿಂದ ಪಶ್ಯತಿ= ನೋಡುವನೋ ವಾ=ಅಥವಾ ಪದಾ=ಕಾಲಿನಿಂದ ಸಂಸ್ಪೃಶೇತ್=ಮುಟ್ಟುವನೋ ಸಃ=ಅವನು ಅವನು ಸಾಧ್ವಸಾತ್=ಭಯದಿಂದ ಸದ್ಯಃ=ಕೂಡಲೇ ವಿಮುಚ್ಯತೇ= ಬಿಡಲ್ಪಡುವನು. ಇವನ ದೃಷ್ಟಿಗೆ ಬಿದ್ದವನಿಗೇ, ಇವನ ಸ್ಪರ್ಶವಾದವನಿಗೇ ಭಯ ವಿಲ್ಲದಿರುವಾಗ ಇವನಿಗೆ ಭಯವಿಲ್ಲವೇ ಇಲ್ಲವೆಂದು ಅಭಿಪ್ರಾಯ. ॥ ೩೬ ॥

ನ ಕುತಶ್ಚಿದ್ಭಯಂ ತಸ್ಯ ವಿದ್ಯಾಂ ಧಾರಯತೋ ಭವೇತ್ ।
ರಾಜದಸ್ಯುಗ್ರಹಾದಿಭ್ಯೋ ವ್ಯಾಧ್ಯಾದಿಭ್ಯಶ್ಚ ಕರ್ಹಿಚಿತ್ ॥ ೩೭ ॥

ಅವನಿಗೆ ಭಯವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾರೆ. ವಿದ್ಯಾಂ = ಈ ನಾರಾಯಣ ಕವಚ ವಿದ್ಯೆಯನ್ನು ಧಾರಯತಃ = ಸಿದ್ಧಿ ಮಾಡಿಕೊಂಡಿರುವ ತಸ್ಯ= ಅವನಿಗೆ ರಾಜರಿಂದಾಗಲಿ ಕಳ್ಳ (ದಸ್ಯು) ರಿಂದಾಗಲಿ ಗ್ರಹ ಮೊದಲಾದವು ಗಳಿಂದಾಗಲಿ ವ್ಯಾಧ್ಯಾದಿಭ್ಯಃ ಚ = ರೋಗ ಮೊದಲಾದವುಗಳಿಂದಲೂ ಕುತಶ್ಚಿತ್= ಯಾವುದರಿಂದಲೂ ಕರ್ಹಿಚಿತ್ = ಎಂದೂ ಭಯವು ನ ಭವೇತ್ = ಆಗುವುದಿಲ್ಲ. ॥ ೩೭ ॥

ಇಮಾಂ ವಿದ್ಯಾಂ ಪುರಾ ಕಶ್ಚಿತ್ ಕೌಶಿಕೋ ಧಾರಯನ್ ದ್ವಿಜಃ ।
ಯೋಗಧಾರಣಯಾ ಸ್ವಾಂಗಂ ಜಹೌ ಸ ಮರುಧನ್ವನಿ ॥ ೩೮ ॥

ಈ ವಿದ್ಯೆಯ ಮಹಿಮೆಯನ್ನು ಇತಿಹಾಸದಿಂದ ತಿಳಿಸುತ್ತಾರೆ. ಪುರಾ=ಹಿಂದೆ ಕೌಶಿಕ=ಕುಶಿಕ ಗೋತ್ರದಲ್ಲಿ ಉತ್ಪನ್ನನಾದ ಕಶ್ಚಿತ್ ದ್ವಿಜಃ = ಒಬ್ಬ ಬ್ರಾಹ್ಮಣನು ಇಮಾಂ ವಿದ್ಯಾಂ = ಈ ನಾರಾಯಣ ಕವಚ ವಿದ್ಯೆಯನ್ನು ಧಾರಯನ್ = ಸಿದ್ಧಿ ಮಾಡಿಕೊಂಡವನಾಗಿ (ಆಸೀತ್)=ಇದ್ದನು. ಸಃ=ಅವನು ಮರುಧನ್ವನಿ=ನೀರಿಲ್ಲದ ಪ್ರದೇಶದಲ್ಲಿ ಯೋಗಧಾರಣಯಾ=ಯೋಗಾಭ್ಯಾಸದಿಂದ ಸ್ವಾಂಗಂ=ತನ್ನ ಶರೀರ ವನ್ನು ಜಹೌ=ಬಿಟ್ಟನು. (ಮೃತನಾದನು.) ॥ ೩೮ ॥

ವನ್ನು ಧರಿಸಿದವನು ಯಾರು ಯಾರನ್ನು ಕಣ್ಣಿನಿಂದ ನೋಡುವನೋ, ಕಾಲಿನಿಂದ ಮುಟ್ಟುವನೋ ಅವನೂ ಭಯದಿಂದ ವಿಮುಕ್ತನಾಗುವನು. ಈ ವಿದ್ಯೆಯನ್ನು ಧರಿಸಿದವನಿಗೆ ರಾಜ, ಕಳ್ಳ, ಗ್ರಹ, ವ್ಯಾಧಿ ಮೊದಲಾದ ಯಾವುದರಿಂದಲೂ ಎಂದೂ ಭಯವು ಉಂಟಾಗುವುದಿಲ್ಲ. ಹಿಂದೆ ಕುಶಿಕಗೋತ್ರೋತ್ಪನ್ನನಾದ ಒಬ್ಬ ಬ್ರಾಹ್ಮಣನು ಈ ವಿದ್ಯೆಯನ್ನು ಸಿದ್ಧಿಮಾಡಿಕೊಂಡು ಮರಳ್ಗಾಡಿನಲ್ಲಿ ಯೋಗಾ

ತತ್ರೋಪರಿ ವಿಮಾನೇನ ಗಂಧರ್ವಪತಿರೇಕದಾ ।
ಯಯೌ ಚಿತ್ರರಥಃ ಸ್ತ್ರೀಭಿರ್ವೃತೋ ಯತ್ರ ದ್ವಿಜಕ್ಷಯಃ ॥ ೩೯ ॥

ಏಕದಾ = ಒಂದುಕಾಲದಲ್ಲಿ ಸ್ತ್ರೀಭಿಃ ವೃತಃ = ಹೆಂಡತಿಯರಿಂದ ಕೂಡಿದ ಗಂಧರ್ವರಾಜನಾದ ಚಿತ್ರರಥನು ಯತ್ರ=ಯಾವ ಸ್ಥಳದಲ್ಲಿ ದ್ವಿಜಕ್ಷಯಃ=ಬ್ರಾಹ್ಮಣ ಮರಣ ಸಂಭವಿಸಿತ್ತೋ ತತ್ರ = ಅಲ್ಲಿ ಉಪರಿ = ಮೇಲೆ ವಿಮಾನದಿಂದ ಯಯೌ= ಹಾದುಹೋದನು ॥ ೩೯ ॥

ಗಗನಾನ್ನ್ಯಪತತ್ಸದ್ಯಃ ಸವಿಮಾನೋ ಹ್ಯವಾಕ್‌ಶಿರಾಃ ।
ವಿದ್ಯಾಮಿಮಾಂ ಧಾರಯತೋ ಮೃತಸ್ಯಾಸ್ಥಿವಿಲಂಘನಾತ್ ॥೪೦॥

(ಸಃ)=ಆ ಚಿತ್ರರಥನು ಇಮಾಂ ವಿದ್ಯಾಂ=ಈ ವಿದ್ಯೆಯನ್ನು ಧಾರಯತಃ= ಸಿದ್ಧಿಮಾಡಿಕೊಂಡಿದ್ದ ಮೃತಸ್ಯ = ಸತ್ತುಹೋಗಿದ್ದ ಆ ಬ್ರಾಹ್ಮಣನ ಅಸ್ಥಿವಿಲಂಘ- ನಾತ್ = ಮೂಳೆಗಳನ್ನು ದಾಟಿದ ಕಾರಣದಿಂದ ಸದ್ಯಃ = ಕೂಡಲೇ ಸಾಂಗನಃ = ಹೆಂಗುಸರೊಂದಿಗೆ ಸವಿಮಾನಃ = ವಿಮಾನ ಸಹಿತನಾಗಿ ಅವಾಕ್‌ಶಿರಾಃ= ತಲೆಕೆಳಗಾಗಿ ನ್ಯಪತತ್=ಬಿದ್ದುಬಿಟ್ಟನು. ॥ ೪೦ ॥

ಸ ವಾಲಖಿಲ್ಯವಚನಾದಸ್ಥೀನ್ಯಾದಾಯ ವಿಸ್ಮಿತಃ ।
ಪ್ರಾಸ್ಯ ಪ್ರಾಚೀ ಸರಸ್ವತ್ಯಾಂ ಸ್ನಾತ್ವಾ ಧಾಮ ಸ್ವಮನ್ವಗಾತ್ ॥

ವಿಸ್ಮಿತಃ = ಹೀಗೇಕಾಯಿತೆಂದು ಆಶ್ಚರ್ಯಪಟ್ಟ ಸಃ = ಆ ಚಿತ್ರರಥನು ವಾಲಖಿಲ್ಯವಚನಾತ್=ವಾಲಖಿಲ್ಯರ ಮಾತಿನಂತೆ ಅಸ್ಥೀನಿ=ಆ ಬ್ರಾಹ್ಮಣನ ಮೂಳೆ ಗಳನ್ನು ಆದಾಯ=ತೆಗೆದುಕೊಂಡು ಪ್ರಾಚೀ ಸರಸ್ವತ್ಯಾಂ=ಪೂರ್ವಕ್ಕೆ ಹರಿಯುವ ಸರಸ್ವತೀ ನದಿಯಲ್ಲಿ ಪ್ರಾಸ್ಯ=ಹಾಕಿ ಸ್ನಾತ್ವಾ=ಸ್ನಾನಮಾಡಿ ಸ್ವಂ ಧಾಮ=ತನ್ನ ಮನೆಗೆ (ಗಂಧರ್ವಲೋಕಕ್ಕೆ) ಅನ್ವಗಾತ್=ಹೋದನು. ॥ ೪೧ ॥

ಯ ಇದಂ ಶೃಣುಯಾತ್ಕಾಲೇ ಯೋ ಧಾರಯತಿ ಚಾದೃತಃ ।
ತಂ ನಮಸ್ಯಂತಿ ಭೂತಾನಿ ಮುಚ್ಯತೇ ಸರ್ವತೋ ಭಯಾತ್ ॥

ಭ್ಯಾಸದ ಮೂಲಕ ತನ್ನ ದೇಹವನ್ನು ಬಿಟ್ಟಿದ್ದನು. ಗಂಧರ್ವಪತಿಯಾದ ಚಿತ್ರರಥ ನೊಂದು ದಿನ ತನ್ನ ಹೆಂಡತಿಯರೊಂದಿಗೆ ವಿಮಾನದಲ್ಲಿ ಆ ಸ್ಥಳದ ಮೇಲೆ ಹಾದು ಹೋದನು. ಈ ವಿದ್ಯೆಯ ಸಿದ್ಧಿಯನ್ನು ಪಡೆದಿದ್ದ ಬ್ರಾಹ್ಮಣನ ಅಸ್ಥಿಗಳನ್ನು ದಾಟಿದ ಪಾಪದ ಫಲವಾಗಿ ಕೂಡಲೆ ಆ ಗಂಧರ್ವರಾಜನು ಹೆಂಡತಿಯರೊಂದಿಗೆ ವಿಮಾನ ಸಹಿತನಾಗಿ ತಲೆಕೆಳಗಾಗಿ ಕೆಳಕ್ಕೆ ಬಿದ್ದನು. ವಾಲಖಿಲ್ಯರ ಮಾತಿನಂತೆ ಆ ಮೃತನ ಅಸ್ಥಿಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಪೂರ್ವವಾಹಿನಿಯಾದ ಸರಸ್ವತೀ ನದಿ ಯಲ್ಲಿ ಹಾಕಿ ಸ್ನಾನಮಾಡಿ ಆಶ್ಚರ್ಯಗೊಂಡು ತನ್ನ ಲೋಕಕ್ಕೆ ಮರಳಿದನು. ಈ ಕವಚವನ್ನು ಕಾಲಕಾಲಗಳಲ್ಲಿ ಯಾರು ಕೇಳುವರೋ, ಯಾರು ಭಕ್ತಿಯಿಂದ

ಯಾವನು ಇದನ್ನು ಕಾಲೇ=ಸರಿಯಾದ ಕಾಲಗಳಲ್ಲಿ ಶೃಣುಯಾತ್=ಕೇಳುವನೋ ಯಃ ಚ=ಯಾವನಾದರೆ ಆದೃತಃ=ಭಕ್ತಿಯುಕ್ತನಾಗಿ ಈ ವಿದ್ಯೆಯನ್ನು ಧಾರಯತಿ=ಸಿದ್ಧಮಾಡಿಕೊಂಡಿರುವನೋ ತಂ=ಅವನಿಗೆ ಭೂತಾನಿ=ಎಲ್ಲ ಪ್ರಾಣಿಗಳೂ ನಮಸ್ಯಂತಿ=ನಮಸ್ಕರಿಸುವುವು. ಅವನು ಸರ್ವತಃ ಭಯಾತ್=ಎಲ್ಲ ಭಯದಿಂದಲೂ ಮುಚ್ಯತೇ=ಬಿಡಲ್ಪಡುವನು. || ೪೨ ||

ಏತಾಂ ವಿದ್ಯಾಮಧಿಗತೋ ವಿಶ್ವರೂಪಾಚ್ಛತಕ್ರತುಃ ।
ತ್ರೈಲೋಕ್ಯಲಕ್ಷ್ಮೀಂ ಬುಭುಜೇ ವಿನಿರ್ಜಿತ್ಯ ಮೃಧೇಽಸುರಾನ್ ||೪೩||

ವಿಶ್ವರೂಪಾತ್=ಪ್ರಸನ್ನರಾದ ವಿಶ್ವರೂಪಾಚಾರ್ಯರಿಂದ ಏತಾಂ ವಿದ್ಯಾಂ=ಈ ನಾರಾಯಣಕವಚ ಮಂತ್ರವನ್ನು ಅಧಿಗತಃ(ಸ್ಸ)=ಉಪದೇಶ ಮೂಲಕ ಪಡೆದವರಾಗಿ ಶತಕ್ರತುಃ=ಇಂದ್ರದೇವರು ಮೃಧೇ=ಯುದ್ಧದಲ್ಲಿ ಅಸುರರನ್ನು ವಿನಿರ್ಜಿತ್ಯ=ಸಂಪೂರ್ಣವಾಗಿ ಗೆದ್ದು ತ್ರೈಲೋಕ್ಯ ಲಕ್ಷ್ಮೀಂ=ತ್ರಿಲೋಕಾಧಿಪತ್ಯದ ಸಂಪತ್ತನ್ನು ಬುಭುಜೇ=ಅನುಭವಿಸಿದರು. ವಿ.ಅ. 'ಏತದ್ಧಾರಯಮಾಣಸ್ತು' ಎಂದು ಮೊದಲಾಗಿ ಹೇಳಿದ ಫಲವು ಏಕೆ ಎಲ್ಲರಲ್ಲಿಯೂ ಈ ವಿದ್ಯಾಭ್ಯಾಸ ಮಾಡಿದವರಲ್ಲಿ ಕಂಡುಬರುತ್ತಿಲ್ಲ? ಎಂದರೆ ಅದಕ್ಕೆ ಕಾರಣಗಳಿವು: (೧) ಗುರುಶಿಷ್ಯರಲ್ಲಿ ಪರಸ್ಪರ ಸಾಕಷ್ಟು ಯೋಗ್ಯತೆ ಇಲ್ಲದಿರುವುದು (೨) ಯೋಗ್ಯತೆಯಿದ್ದರೂ 'ನಾಸಂವತ್ಸರ ಮಂತೇವಾಸಿನೇ ಪ್ರಬ್ರೂಯಾತ್' ಎಂಬ ವಿಧಿಗೆ ತಕ್ಕಂತೆ ತಕ್ಕಷ್ಟು ಕಾಲ ಗುರುಕುಲವಾಸ ಮಾಡದಿರುವುದು. (೩) ಗುರುವು ಪ್ರಸನ್ನನಾಗದೆ ಅರೆಮನಸ್ಸಿನಿಂದ ಹೇಳಿಕೊಟ್ಟಿರುವುದು ಅಥವಾ ಲೋಕೋಪಕಾರಕ್ಕೆ ಕಟ್ಟುಬಿದ್ದು ಗುರು ಹೇಳಿಕೊಟ್ಟಿರುವುದು. ಈ ಪರಿಸ್ಥಿತಿಗಳಲ್ಲಿ ಗುರುವಿನಿಂದ ಪಡೆದ ವಿದ್ಯೆಯು ಶಿಷ್ಯನಿಗೆ ಕೊಡಬೇಕಾದಷ್ಟು ಫಲವನ್ನು ಕೊಡುವುದಿಲ್ಲ. 'ಗುರುಶಿಷ್ಯಯೋರಯೋಗ್ಯತ್ವಾತ್ ಗುರುವೃತ್ತೇರಪೂರ್ತಿತಃ । ಅಪ್ರಸಾದಾದ್ಗುರೋಃ ವಿದ್ಯಾ ನ ಯಥೋಕ್ತಫಲಪ್ರದಾ ||' ಹಾಗಾದರೆ ಗುರೂಪದೇಶವಿಲ್ಲದೆಯೇ ಬರೆದದ್ದನ್ನು ಹಾಗೆಯೇ ಓದಿಕೊಂಡದ್ದರಿಂದ ಕಲಿತ ವಿದ್ಯೆಯು ಫಲಪ್ರದವಾಗಲಿ ಎಂದರೆ ಅದೂ ಅಲ್ಲ. ಗುರುಗಳಿಂದ ಉಪದಿಷ್ಟವಾದುದೇ ಫಲಕಾರಿ. ಅದೂ ಪ್ರಸನ್ನರಾದ ಗುರುಗಳು ಶಿಷ್ಯನು ಶ್ರೇಯಸ್ಸನ್ನು ಹೊಂದಲಿ ಎಂಬ ಉದಾರ ಮನಸ್ಸಿನಿಂದ ಉಪದೇಶಿಸಿದ ವಿದ್ಯೆಯೇ ಸಂಪೂರ್ಣ ಫಲಕಾರಿ ಎಂದು ತಿಳಿಯಬೇಕು. 'ವಿದ್ಯಾಕರ್ಮಾಣಿ ಚ ಸದಾ ಗುರೋಃ

ಜಪಿಸಿ ಸಿದ್ಧಿಮಾಡಿಕೊಳ್ಳುವರೋ ಅವರಿಗೆ ಎಲ್ಲ ಪ್ರಾಣಿಗಳೂ ನಮಸ್ಕಾರಮಾಡುವುವು. ಅವರಿಗೆ ಎಲ್ಲ ಭಯಗಳಿಂದಲೂ ಬಿಡುಗಡೆಯಾಗುವುದು.

ವಿಶ್ವರೂಪಾಚಾರ್ಯರಿಂದ ಈ ವಿದ್ಯೆಯನ್ನು ಉಪದೇಶವಾಗಿ ಪಡೆದ ಇಂದ್ರದೇವರು ಯುದ್ಧದಲ್ಲಿ ಅಸುರರನ್ನು ಗೆದ್ದು ತ್ರಿಲೋಕದ ಸಂಪತ್ತನ್ನು (ಮತ್ತೆ) ಅನುಭವಿಸಿದರು.

ಪ್ರಾಪ್ತಾ ಫಲಪ್ರದಾಃ | ಅನ್ಯಥಾ ನೈವ ಫಲದಾಃ, ಪ್ರಸನ್ನೋಕ್ತಾಃ ಫಲಪ್ರದಾಃ ||' ಆದ್ದರಿಂದ ಹೇಳಿದ ಫಲವೆಲ್ಲವೂ ಕಾಣದಿದ್ದಲ್ಲಿ ಈ ವಿದ್ಯೆಯೇ ಉಪಯೋಗವಿಲ್ಲವೆಂದು ಅಶ್ರದ್ಧೆ ಮಾಡಬಾರದೆಂದು ಅಭಿಪ್ರಾಯ. || ೪೩ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಅಷ್ಟಮೋಽಧ್ಯಾಯಃ

ಅಥ ನವಮೋಽಧ್ಯಾಯಃ

ಶ್ರೀ ಶುಕ ಉವಾಚ—

ತಸ್ಯಾಸನ್ ವಿಶ್ವರೂಪಸ್ಯ ಶಿರಾಂಸಿ ತ್ರೀಣಿ ಭಾರತ |
ಸೋಮಪೀಥಂ ಸುರಾಪೀಥಮನ್ನಾದಮಿತಿ ಶುಶ್ರುಮ || ೧ ||

ಬ್ರಹ್ಮಾದಿ ದೇವತೆಗಳು ಯಾರೂ ಪರಿಹರಿಸಲಾಗದುದನ್ನು ಶ್ರೀಹರಿಯು ಪರಿಹರಿಸಿದನೆಂಬ ಶ್ರೀಹರಿಯ ಮಹಿಮಾತಿಶಯ ವರ್ಣನೆಯಿಂದ ಶ್ರೀಹರಿಯ ವಿಷಯದಲ್ಲಿ ಬೆಳೆದ ಭಕ್ತಿಯೆಂಬ ಕೊಡಲಿಯು—ಮುಮುಕ್ಷುವಾದ ಅಧಿಕಾರಿಜೀವನ ಕೈಯಲ್ಲಿರುವುದು—ಸಂಸಾರವೆಂಬ ವೃಕ್ಷವನ್ನು ಬೇರುಸಹಿತ ಕಿತ್ತುಹಾಕಲು ಸಮರ್ಥವಾದುದು ಎಂಬ ಅಭಿಪ್ರಾಯವನ್ನು ಈ ಅಧ್ಯಾಯದಲ್ಲಿ ತಿಳಿಸುತ್ತಾರೆ. ಕಾರಣದಲ್ಲಿರುವ ದೋಷದ ಸ್ವಭಾವವು ಕಾರ್ಯದಲ್ಲಿಯೂ ತಪ್ಪಿದ್ದಲ್ಲವೆಂದು ತಿಳಿಸುವುದಕ್ಕಾಗಿ ವಿಶ್ವರೂಪಾಚಾರ್ಯರು ಬ್ರಾಹ್ಮಣರಾಗಿದ್ದರೂ ತಾಯಿಯಾದ ರಚನೆಯಿಂದ ಹುಟ್ಟಿದವರಾದ್ದರಿಂದ ದೋಷಿಗಳಾಗಿ ಅಸುರರಲ್ಲಿ ಪಕ್ಷಪಾತ ತೋರಿಸಿದರೆಂದು ಮೊದಲು ಹೇಳುತ್ತಾರೆ. ಪರೀಕ್ಷಿದ್ರಾಜನೇ, ಆ ವಿಶ್ವರೂಪಾಚಾರ್ಯರಿಗೆ ಸೋಮಪೀಥಂ=ಸೋಮರಸವನ್ನು ಪಾನಮಾಡುವ, ಸುರಾಪೀಥಂ = ಸುರೆಯನ್ನು ಪಾನಮಾಡುವ, ಅನ್ನಾದಂ = ಅನ್ನವನ್ನು ತಿನ್ನುವ ಇತಿ = ಈ ಹೆಸರುಗಳುಳ್ಳ ತ್ರೀಣಿ ಶಿರಾಂಸಿ=ಮೂರು ತಲೆಗಳು ಆಸನ್ = ಇದ್ದುವು ಎಂದು ಶುಶ್ರುಮ = ಕೇಳಿದ್ದೇವೆ. || ೧ ||

ಸ ವೈ ಬರ್ಹಿಷಿ ದೇವೇಭ್ಯೋ ಭಾಗಂ ಪ್ರತ್ಯಕ್ಷಮುಚ್ಚಕೈಃ |
ಅದದಾದ್ಯಸ್ಯ ಪಿತರೋ ದೇವಾಃ ಸಂಪ್ರಶ್ರಯಂ ನೃಪ || ೨ ||

ಒಂಭತ್ತನೆಯ ಅಧ್ಯಾಯ

ಶುಕಾಚಾರ್ಯರು—ಪರೀಕ್ಷಿದ್ರಾಜ! ಆ ವಿಶ್ವರೂಪಾಚಾರ್ಯರಿಗೆ ಸೋಮಪೀಥ, ಸುರಾಪೀಥ ಮತ್ತು ಅನ್ನಾದವೆಂಬ ಮೂರು ತಲೆಗಳಿತ್ತೆಂದು ನಾವು ಕೇಳಿದ್ದೇವೆ. ಅವರು ಯಜ್ಞದಲ್ಲಿ ಎಲ್ಲರೂ ಕಾಣುವಂತೆ ವಿನಯದಿಂದ ಇಂದ್ರಾದಿ ದೇವತೆಗಳಿಗೆ ಹವಿಸ್ಸನ್ನು ಗಟ್ಟಿಯಾಗಿ ಉಚ್ಚರಿಸಿಕೊಡುತ್ತಿದ್ದರು. ದೇವತೆಗಳು

ಅಸುರಪಕ್ಷಪಾತವನ್ನು ಎರಡು ಶ್ಲೋಕಗಳಿಂದ ತಿಳಿಸುತ್ತಾರೆ. ರಾಜನೇ, ಯಸ್ಯ=ಯಾವ ವಿಶ್ವರೂಪಾಚಾರ್ಯರಿಗೆ ದೇವಾಃ=ದೇವತೆಗಳು ಪಿತರಃ=ಪಿತೃ ಸ್ಥಾನೀಯರೋ ಸಃ = ಆ ವಿಶ್ವರೂಪಾಚಾರ್ಯರು ಬರ್ಹಿಷಿ = ಯಜ್ಞದಲ್ಲಿ ಪ್ರತ್ಯಕ್ಷಂ=ಎಲ್ಲರಿಗೂ ಕಾಣುವಂತೆ ಸಂಪ್ರಶ್ರಯಂ = ವಿನಯದಿಂದ ದೇವೇಭ್ಯಃ= ಇಂದ್ರ ಮೊದಲಾದ ದೇವತೆಗಳಿಗೆ ಭಾಗಂ = ಹವಿಸ್ಸನ್ನು ಉಚ್ಚೈಃ = ಎಲ್ಲರಿಗೂ ಕೇಳಿಸುವ 'ಇಂದ್ರಾಯ ಸ್ವಾಹಾ ಇಂದ್ರಾಯೇದಂ' ಎಂಬ ಮಂತ್ರಪೂರ್ವಕ ಅದದಾತ್ ವೈ=ಕೊಟ್ಟರು. ಅವದತ್ ಎಂಬ ಪಾಠದಲ್ಲಿ ಹೇಳಿದರು ಎಂದರ್ಥ. ॥ ೨ ॥

ಸ ಏವ ಹಿ ದದೌ ಭಾಗಂ ಪರೋಕ್ಷಮಸುರಾನ್ ಪ್ರತಿ ।
ಯಜಮಾನೋಽವಹದ್ಭಾಗಂ ಮಾತೃಸ್ನೇಹವಶಾನುಗಃ ॥ ೩ ॥

ಸಃ ಏವ= ಅವೇ ವಿಶ್ವರೂಪಾಚಾರ್ಯರೇ ಪರೋಕ್ಷಂ= ಯಾರಿಗೂ ಕಾಣದಂತೆ ಅಸುರಾನ್ ಪ್ರತಿ = ಅಸುರರಿಗೆ ಭಾಗಂ = ಹವಿಸ್ಸನ್ನು ದದೌ ಹಿ = ಕೊಟ್ಟರಷ್ಟೆ. ಯಜಮಾನಃ (ಅಪಿ) = ದೇವತೆಗಳನ್ನು ಸೇವಿಸುವವರಾದರೂ ಮಾತೃಸ್ನೇಹವಶಾನುಗಃ (ಸನ್) = ತಾಯಿಯಾದ ರಚನೆಯಲ್ಲಿನ ಅಭಿಮಾನಕ್ಕೆ ಒಳಪಟ್ಟು ಅಸುರ ರನ್ನು ಅನುಸರಿಸುವವರಾಗಿ ಭಾಗಂ = ಅವರಿಗೆ ಹವಿಭಾರ್ಗಗವನ್ನು ಅವಹತ್ = ಹೇಗೋ ಕೊಡುತ್ತಿದ್ದರು. ॥ ೩ ॥

ತದ್ದೇವಹೇಲನಂ ತಸ್ಯ ಧರ್ಮಾಲೀಕಂ ಸುರೇಶ್ವರಃ ।
ಆಲಕ್ಷ್ಯ ತರಸಾ ಭೀತಸ್ತಚ್ಛೀರ್ಷಾಣ್ಯಚ್ಛಿನದ್ರುಷಾ ॥ ೪ ॥

ಸುರೇಶ್ವರಃ = ಇಂದ್ರದೇವರು ತಸ್ಯ = ಆ ವಿಶ್ವರೂಪಾಚಾರ್ಯರ ದೇವ- ಹೇಲನಂ = ದೇವತೆಗಳ ತಿರಸ್ಕಾರರೂಪವಾದ (ದೇವತೆಗಳಿಗೆ ಅಶ್ರೇಯಸ್ಕರವಾದ) ತತ್=ಆ ಧರ್ಮಾಲೀಕಂ=(೧) ಧರ್ಮದೋಷವನ್ನು (೨) ಧರ್ಮದಲ್ಲಿ ಮೋಸ ವನ್ನು (೩) ಕಪಟಧರ್ಮವನ್ನು ಆಲಕ್ಷ್ಯ = ಚನ್ನಾಗಿ ನೋಡಿ ಭೀತಃ=ಈತನು ನನ್ನನ್ನೂ ಕೊಂದಾನೆಂದು ಹೆದರಿದವರಾಗಿ ರುಷಾ=ಕೋಪದಿಂದ ತಚ್ಛೀರ್ಷಾಣಿ= ಅವರ ಆ ಮೂರು ತಲೆಗಳನ್ನೂ ತರಸಾ=ಶೀಘ್ರವಾಗಿ ಅಚ್ಛಿನತ್=ಕತ್ತರಿಸಿದರು. ॥ ೪ ॥

ಅವರಿಗೆ ಪಿತೃಸ್ಥಾನೀಯರು. ಅವರೇ ಯಾರಿಗೂ ಕಾಣದಂತೆ ಅಸುರರಿಗೂ ಹವಿಸ್ಸನ್ನು ಕೊಡುತ್ತಿದ್ದರು. ದೇವತೆಗಳನ್ನು ಸೇವಿಸುತ್ತಿದ್ದರೂ ಅವರು ತಾಯಿ ಯಲ್ಲಿನ ಮಮತೆಯಿಂದ ಅಸುರರಿಗೂ ಹೇಗೋ ಹವಿರ್ಭಾಗವನ್ನು ಸೇರಿಸುತ್ತಿದ್ದರು. ವಿಶ್ವರೂಪಾಚಾರ್ಯರ ಈ ದೇವತಾ ತಿರಸ್ಕಾರರೂಪವಾದ ಧರ್ಮದ ಮೋಸವನ್ನು ಗಮನಿಸಿದ ಇಂದ್ರದೇವರು ಹೆದರಿ ಕೋಪದಿಂದ ಅವರ ಮೂರು ತಲೆಗಳನ್ನೂ

ಸೋಮಪೀಥಂ ತು ಯತ್ತಸ್ಯ ಶಿರ ಆಸೀತ್ಕಪಿಂಜಲಃ ।
ಕಲವಿಂಕಃ ಸುರಾಪೀಥಮನ್ನಾದಂ ಯತ್ಸ ತಿತ್ತಿರಿಃ ॥ ೫ ॥

ತಸ್ಯ = ಆ ವಿಶ್ವರೂಪಾಚಾರ್ಯರ ಯತ್ = ಯಾವ ಸೋಮಪೀಥವೆಂಬ. ಶಿರಃ ತು=ಶಿರಸ್ಸಾದರೋ ಕಪಿಂಜಲವೆಂಬ ಹಕ್ಕಿಯಾಗಿ ಆಸೀತ್ ಆಯಿತು. ಸುರಾಪೀಥಂ = ಸುರಾಪೀಥವೆಂಬ ಶಿರಸ್ಸಾದರೋ ಕಲವಿಂಕವೆಂಬ ಹಕ್ಕಿಯಾಯಿತು. ಯತ್ ಅನ್ನಾದಂ = ಯಾವ ಅನ್ನಾದವೆಂಬ ಶಿರಸ್ಸೋ ಸಃ – ಅದು ತಿತ್ತಿರಿ ಎಂಬ ಹಕ್ಕಿಯಾಯಿತು. ॥ ೫ ॥

ಬ್ರಹ್ಮಹತ್ಯಾಮಂಜಲಿನಾ ಜಗ್ರಾಹ ಯದಪೀಶ್ವರಃ ।
ಸಂವತ್ಸರಾಂತೇ ತದಘಂ ಭೂತಾಶಂಸಾವಿಶುದ್ಧಯೇ ॥
ಭೂಮ್ಯಂಬುದ್ರುಮಯೋಷಿದ್ಭ್ಯಶ್ಚತುರ್ಧಾ ವ್ಯಭಜದ್ಧರಿಃ ॥ ೬ ॥

ಯದಪಿ – ಹೇಗಾದರೂ ಈಶ್ವರಃ – ಆ ಬ್ರಹ್ಮಹತ್ಯೆಯ ದೋಷವನ್ನು ನಿವಾರಿಸಿಕೊಳ್ಳಲು ಸಮರ್ಥರೇ. (ತಥಾಪಿ)=ಆದರೂ ಹರಿಃ – ಇಂದ್ರದೇವರು ಬ್ರಹ್ಮಹತ್ಯಾ ದೋಷವನ್ನು ಅಂಜಲಿನಾ = ಬೊಗಸೆಯಿಂದ ಜಗ್ರಾಹ = ಸ್ವೀಕರಿಸಿದರು. ಸಂವತ್ಸರಾಂತೇ=ಹೀಗೆ ಸ್ವೀಕರಿಸಿದ ಒಂದು ವರ್ಷದ ನಂತರ (ಕೊನೆಯಲ್ಲಿ) ಭೂತಾಶಂಸಾ ವಿಶುದ್ಧಯೇ – (೧) ಲೋಕಾಪವಾದವನ್ನು ಕಳೆದುಕೊಳ್ಳಲು (೨) ಭೂತಹಿಂಸೆಯಿಂದ ಬಂದ ಪಾಪವನ್ನು ಕಳೆದುಕೊಳ್ಳಲು ಹರಿಃ = ಇಂದ್ರದೇವರು, ಅವರ ಅಂತರ್ಯಾಮಿ ಶ್ರೀಹರಿಯು ತತ್ ಅಘಂ=ಆ ಪಾಪವನ್ನು ಭೂಮಿ, ನೀರು, ಮರ ಮತ್ತು ಹೆಂಗಸು ಇವರುಗಳಿಗೆ ಚತುರ್ಧಾ = ನಾಲ್ಕು ಭಾಗವಾಗಿ ವ್ಯಭಜತ್ – ವಿಭಾಗಿಸಿದರು. (ಹಂಚಿದರು). ॥ ೬ ॥

ಭೂಮಿಸ್ತುರೀಯಂ ಜಗ್ರಾಹ ಖಾತಪೂರವರೇಣ ವೈ ।
ಈರಿಣಂ ಬ್ರಹ್ಮಹತ್ಯಾಯಾ ರೂಪಂ ಭೂಮೌ ಪ್ರದೃಶ್ಯತೇ ॥ ೭ ॥

ಜಾಗ್ರತೆಯಾಗಿ ಕತ್ತರಿಸಿಬಿಟ್ಟರು. ಅವರ ಸೋಮಪೀಥವೆಂಬ ಶಿರಸ್ಸು ಕಪಿಂಜಲ ಹಕ್ಕಿಯಾಗಿಯೂ, ಸುರಾಪೀಥವೆಂಬುದು ಕಲವಿಂಕ ಹಕ್ಕಿಯಾಗಿಯೂ ಅನ್ನಾದವೆಂಬುದು ತಿತ್ತಿರಿ ಹಕ್ಕಿಯಾಗಿಯೂ ಆದುವು.

ಈ ಕೊಲೆಯಿಂದ ಬಂದ ಬ್ರಹ್ಮಹತ್ಯಾದೋಷವನ್ನು ನಿವಾರಿಸಿಕೊಳ್ಳಲು ಇಂದ್ರದೇವರು ಸಮರ್ಥರೇ. ಆದರೂ ಆ ದೋಷವನ್ನು ಒಂದು ವರ್ಷಕಾಲ ತಮ ಬೊಗಸೆಯಿಂದ ಸ್ವೀಕರಿಸಿದ್ದರು. ಲೋಕಾಪವಾದವನ್ನು ಕಳೆದುಕೊಳ್ಳುವುದಕ್ಕಾಗಿ ಒಂದು ವರ್ಷದ ಕೊನೆಯಲ್ಲಿ ಅವರು (ಅವರ ಅಂತರ್ಯಾಮಿಯು) ಆ ಪಾಪವನ್ನು ಭೂಮಿ, ನೀರು, ಮರ ಮತ್ತು ಹೆಂಗಸರಿಗೆ ಸಮವಾಗಿ ನಾಲ್ಕು ಭಾಗವಾಗಿ ಹಂಚಿದರು. ಭೂಮಿಯು ಕಾಲಕ್ರಮದಲ್ಲಿ ಹಳ್ಳವು ತಾನಾಗಿಯೇ ಮುಚ್ಚಿಹೋಗುವ ವರವನ್ನು ಪಡೆದು ಆ ನಾಲ್ಕನೆಯ ಒಂದು ಭಾಗದ ಪಾಪವನ್ನು ತೆಗೆದುಕೊಂಡಿತು.

ಖಾತಪೂರವರೇಣ=ಹಳ್ಳವು ತಾನಾಗಿಯೇ ಮುಚ್ಚಿಕೊಳ್ಳುವುದು ಎಂಬ ವರವನ್ನು ಇಂದ್ರದೇವರಿಂದ ಪಡೆಯುವ ಮೂಲಕ ಭೂಮಿಯು ತುರೀಯಂ = ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗವನ್ನು ಜಗ್ರಾಹ = ತೆಗೆದುಕೊಂಡಿತು. ವೈ = ಇದು ಶಾಸ್ತ್ರ ಪ್ರಸಿದ್ಧವು. ಭೂಮೌ = ಭೂಮಿಯಲ್ಲಿ ಬ್ರಹ್ಮಹತ್ಯಾಯಾಃ ರೂಪಂ = ಹೀಗೆ ಸ್ವೀಕರಿಸಿದ ಬ್ರಹ್ಮಹತ್ಯೆಯ ಫಲವಾಗಿ (ರೂಪವಾಗಿ) ಈರಣಂ= ಉಪ್ಪಿನಿಂದ ತುಂಬಿದ ಊಷರ ಕ್ಷೇತ್ರವು (ಚೌಳು ಭೂಮಿಯು) ಪ್ರದೃಶ್ಯತೇ ಇಂದಿಗೂ ಕಾಣುವುದು. ಆದ್ದರಿಂದಲೇ ಚೌಳುಭೂಮಿಯಲ್ಲಿ ಅಧ್ಯಯನ ಮೊದಲಾದುವು ನಿಷಿದ್ಧ. || ೭ ||

ತುರೀಯಂ ಛೇದರೋಹೇಣ ವರೇಣ ಜಗೃಹುರ್ದ್ರುಮಾಃ ।
ತೇಷಾಂ ನಿರ್ಯಾಸರೂಪೇಣ ಬ್ರಹ್ಮಹತ್ಯಾ ಪ್ರದೃಶ್ಯತೇ ॥ ೮ ॥

ದ್ರುಮಾಃ = ಗಿಡಗಳು ಛೇದರೋಹೇಣ ವರೇಣ = ಕತ್ತರಿಸಿದರೂ ಮತ್ತೆ ಬೆಳೆಯುವುದು ಎಂಬ ವರವನ್ನು ಇಂದ್ರದೇವರಿಂದ ಪಡೆಯುವ ಮೂಲಕ ತುರೀಯಂ = ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗವನ್ನು ಜಗೃಹುಃ=ಸ್ವೀಕರಿಸಿದುವು. ಬ್ರಹ್ಮಹತ್ಯೆಯು ತೇಷಾಂ = ಆ ಮರಗಳ(ಲ್ಲಿ) ನಿರ್ಯಾಸರೂಪೇಣ= ರಂಧ್ರಮಾಡಿದಾಗ ಹೊರಬರುವ ದ್ರವದ ರೂಪದಲ್ಲಿ ಇಂದಿಗೂ ಪ್ರದೃಶ್ಯತೇ= ಕಂಡುಬರುತ್ತಿದೆ. ಆದ್ದರಿಂದಲೇ ಹಿಂಗು, ಗೋಂದು ಮೊದಲಾದುವು ಅಶುಚಿಯೆಂದು ಆಚಾರವಂತರು ಹೇಳುವುದು. || ೮ ||

ಶಶ್ವತ್ಕಾಮವರೇಣಾಂಹಸ್ತುರೀಯಂ ಜಗೃಹುಃ ಸ್ತ್ರಿಯಃ ।
ರಜೋರೂಪೇಣ ತಾಸ್ವಂಹೋ ಮಾಸಿ ಮಾಸಿ ಪ್ರದೃಶ್ಯತೇ ॥ ೯ ॥

ಸ್ತ್ರಿಯಃ = ಹೆಂಗಸರು ಶಶ್ವತ್ ಕಾಮವರೇಣ = (೧) ಯಾವಾಗಲೂ ವಿಷಯಗಳನ್ನು ಸೇವಿಸುವ ಅಭಿಲಾಷೆ ಇರಲಿ ಎಂಬ ವರದಿಂದ (೨) ರಜೋದರ್ಶನವಿಲ್ಲದಿದ್ದಾಗಲೂ (ಗರ್ಭಾದಿಧಾರಣ ಕಾಲದಲ್ಲಿಯೂ) ಪ್ರಸವಪರ್ಯಂತ ಸಂಭೋಗಕ್ಕೆ ಮನಮಾಡುವ ವರದಿಂದ ತುರೀಯಂ ಅಂಹಃ=ನಾಲ್ಕನೆಯ ಒಂದು ಭಾಗ ಬ್ರಹ್ಮಹತ್ಯಾಕೃತ ಪಾಪವನ್ನು ಸ್ವೀಕರಿಸಿದರು. ತಾಸು = ಆ ಸ್ತ್ರೀಯರಲ್ಲಿ ಮಾಸಿ ಮಾಸಿ=ಪ್ರತಿ ತಿಂಗಳಲ್ಲಿಯೂ ರಜೋರೂಪೇಣ=ರಜಸ್ಸಿನ ಸ್ರಾವರೂಪದಲ್ಲಿ ಅಂಹಃ ಆ ಪಾಪವು ಪ್ರದೃಶ್ಯತೇ=ಇಂದಿಗೂ ಕಂಡುಬರುತ್ತಿರುವುದು. ಆದ್ದರಿಂದಲೇ ರಜೋದರ್ಶನವಾದ ಮೂರುದಿನ ಸ್ತ್ರೀ ಸಂಗಾದಿಗಳನ್ನು ನಿಷೇಧಿಸಿರುವರು. || ೯ ||

ಇದರ ರೂಪವಾಗಿ ಇಂದಿಗೂ ಉಪ್ಪುಭೂಮಿ (ಚೌಳು) ಅಲ್ಲಲ್ಲಿ ಕಂಡುಬರುವುದು. ಗಿಡಗಳು ಕತ್ತರಿಸಿದರೂ ಮತ್ತೆ ಚಿಗುರಿ ಬೆಳೆಯುವ ವರವನ್ನು ಪಡೆದು ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗವನ್ನು ತೆಗೆದುಕೊಂಡುವು. ವೃಕ್ಷರಸವಾಗಿ ಇಂದಿಗೂ ಆ ಪಾಪವು ಅವುಗಳಲ್ಲಿ ಕಂಡುಬರುವುದು. ರಜೋದರ್ಶನವಿಲ್ಲದಿದ್ದರೂ ತಮ್ಮ

ದ್ರವ್ಯಭೂಯೋವರೇಣಾಪಸ್ತುರೀಯಂ ಜಗೃಹುರ್ಮಲಮ್ ।
ತಾಸು ಬುದ್ಬುದಫೇನಾಭ್ಯಾಂ ದೃಷ್ಟಂ ತದ್ಧರಿಕಿಲ್ಬಿಷಮ್ ॥ ೧೦ ॥

ಆಪಃ=ನೀರು (ನೀರಿನ ಅಭಿಮಾನಿಯು) ದ್ರವ್ಯಭೂಯೋ ವರೇಣ = (೧) ಪಂಚಭೂತಗಳಲ್ಲಿ ತಾನು ಹೆಚ್ಚು ಪರಿಮಾಣದಲ್ಲಿರುವ ವರದಿಂದ (೨) ಕ್ಷೀರಾದಿಗಳಲ್ಲಿ ನೀರನ್ನು ಹಾಕಿದಾಗ ಆ ದ್ರವ್ಯದ ಅಭಿವೃದ್ಧಿಯಾಗಲೆಂಬ ವರದಿಂದ (೩) ಪ್ರವಾಹಾದಿ ರೂಪದಲ್ಲಿ ಬರಬರುತ್ತಾ ನೀರು ಹೆಚ್ಚಾಗಬೇಕೆಂಬ ವರದಿಂದ ತುರೀಯಂ ಮಲಂ – ನಾಲ್ಕನೆಯ ಒಂದು ಭಾಗ ಪಾಪವನ್ನು ಜಗೃಹುಃ – ಸ್ವೀಕರಿಸಿತು. ತಾಸು–ಆ ನೀರಿನಲ್ಲಿ ತದ್ಧರಿಕಿಲ್ಬಿಷಂ=ಆ ಇಂದ್ರದೇವರಿಗೆ ಬಂದಿದ್ದ ಬ್ರಹ್ಮಹತ್ಯಾದೋಷವು ಬುದ್ಬುದಫೇನಾಭ್ಯಾಂ=ಗುಳ್ಳೆ, ನೊರೆ ಇತ್ಯಾದಿ ರೂಪದಲ್ಲಿ ದೃಷ್ಟಂ = ಇಂದಿಗೂ ಕಂಡುಬರುವುದು. 'ತಾಪಾಪನೋದೋ ಭೂಯಸ್ತ್ವಂ ಅಂಭಸೋ ವೃತ್ತಯಸ್ತ್ವಿಮಾಃ' ಎಂದು ಹಿಂದೆ ಮೂರನೆಯ ಸ್ಕಂಧದಲ್ಲಿ ಹೇಳಿರುವುದನ್ನು ನೋಡಬಹುದು. ಆದ್ದರಿಂದ ನೊರೆ, ಗುಳ್ಳೆ ಇರುವ ನೀರು ಶುಚಿಯಲ್ಲ. ॥ ೧೦ ॥

ಹತಪುತ್ರಸ್ತತಸ್ತ್ವಷ್ಟಾ ಜುಹಾವೇಂದ್ರಾಯ ಶತ್ರವೇ ।
ಇಂದ್ರಶತ್ರೋ ವಿವರ್ಧಸ್ವ ಮಾಚಿರಂ ಜಹಿ ವಿದ್ವಿಷಮ್ ॥ ೧೧ ॥

ತತಃ–ಅನಂತರ ಹತಪುತ್ರಃ = ಇಂದ್ರದೇವರಿಂದ ಸಂಹೃತನಾದ ವಿಶ್ವರೂಪನೆಂಬ ಮಗನುಳ್ಳ ತ್ವಷ್ಟಾ – ತ್ವಷ್ಟೃವು ಇಂದ್ರಾಯ – ಇಂದ್ರನಿಗಾಗಿ ಶತ್ರವೇ – ಸಂಹಾರಕನಾದವನೊಬ್ಬನ ಉತ್ಪತ್ತಿಗಾಗಿ (ಇಂದ್ರಸಂಹಾರಕನ ಉತ್ಪತ್ತಿಗಾಗಿ) ಇಂದ್ರಶತ್ರೋ ವಿವರ್ಧಸ್ವ – ಇಂದ್ರಶತ್ರುವೇ (ಇಂದ್ರನು ಶತ್ರು ಅಂದರೆ ಸಂಹಾರಕನಾಗಿ ಉಳ್ಳವನೇ) ವಿವರ್ಧಸ್ವ = ವಿಶೇಷವಾಗಿ ಜಾಗ್ರತೆ ಬೆಳೆಯುವವನಾಗು. ಮಾಚಿರಂ–ಜಾಗ್ರತೆ ವಿದ್ವಿಷಂ=ಶತ್ರುವನ್ನು ಜಹಿ=ಕೊಲ್ಲು ಎಂದು ಮಂತ್ರವನ್ನು

ಕಾಮಾಭಿಲಾಷೆಗೆ ತೊಂದರೆ ಇರಕೂಡದೆಂಬ ವರವನ್ನು ಪಡೆದು ಹೆಂಗಸರು ಆ ಪಾಪದ ಕಾಲುಭಾಗವನ್ನು ತೆಗೆದುಕೊಂಡರು. ಇಂದಿಗೂ ಅವರಲ್ಲಿ ಅದು ತಿಂಗಳ ತಿಂಗಳ ರಜಸ್ಸಾಗಿ ಕಂಡುಬರುತ್ತಿರುವುದು. ನೀರು ಪಂಚಭೂತಗಳಲ್ಲಿ ತನ್ನದೇ ಹೆಚ್ಚು ಭಾಗವಿರಬೇಕೆಂಬ ವರವನ್ನು ಪಡೆದು ಆ ಕಾಲುಭಾಗದ ಪಾಪವನ್ನು ಪಡೆಯಿತು. ಇಂದಿಗೂ ಆ ಪಾಪವು ನೀರಿನಲ್ಲಿ ಗುಳ್ಳೆ, ನೊರೆಯಾಗಿ ಕಂಡುಬರುತ್ತಿರುವುದು.

ಮಗನನ್ನು ಕಳೆದುಕೊಂಡ ತ್ವಷ್ಟೃವು ಇಂದ್ರನ ಸಹಾಯಕ್ಕಾಗಿ ಸಂಹಾರಕನಾದ ಒಬ್ಬನ ಉತ್ಪತ್ತಿಗಾಗಿ ಹೋಮ ಮಾಡಿದನು. ಇಂದ್ರ ಶತ್ರುವೇ ಅತಿಶಯವಾಗಿ ವರ್ಧಿಸು, ಜಾಗ್ರತೆಯಾಗಿ ಶತ್ರುವನ್ನು ಸಂಹರಿಸು ಎಂದು ಋತ್ವಿಜರು ಮಂತ್ರವನ್ನು ಉಚ್ಚರಿಸಿದರು. (ಆದರೆ ಅವರ ಉಚ್ಚಾರಣೆಯು ತಪ್ಪಾಗಿದ್ದರಿಂದ

ಉಚ್ಚರಿಸಿ ಜುಹಾವ=ಸೋಮದ್ರವ್ಯವನ್ನು ಇಂದ್ರೋದ್ದೇಶಕವಾಗಿ ಹೋಮ ಮಾಡಿದನು. ವಿ. ಅ. 'ಇಂದ್ರಶತ್ರೋ ವಿವರ್ಧಸ್ವ' ಎಂಬ ಆನುಪೂರ್ವಿಯನ್ನು ಹೇಳಿದ್ದರಿಂದ 'ತ್ವಷ್ಟಾ ಹತಪುತ್ರೋಽಪೀಂದ್ರಂ ಸೋಮಮಾಹರತ್' ಇತ್ಯಾದಿ ವೇದ ವಾಕ್ಯವನ್ನು ಸೂಚಿಸಿರುವರು. ಇಲ್ಲಿ ಇಂದ್ರಶತ್ರು ಎಂಬ ಸಮಸ್ತ ಪದವು ಇಂದ್ರನ ಶತ್ರು ಎಂಬರ್ಥದಲ್ಲಿಯೂ, ಇಂದ್ರನು ಶತ್ರುವಾಗಿ ಉಳ್ಳವನು ಎಂಬ ಅರ್ಥದಲ್ಲಿಯೂ ಮಾಡಬರುವುದು. ಮೊದಲನೆಯದು ಷಷ್ಠೀ ತತ್ಪುರುಷ. ಎರಡನೆಯದು ಬಹುವ್ರೀಹಿ. ತತ್ಪುರುಷವಾದಾಗ ಕೊನೆಯ ಅಕ್ಷರವು ಉದಾತ್ತ ಸ್ವರದಿಂದ ಉಚ್ಚರಿತವಾಗುವುದು. ಬಹುವ್ರೀಹಿಯಾದಾಗ ಮೊದಲನೆಯ ಅಕ್ಷರವು ಉದಾತ್ತ ಸ್ವರದಿಂದ ಉಚ್ಚರಿತವಾಗುವುದು. ಋತ್ವಿಜರು ಬಹುವ್ರೀಹಿಯಾಗುವಂತೆ ಉಚ್ಚರಿಸಿದ್ದರಿಂದ ಯಜಮಾನನಾದ ತ್ವಷ್ಟನಿಗೆ ಅಭಿಪ್ರೇತವಲ್ಲದ ಅರ್ಥದಲ್ಲಿ ಆ ಶಬ್ದವು ಪ್ರಯುಕ್ತವಾಗಿ ವಿಪರೀತ ಫಲವೇ ಆಯಿತು. ಇಂದ್ರನಿಂದ ಸಂಹೃತ ನಾಗುವ ವೃತ್ರಾಸುರನ ಉತ್ಪತ್ತಿಯಾಯಿತು. 'ಶ್ರುತ್ವಾ ಯದಬ್ರವೀತ್ಸ್ವಾಹೇಂದ್ರ ಶತ್ರುರ್ವರ್ಧಸ್ವೇತಿ ತಸ್ಮಾದಸ್ಯೇಂದ್ರಃ ಶತ್ರುರಭವತ್ ||' ಎಂಬ ಶ್ರುತಿಯು ಇದನ್ನು ಸ್ಪಷ್ಟಪಡಿಸುತ್ತದೆ. ಇದನ್ನೇ ಉದಾಹರಣೆಯಾಗಿಟ್ಟುಕೊಂಡು ಶಿಕ್ಷಾಗ್ರಂಥದಲ್ಲಿ (ಉಚ್ಚಾರಣೆಯ ರೀತಿಯನ್ನು ತಿಳಿಸುವ ಗ್ರಂಥ) 'ಮಂತ್ರೋ ಹೀನಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ| ಸ ವಾಗ್ವಜ್ರೋ ಯಜ ಮಾನಂ ಹಿನಸ್ತಿ ಯಥೇಂದ್ರಶತ್ರುಃ ಸ್ವರತೋಽಪರಾಧಾತ್ ||' (ಸ್ವರದಿಂದಲಾಗಲಿ ವರ್ಣದಿಂದಲಾಗಲಿ ಹೀನವಾದ ಮಂತ್ರವು ತಪ್ಪು ಪ್ರಯೋಗದಿಂದ ಉದ್ದಿಷ್ಟವಾದ ಅರ್ಥವನ್ನು ಹೇಳುವುದಿಲ್ಲ. ಹೀಗಾಗಿ ಅದು ವಾಗ್ವಜ್ರವಾಗಿ ಪರಿಣಮಿಸಿ ಯಜಮಾನನಿಗೆ ಕೇಡನ್ನುಂಟುಮಾಡುವುದು. ಸ್ವರದ ತಪ್ಪು ಉಚ್ಚಾರಣೆಯಿಂದ ಇಂದ್ರಶತ್ರು ಶಬ್ದವು ಮಾಡಿದಂತೆ) ಎಂದು ಹೇಳಿರುವರು. || ೧೧ ||

ಅಥಾನ್ವಾಹಾರ್ಯಪಚನಾದುತ್ಥಿತೋ ಘೋರದರ್ಶನಃ ।
ಕೃತಾಂತ ಇವ ಲೋಕಾನಾಂ ಯುಗಾಂತಸಮಯೇ ಯಥಾ ||೧೨||

ಅಥ=ಅನಂತರ ಅನ್ವಾಹಾರ್ಯಪಚನಾತ್=ದಕ್ಷಿಣಾಗ್ನಿಯಿಂದ ಯುಗಾಂತ ಸಮಯೇ=ಪ್ರಳಯ ಕಾಲದಲ್ಲಿ ಯಥಾ=ಹೇಗೋ (ತಥಾ)=ಹಾಗೆ ಲೋಕಾನಾಂ= ಲೋಕಗಳ (ಜನರ) (ಕ್ಷಯಾಯ)=ನಾಶಕ್ಕಾಗಿ ಕೃತಾಂತಃ ಇವ=ಯಮನಂತೆ ಘೋರದರ್ಶನಃ=ಭಯಂಕರವಾಗಿ ಕಾಣುವ (ಕಶ್ಚನ)=ಒಬ್ಬನು ಉತ್ಥಿತಃ=ಎದ್ದು ಬಂದನು. || ೧೨ ||

ಇಂದ್ರನಿಂದ ಸಂಹೃತನಾಗುವ ಪುರುಷನ ಉತ್ಪತ್ತಿಯಾಯಿತು.) ಹೋಮವು ಮುಗಿದ ಮೇಲೆ ದಕ್ಷಿಣಾಗ್ನಿಯಿಂದ ಪ್ರಳಯ ಕಾಲದಲ್ಲಿಯಂತೆ ಲೋಕ ಕ್ಷಯಕ್ಕಾಗಿ

ವಿಷ್ವಗ್ವಿವರ್ಧಮಾನಂ ತಮಿಷುಮಾತ್ರಂ ದಿನೇ ದಿನೇ ।
ದಗ್ಧಶೈಲಪ್ರತೀಕಾಶಂ ಸಂಧ್ಯಾಭ್ರಾನೀಕವಾಸಸಮ್ ॥ ೧೩ ॥

ತಪ್ತತಾಮ್ರಶಿಖಾಶ್ಮಶ್ರುಮ್ಮಧ್ಯಾಹ್ನಾರ್ಕೋಗ್ರಲೋಚನಮ್ ॥

ದೇದೀಪ್ಯಮಾನೇ ತ್ರಿಶಿಖೇ ಶೂಲ ಆರೋಪ್ಯ ರೋದಸೀ ।
ನೃತ್ಯಂತಮುನ್ನದಂತಂ ಚ ಚಾಲಯಂತಂ ಪದಾ ಮಹೀಮ್ ॥೧೪॥

ದರೀಗಂಭೀರವಕ್ತ್ರೇಣ ಪಿಬಂತಂ ಚ ನಭಸ್ತಲಮ್ ।
ಲಿಹಂತಂ ಜಿಹ್ವಯರ್ಕ್ಷಾಣಿ ಗ್ರಸಂತಂ ಭುವನತ್ರಯಮ್ ॥ ೧೫ ॥

ಮಹತಾ ರೌದ್ರದಂಷ್ಟ್ರೇಣ ಜೃಂಭಯಂತಂ ಮುಹುರ್ಮುಹುಃ ।
ವಿತ್ರಸ್ತಾ ದುದ್ರುವುರ್ಲೋಕಾ ವೀಕ್ಷ್ಯ ಸರ್ವೇ ದಿಶೋ ದಶ ॥೧೬॥

ದಿನೇ ದಿನೇ=ಪ್ರತಿದಿನವೂ ಇಷುಮಾತ್ರಂ=ಬಾಣಬಿಟ್ಟರೆ ಹೋಗಿ ಬೀಳು ವಷ್ಟು ದೂರದಷ್ಟು ಪರಿಮಾಣ ವಿಷ್ವಗ್=ಸುತ್ತಲೂ ವಿವರ್ಧಮಾನಂ=ಬೆಳೆ ಯುತ್ತಿರುವ, ದಗ್ಧಶೈಲಪ್ರತೀಕಾಶಂ=ಸುಟ್ಟುಹೋದ ಪರ್ವತದಂತೆ ಕಪ್ಪುಬಣ್ಣ ವುಳ್ಳ, ಸಂಧ್ಯಾಭ್ರಾನೀಕವಾಸಸಂ=ಸಂಧ್ಯಾಕಾಲದ ಮೇಘಮಾಲೆಯಂತೆ ಪಿಶಂಗ ವರ್ಣದ ಬಟ್ಟೆಯುಳ್ಳ, ತಪ್ತ ತಾಮ್ರಶಿಖಾಶ್ಮಶ್ರುಂ=ಕಾದ ತಾಮ್ರದಂತೆ ಕೆಂಪಗಿರುವ ತಲೆಗೂದಲು-ಗಡ್ಡಗಳುಳ್ಳ, ಮಧ್ಯಾಹ್ನಾರ್ಕೋಗ್ರಲೋಚನಂ=ಮಧ್ಯಾಹ್ನದ ಸೂರ್ಯ ನಂತೆ ಕ್ರೂರವಾದ ಕಣ್ಣುಗಳುಳ್ಳ, ದೇದೀಪ್ಯಮಾನೇ=ಪ್ರಕಾಶಿಸುವ ತ್ರಿಶಿಖೇ= ಮೂರು ಕೊನೆಗಳ ಶೂಲೇ=ಶೂಲದಲ್ಲಿ ರೋದಸೀ=ದ್ಯಾವಾಭೂಮಿಗಳನ್ನು ಆರೋಪ್ಯ=ಚುಚ್ಚಿಕೊಂಡು ನೃತ್ಯಂತಂ=ನರ್ತನಮಾಡುತ್ತಿರುವ, ಉನ್ನದಂತಂ=

ಒಬ್ಬನು ಮೂಡಿಬಂದನು. ಅವನು ಯಮನಂತೆ ಭಯಂಕರನಾಗಿದ್ದನು. ಬಾಣ ಬಿಟ್ಟರೆ ಬೀಳುವಷ್ಟು ಪರಿಮಾಣದಿಂದ ಅವನು ದಿನದಿನಕ್ಕೂ ಮೇಲಕ್ಕೂ ಸುತ್ತಲೂ ಬೆಳೆಯುತ್ತಿದ್ದನು; ಸುಟ್ಟ ಬೆಟ್ಟದಂತೆ ಕಪ್ಪಗಿದ್ದನು; ಸಂಜೆಯ ಮೋಡಗಳ ಸಮೂಹದ ವರ್ಣದಂತೆ ಮಾಸಲುಗೆಂಪಿನ ಬಟ್ಟೆಯುನ್ನುಟ್ಟಿದ್ದನು; ಅವನ ಕೂದಲು ಮತ್ತು ಗಡ್ಡ (ಮೀಸೆ) ಕಾದ ತಾಮ್ರದಂತೆ ಕೆಂಪಗಿದ್ದವು; ಮಧ್ಯಾಹ್ನದ ಸೂರ್ಯ ನಂತೆ ಕೋರೈಸುವ ಕಣ್ಣುಗಳಿಂದ ಉಗ್ರನಾಗಿದ್ದನು; ಅವನು ಪ್ರಕಾಶಮಾನವಾದ ತ್ರಿಶೂಲದಲ್ಲಿ ಭೂಮ್ಯಾಕಾಶಗಳನ್ನು ಚುಚ್ಚಿಕೊಂಡು ನರ್ತನಮಾಡುತ್ತಿದ್ದನು; ಗಟ್ಟಿಯಾಗಿ ಶಬ್ದ ಮಾಡುತ್ತಿದ್ದನು; ಕಾಲಿನ ಹೆಜ್ಜೆಯಿಂದ ಭೂಮಿಯನ್ನೇ ನಡುಗಿ ಸುತ್ತಿದ್ದನು; ಗುಹೆಯಂತೆ ಆಳವಾದ ಬಾಯಿಯಿಂದ ಆಕಾಶವನ್ನೇ ಪಾನಮಾಡು ತ್ತಿದ್ದನು; ನಾಲಗೆಯಿಂದ ನಕ್ಷತ್ರಗಳನ್ನು ನೆಕ್ಕುತ್ತಿದ್ದನು; ಮೂರು ಲೋಕವನ್ನೂ ನುಂಗುತ್ತಿದ್ದನು; ಭಯಂಕರ ಕೋರೆಹಲ್ಲುಗಳಿಂದ ಕೂಡಿದ ದೊಡ್ಡ ಬಾಯಿಯಿಂದ ಆಗಾಗ್ಗೆ ಆಕಳಿಸುತ್ತಿದ್ದನು. ಇವನನ್ನು ನೋಡಿ ಎಲ್ಲ ಜನರೂ ಹೆದರಿ ಹತ್ತು ದಿಕ್ಕು

ಗಟ್ಟಿಯಾಗಿ ಶಬ್ದಮಾಡುತ್ತಿರುವ, ಪದಾ=ಕಾಲಿನಿಂದ (ಹೆಜ್ಜೆಯಿಂದ) ಮಹೀಂ=ಭೂಮಿಯನ್ನು ಚಾಲಯಂತಂ=ನಡುಗಿಸುತ್ತಿರುವ ದರೀಗಂಭೀರವಕ್ತ್ರೇಣ=ಗುಹೆಯಂತೆ ಆಳವಾದ ಬಾಯಿಯಿಂದ ನಭಸ್ತಲಂ=ಆಕಾಶವನ್ನೇ ಪಿಬಂತಂ=ಪಾನಮಾಡುತ್ತಿರುವ, ಜಿಹ್ವಯಾ=ನಾಲಿಗೆಯಿಂದ ಋಕ್ಷಾಣಿ=ನಕ್ಷತ್ರಗಳನ್ನು ಲಿಹಂತಂ=ನೆಕ್ಕುತ್ತಿರುವ ಭುವನತ್ರಯಂ=ಮೂರು ಲೋಕವನ್ನೂ ಗ್ರಸಂತಂ=ನುಂಗುತ್ತಿರುವ, ಮುಹುರ್ಮುಹುಃ=ಮೇಲಿಂದ ಮೇಲೆ ರೌದ್ರದಂಷ್ಟ್ರೇಣ=ಕ್ರೂರವಾದ ಕೋರೆ ಹಲ್ಲುಗಳಿರುವ ಮಹತಾ (ಮುಖೇನ)=ದೊಡ್ಡ ಬಾಯಿಯಿಂದ ಜೃಂಭಯಂತಂ=ಆಕಳಿಸುತ್ತಿರುವ ತಂ=ಆ ಬಂದ ವ್ಯಕ್ತಿಯನ್ನು ವೀಕ್ಷ್ಯ=ನೋಡಿ ಲೋಕಾಃ=ಜನರು ವಿತ್ರಸ್ತಾಃ (ಸಂತಃ) ಹೆದರಿದವರಾಗಿ ಸರ್ವೇ=ಎಲ್ಲರೂ ದಶದಿಶಃ=ಹತ್ತು ದಿಕ್ಕುಗಳಿಗೂ ದುದ್ರುವುಃ=ಓಡಿದರು. ||೧೩-೧೬||

ಯೇನಾವೃತಾ ಇಮೇ ಲೋಕಾಸ್ತಮಸಾ ತ್ವಾಷ್ಟ್ರಮೂರ್ತಿನಾ ।
ಸ ವೈ ವೃತ್ರ ಇತಿ ಪ್ರೋಕ್ತಃ ಪಾಪಃ ಪರಮದಾರುಣಃ ॥ ೧೭ ॥

ಅವಯವಾರ್ಥವನ್ನು ಹೇಳಿ ಅವನ ಹೆಸರನ್ನು ತಿಳಿಸುತ್ತಾರೆ. ಯೇನ=ಯಾವ ಕಾರಣದಿಂದ ಇಮೇ=ಈ ಲೋಕಾಃ=ಲೋಕಗಳು ತ್ವಾಷ್ಟ್ರಮೂರ್ತಿನಾ=ತ್ವಷ್ಟೃವಿನ ಯಾಗ ಪ್ರಯತ್ನದಿಂದ ದೇಹವನ್ನು ಹೊಂದಿರುವ ತಮಸಾ=ತಮೋಗುಣ ಪ್ರಚುರನಾದ ಅಸುರನಿಂದ ಆವೃತಾಃ=ಆವರಿಸಲ್ಪಟ್ಟವೋ ಆ ಕಾರಣದಿಂದ ಪರಮದಾರುಣಃ=ಅತ್ಯಂತ ಕ್ರೂರಿಯಾದ ಆದ್ದರಿಂದಲೇ ಪಾಪಃ=ಪಾಪಿಯಾದ ಸಃ=ಅವನು ವೃತ್ರಃ ಇತಿ=ವೃತ್ರನೆಂದು ಪ್ರೋಕ್ತಃ=ಹೇಳಲ್ಪಟ್ಟಿರುವನು. ವೈ='ಸ ಇಮಾಂ ಲೋಕಾನಾವೃಣೋತ್ತದ್ವೃತ್ರಸ್ಯ ವೃತ್ರತ್ವಂ' ಎಂಬ ಶ್ರುತಿಯಿಂದ ಇದು ಸಿದ್ಧವು. 'ವೃತ್ರಂ ಜಘನ್ವಾ ಅಪತದ್ವಾರ' ಪ ಅಂದರೆ ಪರಮಾತ್ಮ ಅಥವಾ ಧರ್ಮದಿಂದ ಅಪ=ದೂರವಾದವನು ಪಾಪ ಎನಿಸುವನು. ಪರಮ ದಾರುಣ ಎಂಬ ವಿಶೇಷಣ ಅದನ್ನೇ ಸೂಚಿಸುತ್ತದೆ. ||೧೭||

ತಂ ನಿಜಘ್ನುರಭಿದ್ರುತ್ಯ ಸಗಣಾ ವಿಬುಧರ್ಷಭಾಃ ।
ಸ್ವೈಃ ಸ್ವೈರ್ದಿವ್ಯಾಸ್ತ್ರಶಸ್ತ್ರೌಘೈಃ ಸೋಽಗ್ರಸತ್ತಾನಿ ಕೃತ್ಸ್ನಶಃ॥೧೮॥

ಗಳಿಗೂ ಓಡಿದರು. ತ್ವಷ್ಟೃವು ಮಾಡಿದ ಹೋಮದಿಂದ ಹುಟ್ಟಿದ ಈ ತಮೋಗುಣ ಪ್ರಚುರನಾದವನಿಂದ ಮೂರು ಲೋಕವೂ ಆವೃತವಾಗಿತ್ತಾದ್ದರಿಂದ ಅವನನ್ನು ವೃತ್ರನೆಂದು ಕರೆದರು. ಅವನು ಶ್ರೀ ಹರಿಗೆ ದೂರನಾಗಿದ್ದನು. ಆದ್ದರಿಂದ ಅತಿ ಭಯಂಕರನಾಗಿದ್ದನು. ದೇವನಾಯಕರು ತಮ್ಮ ತಮ್ಮ ಗಣಗಳೊಂದಿಗೆ ಆ ವೃತ್ರನ ಮೇಲೆರಗಿದರು. ತಮ್ಮ ತಮ್ಮ ಶ್ರೇಷ್ಠ ಶಸ್ತ್ರಾಸ್ತ್ರ ಸಮೂಹಗಳಿಂದ ಅವನನ್ನು ಹೊಡೆದರು. ಅವನವೆಲ್ಲವನ್ನೂ ಸಂಪೂರ್ಣವಾಗಿ ನುಂಗಿದನು.

ಸಗಣಾಃ=ದೇವತಾ ಸಮೂಹದಿಂದ ಕೂಡಿದ ವಿಬುಧರ್ಷಭಾಃ-ಶ್ರೇಷ್ಠ ದೇವತೆಗಳು (ದೇವನಾಯಕರು) ಅಭಿದ್ರುತ್ಯ=ಆ ವೃತ್ರಾಸುರನ ಮೇಲೆ ನುಗ್ಗಿ ಸ್ವೈಃ ಸ್ವೈಃ=ತಮ್ಮ ತಮ್ಮ ದಿವ್ಯಾಸ್ತ್ರ ಶಸ್ತ್ರೌಘೈಃ=ಶ್ರೇಷ್ಠಗಳಾದ ಅಸ್ತ್ರ ಮತ್ತು ಶಸ್ತ್ರಗಳ ಸಮೂಹಗಳಿಂದ ತಂ=ಆ ವೃತ್ರಾಸುರನನ್ನು ನಿಜಘ್ನುಃ=ಹೊಡೆದರು. ಸಃ=ಅವನು ತಾನಿ=ಆ ಅಸ್ತ್ರ ಶಸ್ತ್ರಗಳನ್ನು ಕೃತ್ಸ್ನಶಃ=ಎಲ್ಲವನ್ನೂ ಅಗ್ರಸತ್-ನುಂಗಿದನು. ||೧೮||

ತತಸ್ತೇ ವಿಸ್ಮಿತಾಃ ಸರ್ವೇ ವಿಷಣ್ಣಾ ಗ್ರಸ್ತತೇಜಸಃ ।
ಪ್ರತ್ಯಂಚಮಾದಿಪುರುಷಮುಪತಸ್ಥುಃ ಸಮಾಹಿತಾಃ ॥ ೧೯ ॥

ಶ್ರೀ ಹರಿಯ ಅನುಗ್ರಹವಿಲ್ಲದೆ ವೃತ್ರಾಸುರನನ್ನು ಗೆಲ್ಲುವುದು ದುಸ್ಸಾಧ್ಯವೆಂದು ಬಗೆದು ದೇವತೆಗಳು ಭಗವಂತನನ್ನು ಶರಣುಹೊಂದಿದ ರೀತಿಯನ್ನು ಹೇಳುತ್ತಾರೆ. ತತಃ=ವೃತ್ರಾಸುರನು ಆಯುಧಗಳನ್ನೆಲ್ಲ ನುಂಗಿದಮೇಲೆ ವಿಸ್ಮಿತಾಃ (ಸಂತಃ)=ಆಶ್ಚರ್ಯಪಟ್ಟವರಾಗಿ ತೇ ಸರ್ವೇ=ಆ ಎಲ್ಲ ದೇವತೆಗಳೂ ವಿಷಣ್ಣಾಃ-ದೀನರಾಗಿ ಗ್ರಸ್ತತೇಜಸಃ=ಕಾಂತಿಗುಂದಿದವರಾಗಿ (ಭ್ರಷ್ಟಚೇತಸಃ ಎಂಬ ಪಾಠದಲ್ಲಿ ಕರ್ತವ್ಯ ಜ್ಞಾನಶೂನ್ಯರಾಗಿ ಎಂದರ್ಥ.) ಸಮಾಹಿತಾಃ (ಸಂತಃ) - ಶ್ರೀಹರಿಯಲ್ಲಿಯೇ ಮನಸ್ಸಿಟ್ಟವರಾಗಿ ಪ್ರತ್ಯಂಚಂ=ಬಿಂಬರೂಪಿಯಾದ, ಅಂತರ್ಯಾಮಿಯಾದ ಆದಿಪುರುಷಂ=ಸೃಷ್ಟಿಯ ಪ್ರಾರಂಭದಲ್ಲಿ ಭಕ್ತರ ಅನುಗ್ರಹಕ್ಕಾಗಿ ಪುರುಷರೂಪದಿಂದ ವ್ಯಕ್ತನಾದ ಶ್ರೀಹರಿಯನ್ನು ಉಪತಸ್ಥುಃ=ಉಪಾಸಿಸಿದರು. ಶ್ರೀಹರಿಯು ಸರ್ವತ್ರ ವ್ಯಾಪ್ತನಾದ್ದರಿಂದ ಎಲ್ಲಿಗೂ ಹೋಗುವ ಸಂಭವವಿಲ್ಲವಾದ್ದರಿಂದ ಇದ್ದಲ್ಲಿಯೇ ಅವನನ್ನು ಸ್ತೋತ್ರ ಮಾಡಿದರೆಂದು ಅಭಿಪ್ರಾಯ || ೧೯ ||

ದೇವಾ ಊಚುಃ—

ವಾಯ್ವಂಬರಾಗ್ನ್ಯಪ್‌ಕ್ಷಿತಯಸ್ತ್ರಿಲೋಕಾ
ಬ್ರಹ್ಮಾದಯೋ ಯೇ ವಯಮುದ್ವಿಜಂತಃ ।
ಹರಾಮ ಯಸ್ಮೈ ಬಲಿಮಂತಕೋಽಸೌ
ಬಿಭೇತಿ ಯಸ್ಮಾದರಣಂ ತತೋ ನಃ ॥ ೨೦ ॥

ಅನಂತರ ಅವರೆಲ್ಲರೂ ಆಶ್ಚರ್ಯಪಟ್ಟರು, ವಿಷಣ್ಣರಾದರು, ಕಾಂತಿಗುಂದಿದರು. ಶ್ರೀಹರಿಯಲ್ಲಿಯೇ ಮನಸ್ಸಿಟ್ಟು ತಮ್ಮ ತಮ್ಮ ಬಿಂಬ ರೂಪಿಯೂ ಅಂತರ್ಯಾಮಿಯೂ ಆದ ಆ ಆದಿಪುರುಷನನ್ನು ಸ್ತೋತ್ರ ಮಾಡಿದರು. 'ವಾಯು, ಆಕಾಶ, ಅಗ್ನಿ, ಜಲ ಮತ್ತು ಭೂಮಿಗಳ ಅಧಿಪತಿಗಳೂ ಬ್ರಹ್ಮಾದಿಗಳೂ ಆದ ನಾವು—ಈ ಮೂರು ಲೋಕಗಳ ನಿವಾಸಿಗಳೂ—ಕಾತುರತೆಯಿಂದ ಯಾವನಿಗೆ ಬಲಿ (ಕಾಣಿಕೆ) ಯನ್ನು ಹೊರುವೆವೋ, ಸರ್ವ ಸಂಹಾರಕವಾದ ಶ್ರೀ ಭೂ ದುರ್ಗಾ ನಾಮಗಳುಳ್ಳ ಈ ಶ್ರೀ ತತ್ವವೂ ಯಾವನಿಗೆ ಹೆದರಿದಂತೆ ವಶದಲ್ಲಿರುವುದೋ

ವಾಯು, ಆಕಾಶ (ಅಂಬರ), ಅಗ್ನಿ, ನೀರು, ಭೂಮಿಗಳ ಅಭಿಮಾನಿಗಳೂ, ಬ್ರಹ್ಮಾದಿಗಳೂ ಯೇ=ಯಾವ ತ್ರಿಲೋಕಾಃ=ಮೂರು ಲೋಕಗಳೋ ತೇ=ಆ ವಯಂ=ನಾವು ಉದ್ವಿಜಂತಃ (ಸಂತಃ)=ಉದ್ವೇಗಗೊಂಡವರಾಗಿ ಯಸ್ಮೈ=ಯಾವನಿಗೆ ಬಲಿಂ=ಪೂಜೆಯನ್ನು ಹರಾಮ=ಮಾಡುವೆವೋ ಅಸೌ=ಈ ಅಂತಕಃ=ಮೂಲಪ್ರಕೃತಿಯು ದುರ್ಗಾ ಮೊದಲಾದ ನಾಮಗಳಿಂದ ಭಿನ್ನಳಾದವಳು ಯಸ್ಮಾತ್=ಯಾವ ಮಹಾಂತಕನಾದ ಶ್ರೀ ಹರಿಯಿಂದ ಬಿಭೇತಿ=ಹೆದರಿದವಳಂತೆ ಅವನ ವಶದಲ್ಲಿಯೇ ಇರುವಳೋ ತತಃ=ಆ ಕಾರಣದಿಂದ (ಸಃ)=ಆ ಶ್ರೀಹರಿಯು ನಃ=ನಮಗೆ ಅರಣಂ=ಶರಣನಾಗಿ (ರಕ್ಷಕನಾಗಿ) (ಅಸ್ತು)=ಆಗಲಿ. ಅಂತಕಾಯ ಎಂಬ ಪಾಠದಲ್ಲಿ ದುರ್ಗಾರೂಪದಿಂದ ಸರ್ವಸಂಹಾರಕನಾದ್ದರಿಂದ ಅಂತಕ ಶಬ್ದವಾಚ್ಯನಿಗೆ—ಶ್ರೀ ತತ್ವನಿಯಾಮಕನಿಗೆ ಎಂದರ್ಥ. ಆ ಅಂತಕ ಶಬ್ದವಾಚ್ಯಳಾದ ಲಕ್ಷ್ಮಿಯೂ ಯಾವನಿಂದ ಭೀತಳಾಗಿರುವಳೋ ತತಃ=ಆ ಶ್ರೀಹರಿಯ ದೆಸೆಯಿಂದಲೇ ನಮಗೆ ಅರಣಂ=ರಕ್ಷಣೆಯು ಆಗಲಿ ಎಂದಾದರೂ ಅರ್ಥ. ಅಂತಕ ಇತ್ಯಾದಿ ಹೇಳಿದ್ದರಿಂದ ಮೂರು ಲೋಕದ ಹೊರಗಿರುವ ಲಕ್ಷ್ಮೀ ತತ್ವವು ಶ್ರೀ ಹರಿನಿಯತವಾಗದೆ ಸ್ವತಂತ್ರವಾಗಿ ಇರಬಹುದು ಎಂಬ ಶಂಕೆಯನ್ನು ಹೋಗಲಾಡಿಸಿರುವರು. ಅಂತಕ ಶಬ್ದಕ್ಕೆ ಸಾಮಾನ್ಯವಾಗಿ ಪ್ರತೀತವಾಗುವ ಯಮ (ಮೃತ್ಯು)ವೆಂಬ ಅರ್ಥವನ್ನು ಬಿಟ್ಟು ಮೇಲಿನ ಅರ್ಥಮಾಡಿದ್ದಕ್ಕೆ ಪ್ರಮಾಣ. 'ಕಾಲೋಽಂತಕಃ ಪ್ರಧಾನಂ ಚ ಮೃತ್ಯುರವ್ಯಕ್ತಮಿತ್ಯಪಿ | ಉಚ್ಯತೇ ಪ್ರಕೃತಿಃ ಸೂಕ್ಷ್ಮಾ ಶ್ರೀರ್ಭೂರ್ದುರ್ಗೇತಿ ನಾಮಭಿಃ | ಸೈವ ಬ್ರಹ್ಮಾದಿ ಭಯದಾ ವಿಷ್ಣೋಸ್ತು ವಶವರ್ತಿನೀ | ಅಭಯಾಪಿ ಬಿಭೇತೀವ ತದ್ವಶತ್ವಾದುದೀರ್ಯತೇ ||' (ಕಾಲ, ಅಂತಕ, ಪ್ರಧಾನ, ಮೃತ್ಯು, ಅವ್ಯಕ್ತ ಎಂದು ಸೂಕ್ಷ್ಮ ಪ್ರಕೃತಿಯು ಹೇಳಲ್ಪಡುವಳು. ಅವಳೇ ಶ್ರೀ, ಭೂ, ದುರ್ಗಾ ಎಂಬ ಹೆಸರುಗಳಿಂದ ಬ್ರಹ್ಮಾದಿಗಳಿಗೆ ಭಯಪ್ರದಳು. ಆದರೆ ವಿಷ್ಣುವಿನ ಅಧೀನಳು. ಅವಳು ಭಯವಿಲ್ಲದವಳಾದರೂ ಶ್ರೀಹರಿಯ ವಶಳಾದ್ದರಿಂದ ಭಯಗೊಳ್ಳುವಳೋ ಎಂಬಂತೆ ಹೇಳಲ್ಪಡುವಳು). ಬೇರೆ ಅರ್ಥ ಮಾಡಿದಲ್ಲಿ ಈ ಪ್ರಮಾಣ ವಿರೋಧವು ತಪ್ಪಿದ್ದಲ್ಲ. || ೨೦ ||

ಅವಿಸ್ಮಿತಂ ತಂ ಪರಿಪೂರ್ಣಕಾಮಂ
ಸ್ವೇನೈವ ಲಾಭೇನ ಸಮಂ ಪ್ರಶಾಂತಮ್ |
ವಿನೋಪಸರ್ಪತ್ಯಪರಂ ಹಿ ಬಾಲಿಶಃ
ಶ್ವಲಾಂಗುಲೇನಾತಿತಿತರ್ತಿ ಸಿಂಧುಮ್ || ೨೧ ||

ಆ ಕಾರಣದಿಂದ ಆ ಶ್ರೀಹರಿಯೇ ನಮಗೆ ರಕ್ಷಕನಾಗಲಿ. ಶ್ರೀಹರಿಯು ತನ್ನ ಸ್ವರೂಪಾನಂದವನ್ನು ಯಾವಾಗಲೂ ಅನುಭವಿಸುತ್ತಿರುವನು. ಆದ್ದರಿಂದಲೇ ಸರ್ವವಿಧದಿಂದಲೂ ಅವನು ಪರಿಪೂರ್ಣೇಚ್ಛನು. ಆ ಕಾರಣದಿಂದಲೇ ಕುತೂಹಲ

ಅವನಿಂದಲೇ ರಕ್ಷಣೆಯಾಗಲಿ ಎಂಬ ಅವಧಾರಣೆಗೆ ಕಾರಣವಾಗಿ ರುದ್ರಾದಿಗಳಲ್ಲೊಬ್ಬರನ್ನು ಶರಣುಹೊಂದಲಿಚ್ಛಿಸುವವನು ಅಜ್ಞನೆಂದು ಹೇಳುತ್ತಾರೆ. ಸ್ವೇನ ಏವ ಲಾಭೇನ=ತನ್ನ ಸ್ವರೂಪಾನಂದಾನುಭವದಿಂದಲೇ ಪರಿಪೂರ್ಣಕಾಮಂ=ಸರ್ವವಿಧದಿಂದಲೂ ಪೂರ್ಣವಾದ ಇಚ್ಛೆಯುಳ್ಳ ಆದ್ದರಿಂದಲೇ ಅವಿಸ್ಮಿತಂ=(೧) ಕುತೂಹಲರಹಿತನಾದ (೨) ಅಹಂಕಾರವಿಲ್ಲದ ಆದ್ದರಿಂದಲೇ ಪ್ರಶಾಂತಂ=(೧) ಸಮುದ್ರದಂತೆ ಸ್ತಿಮಿತನಾದ (೨) ವಾಗಾದಿಶೂನ್ಯನಾದ ಆ ಕಾರಣದಿಂದಲೇ ಸಮಂ=ಅಂತರ್ಯಾಮಿ ಮೊದಲಾದ ಎಲ್ಲ ರೂಪಗಳಲ್ಲಿಯೂ ಏಕಪ್ರಕಾರನಾದ ತಂ=ಲಕ್ಷ್ಮೀ ಬ್ರಹ್ಮಾದಿ ಪೂಜ್ಯನಾದ ಆ ಶ್ರೀಹರಿಯನ್ನು ವಿನಾ=ಬಿಟ್ಟು ಯಃ=ಯಾವನು ಅಪರಂ=ಬೇರೆ ರುದ್ರ ಮೊದಲಾದವರಲ್ಲಿ ಒಬ್ಬರನ್ನು (ಅರಣಾರ್ಥಂ)=ರಕ್ಷಣೆಗಾಗಿ ಉಪಸರ್ಪತಿ=ಹೊಂದುವನೋ (ಸಃ)=ಅವನು ಸಿಂಧುಂ=ಸಮುದ್ರವನ್ನು ಶ್ವಲಾಂಗು (ಗೂ)ಲೇನ=ನಾಯಿಯ ಬಾಲದಿಂದ (ದೋಣಿಗೆ ಬದಲಾಗಿ ನಾಯಿಯ ಬಾಲವನ್ನು ಹಿಡಿದುಕೊಂಡು ಎಂದರ್ಥ) ಅತಿಪಿಪರ್ತಿ=ದಾಟುವನು. ಬಾಲಿಶಃ ಹಿ=ಬಾಲಕನಂತೆ ಅಜ್ಞಾನಿಯಾದ್ದರಿಂದ ಅದು ಅವನಿಗೆ ಉಚಿತವು. ನಾಯಿಯ ಬಾಲದ ಸಹಾಯದಿಂದ ಹೇಗೆ ಸಮುದ್ರವನ್ನು ದಾಟಲಾಗುವುದಿಲ್ಲವೋ ಹಾಗೆ ಸಮರ್ಥರಲ್ಲದ ರುದ್ರಾದಿಗಳ ಆಶ್ರಯದಿಂದ ವ್ಯಸನ ಸಮುದ್ರವನ್ನು ದಾಟಲಾಗುವುದಿಲ್ಲವೆಂದು ತಾತ್ಪರ್ಯ. ‖ ೨೧ ‖

ಯಸ್ಯೋರುಶೃಂಗೇ ಜಗತೀಂ ಸ್ವನಾವಂ
ಮನುರ್ಯಥಾಽಽಬಧ್ಯ ತತಾರ ದುರ್ಗಮ್ ।
ಸ ಏವ ನಸ್ತ್ವಾಷ್ಟ್ರಭಯಾದ್ದುರಂತಾ-
ತ್ರಾತಾಽಽಶ್ರಿತಾನ್ ವಾರಿಚರೋಽಪಿ ನೂನಮ್ ‖ ೨೨ ‖

ಶ್ರೀ ಹರಿಯನ್ನು ಶರಣು ಹೊಂದಿದವನಿಗೆ ಯಾರಿಗಾದರೂ ಸಮುದ್ರದಂತಿರುವ ವಿಪತ್ತಿನ ಪರಿಹಾರವು ಆದದ್ದು ಕಂಡಿದ್ದ ಪಕ್ಷದಲ್ಲಿ ಶ್ರೀ ಹರಿಯನ್ನು ಬಿಟ್ಟು

ರಹಿತನು. ಆದ್ದರಿಂದ ಯಾವಾಗಲೂ ಪ್ರಶಾಂತನು. ಹೀಗಿರುವುದರಿಂದ ಎಲ್ಲ ರೂಪಗಳಲ್ಲಿಯೂ ಏಕಪ್ರಕಾರನು. ಆ ಸರ್ವೋತ್ತಮನನ್ನು ಬಿಟ್ಟು ಮತ್ತೊಬ್ಬನನ್ನು ರಕ್ಷಣೆಗಾಗಿ ಹೊಂದುವವನು ನಾಯಿಯ ಬಾಲವನ್ನು ಹಿಡಿದು ಸಮುದ್ರವನ್ನು ದಾಟುವನು (ಅವನು ಹೇಗೆ ದಾಟಲಾರನೋ ಹಾಗೆ ಇವನೂ ರಕ್ಷಿತನಾಗಲಾರ). ಹುಡುಗನಂತೆ ಅಜ್ಞನಾದ ಅವನಿಗೆ ಅದು ಯುಕ್ತವೇ. ಮತ್ಸ್ಯರೂಪಿಯಾದ ಈ ಶ್ರೀಹರಿಯ ದೊಡ್ಡ ಕೋಡಿಗೆ ಜಗತ್ತೆಂಬ ತಮ್ಮ ನಾವೆಯನ್ನು ದೃಢವಾಗಿ ಕಟ್ಟಿ ವೈವಸ್ವತ ಮನು (ಸತ್ಯವ್ರತ) ರಾಜರು ದಾಟಲಾಗದ ಆ (ಮನ್ವಂತರ ಪ್ರಳಯ) ಜಲಧಿಯನ್ನು ದಾಟಿದರು. ಆ ಮತ್ಸ್ಯರೂಪಿಯೇ ಆಶ್ರಿತರಾದ ನಮ್ಮನ್ನೂ ಈ ತ್ವಷ್ಟೃ ಹೋಮೋತ್ಪನ್ನನ ಭಯದಿಂದ ನಮ್ಮಿಂದ ನಿವಾರಿಸಿಕೊಳ್ಳಲಾಗದುದರಿಂದ

ಮತ್ತೊಬ್ಬನನ್ನು ಶರಣುಹೊಂದುವನು. ಹುಡುಗತನದಿಂದ ನಾಯಿಯ ಬಾಲವನ್ನು ಹಿಡಿದು ಅಪಾರ ಸಮುದ್ರವನ್ನು ದಾಟಬಯಸುವನೆಂದು ಪರಿಹಾಸಮಾಡಿದ್ದು ಯುಕ್ತವಾದೀತು. ಅದೇ ಹೇಗೆ? ಎಂದರೆ ಉದಾಹರಣೆ ಕೊಡುತ್ತಾರೆ—ಮನುಃ= ಸತ್ಯವ್ರತ (ವೈವಸ್ವತ ಮನು) ರಾಜರು ಯಸ್ಯ = ಯಾವ ಮತ್ಸ್ಯರೂಪಿಯಾದ ಶ್ರೀಹರಿಯ ಉರುಶೃಂಗೇ = ದೊಡ್ಡ ಕೋಡಿನಲ್ಲಿ ಜಗತೀಂ = ಭೂಮಯವಾನ ಸ್ವನಾವಂ=ತಮ್ಮ ಮನೋರಥದಿಂದ ಕ್ಲೃಪ್ತವಾದ ನಾವೆಯನ್ನು ಯಥಾ=ದೃಢವಾಗಿ ರುವಂತೆ ಆಬಧ್ಯ=ಕಟ್ಟಿ ದುರ್ಗಂ=ಮತ್ತೊಂದು ಉಪಾಯದಿಂದ ದಾಟಲಾಗದ ಪ್ರಳಯ ಸಮುದ್ರವೆಂಬ ಕಷ್ಟವನ್ನು ತತಾರ=ದಾಟಿದರೋ ನೂನಂ=ನಿಶ್ಚಯ ವಾಗಿಯೂ ಅಪಿ=ಈಗಲೂ ಸಃ ವಾರಿಚರಃ ಏವ=ಆ ಮತ್ಸ್ಯರೂಪಿಯೇ ಆಶ್ರಿತಾರ್ಃ= ಯಾವಾಗಲೂ ಅವನನ್ನೇ ಸೇವಿಸಿಕೊಂಡಿರುವ ನಃ=ನಮ್ಮನ್ನು ದುರಂತಾತ್= ಕೊನೆಯಿಲ್ಲದ (ದಾಟಲಾಗದ) ತ್ವಾಷ್ಟ್ರಭಯಾತ್=ತ್ವಷ್ಟೃವಿನ ಯಾಗದಿಂದ ಹುಟ್ಟಿದ ಈ ವೃತ್ರಾಸುರನ ಭಯದಿಂದ ತ್ರಾತಾ=ರಕ್ಷಕನು (ಅಸ್ತು)=ಆಗಲಿ. ಅಥವಾ ಯಥಾ=ಹೇಗೆ ತತಾರ=ದಾಟಿದರೋ (ತಥಾ)=ಹಾಗೆ ಆಶ್ರಿತಾರ್ಃ= ದಾಟಲು ಆಶ್ರಯಿಸಿದ ನಮ್ಮನ್ನು ಎಂದಾದರೂ ಅರ್ಥ. ನೂನಂ ನಿಶ್ಚಯವಾಗಿಯೂ ತ್ರಾತಾ=ರಕ್ಷಿಸುವನು ಎಂದೂ ಅರ್ಥವಾಡಿರುವರು. || ೨೨ ||

ಪುರಾ ಸ್ವಯಂಭೂರಪಿ ಸಂಯಮಾಂಭ-
ಸ್ಯುದೀರ್ಣವಾತೋರ್ಮಿರವೈಃ ಕರಾಲೇ ।
ಏಕೋಽರವಿಂದಾತ್ಪತಿತಸ್ತತಾರ
ತಸ್ಮಾದ್ಭಯಾದ್ಯೇನ ಸ ನೋಽಸ್ತು ಪಾರಃ ॥ ೨೩ ॥

ಈ ಮುಂದೆ ಹೇಳುವ ಕಾರಣದಿಂದಲೂ ಶ್ರೀ ಹರಿಯ ಅನುಗ್ರಹವಿಲ್ಲದೆ ಈ ಭಯವನ್ನು ಕಳೆದುಕೊಳ್ಳುವುದು ದುಸ್ಸಾಧ್ಯವೆಂಬ ಅಭಿಪ್ರಾಯದಿಂದ ಸ್ತೋತ್ರ ಮಾಡುತ್ತಾರೆಂದು ಹೇಳುತ್ತಾರೆ. ಪುರಾ=ಸೃಷ್ಟಿಯ ಪ್ರಾರಂಭದಲ್ಲಿ ಉದೀರ್ಣ ವಾತೋರ್ಮಿರವೈಃ=ಪ್ರಕೃತ್ಯಾತ್ಮಕವಾದ ವಾಯುವಿನಿಂದ ಎಬ್ಬಿಸಲ್ಪಟ್ಟ ಅಲೆಗಳ ಶಬ್ದಗಳಿಂದ ಕರಾಲೇ=ಭಯಂಕರವಾದ ಸಂಯಮಾಂಭಸಿ=ಪ್ರಳಯೋದಕದಲ್ಲಿ ಇರುವ ಅರವಿಂದಾತ್=ಪ್ರಕೃತ್ಯಾತ್ಮಕವಾದ ಕಮಲದಿಂದ ಪತಿತಃ=ಹುಟ್ಟಿದ ಏಕಃ =ಏಕಾಕಿಯಾದ ಆದ್ದರಿಂದ ಭಯವನ್ನು ತೋರಿದ ಸ್ವಯಂಭೂಃ ಅಪಿ=ಬ್ರಹ್ಮ ದೇವರೂ ಕೂಡ ತಸ್ಮಾತ್ ಭಯಾತ್=ಆ ಭಯದಿಂದ ಯೇನ=ಯಾವ ಶ್ರೀ ಹರಿ ಯಿಂದ ತತಾರ=ದಾಟಿದರೋ ಸಃ=ಬ್ರಹ್ಮದೇವರಿಗೂ ಭಯವನ್ನು ಪರಿಹರಿಸಿಕೊಟ್ಟ

ನಿಶ್ಚಯವಾಗಿಯೂ ರಕ್ಷಿಸುವನು. ಸೃಷ್ಟಿಯ ಪ್ರಾರಂಭದಲ್ಲಿ ಪ್ರಕೃತಿ (ಲಕ್ಷ್ಮಿ) ಯೇ ವಾಯುರೂಪಳಾಗಿ ಅಲೆಗಳನ್ನು ಎಬ್ಬಿಸುತ್ತಿರಲು ಭಯಂಕರವಾಗಿದ್ದ ಆ ಪ್ರಕೃತಿ ರೂಪವಾಗಿದ್ದ ಮಹಾ ಪ್ರಳಯೋದಕದಲ್ಲಿ ಇದ್ದ ಪ್ರಕೃತಿ ರೂಪವಾದ ಕಮಲದಿಂದ

ಆ ಶ್ರೀಹರಿಯು ನಃ=ನಮಗೆ ಪಾರಃ=ಈ ವೃತ್ರಾಸುರನ ಭಯಸಮುದ್ರದ ಪಾರವನ್ನು ಉಂಟುಮಾಡುವವನು ಅಸ್ತು=ಆಗಲಿ. ಉದೀರ್ಣವಾತ ಎಂದು ಮೊದಲಾಗಿ ಹೇಳಿದ್ದರಿಂದ ಆ ಕಾಲದಲ್ಲಿದ್ದ ವಾಯುವು ಪ್ರಕೃತ್ಯಾತ್ಮಕವೆಂದೂ ಹಾಗಲ್ಲದಿದ್ದರೆ ಬೇರೆಯವರಿಗೆ ಆ ಬಗೆಯ ಬಲವು ಇರುತ್ತಿರಲಿಲ್ಲವೆಂದೂ ತಿಳಿಸಿರುವರು. 'ಯತ್ರ ವಾಯೂದಪದ್ಮಾದಿರೂಪೇಣ ಪ್ರಕೃತಿಃ ಸ್ಥಿತಾ| ಏಕಸ್ತತ್ರಾಬಿಭೇದ್ಬ್ರಹ್ಮಾ ವಿಚಾರ್ಯ ಭಯಮತ್ಯಗಾತ್| ಅಂತರ್ಗತೋ ಹರಿಸ್ತಸ್ಯ ಧ್ಯಾತೋ ಭಯಮಪಾನುದತ್||' ಎಂಬ ಪ್ರಮಾಣದಿಂದ ಆಗಿನಕಾಲದ ವಾಯು, ನೀರು, ಪದ್ಮ ಇತ್ಯಾದಿಗಳು ಪ್ರಕೃತಿ ಸ್ವರೂಪವೆಂದು ಸಿದ್ಧವಾಗುವುದು. ಏಕಃ ಎಂಬುದರಿಂದ ಭಯಕ್ಕೆ ನಿಮಿತ್ತವನ್ನು ಹೇಳಿರುವರು. ಏಕಾಕಿಯೆಂದರೆ ಇನ್ನೂ ಎರಡನೆಯ ವಸ್ತು ಉತ್ಪನ್ನವಾಗಿರಲಿಲ್ಲ. 'ಸೋಽಬಿಭೇತ್ ಸ ದ್ವಿತೀಯಮೈಚ್ಛತ್' ಎಂದು ಶ್ರುತಿಯಿದೆ. 'ತಸ್ಮಾದೇಕಾಕೀ ಬಿಭೇತಿ' ಎಂದೂ ಇದೆ. ಅಪಿ ಎಂದು ಹೇಳಿದ್ದರಿಂದ ಬ್ರಹ್ಮದೇವರಿಗೆ ಭಯವಿಲ್ಲವೆಂದೂ ಹಾಗೆ ತೋರಿಸಿದರೆಂದೂ ಇದರಿಂದ ಶ್ರೀ ಹರಿಯ ಅಧೀನರು ತಾವೆಂದು ತೋರಿಸಿಕೊಟ್ಟಿರುವರೆಂದೂ ಸೂಚಿಸಿರುವರು. 'ಜನಿಷ್ಯತಾಂ ಜನಾನಾಂತು ಸ್ವಭಾವಾನಾಂ ಪ್ರಸಿದ್ಧಯೇ' ಎಂಬ ಪ್ರಮಾಣದಂತೆ ಸೃಷ್ಟರಾಗಲಿರುವ ಜನರ ಸ್ವಭಾವವು ಹೀಗೆಂದು ತಿಳಿಸುವುದಕ್ಕಾಗಿ ಹಾಗೆ ಮಾಡಿದರೆಂದು ತಿಳಿಯಬೇಕು. ಭಯವು ಬ್ರಹ್ಮದೇವರಿಗೆ ಸಂಭಾವನೆಯೆಂದೇಕೆ? ಸ್ವಾಭಾವಿಕವೇ ಏಕಾಗಬಾರದು? ಎಂದರೆ ಅದಕ್ಕೂ ಉತ್ತರ ಕೊಟ್ಟಿರುವರು. ಅಜ್ಞಾನದಿಂದ ಭಯವು ಹುಟ್ಟುವುದಲ್ಲವೇ! ಬ್ರಹ್ಮದೇವರಿಗೆ ಅಜ್ಞಾನವಿಲ್ಲ ಅಂದಮೇಲೆ ಭಯವು ಸ್ವಾಭಾವಿಕವಲ್ಲ. 'ಜ್ಞಾನಾದಿ ಗುಣಪೂರ್ಣಸ್ಯ ಬ್ರಹ್ಮಣೋಽಪಿ' ಎಂದು ಪ್ರಮಾಣ. ಹಾಗಾದರೆ ಅದು ಎಷ್ಟು ಕಾಲವಿತ್ತು ಎಂಬುದಕ್ಕೂ ಇದೇ ಅಪಿ ಪದದಿಂದ ಉತ್ತರ ಕೊಟ್ಟಿರುವರು. ಜ್ಞಾನಪೂರ್ಣರಾದವರಿಗೆ ಬಹುಕಾಲ ಭಯವೆಲ್ಲಿಯದು? ಆದ್ದರಿಂದ 'ಕ್ಷಣಾರ್ಧಗಾಃ| ಭಯಾದಿಕಾ ಭವಂತೀವ ಕಥಂ ತಸ್ಮಿನ್ ಸ್ಥಿರಾಲಯಾಃ||' ಎಂದು ಮುಂದುವರಿದ ಅದೇ ಪ್ರಮಾಣವು ಸ್ಪಷ್ಟಪಡಿಸುವುದು. ಅರ್ಧಕ್ಷಣಮಾತ್ರ ಇದ್ದುವೋ ಎಂಬಂತೆ ತೋರಿದುವು. ಹೇಗೆ ಜ್ಞಾನಪೂರ್ಣರಾದ ಅವರಲ್ಲಿ ಅವು ಸ್ಥಿರವಾಗಿರುವುವು? ಇರುವುದಿಲ್ಲವೆಂದರ್ಥ. ಮುಂದೆ ತಾವು ಸೃಷ್ಟಿಸಲಿರುವ ಜನರ ಸ್ವಭಾವವನ್ನು ತೋರಿಸುವುದನ್ನು ಬಿಟ್ಟು ಮತ್ತೇನಾದರೂ ಪ್ರಯೋಜನವಿದೆಯೇ? ಎಂಬುದಕ್ಕೂ ಇದೇ 'ಅಪಿ' ಪದದಿಂದ ಉತ್ತರವನ್ನು ಸೂಚಿಸಿರುವರು. ಭಯ ಪ್ರದರ್ಶನದಿಂದ

ಹುಟ್ಟಿದ ಬ್ರಹ್ಮದೇವರು ಇನ್ನು ಯಾರೂ ಸೃಷ್ಟರಾದವರು ಇರಲಿಲ್ಲವಾದ್ದರಿಂದ ಒಬ್ಬರೇ ಇದ್ದರು. ಅವರು (ಶ್ರೀಹರಿಗೆ ತಾವು ಅಧೀನರೆಂದು ತಿಳಿಸುವುದಕ್ಕಾಗಿ ತಾತ್ಕಾಲಿಕವಾಗಿ ಎರಡು ಸಲ) ಭಯವನ್ನು ತೋರಿದರು. ಶ್ರೀಹರಿಯು ಅವರನ್ನು ಭಯದಿಂದ ಪಾರುಮಾಡಿದನು. ಆ ಶ್ರೀಹರಿಯೇ ನಮ್ಮನ್ನೂ ಈ ಭಯದಿಂದ

ಶ್ರೀಹರಿಯ ಪ್ರೀತಿಯೆಂಬ ಮತ್ತೊಂದು ಪ್ರಯೋಜನವೂ ಉಂಟು. 'ಭಗವತ್ಪ್ರೀತಯೇ ನಿತ್ಯಂ ಬ್ರಹ್ಮಣೋ ಯೇ ಭಯಾದಯಃ | ನ ವೃಥಾ ತಸ್ಯ ಭಾವಃ ಸ್ಯಾತ್ ಕಶ್ಚಿತ್, ತೇಽಪಿ ಕ್ಷಣಾರ್ಧಗಾಃ ||' ಎಂಬ ಪ್ರಮಾಣವು ಇದನ್ನೇ ಸ್ಪಷ್ಟಪಡಿಸುವುದು. ಭಯಾದಿಗಳು ಒಂದು ಸಲವೇ ? ಅನೇಕ ಸಲವೇ ? ಎಂಬ ಪ್ರಶ್ನೆಗೂ ಅನೇಕ ಸಲವೆಂಬ ಉತ್ತರವನ್ನೂ ಈ ಅಪಿ ಪದದಿಂದ ಸೂಚಿಸಿರುವರು. 'ಅಜ್ಞಾನಂ ತು ಚತುರ್ವಾರಂ ದ್ವಿವಾರಂ ಭಯಮೇವ ಚ | ಶೋಕೋಽಪಿ ತಾವನ್ನಾನ್ಯತ್ರ ಕದಾಚಿದ್ಬ್ರಹ್ಮಣೋ ಭವೇತ್ ||' ಈ ಪ್ರಮಾಣವು ಅಜ್ಞಾನವನ್ನು ನಾಲ್ಕು ಸಲ, ಭಯವನ್ನು ಎರಡು ಸಲ, ಶೋಕವನ್ನು ಎರಡು ಸಲ ತೋರಿಸಿರುವರೆಂದೂ ಇನ್ನೆಂದೂ ಎಲ್ಲಿಯೂ ತೋರಿಸಿಲ್ಲವೆಂದೂ ತಿಳಿಸುವುದು. ಈ ಪ್ರದರ್ಶನವೂ ಕೂಡ ಹರಿಪ್ರೀತಿಗೆ ಕಾರಣವಾದ್ದರಿಂದ ಉನ್ನತಿಗೆ ಕಾರಣವೆಂಬುದನ್ನು ಅದೇ ಪ್ರಮಾಣ ಸ್ಪಷ್ಟವಾಗಿ ಹೇಳುತ್ತದೆ. 'ತತ್ರಾಪಿ ಭಗವತ್ಪ್ರೀತ್ಯಾ ಉನ್ನತ್ಯೈ ವಾಽಸ್ಯ ತದ್ಭವೇತ್ ||' ಇದಿಷ್ಟೂ ಪ್ರಮೇಯವನ್ನು ಸೂಚಿಸುವುದಕ್ಕಾಗಿ 'ಸ್ವಯಂಭೂರಪಿ' ಎಂದು ಅಪಿ ಪದವನ್ನು ಹಾಕಿರುವರೆಂದು ತಿಳಿಯಬೇಕು. || ೨೩ ||

ಯ ಏಕ ಈಶೋ ನಿಜಮಾಯಯಾ ನಃ
ಸಸರ್ಜ ಯೇನಾನುಸೃಜಾಮ ವಿಶ್ವಮ್ ।
ವಯಂ ಚ ಯಸ್ಯಾಪಿ ಪುರಃ ಸಮೇತಾಃ
ಪಶ್ಯಾಮ ಲಿಂಗಂ ಪೃಥಗೀಶಮಾನಿನಃ ॥ ೨೪ ॥

ನಮಗೆ ಸ್ರಷ್ಟೃವೆಂಬ ಸಂಬಂಧವಿದ್ದರೂ ನಾವು ಅವನ ನಿಜ ಸ್ವರೂಪವನ್ನು ಕಾಣುತ್ತಿಲ್ಲ. ಮತ್ತೇನೆಂದರೆ, ಅವನ ಲಕ್ಷಣವನ್ನು ಮಾತ್ರ ಕಾಣುತ್ತಿದ್ದೇವೆ. ಆದ್ದರಿಂದ ನಾವು ಅವನನ್ನೇ ಶರಣು ಹೊಂದುತ್ತೇವೆ ಎಂದು ಹೇಳುತ್ತಾರೆ. ಇಲ್ಲಿನ ಯಚ್ಛಬ್ದಗಳಿಗೆ ಮುಂದೆ ೨೭ನೆಯ ಶ್ಲೋಕದಲ್ಲಿ ಬರುವ ತಚ್ಛಬ್ದದೊಂದಿಗೆ ಅನ್ವಯ. ಏಕಃ= ಕೇವಲನೂ ಈಶಃ=ಐಶ್ವರ್ಯ ಮೊದಲಾದ ಗುಣಗಳಿಂದ ಪೂರ್ಣನೂ ಆದ ಯಃ= ಯಾವನು ನಿಜಮಾಯಯಾ=ತನ್ನ ಅಧೀನವಾದ ಪ್ರಕೃತಿಯಿಂದ ಸ್ವೇಚ್ಛೆಯಿಂದ ನಃ=ನಮ್ಮನ್ನು ಸಸರ್ಜ=ಸೃಷ್ಟಿಸಿದನೋ ಯೇನ=ಯಾವನಿಂದ ಪ್ರೇರಿತರಾದ ವಯಂ=ನಾವು ವಿಶ್ವಂ=ಜಗತ್ತನ್ನು ಅನುಸೃಜಾಮ=ಮತ್ತೆ ಸೃಷ್ಟಿಸುವೆವೋ ಚ=ಮತ್ತು ಪೃಥಕ್=ತಾರತಮ್ಯ ವಿಶಿಷ್ಟವಾಗಿ ಈಶಮಾನಿನಃ=ಸ್ವಾತಂತ್ರ್ಯಾಭಿ

ಪಾರುಮಾಡುವನಾಗಿ ಆಗಲಿ. ಕೇವಲನೂ ಐಶ್ವರ್ಯಾದಿ ಗುಣ ಪೂರ್ಣನೂ ಆದ ಶ್ರೀಹರಿಯು ತನ್ನ ಇಚ್ಛೆಯಿಂದ ನಮ್ಮನ್ನು ಸೃಷ್ಟಿಸಿದನು. ಅವನಿಂದ ಪ್ರೇರಿತರಾಗಿಯೇ ನಾವು ಜಗತ್ತನ್ನು ಮತ್ತೆ ಸೃಷ್ಟಿಸುವೆವು. ನಾವು ನಮ್ಮ ತಾರತಮ್ಯಕ್ಕೆ ತಕ್ಕಂತೆ ಆಗಾಗ ಸ್ವಾತಂತ್ರ್ಯಾಭಿಮಾನದಿಂದ ಈಶರೆಂದು ತಿಳಿಯುವುದರಿಂದ ಅವನ ಎದುರಿನಲ್ಲಿಯೇ ಸೇರಿದ್ದರೂ ಅವನ ಅಸಾಧಾರಣ ಧರ್ಮ ರೂಪ ಲಕ್ಷಣವನ್ನು

ಮಾನವುಳ್ಳ ವಯಂ=ನಾವು ಯಸ್ಯ=ಯಾವನ ಪುರಃ=ಎದುರಿನಲ್ಲಿ ಸಮೇತಾಃ ಅಪಿ=ಸೇರಿದವರಾದರೂ ಲಿಂಗಂ=ಅಸಾಧಾರಣ ಧರ್ಮ ರೂಪ ಲಕ್ಷಣವನ್ನೇ—ನಮ್ಮನ್ನು ಸೃಷ್ಟಿಸಿದವನು, ನಾವು ಅವನ ಅನುಗ್ರಹದಿಂದ ಬಂದ ಕರ್ತೃತ್ವ ಉಳ್ಳವರು, ಅವನು ಅಚಿಂತ್ಯ ವೈಭವಯುಕ್ತನು ಇತ್ಯಾದಿ ಲಕ್ಷಣವನ್ನೇ—ಪಶ್ಯಾಮ=ಕಾಣುವೆವೋ ಅವನ ಸ್ವರೂಪವನ್ನು ಅಂದರೆ ಸಚ್ಚಿದಾನಂದಾದಿ ಸ್ವರೂಪವನ್ನು ಕಾಣುವುದಿಲ್ಲವೋ ಅಂತಹ ಶ್ರೀ ಹರಿಯನ್ನೇ ಶರಣು ಹೊಂದುವೆವು ಎಂದು ಮುಂದಕ್ಕೆ ಅನ್ವಯ. ವಿ.ಅ. ಪೃಥಕ್ ಈಶಮಾನಿನಃ ಎಂಬುದರಿಂದ ಶ್ರೀ ಹರಿಯ ಸಚ್ಚಿದಾನಂದ ರೂಪವನ್ನು ಕಾಣದಿರುವುದಕ್ಕೆ ಕಾರಣವನ್ನು ತಿಳಿಸಿರುವರು. ಈ ಸ್ವಾತಂತ್ರ್ಯಾಭಿಮಾನವು ದೇವತೆಗಳಿಗೆ ಒಂದೊಂದು ವೇಳೆ ಬರುವುದೇ ಹೊರತು ಯಾವಾಗಲೂ ಬರುವುದಿಲ್ಲ. ಅದೂ ಎಲ್ಲರಲ್ಲಿಯೂ ಒಂದೇ ಪ್ರಕಾರದ್ದಲ್ಲ. ತಾರತಮ್ಯದಿಂದ ಕೂಡಿರುವುದು. ಅದನ್ನೇ ಪೃಥಕ್ ಎಂಬ ಪದದಿಂದ ತಿಳಿಸಿರುವರು. ಪ್ರಮಾಣ—'ಕದಾಚಿದಭಿಮಾನಸ್ತು ದೇವಾನಾಮಪಿ ಸನ್ನಿವ | ಪ್ರಾಯಃ ಕಾಲೇಷು ನಾಸ್ತ್ಯೇವ ತಾರತಮ್ಯೇನ ಸೋಽಪಿ ತು ||' ಹೇ ಈಶ=ಸ್ವಾಮಿಯೇ, ಮಾನಿನಃ ವಯಂ=ಸ್ವಾತಂತ್ರ್ಯಾಭಿಮಾನವುಳ್ಳ ನಾವು ಪೃಥಕ್=ತಾರತಮ್ಯವುಳ್ಳವರು ಎಂದಾದರೂ ಅರ್ಥವಾಗುವುದು. ಇದರಿಂದ ಭಗವಂತನಿಂದ ನಾವು ಸೃಷ್ಟರಾಗಿ ಪಾಲಿತರಾಗಿದ್ದೇವೆ. ಆದ್ದರಿಂದ ತಂದೆಯನ್ನೇ ಶರಣು ಹೊಂದುತ್ತೇವೆ ಎಂದೂ ಕಾರಣವನ್ನು ತಿಳಿಸಿದಂತಾಯಿತು. || ೨೪ ||

ಯೋ ನಃ ಸಪತ್ನೈರ್ಭೃಶಮರ್ದ್ಯಮಾನಾನ್
ದೇವರ್ಷಿತಿರ್ಯಙ್ನೃಷು ನಿತ್ಯ ಏವ |
ಕೃತಾವತಾರಸ್ತನುಭಿಃ ಸ್ವಮಾಯಯಾ
ಕೃತ್ವಾಽಽತ್ಮಸಾತ್ಪಾತಿ ಯುಗೇ ಯುಗೇ ಚ || ೨೫ ||

ಶ್ರೀಹರಿಯು ಕರಚರಣಾದಿ ದೇಹವುಳ್ಳವನಾದರೂ ಮಿಕ್ಕವರಂತೆ ಅನಿತ್ಯದೇಹಿಯಲ್ಲ. ಆದ್ದರಿಂದ ನಮ್ಮ ಅಭಿಮತ ಸಿದ್ಧಿಗಾಗಿ ಅವನೇ ಸಂಪ್ರಾರ್ಥನೀಯನು

ಕಾಣುವೆವೇ ಹೊರತು ಅವನ ಸ್ವರೂಪವನ್ನು ಕಾಣುವುದಿಲ್ಲ. ಅವನು ನಮ್ಮನ್ನು ಸೃಷ್ಟಿಸಿದವನು ಅಷ್ಟೇ ಅಲ್ಲ ನಮ್ಮನ್ನು ಕಾಪಾಡುವವನೂ ಅವನೇ. ಅವನು ತನ್ನ ಇಚ್ಛೆಯಿಂದಲೇ ಸಚ್ಚಿದಾನಂದಾತ್ಮಕ ದೇಹದಿಂದ ವ್ಯಕ್ತನಾಗುವನು. ಹೀಗೆ ವ್ಯಕ್ತನಾಗಿ ದೇವತೆಗಳಲ್ಲಿ ಉಪೇಂದ್ರಾದಿ ರೂಪಗಳಿಂದಲೂ ಋಷಿಗಳಲ್ಲಿ ವೇದವ್ಯಾಸಾದಿ ರೂಪಗಳಿಂದಲೂ ತಿರ್ಯಗ್ಜಂತುಗಳಲ್ಲಿ ವರಾಹಾದಿ ರೂಪಗಳಿಂದಲೂ ಮನುಷ್ಯರಲ್ಲಿ ರಾಮಾದಿ ರೂಪಗಳಿಂದಲೂ ಅವತರಿಸಿ, ಹಾಗೆ ಅವತರಿಸಿದರೂ ಆಯಾಯಾ ಯೋನಿಕೃತ ವಿಕಾರಗಳಿಲ್ಲದವನಾಗಿಯೇ ಪ್ರತಿ ಯುಗದಲ್ಲಿಯೂ—ಯಾವಾಗಲೂ—ಶತ್ರುಗಳಿಂದ ಬಹಳವಾಗಿ ಪೀಡಿತರಾಗುತ್ತಿದ್ದ ನಮ್ಮನ್ನು ತನ್ನವರೆಂದು ರಕ್ಷಿಸುವನು.

ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಸ್ವಮಾಯಯಾ = ತನ್ನ ಇಚ್ಛೆಯಿಂದ ತನುಭಿಃ=ವ್ಯಕ್ತಮಾಡಿದ ಸಚ್ಚಿದಾನಂದಾತ್ಮಕ ದೇಹಗಳಿಂದ ದೇವತೆಗಳೂ ಋಷಿಗಳೂ ತಿರ್ಯಗ್ ಜಂತುಗಳೂ ಮತ್ತು ಮನುಷ್ಯರು—ಇವರಲ್ಲಿ ಕೃತಾವತಾರಃ ಅಪಿ=ಅವತರಿಸಿದರೂ ನಿತ್ಯಃ ಏವ=ನಿರ್ವಿಕಾರನೇ ಆದ ಅಂದರೆ ಯೋನಿ ಪ್ರಯುಕ್ತವಾದ ದುಃಖಗಳಿಲ್ಲದ ಯಃ=ಯಾವ ಶ್ರೀ ಹರಿಯು ಸಪತ್ನೈಃ=ಶತ್ರುಗಳಿಂದ ಭೃಶಂ=ಬಹಳವಾಗಿ ಅರ್ದ್ಯಮಾನಾನ್=ಪೀಡಿಸಲ್ಪಡುವ ನಃ=ನಮ್ಮನ್ನು ಆತ್ಮಸಾತ್ ಕೃತ್ವಾ=ತನ್ನವರನ್ನಾಗಿ ಪರಿಗ್ರಹಿಸಿ ಯುಗೇ ಯುಗೇ=ಪ್ರತಿ ಯುಗದಲ್ಲಿಯೂ ಚ=ಉಳಿದ ಕಾಲದಲ್ಲಿಯೂ ಪಾತಿ=ರಕ್ಷಿಸುವನೋ ಅಥವಾ ನಿತ್ಯಃ ಏವ=ಯಾವಾಗಲೂ ಆಯಾಯಾ ಅವತಾರ ರೂಪಗಳುಳ್ಳವನಾದರೂ ತನ್ನ ಇಚ್ಛೆಯಿಂದ ದೇಹಗಳಿಂದ ದೇವಾದಿಗಳಲ್ಲಿ ಅವತರಿಸಿ ನಮ್ಮನ್ನು ಕಾಪಾಡುವನೋ ಎಂದಾದರೂ ಅರ್ಥ. ದೇವತೆಗಳಲ್ಲಿ ಉಪೇಂದ್ರಾದಿ, ಋಷಿಗಳಲ್ಲಿ ವ್ಯಾಸಾದಿ, ತಿರ್ಯಕ್ ಜಂತುಗಳಲ್ಲಿ ವರಾಹಾದಿ, ಮನುಷ್ಯರಲ್ಲಿ ರಾಮಾದಿ ಅವತಾರಗಳೆಂದು ತಿಳಿಯಬೇಕು. || ೨೫ ||

ತಮೇವ ದೇವಾ ವಯಮಾತ್ಮದೈವತಂ
ಪರಂ ಪ್ರಧಾನಂ ಪುರುಷಂ ವಿಶ್ವಮಾದ್ಯಮ್ ।
ವ್ರಜಾಮ ಸರ್ವೇ ಶರಣಂ ಶರಣ್ಯಂ
ಸ್ವಾನಾಂ ಸ ನೋ ಧಾಸ್ಯತಿ ಶಂ ಮಹಾತ್ಮಾ ॥ ೨೬ ॥

ಯಚ್ಛಬ್ದ ತಚ್ಛಬ್ದಗಳಿಂದ ಹೇಳಿದ ಮತ್ತು ಉಳಿದ ಗುಣಗಳಿಂದ ಅವನನ್ನು ವಿಶೇಷಣ ವಿಶಿಷ್ಟನನ್ನಾಗಿ ತಿಳಿಸಿ ಶರಣಾಗು ಎಂದು ಪ್ರಾರ್ಥಿಸುತ್ತಾರೆ. ದೇವಾಃ= ದೇವತೆಗಳಾದ ಸರ್ವೇ ವಯಂ=ನಾವೆಲ್ಲರೂ ಆತ್ಮದೈವತಂ=ನಮ್ಮ ಇಷ್ಟದೈವವಾದ, ಪರಂ=ಸರ್ವೋತ್ತಮನಾದ ಪ್ರಧಾನಂ=ಎಲ್ಲರಿಗೂ ಮುಖ್ಯನಾದ ಪುರುಷಂ= ಅನಂತ ಫಲವನ್ನು ಕೊಡುವ ವಿಶ್ವಂ=ಸರ್ವತ್ರ ವ್ಯಾಪ್ತನಾದ ಆದ್ಯಂ=ಪ್ರಪಂಚಕ್ಕೆ ಆದಿಕಾರಣನಾದ ಶರಣ್ಯಂ=ರಕ್ಷಣಾಪೇಕ್ಷಿಗಳಿಂದ ಪ್ರಾಪ್ಯನಾದ ತಂ ಏವ=ಆ ಶ್ರೀಹರಿಯನ್ನೇ ಶರಣಂ=ರಕ್ಷಕನನ್ನಾಗಿ ವ್ರಜಾಮ=ಹೊಂದುತ್ತೇವೆ. ಮಹಾತ್ಮಾ= ಮಹಾಮಹಿಮನಾದ ಸಃ=ಆ ಶ್ರೀ ಹರಿಯು ಸ್ವಾನಾಂ=ಅವನ ಭಕ್ತರಾದ ನಃ= ನಮಗೆ ಶಂ=ಸುಖವನ್ನು ಧಾಸ್ಯತಿ=ಉಂಟುಮಾಡುವನು. ವಿ.ಅ. ಏವಕಾರದಿಂದ ಮತ್ತೊಬ್ಬನನ್ನಲ್ಲವೆಂದೂ, ದೇವಾ ಎಂಬುದರಿಂದ ದೇವತೆಗಳಾದ ನಮಗೆ ಹರಿಯೇ ರಕ್ಷಕನೆಂದೂ, ವಯಂ ಎಂಬುದರಿಂದ ಶ್ರೀ ಹರಿಗಿಂತ ನಾವು ಭಿನ್ನರೆಂದೂ

'ಅವನು ನಮ್ಮ ಇಷ್ಟದೇವತೆ, ಸರ್ವೋತ್ತಮ, ಪ್ರಧಾನ, ಪುರುಷ, ಸರ್ವತ್ರವ್ಯಾಪ್ತ, ಎಲ್ಲಕ್ಕೂ ಮೂಲ ಕಾರಣ. ಶರಣ್ಯನಾದ ಅವನನ್ನೇ ನಾವೆಲ್ಲರೂ ಶರಣುಹೊಂದುತ್ತೇವೆ. ಆ ಮಹಾ ಮಹಿಮನು ಅವನ ಭಕ್ತರಾದ ನಮಗೆ ಸುಖವನ್ನು ಉಂಟುಮಾಡುವನು' ಎಂದು ಇದ್ದಲ್ಲಿಯೇ ದೇವತೆಗಳು ಸ್ತೋತ್ರಮಾಡಿದರು.

ನಮ್ಮಲ್ಲಿಯೂ ಪರಸ್ಪರ ಭೇದವಿದೆಯೆಂದೂ, ಪರಂ ಇತ್ಯಾದಿ ವಿಶೇಷಣಗಳಿಂದ ಇಷ್ಟದೇವತೆಯಷ್ಟೇ ಅಲ್ಲ; ಸರ್ವೋತ್ತಮತ್ವಾದಿ ಗುಣವಿಶಿಷ್ಟನೆಂದೂ, ಪುರುಷಂ ಎಂಬುದರಿಂದ ಪ್ರಧಾನ ಶಬ್ದಕ್ಕೆ ಪ್ರಕೃತಿ ಎಂದರ್ಥವಲ್ಲವೆಂದೂ, ವಿಶ್ವಂ ಎಂಬುದ ರಿಂದ ಪುರುಷ ಶಬ್ದಕ್ಕೆ ಜೀವನೆಂದು ಅರ್ಥವಲ್ಲವೆಂದೂ, ಆದ್ಯ ಶಬ್ದದಿಂದ ವಿಶ್ವ ವೆಂದರೆ ಪ್ರಪಂಚವಲ್ಲವೆಂದೂ, ಶರಣ್ಯಂ ಎಂಬುದರಿಂದ ಕ್ರೂರಸ್ವಭಾವನಾದಲ್ಲಿ ಇಷ್ಟ ನಾಗುತ್ತಿರಲಿಲ್ಲವೆಂದೂ, ಸರ್ವೇ ಎಂಬುದರಿಂದ ನಮ್ಮಲ್ಲಿ ಯಾರಿಗೂ ಇವನ ವಿಷಯ ದಲ್ಲಿ ರಕ್ಷಿಸುವನೋ ಇಲ್ಲವೋ ಎಂಬ ಸಂದೇಹವಿಲ್ಲವೆಂದೂ, ಸ್ವಾನಾಂ ಎಂಬುದರಿಂದ ಶರಣು ಹೊಂದಿದರೂ ಉದಾಸೀನನಾಗಿರದೆ ಉದಾರಿಯಂತೆ ಅಭೀಷ್ಟವನ್ನು ಕೊಡುವನೆಂದೂ ತಿಳಿಸಿರುವರು. 'ವಾಸುದೇವೋ ವಾ ಇದಮಗ್ರ ಆಸೀತ್' ಎಂಬ ಶ್ರುತಿಯು ಶ್ರೀ ಹರಿಯು ಪ್ರಪಂಚಕ್ಕೆ ಆದಿಭೂತನೆಂದು ತಿಳಿಸುತ್ತದೆ. || ೨೬ ||

ಶ್ರೀ ಶುಕ ಉವಾಚ—

> **ಇತಿ ತೇಷಾಂ ಮಹಾರಾಜ ಸುರಾಣಾಮುಪತಿಷ್ಠತಾಮ್**
> **ಪ್ರತೀಚ್ಯಾಂ ದಿಶ್ಯಭೂದಾವಿಃ ಶಂಖಚಕ್ರಗದಾಧರಃ || ೨೭ ||**

ಸ್ತೋತ್ರದಿಂದಾದ ಫಲವನ್ನು ಹೇಳುತ್ತಾರೆ. ಪರೀಕ್ಷಿದ್ರಾಜನೇ, ಇತಿ= ಮೇಲೆ ಹೇಳಿದಂತೆ ಉಪತಿಷ್ಠತಾಂ-ಸ್ತೋತ್ರಮಾಡುತ್ತಿದ್ದ ತೇಷಾಂ ಸುರಾಣಾಂ= ಆ ದೇವತೆಗಳಿಗೆ ಪ್ರತೀಚ್ಯಾಂ ದಿಶಿ=ಮೊದಲು ಹೃದಯ ಕಮಲದಲ್ಲಿಯೂ ಅನಂತರ ಹೊರಗೆ ಎದುರಿನಲ್ಲಿಯೂ ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿದ ಶ್ರೀಹರಿಯು ಆವಿಃ ಅಭೂತ್=ವ್ಯಕ್ತನಾದನು. || ೨೭ ||

> **ಆತ್ಮತುಲ್ಯೈಃ ಷೋಡಶಭಿರ್ವಿನಾ ಶ್ರೀವತ್ಸಕೌಸ್ತುಭೌ**
> **ಪರ್ಯುಪಾಸಿತಮುನ್ನಿದ್ರಶರದಂಬುರುಹೇಕ್ಷಣಮ್ || ೨೮ ||**
>
> **ದೃಷ್ಟ್ವಾ ತಮವನೌ ಸರ್ವೇ ಈಕ್ಷಣಾಹ್ಲಾದವಿಕ್ಲವಾಃ**
> **ದಂಡವತ್ಪತಿತಾ ಭೂಮೌ ಶನೈರುತ್ಥಾಯ ತುಷ್ಟುವುಃ || ೨೯ ||**

ಪರೀಕ್ಷಿದ್ರಾಜನೇ, ಹೀಗೆ ಸ್ತೋತ್ರಮಾಡಿದ ದೇವತೆಗಳ ಹೃದಯಕಮಲ ದಲ್ಲಿಯೂ ಅನಂತರ ಹೊರಗೂ ಶಂಖ ಚಕ್ರ ಗದಾಧಾರಿಯಾದ ಶ್ರೀಹರಿಯು ಆವಿರ್ಭೂತನಾದನು.

ಪ್ರಕೃತಿ ಪುರುಷ ನಿರ್ಮಿತವಲ್ಲದ ಶರೀರಗಳಿಂದ ಮೂಲ ರೂಪಕ್ಕೆ ಸರಿ ಸಮಾನಗಳಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ ಮತ್ತು ದಾಮೋದರ ರೂಪಗಳಿಂದ ಪರಿವೃತ ವಾದ ನಾರಾಯಣ ರೂಪದಿಂದ ಕ್ರೀಡಿಸುವ, ಅರಳಿದ ಶರತ್ಕಾಲದ ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳ, ಮೊದಲು ತಮ್ಮ ಹೃತ್ಕಮಲದಲ್ಲಿಯೂ ಅನಂತರ

ಪ್ರತ್ಯಕ್ಷನಾದ ಶ್ರೀಹರಿಯನ್ನು ಕಂಡು ದೇವತೆಗಳು ಏನು ಮಾಡಿದರೆಂದರೆ ಹೇಳುತ್ತಾರೆ. ಶ್ರೀವತ್ಸಕೌಸ್ತುಭೌ ವಿನಾ = ಶ್ರೀವತ್ಸವಾದ ಲಕ್ಷ್ಮೀದೇವಿಯಿಂದ ಅಭಿಮನ್ಯಮಾನವಾದ ಪ್ರಕೃತಿ ಮತ್ತು ಕೌಸ್ತುಭವಾದ ಬ್ರಹ್ಮದೇವರಿಂದ ಅಭಿಮನ್ಯಮಾನವಾದ ಜೀವ-ಇವುಗಳಿಲ್ಲದ ಅಂದರೆ ಪ್ರಕೃತಿ ಪುರುಷಾತೀತವಾಗಿ ಅರ್ಥಾತ್ ಪ್ರಕೃತಿ ಪುರುಷ ನಿರ್ಮಿತವಲ್ಲದ ಶರೀರಗಳಿಂದ ಆತ್ಮತುಲ್ಯೈಃ=ತನ್ನ ಸ್ವರೂಪಗಳಾದ ಆದ್ದರಿಂದಲೇ ಮೂಲಭೂತನಾದ ಶ್ರೀಹರಿಗೆ ಸಮಾನಗಳಾದ ಅಂದರೆ ಸಾಮರ್ಥ್ಯಾದಿ ಗುಣಗಳಿಂದ ಮೂಲರೂಪಕ್ಕಿಂತ ಸ್ವಲ್ಪವೂ ಕಡಿಮೆಯಿಲ್ಲದ ಷೋಡಶಭಿಃ=ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧನೆಂಬ ನಾಲ್ಕು ಮತ್ತು ಕೇಶವ ಮೊದಲುಗೊಂಡು ದಾಮೋದರ ಪರ್ಯಂತ ಹನ್ನೆರಡು ಹೀಗೆ ಒಟ್ಟು ಹದಿನಾರು ರೂಪಗಳಿಂದ ಪರ್ಯುಪಾಸಿತಂ=ಮಧ್ಯದಲ್ಲಿ ನಾರಾಯಣ ರೂಪ ಸುತ್ತಲೂ ಈ ಹದಿನಾರು ರೂಪ ಹೀಗೆ ಕ್ರೀಡಿಸುವ, ಉನ್ನಿದ್ರ=ಅರಳಿರುವ ಶರದಂಬುರುಹೇಕ್ಷಣಂ = ಶರತ್ಕಾಲದ ಕಮಲದಂತೆ ಅಗಲವಾದ ಕಣ್ಣುಗಳುಳ್ಳ ತಂ=ತಮ್ಮ ತಮ್ಮ ಹೃದಯಕಮಲಗಳಲ್ಲಿಯೂ ನಂತರ ಹೊರಗೂ ವ್ಯಕ್ತನಾಗಿ ಕಾಣಿಸಿಕೊಂಡ ಶ್ರೀಹರಿಯನ್ನು ದೃಷ್ಟ್ವಾ=ನೋಡಿ ಸರ್ವೇ ಅಮರಾಃ=ಎಲ್ಲ ದೇವತೆಗಳೂ ಈಕ್ಷಣಾಹ್ಲಾದವಿಕ್ಲವಾಃ (ಸಂತಃ)=ನೋಟದಿಂದುಂಟಾದ ಆನಂದ ದಿಂದ ಕ್ಷುಬ್ಧರಾಗಿ ಭೂವೌ=ಭೂಮಿಯಲ್ಲಿ ದಂಡವತ್=ಕಟ್ಟಿಗೆಯಂತೆ ಉದ್ದಕ್ಕೆ ಪತಿತಾಃ=ಸಾಷ್ಟಾಂಗ ನಮಸ್ಕಾರ ಮಾಡುವವರಾಗಿ (ಅಭೂವನ್)=ಆದರು. ಶನೈಃ =ಮೆಲ್ಲಗೆ ಉತ್ಥಾಯ=ಎದ್ದು ತುಷ್ಟುವುಃ=ಸ್ತೋತ್ರ ಮಾಡಿದರು.

ಈ ವರ್ಣನೆಯಿಂದ ನೋಡಿದಾಗ ಶ್ರೀ ಹರಿಯು ಯಾವ ರೀತಿಯಲ್ಲಿದ್ದನು? ಎಂಬ ಶಂಕೆಗೆ ಉತ್ತರ ಕೊಟ್ಟಂತಾಯಿತು. ಸ್ವರೂಪ ಭೂತಗಳೂ ಸಮಾನಗಳೂ ಎಂದು ಹೇಳಿದ್ದರಿಂದ ಮೂಲ ರೂಪಕ್ಕೂ ಅವತಾರ ರೂಪಗಳಿಗೂ ಯಾವ ವ್ಯತ್ಯಾಸವೂ ಇಲ್ಲವೆಂದಾಯಿತು. ವಿನಾ ಶ್ರೀವತ್ಸಕೌಸ್ತುಭೌ ಎಂಬುದರಿಂದ ಮೂಲ ರೂಪದಷ್ಟೇ ಅವತಾರ ರೂಪಗಳೂ ಅಪ್ರಾಕೃತಗಳೆಂದಾಯಿತು. ಇದರಿಂದ ಅವತಾರ ರೂಪಗಳು ಶುಕ್ರ ಶೋಣಿತ ಸಂಪರ್ಕದಿಂದ ಹುಟ್ಟಿದವುಗಳಾದ್ದರಿಂದ ಮೂಲರೂಪಕ್ಕೆ ಆತ್ಮ ತುಲ್ಯಗಳು ಹೇಗೆ? ಎಂಬ ಪ್ರಶ್ನೆಗೆ ಉತ್ತರವಿತ್ತಿರುವರು. ಇವೂ ಅಪ್ರಾಕೃತಗಳೇ ಎಂದು ಹೇಳಿದ್ದರಿಂದ ಈ ಹದಿನೇಳು ರೂಪಗಳಲ್ಲಿಯೂ ಗುಣ ಕ್ರಿಯಾದಿಗಳಲ್ಲಿ ಯಾವ ಬಗೆಯ ವಿಶೇಷವೂ ಇಲ್ಲವೆಂದಾಯಿತು. ಮೇಲೆ ಹೇಳಿದಂತೆ ಅರ್ಥ ಮಾಡದೆ 'ಶ್ರೀ ವತ್ಸ ಕೌಸ್ತುಭಗಳಿಲ್ಲದ ಆದರೆ ತನಗೆ ಸಮಾನ

ಹೊರಗೂ ವ್ಯಕ್ತನಾದ ಶ್ರೀ ಹರಿಯನ್ನು ನೋಡಿ ಎಲ್ಲ ದೇವತೆಗಳೂ ಆನಂದದಿಂದ ಕ್ಷುಬ್ಧರಾಗಿ ಭೂಮಿಯಲ್ಲಿ ದೀರ್ಘದಂಡ ನಮಸ್ಕಾರ ಮಾಡಿ ಮೆಲ್ಲನೆ ಮೇಲಕ್ಕೆದ್ದು ಸ್ತೋತ್ರ ಮಾಡಿದರು.

ರೂಪವುಳ್ಳ ಹದಿನಾರು ಮುಖ್ಯ ಪರಿವಾರ (ದ್ವಾರಪಾಲಕರು) ದವರಿಂದ ಸೇವಿತವಾದ' ಎಂದು ಮೇಲೆ ತೋರುವ ಅರ್ಥವನ್ನು ಹೇಳಬಾರದು. ಹಾಗೆ ಹೇಳಿದಲ್ಲಿ 'ಶ್ರೀವತ್ಸಃ ಪ್ರಕೃತಿರ್ಜ್ಞೇಯಾ ಬ್ರಹ್ಮಾಖ್ಯಃ ಕೌಸ್ತುಭಃ ಪುಮಾನ್ | ತದತೀತೈಃ ಷೋಡಶಭಿಃ ಸ್ವರೂಪೈರಪ್ಯುಪಾಸಿತಮ್ ||' ಎಂಬ ಪ್ರಮಾಣ ವಿರೋಧವು ಬರುವುದು. ಪರಿವಾರದವರು ಪ್ರಕೃತಿವಂತರು ಅಂದರೆ ಪ್ರಕೃತಿಗೆ ಅಧೀನರಾದ್ದರಿಂದ ಆತ್ಮತುಲ್ಯರಲ್ಲ. ಬೇರೆ ರೀತಿಯಲ್ಲಿ ಸಮಾನತೆಯು ಪ್ರಮಾಣ ಪ್ರಮಿತವಲ್ಲ. ಆದ್ದರಿಂದ ಪ್ರಕೃತಿ ಪುರುಷಾನಧೀನರಾಗಿ ಪರಸ್ಪರ ಸಾಮ್ಯವುಳ್ಳ ರೂಪಗಳೆಂದರೆ ಶ್ರೀ ಹರಿಯ ವಾಸುದೇವಾದಿ ರೂಪಗಳೇ. 'ಅಪುಂ ಪ್ರಕೃತ್ಯಧೀನತ್ವಾತ್ ವಾಸುದೇವಾದಿಕಾ ಹರೇಃ | ತುಲ್ಯಾಶ್ಚ ಕೇಶವಾದ್ಯಾಶ್ಚ ನ ಚ ಭಿನ್ನಾಃ ಕಥಂಚನ ||' ಎಂಬ ಪ್ರಮಾಣ ಇದನ್ನು ಸ್ಪಷ್ಟಪಡಿಸುವುದು. ಇದರಿಂದ ಮೂಲ ರೂಪಕ್ಕೂ ಅವತಾರ ರೂಪಗಳಿಗೂ ಭೇದವಿಲ್ಲವೆಂದು ಹೇಳಿದೆಯೆಂದು ತಿಳಿಯಬೇಕು. ಈ ಪ್ರಕೃತಿ ಪುರುಷ ರಹಿತತೆ ಶ್ರೀ ಹರಿಯಲ್ಲಿ ಯಾವಾಗಲೋ ಒಂದೊಂದು ಸಲ ಇರುವುದಲ್ಲ. ಯಾವಾಗಲೂ ಇರತಕ್ಕದ್ದೇ. 'ಶ್ರೀವತ್ಸಕೌಸ್ತುಭಾಭ್ಯಾಂ ತು ವಿನಾಭಾವಂ ಪ್ರದರ್ಶಯೇತ್ | ಪುಂ ಪ್ರಕೃತ್ಯಾತ್ಮಕಾಭ್ಯಾಂ ಸ ಧತ್ತೇ ನಿತ್ಯಂ ಜನಾರ್ದನಃ ||' ಪ್ರಕೃತಿ ಪುರುಷರಹಿತತೆ ಎಂದರೆ ಪ್ರಕೃತಿ ಪುರುಷಾತೀತತ್ವ ಮತ್ತು ಪ್ರಕೃತಿ ಪುರುಷಾನಧೀನತ್ವ. 'ಯದಸ್ಯಾಭ್ಯಾಂ ಅತೀತತ್ವಂ ಯದ್ವಶೋ ನಾನಯೋಃ ಹರಿಃ | ಶ್ರೀವತ್ಸಕೌಸ್ತುಭಾಭ್ಯಾಂ ತು ವಿನಾಭಾವಃ ಸ ಏವ ತು ||' ಹಾಗಾದರೆ ತನ್ನ ರೂಪಗಳಿಂದ ತಾನೇ ಉಪಾಸಿತನಾಗುವುದು ಹೇಗೆ? ಎಂದರೆ ಇಲ್ಲಿ ಉಪಾಸನೆಯೆಂದರೆ ಶ್ರೀ ಹರಿಯು ಭಕ್ತರ ಮೇಲಿನ ಕರುಣೆಯಿಂದ ಕ್ರೀಡಿಸುವುದೇ ಹೊರತು ಬೇರೆಯಲ್ಲ. ಇದಕ್ಕೆ ಪ್ರಮಾಣ 'ಆತ್ಮೈವ ಸಪ್ತ ದಶಧಾ ಸ್ವಯಂ ಭೂತ್ವಾ ಜನಾರ್ದನಃ | ಮಧ್ಯಸ್ಥಾವೃತ್ತಿರೂಪೇಣ ಕ್ರೀಡತೇ ಪುರುಷೋತ್ತಮಃ ||' ಈ ಪ್ರಮಾಣಗಳಿಂದ ಮೇಲೆ ಹೇಳಿದ ಅರ್ಥವೇ ಪ್ರಮಾಣಿಕವೆಂದು ತಿಳಿಯಬೇಕು. ಇದೇ ಅರ್ಥವನ್ನು ಕೊಡುವ ಮತ್ತೊಂದು ಕಡೆ ಶಾಸ್ತ್ರದಲ್ಲಿ ಹೇಳಿರುವ ಸಮಾಖ್ಯೆಯಿಂದಲೂ ಇದೇ ಅರ್ಥವೆಂದು ಖಚಿತವಾಗುವುದು. 'ಸಂವೀತಃ ಚತುರಾತ್ಮಭಿಃಸ್ವಸದೃಶೈಃ ಶ್ರೀಕೇಶವಾದ್ಯೈರತಃ ಚಕ್ರಾದ್ಯೈರಿತರೈರಧೀಶ್ವರಮುಖ್ಯೈಃ ವಜ್ರಾದಿಭಿ ಸ್ತತ್ಪರಮ್ | ಸಂಸೇವ್ಯಂ ಸ್ವಯಮಂತರಾಂಬುಜಮಹಾಪೀಠೇ ವಿರಾಜನ್ ಹರಿಃ ಭೂತ್ಯೈ ಶ್ರೀ ಪುರುಷೋತ್ತಮೋ ಭವತು ವಃ ಶ್ರೀ ವಲ್ಲಭಃ ಸಂತತಮ್ ||' ಹಿಂದೆ ಮಾಡಿದ ಸ್ತೋತ್ರ ಶ್ರೀ ಹರಿಯು ಪ್ರತ್ಯಕ್ಷಕ್ಕಾಗಿ, ಈಗ ಮಾಡುವುದು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಎಂದು ವಿಶೇಷವನ್ನು ತಿಳಿಯಬೇಕು. || ೨೮, ೨೯ ||

ದೇವಾ ಊಚುಃ—

ನಮಸ್ತೇ ಯಜ್ಞವೀರ್ಯಾಯ ವಯಸೇ ಉತ ತೇ ನಮಃ
ನಮಸ್ತೇ ಅಸ್ತು ಚಕ್ರಾಯ ನಮೋಽಸ್ತು ಪುರುಹೂತಯೇ || ೩೦ ||

'ಯಜ್ಞವನ್ನು ಸೃಷ್ಟಿಸಿ ಅದರಿಂದ ವ್ಯಕ್ತನಾಗಿ ಅದನ್ನು ವೀರ್ಯಯುಕ್ತ

ಯಜ್ಞವೀರ್ಯಾಯ=(೧) ಯಜ್ಞವನ್ನು ಸೃಷ್ಟಿಸಿದ (೨) ಯಜ್ಞದಿಂದ ಅಭಿವ್ಯಕ್ತನಾಗುವ (೩) ಯಜ್ಞವನ್ನು ವೀರ್ಯವತ್ತರವಾಗಿ ಮಾಡುವ ಅಥವಾ ಹೇ ಯಜ್ಞ=ಯಜ್ಞನಾಮಕ ವಿಷ್ಣುವೇ ವೀರ್ಯಾಯ=ವೀರರಲ್ಲಿ ಇದ್ದು ವೀರತ್ವವನ್ನು ಕೊಡುವ ತೇ ನಮಃ=ನಿನಗೆ ನಮಸ್ಕಾರವು. ಉತ=ಮತ್ತು ವಯಸೇ=ಜಗತ್ತನ್ನು ಬಂಧಿಸುವ (ಜೀವರನ್ನು ಬದ್ಧರನ್ನಾಗಿ ಮಾಡುವ) ನಿನಗೆ ನಮಸ್ಕಾರ. ಚಕ್ರಾಯ=(೧) ಮತ್ತೆ ಮತ್ತೆ ಸೃಷ್ಟ್ಯಾದಿಗಳನ್ನು ಮಾಡುವ (೨) ಎಲ್ಲವನ್ನೂ ಸಂಹರಿಸುವ (೩) ಸಮಸ್ತ ವಿಪತ್ತುಗಳನ್ನೂ ಪರಿಹರಿಸುವ ಸುದರ್ಶನ ಅವತಾರನಾದ (೪) ಚಕ್ರವಂತನಾದ ನಿನಗೆ ನಮಸ್ಕಾರವಾಗಲಿ. ಅತ್ರ ಚಕ್ರಾಯ ಎಂಬ ಪಾಠದಲ್ಲಿ ಚಕ್ರವನ್ನು ಹಿಡಿದಿರುವ ಎಂದರ್ಥ. ಪುರುಹೂತಯೇ=(೧) ಅನೇಕ ನಾಮಗಳುಳ್ಳ (೨) ಇಂದ್ರಾಯಾ ಹಿ ಚಿತ್ರಭಾನೋ ಮುಂತಾದ ಬಹು ವೇದಗಳಿಂದ ಆಹ್ವಾನವುಳ್ಳ (೩) ಶುದ್ಧವಾದ ಊತಿ (ಪರಾಕ್ರಮ) ಉಳ್ಳ ನಿನಗೆ ನಮಸ್ಕಾರವಾಗಲಿ. ವಯಸೇ ಎಂಬಲ್ಲಿ ಬಂಧಕ ಶಕ್ತಿಯಿಂದ ಜೀವರನ್ನು ಸಂಸಾರದಲ್ಲಿ ಬಂಧನ ಮಾಡುವವನು ಎಂದರ್ಥ. ವಯ ಎಂಬ ಧಾತುವು ಬಂಧನಾರ್ಥಕವಾಗಿದೆ. 'ವಯಃ ಸರ್ವಸ್ಯ ವಯನಾದ್ಭಗವಾ ಪುರುಷೋತ್ತಮಃ' ಎಂಬ ಪ್ರಮಾಣವು ಈ ಅರ್ಥವನ್ನೇ ಹೇಳುವುದು. 'ಮಾ ತಂತುಶ್ಛೇದಿ ವಯತೋ ಧಿಯಂ ಮೇ ಮಾತ್ರಾ ಶಾರ್ಯಯಸಃ ಪುರಾ ಕ್ರತೋಃ||' ಎಂಬ ಶುತ್ರಿಯಲ್ಲಿಯೂ ವಯ ಪದವು ಬಂಧನಾರ್ಥಕವಾಗಿರುವುದನ್ನು ಕಾಣಬಹುದು. ಧಿಯಂ ವಯತಃ=ದೇವರಲ್ಲಿ ಬುದ್ಧಿಯನ್ನು ಬಂಧಿಸುವ ಮೇ=ನನ್ನ ತಂತುಃ=ಸಂತತಿಯು ಮಾ ಛೇದಿ=ಕಡಿದು ಹೋಗದಿರಲಿ. ಕ್ರತೋಃ ಪುರಾ=ಜ್ಞಾನವು ಹುಟ್ಟುವುದಕ್ಕೆ ಮೊದಲು ಅಯಸಃ=ಕರ್ಮದ ಮಾತ್ರಾ=ಪರಿಮಾಣವು ಮಾ ಶಾರಿ=ನಷ್ಟವಾಗದಿರಲಿ. ಬೇರೆ ಫಲದಾನದಿಂದ ಹೋಗದಿರಲಿ. ಜ್ಞಾನವನ್ನು ಹುಟ್ಟಿಸದೆ ಹೋಗದಿರಲಿ ಎಂದರ್ಥ. 'ಕರ್ಮಣಾ ಜ್ಞಾನಮಾಪ್ನೋತಿ' ಎಂಬಂತೆ ಕರ್ಮಕ್ಕೆ ಜ್ಞಾನೋತ್ಪತ್ತಿಯೇ ಫಲವು. ಹೀಗೆ ವಯಃ ಪದಕ್ಕೆ ಬಂಧಾರ್ಥವನ್ನು ಬಿಟ್ಟು ಹಕ್ಕಿ ಎಂಬ ಅರ್ಥವನ್ನು ಹೇಳಬಾರದು. ಅದು ಪ್ರಕೃತಕ್ಕೆ ಉಪಯುಕ್ತವಲ್ಲ. ವಯಸೇ ಉತ ಎಂಬಲ್ಲಿ ಸಂಧಿ ಮಾಡಿರುವುದರಿಂದ ತಾನು ಮಾಡಿದ ಬಂಧನವನ್ನು ತಾನೇ ಪರಿಹರಿಸಲು ಶಕ್ತನು, ಮತ್ತೊಬ್ಬನಲ್ಲವೆಂಬ ಪ್ರಮೇಯವನ್ನು ಸೂಚಿಸಿರುವರು. ತೇ ಅಸ್ತು ಎಂಬಲ್ಲಿಯೂ ಪೂರ್ವರೂಪ ಸಂಧಿ ಮಾಡದಿರುವುದರಿಂದ ಮತ್ತೊಬ್ಬರು ಮಾಡಲಾಗದುದನ್ನು ಮಾಡುವ ಶಕ್ತಿಯುಳ್ಳವನು ಶ್ರೀಹರಿ

ವನ್ನಾಗಿಸುವ ನಿನಗೆ ನಮಸ್ಕಾರ. ಜೀವರನ್ನು ಬದ್ಧರನ್ನು ಮಾಡುವ ನಿನಗೆ ನಮಸ್ಕಾರ. ಮತ್ತೆ ಮತ್ತೆ ಸೃಷ್ಟಿಸುವ, ಸಂಹರಿಸುವ ಎಲ್ಲ ವಿಪತ್ತುಗಳನ್ನೂ ಪರಿಹರಿಸುವ ಸುದರ್ಶನಾವತಾರನಾದ ನಿನಗೆ ನಮಸ್ಕಾರ. ಚಕ್ರಧರನಾದ ನಿನಗೆ ನಮಸ್ಕಾರ. ಅನೇಕ ನಾಮಗಳುಳ್ಳ, ಇಂದ್ರಾದಿ ನಾಮಗಳಿಂದ ವೇದಗಳಿಂದ ಆಹೂತನಾದ

ಯೆಂದು ಸೂಚಿಸಿರುವರು. 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯಂತೆ ಶ್ರೀ ಹರಿಯು ಸರ್ವನಾಮವುಳ್ಳವನು. ಹೀಗೆ ಸ್ತೋತ್ರವನ್ನು ಹೇಳಿದ್ದರಿಂದ ದೇವತೆಗಳು ಮಾಡಿದ ಸ್ತೋತ್ರದ ಆನುಪೂರ್ವಿಯನ್ನು ಹೇಳಿರುವರು. || ೩೦ ||

ಯತ್ತೇ ಗತೀನಾಂ ತಿಸೃಣಾಮೀಶಿತುಃ ಪರಮಂ ಪದಮ್ ।
ನಾರ್ವಾಚೀನೋ ವಿಸರ್ಗಸ್ಯ ಧಾತುರ್ವೇದಿತುಮರ್ಹತಿ || ೩೧ ||

ಈಶಿತುಃ=ಸರ್ವನಿಯಾಮಕನಾದ ತೇ=ನಿನ್ನ ಯತ್=ಯಾವ ತಿಸೃಣಾಂ=ದೇವಲೋಕ, ಪಿತೃಲೋಕ ಮತ್ತು ನರಕಗಳೆಂಬ ಗತೀನಾಂ (ಸಕಾಶಾತ್)=ಕರ್ಮಫಲಗಳಾದ ಸ್ಥಾನಗಳಿಗಿಂತ ಪರಮಂ=ಉತ್ಕೃಷ್ಟಗಳಾದ ಪದಂ=ವೈಷ್ಣವ ಸ್ಥಾನಗಳಾದ ವೈಕುಂಠಾದಿ ಲೋಕಗಳೋ (ತತ್)=ಅವುಗಳನ್ನು ಧಾತುಃ=ಬ್ರಹ್ಮದೇವರ ವಿಸರ್ಗಸ್ಯ=ವಿವಿಧ ಸೃಷ್ಟಿಯಲ್ಲಿ ಅರ್ವಾಚೀನಃ=ಅನಂತರ ಕಾಲದವನು ಅಂದರೆ ಈಗಿನವನು (ಮನುಷ್ಯನು) ಅರ್ಥಾತ್ ಜ್ಞಾನಿಯಲ್ಲದವನು ವೇದಿತುಂ=ಹೊಂದಲು ನ ಅರ್ಹತಿ=ಅರ್ಹನಾಗುವುದಿಲ್ಲ. ಜ್ಞಾನಿಯಾದವನೇ ಹೊಂದಲು ಯೋಗ್ಯನು. 'ದೇವಲೋಕಾತ್ ಪಿತೃಲೋಕಾತ್ ನಿರಯಾಚ್ಚಾಪಿ ಯತ್ಪರಮ್ । ತಿಸೃಭ್ಯಃ ಪರಮಂ ಸ್ಥಾನಂ ವೈಷ್ಣವಂ ವಿದುಷಾಂ ಗತಿಃ' ಎಂಬ ಪ್ರಮಾಣವು ಇದೇ ಅರ್ಥವನ್ನು ಹೇಳುವುದು. ವೇದಿತುಂ ಎಂಬುದು ವಿದ್ (ಲಾಭೇ) ಧಾತುವಿನ, ಪದಂ ಎಂಬುದು ಪದ (ಗತೌ) ಎಂಬ ಧಾತುವಿನ ನಿಷ್ಪನ್ನ ರೂಪಗಳು. ಇದರಿಂದ ವೈಷ್ಣವ ಪದವನ್ನು ಹೊಂದಬೇಕಾದರೆ ಜ್ಞಾನವೇ ಮುಖ್ಯ ಪ್ರಯೋಜಕವೇ ಹೊರತು ಕರ್ಮಾದಿಗಳಲ್ಲವೆಂದು ಸೂಚಿಸಿದಂತಾಯಿತು. || ೩೧ ||

ಗ|| ಓಂ ನಮಸ್ತೇಽಸ್ತು ಭಗವನ್ನಾರಾಯಣ, ವಾಸುದೇವಾದಿ ಪುರುಷ, ಮಹಾಪುರುಷ, ಮಹಾನುಭಾವ, ಪರಮ ಮಂಗಲ, ಪರಮ ಕಲ್ಯಾಣ, ಪರಮ ಕಾರುಣಿಕ, ಪರಮಹಂಸ ಪರಿವ್ರಾಜಕೈಃ ಪರಮೇಣಾತ್ಮಯೋಗಸಮಾಧಿನಾ ಪರಿಭಾವಿತ, ಪರಿಸ್ಫುಟಿತ ಪಾರಮಹಂಸ್ಯಧರ್ಮೇಣೋದ್ಘಾಟಿತತಮಃಕಪಾಟದ್ವಾರೇಣಾಪಾವೃತೇ ಆತ್ಮಲೋಕೇ ಸ್ವಯಮುಪಲಬ್ಧೋ ನಿಜಸುಖಾನುಭವೋ ಭವಾನ್ ದುರವ-

---

ನಿನಗೆ ನಮಃ. ಸರ್ವನಿಯಾಮಕನಾದ ನಿನ್ನ ಸ್ಥಾನಗಳಾದ ವೈಕುಂಠ, ಶ್ವೇತದ್ವೀಪ ಅನಂತಾಸನಗಳು ದೇವಲೋಕ-ಪಿತೃಲೋಕ-ನರಕಗಳೆಂಬ ಕರ್ಮಫಲಗಳಾದ ಲೋಕಗಳಿಂದ ಉತ್ಕೃಷ್ಟವಾದುವು. ಅವುಗಳನ್ನು ಬ್ರಹ್ಮಸೃಷ್ಟಿಯಲ್ಲಿ ಈಚಿನವನಾದ ಅಜ್ಞಾನಿ ಮನುಷ್ಯನು ಹೊಂದಲು ಅರ್ಹನಲ್ಲ. ಜ್ಞಾನಿಯೇ ಹೊಂದಲು ಯೋಗ್ಯನು. ಷಡ್ಗುಣ ಪೂರ್ಣನೂ, ವ್ಯಾಪ್ತಿ ಮೊದಲಾದ ಗುಣವಂತನೂ, ಜಗತ್ತಿನ ಆದಿಯಾಗಿ, ದೇಹಗತನೂ, ಪುರುಷೋತ್ತಮನೂ, ಸರ್ವಾತಿಶಯ ಸಮರ್ಥನೂ, ಅತ್ಯಂತ

ಬೋಧ ಇವ ತವ ವಿಹಾರಯೋಗೋ ಯದಶರಣೋಽಶರೀರ ಇದಮನಪೇಕ್ಷಿತಾಸ್ಮತ್ಸಮವಾಯಃ ಸ ಆತ್ಮನೈವಾವಿಕ್ರಿಯಮಾಣೇನ ಸಗುಣಮಗುಣಃ ಸೃಜಸಿ ಪಾಸಿ ಹಂಸಿ ॥ ೩೨ ॥

ಶ್ರೀಹರಿಯು ಪ್ರಸನ್ನನಾಗುವಲ್ಲಿ ಅವನ ಗುಣಗಳ ಉತ್ಕರ್ಷವನ್ನು ತಿಳಿಸುವ ಸ್ತೋತ್ರವೇ ಪ್ರಯೋಜಕವು. ಪದ್ಯಗಳಲ್ಲಿ ಮಾಡುವ ಸ್ತೋತ್ರವು ಪದ್ಯಗಳು ಪದ ನಿಯಮದಿಂದ ಕೂಡಿದವುಗಳಾದ್ದರಿಂದ ಕೆಲವು ಗುಣಗಳನ್ನು ತಿಳಿಸುವುದೇ ಹೊರತು ಅಪೇಕ್ಷಿತ ಅನೇಕ ಗುಣಗಳನ್ನು ತಿಳಿಸಲಾರದು. ಆದ್ದರಿಂದ ತಾವು ಹೇಳ ಬೇಕೆಂದಿರುವ ಅನೇಕ ಗುಣಗಳ ಪ್ರಕಾಶನಕ್ಕಾಗಿ ಗದ್ಯದಿಂದ ಸ್ತೋತ್ರಮಾಡುತ್ತಾರೆ. ಭಗವನ್=ಷಡ್ಗುಣಪೂರ್ಣನೇ, ವಾಸುದೇವ=ವ್ಯಾಪ್ತಿ ಮೊದಲಾದ ಗುಣವುಳ್ಳವನೇ ಆದಿಪುರುಷ=ಎಲ್ಲ ಜಗತ್ತಿಗೂ ಆದಿಯಾಗಿದ್ದುಕೊಂಡು ದೇಹವೆಂಬ ಪುರದಲ್ಲಿ ಇರುವವನೇ, ಮಹಾಪುರುಷ=ಪುರುಷೋತ್ತಮನೇ, ಮಹಾನುಭಾವ=ಸರ್ವಾತಿ ಶಾಯಿ ಸಾಮರ್ಥ್ಯವುಳ್ಳವನೇ, ಪರಮಮಂಗಲ=ಅತ್ಯಂತ ಮಂಗಳಸ್ವರೂಪನೇ, ಪರಮ ಕಲ್ಯಾಣ=ಎಲ್ಲ ಶುಭಗಳನ್ನೂ ತಂದುಕೊಡುವವನೇ, ಪರಮಕಾರುಣಿಕ= ಸರ್ವಾತಿಶಾಯಿ ಕರುಣಾವಂತನೇ, ನಾರಾಯಣ ನಿನಗೆ ನಮಸ್ಕಾರವಾಗಲಿ. ಈ ಸ್ತೋತ್ರವು ಬ್ರಹ್ಮವಿದ್ಯೆಯಾದ್ದರಿಂದ ವೀರ್ಯವತ್ತರವಾಗುವುದಕ್ಕಾಗಿ ಪ್ರಾರಂಭದಲ್ಲಿ ಓಂಕಾರವನ್ನು ಹೇಳಿರುವರು. ಪರಮಹಂಸಪರಿವ್ರಾಜಕೈಃ=ಕುಟೀಚಕ— ಬಹೂದಕ—ಹಂಸ—ಪರಮಹಂಸ(ನಿಷ್ಕ್ರಿಯ)ರೆಂಬ ನಾಲ್ಕುಬಗೆಯ ಸನ್ಯಾಸಿ ಗಳಲ್ಲಿ ಅತ್ಯುತ್ತಮರಾದ ಪರಮಹಂಸರೆಂಬ ಸನ್ಯಾಸಿಗಳಿಂದ ಪರಮೇಣ=ಅತ್ಯುತ್ತಮ ವಾದ ಆತ್ಮಯೋಗಸಮಾಧಿನಾ=ಶ್ರೀ ಹರಿಯ ಧ್ಯಾನದಿಂದ ಉಂಟಾದ ಚಿತ್ತದ ಏಕಾಗ್ರತೆಯಿಂದ ಪರಿಭಾವಿತ=ಅಭಿವೃದ್ಧವೂ ಪರಿಸ್ಫುಟತ=ಪ್ರಕಾಶಿತವೂ ಆದ ಪಾರಮಹಂಸ್ಯಧರ್ಮೇಣ=ಪರಮಹಂಸ ಸನ್ಯಾಸಿಗಳ ಸಂಬಂಧಿಯಾದ ಜ್ಞಾನ

ಮಂಗಳ ಸ್ವರೂಪನೂ, ಸಮಸ್ತ ಶುಭದನೂ, ಮಹಾಕರುಣಾಶಾಲಿಯೂ ಆದ ನಾರಾಯಣನೇ, ನಿನಗೆ ನಮಸ್ಕಾರ. ಪರಮಹಂಸ ಸನ್ಯಾಸಿಗಳಿಂದ ಅತ್ಯುತ್ತಮ ಧ್ಯಾನದಿಂದುಂಟಾದ ಚಿತ್ತೈಕಾಗ್ರತೆಯಿಂದ ಅಭಿವೃದ್ಧವೂ ಪ್ರಕಾಶಿತವೂ ಆದ ಪರಮ ಹಂಸ ಸನ್ಯಾಸಿ ಜ್ಞಾನವೆಂಬ ಧರ್ಮದಿಂದ ಅಜ್ಞಾನದ ಬಾಗಿಲನ್ನು ತೆರೆದು ಪ್ರಕಾಶಿತ ಗಳಾದ ನಿನ್ನ ಲೋಕಗಳಲ್ಲಿ ಮತ್ತೆ ಯಾವ ಪ್ರಯತ್ನವೂ ಇಲ್ಲದೆ ಪ್ರಕಾಶಿತ(ಪ್ರತ್ಯಕ್ಷ) ನಾಗಿರುವ ನೀನು ಸ್ವರೂಪ ಸುಖಾನುಭವವಂತನು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಮೊದಲಾದವುಗಳಿಗೆ ಕಾರಣವಾದ ನಿನ್ನ ಕ್ರೀಡೆಯೆಂಬ ಉಪಾಯವು ನಿನ್ನ ಅನುಗ್ರಹವಿಲ್ಲದೆ ತಿಳಿಯಲಾಗದುದು. ಅಧಿಷ್ಠಾನವಿಲ್ಲದ, ಪ್ರಾಕೃತ ಶರೀರವಿಲ್ಲದ, ನಮ್ಮ ಸಹಾಯವನ್ನು ಅಪೇಕ್ಷಿಸದ ಪ್ರಾಕೃತ ಗುಣರಹಿತನಾದ ನೀನು ಪ್ರಾಕೃತಗುಣ ವಿಕಾರವಾದ ಈ ಜಗತ್ತನ್ನು ವಿಕಾರವಿಲ್ಲದ ಸ್ವಭಾವದಿಂದಲೇ ಸೃಷ್ಟಿಸುವೆ,

ವೆಂಬ ಧರ್ಮದಿಂದ ಉದ್ಘಾಟಿತ=ತೆರೆಯಲ್ಪಟ್ಟ ತಮಃಕಪಾಟದ್ವಾರೇಣ=ಅಜ್ಞಾನ ವೆಂಬ ಬಾಗಿಲ ದ್ವಾರವುಳ್ಳ (ಹೋಗಲಾಡಿಸಲ್ಪಟ್ಟ ಅಜ್ಞಾನದಿಂದ) ಅಪಾವೃತೇ= ಪ್ರಕಾಶಿತಗಳಾದ ಆತ್ಮಲೋಕೇ=ನಿನ್ನವೆಂದು ಪ್ರಸಿದ್ಧಗಳಾದ ವೈಕುಂಠ ಮೊದಲಾದ ಲೋಕಗಳಲ್ಲಿ ಸ್ವಯಂ=ಪ್ರಯತ್ನವಿಲ್ಲದೆ ಉಪಲಬ್ಧಃ=ಪ್ರತ್ಯಕ್ಷನಾಗಿರುವ ಭವಾನ್= ನೀನು ನಿಜಸುಖಾನುಭವಃ=ಸ್ವರೂಪಸುಖಾನುಭವವುಳ್ಳವನು. ತವ=ಈ ನಿನ್ನ ವಿಹಾರಯೋಗಃ=ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರ ಮೊದಲಾದವುಗಳಿಗೆ ಕಾರಣ ವಾದ ಕ್ರೀಡೆಯೆಂಬ ಉಪಾಯವು ದುರವಬೋಧಃ ಇವ=ತಿಳಿಯಲು ಅಸಾಧ್ಯವೋ ಎಂಬಂತೆ ಇದೆ. ನಿನ್ನ ಅನುಗ್ರಹವಿಲ್ಲದೆ ತಿಳಿಯಲಾಗುವುದಿಲ್ಲವೆಂದರ್ಥ. ಯತ್= ಏಕೆಂದರೆ, ಅಶರಣಃ=ಅಧಿಷ್ಠಾನವಿಲ್ಲದ, ಅಶರೀರಃ=ಜ್ಞಾನಸಾಧನವಾದ ಪ್ರಾಕೃತ ಶರೀರವಿಲ್ಲದ ಅನಪೇಕ್ಷಿತ ಅಸ್ಮತ್ಸಮವಾಯಃ=ಅಪ್ರಾಕೃತನಾದ್ದರಿಂದಲೇ ನಮ್ಮೆಲ್ಲರ ಸಹಾಯವನ್ನು ಅಪೇಕ್ಷಿಸದಿರುವ ಅಗುಣಃ = ಸತ್ತ್ವಾದಿ ಪ್ರಾಕೃತಗುಣರಹಿತನಾದ ಸಃ (ತ್ವಂ)=ಆ ನೀನು ಸಗುಣಂ=ಸತ್ತ್ವಾದಿಗುಣ ವಿಕಾರವಾದ, ಅದರ ಸಂಬಂಧವುಳ್ಳ ಇದಂ=ಜಡ ಮತ್ತು ಚೇತನಾತ್ಮಕ ಈ ಜಗತ್ತನ್ನು ಅವಿಕ್ರಿಯಮಾಣೇನ=ತನ್ನಿಂದಾ ಗಲಿ ಪರರಿಂದಾಗಲಿ ವಿಕಾರವಿಲ್ಲದ ಆತ್ಮನಾ ಏವ=ಸ್ವಭಾವದಿಂದಲೇ ಭೋಗ ಮೊದಲಾದ ಯಾವ ಪ್ರಯೋಜನವೂ ನಿನಗೆ ಇಲ್ಲದೆಯೇ ಸೃಜಸಿ=ಸೃಷ್ಟಿಸುವೆ ಪಾಸಿ=ಪಾಲಿಸುವೆ ಹಂಸಿ=ಸಂಹರಿಸುವೆ. ಆದ್ದರಿಂದ ಲೋಕವಿಲಕ್ಷಣಕರ್ತೃವಾದ್ದ ರಿಂದ ತಿಳಿಯಲು ದುಸ್ಸಾಧ್ಯವೆಂದರ್ಥ. ಭಗವದಾದಿ ಶಬ್ದಗಳಿಂದ ಗತಿಯನ್ನು ಆವಿಷ್ಕರಿಸಿರುವರೆಂದು ತಿಳಿಯಬೇಕು. ಅವಿಕ್ರಿಯವೆಂಬುದರಿಂದ ಉಪಾದಾನಕಾರಣ ವಲ್ಲವೆಂದಿರುವರು. ಆತ್ಮಯೋಗ=ಸಮಾಧಿಯಿಂದ ಪರಿಭಾವಿತ=ಧ್ಯಾತನಾದವನೇ ಎಂದು ಸಂಬೋಧನೆಯಾದರೂ ಆಗಬಹುದು. || ೩೨ ||

ಗ|| ಅಥ ತತ್ರ ಭಗವಾನ್ ಕಿಂ ದೇವದತ್ತವದಿಹ ಗುಣವಿಸರ್ಗ- ಪತಿತಃ ಪಾರತಂತ್ರ್ಯೇಣ ಸ್ವಕೃತಕುಶಲಾಕುಶಲಫಲಮುಪಾದದಾತಿ ? ||

ಪಾಲಿಸುವೆ, ಸಂಹರಿಸುವೆ. ಅಜ್ಞಾನಿಗಳು ನಿನ್ನನ್ನು 'ಪರಮಾತ್ಮನು ಸೃಷ್ಟ್ಯಾದಿ ಕಾರ್ಯಗಳಲ್ಲಿ ತೊಡಗಿದ್ದರಿಂದ ಗುಣಕಾರ್ಯವಾದ ಸಂಸಾರದಲ್ಲಿ ಸಿಲುಕಿದ ಜೀವ ನಂತೆ ಪರತಂತ್ರನಾಗಿ ತಾನು ಮಾಡಿದ ಶುಭಾಶುಭಗಳ ಫಲಗಳನ್ನು ಹೊಂದುವನೇ ? ಅಥವಾ ತನ್ನಲ್ಲಿಯೇ ಸಂತೋಷಿಸುವ, ಪೂರ್ಣಾನಂದಾನುಭವಿಯಾದ, ಶುದ್ಧ ಜ್ಞಾನವಂತನಾದ ಕಾರಣ (ಸ್ವತಂತ್ರನಾಗಿ) ಶುಭಾಶುಭ ಫಲಗಳನ್ನು ಹೊಂದದೆ ಇರುವನೇ ? ಎಂದು ಸಂಶಯಗ್ರಸ್ತರಾಗಿ ಸರಿಯಾದ ತತ್ತ್ವವನ್ನು ತಿಳಿಯಲಾರೆವು. ಇವೆರಡೂ ಬೇರೆಯವರಲ್ಲಿ ವಿರುದ್ಧವಾದರೂ ಭಗವಂತನ ವಿಷಯದಲ್ಲಿ ವಿರೋಧ ಗಳಲ್ಲ. ಪರಿಗಣಿಸಲಾಗದಷ್ಟು ಗುಣಸಮೂಹವಂತನೂ, ಅಘಟಿತಘಟಿಕ ಸರ್ವೋತ್ತಮ ನಿಯಾಮಕನೂ ಇಷ್ಟೇ ಎಂದು ಪರಿಚ್ಛೇದ ಮಾಡಿ ತಿಳಿಯಲಾಗದ

ಆಹೋಸ್ವಿದಾತ್ಮಾರಾಮ ಉಪಶಮಶೀಲಃ ಸಮಂಜಸದರ್ಶನ ಉದಾಸ್ತೆ? ಇತಿ ಹ ವಾವ ನ ವಿದಾಮಃ ॥ ನ ಹಿ ವಿರೋಧ ಉಭಯಂ ಭಗವತ್ಯಪರಿಗಣಿತಗುಣಗಣ ಈಶ್ವರೇ ಅನವಗಾಹ್ಯಮಾಹಾತ್ಮ್ಯೇ ಅರ್ವಾಚೀನ ವಿತರ್ಕ-ವಿಕಲ್ಪ-ವಿಚಾರ-ಪ್ರಮಾಣಾಭಾಸ-ಕುತರ್ಕಶಾಸ್ತ್ರ ಕಲಿಲಾಂತಃಕರಣದುರವಗ್ರಹವಾದಿನಾಂ ಚ ವಿವಾದಾನವಸರೇ ಉಪ-ರತಸಮಸ್ತಮಾಯಾಮಯೇ ಕೇವಲಸ್ವಾತ್ಮಮಾಯಾಮಂತರ್ಧಾಯ ಕೋ ನು ದುರ್ಘಟ ಇವ ಭವತಿ ಸ್ವರೂಪದ್ವಯಾಭಾವಾತ್ ॥ ಸಮವಿಷಮಮತೀನಾಂ ಮತಮನುಚರಸಿ । ಯಥಾ ರಜ್ಜುಖಂಡಃ ಸರ್ಪಾದಿಧಿಯಾಮ್ ॥ ಸ ಏವ ಪುನಃ ಸರ್ವವಸ್ತುಷು ವಸ್ತುಸ್ವರೂಪಃ ಸರ್ವೇಶ್ವರಃ ಸಕಲಜಗತ್ಕಾರಣಕಾರಣಭೂತಃ ಸರ್ವಪ್ರತ್ಯಗಾತ್ಮತ್ವಾ-ತ್ಸರ್ವಗುಣಾಭಾಸೋಪಲಕ್ಷಿತ ಏಕ ಏವ ಪರ್ಯವಶೇಷಿತಃ ॥

ಸೃಜಿಸಿ ಮೊದಲಾದವುಗಳಿಂದ ಹೇಳಿದ ಸೃಷ್ಟಿಕರ್ತೃತ್ವವು ಶ್ರೀಹರಿಗಿದ್ದಲ್ಲಿ ನಮ್ಮ ಹಾಗೆ ಅವನೂ ಪರತಂತ್ರನಾಗಿ ಶುಭಾಶುಭಗಳನ್ನು ಅನುಭವಿಸಬೇಕಾಗುವುದು ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಅಜ್ಞಾನಿಗಳ ಸಂಶಯರೂಪ ಪೂರ್ವಪಕ್ಷವನ್ನು ಮೊದಲು ಹೇಳಿ ಸಿದ್ಧಾಂತವನ್ನು ತಿಳಿಸುತ್ತಾ ಭಗವತ್ಸ್ವರೂಪವನ್ನು ನಿರ್ಧರಿಸುತ್ತಾರೆ. ಇಹ ಅಥ= ಇಲ್ಲಿ ಒಂದು ಪ್ರಶ್ನೆಯು. ಭಗವಾನ್= ಸೃಷ್ಟ್ಯಾದಿ ಕಾರ್ಯಗಳಲ್ಲಿ ತೊಡಗಿದ ಭಗವಂತನು ಅತ್ರ=ಇಲ್ಲಿ ಗುಣವಿಸರ್ಗಾಪತಿತಃ=ಗುಣಕಾರ್ಯವಾದ ಸಂಸಾರದಲ್ಲಿ ಸಿಲುಕಿರುವ ದೇವದತ್ತವತ್=ಜೀವನಂತೆ ಪಾರತಂತ್ರ್ಯೇಣ=ಪರವಶತೆಯಿಂದ ಸ್ವಕೃತ ಕುಶಲಾಕುಶಲಫಲಂ=ತಾನು ಮಾಡಿದ ಶುಭಾಶುಭ (ಪುಣ್ಯಪಾಪ) ಕರ್ಮಫಲವಾದ ಸುಖದುಃಖಗಳನ್ನು ಕಿಂ ಉಪಾದದಾತಿ=ಹೊಂದುವನೇ? ಆಹೋಸ್ವಿತ್=ಅಥವಾ ಆತ್ಮಾರಾಮಃ=ತನ್ನ ಮಹಿಮೆಯಲ್ಲಿ ಸಂತೋಷಿಸುವ ಉಪಶಮಶೀಲಃ=ಪೂರ್ಣಾನಂದವನ್ನು ಅನುಭವಿಸುವ ಸಮಂಜಸದರ್ಶನಃ=ಶುದ್ಧಜ್ಞಾನವುಳ್ಳ ಭಗವಂತನು ಕಿಂ ಉದಾಸ್ತೇ=ತಾನು ಮಾಡಿದ ಪುಣ್ಯಾಪುಣ್ಯ ಕರ್ಮಗಳ ಫಲವಾಗಿ ಸುಖದುಃಖಗಳನ್ನು ಹೊಂದದೆಯೇ ಇರುವನೇ? (ಈ ವಿಶೇಷಣಗಳಲ್ಲಿ ಒಂದೊಂದೂ ಸುಖದುಃಖವನ್ನು ಹೊಂದದಿರುವಲ್ಲಿ ಕಾರಣಗಳು) ಇತಿ= ಎಂದು ಸಂದೇಹ ಬರುವುದರಿಂದ ಹೀಗೇ ಎಂದು ನ ವಿದಾಮಃ ಹ=ತಿಳಿದಿಲ್ಲವು. ವಾವ=ಎಂದು ಅಜ್ಞಾನಿಗಳು ಹೇಳುವರೇ ಹೊರತು ಜ್ಞಾನಿಗಳಲ್ಲ (ಎಂದು ಸೂಚಿಸಿರುವರು). ಯಾವುದು ಇದ್ದರೆ ಏನು ಆಗುವುದು?

ಮಹಿಮೋಪೇತನೂ, ವ್ಯಾಪ್ತಿರಹಿತಗಳಾದ ವಿತರ್ಕ-ವಿಕಲ್ಪ-ವಿಚಾರ-ಪ್ರಮಾಣಾ-ಭಾಸ-ಕುತರ್ಕಗಳಿಂದ ತುಂಬಿದ ಕುಶಾಸ್ತ್ರಗಳಿಂದ ವ್ಯಾಕುಲಿತವಾದ ಮನಸ್ಸಿನಿಂದ ದುರಾಗ್ರಹಗ್ರಸ್ತರಾದ ಕುವಾದಿಗಳ ವಾದಗಳಿಗೆ ಅವಿಷಯನೂ, ತನ್ನ ಸಾಮರ್ಥ್ಯ

ಎಂದರೆ ಹೇಳುತ್ತಾರೆ. ಉಭಯಂ=ಶುಭಾಶುಭ ಫಲವನ್ನು ಹೊಂದುವುದು ಮತ್ತು ಹೊಂದದಿರುವುದು. ಇವೆರಡು ವಿರೋಧಃ=ಬೇರೆ ಕಡೆಯಲ್ಲಿ ವಿರುದ್ಧವಾಗಿದ್ದರೂ (ಅತ್ರ)=ಈ ಭಗವಂತನ ವಿಷಯದಲ್ಲಿ ನ ಹಿ ವಿರೋಧಃ=ವಿರುದ್ಧವಲ್ಲವು. ಹೇಗೆಂದರೆ, ಹೇಳುತ್ತಾರೆ—[ಭಗವತಿ=ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಹರಿಯಲ್ಲಿ) ಅಪರಿಗಣಿತಗುಣಗಣೇ=ಯಾರಿಂದಲೂ ಪರಿಗಣಿಸಲಾಗದಷ್ಟು ಗುಣ ಸಮೂಹಗಳುಳ್ಳ ಈಶ್ವರೇ=ಅಘಟಿತಘಟನತ್ವ ಶಕ್ತಿಯುಳ್ಳ ಸರ್ವೋತ್ತಮ ನಿಯಾಮಕನಾದ ಅನವಗಾಹ್ಯ ಮಾಹಾತ್ಮ್ಯೇ=ಇಷ್ಟೇ ಎಂದು ಪರಿಚ್ಛೇದಮಾಡಿ ತಿಳಿಯಲಾಗದ ಮಹಿಮೆಯುಳ್ಳ, ಅರ್ವಾಚೀನ=ವ್ಯಾಪ್ತಿಯಿಲ್ಲದ ವಿತರ್ಕ= ಈ ಭಗವಂತನು ಮೇಯ(ಜ್ಞಾನವಿಷಯ) ನಾದ್ದರಿಂದ ಘಟಾದಿಗಳಂತೆ ಸ್ವವೃತ್ತಿತ್ವ (ತನ್ನಲ್ಲಿರುವಿಕೆ) ಸ್ವೇತರವೃತ್ತಿತ್ವ (ತನಗಿಂತ ಭಿನ್ನವಾದ್ದರಲ್ಲಿ ಇರುವಿಕೆ) ಇವೆರಡೂ ಇಲ್ಲದ ಮತ್ತು ಪರಿಚ್ಛಿನ್ನವಾದ ಧರ್ಮದಿಂದ ಕೂಡಿರುವನು ಎಂಬೀ ಮೊದಲಾದ (ಭಗವಂತನಲ್ಲಿ ಪರಿಚ್ಛಿನ್ನ ಧರ್ಮವನ್ನು ಸಾಧಿಸುವ) ಮಹಾ ಅವಿದ್ಯಾರೂಪವಾದ ವಿರುದ್ಧ ತರ್ಕದಿಂದ (ಅನುಮಾನಾಭಾಸದಿಂದ) ವಿಕಲ್ಪ=ಸಾಮಾನ್ಯ ಜೀವನಂತೆ ಈ ಭಗವಂತನು ಕುಶಲಾಕುಶಲಭೋಕ್ತನೇ? ಅಲ್ಲವೇ? ಎಂಬ ಸಂದೇಹರೂಪವಾದ ವಿಕಲ್ಪದಿಂದ ವಿಚಾರ=ಈ ಶಾಸ್ತ್ರದಲ್ಲಿ ಕರ್ಮಕ್ಕೆ ಪುರುಷಾರ್ಥ ಹೇತುತ್ವವನ್ನು ಸಮರ್ಥನೆ ಮಾಡುತ್ತೇವೆ. ಆದ್ದರಿಂದ ಶಾಸ್ತ್ರ ಮೊದಲಾದ ಸಂಗತಿಯಿದೆ ಎಂಬೀ ರೀತಿಯ ಮೀಮಾಂಸೆಯಿಂದ ಪ್ರಮಾಣಾಭಾಸ=ನಾಸೀ ಪೊದೆಯಲ್ಲಿ ಹುಲಿಯನ್ನು ಕಂಡೆ ಎಂಬೀ ಮೊದಲಾಗಿರುವ ಪ್ರಮಾಣಗಳಂತೆ ಕಾಣುವ ವಾಕ್ಯಗಳಿಂದ ಕುತರ್ಕ=ಈಶ್ವರನು ದುಃಖಪ್ರಚುರವಾದ ದೇಹದಲ್ಲಿ ಇದ್ದದ್ದೇ ಆದರೆ ಜೀವನಂತೆ ದೇಹಗತವಾದ ದುಃಖವನ್ನೂ ಅನುಭವಿಸಬೇಕಾಗುವುದು ಎಂಬೀ ಬಗೆಯ ಕುತ್ಸಿತ ತರ್ಕದಿಂದ ತುಂಬಿದ ಶಾಸ್ತ್ರ=ವೈಶೇಷಿಕಾದಿ ಶಾಸ್ತ್ರಗಳಿಂದ ಕಲಿಲ=ವ್ಯಾಕುಲಿತವಾದ ಅಂತಃಕರಣ=ಮನಸ್ಸಿನಿಂದ ದುರವಗ್ರಹ=ದುರಾಗ್ರಹದಿಂದ ಕೂಡಿರುವ ವಾದಿನಾಂ=ಕುತ್ಸಿತ ರೀತಿಯಲ್ಲಿ ವಾದ ಮಾಡುವ ಜನರ ವಿವಾದಾನವಸರೇ ಚ= ವಿವಿಧ ವಾದಗಳಿಗೆ ವಿಷಯನಾಗದಿರುವ, ಕೇವಲ ಸ್ವಾತ್ಮಮಾಯಾಂ=ದ್ವಂದ್ವ (ಎರಡು) ಇಲ್ಲದ ತನ್ನ ಸಾಮರ್ಥ್ಯವನ್ನೇ ಅಂತರ್ಧಾಯ=ಆಶ್ರಯಿಸಿ ಉಪರತ-ಸಮಸ್ತಮಾಯಾಮಯೇ=ಸಮಸ್ತ ಪ್ರಾಕೃತಸ್ವಭಾವರಹಿತನಾದ ಭಗವತಿ= ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಹರಿಯಲ್ಲಿ ಕೋ ನು=ಯಾವುದು ತಾನೇ

ವನ್ನೇ ಆಶ್ರಯಿಸಿ ಸಮಸ್ತ ಪ್ರಾಕೃತಭಾವರಹಿತನೂ ಸಮಸ್ತ ಐಶ್ವರ್ಯಸಂಪನ್ನನೂ ಆದ ಶ್ರೀಹರಿಯಲ್ಲಿ ಎಲ್ಲವೂ ಸಂಭಾವಿತವೇ ಆದ್ದರಿಂದ ಸ್ವಾತಂತ್ರ್ಯ ಪಾರತಂತ್ರ್ಯಗಳೆರಡೂ ಅವನಲ್ಲಿ ಒಪ್ಪಬಹುದಾಗಿವೆ ಎಂದು ಹೇಳುವರು. ಶ್ರುತಿಯು ಸುಖಿಯೆಂದೇ ನಿನ್ನನ್ನು ಹೇಳುವುದಾದ್ದರಿಂದ ನಿನಗೆ ಸುಖೀ ದುಃಖೀಯೆಂಬೆರಡು ಸ್ವರೂಪಗಳಿಲ್ಲ. ಸುಖಭೋಕ್ತನೆಂಬುದೊಂದೇ ನಿನ್ನ ಸ್ವರೂಪ. ಹೀಗಿದ್ದರೂ ಹಗ್ಗದ

ದುರ್ಘಟಃ ಇವ=ಅಸಂಭಾವಿತವೋ ಎಂಬಂತೆ ಭವತಿ=ಆಗುವುದು? ಎಲ್ಲವೂ ಸಂಭಾವಿತವೇ ಎಂದರ್ಥ. ಇದರಿಂದ ಅನಂತಗುಣಪೂರ್ಣನಾದ್ದರಿಂದ ಅದಕ್ಕೆ ವಿರೋಧಿಯಾದ ಪಾರತಂತ್ರ್ಯವು ಶ್ರೀಹರಿಯಲ್ಲಿ ಸಂಭಾವಿತವಲ್ಲವಾಗಿ ಸ್ವಾತಂತ್ರ್ಯವೊಂದನ್ನೇ ಅಂಗೀಕರಿಸುವುದೇ? ಅಥವಾ ದುರ್ಘಟಘಟನಾ ಸಮರ್ಥನಾದ್ದರಿಂದ ಸ್ವಾತಂತ್ರ್ಯ ಪಾರತಂತ್ರ್ಯಗಳೆರಡನ್ನೂ ಒಪ್ಪುವುದೇ? ಎಂಬ ಸಂಶಯವು ಉಳಿದೇ ಉಳಿಯುವುದೆಂದು ಅಭಿಪ್ರಾಯ. ಹೀಗೆ ಪೂರ್ವಪಕ್ಷ ಮಾಡಿದರೆ ಅಘಟನ ಘಟನಾ ಸಮರ್ಥನಾಗಿದ್ದರೂ ಶ್ರೀಹರಿಯಲ್ಲಿ ಪುಣ್ಯಾಪುಣ್ಯಭೋಕ್ತೃತ್ವವನ್ನು ನಾವು ತಿಳಿಯುವುದಿಲ್ಲ (ಶುಭಭೋಕ್ತೃತ್ವವನ್ನು ಮಾತ್ರವೇ ತಿಳಿಯುತ್ತೇವೆ). ಶ್ರೀಹರಿಯು ಪುಣ್ಯಾಪುಣ್ಯಭೋಕ್ತನೆಂದು ಹೇಳುವವರು ಮೂಢರು ಮತ್ತು ಅಸುರಸ್ವಭಾವದವರು. ಎಂಬ ಅಭಿಪ್ರಾಯದಿಂದ ಪೂರ್ವಪಕ್ಷಕ್ಕೆ ಉತ್ತರ ಹೇಳುತ್ತಾರೆ. ಸ್ವರೂಪದ್ವಯಾ-ಭಾವಾತ್–'ಏಕಮೇವಾದ್ವಿತೀಯಂ' 'ನಿರನಿಷ್ಟೋ ನಿರವದ್ಯಃ' ಎಂಬ ಶ್ರುತಿಯು ಇದೆಯಾಗಿ ಸುಖೀ ದುಃಖೀ ಎಂದು ಎರಡು ಸ್ವರೂಪಗಳು ಇರಲು ಸಾಧ್ಯವಿಲ್ಲವಾದ್ದರಿಂದ ಒಂದೇ ಸ್ವರೂಪವು ಅದೂ ನಿರ್ದೋಷವಾದ ಸುಖಭೋಕ್ತೃತ್ವವೆಂದೇ ನಿಶ್ಚಯವು. ಇದೇ ಜ್ಞಾನಿಗಳ ಮತ. ಹಾಗಾದರೆ 'ಮಮ ನಿಶಿತಶರೈರ್ವಿಭಿದ್ಯ-ಮಾನತ್ವಚಿ ವಿಲಸತ್ಕವಚೇಽಸ್ತು ಕೃಷ್ಣ ಆತ್ಮಾ' ಎಂದು ಭೀಷ್ಮಾಚಾರ್ಯರು ತಮ್ಮ ತೀಕ್ಷ್ಣಬಾಣಗಳಿಂದ ಶ್ರೀಹರಿಯ ಚರ್ಮವು ಗಾಯಗೊಂಡಿತೆಂದು ಹೇಳಿದ್ದು ಹೇಗೆ? ಎಂದರೆ ಹೇಳುತ್ತಾರೆ. ಯಥಾ=ಹೇಗೆ ರಜ್ಜುಖಂಡಃ=ಹಗ್ಗದ ಭಾಗವು ಸರ್ಪಾದಿಧಿಯಾಂ=ಮಸುಕು ಕತ್ತಲೆಯಲ್ಲಿ ದೃಷ್ಟಿಯು ಸ್ಪಷ್ಟವಿಲ್ಲದಿದ್ದ ಕಾಲದಲ್ಲಿ ಇದು ಸರ್ಪವೆಂದೂ ಅದೇ ಹಗ್ಗವೇ ಮತ್ತೆ ಬೆಳಕಿರುವ ಸ್ಥಳದಲ್ಲಿ ದೃಷ್ಟಿಯು ಸರಿಯಾಗಿದ್ದವನಿಗೆ ಇದು ಹಗ್ಗದ ಚೂರೆಂದೂ ಎರಡು ರೀತಿಯಲ್ಲಿ ಕಾಣುವುದೋ (ಆದರೆ ಹಗ್ಗದ ಸ್ವರೂಪವು ಒಂದೇಯೋ) ತಥಾ=ಹಾಗೆ ಸಮವಿಷಮಮತೀನಾಂ ಮತಂ ಅನು=ಶಾಸ್ತ್ರದ ಯಥಾರ್ಥಜ್ಞಾನವುಳ್ಳವರಿಗೆ ಅನಂತ, ಸಚ್ಚಿದಾನಂದ ಸ್ವರೂಪನಾಗಿಯೂ, ವಿಷಮವಾಗಿ ಅಂದರೆ ಅಸುರಸ್ವಭಾವದವರಾದ್ದರಿಂದ ಶಾಸ್ತ್ರವನ್ನು ಅಯಥಾರ್ಥವಾಗಿ ತಿಳಿದು 'ಅಭೂತಿರಿತ್ಯಸುರಾಃ' ಎಂದು ಹೇಳಿದಂತೆ ಮಿಥ್ಯಾಜ್ಞಾನದಿಂದ ದುಃಖಿಯೆಂದೂ ಛಿನ್ನನೆಂದೂ ವಿದ್ಧನೆಂದೂ ತಿಳಿದವರಿಗೆ ಅವರ ಜ್ಞಾನಕ್ಕೆ ತಕ್ಕಂತೆ ದುಃಖಿ, ಛಿನ್ನ, ವಿದ್ಧ ಎಂಬೀ ರೀತಿಯಲ್ಲಿಯೂ ಚರಸಿ=ಕಾಣುವೆ. ಅವರವರ ಬುದ್ಧಿಗನುಸಾರವಾಗಿ ಫಲ ಕೊಡುತ್ತೀಯೆ. ಸಃ ಏವ=

ಚೂರು ಭ್ರಾಂತರಿಗೆ ಸರ್ಪವೆಂದೂ ಅಭ್ರಾಂತರಿಗೆ ಹಗ್ಗವೆಂದೂ ಕಾಣುವಂತೆ ನೀನೂ ಶಾಸ್ತ್ರಾರ್ಥವನ್ನು ಅಯಥಾವತ್ತಾಗಿ ತಿಳಿದ ಅಸುರ ಸ್ವಭಾವದವರಿಗೆ ದುಃಖಿ, ಛಿನ್ನ, ವಿದ್ಧನೆಂದೂ ಯಥಾವತ್ತಾಗಿ ತಿಳಿದ ಜ್ಞಾನಿಗಳಿಗೆ ಅನಂತ, ಸತ್, ಚಿತ್, ಆನಂದನೆಂದೂ ತಿಳಿದುಬರುವೆ. ಅವರವರ ಬುದ್ಧಿಗನುಗುಣವಾಗಿ ಫಲ ಕೊಡುವೆ. ಏಕಸ್ವರೂಪನಾದ ನೀನೇ ಸೃಷ್ಟಿಸಿದ ಎಲ್ಲ ಪದಾರ್ಥಗಳಲ್ಲಿಯೂ ಅಪ್ರತಿಹತ

ಏಕಸ್ವರೂಪನಾದ ಆ ಭಗವಂತನಾದ ನೀನೇ ಸರ್ವವಸ್ತುಷು - ನೀನು ಸೃಷ್ಟಿಸಿದ ಎಲ್ಲ ಪದಾರ್ಥಗಳಲ್ಲಿಯೂ ವಸ್ತುಸ್ವರೂಪಃ=ಅಪ್ರತಿಹತ ಸ್ವರೂಪನಾಗಿ ಸರ್ವೇಶ್ವರಃ=ಎಲ್ಲಕ್ಕೂ ನಿಯಾಮಕನಾಗಿ ಸಕಲಜಗತ್ಕಾರಣಕಾರಣಭೂತಃ=ಎಲ್ಲ ಜಗತ್ತಿಗೂ ಅದರ ಕಾರಣಗಳಿಗೂ ಕಾರಣನಾಗಿ ಸರ್ವಪ್ರತ್ಯಗಾತ್ಮತ್ವಾತ್=ಎಲ್ಲರ ಅಂತರ್ಯಾಮಿಯಾಗಿ ಬಿಂಬರೂಪನಾದ್ದರಿಂದ ಸರ್ವಗುಣಾಭಾಸೋಪಲಕ್ಷಿತಃ=ಎಲ್ಲ ಗುಣಗಳ ಸಮ್ಯಕ್ ಪ್ರಕಾಶದಿಂದ ಜ್ಞಾನಿಗಳಿಂದ ಅವರವರ ಯೋಗ್ಯತಾನುಗುಣವಾಗಿ ಸಮ್ಯಕ್ ದೃಷ್ಟನಾಗಿ ಏಕಃ ಏವ=ಸ್ಥಾನಭೇದದಿಂದ ಭೇದವಿಲ್ಲದವನಾಗಿ ಪರ್ಯವಶೇಷಿತಃ='ನೇತಿ ನೇತಿ' ಎಂದು ಸರ್ವ ವಿಲಕ್ಷಣನಾಗಿ ನಿಶ್ಚಿತನಾಗಿರುವೆ.

ವಿ.ಅ. 'ಆತ್ಮಾರಾಮಃ', 'ಉಪಶಮಶೀಲಃ', 'ಸಮಂಜಸದರ್ಶನಃ' ಇವು ಒಂದೊಂದೂ ಅವನು ಸ್ವಕೃತ ಪುಣ್ಯಾಪುಣ್ಯ ಫಲಗಳನ್ನು ಅನುಭವಿಸುವುದಿಲ್ಲವೆಂಬುದಕ್ಕೆ ಕಾರಣಗಳು. ವಾವ ಎಂಬುದರಿಂದ ಅಜ್ಞಾನಿಗಳು ಹೀಗೆ ಹೇಳುವರೆಂದೂ ಜ್ಞಾನಿಗಳು ಹೀಗೆ ಹೇಳುವುದಿಲ್ಲವೆಂದೂ ತಿಳಿಸಿರುವರು. 'ಕೋನು ದುರ್ಘಟಃ' ಎಂಬುದರಿಂದ ಎಲ್ಲವೂ ಸುಘಟವೇ ಎಂದು ಪೂರ್ವಪಕ್ಷವನ್ನು ಹೇಳಿದಂತಾಯಿತು. ಆ ಸುಘಟತೆಯನ್ನೇ ಅನೇಕ ವಿಶೇಷಣಗಳಿಂದ ಉಪಪಾದನೆ ಮಾಡುವುದಕ್ಕಾಗಿ 'ಅಪರಿಗಣಿತ' ಮೊದಲಾದ ವಿಶೇಷಣಗಳು. 'ಈಶ್ವರ, ಅನವಗಾಹ್ಯ ಮಾಹಾತ್ಮ್ಯ' ಎಂಬ ವಿಶೇಷಣಗಳಿಂದ ಅಪರಿಗಣಿತ ಗುಣಗಳೆಂಬುದನ್ನು ಸಮರ್ಥಿಸಿರುವರು. ವಿತರ್ಕ ಪದದಿಂದ ತೆಗೆದುಕೊಳ್ಳಬೇಕಾದ ಅನುಮಾನವನ್ನು ಮೇಲೆ ಹೇಳಿದೆ. ದೃಷ್ಟಾಂತವಾದ ಘಟವು ಮೇಯ (ಜ್ಞಾನವಿಷಯ) ವಾಗಿದೆ. ಅದರಲ್ಲಿರುವ ಧರ್ಮವೆಂದರೆ ಘಟತ್ವ. ಇದು ಘಟದಲ್ಲಿಯೇ ಹೊರತು ಘಟವಲ್ಲದ್ದರಲ್ಲಿ ಇಲ್ಲ. ಆದ್ದರಿಂದ ತನ್ನಲ್ಲಿರುವಿಕೆ, ತನಗಿಂತ ಭಿನ್ನವಾದ್ದರಲ್ಲಿರುವಿಕೆ ಎಂಬ ಎರಡು ಇದರಲ್ಲಿ ಇಲ್ಲವಾಗಿ ಉಭಯಾಭಾವ ಬಂತು. ಒಂದು ಇದ್ದರೂ ಎರಡು ಇಲ್ಲವೆಂದು ಬರುವುದಕ್ಕೆ ಉಭಯಾಭಾವವೆನ್ನುವರು. ಉಭಯವೂ ಇದ್ದಕಡೆ ಮಾತ್ರ ಉಭಯಾಭಾವ ಬರುವುದಿಲ್ಲ. ಈ ಘಟತ್ವವು ಪರಿಚ್ಛಿನ್ನವೂ ಆಗಿದೆ. ಪಕ್ಷವಾದ ಶ್ರೀಹರಿಯಲ್ಲಿಯೂ ಮೇಯತ್ವವು ಇದೆಯಾದ್ದರಿಂದ ಅವನಲ್ಲಿಯೂ ಮೇಲೆ ಹೇಳಿದ ಉಭಯಾಭಾವವೂ ಪರಿಚ್ಛಿನ್ನತೆಯೂ ಇರುವ ಧರ್ಮವೆಂದರೆ ಆತ್ಮತ್ವ ಇರಲೇಬೇಕೆಂಬುದು ಅನುಮಾನ ಪ್ರಯೋಗದಿಂದ ಸಿದ್ಧವಾಗುವುದು. ಪರಿಚ್ಛಿನ್ನವೂ ಆಗಿರುವ ಎಂದು ಸಾಧ್ಯದಲ್ಲಿ ಸೇರಿಸದೆ ಹೋಗಿದ್ದಲ್ಲಿ ಆತ್ಮತ್ವವು ಸಿದ್ಧವಾದರೂ ಅದು ಪರಿಚ್ಛಿನ್ನವೆಂಬುದು ಸಿದ್ಧ

ಸ್ವರೂಪನೂ, ಸರ್ವನಿಯಾಮಕನೂ ಸರ್ವ ಜಗತ್ಕಾರಣಕಾರಣನೂ, ಎಲ್ಲರ ಅಂತರ್ಯಾಮಿಯಾಗಿ ಬಿಂಬರೂಪನಾದ್ದರಿಂದ ಎಲ್ಲ ಗುಣಗಳ ಪ್ರಕಾಶದಿಂದ ಜ್ಞಾನಿಗಳಿಂದ ಯೋಗ್ಯತಾನುಗುಣವಾಗಿ ಅಪರೋಕ್ಷೀಕೃತನೂ, ಸ್ಥಾನಪ್ರಯುಕ್ತ ಭೇದರಹಿತನೂ ಆಗಿ ಸರ್ವ ವಿಲಕ್ಷಣನೆಂದು ನಿಶ್ಚಯ ವಿಷಯನಾಗಿರುವೆ.

ವಾಗುತ್ತಿರಲಿಲ್ಲ. ಅದಕ್ಕಾಗಿ ಆ ವಿಶೇಷಣವನ್ನು ಹಾಕಿರುವರೆಂದು ತಿಳಿಯಬೇಕು. ವಿತರ್ಕ, ವಿಕಲ್ಪ, ವಿಚಾರ, ಪ್ರಮಾಣಭಾಸ ಮತ್ತು ಕುತರ್ಕಗಳನ್ನು ಹೇಳಿದ್ದು ಅವಗಾಹ್ಯ ಮಹಿಮನೆಂದು ಪ್ರಶ್ನಿಸುವುದಕ್ಕಾಗಿ. ವಿವಾದಾನವಸರೇ ಎಂಬುದರಿಂದ ಅವಗಾಹ್ಯಮಹಿಮನಲ್ಲವೆಂದು ಉತ್ತರ. ವಿವಾದ ವಿಷಯನಲ್ಲವೆಂಬುದಕ್ಕೆ ಮತ್ತೊಂದು ಕಾರಣ 'ಉಪರತ ಸಮಸ್ತಮಾಯಾಮಯೇ' ಎಂಬುದು. ಇದೂ ಸ್ವಮಹಿಮೆಯಿಂದಲೇ ಹೊರತು ಬೇರೊಬ್ಬರ ಸಹಾಯದಿಂದಲ್ಲವೆಂದು ತಿಳಿಸಲು 'ಆತ್ಮಮಾಯಾಮಂತರ್ಧಾಯ' ಎಂದು ಹೇಳಿದ್ದು. ಹೀಗೆ ವಾದಿಸಿದರೆ ಎರಡು ಸ್ವರೂಪಗಳನ್ನು ಪರಮಾತ್ಮನಿಗೆ ಹೇಳಿದಂತಾಗುತ್ತದೆ. ಅದು ಶ್ರುತಿಸಮ್ಮತವಲ್ಲ ವೆಂದು ಸಮಾಧಾನವನ್ನು 'ರೂಪದ್ವಯಾಭಾವಾತ್' ಎಂಬುದರಿಂದ ಹೇಳಿದ್ದು. ಶ್ರೀಹರಿಯನ್ನು ಸ್ತೋತ್ರಮಾಡುತ್ತಿರುವ ದೇವತೆಗಳಿಗೆ ಮೇಲೆ ಹೇಳಿದ ಸಂಶಯ ವಿತ್ತೆಂದು ತಿಳಿಯಬಾರದು. 'ಸ್ವತಂತ್ರಃ ಪರತಂತ್ರೋ ವಾ ಜ್ಞೋಽಜ್ಞೋ ದುಃಖೀ ಸುಖೀ ನು ಕಿಮ್ | ಇತ್ಯಾದಿ ಸಂಶಯಃ ಕ್ವ ಸ್ಯಾತ್ ಜ್ಞಾನಿನಾಂ ಪುರುಷೋತ್ತಮೇ ||' (ಜ್ಞಾನಿಗಳಿಗೆ ಶ್ರೀಹರಿಯಲ್ಲಿ ಸ್ವತಂತ್ರನೋ ಪರತಂತ್ರನೋ, ಜ್ಞಾನಿಯೋ ಅಜ್ಞಾನಿಯೋ, ದುಃಖಿಯೋ ಸುಖಿಯೋ ಎಂಬೀ ಮೊದಲಾದ ಸಂಶಯವು ಎಲ್ಲಿಂದ ಬರಬೇಕು?) ಎಂಬ ಪ್ರಮಾಣವು ಜ್ಞಾನಿಗಳಿಗೆ ಸಂಶಯವಿಲ್ಲ ವೆಂದು ತಿಳಿಸುವುದು. ಹಾಗಾದರೆ ಜ್ಞಾನಿಗಳು ಪರಮಾತ್ಮನನ್ನು ಏನೆಂದು ಹೇಳುತ್ತಾರೆ ಎಂದರೆ ಅನಂತಗುಣನಾದ್ದರಿಂದಲೂ ಪೂರ್ಣಶಕ್ತಿಯುಳ್ಳವ ನಾದ್ದರಿಂದಲೂ ಸ್ವತಂತ್ರ, ಜ್ಞಾನಿ, ಸುಖಿಯೆಂದೇ ತಿಳಿಯುವರು ಎಂದು 'ತಸ್ಯಾನಂತಗುಣತ್ವಾಚ್ಚ ಪೂರ್ಣಶಕ್ತಿತ್ವತೋ ಹರೇಃ | ಸ್ವಾತಂತ್ರ್ಯಾದಿಕಮೇವಾಸ್ಯ ವಿದೋ ಜಾನಂತಿ ನಿಶ್ಚಯಾತ್ ||' ಎಂಬ ಪ್ರಮಾಣವು ತಿಳಿಸುವುದು. ನಿರವಯವನಾದ ಜೀವನೇ ಸ್ವಕೃತ ಪುಣ್ಯಾಪುಣ್ಯಭೋಕ್ತನು ಎಂಬುದೇ ಯುಕ್ತವು. ಇದಕ್ಕೆ ಪ್ರಮಾಣ 'ಘಟಕತ್ವಾದ್ದುರ್ಘಟಸ್ಯ ದುರ್ಜ್ಞೇಯತ್ವಾಚ್ಚ ಸರ್ವಶಃ | ತಚ್ಛಕ್ತೇಃ ಅವಿದೋ ಜೀವಂ ಪರತಂತ್ರಂ ವದಂತ್ಯಮುಂ | ಏವಂ ದುರ್ಘಟಯಾ ಶಕ್ತ್ಯಾ ಜ್ಞೋ ಜ್ಞಾನಾಂ ಪರಮೇಶ್ವರಃ | ಯಥಾ ರಜ್ಜುಃ ಸರ್ಪಧಿಯಾ ರಜ್ಜು ಬುದ್ಧ್ಯಾಽವಗಮ್ಯತೇ | ತಥಾ ಯಥಾರ್ಥಬುದ್ಧ್ಯಾ ವಾ ಮಿಥ್ಯಾಬುದ್ಧ್ಯಾವ ಗಮ್ಯತೇ | ಸ್ವೇಚ್ಛಯೈವ ಮಹಾವಿಷ್ಣುಃ ಫಲದಶ್ಚಾನುಸಾರತಃ ||' ಹೇಗೆ ಹಗ್ಗವು ಭ್ರಾಂತರಾದವರಿಗೆ ಹಾವಾಗಿಯೂ ಸರಿಯಾಗಿ ತಿಳಿಯುವವರಿಗೆ ಹಗ್ಗವಾಗಿಯೂ ತೋರಿ ಭಯಾಭಯಗಳಿಗೆ ಕಾರಣವಾಗುವುದೋ ಹಾಗೆ ಶ್ರೀಹರಿಯೂ ದುರ್ಘಟ ಘಟಕ ಮತ್ತು ಸಾಕಲ್ಯೇನ ತಿಳಿಯಲಾಗದ ಶಕ್ತಿಯುಳ್ಳವನಾಗಿದ್ದರೂ ಅವನ ಈ ಶಕ್ತಿಯನ್ನರಿಯದವರು ಇವನನ್ನು ಜೀವನೆಂದೂ ಪರತಂತ್ರನೆಂದೂ ತಿಳಿಯುವರು ದುರ್ಘಟ ಶಕ್ತಿಯಿಂದ ಜ್ಞಾನಿಯೇ (ಸ್ವತಂತ್ರನೇ) ಎಂದೂ ತಿಳಿಯುವರು. ಇದೂ ಅವನ ಇಚ್ಛೆಯಿಂದಲೇ. ಅವರವರ ಜ್ಞಾನಕ್ಕೆ ತಕ್ಕಂತೆ ಫಲ ಕೊಡುವನು.

ಅಥ ತತ್ರ ಭಗವಾನ್ ಇತ್ಯಾದಿ ವಾಕ್ಯಗಳನ್ನು ಮತ್ತೊಂದು ರೀತಿಯಿಂದಲೂ ವಿಜಯ ಧ್ವಜ ತೀರ್ಥರು ಅನ್ವಯಮಾಡಿ ತೋರಿಸಿರುವರು. ಪಾರತಂತ್ರ್ಯದಿಂದ ಕುಶಲಾ ಕುಶಲ ಮೊದಲಾದುವನ್ನು ಅನುಭವಿಸುವನೇ? ಅಥವಾ ಸ್ವಾತಂತ್ರ್ಯದಿಂದ ಉದಾಸೀನನೇ? (ಅನುಭವಿಸದಿರುವನೇ) ಎಂದು ಸಂಶಯವನ್ನು ನಾವು ತಿಳಿದಿಲ್ಲ. ಮತ್ತೇನೆಂದರೆ, ಅನಂತ ಶಕ್ತಿಯೂ ಅನಂತ ಗುಣನೂ ಆದ ಶ್ರೀಹರಿಗೆ ಪಾರ-ತಂತ್ರ್ಯಾದಿಗಳು ಹೇಗೆ ಹೊಂದುವುವು? ಎಂದೇ ನಿಶ್ಚಯ ಮಾಡಿಕೊಂಡಿರುವೆವು. ಈ ಅರ್ಥದಲ್ಲಿಯೂ ಮೇಲೆ ಹೇಳಿದ 'ಸ್ವತಂತ್ರಃ ಪರತಂತ್ರೋ ವಾ' ಇತ್ಯಾದಿ ಪ್ರಮಾಣಗಳನ್ನು ಅನುಸಂಧಾನ ಮಾಡಿಕೊಳ್ಳಬೇಕು. ನ ಹಿ ವಿರೋಧ ಎಂಬುದರಿಂದಲೂ ಪಾರತಂತ್ರ್ಯಾದಿಗಳು ಕೂಡುವುದಿಲ್ಲವೆಂಬುದನ್ನೇ ಸಮರ್ಥಿಸಿರು ವರು. ಹಿ=ಯಾವ ಕಾರಣದಿಂದ ವಿರೋಧವೋ ಆ ಕಾರಣದಿಂದಲೂ ಎರಡೂ ಒಬ್ಬನಿಗೆ ಯುಕ್ತವಲ್ಲ ಎಂದರ್ಥ. ನಿರ್ಗುಣನಾದವನಿಗೆ ಗುಣಿತ್ವವೂ ಅಕಿಂಚನನಿಗೆ ಈಶಿತ್ವವೂ ತನಗಿಂತ ಭಿನ್ನವಾದುದೇ ಇಲ್ಲದವನಿಗೆ ಮಾಹಾತ್ಮ್ಯವೂ ವಾಙ್ಮನಸ್ಸು ಗಳಿಗೆ ಗೋಚರನಲ್ಲದವನಿಗೆ ವಿಚಾರ ವಿಷಯತ್ವವೂ ಅಕರ್ತನಿಗೆ ಕರ್ತೃತ್ವವೂ— ಇವೆಲ್ಲವೂ ದುರ್ಘಟವಲ್ಲವೇ ಎಂದರೆ ಭಗವತಿ ಮುಂತಾದ ವಾಕ್ಯಗಳಿಂದ ಅದನ್ನು ಪರಿಹರಿಸಿರುವರು. ಉಪಾಧಿಭೇದದಿಂದೇಕೆ ದೌರ್ಘಟ್ಯವನ್ನು ಪರಿಹರಿಸಬಾರದೆಂದರೆ ಉತ್ತರ 'ಸ್ವರೂಪದ್ವಯಾಭಾವಾತ್' ಎಂಬುದರಿಂದ ಕೊಟ್ಟಿರುವರು. 'ವಸನಾ-ದ್ವಾಸಯೇದ್ವಸ್ತು ನಿತ್ಯಾಪ್ರತಿಹತತ್ವತಃ' ಎಂಬ ಪ್ರಮಾಣದಂತೆ ವಸ್ತು ಎಂಬುದಕ್ಕೆ ಹೇಳಿರುವ ಅರ್ಥವೇ ಸರಿಯಾದುದು. ಸರ್ವೇಶ್ವರಃ ಎಂಬುದರಿಂದ ತಾದಾತ್ಮ್ಯ ವಿಲ್ಲವೆಂದೂ ಸಕಲ ಮೊದಲಾದ ವಿಶೇಷಣಗಳಿಂದ ಸರ್ವೇಶ್ವರನು ಪ್ರತ್ಯಗಾತ್ಮನಾದ್ದ ರಿಂದ ಶ್ರೀಹರಿಯೇ ಎಂದೂ ಸರ್ವ ಪ್ರತ್ಯಗಾತ್ಮನೆಂಬುದರಿಂದ ಕುಂಬಾರಾದಿಗಳಂತೆ ಬಾಹ್ಯಕಾರಣನಾಗಿರಲಿ ಅಂತಃಕಾರಣನಾಗುವುದು ಬೇಡ. ಹಾಗಾದಲ್ಲಿ ಅವನು ಪರಿಚ್ಛಿನ್ನನಾಗಬೇಕಾದೀತು. ಪರಿಚ್ಛಿನ್ನನಾದಲ್ಲಿ ಸಕಲಕಾರಣಕಾರಣತ್ವವು ಅವನಿಗೆ ಯುಕ್ತವಲ್ಲವಲ್ಲಾ ಎಂಬ ಶಂಕಾ ಪರಿಹಾರವನ್ನೂ ಅಂತರ್ಯಾಮಿ ಯಾದ್ದರಿಂದ ಆಯಾಯಾ ವಸ್ತು ಆಯಾಯಾ ಚೇಷ್ಟಾದಿಗಳಿಗೆ ಕಾರಣತ್ವವು ಆಕಾಶದಂತೆ ಅಪರಿಚ್ಛಿನ್ನನಿಗೂ ಯುಕ್ತವೆಂದೂ ಸರ್ವಗುಣಾಭಾಸವೆಂಬುದರಿಂದ ಆಯಾಯಾ ಜೀವರ ಅಂತಸ್ಥನಿಗೆ ಅವರವರ ಅದೃಷ್ಟದಿಂದ ಬರುವ ದುಃಖಾದಿಗಳ ಪ್ರಾಪ್ತಿಯಾಗಬೇಕಲ್ಲಾ ಎಂಬ ಶಂಕೆಗೆ ಪರಿಹಾರವನ್ನೂ ಏಕ ಎಂಬುದರಿಂದ ಸ್ಥಾನ ಭೇದದಿಂದ ಭೇದವಿಲ್ಲವೆಂದೂ ಪರಿಶೇಷಿತಃ ಎಂಬುದರಿಂದ ಒಬ್ಬನೇ ಎಂಬುದರಲ್ಲಿ ಪರಿಶೇಷಾನುಮಾನವೇ ಪ್ರಮಾಣವೆಂದೂ ತಿಳಿಸಿರುವರು. ||

ಗ|| ಅಥ ಹ ವಾವ ತವ ಮಹಿಮಾಮೃತರಸಸಮುದ್ರ-ವಿಪ್ರುಷಾಸಕೃಲ್ಲೀಢಯಾ ಸ್ವಮನಸಿ ನಿಷ್ಯಂದಮಾನನಿರವರತಸುಖೇನ

ವಿಸ್ಮಾರಿತದೃಷ್ಟಶ್ರುತವಿಷಯಸುಖಲೇಶಾಭಾಸಾಃ ಪರಮಭಾಗವತಾ ಏಕಾಂತಿನೋ ಭಗವತಿ ಸರ್ವಭೂತಪ್ರಿಯಸುಹೃದಿ ಸರ್ವಾತ್ಮನಿ ನಿರಂತರನಿರ್ವೃತಮನಸಃ ಕಥಮು ಹ ವಾ ಏತೇ ಮಧುಮಥನ ಪುನಃ ಸ್ವಾರ್ಥಕುಶಲಾ ಹ್ಯಾತ್ಮಪ್ರಿಯಸುಹೃದಃ ಸಾಧವಸ್ತ್ವಚ್ಚರಣಾಂಬುಜಾನುಸೇವಾಂ ವಿಸೃಜಂತಿ ನ ಯತ್ರ ಪುನರಯಂ ಸಂಸಾರಪರಿವರ್ತಃ ॥ ತ್ರಿಭುವನಾತ್ಮಭವನ ತ್ರಿವಿಕ್ರಮ ತ್ರಿನಯನ ತ್ರಿಲೋಕ ಮನೋಹರಾನುಭಾವ ತವೈವ ವಿಭೂತಯೋಽಭವನ್ ದಿತಿಜದನುಜಾದಯಶ್ಚಾಪಿ ತೇಷಾಮನುಪಕ್ರಮಸಮಯೋಽಯಮಿತಿ ಸ್ವಾತ್ಮಮಾಯಯಾ ಸುರನರಮೃಗಮಿಶ್ರಿತಜಲಚರಾಕೃತಿಭಿರ್ಯಥಾಪರಾಧಂ ದಂಡಮಧಥಾವತೀರ್ಯ ॥ ೩೩ ॥

ಶ್ರೀಹರಿಯು ಒಬ್ಬನು, ನಿರ್ದೋಷನು, ಸಂಸಾರವನ್ನು ಹೋಗಲಾಡಿಸುವ ಮಹಾಮಹಿಮನು ಎಂಬ ವಿಷಯದಲ್ಲಿ ಮಹನೀಯರ ಅನುಭವವೆಂಬ ಸಾಕ್ಷಿ ಪ್ರತ್ಯಕ್ಷವನ್ನು ಪ್ರಮಾಣವಾಗಿ ಹೇಳುತ್ತಾರೆ. ಹೇ ಮಧುಮಥನ — ಮಧುವೆಂಬ ದೈತ್ಯನನ್ನು ಸಂಹರಿಸಿದ ಶ್ರೀಹರಿಯೇ, ಅಥ— ನೀನು ಸರ್ವೋತ್ತಮನೂ ಸರ್ವಗುಣ ಪೂರ್ಣನೂ ಸರ್ವರೀತಿಯಿಂದಲೂ ನಿರ್ದೋಷನೂ ಸರ್ವಾಂತರ್ಯಾಮಿಯೂ ಆದ ಕಾರಣದಿಂದಲೇ ಅಸಕೃತ್— ಯಾವಾಗಲೂ ನೀಧಯಾ— ಆಸ್ವಾದಿಸಿದ (ಸೇವಿಸಿದ) ತವ — ನಿನ್ನ ಮಹಿಮಾ ಮಹಾಮೃತರಸ ಸಮುದ್ರವಿಪ್ರುಷಾ — ಮಹಿಮೆಯೆಂಬ ಮಹಾಮೃತರಸದ ಸಮುದ್ರದ ಹನಿಯಿಂದ ಸ್ವಮನಸಿ — ತಮ್ಮ ತಮ್ಮ ಮನಸ್ಸಿನಲ್ಲಿ ನಿಷ್ಯಂದಮಾನ— ಅತಿಶಯವಾಗಿ ಹರಿಯುತ್ತಿರುವ ನಿರವರತ ಸುಖೇನ — ನಿರಂತರ ವಾವ ಸ್ವರೂಪಸುಖದಿಂದ ವಿಸ್ಮಾರಿತ— ಸಂಪೂರ್ಣವಾಗಿ ಮರೆತುಹೋದ ದೃಷ್ಟ= ಕಣ್ಣಿಗೆ ಕಾಣುವ (ಐಹಿಕ) ಮತ್ತು ಶ್ರುತ — ವೇದಾದಿಗಳಲ್ಲಿ ಕೇಳಬಂದಿರುವ ಸ್ವರ್ಗಾದಿ (ಆಮುಷ್ಮಿಕ) ವಿಷಯ ಸುಖ ಲೇಶಗಳ ಜ್ಞಾನವುಳ್ಳ ಅಥವಾ ದೃಷ್ಟ

ಮಧುಮಥನ, ನೀನು ಸರ್ವೋತ್ತಮನಾದ ಕಾರಣದಿಂದ ನಿರಂತರ ಸೇವಿಸಿದ ನಿನ್ನ ಮಹಿಮಾಮೃತರಸಸಮುದ್ರದ ಹನಿಯಿಂದ ತಮ್ಮ ತಮ್ಮ ಮನಸ್ಸಿನಲ್ಲಿ ಅತಿಶಯ ವಾಗಿ ಪ್ರವಹಿಸುವ ನಿರಂತರ ಸ್ವರೂಪ ಸುಖದಿಂದ ಐಹಿಕಾಮುಷ್ಮಿಕ ಸುಖಲೇಶ ಗಳನ್ನು ಮರೆತ ಈ ಏಕಾಂತ ಭಕ್ತರು ಎಲ್ಲಾ ಪ್ರಾಣಿಗಳಿಗೆ ಪ್ರಿಯರಾದ ಸನ್ಯಾಸಿ ಗಳಿಗೆ ಸ್ನೇಹಿತನೂ ಎಲ್ಲರ ಅಂತರ್ಯಾಮಿಯೂ ಆದ ನಿನ್ನಲ್ಲಿ ಯಾವಾಗಲೂ ಸಂತುಷ್ಟಾಂತರಂಗರಾಗಿರುವರು. ನಿನಗೇ ಸರ್ವಸ್ವವನ್ನೂ ಸಮರ್ಪಿಸುವರು. ನೀನೇ ಅವರಿಗೆ ಪ್ರಿಯ ಮತ್ತು ಸ್ನೇಹಿತ. ಈ ಸಾಧುಗಳಾದ ಪರಮಭಾಗವತರು ಸ್ವಾರ್ಥ ಕುಶಲರಾದ್ದರಿಂದ ನಿನ್ನ ಪಾದಾರವಿಂದಗಳ ನಿರಂತರ ಆರಾಧನೆಯನ್ನು

ಶ್ರುತ ಸುಖಗಳು ಅಲ್ಪವೆಂದೂ ನಶ್ವರವೆಂದೂ ವಿಶೇಷವಾಗಿ ಸ್ಮರಣೆಗೆ ತರಲ್ಪಟ್ಟವ ರಾದ, ಸರ್ವಭೂತಪ್ರಿಯಸುಹೃದಿ=(೧) ಎಲ್ಲ ಪ್ರಾಣಿಗಳಿಗೂ ಪ್ರಿಯರಾದ ಅಂದರೆ ಅಜಾತ ಶತ್ರುಗಳಾದ ಸನ್ಯಾಸಿಗಳಿಗೆ ಸ್ನೇಹಿತನಾದ (೨) ಎಲ್ಲ ಪ್ರಾಣಿಗಳಿಗೂ ಪ್ರಿಯ ನಾಮವೆಂಬ ಪರವಸ್ತುವಿನಿಂದ ಅಭೀಷ್ಟವನ್ನು ಕೊಡುವನಾದ್ದರಿಂದ ಪ್ರಿಯನೂ ಸ್ನೇಹಿತನೂ ಆದ ಸರ್ವಾತ್ಮನಿ=ಎಲ್ಲರ ಅಂತರ್ಯಾಮಿಯೂ ಸ್ವಾಮಿಯೂ ಆದ ಭಗವತಿ = ಭಗವಂತನಾದ ನಿನ್ನಲ್ಲಿ ನಿರಂತರನಿರ್ವೃತ ಮನಸಃ = ಯಾವಾಗಲೂ ಸಂತುಷ್ಟವಾದ ಮನಸ್ಸುಳ್ಳ ಏಕಾಂತಿನಃ=ನಿನ್ನಲ್ಲಿಯೇ ಶರೀರ ಇಂದ್ರಿಯ ಪ್ರಾಣ ಇತ್ಯಾದಿ ಸರ್ವಸ್ವವನ್ನೂ ಸಮರ್ಪಿಸಿದ ಆತ್ಮಪ್ರಿಯಸುಹೃದಃ = ಶ್ರೀಹರಿಯೇ ಪ್ರಿಯನೂ ಸ್ನೇಹಿತನೂ ಆಗಿ ಉಳ್ಳ ಸಾಧವಃ = ಸಾಧುಸ್ವಭಾವದ ಆದ್ದರಿಂದಲೇ ಪರಮಭಾಗವತಾಃ = ಉತ್ತಮ ಭಗವದ್ಭಕ್ತರಾದ ಏತೇ ಪುನಃ = ಈ ಭಕ್ತಜನ ರಾದರೋ ಹಿ = ಯಾವ ಕಾರಣದಿಂದ ಸ್ವಾರ್ಥಕುಶಲಾಃ = ತಮ್ಮ ಪರಮ ಪುರುಷಾರ್ಥವಾದ ಮೋಕ್ಷವನ್ನು ಹೇಗೆ ಸಂಪಾದಿಸಿಕೊಳ್ಳಬೇಕೆಂಬುದರಲ್ಲಿ ನಿಪುಣರೋ ಆ ಕಾರಣದಿಂದ ಯತ್ರ=ಯಾವ ನಿನ್ನ ಪಾದಾರವಿಂದ ಸೇವೆಯಲ್ಲಿ ಅಯಂ = ಈಗ ಅನುಭವಿಸುತ್ತಿರುವ ಸಂಸಾರಪರಿವರ್ತಃ = ಹುಟ್ಟುಸಾವುಗಳ (ಬಂಧದ) ಪರಿಭ್ರಮಣವು ನ ಪುನಃ=ಮತ್ತೆ ಉಂಟಾಗುವುದಿಲ್ಲವೋ ಅಂತಹ ತ್ವಚ್ಚರಣಾಂಬುಜಾನುಸೇವಾಂ=ನಿನ್ನ ಪಾದಾರವಿಂದಗಳ ನಿರಂತರ ಆರಾಧನೆಯನ್ನು ಕಥಮು ಹವಾ ವಿಸೃಜಂತಿ= ಹೇಗೆ ತಾನೇ ಬಿಟ್ಟುಬಿಡುವರು ? ಸರ್ವಥಾ ಬಿಡುವು ದಿಲ್ಲವೆಂದು ಅಭಿಪ್ರಾಯ. ಹ ವಾವ ಇತ್ಯಾದಿ ನಿಪಾತಗಳಿಂದ 'ಪರಮಃ ಪರಾರ್ಥ್ಯ' ಎಂಬ ಶ್ರುತಿಯನ್ನು ಸೂಚಿಸಿ ಮಹಿಮೆಯು ಪರಮವೂ ಪರಾರ್ಥ್ಯವೂ ಎಂದು ತಿಳಿಸಿರುವರು. ಸ್ವಾರ್ಥಕುಶಲಾಃ ಎಂಬುದರಿಂದ ಸೇವೆಯನ್ನು ಬಿಡದಿರುವು ದಕ್ಕೆ ಕಾರಣವನ್ನು ಹೇಳಿರುವರು. ತಮ್ಮ ಅಭಿಪ್ರಾಯವನ್ನು ವಿಜ್ಞಾಪಿಸಲು ಉಪೋದ್ಘಾತವನ್ನು ಹೇಳುತ್ತಾರೆ. ತ್ರಿಭುವನಾತ್ಮಭವನ=ಮೂರು ಲೋಕವೇ ನಿನ್ನ ಮನೆಯಾಗಿಯುಳ್ಳ, ತ್ರಿವಿಕ್ರಮ=ಮೂರು ಪಾದಗಳಿಂದ ವಿಕ್ರಮವನ್ನು ಸ್ಥಾಪಿಸಿದ, ತ್ರಿನಯನ=ಮೂರು ಕಣ್ಣುಗಳುಳ್ಳ ನೃಸಿಂಹರೂಪಿಯಾದ ತ್ರಿಲೋಕ ಮನೋಹರಾನುಭಾವ = (೧) ತ್ರಿಲೋಕ = ಜ್ಞಾನವೆಂಬ ಪ್ರಕಾಶದಿಂದ ಮೂರು ಲೋಕದ ವಿಷಯಗಳನ್ನೂ ಹೊಂದಿರುವ ಅಂದರೆ ಸರ್ವಜ್ಞನಾದ ಮನೋಹರಾನು- ಭಾವ=ಮನಸ್ಸನ್ನು ಹರಣಮಾಡುವ ಸಾಮರ್ಥ್ಯವುಳ್ಳ (೨) ಮೂರು ಲೋಕ ಗಳಲ್ಲಿಯೂ ವಾಸಿಸುವ ಜನರ ಮನಸ್ಸನ್ನು ಆಕರ್ಷಿಸುವ ಮಹಿಮೆಯುಳ್ಳ ಹೇ

ಹೇಗೆ ತಾನೇ ಬಿಡುವರು ? ನಿನ್ನ ಪಾದಾರವಿಂದ ಸೇವೆಯಿಂದ ಈ ಸಂಸಾರ ಪರಿಭ್ರಮಣವು ಮತ್ತೆ ಉಂಟಾಗುವುದಿಲ್ಲವಲ್ಲವೇ ? ಮೂರು ಲೋಕಗಳೇ ನಿನ್ನ ಮನೆ. ಮೂರು ಪಾದಗಳಿಂದ ವಿಕ್ರಮವನ್ನು ಸ್ಥಾಪಿಸಿದವನು ನೀನು. ಮೂರು

ಶ್ರೀಹರಿಯೇ, ದಿತಿಜದನುಜಾದಯಃ=ದೈತ್ಯ ದಾನವ ಮೊದಲಾದವರು ಚ=ದೇವತೆ ಗಳೂ ತವ=ನಿನ್ನ ವಿಭೂತಯಃ=ವಿವಿಧ ಗುಣಪ್ರಯೋಜಕ ಇರುವಿಕೆಗೆ ಸ್ಥಾನ ಗಳಾಗಿ ಏವ=ಮಾತ್ರವೇ ಅಪಿ=ಸ್ವರೂಪ ವಿಭೂತಿಗಳಾದ ಮತ್ಸ್ಯಾದಿಗಳಂತಲ್ಲದೆ ಅಭೂವನ್=ಆದರೋ ತೇಷಾಂ=ನಿನ್ನ ಅಧಿಷ್ಠಾನರಾಗಿ ವಿಭೂತಿಶಬ್ದವಾಚ್ಯರಾದ ದೈತ್ಯರೇ ಮೊದಲಾದವರ ಅನುಪಕ್ರಮಸಮಯಃ=ಪರಾಜಯಕಾಲವು (ಕ್ಷಯ ಪ್ರಾರಂಭ ಕಾಲವು) ಅಯಂ=ಇದು ಇತಿ=ಎಂದು (ಮತ್ವಾ)=ತಿಳಿದು ಸ್ವಾತ್ಮ-ಮಾಯಯಾ=(೧) ನಿನ್ನ ಸ್ವರೂಪಭೂತವಾದ ಇಚ್ಛೆಯಿಂದ (೨) ನಿನ್ನ ಮಹಿಮೆ ಯಿಂದ (೩) ಶುಕ್ರಶೋಣಿತ ಸಂಬಂಧವಿಲ್ಲದೆ ಸುರ=ದೇವತೆಗಳ ನರ=ಮನುಷ್ಯರ ಮೃಗ=ಮೃಗಗಳ ಮಿಶ್ರಿತ=ನರ ಮೃಗಗಳ ಜಲಚರ=ಮೀನು ಮೊದಲಾದ ನೀರಿ ನಲ್ಲಿ ಚರಿಸುವ ಆಕೃತಿಭಿಃ=ಆಕಾರಗಳಿಂದ (ಚಿದಾನಂದಾತ್ಮಕ ರೂಪಗಳಿಂದ) ಅವತೀರ್ಯ=ಭೂಮಿಯಲ್ಲಿ ವ್ಯಕ್ತನಾಗಿ ಹಿಂದೆ ಯಥಾಪರಾಧಂ=ಅವರವರ ತ್ರೈಲೋಕ್ಯಾಪಹರಣ ಮೊದಲಾದ ಅಪರಾಧಕ್ಕೆ ತಕ್ಕಂತೆ ದಂಡಂ=ಶಿಕ್ಷೆಯನ್ನು ಬಲಿ ಮೊದಲಾದವರಿಗೆ ಅಧಥ=ಧರಿಸಿದವನಾದೆ (ಕೊಟ್ಟೆ). ತ್ರಿಭುವನಾತ್ಮಭವನ ಮೊದಲಾದ ವಿಶೇಷಣಗಳು ಅಭಿಪ್ರಾಯ ಗರ್ಭಿತಗಳು. ತ್ರಿಭುವನವೇ ಶ್ರೀಹರಿಯ ಮನೆಯೆಂದು ಹೇಳಿದ್ದರಿಂದ ತ್ರಿಭುವನಕ್ಕೆ ಬಂದ ತೊಂದರೆಯನ್ನು ಅವಶ್ಯವಾಗಿ ಪರಿಹರಿಸಬೇಕೆಂದೂ, ತ್ರಿವಿಕ್ರಮ ಎಂಬುದರಿಂದ ಮಹಾ ಪರಾಕ್ರಮಿಯಾದ ನಿನಗೆ ಇದು ಸಾಧ್ಯವೆಂದೂ, ತ್ರಿನಯನ ಎಂಬುದರಿಂದ ನೃಸಿಂಹರೂಪಿಯಾದ ನೀನು ದೈತ್ಯ ಭಯಂಕರನೆಂದೂ ತ್ರಿಲೋಕಮನೋಹರಾನುಭಾವ ಎಂಬುದರಿಂದ ಈ ನಿನ್ನ ಮಹಿಮೆಗಳಿಂದ ಮೂರು ಲೋಕಗಳ ಜನರ ಮನಸ್ಸನ್ನೂ ಸೆಳೆದಿರುವೆಯೆಂದೂ ಸೂಚಿಸಿರುವರು. 'ವಿಷ್ಣೋರ್ನೃಸಿಂಹನಾಮಾನಿ ತ್ರಿನೇತ್ರೋಗ್ರಾದಿಕಾನಿ ತು' ಎಂಬ ಪ್ರಮಾಣದಂತೆ ತ್ರಿನಯನ ಎಂಬುದು ನರಸಿಂಹನ ಹೆಸರು. 'ಮಾಯಾ-ಗುಣವ್ಯತಿಕರಾದ್ಯದುರುರ್ವಿಭಾಸಿ' 'ವಿವಿಧ ಭಾವಸ್ಯ ಪಾತ್ರತ್ವಾತ್ ಸರ್ವೇ

ಕಣ್ಣಿನ ನರಸಿಂಹನೇ, ನೀನು ತ್ರಿಲೋಕದ ವಿಷಯವನ್ನೂ ಬಲ್ಲ ಸರ್ವಜ್ಞ. ನಿನ್ನ ಸಾಮರ್ಥ್ಯವು ಎಲ್ಲ ಜನರ ಮನಸ್ಸನ್ನೂ ಆಕರ್ಷಿಸುವುದು. ಈ ದೈತ್ಯ ದಾನವರೆಲ್ಲರೂ ದೇವತೆಗಳೂ ನಿನ್ನ ಅಧಿಷ್ಠಾನಗಳು. ಅಷ್ಟೇ ಹೊರತು ಸ್ವರೂಪ ವಿಭೂತಿಗಳಲ್ಲ. ಇವರ ಪರಾಜಯ ಕಾಲವಿದೆಂದು ತಿಳಿದು ನಿನ್ನ ಇಚ್ಛೆಯಿಂದ ನಿನ್ನ ಮಹಿಮೆಯಿಂದ ಶುಕ್ರ ಶೋಣಿತ ಸಂಬಂಧ ರಹಿತನಾಗಿ ಉಪೇಂದ್ರಾದಿ ದೇವತಾ ಕೃತಿಯಿಂದಲೂ, ರಾಮಾದಿ ನರಾಕೃತಿಯಿಂದಲೂ, ವರಾಹಾದಿ ಮೃಗಾಕೃತಿ ಯಿಂದಲೂ, ನರಸಿಂಹಾದಿ ಮಿಶ್ರಾಕೃತಿಯಿಂದಲೂ, ಮತ್ಸ್ಯಾದಿ ಜಲಚರಾಕೃತಿ ಯಿಂದಲೂ ಭೂಮಿಯಲ್ಲಿ ವ್ಯಕ್ತನಾಗಿ ಅವರವರ ಅಪರಾಧಾನುಗುಣವಾಗಿ ಶಿಕ್ಷೆಯನ್ನು ಬಲಿ ಮೊದಲಾದವರಿಗೆ ಹಿಂದೆ ನೀನೇ ಮಾಡಿರುವೆ.

ವಿಷ್ಣೋರ್ವಿಭೂತಯಃ ' ಎಂಬ ಪ್ರಮಾಣಗಳಂತೆ ದೇವದನುಜಾದಿಗಳು ಸ್ವರೂಪ ವಿಭೂತಿಗಳಲ್ಲ. ಇದನ್ನೇ ಅಪಿ ಎಂಬುದರಿಂದ ಸೂಚಿಸಿರುವರು. ಮತ್ಸ್ಯಾದಿ ಅವತಾರಗಳೇ ಸ್ವರೂಪ ವಿಭೂತಿಗಳು. ಸುರಾಕೃತಿ ಉಪೇಂದ್ರ, ನರಾಕೃತಿ ರಾಮ ಕೃಷ್ಣಾದಿ, ಮೃಗಾಕೃತಿ ವರಾಹಾದಿ, ಮಿಶ್ರಾಕೃತಿ ನರಸಿಂಹ ಮೊದಲಾದುವು ಜಲಚರಾಕೃತಿ ಮತ್ಸ್ಯಾದಿಗಳೆಂದು ತಿಳಿಯಬೇಕು. ಇದರಿಂದ ಸಾಕ್ಷಾದ್ವಿಭೂತಿ ಯನ್ನು ವಿವರಿಸಿರುವರು. ತ್ರಿಭುವನಾತ್ಮಭವನ=ಮೂರುಲೋಕ ಸ್ವಾಮಿಯೇ ಮತ್ತು ಆಶ್ರಯನೇ, ತ್ರಿಭುವನಕ್ಕೆ ಆತ್ಮರಾದ ಮುಖ್ಯ ಪ್ರಾಣದೇವರೇ ಮುಖ್ಯಾಧಿಷ್ಠಾನ ವಾಗಿ ಉಳ್ಳವನೇ ಎಂದೂ ಅರ್ಥ ಮಾಡಿರುವರು. 'ತ್ರಿದಿತ್ಯೇವಂ ತ್ರಯೋ ವೇದಾಃ ಕೀರ್ತಿತಾ ಮುನಿಸತ್ತಮೈಃ । ಕ್ರಮನ್ನೇತಾಂಸ್ತು ಸರ್ವಾಂಸ್ತ್ರಿವಿಕ್ರಮೋಽಸ್ತಿ ಜನಾರ್ದನಃ ॥' ಎಂಬ ವಚನದಂತೆ ಮೂರು ವೇದಗಳಲ್ಲಿಯೂ ಪ್ರತಿಪಾದಿತವಾದ ಮಹಿಮೆಯುಳ್ಳವನೆಂದೂ ತ್ರಿವಿಕ್ರಮಶಬ್ದಕ್ಕೆ ಅರ್ಥ. 'ತ್ರೇಧಾ ನಿದಧೇ ಪದಂ' ಎಂಬ ಶ್ರುತಿಯಂತೆ ಮೂರು ಪಾದಗಳಿಂದ ವಿಕ್ರಮವನ್ನು ಸ್ಥಾಪಿಸಿದವನೆಂದರ್ಥ. ॥ ೩೩ ॥

ಗ॥ ಏವಮೇನಮುಪಿ ಭಗವನ್ ಜಹಿ ತ್ವಾಷ್ಟ್ರಂ ವೃತ್ರಾಸುರಂ ಯದಿ ಮನ್ಯಸೇ ॥ ಅಸ್ಮಾಕಂ ತಾವಕಾನಾಂ ತವ ಚರಣನಲಿನ-ಯುಗಲಧ್ಯಾನಾನುಬದ್ಧಹೃದಯನಿಗಡಾನಾಂ ಸ್ವಲಿಂಗವಿಧಾರಣೇ-ನಾತ್ಮಸಾತ್ಕೃತಾನಾಮನುಕಂಪಾನುರಂಜಿತವಿಶದರುಚಿರಶಿಶಿರಸ್ಮಿತಾವ-ಲೋಕನೇನ ವಿಗಲಿತಮಧುರಮುಖರಿತವಚಸಾಽಮೃತಕಲಯಾ ಚಾಂತಸ್ತಾಪಮನಘಾರ್ಹಸಿ ಶಮಯಿತುಮ್ ॥

ಹೆಚ್ಚು ಹೇಳುವುದರಿಂದೇನು? ಅಪೇಕ್ಷಿತವಾದುದನ್ನು ಹೇಳಿ ಎಂದರೆ ಹೇಳು ತ್ತಾರೆ. ಹೇ ಭಗವನ್–ಶ್ರೀಹರಿಯೇ, ಯದಿ ಮನ್ಯಸೇ (ಕರ್ತವ್ಯಂ)–ಮಾಡ ತಕ್ಕದ್ದೆಂದು (ಸಂಹರಿಸಬೇಕೆಂದು) ನೀನು ಇಷ್ಟಪಟ್ಟಲ್ಲಿ ಏವಂ=ಹಿಂದೆ ಬಲಿ ಮೊದ ಲಾದವರನ್ನು ನಿಗ್ರಹಿಸಿದಂತೆ ಏನಂ=ಈ ಲೋಕಭಯಂಕರನಾದ ತ್ವಾಷ್ಟ್ರಂ= ತ್ವಷ್ಟೃವಿನ ಯಾಗದ ಫಲವಾಗಿ ಉತ್ಪನ್ನನಾಗಿರುವ ವೃತ್ರಾಸುರಮಪಿ=ವೃತ್ರಾಸುರ ನನ್ನೂ ಜಹಿ=ಸಂಹರಿಸು ॥ ಮತ್ತು ಇದು ಕರ್ತವ್ಯವೆಂದು ಪ್ರಾರ್ಥಿಸುತ್ತಾರೆ. ಹೇ ಅನಘ=ನಿರ್ದೋಷನಾದ ಶ್ರೀಹರಿಯೇ, ತವ–ನಿನ್ನ ಚರಣನಲಿನಯುಗಲ=ಕಮಲ ದಂತಿರುವ ಎರಡು ಪಾದಗಳ ಧ್ಯಾನ=ಧ್ಯಾನದಿಂದ ಅನುಬದ್ಧ=ಕಟ್ಟಿಹಾಕಲ್ಪಟ್ಟ

ಭಗವನ್ ಇದು ಕರ್ತವ್ಯವೆಂದು ನೀನಿಚ್ಛಿಸಿದಲ್ಲಿ ಈ ವೃತ್ರಾಸುರನನ್ನೂ ಆದರಂತೆಯೇ ಸಂಹರಿಸು. ನಾವು ನಿನ್ನವರು. ನಿನ್ನ ಪಾದಾರವಿಂದ ದ್ವಯದ ಧ್ಯಾನದಿಂದ ಕೂಡಿದ ಹೃದಯಶೃಂಖಲೆಯುಳ್ಳವರು. ನಿನ್ನೀ ಚಿಹ್ನೆಗಳನ್ನು ಸ್ಪಷ್ಟವಾಗಿ ಧರಿಸುವುದರಿಂದ ನಿನ್ನವರೆಂದು ಪರಿಗೃಹೀತರು. ನಮ್ಮ ಮನಸ್ಸಿನ ತಾಪವನ್ನು

(ಕೂಡಿರುವ) ಹೃದಯನಿಗಡಾನಾಂ=ಹೃದಯವೆಂಬ ಶೃಂಖಲೆಗಳುಳ್ಳ ಸ್ವಲಿಂಗ ವಿಧಾರಣೇನ - ನಿನ್ನ (ತನ್ನ) ಚಿಹ್ನೆಗಳಾದ ಚಕ್ರ ಶಂಖಾದಿಗಳನ್ನು ಸ್ಪಷ್ಟವಾಗಿ ಧರಿಸಿರುವುದರಿಂದ ಆತ್ಮಸಾತ್ಕೃತಾನಾಂ = (೧) ನಿನ್ನಂತೆ (ತನ್ನಂತೆ) ಆದ (೨) ತನ್ನವರೆಂದು ಪರಿಗೃಹೀತರಾದ ಆದ್ದರಿಂದಲೇ ತಾವಕಾನಾಂ=ನಿನ್ನ ಭಕ್ತರಾದ ಅಸ್ಮಾಕಂ=ನಮ್ಮ ಅಂತಸ್ತಾಪಂ-ಮನಸ್ಸಿನ ತಾಪವನ್ನು ಅನುಕಂಪಾನುರಂಜಿತ= ದಯೆಯಿಂದ ಅನುರಾಗಯುಕ್ತವಾದ (ಸ್ನೇಹಯುಕ್ತವಾದ) ವಿಶದ=ನಿರ್ಮಲವಾದ ರುಚಿರ = ಮನೋಹರವಾದ ಶಿಶಿರ=ಶೀತಲವಾದ ಸ್ಮಿತ=ಮುಗುಳು ನಗೆಯಿಂದ ಕೂಡಿದ ಅವಲೋಕನೇನ = ದೃಷ್ಟಿಯಿಂದಲೂ ಅಮೃತಕಲಯಾ (ಯುಕ್ತೇನ)= ಅಮೃತದ ಕಲೆಯಿಂದ ಕೂಡಿದ ವಿಗಲಿತ = ದಯೆಯಿಂದಲೇ ಹೊರಹೊಮ್ಮಿದ ಮಧುರ=ಇಂಪಾದ ಮುಖರಿತ = ಮಂದ್ರಧ್ವನಿಯ ವಚಸಾ = ಮಾತಿನಿಂದಲೂ ಅಥವಾ ಮಾತೆಂಬ ಅಮೃತದ ಕಲೆಯಿಂದಲೂ ಶಮಯಿತುಂ=(ಮೊದಲು) ಹೋಗಲಾಡಿಸಲು ಅರ್ಹಸಿ=ಅರ್ಹನಾಗಿರುವೆ. ಮೊದಲು ಕೃಪಾದೃಷ್ಟಿಯಿಂದ ನೋಡಿ ಅಮೃತದಂತಿರುವ ಮಾತನ್ನಾಡಿ ನಮ್ಮ ಮನಸ್ಸಿನಲ್ಲಿರುವ ಭಯವನ್ನು ಹೋಗಲಾಡಿಸೆಂದು ಅಭಿಪ್ರಾಯ. ನಿನ್ನವರು ಹೇಗೆ? ಎಂದರೆ ಎರಡು ಕಾರಣಗಳನ್ನು ತಿಳಿಸಿರುವರು.

೧|| ಅಥ ಭಗವಂಸ್ತವಾಸ್ಮಾಭಿರಖಿಲಜಗದುತ್ಪತ್ತಿಸ್ಥಿತಿಲಯನಿಮಿತ್ತಾಯಮಾನದಿವ್ಯಮಾಯಾವಿನೋದಸ್ಯ ಸಕಲಜೀವನಿಕಾಯಾನಾಮಂತರ್ಹೃದಯೇಷು ಬಹಿರಪಿ ಚ ಬ್ರಹ್ಮಪ್ರತ್ಯಗಾತ್ಮಸ್ವರೂಪೇಣ ಪ್ರಧಾನರೂಪೇಣ ಯಥಾದೇಶಕಾಲ ದೇಹಾವಸ್ಥಾನವಿಶೇಷಂ ತದುಪಾದಾನೋಪಲಂಭಕತಯಾಽನುಭವತಃ ಸರ್ವಪ್ರತ್ಯಯಸಾಕ್ಷಿಣ ಆಕಾಶಶರೀರಸ್ಯ ಸಾಕ್ಷಾತ್ಪರಬ್ರಹ್ಮಣಃ ಪರಮಾತ್ಮನಃ ಕಿಯಾನಿಹ ವಾ ಅರ್ಥವಿಶೇಷೋ ವಿಜ್ಞಾಪನೀಯಃ ಸ್ಯಾದ್ವಿಸ್ಫುಲಿಂಗಾದಿಭಿರಿವ ಹಿರಣ್ಯರೇತಸಃ || ಅತ ಏವ ಸ್ವಯಂ ತದುಪಕಲ್ಪಯಾಸ್ಮಾಕಂ ಭಗವತಃ ಪರಮಗುರೋಸ್ತವ ಚರಣಶತಪಲಾಶಚ್ಛಾಯಾಂ ವಿವಿಧವೃಜಿನಸಂಸಾರ ಪರಿಶ್ರಮೋಪಶಮನೀಮುಪಸನ್ನಾನಾಂ ವಯಂ ಯತ್ಕಾಮೇನೋಪಸಾದಿತಾಃ ||

ದಯಾಯುಕ್ತವೂ ಶುಭ್ರವೂ ಮನೋಹರವೂ ಶೀತಲವೂ ಆದ ಮಂದಹಾಸದಿಂದ ಕೂಡಿದ ನೋಟದಿಂದಲೂ ಹೊರಹೊಮ್ಮಿದ ಇಂಪಾದ ಮಂದ್ರ ಸ್ವರದ ಅಮೃತ ಕಲಾಯುಕ್ತ ಮಾತಿನಿಂದಲೂ ಹೋಗಲಾಡಿಸಲು ಅನಘನಾದ ನೀನು ಅರ್ಹನಾಗಿರುವೆ. ಅಲ್ಲದೆ ಶ್ರೀಹರಿಯೆ, ನಿನ್ನ ಸ್ವರೂಪೇಚ್ಛೆಯು ಎಲ್ಲ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ನಿಮಿತ್ತವಾಗಿದ್ದು ಅದರಿಂದ ಕ್ರೀಡಿಸುತ್ತಿರುವೆ. ಎಲ್ಲ

ಹಸಿದಿರುವ ಹುಡುಗನಂತೆ ಮನಸ್ಸಿನ ಭಾವದ ಅತಿಶಯದಿಂದ ಸರ್ವಜ್ಞನಾದ ನಿನಗೆ ನಾವು ವಿಜ್ಞಾಪಿಸಿಕೊಂಡದ್ದು ಹೆಚ್ಚು ಮಾತನಾಡಿದಂತೆಯೇ. ಈ ವಿಜ್ಞಾಪನೆಯು ನಮ್ಮ ಅಜ್ಞಾನ ನಿಮಿತ್ತಕವೇ ಹೊರತು ಬೇರೆಯಲ್ಲವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಅಥ = ಮತ್ತು ಭಗವನ್ – ಶ್ರೀಹರಿಯೇ ಅಖಿಲ........ವಿನೋದಸ್ಯ ಅಖಿಲ=ಸಮಸ್ತವಾದ ಜಗತ್–ಪ್ರಪಂಚದ ಉತ್ಪತ್ತಿ= ಸೃಷ್ಟಿ ಸ್ಥಿತಿ=ಪಾಲನೆ ಲಯ=ಸಂಹಾರ ಇವುಗಳಿಗೆ ನಿಮಿತ್ತಾಯಮಾನ–ನಿಮಿತ್ತ ಕಾರಣವಾಗಿರುವ ದಿವ್ಯಮಾಯಾ–ಸ್ವರೂಪೇಚ್ಛೆಯಿಂದ ವಿನೋದಸ್ಯ=ಲೀಲೆಯುಳ್ಳ ಸಕಲಜೀವನಿಕಾಯಾನಾಂ=ಎಲ್ಲ ಜೀವರಾಶಿಗಳ ಹೃದಯೇಷು ಅಂತಃ–ಹೃದಯಗಳ ಒಳಗೂ ಚ–ಮತ್ತು ಬಹಿರಪಿ=ಹೊರಗೂ ಬ್ರಹ್ಮ ಪ್ರತ್ಯಗಾತ್ಮ ಸ್ವರೂಪೇಣ= ಹೊರಗಡೆ ವ್ಯಾಪ್ತವಾದ ಬ್ರಹ್ಮರೂಪದಿಂದಲೂ ಒಳಗಡೆ ಪ್ರತ್ಯಗಾತ್ಮ (ಬಿಂಬ) ಸ್ವರೂಪದಿಂದಲೂ ಪ್ರಧಾನರೂಪೇಣ ಮುಖ್ಯರೂಪದಿಂದ ಇದ್ದು ಯಥಾದೇಶಕಾಲ ದೇಹಾವಸ್ಥಾನವಿಶೇಷಂ – ದೇಶ ವಿಶೇಷ, ಕಾಲ ವಿಶೇಷ, ದೇವತೆ, ಮನುಷ್ಯ ಇತ್ಯಾದಿ ದೇಹ ವಿಶೇಷ, ಜಾಗ್ರದಾದಿ ಅವಸ್ಥಾ (ನ) ವಿಶೇಷಗಳಿಗೆ ತಕ್ಕಂತೆ ತದು ಪಾದಾನೋಪಲಂಭಕತಯಾ=೧) ಆ ದೇಶಕಾಲಾದಿಗಳಿಗೆ ಕಾರಣವಾಗುವಿಕೆಯನ್ನು ಉಂಟುಮಾಡುವುದರ ಮೂಲಕ ೨) ಅವುಗಳ ಸ್ವೀಕಾರ ಮತ್ತು ಆಶ್ರಯವಾಗಿರು ವಿಕೆಯಿಂದ ೩) ಅವುಗಳ ಉಪಾದಾನ ಕಾರಣವಾದ ಪ್ರಕೃತಿಯನ್ನು ಪ್ರವೇಶಿಸಿ ಉದ್ಬೋಧನ (ಪರಿಣಾಮ) ಗೊಳಿಸುವುದರಿಂದ ಅನುಭವತಃ – ಎಲ್ಲವನ್ನೂ ಸಾಕ್ಷಾತ್ಕರಿಸಿಕೊಂಡಿರುವ ಸರ್ವಪ್ರತ್ಯಯ ಸಾಕ್ಷಿಣಃ–ಎಲ್ಲ ಜೀವರ ಜ್ಞಾನಗಳನ್ನೂ ಸಾಕ್ಷಾತ್ತಾಗಿ ನೋಡುವ ಆಕಾಶಶರೀರಸ್ಯ=ಆಕಾಶದಂತೆ ಸೂಕ್ಷ್ಮರೂಪನಾದ ಸಾಕ್ಷಾತ್ ಪರಬ್ರಹ್ಮಣಃ–ನಿತ್ಯಮುಕ್ತನಾದ ಪರಮಾತ್ಮನಃ = ಸರ್ವೋತ್ತಮನಾದ

ಜೀವರಾಶಿಗಳ ಹೃದಯದೊಳಗೆ ಬಿಂಬ ರೂಪದಿಂದಲೂ ಹೊರಗೆ ವ್ಯಾಪ್ತವಾದ ಬ್ರಹ್ಮರೂಪದಿಂದಲೂ ಪ್ರಧಾನ (ಮುಖ್ಯ) ರೂಪದಿಂದಲೂ ದೇಶ-ಕಾಲ-ದೇಹ-ಅವಸ್ಥಾ-ವಿಶೇಷಗಳಿಗೆ ತಕ್ಕಂತೆ ಆ ದೇಶ ಕಾಲಾದಿಗಳನ್ನೇ ಕಾರಣವನ್ನಾಗಿಸಿ ಅವುಗಳ ಕಾರಣವಾದ ಪ್ರಕೃತಿಯನ್ನು ಪ್ರವೇಶಿಸಿ ಪರಿಣಾಮ ಶಕ್ತಿಯನ್ನು ಉದ್ಬೋಧನ ಮಾಡಿ ಎಲ್ಲವನ್ನೂ ಸಾಕ್ಷಾತ್ಕರಿಸಿಕೊಂಡಿರುವೆ. ಎಲ್ಲ ಜೀವರ ಜ್ಞಾನಗಳನ್ನೂ ಸಾಕ್ಷಾತ್ತಾಗಿ ನೋಡುವೆ. ಆಕಾಶದಂತೆ ಸೂಕ್ಷ್ಮ ರೂಪನೂ ನಿತ್ಯ ಮುಕ್ತನೂ ಸರ್ವೋತ್ತಮನೂ ಆದ ನಿನಗೆ ಅಜ್ಞಾನಿಗಳಾದ ನಾವು ಯಾವ ವಸ್ತು ವಿಶೇಷವನ್ನು ತಾನೇ ವಿಜ್ಞಾಪಿಸಿಕೊಳ್ಳಬೇಕು ! ಹಾಗೆ ವಿಜ್ಞಾಪಿಸಿದಲ್ಲಿ ಅದು ಮಹಾ ಪ್ರಕಾಶವುಳ್ಳ ಅಗ್ನಿಗೆ ಅಲ್ಪ ಪ್ರಕಾಶದ ಬೆಂಕಿಯ ಕಿಡಿಗಳೂ ಮಿಣುಕು ಹುಳುಗಳೂ ವಿಜ್ಞಾಪನೆ ಮಾಡಿದಂತೆಯೇ ಸರಿ. ಎಲ್ಲ ಆಪತ್ಪರಿಹಾರಕನೂ ಸರ್ವಜ್ಞನೂ ಆದ ಕಾರಣದಿಂದ ಯಾವ ಇಚ್ಛೆಯಿಟ್ಟುಕೊಂಡು ನಾವು ನಿನ್ನ ಪಾದಕಮಲಗಳನ್ನು

ತವ=ನಿನಗೆ ಹಿರಣ್ಯರೇತಸಃ=ಮಹಾ ಪ್ರಕಾಶವುಳ್ಳ ಅಗ್ನಿಗೆ ವಿಸ್ಫುಲಿಂಗಾದಿಭಿಃ ಇವ=ಅಲ್ಪ ಪ್ರಕಾಶವುಳ್ಳ ಬೆಂಕಿಯ ಕಿಡಿಗಳಿಂದ, ಮಿಣುಕು ಹುಳುಗಳಿಂದ ಹೇಗೋ ಹಾಗೆ ಅಸ್ಮಾಭಿಃ=ಅಜ್ಞಾನಿಗಳಾದ ನಮ್ಮಿಂದ ಇಹ=ಈ ಜಗತ್ತಿನಲ್ಲಿ ಕಿಯಾನ್ ಅರ್ಥ ವಿಶೇಷಃ ವಾ=ಯಾವ ವಸ್ತು ವಿಶೇಷವು ತಾನೇ ವಿಜ್ಞಾಪನೀಯಃ ಸ್ಯಾತ್=ವಿಜ್ಞಾಪನೆ ಮಾಡಿಕೊಳ್ಳಬೇಕಾಗಿರುವುದು? ಯಾವುದೂ ಇಲ್ಲವೆಂದರ್ಥ. ನಮ್ಮ ವಿಜ್ಞಾಪನೆಯಿಲ್ಲದೆಯೇ ನೀನೆಲ್ಲವನ್ನೂ ಬಲ್ಲೆಯೆಂದಭಿಪ್ರಾಯ. 'ಆಕಾಶಶರೀರಂ ಬ್ರಹ್ಮ' ಎಂದು ಶ್ರುತಿಯನ್ನು ತಿಳಿಯಬಹುದು. ಪರಬ್ರಹ್ಮಣಃ ಎಂದು ಹೇಳಿದ್ದರಿಂದ ಸೂಕ್ಷ್ಮವಾದರೂ ಲಿಂಗ ಶರೀರವಲ್ಲವೆಂದೂ, ಸಾಕ್ಷಾತ್ ಎಂಬುದರಿಂದ ಮುಕ್ತ ಜೀವನಲ್ಲವೆಂದೂ, ಪರಮಾತ್ಮನಃ ಎಂಬುದರಿಂದ ಚಿತ್ರಕೃತಿಯಲ್ಲವೆಂದೂ ತಿಳಿಸಿಕೊಟ್ಟಿರುವರು. ಅತ ಏವ=ನಮ್ಮ ಸರ್ವಾಪತ್ತುಗಳನ್ನೂ ಪರಿಹರಿಸುವವನಾದ ಕಾರಣದಿಂದಲೇ ಸರ್ವಜ್ಞನಾದ್ದರಿಂದಲೇ ಯತ್ಕಾಮೇನ=ಯಾವ ವೃತ್ರಾಸುರನ ಸಂಹಾರೇಚ್ಛೆಯಿಂದ ವಯಂ=ನಾವು ಉಪಸಾದಿತಾಃ=ನಿನ್ನ ಪಾದಕಮಲಗಳನ್ನು ಶರಣು ಹೊಂದಿಸಲ್ಪಟ್ಟಿರುವೆವೋ ತತ್=ಆ ನಮ್ಮ ಅಪೇಕ್ಷೆಯನ್ನು ಪರಮ ಗುರೋಃ=ಸರ್ವೋತ್ತಮ ಗುರುವಾದ ಭಗವತಃ=ಸಮಸ್ತ ಐಶ್ವರ್ಯ ಸಂಪನ್ನನಾದ ತವ=ನಿನ್ನ ವಿವಿಧ ವೃಜಿನ=ಅನೇಕ ಬಗೆಯ ದುಷ್ಕರ್ಮಗಳ ಫಲವಾದ ಸಂಸಾರ ಪರಿಶ್ರಮ=ಸಾಂಸಾರಿಕ ದುಃಖಗಳ ಉಪಶಮನೀಂ=ಪರಿಹಾರಕವಾದ ಚರಣಶತ-ಪಲಾಶಚ್ಛಾಯಾಂ=ಪಾದಕಮಲಗಳ ನೆರಳನ್ನು ಉಪಸನ್ನಾನಾಂ='ಅಧೀಹಿ ಭಗವೋ ಬ್ರಹ್ಮ' ಎಂದು ಸಮಿತ್ಪಾಣಿಯಾಗಿ ಶಿಷ್ಯನು ಗುರುಗಳನ್ನು ಶರಣು ಹೊಂದುವಂತೆ ಶರಣು ಹೊಂದಿರುವ ಅಸ್ಮಾಕಂ=ನಮಗೆ ಸ್ವಯಂ=ನಮ್ಮ ಪ್ರಾರ್ಥನೆ ಯಿಲ್ಲದೆ ನೀನೇ ಉಪಕಲ್ಪಯ=ನೆರವೇರಿಸಿಕೊಡು. ||

ಅಥೋ ಈಶ ಜಹಿ ತ್ವಾಷ್ಟ್ರಂ ಗ್ರಸಂತಂ ಭುವನತ್ರಯಮ್ ।
ಗ್ರಸ್ತಾನಿ ಯೇನ ನಃ ಕೃಷ್ಣ ತೇಜಾಂಸ್ಯಸ್ತ್ರಾಯುಧಾನಿ ಚ ॥ ೩೪ ॥

ಬಹು ಪ್ರಾರ್ಥನೆಯಿಂದಲೇ ಸ್ವಾಭೀಷ್ಟ ಫಲ ಪ್ರಾಪ್ತಿಯಾಗುವುದು ಎಂದು ತಿಳಿಸುವುದಕ್ಕಾಗಿ ಮೇಲೆ ಹೇಳಿದಂತೆ ಗದ್ಯದಿಂದ ವಿಜ್ಞಾಪಿಸಿದುದನ್ನೇ ಪದ್ಯ

ಶರಣು ಹೊಂದಿರುವೆವೋ ಆ ವೃತ್ರಾಸುರ ಸಂಹಾರೇಚ್ಛೆಯನ್ನು ನೀನಾಗಿಯೇ ನೆರವೇರಿಸಿಕೊಡು. ಸರ್ವೋತ್ತಮ ಗುರುವೂ ಸಮಸ್ತ ಐಶ್ವರ್ಯ ಸಂಪನ್ನನೂ ಆದ ನಿನ್ನ ಪಾದಕಮಲಗಳ ನೆರಳನ್ನು ನಾವು ಆಶ್ರಯಿಸಿದ್ದೇವೆ. ಅದು ಅನೇಕ ವಿಧ ದುಷ್ಕರ್ಮಗಳ ಫಲವಾದ ಸಾಂಸಾರಿಕ ದುಃಖವನ್ನು ಪರಿಹರಿಸುವುದು. ಹೇ ಈಶ, ಕೃಷ್ಣ, ಈ ವೃತ್ರಾಸುರನಿಂದ ನಮ್ಮ ಸಾಮರ್ಥ್ಯ, ಅಸ್ತ್ರ ಮತ್ತು ಆಯುಧಗಳು ಗ್ರಸ್ತವಾಗಿರುವುವು. ಮೂರು ಲೋಕಗಳನ್ನೂ ನುಂಗುವ ಈ ವೃತ್ರಾಸುರನನ್ನು ಕೊಲ್ಲು. ಹಂಸದಂತೆ ಸಾರಗ್ರಾಹಿಯೂ ಶತ್ರು ಸಂಹಾರಕನೂ ಹೃದಯಾಕಾಶ

ಪ್ರಬಂಧದಿಂದ ವಿಜ್ಞಾಪಿಸುತ್ತಾರೆ. ಹೇ ಈಶ=ಎಲ್ಲೈ ನಿಯಾಮಕನೇ, ಕೃಷ್ಣ=ಎಲ್ಲರ ಸಾಮರ್ಥ್ಯವನ್ನೂ ಸೆಳೆದುಕೊಳ್ಳುವವನೇ ಯೇನ=ಯಾವ ವೃತ್ರಾಸುರನಿಂದ ನಃ=ನಮ್ಮ ತೇಜಾಂಸಿ=ಸಾಮರ್ಥ್ಯರೂಪವಾದ ತೇಜಸ್ಸೂ ಚ=ಮತ್ತು ಅಸ್ತ್ರಾಯುಧಾನಿ=ಅಸ್ತ್ರಗಳೂ ಆಯುಧಗಳೂ ಗ್ರಸ್ತಾನಿ=ಕುಂದಿಸಲ್ಪಟ್ಟವೋ (ತಂ)=ಆ ಭುವನತ್ರಯಂ=ಮೂರು ಲೋಕಗಳನ್ನೂ ಗ್ರಸಂತಂ=ನುಂಗುತ್ತಿರುವ ತ್ವಾಷ್ಟ್ರಂ=ವೃತ್ರಾಸುರನನ್ನು ಜಹಿ=ಕೊಲ್ಲು. || ೩೪ ||

ಹಂಸಾಯ ದಭ್ರನಿಲಯಾಯ ನಿರೀಕ್ಷಕಾಯ
ಕೃಷ್ಣಾಯ ಮೃಷ್ಟಯಶಸೇ ನಿರುಪಕ್ರಮಾಯ ।
ಸತ್ಸಂಗ್ರಹಾಯ ಭವಪಾಂಥನಿಜಾಶ್ರಯಾಯ
ಶಶ್ವದ್ವರಿಷ್ಠಗತಯೇ ಹರಯೇ ನಮಸ್ತೇ || ೩೫ ||

ಶತ್ರುವಧೆಯು ಜಾಗ್ರತೆಯಾಗಿ ಆಗಲೆಂದು ಮತ್ತೊಮ್ಮೆ ನಮಸ್ಕರಿಸುತ್ತಾರೆ. ಹಂಸಾಯ=(೧) ಹಂಸದಂತೆ ಸಾರಗ್ರಾಹಿಯಾದ (೨) ಶತ್ರುಸಂಹಾರಕನಾದ ದಭ್ರನಿಲಯಾಯ=ಹೃದಯಾಕಾಶದಲ್ಲಿ ನಿವಾಸಿಸುವ ನಿರೀಕ್ಷಕಾಯ=ಚೇತನರ ಕರ್ಮಸಾಕ್ಷಿಯಾದ ಕೃಷ್ಣಾಯ=(೧) ಸಂತತ ಪೂರ್ಣಾನಂದನಾದ (೨) ಪೂರ್ಣ ಬಲಪ್ರಾಣನಾದ ಮೃಷ್ಟಯಶಸೇ=ಶುದ್ಧವಾದ ಕೀರ್ತಿಯುಳ್ಳ ನಿರುಪಕ್ರಮಾಯ=ಶ್ರಮವನ್ನುಂಟುಮಾಡುವ ಪ್ರಯತ್ನವಿಲ್ಲದೆಯೇ ಜಗತ್ಕರ್ತನಾದ ಸತ್ಸಂಗ್ರಹಾಯ-(೧) ಸಜ್ಜನರ ಸಂಗ್ರಹವುಳ್ಳ (೨) ಸಜ್ಜನರಿಂದ ಸಂಗ್ರಾಹ್ಯನಾದ ಭವಪಾಂಥ-ನಿಜಾಶ್ರಯಾಯ=ಸಂಸಾರಮಾರ್ಗದಲ್ಲಿರುವ ಪಥಿಕರಿಗೆ(ಸಾಧಕರಿಗೆ) ಯಾವಾಗಲೂ ಆಶ್ರಯನಾದ ಶಶ್ವತ್=ಏಕಪ್ರಕಾರವಾದ ವರಿಷ್ಠಗತಯೇ=ಧರ್ಮಾ(ಸ್ವರ್ಗಾ)ದಿಗಳಿಗಿಂತ ಉತ್ತಮವಾದ ಮೋಕ್ಷವೆಂಬ ಗತಿಯನ್ನು ಕೊಡುವ ಹರಯೇ=ಆಪತ್ಪರಿಹರಣ ಸ್ವಭಾವವುಳ್ಳ ತೇ=ನಿನಗೆ ನಮಃ=ನಮಸ್ಕಾರ. 'ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್' ಎಂಬ ಶ್ರುತಿಯಂತೆ ಶ್ರೀಹರಿಯು ಹೃದಯಾಕಾಶವಾಸಿಯು. 'ಕೃಷಿರ್ಭೂವಾಚಕಃ ಶಬ್ದಃ ಣಶ್ಚ ನಿರ್ವೃತಿವಾಚಕಃ' ಎಂಬ ವಚನ ಕೃಷ್ಣಶಬ್ದಾರ್ಥವನ್ನು ತಿಳಿಸುವುದು. 'ನಿರುಪಕ್ರಮೋ ಹರಿಃ ನಿತ್ಯಂ ಅಪ್ರಯತ್ನೋ ಹ್ಯುಪಕ್ರಮೇತ್' ಎಂಬ ಪ್ರಮಾಣವು ಮೇಲೆ ಹೇಳಿದ ಅರ್ಥವೇ 'ನಿರುಪಕ್ರಮ' ಶಬ್ದಕ್ಕೆ ಸರಿಯಾದ ಅರ್ಥವೆಂದು ಸ್ಪಷ್ಟಪಡಿಸುವುದು. ಮೋಕ್ಷವು

ನಿವಾಸಿಯೂ ಕರ್ಮಸಾಕ್ಷಿಯೂ ಪೂರ್ಣಾನಂದನೂ ಪೂರ್ಣಬಲಪ್ರಾಣನೂ ನಿರ್ದೋಷಕೀರ್ತಿವಂತನೂ ಶ್ರಮಜನಕ ಪ್ರಯತ್ನವಿಲ್ಲದೆ ಜಗತ್ಕರ್ತನೂ ಸಜ್ಜನ ಸಂಗ್ರಾಹ್ಯನೂ ಸಂಸಾರದಲ್ಲಿ ಸಿಕ್ಕಿಕೊಂಡಿರುವ ಮುಕ್ತಿದಾರಿಹೋಕರಿಗೆ ಆಶ್ರಯನೂ ಏಕಪ್ರಕಾರನೂ ಅತ್ಯುತ್ತಮ ಮೋಕ್ಷಗತಿದಾತನೂ ಆಪತ್ಪರಿಹರಣಶೀಲನೂ ಆದ ನಿನಗೆ ನಮಸ್ಕಾರ! ಎಂದು ಸ್ತುತಿಸಿದರು.

ಮತ್ತೆ ಸಂಸಾರಕ್ಕೆ ಬರಬೇಕಾಗಿಲ್ಲವಾದ್ದರಿಂದ ಏಕಪ್ರಕಾರವೆಂದೂ ಸ್ವರ್ಗಾದಿಗಳಂತೆ ನಶ್ವರವಲ್ಲವಾದ್ದರಿಂದ ಅವುಗಳಿಗಿಂತ ಉತ್ತಮವೆಂದೂ ಉಕ್ತವಾಗಿರುವುದು. ಹರಿ ಶಬ್ದದಿಂದ ಆರ್ತಿಯನ್ನು ಪರಿಹರಿಸುವುದು ಅವನ ಸ್ವಭಾವವೆಂದು ತಿಳಿಸಿರುವರು. || ೩೫ ||

ಶ್ರೀಶುಕ ಉವಾಚ—

ಅಥೈವಮೀಡಿತೋ ರಾಜನ್ ಸಾದರಂ ತ್ರಿದಶೈರ್ಹರಿಃ
ಸ್ವಮುಪಸ್ಥಾನಮಾಕರ್ಣ್ಯ ಪ್ರಾಹ ತಾನಭಿನಂದಿತಃ || ೩೬ ||

ಪರೀಕ್ಷಿದ್ರಾಜನೇ, ಅಥ=ಅನಂತರ ತ್ರಿದಶೈಃ=ದೇವತೆಗಳಿಂದ ಸಾದರಂ= ಪ್ರೀತಿಪೂರ್ವಕವಾಗಿ ಏವಂ=ಮೇಲೆ ಹೇಳಿದಂತೆ ಈಡಿತಃ=ಸ್ತೋತ್ರ ಮಾಡಿಸಿ ಕೊಂಡ ಹರಿಯು ಸ್ವಂ ಉಪಸ್ಥಾನಂ=ತನ್ನ ಸ್ತೋತ್ರವನ್ನು ಆಕರ್ಣ್ಯ=ಕೇಳಿ ಅಭಿನಂದಿತಃ(ಸನ್)=ಸಂತುಷ್ಟನಾಗಿ ತಾನ್=ಆ ದೇವತೆಗಳನ್ನು ಕುರಿತು ಪ್ರಾಹ= ಅವರ ಕಾರ್ಯಸಾಧಕ ಮಾತುಗಳನ್ನು ಹೇಳಿದನು. || ೩೬ ||

ಶ್ರೀಭಗವಾನುವಾಚ—

ಪ್ರೀತೋಽಹಂ ವಃ ಸುರಶ್ರೇಷ್ಠಾ ಮದುಪಸ್ಥಾನವಿದ್ಯಯಾ |
ಆತ್ಮೈಶ್ವರ್ಯಸ್ಮೃತಿಃ ಪುಂಸಾಂ ಭಕ್ತಿಶ್ಚೈವ ಯಯಾ ಮಯಿ ||೩೭||

ಹೇ ಸುರಶ್ರೇಷ್ಠಾಃ=ದೇವಶ್ರೇಷ್ಠರೇ ಯಯಾ=ಯಾವ ಈ ನನ್ನ ಸ್ತೋತ್ರ ವೆಂಬ ವಿದ್ಯೆಯಿಂದ ಪುಂಸಾಂ=ಅಧಿಕಾರಿ ಜೀವರಿಗೆ ಆತ್ಮೈಶ್ವರ್ಯ ಸ್ಮೃತಿಃ= ಸ್ವಾಮಿಯಾದ ಶ್ರೀಹರಿಯು ಎಷ್ಟು ಮಹಿಮಾವಂತನೆಂಬ ಸ್ಮರಣೆಯೂ ಮಯಿ= ನನ್ನಲ್ಲಿ ಏವ = ಮಾತ್ರವೇ ಭಕ್ತಿಶ್ಚ = ನಿರತಿಶಯವಾದ ಭಕ್ತಿಯೂ (ಭವತಿ)= ಆಗುವುದೋ (ತಯಾ)=ಅಂತಹ ವಃ=ನೀವು ಮಾಡಿದ ಮದುಪಸ್ಥಾನವಿದ್ಯಯಾ= ನನ್ನ ಸ್ತೋತ್ರರೂಪವಾದ ಈ ವಿದ್ಯೆಯಿಂದ ವಃ=ನಿಮಗೆ ಅಹಂ=ನಾನು ಪ್ರೀತಃ= ಸುಪ್ರೀತನಾಗಿರುವೆನು. || ೩೭ ||

ಕಿಂ ದುರಾಪಂ ಮಯಿ ಪ್ರಾಪ್ತೇ ತಥಾಪಿ ವಿಬುಧರ್ಷಭಾಃ |
ಮಯ್ಯೇಕಾಂತಮತಿರ್ನಾನ್ಯನ್ಮತ್ತೋ ವಾಂಛತಿ ತತ್ತ್ವವಿತ್ ||೩೮||

ಶುಕಾಚಾರ್ಯರು—ಹೀಗೆ ದೇವತೆಗಳಿಂದ ಭಕ್ತಿಪೂರ್ವಕ ಸ್ತೋತ್ರ ಮಾಡಿಸಿ ಕೊಂಡ ಶ್ರೀಹರಿಯು ತನ್ನ ಸ್ತೋತ್ರವನ್ನು ಕೇಳಿ ಸಂತುಷ್ಟನಾಗಿ ಅವರನ್ನು ಕುರಿತು ದೇವಶ್ರೇಷ್ಠರೇ, ಈ ನಿಮ್ಮ ಸ್ತೋತ್ರವಿದ್ಯೆಯಿಂದ ನಿಮ್ಮ ವಿಷಯದಲ್ಲಿ ನಾನು ಸುಪ್ರೀತನಾಗಿದ್ದೇನೆ. ಈ ಸ್ತೋತ್ರದಿಂದ ಅಧಿಕಾರಿ ಚೇತನರಿಗೆ ನನ್ನ ಮಹಿಮಾಸ್ಮರಣೆಯೂ ನನ್ನಲ್ಲಿಯೇ ನಿರತಿಶಯವಾದ ಭಕ್ತಿಯೂ ಉಂಟಾಗುವುದು. ನಾನು ಸಿಕ್ಕಿದ ಮೇಲೆ ಹೊಂದಲಸಾಧ್ಯವಾದುದು ಯಾವುದೂ ಇಲ್ಲ. ಆದರೂ

ಹೇ ವಿಬುಧರ್ಷಭಾಃ=ಸುರಶ್ರೇಷ್ಠರೇ, ಮಯಿ=ನಾನು ಪ್ರಾಪ್ತೇ (ಸತಿ)= ಕಣ್ಣಿಗೆ ಕಾಣಿಸಿಕೊಂಡವನಾದ್ದೇ ಆದರೆ ಕಿಂ = ಏನು ಫಲವು ತಾನೇ ದುರಾಪಂ = ಹೊಂದಲು ಅಸಾಧ್ಯವು. ತಥಾಪಿ = ಹೀಗೆ ಫಲವನ್ನು ಹೊಂದಲು ಕಷ್ಟವಿಲ್ಲ ದಿದ್ದರೂ ತತ್ತ್ವವಿತ್ = ತತ್ತ್ವಜ್ಞಾನಿಯಾದ ಮಯಿ ಏಕಾಂತಮತಿಃ = ನನ್ನಲ್ಲಿ ಏಕಾಂತವಾದ ಭಕ್ತಿಯುಳ್ಳ ಉತ್ತಮಾಧಿಕಾರಿಯಾದ ಭಕ್ತನು ಅನ್ಯತ್–ಜ್ಞಾನ ಪ್ರಸಾದಗಳಿಗಿಂತ ಬೇರೆ ಫಲವನ್ನು ಮತ್ತಃ–ನನ್ನಿಂದ ನ ವಾಂಛತಿ=ಅಪೇಕ್ಷಿಸುವು ದಿಲ್ಲ. ಹೀಗೆ ಶ್ರೀಹರಿಯು ಹೇಳಿದ್ದರಿಂದ ಇಂತಹ ಭಕ್ತನೇ ಮುಕ್ತಿಯೋಗ್ಯರಲ್ಲಿ ಅಧಿಕಸುಖವನ್ನು ಹೊಂದುವ ಯೋಗ್ಯತೆಯುಳ್ಳವನೆಂದು ತಿಳಿದು ಬರುವುದು. ತತ್ತ್ವವೇತ್ತನಾದ್ದರಿಂದಲೇ ಜ್ಞಾನಪ್ರಸಾದಗಳಿಗಿಂತ ಬೇರೆ ಫಲವನ್ನು ಅಪೇಕ್ಷಿಸುವು ದಿಲ್ಲವೆಂದು ಕಾರಣವನ್ನು ತಿಳಿಸಿರುವರು. || ೩೮ ||

ನ ವೇದ ಕೃಪಣಃ ಶ್ರೇಯ ಆತ್ಮನೋ ಗುಣವಸ್ತುದೃಕ್ ।
ತಸ್ಯ ತಾನಿಚ್ಛತೋ ಯಚ್ಛೇ ಯದಿ ಸೋಽಪಿ ತಥಾವಿಧಃ ॥ ೩೯ ॥

ತತ್ತ್ವವೇತ್ತನು ಹಾಗೇ ಮಾಡಲಿ. ಬೇರೆ ಫಲಾಪೇಕ್ಷೆಯುಳ್ಳವನಿಗೆ ಏನು ಫಲವಾಗುವುದು? ಎಂದರೆ ಹೇಳುತ್ತಾರೆ. ಗುಣವಸ್ತುದೃಕ್=ಸ್ವರ್ಗಾದಿಫಲಗಳೂ ಶಬ್ದಾದಿ ಪ್ರಾಕೃತ ವಿಷಯಗಳೂ ಅಪ್ರತಿಹತಗಳು ಅಂದರೆ ನಿತ್ಯಗಳೆಂದು ತಿಳಿದ ಆದ್ದರಿಂದಲೇ ಕೃಪಣಃ=ಶ್ರೀಹರಿಯ ಪ್ರೀತಿಗಿಂತ ಬೇರೆ ಫಲಗಳನ್ನು ಅಪೇಕ್ಷಿಸುವ ಮಧ್ಯಮಾಧಮ ಅಧಿಕಾರಿಗಳ ಗುಂಪಿಗೆ ಸೇರಿದ ಸಾಮಾನ್ಯ ಭಕ್ತನು ಆತ್ಮನಃ= ತನ್ನ ಶ್ರೇಯಃ=ಮೋಕ್ಷವನ್ನು ನ ವೇದ=ತಿಳಿದಿಲ್ಲವು. ಸಃ ಅಪಿ=ಹೀಗೆ ಬೇರೆ ಫಲವನ್ನು ಅಪೇಕ್ಷಿಸುವವನೂ ತಥಾವಿಧಃ ಯದಿ=ನಶ್ವರ ಫಲವನ್ನು ಹೊಂದಲು ಯೋಗ್ಯನಾಗಿ ಉತ್ತಮಾಧಿಕಾರಿಯಲ್ಲದೆ ಇದ್ದಲ್ಲಿ ತಾನ್ = ಐಹಿಕ ಫಲಗಳನ್ನು ಇಚ್ಛತಃ = ಅಪೇಕ್ಷಿಸುವ ತಸ್ಯ=ಆ ಅನುತ್ತಮಾಧಿಕಾರಿಗೆ (ಅಹಂ)=ಅವನಿಂದ ತದರ್ಥವಾಗಿ ಸೇವೆ ಮಾಡಿಸಿಕೊಂಡ ನಾನು ತಾನ್ = ಆ ಐಹಿಕ ಫಲಗಳನ್ನೇ ಯಚ್ಛೇ–ಕೊಡುವೆನು. ವೇದೋಕ್ತ ಕರ್ಮಾನುಷ್ಠಾನಪರನಾಗಿ ಉತ್ತಮಾಧಿಕಾರಿ ಯಲ್ಲದವನಿಗೇ ಸ್ವರ್ಗಾದಿ ಕಾಮನೆಯನ್ನು ಕೊಟ್ಟು ಆ ಫಲಗಳನ್ನು ಅನುಗ್ರಹಿಸುವೆ ನೆಂಬ ವಿಶೇಷವನ್ನು ಅಭಿಪ್ರಾಯಪಡುತ್ತಾ ಶ್ರೀಮದಾಚಾರ್ಯರು 'ಉತ್ತಮೋ ನ ಭವತಿ ಚೇತ್' ಎಂದು ವಿವರಿಸಿರುವರು. ತತ್ತ್ವವಿತ್, ಕೃಪಣರ ಲಕ್ಷಣಗಳನ್ನು ಈ ವಚನಗಳಿಂದ ತಿಳಿಯಬಹುದು. 'ವಿಷ್ಣ್ವನಾರ್ಥೇಷ್ವೀರಿತಾನಿ ಮನ ಆದೀನಿ

ಏಕಾಂತ ಭಕ್ತನು ನನ್ನ ಜ್ಞಾನ ನನ್ನ ಪ್ರಸಾದಗಳನ್ನು ಬಿಟ್ಟು ಬೇರಾವುದನ್ನೂ ನನ್ನಿಂದ ಅಪೇಕ್ಷಿಸುವುದಿಲ್ಲ. ಅವನೇ ತತ್ತ್ವಜ್ಞಾನಿ. ಸ್ವರ್ಗ ವೊದಲಾದ ನಶ್ವರ ಫಲಗಳನ್ನೂ ಶಬ್ದ ಮೊದಲಾದ ವಿಷಯಗಳನ್ನೂ ಶಾಶ್ವತಗಳೆಂದು ತಿಳಿದ ಆದ್ದ ರಿಂದಲೇ ಇತರ ಫಲಗಳನ್ನು ಅಪೇಕ್ಷಿಸುವ ಸಾಮಾನ್ಯ ಭಕ್ತನು ತನ್ನ ಶ್ರೇಯಸ್ಸನ್ನು

ಸರ್ವಶಃ | ವರ್ತಂತೇಽನ್ಯೋ ನ ಸ್ವತಂತ್ರ ಇತಿ ಜಾನನ್ ಹಿ ತತ್ತ್ವವಿತ್||' (ಮನ ಮೊದಲಾದ ಎಲ್ಲ ಇಂದ್ರಿಯಗಳೂ ಶ್ರೀಹರಿಯಿಂದ ಪ್ರೇರಿತಗಳಾಗಿ ವಿಷಯಗಳಲ್ಲಿ ತೊಡಗುವುವು. ಆದ್ದರಿಂದ ಶ್ರೀಹರಿಗಿಂತ ಅನ್ಯನು ಸ್ವತಂತ್ರನಲ್ಲ ಎಂದು ತಿಳಿದವನೇ ತತ್ವಜ್ಞಾನಿ.) 'ವಿಷಯೇಷ್ವದೋಷಬುದ್ಧಿಃ ಸನ್ ಇಂದ್ರಿಯಾಣಾಂ ವಶೇ ಸ್ಥಿತಃ | ಕೃಪಣಃ ಸ ತು ಸಂಪ್ರೋಕ್ತಃ' (ವಿಷಯಗಳು ನಶ್ವರಗಳೆಂಬ ದೋಷಬುದ್ಧಿ ಇಲ್ಲದವನಾಗಿ ಇಂದ್ರಿಯಗಳ ವಶದಲ್ಲಿ ಇರುವವನು (ಇಂದ್ರಿಯ ನಿಗ್ರಹವಿಲ್ಲದವನು ಕೃಪಣನು ಎನ್ನಿಸಿಕೊಳ್ಳುವನು). ಯಚ್ಛೇತ್ ಎಂಬ ಪಾಠದಲ್ಲಿ ಮೇಲಿನ ಶ್ಲೋಕಕ್ಕೆ ಹೀಗೆ ಅರ್ಥ. ನಿನ್ನ ಭಕ್ತನಲ್ಲದವನು ಹೇಗೆ ಎಂದರೆ ಹೇಳುತ್ತಾರೆ. ಗುಣವಸ್ತುದೃಕ್=ತ್ರಿಗುಣಗಳಿಂದ ಹುಟ್ಟಿದ ದೇಹಾದಿಗಳನ್ನೇ ನಿತ್ಯವೆಂದು ತಿಳಿದ ಕೃಪಣಃ=ಮೂಢನು ಮೋಕ್ಷವನ್ನು ಅರಿಯನು. ಅಷ್ಟೇ ಅಲ್ಲ. ಅದನ್ನು ಬಿಟ್ಟು ಬೇರೆ ಫಲಗಳನ್ನೇ ಅಪೇಕ್ಷಿಸುವನು. ತಸ್ಯ=ಅಂತಹ ಸೇವಕನಿಗೆ ಸಃ ಅಪಿ=ಸೇವ್ಯನಾದವನೂ ತಥಾವಿಧಃ ಯದಿ=ಅತ್ಯುತ್ತಮನಲ್ಲದೆ ಹೋದಲ್ಲಿ ತಾನ್=ಆ ಅಪೇಕ್ಷೆಗಳನ್ನೇ ಯಚ್ಛೇತ್=ನನ್ನಿಂದ ಪ್ರೇರಿತನಾಗಿ ಕೊಡುವನು. ಯದಿ ಇತ್ಯಾದಿ ಹೇಳಿದ್ದರಿಂದ ನಿನ್ನನ್ನು ಸೇವಿಸುವವನಿಗೆ ಆ ಬಗೆಯ ಮೋಕ್ಷ ವಿರೋಧಿ ಫಲವನ್ನು ಕೊಡುವುದು ನಿನಗೆ ಯುಕ್ತವೇ? ಎಂಬ ಪ್ರಶ್ನೆಗೂ ಉತ್ತರ ಕೊಟ್ಟಂತಾಯಿತು. || ೩೯ ||

ಸ್ವಯಂ ನಿಃಶ್ರೇಯಸಂ ವಿದ್ವಾನ್ನ ವಕ್ತ್ಯಜ್ಞಾಯ ಕರ್ಮಭಿಃ |
ನ ರಾತಿ ರೋಗಿಣೋಽಪಥ್ಯಂ ವಾಂಛತೋಽಪಿ ಭಿಷಕ್ತಮಃ || ೪೦ ||

ಹಾಗೆ ಕೊಡುವವನು ಅತ್ಯುತ್ತಮನೇಕಲ್ಲವೆಂದರೆ ಅತ್ಯುತ್ತಮನು ಹೇಗಿರುತ್ತಾನೆ ಎಂಬುದನ್ನು ಉದಾಹರಣೆಯಿಂದ ತಿಳಿಸುತ್ತಾರೆ. (೧) ವಿದ್ವಾನ್=ಅವರವರಿಗೆ ಯೋಗ್ಯವಾದ ಮುಕ್ತಿವಿಶೇಷವನ್ನು ತಿಳಿದಿರುವ ಅತ್ಯುತ್ತಮನು ಸ್ವಯಂ ಅಜ್ಞಾಯ= ಅಜ್ಞಾನಿಯಾದ ಮುಕ್ತಿಯೋಗ್ಯನಿಗೆ ಕರ್ಮಭಿಃ=ಕರ್ಮದಿಂದ ನಿಃಶ್ರೇಯಸಂ= ಮೋಕ್ಷವಾಗುವುದೆಂದು ನ ವಕ್ತಿ=ಉಪದೇಶಿಸುವುದಿಲ್ಲ. ಮತ್ತೇನೆಂದರೆ 'ತಮೇವಂ ವಿದ್ವಾನಮೃತ ಇಹ ಭವತಿ' ಎಂಬ ಶ್ರುತಿಯನ್ನು ಅನುಸರಿಸಿ ಜ್ಞಾನದಿಂದಲೇ ಮೋಕ್ಷವೆಂದೇ ಉಪದೇಶಿಸುತ್ತಾನೆ. ಇದಕ್ಕೆ ಉದಾಹರಣೆ: ಭಿಷಕ್ತಮಃ=ಉತ್ತಮನಾದ ವೈದ್ಯನು ವಾಂಛತಃ ಅಪಿ=ದೇಹಾರೋಗ್ಯಕ್ಕೆ ಅನುಕೂಲವಲ್ಲದ ನೀರು ಮುಂತಾದುವನ್ನು ಅಪೇಕ್ಷಿಸುತ್ತಿದ್ದರೂ ರೋಗಿಣಃ=ಜ್ವರಾದಿಗಳಿಂದ ಆರ್ತನಾದ ರೋಗಿಗೆ ಅಪಥ್ಯಂ=ಹಿತಕರವಲ್ಲದ ಆ ಪದಾರ್ಥಗಳನ್ನು ನ ರಾತಿ=ಕೊಡುವುದಿಲ್ಲ.

ತಿಳಿದಿರುವುದಿಲ್ಲ. ಅವನು ಆ ನಶ್ವರ ಫಲಗಳನ್ನು ಹೊಂದಲು ಯೋಗ್ಯನಾಗಿದ್ದಲ್ಲಿ ಅವುಗಳಿಗಾಗಿ ಅವನಿಂದ ಸೇವೆ ಮಾಡಿಸಿಕೊಂಡ ನಾನು ಅವನಿಗೆ ಅವುಗಳನ್ನೇ ಕೊಡುತ್ತೇನೆ. (ಇವುಗಳಿಗಾಗಿ ನನ್ನ ಭಕ್ತನನ್ನೇ ಸೇವಿಸಿದರೂ ಅವನೂ

ಆದ್ದರಿಂದ ಮೋಕ್ಷಕ್ಕೆ ಪ್ರತಿಬಂಧಕವಾದುದನ್ನು ಕೊಡುವವನು ಅತ್ಯುತ್ತಮನಲ್ಲ ವೆಂದು ಅಭಿಪ್ರಾಯ. (೨) ಕೃಪಣನು ಕರ್ಮದಿಂದ ಮೋಕ್ಷಸಿದ್ಧಿಯನ್ನು ಅಪೇಕ್ಷಿ ಸುವನಾದ್ದರಿಂದ ಅತ್ಯುತ್ತಮಾಧಿಕಾರಿಯಲ್ಲವೆಂದು ಅಭಿಪ್ರಾಯಪಟ್ಟಿರಲ್ಲವೇ? ಇದನ್ನು ಹೇಗೆ ಹೇಳುತ್ತೀರಿ? 'ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತು-ಮರ್ಹಸಿ' ಇತರರು ಮಾಡಲೆಂದಾದರೂ ಕರ್ಮವನ್ನು ನೀನು ಮಾಡಬೇಕು) 'ಯದಿ ಹ್ಯಹಂ ನ ವರ್ತೇಯಂ ಜಾತುಕರ್ಮಣ್ಯತಂದ್ರಿತಃ' (ಆಲಸ್ಯರಹಿತನಾಗಿ ನಾನು ಕರ್ಮಮಾಡದೆ ಹೋದಲ್ಲಿ ಜನರೂ ನನ್ನ ದಾರಿಯನ್ನೇ ಹಿಡಿಯುವರು) ಇತ್ಯಾದಿ ವಾಕ್ಯಗಳಲ್ಲಿ ಭಗವಂತನೇ ಕರ್ಮವನ್ನು ವಿಧಿಸಿರುವನಲ್ಲವೆ! ಎಂದು ಶಂಕಿಸಿದರೆ ಉತ್ತರ ಕೊಡುತ್ತಾರೆ. ವಿದ್ವಾನ್=ನನ್ನಂತಹ ಜ್ಞಾನಿಯು ಸ್ವಯಂ ಕರ್ಮಭಿಃ=ಕೇವಲ ಕರ್ಮಗಳಿಂದಲೇ ಅಜ್ಞಾಯ=ಅಜ್ಞಾನಿಗೆ ನಿಃಶ್ರೇಯಸಂ= ಮೋಕ್ಷವನ್ನು ನ ವಕ್ತಿ=ಹೇಳುವುದಿಲ್ಲ. ಮತ್ತೇನೆಂದರೆ, ಕರ್ಮಾಚರಣೆಯಿಂದ ಶುದ್ಧಾಂತಃಕರಣನಾದವನಿಗೆ ಜ್ಞಾನದ ಮೂಲಕ ಮೋಕ್ಷವೆಂದು ಉಪದೇಶಿಸುವನು. ಹೇಗೆಂದರೆ— ವೈದ್ಯರಲ್ಲಿ ಉತ್ತಮನಾದವನು ಕೇವಲ ಔಷಧವನ್ನೇ ಅಲ್ಲ. ರೋಗಿಯು ಅಪೇಕ್ಷಿಸಿದರೂ ಅಪಥ್ಯವನ್ನು ಮಾಡೆಂದು ಹೇಳುವುದಿಲ್ಲ. ಪಥ್ಯದ ಪ್ರಭಾವದಿಂದ ರೋಗವನ್ನು ತಡೆದವನಿಗೆ ಔಷಧದ ಮೂಲಕ ಆರೋಗ್ಯವನ್ನು ತಂದುಕೊಡುವನು. ಅದರಂತೆ ಎಂದರ್ಥ. (೩) ವಿದ್ವಾನ್ ಎಂಬುದನ್ನು ಆವೃತ್ತಿ ಮಾಡಿಕೊಳ್ಳಬೇಕು. ವಿದ್ವಾನ್=ಜ್ಞಾನಿಯು ಸ್ವಯಂ ನಿಃಶ್ರೇಯಸಂ ವಿದ್ವಾನಪಿ= ತಾನು ಮೋಕ್ಷಸಾಧನೆಯೇನೆಂದು ತಿಳಿದವನಾದರೂ ಕರ್ಮಭಿಃ (ಈಹಮಾನಾಯ) =ಕರ್ಮಗಳಿಂದ ಮೋಕ್ಷವಾಗುತ್ತದೆ ಎಂದು ಅಪೇಕ್ಷಿಸುವ ಅಜ್ಞಾಯ=ಅಜ್ಞಾನಿಗೆ ನ ವಕ್ತಿ=ಬುದ್ಧಿಭೇದವನ್ನುಂಟುಮಾಡಿ ಜ್ಞಾನವೇ ಸಾಧನವೆಂದು ಉಪದೇಶಿಸು ವುದಿಲ್ಲ. ಮತ್ತೇನೆಂದರೆ, ತಾನೂ ಕರ್ಮಮಾಡಿ ಅವನಂತೆಯೇ ತೋರಿಸುವನು. 'ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ ಜೋಷಯೇತ್ಸರ್ವ ಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್ ||' ಎಂಬ ವಚನದಂತೆ ಈ ಅರ್ಥ. ವಿ.ಅ. 'ಯದಿ ಸೋಽಪಿ ತಥಾವಿಧಃ' ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದರಿಂದ ಉತ್ತಮಾನುತ್ತಮಾಧಿಕಾರಿಗಳಲ್ಲಿ ಅನುತ್ತಮಾಧಿಕಾರಿಗೆ ಮಾತ್ರ ಎಂದರೆ ಕೇವಲ ಫಲಾಪೇಕ್ಷಿಗೆ ಮಾತ್ರ ಅಂತಹ ಅಂದರೆ ನನಗೆ ಅಪ್ರಿಯವಾದ ಫಲವನ್ನು ಕೊಡು ತ್ತೇನೆ. ಸಮಗ್ರ ಫಲಸ್ವೀಕಾರಯೋಗ್ಯನಾದ ಉತ್ತಮಾಧಿಕಾರಿಗೆ ಅವನು ಅಪೇಕ್ಷಿ ಸಿದರೂ ನನಗೆ ಅಪ್ರಿಯವಾದುದನ್ನು ಕೊಡುವುದಿಲ್ಲವೆಂದು ನಿಯಮಮಾಡಿದಂತಾ

ಅತ್ಯುತ್ತಮಾಧಿಕಾರಿಯಲ್ಲದಿದ್ದಲ್ಲಿ ನನ್ನಿಂದ ಪ್ರೇರಿತನಾಗಿ ಆ ಸಾಮಾನ್ಯ ಭಕ್ತನಿಗೆ ಆ ಫಲಗಳನ್ನೇ ಕೊಡುವನು). ಜ್ಞಾನಿಯಾದ ಅತ್ಯುತ್ತಮಾಧಿಕಾರಿಯು ಅಜ್ಞಾನಿಗೆ ಕೇವಲ ಕರ್ಮದಿಂದ ಮೋಕ್ಷವಾಗುವುದೆಂದು ಉಪದೇಶಿಸುವುದಿಲ್ಲ. ಉತ್ತಮ

ಯಿತು. ಹಾಗಾದರೆ ಕೆಲವು ವೇಳೆ ಉತ್ತಮಾಧಿಕಾರಿಗೂ ನಿನಗೆ ಅಪ್ರಿಯವಾದ ಫಲವನ್ನು ಕೊಟ್ಟಿರುವೆಯಲ್ಲಾ ಎಂದರೆ ಅವನು ನಿಮ್ಮ ಭಕ್ತ. ಅವನಿಗೆ ಫಲ ಕೊಡುವುದು ನಿಮಗೆ ಇಷ್ಟವಾದ್ದರಿಂದ ಮತ್ತು ನಿಮ್ಮ ಇಷ್ಟವೇ ನನಗೆ ಪ್ರಿಯವಾದ್ದರಿಂದ ಕೊಟ್ಟಿರುವೆನೇ ಹೊರತು ನೀವು ಇಷ್ಟಪಡದಿದ್ದಲ್ಲಿ ಆ ಫಲವನ್ನು ನಾನು ಸರ್ವಥಾ ಕೊಡುವುದಿಲ್ಲ. ನೀವಾದರೋ ಯಾವಾಗಲೂ ನನ್ನ ಪ್ರಿಯವನ್ನೇ ಅಪೇಕ್ಷಿಸುವವರು. ಈ ಅಭಿಪ್ರಾಯವನ್ನೇ ಶ್ರೀಮದಾಚಾರ್ಯರು 'ಯುಷ್ಮತ್ಕಾಮೋ ಮತ್ಪ್ರಿಯ ಏವ | ಅನ್ಯಥಾ ನ ದದ್ಯಾಂ' ಎಂಬ ತಾತ್ಪರ್ಯವಾಕ್ಯದಿಂದ ಹೇಳಿರುವರು. 'ವಿಷ್ಣೋಃ ಪ್ರಿಯಂ ಕಾಮಯಂತಿ ದೇವಾ ನೈವಾಪ್ರಿಯಂ ಕ್ವಚಿತ್ | ಯದ್ಯಪ್ರಿಯಂ ಕಾಮಯಂತಿ ನ ರಾತೀಶೋ ಹಿತೋ ಯತಃ ||' ದೇವತೆಗಳು ಶ್ರೀಹರಿಗೆ ಪ್ರಿಯವಾದುದನ್ನೇ ಯಾವಾಗಲೂ ಇಚ್ಛಿಸುವರು. ಎಂದೂ ಅಪ್ರಿಯವಾದುದನ್ನು ಇಚ್ಛಿಸುವುದಿಲ್ಲ. ಆದ್ದರಿಂದ ಅವರ ಇಚ್ಛೆಯನ್ನು ಪೂರೈಸುವನು. ಒಂದು ವೇಳೆ ಪ್ರಾರಬ್ಧಕರ್ಮವಶದಿಂದ (ಅಶ್ವತ್ಥಾಮಾಚಾರ್ಯರು ದುರ್ಯೋಧನನ ಹೆಂಡತಿಯಲ್ಲಿ ಅಪತ್ಯೋತ್ಪಾದನೇಚ್ಛೆಯನ್ನು ಮಾಡಿದಂತೆ) ಶ್ರೀಹರಿಗೆ ಅಪ್ರಿಯವಾದುದನ್ನು ಅಪೇಕ್ಷಿಸಿದಲ್ಲಿ ಶ್ರೀಹರಿಯು ಅವರಿಗೆ ಹಿತಸಾಧಕನಾದ್ದರಿಂದ ಅವರ ಇಚ್ಛೆಯನ್ನು ನಡೆಸಿಕೊಡುವುದಿಲ್ಲ. ಈ ಪ್ರಮಾಣವೂ ಇದೇ ಅರ್ಥವನ್ನು ಸ್ಪಷ್ಟಪಡಿಸುತ್ತದೆ. ಅಥವಾ ಅಧಿಕಾರಿಯು 'ನಾನ್ಯತ್ ವಾಂಛತಿ' ಎಂದು ನೀನು ಹಿಂದೆ ಹೇಳಿದಂತೆ ನಿಷ್ಕಾಮನಾಗಿರಬೇಕೆಂಬುದೇ ನಿನ್ನ ಅಭಿಪ್ರಾಯವಾದಲ್ಲಿ ನಾವು ಈಗ ಇಷ್ಟಪಡುವುದು ನಿನಗೆ ಅನಿಷ್ಟವಾದ್ದರಿಂದ ನಿಷ್ಫಲವಾಯಿತಲ್ಲಾ ಎಂದು ಶಂಕಿಸಬೇಡಿ. ವೃತ್ರಾಸುರನ ಹನನವು (ನಿಮ್ಮ ಇಚ್ಛೆಯು) ನನಗೆ ಇಷ್ಟವಾದುದೇ. ಅದನ್ನೇ ನೀವು ಅಪೇಕ್ಷಿಸಿರುವಿರಿ. ಆದ್ದರಿಂದ ನಡೆಸಿಕೊಡುತ್ತೇನೆ. ಅದು ನನಗೆ ಅನಿಷ್ಟವಾಗಿದ್ದಲ್ಲಿ ನಡೆಸಿಕೊಡುತ್ತಿರಲಿಲ್ಲ ಎಂಬ ಅಭಿಪ್ರಾಯವು ಶ್ರೀಮದಾಚಾರ್ಯರ ಮೇಲೆ ಬರೆದ ತಾತ್ಪರ್ಯವಾಕ್ಯಕ್ಕೆ ಎಂದು ತಿಳಿಯಬಹುದು. || ೪೦ ||

ಮಘವನ್ ಯಾತ ಭದ್ರಂ ವೋ ದಧ್ಯಂಚಮೃಷಿಸತ್ತಮಮ್ |
ವಿದ್ಯಾವ್ರತತಪಃಸಾರಂ ಗಾತ್ರಂ ಯಾಚತ ಮಾಚಿರಮ್ || ೪೧ ||

ನಿಮ್ಮ ಇಚ್ಛೆಯು ನನಗೆ ಇಷ್ಟವೆಂಬುದು ಯಾತರಿಂದ ತಿಳಿದುಬರುತ್ತದೆ ಎಂದರೆ ಅದನ್ನು ತಿಳಿಸುವುದಕ್ಕಾಗಿ ತ್ವಾಷ್ಟ್ರ ವಧೆಗೆ ಉಪಾಯವನ್ನು ಹೇಳುತ್ತಾನೆ ಎನ್ನುತ್ತಾರೆ. ಮಘವನ್=ಇಂದ್ರನೇ, ವಃ=ನಿಮಗೆ ಭದ್ರಂ ಒಳ್ಳೆಯದು ಆಗಲಿ.

ವೈದ್ಯನು ಅಪಥ್ಯ ಆಹಾರವನ್ನು ರೋಗಿಯು ಅಪೇಕ್ಷಿಸಿದರೆ ಕೊಡುವುದಿಲ್ಲವಲ್ಲವೇ ! ಇಂದ್ರನೇ, ನೀವೆಲ್ಲ ಹೊರಡಿ, ನಿಮಗೆ ಒಳ್ಳೆಯದಾಗಲಿ. ಋಷಿ ಶ್ರೇಷ್ಠನಾದ ದಧೀಚಿಯ ಬಳಿಗೆ ಹೋಗಿ ಜಾಗ್ರತೆಯಾಗಿ ಅವನ ದೇಹವನ್ನು ಯಾಚಿಸಿರಿ. ಅವನ

ಯಾತ=ಹೊರಡಿರಿ. ಋಷಿಶ್ರೇಷ್ಠನಾದ ದಧೀಚಿಯನ್ನು ಮಾಚಿರಂ=ಜಾಗ್ರತೆಯಾಗಿ ವಿದ್ಯಾ ವ್ರತ ತಪಸ್ಸಿನ ಸಾರವಾಗಿರುವ ಆತನ ಗಾತ್ರಂ=ಜ್ಞಾನವನ್ನು ರಕ್ಷಿಸುವ ಅಥವಾ ಗತಿಗೆ ಸಾಧನವಾದ ದೇಹವನ್ನು ಯಾಚತ=ಕೊಡು ಎಂದು ಯಾಚನೆ ಮಾಡಿರಿ. || ೪೧ ||

ಸ ವೈ ಹ್ಯಧಿಗತೋ ದಧ್ಯಙ್ ಅಶ್ವಿಭ್ಯಾಂ ಬ್ರಹ್ಮ ನಿಷ್ಕೃತಮ್ ।
ತದ್ವಾ ಅಶ್ವಶಿರಂ ನಾಮ ತಯೋರಮರತಾಂ ವ್ಯಧಾತ್ ॥ ೪೨ ॥

ಎರಡು ಶ್ಲೋಕಗಳಿಂದ ದಧೀಚಿ ಋಷಿಗಳ ಹಿರಿಮೆಯನ್ನು ತಿಳಿಸುತ್ತಾರೆ. ದಧ್ಯಙ್=ಜಗತ್ತನ್ನು ಧರಿಸುವ ಶ್ರೀಹರಿಯನ್ನು ಹೊಂದುವನಾದ್ದರಿಂದ ದಧ್ಯಙ್ ಎಂದು ಹೆಸರುಳ್ಳ ಸಃ=ಆ ಋಷಿಯು ಅಧಿಗತಃ ವೈ=ಅಧಿಕ ಜ್ಞಾನಿಯೆಂದು ಶ್ರುತಿ ಪ್ರಸಿದ್ಧನು. 'ದಧ್ಯಙ್ ಹ ಯನ್ಮಧ್ವಾಥರ್ವಣೋ ವಾಮಶ್ವಸ್ಯ ಶೀರ್ಷ್ಣಾ ಪ್ರಯದೀಮುವಾಚ ||' ಎಂಬ ಶ್ರುತಿ ಇರುವುದು. ಹಿ=ಏಕೆಂದರೆ (೧) ಅಶ್ವಿಭ್ಯಾಂ=ಅಶ್ವಿನೀ ದೇವತೆಗಳಿಗೆ ಬ್ರಹ್ಮ=ವಿದ್ಯಾರೂಪವಾದ ಪರಬ್ರಹ್ಮವಸ್ತುವನ್ನು ನಿಷ್ಕೃತಂ=ಸ್ವೀಕರಿಸಿದನು. ಹೇಳುತ್ತೇನೆಂದು ಒಪ್ಪಿಕೊಂಡನು. (೨) ಅಶ್ವಿನೀ ದೇವತೆಗಳಿಗೆ ಬ್ರಹ್ಮ=ವಿದ್ಯಾರೂಪವಾದ ಬ್ರಹ್ಮವಸ್ತುವನ್ನೂ ನಿಷ್ಕೃತಂ=ಪ್ರವರ್ಗ್ಯವೆಂಬ ಕರ್ಮವನ್ನೂ (ಉಕ್ತವಾನ್)=ಹೇಳಿದನು. (೩) ನಿಷ್ಕೃತಂ=ತಾನು ಬ್ರಹ್ಮವಿದ್ಯೆಯನ್ನು ಹೇಳಿಕೊಡುತ್ತೇನೆಂದು ಮಾತುಕೊಟ್ಟಿದ್ದುದರಿಂದ ಆ ಪ್ರತಿಜ್ಞೆಯನ್ನು ಸತ್ಯಮಾಡುವುದಕ್ಕಾಗಿ ಬ್ರಹ್ಮ(ವಿದ್ಯಾರೂಪ) ವನ್ನು ಅಶ್ವಿನೀ ದೇವತೆಗಳಿಗೆ ಉಪದೇಶಿಸಿದನು. ಉಪದೇಶಿಸದೆ ಹೋಗಿದ್ದಲ್ಲಿ ಸುಳ್ಳು ಹೇಳುವವನೆಂದಾಗುತ್ತಿತ್ತು. (೪) ಆ ದಧೀಚಿ ಋಷಿಯು ನಾರಾಯಣ ಕವಚವೆಂಬ ಬ್ರಹ್ಮವಿದ್ಯೆಯನ್ನೂ ವೀರ್ಯವತ್ತರವಾಗಿ ಮಾಡುವ ಪ್ರವರ್ಗ್ಯ ಕರ್ಮವನ್ನೂ ತಿಳಿದವನಲ್ಲವೇ? ಅಶ್ವಿನೀ ದೇವತೆಗಳಿಗೆ (ಅವೆರಡನ್ನೂ ಉಪದೇಶಿಸಿದನು.) ತತ್=ಆತನು ಉಪದೇಶಿಸಿದ (ಆ ಬ್ರಹ್ಮವಿದ್ಯೆಯೂ) ತಯೋಃ=ವೈದ್ಯರೆಂದು ದೇವತೆಗಳಿಂದ ಅಮೃತ ಸಿಗದಂತೆ ಮಾಡಲಾಗಿದ್ದ ಅಶ್ವಿನೀ ದೇವತೆಗಳಿಗೆ ಅಮರತಾಂ=ಮರಣರಾಹಿತ್ಯವನ್ನು (ಅಮರತ್ವವನ್ನು) (ಯಚ್ಛ) ವ್ಯಧಾತ್=ತಂದುಕೊಟ್ಟದ್ದೂ ಆದ ಆ ಬ್ರಹ್ಮವಿದ್ಯೆಯು ಅಶ್ವಶಿರಂ ನಾಮ=ಅಶ್ವಶಿರವೆಂದು ಪ್ರಸಿದ್ಧವಾದುದು ವೈ=ಶ್ರುತಿಪ್ರಸಿದ್ಧವು. 'ಆಥರ್ವಣಾಯಾಶ್ವಿನೌ ದಧೀಚೇಽಶ್ವ್ಯಂ ಶಿರಃ ಪ್ರತ್ಯೈರಯತಂ | ಸ ವಾಂ ಮಧು ಪ್ರವೋಚದೃತಾಯಂ ತ್ವಾಷ್ಟ್ರಂ ಯದ್ದಸ್ರಾವಪಿ ಕಕ್ಷ್ಯಂ ವಾಮ್ ||' ಎಂಬುದೇ ಆ ಶ್ರುತಿ. ಅಶ್ವಿನೀದೇವತೆಗಳೇ, ಆಥರ್ವಣನಾದ ದಧೀಚಿಗೆ ಅಶ್ವದ

ದೇಹವು ವಿದ್ಯಾ, ವ್ರತ ಮತ್ತು ತಪಸ್ಸುಗಳ ಸಾರವಾಗಿದೆ. ಆ ದಧೀಚಿಯು ಅಧಿಕ ಜ್ಞಾನಿಯೆಂದು ಪ್ರಸಿದ್ಧನು. ಅಶ್ವಿನೀ ದೇವತೆಗಳಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಲು ಒಪ್ಪಿಕೊಂಡನು. ಬ್ರಹ್ಮವಿದ್ಯೆಯನ್ನೂ ಪ್ರವರ್ಗ್ಯ ಕರ್ಮವನ್ನೂ

ತಲೆಯನ್ನು ನೀವು ಪ್ರತಿಸಂಧಾನ ಮಾಡಿದಿರಿ. ಆ ದಧೀಚಿಯು ಋತಾಯನ್–ತನ್ನ ಮಾತನ್ನು ಸತ್ಯಮಾಡುವವನಾಗಿ ಸರಿಯಾಗಿ ವಿದ್ಯೆಯನ್ನು ತಿಳಿದವನಾಗಿ ತ್ವಷ್ಟ್ರವು ವಿಶ್ವರೂಪಾಚಾರ್ಯನಿಗೆ ಉಪದೇಶಿಸಿದ ಕಕ್ಷ್ಯಂ=ನಾರಾಯಣಕವಚ ಬ್ರಹ್ಮವಿದ್ಯೆಯನ್ನು ನಿಮಗೆ ಉಪದೇಶಿಸಿದನು. ಎಂದು ಶ್ರುತಿಗೆ ಅರ್ಥ. ಇಲ್ಲಿ ಹೀಗೆ ಇತಿಹಾಸವನ್ನು ಹೇಳುತ್ತಾರೆ. ಆಥರ್ವಣರಾದ ದಧೀಚಿ ಋಷಿಗಳು ಪ್ರವರ್ಗ್ಯ ಬ್ರಹ್ಮವಿದ್ಯೆಗಳಲ್ಲಿ ನಿಷ್ಣಾತರೆಂದು ತಿಳಿದು ತಾವು ಅಮರತ್ವವನ್ನು ಸಂಪಾದಿಸ ಬೇಕೆಂದು ಅಪೇಕ್ಷಿಸಿದ್ದ ಅಶ್ವಿನೀ ದೇವತೆಗಳು ಅವರ ಬಳಿಗೆ ಬಂದು 'ನೀವು ಪ್ರವರ್ಗ್ಯ ಮತ್ತು ಬ್ರಹ್ಮವಿದ್ಯೆಗಳಲ್ಲಿ ವಿಶಾರದರೆಂದು ಕೇಳಿದ್ದೇವೆ. ಅವುಗಳನ್ನು ನಾವು ಕಲಿಯಬೇಕೆಂದಿದ್ದೇವೆ. ಅವುಗಳನ್ನು ನಮಗೆ ಹೇಳಿಕೊಡಿ' ಎಂದು ವಿಜ್ಞಾಪಿಸಿದರು. ಆಗ ದಧೀಚಿ ಋಷಿಗಳು 'ನಾನು ಕರ್ಮಕಾಂಡದಲ್ಲಿ ಹೇಳಿರುವ ಕರ್ಮದಲ್ಲಿ ತೊಡಗಿದ್ದೇನೆ. ಅದನ್ನು ಮುಗಿಸಿದ ನಂತರ ಮುಂದೆ ಒಂದು ದಿನ ನಿಮಗೆ ಹೇಳಿಕೊಡುತ್ತೇನೆ' ಎಂದು ಮಾತು ಕೊಟ್ಟರು. ಇದನ್ನು ಕೇಳಿದ ಅಶ್ವಿನೀ ದೇವತೆಗಳು ತಮ್ಮ ಮನೆಗೆ ಹಿಂತಿರುಗಿದರು. ಈ ಮಧ್ಯದಲ್ಲಿ (ತಮ್ಮ ಕೆಳಗಿನ) ಮತ್ತೊಬ್ಬರು ತಮಗಿಂತ ಹೆಚ್ಚು ವಿದ್ಯಾಪಾರಂಗತರಾಗಿರಬಾರದೆಂದು ಬಗೆದ ಇಂದ್ರ ದೇವರು ದಧೀಚಿಗಳನ್ನು ಸಮೀಪಿಸಿ 'ನೀವು ಪ್ರವರ್ಗ್ಯ ಮತ್ತು ಬ್ರಹ್ಮವಿದ್ಯೆಗಳನ್ನು ಯಾರಿಗೂ ಹೇಳಿಕೊಡಕೂಡದು. ಅಭಿಮಾನದಿಂದಾಗಲಿ ಲೋಭದಿಂದಾಗಲಿ ಹೇಳಿಕೊಟ್ಟದ್ದೇ ಆದರೆ ನಿಮ್ಮ ತಲೆಯನ್ನೇ ತೆಗೆಯುವೆನು' ಎಂದು ಅನುಶಾಸನ ಮಾಡಿದರು. ಅನೇಕ ದಿನಗಳ ನಂತರ ಅಶ್ವಿನೀ ದೇವತೆಗಳು ಮತ್ತೆ ಬಂದು ಋಷಿ ಗಳನ್ನು ಹಿಂದೆ ನಾವು ಕೇಳಿದ ವಿದ್ಯೆಗಳನ್ನು ಹೇಳಿಕೊಡಿರೆಂದರು. ಅದಕ್ಕಾ ಋಷಿ ಗಳು 'ಇಂದ್ರದೇವರು ಹೇಳಿಕೊಡಬೇಡವೆಂದು ನಿಷೇಧಿಸಿದ್ದಾರೆ' ಎಂದು ನಡೆದ ವೃತ್ತಾಂತವನ್ನು ಬಿತ್ತರಿಸಿದರು. ಉಪಾಯವನ್ನು ಆಲೋಚಿಸಿದ ಅಶ್ವಿನೀ ದೇವತೆ ಗಳು 'ಇಂದ್ರದೇವರು ನಿಮ್ಮ ತಲೆಯನ್ನು ಕಡಿಯುವುದಕ್ಕೆ ಮೊದಲೇ ನಾವೇ ಕಡಿದು ಬೇರೊಂದೆಡೆ ಇಟ್ಟು ಯಾವುದೋ ಒಂದು ಅಶ್ವದ ತಲೆಯನ್ನು ಕುತ್ತಿಗೆಗೆ ಸೇರಿಸುತ್ತೇವೆ. ಅದರಿಂದ ನಮಗೆ ಆ ವಿದ್ಯೆಗಳನ್ನು ಹೇಳಿಕೊಡಿ. ಒಂದು ವೇಳೆ ಇಂದ್ರದೇವರು ಆ ತಲೆಯನ್ನು ಕತ್ತರಿಸಿದರ ನಿಮ್ಮ ಹಿಂದಿನ ತಲೆಯನ್ನು ಮತ್ತೆ ನಾವು ಸೇರಿಸಿ ನಿಮಗೆ ಗುರುದಕ್ಷಿಣೆಯನ್ನು ಕೊಡುತ್ತೇವೆ' ಎಂದರು. ಆ ದೇವ ಚಿಕಿತ್ಸಕರ ಮಾತಿನಂತೆ ದಧೀಚಿಗಳು ಅಶ್ವಶಿರಸ್ಸನ್ನು ಧರಿಸಿ ಆ ವಿದ್ಯೆಯನ್ನು ಹೇಳಿ ಕೊಟ್ಟದ್ದರಿಂದ ಆ ವಿದ್ಯೆಗೆ 'ಅಶ್ವಶಿರ'ವೆಂದು ಪ್ರಸಿದ್ಧಿಯುಂಟಾಯಿತು. 'ನಿಶಮ್ಯಾ-ಥರ್ವಣಂ ದಕ್ಷಂ ಪ್ರವರ್ಗ್ಯ ಬ್ರಹ್ಮವಿದ್ಯಯೋಃ । ದಧ್ಯಂಚಂ ಸಮುಪಾಗಮ್ಯ

ಅವರಿಗೆ ಉಪದೇಶಿಸಿ ತನ್ನ ಮಾತಿನಂತೆ ನಡೆದುಕೊಂಡನು. ಆ ವಿದ್ಯೆಯು ಅಶ್ವಿನೀ ದೇವತೆಗಳಿಗೆ ಅಮರತ್ವವನ್ನು ತಂದುಕೊಟ್ಟಿತು. ಅಶ್ವದ ಶಿರಸ್ಸನ್ನು ಹೊಂದಿದ್ದಾಗ

ಸಮುಪಾಗಮ್ಯ ತಮೂಚತುರಥಾಶ್ವಿನೌ || ಭಗವನ್ ದೇಹಿ ನೌ ವಿದ್ಯಾಂ ಇತಿ ಶ್ರುತ್ವಾ ಸ ಚಾಬ್ರವೀತ್ | ಕರ್ಮಣ್ಯವಸ್ಥಿತೋಽದ್ಯಾಹಂ ಪಶ್ಚಾದ್ವಕ್ಷ್ಯಾಮಿ ಗಚ್ಛತಮ್ || ತಯೋರ್ನಿಗದತೋರೇವಂ ಶಕ್ರ ಆಗತ್ಯ ತಂ ಮುನಿಮ್ | ಉವಾಚ ಭಿಷಜೋರ್ವಿದ್ಯಾಮವಾದೀರಶ್ವಿನೋರ್ಮುನೇ || ಯದಿ ಮದ್ವಾಕ್ಯಮುಲ್ಲಂಘ್ಯ ಬ್ರವೀಷಿ ಸಹಸೈವ ತೇ | ಶಿರಸಂಧಾನಸಂದೇಹ ಇತ್ಯುಕ್ತ್ವಾ ಸ ಯಯೌ ಹರಿಃ || ಇಂದ್ರೇ ಗತೇ ತದಾಭ್ಯೇತ್ಯ ನಾಸತ್ಯಾವೂಚತುರ್ದ್ವಿಜಂ | ತನ್ಮುಖಾದಿಂದ್ರಗದಿತಂ ಶ್ರುತ್ವಾ ತಾವೂಚತುಃ ಪುನಃ | ಆವಾಂ ತವ ಶಿರಶ್ಛಿತ್ವಾ ಪೂರ್ವಮಶ್ವಸ್ಯ ಮಸ್ತಕಂ | ಸಂಧಾಸ್ಯಾವಃ ತತೋ ಬ್ರೂಹಿ ಕೇನ ವಿದ್ಯಾಂ ದ್ವಿಜೋತ್ತಮ || ತಸ್ಮಿನ್ನಿಂದ್ರೇಣ ಚ ಕೃತ್ತೇ ಪುನಃ ಸಂಧಾಯ ಮಸ್ತಕಂ | ನಿಜಂ ತೇ ದಕ್ಷಿಣಾಂ ದತ್ವಾ ಗಮಿಷ್ಯಾವೋ ಯಥಾಗತಂ || ಏತಚ್ಛ್ರುತ್ವಾ ತಥೋವಾಚ ದಧ್ಯಙ್ಚಾಥರ್ವಣಸ್ತಯೋಃ | ಪ್ರವರ್ಗ್ಯಂ ಬ್ರಹ್ಮವಿದ್ಯಾಂ ಚ ಸತ್ಕೃತೋ ಗತಶಂಕಿತಃ ' || ೪೨ ||

ಕೃತ್ಸ್ನಂ ಚಾಥರ್ವಣಂ ತ್ವಾಷ್ಟ್ರಂ ವರ್ಮಾಭೇದ್ಯಂ ಮದಾತ್ಮಕಮ್ |
ವಿಶ್ವರೂಪಾಯ ಯತ್ಪ್ರಾದಾತ್ ತ್ವಾಷ್ಟ್ರಾಯ ತ್ವಮಧಾಸ್ತತಃ ||೪೩||

ಮತ್ತು ನಾರಾಯಣ ಕವಚವನ್ನು ಧರಿಸಿದ್ದರಿಂದ ದಧೀಚಿಯ ಶರೀರವು ವೀರ್ಯವತ್ತರವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಚ=ಮತ್ತು ಆಥರ್ವಣಂ= ಆಥರ್ವಣನಾದ ದಧೀಚಿಯಿಂದ ಅಧ್ಯಯನ ಮಾಡಲ್ಪಟ್ಟ ಕೃತ್ಸ್ನಂ=ಅಂಗೋಪಾಂಗಸಹಿತವಾಗಿ ಪೂರ್ಣವಾಗಿರುವ ಅಭೇದ್ಯಂ=ಮತ್ತೊಬ್ಬರಿಂದ ಭೇದಿಸಲಾಗದ ಮದಾತ್ಮಕಂ=ನನ್ನ ವಿಷಯವಾದ, ನನ್ನ ಸ್ವರೂಪವಾದ ವರ್ಮ=ನಾರಾಯಣ ಕವಚವು ತ್ವಾಷ್ಟ್ರಂ=ತ್ವಷ್ಟನಲ್ಲಿ ಇರುವುದರಿಂದ ಆ ಹೆಸರುಳ್ಳದ್ದರಿಂದ ತ್ವಷ್ಟೃವಿನ ಮಗ ವಿಶ್ವರೂಪಾಚಾರ್ಯನಲ್ಲಿ ಇದ್ದದ್ದರಿಂದ ತ್ವಾಷ್ಟ್ರವೆನಿಸುವುದು. ಯತ್= ಯಾವ ಈ ವರ್ಮವನ್ನು ತ್ವಷ್ಟೃವು ತ್ವಾಷ್ಟ್ರಾಯ=ತನ್ನ ಮಗನಾದ ವಿಶ್ವರೂಪಾಚಾರ್ಯನಿಗೆ ಪ್ರಾದಾತ್=ಉಪದೇಶಿಸಿದನು. ತತಃ=ಆತನಿಂದ ತ್ವಂ=ನೀನು (ಇಂದ್ರನು) ಅಧಾಃ=ಧರಿಸಿದೆ. ಇಂತಹ ನಾರಾಯಣ ವಿದ್ಯೆಯಿಂದ ದಧೀಚಿಯ ಗಾತ್ರವು ಸಾರಭೂತವಾಗಿರುದೆಂದರ್ಥ. || ೪೩ ||

ಯುಷ್ಮಭ್ಯಂ ಯಾಚಿತೋಽಶ್ವಿಭ್ಯಾಂ ಧರ್ಮಜ್ಞೋಽಂಗಾನಿ ದಾಸ್ಯತಿ
ತತಸ್ತೈರಾಯುಧಶ್ರೇಷ್ಠೋ ವಿಶ್ವಕರ್ಮವಿನಿರ್ಮಿತಃ |
ಯೇನ ವೃತ್ರಶಿರೋಹರ್ತಾ ಮತ್ತೇಜ ಉಪಬೃಂಹಿತಃ || ೪೪ ||

ಉಪದೇಶಿಸಿದ್ದರಿಂದ ಆ ವಿದ್ಯೆಗೆ ಅಶ್ವಶಿರವೆಂದೇ ಹೆಸರು. ಆಥರ್ವಣನಾದ ದಧೀಚಿಯು ಅಂಗೋಪಾಂಗ ಸಹಿತವಾದ ನಾರಾಯಣಕವಚವೆಂಬ ಈ ವಿದ್ಯೆಯನ್ನು ಅಧ್ಯಯನ ಮಾಡಿ ತ್ವಷ್ಟನಿಗೂ ಅವನು ತನ್ನ ಮಗನಾದ ವಿಶ್ವರೂಪಾಚಾರ್ಯನಿಗೂ ಹೇಳಿಕೊಟ್ಟರು. ಅದನ್ನೇ ನೀನು ವಿಶ್ವರೂಪಾಚಾರ್ಯನಿಂದ ಕಲಿತೆ.

ನಿಮ್ಮ ಯಾಚನೆಯು ಈಡೇರುವುದಿಲ್ಲವೆಂಬ ಭಯವು ಬೇಡವೆಂದು ಹೇಳುತ್ತಾರೆ. ನಿಮ್ಮಿಂದ ಯಾಚಿತಃ=ಕೇಳಿಸಿಕೊಂಡ ಧರ್ಮಜ್ಞಃ- ಧರ್ಮಜ್ಞಾನಿಯಾದ ದಧ್ಯಙ್-ದಧೀಚಿಯು ಯುಷ್ಮಭ್ಯಂ-ನಿಮಗೆ ಅಂಗಾನಿ=ತನ್ನ ಎಲ್ಲ ಅವಯವಗಳನ್ನೂ ದಾಸ್ಯತಿ-ಕೊಡುವನು. ಅವಯವ ಸಮೂಹವನ್ನು ಹೇಳಬೇಕಾಗಿ ಬಹುವಚನವನ್ನು ಉಪಯೋಗಿಸಿರುವರು. ತತಃ=ಅನಂತರ ತೈಃ=ಆ ಅವಯವಗಳಿಂದ ವಿಶ್ವಕರ್ಮನಿಂದ ನಿರ್ಮಿತವಾದ ಪದಾರ್ಥವು ಆಯುಧಶ್ರೇಷ್ಠಃ = ಶ್ರೇಷ್ಠವಾದ ಆಯುಧವಾಗಿ (ಭವತು)=ಆಗಲಿ. ಯೇನ-ಯಾವ ಆ ಆಯುಧದಿಂದ ಮತ್ತೇಜ ಉಪಬೃಂಹಿತಃ- ನನ್ನ ವಿಶೇಷ ಶಕ್ತಿ (ಸನ್ನಿಧಾನ) ಯಿಂದ ಮತ್ತಷ್ಟು ಬಲಿಷ್ಠನಾದ ನೀನು ವೃತ್ರಶಿರೋಹರ್ತಾ-ವೃತ್ರಾಸುರ ಶಿರಸ್ಸನ್ನು ತೆಗೆಯುವವನು (ಆಗುತ್ತೀಯೆ.) 'ಯುಷ್ಮಭ್ಯಂ ಯಾಚಿತೋಽಶ್ವಿಭ್ಯಾಂ ಧರ್ಮಜ್ಞೋಽಸ್ಥೀನಿ ದಾಸ್ಯತಿ' ಎಂಬ ಪಾಠದಲ್ಲಿ ಅಶ್ವಿನೀ ದೇವತೆಗಳಿಂದ ಯಾಚಿತನಾಗಿ ಹೇಗೆ ಅವರಿಗೆ ವಿದ್ಯೆಯನ್ನು ಹೇಳಿಕೊಟ್ಟನೋ ಹಾಗೆ ನಿಮಗೆ ಕೊಡುವನೆಂದರ್ಥ. ಅಥವಾ ಅಶ್ವಿನೀ ದೇವತೆಗಳು ಶಿಷ್ಯರಾದ್ದರಿಂದ ಅವರು ಯಾಚಿಸಿದ್ದೇ ಆದರೆ ಅವರಲ್ಲಿರುವ ಶಿಷ್ಯವಾತ್ಸಲ್ಯದಿಂದ ನಿಮಗೆ ಕೊಡುವನೆಂದರ್ಥ. ಅಸ್ಥೀನಿ ಎಂಬುದು ಹೇಯವೆಂದು ತಿಳಿಸುವುದಕ್ಕಾಗಿ ಎಂದು ತಿಳಿಯಬೇಕು. || ೪೪ ||

ತಸ್ಮಿನ್ ವಿನಿಹತೇ ಯೂಯಂ ತೇಜೋಽಸ್ತ್ರಾಯುಧಸಂಪದಃ ।
ಭೂಯಃ ಪ್ರಾಪ್ಸ್ಯಥ ಭದ್ರಂ ವೋ ನ ಹಿಂಸಂತಿ ಚ ಮತ್ಪರಾನ್ ॥

ತಸ್ಮಿನ್=ಆ ವೃತ್ರನು ವಿನಿಹತೇ (ಸತಿ)-ಸಂಹೃತನಾಗಲು ಯೂಯಂ= ನೀವು (ತೇನ ಗ್ರಸ್ತಾಃ)= ಅವನಿಂದ ಅಪಹೃತಗಳಾದ ನಿಮ್ಮ ತೇಜಸ್ಸು, ಅಸ್ತ್ರ, ಆಯುಧ ಮತ್ತು ಸಂಪತ್ತುಗಳನ್ನು ಭೂಯಃ=ಮತ್ತೆ ಪ್ರಾಪ್ಸ್ಯಥ-ಹೊಂದುವಿರಿ. ವಃ= ನಿಮಗೆ ಭದ್ರಂ= ಮಂಗಳವು ಆಗಲಿ. ಮತ್ಪರಾನ್ - ನನ್ನ ಭಕ್ತರನ್ನು (ಕೇ ಅಪಿ)-ವೃತ್ರಾಸುರನೇ ಏನು ! ಯಾರೂ ಕೂಡ ನ ಹಿಂಸಂತಿ-ಹಿಂಸಿಸುವುದಿಲ್ಲ (ಹಿಂಸಿಸಲಾರರು). ಹೀಗೆ ಹೇಳಿದ್ದರಿಂದ ತ್ರಿಭುವನವನ್ನೇ ನುಂಗುವ ಆ ಮಹಾ

ಆ ಕವಚವು ನನ್ನ ಸ್ವರೂಪವಾದ್ದರಿಂದ ಅಭೇದ್ಯವಾದುದು. ಈ ವಿದ್ಯೆಯ ಸಾರವೇ ದಧೀಚಿಯ ದೇಹ. ನಿಮ್ಮಿಂದ ಯಾಚಿತನಾದ ಆ ಧರ್ಮಜ್ಞನು ತನ್ನ ದೇಹವನ್ನು (ಅಸ್ಥಿಗಳನ್ನು) ಕೊಡುವನು. ಅದರಿಂದ ವಿಶ್ವಕರ್ಮನು ಮಾಡಿದ ಆಯುಧವೇ ಆಯುಧಶ್ರೇಷ್ಠವಾದ ವಜ್ರಾಯುಧವಾಗುವುದು. ನನ್ನ ವಿಶೇಷ ಸನ್ನಿಧಾನದಿಂದ ಬಲಿಷ್ಠನಾದ ನೀನು ಅದರಿಂದ ವೃತ್ರನ ಶಿರಸ್ಸನ್ನು ತೆಗೆಯುವೆ. ಅವನು ಹತನಾದ ಮೇಲೆ ನಿಮಗೆ ಮತ್ತೆ ತೇಜಸ್ಸು, ಅಸ್ತ್ರ, ಆಯುಧ ಮತ್ತು ಸಂಪತ್ತುಗಳು ದೊರೆಯುವುವು, ನಿಮಗೆ ಒಳ್ಳೆಯದಾಗಲಿ. ನನ್ನ ಭಕ್ತರನ್ನು ಯಾರೂ ಹಿಂಸಿಸಲಾರರು ಎಂದು ಹೇಳಿ ಅನುಗ್ರಹಿಸಿದನು.

ಕಾಯನೇ ನಮ್ಮನ್ನು ಕೊಂದಾನು ಎಂಬ ದೇವತೆಗಳ ಶಂಕೆಯನ್ನು ಪರಿಹರಿಸಿರುವ ನೆಂದು ತಿಳಿಯಬೇಕು. ವಿ.ಅ. ಶ್ರೀಹರಿಯ ಆಜ್ಞೆಯಿಂದ ದೇವತೆಗಳು ತಮಗಿಂತ ನೀಚರಾದ ಋಷಿ ಮೊದಲಾದವರನ್ನು ಯಾಚಿಸಿದರೇ ಹೊರತು ಸಾಮರ್ಥ್ಯಹೀನ ರಾಗಿ ಯಾಚಿಸಿದವರಲ್ಲ. ಆದ್ದರಿಂದ ಸಾಮರ್ಥ್ಯನ್ಯೂನತೆಯೆಂಬ ದೋಷವು ಅವರಿಗಿಲ್ಲ. ಅದೂ ಅಲ್ಲದೆ ಋಷ್ಯಾದಿಗಳ ಕೀರ್ತಿಗಾಗಿಯೂ ಹಾಗೆ ಮಾಡುವರು. ಇದಕ್ಕೆ ಪ್ರಮಾಣ. 'ಸಮರ್ಥಾ ಅಪಿ ಯಾಚಂತಿ ದೇವಾ ಮುನ್ಯಾದಿಕಾನ್ ಕ್ವಚಿತ್| ಆಜ್ಞಯೈವ ಹರೇಃ ತೇಷಾಂ ಯಶೋಽರ್ಥಮಪಿ ನಾನ್ಯಥಾ ||' || ೪೫ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ನವಮೋಽಧ್ಯಾಯಃ

ಅಥ ದಶಮೋಽಧ್ಯಾಯಃ

ಶ್ರೀಶುಕ ಉವಾಚ—

ಇಂದ್ರಮೇವಂ ಸಮಾದಿಶ್ಯ ಭಗವಾನ್ ವಿಶ್ವಭಾವನಃ ।
ಪಶ್ಯತಾಮನಿಮೇಷಾಣಾಂ ತತ್ರೈವಾಂತರ್ದಧೇ ಹರಿಃ || ೧ ||

ಶತ್ರುನಿಗ್ರಹವೂ ಭಗವಂತನ ಪ್ರೀತಿಯನ್ನು ಉಂಟುಮಾಡುವುದರಿಂದ ಮೋಕ್ಷಕ್ಕೆ ಸಾಧನವೆಂದು ಅಭಿಪ್ರಾಯಪಟ್ಟು ಕೆಲವು ಅಧ್ಯಾಯಗಳಿಂದ ವೃತ್ರ ಮತ್ತು ಇಂದ್ರರ ಯುದ್ಧವನ್ನು ನಿರೂಪಿಸುತ್ತಾರೆ. ಅದರಲ್ಲಿಯೂ ಮೊದಲಿನಲ್ಲಿ ಪುರುಷನು ಸಜ್ಜನರ ಅಭೀಷ್ಟವನ್ನು ಅವಶ್ಯವಾಗಿ ನಡೆಸಿಕೊಡಬೇಕೆಂದು ತಿಳಿಸುವುದ ಕ್ಕಾಗಿ ದಧೀಚಿ ಋಷಿಗಳು ದೇವತೆಗಳಿಗೆ ತಮ್ಮ ದೇಹ(ಅಂಗ)ವನ್ನು ದಾನ ಮಾಡಿದ ಪ್ರಕಾರವನ್ನು ಹೇಳಲು ಹೊರಡುತ್ತಾರೆ. ವಿಶ್ವಭಾವನಃ=ಜಗತ್ಸರ್ಜಕ ನಾದ ಭವಗಂತನಾದ ಶ್ರೀಹರಿಯು ಏವಂ = ಮೇಲೆ ಹೇಳಿದಂತೆ ಇಂದ್ರದೇವರಿಗೆ ಸಮಾದಿಶ್ಯ=ಅಪ್ಪಣೆಮಾಡಿ ಅನಿಮೇಷಾಣಾಂ=ದೇವತೆಗಳು ಪಶ್ಯತಾಂ(ಸನ್)= ನೋಡುತ್ತಿದ್ದಂತೆಯೇ ತತ್ರೈವ=ಅಲ್ಲಿಯೇ ಅಂತರ್ದಧೇ=ಕಣ್ಣಿಗೆ ಕಾಣದಾದನು. || ೧ ||

ಹತ್ತನೆಯ ಅಧ್ಯಾಯ

ಶುಕಾಚಾರ್ಯರು—ಜಗತ್ಸರ್ಜಕನಾದ ಶ್ರೀಹರಿಯು ಹೀಗೆ ಇಂದ್ರದೇವರಿಗೆ ಆಜ್ಞಾಪಿಸಿ ದೇವತೆಗಳು ನೋಡುತ್ತಿದ್ದಂತೆಯೇ ಅಲ್ಲಿಯೇ ಅದೃಶ್ಯನಾದನು.

ತಥಾಭಿಯಾಚಿತೋ ದೇವೈರ್ಋಷಿರಾಥರ್ವಣೋ ಮಹಾನ್ ।
ಮೋದಮಾನ ಉವಾಚೇದಂ ಪ್ರಹಸನ್ನಿವ ಭಾರತ ॥ ೨ ॥

ಹೇ ಭಾರತ=ಪರೀಕ್ಷಿದ್ರಾಜನೇ, ತಥಾ=ಶ್ರೀಹರಿಯ ಅಪ್ಪಣೆಯಂತೆ ದೇವತೆಗಳಿಂದ ಅಭಿಯಾಚಿತಃ=ಪ್ರಾರ್ಥಿತರಾದ ಮಹಾನ್=ಸರ್ವೋತ್ತಮನಾದ ಶ್ರೀಹರಿಯನ್ನು ತಿಳಿದಿರುವ ಆಥರ್ವಣಃ ಋಷಿಃ = ದಧೀಚಿ ಋಷಿಗಳು ಮೋದಮಾನಃ (ಸನ್)=ತಮ್ಮ ದೇಹವು ಸಜ್ಜನರ ಪ್ರಯೋಜನಕ್ಕಾಯಿತಲ್ಲಾ ಎಂದು ಸಂತೋಷಪಡುತ್ತಾ ಪ್ರಹಸನ್ ಇವ=ಅವರ ಪ್ರಾರ್ಥನೆಗೆ ಗಟ್ಟಿಯಾಗಿ ನಕ್ಕರೋ ಎಂಬಂತೆ ಇದಂ=ಅವರ ಮುಖದಿಂದ ಧರ್ಮವನ್ನು ಕೇಳುವ ಅಭಿಪ್ರಾಯದಿಂದ ಅವರ ಪ್ರಾರ್ಥನೆಯನ್ನು ತಿರಸ್ಕರಿಸುವ ರೀತಿಯ ಮುಂದಿನ ಮಾತುಗಳನ್ನು ಉವಾಚ=ನುಡಿದರು. ॥ ೨ ॥

ಅಪಿ ವೃಂದಾರಕಾ ಯೂಯಂ ನ ಜಾನೀಥ ಶರೀರಿಣಾಮ್ ।
ಸಂಸ್ಥಾಯಾಂ ಯಸ್ತ್ವಭಿದ್ರೋಹೋ ದುಃಸಹಶ್ಚೇತನಾಪಹಃ ॥೩॥

ಅವರು ಆಡಿದ ಮಾತುಗಳನ್ನು ಹೇಳುತ್ತಾರೆ- (೧) ವೃಂದಾರಕಾಃ ಅಪಿ=ಎಲ್ಲ ಪ್ರಾಣಿಗಳ ಬುದ್ಧಿಸಾಕ್ಷಿಗಳಾದ ದೇವತೆಗಳಾಗಿದ್ದರೂ ಯೂಯಂ=ನೀವು ಶರೀರಿಣಾಂ=ದೇಹವುಳ್ಳ ಪ್ರಾಣಿಗಳಿಗೆ ದುಃಸಹಃ=ಸಹಿಸಲಾಗದ ಚೇತನಾಪಹಃ=ಬುದ್ಧಿಯನ್ನೇ ಹಾಳುಮಾಡುವ (ಬುದ್ಧಿಭ್ರಂಶವನ್ನುಂಟುಮಾಡುವ) ಯಃ=ಯಾವ ಸಂಸ್ಥಾಯಾಂ=ಮರಣದಲ್ಲಿ ಅಭಿದ್ರೋಹಃ ತು=ದುಃಖರೂಪವಾದ ತೊಂದರೆಯೋ (ತಂ)=ಅದನ್ನು ನ ಜಾನೀಥ=ತಿಳಿದಿಲ್ಲ. (೨) ದೇವತೆಗಳೇ, ನೀವು ಅಪಿ ನ ಜಾನೀಥ=ತಿಳಿದಿಲ್ಲವೇನು? ಎಂದಾದರೂ ಅರ್ಥ. ಮರಣಕಾಲದ ದುಃಖವು ಎಲ್ಲ ವಿಷಯಗಳ ಜ್ಞಾನವನ್ನೂ ಹೋಗಲಾಡಿಸುವುದರಿಂದ 'ಚೇತನಾಪಹಃ' ಎಂದು ಹೇಳಿದ್ದು. ॥ ೩ ॥

ಜಿಜೀವಿಷೂಣಾಂ ಜೀವಾನಾಮಾತ್ಮಾ ಪ್ರೇಷ್ಠ ಇಹೇಪ್ಸಿತಃ ।
ಕ ಉತ್ಸಹೇತ ತಂ ದಾತುಂ ಭಿಕ್ಷಮಾಣಾಯ ವಿಷ್ಣವೇ ॥ ೪ ॥

ಪರೀಕ್ಷಿದ್ರಾಜನೇ, ಶ್ರೀಹರಿಯ ಅಪ್ಪಣೆಯಂತೆ ದೇವತೆಗಳು ದಧೀಚಿಯನ್ನು ಪ್ರಾರ್ಥಿಸಿದರೂ ಅದಕ್ಕೆ ಆ ಮಹನೀಯರಾದ ಆಥರ್ವಣ ಋಷಿಗಳು ಸಂತೋಷಪಟ್ಟು ನಗುತ್ತಾ 'ದೇವತೆಗಳಾದರೂ ನೀವು ದೇಹಿಗಳಿಗೆ ಮರಣಕಾಲದಲ್ಲಿ ಎಷ್ಟು ದುಃಖವಾಗುವುದೆಂಬುದನ್ನು ಅರಿಯದವರಾಗಿದ್ದೀರಿ. ಆ ದುಃಖವು ಪ್ರಾಣಿಗಳ ಬುದ್ಧಿ (ಪ್ರಜ್ಞೆ) ಯನ್ನೇ ಹೋಗಲಾಡಿಸುವುದು. ಬದುಕಬಯಸುವ ಜೀವರಿಗೆ ದೇಹವು ಪ್ರಿಯತಮವಾದುದು. ಶ್ರೀಹರಿಯೇ ಬಂದು ಯಾಚಿಸಿದರೂ ಯಾವನು ತಾನೇ ಅದನ್ನು ಕೊಟ್ಟಾನು!' ಎಂದು ತಿರಸ್ಕರಿಸಿದಂತೆ ಮಾತನಾಡಿದರು.

ಇಹ = ಈ ಲೋಕದಲ್ಲಿ ಪ್ರಿಯವಸ್ತುಗಳಲ್ಲಿ ಜಿಜೀವಿಷೂಣಾಂ = ಜೀವಿಸ ಬಯಸುವ ಜೀವರಿಗೆ ಆತ್ಮಾ = ದೇಹವು ಪ್ರೇಷ್ಠಃ = ಪ್ರಿಯತಮವಾಗಿ ಈಪ್ಸಿತಃ = ಇಚ್ಛೆಗೆ ವಿಷಯವಾದುದು. ಆ ಕಾರಣದಿಂದ ಕಃ = ಯಾವ ಮನುಷ್ಯನು ತಾನೇ ಭಿಕ್ಷಮಾಣಾಯ – (ಅ ತಿ ಥಿ ಯಾ ಗಿ ಬಂ ದು) ಯಾಚಿಸುವ ವಿಷ್ಣವೇ (ಅಪಿ) = ಶ್ರೀಹರಿಗೇ ಆದರೂ ತಂ = ಆ ದೇಹವನ್ನು ದಾತುಂ = ದಾನಮಾಡಲು ಉತ್ಸಹೇತ = ಪ್ರಯತ್ನಿಸಿಯಾನು ? ವಿಷ್ಣವೇ ಎಂದು ಹೇಳಿದ್ದರಿಂದ ' ದೇಹವು ಪ್ರಿಯತಮವೆಂದು ನಮಗೆ ತಿಳಿದಿದೆ. ಆದರೂ ಶ್ರೀಹರಿಯೇ ನಮ್ಮ ಮೂಲಕಅದನ್ನು ಕೊಡೆಂದು ನಿಮ್ಮನ್ನು ಯಾಚಿಸುತ್ತಿರುವನು' ಎಂದು ದೇವತೆಗಳು ಹೇಳಿದಲ್ಲಿ ಆಗಲೂ ಕೊಡಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿರುವರು. || ೪ ||

ದೇವಾ ಊಚುಃ—

ಕಿಂ ನು ತದ್ದುಸ್ತ್ಯಜಂ ಬ್ರಹ್ಮನ್ ಪುಂಸಾಂ ಭೂತಾನುಕಂಪಿನಾಮ್ ।
ಭವದ್ವಿಧಾನಾಂ ಮಹತಾಂ ಪುಣ್ಯಶ್ಲೋಕೇಡ್ಯಕರ್ಮಣಾಮ್ ॥ ೫ ॥

ಬ್ರಹ್ಮನ್ = ಬ್ರಹ್ಮಜ್ಞಾನಿಯೇ, ಭೂತಾನುಕಂಪಿನಾಂ = ಪ್ರಾಣಿಗಳಲ್ಲಿ ದಯಾವಂತರಾದ ಪುಣ್ಯಶ್ಲೋಕೇಡ್ಯಕರ್ಮಣಾಂ = ಉತ್ತಮ ಕೀರ್ತಿವಂತರಾದ ಪುರುಷರಿಂದ ಸ್ತೋತ್ರಕ್ಕೆ ಅರ್ಹಗಳಾದ ದೇಹದಾನಾದಿ ಕರ್ಮಗಳುಳ್ಳ ಭವದ್ವಿಧಾನಾಂ = ತಮ್ಮಂತಹ ಮಹತಾಂ ಪುಂಸಾಂ = ಮಹಾಪುರುಷರಿಗೆ ದುಸ್ತ್ಯಜಂ = ಕೊಡಲಾಗದ ತತ್ = ಆ ಪದಾರ್ಥವು ಕಿಂ ನು = ಯಾವುದು ? ತಮ್ಮಂತಹ ಮಹನೀಯರು ಎಲ್ಲವನ್ನೂ ಕೊಡುವರೆಂದರ್ಥ. || ೫ ||

ನೂನಂ ಸ್ವಾರ್ಥಪರೋ ಲೋಕೋ ನ ವೇದ ಪರಸಂಕಟಮ್ ।
ಯದಿ ವೇದ ನ ಯಾಚೇತ ನೇತಿ ನಾಹ ಯದೀಶ್ವರಃ ॥ ೬ ॥

ಸ್ವಾರ್ಥಪರಃ = ತಮ್ಮ ಪ್ರಯೋಜನದಲ್ಲಿಯೇ ಆಸಕ್ತವಾದ ಲೋಕಃ = ಜನವು ಪರಸಂಕಟಂ = (೧) ಇತರರ ಕಷ್ಟವನ್ನು (೨) ಕೊಡಲು ಅಶಕ್ಯವೇ ಕೊಡಬಹುದಾದ್ದೇ ಎಂಬುದನ್ನು ನೂನಂ ನ ವೇದ = ಪ್ರಾಯಃ ತಿಳಿಯುವುದಿಲ್ಲ. ಯಾಚಕರು ದಾತನ ಸಂಕಟವನ್ನರಿಯರು. ದಾತರು ಯಾಚಕರ ಸಂಕಟವನ್ನೂ ಅರಿಯರು. ಅಂದರೆ ಸ್ವಾರ್ಥಪರರಾದ ನಾವು ನಿನ್ನ ದೇಹವನ್ನು ಕೊಡುವಲ್ಲಿ ನಿನಗೇನು ಕಷ್ಟ

ದೇವತೆಗಳು—ಬ್ರಹ್ಮಜ್ಞಾನಿಗಳೇ, ಪ್ರಾಣಿಗಳಲ್ಲಿ ದಯಾವಂತರಿಗೆ ಉತ್ತಮ ಕೀರ್ತಿವಂತರಿಂದ ಸ್ತುತ್ಯಗಳಾದ ಕಾರ್ಯಗಳನ್ನು ಮಾಡುವ ತಮ್ಮಂತಹ ಮಹಾಪುರುಷರಿಗೆ ಕೊಡಲಾಗದ ಪದಾರ್ಥವಾದರೂ ಯಾವುದು ? ಜನರು ಸ್ವಾರ್ಥಿಗಳು. ಮತ್ತೊಬ್ಬರ ಸಂಕಟವನ್ನು ಅವರರಿಯರು. ತಿಳಿದಿದ್ದಲ್ಲಿ ಅವರು ಯಾಚಿಸುತ್ತಲೇ ಇರಲಿಲ್ಲ. ಸಮರ್ಥನಾದ ದಾತನೂ ಎಂದೂ ಕೊಡುವುದಿಲ್ಲವೆಂದು ಹೇಳುವುದೂ ಇಲ್ಲ.

ವಿದೆಯೆಂಬುದನ್ನು ತಿಳಿಯುತ್ತಿಲ್ಲ. ನಮ್ಮ ಯಾಚನೆಯನ್ನು ತಿರಸ್ಕರಿಸುತ್ತಿರುವ ನೀನಾದರೂ ನೀನು ಕೊಡದೆ ಇದ್ದರೆ ನಮಗೇನು ತೊಂದರೆಯೆಂಬುದನ್ನೂ ಅರಿಯು ತ್ತಿಲ್ಲ. ಯದಿ ವೇದ=ಯಾಚಕನು ತಿಳಿದಿದ್ದಲ್ಲಿ ನ ಯಾಚೇತ=ಯಾಚಿಸುತ್ತಿರಲಿಲ್ಲ. ಹೀಗೆ ಸಾಮಾನ್ಯ ವಿಚಾರವನ್ನು ಹೇಳಿ ವಿಶೇಷವನ್ನು ಹೇಳುತ್ತಾರೆ. ಈಶ್ವರಃ ಯದಿ=ದಾತೃವು ಅಶಕ್ಯವಾದುದನ್ನೂ ಕೊಡಲು ಸಮರ್ಥನಾಗಿದ್ದಲ್ಲಿ ನ (ದಾಸ್ಯಾಮಿ) ಇತಿ=ಯಾಚಿತನಾಗಿ ಕೊಡುವುದಿಲ್ಲವೆಂದು ನ ಆಹ=ಹೇಳುವುದಿಲ್ಲ. ಹೇಳಬಾರದು ಎಂದು ಅಭಿಪ್ರಾಯ. ಇದರಿಂದ ನಿನ್ನ ಸಂಕಟವನ್ನು ನಾವು ಅರಿತಿದ್ದೇವೆ. ಆದರೂ ನಿನ್ನಂತಹವನನ್ನೇ ಯಾಚನೆ ಮಾಡಬೇಕೆಂದೇ ತಿಳಿದು ಸಮರ್ಥನಾದ ನಿನ್ನನ್ನು ಯಾಚಿಸುತ್ತಿದ್ದೇವೆ. (ನೀನು ಇಲ್ಲವೆಂದು ಹೇಳಬೇಡ) ಎಂಬ ಅಭಿಪ್ರಾಯವನ್ನು ಸೂಚಿಸಿರುವರು. ವಿ.ಅ. ಇಲ್ಲಿ ದೇವತೆಗಳು ತಮಗಿಂತ ತಾರತಮ್ಯದಲ್ಲಿ ಕೆಳಗಿನವ ನಾದ ದಧೀಚಿಯನ್ನು ಯಾಚಿಸಿದ್ದರಿಂದ ಅವರ ಗೌರವವೆಂಬ ತೇಜಸ್ಸು ಕಡಿಮೆ ಯಾಯಿತಲ್ಲವೇ ? ಎಂದು ಶಂಕಿಸಬಾರದು. ಕಾರ್ಯಗೌರವದಿಂದ ಮತ್ತು ಶ್ರೀಹರಿಯ ಆಜ್ಞೆಯಿಂದ ಯಾಚಿಸಿದ್ದರಿಂದ ತೇಜೋಹಾನಿಯಾಗುವುದಿಲ್ಲವೆಂದು ಪ್ರಮಾಣ ವಚನವಿದೆ. ತಂದೆಯಾದವನು ಕಾರ್ಯಗೌರವದಿಂದ ಮಗನನ್ನು ಕೇಳಿದ ಮಾತ್ರಕ್ಕೇ ಹೇಗೆ ತಂದೆಯ ಮರ್ಯಾದೆ ಸ್ವಲ್ಪವೂ ಕಡಿಮೆಯಾಗುವುದಿಲ್ಲವೋ ಹಾಗೆ ದೇವತೆಗಳು ತಮಗಿಂತ ಕೆಳಗಿನವರನ್ನು ಯಾಚಿಸಿದರೂ ಅವರ ತೇಜಸ್ಸಿಗೆ ಹಾನಿಯಿಲ್ಲವೆಂದು ತಿಳಿಯಬೇಕು. 'ಆಜ್ಞಯೈವ ಮಹಾವಿಷ್ಣೋಃ ಕಾರ್ಯಾರ್ಥ-ಮಪಿ ಚ ಕ್ವಚಿತ್ | ನೀಚಾನಪಿ ತು ಯಾಚಂತೇ ಸ್ವಾತ್ಮನೋ ಗುಣವತ್ತರಾಃ || ನೀಚವಾಕ್ಯಂ ವದೇಯುಶ್ಚ ಸುರಾ ನೈತಾವತಾ ಕ್ವಚಿತ್ | ತೇಜಃ ಕ್ಷತಿರ್ಭವೇ ದೇಷಾಂ ಜನಕಸ್ಯ ಯಥಾऽರ್ಭಕೇ ||' ಎಂಬುದೇ ಆ ಪ್ರಮಾಣ. || ೬ ||

ಋಷಿರುವಾಚ—

> **ಧರ್ಮಂ ವಃ ಶ್ರೋತುಕಾಮೇನ ಯೂಯಂ ವೈ ಪ್ರತ್ಯುದಾಹೃತಾಃ।**
> **ಏಷ ವಃ ಪ್ರಿಯಮಾತ್ಮಾನಂ ತ್ಯಜಂತಂ ಸಂತ್ಯಜಾಮ್ಯಹಮ್ || ೭ ||**

ದಧೀಚಿಗಳು ಹೇಳುತ್ತಾರೆ ವಃ=ನಿಮ್ಮ ಮೂಲಕ ಧರ್ಮಂ=ಧರ್ಮವನ್ನು ಶ್ರೋತುಕಾಮೇನ=ಕೇಳಬಯಸಿದ (ಮಯಾ)=ನನ್ನಿಂದ ಯೂಯಂ=ನೀವು ಪ್ರತ್ಯುದಾಹೃತಾಃ ವೈ=ನಿರಾಕರಿಸಲ್ಪಟ್ಟಂತೆ ಉಕ್ತರಾದಿರಿ. ಏಷಃ ಅಹಂ=ಈ ನಾನು ಪ್ರಿಯಂ=ಪ್ರೀತಿ ವಿಷಯವಾದ ಆದರೆ ತ್ಯಜಂತಂ=ಮುಂದೆ ಆದರೂ ನನ್ನನ್ನು ಬಿಟ್ಟು ಹೋಗಲಿರುವ ಆತ್ಮಾನಂ=ದೇಹವನ್ನು ವಃ=ನಿಮಗಾಗಿ ಸಂತ್ಯಜಾಮಿ=ಸಂತೋಷ ದಿಂದ ಬಿಡುತ್ತೇನೆ. || ೭ ||

ದಧೀಚಿಗಳು—ನಿಮ್ಮಿಂದ ಧರ್ಮವನ್ನು ಕೇಳಬೇಕೆಂದೇ ನಾನು ನಿಮ್ಮ ಇಷ್ಟ ವನ್ನು ತಿರಸ್ಕರಿಸಿದಂತೆ ಮಾತನಾಡಿದೆ. ಈ ನಾನು ನನಗೆ ಅತ್ಯಂತ ಪ್ರಿಯವಾದ

ಯೋಽಧ್ರುವೇಣಾತ್ಮನಾ ನಾಥಾ ನ ಧರ್ಮಂ ನ ಯಶಃ ಪುಮಾನ್ ।
ಈಹೇತ ಭೂತದಯಯಾ ಸ ಶೋಚ್ಯಃ ಸ್ಥಾವರೈರಪಿ ॥ ೮ ॥

ಹೇ ನಾಥಾಃ=ರಕ್ಷಕರೇ, ಯಃ ಪುಮಾನ್=ಯಾವನಾದರೆ ಭೂತದಯಯಾ=ಪ್ರಾಣಿಗಳಲ್ಲಿ ಇರುವ ದಯೆಯಿಂದ ಅಧ್ರುವೇಣ=ಸ್ಥಿರವಲ್ಲದ ಆತ್ಮನಾ=ದೇಹದಿಂದ ಧರ್ಮಂ=ಧರ್ಮವನ್ನು ನ ಈಹೇತ=ಇಚ್ಛಿಸುವುದಿಲ್ಲವೋ ಯಶಃ=ಕೀರ್ತಿಯನ್ನು ನ ಈಹೇತ=ಇಚ್ಛಿಸುವುದಿಲ್ಲವೋ ಸಃ=ಆಪುರುಷನು ಸ್ಥಾವರೈಃ ಅಪಿ=ಸ್ತಬ್ಧರಿಂದಲೂ ಅಂದರೆ ವಿವೇಕಶೂನ್ಯರಿಂದಲೂ ಶೋಚ್ಯಃ=ಶೋಚನೀಯನು. ||೮||

ಏತಾವಾನವ್ಯಯೋ ಧರ್ಮಃ ಪುಣ್ಯಶ್ಲೋಕೈರುಪಾಸಿತಃ ।
ಯೋ ಭೂತಶೋಕಹರ್ಷಾಭ್ಯಾಮಾತ್ಮಾ ಶೋಚತಿ ಹೃಷ್ಯತಿ ॥೯॥

ಯಃ ಆತ್ಮಾ=ಯಾವ ಮನಸ್ಸು (ಜೀವನು) ಪ್ರಾಣಿಗಳ ದುಃಖ ಮತ್ತು ಸಂತೋಷಗಳಿಂದ ಶೋಚತಿ=ದುಃಖಿಸುವುದೋ ಹೃಷ್ಯತಿ=ಹರ್ಷಗೊಳ್ಳುವುದೋ ಏತಾವಾನ್=ಇಷ್ಟೇ ಪವಿತ್ರ ಕೀರ್ತಿವಂತರಿಂದ ಉಪಾಸಿತಃ=ಸೇವಿಸಲ್ಪಟ್ಟ (ಮಾಡಲ್ಪಟ್ಟ) ಅವ್ಯಯಃ=ಶಾಶ್ವತವಾದ ಧರ್ಮವು ಪ್ರಾಣಿಗಳ ದುಃಖದಿಂದ ದುಃಖಗೊಳ್ಳುವುದು ಹರ್ಷದಿಂದ ಹರ್ಷಗೊಳ್ಳುವುದು ನಾಶವಾಗದ ಧರ್ಮವೆಂದರ್ಥ. ||೯||

ಅಹೋ ದೈನ್ಯಮಹೋ ಕಷ್ಟಂ ಪಾರಕ್ಯೈಃ ಕ್ಷಣಭಂಗುರೈಃ ।
ಯನ್ನೋಪಕುರ್ಯಾದಸ್ವಾರ್ಥೈರ್ಮರ್ತ್ಯಃ ಸ್ವಜ್ಞಾತಿವಿಗ್ರಹೈಃ ॥

ದೈನ್ಯವು ಅಯ್ಯೋ! ಅಯ್ಯೋ ಕಷ್ಟವು! ಯತ್=ಏಕೆಂದರೆ ಮರ್ತ್ಯಃ=ಸಾಯಲೇಬೇಕಾದ ಮಾನವನು ಪಾರಕ್ಯೈಃ=ನಾಯಿ ನರಿ ಮೊದಲಾದವುಗಳಿಗೆ ಭಕ್ಷ್ಯಗಳಾದ ಕ್ಷಣಭಂಗುರೈಃ=ಕ್ಷಣಿಕಗಳಾದ (ಅನಿತ್ಯಗಳಾದ) ಅಸ್ವಾರ್ಥೈಃ=ಪರ

ಆದರೆ ಮುಂದೆ ಒಂದು ದಿನ ನನ್ನನ್ನು ಬಿಟ್ಟು ಹೋಗಲಿರುವ ಈ ದೇಹವನ್ನು ನಿಮಗಾಗಿ ಈಗಲೇ ಸಂತೋಷದಿಂದ ತ್ಯಜಿಸುತ್ತೇನೆ. ರಕ್ಷಕರೇ, ಮನುಷ್ಯನು ಪ್ರಾಣಿಗಳಲ್ಲಿ ದಯೆಯಿಟ್ಟು ಅಸ್ಥಿರವಾದ ಈ ದೇಹದಿಂದ ಧರ್ಮವನ್ನೂ ಕೀರ್ತಿಯನ್ನೂ ಸಂಪಾದಿಸಿಕೊಳ್ಳಲು ಇಚ್ಛಿಸಬೇಕು. ಹಾಗೆ ಮಾಡದವನು ಅವಿವೇಕಿಗಳಿಂದಲೂ ಶೋಚನೀಯನು. ಮಾನವನ ಮನಸ್ಸು ಪ್ರಾಣಿಗಳ ದುಃಖದಿಂದ ದುಃಖಗೊಳ್ಳಬೇಕು. ಅವುಗಳ ಹರ್ಷದಿಂದ ಹರ್ಷಗೊಳ್ಳಬೇಕು. ಪುಣ್ಯಶ್ಲೋಕರು ನಡೆಸಿಕೊಂಡು ಬಂದಿರುವ ಶಾಶ್ವತ ಧರ್ಮವು ಇದೇ. ಮನುಷ್ಯನು ಸಾಯಲೇಬೇಕು. ಅವನ ದೇಹವು ನಾಯಿ ನರಿಗಳ ಆಹಾರ. ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಅನಿತ್ಯ ಪದಾರ್ಥ. ಅದು ಸ್ವಾರ್ಥಕ್ಕಾಗಿ ಇಲ್ಲ. ಇಂತಹ ದೇಹದಿಂದ—ಜ್ಞಾತಿಗಳಿಂದ—ಉಪಕಾರ ಮಾಡದಿರುವನಲ್ಲಾ! ಅಯ್ಯೋ!! ಎಂತಹ ದೈನ್ಯ! ಎಷ್ಟು ಕಷ್ಟ!

ಪ್ರಯೋಜನಕ್ಕಾಗಿ ಇರುವ (ಆತ್ಮೋಪಯೋಗ ಇಲ್ಲದ) ಸ್ವಜ್ಞಾತಿ ವಿಗ್ರಹೈಃ=ತನ್ನ ಜ್ಞಾತಿ (ಮಕ್ಕಳು) ಜನರಿಂದ ಮತ್ತು ತನ್ನ ದೇಹಗಳಿಂದ ನ ಉಪಕುರ್ಯಾತ್=ಉಪಕಾರ ಮಾಡದಿರುವನು. ಇದು ಅತ್ಯಂತ ವ್ಯಸನಕರವೆಂದು ಅರ್ಥ. ‖ ೧೦ ‖

ಶ್ರೀಶುಕ ಉವಾಚ—

ಏವಂ ಕೃತವ್ಯವಸಿತೋ ದಧ್ಯಙ್ಙಾಥರ್ವಣಸ್ತನುಮ್ ।
ಪರೇ ಭಗವತಿ ಬ್ರಹ್ಮಣ್ಯಾತ್ಮಾನಂ ಸಂನಯನ್ ಜಹೌ ‖ ೧೧ ‖

ಏವಂ=ಹೀಗೆ ಕೃತವ್ಯವಸಿತಃ=ನಿಶ್ಚಯ ಮಾಡಿಕೊಂಡ ಆಥರ್ವಣರಾದ ದಧೀಚಿಗಳು ಪರೇ=ಸರ್ವೋತ್ತಮನಾದ ಭಗವತಿ=ಸಮಗ್ರೈಶ್ವರ್ಯವಂತನಾದ ಬ್ರಹ್ಮಣಿ=ಗುಣಪೂರ್ಣನಾದ ಶ್ರೀಹರಿಯಲ್ಲಿ ಆತ್ಮಾನಂ=ಮನಸ್ಸನ್ನು ಸಂನಯನ್=ಚನ್ನಾಗಿ ಸೇರಿಸುವರಾಗಿ (ದೇಹವನ್ನು ಅರ್ಪಿಸುವರಾಗಿ) ತನುಂ=ದೇಹವನ್ನು ಜಹೌ=ಬಿಟ್ಟರು. ‖ ೧೧ ‖

ಯತ್ತಾಕ್ಷಾಸುಮನೋಬುದ್ಧಿಸ್ತತ್ತ್ವದೃಗ್ಧ್ವಸ್ತಬಂಧನಃ ।
ಆಸ್ಥಿತಃ ಪರಮಂ ಯೋಗಂ ನ ದೇಹಂ ಬುಬುಧೇ ಗತಮ್ ‖ ೧೨ ‖

ಯತ್ತ=ಶ್ರೀಹರಿಯಲ್ಲಿಯೇ ನಿಯಂತ್ರಿತವಾದ ಅಕ್ಷ=ಇಂದ್ರಿಯಗಳು ಅಸು=ಪ್ರಾಣಗಳು ಮನಸ್ಸು ಮತ್ತು ಬುದ್ಧಿಗಳುಳ್ಳ ತತ್ತ್ವದೃಕ್=ಶ್ರೀಹರಿಯ ರೂಪವನ್ನು ನೋಡುತ್ತಿದ್ದ ಆದ್ದರಿಂದಲೇ ಧ್ವಸ್ತಬಂಧನಃ=ಬಂಧನವನ್ನು (ಪುತ್ರಾದಿ ಸ್ನೇಹವನ್ನು) ನಾಶಮಾಡಿಕೊಂಡ (ಸಃ)=ಆ ದಧೀಚಿಗಳು ಪರಮಂ=ಉತ್ತಮವಾದ ಯೋಗಂ=ಮೂಲಾಧಾರದಿಂದ ಪ್ರಾರಂಭಿಸಿ ಬ್ರಹ್ಮರಂಧ್ರದವರೆಗೆ (ನಾಸಾಗ್ರದಿಂದ ಬ್ರಹ್ಮರಂಧ್ರಕ್ಕೆ ಹನ್ನೆರಡು ಅಂಗುಲ ಅಂತರವಿದೆ) ಪ್ರಾಣಗಳನ್ನು ಮೇಲಕ್ಕೆ ಸೆಳೆಯುವುದನ್ನು ಆಸ್ಥಿತಃ (ಸನ್)=ಮಾಡುವರಾಗಿ ಗತಂ=ಜೀವನ ಸಂಬಂಧವನ್ನು ಬಿಟ್ಟ ದೇಹವನ್ನು ನ ಬುಬುಧೇ=ತಿಳಿಯಲಿಲ್ಲ. ‖ ೧೨ ‖

ಅಥೇಂದ್ರೋ ವಜ್ರಮುದ್ಯಮ್ಯ ನಿರ್ಮಿತಂ ವಿಶ್ವಕರ್ಮಣಾ ।
ಮುನೇಃಸ್ತ್ವಸ್ಥಿಭಿರುತ್ಸಿಕ್ತೋ ಭಗವತ್ತೇಜಸಾಽನ್ವಿತಃ ‖ ೧೩ ‖

ಶ್ರೀಶುಕಾಚಾರ್ಯರು—ಹೀಗೆ ನಿಶ್ಚಯಿಸಿದ ಆ ದಧೀಚಿಗಳು ಸರ್ವೋತ್ತಮನೂ ಸಮಗ್ರ ಐಶ್ವರ್ಯವಂತನೂ ಗುಣಪೂರ್ಣನೂ ಆದ ಶ್ರೀಹರಿಯಲ್ಲಿ ಮನಸ್ಸನ್ನು ಭಕ್ತಿಪೂರ್ವಕ ಸೇರಿಸಿ ಅವನಿಗೆ ದೇಹವನ್ನು ಅರ್ಪಿಸಿ ಬಿಟ್ಟುಬಿಟ್ಟರು. ಅವರ ಇಂದ್ರಿಯಗಳೂ ಪ್ರಾಣಗಳೂ ಮನಸ್ಸೂ ಬುದ್ಧಿಯೂ ಶ್ರೀಹರಿಯಲ್ಲಿಯೇ ನಿಯಂತ್ರಿತವಾಗಿದ್ದುವು. ಶ್ರೀಹರಿಯ ರೂಪವನ್ನವರು ಕಾಣುತ್ತಿದ್ದರು. ಇತರ ಪದಾರ್ಥಗಳಲ್ಲಿ ಅಭಿಮಾನವು ಬಿಟ್ಟುಹೋಗಿತ್ತು. ಮೂಲಾಧಾರದಿಂದ ಬ್ರಹ್ಮರಂಧ್ರದವರೆಗೆ ಅವರು

ಅಥ=ದಧೀಚಿಗಳು ಯೋಗದಿಂದ ದೇಹತ್ಯಾಗಮಾಡಿದ ನಂತರ ವಿಶ್ವಕರ್ಮ ನಿಂದ ಮುನೇಃ = ಆ ಋಷಿಗಳ ಅಸ್ಥಿಭಿಃ ತು=ಮೂಳೆಗಳಿಂದಲೇ ನಿರ್ಮಿತಂ = ನಿರ್ಮಾಣ ಮಾಡಿದ ವಜ್ರಂ=ವಜ್ರಾಯುಧವನ್ನು ಉದ್ಯಮ್ಯ=ಕೈಯಲ್ಲಿ ಹಿಡಿದು ಉತ್ಸಿಕ್ತಃ=ಹೆಚ್ಚು ಬಲಿಷ್ಠರಾಗಿ ಭಗವತ್ತೇಜಸಾ=ಶ್ರೀಹರಿಯ ಸಾನ್ನಿಧ್ಯವಿಶೇಷ ದಿಂದ ಅನ್ವಿತಃ (ಸನ್)=ಕೂಡಿದವರಾಗಿ || ೧೩ ||

ಯುತೋ ದೇವಗಣೈಃ ಸರ್ವೈರ್ಗಜೇಂದ್ರೋಪರ್ಯಶೋಭತ ।
ಸ್ತೂಯಮಾನೋ ಮುನಿಗಣೈಸ್ತ್ರೈಲೋಕ್ಯಂ ಹರ್ಷಯನ್ನಿವ ॥

ಸಮಸ್ತ ದೇವತಾ ಸಮೂಹಗಳಿಂದ ಯುತಃ (ಸನ್)=ಕೂಡಿದವರಾಗಿ ಮುನಿಗಳ ಸಮೂಹದಿಂದ ಸ್ತೋತ್ರಮಾಡಿಸಿಕೊಳ್ಳುತ್ತಾ ಇಂದ್ರದೇವರು ಮೂರು ಲೋಕಗಳ ನಿವಾಸಿಗಳನ್ನೂ ಹರ್ಷಗೊಳಿಸುವರಂತೆ ಗಜೇಂದ್ರೋಪರಿ=ಐರಾವತದ ಮೇಲೆ ಅಶೋಭತ=ಶೋಭಿಸಿದರು. || ೧೪ ||

ವೃತ್ರಮಭ್ಯದ್ರವಚ್ಛತ್ರುಮಸುರಾನೀಕಯೂಥಪೈಃ ।
ಪರ್ಯಸ್ತಮೋಜಸಾ ರಾಜನ್ ಕ್ರುದ್ಧೋ ರುದ್ರ ಇವಾಂತಕಮ್ ॥

ಪರೀಕ್ಷಿದ್ರಾಜನೆ, (ಸಃ) = ಆ ಇಂದ್ರದೇವರು ಕ್ರುದ್ಧಃ=ಕೋಪಗೊಂಡ ರುದ್ರಃ=ರುದ್ರದೇವರು ಅಂತಕಂ ಇವ=ಯಮನನ್ನು ಅಟ್ಟಿಸಿಕೊಂಡುಹೋದಂತೆ ಅಸುರಾನೀಕ=ದೈತ್ಯಸೇನೆಗಳ ಯೂಥಪೈಃ=ನಾಯಕರುಗಳಿಂದ ಪರ್ಯಸ್ತಂ= ಸುತ್ತುವರೆದಿದ್ದ ಶತ್ರುವಾದ ವೃತ್ರನನ್ನು ಓಜಸಾ=ಸಾಮರ್ಥ್ಯದಿಂದ ಅಭ್ಯದ್ರವತ್= ಅಭಿಮುಖ ಮಾಡಿಕೊಂಡು ನುಗ್ಗಿದರು. || ೧೫ ||

ತತಃ ಸುರಾಣಾಮಸುರೈಃ ರಣಃ ಪರಮದಾರುಣಃ ।
ತ್ರೇತಾಮುಖೇ ನರ್ಮದಾಯಾಮಭೂದಾಸೀದ್ವೈ ಪ್ರಥಮೇಽಂತರೇ ॥

ವಾಯುವನ್ನು ಮೇಲಕ್ಕೆ ಸೆಳೆದು ಜೀವನನ್ನು ಆ ದೇಹದಿಂದ ಬೇರ್ಪಡಿಸಿದರು, ದೇಹದ ಜ್ಞಾನವೇ ಇಲ್ಲವಾಯಿತು.

ಋಷಿಗಳು ದೇಹವನ್ನು ತ್ಯಜಿಸಿದ ನಂತರ ವಿಶ್ವಕರ್ಮನು ಆ ಋಷಿಗಳ ಅಸ್ಥಿಗಳಿಂದ ವಜ್ರಾಯುಧವನ್ನು ನಿರ್ಮಿಸಿದನು. ಇಂದ್ರದೇವರು ಅದನ್ನು ಕೈಯಲ್ಲಿ ಹಿಡಿದು ಬಲಿಷ್ಠರಾಗಿ ಶ್ರೀಹರಿಯ ಸನ್ನಿಧಾನ ವಿಶೇಷವನ್ನು ಹೊಂದಿ ಐರಾವತದ ಮೇಲೆ ಶೋಭಿಸಿದರು. ಎಲ್ಲ ದೇವತಾ ಸಮೂಹವೂ ಅವರನ್ನು ಕೂಡಿತ್ತು. ಮುನಿಗಣಗಳು ಸ್ತೋತ್ರಮಾಡುತ್ತಿದ್ದರು. ಮೂರು ಲೋಕದ ನಿವಾಸಿಗಳಿಗೂ ಹರ್ಷವನ್ನುಂಟುಮಾಡುವಂತಿದ್ದರು. ಕುಪಿತರಾದ ರುದ್ರದೇವರು ಯಮನನ್ನು ಅಟ್ಟಿಸಿಕೊಂಡುಹೋದಂತೆ ಇಂದ್ರದೇವರು ದೈತ್ಯಸೇನಾ ನಾಯಕರಿಂದ ಪರಿವೃತ ನಾಗಿದ್ದ ವೃತ್ರನನ್ನು ಸಾಮರ್ಥ್ಯದಿಂದ ಎದುರಿಸಿದರು (ವೃತ್ರನ ಮೇಲೆ ಬಿದ್ದರು). ದೇವತೆಗಳಿಗೂ ಅಸುರರಿಗೂ ಮಹಾಭಯಂಕರವಾದ ಯುದ್ಧವಾಯಿತು. ಇದು

ಯಾವ ಕಾಲದಲ್ಲಿ ಯಾವ ದೇಶದಲ್ಲಿ ವೃತ್ರೇಂದ್ರರಿಗೆ ಯುದ್ಧವಾಯಿತು ? ಎಂದರೆ ಹೇಳುತ್ತಾರೆ. ತತಃ = ಅನಂತರ ಸುರಾಣಾಂ = ದೇವತೆಗಳಿಗೆ ಅಸುರೈಃ (ಸಹ)=ಅಸುರರೊಂದಿಗೆ ಅಂತರೇ= ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದ ಪ್ರಥಮೇ= ಮೊದಲನೆಯ ನಾಲ್ಕು ಯುಗಗಳಲ್ಲಿ ತ್ರೇತಾಮುಖೇ= ತ್ರೇತಾಯುಗದ ಪ್ರಾರಂಭದಲ್ಲಿ ನರ್ಮದಾಯಾಂ = ನರ್ಮದಾ ನದಿಯ ತೀರದಲ್ಲಿ (ಗಂಗಾಯಾಂ ಘೋಷಃ ಎಂಬಲ್ಲಿ ಹೇಗೆ ಗಂಗಾ ತೀರದಲ್ಲಿ ಗೊಲ್ಲರ ಹಳ್ಳಿ ಎಂದು ಲಾಕ್ಷಣಿಕ ಪ್ರಯೋಗವೋ ಅದರಂತೆ ಈ ಪ್ರಯೋಗ) ಪರಮದಾರುಣಃ= ಅತ್ಯಂತ ಭಯಂಕರ ವಾದ ರಣಃ= ಯುದ್ಧವು ಆಸೀತ್= ಆಯಿತು. ವೈ= ಇದು ಶಾಸ್ತ್ರ ಸಿದ್ಧವು. ಅಲ್ಲಲ್ಲಿ ಲಾಕ್ಷಣಿಕ ಪ್ರಯೋಗದಿಂದ ಮೊದಲನೆಯ ಯುದ್ಧವು ನರ್ಮದಾ ತೀರದಲ್ಲಿಯೂ ಎರಡನೆಯ ಯುದ್ಧವು ವೃತ್ರನ ಮರಣಕಾಲದಲ್ಲಿ ಆದದ್ದು ಸಮುದ್ರತೀರದಲ್ಲಿಯೂ ಆಯಿತೆಂಬ ವಿಶೇಷವನ್ನು ಬೇರೆ ಗ್ರಂಥನಲ್ಲಿ ಹೇಳಿರುವುದನ್ನು ಇಲ್ಲಿ ಗ್ರಹಿಸಬೇಕೆಂದು ಸೂಚಿಸಿರುವರು. || ೧೬ ||

ರುದ್ರೈರ್ವಸುಭಿರಾದಿತ್ಯೈರಶ್ವಿಭ್ಯಾಂ ಪಿತೃವಹ್ನಿಭಿಃ ।
ಮರುದ್ಭಿರ್ಋಭುಭಿಃ ಸಾಧ್ಯೈರ್ವಿಶ್ವೇದೇವೈರ್ಮರುತ್ಪತಿಮ್ ||೧೭||
ದೃಷ್ಟ್ವಾ ವಜ್ರಧರಂ ಶಕ್ರಂ ರೋಚಮಾನಂ ಸ್ವಯಾ ಶ್ರಿಯಾ ।
ನಾಮೃಷ್ಯನ್ನಸುರಾ ರಾಜನ್ ಮೃಧೇ ವೃತ್ರಪುರಃಸರಾಃ || ೧೮ ||

ಪರೀಕ್ಷಿದ್ರಾಜನೇ, ವೃತ್ರನೇ ಮೊದಲಾದ ಅಸುರರು ಮೃಧೇ=ಯುದ್ಧದಲ್ಲಿ ಏಕಾದಶರುದ್ರರಿಂದಲೂ, ಅಷ್ಟವಸುಗಳಿಂದಲೂ, ದ್ವಾದಶಾದಿತ್ಯರಿಂದಲೂ, ಇಬ್ಬರು ಅಶ್ವಿನೀದೇವತೆಗಳಿಂದಲೂ, ಪಿತೃಗಳಿಂದಲೂ, ಅಗ್ನಿಯಿಂದಲೂ, ನಲವತ್ತೊಂಭತ್ತು ಮರುತ್ತುಗಳಿಂದಲೂ, ಋಭುಗಳಿಂದಲೂ, ಸಾಧ್ಯರಿಂದಲೂ, ವಿಶ್ವೇದೇವತೆ ಗಳಿಂದಲೂ, (ಸಹ) = ಕೂಡಿಕೊಂಡು ಸ್ವಯಾ ಶ್ರಿಯಾ = ತನ್ನ ಕಾಂತಿಯಿಂದ ರೋಚಮಾನಂ = ಪ್ರಕಾಶಿಸುತ್ತಿದ್ದ ಮರುತ್ಪತಿಂ = ಮರುದ್ಗಣಗಳ ಪಾಲಕನಾದ ವಜ್ರಧರಂ = ವಜ್ರಾಯುಧಧಾರಿಯಾದ ಶಕ್ರಂ = ಇಂದ್ರದೇವರನ್ನು ದೃಷ್ಟ್ವಾ= ನೋಡಿ ನ ಅಮೃಷ್ಯನ್= ಸಹಿಸಲಿಲ್ಲ. || ೧೭, ೧೮ ||

ಆದುದು ವೈವಸ್ವತ ಮನ್ವಂತರದ ಮೊದಲನೆಯ ತ್ರೇತಾಯುಗದ ಪ್ರಾರಂಭದಲ್ಲಿ ಮತ್ತು ನರ್ಮದಾ ನದಿಯ ತೀರದಲ್ಲಿ (ಅನಂತರ ಸಮುದ್ರ ತೀರದಲ್ಲಿಯೂ ಆಯಿತು). ವೃತ್ರ ಮೊದಲಾದ ಅಸುರರು ಯುದ್ಧದಲ್ಲಿ ವಜ್ರಧಾರಿಯೂ ಮರುತ್ಪತಿಯೂ ಆದ ಇಂದ್ರದೇವರನ್ನು ಕಂಡು ಸಹಿಸಲಾರದಾದರು. ಏಕಾದಶ ರುದ್ರರಿಂದಲೂ ಅಷ್ಟವಸುಗಳಿಂದಲೂ ದ್ವಾದಶಾದಿತ್ಯರಿಂದಲೂ ಅಶ್ವಿನೀ ದೇವತೆ ಗಳಿಂದಲೂ ಪಿತೃ, ವಹ್ನಿ, ಮರುತ್ತುಗಳು, ಋಭುಗಳು, ಸಾಧ್ಯರು, ವಿಶ್ವೇ ದೇವತೆ ಗಳು—ಇವರಿಂದಲೂ ಕೂಡಿ ಇಂದ್ರದೇವರು ತಮ್ಮ ಕಾಂತಿಯಿಂದ ಪ್ರಕಾಶಿಸು

ನಮುಚಿಃ ಶಂಬರೋಽನರ್ವಾ ದ್ವಿಮೂರ್ಧೋ ವೃಷಭೋಽಂಬರಃ।
ಹಯಗ್ರೀವಃ ಶಂಕುಶಿರಾ ವಿಪ್ರಚಿತ್ತಿರಯೋಮುಖಃ ॥ ೧೯ ॥

ಪುಲೋಮಾ ವೃಷಪರ್ವಾ ಚ ಪ್ರಹೇತಿರ್ಹೇತಿರುತ್ಕಚಃ ।
ವ್ಯೋಮಕೇಶೋ ವಿರೂಪಾಕ್ಷಃ ಕಪಿಲೋಽಥ ವಿಭಾವಸುಃ ॥ ೨೦ ॥

ಇಲ್ವಲೋ ಬಲ್ವಲಶ್ಚೈವ ದಂದಶೂಕೋ ವೃಷಧ್ವಜಃ ।
ಕಾಲನಾಭೋ ಮಹಾನಾಭೋ ಭೂತಸಂತಾಪನೋ ವೃಕಃ ॥೨೧॥

ದೈತೇಯಾ ದಾನವಾ ಯಕ್ಷಾ ರಕ್ಷಾಂಸಿ ಚ ಸಹಸ್ರಶಃ ।
ಸುಮಾಲಿಮಾಲಿಪ್ರಮುಖಾಃ ಕಾರ್ತಸ್ವರಪರಿಚ್ಛದಾಃ ॥ ೨೨ ॥

ಪ್ರತಿಷಿಧ್ಯೇಂದ್ರಸೇನಾಗ್ರ್ಯಂ ಮೃತ್ಯೋರಪಿ ದುರಾಸದಮ್ ।
ಅಭ್ಯದ್ರವನ್ನಸಂಭೀತಾಃ ಸಿಂಹನಾದೇನ ದುರ್ಮದಾಃ ॥ ೨೩ ॥

ದುರ್ಮದಾಃ=ಮತ್ತರಾದ ಕಾರ್ತಸ್ವರ ಪರಿಚ್ಛದಾಃ=ಬಂಗಾರದ ಆಭರಣಗಳಿಂದ ಅಲಂಕೃತರಾದ ನಮುಚಿ, ಶಂಬರ, ಅನರ್ವ, ದ್ವಿಮೂರ್ಧ, ವೃಷಭ, ಅಂಬರ, ಹಯಗ್ರೀವ, ಶಂಕುಶಿರ, ವಿಪ್ರಚಿತ್ತಿ, ಅಯೋಮುಖ, ಪುಲೋಮ, ವೃಷಪರ್ವ, ಪ್ರಹೇತಿ, ಹೇತಿ, ಉತ್ಕಚ, ವ್ಯೋಮಕೇಶ, ವಿರೂಪಾಕ್ಷ, ಕಪಿಲ, ವಿಭಾವಸು, ಇಲ್ವಲ, ಬಲ್ವಲ, ದಂದಶೂಕ, ವೃಷಧ್ವಜ, ಕಾಲನಾಭ, ಮಹಾನಾಭ, ಭೂತಸಂತಾಪನ, ವೃಕ, ಈ ಮೊದಲಾನ ದೈತ್ಯರೂ ದಾನವರೂ ಯಕ್ಷರೂ ಸಾವಿರಾರು ರಾಕ್ಷಸರೂ ಸುಮಾಲಿ ಮಾಲಿ ಮೊದಲಾದವರೂ ಅಸಂಭೀತಾಃ (ಸಂತಃ) - ಹೆದರದವರಾಗಿ ಮೃತ್ಯೋಃ ಅಪಿ = ಮೃತ್ಯುವಿಗೂ ದುರಾಸದಂ= ಹೊಂದಲಸಾಧ್ಯನಾದ ಇಂದ್ರಸೇನಾಗ್ರ್ಯಂ = ಇಂದ್ರಸೈನ್ಯಗಳ ಅಧಿಪತಿಯನ್ನು (ಸ್ಕಂದನನ್ನು) ಅಥವಾ ಶ್ರೇಷ್ಠವಾದ ಇಂದ್ರಸೈನ್ಯವನ್ನು ಪ್ರತಿಷಿಧ್ಯ = ತಡೆದು (ನಿಲ್ಲು ಎಂದು ಹೇಳಿ) ಸಿಂಹನಾದದಿಂದ ಅಭ್ಯದ್ರವನ್=ಮೇಲೆರಗಿದರು. ||೧೯-೨೩||

ತ್ತಿದ್ದರು. ಬಂಗಾರದ ಒಡವೆಗಳನ್ನು ತೊಟ್ಟಿದ್ದ ಯುದ್ಧೋನ್ಮತ್ತರಾದ ನಮುಚಿ, ಶಂಬರ, ಅನರ್ವ, ದ್ವಿಮೂರ್ಧ, ವೃಷಭ, ಅಂಬರ, ಹಯಗ್ರೀವ, ಶಂಕುಶಿರ, ವಿಪ್ರಚಿತ್ತಿ, ಅಯೋಮುಖ, ಪುಲೋಮ, ವೃಷಪರ್ವ, ಪ್ರಹೇತಿ, ಹೇತಿ, ಉತ್ಕಚ, ವ್ಯೋಮಕೇಶ, ವಿರೂಪಾಕ್ಷ, ಕಪಿಲ, ವಿಭಾವಸು, ಇಲ್ವಲ, ಬಲ್ವಲ, ದಂದಶೂಕ, ವೃಷಧ್ವಜ, ಕಾಲನಾಭ, ಮಹಾನಾಭ, ಭೂತಸಂತಾಪನ, ವೃಕ ಮೊದಲಾದ ದೈತ್ಯರೂ ದಾನವರೂ ಯಕ್ಷರೂ ರಾಕ್ಷಸರೂ ಸುಮಾಲಿ ಮಾಲಿ ಮೊದಲಾದ ಸಹಸ್ರಾರು ಜನ ಹೆದರದೆ ಮೃತ್ಯುವಿನಿಂದಲೂ ಹೊಂದಲಾಗದ ಇಂದ್ರಸೇನಾಧಿಪತಿಯನ್ನು—ಇಂದ್ರಸೈನ್ಯವನ್ನು—ತಡೆದು ಸಿಂಹನಾದ ಮಾಡುತ್ತಾ ಮೇಲೆ ಬಿದ್ದರು.

ಗದಾಽಸಿಪರಿಘೈರ್ಬಾಣೈಃ ಪಾಶಮುದ್ಗರತೋಮರೈಃ ।
ಶೂಲೈಃ ಪರಶ್ವಧೈಃ ಖಡ್ಗೈಃ ಶತಘ್ನೀಭಿರ್ಭೃಶುಂಡಿಭಿಃ ।
ಸರ್ವತೋಽವಾಕಿರನ್ನಸ್ತ್ರೈಃ ಶಸ್ತ್ರೈಶ್ಚ ವಿಬುಧರ್ಷಭಾನ್ ॥ ೨೪ ॥

(ತೇ)=ಆ ದೈತ್ಯರೇ ಮೊದಲಾದವರು ಗದೆ, ಕತ್ತಿ (ಅಸಿ), ಪರಿಘ, ಬಾಣ, ಪಾಶ, ಮುದ್ಗರ, ತೋಮರ, ಶೂಲ, (ಪರಶ್ವಧ) ಕೊಡಲಿ, ಖಡ್ಗ, ಶತಘ್ನೀ (ನೂರು ಜನರನ್ನು ಕೊಲ್ಲುವ ಗವೆ), ಭೃಶುಂಡಿ ಮೊದಲಾದ ಅಸ್ತ್ರಗಳಿಂದಲೂ ಶಸ್ತ್ರಗಳಿಂದಲೂ ಸರ್ವತಃ=ಸುತ್ತಲೂ ವಿಬುಧರ್ಷಭಾನ್-ದೇವತಾಶ್ರೇಷ್ಠರನ್ನು ಅವಾಕಿರನ್=ಮಳೆಗರೆದರು. ಶತಘ್ನಿಯು ನಾಲ್ಕು ಗೇಣು ಇರುವ ಕಬ್ಬಿಣದ ಮೊಳೆಗಳುಳ್ಳ (ಗುಂಡಗಿನ) ಸಂಚಿಕೆ. ಭೃಶಂಡಿಯು ಎಲ್ಲ ಕಡೆಯಲ್ಲಿ ಲೋಹದ ಮೊಳೆಗಳುಳ್ಳದ್ದು. ॥ ೨೪ ॥

ನ ತೇಽದೃಶ್ಯಂತ ಸಂಛನ್ನಾಃ ಶರಜಾಲೈಃ ಸಮಂತತಃ ।
ಪುಂಖಾನುಪುಂಖೈಃ ಪತಿತೈಃ ಪ್ರಾವೃಷೀವ ನಭೋ ಘನೈಃ ॥ ೨೫ ॥

ಸಮಂತತಃ=ಎಲ್ಲ ಕಡೆಗಳಲ್ಲಿಯೂ ಪತಿತೈಃ=ಬಿದ್ದ ಪುಂಖಾನುಪುಂಖೈಃ= ಒಂದರ ಬುಡಕ್ಕೆ ಮತ್ತೊಂದು ಸೇರಿಕೊಂಡಿರುವ ಶರಜಾಲೈಃ = ಬಾಣಗಳ ಜಾಲ ಗಳಿಂದ ಸಂಛನ್ನಾಃ=ಮುಚ್ಚಿಹೋದ ತೇ=ಆ ದೇವತೆಗಳು ಪ್ರಾವೃಷಿ=ಮಳೆಗಾಲ ದಲ್ಲಿ ಮೇಘೈಃ=ಮೋಡಗಳಿಂದ (ಸಂಛನ್ನಂ)=ಮುಚ್ಚಿಹೋದ ನಭಃ ಇವ=ಆಕಾಶ ದಂತೆ ನ ಅದೃಶ್ಯಂತ-ಕಾಣಿಸದೆ ಹೋದರು. ॥ ೨೫ ॥

ನ ತೇ ಶಸ್ತ್ರಾಸ್ತ್ರಬಾಣೌಘಾ ವ್ಯಾಸೇದುಃ ಸುರಸೈನಿಕಾನ್ ।
ಛಿನ್ನಾಃ ಸಿದ್ಧಪಥೇ ದೇವೈರ್ಲಘುಹಸ್ತೈಃ ಸಹಸ್ರಧಾ ॥ ೨೬ ॥

ಲಘುಹಸ್ತೈಃ=ವೇಗವಾಗಿ ಗುರಿಯಿಟ್ಟು ಹೊಡೆಯುವ ಕೈಚಳಕವುಳ್ಳ ದೇವತೆ ಗಳಿಂದ ಸಿದ್ಧಪಥೇ=ಆಕಾಶದಲ್ಲಿ ದೇವತೆಗಳಿಗೆ ಬಂದು ತಾಗುವುದಕ್ಕೆ ಮೊದಲೇ ಮಧ್ಯಮಾರ್ಗದಲ್ಲಿಯೇ ಸಹಸ್ರಧಾ = ಸಾವಿರಾರು ಚೂರುಗಳಾಗಿ ಛಿನ್ನಾಃ (ಸಂತಃ)=ಕತ್ತರಿಸಲ್ಪಟ್ಟವುಗಳಾಗಿ ತೇ=ಆ ದೈತ್ಯರು ಪ್ರಯೋಗಿಸಿದ ಶಸ್ತ್ರ ಅಸ್ತ್ರ

ಗದೆ, ಕತ್ತಿ, ಪರಿಘ, ಬಾಣ, ಪಾಶ, ಮುದ್ಗರ, ತೋಮರ, ಶೂಲ, ಕೊಡಲಿ, ಖಡ್ಗ, ಶತಘ್ನಿ, ಭೃಶುಂಡಿ ಮುಂತಾದ ಆಯುಧಗಳಿಂದಲೂ ಅಸ್ತ್ರ ಶಸ್ತ್ರಗಳಿಂದಲೂ ದೇವತೆಗಳನ್ನು ಎಲ್ಲ ಕಡೆಯಿಂದಲೂ ಮುಚ್ಚಿದರು (ಮಳೆಗರೆದರು). ಪುಂಖಾನು ಪುಂಖವಾಗಿ ಬಿದ್ದ ಆ ಬಾಣಗಳ ಜಾಲಗಳಿಂದ ಎಲ್ಲ ಕಡೆಗಳಲ್ಲಿಯೂ ಮುಚ್ಚಿಹೋದ ಅವರು ಮಳೆಗಾಲದಲ್ಲಿ ಮೋಡಗಳಿಂದ ಮುಚ್ಚಿಹೋದ ಆಕಾಶದಂತೆ ಕಾಣದಾದರು. ಶೀಘ್ರವಾಗಿ ಬಾಣ ಬಿಡುವ ಸಾಮರ್ಥ್ಯವುಳ್ಳ ದೇವತೆಗಳಿಂದ ಆಕಾಶಮಾರ್ಗ ದಲ್ಲಿಯೇ ಸಾವಿರಾರು ಭಾಗವಾಗಿ ಭೇದಿಸಲ್ಪಟ್ಟ ಆ ಶಸ್ತ್ರಾಸ್ತ್ರ ಬಾಣಸಮೂಹಗಳು

ಮತ್ತು ಬಾಣಗಳ ಸಮೂಹಗಳು ದೇವತೆಗಳ ಸೈನಿಕರನ್ನು ನ ವ್ಯಾಸೇದುಃ=ಬಂದು ಸೇರಲಿಲ್ಲ. ದೇವತೆಗಳಿಗೆ ತಗಲಲಿಲ್ಲವೆಂದರ್ಥ. || ೨೬ ||

ಅಥ ಕ್ಷೀಣಾಸ್ತ್ರಶಸ್ತ್ರೌಘಾ ಗಿರಿಶೃಂಗದ್ರುಮೋಪಲೈಃ ।
ಅಭ್ಯವರ್ಷನ್ ಸುರಬಲಂ ಚಿಚ್ಛಿದುಸ್ತಾಂಶ್ಚ ಪೂರ್ವವತ್ ॥ ೨೭ ॥

ಅಥ=ಶಸ್ತ್ರಾಸ್ತ್ರಗಳು ವ್ಯರ್ಥವಾದಮೇಲೆ ಕ್ಷೀಣಾಸ್ತ್ರಶಸ್ತ್ರೌಘಾಃ = ಶಸ್ತ್ರಾಸ್ತ್ರ ಸಮೂಹಗಳು ಕ್ಷೀಣಿಸಿದ (ಇಲ್ಲದೆ ಹೋದ) ಆ ದೈತ್ಯರು ಸುರಬಲಂ=ದೇವತಾಸೈನ್ಯ ವನ್ನು ಗಿರಿಶೃಂಗ=ಬೆಟ್ಟಗಳ ಕೋಡುಗಲ್ಲುಗಳು ದ್ರುಮ=ಹೆಮ್ಮರಗಳು ಉಪಲೈಃ= ಬಂಡೆಗಳು—ಇವುಗಳಿಂದ ಅಭ್ಯವರ್ಷನ್=ಮಳೆ ಸುರಿಸಿದರು. (ದೇವಾಃ)= ದೇವತೆಗಳು ಪೂರ್ವವತ್=ಹಿಂದಿನಂತೆಯೇ ತಾನ್ ಚ=ಅವುಗಳನ್ನು ಚಿಚ್ಛಿದುಃ= ಕತ್ತರಿಸಿಹಾಕಿದರು. || ೨೭ ||

ತಾನಕ್ಷತಾನ್ ಸ್ವಸ್ತಿಮತೋ ನಿಶಾಮ್ಯ
ಶಸ್ತ್ರಾಸ್ತ್ರಪೂಗೈರಥ ವೃತ್ರನಾಥಾಃ ।
ದ್ರುಮೈರ್ದೃಷದ್ಭಿರ್ವಿವಿಧಾದ್ರಿಶೃಂಗೈ-
ರಥಾಕ್ಷಿಪಂಸ್ತತ್ರ ಸುರೇಂದ್ರಸೈನಿಕಾನ್ ॥ ೨೮ ॥

ಅಥ=ಮತ್ತು ವೃತ್ರನಾಥಾ=ವೃತ್ರನನ್ನೇ ನಾಯಕನನ್ನಾಗಿ ಹೊಂದಿರುವ ದೈತ್ಯರು ತಾನ್=ಆ ಇಂದ್ರನ ಸೈನಿಕರನ್ನು ಮರಗಳಿಂದಲೂ ಕಲ್ಲುಗಳಿಂದಲೂ (ದೃಷದ್ಭಿಃ)=ಅನೇಕ ಬಗೆಯ ಬೆಟ್ಟಗಳ ಕೋಡುಗಲ್ಲುಗಳಿಂದಲೂ ಅಕ್ಷತಾನ್= ಗಾಯಗೊಳ್ಳದೆ ಸ್ವಸ್ತಿ ಮತಃ=ಕ್ಷೇಮದಿಂದಿರುವವರನ್ನು ನಿಶಾಮ್ಯ=ನೋಡಿ ಅಥ= ಮತ್ತೆ ತತ್ರ=ಯುದ್ಧದಲ್ಲಿ ಸೈನಿಕರ ಮೇಲೆ ಶಸ್ತ್ರಾಸ್ತ್ರ ಸಮೂಹಗಳಿಂದ ಅಕ್ಷಿಪನ್= ಹೊಡೆದರು. || ೨೮ ||

ಸರ್ವೇ ಪ್ರಯಾಸಾ ಅಭವನ್ ವಿಮೋಘಾ
ಕೃತಾಃ ಕೃತಾ ದೇವಗಣೇಷು ದೈತ್ಯೈಃ ।
ಕೃಷ್ಣಾನುಕೂಲೇಷು ಯಥಾ ಮಹತ್ಸು
ಕ್ಷುದ್ರೈಃ ಪ್ರಯುಕ್ತಾ ರುಶತೀ ರೂಕ್ಷವಾಚಃ ॥ ೨೯ ॥

ದೇವಸಮೂಹವನ್ನು ಸೇರಲೇ ಇಲ್ಲ. ದೈತ್ಯರಲ್ಲಿದ್ದ ಶಸ್ತ್ರಾಸ್ತ್ರಗಳೆಲ್ಲ ಮುಗಿದು ಹೋದುವು. ಅನಂತರ ಅವರು ಬೆಟ್ಟದ ಕೋಡುಗಲ್ಲುಗಳು, ಗಿಡಗಳು ಮತ್ತು ದೊಡ್ಡ ದೊಡ್ಡ ಬಂಡೆಗಳಿಂದ ದೇವಸೈನ್ಯದ ಮೇಲೆ ಮಳೆ ಸುರಿಸಿದರು. ದೇವತೆಗಳೂ ಅವುಗಳನ್ನು ಹಿಂದಿನಂತೆಯೇ ಚೂರು ಚೂರು ಮಾಡಿದರು. ಇವುಗಳಿಂದ ಕೂಡ ಗಾಯಗೊಳ್ಳದೆ ಕ್ಷೇಮದಿಂದಿದ್ದ ದೇವತೆಗಳನ್ನು ನೋಡಿ ವೃತ್ರನನ್ನೇ ನಾಯಕ ನನ್ನಾಗಿ ಹೊಂದಿದ್ದ ಆ ದೈತ್ಯರು ಮತ್ತೆ ಶಸ್ತ್ರಾಸ್ತ್ರಗಳಿಂದ ದೇವಸೈನಿಕರನ್ನು ಹೊಡೆ

ದೈತ್ಯರಿಂದ ದೇವತೆಗಳ ಸಮೂಹಗಳ ಮೇಲೆ ಕೃತಾಃ ಕೃತಾಃ=ಮತ್ತೆ ಮತ್ತೆ ಮಾಡಲ್ಪಟ್ಟ ಸರ್ವೇ=ಎಲ್ಲ ಪ್ರಯಾಸಾಃ=ಅವರನ್ನು ಹೊಡೆಯುವ ಪ್ರಯತ್ನಗಳೂ ಯಥಾ=ಹೇಗೆ ಕೃಷ್ಣಾನುಕೂಲೇಷು=ಶ್ರೀಕೃಷ್ಣನು ಅನುಗ್ರಹಾಭಿಮುಖನಾಗಿರುವ ಮಹತ್ಸು=ಮಹನೀಯರ ವಿಷಯದಲ್ಲಿ (ದುರ್ವಾಸಾದಿಗಳ ವಿಷಯದಲ್ಲಿ) ಕ್ಷುದ್ರೈಃ=ನೀಚರಿಂದ (ಹಂಸಡಿಭಿಕ ಮೊದಲಾದ ಅಲ್ಪರಿಂದ) ಪ್ರಯುಕ್ತಗಳಾದ ರುಶತೀಃ=ಮನಃಕ್ಷೋಭೆಯನ್ನುಂಟುಮಾಡುವ ರೂಕ್ಷವಾಚಃ = ಕಠಿಣ ಮಾತುಗಳು (ವಿಮೋಘಾಃ)=ಕ್ಷೋಭಾಕಾರಿಗಳಲ್ಲವೋ (ತಥಾ)=ಹಾಗೆ ವಿಮೋಘಾಃ=ಅತ್ಯಂತ ವ್ಯರ್ಥಗಳಾಗಿ ಅಭವನ್=ಆದುವು. || ೯ ||

ತೇ ಸ್ವಪ್ರಯಾಸಂ ವಿತಥಂ ನಿರೀಕ್ಷ್ಯ
ಹರಾವಭಕ್ತಾ ಹತಯುದ್ಧದರ್ಪಾಃ ।
ಪಲಾಯನಾಯಾಜಿಮುಖೇ ವಿಸೃಜ್ಯ
ಪತಿಂ ಮನಸ್ತೇ ದಧುರಸ್ತಸಾರಾಃ || ೧೦ ||

ಸ್ವಪ್ರಯಾಸಂ = ತಮ್ಮ ಪ್ರಯತ್ನವೆಲ್ಲವೂ ವಿತಥಂ = ವ್ಯರ್ಥವಾದುದನ್ನು ನಿರೀಕ್ಷ್ಯ=ನೋಡಿ ಹರೌ=ಶ್ರೀಹರಿಯಲ್ಲಿ ಅಭಕ್ತಾಃ=ಸ್ವರೂಪದಿಂದ ಭಕ್ತರಲ್ಲದ ತೇ=ಆ ಪರಾಕ್ರಮಿಗಳೆಂದು ಪ್ರಸಿದ್ಧರಾಗಿದ್ದ ತೇ=ದೈತ್ಯರು ಅಸ್ತಸಾರಾಃ (ಸಂತಃ)=ಬಲಹೀನರಾಗಿ ಆದ್ದರಿಂದಲೇ ಹತಯುದ್ಧದರ್ಪಾಃ=ಯುದ್ಧಮಾಡುತ್ತೇವೆ ಎಂಬ ಅಹಂಕಾರ ಅಡಗಿದವರಾಗಿ ಆಜಿಮುಖೇ = ಯುದ್ಧಾರಂಭದಲ್ಲಿ ಪತಿಂ = ತಮ್ಮ ನಾಯಕನಾದ ವೃತ್ರಾಸುರನನ್ನು ವಿಸೃಜ್ಯ = ಬಿಟ್ಟು ಪಲಾಯನಾಯ = ಓಡಿ ಹೋಗಲು ಮನಃ ದಧುಃ=ಮನಸ್ಸು ಮಾಡಿದರು. 'ಹರಾವಭಕ್ತಾಃ' ಎಂದು ಹೇಳಿದ್ದರಿಂದ ಅವರ ಪರಾಜಯಕ್ಕೆ ಕಾರಣವನ್ನು ಸೂಚಿಸಿರುವರು. || ೧೦ ||

ವೃತ್ರೋಽಸುರಾಂಸ್ತಾನನುಗಾನ್ ಮನಸ್ವೀ
ಪ್ರಧಾವತಃ ಪ್ರೇಕ್ಷ್ಯ ಬಭಾಷ ಏತತ್ ।
ಪಲಾಯಿತಂ ಪ್ರೇಕ್ಷ್ಯ ಬಲಂ ಚ ಭಗ್ನಂ
ಭಯೇನ ತೀವ್ರೇಣ ವಿಹಸ್ಯ ವೀರಃ || ೧೧ ||

ದರು. ಹೀಗವರು ದೇವತೆಗಳ ಮೇಲೆ ಮಾಡಿದ ಪ್ರಹಾರಗಳೆಲ್ಲವೂ ಶ್ರೀಹರಿಯು ಅನುಕೂಲನಾಗಿರುವ ಮಹನೀಯರಲ್ಲಿ ಕ್ಷುದ್ರರು ಪ್ರಯೋಗಿಸಿದ ಮನಃಖೇದಜನಕ ಪರುಷವಾಕ್ಯಗಳು ವ್ಯರ್ಥವಾಗುವಾಗುವಂತೆ ವ್ಯರ್ಥವಾದುವು. ಶ್ರೀಹರಿಯ ಭಕ್ತರಲ್ಲದ ದೈತ್ಯರಿಗೆ ತಮ್ಮ ಪ್ರಯತ್ನಗಳು ವ್ಯರ್ಥವಾದದ್ದು ಕಂಡು ಯುದ್ಧದ ಅಹಂಕಾರವು ಅಡಗಿತು. ಬಲಹೀನರಾದ ಅವರು ನಾಯಕನನ್ನು ಕೈಬಿಟ್ಟು ಯುದ್ಧದಿಂದ ಓಡಿಹೋಗಲು ಮನಸ್ಸುಮಾಡಿದರು. ಓಡಿಹೋಗುತ್ತಿದ್ದ ಅನುಚರರಾದ ಅಸುರರನ್ನು ಕಂಡು ದೃಢಮನಸ್ಸಿನ ವೃತ್ರನು ಇದನ್ನು ಹೇಳಿದನು. ಆ ವೇಳೆಗಾಗಲೇ

ವೀರಃ = ಪರಾಕ್ರಮಿಯಾದ ಮನಸ್ವೀ = ಸ್ಥಿರ (ಪ್ರಶಸ್ತ) ಮನಸ್ಕನಾದ ವೃತ್ರಾಸುರನು ಪ್ರಧಾವತಃ=ವೇಗವಾಗಿ ಓಡಿಹೋಗುತ್ತಿದ್ದ ಅನುಗಾನ್ = ತನ್ನ ಅನುಚರರಾದ ತಾನ್ ಅಸುರಾನ್=ಆ ವಿಪ್ರಚಿತ್ತಿ ಮೊದಲಾದ ದೈತ್ಯರನ್ನು ಪ್ರೇಕ್ಷ್ಯ= ನೋಡಿ, ಅದಕ್ಕೂ ಮೊದಲೇ ತೀವ್ರೇಣ ಭಯೇನ=ಅತಿಶಯವಾದ ಭಯದಿಂದ ಪಲಾಯಿತಂ=ಓಡಿಹೋಗಿದ್ದ ಚ=ಮತ್ತು ಭಗ್ನಂ=ಅಸ್ತವ್ಯಸ್ತವಾದ ಬಲಂ=ಸೈನ್ಯ ವನ್ನೂ ಪ್ರೇಕ್ಷ್ಯ=ನೋಡಿ ವಿಹಸ್ಯ=ಗಹಗಹಿಸಿ ನಕ್ಕು ಏತತ್=ಮುಂದೆ ಹೇಳುವ ಮಾತುಗಳನ್ನು ಬಭಾಷೇ=ಹೇಳಿದನು. || ೩೧ ||

ಕಾಲೋಪಪನ್ನಾಂ ರುಚಿರಾಂ ಮನಸ್ವಿನಾ-
ಮುವಾಚ ವಾಚಂ ಪುರುಷಪ್ರವೀರಃ ।
ಹೇ ವಿಪ್ರಚಿತ್ತೇ ನಮುಚೇ ಪುಲೋಮನ್
ಮಯಾನರ್ವನ್ ಶಂಬರ ಮೇ ಶೃಣುಧ್ವಮ್ ॥ ೩೨ ॥

ಪುರುಷರಲ್ಲಿ ಅತ್ಯಂತ ವೀರನಾದ ವೃತ್ರಾಸುರನು ಕಾಲೋಪಪನ್ನಾಂ= ಆ ಸಂದರ್ಭಕ್ಕೆ ಅನುಗುಣವಾದ ಮನಸ್ವಿನಾಂ=ಶ್ರೇಷ್ಠ ಮನಸ್ಕರಿಗೆ ರುಚಿರಾಂ= ಮನೋಹರವಾದ ವಾಚಂ=ಮಾತನ್ನು ಉವಾಚ=ಹೇಳಿದನು. ಏನೆಂದರೆ, ಅದನ್ನೇ ಎರಡೂವರೆ ಶ್ಲೋಕಗಳಿಂದ ಹೇಳುತ್ತಾರೆ. ವಿಪ್ರಚಿತ್ತಿಯೇ, ನಮುಚಿಯೇ, ಪುಲೋಮನೇ, ಮಯನೇ, ಅನರ್ವನೇ, ಶಂಬರನೇ ನೀವು ಮೇ=ನನ್ನ ಮಾತನ್ನು ಶೃಣುಧ್ವಂ=ಕೇಳಿರಿ. || ೩೨ ||

ಜಾತಸ್ಯ ಮೃತ್ಯುರ್ಧ್ರುವ ಏಷ ಸರ್ವತಃ
ಪ್ರತಿಕ್ರಿಯಾ ಯಸ್ಯ ನ ಚೇಹ ಕ್ಲೃಪ್ತಾ ।
ಲೋಕೋ ಯಶಶ್ಚಾಥ ತತೋ ಯದಿ ಹ್ಯಮುಂ
ಕೋ ನಾಮ ಮೃತ್ಯುಂ ನ ವೃಣೀತ ಯುಕ್ತಮ್ ॥ ೩೩ ॥

ಇಹ=ಈ ಲೋಕದಲ್ಲಿ ಯಸ್ಯ=ಯಾವ ಮೃತ್ಯುವಿಗೆ ಪ್ರತಿಕ್ರಿಯಾ= ಪರಿಹಾರವು ನ ಚ ಕ್ಲೃಪ್ತಾ=ಕ್ಲುಪ್ತವಾಗಿಲ್ಲವೋ ಏಷಃ=ಅಂತಹ ಈ ಮೃತ್ಯುವು ಜಾತಸ್ಯ=ಹುಟ್ಟಿದವನಿಗೆ ಸರ್ವತಃ=ಎಲ್ಲ ಕಡೆಯಿಂದಲೂ ಧ್ರುವಃ=ತಪ್ಪಿದ್ದಲ್ಲವು. ಅಥ ಯದಿ=ಒಂದು ವೇಳೆ ಅದರಿಂದ ಲೋಕಃ=ಉತ್ತಮ ಲೋಕವೂ ಯಶಃ ಚ=

ತೀವ್ರ ಭಯದಿಂದ ಓಡಿಹೋದ ಮತ್ತು ಚದರಿಹೋದ ಸೈನ್ಯವನ್ನು ಕಂಡು ನಕ್ಕನು. ಅತ್ಯಂತ ವೀರಪುರುಷನಾದ ಅವನು ಸ್ಥಿರಚಿತ್ತರು ತಲೆದೂಗುವ ಆ ಕಾಲಕ್ಕೆ ತಕ್ಕ ಮಾತುಗಳನ್ನಾಡಿದನು. 'ವಿಪ್ರಚಿತ್ತಿ, ನಮುಚಿ, ಪುಲೋಮ, ಮಯ, ಅನರ್ವ, ಶಂಬರರೇ ನನ್ನ ಮಾತನ್ನು ಕೇಳಿರಿ. ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ. ಈ ಲೋಕ ದಲ್ಲಿ ಅದಕ್ಕೆ ಪ್ರತೀಕಾರ(ಪರಿಹಾರ)ವಿಲ್ಲ. ಅಂತಹ ಸಾವಿನಿಂದ ಉತ್ತಮ ಲೋಕವೂ ಯಶಸ್ಸೂ ಬರುವುದಾದರೆ ಒದಗಿಬಂದ ಆ ಮೃತ್ಯುವನ್ನು ಯಾರು ತಾನೇ ಅಂಗೀಕರಿಸ

ಕೀರ್ತಿಯೂ (ಸ್ಯಾತಾಂ)=ಬರುವುದಾದರೆ ತತಃ=ಆಗ ಕಃ=ಕ್ಷತ್ರಿಯ ಮೊದಲಾದ ವರಿಗೆ ಸಮಾನನಾದ ಯಾವನು ತಾನೇ ಯುಕ್ತಂ-ಯುದ್ಧರಂಗದಲ್ಲಿ ಒದಗಿಬಂದ ಈ ಮೃತ್ಯುವನ್ನು ನ ವೃಣೀತ ನಾಮ=ಅಂಗೀಕರಿಸದಿರುವನು! ಅಥವಾ ತತಃ-ಮೃತ್ಯುವಿನಿಂದ ಇಹ=ಇಲ್ಲಿ ಯಶಸ್ಸೂ ಲೋಕಃ-ಸ್ವರ್ಗಲೋಕವೂ ಯದಿ=ಬರುವುದಾದರೆ ಅಥ=ಆಗ ಯುಕ್ತಂ=ಸಮುಚಿತವಾದ ಅಮುಂ ಮೃತ್ಯುಂ=ಈ ಮರಣವನ್ನು ಕಃ ನಾಮ = ಯಾವನು ತಾನೇ ನ ವೃಣೀತ = ಅಂಗೀಕರಿಸದಿರುವನು? ಮೃತ್ಯುವಂತೂ ತಪ್ಪಿದ್ದಲ್ಲ. ಆದರಿಂದ ಕೀರ್ತಿ ಮತ್ತು ಉತ್ತಮಲೋಕ ಸಿಗುವಂತಾದರೆ ಅಂತಹುದನ್ನು ಬಿಡುವವನು ವಿವೇಕಿಯಲ್ಲವೆಂದರ್ಥ. || ೩೩ ||

ದ್ವೌ ಸಮ್ಮತಾವಿಹ ಮೃತ್ಯೂ ದುರಾಪೌ
ಯದ್ಬ್ರಹ್ಮ ಸಂಧಾರಣಯಾ ಜಿತಾಸುಃ ।
ಕಲೇವರಂ ಯೋಗರತೋ ವಿಜಹ್ಯಾ-
ದ್ಯದಗ್ರಣೀರ್ವೀರಶಯೇಽನಿವೃತ್ತಃ || ೩೪ ||

ಈ ಕಾರಣದಿಂದಲೂ ಯುದ್ಧದಲ್ಲಿ ಸಾವು ಪ್ರಶಸ್ತವೆಂದು ಹೇಳುತ್ತಾರೆ. ಜಿತಾಸುಃ = ಪ್ರಾಣಾಯಾಮದಿಂದ ವಾಯುವನ್ನು ಜಯಿಸಿದ (ಒಲಿಸಿಕೊಂಡ) ಯೋಗರತಃ = ಯೋಗಾಭ್ಯಾಸದಲ್ಲಿ ರತನಾದ ಯೋಗಿಯು (ಸನ್ಯಾಸಿಯು) ಬ್ರಹ್ಮಸಂಧಾರಣಯಾ=ಶ್ರೀಹರಿಯ ಧ್ಯಾನದಿಂದ ಕಲೇವರಂ=ದೇಹವನ್ನು ಯತ್ ವಿಜಹ್ಯಾತ್ = ಬಿಡುವನೆಂಬುದೇನುಂಟೋ ಅದೂ, ಅನಿವೃತ್ತಃ = ಯುದ್ಧದಲ್ಲಿ ಹಿಂದಕ್ಕೆ ಬರದ ಅಗ್ರಣೀಃ=ವೀರರಲ್ಲಿ ಅಗ್ರೇಸರನು ವೀರಶಯೇ-ಯುದ್ಧರಂಗದಲ್ಲಿ ಕಲೇವರಂ = ದೇಹವನ್ನು ವಿಜಹ್ಯಾತ್ ಇತಿ ಯತ್-ಬಿಡುವನೆಂಬುದೇನುಂಟೋ ಅದೂ ದ್ವೌ ಮೃತ್ಯೂ=ಅವರಿಬ್ಬರ ಈ ಎರಡು ರೀತಿಯ ಮರಣಗಳೂ ಇಹ=ಈ ಲೋಕದಲ್ಲಿ ದುರಾಪೌ-ಬಹಳ ಪುಣ್ಯವಿದ್ದಲ್ಲಿ ಮಾತ್ರ ದೊರೆಯತಕ್ಕವುಗಳೆಂದು ಸಮ್ಮತೌ = ಶಾಸ್ತ್ರಸಮ್ಮತವಾಗಿರುವುವು. ಶಾಸ್ತ್ರದಲ್ಲಿ ವಿಹಿತವಾಗಿರುವುವೆಂದರ್ಥ. 'ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲಭೇದಿನೌ । ಪರಿವ್ರಾಡ್ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ ||' ಈ ಸ್ಮೃತಿಯೂ ಇದೇ ವಿಷಯವನ್ನು ತಿಳಿಸುವುದು. || ೩೪ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ದಶಮೋಽಧ್ಯಾಯಃ

ದಿರುವರು? ಪ್ರಾಣಾಯಾಮದಿಂದ ವಾಯುವನ್ನು ಜಯಿಸಿದ ಯೋಗಾಸಕ್ತನಾದ ಯೋಗಿಯು ಶ್ರೀಹರಿಯಲ್ಲಿ ಮನಸ್ಸಿಟ್ಟು ದೇಹತ್ಯಾಗಮಾಡುವುದೂ ಯುದ್ಧದಲ್ಲಿ ಹಿಂತಿರುಗದೆ ವೀರಾಗ್ರೇಸರನು ರಣರಂಗದಲ್ಲಿ ಕಳೇಬರವನ್ನು ಬಿಡುವುದೂ— ಈ ಎರಡು ಬಗೆಯ ಮರಣಗಳೂ ಲೋಕದಲ್ಲಿ ಪುಣ್ಯವಂತರಿಗೆ ಮಾತ್ರ ಲಭಿಸುವುವೆಂದು ಶಾಸ್ತ್ರಸಮ್ಮತವು.'

ಅಥ ಏಕಾದಶೋಽಧ್ಯಾಯಃ

ಶ್ರೀಶುಕ ಉವಾಚ—

ತ ಏವಂ ಶಂಸತೋ ಧರ್ಮ್ಯಂ ವಚಃ ಪತ್ಯುರಚೇತಸಃ ।
ನೈವಾಗೃಹ್ಣನ್ ಭಯತ್ರಸ್ತಾಃ ಪಲಾಯನಪರಾ ನೃಪ ॥ ೧ ॥

ಪರಿಕ್ಷಿದ್ರಾಜನೇ, ಭಯತ್ರಸ್ತಾಃ=ಭಯದಿಂದ ಹೆದರಿದ ಪಲಾಯನಪರಾಃ=ಓಡಿಹೋಗುವುದರಲ್ಲಿ ಆಸಕ್ತರಾಗಿದ್ದ ಅಚೇತಸಃ=(೧) ಬುದ್ಧಿಯುಳ್ಳವರ ಪ್ರವೃತ್ತಿಗೆ ಕಾರಣವಾದ ಸ್ಮರಣೆಯಿಲ್ಲದ (೨) ಮನೋದಾರ್ಢ್ಯವಿಲ್ಲದ ತೇ=ಆ ದೈತ್ಯರು ಏವಂ=ಮೇಲೆ ಹೇಳಿದಂತೆ ಶಂಸತಃ=ಹೇಳುತ್ತಿದ್ದ ಪತ್ಯುಃ=ನಾಯಕನಾದ ವೃತ್ರನ ಧರ್ಮ್ಯಂ=ಧರ್ಮಕ್ಕೆ ವಿರುದ್ಧವಲ್ಲದ ವಚಃ=ಮಾತನ್ನು ನ ಅಗೃಹ್ಣನ್ ಏವ=ಗ್ರಹಿಸಲೇ ಇಲ್ಲ. ॥ ೧ ॥

ವಿಶೀರ್ಯಮಾಣಾಂ ಪೃತನಾಮಾಸುರೀಮಸುರರ್ಷಭಃ ।
ಕಾಲಾನುಕೂಲೈಸ್ತ್ರಿದಶೈಃ ಕಾಲ್ಯಮಾನಾಮನಾಥವತ್ ॥ ೨ ॥
ದೃಷ್ಟ್ವಾಽತಪ್ಯತ ಸಂಕ್ರುದ್ಧ ಇಂದ್ರಶತ್ರುರಮರ್ಷಿತಃ ।
ತಾಂ ನಿವಾರ್ಯೌಜಸಾ ರಾಜನ್ ನಿರ್ಭರ್ತ್ಸ್ಯೇದಮುವಾಚ ಹ ॥ ೩॥

ಕಾಲಾನುಕೂಲೈಃ=ಕಾಲನಾಮಕನಾದ ಶ್ರೀಹರಿಯು ಅನುಗ್ರಹೋನ್ಮುಖನಾಗಿರುವ ತ್ರಿದಶೈಃ=ದೇವತೆಗಳಿಂದ ಅನಾಥವತ್=ನಾಯಕನಿಲ್ಲದುದೋ ಎಂಬಂತೆ ಕಾಲ್ಯಮಾನಾಂ=ಓಡಿಸಲ್ಪಡುತ್ತಿರುವ ಆದ್ದರಿಂದಲೇ ವಿಶೀರ್ಯಮಾಣಾಂ=ಹರಿದು ಹಂಚಾಗಿ ಹೋಗುತ್ತಿರುವ ಆಸುರೀಂ=ಅಸುರರ ಪೃತನಾಂ=ಸೈನ್ಯವನ್ನು

ಹನ್ನೊಂದನೆಯ ಅಧ್ಯಾಯ

ಶುಕಾಚಾರ್ಯರು—ರಾಜನೇ, ಆ ದೈತ್ಯರು ಭಯದಿಂದ ಹೆದರಿದರು. ಯುದ್ಧದಿಂದ ಓಡಿಹೋಗಲಾರಂಭಿಸಿದರು. ಸ್ಮರಣೆಯಾಗಲಿ ಮನೋದಾರ್ಢ್ಯವಾಗಲಿ ಇಲ್ಲದಿದ್ದ ಅವರು ನಾಯಕನಾದ ವೃತ್ರನ ಧರ್ಮಾನುಗುಣವಾದ ಮೇಲಿನ ಮಾತನ್ನು ಗ್ರಹಿಸಲೇ ಇಲ್ಲ. ಕಾಲನಾಮಕನಾದ ಶ್ರೀಹರಿಯು ಅನುಕೂಲನಾಗಿದ್ದ ದೇವತೆಗಳು ದೈತ್ಯರ ಸೈನ್ಯವನ್ನು ಓಡಿಸುತ್ತಿದ್ದರು. ನಾಯಕನಿಲ್ಲದ ಸೈನ್ಯದಂತೆ ಅದು ಹರಿದು ಹಂಚಾಗಿಹೋಗುತ್ತಿತ್ತು. ಇದನ್ನು ನೋಡಿದ ವೃತ್ರಾಸುರನು ಸಂತಪ್ತನಾದನು. ಅಪಜಯವನ್ನು ಸಹಿಸದ ಅವನು ಕೋಪಗೊಂಡನು. ಆ ಇಂದ್ರಶತ್ರುವು ಪರಾಕ್ರಮದಿಂದ ವಿರಾಜಿಸುತ್ತಾ ಓಡುತ್ತಿದ್ದ ಸೈನ್ಯವನ್ನು ತಡೆಹಿಡಿದು

ದೃಷ್ಟ್ವಾ=ನೋಡಿ ಅಸುರರ್ಷಭಃ=ಅಸುರಶ್ರೇಷ್ಠನಾದ ವೃತ್ರನು ಅತಪ್ಯತ=ದುಃಖಗೊಂಡನು. ಅಮರ್ಷಿತಃ=ಈ ಅಪಜಯವನ್ನು ಸಹಿಸದ ಸಂಕ್ರುದ್ಧಃ=ಅತ್ಯಂತ ಕುಪಿತನಾದ ಇಂದ್ರಶತ್ರುಃ=ವೃತ್ರನು ಓಜಸಾ=ಪರಾಕ್ರಮದಿಂದ ರಾಜನ್=ಪ್ರಕಾಶಿಸುತ್ತಾ ತಾಂ=ಆ ಓಡಿಹೋಗುತ್ತಿದ್ದ ಸೈನ್ಯವನ್ನು ನಿವಾರ್ಯ=ಓಡದಂತೆ ತಡೆಹಿಡಿದು ನಿರ್ಭರ್ತ್ಸ್ಯ=ಓಡುತ್ತಿದ್ದ ಸೈನ್ಯವನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ದೇವತೆಗಳನ್ನು ಧಿಕ್ಕರಿಸಿ ಇದಂ=ಮುಂದೆ ಹೇಳುವ ಮಾತುಗಳನ್ನು ಉವಾಚ ಹ=ಹೇಳಿದನಷ್ಟೆ! 'ಕಾಲಃ ಕಲಿತ ಸಂಪೂರ್ಣ ಸದ್ಗುಣತ್ವಾಜ್ಜನಾರ್ದನಃ| ಸಂಹಾರಾತ್ಸರ್ವವಿತ್ತ್ವಾದ್ವಾ ಸರ್ವವಿದ್ರಾವಣೇನ ಚ ||' (ಸಂಪೂರ್ಣ ಸದ್ಗುಣಗಳಿಂದ ಕೂಡಿದವನಾಪ್ಪರಿಂದ, ಸರ್ವಸಂಹಾರಕನಾದ್ದರಿಂದ, ಸರ್ವವನ್ನೂ ಬಲ್ಲವನಾದ್ದರಿಂದ, ಎಲ್ಲವನ್ನೂ ವಿದ್ರವಗೊಳಿಸುವುದರಿಂದ ಶ್ರೀಹರಿಯು ಕಾಲನೆನಿಸುವನು) ಎಂಬ ವಚನದಂತೆ ಶ್ರೀಹರಿಗೆ ಕಾಲನೆಂದು ಹೆಸರು. || ೨, ೩ ||

ವೃತ್ರ ಉವಾಚ—

ಕಿಂ ವ ಉಚ್ಚರಿತಾ ಮಾತುರ್ಧಾವದ್ಭಿಃ ಪೃಷ್ಠತೋ ಹತೈಃ ।
ನ ಹಿ ಭೀತವಧಃ ಶ್ಲಾಘ್ಯೋ ನ ಸ್ವರ್ಗ್ಯಃ ಶೂರಮಾನಿನಾಮ್ ||೪||

(ಹೇ ದೇವಾಃ)=ದೇವತೆಗಳೇ, ನೀವು ಮಾತುಃ=ತಾಯಿಯಾದ ಅದಿತಿ ದೇವಿಯ ಉಚ್ಚರಿತಾಃ=ಮಲಮೂತ್ರಗಳಂತೆ ಹೊರಬಂದವರು ಕಿಂ=ಏನು? ಮಕ್ಕಳೂ ಮಲಮೂತ್ರಗಳೂ ದೇಹದಿಂದ ಹೊರಬಂದದ್ದು ಸಮಾನವಾದ್ದರಿಂದ ಹಾಗೆ ಹೇಳಿದ್ದು. ಹೇ ಮಾತುಃ ಉಚ್ಚರಿತಾಃ ಎಂದು ದೇವತೆಗಳ ಸಂಬೋಧನೆ ಯಾದರೂ ಆಗಬಹುದು. ಪೃಷ್ಠತಃ=ಹಿಂದುಗಡೆಯಿಂದ ಹತೈಃ=ಸಂಹೃತರಾದ ಧಾವದ್ಭಿಃ=ಓಡಿಹೋಗುತ್ತಿರುವ ಅಸುರ ನಾಯಕರಿಂದ ವಃ=ನಿಮಗೆ ಕಿಂ=ಏನು ಪ್ರಯೋಜನ? (ಓಡಿಹೋಗುತ್ತಿರುವವರನ್ನು ಹಿಂದಿನಿಂದ ಕೊಂದುದರಿಂದ ನಿಮಗೆ ಯಶಸ್ಸಾಗಲಿ ಧರ್ಮವಾಗಲಿ ಬರುವುದಿಲ್ಲವೆಂದರ್ಥ.) ಅಧರ್ಮವಾದ್ದರಿಂದ ಪ್ರಯೋಜನವಿಲ್ಲ. ಅದಾದರೂ ಏಕೆ ಎಂದರೆ ಹೇಳುತ್ತಾರೆ. ಶೂರಮಾನಿನಾಂ=ಶೂರರಾದವರಿಗೆ ಭೀತವಧಃ=ಭಯಗೊಂಡವರನ್ನು ಕೊಲ್ಲುವುದು ನ ಹಿ ಶ್ಲಾಘ್ಯಃ=ಪ್ರಶಂಸಾರ್ಹವಲ್ಲ (ಕೀರ್ತಿಕರವಲ್ಲ). ನ ಸ್ವರ್ಗ್ಯಃ=ಸ್ವರ್ಗಲೋಕ ಪ್ರಾಪ್ತಿಗೆ ಕಾರಣವೂ ಅಲ್ಲ. ಇದರಿಂದ ಪ್ರಯೋಜನವಿಲ್ಲವೆಂಬುದನ್ನು ವಿವರಿಸಿದಂತಾಯಿತು. || ೪ ||

ದೇವತೆಗಳನ್ನು ಧಿಕ್ಕರಿಸಿ 'ನೀವೇನು ನಿಮ್ಮ ತಾಯಿಯ ಮಲಮೂತ್ರಗಳಂತೆ ಹೊರಬಂದವರೇ? ಓಡಿಹೋಗುತ್ತಿರುವ ದೈತ್ಯರನ್ನು ಹಿಂದಿನಿಂದ ಸಂಹರಿಸಿದ್ದರಿಂದ ನಿಮಗೇನು ಪ್ರಯೋಜನ? ಶೂರರಿಗೆ ಭೀತರ ವಧೆಯು ಪ್ರಶಂಸೆಗೆ ಕಾರಣವಾಗು

ಯದಿ ವಃ ಪ್ರಧನೇ ಶ್ರದ್ಧಾ ಸಾರಂ ವಾ ಕ್ಷುಲ್ಲಕಾ ಹೃದಿ ।
ಅಗ್ರೇ ತಿಷ್ಠತ ಮಾತ್ರಂ ಮೇ ನ ಚೇದ್ಗ್ರಾಮ್ಯಸುಖೇ ಸ್ಪೃಹಾ ॥೫॥

ಹೇ ಕ್ಷುಲ್ಲಕಾಃ=ಅಲ್ಪರಾದ ದೇವತೆಗಳೇ, ವಃ=ನಿಮಗೆ ಪ್ರಧನೇ=ಯುದ್ಧದಲ್ಲಿ ಯದಿ ಶ್ರದ್ಧಾ ಅಸ್ತಿ=ಶ್ರದ್ಧೆಯಿದ್ದರೆ ವಾ=ಅಥವಾ ಹೃದಿ=ನಿಮ್ಮ ಎದೆಯಲ್ಲಿ ಸಾರಂ(ಯದಿ) ಅಸ್ತಿ = ಧೈರ್ಯವಿದ್ದರೆ ಗ್ರಾಮ್ಯಸುಖೇ = ವಿಷಯಭೋಗದಿಂದ ಉಂಟಾದ ಆನಂದದಲ್ಲಿ ಸ್ಪೃಹಾ=ಆಸೆಯು ನ ಅಸ್ತಿ ಚೇತ್=ಇಲ್ಲದಿದ್ದರೆ ಮಾತ್ರಂ=ಒಂದು ಕ್ಷಣಕಾಲ ಮೇ=ನನ್ನ ಅಗ್ರೇ=ಮುಂದೆ ತಿಷ್ಠತ=ನಿಲ್ಲಿರಿ. ‖ ೫ ‖

ಏವಂ ಸುರಗಣಾನ್ ಕ್ರುದ್ಧೋ ಭೀಷಯನ್ ವಪುಷಾ ರಿಪೂನ್ ।
ವ್ಯನದತ್ಸುಮಹಾಪ್ರಾಣೋ ಯೇನ ಲೋಕಾ ವಿಚೇತಸಃ ॥ ೬ ॥

ಕ್ರುದ್ಧಃ = ಕೋಪಗೊಂಡ ಸುಮಹಾಪ್ರಾಣಃ = ಅತ್ಯಂತ ಬಲಿಷ್ಠನಾದ ವೃತ್ರಾಸುರನು ಏವಂ=ಮೇಲೆ ಹೇಳಿದಂತೆ ವಪುಷಾ=ತನ್ನ ದೊಡ್ಡ ದೇಹದಿಂದ ರಿಪೂನ್=ಶತ್ರುಗಳಾದ ಸುರಗಣಾನ್=ದೇವತಾ ಗಣಗಳನ್ನು ಭೀಷಯನ್=ಭಯಪಡಿಸುತ್ತಾ ವ್ಯನದತ್=ಸಿಂಹನಾದ ಮಾಡಿದನು. ಯೇನ=ಯಾವ ಈ ಸಿಂಹನಾದದಿಂದ ಲೋಕಾಃ=ಜನರು ವಿಚೇತಸಃ=ಮೂರ್ಛೆಗೊಂಡವರಾಗಿ (ಬಭೂವುಃ)=ಆದರು. ‖ ೬ ‖

ತೇನ ದೇವಗಣಾಃ ಸರ್ವೇ ವೃತ್ರವಿಸ್ಫೋಟನೇನ ವೈ ।
ನಿಪೇತುರ್ಮೂರ್ಛಿತಾ ಭೂಮೌ ಯಥೈವಾಶನಿನಾ ಹತಾಃ ॥ ೭ ॥

ಅದನ್ನೇ ಸ್ಪಷ್ಟವಾಗಿ ವಿವರಿಸುತ್ತಾರೆ. ತೇನ=ಆ (ಸರ್ವ ಭಯಂಕರವಾದ) ವೃತ್ರವಿಸ್ಫೋಟನೇನ=ವೃತ್ರಾಸುರನ ಸಿಂಹನಾದದಿಂದ, ಭುಜದ ತಟ್ಟುವಿಕೆಯಿಂದ ಸರ್ವೇ ದೇವಗಣಾಃ=ಎಲ್ಲ ದೇವತಾ ಸಮೂಹವೂ ಭೂಮೌ=ಭೂಮಿಯಲ್ಲಿ ಯಥಾ ಏವ=ಹೇಗೆ ಅಶನಿನಾ= ಸಿಡಿಲಿನಿಂದ ಹತಾಃ = ಬಡಿದವರು ಮೂರ್ಛಿತರಾಗಿ ಬೀಳುವರೋ (ತಥೈವ)=ಹಾಗೆ ಮೂರ್ಛಿತರಾಗಿ ನಿಪೇತುಃ=ಬಿದ್ದಿತು. ವೈ=ಇದು ಪುರಾಣ ಪ್ರಸಿದ್ಧವು. ‖ ೭ ‖

ವುದಿಲ್ಲ. ಸ್ವರ್ಗಕ್ಕೂ ಕಾರಣವಾಗುವುದಿಲ್ಲ. ಕ್ಷುಲ್ಲಕರೇ, ನಿಮಗೆ ಯುದ್ಧಮಾಡಬೇಕೆಂಬ ಶ್ರದ್ಧೆಯಿದ್ದರೆ ಅಥವಾ ನಿಮಗೆ ಧೈರ್ಯವಿದ್ದರೆ, ನಿಮಗೆ ವಿಷಯಸುಖಗಳನ್ನು ಅನುಭವಿಸಬೇಕೆಂಬ ಆಸೆ ಇಲ್ಲದಿದ್ದರೆ ಒಂದು ಕ್ಷಣ ಮಾತ್ರ ನನ್ನ ಎದುರಿನಲ್ಲಿ ನಿಲ್ಲಿ' ಎಂದು ನುಡಿದನು. ಕುಪಿತನೂ ಮಹಾಬಲಿಷ್ಠನೂ ಆದ ವೃತ್ರಾಸುರನು ತನ್ನ ದೊಡ್ಡ ದೇಹದಿಂದ ಶತ್ರುಗಳಾದ ದೇವತೆಗಳನ್ನು ಹೆದರಿಸುತ್ತಾ ಸಿಂಹನಾದ ಮಾಡಿದನು. ಆ ನಾದಕ್ಕೆ ಜನರು ಮೂರ್ಛೆಗೊಂಡರು. ಆ ಭಯಂಕರವಾದ ವೃತ್ರನ ಸಿಂಹನಾದದಿಂದ ದೇವತೆಗಳು ಸಿಡಿಲುಬಡಿದವರಂತೆ ಭೂಮಿಯಲ್ಲಿ

ಮಮರ್ದ ಪದ್ಭ್ಯಾಂ ಸುರಸೈನ್ಯಮಾತುರಂ
ನಿಮೀಲಿತಾಕ್ಷಂ ರಣರಂಗದುರ್ಮದಃ ।
ಗಾಂ ಕಂಪಯನ್ನುದ್ಯತಶೂಲ ಓಜಸಾ
ನಾಲಂ ವನಂ ಯೂಥಪತಿರ್ಯಥೋನ್ಮದಃ ॥ ೮ ॥

ರಣರಂಗದುರ್ಮದಃ=ಯುದ್ಧೋನ್ಮತ್ತನಾದ ಆ ವೃತ್ರನು ಓಜಸಾ=ತನ್ನ ಸಾಮರ್ಥ್ಯದಿಂದ ಗಾಂ=ಭೂಮಿಯನ್ನು ಕಂಪಯನ್=ನಡುಗಿಸುತ್ತಾ ಉದ್ಯತಶೂಲಃ (ಸನ್)=ಶೂಲಾಯುಧವನ್ನು ಎತ್ತಿ ಹಿಡಿದವನಾಗಿ ಆತುರಂ=ಭಯಗೊಂಡಿದ್ದ ಆದ್ದರಿಂದಲೇ ನಿಮೀಲಿತಾಕ್ಷಂ=ಕಣ್ಣುಮುಚ್ಚಿದ್ದ ಸುರಸೈನ್ಯವನ್ನು ಯಥಾ=ಹೇಗೆ ಉನ್ಮದಃ=ಮದವೇರಿದ ಯೂಥಪತಿಃ=ಸಲಗವು ನಾಲಂ ವನಂ=ನಲವೆಂಬ ಹುಲ್ಲಿನ ಪೊದೆಯನ್ನು, ಕಮಲಗಳ ಗುಂಪನ್ನು ಪದ್ಭ್ಯಾಂ=ಕಾಲುಗಳಿಂದ ಮರ್ದಯತಿ=ಮರ್ದನ ಮಾಡುವುದೋ (ತಥಾ)=ಹಾಗೆ ಕಾಲುಗಳಿಂದ ಮಮರ್ದ=ತುಳಿದು ಮರ್ದಿಸಿದನು. ॥ ೮ ॥

ವಿಲೋಕ್ಯ ತಂ ವಜ್ರಧರೋಽತ್ಯಮರ್ಷಿತಃ
ಸ್ವಶತ್ರವೇಽಭಿದ್ರವತೇ ಮಹಾಗದಾಮ್ ।
ಚಿಕ್ಷೇಪ ತಾಮಾಪತತೀಂ ಸುದುಸ್ಸಹಾಂ
ಜಗ್ರಾಹ ವಾಮೇನ ಕರೇಣ ಲೀಲಯಾ ॥ ೯ ॥

ವಜ್ರಧರಃ=ಇಂದ್ರದೇವರು ತಂ=ಸೈನ್ಯವನ್ನು ಮರ್ದಿಸುತ್ತಿರುವ ವೃತ್ರನನ್ನು ವಿಲೋಕ್ಯ=ನೋಡಿ ಅತ್ಯಮರ್ಷಿತಃ (ಸ೯)=ಬಹಳ ಕೋಪಗೊಂಡು ಅಭಿದ್ರವತೇ=ಮೇಲ್ಬಾಯ್ದು ಬರುತ್ತಿದ್ದ ಸ್ವಶತ್ರವೇ=ತಮ್ಮ ಶತ್ರುವಾದ ವೃತ್ರನ ಮೇಲೆ ಮಹಾಗದಾಂ=ದೊಡ್ಡ ಗದೆಯನ್ನು ಚಿಕ್ಷೇಪ=ಎಸೆದರು. (ಸಃ)=ಆ ವೃತ್ರನು ಆಪತತೀಂ=ಬರುತ್ತಿದ್ದ ಸುದುಸ್ಸಹಾಂ=ಮತ್ತೊಬ್ಬರಿಂದ ಸಹಿಸಲಾಗದ ತಾಂ=ಆ ಗದೆಯನ್ನು ಲೀಲಯಾ=ಅನಾಯಾಸವಾಗಿ ವಾಮೇನ ಕರೇಣ=ಎಡದ ಕೈಯಿಂದ ಜಗ್ರಾಹ=ಹಿಡಿದುಕೊಂಡನು. ॥ ೯ ॥

ಮೂರ್ಛಿತರಾಗಿ ಬಿದ್ದರು. ಯುದ್ಧೋನ್ಮತ್ತನಾದ ಆ ವೃತ್ರನು ತನ್ನ ಬಲದಿಂದ ಭೂಮಿಯನ್ನೇ ನಡುಗಿಸುತ್ತಿದ್ದನು. ಶೂಲವನ್ನು ಎತ್ತಿಹಿಡಿದು ಭಯದಿಂದ ಕಣ್ಣು ಮುಚ್ಚಿದ್ದ ದೇವಸೈನ್ಯವನ್ನು ಮದಿಸಿದ ಸಲಗವು ನಳಹುಲ್ಲಿನ ಹೊಲವನ್ನು ಕಾಲುಗಳಿಂದ ತುಳಿಯುವಂತೆ ಮರ್ದನಮಾಡಿದನು.

ಇಂದ್ರದೇವರು ದೇವಸೈನ್ಯವನ್ನು ಮರ್ದಿಸುತ್ತಿರುವ ವೃತ್ರನನ್ನು ನೋಡಿ ಬಹಳ ಕುಪಿತರಾದರು. ಮೇಲ್ಬಾಯ್ದು ಬರುತ್ತಿದ್ದ ಆ ವೃತ್ರನ ಮೇಲೆ ಮಹಾಗದೆಯನ್ನು ತೂರಿದರು. ಬರುತ್ತಿದ್ದ ಆ ದುಸ್ಸಹವಾದ ಗದೆಯನ್ನು ವೃತ್ರನು ಎಡಗೈ

ಸ ಇಂದ್ರಶತ್ರುಃ ಕುಪಿತೋ ಭೃಶಂ ತಯಾ
ಮಹೇಂದ್ರವಾಹಂ ಗದಯೋರುವಿಕ್ರಮಃ ।
ಜಘಾನ ಕುಂಭಸ್ಥಲ ಉನ್ನದನ್ಮೃಧೇ
ತತ್ಕರ್ಮ ಸರ್ವೇ ಸಮಪೂಜಯನ್ನೃಪ ॥ ೧೦ ॥

ಭೃಶಂ=ಬಹಳವಾಗಿ ಕುಪಿತಃ=ಕೋಪಗೊಂಡ ಉರುವಿಕ್ರಮಃ=ಅತಿಶಯ ಪರಾಕ್ರಮಿಯಾದ ಸಃ ಇಂದ್ರಶತ್ರುಃ=ಆ ವೃತ್ರನು ಮೃಧೇ=ಯುದ್ಧದಲ್ಲಿ ಉನ್ನದನ್=ಸಿಂಹನಾದ ಮಾಡುತ್ತಾ ತಯಾ ಗದಯಾ=ಆ ಗದೆಯಿಂದ ಮಹೇಂದ್ರವಾಹಂ=ಐರಾವತವನ್ನು (ಇಂದ್ರನ ವಾಹನವಾದ ಆನೆಯನ್ನು) ಕುಂಭಸ್ಥಲೇ=ಮುಂಭಾಗದ ಎರಡು ಗುಪ್ಪುಗಳ ಮೇಲೆ ಜಘಾನ=ಹೊಡೆದನು. ನೃಪ=ಪರೀಕ್ಷಿದ್ರಾಜನೇ, ತತ್ಕರ್ಮ=ಅವನ ಆ ಕಾರ್ಯವನ್ನು ಸರ್ವೇ=ಎಲ್ಲರೂ ಸಮಪೂಜಯನ್=ಪ್ರಶಂಸಿಸಿದರು. ॥ ೧೦ ॥

ಐರಾವತೋ ವೃತ್ರಗದಾಭಿಮೃಷ್ಟೋ
ವಿಘೂರ್ಣಿತೋಽದ್ರಿಃ ಕುಲಿಶಾಹತೋ ಯಥಾ ।
ಅಪಾಸರದ್ಭಿನ್ನಮುಖಃ ಸಹೇಂದ್ರೋ
ಮುಂಚನ್ನಸೃಕ್ ಸಪ್ತಧನುರ್ಭೃಶಾರ್ತಃ ॥ ೧೧ ॥

ವೃತ್ರನ ಗದೆಯಿಂದ ಹೊಡೆಯಲ್ಪಟ್ಟ, ಕುಲಿಶಾಹತಃ=ವಜ್ರಾಯುಧದಿಂದ ಹೊಡೆಯಲ್ಪಟ್ಟ ಅದ್ರಿಃ ಯಥಾ (ತಥಾ)=ಪರ್ವತವು ಹೇಗೋ ಹಾಗೆ ವಿಘೂರ್ಣಿತಃ=ವಿಶೇಷವಾಗಿ ಚೀತ್ಕಾರ ಮಾಡುವುದಾಗಿ ಭಿನ್ನಮುಖಃ=ಒಡೆದ ಮುಂಭಾಗವುಳ್ಳದ್ದಾಗಿ ಭೃಶಾರ್ತಃ=ಅತ್ಯಂತ ನೊಂದದ್ದಾಗಿ ಅಸೃಕ್ ಮುಂಚನ್=ರಕ್ತವನ್ನು ಸುರಿಸುತ್ತಾ ಸಹೇಂದ್ರಃ=ಇಂದ್ರನಿಂದ ಕೂಡಿದ ಐರಾವತವು ಸಪ್ತಧನುಃ=ಏಳು ಧನಸ್ಸುಗಳಷ್ಟು ಉದ್ದ ಅಪಾಸರತ್=ಹಿಂದಕ್ಕೆ ಸರಿಯಿತು (ಮುಖವನ್ನು ಹಿಂದಕ್ಕೆ ತಿರುಗಿಸಿಕೊಂಡು ಹೋಯಿತು). ॥ ೧೧ ॥

ಯಿಂದ ಲೀಲಾಜಾಲವಾಗಿ ಹಿಡಿದುಕೊಂಡನು. ಕುಪಿತನಾಗಿ ಮಹಾಪರಾಕ್ರಮಿಯಾದ ಅವನು ರಣರಂಗದಲ್ಲಿ ಸಿಂಹನಾದ ಮಾಡುತ್ತಾ ಆ ಗದೆಯಿಂದ ಐರಾವತದ ಕುಂಭಸ್ಥಳದ ಮೇಲೆ ಬಲವಾಗಿ ಹೊಡೆದನು. ಅವನ ಆ ಕರ್ಮವನ್ನು ಎಲ್ಲರೂ ಪ್ರಶಂಸಿಸಿದರು. ವಜ್ರಾಯುಧದಿಂದ ಅಭಿಹತವಾದ ಪರ್ವತದಂತೆ ವೃತ್ರಗದೆಯಿಂದ ಅಭಿಹತವಾದ ಐರಾಪತವು ವಿಶೇಷವಾಗಿ ಚೀತ್ಕಾರ ಮಾಡುತ್ತಾ ಮೇಲೆ ಕುಳಿತಿದ್ದ ಇಂದ್ರದೇವರೊಂದಿಗೆ ಏಳು ಧನುಸ್ಸುಗಳಷ್ಟು ದೂರ ಹಿಂದಕ್ಕೆ ಸರಿಯಿತು. ಅದರ ಮುಂಭಾಗವು ಒಡೆದು ರಕ್ತಸುರಿಯುತ್ತಿತ್ತು. ನೋವಿನಿಂದ ಅದು ತುಂಬ

ನ ಸನ್ನವಾಹಾಯ ವಿಷಣ್ಣಚೇತಸೇ
ಪ್ರಾಯುಂಕ್ತ ಭೂಯಃ ಸ ಗದಾಂ ಮಹಾತ್ಮಾ ।
ಇಂದ್ರೋಽಮೃತಸ್ಯಂದಿಕರಾಭಿಮರ್ಶ-
ವೀತವ್ಯಥಃ ಕ್ಷತವಾಹೋಽವತಸ್ಥೇ ॥ ೧೨ ॥

ಮಹಾತ್ಮಾ= ಯುದ್ಧದ ಧರ್ಮವನ್ನು ಬಲ್ಲ ಸಃ = ಆ ವೃತ್ರನು ಸನ್ನ-ವಾಹಾಯ- ವಾಹನವು ದುಃಖಕ್ಕೆ ಒಳಗಾಗಿರುವ ವಿಷಣ್ಣಚೇತಸೇ- ವಿಷಾದಯುಕ್ತವಾದ ಮನಸ್ಸುಳ್ಳ ಇಂದ್ರದೇವರ ಮೇಲೆ ಭೂಯಃ= ಮತ್ತೆ ಗದಾಂ= ಗದೆಯನ್ನು ನ ಪ್ರಾಯುಂಕ್ತ= ಪ್ರಯೋಗಿಸಲಿಲ್ಲ. ಕ್ಷತವಾಹಃ = ಗಾಯಗೊಂಡ ವಾಹನವುಳ್ಳ ಇಂದ್ರಃ- ಇಂದ್ರದೇವರಾದರೋ ಅಮೃತಸ್ಯಂದಿ= ಅಮೃತವನ್ನು ಸುರಿಸುವ ಕರ= ಕೈಗಳ ಅಭಿಮರ್ಶ = ಸ್ಪರ್ಶದಿಂದ ವೀತವ್ಯಥಃ (ಸನ್) = ವ್ಯಥೆಯಿಲ್ಲದವರಾಗಿ (ಚಂದ್ರನ ಕಿರಣಗಳ ಸ್ಪರ್ಶದಿಂದ ಹೋದ ದುಃಖವುಳ್ಳವರಾಗಿ) ಅವತಸ್ಥೇ= ಇದ್ದರು. 'ಅಭಿತಸ್ಥೇ' ಎಂಬ ಪಾಠದಲ್ಲಿ ಅಭಿಮುಖವಾಗಿ ನಿಂತರು ಎಂದರ್ಥ. ॥ ೧೨ ॥

ಸ ತಂ ನೃಪೇಂದ್ರಾಹವಕಾಮ್ಯಯಾ ರಿಪುಂ
ವಜ್ರಾಯುಧಂ ಭ್ರಾತೃಹಣಂ ವಿಲೋಕ್ಯ ।
ಸ್ಮರಂಶ್ಚ ತತ್ಕರ್ಮ ನೃಶಂಸಮಂಹಃ
ಶೋಕೇನ ಮೋಹೇನ ಹಸನ್ ಜಗಾದ ॥ ೧೩ ॥

ಹೇ ನೃಪೇಂದ್ರ - ಪರೀಕ್ಷಿದ್ರಾಜನೇ, ಸಃ = ಆ ವೃತ್ರಾಸುರನು ಆಹವ-ಕಾಮ್ಯಯಾ (ಅವಸ್ಥಿತಂ) = ಯುದ್ಧಮಾಡಬೇಕೆಂಬ ಇಚ್ಛೆಯಿಂದ ನಿಂತಿರುವ ಭ್ರಾತೃಹಣಂ= ತನ್ನ ಅಣ್ಣನಾದ ವಿಶ್ವರೂಪಾಚಾರ್ಯನನ್ನು ಸಂಹರಿಸಿದ್ದ ರಿಪುಂ= ಆದ್ದರಿಂದಲೇ ಶತ್ರುವಾದ ವಜ್ರಾಯುಧಂ= ವಜ್ರವೆಂಬ ಆಯುಧವನ್ನು ಧರಿಸಿರುವ ತಂ- ಆ ಇಂದ್ರದೇವರನ್ನು ವಿಲೋಕ್ಯ= ನೋಡಿ ನೃಶಂಸಂ= ಕ್ರೂರವಾದ ಅಂಹಃ= ಪಾಪರೂಪವಾದ ತತ್ಕರ್ಮ= ಬ್ರಾಹ್ಮಣನೂ ಗುರುವೂ ಆದ ವಿಶ್ವರೂಪಾಚಾರ್ಯ

ನೊಂದಿತ್ತು. ವೃತ್ರನು ಯುದ್ಧದ ನಿಯಮಗಳನ್ನು ಅರಿತಿದ್ದನು. ಇಂದ್ರನ ವಾಹನವು ನೊಂದಿರುವುದನ್ನೂ ಇಂದ್ರನು ವಿಷಣ್ಣಮನಸ್ಕನಾಗಿರುವುದನ್ನೂ ಅರಿತ ಅವನು ಮತ್ತೆ ಗದೆಯನ್ನು ಪ್ರಯೋಗಿಸಲಿಲ್ಲ. ವಾಹನವು ಗಾಯಗೊಂಡ ಇಂದ್ರದೇವರು ಅಮೃತಸ್ರಾವಿ ಕೈಗಳ ಸ್ಪರ್ಶದಿಂದ ವ್ಯಥೆಯನ್ನು ಪರಿಹರಿಸಿಕೊಂಡು ಅಭಿಮುಖರಾಗಿ ನಿಂತಿದ್ದರು.

ರಾಜನ್, ಯುದ್ಧಾಕಾಂಕ್ಷಿಯಾಗಿ ಎದುರಿಗೆ ನಿಂತಿರುವ ಇಂದ್ರದೇವರನ್ನು ವೃತ್ರನು ಕಂಡನು. ತನ್ನ ಅಣ್ಣನಾದ ವಿಶ್ವರೂಪಾಚಾರ್ಯನನ್ನು ಸಂಹರಿಸಿದ್ದ ಇಂದ್ರನನ್ನು ಶತ್ರುವೆಂದೇ ಬಗೆದನು. ವಜ್ರಾಯುಧಧಾರಿಯನ್ನು ಕಂಡು ಅವನು

ನನ್ನು ಕೊಲ್ಲುವಿಕೆಯೆಂಬ ಆ ಇಂದ್ರ ಕರ್ಮವನ್ನು ಸ್ಮರ್ರ ಚ=ಸ್ಮರಿಸಿಕೊಳ್ಳುತ್ತಾ ಶೋಕೇನ=ದುಃಖದಿಂದಲೂ ಮೋಹೇನ=ಅಜ್ಞಾನದಿಂದಲೂ ಹಸನ್=ನಗುತ್ತಾ ಜಗಾದ=ಹೇಳಿದನು. || ೧೩ ||

ವೃತ್ರ ಉವಾಚ—

ದಿಷ್ಟ್ಯಾ ಭವಾನ್ ಮೇ ಸಮುವಸ್ಥಿತೋ ರಿಪು-
ರ್ಯೋ ಬ್ರಹ್ಮಹಾ ಗುರುಹಾ ಭ್ರಾತೃಹಾ ಚ ।
ದಿಷ್ಟ್ಯಾಽನೃಣೋಽದ್ಯಾಹಮಸತ್ತಮ ತ್ವಯಾ
ಮಚ್ಛೂಲನಿರ್ಭಿನ್ನದೃಷದ್ಧೃದಾಽಚಿರಾತ್ || ೧೪ ||

ಯಃ=ಯಾವನು ಬ್ರಹ್ಮಹಾ=ಬ್ರಾಹ್ಮಣನಾದ ವಿಶ್ವರೂಪನನ್ನು ಸಂಹರಿಸಿ ಬ್ರಹ್ಮಹತ್ಯೆ ಮಾಡಿರುವನೋ ಗುರುಹಾ=ಗುರುವಿನ ಸ್ಥಾನದಲ್ಲಿ ಅಂಗೀಕರಿಸಿದ ವಿಶ್ವರೂಪನನ್ನು ಸಂಹರಿಸಿ ಗುರುಹತ್ಯಾಕಾರನೋ ಚ=ಮತ್ತು ಭ್ರಾತೃಹಾ=ನನ್ನ ಅಣ್ಣನಾದ (ಇಬ್ಬರೂ ತ್ವಷ್ಟನ ಮಕ್ಕಳಾದ್ದರಿಂದ) ವಿಶ್ವರೂಪನನ್ನು ಕೊಂದು ಸಹೋದರ ಘಾತುಕನೋ (ಸಃ)=ಅಂಥ ಮೇ ರಿಪುಃ=ನನ್ನ ಶತ್ರುವಾದ ಭವಾ್=ನೀನು ದಿಷ್ಟ್ಯಾ=ನನ್ನ ಪುಣ್ಯಫಲದಿಂದ ಸಮುವಸ್ಥಿತಃ=ಯುದ್ಧಕ್ಕಾಗಿ ಎದುರಿಗೆ ನಿಂತಿರುವೆ. ಅಥವಾ ದಿಷ್ಟ್ಯಾ = ಇದು ನನಗೆ ಆನಂದವು ಎಂದಾದರೂ ಅರ್ಥ. ಹೇ ಅಸತ್ತಮ=ಅತ್ಯಂತ ದುಷ್ಟನೇ ಅದ್ಯ=ಈಗ ಮಚ್ಛೂಲ=ನನ್ನ ಶೂಲದಿಂದ ನಿರ್ಭಿನ್ನ=ಭೇದಿಸಲ್ಪಟ್ಟ ದೃಷದ್ಧೃದಾ=ಕಲ್ಲಿನಂತೆ ಕಠಿಣವಾದ ಹೃದಯವುಳ್ಳ ತ್ವಯಾ=ನಿನ್ನಿಂದ ಅಚಿರಾತ್=ಜಾಗ್ರತೆಯಾಗಿ ಅಹಂ=ನಾನು ಅನೃಣಃ=ನನ್ನ ಅಣ್ಣನ ಮರಣ ಋಣವನ್ನು ತೀರಿಸಿಕೊಂಡವನಾಗಿ (ಸ್ಯಾಂ)=ಆಗುವೆನು. ದಿಷ್ಟ್ಯಾ=ಆನಂದವು. || ೧೪ ||

ಯೋ ನೋಽಗ್ರಜಸ್ಯಾತ್ಮವಿದೋ ದ್ವಿಜಾತೇ-
ರ್ಗುರೋರಪಾಪಸ್ಯ ಚ ದೀಕ್ಷಿತಸ್ಯ ।

ಮಾಡಿದ್ದ ಕ್ರೂರವಾದ ಪಾಪಕರ್ಮವನ್ನು ನೆನೆದನು. ದುಃಖದಿಂದ ಮೋಹಿತನಾದನು. ನಗುತ್ತಾ ಅವನು ' ನೀನು ಬ್ರಾಹ್ಮಣನಾದ ವಿಶ್ವರೂಪಾಚಾರ್ಯನನ್ನು ಕೊಂದು ಬ್ರಹ್ಮಹತ್ಯೆ ಮಾಡಿರುವೆ. ಗುರುವೆಂದು ಅಂಗೀಕರಿಸಿದ ಅವನನ್ನು ಸಂಹರಿಸಿ ಗುರುಹಂತಕನಾಗಿರುವೆ. ಅವನು ನನ್ನ ಅಣ್ಣನಾದ್ದರಿಂದ ಸಹೋದರ ಘಾತುಕನಾಗಿರುವೆ. ಹೀಗೆ ನನ್ನ ಶತ್ರುವಾದ ನೀನು ಯುದ್ಧಕ್ಕಾಗಿ ನನ್ನ ಎದುರಿನಲ್ಲಿ ನಿಂತಿರುವುದು ನನಗೆ ಸಂತಸಕರ. ದುಷ್ಟ ! ಈಗಲೇ ಕಲ್ಲಿನಂತೆ ಕಠಿಣವಾದ ನಿನ್ನ ಹೃದಯವನ್ನು ನನ್ನ ಶೂಲದಿಂದ ಭೇದಿಸುತ್ತೇನೆ. ನನ್ನ ಅಣ್ಣನ ಋಣವನ್ನು ತೀರಿಸಿಕೊಳ್ಳುತ್ತೇನೆ. ದೈತ್ಯರಿಂದ ಸ್ವರ್ಗವನ್ನು ಮತ್ತೆ ಕಸಿದುಕೊಳ್ಳ ಬಯಸಿದ

ವಿಸ್ರಭ್ಯ ಖಡ್ಗೇನ ಶಿರಾಂಸ್ಯವೃಶ್ಚಃ
ಪಶೋರಿವಾಕರುಣಃ ಸ್ವರ್ಗಕಾಮಃ ॥ ೧೫ ॥

ಸ್ವರ್ಗಕಾಮಃ=ದೈತ್ಯರಿಂದ ಸ್ವರ್ಗವನ್ನು ಹಿಂದಕ್ಕೆ ಪಡೆಯಲು ಆಸೆಪಟ್ಟ ಅಕರುಣಃ=ಕರುಣೆಯಿಲ್ಲದ ಯಃ (ತ್ವಂ)=ಯಾವ ನೀನು ವಿಸ್ರಭ್ಯ=ಪುರೋಹಿತನನ್ನಾಗಿ ವರಿಸಿ ವಿಶ್ವಾಸ ಹುಟ್ಟಿಸಿ ಆತ್ಮವಿದಃ=ಪರಮಾತ್ಮನನ್ನು ಬಲ್ಲ, ದ್ವಿಜಾತೇಃ=ಬ್ರಾಹ್ಮಣನಾದ ಗುರೋಃ=ನಿನಗೆ ಪುರೋಹಿತನಾದ್ದರಿಂದ ಗುರುವಾದ ಅಪಾಪಸ್ಯ=ಪಾಪಬುದ್ಧಿಯಿಲ್ಲದ ಚ=ಮತ್ತು ದೀಕ್ಷಿತಸ್ಯ=ನಿನಗಾಗಿ ಮಾಡುತ್ತಿದ್ದ ಯಜ್ಞದಲ್ಲಿ ದೀಕ್ಷಿತನಾಗಿದ್ದ ನಃ ಅಗ್ರಜಸ್ಯ=ನಮ್ಮ ಅಣ್ಣನ (ವಿಶ್ವರೂಪಾಚಾರ್ಯನ) ಶಿರಾಂಸಿ=ಮೂರು ತಲೆಗಳನ್ನೂ ಸ್ವರ್ಗಕಾಮಃ = ಸ್ವರ್ಗಾಪೇಕ್ಷಿಯಾದ ಯಜಮಾನನು ಅಕರುಣಃ (ಸನ್)=ಕರುಣೆಯಿಲ್ಲದವನಾಗಿ ಪಶೋಃ=ಯಜ್ಞಪಶುವಿನ (ಶಿರಃ) ಇವ=ಶಿರಸ್ಸನ್ನು ಕಡಿಯುವಂತೆ ಖಡ್ಗೇನ=ಕತ್ತಿಯಿಂದ ಅವೃಶ್ಚಃ=ಕತ್ತರಿಸಿದೆಯೋ (ಸಃ ಭವಾನ್)=ಆ ನೀನು ನನ್ನ ಎದುರಿನಲ್ಲಿ ಬಂದಿರುವೆ. ಆನಂದ ಎಂದು ಹಿಂದಕ್ಕೆ ಅನ್ವಯ. ॥ ೧೫ ॥

ಹ್ರೀಶ್ರೀದಯಾಕೀರ್ತಿಭಿರುಜ್ಝಿತಂ ತ್ವಾಂ
ಸ್ವಕರ್ಮಣಾ ಪುರುಷಾದೈಶ್ಚ ಗರ್ಹ್ಯಮ್ ।
ಕೃಚ್ಛ್ರೇಣ ಮಚ್ಛೂಲವಿಭಿನ್ನದೇಹ-
ಮಸ್ಪೃಷ್ಟವಹ್ನಿಂ ಸಮುದಂತು ಗೃಧ್ರಾಃ ॥ ೧೬ ॥

ಹ್ರೀ=ಮಾಡಬಾರದ ಕಾರ್ಯಮಾಡುವಲ್ಲಿ ನಾಚಿಕೆ, ಶ್ರೀ=ತ್ರಿವರ್ಗ ಸಂಪತ್ತು ದಯಾ=ಪ್ರಾಣಿಗಳಿಗೆ ಸುಖವನ್ನು ಬಯಸುವುದು ಕೀರ್ತಿಭಿಃ=ಯಶಸ್ಸು ಇವುಗಳಿಂದ ಉಜ್ಝಿತಂ=ರಹಿತನಾದ, ಸ್ವಕರ್ಮಣಾ=ಗುರುವಧೆಯೆಂಬ ನಿನ್ನ ಕರ್ಮದಿಂದ ಪುರುಷಾದೈಃ ಚ=ಮನುಷ್ಯಭಕ್ಷಕರಿಂದಲೂ ಗರ್ಹ್ಯಂ=ನಿಂದಿತನಾದ, ಕೃಚ್ಛ್ರೇಣ=ಪ್ರಯತ್ನದಿಂದ ಮಚ್ಛೂಲವಿಭಿನ್ನದೇಹಂ=ನನ್ನ ಶೂಲದಿಂದ ಭೇದಿಸಲ್ಪಟ್ಟ ದೇಹವುಳ್ಳ ಅಸ್ಪೃಷ್ಟವಹ್ನಿಂ=(ನಿನ್ನ ದೇಹಕ್ಕೆ ಬೆಂಕಿಯ ಸ್ಪರ್ಶ

ನೀನು ಪುರೋಹಿತನಾಗೆಂದು ನನ್ನ ಅಣ್ಣನನ್ನು ನಂಬಿಸಿ ಕರುಣೆಯಿಲ್ಲದೆ ಯಜಮಾನನು ಯಜ್ಞದಲ್ಲಿ ಪಶುವಿನ ತಲೆಯನ್ನು ಕತ್ತರಿಸುವಂತೆ ನಿಷ್ಕರುಣಿಯಾದ ನೀನು ಆತ್ಮಜ್ಞಾನಿಯೂ, ಬ್ರಾಹ್ಮಣನೂ, ಗುರುವೂ, ನಿರಪರಾಧಿಯೂ, ಯಜ್ಞದೀಕ್ಷಿತನೂ ಆಗಿದ್ದ ನನ್ನ ಅಣ್ಣನ ಮೂರು ತಲೆಗಳನ್ನೂ ಕತ್ತಿಯಿಂದ ಕತ್ತರಿಸಿದೆಯಲ್ಲವೇ! ಇಂತಹ ನಿನಗೆ ನಾಚಿಕೆ, ಸಂಪತ್ತು, ದಯೆ, ಕೀರ್ತಿಗಳಿಲ್ಲ. ನಿನ್ನೀ ಕೆಲಸವನ್ನು ನೋಡಿ ನರಭಕ್ಷಕರೂ ನಿಂದಿಸುವರು. ನಾನೀಗ ಪ್ರಯತ್ನಪಟ್ಟು ನನ್ನ ಶೂಲದಿಂದ ನಿನ್ನ ದೇಹವನ್ನು ಭೇದಿಸುತ್ತೇನೆ. ಯಾರೂ ಇಲ್ಲದ್ದರಿಂದ

ಮಾಡಿಸುವವರೂ ಉಳಿಯದಿರುವುದರಿಂದ) ಬೆಂಕಿಯ ಸ್ಪರ್ಶವಿಲ್ಲದ ತ್ವಾಂ=ನಿನ್ನನ್ನು ಗೃಧ್ರಾಃ=ಹದ್ದುಗಳು ಸಮದಂತು=ತಿನ್ನಲಿ. 'ಅಸ್ಪೃಷ್ಟವಹ್ನಿಂ' ಎಂಬುದರಿಂದ ಎಲ್ಲ ದೇವತೆಗಳನ್ನೂ ಸಂಹರಿಸುವೆನೆಂದು ಸೂಚಿಸಿರುವನು. ||೧೭||

ಅನ್ಯೇ ತು ಯೇ ತ್ವಾಽನು ನೃಶಂಸಮಜ್ಞಾ
ಯದ್ಯುದ್ಯತಾಸ್ತ್ರಾಃ ಪ್ರಹರಂತಿ ಮಹ್ಯಮ್ ।
ತೈರ್ಭೂತನಾಥಂ ಸಗಣಂ ನಿಶಾತ-
ತ್ರಿಶೂಲನಿರ್ಭಿನ್ನಗಲೈರ್ಯಜಾಮಿ ॥ ೧೭ ॥

ಯೇ=ಯಾವ ಅನ್ಯೇ ತು ಅಪಿ=ಇತರ ದೇವತೆಗಳೂ ಅಜ್ಞಾಃ=ನನ್ನ ಬಲವನ್ನು ಅರಿಯದವರು ನೃಶಂಸಂ=ಕ್ರೂರನಾದ ತ್ವಾ=ನಿನ್ನನ್ನು ಅನು=ಅನುಸರಿಸಿ ಉದ್ಯತಾಸ್ತ್ರಾಃ (ಸಂತಃ)=ಅಸ್ತ್ರಧಾರಿಗಳಾಗಿ ಮಹ್ಯಂ=ನನ್ನ ಮೇಲೆ ಪ್ರಹರಂತಿ=ಪ್ರಹಾರ ಮಾಡುವರೋ ನಿಶಾತ ....ಗಲೈಃ=ಚೂಪಾದ ತ್ರಿಶೂಲದಿಂದ ಕತ್ತರಿಸಲ್ಪಟ್ಟ ಕುತ್ತಿಗೆಗಳುಳ್ಳ ತೈಃ=ಆ ದೇವತೆಗಳಿಂದ ಸಗಣಂ=ಗಣಗಳಿಂದ ಯುಕ್ತನಾದ ಭೂತನಾಥಂ=ಭೈರವನನ್ನು ಯಜಾಮಿ=ಉದ್ದೇಶಿಸಿ ಯಾಗ ಮಾಡುತ್ತೇನೆ. ಭೂತನಾಥಾನ್ ಎಂಬ ಪಾಠದಲ್ಲಿ ಭೈರವ ಮೊದಲಾದವರನ್ನು ಎಂದರ್ಥ. ||೧೭||

ಅಥೋ ಹರೇ ಮೇ ಕುಲಿಶೇನ ವೀರ
ಹರ್ತಾ ಪ್ರಮಥ್ಯೇಹ ಶಿರೋ ಯದೀಹ ।
ತತ್ರಾನೃಣೋ ಭೂತಬಲಿಂ ವಿಧಾಯ
ಮನಸ್ವಿನಾಂ ಪಾದರಜಃ ಪ್ರಪತ್ಸ್ಯೇ ॥ ೧೮ ॥

ಅಥೋ=ಅಥವಾ ವೀರ=ಪರಾಕ್ರಮಿಯಾದ ಹೇ ಹರೇ=ಇಂದ್ರನೇ ಯದಿ=ಒಂದು ವೇಳೆ ಇಹ=ಯುದ್ಧದಲ್ಲಿ ಕುಲಿಶೇನ=ವಜ್ರಾಯುಧದಿಂದ ಪ್ರಮಥ್ಯ=ಅತಿಶಯವಾಗಿ ಪ್ರಹರಿಸಿ ಮೇ=ನನ್ನ ಶಿರಃ=ಶಿರಸ್ಸನ್ನು ಹರ್ತಾ=ತೆಗೆಯುವೆಯಾದರೆ ತತ್ರ=ಆಗ ಇಹ=ಈ ಜನ್ಮದಲ್ಲಿಯೇ ಭೂತಬಲಿಂ=ಈ ದೇವತೆಗಳ ಸಂಹಾರದಿಂದ

ಬೆಂಕಿಯ ಸ್ಪರ್ಶವೇ ಇಲ್ಲದ ಅದನ್ನು ಹದ್ದುಗಳು ಸಂತೋಷದಿಂದ ತಿನ್ನಲಿ. ನನ್ನ ಬಲವನ್ನರಿಯದ ಇತರ ದೇವತೆಗಳು ಕ್ರೂರಿಯಾದ ನಿನ್ನನ್ನು ಅನುಸರಿಸಿ ಅಸ್ತ್ರಧಾರಿಗಳಾಗಿ ನನ್ನನ್ನು ಪ್ರಹರಿಸಿದರೆ ಈ ಚೂಪಾದ ತ್ರಿಶೂಲದಿಂದ ಅವರ ಕುತ್ತಿಗೆಗಳನ್ನು ಕತ್ತರಿಸಿ ಅವುಗಳಿಂದ ಗಣಸಹಿತನಾದ ಭೂತಪತಿ (ಭೈರವ) ಯನ್ನು ಪೂಜಿಸುತ್ತೇನೆ.

'ಅಥವಾ ಪರಾಕ್ರಮಿಯಾದ ಇಂದ್ರನೇ, ಒಂದು ವೇಳೆ ಯುದ್ಧದಲ್ಲಿ ನೀನೇ ವಜ್ರಾಯುಧದಿಂದ ಥಳಿಸಿ ನನ್ನ ತಲೆಯನ್ನು ತೆಗೆಯುವೆಯಾದರೆ ಆಗಲೂ ಈ ದೇವತಾಸಂಹಾರದಿಂದ ಈ ಜನ್ಮದಲ್ಲಿಯೇ ಭೂತಗಳಿಗೆ ತೃಪ್ತಿಯನ್ನುಂಟುಮಾಡಿ

ಭೂತಗಳಿಗೆ ತೃಪ್ತಿಯನ್ನು (ಪೂಜೆಯನ್ನು) ವಿಧಾಯ=ಮಾಡಿ ಅನೃಣಃ (ಸನ್)=ಅಣ್ಣನ ಋಣವನ್ನು ತೀರಿಸಿಕೊಂಡವನಾಗಿ ಕರ್ಮಬಂಧದಿಂದ ವಿಮುಕ್ತನಾಗಿ ಮನಸ್ವಿನಾಂ=ವೀರಸ್ವರ್ಗ ಹೊಂದಿದ ಧೈರ್ಯಶಾಲಿಗಳ ಪಾದರಜಃ=ಪಾದಧೂಳಿಯನ್ನು (ಮಾರ್ಗವನ್ನು ಅರ್ಥಾತ್ ಅವರು ಹೊಂದಿದ ಲೋಕಗಳನ್ನು) ಪ್ರಪತ್ಸ್ಯೇ=ಹೊಂದುತ್ತೇನೆ. ॥ ೧೮ ॥

ಸುರೇಶ ಕಸ್ಮಾನ್ನ ಹಿನೋಷಿ ವಜ್ರಂ
ಪುರಃ ಸ್ಥಿತೇ ವೈರಿಣಿ ಮಯ್ಯಮೋಘಮ್ ।
ಮಾ ಸಂಶಯಿಷ್ಠಾ ಭಗದೇವ ವಜ್ರಂ
ಸ್ಯಾನ್ನಿಷ್ಫಲಂ ಕೃಪಣಾರ್ಥೇವ ಯಾಚ್ಞಾ ॥ ೧೯ ॥

ಹೇ ಸುರೇಶ=ಇಂದ್ರನೇ, ವೈರಿಣಿ=ಶತ್ರುವಾದ ಮಯಿ=ನಾನು ಪುರಃ ಸ್ಥಿತೇ (ಸತಿ)=ಎದುರಿಗೆ ಇರಲು ವಜ್ರಂ=ವಜ್ರಾಯುಧವನ್ನು ಕಸ್ಮಾತ್=ಯಾವ ಕಾರಣದಿಂದ ನ ಹಿನೋಷಿ=ನನ್ನ ಮೇಲೆ ಬಿಡದಿರುವೆ! ಭಗದೇವ=(೧) ಭಾಗ್ಯಗಳ ಸ್ವಾಮಿಯೇ (೨) ಭಾಗ್ಯದಾತನೇ (೩) ಕೀರ್ತ್ಯಾದಿ ಗುಣವಂತನೇ (೪) ಯೋನಿಯೇ ಆರಾಧ್ಯದೇವತೆಯಾಗಿ ಉಳ್ಳವನೇ ಅರ್ಥಾತ್ ಅಹಲ್ಯಾ ಜಾರನೇ ಮಾ ಸಂಶಯಿಷ್ಠಾಃ=ಸಂದೇಹಪಡಬೇಡ. ವಜ್ರಾಯುಧವು ನಿಷ್ಫಲಂ=ಅತ್ಯಂತ ಫಲವುಳ್ಳದ್ದು ಸ್ಯಾತ್=ಆಗುವುದು. ಕೃಪಣಾರ್ಥಾ=ದರಿದ್ರ ವಿಷಯಕವಾದ ಯಾಚ್ಞಾ=ಯಾಚನೆಯು ಇವ=ಹೇಗೆ ವ್ಯರ್ಥವಾಗುವುದೋ ಹಾಗೆ (ನ ಸ್ಯಾತ್)=ವ್ಯರ್ಥವಾಗುವುದಿಲ್ಲ. ಅಥವಾ ವಜ್ರಾಯುಧವು ಕೃಪಣನಿಂದ ಪ್ರಯೋಜನವನ್ನು ಪಡೆಯುವ ಯಾಚನೆಯಂತೆ ನಿಷ್ಫಲಂ=ನಿಷ್ಪ್ರಯೋಜನವಾಗುವುದೆಂದು ಸಂಶಯಪಡಬೇಡ ಎಂದಾದರೂ ಅನ್ವಯ. ॥ ೧೯ ॥

ನನ್ವೇಷ ವಜ್ರಸ್ತವ ಶಕ್ರ ತೇಜಸಾ
ಹರೇರ್ದಧೀಚೇಸ್ತಪಸಾ ಚ ತೇಜಿತಃ ।
ತೇನೈವ ಶತ್ರುಂ ಜಹಿ ವಿಷ್ಣುಯಂತ್ರಿತೋ
ಯತೋ ಹರಿರ್ವಿಜಯಃ ಶ್ರೀರ್ಗುಣಾಸ್ತತಃ ॥ ೨೦ ॥

ಋಣಮುಕ್ತನಾಗಿ ಧೀರರ ಪಾದಧೂಳಿಯನ್ನು-ಅವರ ಲೋಕಗಳನ್ನು ಹೊಂದುತ್ತೇನೆ. ಇಂದ್ರ! ಶತ್ರುವಾದ ನಾನು ಎದುರಿಗಿದ್ದರೂ ಅಮೋಘವಾದ ವಜ್ರಾಯುಧವನ್ನು ಏಕೆ ಪ್ರಯೋಗಿಸದಿರುವೆ? ಭಗದೇವ! ಕೃಪಣನಿಂದ ಪ್ರಯೋಜನವನ್ನು ಬಯಸುವ ಯಾಚನೆಯಂತೆ ಅದು ನಿಷ್ಫಲವಾಗುವುದೆಂದು ಸಂಶಯಪಡಬೇಡ. ಅದು ಸಂಪೂರ್ಣ ಫಲಕಾರಿಯೇ ಆಗುವುದು. ಶಕ್ರ! ಈ ನಿನ್ನ ವಜ್ರಾಯುಧವು ಶ್ರೀಹರಿಯ ಸನ್ನಿಧಾನದಿಂದಲೂ ದಧೀಚಿಯ ತಪಸ್ಸಿನಿಂದಲೂ ಮಹಾತೀಕ್ಷ್ಣವಾಗಿದೆ. ಶ್ರೀಹರಿಯಿಂದ ಪ್ರೇರಿತನಾಗಿ ಅದರಿಂದಲೇ ಶತ್ರುವಾದ ನನ್ನನ್ನು

ವಜ್ರಾಯುಧವು ಅಮೋಘವಾಗಿರುವುದಕ್ಕೆ ಕಾರಣವನ್ನು ಹೇಳುತ್ತಾ ಪ್ರೋತ್ಸಾಹಿಸುತ್ತಾನೆ. ಹೇ ಶಕ್ರ=ಇಂದ್ರದೇವರೆ, ಏಷಃ=ಈ ತವ ವಜ್ರಃ=ನಿನ್ನ ವಜ್ರಾಯುಧವು ಹರೇಃ=ಶ್ರೀಹರಿಯ ತೇಜಸಾ=ವಿಶೇಷ ಸನ್ನಿಧಾನದಿಂದಲೂ ದಧೀಚೇಃ=ದಧೀಚಿ ಋಷಿಗಳ ತಪಸಾ ಚ=ತಪಸ್ಸಿನಿಂದಲೂ ತೇಜಿತಃ=ತೀಕ್ಷ್ಣವಾದುದಾಗಿ ನನು=ಇದೆಯಷ್ಟೆ! ವಿಷ್ಣುಯಂತ್ರಿತಃ=ವಿಷ್ಣುವಿನ ವಶನಾಗಿ, ವಿಷ್ಣುವಿನಿಂದ ಪ್ರೇರಿತನಾಗಿ ತೇನ ಏವ=ಆ ಶ್ರೀಹರಿ ಸನ್ನಿಧಾನಯುಕ್ತವಾದ ವಜ್ರದಿಂದಲೇ ಶತ್ರುಂ (ಮಾಂ)=ಶತ್ರುವಾದ ನನ್ನನ್ನು ಜಹಿ=ಕೊಲ್ಲು. ಯತಃ=ಎಲ್ಲಿ ಹರಿಃ=ಶ್ರೀಹರಿಯಿರುವನೋ ತತಃ=ಅಲ್ಲಿ ವಿಜಯವು. ಸಂಪತ್ತು ಮತ್ತು ಗುಣಗಳು (ಸ್ಯುಃ)=ಆಗುವುವು. || ೨೦ ||

ಅಹಂ ಸಮಾಧಾಯ ಮನೋ ಯಥಾಽಽಹ
ಸಂಕರ್ಷಣಸ್ತಚ್ಚರಣಾರವಿಂದೇ ।
ತ್ವದ್ವಜ್ರರಂಹೋಲುನಿತಗ್ರಾಮ್ಯಪಾಶೋ
ಗತಿಂ ಮುನೇರ್ಯಾಮ್ಯಪವಿದ್ಧಲೋಕಃ || ೨೧ ||

ವೃತ್ರನಲ್ಲಿರುವ ಸಾತ್ವಿಕ ಚೇತನನ ಅಂಶದ ಸ್ವಭಾವವನ್ನು ತೋರಿಸಲು ಹೇಳುತ್ತಾರೆ. ಅಹಂ=ನಾನು ಸಂಕರ್ಷಣಃ=ನನ್ನ ಸ್ವಾಮಿಯಾದ ಸಂಕರ್ಷಣ ಸ್ವರೂಪಿ ಶ್ರೀಹರಿಯು ಯಥಾ=ಹೇಗೆ ಆಹ=ಮನಸ್ಸನ್ನು ಏಕಾಗ್ರದಲ್ಲಿಡುವುದನ್ನು ಉಪದೇಶಿಸಿರುವನೋ (ತಥಾ)=ಆ ರೀತಿಯಲ್ಲಿ ತಚ್ಚರಣಾರವಿಂದೇ=ಅವನ ಪಾದಾರವಿಂದಗಳಲ್ಲಿ ಮನಸ್ಸನ್ನು ಸಮಾಧಾಯ=ಸೇರಿಸಿ ತ್ವದ್ವಜ್ರ=ನಿನ್ನ ವಜ್ರಾಯುಧದ ರಂಹಃ=ವೇಗದಿಂದ ಲುನಿತ=ಕತ್ತರಿಸಲ್ಪಟ್ಟ ಗ್ರಾಮ್ಯಪಾಶಃ=ವಿಷಯಾನುಭವವೆಂಬ ಪಾಶವುಳ್ಳವನಾಗಿ ಅಪವಿದ್ಧಲೋಕಃ(ಸ್ಸ)=(೧) ದೇಹವನ್ನು ಬಿಟ್ಟವನಾಗಿ (೨) ಈ ಲೋಕಸ್ಥಿತಿಯನ್ನು ಕಳೆದುಕೊಂಡವನಾಗಿ (೩) ಸ್ವರ್ಗಾದಿ ಲೋಕಗಳನ್ನು ತಿರಸ್ಕರಿಸಿದವನಾಗಿ ಮುನೇಃ=ಜ್ಞಾನಿಯ ಗತಿಂ=ಲೋಕವನ್ನು (ವೈಕುಂಠವನ್ನು) ಸನ್ಯಾಸವನ್ನು ಯಾಮಿ=ಹೊಂದುವೆನು. || ೨೧ ||

ಪುಂಸಾಂ ಕಿಲೈಕಾಂತಧಿಯಾಂ ಸ್ವಕಾನಾಂ
ಯಾಃ ಸಂಪದೋ ದಿವಿ ಭೂಮೌ ರಸಾಯಾಮ್ ।

ಕೊಲ್ಲು. ಶ್ರೀಹರಿಯಿದ್ದಲ್ಲಿ ವಿಜಯಸಂಪತ್ತು ಮತ್ತು ಗುಣಗಳು ಇದ್ದೇ ಇರುವುವು. ನಾನಾದರೋ ಸಂಕರ್ಷಣಮೂರ್ತಿಯು ಉಪದೇಶಿಸಿದಂತೆ ಮನಸ್ಸನ್ನು ಅವನ ಪಾದಾರವಿಂದಗಳಲ್ಲಿಯೇ ಏಕಾಗ್ರಗೊಳಿಸಿ ಈ ನಿನ್ನ ವಜ್ರಾಯುಧದ ವೇಗದಿಂದ ವಿಷಯಾನುಭವ ಪಾಶವನ್ನು ಕಳೆದುಕೊಂಡು ಈ ದೇಹವನ್ನು ಬಿಟ್ಟು ಸ್ವರ್ಗಾದಿ ಲೋಕಗಳನ್ನೂ ಅಪೇಕ್ಷಿಸದೆ ಅಪರೋಕ್ಷ ಜ್ಞಾನಿಗಳು ಹೊಂದುವ ವೈಕುಂಠವನ್ನೇ ಹೊಂದುತ್ತೇನೆ. ಶ್ರೀಹರಿಯು ಏಕಾಂತ ಭಕ್ತರಾದ ತನ್ನವರಿಗೆ ಭೂಮಿಯ;

*

ನ ರಾತಿ ಯಸ್ಮಾದ್ಭಯಮುದ್ವೇಗ ಆಧಿ-
ರ್ಮದಾಃ ಕಲಿರ್ವ್ಯಸನಂ ಸಂಪ್ರಯಾಸಃ ॥ ೨೨ ॥

ಪರಲೋಕದಲ್ಲಿ ಸುಖವೋ ದುಃಖವೋ ನಿಶ್ಚಿತವಾಗಿ ತಿಳಿಯದು. ನಿನಗೆ ಇಲ್ಲಿಯಾದರೊ ಅಖಂಡೈಶ್ವರ್ಯವು ಕಂಡುಬಂದಿರುವುದು. ಈ ಲೋಕವನ್ನು ಬಿಟ್ಟರೆ ಅದೂ ಬಿಟ್ಟುಹೋಗುವುದು. ಅಂದಮೇಲೆ ನಿನಗೆ ದುಃಖವಾಗುವುದಿಲ್ಲವೇ? ಎಂದು ಆಶಂಕಿಸಿ ಎಲ್ಲವೂ ಈಶ್ವರಾಧೀನವಾದ್ದರಿಂದ ಅವನು ಸ್ಥಿರತರವಾದುದನ್ನೇ ಕೊಡುವನು. ತನ್ನ ಏಕಾಂತ ಭಕ್ತರಿಗೆ ಅವನು ಸ್ವರ್ಗಾದಿಗಳನ್ನೇ ಕೊಡುವುದಿಲ್ಲ. ಐಹಿಕವನ್ನೇನು ಹೇಳುವುದು! ಆದ್ದರಿಂದ ದೇಹತ್ಯಾಗದಿಂದ ನನಗೆ ದುಃಖವಿಲ್ಲ ವೆಂಬ ಅಭಿಪ್ರಾಯದಿಂದ ಹೇಳುತ್ತಾನೆ. ಶ್ರೀಹರಿಯು ಏಕಾಂತಧಿಯಾಂ=ಏಕಾಂತ ಮನಸ್ಸಿನಿಂದ ತನ್ನನ್ನು ಸೇವಿಸುವ ಸ್ವಕಾನಾಂ=ತನ್ನ ಭಕ್ತರಾದ ಪುಂಸಾಂ= ಉತ್ತಮಾಧಿಕಾರಿಗಳಿಗೆ ದಿವಿ=ಸ್ವರ್ಗದಲ್ಲಿ ಭೂಮೌ=ಭೂಮಿಯಲ್ಲಿ ರಸಾಯಾಂ= ರಸಾತಳದಲ್ಲಿ ಯಾಃ ಸಂಪದಃ=ಯಾವ ಸಂಪತ್ತುಗಳು (ಸಂತಿ)=ಇವೆಯೋ (ತಾಃ)=ಅವುಗಳನ್ನು ನ ರಾತಿ ಕಿಲ=ಕೊಡುವುದಿಲ್ಲವಲ್ಲವೆ! ಯಸ್ಮಾತ್=ಏಕೆಂದರೆ ಯಸ್ಮಾತ್=ಯಾವ ಕಾರಣದಿಂದ ಸಂಪದ್ದಾನದಿಂದ ಭಯವು, ಉದ್ವೇಗವು, ಆಧಿಃ=ಮನೋವ್ಯಥೆಯು, ಮದವು ಕಲಿಃ=ಜಗಳವು ವ್ಯಸನಂ=ದುಷ್ಟ ಚಟಗಳು ಸಂಪ್ರಯಾಸಃ=ಅತ್ಯಂತ ಪ್ರಯಾಸವು ಆಗುವುವೋ ಆ ಕಾರಣದಿಂದ ಕೊಡುವು ದಿಲ್ಲವೆಂದು ಅನ್ವಯ. ಹೀಗೆ ಹೇಳಿದ್ದರಿಂದ ಭಗವಂತನು ಕೊಡುವ ಸ್ವರ್ಗಾದಿ ಸಂಪತ್ತು ಅಪರಿಹಾರ್ಯವಾದ್ದರಿಂದ 'ತಿರಸ್ಕರಿಸಿದ ಸ್ವರ್ಗಾದಿ ಲೋಕಗಳುಳ್ಳವನಾಗಿ' ಎಂದು ಹೇಳಿದ್ದು ಹೇಗೆ? ಎಂಬುದಕ್ಕೂ ಉತ್ತರ ಕೊಟ್ಟಂತಾಯಿತು. ॥ ೨೨ ॥

ತ್ರೈವರ್ಗಿಕಾಯಾಸವಿಘಾತಮಸ್ಮತ್-
ಪತಿರ್ವಿಧತ್ತೇ ಪುರುಷಸ್ಯ ಶಕ್ರ ।
ತೇನಾನುಮೇಯೋ ಭಗವತ್ಪ್ರಸಾದೋ
ಯೋ ದುರ್ಲಭೋಽಕಿಂಚನಗೋಚರೋಽನ್ಯೈಃ ॥ ೨೩ ॥

ಪಾತಾಳದ, ಸ್ವರ್ಗದ ಸಂಪತ್ತುಗಳನ್ನು ಕೊಡುವುದಿಲ್ಲ. ಅವುಗಳನ್ನು ಕೊಟ್ಟದ್ದೇ ಆದರೆ ಭಯ, ಉದ್ವೇಗ, ಮನೋವ್ಯಥೆ, ಗರ್ವ, ಕಲಹ, ವ್ಯಸನ ಮತ್ತು ಅತಿಕಷ್ಟಗಳು ತಪ್ಪಿದ್ದಲ್ಲ. ಆದ್ದರಿಂದ, ಶಕ್ರ! ನಮ್ಮ ಸ್ವಾಮಿಯು ಬಂಧಕವಾದ ಧರ್ಮಾರ್ಥಕಾಮಗಳ ಫಲವನ್ನು ನಾಶಮಾಡುತ್ತಾನೆ. ಅದರಿಂದಲೇ ಶ್ರೀಹರಿಯ ಉತ್ತಮ ಪ್ರಸಾದವಾಗಿದೆಯೆಂದು ಅನುಮಾನ ಪ್ರಮಾಣದಿಂದ ತಿಳಿಯಬೇಕು. ಅದು ಕೇವಲ ಅಕಿಂಚನರಿಗೆ ಮಾತ್ರ ಲಭ್ಯವಾದುದು. ಇತರರಿಗೆ ಎಂದೂ ಲಭ್ಯವಲ್ಲ' ಎಂದು ಇಂದ್ರದೇವರಿಗೆ ಹೇಳಿದನು.

ಇದರಿಂದಲೂ ಶ್ರೀಹರಿಗೆ ಭಕ್ತರಲ್ಲಿ ಕರುಣೆಯೆಷ್ಟು ಎಂಬುದನ್ನು ನೋಡು ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಹೇ ಶಕ್ರ=ಇಂದ್ರನೇ, ಅಸ್ಮತ್ಪತಿಃ=ನಮ್ಮ ಸ್ವಾಮಿಯು ಪುರುಷಸ್ಯ=ಭಕ್ತನಿಗೆ ತ್ರೈವರ್ಗಿಕಾಯಾಸವಿಘಾತಂ=ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಗಳ ವಿಷಯಕವಾದ ಆಯಾಸದ ನಾಶವನ್ನು ವಿಧತ್ತೇ= ಮಾಡುವನು. ತೇನ=ಧರ್ಮ-ಅರ್ಥ-ಕಾಮ ಪರಿಶ್ರಮಗಳ ನಾಶದಿಂದ (ಪ್ರವೃತ್ತಿ ಧರ್ಮಗಳ ಫಲವಾಗಿ ಬಂದ ಬಂಧಕ ಐಶ್ವರ್ಯದ ನಾಶದಿಂದ) ಯಃ=ಯಾವುದು ಅಕಿಂಚನ ಗೋಚರಃ=ನಿರಪೇಕ್ಷಿಗಳಿಗೆ ಮಾತ್ರ ದೊರೆಯುವುದೋ ಅನ್ಯೈಃ= ಸಾಪೇಕ್ಷಿಗಳಿಗೆ ದುರ್ಲಭಃ=ದೊರೆಯುವುದಿಲ್ಲವೋ ಸಃ=ಅಂತಹ ಭಗವತ್ಪ್ರಸಾದಃ= ಶ್ರೀಹರಿಯ ಉತ್ತಮ ಪ್ರಸಾದವು (ಮೋಕ್ಷಜನಕವಾದುದು) ಆಗಿದೆಯೆಂದು ಅನುಮೇಯಃ=ಅನುಮಾನ ಪ್ರಮಾಣದಿಂದ ತಿಳಿಯಲಾಗುವುದು. 'ಯಸ್ಯಾನು- ಗ್ರಹಮಿಚ್ಛಾಮಿ ಹರಿಷ್ಯೇ ತದ್ಧನಂ ಶನೈಃ' ಎಂಬೀ ಮೊದಲಾದ ಮಾತುಗಳಿಂದ ಪರಿಶ್ರಮನಾಶವು ಉಕ್ತವಾಗಿರುವುದು. || ೨೩ ||

ಅಹಂ ಹರೇ ತವ ಪಾದೈಕಮೂಲ-
ದಾಸಾನುದಾಸೋ ಭವಿತಾಸ್ಮಿ ಭೂಯಃ ।
ಮನಃ ಸ್ಮರೇತಾತ್ಮಪತೇರ್ಗುಣಾನ್ನೋ
ಗೃಣೀತ ವಾಕ್ಕರ್ಮ ಕರೋತು ಕಾಯಃ ॥ ೨೪ ॥

ಹೀಗೆ ಇಂದ್ರನಿಗೆ ತನ್ನ ಅಭಿಪ್ರಾಯವನ್ನು ತಿಳಿಸಿ ಈಗ 'ಅಹಂ ಸಮಾಧಾಯ ಮನಃ' ಎಂಬಲ್ಲಿ ಹೇಳಿದ ಮನಃಸಮಾಧಾನವನ್ನು ತೋರಿಸುತ್ತಾ ಶ್ರೀಹರಿಯನ್ನು ಪ್ರಾರ್ಥಿಸುತ್ತಾರೆ. ಹೇ ಹರೇ=ಶ್ರೀಹರಿಯೇ, ಅಹಂ=ನಾನು ಭೂಯಃ=ಮತ್ತೆಮತ್ತೆ ತವ=ನಿನ್ನ ಪಾದೈಕಮೂಲದಾಸಾನುದಾಸಃ=ಪಾದಗಳೇ ಮುಖ್ಯಾಶ್ರಯವಾಗಿ ಯುಳ್ಳ ದಾಸರ ದಾಸನಾಗಿ ಭವಿತಾಸ್ಮಿ=ಆಗುವೆನು. ನಃ=ನಮ್ಮ ಮನಸ್ಸು ಆತ್ಮಪತೇಃ=ಶ್ರೀಹರಿಯನ್ನು ಸ್ಮರೇತ=ಸ್ಮರಿಸಲಿ. ಅಸುಪತೇಃ=ಎಂಬ ಪಾಠದಲ್ಲಿ ಪ್ರಾಣ ಪತಿಯನ್ನು ಎಂದರ್ಥ. ನಃ ವಾಕ್=ನಮ್ಮ ವಾಗಿಂದ್ರಿಯವು ಶ್ರೀಹರಿಯ ಗುಣಗಳನ್ನು ಗೃಣೀತ=ಸ್ತೋತ್ರ ಮಾಡಲಿ. ಕಾಯಃ=ನಮ್ಮ ದೇಹವು ಕರ್ಮ= ನಮಸ್ಕಾರ ಮೊದಲಾದ ಕರ್ಮಗಳನ್ನು ಕರೋತು=ಮಾಡಲಿ. || ೨೪ ||

ಅನಂತರ ಶ್ರೀಹರಿಯಲ್ಲಿಯೇ ಮನಸ್ಸಿಟ್ಟ ವೃತ್ರನು 'ಶ್ರೀಹರಿಯೇ! ಮತ್ತೆ ಮತ್ತೆ ನಾನು ನಿನ್ನ ಪಾದವನ್ನೇ ಆಶ್ರಯಿಸಿದ ದಾಸರ (ಭಕ್ತರ) ಅನುದಾಸನಾಗಿ ಆಗುವೆನು, ನನ್ನ ಮನಸ್ಸು ನನ್ನ ಸರ್ವ ಸ್ವಾಮಿಯಾದ ನಿನ್ನ ಗುಣಗಳನ್ನೇ ಸ್ಮರಿಸಲಿ; ಮಾತು ನಿನ್ನ ಗುಣಗಳನ್ನೇ ಸ್ತುತಿಸಲಿ; ದೇಹವು ನಿನ್ನ ಪ್ರಣಾಮಾದಿ

ನ ನಾಕಪೃಷ್ಠಂ ನ ಚ ಪಾರಮೇಷ್ಠ್ಯಂ
ನ ಸಾರ್ವಭೌಮಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ಸಮಂಜಸಂ ತ್ವಾಂ ವಿರಹಯ್ಯ ಕಾಂಕ್ಷೇ ॥ ೨೫ ॥

ನನಗೆ ವೀರಸ್ವರ್ಗವೂ ಕೂಡ ವೈಕುಂಠ ಮೊದಲಾದುವೇ ಎಂಬ ಅಭಿಪ್ರಾಯ ಹೇಳುತ್ತಾರೆ. ಅಥವಾ ದಾಸ್ಯದಿಂದೇನು? ನಿನಗೆ ಮಹಾಫಲಗಳನ್ನು ಕೊಡುತ್ತೇನೆ ಎಂದರೆ ಹೇಳುತ್ತಾರೆ. ಶ್ರೀಹರಿಯೇ, ಸಮಂಜಸಂ=ವೈಷಮ್ಯ ನೈರ್ಘೃಣ್ಯ ಬುದ್ಧಿ ಇಲ್ಲದ ನಿಖಿಲ ಸೌಭಾಗ್ಯನಿಧಿಯಾದ ತ್ವಾಂ=ನಿನ್ನನ್ನು ವಿರಹಯ್ಯ=ಬಿಟ್ಟು ನಾಕಪೃಷ್ಠಂ=ಸ್ವರ್ಗ, ಮಹಃ, ಜನಃ, ತಪಃ ಲೋಕಗಳನ್ನು ನ ಕಾಂಕ್ಷೇ=ಅಪೇಕ್ಷಿಸುವುದಿಲ್ಲ. ಪಾರಮೇಷ್ಠ್ಯಂ=ಸತ್ಯಲೋಕವನ್ನು ನ ಚ ಕಾಂಕ್ಷೇ=ಅಪೇಕ್ಷಿಸುವುದಿಲ್ಲ. ಸಾರ್ವಭೌಮಂ=ಭೂಮಿಯಲ್ಲಿ ಚಕ್ರವರ್ತಿ ಪದವಿಯನ್ನು ಆಶಿಸುವುದಿಲ್ಲ. ರಸಾಧಿಪತ್ಯಂ=ರಸಾತಳದ ಅಧಿಪತಿತನವನ್ನು ಅಪೇಕ್ಷಿಸುವುದಿಲ್ಲ. ಯೋಗಸಿದ್ಧೀಃ=ಯೋಗಾಭ್ಯಾಸದಿಂದ ದೊರೆಯುವ ಅಣಿಮಾದಿ ಅಷ್ಟಸಿದ್ಧಿಗಳನ್ನೂ ಆಕಾಂಕ್ಷಿಸುವುದಿಲ್ಲ. ವಾ=ಅಥವಾ ಅಪುನರ್ಭವಂ=ಪೂರ್ಣಸುಖವಿಲ್ಲದ ಆದರೆ ಮತ್ತೆ ಹುಟ್ಟುವಿಕೆ ಮಾತ್ರವಿಲ್ಲದಿರುವ ಅಮುಖ್ಯ ಮೋಕ್ಷವನ್ನು ಆಕಾಂಕ್ಷಿಸೆನು. ಹೀಗೆ ಹೇಳಿದ್ದರಿಂದ ಮೋಕ್ಷವು ಪ್ರಧಾನ ಫಲವಾದ್ದರಿಂದಲೂ ಎಲ್ಲ ಸಾಧನಗಳೂ ಅದಕ್ಕಾಗಿಯೇ ಆದ್ದರಿಂದಲೂ ಅದನ್ನು ಆಕಾಂಕ್ಷಿಸದಿರುವುದು ಹೇಗೆ? ಎಂಬ ಆಶಂಕೆಗೆ ಅವಕಾಶವಿಲ್ಲ. 'ಸಮ್ಯಕ್ ಸ್ವರೂಪಾಭಿವ್ಯಕ್ತಿಃ, ಅಭಾವೋ ಜನನಸ್ಯ ಚ' ಎಂದು ಮೋಕ್ಷವು ಎರಡು ಬಗೆ. ಅದರಲ್ಲಿ ಸಮ್ಯಕ್ ಸ್ವರೂಪಾನಂದಾಭಿವ್ಯಕ್ತಿ ಮುಖ್ಯ ಮೋಕ್ಷ. ಜನನಾಭಾವ ಅಮುಖ್ಯ ಮೋಕ್ಷ. ಆದ್ದರಿಂದ ಅಮುಖ್ಯ ಮೋಕ್ಷ ಬೇಡವೆಂದುದು ಯುಕ್ತವೆಂದು ತಿಳಿಯಬೇಕು. ಆದ್ದರಿಂದಲೇ 'ಅಪುನರ್ಭವ' ಎಂಬ ಪದವನ್ನು ಹಾಕಿರುವರು. ॥ ೨೫ ॥

ಅಜಾತಪಕ್ಷಾ ಇವ ಮಾತರಂ ಖಗಾಃ
ಸ್ತನ್ಯಂ ಯಥಾ ವತ್ಸತರಾಃ ಕ್ಷುಧಾರ್ತಾಃ ।

ಕರ್ಮವನ್ನೇ ಮಾಡಲಿ. ನಾನು ಸ್ವರ್ಗವನ್ನಾಗಲಿ ಮಹರ್ಲೋಕವನ್ನಾಗಲಿ, ಜನಲೋಕವನ್ನಾಗಲಿ, ತಪೋಲೋಕವನ್ನಾಗಲಿ ಬಯಸುವುದಿಲ್ಲ. ಸತ್ಯಲೋಕವೂ ನನ್ನ ಬಯಕೆಯಲ್ಲ. ಭೂಮಿಯ ಚಕ್ರಾಧಿಪತ್ಯವಾಗಲಿ ಪಾತಾಳದ ಆಧಿಪತ್ಯವಾಗಲಿ ನನಗೆ ಬೇಕಾಗಿಲ್ಲ. ಯೋಗಾಭ್ಯಾಸದಿಂದ ಬರುವ ಅಣಿಮಾದಿಸಿದ್ಧಿಗಳು ನನಗೆ ಬೇಡ. ಅಮುಖ್ಯ ಮೋಕ್ಷವಾದ ಜನನರಾಹಿತ್ಯವೂ ನನ್ನ ಆಶೆಯಲ್ಲ. ನಿರ್ದೋಷನೂ ಸರ್ವ ಸೌಭಾಗ್ಯನಿಧಿಯೂ ಆದ ನಿನ್ನನ್ನು ಹೊರತು ಇವು ಯಾವುವೂ ನನ್ನ ಆಕಾಂಕ್ಷೆಗಳಲ್ಲ. ರೆಕ್ಕೆ ಬಾರದಿರುವ ಮರಿಹಕ್ಕಿಗಳು ಹದ್ದುಗಳಿಂದ ಪೀಡಿತಗಳಾಗಿ

ಪ್ರಿಯಂ ಪ್ರಿಯೇವಾಧ್ಯುಷಿತಂ ವಿಷಣ್ಣಂ
ಮನೋಽರವಿಂದಾಕ್ಷ ದಿದೃಕ್ಷತೇ ತ್ವಾಮ್ ॥ ೨೬ ॥

ಅರವಿಂದಾಕ್ಷ=ಕಮಲದಂತೆ ಕಣ್ಣಿರುವ ಹೇ ಶ್ರೀಹರಿಯೇ, ಅಜಾತಪಕ್ಷಾಃ=ಇನ್ನೂ ರೆಕ್ಕೆಗಳು ಬಲಿಯದೆ ಇರುವ ಮರಿಗಳು ಗೂಡಿನಿಂದ ಹೆದರಿ ಮಾತರಂ ಇವ= ತಾಯಿ ಹಕ್ಕಿಯನ್ನು ಕಾಣಬೇಕೆಂದು ಹಂಬಲಿಸುವಂತೆ ಕ್ಷುಧಾರ್ತಾಃ=ಹಸಿದಿರುವ ವತ್ಸತರಾಃ=ಎಳೆ ಮಕ್ಕಳು (ಕಟ್ಟಿರುವ ಕರುಗಳು) ಸ್ತನ್ಯಂ ಯಥಾ= ಸ್ತನಗಳಿಂದ ಬರುವ ಹಾಲನ್ನು ಕುಡಿಯಲು ಕಾತರಿಸುವಂತೆ ವಿಷಣ್ಣಾ= ಕಾಮಪೀಡೆಯಿಂದ ವಿಷಣ್ಣಳಾದ ಪ್ರಿಯಾ=ಹೊಸದಾಗಿ ಮದುವೆಯಾದ ಮುಗ್ಧೆಯು ಅಧ್ಯುಷಿತಂ=ದೂರದೇಶಕ್ಕೆ ಪ್ರವಾಸ ಹೋಗಿರುವ ಪ್ರಿಯಂ ಇವ=ಪ್ರೀತಿ ವಿಷಯನಾದ ಪತಿಯನ್ನು ಕಾಣಬೇಕೆನ್ನುವಂತೆ ವಿಷಣ್ಣಂ= ತಾಪತ್ರಯಗಳಿಂದ ನೊಂದ, ಕರ್ಮಗಳಿಂದ ಬದ್ಧವಾದ, ಕಾಮಾದಿಗಳಿಂದ ಉದ್ವಿಗ್ನವಾಗಿರುವ ಮನಃ= ನನ್ನ ಮನಸ್ಸು ನಿನ್ನನ್ನು ದಿದೃಕ್ಷತೇ= ನೋಡಲು ಇಚ್ಛಿಸುತ್ತದೆ. ಇದರಿಂದ ನೀನು ಕಾಂಕ್ಷಿಸುವುದಾದರೂ ಏನು? ಎಂದರೆ ಉತ್ತರ ಹೇಳಿದಂತಾಯಿತು. ಮನಸ್ಸಿಗೆ ಕೊಟ್ಟಿರುವ ಮೂರು ಪರಿಸ್ಥಿತಿಗಳಿಗನುಗುಣವಾಗಿ ಮೂರು ಉದಾಹರಣೆಗಳೆಂದು ತಿಳಿಯಬೇಕು. || ೨೬ ||

ಮಮೋತ್ತಮಶ್ಲೋಕಜನೇಷು ಸಖ್ಯಂ
ಸಂಸಾರಚಕ್ರೇ ಭ್ರಮತಃ ಸ್ವಕರ್ಮಭಿಃ ।
ತ್ವನ್ಮಾಯಯಾಽತ್ಮಾತ್ಮಜ-ದಾರ-ಗೇಹೇ-
ಷ್ವಾಸಕ್ತಚಿತ್ತಸ್ಯ ನ ನಾಥ ಭೂಯಾತ್ ॥ ೨೭ ॥

ಹೇ ನಾಥ= ಸ್ವಾಮಿಯೇ, ಸ್ವಕರ್ಮಭಿಃ= ನಾನು ಮಾಡಿದ ಕರ್ಮಗಳ ಫಲವಾಗಿ ಸಂಸಾರಚಕ್ರೇ= ಸಂಸಾರವೆಂಬ ಚಕ್ರದಲ್ಲಿ ಭ್ರಮತಃ= ಸುತ್ತುತ್ತಿರುವ ಮಮ=ನನಗೆ ಉತ್ತಮಶ್ಲೋಕಜನೇಷು= ಉತ್ತಮ ಕೀರ್ತಿಯುಳ್ಳ ನಿನ್ನ

ತಾಯಿಯನ್ನೇ ಕಾಣಬಯಸುವಂತೆ, ಹಸಿವೆಯಿಂದ ಬಳಲಿದ ಎಳಗರುಗಳು ಕಟ್ಟಿಹಾಕಿದ್ದು ತಾಯಿಯ ಸ್ತನ್ಯವನ್ನೇ ಬಯಸುವಂತೆ, ಹೊಸದಾಗಿ ಮದುವೆಯಾದ ಪ್ರೇಯಸಿಯು ಪ್ರವಾಸಗತನಾದ ಪ್ರಿಯನನ್ನೇ ಕಾಣಬಯಸುವಂತೆ ಹೇ ಪುಂಡರೀಕಾಕ್ಷ! ಈ ನನ್ನ ಮನಸ್ಸು ನಿನ್ನನ್ನೇ ನೋಡಬಯಸುತ್ತದೆ. ನನ್ನ ಕರ್ಮಾನುಗುಣವಾಗಿ ನಾನೀಸಂಸಾರಚಕ್ರದಲ್ಲಿ ಸುತ್ತುತ್ತಿದ್ದೇನೆ. ನಿನ್ನ ಬಂಧಕ ಶಕ್ತಿಯಿಂದ ದೇಹ, ಸುತ, ಹೆಂಡತಿ, ಮನೆಗಳಲ್ಲಿ ಆಸಕ್ತರಾಗಿ ನಿನ್ನಲ್ಲಿ ವಿಮುಖರಾದವರ ಸಖ್ಯವನ್ನು ನನಗೆ ಕೊಡಬೇಡ. ನಿನ್ನ ಭಕ್ತಜನರ ಸ್ನೇಹವೇ ನನಗೆ ನಾಥ! ಯಾವಾಗಲೂ ನಿನ್ನ ಅನುಗ್ರಹದಿಂದ ಆಗಲಿ' ಎಂದು ಶ್ರೀಹರಿಯನ್ನು ಪ್ರಾರ್ಥಿಸಿದನು.

ಭಕ್ತರಾದ ಜನರಲ್ಲಿ ಸಖ್ಯಂ=ಸ್ನೇಹವು ಭೂಯಾತ್=ಆಗಲಿ. ತ್ವನ್ಮಾಯಯಾ= ನಿನ್ನ ಇಚ್ಛೆಯಿಂದ (ಬಂಧಕಶಕ್ತಿಯಿಂದ) ಆತ್ಮಾ= ದೇಹದಲ್ಲಿಯೂ ಆತ್ಮಜ= ಮಕ್ಕಳಲ್ಲಿಯೂ ದಾರ=ಹೆಂಡತಿಯಲ್ಲಿಯೂ ಗೇಹೇಷು=ಮನೆಯಲ್ಲಿಯೂ ಆಸಕ್ತ ಚಿತ್ತಸ್ಯ=ಆಸಕ್ತವಾದ ಮನಸುಳ್ಳ ಜನದ (ಸಖ್ಯಂ)=ಸ್ನೇಹವು ನ ಭೂಯಾತ್= ಆಗದಿರಲಿ. ಆಸಕ್ತ ಚಿತ್ತೇಷು ಎಂಬ ಪಾಠದಲ್ಲಿ ಆಸಕ್ತವಾದ ಮನಸ್ಸುಳ್ಳ ಆದ್ದ ರಿಂದಲೇ ಭಗವದ್ವಿಮುಖರಾದ ಜನರಲ್ಲಿ ಎಂದರ್ಥ. ಇದರಿಂದ ಶ್ರೀ ಹರಿಯ ದರ್ಶನಕ್ಕೆ ಭಕ್ತಜನ ಸಖ್ಯ, ಅಭಕ್ತಜನ ಅಸಖ್ಯ ಎರಡು ಸಾಧನಗಳೆಂದು ಹೇಳಿ ದಂತಾಯಿತು. || ೨೭ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಏಕಾದಶೋಽಧ್ಯಾಯಃ

ಅಥ ದ್ವಾದಶೋಽಧ್ಯಾಯಃ

ಋಷಿರುವಾಚ—

ಏವಂ ಜಿಹಾಸುರ್ನೃಪ ದೇಹಮಾಜೌ
ಮೃತ್ಯುಂ ಪರಂ ವಿಜಯಂ ಮನ್ಯಮಾನಃ ।
ಶೂಲಂ ಪ್ರಗೃಹ್ಯಾಭ್ಯಪತತ್ಸುರೇಂದ್ರಂ
ಯಥಾ ಮಹಾಪುರುಷಂ ಕೈಟಭೋಽಪ್ಸು || ೧ ||

ವೃತ್ರ-ಇಂದ್ರರ ಸಂವಾದದ ನೆಪದಲ್ಲಿ ಶ್ರೀಹರಿಯು ಜೀವರಿಗಿಂತ ಅಭಿನ್ನ ನೆಂದು ತಿಳಿಯುವುದು ತಮಸ್ಸಿಗೆ ಸಾಧನವೆಂಬ ಪ್ರಮೇಯವನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಮೊದಲು ವೃತ್ರೇಂದ್ರರ ಉಳಿದ ಯುದ್ಧವನ್ನು ಹೇಳುತ್ತಾರೆ. ಹೇ ನೃಪ=ಪರೀಕ್ಷಿದ್ರಾಜನೇ, ಏವಂ=ಈ ರೀತಿಯಲ್ಲಿ ಆಜೌ=ಯುದ್ಧದಲ್ಲಿ ದೇಹ ವನ್ನು ಜಿಹಾಸುಃ=ಬಿಡಲು ಬಯಸಿದ ಆ ವೃತ್ರನು ಮೃತ್ಯುಂ=ಸಾವನ್ನೇ ಪರಂ= ಶ್ರೇಷ್ಠವಾದ ವಿಜಯಂ=ಜಯವೆಂದು ಮನ್ಯಮಾನಃ(ಸನ್)=ತಿಳಿದವನಾಗಿ ಶೂಲ ವನ್ನು ಹಿಡಿದು ಯಥಾ=ಹೇಗೆ ಕೈಟಭಾಸುರನು ಅಪ್ಸು=ಸೃಷ್ಟಿಯ ಪ್ರಾರಂಭದಲ್ಲಿ ಪ್ರಳಯೋದಕದಲ್ಲಿ ಮಹಾಪುರುಷಂ=ವಿಷ್ಣುವನ್ನು ಎದುರಿಸಿ ಹೊರಟನೋ (ತಥಾ)=ಹಾಗೆ ಸುರೇಂದ್ರಂ=ಇಂದ್ರನ ಮೇಲೆ ಅಭ್ಯಪತತ್=ಬಿದ್ದನು. || ೧ ||

ಹನ್ನೆರಡನೆಯ ಅಧ್ಯಾಯ

ಶುಕಾಚಾರ್ಯರು—ಪರೀಕ್ಷಿದ್ರಾಜ ! ಹೀಗೆ ವೃತ್ರನು ಯುದ್ಧದಲ್ಲಿ ದೇಹವನ್ನು ಬಿಡಲು ಬಯಸಿದನು. ಮೃತ್ಯುವೇ ಶ್ರೇಷ್ಠವಾದ ವಿಜಯವೆಂದವನು ಬಗೆದನು. ಕೈಟಭಾಸುರನು ಪ್ರಳಯೋದಕದಲ್ಲಿ ವಿಷ್ಣುವಿನ ಮೇಲೆ ನುಗ್ಗಿಬಂದಂತೆ ಶೂಲಧಾರಿ

ತತೋ ಯುಗಾಂತಾಗ್ನಿಕಠೋರಜಿಹ್ವ-
ಮಾವಿಧ್ಯ ಶೂಲಂ ತರಸಾಽಸುರೇಂದ್ರಃ ।
ಕ್ಷಿಪ್ತ್ವಾ ಮಹೇಂದ್ರಾಯ ವಿನದ್ಯ ಧೀರೋ
ಹತೋಽಸಿ ಪಾಪೇತಿ ರುಷಾ ಜಗಾದ ॥ ೨ ॥

ತತಃ = ಅನಂತರ ಧೀರಃ=ಧೈರ್ಯಶಾಲಿಯಾದ ಅಸುರೇಂದ್ರಃ=ವೃತ್ರಾಸುರನು ತರಸಾ = ವೇಗದಿಂದ ಯುಗಾಂತಾಗ್ನಿಕಠೋರಜಿಹ್ವಂ = ಪ್ರಳಯಕಾಲದ ಅಗ್ನಿಯಂತೆ ಭಯಂಕರವಾದ ನಾಲಗೆ (ಕೊನೆ) ಗಳುಳ್ಳ ಶೂಲವನ್ನು ಆವಿಧ್ಯ= ತಿರುಗಿಸಿ ಮಹೇಂದ್ರಾಯ=ಇಂದ್ರನ ಮೇಲೆ ಕ್ಷಿಪ್ತ್ವಾ=ಎಸೆದು ವಿನದ್ಯ=ಸಿಂಹನಾದ ಮಾಡಿ ರುಷಾ=ಕೋಪದಿಂದ ಪಾಪ=ಪಾಪಿಯೇ ಹತಃ ಅಸಿ=ಸಂಹೃತನಾದೆ ಇತಿ= ಎಂದು ಜಗಾದ=ಅಬ್ಬರಿಸಿದನು. ॥ ೨ ॥

ಖ ಆಪತಂತಂ ಜ್ವಲಿತಂ ಮಹೋಲ್ಕವ-
ನ್ನಿರೀಕ್ಷ್ಯ ದುಷ್ಪ್ರೇಕ್ಷ್ಯಮಜಾತವಿಕ್ಲವಃ ।
ವಜ್ರೇಣ ವಜ್ರೀ ಶತಪರ್ವಣಾಽಚ್ಛಿನ-
ದ್ಭುಜಂ ಚ ತಸ್ಯೋರಗಭೋಗಭೋಗಮ್ ॥ ೩ ॥

ವಜ್ರೀ=ಇಂದ್ರದೇವರು ಖೇ=ಆಕಾಶದಲ್ಲಿ ಆಪತಂತಂ=ಬರುತ್ತಿದ್ದ ಜ್ವಲಿತಂ= ಜ್ವಲಿಸುತ್ತಿದ್ದ ಆದ್ದರಿಂದಲೇ ಮಹೋಲ್ಕವತ್=ದೊಡ್ಡ ಕೆಂಡದಂತೆ ದುಷ್ಪ್ರೇಕ್ಷ್ಯಂ= ನೋಡಲಾಗದ (ತತ್)=ಆ ಶೂಲವನ್ನು ನಿರೀಕ್ಷ್ಯ=ನೋಡಿ ಅಜಾತವಿಕ್ಲವಃ (ಸå)=ಹೆದರಿಕೆ ಹುಟ್ಟದವರಾಗಿ (ಹೆದರದೆ) ಶತಪರ್ವಣಾ=ನೂರು ಹಲ್ಲುಗಳಿರುವ ವಜ್ರೇಣ=ವಜ್ರಾಯುಧದಿಂದ ಉರಗಭೋಗಭೋಗಂ=ವಾಸುಕಿಯ ದೇಹದಂತೆ ಪುಷ್ಟವಾಗಿದ್ದ (ಉರಗರಾಜಭೋಗಂ ಎಂಬ ಪಾಠದಲ್ಲಿ ಸರ್ಪರಾಜನಾದ ವಾಸುಕಿಯ ದೇಹದಂತೆ ಆಕಾರವುಳ್ಳ ಎಂದರ್ಥ) ಭುಜಂ=ವೃತ್ರಾಸುರನ ತೋಳನ್ನೂ ಚ= ಶೂಲವನ್ನೂ ಅಚ್ಛಿನತ್=ಕತ್ತರಿಸಿದರು. ॥ ೩ ॥

ಯಾಗಿ ಇಂದ್ರನ ಮೇಲೆ ಬಿದ್ದನು. ಧೀರನಾದ ಅವನು ಪ್ರಳಯ ಕಾಲದ ಬೆಂಕಿಯಂತೆ ಕಠೋರ ನಾಲಗೆಗಳುಳ್ಳ ಶೂಲವನ್ನು ತಿರುಗಿಸಿ ವೇಗದಿಂದ ಮಹೇಂದ್ರನ ಮೇಲೆ ಎಸೆದನು. ಸಿಂಹನಾದ ಮಾಡಿ ಕೋಪದಿಂದ 'ಪಾಪಿಯೇ, ಹತನಾದೆ' ಎಂದು ಆರ್ಭಟಿಸಿದನು. ಜ್ವಲಿಸುತ್ತಿದ್ದ ಶೂಲವು ಆಕಾಶದಲ್ಲಿ ಬರುತ್ತಿತ್ತು. ದೊಡ್ಡ ಕೆಂಡ ದಂತೆ ಅದು ನೋಡಲು ಅಸಹ್ಯವಾಗಿತ್ತು. ಅದನ್ನು ಕಂಡ ಇಂದ್ರದೇವರಿಗೆ ವೈಕ್ಲವ್ಯ ವೇನೂ ಉಂಟಾಗಲಿಲ್ಲ. ಇಂದ್ರದೇವರು ನೂರು ಪರ್ವಗಳಿದ್ದ ವಜ್ರಾಯುಧದಿಂದ ಆ ಶೂಲವನ್ನೂ ಅದನ್ನು ಹಿಡಿದಿದ್ದ ಸರ್ಪಶರೀರದಂತೆ ಪುಷ್ಟವಾಗಿದ್ದ ವೃತ್ರನ ನಿಡು

ಛಿನ್ನೈಕಬಾಹುಃ ಪರಿಘೇಣ ವೃತ್ರಃ
ಸಂರಬ್ಧ ಆಸಾದ್ಯ ಗೃಹೀತವಜ್ರಮ್ ।
ಹನೌ ತತಾಡೇಂದ್ರಮಥಾಮರೇಶಂ
ವಜ್ರಶ್ಚ ಹಸ್ತಾನ್ನ್ಯಪತನ್ಮಘೋನಃ ॥ ೪ ॥

ಛಿನ್ನೈಕಬಾಹುಃ=ಒಂದು ತೋಳು ಕತ್ತರಿಸಿಹೋದ ಆದ್ದರಿಂದಲೇ ಸಂರಬ್ಧಃ=ಕೋಪಗೊಂಡ ವೃತ್ರಾಸುರನು ಗೃಹೀತ ವಜ್ರಂ=ವಜ್ರಾಯುಧವನ್ನು ಹಿಡಿದಿದ್ದ ಅಮರೇಶಂ=ದೇವತೆಗಳಿಗೆ ಸ್ವಾಮಿಯಾದ ಇಂದ್ರಂ=ಇಂದ್ರದೇವರನ್ನು ಆಸಾದ್ಯ=ಸಮೀಪಿಸಿ ಪರಿಘೇಣ=ಪರಿಘಾಯುಧದಿಂದ ಹನೌ=ಕಪೋಲ ಪ್ರದೇಶದಲ್ಲಿ ತತಾಡ=ಹೊಡೆದನು. ಮಘೋನಃ=ಇಂದ್ರದೇವರ ಹಸ್ತಾತ್=ಕೈಗಳಿಂದ ವಜ್ರಃ=ವಜ್ರಾಯುಧವು ನ್ಯಪತತ್ ಚ=ಬಿದ್ದುಹೋಯಿತು. ಇಂದ್ರಶಬ್ದವು ಸ್ವಾಮಿಸಾಮಾನ್ಯದಲ್ಲಿಯೂ ಪ್ರಯುಕ್ತವಾಗುವುದಾದ್ದರಿಂದ ವಿಶೇಷವಾಗಿ ತಿಳಿಸುವುದಕ್ಕಾಗಿ 'ಅಮರೇಶಂ' ಎಂಬ ವಿಶೇಷಣ ಕೊಟ್ಟಿರುವರು. ॥ ೪ ॥

ವೃತ್ರಸ್ಯ ಕರ್ಮಾತಿಮಹಾದ್ಭುತಂ ತ-
ತ್ಸುರಾಸುರಾಶ್ಚಾರಣಸಿದ್ಧಸಂಘಾಃ ।
ಅಪೂಜಯಂಸ್ತತ್ಪುರುಹೂತಸಂಕಟಂ
ನಿರೀಕ್ಷ್ಯ ಹಾಹೇತಿ ವಿಚುಕ್ರುಶುರ್ಭೃಶಮ್ ॥ ೫ ॥

ಸುರರೂ ಅಸುರರೂ ಚಾರಣ ಸಮೂಹಗಳೂ ಸಿದ್ಧರ ಸಮೂಹಗಳೂ (ವೃತ್ರನ) ಅತಿ ಮಹಾದ್ಭುತಮ್=ಅತ್ಯಂತ ಆಶ್ಚರ್ಯಕರವಾದ ತತ್ ಕರ್ಮ=ಆ ಕಾರ್ಯವನ್ನು ಅಪೂಜಯನ್=ಪ್ರಶಂಸಿಸಿದರು. ತತ್=ಆ ಪುರುಹೂತ-ಸಂಕಟಂ=ಇಂದ್ರದೇವರ ಕಷ್ಟವನ್ನು ನಿರೀಕ್ಷ್ಯ=ನೋಡಿ ಹಾ ಹಾ ಎಂದು ಭೃಶಂ=ಬಹಳವಾಗಿ ವಿಚುಕ್ರುಶುಃ=ಕೂಗಿಕೊಂಡರು. ॥ ೫ ॥

ಇಂದ್ರೋ ನ ವಜ್ರಂ ಜಗೃಹೇ ವಿಲಜ್ಜಿತ-
ಶ್ಚ್ಯುತಂ ಸ್ವಹಸ್ತಾದರಿಸನ್ನಿಧೌ ಪುನಃ ।
ತಮಾಹ ವೃತ್ರೋ ಹರ ಆತ್ತವಜ್ರೋ
ಜಹಿ ಸ್ವಶತ್ರುಂ ನ ವಿಷಾದಕಾಲಃ ॥ ೬ ॥

ದೋಳನ್ನೂ ಕತ್ತರಿಸಿದರು. ಒಂದು ತೋಳು ಕತ್ತರಿಸಿದ್ದರಿಂದ ಕೋಪಗೊಂಡ ಆ ಅಸುರನು ವಜ್ರಾಯುಧಧಾರಿಗಳಾಗಿದ್ದ ದೇವಾಧಿಪತಿ ಇಂದ್ರದೇವರನ್ನು ಸಮೀಪಿಸಿ ಪರಿಘದಿಂದ ಕಪೋಲದಲ್ಲಿ ಹೊಡೆದನು. ಇಂದ್ರದೇವರ ಕೈಯಿಂದ ವಜ್ರಾಯುಧವು ಕಳಚಿಬಿತ್ತು. ಸುರಾಸುರಚಾರಣ ಸಿದ್ಧಸಂಘಗಳು ಅತ್ಯಾಶ್ಚರ್ಯಕರವಾದ ವೃತ್ರನ ಆ ಕೆಲಸವನ್ನು ಹೊಗಳಿದರು. ಇಂದ್ರದೇವರಿಗೊದಗಿದ್ದ ತೊಂದರೆಯನ್ನು ಕಂಡು ಹಾ ಹಾ ಎಂದು ಬಹಳ ಮರುಗಿದರು. ನಾಚಿಕೆಗೊಂಡ ಇಂದ್ರದೇವರು ತಮ್ಮ

ವಿಲಜ್ಜಿತಃ=ನಾಚಿಕೆಗೊಂಡ ಇಂದ್ರದೇವರು ಸ್ವಹಸ್ತಾತ್=ತನ್ನ ಕೈಯಿಂದ ಚ್ಯುತಂ=ಕಳಚಿಬಿದ್ದ ವಜ್ರಾಯುಧವನ್ನು ಅರಿಸನ್ನಿಧೌ=ಶತ್ರುವಿನ ಸಮೀಪದಲ್ಲಿ ಪುನಃ=ಮತ್ತೆ ನ ಜಗೃಹೇ=ತೆಗೆದುಕೊಳ್ಳಲಿಲ್ಲ. ವೃತ್ರಃ=ವೃತ್ರಾಸುರನು ತಂ=ಇಂದ್ರದೇವರನ್ನು ಕುರಿತು ಆಹ=ಹೇಳಿದನು. ಹೇ ಹರೇ=ಇಂದ್ರನೇ, ಆತ್ತವಜ್ರಃ (ಸಣ್)=ವಜ್ರಾಯುಧವನ್ನು ತೆಗೆದುಕೊಂಡವನಾಗಿ ಸ್ವಶತ್ರುಂ=ನಿನ್ನ ಶತ್ರುವಾದ (ಮಾಂ)=ನನ್ನನ್ನು ಜಹಿ=ಕೊಲ್ಲು. ವಿಷಾದಕಾಲಃ=ವಜ್ರಾಯುಧವು ಬಿದ್ದು ಹೋಯಿತಲ್ಲಾ ಎಂದು ವಿಷಾದಿಸುವ ಸಮಯವು ನ=ಅಲ್ಲ. || ೬ ||

ಯುಯುತ್ಸತಾಂ ಕುತ್ರಚಿದಾತತಾಯಿನಾಂ
ಜಯಃ ಸದೈಕತ್ರ ನ ವೈ ಪರಾಜಯಃ ।
ವಿನೈಕಮುತ್ಪತ್ತಿಲಯಸ್ಥಿತೀಶ್ವರಂ
ಸರ್ವಜ್ಞಮಾದ್ಯಂ ಪುರುಷಂ ಸನಾತನಮ್ ॥ ೭ ॥

ನಾನು ಸಂಹರಿಸಿದಲ್ಲಿ ನಿನಗೆ ಪರಾಜಯವೇ ಆಗುವುದಲ್ಲವೇ! ಎಂದು ಶಂಕಿಸುವೆಯಾದರೆ ಜಯ ಪರಾಜಯಗಳು ನಿಯತವಾದುದಲ್ಲ, ದೈವಕೃತವಾದುವು ಎಂದು ಹೇಳುತ್ತಾನೆ. ಆತತಾಯಿನಾಂ=ಶಸ್ತ್ರಧಾರಿಗಳಾದ ಯುಯುತ್ಸತಾಂ=ಯುದ್ಧ ಶೀಲರಿಗೆ ಕುತ್ರಚಿತ್=ಯುದ್ಧದಲ್ಲಿ ಎಲ್ಲಿಯಾದರೂ ಉತ್ಪತ್ತಿ ಲಯ ಮತ್ತು ಸ್ಥಿತಿ (ರಕ್ಷಣೆ) ಗೆ ನಿಯಾಮಕನಾದ ಸರ್ವಜ್ಞಂ=ಎಲ್ಲವನ್ನೂ ಬಲ್ಲ ಆದ್ಯಂ=ಎಲ್ಲರಿಗೂ ಕಾರಣ (ಮೊದಲಿಗ) ನಾದ ಸನಾತನಂ ಪುರುಷಂ=ಪುರಾಣ ಪುರುಷನಾದ ಶ್ರೀಹರಿಯನ್ನು ಏಕಂ=ಒಬ್ಬನನ್ನು ವಿನಾ=ಬಿಟ್ಟು ಏಕತ್ರ=ಒಬ್ಬನಿಗೇ, ದೇವ ಸ್ವಭಾವದವನಿಗೇ ಸದಾ ಜಯಃ=ಯಾವಾಗಲೂ ಜಯವು (ಪರತ್ರ)=ಇತರನಾದ ಅಸುರ ಪ್ರಕೃತಿಗೆ ಸದಾ ಪರಾಜಯಃ=ಯಾವಾಗಲೂ ಸೋಲು (ಇತಿ)=ಎಂಬ ನಿಯಮವು ನ ವೈ=ಇಲ್ಲವಲ್ಲವೇ! ಅಥವಾ ಶ್ರೀಹರಿಯನ್ನು ಬಿಟ್ಟು ಕುತ್ರಚಿತ್=ಎಲ್ಲಿಯೂ ಯುದ್ಧ ಶೀಲರಿಗೆ ಜಯವು ಸದಾ=ನಿಯಮವಾಗಿ ನ ವೈ=ಆಗುವುದಿಲ್ಲ. ಮತ್ತೇನೆಂದರೆ ಏಕತ್ರ=ಎಲ್ಲಿಯೋ ಒಂದು ಸಲ ಮಾತ್ರ. ಪರಾಜಯಃ (ಅಪಿ)=

ಕೈಯಿಂದ ಕಳಚಿಬಿದ್ದಿದ್ದ ವಜ್ರಾಯುಧವನ್ನು ಶತ್ರುವಿನ ಎದುರಿನಲ್ಲಿ ಮತ್ತೆ ಹಿಡಿಯಲಿಲ್ಲ.

ಆ ಅಸುರನು ಇಂದ್ರದೇವರನ್ನು ಕುರಿತು 'ಇಂದ್ರ! ವಜ್ರವನ್ನು ತೆಗೆದುಕೊಂಡು ನಿನ್ನ ಶತ್ರುವಾದ ನನ್ನನ್ನು ಕೊಲ್ಲು. ಇದು ವಿಷಾದಿಸುವ ಕಾಲವಲ್ಲ. ಸೃಷ್ಟಿ ಸ್ಥಿತಿ ಲಯಗಳಿಗೆ ಮುಖ್ಯ ನಿಯಾಮಕನೂ ಸರ್ವಜ್ಞನೂ ಎಲ್ಲರಿಗೂ ಮೊದಲಿಗನೂ ಪುರಾಣ ಪುರುಷನೂ ಆದ ಒಬ್ಬ ಶ್ರೀಹರಿಯನ್ನು ಬಿಟ್ಟು ಯುದ್ಧಶೀಲರಾದ ಶಸ್ತ್ರಧಾರಿಗಳಾದ ಯಾರಿಗೂ ಯಾವಾಗಲೂ ಜಯವಾಗಿಯೇ ಆಗುವುದೆಂಬ ನಿಯಮವಿಲ್ಲ. ಅಸುರರಿಗೆ ಯಾವಾಗಲೂ ಪರಾಜಯವೇ ಆಗುವುದೆಂಬ ನಿಯಮವೂ

ಸೋಲೂ (ಸ್ಯಾತ್) ಆಗುವುದು. ಪರಮ ಪುರುಷನಾದ ಶ್ರೀಹರಿಗೆ ಮಾತ್ರ ಯಾವಾಗಲೂ ಜಯವೇ ಆಗುವುದು ಎಂದು ಅಭಿಪ್ರಾಯ. ಅದರಲ್ಲಿಯೂ ಸೋತಿರುವ ನಿನ್ನ ಸ್ಥಿತಿಯಲ್ಲಿಯೂ ದೇಹ ವಿಯೋಗವೆಂಬ ಲಯವು ಪ್ರತಿ ಕ್ಷಣ ದಲ್ಲಿಯೂ ಆಗುತ್ತಿದೆಯೆಂದು ತಿಳಿಸುವುದಕ್ಕಾಗಿ ಉತ್ಪತ್ತಿಯ ನಂತರವೇ ಲಯವನ್ನು ಹೇಳಿದ್ದು. || ೭ ||

ಲೋಕಾಃ ಸಪಾಲಾ ಯಸ್ಯೇಮೇ ಶ್ವಸಂತಿ ವಿವಶಾ ವಶೇ ।
ದ್ವಿಜಾ ಇವ ಸಿಚಾ ಬದ್ಧಾಃ ಸ ಕಾಲ ಇಹ ಕಾರಣಮ್ || ೮ ||

ಶ್ರೀಹರಿಗೆ ಮಾತ್ರ ಯಾವಾಗಲೂ ಜಯವೇ ಎಂಬ ನಿಯಮವಾದರೂ ಯಾವ ಕಾರಣದಿಂದ ಎಂದರೆ ಹೇಳುತ್ತಾರೆ. ಇಮೇ = ಈ ಸಪಾಲಾಃ = ಪಾಲಕರಿಂದ ಕೂಡಿದ ಲೋಕಾಃ = ಲೋಕಗಳು ಸಿಚಾ = ಬಲೆಯಿಂದ ಬದ್ಧಾಃ = ಕಟ್ಟಿಹಾಕಲ್ಪಟ್ಟ ದ್ವಿಜಾಃ ಇವ = ಹಕ್ಕಿಗಳಂತೆ ವಿವಶಾಃ = ಪರಾಧೀನರಾಗಿ(ಗಳಾಗಿ) ಯಸ್ಯ = ಯಾವ ಕಾಲರೂಪಿ ಶ್ರೀಹರಿಯ ವಶೇ – ಅಧೀನದಲ್ಲಿದ್ದು ಶ್ವಸಂತಿ = ಉಸಿರಾಡಿಸುತ್ತಿರುವರೋ ಸಃ = ಆ ಸ್ವತಂತ್ರನೂ ಸರ್ವನಿಯಾಮಕನೂ ಆದ ಕಾಲಃ = ಕಾಲನಾಮಕನಾದ ಶ್ರೀಹರಿಯು ಇಹ = ಜೀವರ ಜಯ ಪರಾಜಯಗಳಿಗೆ ಕಾರಣಂ = ನಿಯಾಮಕನು. ಶ್ವಸಂತಿ ಎಂಬುದರಿಂದ ಇತರರ ಇರುವಿಕೆಯೂ ಅವನ ಅಧೀನವೆಂದು ತಿಳಿಸಿರುವರು. ಖಗಾಃ ಎಂದು ಹೇಳದೆ ದ್ವಿಜಾಃ ಎಂದು ಹೇಳಿದ್ದರಿಂದ ಜ್ಞಾನಿಗಳಿಗೂ ವಾಕ್ ತಂತೀ (ವೇದ ವಿಧಿ) ನಿಯತತ್ವವಿದೆಯೆಂದು ಸೂಚಿಸಿರುವರು. ವಿವಶಾಃ ಎಂಬುದಕ್ಕೆ ಶ್ರೀಹರಿಯ ಅಧೀನತೆಯ ಜ್ಞಾನವಿಲ್ಲದೆಯೋ ಎಂದೂ ಅರ್ಥಮಾಡಿರುವರು. ಶ್ರೀಹರಿಯು ಸ್ವತಂತ್ರನಾದ್ದರಿಂದಲೂ ಮಿಕ್ಕೆಲ್ಲವೂ ಅವನ ಅಧೀನವಾದ್ದರಿಂದಲೂ ಅವನಿಗೇ ಸದಾ ಜಯವೆಂಬ ನಿಯಮವೆಂದು ಕಾರಣವನ್ನು ತಿಳಿಯಬೇಕು. || ೮ ||

ಓಜಃ ಸಹೋ ಬಲಂ ಪ್ರಾಣಮಮೃತಂ ಮೃತ್ಯುಮೇವ ಚ ।
ತಮಜ್ಞಾಯ ಜನೋ ಹೇತುಮಾತ್ಮಾನಂ ಮನ್ಯತೇ ಜಡಃ || ೯ ||

ಓಜಸ್ಸೇ ಮೊದಲಾದುವುಗಳ ಅಧಿಕತೆ ಈಶ್ವರತೆಯನ್ನೂ ಅವುಗಳ ಅನಾಧಿಕ್ಯವು ಜೀವತೆಯನ್ನೂ ತೋರಿಸುವುವೆಂದು ಸಿದ್ಧವು. ಆದರೆ ಹರಿಯು

ಇಲ್ಲ. ಯಾವ ಕಾಲರೂಪಿ ಶ್ರೀಹರಿಯ ವಶದಲ್ಲಿದ್ದುಕೊಂಡು ಲೋಕ ಪಾಲಕರಿಂದ ಕೂಡಿದ ಈ ಲೋಕರೆಲ್ಲರೂ ಬಲೆಯಲ್ಲಿ ಕಟ್ಟಿಹಾಕಿದ ಹಕ್ಕಿಗಳಂತೆ ಶ್ವಾಸ ಬಿಡುತ್ತಿರುವರೋ ಆ ಶ್ರೀಹರಿಯೇ ಜೀವರ ಜಯ ಪರಾಜಯಗಳಿಗೆ ಕಾರಣನು. ಎಲ್ಲರ ಓಜಸ್ಸಿಗೂ ಸಹಸ್ಸಿಗೂ ಬಲಕ್ಕೂ ಪ್ರಾಣಿಗಳಿಗೂ ಮರಣಾಭಾವಕ್ಕೂ ಮೃತ್ಯುವಿಗೂ ಕಾರಣನನ್ನಾಗಿ ಆಯಾಗುಣ ಮೂರ್ತಿಯಾದ ಶ್ರೀಹರಿಯನ್ನು ತಿಳಿಯದ ಅಜ್ಞಾನಿಯು ತನ್ನನ್ನೇ ಆಧಿಕ್ಯ ಅನಾಧಿಕ್ಯಗಳಿಗೂ ಜಯ ಪರಾಜಯಗಳಿಗೂ

ಅಧೀನವೆಂದು ಹೇಳಿದ್ದು ಹೇಗೆ ಸಂಗತವಾಗುವುದು? ಎಂದರೆ ಹೇಳುತ್ತಾರೆ. ಜಡಃ=ಜ್ಞಾನವಿಲ್ಲದ ಜನಃ=ಜನರು ತಂ=ಆ ಕಾಲರೂಪಿ ಶ್ರೀಹರಿಯನ್ನು ಓಜಸ್ಸು, ಸಹಸ್ಸು, ಬಲ, ಪ್ರಾಣ=ಪೂರ್ಣಾನಂದ, ಅಮೃತ (ಮರಣರಹಿತ) ಮೃತ್ಯುಂ=ಇತರರಿಗೆ ಮರಣಕಾರಕ ಈ ಗುಣಗಳ ಮೂರ್ತಿಯಾದವನನ್ನು ಅಜ್ಞಾಯ=ಜೀವರ ಓಜಸ್ಸು ಮೊದಲಾದವುಗಳಿಗೆ ಕಾರಣನೆಂದು ತಿಳಿಯದೆ ಆತ್ಮಾನಂ=ತನ್ನನ್ನೇ (ಜೀವನನ್ನೇ) ಹೇತುಂ=ಆಧಿಕ್ಯ ಅನಾಧಿಕ್ಯಗಳಿಗೆ ಕಾರಣನೆಂದು ಜಯ ಪರಾಜಯಗಳಿಗೆ ಕಾರಣನೆಂದು ಮನ್ಯತೇ=ತಿಳಿಯುವರು. 'ಸ ವೈ ಬಲಂ ಬಲಿನಾಂ ಚಾಪರೇಷಾಂ' ಎಂದು ಭಾಗವತದಲ್ಲಿಯೇ ಬರುವುದು. ಓಜಸ್ಸು ಮೊದಲಾದುವುಗಳಲ್ಲಿ ಇದ್ದುಕೊಂಡು ಓಜಸ್ಸೇ ಮೊದಲಾದ ಧರ್ಮಪ್ರವರ್ತಕನು ಶ್ರೀಹರಿಯೆಂದು ತಿಳಿಯದ ಜನರು ಜಡರೆಂದು ಕರೆಸಿಕೊಳ್ಳುವರು. ಓಜಸ್ತ್ವಾದಿಗಳಿಗೆ ಕಾರಣನೆಂದು ತಿಳಿಯದ ಎಂದಾದರೂ ಇಟ್ಟುಕೊಳ್ಳಬಹುದು. ಇದರಿಂದ 'ನಾನು ಜಯಿಸಿದೆ', 'ನಾನು ಸೋತೆ' ಎಂದು ಜೀವನು ತಾನು ಜಯ ಪರಾಜಯಗಳಲ್ಲಿ ಸ್ವತಂತ್ರನೆಂದು ತಿಳಿಯುವುದು ಭ್ರಾಂತಿ ಎಂದು ಹೇಳಿದಂತಾಯಿತು. || ೯ ||

ಯಥಾ ದಾರುಮಯೀ ನಾರೀ ಯಥಾ ಯಂತ್ರಮಯೋ ಮೃಗಃ ।
ಏವಂ ಭೂತಾನಿ ಮಘವನ್ ಈಶತಂತ್ರಾಣಿ ವಿದ್ಧಿ ಭೋ ॥ ೧೦ ॥

ಪ್ರಾಣಿ ಸಮೂಹವು ಭಗವದಧೀನವೆಂಬುದನ್ನು ಎರಡು ಉದಾಹರಣೆಗಳಿಂದ ಹೇಳುತ್ತಾರೆ. ಎಲೈ ಇಂದ್ರನೇ, ದಾರುಮಯೀ=ಮರದಿಂದ ಮಾಡಿದ ಕೀಲು ಬೊಂಬೆಯಾದ ನಾರೀ=ಹೆಂಗುಸು ಯಥಾ=ಹೇಗೆ ಬೊಂಬೆಯಾಟವಾಡಿಸುವ ಸೂತ್ರ ಧಾರನ ಅಧೀನವೋ, ಯಂತ್ರಮಯಃ=ಯಂತ್ರವಾಗಿ ಮಾಡಿರುವ ಮೃಗಃ=ಮೃಗವು ಯಥಾ=ಹೇಗೆ ಆಡಿಸುವವನ ಅಧೀನವೋ ಏವಂ=ಅದೇ ರೀತಿಯಲ್ಲಿ ಭೂತಾನಿ=ಪ್ರಾಣಿಗಳು ಈಶತಂತ್ರಾಣಿ=ಶ್ರೀಹರಿಯ ಅಧೀನವೆಂದು ವಿದ್ಧಿ=ತಿಳಿ ||

ಪುರುಷಃ ಪ್ರಕೃತಿರ್ವ್ಯಕ್ತಮಾತ್ಮ ಭೂತೇಂದ್ರಿಯಾಶಯಾಃ ।
ಶಕ್ನುವಂತ್ಯಸ್ಯ ಸರ್ಗಾದೌ ನ ವಿನಾ ಯದನುಗ್ರಹಮ್ ।
ಅವಿದ್ವಾನೇವ(ಮಾ)ಆತ್ಮಾನಂ ಮನ್ಯತೇಽನೀಶಮೀಶ್ವರಮ್॥೧೧॥

ಕಾರಣನೆಂದು ತಿಳಿಯುವನು. ಮರದ ಹೆಣ್ಣು ಗೊಂಬೆಯಂತೆ ಯಂತ್ರದ ಮೃಗದಂತೆ ಈ ಪ್ರಾಣಿಗಳೆಲ್ಲರೂ, ಹೇ ಇಂದ್ರ! ಶ್ರೀಹರಿಯ ಅಧೀನರೆಂದು ತಿಳಿ. ಬ್ರಹ್ಮದೇವರೂ, ಲಕ್ಷ್ಮೀದೇವಿ ಮೊದಲಾದ ಸ್ತ್ರೀಯರೂ ಶೇಷ-ವಾಯು-ಭೂತಾಭಿಮಾನಿ-ಇಂದ್ರಿಯಾಭಿಮಾನಿಗಳೂ ಇಂದ್ರನೂ ಯಾವ ಶ್ರೀಹರಿಯ ಅನುಗ್ರಹವಿಲ್ಲದೆ ಈ ಪ್ರಪಂಚದ ಸೃಷ್ಟ್ಯಾದಿಗಳನ್ನು ಮಾಡಲು ಶಕ್ತರಲ್ಲವೋ ಅಂತಹ ಅಂತರ್ಯಾಮಿಯೂ ಸರ್ವನಿಯಾಮಕನೂ ಆದ ಶ್ರೀಹರಿಯನ್ನು ತಿಳಿಯದ ಅಜ್ಞಾನಿಯೇ ಅವನನ್ನು ಈಶನಲ್ಲವೆಂದು (ಜೀವನೆಂದು) ತಿಳಿಯುವನು. ಅವನಿಗೆ

ಬ್ರಹ್ಮಾದಿ ದೇವತೆಗಳು ಓಜಸ್ಸೇ ಮೊದಲಾದ ಗುಣಗಳ ಸೃಷ್ಟಿಗೆ ಕಾರಣ ರೆಂದಿರುವುದರಿಂದ ಜಯ ಪರಾಜಯಗಳೂ ಅವರ ನಿಯಮನಕ್ಕೆ ಒಳಪಟ್ಟವು ಎಂದು ಹೇಳಿದರೆ ತಪ್ಪೇನು? ಎಂದರೆ ಉತ್ತರ ಕೊಡುತ್ತಾರೆ. ಪುರುಷಃ=ಬ್ರಹ್ಮದೇವರು ಪ್ರಕೃತಿಃ = ೧) ಲಕ್ಷ್ಮೀದೇವಿ ಮೊದಲಾದ ಸ್ತ್ರೀಯರು ೨) ಚೇತನವು ವ್ಯಕ್ತಂ= ಶೇಷದೇವರು ಆತ್ಮಾ=ವಾಯುದೇವರು ಭೂತ = ಪಂಚಭೂತಗಳ ಅಭಿಮಾನಿಗಳು ಇಂದ್ರಿಯ=ಇಂದ್ರಿಯಾಭಿಮಾನಿಗಳು ಆಶಯಾಃ = ಇಂದ್ರದೇವರು—ಇವರೆಲ್ಲರೂ ಯದನುಗ್ರಹಂ ವಿನಾ=ಯಾವ ಶ್ರೀಹರಿಯ ಅನುಗ್ರಹವಿಲ್ಲದೆ ಅಸ್ಯ =ಈ ಪ್ರಮಾಣ ಸಿದ್ಧವಾದ ಪ್ರಪಂಚದ ಸರ್ಗಾದೌ = ಸೃಷ್ಟಿ ಮೊದಲಾದವುಗಳಲ್ಲಿ ನ ಶಕ್ನುವಂತಿ= ಸಮರ್ಥರಾಗುವುದಿಲ್ಲವೋ (ತಂ)=ಅಂತಹ ಆತ್ಮಾನಂ=ಒಳಗಿದ್ದುಕೊಂಡು ಆದಾನಾದಿಗಳಿಗೆ ಕರ್ತನಾದ ಈಶ್ವರಂ=ಸರ್ವನಿಯಾಮಕರಿಗೂ ನಿಯಾಮಕನಾದ ಶ್ರೀಹರಿಯನ್ನು ಅವಿದ್ವಾನ್ ಏವ=ಅಜ್ಞಾನಿಯೇ ಅನೀಶಂ=ಜೀವನನ್ನಾಗಿ ಬ್ರಹ್ಮಾದಿಗಳಿಂದ ಅಭಿನ್ನನೆಂದು (ಈಶನಲ್ಲವೆಂದು) ಮನ್ಯತೇ=ತಿಳಿಯುವನು. ಏವ ಎಂದು ಹೇಳಿದ್ದರಿಂದ ಅಜ್ಞಾನದಿಂದ ಹೀಗೆ ತಿಳಿಯುವವನಿಗೆ ನರಕದಲ್ಲಿಯೇ ಅವಸ್ಥಾನವು ಮತ್ತೊಂದು ಕಡೆಯಲ್ಲಿಲ್ಲ ಎಂದು ತಿಳಿಸಿರುವರು. ಶ್ರೀಹರಿಯೇ ಜಯ ಪರಾಜಯ ಗಳಿಗೆ ಮುಖ್ಯ ನಿಯಾಮಕನೆಂದು ಅಭಿಪ್ರಾಯ. ವಿ. ಅ. ಹಿರಣ್ಯಗರ್ಭಃ ಪುರುಷಃ ಆತ್ಮಾ ವಾಯುರುದಾಹೃತಃ। ಶೇಷೋ ವ್ಯಕ್ತಸ್ತಥೈವೇಂದ್ರ ಆಶಯಃ ಸಮುದಾಹೃತಃ॥ ಎಂಬ ಪ್ರಮಾಣವನ್ನನುಸರಿಸಿ ಮೇಲಿನ ಪದಗಳಿಗೆ ಸಂಸಾರಿ ಸಾಮಾನ್ಯ ರೆಂದು ಅರ್ಥ ಮಾಡದೆ ವಿಶೇಷ ಚೇತನರೆಂದೇ ಅರ್ಥ ಮಾಡಿದೆ. ಇದು ಶಾಸ್ತ್ರ ನಿರ್ಣಯವು. ಈಶ್ವರಂ ಎಂದು ಹೇಳಿದ್ದರಿಂದ ಅನೀಶನೆಂದು ತಿಳಿಯುವುದು ವಿರುದ್ಧ ವೆಂದೂ ಅವಿದ್ವಾನ್ ಎಂದು ಹೇಳಿದ್ದರಿಂದ ಹಾಗೆ ತಿಳಿದವನು ಅಜ್ಞಾನಿಯೆಂದೂ ಏವ ಕಾರದಿಂದ ಅವನಿಗೆ ನರಕವೇ ಗತಿಯೆಂದೂ ತಿಳಿಸಿರುವರು. 'ಅನೀಶ ಜೀವ ರೂಪೇಣ ಪರಮಾತ್ಮಾನಮೀಶ್ವರಂ ಯೋ ಮನ್ಯಂತೇ ತಾನ್ ಸಮೀಕ್ಷ್ಯ ಸ್ನೇಹಾನ್ನಿರಯಭಾಗ್ಭವೇತ್' ಎಂಬ ಪ್ರಮಾಣವೂ ಇದೇ ಅರ್ಥವನ್ನು ಸ್ಪಷ್ಟಪಡಿಸುವುದು. ‖ ೧೧ ‖

ಭೂತೈಃ ಸೃಜತಿ ಭೂತಾನಿ ಗ್ರಸತೇ ತಾನಿ ತೈಃ ಸ್ವಯಮ್ ‖೧೨‖

ಶ್ರೀಹರಿಯೇ ಸೃಷ್ಟ್ಯಾದಿಗಳ ಕರ್ತನಾದರೆ ಬ್ರಹ್ಮನು ಸೃಷ್ಟಿಸುವವನು ಇತ್ಯಾದಿ ರೂಢಿಯು ಹೇಗೆ? ಎಂದರೆ ಹೇಳುತ್ತಾರೆ. ಸ್ವಯಂ=ಶ್ರೀಹರಿಯು ಭೂತೈಃ=ಬ್ರಹ್ಮಾದಿಗಳಿಂದ, ಪ್ರಾಣಿಗಳಿಂದ ಭೂತಾನಿ=ಪ್ರಾಣಿಗಳನ್ನು ಸೃಜತಿ= ಸೃಷ್ಟಿಸುವನು. ತೈಃ=ಅವುಗಳಿಂದ ತಾನಿ=ಪ್ರಾಣಿಗಳನ್ನು ಗ್ರಸತೇ=ಸಂಹರಿಸುವನು.

ನರಕವೇ ವಾಸಸ್ಥಾನವು. ಶ್ರೀಹರಿಯೇ ಬ್ರಹ್ಮಾದಿಗಳಿಂದ ಪ್ರಾಣಿಗಳನ್ನು ಸೃಷ್ಟಿ ಮಾಡಿಸುವನು. ಅವುಗಳನ್ನು ಸಂಹಾರ ಮಾಡಿಸುವನು. (ಆದ್ದರಿಂದಲೇ ಬ್ರಹ್ಮಾದಿ

ಇದರಿಂದ ಮೇಲೆ ಹೇಳಿದ ರೂಢಿಗೆ ಕಾರಣವನ್ನು ತಿಳಿಸಿರುವರು. ತಂದೆ ಮೊದಲಾದವರು ಉತ್ಪಾದಕರು, ವ್ಯಾಘ್ರ ಮೊದಲಾದವು ಸಂಹಾರಕಗಳು ಎಂಬ ಮಾತುಗಳ ಅರ್ಥವನ್ನೂ ವಿವರಿಸಿದಂತಾಯಿತು. || ೧೨ ||

ಆಯುಃ ಶ್ರೀಃ ಕೀರ್ತಿರೈಶ್ವರ್ಯಮಾಶಿಷಃ ಪುರುಷಸ್ಯ ಯಾಃ ।
ಭವಂತ್ಯೇವ ಹಿ ತೇ ಕಾಲೇ ಯಥಾಽನಿಚ್ಛೋರ್ವಿಪರ್ಯಯಾಃ ॥

ಪ್ರತಿ ದಿನದಲ್ಲಿ ನಡೆಯುವ ಸೃಷ್ಟಿ ಸಂಹಾರಗಳೂ ಶ್ರೀಹರಿಯ ಅಧೀನವಾದವೆಂದು ಹೇಳುತ್ತಾರೆ. ಪುರುಷಸ್ಯ=ಉತ್ಪನ್ನನಾದ ಪುರುಷನಿಗೆ (ಪ್ರಾಣಿಗೆ) ಯಾಃ=ಯಾವ ಆಯುಃ=ಆಯಸ್ಸು ಶ್ರೀಃ=ಸಂಪತ್ತು ಕೀರ್ತಿಃ=ಕೀರ್ತಿಯು ಐಶ್ವರ್ಯಂ=ಅಧಿಕಾರವು ಆಶಿಷಃ=ಅಭ್ಯುದಯಗಳು ಆಗಲಿವೆಯೋ ಅನಿಚ್ಛೋಃ=ಇಚ್ಛಿಸದಿರುವವನಿಗೂ ವಿಪರ್ಯಯಾಃ=ಮೃತ್ಯು, ದಾರಿದ್ರ್ಯ, ಅಪಕೀರ್ತಿ, ದುಃಖ ಮೊದಲಾದುವು ಕಾಲೇ=ಕಾಲಾಧೀನವಾಗಿ ಆಯಾ ಕಾಲದಲ್ಲಿ ಭವಂತ್ಯೇವ=ಆಗಿಯೇ ಆಗುವುವೋ (ತಥಾ)=ಹಾಗೆ ತೇ(ಭಾವಾಃ)=ಆಯುಸ್ಸೇ ಮೊದಲಾದ ಭಾವಗಳು ಕಾಲೇ=ಕಾಲರೂಪಿ ಶ್ರೀಹರಿಯ ಅಧೀನವಾಗಿ ಅವನ ಆರಾಧನೆಗೆ ಉಪಯುಕ್ತವಾಗಿ ಭವಂತಿ ಏವ ಹಿ=ಯಾವ ಕಾರಣದಿಂದ ಆಗಿಯೇ ಆಗುವುವೋ. || ೧೩ ||

ತಸ್ಮಾದಕೀರ್ತಿಯಶಸೋರ್ಜಯಾಪಜಯಯೋರಪಿ ।
ಸಮಃ ಸ್ಯಾತ್ಸುಖದುಃಖಾಭ್ಯಾಂ ಮೃತ್ಯುಜೀವಿತಯೋಸ್ತಥಾ ॥೧೪॥

ತಸ್ಮಾತ್=ಎಲ್ಲವೂ ಈಶ್ವರಾಧೀನವಾದ ಕಾರಣದಿಂದಲೇ ಪುರುಷನು ಅಕೀರ್ತಿಯಶಸೋಃ=ಅಪಕೀರ್ತಿ ಕೀರ್ತಿಗಳ ವಿಷಯದಲ್ಲಿಯೂ ಅಪಿ=ಮತ್ತು ಜಯಾಪಜಯಗಳ ವಿಷಯದಲ್ಲಿಯೂ ಸುಖದುಃಖಾಭ್ಯಾಂ=ಸುಖದುಃಖಗಳ ವಿಷಯದಲ್ಲಿಯೂ ತಥಾ=ಹಾಗೆಯೇ ಮೃತ್ಯುಜೀವಿತಯೋಃ=ಸಾವು ಬದುಕುಗಳ ವಿಷಯದಲ್ಲಿಯೂ ಸಮಃ=ಶ್ರೀಹರಿಯ ಅಧೀನವೆಂದು ತಿಳಿದು ಹಿಗ್ಗು ಕುಗ್ಗುಗಳ ಆಶ್ರಯನಾಗದೆ ಸಮಾಧಾನ ಮನಸ್ಕನಾಗಿ ಸ್ಯಾತ್=ಆಗಬೇಕು. ಇದರಿಂದ ಎಲ್ಲ ಆಗುಹೋಗುಗಳೂ ಶ್ರೀ ಹರಿಯ ಅಧೀನವೆಂದು ನಿರ್ಣಯಮಾಡಿಕೊಟ್ಟಿರುವರು. ನಿನ್ನಿಂದ ಪರಾಜಿತನಾದ ನನಗೆ ಜಯದ ಶಂಕೆಯೇ ಇಲ್ಲವೆಂದು ಅಭಿಪ್ರಾಯ ||೧೪||

ಗಳೇ ಸೃಷ್ಟ್ಯಾದಿಕರ್ತರೆಂದು ಲೋಕ ರೂಢಿ). ಉತ್ಪನ್ನನಾದ ಪುರುಷನು ತಾನು ಇಚ್ಛಿಸದಿದ್ದರೂ ಆಯಾಯಾ ಕಾಲದಲ್ಲಿ ಮರಣ, ದಾರಿದ್ರ್ಯ, ಅಪಕೀರ್ತಿ, ದುಃಖ ಮೊದಲಾದುವನ್ನು ಹೊಂದುವಂತೆ ಯಾವ ಕಾರಣದಿಂದ ತನಗೆ ಸಲ್ಲಬೇಕಾದ ಆಯುಸ್ಸು, ಸಂಪತ್ತು, ಕೀರ್ತಿ, ಐಶ್ವರ್ಯ, ಅಭ್ಯುದಯಗಳನ್ನು ಕಾಲರೂಪಿ ಶ್ರೀಹರಿಯ ಅಧೀನವಾಗಿ ಅವನ ಆರಾಧನೆಗೆ ಉಪಯುಕ್ತವಾಗಿ ಹೊಂದುವನೋ ಆ ಕಾರಣದಿಂದಲೇ ಅಕೀರ್ತಿ-ಯಶಸ್ಸುಗಳ ವಿಷಯದಲ್ಲಿಯಾಗಲಿ ಜಯಾಪಜಯಗಳ ವಿಷಯದಲ್ಲಿಯಾಗಲಿ ಸುಖ-ದುಃಖಗಳ ವಿಷಯದಲ್ಲಿಯಾಗಲಿ ಸಾವು-ಬದುಕುಗಳ

ಸತ್ತ್ವಂ ರಜಸ್ತಮ ಇತಿ ಪ್ರಕೃತೇರ್ನಾತ್ಮನೋ ಗುಣಾಃ ।
ತತ್ರ ಸಾಕ್ಷಿಣಮಾತ್ಮಾನಂ ಯೋ ವೇದ ನ ಸ ಬಧ್ಯತೇ ॥ ೧೫ ॥

ದುಃಖಮೊದಲಾದುವು ಆಗುವುದಕ್ಕೆ ಪ್ರಕೃತಿ-ಪುರುಷರ ವಿವೇಕ ಜ್ಞಾನವಿಲ್ಲದಿರುವುದೇ ಕಾರಣವೆಂದು ಹೇಳುತ್ತಾರೆ. ಸತ್ವ, ರಜಸ್ಸು, ತಮಸ್ಸೆಂದು ಪ್ರಕೃತಿಯ ಗುಣಗಳು. ಆತ್ಮನಃ – ಚಿದಾನಂದಮಯನಾದ ಜೀವನ ನ (ಗುಣಾಃ) – ಗುಣಗಳಲ್ಲವು. ತತ್ರ=ಅಪ್ರಾಕೃತನಾದ ಜೀವನಲ್ಲಿ ಸಾಕ್ಷಿಣಂ=ಸಾಕ್ಷಿಯಾಗಿರುವ ಆತ್ಮಾನಂ–ಪರಮಾತ್ಮನಾದ ಶ್ರೀಹರಿಯನ್ನು ಯಃ=ಯಾವ ಜೀವನು ವೇದ=ತಿಳಿಯುವನೋ ಸಃ=ಅವನು ನ ಬಧ್ಯತೇ=ಹರ್ಷ ಶೋಕಾದಿಗಳಿಂದ ಬದ್ಧನಾಗುವುದಿಲ್ಲ. ॥ ೧೫ ॥

ಪಶ್ಯ ಮಾಂ ನಿರ್ಜಿತಂ ಶಕ್ರ ವೃಕ್ಣಾಯುಧಭುಜಂ ಮೃಧೇ ।
ಘಟಮಾನಂ ಯಥಾಶಕ್ತಿ ತವ ಪ್ರಾಣಜಿಹೀರ್ಷಯಾ ॥ ೧೬ ॥

ಜಯಾದಿಗಳು ಶ್ರೀಹರಿಯ ಅಧೀನವೆಂದು ನಿನಗೂ ತಿಳಿದಿದೆಯೆಂದು ಹೇಳುತ್ತಾರೆ. ಶಕ್ರ=ಇಂದ್ರನೇ, ಮೃಧೇ=ಯುದ್ಧದಲ್ಲಿ ವೃಕ್ಣಾಯುಧಭುಜಂ=ಶೂಲಾಯುಧವೂ ತೋಳೂ ಮುರಿದಿರುವ ಆದ್ದರಿಂದಲೇ ನಿರ್ಜಿತಂ=ನಿನ್ನಿಂದ ಜಿತನಾದ ಆದರೂ ಯಥಾಶಕ್ತಿ=ಶಕ್ತಿಯಿದ್ದಷ್ಟು ತವ=ನಿನ್ನ ಪ್ರಾಣಜಿಹೀರ್ಷಯಾ=ಪ್ರಾಣವನ್ನು ತೆಗೆಯಬೇಕೆಂಬ ಇಚ್ಛೆಯಿಂದ ಘಟಮಾನಂ=ನಿನ್ನ ಮೇಲೆ ಎರಗುತ್ತಿರುವ ಮಾಂ=ನನ್ನನ್ನು ಪಶ್ಯ=ನೋಡು. ಇದರಿಂದ ಹರ್ಷ, ಶೋಕ ನಿವೃತ್ತಿಯಲ್ಲಿ ನಾನೇ ಗುರುವೆಂದು ಅಭಿಪ್ರಾಯ. ॥ ೧೬ ॥

ಪ್ರಾಣಗ್ಲಹೋಽಯಂ ಸಮರ ಇಷ್ವಕ್ಷೋ ವಾಹನಾಸನಃ ।
ಅತ್ರ ನ ಜ್ಞಾಯತೇಽಮುಷ್ಯ ಜಯೋಽಮುಷ್ಯ ಪರಾಜಯಃ ॥೧೭॥

ವಿಷಯದಲ್ಲಿಯಾಗಲಿ ಶ್ರೀಹರಿಯ ಅಧೀನತೆಯನ್ನರಿತು ಏರು ಪೇರುಗಳಿಗೆ ವಶನಾಗದೆ ಸಮ ಮನಸ್ಕನಾಗಿರಬೇಕು. ಸತ್ವರಜಸ್ತಮೋಗುಣಗಳು ಪ್ರಕೃತಿಗೆ ಸಂಬಂಧಪಟ್ಟವುಗಳೇ ಹೊರತು ಚಿದಾನಂದಮಯನಾದ ಜೀವನಿಗೆ ಸೇರಿದವುಗಳಲ್ಲ. ಅಪ್ರಾಕೃತನಾದ ಆ ಜೀವನಲ್ಲಿ ಸಾಕ್ಷಿಯಾಗಿರುವ ಶ್ರೀಹರಿಯನ್ನು ತಿಳಿಯದಿರುವವನು ಹರ್ಷ ಶೋಕಗಳಿಗೆ ಬದ್ಧನಾಗುವನು.

'ಶಕ್ರನೇ, ಯುದ್ಧದಲ್ಲಿ ಆಯುಧವನ್ನೂ ತೋಳನ್ನೂ ಕಳೆದುಕೊಂಡು ನಿನ್ನಿಂದ ನಿರ್ಜಿತನಾಗಿದ್ದರೂ ನಿನ್ನ ಪ್ರಾಣಗಳನ್ನು ತೆಗೆಯುವ ಬಯಕೆಯಿಂದ ಶಕ್ತಿಯಿದ್ದಷ್ಟು ಪ್ರಯತ್ನಿಸುತ್ತಿರುವ ನನ್ನನ್ನು ನೋಡು. ಯುದ್ಧವು ಜೂಜಿನಂತೆ. ಪ್ರಾಣಗಳೇ ಇದರಲ್ಲಿ ಪಣ. ಬಾಣಗಳೇ ಕಾಯಿ ದಾಳಗಳು. ವಾಹನಗಳೇ ಹಾಸು. ಇದರಲ್ಲಿ ಇವನಿಗೇ ಜಯ ಇವನಿಗೇ ಪರಾಜಯವೆಂಬ ನಿಶ್ಚಯವಿಲ್ಲ' ಎಂದು ನುಡಿದನು.

ಯುದ್ಧವನ್ನು ಪಗಡೆಯ ಜೂಜಿಗೆ ಹೋಲಿಸಿ ಜಯ ಪರಾಜಯಗಳ ಅನಿಶ್ಚಿತತೆಯನ್ನು ತಿಳಿಸುತ್ತಾರೆ. ಅಯಂ ಸಮರಃ=ಈ ಯುದ್ಧವು (ಪಗಡೆಯ ಜೂಜು) ಪ್ರಾಣಗ್ಲಹಃ=ಪ್ರಾಣಗಳೇ ಪಣವಾಗಿಯುಳ್ಳದ್ದು. ಇಷ್ವಕ್ಷಃ=ಬಾಣಗಳೇ ಪಗಡೆಕಾಯಿ (ದಾಳ) ಗಳಾಗಿಯುಳ್ಳದ್ದು, ವಾಹನಾಸನ=ವಾಹನವೇ ಹಾಸು (ಹಲಗೆ) ಯಾಗಿಯುಳ್ಳದ್ದು. ಅತ್ರ=ಯುದ್ಧವೆಂಬ ಈ ಜೂಜಿನಲ್ಲಿ ಅಮುಷ್ಯ=ಇವನಿಗೇ ಜಯಃ=ಗೆಲುವು. ಅಮುಷ್ಯ=ಇವನಿಗೇ ಪರಾಜಯಃ=ಸೋಲು (ಇತಿ)=ಎಂದು ನ ಜ್ಞಾಯತೇ=ನಿಶ್ಚಿತವಾಗಿ ತಿಳಿದುಬರುವುದಿಲ್ಲ. || ೧೭ ||

ಶ್ರೀ ಶುಕ ಉವಾಚ—

ಇಂದ್ರೋ ವೃತ್ರವಚಃ ಶ್ರುತ್ವಾ ಗತಾಲೀಕಮಪೂಜಯತ್ ।
ಗೃಹೀತವಜ್ರಃ ಪ್ರಹಸಂಸ್ತಮಾಹ ಗತವಿಸ್ಮಯಃ ॥ ೧೮ ॥

ಇಂದ್ರದೇವರು ವೃತ್ರನ ಮಾತನ್ನು ಕೇಳಿ ಗತಾಲೀಕಂ=ಕಪಟವಿಲ್ಲದ ಅವನನ್ನು ಅಪೂಜಯತ್=ಪ್ರಶಂಸಿಸಿದರು. ಗತವಿಸ್ಮಯಃ (ಸ೯)=ಅಹಂಕಾರವು ಹೋದವರಾಗಿ ಗೃಹೀತವಜ್ರಃ=ವಜ್ರಾಯುಧವನ್ನು ತೆಗೆದುಕೊಂಡು ಪ್ರಹಸ೯=ನಗುತ್ತಾ ತಂ=ಆ ವೃತ್ರನನ್ನು ಕುರಿತು ಆಹ=ಹೇಳಿದರು. || ೧೮ ||

ಅಹೋ ದಾನವ ಸಿದ್ಧೋಽಸಿ ಯಸ್ಯ ತೇ ಮತಿರೀದೃಶೀ ।
ಭಕ್ತಃ ಸರ್ವಾತ್ಮನಾಽಽತ್ಮಾನಂ ಸುಹೃದಂ ಜಗದೀಶ್ವರಮ್ ॥ ೧೯ ॥
ಭವಾನತಾರ್ಷೀನ್ಮಾಯಾಂ ವೈ ವೈಷ್ಣವೀಂ ಜನಮೋಹಿನೀಮ್ ।
ಯದ್ವಿಹಾಯಾಸುರಂ ಭಾವಂ ಮಹಾಪುರುಷತಾಂ ಗತಃ ॥ ೨೦ ॥

ಹೇ ದಾನವ=ದಾನವ ಸ್ವಭಾವದ ವೃತ್ರನೇ, ಸಿದ್ಧಃ ಅಸಿ=ಜೀವನ್ಮುಕ್ತನಾಗಿರುವೆ. ಅಹೋ=ಆಶ್ಚರ್ಯವು. ಯಸ್ಯ ತೇ=ಯಾವ ನಿನಗೆ ಈದೃಶೀ=ಆಗುಹೋಗುಗಳೆಲ್ಲ ಶ್ರೀಹರಿಯ ಅಧೀನವೆಂಬ ಈ ಬಗೆಯ ಮತಿಃ=ಜ್ಞಾನವು ಬಂದಿರುವುದು.

ಸುಹೃದಂ=ನಿರ್ವ್ಯಾಜವಾಗಿ ಸ್ನೇಹಿತನಾದ ಜಗದೀಶ್ವರಂ=ಜಗನ್ನಿಯಾಮಕನಾದ ಆತ್ಮಾನಂ=ಪರಮಾತ್ಮನನ್ನು ಸರ್ವಾತ್ಮನಾ=ಸರ್ವಕ್ಕೂ ಸ್ವಾಮಿಯೆಂದು ಭಕ್ತಃ=ಸೇವಿಸುವ (ಸೇವಿಸಿದ) ಭವಾನ್=ನೀನು ಜನಮೋಹಿನೀಂ=ಜನರನ್ನು ಮೋಹಿಸುವ ವೈಷ್ಣವೀಂ ಮಾಯಾಂ=ಶ್ರೀ ಹರಿಯ ಬಂಧಕ ಶಕ್ತಿಯನ್ನು

ಅವನ ಮಾತನ್ನು ಕೇಳಿ ಇಂದ್ರದೇವರು ಕಪಟವಿಲ್ಲದ ಅವನನ್ನು ಪ್ರಶಂಸಿಸಿದರು. ಅಹಂಕಾರವನ್ನು ಬಿಟ್ಟ ಅವರು ವಜ್ರವನ್ನು ಕೈಗೆ ತೆಗೆದುಕೊಂಡರು. ನಗುತ್ತಾ ಅವನನ್ನು ಕುರಿತು 'ದಾನವ! ನೀನು ಜೀವನ್ಮುಕ್ತ. ನಿನಗೆ ಎಲ್ಲವೂ ಶ್ರೀಹರಿಯ ಅಧೀನವೆಂಬ ಈ ಬಗೆಯ ಜ್ಞಾನವು ಬಂದಿದೆ. ಶ್ರೀಹರಿಯು ನಿರ್ವ್ಯಾಜನಾದ ಸ್ನೇಹಿತನು. ಜಗನ್ನಿಯಾಮಕನು. ಆ ಪರಮಾತ್ಮನನ್ನು

ಅಕಾರ್ಷೀತ್–ಅವನ ಅನುಗ್ರಹದಿಂದ ದಾಟಿರುವೆ. ಯತ್–ಏಕೆಂದರೆ, ಆಸುರಂ ಭಾವಂ–ಅಸುರ ಸ್ವಭಾವವನ್ನು (ಎಲ್ಲಕ್ಕೂ ನಾನೇ ಸ್ವತಂತ್ರನೆಂಬ ಭಾವನೆಯನ್ನು) ವಿಹಾಯ=ಬಿಟ್ಟು ಮಹಾಪುರುಷತಾಂ (ಪ್ರತಿ)=ಭಕ್ತಿ-ಜ್ಞಾನಾದಿ ಗುಣ ಸಂಪನ್ನನಾಗುವಿಕೆಯಿಂದ ಮಹಾಪುರುಷತೆಯನ್ನು ಗತಃ–ಹೊಂದಿರುವೆ. (ವೈಷ್ಣವೀಂ=ವಿಷ್ಣುಪತ್ನಿಯಾದ ಜ್ಞಾನಮೋಹಿನೀಂ–ಜ್ಞಾನವನ್ನು ಹೋಗಲಾಡಿಸುವ ಮಾಯಾಂ=ಶ್ರೀಭೂದುರ್ಗಾರೂಪಳಾಗಿ ಪ್ರಕೃತಿಗುಣ ಪ್ರವರ್ತಕಳಾಗಿ ಆ ಶಬ್ದ ವಾಚ್ಯಳಾದ ಚಿತ್ಪ್ರಕೃತಿಯನ್ನು ಶ್ರೀ ಹರಿಯ ಅನುಗ್ರಹದಿಂದ ನೀನು ದಾಟಿರುವೆ. ಜ್ಞಾನ ಲೋಪಕ್ಕೆ ಒಳಗಾಗದಿರುವೆ ಎಂದೂ ಅರ್ಥ ಮಾಡಿರುವರು.) || ೧೯, ೨೦ ||

ಖಲ್ವಿದಂ ಮಹದಾಶ್ಚರ್ಯಂ ಯದ್ರಜಃಪ್ರಕೃತೇಸ್ತವ
ವಾಸುದೇವೇ ಭಗವತಿ ಸರ್ವಾತ್ಮನಿ ದೃಢಾ ಮತಿಃ || ೨೧ ||

ರಜಃ ಪ್ರಕೃತೇಃ–ಅಸುರ ಜಾತಿಯವನಾದ ತವ=ನಿನಗೆ ಸರ್ವಾತ್ಮನಿ=ಸರ್ವಸ್ವಾಮಿಯಾದ ಭಗವತಿ–ಸಮಗ್ರ ಐಶ್ವರ್ಯ ಸಂಪನ್ನನಾದ ವಾಸುದೇವನಾಮಕ ಶ್ರೀ ಹರಿಯಲ್ಲಿ ದೃಢಾ=ನಿಶ್ಚಲವಾದ ಮತಿಃ–ಜ್ಞಾನವು (ಇತಿ) ಯತ್ ಇದಂ=ಎಂಬುದೇನುಂಟೋ ಇದು ಅತ್ಯಂತ ಆಶ್ಚರ್ಯವಲ್ಲವೇ ! || ೨೧ ||

ಯಸ್ಯ ಭಕ್ತಿರ್ಭಗವತಿ ಹರೌ ನಿಃಶ್ರೇಯಸೇಶ್ವರೇ ।
ವಿಕ್ರೀಡತೋಽಮೃತಾಂಬೋಧೌ ಕಿಂ ಕ್ಷುದ್ರೈಃ ಖಾತಕೋದಕೈಃ ||

ನಿಃಶ್ರೇಯಸೇಶ್ವರೇ–ಮೋಕ್ಷಕ್ಕೆ ನಿಯಾಮಕನಾದ, ಮೋಕ್ಷವನ್ನು ಕೊಡುವ ನಿಯಾಮಕನಾದ ಭಗವಂತನಾದ ಹರೌ=ಶ್ರೀ ಹರಿಯಲ್ಲಿ ಯಸ್ಯ=ಯಾವ ಅಧಿಕಾರಿ ಚೇತನನಿಗೆ ಭಕ್ತಿಃ (ಅಸ್ತಿ)=ಭಕ್ತಿಯು ಇದೆಯೋ ಆದ್ದರಿಂದಲೇ ಅಮೃತಾಂಬೋಧೌ=ಮೋಕ್ಷವೆಂಬ ಸಮುದ್ರದಲ್ಲಿ ವಿಕ್ರೀಡತಃ–ವಿಶೇಷವಾಗಿ ಆಡುತ್ತಿರುವ (ತಸ್ಯ)=ಆ ಭಕ್ತನಿಗೆ ಕ್ಷುದ್ರೈಃ=ಅಲ್ಪಗಳಾದ (ನಶ್ವರಗಳಾದ) ಖಾತಕೋದಕೈಃ=ಅಗೆದ ಹಳ್ಳ, ಭಾವಿ ಕೊಳ ಮೊದಲಾದ ನೀರುಗಳಿಂದ, ಅದರಂತೆ ಇರುವ ಸ್ವರ್ಗಾದಿಗಳಿಂದ ಕಿಂ–ಆಗಬೇಕಾದ್ದೇನು ? ಪ್ರಯೋಜನವಿಲ್ಲವೆಂದರ್ಥ || ೨೨ ||

ಸರ್ವಕ್ಕೂ ಸ್ವಾಮಿಯೆಂದು ಸೇವಿಸಿದ ನೀನು ಜೀವರನ್ನು ಮೋಹಗೊಳಿಸುವ ಆ ಶ್ರೀಹರಿಯ ಬಂಧಕಶಕ್ತಿಯನ್ನು ಅವನ ಅನುಗ್ರಹದಿಂದ ದಾಟಿರುವೆ. ಅಸುರ ಜಾತಿಯ ನಿನಗೆ ಸರ್ವಸ್ವಾಮಿಯಾದ ವಾಸುದೇವನಲ್ಲಿ ದೃಢವಾದ ಜ್ಞಾನವು ಬಂದಿರುವುದು ಬಹಳ ಆಶ್ಚರ್ಯವೇ ಸರಿ. ಮೋಕ್ಷಕ್ಕೆ ನಿಯಾಮಕನಾದ ಶ್ರೀಹರಿಯಲ್ಲಿ ಭಕ್ತಿಯಿರುವವನಿಗೆ—ಅವನ ಅನುಗ್ರಹದಿಂದ ಮೋಕ್ಷಸಮುದ್ರದಲ್ಲಿ ವಿಶೇಷವಾಗಿ ಕ್ರೀಡಿಸುವವನಿಗೆ ಕ್ಷುದ್ರ ಭಾವಿನೀರಿನಂತಿರುವ ಸ್ವರ್ಗಾದಿಗಳಿಂದ ಪ್ರಯೋಜನವೇನು ? ' ಎಂದುಮೆಚ್ಚುನುಡಿ ನುಡಿದರು.

ಶ್ರೀ ಶುಕ ಉವಾಚ—

ಇತಿ ಬ್ರುವಾಣಾವನ್ಯೋನ್ಯಂ ಧರ್ಮಜಿಜ್ಞಾಸಯಾ ನೃಪ ।
ಯುಯುಧಾತೇ ಮಹಾವೀರ್ಯಾವಿಂದ್ರವೃತ್ರೌ ಯುಧಾಂಪತೀ ॥

ಪರೀಕ್ಷಿದ್ರಾಜನೇ, ಧರ್ಮಜಿಜ್ಞಾಸಯಾ ಯುಕ್ತಾ=ಧರ್ಮವಿಚಾರದಿಂದ ಕೂಡಿದ, ಇತಿ ಬ್ರುವಾಣೌ=ಮೇಲೆ ಹೇಳಿದಂತೆ ಮಾತನಾಡುತ್ತಿದ್ದ ಮಹಾ-ವೀರ್ಯೌ=ಮಹಾ ಪರಾಕ್ರಮಿಗಳಾದ ಯುಧಾಂಪತೀ=ಯೋಧರಲ್ಲಿ ಮುಖ್ಯರಾದ ಇಂದ್ರ-ವೃತ್ರರು ಅನ್ಯೋನ್ಯಂ=ಪರಸ್ಪರ ಯುಯುಧಾತೇ=ಯುದ್ಧಮಾಡುತ್ತಿದ್ದರು. ॥ ೨೩ ॥

ಆವಿಧ್ಯ ಪರಿಘಂ ವೃತ್ರಃ ಕಾರ್ಷ್ಣಾಯಸಮರಿಂದಮ ।
ಇಂದ್ರಾಯ ಪ್ರಾಹಿಣೋದ್ಘೋರಂ ವಾಮಹಸ್ತೇನ ಮಾರಿಷ ॥

ಹೇ ಅರಿಂದಮ=ಶತ್ರುನಾಶಕನಾದ ಮಾರಿಷ-ರಾಜೋತ್ತಮನಾದ ಪರೀಕ್ಷಿ-ದ್ರಾಜನೇ, ವೃತ್ರನು ವಾಮಹಸ್ತೇನ=ಎಡಗೈಯಿಂದ ಘೋರಂ=ಭಯಂಕರವಾದ ಕಾರ್ಷ್ಣಾಯಸಂ=ಕರಿ ಕಬ್ಬಿಣದ ಪರಿಘಾಯುಧವನ್ನು ಆವಿಧ್ಯ=ತಿರುಗಿಸಿ ಇಂದ್ರಾಯ=ಇಂದ್ರದೇವರ ಮೇಲೆ ಪ್ರಾಹಿಣೋತ್=ಎಸೆದನು. ॥ ೨೪ ॥

ಸ ತು ವೃತ್ರಸ್ಯ ಪರಿಘಂ ಕರಂ ಚ ಕರಭೋಪಮಮ್ ।
ಚಿಚ್ಛೇದ ಯುಗಪದ್ದೇವೋ ವಜ್ರೇಣ ಶತಪರ್ವಣಾ ॥ ೨೫ ॥

ಸಃ=ಆ ದೇವಃ ತು=ಇಂದ್ರದೇವರಾದರೋ ವೃತ್ರನ ಪರಿಘಾಯುಧವನ್ನೂ ಕರಭೋಪಮಂ=ಆನೆಯ ಸೊಂಡಿಲಿನಂತೆ ಉದ್ದವಾಗಿರುವ ಕರಂ ಚ=ತೋಳನ್ನೂ (ಕೈಯನ್ನೂ) ಶತಪರ್ವಣಾ=ನೂರು ಹಲ್ಲುಗಳಿರುವ ವಜ್ರಾಯುಧದಿಂದ ಯುಗ-ಪತ್=ಒಂದೇ ಕಾಲದಲ್ಲಿ ಚಿಚ್ಛೇದ=ಕತ್ತರಿಸಿದರು. ॥ ೨೫ ॥

ದೋರ್ಭ್ಯಾಮುತ್ಕೃತ್ತಮೂಲಾಭ್ಯಾಂ ಬಭೌ ರಕ್ತಸ್ರವೋಽಸುರಃ ।
ಛಿನ್ನಪಕ್ಷೋ ಯಥಾ ಗೋತ್ರಃ ಖಾದ್ಭ್ರಷ್ಟೋ ವಜ್ರಿಣಾ ಹತಃ ॥

ಉತ್ಕೃತ್ತಮೂಲಾಭ್ಯಾಂ=ಕತ್ತರಿಸಿದ ಪ್ರಾರಂಭದ ಭಾಗವುಳ್ಳ ದೋರ್ಭ್ಯಾಂ=ತೋಳುಗಳಿಂದ ರಕ್ತಸ್ರವಃ=ರಕ್ತವು ಸುರಿಯುತ್ತಿದ್ದ ಅಸುರಃ=ವೃತ್ರನು ವಜ್ರಿಣಾ=ಇಂದ್ರದೇವರಿಂದ (ಆ) ಹತಃ=ಹೊಡೆಯಲ್ಪಟ್ಟ ಛಿನ್ನಪಕ್ಷಃ=ರೆಕ್ಕೆಗಳು ಕತ್ತರಿಸಿ

ರಾಜ್ಞ, ಹೀಗೆ ಧರ್ಮವಿಚಾರದಿಂದ ಕೂಡಿದವರಾಗಿ ಪರಸ್ಪರ ಮಾತನಾಡುತ್ತಾ ಆ ಮಹಾಪರಾಕ್ರಮಿಗಳೂ ಯೋಧಾಗ್ರೇಸರರೂ ಆದ ಇಂದ್ರವೃತ್ರರು ಯುದ್ಧಮಾಡುತ್ತಿದ್ದರು. ಶತ್ರುನಾಶಕನೂ ರಾಜೋತ್ತಮನೂ ಆದ ಪರೀಕ್ಷಿದ್ರಾಜನೇ, ಆ ವೃತ್ರನು ಎಡಗೈಯಿಂದ ಭಯಂಕರವಾದ ಕಬ್ಬಿಣದ ಗದೆಯನ್ನು ತಿರುಗಿಸಿ ಇಂದ್ರದೇವರ ಮೇಲೆ ಎಸೆದನು. ಆಗ ಇಂದ್ರದೇವರು ಆ ಪರಿಘವನ್ನೂ ಆನೆಯ

*

ಹೋದ ಆದ್ದರಿಂದಲೇ ಖಾತ್=ಆಕಾಶದಿಂದ ಭ್ರಷ್ಟಃ=ಕಳಚಿ ಕೆಳಗೆ ಬಿದ್ದ ಗೋತ್ರಃ ಯಥಾ=ಪರ್ವತವು ಹೇಗೋ (ತಥಾ)=ಹಾಗೆ ಬಭೌ=ಪ್ರಕಾಶಿಸಿದನು. ॥ ೨೬॥

ಕೃತ್ವಾಧರಾಂ ಹನುಂ ಭೂಮೌ ದೈತ್ಯೋ ದಿವ್ಯುತ್ತರಾಂ ಹನುಮ್ ।
ನಭೋ ಗಂಭೀರವಕ್ತ್ರೇಣ ಲಿಲೇಹೋಲ್ಬಣಜಿಹ್ವಯಾ ॥ ೨೭ ॥

ದೈತ್ಯನಾದ ವೃತ್ರನು ಅಧರಾಂ ಹನುಂ=ಕೆಳಗಣ ಕಪೋಲ ಪ್ರದೇಶವನ್ನು ಭೂಮಿಯಲ್ಲಿ ಇಟ್ಟು ಉತ್ತರಾಂ ಹನುಂ=ಮೇಲಣ ಕಪೋಲ ಪ್ರದೇಶವನ್ನು ದಿವಿ=ಅಂತರಿಕ್ಷದಲ್ಲಿ ಇಟ್ಟು ನಭೋ ಗಂಭೀರವಕ್ತ್ರೇಣ=ಆಕಾಶದಂತೆ ಆಳವಾದ ಬಾಯಿಯಿಂದ ಉಲ್ಬಣಜಿಹ್ವಯಾ=ಅತಿ (ಉದ್ದ)ವಾಗಿ ಭಯಂಕರವಾದ ನಾಲಗೆಯಿಂದ (ನಭಃ)=ಆಕಾಶವನ್ನು ಲಿಲೇಹ=ನೆಕ್ಕಿದನು. (ಕಪೋಲದ ಎರಡು ಭಾಗಗಳನ್ನೂ ನೆಕ್ಕಿದನು ಎಂದೂ ಅನ್ವಯಮಾಡಿರುವರು). ॥ ೨೭ ॥

ದಂಷ್ಟ್ರಾಭಿಃ ಕಾಲಕಲ್ಪಾಭಿರ್ಗ್ರಸನ್ನಿವ ಜಗತ್ತ್ರಯಮ್ ।
ಅತಿಮಾತ್ರಮಹಾಕಾಯ ಆಕ್ಷಿಪಂಸ್ತರಸಾ ಗಿರೀನ್ ॥ ೨೮ ॥
ಗಿರಿರಾಟ್ ಪಾದಚಾರೀವ ಪದ್ಭ್ಯಾಂ ನಿರ್ಜರಯನ್ ಮಹೀಮ್ ।
ಜಗ್ರಾಸ ತಂ ಸಮಾಸಾದ್ಯ ವಜ್ರಿಣಂ ಸಹವಾಹನಮ್ ॥ ೨೯ ॥
ಮಹಾಪ್ರಾಣೋ ಮಹಾವೀರ್ಯೋ ಮಹಾಸರ್ಪ ಇವ ದ್ವಿಪಮ್ ।

ಅತಿಮಾತ್ರ ಮಹಾಕಾಯಃ=ಅತ್ಯಂತ ಎತ್ತರವಾದ ದೊಡ್ಡದೇಹದ ವೃತ್ರನು ಕಾಲಕಲ್ಪಾಭಿಃ=ಯಮನಿಗೆ ಸದೃಶಗಳಾದ ದಂಷ್ಟ್ರಾಭಿಃ=ದಾಡೆ ಹಲ್ಲುಗಳಿಂದ ಜಗತ್ತ್ರಯಂ=ಮೂರು ಲೋಕಗಳನ್ನೂ ಗ್ರಸನ್ನಿವ=ನುಂಗುತ್ತಿರುವನೋ ಎಂಬಂತೆ ತೋರುತ್ತಾ ತರಸಾ=ವೇಗದಿಂದ ಗಿರೀನ್=ಬೆಟ್ಟಗಳನ್ನು ಆಕ್ಷಿಪನ್=ಅಲುಗಾಡಿಸುತ್ತಾ ಪಾದಚಾರೀ=ಕಾಲಿನಿಂದ ನಡೆದು ಬರುತ್ತಿರುವ ಗಿರಿರಾಟ್ ಇವ=ಪರ್ವತ

ಸೊಂಡಿಲಿನಂತೆ ಉದ್ದವಾಗಿದ್ದ ಅವನ ತೋಳನ್ನೂ ತಮ್ಮ ನೂರು ಪರ್ವಗಳ ವಜ್ರಾಯುಧದಿಂದ ಏಕಕಾಲದಲ್ಲಿ ಕತ್ತರಿಸಿಬಿಟ್ಟರು. ಬುಡದಲ್ಲಿಯೇ ಕತ್ತರಿಸಲ್ಪಟ್ಟ ಆ ವೃತ್ರನ ತೋಳುಗಳಿಂದ ರಕ್ತವು ಸುರಿಯುತ್ತಿತ್ತು. ಇಂದ್ರದೇವರ ವಜ್ರಾಯುಧದಿಂದ ಹೊಡೆಸಿಕೊಂಡು ರೆಕ್ಕೆಯುದುರಿ ಆಕಾಶದಿಂದ ಕಳಚಿದ ಪರ್ವತದಂತೆ ಆ ಅಸುರನು ಕಂಗೊಳಿಸಿದನು. ಕೆಳಗಣ ಗಲ್ಲವನ್ನು ಭೂಮಿಯಲ್ಲಿಯೂ ಮೇಲಿನ ಗಲ್ಲವನ್ನು ಅಂತರಿಕ್ಷದಲ್ಲಿಯೂ ಇಟ್ಟು ಆಕಾಶದಂತೆ ಆಳವಾದ ಬಾಯಿಯಿಂದ ಅತಿ ಭಯಂಕರ ನಾಲಗೆಯಿಂದ ಆ ಅಸುರನು ಆಕಾಶವನ್ನು (ಗಲ್ಲದ ಎರಡು ಭಾಗಗಳನ್ನೂ) ನೆಕ್ಕುತ್ತಿದ್ದನು. ಬಹು ದೊಡ್ಡದೇಹದ ಆ ಅಸುರನು ಯಮನಂತಿದ್ದ ದವಡೆಹಲ್ಲುಗಳಿಂದ ಮೂರುಲೋಕಗಳನ್ನೂ ನುಂಗುತ್ತಿರುವನಂತೆ ಕಾಣುತ್ತಿದ್ದನು. ವೇಗದಿಂದ

ರಾಜನಂತೆ ಪದ್ಭ್ಯಾಂ=ಕಾಲುಗಳಿಂದ ಮಹೀಂ=ಭೂಮಿಯನ್ನು ನಿರ್ದಾರಯನ್=ಸೀಳುತ್ತಾ ವಜ್ರಿಣಂ=ಇಂದ್ರದೇವರನ್ನು ಸಮಾಸಾದ್ಯ=ಹೊಂದಿ ಮಹಾಪ್ರಾಣಃ=ಮಹಾಬಲಿಷ್ಠನಾದ ಮಹಾವೀರ್ಯಃ=ಮಹಾಸಾಮರ್ಥ್ಯವುಳ್ಳ ವೃತ್ರನು ಮಹಾಸರ್ಪಃ=ಅಜಗರವು ದ್ವಿಪಂ ಇವ=ಆನೆಯನ್ನು ನುಂಗುವಂತೆ ಸಹವಾಹನಂ=ವಾಹನ (ಐರಾವತ) ಸಹಿತನಾದ ತಂ=ಇಂದ್ರದೇವರನ್ನು ಜಗ್ರಾಸ=ನುಂಗಿದನು. (೨೮, ೨೯)

ವೃತ್ರಗ್ರಸ್ತಂ ತಮಾಲಕ್ಷ್ಯ ಸಪ್ರಜಾಪತಯಸ್ಸುರಾಃ ।
ಹಾ ಕಷ್ಟಮಿತಿ ನಿರ್ವಿಣ್ಣಾಶ್ಚುಕ್ರುಶುಃ ಸಮಹರ್ಷಯಃ ॥ ೩೦ ॥

ಸಪ್ರಜಾಪತಯಃ=ಪ್ರಜೇಶ್ವರರಿಂದ ಕೂಡಿದ ಸಮಹರ್ಷಯಃ=ಮಹರ್ಷಿಗಳಿಂದ ಕೂಡಿದ ಸುರಾಃ=ದೇವತೆಗಳು ವೃತ್ರಗ್ರಸ್ತಂ=ವೃತ್ರನಿಂದ ನುಂಗಲ್ಪಟ್ಟ ತಂ=ಆ ವಾಹನಸಹಿತರಾದ ಇಂದ್ರದೇವರನ್ನು ಆಲಕ್ಷ್ಯ=ನೋಡಿ ನಿರ್ವಿಣ್ಣಾಃ (ಸಂತಃ)=ನಿರ್ವಿಣ್ಣರಾಗಿ (ಖೇದಗೊಂಡು) ಹಾ ಕಷ್ಟಂ=ಅಯ್ಯೋ ದುಃಖವು ಇತಿ=ಎಂದು ಚುಕ್ರುಶುಃ=ಕೂಗಿಕೊಂಡರು. ॥ ೩೦ ॥

ನಿಗೀರ್ಣೋಽಪ್ಯಸುರೇಂದ್ರೇಣ ನ ಮಮಾರೋದರಂ ಗತಃ ।
ಮಹಾಪುರುಷಸನ್ನದ್ಧೋ ಯೋಗಮಾಯಾಬಲೇನ ಚ ॥ ೩೧ ॥

ಅಸುರೇಂದ್ರೇಣ=ವೃತ್ರಾಸುರನಿಂದ ನಿಗೀರ್ಣಃ ನುಂಗಲ್ಪಟ್ಟು ಉದರಂ ಗತಃ ಅಪಿ=ಅವನ ಹೊಟ್ಟೆಯನ್ನು ಸೇರಿದ್ದರೂ (ಇಂದ್ರಃ)=ಇಂದ್ರದೇವರು (ಯತಃ) ಯಾವ ಕಾರಣದಿಂದ ಮಹಾಪುರುಷಸನ್ನದ್ಧಃ=ಶ್ರೀ ಹರಿಯಿಂದ ರಕ್ಷಿತರೋ, ನಾರಾಯಣ ಸ್ವರೂಪದ ಕವಚವೆಂಬ ವಿದ್ಯೆಯಿಂದ ಸಮುದ್ಧತರಾಗಿದ್ದರೋ (ತತಃ) =ಆ ಕಾರಣದಿಂದಲೂ ಚ=ಮತ್ತು ಯೋಗಮಾಯಾಬಲೇನ=ಅಣಿಮಾ ಮೊದಲಾದ ಮಹಿಮೆಯ ಬಲದಿಂದಲೂ ನ ಮಮಾರ=ಸಾಯಲಿಲ್ಲ. ॥ ೩೧ ॥

ಬೆಟ್ಟಗಳನ್ನೇ ಎಳೆದುಕೊಂಡು ಬರುತ್ತಿದ್ದನು. ಕಾಲಿನಿಂದ ನಡೆಯುವ ಬೆಟ್ಟದಂತೆ ಭೂಮಿಯನ್ನೇ ಭೇದಿಸುತ್ತಾ ಇಂದ್ರದೇವರ ಸಮೀಪಕ್ಕೆ ಬಂದು ವಾಹನಯುಕ್ತರಾದ ಅವರನ್ನು ಮಹಾಬಲಿಷ್ಠನೂ ಮಹಾವೀರ್ಯಯುಕ್ತನೂ ಆದ ಅವನು ಅಜಗರವು ಆನೆಯನ್ನು ನುಂಗುವಂತೆ ನುಂಗಿದನು.

ಪ್ರಜೇಶ್ವರರಿಂದಲೂ ಮಹರ್ಷಿಗಳಿಂದಲೂ ಕೂಡಿದ ದೇವತೆಗಳು ವೃತ್ರಗ್ರಸ್ತರಾಗಿದ್ದ ಆ ಇಂದ್ರದೇವರನ್ನು ನೋಡಿ ನಿರ್ವಿಣ್ಣಮನಸ್ಕರಾಗಿ ಅಯ್ಯೋ! ಕಷ್ಟ!! ವೆಂದು ಕೂಗಿಕೊಂಡರು. ಇಂದ್ರದೇವರು ನಾರಾಯಣಾತ್ಮಕ ಕವಚವಿದ್ಯೆಯಿಂದ ಸನ್ನದ್ಧರಾಗಿದ್ದುದರಿಂದ ಮತ್ತು ಅಣಿಮಾದಿ ಯೋಗಮಹಿಮಾ ಬಲಯುಕ್ತರಾಗಿದ್ದುದರಿಂದ ಅಸುರನಿಂದ ನುಂಗಲ್ಪಟ್ಟು ಅವನ ಹೊಟ್ಟೆಗೆ ಸೇರಿದ್ದರೂ ಸಾಯದೆ

ಭಿತ್ವಾ ವಜ್ರೇಣ ತತ್ಕುಕ್ಷಿಂ ನಿಷ್ಕ್ರಮ್ಯ ಬಲಭಿದ್ವಿಭುಃ ।
ಉಚ್ಚಕರ್ತ ಶಿರಃ ಶತ್ರೋರ್ಗಿರಿಶೃಂಗಮಿವೌಜಸಾ ॥ ೩೨ ॥

ವಿಭುಃ=ಸಮರ್ಥರಾದ ಬಲಭಿತ್=ಇಂದ್ರದೇವರು ವಜ್ರಾಯುಧದಿಂದ ತತ್ಕುಕ್ಷಿಂ=ಆ ವೃತ್ರನ ಹೊಟ್ಟೆಯನ್ನು ಭಿತ್ವಾ=ಸೀಳಿ ನಿಷ್ಕ್ರಮ್ಯ=ಹೊರ ಬಂದು ಓಜಸಾ=ಸಾಮರ್ಥ್ಯದಿಂದ ಗಿರಿಶೃಂಗಂ ಇವ=ಬೆಟ್ಟದ ಕೋಡುಗಲ್ಲಿನಂತೆ ಶತ್ರೋಃ=ವೃತ್ರನ ಶಿರಃ=ತಲೆಯನ್ನು ಉಚ್ಚಕರ್ತ=ಕತ್ತರಿಸಿ ಹಾಕಿದರು ॥ ೩೨ ॥

ವಜ್ರಸ್ತು ತತ್ಕಂಧರಮಾಶುವೇಗಃ
ಕೃಂತನ್ ಸಮಂತಾತ್ಪರಿವರ್ತಮಾನಃ ।
ನ್ಯಪಾತಯತ್ತಾವದಹರ್ಗಣೇನ
ಯೋ ಜ್ಯೋತಿಷಾಮಯನೇ ವಾರ್ತ್ರಹತ್ಯೇ ॥ ೩೩ ॥

ಆಶುವೇಗಃ=ಅತ್ಯಂತ ವೇಗವುಳ್ಳ ವಜ್ರಃ ತು=ವಜ್ರಾಯುಧವಾದರೋ ವಾರ್ತ್ರಹತ್ಯೇ=೧) ವೃತ್ರನ ವಧೆಗಾಗಿ ನಡೆದ ಯುದ್ಧದಲ್ಲಿ ೨) ವೃತ್ರ ಹತ್ಯೆಗೆ ಯೋಗ್ಯವಾದ ಕಾಲದಲ್ಲಿ ೩) ವೃತ್ರನ ಹನನಕ್ಕಾಗಿ ತತ್ಕಂಧರಂ=ವೃತ್ರನ ಕುತ್ತಿಗೆಯನ್ನು ಸಮಂತಾತ್=ಸುತ್ತಲೂ ಪರಿವರ್ತಮಾನಃ=ಸುತ್ತುತ್ತಾ ಜ್ಯೋತಿಷಾಂ=ಸೂರ್ಯ ಮೊದಲಾದ ಗ್ರಹಗಳ ಅಯನೇ=ದಕ್ಷಿಣೋತ್ತರಾಯಣಗಳೆಂಬ ವರ್ಷದಲ್ಲಿ ಯಃ=(ಅಹರ್ಗಣಃ)=ಯಾವ ಹಗಲಿನ ಸಮೂಹವು ಮುನ್ನೂರ ಅರವತ್ತು ಸಂಖ್ಯೆಯ ಹಗಲು ರಾತ್ರಿಗಳಿಂದ ಕೂಡಿದ್ದು ಆಗುವುದೋ ತಾವತ್ ಅಹರ್ಗಣೇನ=ಅಷ್ಟು ಹಗಲುಗಳಿಂದ ಕೃಂತನ್=ಕತ್ತರಿಸುತ್ತಾ ನ್ಯಪಾತಯತ್ = ಬೀಳಿಸಿತು. ಮುನ್ನೂರ ಅರವತ್ತು ಹಗಲುಗಳ ಕಾಲ ಕುತ್ತಿಗೆಯ ಸುತ್ತಲೂ ವೇಗವಾಗಿ ತಿರುಗಿ ಕತ್ತರಿಸಿ ವೃತ್ರನ ಸಾವಿಗೆ ಯೋಗ್ಯವಾದ ಕಾಲದಲ್ಲಿ ಕುತ್ತಿಗೆಯನ್ನು ದೇಹದಿಂದ ಕೆಳಕ್ಕೆ ಬೀಳಿಸಿತು ಎಂದಭಿಪ್ರಾಯ. ವಿ. ಅ. ಇಲ್ಲಿ ಇತಿಹಾಸವನ್ನು ಹೀಗೆ ಹೇಳುವರು. ಮೊದಲ ಯುದ್ಧವು ನರ್ಮದಾ ತೀರದಲ್ಲಿ ಆಯಿತು. ಎರಡನೆಯ ಯುದ್ಧವು ಸಮುದ್ರ ತೀರದಲ್ಲಿ. ಆದರಲ್ಲಿ ಯಾವುದೋ ಒಂದು ಸಂಕೇತದಿಂದ ವೃತ್ರನ ಸಂಗಡ ಸಂಧಿಮಾಡಿಕೊಂಡ ಇಂದ್ರದೇವರು ಸ್ನೇಹಿತನಾದ ಅವನ ಕೈಯನ್ನು ಸ್ನೇಹದಿಂದ ಹಿಡಿದುಕೊಂಡು ಸಮುದ್ರದ ನೊರೆಯಿಂದ ಅವನನ್ನು ಸಂಹರಿಸಲು ಸಮುದ್ರ ತೀರದಲ್ಲಿ ಸಂಚರಿಸುತ್ತಾ ವೃತ್ರನಿಂದ ವಿನೋದಕ್ಕಾಗಿ 'ನೊರೆಯಿಂದ ನನ್ನನ್ನು ಹೊಡೆ (ಕೊಲ್ಲು)' ಎಂದು ಹೇಳಿಸಿಕೊಂಡವರಾಗಿ

ಉಳಿದರು. ಬಲಾಸುರಸಂಹಾರಿಗಳಾದ ಆ ಸಮರ್ಥರಾದ ಇಂದ್ರದೇವರು ವಜ್ರಾಯುಧದಿಂದ ಅಸುರನ ಹೊಟ್ಟೆಯನ್ನು ಸೀಳಿ ಹೊರಬಂದು ಸಾಮರ್ಥ್ಯದಿಂದ ಶತ್ರುವಿನ ಶಿರಸ್ಸನ್ನು ಬೆಟ್ಟದ ಕೋಡುಗಲ್ಲನ್ನು ಕತ್ತರಿಸುವಂತೆ ಕತ್ತರಿಸಿದರು. ಅತಿ ವೇಗವುಳ್ಳ ಆ ವಜ್ರಾಯುಧವು ವೃತ್ರನ ಹನನಕ್ಕೆ ಯೋಗ್ಯವಾದ ಆ ಕಾಲದಲ್ಲಿ

ಅವನಿಂದ ಕಾಲು ತಗಲಿತೆಂಬ ತಾಡನವನ್ನು ಮಾಡಿ ಯುದ್ಧಕ್ಕೆ ಸನ್ನದ್ಧರಾಗಿ ಒಂದು ವರ್ಷಕಾಲ ಯುದ್ಧಮಾಡಿ ವಿಷ್ಣುಶಕ್ತಿಯಿಂದ ಕೂಡಿದ್ದ ವಜ್ರವನ್ನು ನೊರೆಯಲ್ಲಿ ಸೇರಿಸಿ ಅವನ ಮೇಲೆ ಪ್ರಯೋಗಿಸಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಿದ್ದ ಆ ವೃತ್ರನ ಶಿರಸ್ಸನ್ನು ಕತ್ತರಿಸಿ ಹಾಕಿದರು. ಇದಕ್ಕೆ ಪ್ರಮಾಣ—'ಸಂಧಿತಃ ಸಮಯೇನೇಂದ್ರೋ ವೃತ್ರೇಣಾಥೋ ಕರಗ್ರಹಃ। ಸಮುದ್ರತೀರೇ ವಿಚರನ್ ಫೇನೇನ ವಧಮಸ್ಯ ತು॥ ನರ್ಮಣಾ ಜಹಿ ಫೇನೇನ ವಾಚಯಿತ್ವಾ ಸುರೇಶ್ವರಃ। ಪಾದಸ್ಪರ್ಶವಿವಾದಂ ಚ ಕೃತ್ವಾ ಯುದ್ಧಾಯ ದಂಶಿತಃ॥ ಫೇನೇ ವಜ್ರಂ ಸಮಾವೇಶ್ಯ ವಿಷ್ಣುಯುಕ್ತಂ ವ್ಯಸರ್ಜಯ.ತ್। ಅಪಾನುದಚ್ಛಿರಸ್ತಸ್ಯ ಧ್ಯಾಯತೋ ವತ್ಸರೇಣ ಸಃ ॥ ೩೩ ॥

ತದಾ ಚ ಖೇ ದುಂದುಭಯೋ ವಿನೇದು-
ರ್ಗಂಧರ್ವವಿದ್ಯಾಧ್ರಮಹರ್ಷಿಸಿದ್ಧಾಃ ।
ವಾರ್ತ್ರಘ್ನಲಿಂಗೈಸ್ತಮಭಿಷ್ಟುವಾನಾ
ಮಂತ್ರೈರ್ಮುದಾ ಕುಸುಮೈರಭ್ಯವರ್ಷನ್ ॥ ೩೪ ॥

ತದಾ=ಆಗ ಖೇ=ಆಕಾಶದಲ್ಲಿ ದುಂದುಭಿಗಳು ವಿನೇದುಃ-ಶಬ್ದ ಮಾಡಿದುವು. ಗಂಧರ್ವರೂ ವಿದ್ಯಾಧರರೂ ಮಹರ್ಷಿಗಳೂ ಸಿದ್ಧರೂ ಮುದಾ=ಸಂತೋಷದಿಂದ ತಂ=ಇಂದ್ರ ದೇವರನ್ನು ವಾರ್ತ್ರಘ್ನಲಿಂಗೈಃ=ವೃತ್ರ ಸಂಹಾರದ ಪರಾಕ್ರಮವನ್ನು ತಿಳಿಸುವ, ತಡೆದಿದ್ದ ನೀರನ್ನು ಹೊರ ಹೊರಡಿಸಿದರೆಂಬ ಇಂದ್ರ ಸಂಬಂಧಿ ಲಕ್ಷಣಗಳುಳ್ಳ ಮಂತ್ರೈಃ—'ವಾರ ಹತ್ಯಾಯ ಶ್ರವಸೇ ಪೃತನಾ ಸಾಹಾಯ್ಯಾಯ' 'ದಾಸಪತ್ನೀರಹಿಗೋಪಾ ಅತಿಷ್ಠನ್ನಿರುದ್ಧಾ ಆಪಃ ಫಣಿನೇವ ಗಾವಃ। ಅಪಾಂಬಿಲಮಪಿಹಿತಂ ಯದಾಸೀದ್ವೃತ್ರಂ ಜಘನ್ವಾಂ ಅಪತದ್ವವಾರ'॥ ಇತ್ಯಾದಿ ವೇದ ಮಂತ್ರಗಳಿಂದ ಅಭಿಷ್ಟುವಾನಾಃ (ಸಂತಃ)=ಸ್ತೋತ್ರ ಮಾಡುವವರಾಗಿ ಕುಸುಮೈಃ=ಹೂಗಳಿಂದ ಅಭ್ಯವರ್ಷನ್=ಮಳೆಗರೆದರು. ॥ ೩೪ ॥

ವೃತ್ರಸ್ಯ ದೇಹಾನ್ನಿಷ್ಕ್ರಾಂತಮಾತ್ಮಜ್ಯೋತಿರರಿಂದಮ ।
ಪಶ್ಯತಾಂ ಸರ್ವಲೋಕಾನಾಂ ಸ್ವಲೋಕಂ ಸಮಪದ್ಯತ ॥ ೩೫ ॥

ಅವನ ವಧೆಗಾಗಿ ಅವನ ಕುತ್ತಿಗೆಯ ಸುತ್ತಲೂ ಸುತ್ತುತ್ತಾ ಗ್ರಹಗಳ ದಕ್ಷಿಣೋತ್ತರಾಯಣಗಳಿಂದ ಸೇರಿದ ವರ್ಷದ ಮುನ್ನೂರ ಅರವತ್ತು ಸಂಖ್ಯೆಯ ಹಗಲುಗಳಲ್ಲಿ ಆ ಕುತ್ತಿಗೆಯನ್ನು ಕೊಯ್ಯುತ್ತಾ ಅದನ್ನು ಬೀಳಿಸಿತು. ಆಗ ಆಕಾಶದಲ್ಲಿ ದುಂದುಭಿಗಳು ಮೊಳಗಿದುವು. ಗಂಧರ್ವರೂ ವಿದ್ಯಾಧರರೂ ಮಹರ್ಷಿಗಳೂ ಸಿದ್ಧರೂ ಇಂದ್ರದೇವರನ್ನು 'ದಾಸಪತ್ನೀರಹಿಗೋಪಾ' ಇತ್ಯಾದಿ ವೃತ್ರಸಂಹಾರದ ಪರಾಕ್ರಮವನ್ನು ಬಣ್ಣಿಸುವ ಮಂತ್ರಗಳಿಂದ ಸ್ತೋತ್ರಮಾಡುತ್ತಾ ಅವರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

ಶತ್ರುಸಂಹಾರಕನೇ, ವೃತ್ರನ ದೇಹದಿಂದ ನಿಷ್ಕ್ರಾಂತಂ=ಹೊರಹೊರಟ ಆತ್ಮಜ್ಯೋತಿಃ=ಜೀವವೆಂಬ ಬೆಳಕು ಸರ್ವಲೋಕಾನಾಂ=ಎಲ್ಲ ಜನರೂ ಪಶ್ಯತಾಂ (ಸತಾಂ)=ನೋಡುತ್ತಿರಲು ಸ್ವಲೋಕಂ=ತಾನಿದ್ದ ವಿದ್ಯಾಧರ ಲೋಕವನ್ನು ಸಮುಪದ್ಯತ=ಹೊಂದಿತು. || ೩೫ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ದ್ವಾದಶೋಽಧ್ಯಾಯಃ

ಅಥ ತ್ರಯೋದಶೋಽಧ್ಯಾಯಃ

ಶ್ರೀ ಶುಕ ಉವಾಚ—

ವೃತ್ರೇ ಹತೇ ತ್ರಯೋ ಲೋಕಾ ವಿನಾ ಶಕ್ರೇಣ ಭೂರಿದ ।
ಸಪಾಲಾ ಹ್ಯಭವನ್ ಸದ್ಯೋ ವಿಜ್ವರಾ ನಿರ್ವೃತೇಂದ್ರಿಯಾಃ ॥ ೧ ॥

ಅಶ್ವಮೇಧ ಮೊದಲಾದ ಕರ್ಮಗಳು ಜ್ಞಾನ ಪ್ರತಿಬಂಧಕವಾದ ದುಷ್ಕರ್ಮ (ಪಾಪ) ವನ್ನು ಹೋಗಲಾಡಿಸುವ ಮೂಲಕ ಜ್ಞಾನಕ್ಕೆ ಸಾಧನಗಳು ಎಂಬೀ ಪ್ರಮೇಯವನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಹೇ ಭೂರಿದ=(೧) ಯಾಚಕರಿಗೆ ಬಹುಪ್ರದನೇ, (೨) ಬಂಗಾರ ಮೊದಲಾದ ದ್ರವ್ಯವನ್ನು ಕೊಡುವವನೇ ವೃತ್ರನು ಹತೇ (ಸತಿ)=ಸಂಹೃತನಾಗಲು ಶಕ್ರೇಣ ವಿನಾ=ಇಂದ್ರನನ್ನು ಬಿಟ್ಟು ಸಪಾಲಾಃ=ಪಾಲಕರಿಂದ ಕೂಡಿದ ತ್ರಯೋ ಲೋಕಾಃ=ಮೂರು ಲೋಕಗಳೂ (ನಿವಾಸಿಗಳೂ) ಸದ್ಯಃ=ಕೂಡಲೆ ವಿಜ್ವರಾಃ=ಭಯರಹಿತರಾಗಿ ನಿರ್ವೃತೇಂದ್ರಿಯಾಃ=ಸ್ವಸ್ಥಮನಸ್ಕರಾಗಿ ಅಭವನ್ ಹಿ=ಆದರಷ್ಟೆ! || ೧ ||

ದೇವರ್ಷಿಪಿತೃಭೂತಾನಿ ದೈತ್ಯಾ ದೇವಾನುಗಾಶ್ಚ ಯೇ ।
ಪ್ರತಿಜಗ್ಮುಃ ಸ್ವಧಿಷ್ಣ್ಯಾನಿ ಬ್ರಹ್ಮೇಶೇಂದ್ರಾದಯಸ್ತತಃ ॥ ೨ ॥

ದೇವತೆಗಳೂ ಋಷಿಗಳೂ ಪಿತೃಗಳೂ ಭೂತಗಳೂ ದೈತ್ಯರೂ ದೇವಾನುಚರರೂ ಮತ್ತು ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು ಮೊದಲಾದವರು

ಅರಿಂದಮನೇ, ವೃತ್ರನ ದೇಹದಿಂದ ಹೊರಟ ಜೀವಜ್ಯೋತಿಯು ಎಲ್ಲರೂ ನೋಡುತ್ತಿದ್ದಂತೆ ತನ್ನ ವಿದ್ಯಾಧರ ಲೋಕವನ್ನು ಸೇರಿತು.

ಹದಿಮೂರನೆಯ ಅಧ್ಯಾಯ

ಶುಕಾಚಾರ್ಯರು—ಬಹುಪ್ರದನೇ, ವೃತ್ರನು ಸಂಹೃತನಾಗಲು ಪಾಲಕರಿಂದ ಕೂಡಿದ ಮೂರುಲೋಕನಿವಾಸಿಗಳೂ ಕೂಡಲೆ ಭಯರಹಿತರಾದರು. ಅವರ ಮನಸ್ಸು ಸ್ವಸ್ಥವಾಯಿತು. ಆದರೆ ಇಂದ್ರದೇವರ ಮನಸ್ಸು ಮಾತ್ರ ಸ್ವಸ್ಥವಾಗಲಿಲ್ಲ. ದೇವತೆಗಳೂ, ಋಷಿಗಳೂ, ಪಿತೃಗಳೂ, ಭೂತಗಳೂ, ದೈತ್ಯರೂ, ದೇವಾನು-

ತತಃ=ಆ ಸಮುದ್ರ ತೀರದಿಂದ ಸ್ವಧಿಷ್ಣ್ಯಾನಿ=ತಮ್ಮ ತಮ್ಮ ಮನೆ (ಲೋಕ) ಗಳಿಗೆ ಪ್ರತಿಜಗ್ಮುಃ=ಹಿಂತಿರುಗಿದರು. || ೨ ||

ರಾಜೋವಾಚ—

ಇಂದ್ರಸ್ಯಾನಿರ್ವೃತೇರ್ಹೇತುಂ ಶ್ರೋತುಮಿಚ್ಛಾಮಿ ಭೋ ಮುನೇ
ಯೇನಾಸನ್ ಸುಖಿನೋ ದೇವಾ ಹರೇರ್ದುಃಖಂ
ಕುತೋಽಭವತ್ || ೩ ||

ಹೇ ಋಷಿಗಳೇ, ಇಂದ್ರದೇವರ ಅನಿರ್ವೃತೇಃ – ಸುಖವಾಗದಿರುವಿಕೆಗೆ ಹೇತುಂ – ಕಾರಣವನ್ನು ಶ್ರೋತುಂ – ಕೇಳಲು ಇಚ್ಛಾಮಿ – ಬಯಸುತ್ತೇನೆ. ದೇವಾಃ=ದೇವತೆಗಳು ಯೇನ=ಯಾವ ಇಂದ್ರದೇವರಿಂದ ಸುಖಿನಃ=ಸುಖವಂತರು ಆಸನ್=ಆದರೋ (ತಸ್ಯ) ಹರೇಃ=ಆ ಇಂದ್ರದೇವರಿಗೆ ದುಃಖವು ಕುತಃ–ಯಾವ ಕಾರಣದಿಂದ ಅಭವತ್=ಆಯಿತು ? || ೩ ||

ಶ್ರೀ ಶುಕ ಉವಾಚ—

ವೃತ್ರವಿಕ್ರಮಸಂವಿಗ್ನಾಃ ಸರ್ವೇ ದೇವಾಃ ಸಹರ್ಷಿಭಿಃ ।
ತದ್ವಧಾಯಾರ್ಥಯನ್ನಿಂದ್ರಂ ನೈಚ್ಛದ್ಭೀತೋ ಬೃಹದ್ವಧಾತ್ ||

ದುಃಖಕ್ಕೆ ಕಾರಣವನ್ನು ಹೇಳಲು ಪ್ರಸ್ತಾವ ಕಥೆಯನ್ನು ಹೇಳುತ್ತಾರೆ. ವೃತ್ರನ ಪರಾಕ್ರಮದಿಂದ ಉದ್ವೇಗಗೊಂಡ ಎಲ್ಲ ದೇವತೆಗಳೂ ಋಷಿಭಿಃ ಸಹ–ಋಷಿಗಳೊಂದಿಗೆ ತದ್ವಧಾಯ=ಆ ವೃತ್ರನ ವಧೆಗಾಗಿ ಇಂದ್ರದೇವರನ್ನು ಅರ್ಥ-ಯನ್=ಪ್ರಾರ್ಥಿಸಿದರು. (ಅರ್ಥವೆಂಬ ಕೃದಂತ ಪ್ರಾತಿಪದಿಕದ ಮೇಲೆ ಣಿಜಂತ ರೂಪ. ಆದ್ದರಿಂದ ಪರಸ್ಮೈಪದ ಮತ್ತು ಆತ್ಮನೇ ಪದ ಎರಡರಲ್ಲಿಯೂ ನಡೆಯುವುದು.) ಬೃಹದ್ವಧಾತ್=ಬ್ರಾಹ್ಮಣ ವಧೆಯಿಂದ ಭೀತಃ=(ಸಃ)=ಹೆದರಿದವನಾಗಿ (ಸಃ) = ಇಂದ್ರದೇವರು (ಹಂತುಂ)=ವೃತ್ರನನ್ನು ಸಂಹರಿಸಲು ನ ಐಚ್ಛತ್–ಇಚ್ಛಿಸಲಿಲ್ಲ. || ೪ ||

ಚರರೂ, ಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳೂ ಆ ಯುದ್ಧಭೂಮಿಯಾದ ಸಮುದ್ರತೀರದಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಪರೀಕ್ಷಿದ್ರಾಜರು—ಮುನಿಗಳೇ, ಇಂದ್ರದೇವರಿಗೆ ಮಾತ್ರ ಮನಸ್ಸಮಾಧಾನವಾಗದಿರುವುದಕ್ಕೆ ಕಾರಣವನ್ನು ಕೇಳಬಯಸುತ್ತೇನೆ. ಈ ಇಂದ್ರದೇವರಿಂದಲೇ ದೇವತೆಗಳಿಗೆ ಸುಖವಾಯಿತಲ್ಲವೇ ? ಅಂತಹ ಇಂದ್ರದೇವರಿಗೆ ದುಃಖವಾದುದೇಕೆ ?

ಶ್ರೀ ಶುಕಾಚಾರ್ಯರು—ವೃತ್ರನ ಪರಾಕ್ರಮವನ್ನು ಕಂಡು ಉದ್ವಿಗ್ನರಾಗಿದ್ದ ದೇವತೆಗಳೂ, ಋಷಿಗಳೂ ಅವನ ವಧೆಗಾಗಿ ಇಂದ್ರದೇವರನ್ನು ಪ್ರಾರ್ಥಿಸಿದರು. ಆದರೆ ಬ್ರಾಹ್ಮಣವಧೆಯಿಂದ ಹೆದರಿದ ಇಂದ್ರದೇವರು ವೃತ್ರಸಂಹಾರಕ್ಕೆ ಇಷ್ಟ

ಇಂದ್ರ ಉವಾಚ—

ಭೂಸ್ತ್ರೀಜಲದ್ರುಮ್ಯೈರೇನೋ ವಿಶ್ವರೂಪವಧೋದ್ಭವಮ್ ।
ವಿಭಕ್ತಮನುಗೃಹ್ಣದ್ಭಿರ್ವೃತ್ರಹತ್ಯಾಂ ಕ್ವ ಮಾರ್ಜ್ಮ್ಯಹಮ್ ॥ ೫ ॥

ವಿಶ್ವರೂಪನನ್ನು ಕೊಂದವನಿಗೆ ವೃತ್ರನನ್ನು ಕೊಲ್ಲುವಲ್ಲಿ ಹೆದರಿಕೆ ಏಕೆ? ಎಂದರೆ ಹೇಳುತ್ತಾರೆ. ಅನುಗೃಹ್ಣದ್ಭಿಃ=ಪಾಪವನ್ನು ಸ್ವೀಕರಿಸಿ ನನ್ನಲ್ಲಿ ಅನುಗ್ರಹ ಮಾಡಿದ ಭೂಮಿ, ಸ್ತ್ರೀಯರು, ನೀರು ಮತ್ತು ಗಿಡಗಳಿಂದ ವಿಶ್ವರೂಪವಧೋದ್ಭವಂ ಏನಃ=ವಿಶ್ವರೂಪಾಚಾರ್ಯನನ್ನು ಸಂಹರಿಸಿದ್ದರಿಂದ ಬಂದ ಬ್ರಹ್ಮಹತ್ಯಾ ಪಾಪವು ವಿಭಕ್ತಂ=ವಿಭಾಗ ಮಾಡಿ ಪರಿಗ್ರಹಿಸಲ್ಪಟ್ಟಿತು. ಅಹಂ=ನಾನು ವೃತ್ರಹತ್ಯಾಂ=ವೃತ್ರನನ್ನು ಕೊಲ್ಲುವುದರಿಂದ ಬರುವ ಬ್ರಹ್ಮಹತ್ಯಾ ಪಾಪವನ್ನು ಕ್ವ=ಮತ್ತೆಲ್ಲಿ ಮಾರ್ಜ್ಮಿ=ಶೋಧಿಸಿ ಕಳೆದುಕೊಳ್ಳಲಿ? ॥ ೫ ॥

ಶ್ರೀ ಶುಕ ಉವಾಚ—

ಋಷಯಸ್ತದುಪಾಕರ್ಣ್ಯ ಮಹೇಂದ್ರಮಿದಮಬ್ರುವನ್ ।
ಯಾಜಯಿಷ್ಯಾಮ ಭದ್ರಂ ತೇ ಹಯಮೇಧೇನ ಮಾಸ್ಮ ಭೈಃ ॥

ತತ್ ಉಪಾಕರ್ಣ್ಯ=ಆ ಇಂದ್ರದೇವರ ಮಾತನ್ನು ಕೇಳಿ ಋಷಿಗಳು ಮಹೇಂದ್ರನನ್ನು ಕುರಿತು ಇದಂ=ಮುಂದೆ ಹೇಳುವ ಮಾತನ್ನು ಅಬ್ರುವನ್=ಹೇಳಿದರು. ತೇ=ನಿನಗೆ ಭದ್ರಂ=ಮಂಗಳವು (ಅಸ್ತು)=ಆಗಲಿ. ಹಯಮೇಧೇನ=ಅಶ್ವಮೇಧಯಾಗದಿಂದ ಯಾಜಯಿಷ್ಯಾಮ=ನಿನ್ನನ್ನು ಯಾಗ ಮಾಡಿಸುವೆವು. ಮಾಸ್ಮ ಭೈಃ=ಹೆದರಬೇಡ. ॥ ೬ ॥

ಹಯಮೇಧೇನ ಪುರುಷಂ ಪರಮಾತ್ಮಾನಮೀಶ್ವರಮ್ ।
ಇಷ್ಟ್ವಾ ನಾರಾಯಣಂ ದೇವಂ ಮೋಕ್ಷ್ಯಸೇಽಪಿ ಜಗದ್ವಧಾತ್ ॥

ಪುರುಷಂ=ಬಹು ಫಲಪ್ರದನಾದ ಪರಮಾತ್ಮಾನಂ=ಸರ್ವೋತ್ತಮ ಸ್ವಾಮಿಯಾದ ಈಶ್ವರಂ=ಸರ್ವನಿಯಾಮಕ ಶ್ರೇಷ್ಠನಾದ ದೇವಂ=ಕ್ರೀಡೆ ಮೊದಲಾದ ಗುಣವಿಶಿಷ್ಟನಾದ ನಾರಾಯಣನನ್ನು ಅಶ್ವಮೇಧದಿಂದ ಇಷ್ಟ್ವಾ=ಯಾಗಮಾಡಿ

ಪಡಲಿಲ್ಲ. 'ವಿಶ್ವರೂಪಾಚಾರ್ಯನ ವಧೆಯಿಂದ ಬಂದಿದ್ದ ಬ್ರಹ್ಮಹತ್ಯೆ ಪಾಪವನ್ನು ಆ ಪಾಪವನ್ನು ಸ್ವೀಕರಿಸಿ ನನ್ನಲ್ಲಿ ಅನುಗ್ರಹಿಸಿದ ಭೂ-ಸ್ತ್ರೀ-ನೀರು-ಗಿಡಗಳಿಂದ ವಿಭಾಗಿಸಿಕೊಂಡದ್ದರಿಂದ ಕಳೆದುಕೊಂಡೆನು. ಈಗ ಮತ್ತೆ ವೃತ್ರಹತ್ಯೆಯಿಂದ ಬರುವ ಬ್ರಹ್ಮಹತ್ಯೆಯನ್ನು ಎಲ್ಲಿ ಕಳೆದುಕೊಳ್ಳಲಿ' ಎಂದರು ಇಂದ್ರದೇವರು. ಋಷಿಗಳದನ್ನು ಕೇಳಿ ಮಹೇಂದ್ರರನ್ನು ಕುರಿತು 'ನೀನು ಹೆದರಬೇಡ. ನಿನಗೆ ಮಂಗಳವಾಗಲಿ. ನಾವು ನಿನ್ನಿಂದ ಅಶ್ವಮೇಧಯಾಗವನ್ನು ಮಾಡಿಸುವೆವು. ಬಹುಫಲಪ್ರದನೂ ಸರ್ವೋತ್ತಮ ಸ್ವಾಮಿಯೂ ಸರ್ವನಿಯಾಮಕ ಶ್ರೇಷ್ಠನೂ ಆದ ಶ್ರೀಹರಿಯನ್ನು-

ಪೂಜಿಸಿ ಜಗದ್ವಧಾತ್ ಅಪಿ–ಪ್ರಪಂಚದ ಸಂಹಾರದಿಂದಲೂ ಮೋಕ್ಷ್ಯಸೇ–ಬಿಡಲ್ಪಡುವೆ. (ಪ್ರಪಂಚವನ್ನೇ ಸಂಹರಿಸುವುದರಿಂದ ಬಂದ ಪಾಪದಿಂದ ಮುಕ್ತನಾಗುವೆ.) || ೭ ||

ಬ್ರಹ್ಮಹಾ ಪಿತೃಹಾ ಗೋಘ್ನೋ ಮಾತೃಹಾಽಽಚಾರ್ಯ-ಹಾಽಘವಾನ್ ।
ಶ್ವಾದಃ ಪುಲ್ಕಸಕೋ ವಾಪಿ ಶುದ್ಧ್ಯೇರನ್ ಯಸ್ಯ ಕೀರ್ತನಾತ್ ॥
ತಮಶ್ವಮೇಧೇನ ಮಹಾಮಖೇನ ಶ್ರದ್ಧಾನ್ವಿತೋಽಸ್ಮಾಭಿ-ರನುಷ್ಠಿತೇನ ।
ಹತ್ವಾಽಪಿ ಸಬ್ರಹ್ಮ ಚರಾಚರಂ ತ್ವಂ ನ ಲಿಪ್ಯಸೇ ಕಿಂ ಖಲನಿಗ್ರಹೇಣ ॥ ೯ ॥

ಯಾವನ ನಾಮವನ್ನು ಭಕ್ತಿಯಿಂದ ಕೀರ್ತನ ಮಾಡುವುದರಿಂದಲೇ ಮುಂದೆ ಹೇಳುವ ಪಾಪಿಗಳೂ ಶುದ್ಧರಾಗುವರೋ ಅವನನ್ನು ಉದ್ದೇಶಿಸಿ ಯಾಗ ಮಾಡುವುದರಿಂದ ಶುದ್ಧಿಯಾಗುವುದೆಂದು ಹೇಳುವುದೇನು ? ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಬ್ರಾಹ್ಮಣನನ್ನು ಕೊಂದವನು, ಪಿತೃವನ್ನು ಕೊಂದವನು, ಗೋವನ್ನು ಕೊಂದವನು, ತಾಯಿಯನ್ನು ಸಂಹರಿಸಿದವನು, ಆಚಾರ್ಯ (ಗುರು)ನನ್ನು ಕೊಂದವನು, ಅಘವಾನ್–ಬೇರೆ ಯಾವುದೇ ಪಾಪ ಮಾಡಿದವನು, ಶ್ವಾದಃ=ನಾಯಿಯನ್ನು ತಿನ್ನುವ ಶ್ವಪಚನು (ಚಂಡಾಲನು) ವಾ ಅಪಿ–ಮತ್ತು ಪುಲ್ಕಸಕಃ=ಕಿರಾತನು (ಏತೇ)=ಇವರೆಲ್ಲರೂ ಯಸ್ಯ–ಯಾವ ನಾರಾಯಣನ ಕೀರ್ತನಾತ್–ಭಕ್ತಿಪೂರ್ವಕ ನಾಮ ಸಂಕೀರ್ತನೆಯಿಂದಲೇ ಶುದ್ಧ್ಯೇರನ್=ಶುದ್ಧರಾಗುವರೋ ತಂ=ಆ ನಾರಾಯಣನನ್ನು ಅಸ್ಮಾಭಿಃ–ನಮ್ಮಿಂದ ಅನುಷ್ಠಿತೇನ–ಮಾಡಿಸಲ್ಪಟ್ಟ ಮಹಾಮಖೇನ=ದೊಡ್ಡ ಯಾಗವಾದ ಅಶ್ವಮೇಧದಿಂದ ಶ್ರದ್ಧಾನ್ವಿತಃ (ಸನ್)–ಭಕ್ತಿಯುಕ್ತನಾಗಿ (ಇಷ್ಟ್ವಾ)=ಯಾಗದಿಂದ ಪೂಜಿಸಿ ಸಬ್ರಹ್ಮ=ಬ್ರಾಹ್ಮಣರಿಂದ ಕೂಡಿದ ಚರಾಚರಂ=ಜಂಗಮ ಸ್ಥಾವರ ಪ್ರಪಂಚವನ್ನು ಹತ್ವಾಅಪಿ=ಸಂಹರಿಸಿಯೂ ನ ಲಿಪ್ಯಸೇ=ಪಾಪದಿಂದ ಲಿಪ್ತನಾಗುವುದಿಲ್ಲ. ಅಂದಮೇಲೆ ಖಲನಿಗ್ರಹೇಣ=ದುಷ್ಟನಾದ ವೃತ್ರನನ್ನು ಕೊಂದ ಪಾಪದಿಂದ ಕಿಂ (ಲಿಪ್ಯಸೇ)=ಲಿಪ್ತನಾಗುವೆಯಾ ?

ನಾರಾಯಣನನ್ನು-ಅಶ್ವಮೇಧಯಾಗದಿಂದ ಪೂಜಿಸಿ ನೀನು ಜಗತ್ತಿನ ವಧೆಯಿಂದ ಬರುವ ಪಾಪದಿಂದಲೇ ಮುಕ್ತನಾಗುವೆ. ಬ್ರಹ್ಮಹತ್ಯೆಕಾರನೂ, ಪಿತೃಹಂತಕನೂ, ಗೋವಧೆಕಾರನೂ, ಮಾತೃಹಂತಕನೂ, ಗುರುಹತ್ಯೆಗಾರನೂ, ಅಷ್ಟೇ ಅಲ್ಲ. ಯಾವುದೇ ಪಾಪ ಮಾಡಿದ್ದವನೂ, ಶ್ವಪಚನೂ, ಕಿರಾತನೂ—ಇವರೆಲ್ಲರೂ ಶ್ರೀಹರಿಯ ನಾಮವನ್ನು ಭಕ್ತಿಯಿಂದ ಕೀರ್ತಿಸುವ ಮಾತ್ರದಿಂದಲೇ ಪಾಪರಹಿತರಾಗಿ

ಎಂದಿಗೂ ಇಲ್ಲವೆಂದು ತಾತ್ಪರ್ಯ. ಚರಾಚರಕ್ಕಿಂತ ಬೇರೆಯಾಗಿ 'ಸಬ್ರಹ್ಮ' ಎಂದು ಹೇಳಿದುದು ಬ್ರಹ್ಮಹತ್ಯೆಯು ಅಧಿಕ ದೋಷವೆಂದು ಸೂಚಿಸುವುದಕ್ಕಾಗಿ. || ೮, ೯ ||

ಶ್ರೀ ಶುಕ ಉವಾಚ—

ಏವಂ ಸಂಚೋದಿತೋ ವಿಪ್ರೈರ್ಮರುತ್ವಾನಹನದ್ರಿಪುಮ್ ।
ಬ್ರಹ್ಮಹತ್ಯಾ ಹತೇ ತಸ್ಮಿನ್ನಾಸಸಾದ ವೃಷಾಕಪಿಮ್ ॥ ೧೦ ॥

ಏವಂ = ಹೀಗೆ ವಿಪ್ರೈಃ= ಋಷಿಗಳಿಂದ ಸಂಚೋದಿತಃ=ವೃತ್ರ ವಧೆಯಲ್ಲಿ ಪ್ರೇರಿತರಾದ ಮರುತ್ವಾನ್ = ಇಂದ್ರದೇವರು ರಿಪುಂ = ಶತ್ರುವನ್ನು ಅಹನತ್= ಕೊಂದರು. ತಸ್ಮಿ=ವೃತ್ರನು ಹತೇ (ಸತಿ) = ಸಂಹೃತನಾಗಲು ಬ್ರಹ್ಮಹತ್ಯಾ ಪಾಪವು ವೃಷಾಕಪಿಂ= ಇಂದ್ರದೇವರನ್ನು ಆಸಸಾದ=ಸೇರಿತು. || ೧೦ ||

ತಯೇಂದ್ರಂ ಸ್ಮ ಹ ಸಂತಪ್ತಂ ನಿರ್ವೃತಿರ್ನಾಮುಮಾವಿಶತ್ ।
ಹ್ರೀಮಂತಂ ವಾಚ್ಯತಾಂ ಪ್ರಾಪ್ತಂ ಸುಖಯಂತ್ಯಪಿ ನೋ
ಗುಣಾಃ ॥ ೧೧ ॥

ತಯಾ= ಆ ಬ್ರಹ್ಮಹತ್ಯೆಯಿಂದ ಸಂತಪ್ತಂ = ಸಂತಾಪಗೊಂಡಿದ್ದ ಅಮುಂ ಇಂದ್ರಂ= ಈ ಇಂದ್ರದೇವರನ್ನು ನಿರ್ವೃತಿಃ= ಮನಶ್ಶಾಂತಿಯು ನ ಆವಿಶತ್=ಸೇರ ಲಿಲ್ಲ. ಅವರಿಗೆ ಮನಶ್ಶಾಂತಿಯುಂಟಾಗಲಿಲ್ಲ. ಸ್ಮ. ಹ. = ಈ ಅವ್ಯಯಗಳಿಂದ ಬ್ರಹ್ಮವಧೆಯು ಲೋಕದಲ್ಲಿ ಜುಗುಪ್ಸಿತವೆಂದು ತಿಳಿದುಬಂದಿದ್ದರೂ ಇಂದ್ರದೇವರ ವಿಷಯದಲ್ಲಿ ಅದು ಲೋಕದ ಎಲ್ಲರಿಗೂ ಸುಖಕರವಾದ್ದರಿಂದ ಪಾಪವಲ್ಲವೆಂದು ಸೂಚಿಸಿರುವರು. ಹಾಗಾದರೆ ಇಂದ್ರದೇವರಿಗೆ ಮನಶ್ಶಾಂತಿಯೇಕಾಗಬಾರದು? ಶತ್ರು ಸಂಹಾರದಿಂದ ಸುಖಕಾರಣಗಳಾದ ಶೌರ್ಯಾದಿ ಗುಣಗಳು ಪ್ರಕಾಶಿತ ಗಳಾದುವಲ್ಲವೇ ! ಎಂದರೆ ಹೇಳುತ್ತಾರೆ. ಅಪಿ=ಶತ್ರುವಧೆಯಿಂದ ಸೂಚಿತಗಳಾದ ಶೌರ್ಯ ಮೊದಲಾದ ಗುಣಗಳು ಸುಖಹೇತುಗಳೇ ಆಗಿದ್ದರೂ ಗುಣಾಃ= ಆ ಶೌರ್ಯ ಮೊದಲಾದ ಗುಣಗಳು ಹ್ರೀಮಂತಂ=ನಾಚಿಕೆಗೊಂಡ ವಾಚ್ಯತಾಂ ಪ್ರಾಪ್ತಂ= ಬ್ರಹ್ಮಹತ್ಯೆಕಾರನೆಂದು ಜನರಿಂದ ಅನ್ನಿಸಿಕೊಂಡ ಶೂರನನ್ನು ನೋ ಸುಖಯಂತಿ= ಸಂತೋಷಪಡಿಸುವುದಿಲ್ಲ. ವಿ. ಅ. ವೃತ್ರಹತ್ಯೆಯು ಶ್ರೇಷ್ಠಾಪರಾಧವಲ್ಲದ್ದರಿಂದ ಇಂದ್ರದೇವರಿಗೆ ಪಾಪಕರವಲ್ಲ. ಮತ್ತೇನೆಂದರೆ ಆ ಕರ್ಮವು ಪ್ರಾರಬ್ಧಕರ್ಮದಿಂದ ಬಂದ ದುಃಖಕ್ಕೆ ಸೂಚಕ ಮಾತ್ರ. ಇದನ್ನೇ 'ಸ್ಮ' 'ಹ' ಎಂಬ ಅವ್ಯಯಗಳು

ಶುದ್ಧರಾಗುವರು. ಅಂತಹ ಶ್ರೀಹರಿಯನ್ನು ನಾವು ಮಾಡಿಸಿದ ದೊಡ್ಡ ಅಶ್ವಮೇಧ ಯಾಗದಿಂದ ಭಕ್ತಿಯುಕ್ತನಾಗಿ ಪೂಜಿಸಿದ ನೀನು ಬ್ರಾಹ್ಮಣರಿಂದ ಕೂಡಿದ ಚರಾಚರ ಪ್ರಪಂಚವನ್ನು ಸಂಹರಿಸಿದರೂ ಆ ಪಾಪದಿಂದ ಅಪ್ತನಾಗುವುದಿಲ್ಲ. ಈ ದುಷ್ಟನ ನಿಗ್ರಹದಿಂದ ಬಂದ ಪಾಪದಿಂದ ಹೇಗೆತಾನೇ ಲಿಪ್ತನಾಗುವೆ? ಎಂದರು.

ಆ ಬ್ರಹ್ಮಹತ್ಯೆಯಿಂದ ಸಂತಾಪಗೊಂಡಿದ್ದ ಇಂದ್ರದೇವರಿಗೆ ಮನಶ್ಶಾಂತಿಯು

ಸೂಚಿಸಿದ್ದು. ಅಪರೋಕ್ಷ ಜ್ಞಾನಾನಂತರದಲ್ಲಿ ಮಾಡಿದ (ಸ್ವೋಚ್ಛಾಪರಾಧ ವ್ಯತಿರಿಕ್ತ) ಪಾಪಕರ್ಮಗಳು ಲೇಪವಾಗುವುದಿಲ್ಲ. ದೇವತೆಗಳು ಜಾತಾಪರೋಕ್ಷಿಗಳು. ಯುದ್ಧದಲ್ಲಿ ಎಲ್ಲರಿಗೂ ಗಾಯವಾಗುವುದಿಲ್ಲ. ಯಾರಿಗೆ ಗಾಯವಾಗುವ ಪ್ರಾರಬ್ಧವಿದೆಯೋ ಅವರಿಗೆ ಮಾತ್ರ ಗಾಯವಾಗುವುದು. ಅಂದಮೇಲೆ ಯುದ್ಧವು ಗಾಯವನ್ನು ಅನುಭವಿಸುವ ಪ್ರಾರಬ್ಧಕ್ಕೆ ಸೂಚಕವೆಂದೇ ಹೇಳಬೇಕು. ಅದರಂತೆಯೇ ಇಲ್ಲಿಯೂ. ಹಾಗಾದರೆ ಅಶ್ವಮೇಧಾದಿ ಪ್ರಾಯಶ್ಚಿತ್ತವನ್ನೇಕೆ ಮಾಡಿಕೊಂಡರು? ಎಂದಲ್ಲಿ 'ಉಪಮರ್ದಂ ಚ' ಎಂಬ ಬ್ರಹ್ಮಸೂತ್ರದಲ್ಲಿ ಹೇಳಿದಂತೆ ಪ್ರಾಯಶ್ಚಿತ್ತದಿಂದ ಪ್ರಾರಬ್ಧಕರ್ಮಕ್ಕೇ ಸ್ವಲ್ಪಮಟ್ಟಿಗೆ ನಾಶವೆಂದು ಅಭಿಪ್ರಾಯ. ನಾಶವೆಂದರೆ ಫಲವು ಕಡಿಮೆಯಾಗುವುದೆಂದು ತಾತ್ಪರ್ಯ. ಪ್ರಾರಬ್ಧಕರ್ಮವು ಅಪರೋಕ್ಷ ಜ್ಞಾನದಿಂದ ನಾಶವಾಗುವುದಿಲ್ಲ. ಈ ವಿಷಯವನ್ನು ಈ ಪ್ರಮಾಣಗಳು ಸ್ಪಷ್ಟಪಡಿಸುತ್ತವೆ. 'ಪ್ರಾರಬ್ಧ ಕರ್ಮಣೈವ ಏಷಾಂ ಕ್ಲೃಪ್ತ ದುಃಖಸ್ಯ ಸೂಚಕಂ | ತದಾನೀಂತನಕರ್ಮಸ್ಯಾತ್, ವ್ರಣಹೇತುರ್ಯಥಾ ರಣಃ || ದೇವಾದೀನಾಂ ಸ್ಥಿತಪ್ರಜ್ಞಭಾವಾತ್ (ಅಪರೋಕ್ಷ ಜ್ಞಾನಿಗಳಾದ್ದರಿಂದ) ನೈವ ಅನ್ಯಥಾ ಭವೇತ್ | ಪ್ರಾರಬ್ಧಂ ಅಪಿತು ಕ್ವಾಪಿ ಕಿಂಚಿದ್ವಿಘಟಿತಂ (ಫಲಹ್ರಾಸವುಳ್ಳದ್ದಾಗಿ) ಭವೇತ್. || ೧೧ ||

ತಾಂ ದದರ್ಶಾನುಧಾವಂತೀಂ ಚಂಡಾಲೀಮಿವ ರೂಪಿಣೀಮ್ ।
ಜರಯಾ ವೇಪಮಾನಾಂಗೀಂ ಯಕ್ಷ್ಮಗ್ರಸ್ತಾಮಸೃಕ್ಪಟಾಮ್ ॥
ವಿಕೀರ್ಯ ಪಲಿತಾನ್ ಕೇಶಾಂಸ್ತಿಷ್ಠ ತಿಷ್ಠೇತಿ ಭಾಷಿಣೀಮ್ ।
ಮೀನಗಂಧ್ಯಸುಗಂಧೇನ ಕುರ್ವಂತೀಂ ಮಾರ್ಗದೂಷಣಮ್ ॥

ಜರಯಾ = ಮುದಿತನದಿಂದ ವೇಪಮಾನಾಂಗೀಂ = ಶರೀರದ ಅಂಗಗಳು ನಡಗುತ್ತಿರುವ ಯಕ್ಷ್ಮಗ್ರಸ್ತಾಂ = ಕ್ಷಯ ರೋಗದಿಂದ ಪೀಡಿತಳಂತಿರುವ ಅಸೃಕ್‌ಪಟಾಂ = ರಜಸ್ವಲೆಯಂತೆ ರಕ್ತದಿಂದ ಕೆಂಪಾದ ಬಟ್ಟೆಯುಳ್ಳ ಪಲಿತಾನ್ = ನರೆತಿರುವ ಕೇಶಾನ್ = ಕೂದಲುಗಳನ್ನು ವಿಕೀರ್ಯ = (ಹರಡಿಕೊಂಡು) ತಿಷ್ಠ ತಿಷ್ಠ = ನಿಲ್ಲು ನಿಲ್ಲು ಇತಿ = ಎಂದು ಭಾಷಿಣೀಂ = ಮಾತನಾಡುತ್ತಿರುವ ಮೀನಗಂಧ್ಯಸುಗಂಧೇನ = (೧) ಸತ್ತಮೀನುಗಳನ್ನು ಧರಿಸಿರುವ ಚಂಡಾಲ = ಬೆಸ್ತರುಗಳಂತೆ ಕೆಟ್ಟ ವಾಸನೆಯಿಂದ (೨) ಮೀನಿನಂತೆ ದುರ್ಗಂಧವುಳ್ಳ ಬಾಯಿಯ ಶ್ವಾಸಗಾಳಿಯ ವಾಸನೆ

ಬರಲಿಲ್ಲ. (ಈ ಹತ್ಯೆಯು ಇಂದ್ರದೇವರಿಗೆ ಪಾಪಕರವೇನೂ ಅಲ್ಲ.) ಶತ್ರುವಧೆಗೆ ಕಾರಣಗಳಾದ ಶೌರ್ಯಾದಿಗುಣಗಳು ಸುಖಕರಗಳಾದರೂ ಅವು ನಾಚಿಕೆಗೊಳಪಟ್ಟ ಮತ್ತು ಬ್ರಹ್ಮಹತ್ಯೆಕಾರನೆಂದು ಜನರಿಂದ ಹೀಯಾಳಿಸಿಕೊಂಡ ಶೂರನಿಗೆ ಸುಖಕಾರಕಗಳಲ್ಲ.

ಮುದಿಯಾಗಿ, ನಡುಗುವ ಅವಯವಗಳಿಂದ, ಕ್ಷಯರೋಗ ಪೀಡಿತಳಂತೆ ಕೃಶಳಾಗಿ, ಕೆಂಪುಬಟ್ಟೆಯ, ಹರಡಿದ ನೆರೆತ ಕೂದಲಿನ, ಮೀನಿನ ವಾಸನೆ

ಯಿಂದ ಮಾರ್ಗದೂಷಣಂ=ದಾರಿಯನ್ನೇ ದೂಷಿತವನ್ನಾಗಿ ಕುರ್ವಂತೀಂ-ಮಾಡು ತ್ತಿರುವ ರೂಪಿಣೀಂ=ಶರೀರವನ್ನು ಧರಿಸಿದ ಚಂಡಾಲೀಂ ಇವ=ಹೊಲತಿಯಂತೆ ಅನುಧಾವಂತೀಂ-ಅಟ್ಟಿಸಿಕೊಂಡು ಬರುತ್ತಿದ್ದ ತಾಂ=ಆ ಬ್ರಹ್ಮಹತ್ಯಾ ಪಾಪವನ್ನು ಇಂದ್ರದೇವರು ದದರ್ಶ=ನೋಡಿದರು. || ೧೨, ೧೩ ||

ನಭೋಗತೋ ದಿಶಃ ಸರ್ವಾಃ ಸಹಸ್ರಾಕ್ಷೋ ವಿಶಾಂಪತೇ ।
ಪ್ರಾಗುದೀಚೀಂ ದಿಶಂ ದೃಷ್ಟ್ವಾ ಪ್ರವಿಷ್ಟೋ ನೃಪ !
ಮಾನಸಮ್ || ೧೪ ||

ವಿಶಾಂಪತೇ ನೃಪ - ಪರೀಕ್ಷಿದ್ರಾಜನೇ ಸಹಸ್ರಾಕ್ಷಃ = ಇಂದ್ರದೇವರು ಸರ್ವಾಃ ದಿಶಃ-ಎಲ್ಲ ದಿಕ್ಕುಗಳನ್ನೂ (ಗತ್ವಾ)=ಆ ಪಾಪವನ್ನು ತಪ್ಪಿಸಿಕೊಳ್ಳುವುದ ಕ್ಕಾಗಿ ಹೊಂದಿದವರಾಗಿ ನಭೋಗತಃ=ಆಕಾಶಮಾರ್ಗದಿಂದ ಆಕಾಶವನ್ನು ಸೇರಿ ಪ್ರಾಗುದೀಚೀಂ - ಪೂರ್ವೋತ್ತರಗಳ ಮಧ್ಯದ ಈಶಾನ್ಯ ದಿಶಂ = ದಿಕ್ಕನ್ನು ದೃಷ್ಟ್ವಾ-ಸಮರ್ಥವಾದ ದೃಷ್ಟಿಯಿಂದ ಕಂಡು (ತಾಂ) ಪ್ರವಿಷ್ಟಃ (ಸನ್)= ಆ ದಿಕ್ಕನ್ನು ಪ್ರವೇಶಿಸಿದವರಾಗಿ ಮಾನಸಂ-ಮಾನಸವೆಂಬ ಸರೋವರವನ್ನು (ಪ್ರಾಪ)=ಹೊಂದಿದರು. || ೧೪ ||

ಸ ಆವಸತ್ಪುಷ್ಕರನಾಲತಂತೂ-
ನಲಬ್ಧಭೋಗೋ ಯದಿಹಾಗ್ನಿದೂತಃ ।
ವರ್ಷಾಣಿ ಸಾಹಸ್ರಮಲಕ್ಷಿತೋಽಂತಃ
ಸಂಚಿಂತಯನ್ ಬ್ರಹ್ಮವಧಾದ್ವಿಮೋಕ್ಷಮ್ || ೧೫ ||

ಯತ್=ಯಾವ ಕಾರಣದಿಂದ ಇಹ=ಮಾನಸ ಸರೋವರದ ನೀರಿನಲ್ಲಿ (ಆಸೀತ್)-ಇದ್ದರೋ ಅಗ್ನಿದೂತಃ (ಚ)=ಹವಿಸ್ಸನ್ನು ತಂದುಕೊಡಲು ಅಗ್ನಿಯನ್ನೆ ದೂತನನ್ನಾಗಿ ಹೊಂದಿದ್ದರೋ (ತತ್) - ಆ ಕಾರಣದಿಂದ ಅಲಬ್ಧಭೋಗಃ - ಅಗ್ನಿಯು ನೀರಿನಲ್ಲಿ ಬರಲಾರನಾದ್ದರಿಂದ ಹವಿಸ್ಸಿನ ಭೋಗವನ್ನು ಹೊಂದದವರಾಗಿ ಸಃ=ಆ ಇಂದ್ರದೇವರು ಬ್ರಹ್ಮವಧಾತ್ = ವೃತ್ರನನ್ನು ಕೊಂದ ಬ್ರಹ್ಮಹತ್ಯಾ ಪಾಪ

ಯಂತೆ ದುರ್ವಾಸನೆಯಿಂದ ಬರುವ ಶ್ವಾಸಗಾಳಿಯಿಂದ ಮಾರ್ಗವನ್ನೇ ದುರ್ವಾಸನೆ ಗೊಳಿಸುತ್ತಿರುವ, ಚಂಡಾಲಿಯಂತೆ ಹಿಂಬಾಲಿಸಿ ಬರುತ್ತಿರುವ, ನಿಲ್ಲು ನಿಲ್ಲು ಎಂದು ಮಾತನಾಡುತ್ತಿದ್ದ ಶರೀರಧಾರಿ ಆ ಬ್ರಹ್ಮಹತ್ಯೆಯನ್ನು (ಪಾಪವನ್ನು) ಇಂದ್ರ ದೇವರು ಕಂಡರು. ಪರೀಕ್ಷಿದ್ರಾಜ! ಇಂದ್ರದೇವರು ಅದನ್ನು ತಪ್ಪಿಸಿಕೊಳ್ಳಲು ಎಲ್ಲ ದಿಕ್ಕುಗಳಿಗೂ ಹೋದರು. ಆಕಾಶವನ್ನು ಸೇರಿ ಈಶಾನ್ಯದಿಕ್ಕನ್ನು ಕಂಡು ಆ ದಿಕ್ಕಿಗೆ ಹೊರಟು ಮಾನಸ ಸರೋವರವನ್ನು ಹೊಂದಿದರು. ಆ ನೀರಿನಲ್ಲಿ ನೆಲಸಿದರು. ದೂತನು ಅಗ್ನಿಯಾಗಿದ್ದುದರಿಂದ ಹವಿಸ್ಸಿನ ಭೋಗವಿಲ್ಲದವರಾದರು. ಈ ಪಾಪದಿಂದ ವಿಮುಕ್ತಿಯೆಂತು? ಎಂದು ಯೋಚಿಸುತ್ತಾ ನೀರಿನಿಂದ ಆವೃತರಾಗಿ

ದಿಂದ ವಿಮೋಕ್ಷಂ = ಬಿಡುಗಡೆಯ ಉಪಾಯವನ್ನು ಸಂಚಿಂತಯನ್ = ಆಲೋಚಿಸುತ್ತಾ ಅಲಕ್ಷಿತಃ=ನೀರಿನಿಂದ ಆವೃತರಾಗಿದ್ದುದರಿಂದ ಯಾರಿಗೂ ಕಾಣದವರಾಗಿ ಅಂತಃ=ಸರೋವರದೊಳಗೆ ಪುಷ್ಕರನಾಲತಂತೂನ್=ಕಮಲದ ನಾಳದ ತಂತುಗಳಲ್ಲಿ ಸಾಹಸ್ರಂ ವರ್ಷಾಣಿ = ಸಾವಿರ ವರ್ಷಗಳು ಆವಸತ್ = ವಾಸಿಸಿದರು. ಅಲಕ್ಷಿತೋಽದ್ಭಿಃ ಎಂಬ ಪಾಠದಲ್ಲಿ ಅದ್ಭಿಃ = ದೇವತೆಗಳಿಂದ ಅಲಕ್ಷಿತಃ = ಕಾಣದವರಾಗಿ ಎಂದರ್ಥ. ಅಥವಾ ನೀರಿನಿಂದ ಆವೃತರಾಗಿ ಎಂದಾದರೂ ಅರ್ಥ. || ೧೫ ||

ತಾವತ್ತ್ರಿಣಾಕಂ ನಹುಷಃ ಶಶಾಸ
ವಿದ್ಯಾತಪೋಯೋಗಬಲಾನುಭಾವಃ ।
ಸ ಸಂಪದೈಶ್ವರ್ಯಮದಾಂಧಬುದ್ಧಿ-
ರ್ನೀತಸ್ತಿರಶ್ಚಾಂ ಗತಿಮಿಂದ್ರಪತ್ನ್ಯಾ ॥ ೧೬ ॥

ತಾವತ್=ಇಂದ್ರದೇವರು ಮಾನಸ ಸರೋವರದ ಕಮಲದ ನಾಳದ ದಾರಗಳಲ್ಲಿ ಅಡಗಿಕೊಂಡಿದ್ದಷ್ಟು ಕಾಲ ವಿದ್ಯಾ, ತಪಸ್ಸು, ಯೋಗಬಲ ಇವುಗಳ ಅನುಭಾವಃ=ಸಾಮರ್ಥ್ಯವನ್ನು ಹೊಂದಿದ್ದ ನಹುಷ ಚಕ್ರವರ್ತಿಯು ತ್ರಿಣಾಕಂ= ೧) ಸ್ವರ್ಗವನ್ನು ೨) ಭೂಮಿ, ಅಂತರಿಕ್ಷ ಮತ್ತು ಸ್ವರ್ಗಸ್ಥಾನಗಳನ್ನು ೩) ತ್ರಿಶಬ್ದವಾಚ್ಯರಾದ ದೇವತೆಗಳಿಂದ ಅಧಿಷ್ಠಿತವಾದ ಸ್ವರ್ಗಲೋಕವನ್ನು ಶಶಾಸ=ಆಳಿದನು. ಆದ್ದರಿಂದಲೇ ಇಂದ್ರದೇವರು ತ್ರೈಲೋಕ್ಯ ಪಾಲನೆಯಿಂದ ಬಂದ ಸರ್ವೈಶ್ವರ್ಯ ಭೋಗವಿಲ್ಲದವರಾದುದು. 'ತಾವಚ್ಚ ನಾಕಂ' ಎಂಬ ಪಾಠದಲ್ಲಿ ಚ ಎಂಬುದಕ್ಕೆ ಏವ ಎಂದರ್ಥ. ತಾವದೇವ=ಅಷ್ಟುಕಾಲ ಮಾತ್ರ. ಯಾವಾಗಲೂ ಅಲ್ಲವೆಂದರ್ಥ. ಅಥವಾ ನಹುಷನೇ ಸ್ವರ್ಗವನ್ನು ಆಳಿದನು. ಬೇರೆ ದೇವತೆಗಳ್ಯಾರೂ ಆಳಲಿಲ್ಲವೆಂದರ್ಥ. 'ನಾನ್ಯಸ್ಯ ಪದಮಿಚ್ಛಂತಿ ತದ್ದೇವಾನಾಂ ಪರಂ ವ್ರತಮ್ | ತಸ್ಮಾತ್ತಂ ನಹುಷಂ ಶಕ್ರಪದೇ ನಿದಧುರೀಶ್ವರಾಃ' || ಎಂಬ ಪ್ರಮಾಣವು ದೇವತೆಗಳು ಏಕೆ ಆಳಲಿಲ್ಲವೆಂಬುದನ್ನು ತಿಳಿಸುತ್ತದೆ. ಮತ್ತು ಇಂದ್ರದೇವರಿಗೆ ಸ್ವರ್ಗಾಧಿಪತ್ಯ ಹೇಗೆ ಬರುವುದಕ್ಕೆ ಅವಕಾಶವಾಯಿತು? ಎಂದರೆ ಹೇಳುತ್ತಾರೆ. ಸಂಪತ್ತು ಮತ್ತು ಐಶ್ವರ್ಯಗಳ ಮದದಿಂದ ಅಂಧಬುದ್ಧಿಃ=ಬುದ್ಧಿರಹಿತನಾದ ವಿವೇಕಶೂನ್ಯನಾದ ಸಃ=ಆ ನಹುಷನು ಇಂದ್ರಪತ್ನ್ಯಾ=ಶಚೀದೇವಿಯಿಂದ ಅಗಸ್ತ್ಯರ ಮೂಲಕ ತಿರಶ್ಚಾಂ ಗತಿಂ=ಅಜಗರ ಸರ್ಪವಾಗುವಿಕೆಯನ್ನು ನೀತಃ=ಹೊಂದಿಸಲ್ಪಟ್ಟನು. ಇಲ್ಲಿ ಪುರಾಣದ ಕಥೆ ಹೀಗಿದೆ. ಐಶ್ವರ್ಯಗರ್ವಿತ

ಯಾರಿಗೂ ಕಾಣದೆ ಸರೋವರದ ಒಳಗೆ ಕಮಲದ ನಾಳದ ದಾರಗಳಲ್ಲಿ ಸಾವಿರ ವರ್ಷಗಳು ವಾಸಿಸಿದರು. ಅದಷ್ಟು ಕಾಲವೂ ವಿದ್ಯಾ, ತಪಸ್ಸು, ಯೋಗಬಲಗಳ ಸಾಮರ್ಥ್ಯಶಾಲಿಗಳಾದ ನಹುಷ ಚಕ್ರವರ್ತಿಗಳು ಸ್ವರ್ಗವನ್ನು ಆಳಿದರು. ಆದರೆ ಸಂಪತ್ತು ಐಶ್ವರ್ಯಗಳ ಮದದಿಂದ ಬುದ್ಧಿಭ್ರಷ್ಟನಾಗಿದ್ದ ನಹುಷ ಚಕ್ರವರ್ತಿಯು

ನಾದ ನಹುಷನು ಒಂದು ದಿನ ಶಚೀದೇವಿಯನ್ನು 'ನಾನು ಇಂದ್ರ. ನನ್ನನ್ನು ಹೊಂದು' ಎಂದನು. ಭೀತಳಾದ ಶಚೀದೇವಿಯು ಬೃಹಸ್ಪತ್ಯಾಚಾರ್ಯರಿಗೆ ಈ ವಿಷಯವನ್ನು ತಿಳಿಸಿದಳು. ಅದಕ್ಕವರು 'ಬ್ರಾಹ್ಮಣರು ಹೊತ್ತು ತರುವ ಮೇನೆ (ಶಿಬಿಕೆ)ಯಲ್ಲಿ ಬಾ ಎಂದು ಹೇಳು. ಕುಪಿತರಾದ ಬ್ರಾಹ್ಮಣರಿಂದ ಅವನು ಶಪ್ತನಾಗುವನು' ಎಂದು ಉಪಾಯವನ್ನು ಹೇಳಿಕೊಟ್ಟರು. ಹಾಗೆಯೇ ಶಚಿಯು ನಹುಷನಿಗೆ ಹೇಳಲು ಅಗಸ್ತ್ಯಾದಿ ಮಹಾಮುನಿಗಳಿಂದ ತನ್ನ ಮೇನೆಯನ್ನು ಹೊರೆಸಿ ಕೊಂಡು ಶಚಿಯ ಮನೆಗೆ ಹೊರಟನು. ಆಗ 'ಕ್ಷಿಪ್ರಂ ಸರ್ಪ' ಎಂದು ಅಗಸ್ತ್ಯರನ್ನು ಕಾಲಿನಿಂದ ಒದೆದನು. ಅವರು ಕುಪಿತರಾಗಿ 'ಸರ್ಪೋ ಭವ' ಎಂದು ಶಪಿಸಿದರು. ಕೂಡಲೆ ನಹುಷನು ಅಜಗರ ಸರ್ಪವಾಗಿ ಕೆಳಗೆ ಬಿದ್ದನು. || ೧೬ ||

ತತೋ ಗತೋ ಬ್ರಹ್ಮಗಿರೋಪಹೂತ
ಋತಂಭರಧ್ಯಾನನಿವಾರಿತಾಂಹಃ ।
ಪಾಪಶ್ಚ ದಿಗ್ದೇವತಯಾ ಹತೌಜಾ-
ಸ್ತಂ ನಾಭ್ಯಭೂದವಿತಂ ವಿಷ್ಣುಪದ್ಯಾ ॥ ೧೭ ॥

ಬ್ರಹ್ಮಗಿರಾ= ೧) ಬ್ರಹ್ಮದೇವರ ಮಾತಿನಿಂದ ೨) ಬೃಹಸ್ಪತ್ಯಾಚಾರ್ಯರ ಮಾತಿನಿಂದ. ಉಪಹೂತಃ=ದೂತನಾದ ಅಗ್ನಿಯ ಮೂಲಕ ಕರೆಯಿಸಲ್ಪಟ್ಟ ಋತಂಭರ=ಪ್ರಹ್ಲಾದನ ಮಾತನ್ನು ಸತ್ಯಮಾಡಲು ಬಂದ ನರಸಿಂಹದೇವರ ಧ್ಯಾನ=ಧ್ಯಾನದಿಂದ ನಿವಾರಿತ=ಹೋದ ಅಂಹಃ=ಬ್ರಹ್ಮಹತ್ಯಾ ಪಾಪವುಳ್ಳ ಸಃ=ಇಂದ್ರ ದೇವರು ತತಃ=ಮಾನಸ ಸರೋವರದಿಂದ ಗತಃ=ಹೊರಟರು. ವಿಷ್ಣುಪದ್ಯಾ= ಮಾನಸ ಸರೋವರದಲ್ಲಿ ಸೇರಿರುವ ಗಂಗಾನದಿಯಿಂದ, ೨) ಶ್ರೀವಿಷ್ಣುಪಾದಾ ವಲಂಬಿನಿಯಾದ ಮಹಾಲಕ್ಷ್ಮೀ ದೇವಿಯಿಂದ ಅವಿತಂ=ರಕ್ಷಿತವಾಗಿದ್ದ ತಂ=ಇಂದ್ರ ದೇವರನ್ನು ದಿಗ್ದೇವತಯಾ=ಇಂದ್ರಹಿತಕಾರಿಣಿಯಾದ ಈಶಾನ್ಯದಿಕ್ಕಿನ ದೇವತೆ ಯಿಂದ ಹತೌಜಾಃ=(ಇಂದ್ರನನ್ನು ಹುಡುಕಿಕೊಂಡು ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸಿದ ಬ್ರಹ್ಮಹತ್ಯಾ ಪಾಪಾಭಿಮಾನಿಯು) ಕುಗ್ಗಿದ ಬಲವುಳ್ಳ ಪಾಪಃ= ಬ್ರಹ್ಮಹತ್ಯಾಪಾಪವು, ಅದರ ಅಭಿಮಾನಿ ಜೀವವು ನ ಅಭ್ಯಭೂತ್ ಚ=ಅಭಿಭವ ಗೊಳಿಸಲೂ ಇಲ್ಲ. ಇದರಿಂದ ಈಗ ನರಸಿಂಹನ ಧ್ಯಾನದಿಂದ ನಿರಸ್ತವಾದರೂ ಹಿಂದೆ ಆ ಪಾಪದಿಂದ ಇಂದ್ರದೇವರು ಅಭಿಭವಗೊಂಡಿದ್ದರೇನು? ಎಂಬುದಕ್ಕೆ

ಶಚೀದೇವಿಯಿಂದ (ಅಗಸ್ತ್ಯರ ಮೂಲಕ) ಅಜಗರ ಸರ್ಪಭಾವವನ್ನು ಹೊಂದಿದನು. ಬ್ರಹ್ಮದೇವರು ದೂತನಾದ ಅಗ್ನಿಯ ಮೂಲಕ ಇಂದ್ರದೇವರಿಗೆ ಹೇಳಿಕಳುಹಿಸಿದರು. ಭೃತ್ಯನ ಮಾತನ್ನು ಸತ್ಯಮಾಡಲು ವ್ಯಕ್ತನಾಗಿದ್ದ ನರಸಿಂಹದೇವರ ಧ್ಯಾನದಿಂದ ಬ್ರಹ್ಮಹತ್ಯಾ ಪಾಪವನ್ನು ಕಳೆದುಕೊಂಡ ಇಂದ್ರದೇವರು ಆ ಮಾನಸ ಸರೋವರದಿಂದ ಹೊರಹೊರಟರು. ಅಲ್ಲಿದ್ದ ಗಂಗಾನದಿಯಿಂದ-ಲಕ್ಷ್ಮೀದೇವಿಯಿಂದ ರಕ್ಷಿತರಾಗಿದ್ದ

ಉತ್ತರ ಕೊಟ್ಟಂತಾಯಿತು. ಶ್ರೀಹರಿಯು ಸರ್ವಗತನು ಎಂದು ಪ್ರಹ್ಲಾದನು ಹೇಳಿದ ಮಾತನ್ನು ಸತ್ಯಮಾಡಲು ಸ್ತಂಭದಿಂದ ವ್ಯಕ್ತನಾದನಾದ್ದರಿಂದ ಶ್ರೀಹರಿಯು ಋತಂಭರನೆಂದು ವೇದವಾದಿಗಳಿಂದ ಕರೆಯಲ್ಪಟ್ಟನು. ಆದ್ದರಿಂದ ಶ್ರೀಹರಿಗೆ ಆ ಹೆಸರು. ಹತೌಜಾಃ ಎಂಬ ವಿಶೇಷಣವು ಪಾಪವು ಅಭಿಭವಗೊಳಿಸದಿರುವುದಕ್ಕೆ ಕಾರಣವನ್ನು ತಿಳಿಸುವುದು. ಮತ್ತೊಂದು ಕಾರಣ ಇಂದ್ರದೇವರು ವಿಷ್ಣುಪದಿಯಿಂದ ರಕ್ಷಿತರಾಗಿದ್ದುದು. || ೧೭ ||

ತಂ ಚ ಬ್ರಹ್ಮರ್ಷಯೋಽಭ್ಯೇತ್ಯ ಹಯಮೇಧೇನ ಭಾರತ ।
ಯಥಾವದ್ದೀಕ್ಷಯಾಂ ಚಕ್ರುಃ ಪುರುಷಾರಾಧನೇನ ಹ ॥ ೧೮ ॥

ಋತಂಭರಧ್ಯಾನದಿಂದ ಅಭಿಭವವಾಗದಿದ್ದರೂ ಪಾಪದ ಸ್ವರೂಪವು ನಾಶವಾಗದಿರುವುದರಿಂದ ಮುಂದೆ ಅಭಿಭವವಾಗಬಹುದು ಎಂದು ಶಂಕಿಸಿದರೆ ಅದರ ಸ್ವರೂಪ ನಾಶವಾಯಿತೆಂಬುದನ್ನು ಸಕಾರಣವಾಗಿ ವಿವರಿಸುತ್ತಾರೆ. ಪರೀಕ್ಷಿದ್ರಾಜನೇ, ಬ್ರಹ್ಮರ್ಷಿಗಳು ಅಭ್ಯೇತ್ಯ=ಹಿಂದೆ ಹೇಳಿದ್ದಂತೆ ಬಂದು ಪುರುಷಾರಾಧನೇನ=ವಿಷ್ಣುವಿನ ಪೂಜಾರೂಪವಾದ ಹಯಮೇಧೇನ-ಅಶ್ವಮೇಧದಿಂದ ತಂ=ಆ ಇಂದ್ರದೇವರನ್ನು ಯಥಾವತ್=ಶಾಸ್ತ್ರಕ್ಕೆ ತಕ್ಕಂತೆ ದೀಕ್ಷಯಾಂ ಚಕ್ರುಃ ಚ-ದೀಕ್ಷಿತರನ್ನಾಗಿ ಮಾಡಿದರು. ಹ=ಶ್ರೀಹರಿಮಾಹಾತ್ಮ್ಯ ಜ್ಞಾನಪೂರ್ವಕ ಮಾಡದಿದ್ದರೆ ಅಶ್ವಮೇಧದಿಂದ ವಿವಕ್ಷಿತ ಫಲವು ಆಗುವುದಿಲ್ಲವೆಂದು ಬಾಧಕವನ್ನು ಸೂಚಿಸಿರುವರು. ಪುರುಷಾರಾಧನ ಎಂದು ಹೇಳಿದ್ದರಿಂದ ಭಗವದ್ವಿಷಯಕವಲ್ಲದ ಅಶ್ವಮೇಧದಿಂದ ಪಾಪದ ಸ್ವರೂಪನಾಶವಾದರೂ ಹೇಗೆ ಆದೀತು? ಎಂಬುದಕ್ಕೆ ಉತ್ತರ ಕೊಟ್ಟಿರುವರು. ಪುರುಷಶಬ್ದವು ವಿಷ್ಣುವನ್ನು ಹೇಳುವುದು. 'ಸಹಸ್ರಶೀರ್ಷಾ ಪುರುಷಃ' ಎಂಬ ಶ್ರುತಿಯಿದೆ. 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ' ಎಂದಿದೆಯಾಗಿ ಯಜ್ಞವು ಪುರುಷಾರಾಧನೆಯು. ವಿ. ಅ. ಇಂದ್ರದೇವರು ಉತ್ತಮಾಧಿಕಾರಿ. ತ್ರಿಲೋಕರಕ್ಷಣೆಯಲ್ಲಿ ಶ್ರೀಹರಿಯಿಂದ ನಿಯುಕ್ತರು. ಕಂಟಕನಾದ ವೃತ್ರನನ್ನು ಕೊಂದದ್ದರಿಂದ ಅವರಿಗೆ ಪಾಪ ಬರಲಿಲ್ಲ. ಆದರೂ ಲೋಕಶಿಕ್ಷಣಾರ್ಥವಾಗಿ ಪಾಪ ಪ್ರಾಯಶ್ಚಿತ್ತರೂಪವಾಗಿ ಅಶ್ವಮೇಧವನ್ನು ಅನುಷ್ಠಾನ ಮಾಡಿದರೆಂದು ತಿಳಿಯಬೇಕು. || ೧೮ ||

ಅವರನ್ನು ಬ್ರಹ್ಮಹತ್ಯಾ ಪಾಪಾಭಿಮಾನಿಯು ಅಭಿಭವಗೊಳಿಸಲಾಗಲಿಲ್ಲ. ಈಶಾನ್ಯ ದಿಕ್ಕಿನ ದೇವತೆಯಿಂದ ಆ ಪಾಪಾಭಿಮಾನಿಯ ಬಲವು ಕುಗ್ಗಿಸಲ್ಪಟ್ಟಿತ್ತು. ಪರೀಕ್ಷಿದ್ರಾಜನೇ, ಬ್ರಹ್ಮರ್ಷಿಗಳು ಇಂದ್ರದೇವರ ಬಳಿಗೆ ಬಂದು ಶ್ರೀಹರಿಯ ಪೂಜಾರೂಪವಾದ ಅಶ್ವಮೇಧದಿಂದ ಆ ಇಂದ್ರದೇವರಿಗೆ ವಿಧಿವತ್ತಾಗಿ ದೀಕ್ಷೆ ಕೊಟ್ಟರು. ಶ್ರೀಹರಿಯ ಮಾಹಾತ್ಮ್ಯ ಜ್ಞಾನವಿಲ್ಲದೆ ಮಾಡಿದ ಅಶ್ವಮೇಧವು

ಅಥೇಜ್ಯಮಾನೇ ಪುರುಷೇ ಸರ್ವಭೂತಮಯಾತ್ಮನಿ ।
ಅಶ್ವಮೇಧೇ ಮಹೇಂದ್ರೇಣ ವಿತತೇ ಬ್ರಹ್ಮವಾದಿಭಿಃ ॥ ೧೯ ॥
ಸ ವೈ ತ್ವಾಷ್ಟ್ರವಧೋ ಭೂಯಾನಪಿ ಪಾಪಃ ಪರಂತಪ ।
ನೀತಸ್ತೇನೈವ ಶೂನ್ಯಾಯ ನೀಹಾರ ಇವ ಭಾನುನಾ ॥ ೨೦ ॥

ಬ್ರಹ್ಮವಾದಿಗಳಿಂದ ವಿತತೇ = ವಿಸ್ತಾರವಾಗಿ ಅನುಷ್ಠಿತವಾದ ಅಶ್ವಮೇಧ ಯಾಗದಲ್ಲಿ ಮಹೇಂದ್ರರಿಂದ ಸರ್ವಭೂತಮಯಾತ್ಮಾನಿ–ಎಲ್ಲ ಚೇತನರಲ್ಲಿ ಪ್ರಧಾನನೂ ಅಂತರ್ಯಾಮಿಯೂ ಆದ ಪುರುಷೇ= ಯಜ್ಞಪುರುಷನಾದ ಶ್ರೀಹರಿಯು ಇಜ್ಯಮಾನೇ (ಸತಿ)= ಪೂಜಿಸಲ್ಪಡುತ್ತಿರಲು. ಅಥ = ಸಾಂಗ ಯಜ್ಞದ ಕಾರಣ ದಿಂದ ಸಃ–ಆ ತ್ವಾಷ್ಟ್ರವಧಃ=ವೃತ್ರವಧೆಯಿಂದ ಬಂದ ಪಾಪವು ಭೂಯಾನ್ ಅಪಿ= ದೊಡ್ಡದೇ ಆಗಿದ್ದರೂ ತೇನ=ಆ ಯಾಗದಿಂದ, ಆ ಪುರುಷನಿಂದ ಭಾನುನಾ– ಸೂರ್ಯನಿಂದ ನೀಹಾರಃ ಇವ=ಮಂಜಿನಂತೆ ಶೂನ್ಯಾಯ–ಸ್ವರೂಪನಾಶಕ್ಕೆ ನೀತಃ ಏವ=ಹೊಂದಿಸಲ್ಪಟ್ಟಿತು. ವೈ=' ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾ- ತ್ಕುರುತೇ ' ಎಂಬ ಭಗವದ್ವಚನದಂತೆ ಶ್ರೀಹರಿಯ ಜ್ಞಾನದಿಂದ ಪಾಪವು ಸರ್ವಥಾ ನಾಶವಾಗಿದ್ದರೂ ಅಶ್ವಮೇಧದಿಂದ ಇಂದ್ರದೇವರಿಗೆ ಮಹತ್ವಾತಿಶಯವು ಬಂದಿತೆಂದು ಸೂಚಿಸಿರುವರು. ಸರ್ವದೇವಮಯಾತ್ಮನಿ ಎಂಬ ಪಾಠದಲ್ಲಿ ಸರ್ವದೇವ ಪ್ರಧಾನನೂ ಅಂತರ್ಯಾಮಿಯೂ ಎಂದರ್ಥ. ॥ ೧೯, ೨೦ ॥

ಸ ವಾಜಿಮೇಧೇನ ಯಥೋದಿತೇನ
ವಿತಾಯಮಾನೇನ ಮರೀಚಿಮಿಶ್ರೈಃ ।
ಇಷ್ಟ್ವಾಽಪಿ ಯಜ್ಞಂ ಪುರುಷಂ ಪುರಾಣ-
ಮಿಂದ್ರೋ ಮಹಾನಾಸ ವಿಧೂತಪಾಪಃ ॥ ೨೧ ॥

ಇದು ಹೇಗೆ ತಿಳಿದುಬರುತ್ತದೆ? ಎಂದರೆ ಹೇಳುತ್ತಾರೆ. ವಿಧೂತಪಾಪಃ ಅಪಿ=ಜ್ಞಾನದಿಂದಲೇ ಪಾಪವನ್ನು ಕಳೆದುಕೊಂಡವರಾದಾಗ್ಯೂ ಸಃ ಇಂದ್ರಃ=

ಫಲಕಾರಿಯಾಗಲಿಲ್ಲ. ಬ್ರಹ್ಮವಾದಿಗಳು ವಿಸ್ತಾರವಾಗಿ ಆ ಯಾಗವನ್ನು ಅನುಷ್ಠಾನ ಮಾಡಿದ್ದರು. ಇಂದ್ರದೇವರು ಸಮಸ್ತ ಚೇತನಪ್ರಧಾನನೂ ಅಂತರ್ಯಾಮಿಯೂ ಆದ ಯಜ್ಞಾಧಿಪತಿ ಶ್ರೀಹರಿಯನ್ನು ಪೂಜಿಸಿದರು. ಹೀಗೆ ಯಜ್ಞವು ಸಾಂಗ ವಾಗಿದ್ದುದರಿಂದ ಆ ವೃತ್ರವಧೆಯ ಪಾಪವು ಅತಿಶಯವಾಗಿದ್ದರೂ ಆ ಯಾಗದಿಂದ— ಆ ಯಜ್ಞಪುರುಷನಿಂದ—ಸೂರ್ಯನಿಂದ ಮಂಜಿನಂತೆ ಸಂಪೂರ್ಣವಾಗಿ ಸ್ವರೂಪ ನಾಶಕ್ಕೆ ಈಡಾಯಿತು. ಇಂದ್ರದೇವರು ಜ್ಞಾನಿಗಳಾಗಿದ್ದು ಮೊದಲೇ ಬ್ರಹ್ಮಹತ್ಯೆಯು ನಷ್ಟವಾಗಿತ್ತಾಗಿ ಅಶ್ವಮೇಧದಿಂದ ಅತಿಶಯ ಮಹತ್ವವನ್ನು ಹೊಂದಿದರು. ಇಂದ್ರ ದೇವರು ಜ್ಞಾನದಿಂದಲೇ ಪಾಪರಹಿತರು. ವಿಧಿವತ್ತಾಗಿ ಮರೀಚಿ ಮೊದಲಾದ ಋಷಿವರ್ಯರಿಂದ ವಿಸ್ತೃತವಾಗಿ ಅನುಷ್ಠಾನ ಮಾಡಿಸಲ್ಪಟ್ಟ ಅಶ್ವಮೇಧದಿಂದ

ಆ ಇಂದ್ರದೇವರು ಯಥೋದಿತೇನ=ವಿಧಿಗನುಗುಣವಾಗಿ ಉಕ್ತವಾದ ಮರೀಚಿ-ಮಿಶ್ರೈಃ=ಮರೀಚಿಯೇ ಮುಖ್ಯರಾದ ಋಷಿಗಳಿಂದ ವಿತಾಯಮಾನೇನ-ವಿಸ್ತೃತ ವಾಗಿ ಅನುಷ್ಠಾನ ಮಾಡಿಸಲ್ಪಟ್ಟ ವಾಜಿಮೇಧೇನ=ಅಶ್ವಮೇಧದಿಂದ ಪುರಾಣಂ=ಪುರುಷಂ=ಪುರಾಣಪುರುಷನಾದ ಯಜ್ಞಂ=ವಿಷ್ಣುವನ್ನು ಇಷ್ಟ್ವಾ=ಪೂಜಿಸಿ ಮಹಾನ್ ಆಸ=' ಇಂದ್ರೋ ವೈ ವೃತ್ರಂ ಹತ್ವಾ ಮಹಾನಭವತ್ ' ಎಂಬ ಶ್ರುತಿ ಯಲ್ಲಿ ಹೇಳಿದಂತೆ ಅತಿಶಯ ಮಹತ್ವವುಳ್ಳವರಾಗಿ ಆದರು. ' ಅಧಿಯಜ್ಞಂ ' ಎಂಬ ಪಾಠದಲ್ಲಿ ಯಜ್ಞವನ್ನು ಹೊಂದಿದ, ಯಜ್ಞಾಧಿಷ್ಠಿತನಾದ ಎಂದು ಅರ್ಥ. || ೨೧ ||

ಇದಂ ಮಹಾಖ್ಯಾನಮಶೇಷಪಾಪ್ಮನಾಂ
ಪ್ರಕ್ಷಾಲನಂ ತೀರ್ಥಪದಾನುಕೀರ್ತನಮ್ ।
ಭಕ್ತ್ಯುಚ್ಛ್ರಯಂ ಭಕ್ತಜನಾನುವರ್ಣನಂ
ಮಹೇಂದ್ರಮೋಕ್ಷಂ ವಿಜಯಂ ಮರುತ್ವತಃ ॥ ೨೨ ॥

ಪಠೇಯುರಾಖ್ಯಾನಮಿದಂ ಸದಾ ಬುಧಾಃ
ಶೃಣ್ವಂತ್ಯಥೋ ಪರ್ವಣಿ ಪರ್ವಣೀಂದ್ರಿಯಮ್ ।
ಧನ್ಯಂ ಯಶಸ್ಯಂ ನಿಖಿಲಾಘಮೋಚನಂ
ರಿಪುಂಜಯಂ ಸ್ವಸ್ತ್ಯಯನಂ ತಥಾಽಽಯುಷಮ್ ॥ ೨೩ ॥

ಇದನ್ನು ಇಂದ್ರದೇವರು ಸ್ವಾರ್ಥಕ್ಕಾಗಿ ಮಾಡಲಿಲ್ಲ. ಲೋಕೋಪಕಾರ ಕ್ಕಾಗಿ ಮಾಡಿದರು. ಏಕೆಂದರೆ, ಇಂದ್ರದೇವರ ಪಾಪವು ಹೋಯಿತು. ಆ ಚರಿತ್ರೆಯ ಶ್ರವಣಾದಿಗಳಿಂದ ಎಲ್ಲ ಅಭೀಷ್ಟಗಳೂ ಸಿದ್ಧಿಸುವುವು ಎಂದು ಈ ಉಪಾಖ್ಯಾನವನ್ನು ಸ್ತೋತ್ರಮಾಡುತ್ತಾರೆ. ಇದಂ=ಈ ಮಹಾಖ್ಯಾನಂ=ದೊಡ್ಡವರ ಚರಿತ್ರೆಯು ಅಶೇಷ ಪಾಪ್ಮನಾಂ=ಎಲ್ಲ ಪಾಪಗಳ ಪ್ರಕ್ಷಾಲನಂ=ಶುದ್ಧೀಕರಣ ಮಾಡುವುದು, ತೀರ್ಥಪದಾನುಕೀರ್ತನಂ = ಪವಿತ್ರಚರಣನಾದ ಶ್ರೀಹರಿಯ ಕೀರ್ತನೆಯಿಂದ ಕೂಡಿದುದು. ಭಕ್ತ್ಯುಚ್ಛ್ರಯಂ=ಭಕ್ತಿಯನ್ನು ಬೆಳೆಸು ವುದು. ಭಕ್ತಜನಾನುವರ್ಣನಂ=ಭಕ್ತಜನರ ವರ್ಣನೆಯುಳ್ಳದ್ದು. ಮಹೇಂದ್ರ

ಪುರಾಣಪುರುಷನಾದ ವಿಷ್ಣುವನ್ನು ಪೂಜಿಸಿ ' ಇಂದ್ರೋ ವೈ ವೃತ್ರಂ ಹತ್ವಾ ಮಹಾನಭವತ್ ' ಎಂಬ ಶ್ರುತಿಯಂತೆ ಅತಿಶಯ ಮಹತ್ವವಂತರಾದರು.

ಈ ಮಹನೀಯರ ಚರಿತ್ರೆಯು ಎಲ್ಲ ಪಾಪಗಳನ್ನೂ ಹೋಗಲಾಡಿಸುವುದು. ಪವಿತ್ರಪಾದನಾದ ಶ್ರೀಹರಿಯ ಕೀರ್ತನೆಯಿಂದ ಕೂಡಿದುದು. ಭಕ್ತಿಯನ್ನು ಹೆಚ್ಚಿಸುವುದು. ಭಕ್ತಜನರ ವರ್ಣನೆಯುಳ್ಳದ್ದು. ಇಂದ್ರದೇವರು ಪಾಪಮುಕ್ತಿ ಯನ್ನು ಲೋಕಕ್ಕೆ ತೋರಿಸಿಕೊಟ್ಟದ್ದು. ಇಂದ್ರದೇವರ ವಿಶಿಷ್ಟಜಯುವನ್ನು ಹೇಳುವುದು. ಆದ್ದರಿಂದ ಧನ್ಯತೆಯನ್ನು ಕೊಡುವ, ಕೀರ್ತಿಕರವಾದ, ಎಲ್ಲ ಪಾಪ ಪರಿಹಾರಕವಾದ, ಶತ್ರುಜಯಕರವಾದ, ಮಂಗಳಕರ ಮತ್ತು ಆಯುಷ್ಕರವಾದ,

ಮೋಕ್ಷಂ=ಇಂದ್ರದೇವರ ಪಾಪ ಮುಕ್ತಿಯುಳ್ಳದ್ದು. ಮರುತ್ವತಃ=ಇಂದ್ರದೇವರ ವಿಜಯಂ=ವಿಶಿಷ್ಟಜಯವನ್ನು ತಿಳಿಸುವುದು. ಅಥೋ=ಆ ಕಾರಣದಿಂದ ಬುಧಾಃ=ಜ್ಞಾನಿಗಳು ಧನ್ಯಂ=ಧನ್ಯತೆಯನ್ನು ತಂದುಕೊಡುವ ಯಶಸ್ಯಂ=ಕೀರ್ತಿಕರವಾದ ನಿಖಿಲಾಘಮೋಚನಂ=ಎಲ್ಲರ ಪಾಪಗಳನ್ನೂ ಪರಿಹರಿಸುವ ರಿಪುಂಜಯಂ=ಶತ್ರುಜಯವನ್ನುಂಟುಮಾಡುವ ಸ್ವಸ್ತ್ಯಯನಂ = ಮಂಗಳಕರವಾದ ತಥಾ = ಮತ್ತು ಆಯುಷಂ=ದೀರ್ಘಾಯುಸ್ಸನ್ನು ಕೊಡುವ ಇಂದ್ರಿಯಂ=(೧) ಇಂದ್ರಿಯಗಳಿಗೆ ಶಕ್ತಿಪ್ರದವಾದ (೨) ಇಂದ್ರಸಂಬಂಧಿಯಾದ (ಇದರಿಂದ ಯಾರ ಆಖ್ಯಾನವೆಂಬುದನ್ನು ಹೇಳಿದಂತಾಯಿತು.) ಇದಂ ಆಖ್ಯಾನಂ = ಈ ಚರಿತ್ರೆಯನ್ನು ಪರ್ವಣಿ ಪರ್ವಣಿ=ಪ್ರತಿ ಪರ್ವಕಾಲದಲ್ಲಿಯೂ ಸದಾ=ಯಾವಾಗಲೂ ಪಠೇಯುಃ=ಪಠನ ಮಾಡಬೇಕು. ಶೃಣ್ವಂತಿ=ಕೇಳುವರು. (ಕೇಳಬೇಕು.) ಇಂದ್ರೋಪಾಖ್ಯಾನವನ್ನು ಕೇಳಿದವರಿಗೂ ಸರ್ವಪಾಪನಿವೃತ್ತಿಯನ್ನು ಹೇಳಿದ್ದರಿಂದ ಮಹಾತ್ಮರಾದ ಇಂದ್ರದೇವರಿಗೆ ಪಾಪಲೇಪವಿಲ್ಲ. ಲೋಕಸಂಗ್ರಹಕ್ಕಾಗಿ ಪ್ರಾಯಶ್ಚಿತ್ತಾನುಷ್ಠಾನ ಮಾಡಿದರೆಂಬುದನ್ನು ದೃಢಪಡಿಸಿರುವರು. 'ಇಂದ್ರೋಽಪ್ಯವಾಪ ಸ್ವಸ್ಥಾನಂ ಇಷ್ಟ್ವಾವಿಷ್ಣುಂ ವಿಪಾಪಕಃ। ಧರ್ಮವೃದ್ಧ್ಯರ್ಥಮೇವೈತತ್ಪಾಪಮಾಸೀಚ್ಛಚೀಪತೇಃ। ನ ಹಿ ಲೋಕಾವನಂ ಪಾಪಂ ತ್ರೈಲೋಕೇಶಸ್ಯ ವಜ್ರಿಣಃ। ವೃತ್ರಂ ಹತ್ವಾ ಮಹಾನಾಸೇತ್ಯಾದಿ ವೇದಪದಂ ಚ ಯತ್। ಕ್ವಚಿತ್ಪಾಪಂ ಚ ಪುಣ್ಯಾನಾಂ ವೃದ್ಧ್ಯೇ ಭವತಿ ಸ್ಫುಟಮ್। ವೃತ್ರಂ ಹತ್ವಾ ಯಥೇಂದ್ರಸ್ಯ ಜನಾ ಧರ್ಮಾಭಿವೃದ್ಧಯೇ। ದೇವಾನಾಂ ವಾ ಮುನೀನಾಂ ವಾ ಭವೇದೇವಂ ನ ವೈ ನೃಣಾಮ್। ಪಾಪಂ ಯತ್ಪುಣ್ಯಮೇತಚ್ಚಾಸುರಾಣಾಂ ವಿಲೋಮತಃ। ಏವಂ ಹಿ ಸ್ಕಾಂದವಚನಂ ನ ಪಾಪಂ ತಚ್ಛಚೀಪತೇಃ ॥' ಎಂಬ ಪ್ರಮಾಣವು ಇದಕ್ಕೆ ಉಪಷ್ಟಂಭಕವಾಗಿದೆ. ॥ ೨೨, ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ತ್ರಯೋದಶೋಽಧ್ಯಾಯಃ

ಇಂದ್ರಿಯ ಶಕ್ತಿಪ್ರದವಾದ ಇಂದ್ರಸಂಬಂಧಿ ಈ ಆಖ್ಯಾನವನ್ನು ಜ್ಞಾನಿಗಳು ಪ್ರತಿ ಪರ್ವಕಾಲದಲ್ಲಿಯೂ ಯಾವಾಗಲೂ ಪಠನ ಮಾಡಬೇಕು. ಕೇಳಬೇಕು.

ಅಥ ಚತುರ್ದಶೋಽಧ್ಯಾಯಃ

ಪರೀಕ್ಷಿದುವಾಚ—

ರಜಸ್ತಮಃ ಸ್ವಭಾವಸ್ಯ ಬ್ರಹ್ಮನ್ ವೃತ್ರಸ್ಯ ಪಾಪ್ಮನಃ ।
ನಾರಾಯಣೇ ಭಗವತಿ ಕಥಮಾಸೀದ್ದೃಢಾ ರತಿಃ ॥ ೧ ॥

ಇಲ್ಲಿ ಚಿತ್ರಕೇತುವಿನ ಇತಿಹಾಸವನ್ನು ಕೇಳುವುದರಿಂದ ಸಂಸಾರದಲ್ಲಿ ವಿರಕ್ತಿಯು ಹೆಚ್ಚಿ ಶ್ರೀಹರಿಯ ಚರಣಾರವಿಂದಗಳಲ್ಲಿ ಭಕ್ತಿಯು ಹುಟ್ಟುವುದು. ಅದಕ್ಕಾಗಿ ಪರೀಕ್ಷಿದ್ರಾಜರ ಪ್ರಶ್ನೆಯ ಮೂಲಕ ಹಿಂದಿನ ಕಥಾಶೇಷವಾಗಿ ಚಿತ್ರಕೇತುರಾಜರ ಕಥೆಯನ್ನು ನಿರೂಪಿಸುತ್ತಾರೆ. 'ಅಹಂ ಹರೇ ತವ ಪಾದೈಕ-ಮೂಲದಾಸಾನುದಾಸೋ ಭವಿತಾಸ್ಮಿ ಭೂಯಃ' ಎಂದು ವೃತ್ರನು ಹೇಳಿದ್ದನ್ನು ನೋಡಿದರೆ ಅವನು ಭಗವದ್ಭಕ್ತನೆಂದು ಕಂಡುಬರುವುದು. ಭಗವದ್ಭಕ್ತರು ಎರಡು ಬಗೆ: (೧) ನಾರಾಯಣಾಯನರು. (೨) ನಾರಾಯಣ ಪರಾಯಣರು. ಅಸುರ ಜಾತಿಯ ವೃತ್ರನಿಗೆ ಎರಡು ಬಗೆಯ ಭಕ್ತತ್ವವೂ ಸಂಭವಿಸುವುದಿಲ್ಲವೆಂದು ಪರೀಕ್ಷಿದ್ರಾಜರು ಮುಂದಿನ ಏಳು ಶ್ಲೋಕಗಳಿಂದ ಪ್ರಶ್ನಿಸುತ್ತಾರೆ. ಬ್ರಹ್ಮನ್= ಶುಕಾಚಾರ್ಯರೇ, ರಜಸ್ತಮಃ ಸ್ವಭಾವಸ್ಯ=ರಾಜಸ ತಾಮಸ ಸ್ವಭಾವದ ಅಸುರ ಜಾತಿಯವನಾದ ಆದ್ದರಿಂದಲೇ ಪಾಪ್ಮನಃ=ಪಾಪಿಯಾದ ವೃತ್ರನಿಗೆ ಭಗವಂತನಾದ ನಾರಾಯಣನಲ್ಲಿ ಧೃಢಾರತಿಃ=ನಿರತಿಶಯ ಭಕ್ತಿಯು ಕಥಂ ಆಸೀತ್=ಹೇಗೆ ಹುಟ್ಟಿತು? ॥ ೧ ॥

ದೇವಾನಾಂ ಶುದ್ಧಸತ್ವಾನಾಮೃಷೀಣಾಂ ಚಾಮಲಾತ್ಮನಾಮ್ ।
ಭಕ್ತಿರ್ಮುಕುಂದಚರಣೇ ನ ಪ್ರಾಯೇಣೋಪಜಾಯತೇ ॥ ೨ ॥

ದೇವತೆ ಮೊದಲಾದವರಿಗೇ ಶ್ರೀಹರಿಯ ಪಾದಗಳಲ್ಲಿ ಭಕ್ತಿಯು ದುರ್ಲಭವೆಂದಮೇಲೆ ಅಸುರಸ್ವಭಾವದವನಿಗೆ ದುರ್ಲಭವೆಂದು ಹೇಳುವುದೇನು? ಎಂಬ

ಹದಿನಾಲ್ಕನೆಯ ಅಧ್ಯಾಯ

ಪರೀಕ್ಷಿದ್ರಾಜರು—ಬ್ರಹ್ಮಜ್ಞಾನಿಗಳೇ, ರಾಜಸ-ತಾಮಸಸ್ವಭಾವದ ಅಸುರ ಜಾತಿಯ ಪಾಪಿ ವೃತ್ರನಿಗೆ ಶ್ರೀಹರಿಯಲ್ಲಿ ನಿರತಿಶಯ ಭಕ್ತಿಯು ಹೇಗೆ ಹುಟ್ಟಿತು? ಅಧಿಕ ಸತ್ವಶರೀರಿಗಳೂ, ಶುದ್ಧಮನಸ್ಕರೂ, ತಪಸ್ಸಿನಿಂದ ಮನೋದೋಷವನ್ನು ಕಳೆದುಕೊಂಡವರೂ ಆದ ದೇವತೆಗಳಿಗೂ, ಋಷಿಗಳಿಗೂ ಶ್ರೀಹರಿಯ ಪಾದಾರವಿಂದಗಳಲ್ಲಿ ಭಕ್ತಿಯು (ನಾರಾಯಣ ಪರಾಯಣತೆಯು) ಪ್ರಾಯಿಕವಾಗಿ (ಬ್ರಹ್ಮಾದಿ

ಅಭಿಪ್ರಾಯದಿಂದ ಹೇಳುತ್ತಾರೆ. ಶುದ್ಧಸತ್ವಾನಾಂ=ಶುದ್ಧವಾದ ಸತ್ವಗುಣದಿಂದ (ಹೆಚ್ಚಾಗಿ ಸತ್ವಗುಣದಿಂದ) ಮಾಡಿದ ಶರೀರವುಳ್ಳ ಆದ್ದರಿಂದಲೇ ಶುದ್ಧಮನಸ್ಕರಾದ ಅಮಲಾತ್ಮನಾಂ=ತಪಸ್ಸಿನಿಂದ ಮನಸ್ಸಿನ ದೋಷಗಳನ್ನು ಕಳೆದುಕೊಂಡು ಇರುವ ದೇವಾನಾಂ=ದೇವತೆಗಳಿಗೂ ಋಷೀಣಾಂ ಚ=ಋಷಿಗಳಿಗೂ ಮುಕುಂದಚರಣೇ=ಶ್ರೀಹರಿಯ ಪಾದಾರವಿಂದಗಳಲ್ಲಿ ಭಕ್ತಿಯು (ನಾರಾಯಣ ಪರಾಯಣತೆಯು) ಪ್ರಾಯೇಣ=ಪ್ರಾಯಿಕವಾಗಿ (ಬ್ರಹ್ಮಾದಿಗಳನ್ನು ಕೆಲವರನ್ನು ಬಿಟ್ಟು) ನ ಉಪ-ಜಾಯತೇ=ಬರುವುದಿಲ್ಲ. ಇಲ್ಲಿ ವಿಜಯಧ್ವಜತೀರ್ಥರು ಪ್ರಾಯಶಬ್ದದ ಸ್ವಾರಸ್ಯ ವನ್ನು ಹೀಗೆ ವಿವರಿಸಿರುವರು. ದೇವತೆಗಳೂ ಋಷಿಗಳೂ ನಿರಂತರ ಭಕ್ತಿಯನ್ನು ಮಾಡಲು ಯೋಗ್ಯರು. ಆದರೆ ಆಗಾಗ ಅಸುರಾವೇಶದಿಂದ ದ್ವೇಷವನ್ನೂ ಮಾಡು ವರು. ಇದು ಅಲ್ಪವಾದರೂ ಹೆಚ್ಚೆಂದು ಔಪಚಾರಿಕವಾಗಿ ಹೇಳಿರುವರು. ಹಾಗಲ್ಲ ದಿದ್ದರೆ 'ಶುದ್ಧ ಸತ್ವಾನಾಂ' ಇತ್ಯಾದಿ ವಿಶೇಷಣಗಳೂ 'ವಿಶಿಷ್ಟಾನಾಂ ದೇವಾನಾಂ ಗುಣಲಿಂಗಾನಾಂ' ಇತ್ಯಾದಿಗಳಿಂದ ಮುಂದೆ ಹೇಳುವ ಅತ್ಯಂತಿಕ ಭಕ್ತಿಲಕ್ಷಣವೂ ಅಸಂಗತವಾಗಬೇಕಾದೀತು. ಆದ್ದರಿಂದ 'ಪ್ರಾಯ' ಶಬ್ದಕ್ಕೆ ಬಹುವಾಗಿ ಎಂದು ಅರ್ಥವಿದ್ದರೂ ಇಲ್ಲಿ ಅಲ್ಪವೆಂದೇ ಅರ್ಥವನ್ನು ಅಂಗೀಕರಿಸಬೇಕು. ಅಥವಾ ಮುಂದಿನ ಪ್ರಮಾಣವನ್ನು ಅನುಸರಿಸಿ ಭಕ್ತಿ ಮಾಡುವುದು ದುರ್ಲಭವೆಂದು ತಿಳಿಸಲು ಹಾಗೆ ಹೇಳಿರುವರು. ದೇವತೆಗಳಲ್ಲಿಯೂ ಋಷಿಗಳಲ್ಲಿಯೂ ಹರಿಭಕ್ತಿ ಇಲ್ಲವೆಂದಲ್ಲ. ಅಥವಾ ಭಕ್ತರು ಬಹುಮಂದಿ (ಕಂಡುಬಂದು) ಇರುವುದರಿಂದ ಭಕ್ತಿಯ ತಾರತಮ್ಯ ವನ್ನು ತಿಳಿಸಲು ಹಾಗೆ ಹೇಳಿರುವರು. ಇದರಿಂದ ವೃತ್ರನಿಗೆ ನಾರಾಯಣ ಪರಾ ಯಣತೆಯು ಅಸಂಭಾವಿತವೆಂದು ಹೇಳಿದಂತಾಯಿತು. || ೨ ||

ರಜೋಭಿಃ ಸಮಸಂಖ್ಯಾತಾಃ ಪಾರ್ಥಿವೈರಿಹ ಜಂತವಃ ।
ತೇಷಾಂ ಯೇ ಕೇಚನೇಹಂತೇ ಶ್ರೇಯೋ ವೈ ಮನುಜಾದಯಃ ॥

ಇದನ್ನೇ ಹೇಳುತ್ತಾರೆ. ಇಹ=ಕರ್ಮಭೂಮಿಯಲ್ಲಿ ಜಂತವಃ=ಜೀವರು (ಶರೀರ ಉಳ್ಳವರು ಮತ್ತು ಶರೀರ ಇಲ್ಲದವರು) ಪಾರ್ಥಿವೈಃ=ಪೃಥಿವಿಯ ರಜೋಭಿಃ=ಧೂಳುಗಳಿಗೆ ಸಮಸಂಖ್ಯಾತಾಃ=ಸಮಾನವಾದ ಅನಂತಸಂಖ್ಯಾವುಳ್ಳವ ರಾಗಿ ಇರುವರು. ಭೂಮಿಯ ಧೂಳುಗಳು ಎಷ್ಟಿವೆಯೋ ಅಷ್ಟು ಶರೀರವಿಶಿಷ್ಟ ಜೀವರಿರುವರು. ಶರೀರವಿಲ್ಲದ ಬೇರೆ ಜೀವರು ಅನಂತವಾಗಿರುವರು. 'ಪರಮಾಣು ಪ್ರದೇಶೇಪಿ ಹ್ಯನಂತಾಃ ಪ್ರಾಣಿರಾಶಯಃ' ಎಂದು ಶ್ರುತಿಯಿದೆ. ಅವರನ್ನು ಪರಿಗಣಿ ಸಿಲ್ಲ. ಶರೀರವಿಶಿಷ್ಟರನ್ನೇ ಇಲ್ಲಿ ಹೇಳಿರುವುದು. ತೇಷಾಂ (ಮಧ್ಯೇ)=ಅವರಲ್ಲಿ

ಗಳನ್ನು ಕೆಲವರನ್ನು ಬಿಟ್ಟು) ಹುಟ್ಟುವುದಿಲ್ಲ. ಈ ಭೂಮಿಯಲ್ಲಿ ಜೀವರು ಪೃಥಿವಿಯ ಧೂಳುಗಳಿಗೆ ಸಮಾನವಾದ ಅನಂತ ಸಂಖ್ಯೆಯಲ್ಲಿರುವರು. ಅವರಲ್ಲಿ ಕೆಲವರು ಮನುಷ್ಯರೇ ಮೊದಲಾದವರು ಸ್ವರ್ಗವನ್ನು ಬಯಸಿ ಪ್ರವೃತ್ತರಾಗುವರು. ಇದ

ಯೇ ಕೇಚನ=ಕೆಲವರು ಮನುಜಾದಯಃ=ಮನುಷ್ಯ ಮುಂತಾದವರು ಶ್ರೇಯಃ=ಸ್ವರ್ಗ ಮೊದಲಾದ ರೂಪದ ಶ್ರೇಯಸ್ಸನ್ನು ಉದ್ದೇಶಿಸಿ ಈಹಂತೇ=ಪ್ರವೃತ್ತರಾಗುವರು. ವೈ='ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ' ಎಂಬ ವಾಕ್ಯವನ್ನು ಸೂಚಿಸಿರುವರು. ಅಥವಾ ಬಯಸುವವರಲ್ಲಿಯೂ ವಿಶೇಷವನ್ನು ತೋರಿಸಿರುವರು. ಮನುಷ್ಯ ಮೊದಲಾದವರೇ ಧರ್ಮಮಾಡುವರು. ಅಸುರರು ಧರ್ಮವಿಮುಖರಾದ್ದರಿಂದ ಧರ್ಮದಲ್ಲಿ ಪ್ರವೃತ್ತರಾಗುವುದಿಲ್ಲ. || ೩ ||

ಪ್ರಾಯೋ ಮುಮುಕ್ಷವಸ್ತೇಷಾಂ ಕೇಚನೇಹ ದ್ವಿಜೋತ್ತಮಾಃ ।
ಮುಮುಕ್ಷೂಣಾಂ ಸಹಸ್ರೇಷು ಕಶ್ಚಿನ್ಮುಚ್ಯೇತ ಸಿಧ್ಯತಿ ॥ ೪ ॥

ತೇಷಾಂ=ಸ್ವರ್ಗ ಮೊದಲಾದುವು ಕ್ಷಣನಾಶ್ಯವಾದ ಸುಖವುಳ್ಳವುಗಳೆಂದು ತಿಳಿದು ಪ್ರವೃತ್ತರಾಗುವ ಮನುಷ್ಯರೇ ಮೊದಲಾದ ಜೀವರಾಶಿಗಳ ಮಧ್ಯದಲ್ಲಿ ಇಹ=ಜಗತ್ತಿನ ಪ್ರಾಯಃ=ಪ್ರಾಯಿಕವಾಗಿ ಕೇಚನ=ಕೆಲವರೇ ಮುಮುಕ್ಷವಃ=ಮೋಕ್ಷವನ್ನು ಅಪೇಕ್ಷಿಸುವವರು. ಅಥವಾ ಪ್ರಾಯೋ ಅಮುಮುಕ್ಷವಃ ಎಂದು ಪದಚ್ಛೇದ ಮಾಡಿ ತೇಷಾಂ=ಮನುಷ್ಯರೇ ಮೊದಲಾದವರ ಮಧ್ಯದಲ್ಲಿ ಅಮುಮುಕ್ಷವಃ=ಮೋಕ್ಷೇಚ್ಛೆ ಇಲ್ಲದವರೇ ಪ್ರಾಯಃ=ಬಹುಮಂದಿ. ಕೇಚನ=ಕೆಲವರು ಮಾತ್ರ ಮುಮುಕ್ಷವಃ=ಮೋಕ್ಷೇಚ್ಛುಗಳು. ಹೇ ದ್ವಿಜೋತ್ತಮಾಃ (ಮ)=ಬ್ರಾಹ್ಮಣಶ್ರೇಷ್ಠರೇ, ತೇಷಾಂ ಮುಮುಕ್ಷೂಣಾಂ ಮಧ್ಯೇ=ಮುಕ್ತಿಯನ್ನು ಅಪೇಕ್ಷಿಸುವ ಅವರಲ್ಲಿಯೂ ಕೇಚನ=ಕೆಲವರೇ ಪ್ರಯತಂತೇ=ಮೋಕ್ಷಪ್ರಾಪ್ತಿಗಾಗಿ ಪ್ರಯತ್ನಮಾಡುವರು. (ತೇಷು) ಸಹಸ್ರೇಷು = ಹಾಗೆ ಪ್ರಯತ್ನಮಾಡುವ ಸಾವಿರಾರು ಅಧಿಕಾರಿ ಜೀವರಾಶಿಗಳಲ್ಲಿ ಕಶ್ಚಿತ್=ಯಾವನೋ ಒಬ್ಬ ಅಧಿಕಾರಿಯು ಮುಚ್ಯೇತ=ಸಂಸಾರದಿಂದ ಮುಕ್ತನಾಗುವನು. ತತ್ರಾಪಿ=ಸಂಸಾರದಿಂದ (ಹುಟ್ಟು ಸಾವುಗಳಿಂದ) ಮುಕ್ತರಾದವರಲ್ಲಿಯೂ ಅಂದರೆ ಮತ್ತೆ ಜನ್ಮಾದಿಗಳನ್ನು ಹೊಂದದೆ ಜ್ಞಾನಾನಂದಾದಿ ಪೂರ್ಣತೆಯನ್ನೂ ಪಡೆಯದೆ ಇರುವ (ಜೀವರ) ಮುಕ್ತರಲ್ಲಿ ಕಶ್ಚಿತ್ ಏವ=ಪೂರ್ಣಜ್ಞಾನಿಯೇ ಸಿಧ್ಯತಿ=ಆನಂದಾದಿಗಳಿಂದ ಪೂರ್ಣನಾಗುವನು. ಇಲ್ಲಿ ಮುಮುಕ್ಷವಃ ಎಂಬುದಕ್ಕೆ ಜೀವನ್ಮುಕ್ತೀಚ್ಛೆಯೆಂದರ್ಥಮಾಡಿ ಮುಚ್ಯತೇ=ಜೀವನ್ಮುಕ್ತರಾಗುವರೆಂದೂ ಅರ್ಥಮಾಡಿರುವರು. ಆ ಜೀವನ್ಮುಕ್ತರೆಲ್ಲರೂ ಸಿಧ್ಯತಿ=ತಮಗೆ ಯೋಗ್ಯವಾದ ಆನಂದಪ್ರಾಪ್ತಿಯೆಂಬ ಮುಕ್ತಿಯನ್ನು ಹೊಂದುವರು ಎಂದರ್ಥ. || ೪ ||

ಶಾಸ್ತ್ರಸಿದ್ಧ. ಆ ಜನರಲ್ಲಿ ಪ್ರಾಯಿಕವಾಗಿ ಕೆಲವರೇ ಮೋಕ್ಷಾಪೇಕ್ಷಿಗಳು. ಮೋಕ್ಷೇಚ್ಛೆ ಇಲ್ಲದವರೇ ಹೆಚ್ಚು. ಆ ಮುಮುಕ್ಷುಗಳಲ್ಲಿಯೂ ಕೆಲವರೇ ಮೋಕ್ಷಪ್ರಾಪ್ತಿಗಾಗಿ ಪ್ರಯತ್ನ ಮಾಡುವರು. ಹಾಗೆ ಪ್ರಯತ್ನ ಮಾಡುವ ಸಾವಿರಾರು ಮುಮುಕ್ಷುಗಳಲ್ಲಿ ಯಾವನೋ ಒಬ್ಬನು ಸಂಸಾರದಿಂದ ಮುಕ್ತನಾಗುವನು. ಆ ಜೀವನ್ಮುಕ್ತರಲ್ಲಿಯೂ

ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ ।
ಸುದುರ್ಲಭಃ ಪ್ರಶಾಂತಾತ್ಮಾ ಕೋಟಿಷ್ವಪಿ ಮಹಾಮುನೇ ॥ ೫ ॥

ಸಿದ್ಧಾನಾಂ=ಆನಂದಪೂರ್ಣರಾದ ಮುಕ್ತಾನಾಂ (ಮಧ್ಯೇ) ಅಪಿ=ಮುಕ್ತರಲ್ಲಿಯೂ (ನಾರಾಯಣಾಯನಃ)=ನಾರಾಯಣನೇ ಆಶ್ರಯನಾಗಿ ಉಳ್ಳವನು ಸುದುರ್ಲಭಃ–ಅತ್ಯಂತ ದುರ್ಲಭನು. ನಾರಾಯಣಾಯನಾನಾಂ ಕೋಟಿಷು ಅಪಿ=ಆ ನಾರಾಯಣಾಶ್ರಯರಾದವರ ಕೋಟಿಗಳಲ್ಲಿಯೂ, ಮಹಾಮುನೇ = ಹೇ ಮಹರ್ಷಿಗಳೇ, ಪ್ರಶಾಂತಾತ್ಮಾ– ಪ್ರಕೃಷ್ಟವಾದ ಭಗವನ್ನಿಷ್ಠೆಯಿಂದ ಕೂಡಿದ ಮನಸ್ಸುಳ್ಳ ಪ್ರಕೃಷ್ಟಾನಂದರೂಪನಾದ ನಾರಾಯಣ ಪರಾಯಣಃ–ನಾರಾಯಣನಲ್ಲಿಯೇ ಆಸಕ್ತನಾದವನು ಸುದುರ್ಲಭಃ=ಅತ್ಯಂತ ದುರ್ಲಭನು. ಬ್ರಹ್ಮದೇವರನ್ನು ಬಿಟ್ಟರೆ ಮತ್ತೊಬ್ಬನು ಅತ್ಯಂತ ದುರ್ಲಭನೆಂದರ್ಥ. ಈ ಮಾತು ಅಧಿಕಾರಿ ಜೀವರ ತಾರತಮ್ಯವನ್ನು ಇಟ್ಟುಕೊಂಡು ಹೇಳಿದ್ದು. ವಿ.ಅ. ಸಿದ್ಧರಾದವರೆಲ್ಲರೂ ನಾರಾಯಣಾಯನರು ಮತ್ತು ಶಾಂತಾತ್ಮರು (ಭಕ್ತಿಪೂರ್ಣರು.) ಸಿದ್ಧರಾದ ಮುಕ್ತರಲ್ಲಿಯೂ ನಾರಾಯಣ ಪರಾಯಣರು ಪ್ರಶಾಂತಾತ್ಮರೂ ಸುದುರ್ಲಭರೆಂದು ತಿಳಿಯಬೇಕು. ಪರ ಮತ್ತು ಪ್ರ ಉಪಸರ್ಗಗಳ ಸ್ವಾರಸ್ಯದಿಂದ ಬ್ರಹ್ಮಾದಿಗಳು ಕೆಲವರು ಮಾತ್ರ ನಾರಾಯಣ ಪರಾಯಣರು ಮತ್ತು ಪ್ರಶಾಂತಾತ್ಮರು. ಇದೇ ಅರ್ಥವನ್ನೇ ಗೀತೆಯಲ್ಲಿ 'ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ' ಇತ್ಯಾದಿ ಹೇಳಿದ್ದು. ಬ್ರಾಹ್ಮದಲ್ಲಿಯೂ 'ಅನಂತಾನಾಂ ತು ಜೀವಾನಾಂ ಯತಂತೇ ಕೇಚಿದೇವ ತು । ಮುಕ್ತ್ಯೈ, ತೇಷು ತು ಮುಚ್ಯಂತೇ ಕೇಚಿನ್ಮುಕ್ತೇಷು ಚ ಸ್ಫುಟಂ । ಕೇಚನೈವ ಹರಿಂ ಸಮ್ಯಕ್ ಬ್ರಹ್ಮರುದ್ರಾದಯೋ ವಿದುಃ । ಅನ್ಯೇಷಾಂ ಯಾವತಾ ಮುಕ್ತಿಸ್ತಾವಜ್ಜ್ಞಾನಂ ಹರೌ ಪರಮ್ ॥' ಎಂದೂ ಸತ್ತತ್ವದಲ್ಲಿ 'ಸರ್ವೇ ಮುಕ್ತಾ ಹರೌ ಭಕ್ತಾಸ್ತೇಷು ಬ್ರಹ್ಮೈವ ಮುಖ್ಯತಃ । ವಿಷ್ಣೋಃ ಪರಮಭಕ್ತಸ್ತು ತಸ್ಮಾಜ್ಜೀವಘನೋ ಮತಃ' ॥ ಎಂದೂ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು 'ನವಕೋಟ್ಯಸ್ತು ದೇವಾನಾಂ ಋಷಯಃ ಶತಕೋಟಯಃ ನಾರಾಯಣಾಯನಾಃ ಸರ್ವೇ ಯೇ ಕೇಚಿತ್ತತ್ ಪರಾಯಣಾಃ । ನಾರಾಯಣಾಯನಾ ದೇವಾ ಋಷ್ಯಾದ್ಯಾಃ, ತತ್ಪರಾಯಣಾಃ । ಬ್ರಹ್ಮಾದ್ಯಾಃ ಕೇಚನೈವ ಸ್ಯುಃ ಸಿದ್ಧೋ ಯೋಗ್ಯಸುಖಂ ಲಭನ್ ॥ (ತಂತ್ರಭಾಗವತ) ಎಂದೂ ಹೇಳಿರುವರು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಜಯತೀರ್ಥ ಶ್ರೀಮಚ್ಚರಣರು ಗೀತಾ ತಾತ್ಪರ್ಯ ಟೀಕೆಯಲ್ಲಿ 'ಜೀವನ್ಮುಕ್ತರೆಲ್ಲರಿಗೂ ಸಿದ್ಧಿಪದದಿಂದ ಹೇಳಿದ ಮುಕ್ತಿಯಾಗುವುದು.

ಪೂರ್ಣಜ್ಞಾನಿಯೊಬ್ಬನೇ ಆನಂದಾದಿಗಳಿಂದ ಪೂರ್ಣನಾಗುವನು. ಆನಂದಪೂರ್ಣರಾದ ಆ ಮುಕ್ತರಲ್ಲಿಯೂ ನಾರಾಯಣಾಯನನು ಅತ್ಯಂತ ದುರ್ಲಭನು. ಅಂತಹವರ ಕೋಟಿಗಳಲ್ಲಿ ಪ್ರಕೃಷ್ಟಭಗವನ್ನಿಷ್ಠೆಯುಳ್ಳ ನಾರಾಯಣಪರಾಯಣನು ಬ್ರಹ್ಮದೇವ

ನಾರಾಯಣನ ಜ್ಞಾನವುಳ್ಳವರಾದ್ದರಿಂದ ಸಿದ್ಧಿಯನ್ನು ಹೊಂದಿದ ಎಲ್ಲರೂ ನಾರಾಯಣಾಯನರೇ. ನಾರಾಯಣ ಪರಾಯಣರು ಮಾತ್ರ ದುರ್ಲಭರು' ಎಂದಿರುವರು. ಅನುವ್ಯಾಖ್ಯಾನದಲ್ಲಿ ಮುಕ್ತರ ವೈರಾಗ್ಯ ಭಕ್ತ್ಯಾದಿ ಸಾಧನ ತಾರತಮ್ಯವನ್ನು ತಿಳಿಸಲು ಈ ಶ್ಲೋಕವನ್ನು ಉದಹರಿಸಿರುವರು. ಸುಧಾದಲ್ಲಿ ಬೇರೊಂದು ರೀತಿಯಿಂದ ಈ ಶ್ಲೋಕಕ್ಕೆ 'ಮುಕ್ತಾನಾಂ=ಶರೀರಾಭಿಮಾನವಿಲ್ಲದ ಸಿದ್ಧಾನಾಂ=ಜ್ಞಾನಿಗಳ ಕೋಟಿಗಳಲ್ಲಿ ಕೂಡ ನಾರಾಯಣ ಪರಾಯಣನೂ ಪ್ರಶಾಂತಾತ್ಮನೂ ಸುದುರ್ಲಭಃ=ಎಲ್ಲಿಯೋ (ಒಬ್ಬರಿಬ್ಬರು) ಮಾತ್ರ. ನಾರಾಯಣಾಯನರೂ ಶಾಂತಾತ್ಮರೂ ಎಲ್ಲರೂ ಆಗಿರುವರೆಂದು ಸ್ಪಷ್ಟವಾಗಿ ತಾರತಮ್ಯವು ತೋರುವುದು. ಇಲ್ಲಿ ಎರಡು ವಿಶೇಷಣಗಳಿಂದ ವೈರಾಗ್ಯ ಭಕ್ತಿಗಳನ್ನು ಹೇಳಿರುವರು' ಎಂದು ವ್ಯಾಖ್ಯಾನ ಮಾಡಿರುವರು. ಸನ್ನ್ಯಾಯರತ್ನಾವಳಿಯಲ್ಲಿ 'ಮುಕ್ತರಲ್ಲಿ ಯಾರು ಉದ್ಯೋಗಾತಿಶಯದಿಂದ ಚನ್ನಾಗಿ ವ್ಯಕ್ತವಾದ ಸ್ವಯೋಗ್ಯಾನಂದ ಸಿದ್ಧರೋ ಅವರ ಕೋಟಿಗಳಲ್ಲಿಯೂ ನಾರಾಯಣನೊಬ್ಬನನ್ನೇ ಆಶ್ರಯಿಸಿರುವ ನಾರಾಯಣ ಪರಾಯಣನು ಸುದುರ್ಲಭನು ಯಾವನೋ ಅವನು ಬ್ರಹ್ಮಾದಿ ಜೀವವೇ ಆಗಿರಬೇಕು. ಮಿಕ್ಕವರು ನಾರಾಯಣಾಯನರು ಮಾತ್ರ. ಈ ಶ್ಲೋಕವನ್ನು ಜೀವನ್ಮುಕ್ತರಲ್ಲಿಯೂ ಜ್ಞಾನಾದಿಗಳ ತಾರತಮ್ಯವನ್ನು ಹೇಳುವುದೆಂದು ಅನ್ವಯ ಮಾಡಿಕೊಳ್ಳಬೇಕು' ಎಂದು ಹೇಳಿರುವರು. ಇಲ್ಲಿ 'ಗತಾಸೂನ್ ಅಗತಾಸೂಂಶ್ಚ' ಎಂಬ ಗೀತಾಶ್ಲೋಕದಲ್ಲಿ ಮಾಡಿಕೊಂಡಂತೆ ಸಿದ್ಧರಲ್ಲಿ ನಾರಾಯಣ ಪರಾಯಣನು ಹೇಗೆ ದುರ್ಲಭನೋ ಹಾಗೆ ಚೇತನರಲ್ಲಿ ನಾರಾಯಣಾಯನನೂ ದುರ್ಲಭನೆಂದು ಮನಸಾ ವಿಭಾಗಿಸಿಕೊಂಡು ದೃಷ್ಟಾಂತ-ದಾರ್ಷ್ಟಾಂತಿಕ ರೀತಿಯಲ್ಲಿ ವ್ಯಾಖ್ಯಾನ ಮಾಡಬೇಕು. ಇಲ್ಲದಿದ್ದರೆ 'ದೇವಾನಾಂ' ಎಂಬ ಹಿಂದಿನ ಶ್ಲೋಕದಿಂದಲೇ ನಾರಾಯಣ ಪರಾಯಣನ ದುರ್ಲಭತೆಯು ಉಕ್ತವಾಗಿದೆಯಾಗಿ ಪುನರುಕ್ತಿಯು ಬರುವುದು. ಈ ದುರ್ಲಭತೆಯು ಪ್ರಕೃತ ಉಪಯುಕ್ತವೂ ಅಲ್ಲ. || ೫ ||

ವೃತ್ರಸ್ತು ಸ ಕಥಂ ಪಾಪಃ ಸರ್ವಲೋಕೋಪತಾಪನಃ ।
ಇತ್ಥಂ ದೃಢಮತಿಃ ಕೃಷ್ಣ ಆಸೀತ್ಸಂಗ್ರಾಮ ಉಲ್ಬಣೇ || ೬ ||

ಇದರಿಂದ ಪ್ರಕೃತಕ್ಕೆ ಏನಾಯಿತೆಂದರೆ ಹೇಳುತ್ತಾರೆ. ಸರ್ವಲೋಕೋಪ-ತಾಪನಃ=ಎಲ್ಲ ಜನರನ್ನೂ ತೊಂದರೆಪಡಿಸುವ ಆದ್ದರಿಂದಲೇ ಪಾಪಃ=ಪಾಪಿಯಾದ ಸಃ ವೃತ್ರಃ = ಅಸುರ ಸ್ವಭಾವದ ವೃತ್ರನು ಉಲ್ಬಣೇ ಸಂಗ್ರಾಮೇ=ಭಯಂಕರ ಯುದ್ಧದಲ್ಲಿ ಇತ್ಥಂ=ಮೇಲೆ ಹೇಳಿದಂತೆ ಕೃಷ್ಣೇ=ಶ್ರೀಹರಿಯಲ್ಲಿ ದೃಢಮತಿಃ=ದೃಢ

ರನ್ನು ಬಿಟ್ಟರೆ ಮತ್ತೊಬ್ಬನು ಅತ್ಯಂತ ದುರ್ಲಭನು. ಪಾಪಿಯಾದ ಅಸುರಸ್ವಭಾವದ ವೃತ್ರ ಭಯಂಕರ ಯುದ್ಧದಲ್ಲಿ ನೀವು ಮೇಲೆ ತಿಳಿಸಿದಂತೆ ಶ್ರೀಹರಿಯಲ್ಲಿ ದೃಢಭಕ್ತಿ

ಭಕ್ತಿಯುಳ್ಳವನು ಕಥಂ ಆಸೀತ್=ಹೇಗೆ ಆದನು ? ತು=ಇದು ಅತ್ಯಂತ ಅನುಪ ಪನ್ನವು. ಪಾಪಃ, ಸರ್ವಲೋಕೋಪತಾಪನಃ ಎಂಬೆರಡು ವಿಶೇಷಣಗಳಿಂದ ಅನುಪಪನ್ನತೆಯನ್ನೂ ಉಲ್ಬಣೇ ಸಂಗ್ರಾಮೇ ಎಂಬುದರಿಂದ ದೃಢಭಕ್ತಿಯನ್ನೂ ಸಮರ್ಥಿಸಿರುವರು. ಅಲ್ಪಾಧಿಕಾರಿಗಳಿಗೆ ಮಹಾವಿಪತ್ತಿನಲ್ಲಿ ಶ್ರೀಹರಿಯ ಮರೆವು ಬರುವುದೇ ಅನುಭವಸಿದ್ಧವು. || ೭ ||

ಅತ್ರ ನಃ ಸಂಶಯೋ ಭೂಯಾನ್ ಶ್ರೋತುಂ ಕೌತೂಹಲಂ ಪ್ರಭೋ ।
ಯಃ ಪೌರುಷೇಣ ಸಮರೇ ಸಹಸ್ರಾಕ್ಷಮತೋಷಯತ್ ॥ ೭ ॥

ಯಃ=ಯಾವ ವೃತ್ರನು ಸಮರೇ=ಯುದ್ಧದಲ್ಲಿ ಪೌರುಷೇಣ=(೧) ಪರ ಮಾತ್ಮ ವಿಷಯಕ ಸ್ನೇಹದಿಂದ (೨) ಪರಾಕ್ರಮದಿಂದ ಸಹಸ್ರಾಕ್ಷಂ=ಇಂದ್ರದೇವ ರನ್ನು ಅತೋಷಯತ್-ಸಂತೋಷಪಡಿಸಿದನೋ ಅತ್ರ=ಅಂತಹ ವೃತ್ರನು ಹರಿಭಕ್ತ ನೆಂಬ ವಿಷಯದಲ್ಲಿ ನಃ ನನಗೆ ಭೂಯಾನ್=ಬಹಳ ಸಂಶಯಃ=ಸಂದೇಹವೇ ಇರುವುದು. ಪ್ರಭೋ-ಸಂಶಯ ಪರಿಹರಿಸಲು ಸಮರ್ಥರಾದ ಶುಕಾಚಾರ್ಯರೇ ಶ್ರೋತುಂ=ಇದರ ಕಾರಣವನ್ನು ಕೇಳಲು ಕೌತೂಹಲಂ=ಕುತೂಹಲವು (ಅಸ್ತಿ)= ಇರುವುದು. 'ಅಹೋ ದಾನವ ಸಿದ್ಧೋಽಸಿ' ಎಂದು ಇಂದ್ರದೇವರು ಹೊಗಳಿದ್ದ ರಿಂದ ವೃತ್ರನ ಹರಿಭಕ್ತಿಯಿಂದ ಅವರು ಸಂತೋಷಪಟ್ಟಿರುವ ಅಂಶವು ಸ್ಪಷ್ಟವಾಗು ವುದು. || ೭ ||

ಸೂತ ಉವಾಚ—

ಪರೀಕ್ಷಿತೋಽಥ ಸಂಪ್ರಶ್ನಂ ಭಗವಾನ್ ಬಾದರಾಯಣಿಃ ।
ನಿಶಮ್ಯ ಶ್ರದ್ದಧಾನಸ್ಯ ಪ್ರತಿನಂದ್ಯ ವಚೋಽಬ್ರವೀತ್ ॥ ೮ ॥

ಅಥ=ಅನಂತರ ಭಗವಾನ್=ತ್ರಿಕಾಲಜ್ಞಾನಿಗಳಾದ ಬಾದರಾಯಣಿಃ=ಶುಕಾ ಚಾರ್ಯರು ಪರೀಕ್ಷಿದ್ರಾಜರ ಸಂಪ್ರಶ್ನಂ=ಭಕ್ತಿಪೂರ್ವಕವಾದ ಪ್ರಶ್ನೆಯನ್ನು

ಯುಳ್ಳವನಾದುದು ಹೇಗೆ? ಇದು ಅತ್ಯಂತ ಅನುಪಪನ್ನ. ಅವನು ಯುದ್ಧದಲ್ಲಿ ಪರಮಾತ್ಮವಿಷಯಕಸ್ನೇಹದಿಂದ ಇಂದ್ರದೇವರನ್ನು ಸಂತೋಷಪಡಿಸಿದನು. ಈ ವಿಷಯದಲ್ಲಿ ನನಗೆ ತುಂಬ ಸಂಶಯುವೇ ಇರುವುದು. ತಾವು ಸಂಶಯ ಪರಿಹರಿಸಲು ಸಮರ್ಥರು. ವೃತ್ರನಿಗೆ ಹರಿಭಕ್ತಿಯುಂಟಾಗುವಲ್ಲಿ ಕಾರಣವನ್ನು ಕೇಳಲು ನನಗೆ ಕುತೂಹಲವಾಗುವುದು.

ಸೂತರು—ಅನಂತರ ತ್ರಿಕಾಲಜ್ಞರಾದ ಶುಕಾಚಾರ್ಯರು ಪರೀಕ್ಷಿದ್ರಾಜರ ಭಕ್ತಿಯುಕ್ತ ಪ್ರಶ್ನೆಯನ್ನು ಕೇಳಿ ಶ್ರದ್ಧಾವಂತರಾದ ಅವರನ್ನು ಹೊಗಳಿ ಮಾತನಾಡಿದರು.

ನಿಶಮ್ಯ=ಕೇಳಿ ಶ್ರದ್ದಧಾನಸ್ಯ=ಶ್ರದ್ಧಾವಂತರಾದ ರಾಜರನ್ನು ಪ್ರತಿನಂದ್ಯ=ಪ್ರಶಂಸಿಸಿ ವಚಃ=ಮುಂದೆ ಹೇಳುವ ಮಾತುಗಳನ್ನು ಅಬ್ರವೀತ್=ಹೇಳಿದರು. ಮುಂದೆ ಹೇಳುವ ಕಥೆಯಿಂದ ವೃತ್ರನಿಗೆ ಶಾಪದ ನಿಮಿತ್ತ ಅಸುರದೇಹ ಬಂದಿದ್ದರೂ ಸ್ವಾಭಾವಿಕವಾಗಿ ದೇವತೆಗಳ (ಗಂಧರ್ವ) ಗುಂಪಿಗೆ ಸೇರಿದವನಾದ್ದರಿಂದ ನಾರಾಯಣಾಯನ (ನಾದ) ಭಕ್ತನಾದುದು ಯುಕ್ತವಾದುದೇ ಎಂದಭಿಪ್ರಾಯ. || ೮ ||

ಶ್ರೀ ಶುಕ ಉವಾಚ—

ಶೃಣುಷ್ವಾವಹಿತೋ ರಾಜನ್ನಿತಿಹಾಸಂ ಪುರಾತನಮ್ ।
ಶ್ರುತಂ ದ್ವೈಪಾಯನಮುಖಾನ್ನಾರದಾದ್ದೇವಲಾದಪಿ ॥ ೯ ॥

ದೇವತೆಗಳೇ ಶಾಪದಿಂದ ಅಭಿಭೂತರಾಗಿ ಪ್ರಹ್ಲಾದ ಮೊದಲಾಗಿ (ಅಸುರ ಜಾತಿಯಲ್ಲಿ) ಜನಿಸಿದರು. ಆದ್ದರಿಂದಲೇ ಅವರಿಗೆ ಹರಿಭಕ್ತಿಯಿದ್ದು ದೇವತೆಗಳ ಗತಿಯಾದುದು. ಎಂಬ ಅಭಿಪ್ರಾಯದಿಂದ ವೃತ್ರನ ಪೂರ್ವಜನ್ಮ ವೃತ್ತಾಂತವನ್ನು ಹೇಳುತ್ತಾರೆ. ರಾಜನೇ, ದ್ವೈಪಾಯನಮುಖಾತ್=ನಮ್ಮ ತಂದೆಗಳಾದ ವೇದ ವ್ಯಾಸರ ಬಾಯಿಯಿಂದ, ನಾರದರಿಂದ ಅಪಿ=ಮತ್ತು ದೇವಲ ಋಷಿಗಳಿಂದ (ಮಯಾ)=ನನ್ನಿಂದ (ಯಥಾ)-ಹೇಗೆ ಶ್ರುತಂ ಕೇಳಲ್ಪಟ್ಟಿದೆಯೋ (ತಥಾ)= ಹಾಗೆ ಪುರಾತನಂ=ಹಿಂದೆ ನಡೆದ ಇತಿಹಾಸಂ=ಚರಿತ್ರೆಯನ್ನು (ವಕ್ಷ್ಯೇ)=ಹೇಳುತ್ತೇನೆ. ಅವಹಿತಃ=ಅವಧಾನಯುಕ್ತನಾಗಿ ಶೃಣುಷ್ವ=ಕೇಳು. || ೯ ||

ಆಸೀದ್ರಾಜಾ ಸಾರ್ವಭೌಮಃ ಶೂರಸೇನೇಷು ವೈ ನೃಪಃ ।
ಚಿತ್ರಕೇತುರಿತಿ ಖ್ಯಾತೋ ಯಸ್ಯಾಸೀತ್ಕಾಮಧುಙ್ಮಹೀ ॥ ೧೦ ॥

ಶೂರಸೇನದೇಶದಲ್ಲಿ ರಾಜಾ-ಪ್ರಜಾರಂಜಕನಾದ ಸಾರ್ವಭೌಮಃ=ಚಕ್ರವರ್ತಿಯಾದ 'ಚಿತ್ರಕೇತು' ಎಂದು ಪ್ರಸಿದ್ಧನಾದ ನೃಪಃ=ದೊರೆಯು ಆಸೀತ್ ವೈ=ಇದ್ದನಷ್ಟೆ. ಯಸ್ಯ=ಯಾವ ಈ ಚಿತ್ರಕೇತುವಿಗೆ ಮಹೀ-ಭೂಮಿಯು ಕಾಮಧುಕ್= ಕಾಮಧೇನುವಿನಂತೆ ಅಭೀಷ್ಟಪ್ರದವಾಗಿ ಆಸೀತ್-ಇದ್ದಿತು. || ೧೦ ||

ತಸ್ಯ ಭಾರ್ಯಾಸಹಸ್ರಾಣಾಂ ಸಹಸ್ರಾಣಿ ದಶಾಭವನ್ ।
ಸಾಂತಾನಿಕಶ್ಚಾಪಿ ನೃಪೋ ನ ಲೇಭೇ ತಾಸು ಸಂತತಿಮ್ ॥ ೧೧ ॥

ಶುಕಾಚಾರ್ಯರು—ರಾಜ‌ನ್, ನಮ್ಮ ತಂದೆ ವೇದವ್ಯಾಸರ ಮುಖದಿಂದ, ನಾರದರಿಂದ ಮತ್ತು ದೇವಲ ಋಷಿಗಳಿಂದ ನಾನು ಕೇಳಿರುವಂತೆಯೇ ಹಿಂದೆ ನಡೆದ ಚರಿತ್ರೆಯೊಂದನ್ನು ಹೇಳುತ್ತೇನೆ. ಅವಧಾನದಿಂದ ಕೇಳು.

ಶೂರಸೇನವೆಂಬ ದೇಶದಲ್ಲಿ ಪ್ರಜಾರಂಜಕನೂ ಚಕ್ರವರ್ತಿಯೂ ಆದ ಚಿತ್ರಕೇತುವೆಂಬ ದೊರೆಯಿದ್ದನು. ಅವನು ಆಳುತ್ತಿದ್ದಾಗ ಭೂಮಿಯು ಕಾಮಧೇನುವಿನಂತೆ ಇಷ್ಟಾರ್ಥಪ್ರದವಾಗಿತ್ತು. ಅವನಿಗೆ ಒಂದು ಕೋಟಿ ಹೆಂಡತಿಯರು.

ತಸ್ಯ=ಆ ರಾಜನಿಗೆ ಭಾರ್ಯಾಸಹಸ್ರಾಣಾಂ=ಸಾವಿರ ಹೆಂಡತಿಯರ ದಶ-ಸಹಸ್ರಾಣಿ=ಹತ್ತು ಸಾವಿರಗಳು ಅಂದರೆ ಒಂದು ಕೋಟಿ ಹೆಂಡತಿಯರು ಅಭವನ್-ಇದ್ದರು. ನೃಪಃ ಚ=ರಾಜನಾದರೋ ಸಾಂತಾನಿಕಃ ಅಪಿ-(೧) ಸಂತಾನವನ್ನು ಅಪೇಕ್ಷಿಸುವನಾದರೂ (೨) ಸ್ವಯಂ ಸಂತಾನ ಪಡೆಯಲು ಅರ್ಹನಾದರೂ ತಾಸು-ಆ ಹೆಂಡತಿಯರಲ್ಲಿ (ಕಸ್ಯಾಂ ಅಪಿ)=ಯಾರಲ್ಲಿಯೂ ಸಂತತಿಂ ಮಗುವನ್ನು ನ ಲೇಭೇ=ಹೊಂದಲಿಲ್ಲ. ‖ ೧೧ ‖

ರೂಪೌದಾರ್ಯವಯೋಜನ್ಮವಿದ್ಯೈಶ್ವರ್ಯಶ್ರಿಯಾದಿಭಿಃ ।
ಸಂಪನ್ನಸ್ಯ ಗುಣೈಃ ಸರ್ವೈಶ್ಚಿಂತಾ ವಂಧ್ಯಾಪತೇರಭೂತ್ ‖ ೧೨ ‖

ಸೌಂದರ್ಯ, ಔದಾರ್ಯ, ಯವ್ವನ, ಒಳ್ಳೆಯ ವಂಶ, ವಿದ್ಯೆ, ಐಶ್ವರ್ಯ ಮತ್ತು ಸಂಪತ್ತು ಮೊದಲಾದವುಗಳಿಂದ ಸರ್ವೈಃ ಗುಣೈಃ=ಎಲ್ಲ ಗುಣಗಳಿಂದ ಸಂಪನ್ನಸ್ಯ=ಯುಕ್ತನಾದ ಆದರೆ ವಂಧ್ಯಾಪತೇಃ=ಬಂಜೆಯರ ಗಂಡನಾದ ಆ ರಾಜನಿಗೆ ಚಿಂತಾ=ಮಕ್ಕಳಿಲ್ಲವೆಂಬ ಚಿಂತೆಯು ಅಭೂತ್-ಆಯಿತು. ವಂಧ್ಯಾ-ಪತೇಃ ಎಂದು ಹೇಳಿದ್ದರಿಂದ ದೈವಯೋಗದಿಂದ ಆ ಎಲ್ಲ ಹೆಂಡತಿಯರೂ ಬಂಜೆಯರೇ ಬಂದು ಸೇರಿದ್ದರೆಂದು ಹೇಳಿದಂತಾಯಿತು. ‖ ೧೨ ‖

ನ ತಸ್ಯ ಸಂಪದಃ ಸರ್ವಾ ಮಹಿಷ್ಯೋ ವಾಮಲೋಚನಾಃ ।
ಸಾರ್ವಭೌಮಸ್ಯ ಭೂಶ್ಚೇಯಂ ನಾಭೂವನ್ ಪ್ರೀತಿಹೇತವಃ ‖೧೩‖

ತಸ್ಯ ಸಾರ್ವಭೌಮಸ್ಯ=ಆ ಚಕ್ರವರ್ತಿಗೆ ಸರ್ವಾಃ ಸಂಪದಃ=ಎಲ್ಲ ಸಂಪತ್ತುಗಳೂ ವಾಮಲೋಚನಾಃ=ಸುಂದರಾಕ್ಷಿಯರಾದ (ಸುಂದರಿಯರಾದ) ಸರ್ವಾಃ ಮಹಿಷ್ಯಃ=ಎಲ್ಲ ಹೆಂಡತಿಯರೂ ಇಯಂ=ಈ ಭೂಃ ಚ=ಭೂಮಿಯೂ ಪ್ರೀತಿ ಹೇತವಃ=ಪ್ರೀತಿಗೆ ಕಾರಣಗಳು ನ ಅಭೂವನ್-ಆಗಲಿಲ್ಲ. ಇವುಗಳಿಂದ ಸಂತೋಷವಾಗಲಿಲ್ಲವೆಂದರ್ಥ. ‖ ೧೩ ‖

ತಸ್ಯೈಕದಾ ತು ಭವನಮಂಗಿರಾ ಭಗವಾನೃಷಿಃ ।
ಲೋಕಾನನುಚರನ್ನೇತಾನುಪಾಗಚ್ಛದ್ಯದೃಚ್ಛಯಾ ‖ ೧೪ ‖

ಸ್ವಯಂ ಸಂತಾನ ಪಡೆಯಲು ಅರ್ಹನಾಗಿ ಸಂತಾನಾಪೇಕ್ಷಿಯಾಗಿದ್ದರೂ ಆ ಹೆಂಡತಿಯರಲ್ಲಿ ಯಾರಿಗೂ ಮಕ್ಕಳಾಗಲಿಲ್ಲ. ಸೌಂದರ್ಯ, ಔದಾರ್ಯ, ಯವ್ವನ, ಸದ್ವಂಶ, ವಿದ್ಯೆ, ಐಶ್ವರ್ಯ ಮತ್ತು ಸಂಪತ್ತು ಮೊದಲಾದ ಎಲ್ಲ ಗುಣಗಳಿಂದ ಯುಕ್ತನಾಗಿದ್ದರೂ ಕೇವಲ ಬಂಜೆಯರ ಗಂಡನಾಗಿದ್ದ ಆ ರಾಜನಿಗೆ ಮಕ್ಕಳಿಲ್ಲವೆಂಬ ಚಿಂತೆಯುಂಟಾಯಿತು. ಆತನಿಗೆ ಆ ಎಲ್ಲ ಸಂಪತ್ತೂ, ಆ ಎಲ್ಲ ಸುಂದರ ಮಹಿಷಿಯರೂ, ಈ ಭೂಮಿಯೂ ಇವು ಯಾವುವೂ ಪ್ರೀತಿಕರವಾಗಲಿಲ್ಲ. ಶ್ರೀಹರಿಯ ಇಚ್ಛೆಯಂತೆ ಒಂದು ದಿನ ಲೋಕಗಳನ್ನು ಸಂಚರಿಸುತ್ತಾ ಪೂಜ್ಯರಾದ ಆಂಗೀರಸ

ಭಗವಾನ್=ಪೂಜ್ಯರಾದ ಅಂಗಿರಾಃ ಋಷಿಃ=ಆಂಗೀರಸ ಋಷಿಗಳಾದರೋ ಏತಾನ್=ಈ ಲೋಕಾನ್=ಲೋಕಗಳನ್ನು ಅನುಚರನ್=ಸಂಚರಿಸುತ್ತಾ ಯದೃ-ಚ್ಛಯಾ=ಶ್ರೀಹರಿಯ ಇಚ್ಛೆಯಂತೆ ಏಕದಾ=ಒಂದು ದಿನ ತಸ್ಯ=ಆ ರಾಜನ ಭವನಂ=ಮನೆಗೆ ಉಪಾಗಚ್ಛತ್=ಬಂದರು. || ೧೪ ||

ತಂ ಪೂಜಯಿತ್ವಾ ವಿಧಿವತ್ಪ್ರತ್ಯುತ್ಥಾನಾರ್ಹಣಾದಿಭಿಃ ।
ಕೃತಾತಿಥ್ಯಮುಪಾಸೀದತ್ಸುಖಾಸೀನಂ ಸಮಾಹಿತಃ || ೧೫ ||

ವಿಧಿವತ್=ಶಾಸ್ತ್ರದಲ್ಲಿ ಹೇಳಿದಂತೆ ಪ್ರತ್ಯುತ್ಥಾನ=ಇದಿರೇಳುವುದು ಅರ್ಹ-ಣಾದಿಭಿಃ=ಪೂಜೆ ಮೊದಲಾದವುಗಳಿಂದ ತಂ=ಆ ಋಷಿಗಳನ್ನು ಪೂಜಯಿತ್ವಾ-ಸತ್ಕರಿಸಿ ಸಮಾಹಿತಃ ಸನ್=ಏಕಾಗ್ರ ಚಿತ್ತನಾಗಿ ಕೃತಾತಿಥ್ಯಂ=ಅತಿಥಿಸತ್ಕಾರವನ್ನು ಮಾಡಿಸಿಕೊಂಡ ಸುಖಾಸೀನಂ=ಸುಖವಾಗಿರುವಂತೆ ಪೀಠದಲ್ಲಿ ಕುಳಿತ (ತಂ) ಉಪಾಸೀದತ್=ಆ ಆಂಗೀರಸ ಋಷಿಗಳ ಸಮೀಪದಲ್ಲಿ ಕುಳಿತನು || ೧೫ ||

ಮಹರ್ಷಿಸ್ತಮುಪಾಸೀನಂ ಪ್ರಶ್ರಯಾವನತಂ ಕ್ಷಿತೌ ।
ಪ್ರತಿಪೂಜ್ಯ ಮಹಾರಾಜ ಸಮಾಭಾಷ್ಯೇದಮಬ್ರವೀತ್ || ೧೬ ||

ಹೇ ಮಹಾರಾಜ=ಪರೀಕ್ಷಿದ್ರಾಜನೇ, ಮಹರ್ಷಿಃ=ಆಂಗೀರಸ ಋಷಿಗಳು ಕ್ಷಿತೌ=ಭೂಮಿಯಲ್ಲಿ ಉಪಾಸೀನಂ=ಸಮೀಪದಲ್ಲಿ ಕುಳಿತಿದ್ದ ಪ್ರಶ್ರಯಾವನತಂ-ನಮ್ರತೆಯಿಂದ ತಲೆ ತಗ್ಗಿಸಿದ್ದ ತಂ=ಆ ಚಿತ್ರಕೇತುವನ್ನು ಪ್ರತಿಪೂಜ್ಯ=ಅಭಿನಂದಿಸಿ ಸಮಾಭಾಷ್ಯ=ಮಾತನಾಡಿಸಿ ಇದಂ=ಮುಂದೆ ಹೇಳುವ ಮಾತನ್ನು ಅಬ್ರವೀತ್-ಹೇಳಿದರು. || ೧೬ ||

ಅಂಗಿರಾ ಉವಾಚ—

ಅಪಿ ತೇಽನಾಮಯಂ ಸ್ವಸ್ತಿ ಪ್ರಕೃತೀನಾಂ ತಥಾಽತ್ಮನಃ ।
ಯಥಾ ಪ್ರಕೃತಿಭಿರ್ಗುಪ್ತಃ ಪುಮಾನ್ ರಾಜಾ ಚ ಸಪ್ತಭಿಃ || ೧೭ ||

ತೇ = ನಿನಗೆ ಅನಾಮಯಂ ಅಪಿ = ದುಃಖವಿಲ್ಲವಷ್ಟೆ! ತಥಾ = ಮತ್ತು ಆತ್ಮನಃ-ನಿನ್ನ ಪ್ರಕೃತೀನಾಂ=ಸ್ವಾಮಿ, ಅಮಾತ್ಯ, ಜನಪದ, ದುರ್ಗ, ದ್ರವಿಣ

ಋಷಿಗಳು ಆ ರಾಜನ ಮನೆಗೆ ಬಂದರು. ವಿಧಿವತ್ತಾಗಿ ಇದಿರೆದ್ದು ಪೂಜಿಸಿ ರಾಜನು ಅವರನ್ನು ಸತ್ಕರಿಸಿದನು. ಸತ್ಕಾರಗೊಂಡ ಅವರು ಸುಖಾಸನದಲ್ಲಿ ಕುಳಿತರು. ಅವರ ಸಮೀಪದಲ್ಲಿ ರಾಜನು ಏಕಾಗ್ರತೆಯಿಂದ ಕುಳಿತನು.

ಸಮೀಪದಲ್ಲಿ ಭೂಮಿಯ ಮೇಲೆ ಕುಳಿತಿದ್ದ ನಮ್ರತೆಯಿಂದ ತಲೆ ತಗ್ಗಿಸಿದ್ದ ಆ ರಾಜನನ್ನು ಅಭಿನಂದಿಸಿ ಮಾತನಾಡಿಸಿ ಆಂಗೀರಸರು 'ರಾಜನೇ, ನಿನಗೆ ದುಃಖ ವಿಲ್ಲವಲ್ಲವೇ! ನಿನ್ನ ಏಳು ಪ್ರಕೃತಿಗಳಿಗೂ ಕ್ಷೇಮವೇ? ಜೀವನು ಮಹತ್ ಅಹಂಕಾರ ಮತ್ತು ಪಂಚಭೂತಗಳೆಂಬ ಏಳು ಪ್ರಕೃತಿಗಳಿಂದ ರಕ್ಷಿತನಾಗಿರುವಂತೆ

ಸಂಚಯ, ದಂಡ ಮತ್ತು ಮಿತ್ರರೆಂಬ ಏಳು ಪ್ರಕೃತಿಗಳಿಗೂ ಸ್ವಸ್ತಿ ಅಪಿ=ಕ್ಷೇಮ ವಷ್ಟೆ! ಪ್ರಕೃತಿಗಳ ಕುಶಲ ಪ್ರಶ್ನೆಯಿಂದ ಪ್ರಯೋಜನವೇನು? ಎಂದರೆ ಹೇಳು ತ್ತಾರೆ. ಯಥಾ=ಹೇಗೆ ಪುಮಾನ್=ಜೀವನು ಸಪ್ತಭಿಃ=ಮಹತ್ ಅಹಂಕಾರ ಪಂಚಭೂತಗಳೆಂಬ ಏಳು ಪ್ರಕೃತಿಭಿಃ=ಪ್ರಕೃತಿಗಳಿಂದ ಗುಪ್ತಃ=ಯಾವಾಗಲೂ ರಕ್ಷಿತನೋ (ತಥಾ)=ಹಾಗೆ ರಾಜಾ ಚ=ರಾಜನೂ ಸಪ್ತಭಿಃ ಪ್ರಕೃತಿಭಿಃ=ಸ್ವಾಮಿ ಮೊದಲಾದ ಏಳು ಪ್ರಕೃತಿಗಳಿಂದ ಗುಪ್ತಃ=ರಕ್ಷಿತನಾಗಿರುವನು. ಜೀವನು ಮಹದಾದಿಗಳನ್ನು ಬಿಟ್ಟು ಒಂದು ಕ್ಷಣವೂ ಇರದಂತೆ ರಾಜನೂ ಸಪ್ತ ಪ್ರಕೃತಿ ಗಳಿಲ್ಲದೆ ಒಂದು ಕ್ಷಣವೂ ಇರಲಾರನೆಂದು ತಾತ್ಪರ್ಯ. ॥ ೧೭ ॥

ಆತ್ಮಾನಂ ಪ್ರಕೃತಿಷ್ವದ್ಧಾ ನಿಧಾಯ ಶ್ರೇಯ ಆಪ್ನುಯಾತ್ ।
ರಾಜ್ಞಸ್ತಥಾ ಪ್ರಕೃತಯೋ ನರದೇವಾಹಿತಾದಯಃ ॥ ೧೮ ॥

ಪ್ರಕೃತಿಷು=ದೇಹಕ್ಕೆ ಕಾರಣಗಳಾದ ಮಹದಾದಿ ಪ್ರಕೃತಿಗಳಲ್ಲಿ ಆತ್ಮಾನಂ= ಜೀವನನ್ನು ಅದ್ಧಾ=ಸರಿಯಾಗಿ ನಿಧಾಯ=ಇಟ್ಟು ಶ್ರೇಯಃ=ಮೋಕ್ಷಸಾಧನೆಯನ್ನು ಆಪ್ನುಯಾತ್=ಹೊಂದುವನು. ಅದರಂತೆ ರಾಜನೂ ಕೂಡ ಪ್ರಕೃತಿಷು= ಮೇಲೆ ಹೇಳಿದ ಏಳು ಬಗೆಯ ಪ್ರಕೃತಿಗಳಿಂದ ರಕ್ಷಿತನಾಗಿ ಅವರಲ್ಲಿ ಆತ್ಮಾನಂ= ತನ್ನನ್ನು ತನ್ನ ರಾಜ್ಯಭಾರವನ್ನು ಅದ್ಧಾ ಸಂಪೂರ್ಣವಾಗಿ ನಿಧಾಯ=ಇಟ್ಟು ಶ್ರೇಯಃ=ವಿಹಿತವಾದ ಶ್ರೇಯೋಭಿವೃದ್ಧಿಯನ್ನು ಆಪ್ನುಯಾತ್=ಹೊಂದುವನು. ರಾಜ್ಯಸುಖವನ್ನು ಹೊಂದುವನೆಂದು ಅರ್ಥ. ನರದೇವ ರಾಜನೇ ತಥಾ=ಅದರಂತೆ ಪ್ರಕೃತಯಃ=ಸ್ವಾಮಿ ಮೊದಲಾದ ಪ್ರಕೃತಿಗಳು ರಾಜ್ಞಃ=ರಾಜನ ವಶವರ್ತಿಗಳಾ ದಲ್ಲಿ ಶ್ರೇಯಸ್ಸನ್ನು ಹೊಂದುವರು. ಇಲ್ಲಿ ಯಸ್ಯ ರಾಜ್ಞಃ ಆತ್ಮಾ ಚ ಅನುವಶಃ ಚೇತ್ ತರ್ಹಿ ಸರ್ವೇ ಲೋಕಾಃ ತಸ್ಮೈ ಬಲಿಂ ಯಚ್ಛಂತಿ ಎಂದೂ ಅನ್ವಯವನ್ನು ತೋರಿಸಿರುವರು. ತಾನು ಪ್ರಕೃತ್ಯಾದಿಗಳ ವಶನಾದಲ್ಲಿ ಪ್ರಕೃತ್ಯಾದಿಗಳು ತನ್ನ ವಶದಲ್ಲಿರುವುದಿಲ್ಲವಾಗಿ ಪ್ರಕೃತ್ಯಾದಿಗಳು ಅಹಿತಾದಯಃ=ಅಹಿತಕ್ಕೆ ಕಾರಣಗಳಾಗಿ (ಭವಂತಿ)=ಆಗುವುವು. ಆದ್ದರಿಂದ ವಶವರ್ತಿಗಳನ್ನಾಗಿ ಮಾಡಿಕೊಳ್ಳಬೇಕೆಂದು ತಾತ್ಪರ್ಯ. ಆಹಿತಾದಯಃ ಎಂದು ಪದಚ್ಛೇದ ಮಾಡಿದಲ್ಲಿ ಆ=ಮೊದಲಿನಿಂದಲೂ

ರಾಜನೂ ಸ್ವಾಮಿ ಮೊದಲಾದ ಏಳು ಪ್ರಕೃತಿಗಳಿಂದ ರಕ್ಷಿತನಾಗಿರುವನು. ದೇಹ ಕಾರಣಗಳಾದ ಮಹತ್ತತ್ವ ಮೊದಲಾದ ಪ್ರಕೃತಿಗಳಲ್ಲಿ ಜೀವನನ್ನು ಸರಿಯಾಗಿ ಇಟ್ಟು ಮೋಕ್ಷವನ್ನು ಹೊಂದುವಂತೆ ರಾಜನೂ ಸ್ವಾಮಿ ಮೊದಲಾದ ಪ್ರಕೃತಿಗಳಲ್ಲಿ ತನ್ನನ್ನೂ ತನ್ನ ರಾಜ್ಯಭಾರವನ್ನೂ ಇಟ್ಟು ಶ್ರೇಯೋಭಿವೃದ್ಧಿಯನ್ನು ಹೊಂದುವನು. ಪ್ರಕೃತಿಗಳೂ ರಾಜನ ವಶವರ್ತಿಗಳಾದಲ್ಲಿ ತಾವೂ ಶ್ರೇಯಸ್ಸನ್ನು ಹೊಂದುವರು. ತಾನು ಪ್ರಕೃತಿಗಳ ವಶನಾದಲ್ಲಿ ಅವು ರಾಜನ ಅಹಿತಕ್ಕೆ ಕಾರಣವಾಗುವುವು. ಮೊದಲಿನಿಂದಲೂ ಹಿತಕಾರಿಗಳಾಗಿದ್ದಲ್ಲಿ ಮಾತ್ರ ಶ್ರೇಯಸ್ಸಿಗೆ ಕಾರಣವಾಗುವುವು.

ಸಂಪೂರ್ಣವಾಗಿ ಹಿತಾದಯಃ=ಹಿತಕಾರಿಗಳಾಗಿ ಅವಲ್ಲಿ ಶ್ರೇಯಸ್ಕರಗಳೆಂದು ಅರ್ಥ. ಇದರಿಂದ ಪ್ರಕೃತ್ಯಾದಿಗಳ ಗುಣವನ್ನು ತೋರಿಸಿದಂತಾಯಿತು. 'ಸ್ವಾಮ್ಯಮಾತ್ಯೌ ಜನಪದೋ ದುರ್ಗಂ ದ್ರವಿಣಸಂಚಯಃ | ದಂಡೋ ಮಂತ್ರೀ ಚ ಸಪ್ತೈತಾಃ ತಸ್ಯ ಪ್ರಕೃತಯಃ ಸ್ಮೃತಾಃ ||' ಬುದ್ಧಿಕಾರ್ಯದಲ್ಲಿ ಸಹಾಯನಾದವನು ಮಂತ್ರಿ. ಕರ್ಮದಲ್ಲಿ ಸಹಾಯ ಮಾಡುವನು ಅಮಾತ್ಯ. ಹೇಗೆ ಪ್ರಕೃತಿಗಳಿಂದ ಗುಪ್ತನಾದ ರಾಜನು ಸುಖವನ್ನು ಹೊಂದುವನೋ ಹಾಗೆ ರಾಜನಿಂದ ಸಂತೋಷಿತರಾದ ಪ್ರಜೆಗಳೂ (ಪ್ರಕೃತಿಗಳೂ) ರಾಜನ ಸಂತೋಷಕ್ಕೆ ಕಾರಣರಾಗುವರು. ಇಲ್ಲದಿದ್ದರೆ ಅಹಿತಕ್ಕೆ ಅಂದರೆ ಅಸಂತೋಷಕ್ಕೆ ಕಾರಣರಾಗುವರು (ಅಹಿತಸ್ಯ ಆದಯಃ=ಕಾರಣಾಃ) ಎಂದು ಶ್ಲೋಕವನ್ನು ವಿಭಾಗಿಸಿ ಆದರೂ ಅರ್ಥಮಾಡಬಹುದು. || ೧೮ ||

ಅಪಿ ದಾರಾಃ ಸುತಾಮಾತ್ಯಾ ಭೃತ್ಯಾಃ ಶ್ರೇಣ್ಯೋಽಥ ಮಂತ್ರಿಣಃ |
ಪೌರಾ ಜಾನಪದಾ ಭೂಪಾ ಆತ್ಮಾ ಚ ವಶವರ್ತಿನಃ || ೧೯ ||

ರಾಜನೇ, ದಾರಾಃ=ಹೆಂಡತಿಯರು, ಸುತಾಃ=ಮಕ್ಕಳು, ಅಮಾತ್ಯರು, ಭೃತ್ಯರು, ಶ್ರೇಣ್ಯಃ=ರಾಜನ ಸಮಾನ ವಯಸ್ಕರಾದ ಅಂಗರಕ್ಷಕರು, ಅಥ=ಮತ್ತು ಮಂತ್ರಿಗಳು, ಪೌರಾಃ=ಪಟ್ಟಣಿಗರು, ಜಾನಪದಾಃ=ದೇಶವಾಸಿಗಳು, ದೇಶಾಧಿಕಾರಿಗಳು, ಭೂಪಾಃ=ಸಾಮಂತ ರಾಜರು ಆತ್ಮಾ ಚ=ಮನಸ್ಸೂ ಕೂಡ ವಶವರ್ತಿನಃ ಅಪಿ = ನಿನ್ನ ಅಧೀನದಲ್ಲಿರುವವರೇ ? ಅನುಕೂಲರಾಗಿರುವರೇ ? ಎಂದರ್ಥ. ಮನಸ್ಸು ನಿನ್ನ ವಶದಲ್ಲಿರುವುದೇ ? || ೧೯ ||

ಯಸ್ಯಾತ್ಮಾನುವಶಶ್ಚೇತ್ಸ್ಯಾತ್ ಸರ್ವೇ ತದ್ವಶಗಾ ಇಮೇ |
ಲೋಕಾಃ ಸಪಾಲಾ ಯಚ್ಛಂತಿ ಸರ್ವೇ ಬಲಿಮತಂದ್ರಿತಾಃ || ೨೦ ||

ಮನಸ್ಸು ವಶವರ್ತಿಯಾದುದಕ್ಕೆ ಪ್ರಯೋಜನವೇನು ? ಎಂದರೆ ಹೇಳುತ್ತಾರೆ. ಯಸ್ಯ=ಯಾವನಿಗೆ ಆತ್ಮಾ=ಮನಸ್ಸು ಅನುವಶಃ=ವಶವರ್ತಿಯಾಗಿ ಸ್ಯಾತ್ ಚೇತ್=ಇರುವುದೋ ಇಮೇ ಸರ್ವೇ=ಈ ಭೃತ್ಯರೇ ಮೊದಲಾದವರೆಲ್ಲರೂ ತದ್ವಶಗಾಃ=ಅವನ ಅಧೀನರಾಗಿ (ಭವಂತಿ)=ಆಗುವರು. ಮನಸ್ಸು ತನ್ನ ವಶವಾದರೆ ಭೃತ್ಯರೇ ಮೊದಲಾದವರೂ ತನ್ನ ವಶರಾಗುವರು. ಇಲ್ಲದಿದ್ದಲ್ಲಿ ಕೋಪಲೋಭಾದಿಗಳಿಗೆ ಅಧೀನನಾದ ನಿನ್ನ ಕ್ರೋಧಾದಿಗಳಿಂದ ವೈಮನಸ್ಯ ಹೊಂದಿದ ಭೃತ್ಯರೇ ಮೊದಲಾದವರು ಹೇಳಿದ ಕೆಲಸವನ್ನು ಮಾಡುವುದಿಲ್ಲವೆಂದರ್ಥ.

ಹೆಂಡತಿ, ಮಕ್ಕಳು, ಅಮಾತ್ಯರು, ಭೃತ್ಯರು, ಸಮಾನ ವಯಸ್ಸಿನ ಅಂಗರಕ್ಷಕರು, ಮಂತ್ರಿಗಳು, ಪಟ್ಟಣಿಗರು, ದೇಶವಾಸಿಗಳು, ದೇಶಾಧಿಕಾರಿಗಳು, ಸಾಮಂತ ರಾಜರು ಮತ್ತು ಮನಸ್ಸು ನಿನ್ನ ಅಧೀನದಲ್ಲಿರುವರೇ ? ಮನಸ್ಸು ವಶದಲ್ಲಿರುವವನಿಗೆ ಭೃತ್ಯರೇ ಮೊದಲಾದವರೆಲ್ಲರೂ ಅಧೀನರಾಗಿರುವರು. ಅಧಿಪತಿಗಳಿಂದ ಕೂಡಿದ ಎಲ್ಲ ಜನರೂ

ಆದ್ದರಿಂದ ಕ್ರೋಧಾದಿಗಳಿಲ್ಲದಿರುವುದು ಮನಸ್ಸು ವಶವರ್ತಿಯಾದುದಕ್ಕೆ ಫಲ. ಕ್ರೋಧಾದಿಗಳನ್ನು ಮಾಡದಿದ್ದರೆ ಭೃತ್ಯರೇ ಮೊದಲಾದವರು ವಶವರ್ತಿಗಳಾಗಿರುವರು. ಮತ್ತು ಸಪಾಲಾಃ=ಅಧಿಪತಿಗಳಿಂದ ಕೂಡಿದ ಸರ್ವೇ ಲೋಕಾಃ=ಎಲ್ಲ ಜನರೂ ಅತಂದ್ರಿತಾಃ (ಸಂತಃ)=ಪ್ರಮತ್ತರಾಗದೆ ಆಯಾಯಾ ಕಾಲದಲ್ಲಿ ಬಲಿಂ=ತೆರಿಗೆಯನ್ನು (ಕಪ್ಪ ಕಾಣಿಕೆಗಳನ್ನು) ಯಚ್ಛಂತಿ=ಕೊಡುವರು. ||೨೦||

ಆತ್ಮನಃ ಪ್ರೀತಯೇಽಪ್ಯಾತ್ಮಾ ಪರತಃ ಸ್ವತ ಏವ ವಾ ।
ಲಕ್ಷಯೇಽಲಬ್ಧಕಾಮಂ ತ್ವಾಂ ಚಿಂತಯಾ ಶಬಲಂ ಮುಖಮ್ ॥

ಮತ್ತು ಪ್ರಪಂಚವೂ ನಿನ್ನ ಅಧೀನವಾಗುವುದೆಂದು ಹೇಳುತ್ತಾರೆ. ಆತ್ಮಾ ಅಪಿ = ಪ್ರಪಂಚವೂ ಆತ್ಮನಃ = ನಿನ್ನ ಪ್ರೀತಯೇ = ಪ್ರೀತಿಗಾಗಿ (ಸ್ಯಾತ್) = ಆಗುವುದು. 'ಪ್ರೀತಯೇ ನಾತ್ಮಾ' ಎಂಬ ಪಾಠದಲ್ಲಿ ಆತ್ಮಾ=ನೀನು ಆತ್ಮನಃ=ನಿನ್ನ ಪ್ರೀತಯೇ=ಸಂತೋಷಕ್ಕಾಗಿ ನ (ಭವತಿ) ಆಗುತ್ತಿಲ್ಲ. ನೀನು ಸಂತೋಷಪಡುತ್ತಿಲ್ಲವೆಂದರ್ಥ. ಇದೆಲ್ಲವೂ ಇರಲಿ. ನಿಮ್ಮ ಮನಸ್ಸಿಗೆ ಏನು ತೋರುತ್ತದೆ? ಎಂದರೆ ಹೇಳುತ್ತಾರೆ. ಮುಖಂ=ನಿನ್ನ ಮುಖವು ಚಿಂತಯಾ=ಯೋಚನೆಯಿಂದ ಶಬಲಂ=ಲಕ್ಷಣಹೀನವಾಗಿದೆ. ಕಳೆಗುಂದಿದೆ. ಆದ್ದರಿಂದ ನಾನು ತ್ವಾಂ=ನಿನ್ನನ್ನು ಸ್ವತಃ=ನಿನ್ನ ಕಾರಣದಿಂದಾಗಲಿ ಪರತಃ ವಾ=ಮತ್ತೊಬ್ಬರ ಕಾರಣದಿಂದಾಗಲಿ ಅಲಬ್ಧಕಾಮಂ = ಇಷ್ಟವು ನೆರವೇರದಿರುವವನನ್ನಾಗಿ ಲಕ್ಷಯೇ=ಕಾಣುತ್ತೇನೆ. ಅಲಬ್ಧಕಾಮನೆಂದು ತಿಳಿಯುವುದಕ್ಕೆ ಮುಖಶಬಲತೆಯೇ ಕಾರಣವೆಂದು ಹೇಳಿದಂತಾಯಿತು. ||೨೧||

ಶ್ರೀ ಶುಕ ಉವಾಚ—

ಏವಂ ವಿಕಲ್ಪಿತೋ ರಾಜನ್ ವಿದುಷಾ ಮುನಿನಾಽಪಿ ಸಃ ।
ಪ್ರಶ್ರಯಾವನತೋಽಭ್ಯಾಹ ಪ್ರಜಾಕಾಮಸ್ತತೋ ಮುನಿಮ್ ॥

ಪರೀಕ್ಷಿದ್ರಾಜನೇ, ವಿದುಷಾ ಅಪಿ=ಸಂತಾನವಿಲ್ಲದಕಾರಣ ದುಃಖವೆಂದು ತಿಳಿದವರಾಗಿದ್ದರೂ ಮುನಿನಾ=ಅಂಗೀರಸ ಋಷಿಗಳಿಂದ ಏವಂ=ಮೇಲೆ ಹೇಳಿದಂತೆ

ಪ್ರಮತ್ತರಾಗದೆ ಕಾಲ ಕಾಲಕ್ಕೆ ಕಪ್ಪ-ಕಾಣಿಕೆಗಳನ್ನು ಸಲ್ಲಿಸುವರು. ಪ್ರಪಂಚವೇ ಅನುಕೂಲವಾಗುವುದು. ಆದರೆ ನಿನಗೆ ಸಂತೋಷವಾಗುತ್ತಿಲ್ಲ. ನಿನ್ನ ಕಾರಣದಿಂದಲೋ ಮತ್ತೊಬ್ಬರ ಕಾರಣದಿಂದಲೋ ನಿನ್ನ ಇಷ್ಟವು ನೆರವೇರದಿದ್ದಂತೆ ನನಗೆ ಭಾಸವಾಗುತ್ತಿದೆ. ನಿನ್ನ ಮುಖವು ಯೋಚನೆಯಿಂದ ಬಾಡಿದೆ' ಎಂದರು.

ಶುಕಾಚಾರ್ಯರು—ಪರೀಕ್ಷಿದ್ರಾಜನೇ, ಅಂಗೀರಸರಿಗೆ ರಾಜನ ದುಃಖವು ಸಂತಾನವಿಲ್ಲದ ನಿಮಿತ್ತವೆಂದು ತಿಳಿದಿತ್ತು. ಆದರೂ ಮೇಲಿನ ರೀತಿಯಲ್ಲಿ ಬಗೆಬಗೆಯಾಗಿ ಪ್ರಶ್ನಿಸಿದರು. ಹೀಗೆ ಪ್ರಶ್ನೆಮಾಡಿಸಿಕೊಂಡ ಚಿತ್ರಕೇತುವು

ವಿಕಲ್ಪಿತಃ=ಅನೇಕ ಬಗೆಯಲ್ಲಿ ಪ್ರಶ್ನೆ ಮಾಡಿಸಿಕೊಂಡ ಸಃ=ಆ ಚಿತ್ರಕೇತುವು ಪ್ರಶ್ರಯಾವನತಃ (ಸನ್)=ನಮ್ರತೆಯಿಂದ ಬಗ್ಗಿದವನಾಗಿ ಪ್ರಜಾಕಾಮನಯಾ=ಸಂತತಿಯ ಇಚ್ಛೆಯಿಂದ ಮುನಿಂ=ಆ ಋಷಿಗಳನ್ನು ಅಭ್ಯಾಹ=ಕುರಿತು ವಿಜ್ಞಾಪಿಸಿಕೊಂಡನು. || ೨೨ ||

ಚಿತ್ರಕೇತುರುವಾಚ—

ಭಗವನ್ ಕಿಂ ನ ವಿದಿತಂ ತಪೋಜ್ಞಾನಸಮಾಧಿಭಿಃ ।
ಯೋಗಿನಾಂ ಧ್ವಸ್ತಪಾಪಾನಾಂ ಬಹಿರಂತಃ ಶರೀರಿಷು ॥ ೨೩ ॥

ಮುಂದಿನ ನಾಲ್ಕು ಪದ್ಯಗಳಿಂದ ತನ್ನ ಇಷ್ಟವು ನೆರವೇರಲಿಲ್ಲವೆಂದು ಹೇಳುತ್ತಾ ಮಗನನ್ನು ಬೇಡುತ್ತಾನೆ. ಭಗವನ್ = ಪೂಜ್ಯರೇ, ತಪಸ್ಸಿನಿಂದಲೂ ಜ್ಞಾನದಿಂದಲೂ ಏಕಾಗ್ರತೆಯಿಂದಲೂ ಧ್ವಸ್ತಪಾಪಾನಾಂ=ಪಾಪವನ್ನು ಕಳೆದುಕೊಂಡ ಯೋಗಿನಾಂ=ಯೋಗಿಗಳಿಗೆ ಶರೀರಿಷು=ಪ್ರಾಣಿಗಳಲ್ಲಿ ಬಹಿಃ=ಹೊರಗೂ ಅಂತಃ=ಒಳಗೂ ನ ವಿದಿತಂ=ತಿಳಿಯದಿರುವುದು ಕಿಂ=ಏನು ಇರುವುದು? ತಮಗೆ ಎಲ್ಲವೂ ತಿಳಿದೇ ಇದೆ ಎಂದರ್ಥ. || ೨೩ ||

ತಥಾಪಿ ಪೃಚ್ಛತೋ ಬ್ರೂಯಾಂ ಬ್ರಹ್ಮನ್ನಾತ್ಮನಿ ಚಿಂತಿತಮ್ ।
ಭವತೋ ವಿದುಷಶ್ಚಾಪಿ ಚೋದಿತಸ್ತ್ವದನುಜ್ಞಯಾ ॥ ೨೪ ॥

ಬ್ರಹ್ಮನ್=ಬ್ರಹ್ಮಜ್ಞಾನಿಗಳೇ, ತಥಾಪಿ=ತಮಗೆ ತಿಳಿದಿದ್ದರೂ ಪೃಚ್ಛತಃ=ನನ್ನನ್ನು ಕೇಳುತ್ತಿರುವ ವಿದುಷಃ ಅಪಿ = ಬಲ್ಲವರಾಗಿದ್ದರೂ ಭವತಃ = ತಮಗೆ ಚೋದಿತಃ=ತಮ್ಮಿಂದ ಪ್ರೇರಿತನಾಗಿ ತ್ವದನುಜ್ಞಯಾ=ತಮ್ಮ ಅಪ್ಪಣೆಯಿಂದಲೇ ಆತ್ಮನಿ=ನನ್ನ ಮನಸ್ಸಿನಲ್ಲಿ ಚಿಂತಿತಂ=ಆಲೋಚಿಸಿರುವುದನ್ನು ಬ್ರೂಯಾಂ=ಹೇಳುತ್ತೇನೆ. || ೨೪ ||

ಲೋಕಪಾಲೈರಪಿ ಪ್ರಾರ್ಥ್ಯಾಃ ಸಾಮ್ರಾಜ್ಯೈಶ್ವರ್ಯಸಂಪದಃ ।
ನ ನಂದಯಂತ್ಯಪ್ರಜಂ ಮಾಂ ಕ್ಷುತ್ತೃಟ್ಕಾಮಮಿವಾಪರೇ ॥೨೫॥

ನಮ್ರತೆಯಿಂದ ಬಗ್ಗಿ ಸಂತತಿಯ ಇಚ್ಛೆಯಿಂದ ಆ ಋಷಿಗಳನ್ನು ಕುರಿತು 'ಭಗವನ್, ತಪಸ್ಸು, ಜ್ಞಾನ ಮತ್ತು ಸಮಾಧಿಗಳಿಂದ ಯೋಗಿಗಳಾದ ತಾವು ಪಾಪರಹಿತರಾಗಿರುವಿರಿ. ಪ್ರಾಣಿಗಳಲ್ಲಿ ಹೊರಗೂ ಒಳಗೂ ತಮಗೆ ತಿಳಿಯದುದಿಲ್ಲ. ಆದರೂ ತಮ್ಮಿಂದ ಪ್ರಶ್ನೆಮಾಡಿಸಿಕೊಂಡ ನಾನು ತಮ್ಮ ಅಪ್ಪಣೆ ಪಡೆದು ನನ್ನ ಮನಸ್ಸಿನಲ್ಲಿ ಆಲೋಚಿಸಿರುವುದನ್ನು ವಿಜ್ಞಾಪಿಸಿಕೊಳ್ಳುತ್ತೇನೆ. ಹಸಿವು ನೀರಡಿಕೆಗಳಿಂದ ಕೃಶನಾದವನನ್ನು ಹಾರ ಚಂದನ ಹೆಂಗುಸು ಮೊದಲಾದುವು ಸಂತೋಷಪಡಿಸದಿರುವಂತೆ ಮಕ್ಕಳಿಲ್ಲದ ನನ್ನನ್ನು ಈ ಲೋಕಪಾಲರಿಂದಲೂ ಪ್ರಾರ್ಥಿಸಲ್ಪಡುವ

ಅಪರೇ=ಹಾರ ಚಂದನ ಹೆಂಗಸು ಮೊದಲಾದುವು ಕ್ಷುತ್ತೃಟ್‌ಕ್ಷಾಮಂ ಇವ=ಹಸಿವೆ ನೀರಡಿಕೆಗಳಿಂದ ಕೃಶನಾದವನನ್ನು ಹೇಗೆ ಸಂತೋಷಪಡಿಸಲಾರವೋ ಹಾಗೆ ಲೋಕಪಾಲಕರಿಂದ ಪ್ರಾರ್ಥ್ಯಾಃ=ಪ್ರಾರ್ಥಿಸಲ್ಪಡುವ ಸಾಮ್ರಾಜ್ಯ ಐಶ್ವರ್ಯ ಮತ್ತು ಸಂಪತ್ತುಗಳೂ ಅಪಿ=ಕೂಡ ಅಪ್ರಜಂ=ಮಕ್ಕಳಿಲ್ಲದ ಮಾಂ=ನನ್ನನ್ನು ನ ನಂದಯಂತಿ=ಸಂತೋಷಪಡಿಸುತ್ತಿಲ್ಲ. || ೨೫ ||

ತನ್ನಃ ಪಾಹಿ ಮಹಾಭಾಗ ಪೂರ್ವೈಃ ಸಹ ಗತಂ ತಮಃ ।
ಯಥಾ ತರೇಮ ದುಸ್ತಾರಂ ಪ್ರಜಯಾ ತದ್ವಿಧೇಹಿ ನಃ || ೨೬ ||

ತತ್=ಆ ಕಾರಣದಿಂದ ನಃ=ನಮ್ಮನ್ನು ಪಾಹಿ=ರಕ್ಷಿಸಿರಿ. ಮಹಾಭಾಗ=ಮಹಾಭಾಗ್ಯವಂತರಾದ ಋಷಿವರ್ಯರೇ, ಪೂರ್ವೈಃ ಸಹ=ಹಿರಿಯರೊಂದಿಗೆ ಗತಂ=ಹೊಂದಿದ ದುಸ್ತಾರಂ=ದಾಟಲಾಗದ ತಮಃ=ನರಕವನ್ನು ಯಥಾ=ಹೇಗೆ ಯಯಾ=ಯಾವ ಪ್ರಜಯಾ=ಮಗನೆಂಬ ವಸ್ತುವಿನಿಂದ ತರೇಮ=ದಾಟುವೆವೋ ತತ್=ಅಂತಹ ಮಗನೆಂಬ ವಸ್ತುವನ್ನು ಅಥವಾ ಯಾವ ಉಪಾಯದಿಂದ ದಾಟುವೆವೋ ಆ ಉಪಾಯವನ್ನು ನಃ=ನಮಗೆ ವಿಧೇಹಿ=ಮಾಡಿಕೊಡಿ. ಆ ಉಪಾಯವು ಯಾವುದೆಂಬ ಚಿಂತೆಪಡಬೇಕಾಗಿಲ್ಲ ಎಂಬುದನ್ನು ಪ್ರಜಯಾ ಎಂಬುದರಿಂದ ತಿಳಿಸಿರುವರು. ಪ್ರಜೆಯಿಂದ ಹೇಗೆ ದಾಟುವೆವೋ ಹಾಗೆ ಅದನ್ನು ಮಾಡಿರಿ. || ೨೬ ||

ಶ್ರೀ ಶುಕ ಉವಾಚ—

ಇತ್ಯರ್ಥಿತಃ ಸ ಭಗವಾನ್ ಕೃಪಾಲುರ್ಬ್ರಹ್ಮಣಃ ಸುತಃ ।
ಶ್ರಪಯಿತ್ವಾ ಚರುಂ ತ್ವಾಷ್ಟ್ರಂ ತ್ವಷ್ಟಾರಮಯಜದ್ವಿಭುಃ || ೨೭ ||

ಇತಿ=ಮೇಲೆ ಹೇಳಿದಂತೆ ಅರ್ಥಿತಃ=ಚಿತ್ರಕೇತುವಿನಿಂದ ಪ್ರಾರ್ಥಿತರಾದ ಭಗವಾನ್=ಪೂಜ್ಯರಾದ ಕೃಪಾಲುಃ=ದಯಾಶೀಲರಾದ ಬ್ರಹ್ಮಣಃ=ಬ್ರಹ್ಮದೇವರ ಸುತಃ=ಮಕ್ಕಳಾದ ವಿಭುಃ=ರಾಜನ ಇಷ್ಟಾರ್ಥವನ್ನು ನೆರವೇರಿಸುವಲ್ಲಿ ಸಮರ್ಥರಾದ ಸಃ=ಆ ಅಂಗೀರಸ ಋಷಿಗಳು ತ್ವಾಷ್ಟ್ರಂ=ತ್ವಷ್ಟೃದೇವತೆಗೆ ಸಂಬಂಧಿಸಿದ ಚರುಂ=ಹವಿಸ್ಸನ್ನು ಶ್ರಪಯಿತ್ವಾ=ಸಿದ್ಧಪಡಿಸಿ (ಬೇಯಿಸಿ) ತ್ವಷ್ಟಾರಂ=ತ್ವಷ್ಟೃ

ಸಾಮ್ರಾಜ್ಯ ಐಶ್ವರ್ಯ ಮತ್ತು ಸಂಪತ್ತುಗಳು ಸಂತೋಷಪಡಿಸುತ್ತಿಲ್ಲ. ಆದ್ದರಿಂದ ನಮಗೆ ರಕ್ಷಕರಾಗಿರಿ. ಮಹಾಭಾಗರೆ, ಹಿರಿಯರನ್ನೂ ಕರೆದುಕೊಂಡು ಹೊಂದಿರುವ ದುಸ್ತರವಾದ ಈ ನರಕವನ್ನು ದಾಟಿಸುವ ಸಂತತಿಯೆಂಬ ಉಪಾಯವನ್ನು ನಮಗೆ ಉಂಟುಮಾಡಿಕೊಡಿ,' ಎಂದು ವಿಜ್ಞಾಪಿಸಿಕೊಂಡನು.

ಹೀಗೆ ಪ್ರಾರ್ಥನೆ ಮಾಡಿಸಿಕೊಂಡ ದಯಾಳುಗಳೂ ಬ್ರಹ್ಮದೇವರ ಮಕ್ಕಳೂ ಅಭೀಷ್ಟ ದಾನ ಸಮರ್ಥರೂ ಆದ ಆ ಅಂಗೀರಸರು ತ್ವಷ್ಟೃ ದೇವತೆಗಾಗಿ ಹವಿಸ್ಸನ್ನು ಪಾಕಮಾಡಿ ಆ ದೇವತೆಯ ಅಂತರ್ಯಾಮಿ ತ್ವಷ್ಟೃ ನಾಮಕ ಶ್ರೀಹರಿಯನ್ನು

ದೇವತೆಯ ಅಂತರ್ಯಾಮಿಯಾದ ತ್ವಷ್ಟೃನಾಮಕ ಶ್ರೀಹರಿಯನ್ನು ಅಯಜತ್=ಯಜ್ಞದಿಂದ ಸೇವಿಸಿದರು. || ೨೭ ||

ಜ್ಯೇಷ್ಠಾ ಶ್ರೇಷ್ಠಾ ಚ ಯಾ ರಾಜ್ಞೋ ಮಹಿಷೀಣಾಂ ಚ ಭಾರತ ।
ನಾಮ್ನಾ ಕೃತದ್ಯುತಿಸ್ತಸ್ಯೈ ಯಜ್ಞೋಚ್ಛಿಷ್ಟಮದಾದ್ದ್ವಿಭುಃ ॥ ೨೮ ॥

ಭಾರತ=ಪರೀಕ್ಷಿದ್ರಾಜನೆ, ರಾಜ್ಞಃ=ರಾಜನ ಮಹಿಷೀಣಾಂ=ಪಟ್ಟಾಭಿಷಿಕ್ತ ಹೆಂಡತಿಯರಲ್ಲಿ ಯಾ=ಯಾವಳು ಜ್ಯೇಷ್ಠಾ=ಮೊದಲು ಮದುವೆಯಾದವಳೋ ಶ್ರೇಷ್ಠಾ ಚ=ಮತ್ತು ಗುಣದಿಂದ ಶ್ರೇಷ್ಠಳೋ ನಾಮ್ನಾ=ಹೆಸರಿನಿಂದ ಕೃತದ್ಯುತಿಃ=ಕೃತದ್ಯುತಿ ಎಂಬುವಳೋ ತಸ್ಯೈ=ಅವಳಿಗೆ ವಿಭುಃ=ಸಮರ್ಥರಾದ ಆಂಗೀರಸ ಋಷಿಗಳು ಯಜ್ಞೋಚ್ಛಿಷ್ಟಂ=ಹೋಮ ಮಾಡಿ ಉಳಿದ ಚರುವನ್ನು ಅದಾತ್=ಕೊಟ್ಟರು. || ೨೮ ||

ಅಥಾಹ ನೃಪತಿಂ ರಾಜನ್ ಭವಿತೈಕಸ್ತವಾತ್ಮಜಃ ।
ಹರ್ಷಶೋಕಪ್ರದಸ್ತುಭ್ಯಮಿತಿ ಬ್ರಹ್ಮಸುತೋ ಯಯೌ ॥ ೨೯ ॥

ಪರೀಕ್ಷಿದ್ರಾಜನೆ, ಬ್ರಹ್ಮಸುತಃ=ಆಂಗೀರಸರು ಅಥ=ಅನಂತರ ನೃಪತಿಂ (ಪ್ರತಿ)=ರಾಜನನ್ನು ಕುರಿತು ರಾಜನ್=ಚಿತ್ರಕೇತುವೇ ತುಭ್ಯಂ=ನಿನಗೆ ಹರ್ಷಶೋಕಪ್ರದಃ=ಜನನದಿಂದ ಸಂತೋಷ ಮರಣದಿಂದ ದುಃಖಗಳನ್ನು ಕೊಡುವ ಏಕಃ=ಒಬ್ಬನು ಆತ್ಮಜಃ=ಮಗನು ತವ=ನಿನಗೆ ಭವಿತಾ=ಆಗುವನು. ಇತಿ=ಎಂದು ಆಹ=ಹೇಳಿದರು ಮತ್ತು ಯಯೌ=ಹೊರಟುಹೋದರು. || ೨೯ ||

ಸಾಽಪಿ ತತ್ಪ್ರಾಶನಾದೇವ ಚಿತ್ರಕೇತೋರಧಾರಯತ್ ।
ಗರ್ಭಂ ಕೃತದ್ಯುತಿರ್ದೇವೀ ಕೃತ್ತಿಕಾಗ್ನೇರಿವಾತ್ಮಜಮ್ ॥ ೩೦ ॥

ಸಾ=ಜ್ಯೇಷ್ಠ ಶ್ರೇಷ್ಠ ಮಹಿಷಿಯಾದ ದೇವೀ ಕೃತದ್ಯುತಿಃ ಅಪಿ=ಕೃತದ್ಯುತಿ ದೇವಿಯೂ ಕೂಡ ತತ್ಪ್ರಾಶನಾತ್ ಏವ=ಆ ಚರುವನ್ನು ಸ್ವೀಕರಿಸಿದ ಮಾತ್ರದಿಂದಲೇ ಕೃತ್ತಿಕಾ=ಕೃತ್ತಿಕಾ ನಕ್ಷತ್ರಾಭಿಮಾನಿಯು ಅಗ್ನೇಃ=ಅಗ್ನಿಯ ದೆಸೆಯಿಂದ ಆತ್ಮಜಂ ಇವ=ಮಗನನ್ನು ಹೊಂದಿದಂತೆ ಚಿತ್ರಕೇತೋಃ=ಚಿತ್ರಕೇತುವಿನಿಂದ ಗರ್ಭಂ=ಗರ್ಭವನ್ನು ಅಧಾರಯತ್=ಧರಿಸಿದಳು. || ೩೦ ||

ಉದ್ದೇಶಿಸಿ ಯಾಗ ಮಾಡಿದರು. ರಾಜನ ಮಹಿಷಿಯರಲ್ಲಿ ವಯೋಜ್ಯೇಷ್ಠಳೂ ಗುಣಶ್ರೇಷ್ಠಳೂ ಆದ ಕೃತದ್ಯುತಿ ಎಂಬುವಳಿಗೆ ಆ ವಿಭುಗಳಾದ ಋಷಿಗಳು ಹೋಮ ಮಾಡಿ ಉಳಿದಿದ್ದ ಚರುವನ್ನು ಕೊಟ್ಟರು. ರಾಜನನ್ನು ಕುರಿತು 'ರಾಜನೇ, ನಿನಗೆ ಜನನದಿಂದ ಸಂತೋಷವನ್ನೂ ಮರಣದಿಂದ ದುಃಖವನ್ನೂ ಕೊಡುವವನಾದ ಮಗನೊಬ್ಬನು ಆಗುವನು' ಎಂದು ಹೇಳಿ ಹೊರಟುಹೋದರು.

ಆ ಕೃತದ್ಯುತಿದೇವಿಯೂ ಕೃತ್ತಿಕೆಯು ಅಗ್ನಿಯಿಂದ ಮಗನನ್ನು ಧರಿಸಿದಂತೆ

ತಸ್ಯಾ ಅನುದಿನಂ ಗರ್ಭಃ ಶುಕ್ಲಪಕ್ಷ ಇವೋಡುಪಃ ।
ವವೃಧೇ ಶೂರಸೇನಸ್ಯ ತೇಜಸಾ ಶನಕೈರ್ನೃಪ ॥ ೩೧ ॥

ನೃಪ–ಪರೀಕ್ಷಿದ್ರಾಜನೇ, ಶೂರಸೇನಸ್ಯ=ಶೂರಸೇನ ದೇಶದ ರಾಜನಾದ ಚಿತ್ರಕೇತುವಿನ ತೇಜಸಾ=ವೀರ್ಯದಿಂದ (ಯುಕ್ತಃ)–ಕೂಡಿದ ತಸ್ಯಾಃ–ಆ ಕೃತದ್ಯುತಿಯ ಗರ್ಭವು ಶುಕ್ಲಪಕ್ಷೇ=ಶುಕ್ಲಪಕ್ಷದಲ್ಲಿ ಉಡುಪಃ ಇವ=ಚಂದ್ರನಂತೆ ಶನಕೈಃ=ಮೆಲ್ಲನೆ ಅನುದಿನಂ=ಪ್ರತಿದಿನವೂ ವವೃಧೇ–ಬೆಳೆಯಿತು. ॥ ೩೧ ॥

ಅಥ ಕಾಲ ಉಪಾವೃತ್ತೇ ಕುಮಾರಃ ಸಮಜಾಯತ ।
ಜನಯನ್ ಶೂರಸೇನಾನಾಂ ಶೃಣ್ವತಾಂ ಪರಮಾಂ ಮುದಮ್ ॥

ಅಥ ಅನಂತರ ಕಾಲೇ–ಜನನಕಾಲವು (ಹತ್ತನೆಯ ತಿಂಗಳು) ಉಪಾವೃತ್ತೇ=ಬಂದಿರಲು ಶೃಣ್ವತಾಂ–ಜನನ ವಾರ್ತೆಯನ್ನು ಕೇಳಿದ ಶೂರಸೇನಾನಾಂ–ಶೂರಸೇನ ದೇಶಕ್ಕೆ, ದೇಶದ ಪ್ರಜೆಗಳಿಗೆ ಪರಮಾಂ–ಅತಿಶಯವಾದ ಮುದಂ=ಸಂತೋಷವನ್ನು ಜನಯನ್=ಉಂಟುಮಾಡುತ್ತಾ ಕುಮಾರನು ಸಮಜಾಯತ–ಹುಟ್ಟಿದನು. ॥ ೩೨ ॥

ಸ ರಾಜಾ ಸುಕುಮಾರಸ್ಯ ಸ್ನಾತಃ ಶುಚಿರಲಂಕೃತಃ ।
ವಾಚಯಿತ್ವಾಽಽಶಿಷೋ ವಿಪ್ರೈಃ ಕಾರಯಾಮಾಸ ಜಾತಕಮ್ ॥

ಸ್ನಾತಃ=ಮಗನ ಜನನವನ್ನು ಕೇಳಿ ಸಚೇಲ ಸ್ನಾನಮಾಡಿದ ಶುಚಿಯಾದ ಸಃ ರಾಜಾ=ಆ ಚಿತ್ರಕೇತುವು ಅಲಂಕೃತಃ (ಸನ್)=ಅಲಂಕೃತನಾಗಿ ಸುಕುಮಾರಸ್ಯ=ಉತ್ತಮನಾದ ಆ ಪುತ್ರನಿಗೆ ವಿಪ್ರೈಃ=ಬ್ರಾಹ್ಮಣರಿಂದ ಆಶಿಷಃ–ಆಶೀರ್ವಾದಗಳನ್ನು ವಾಚಯಿತ್ವಾ=ಹೇಳಿಸಿ ಜಾತಕರ್ಮವನ್ನು ಕಾರಯಾಮಾಸ–ಮಾಡಿಸಿದನು. ॥ ೩೩ ॥

ತೇಭ್ಯೋ ಹಿರಣ್ಯಂ ರಜತಂ ವಾಸಾಂಸ್ಯಾಭರಣಾನಿ ಚ ।
ಗ್ರಾಮಾನ್ ಹಯಾನ್ ಗಜಾನ್ ಪ್ರಾದಾದ್ಧೇನೂನಾಮರ್ಬುದಾನಿ ಷಟ್ ॥ ೩೪ ॥

ಚಿತ್ರಕೇತುವಿನಿಂದ ಗರ್ಭವನ್ನು ಧರಿಸಿದಳು. ಅವಳ ಆ ಗರ್ಭವು—ಚಿತ್ರಕೇತುವಿನ ತೇಜಸ್ಸಿನಿಂದ ಕೂಡಿದ್ದು—ಮೆಲ್ಲನೆ ಪ್ರತಿದಿನವೂ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯಾಗುತ್ತ ಬಂತು. ಅನಂತರ ಜನನ ಕಾಲವು ಬಂದಾಗ ಶೂರಸೇನ ದೇಶದ ಪ್ರಜೆಗಳಿಗೇ ಜನನ ವಾರ್ತಾಶ್ರವಣದಿಂದ ಅತ್ಯಾನಂದವನ್ನುಂಟುಮಾಡುತ್ತಾ ಕುಮಾರನು ಉತ್ಪನ್ನನಾದನು. ರಾಜನು ಆ ವಾರ್ತೆಯನ್ನು ಕೇಳಿ ಸಚೈಲ ಸ್ನಾನ ಮಾಡಿದನು. ಅಲಂಕರಿಸಿಕೊಂಡನು. ಆ ಸುಕುಮಾರನಿಗೆ ಬ್ರಾಹ್ಮಣರಿಂದ ಆಶೀರ್ವಾದಗಳನ್ನು ಹೇಳಿಸಿದನು. ಜಾತಕರ್ಮವನ್ನು ಮಾಡಿಸಿದನು. ಅವರಿಗೆ ಬಂಗಾರ, ಬೆಳ್ಳಿ, ಬಟ್ಟೆ, ಆಭರಣ, ಗ್ರಾಮ, ಕುದುರೆ, ಆನೆಗಳನ್ನೂ ಆರು ಅರ್ಬುದ

ತೇಭ್ಯಃ=ಆ ಬ್ರಾಹ್ಮಣರಿಗೆ ಬಂಗಾರವನ್ನೂ ಬೆಳ್ಳಿಯನ್ನೂ ಬಟ್ಟೆಗಳನ್ನೂ ಆಭರಣಗಳನ್ನೂ ಗ್ರಾಮಗಳನ್ನೂ ಕುದುರೆಗಳನ್ನೂ ಆನೆಗಳನ್ನೂ ಧೇನೂನಾಂ=ಹಸುಗಳ ಷಟ್ ಅರ್ಬುದಾನಿ=ಆರು ಅರ್ಬುದಗಳನ್ನೂ ಪ್ರಾದಾತ್=ಕೊಟ್ಟನು. || ೩೪ ||

ವವರ್ಷ ಕಾಮಾನನ್ಯೇಷಾಂ ಪರ್ಜನ್ಯ ಇವ ದೇಹಿನಾಮ್ ।
ಧನ್ಯಂ ಯಶಸ್ಯಮಾಯುಷ್ಯಂ ಕುಮಾರಸ್ಯ ಮಹಾತ್ಮನಃ || ೩೫ ||

ಪರ್ಜನ್ಯಃ ಇವ=ಮಳೆಯ ಅಭಿಮಾನಿದೇವತೆಯಂತೆ ಅನ್ಯೇಷಾಂ ದೇಹಿನಾಂ=ಇತರ ಜನರಿಗೆ ಕಾಮಾನ್=ಅವರವರ ಇಷ್ಟಗಳನ್ನು ವವರ್ಷ=ಮಳೆಗರೆದನು. ಎಂತಹ ಜಾತಕರ್ಮ ಮಾಡಿದನೆಂದರೆ ಹೇಳುತ್ತಾರೆ. ಮಹಾತ್ಮನಃ=ಮಹಿಮೋಪೇತನಾದ ಕುಮಾರನಿಗೆ ಧನ್ಯಂ=ಸ್ವಧನಾದಿ ಸಂಪತ್ಕರವಾದುದು. ಯಶಸ್ಯಂ=ಯಶಸ್ಸನ್ನು ತಂದುಕೊಡುವುದು. ಆಯುಷ್ಯಂ=ಆಯುಸ್ಸನ್ನು ಉಂಟು ಮಾಡುವುದು. ಇಂತಹ ದಾನಾದಿ ಜಾತಕರ್ಮವನ್ನು ಮಾಡಿದನೆಂದರ್ಥ. || ೩೫ ||

ಕೃಚ್ಛ್ರಲಬ್ಧೇಽಸ್ಯ ರಾಜರ್ಷೇಸ್ತನಯೇಽನುದಿನಂ ಪಿತುಃ ।
ಯಥಾ ನಿಃಸ್ವಸ್ಯ ಕೃಚ್ಛ್ರಾಪ್ತೇ ಧನೇ ಸ್ನೇಹೋಽನ್ವವರ್ಧತ || ೩೬ ||

ಅಸ್ಯ=ಈ ಮಗುವಿನ ಪಿತುಃ=ತಂದೆಯಾದ ರಾಜರ್ಷೇಃ=ಚಿತ್ರಕೇತುವಿಗೆ ಕೃಚ್ಛ್ರಲಬ್ಧೇ=ಬಹು ಕಷ್ಟಪಟ್ಟು ಪಡೆದ ತನಯೇ ಮಗನಲ್ಲಿ ನಿಃಸ್ವಸ್ಯ=ದರಿದ್ರನಿಗೆ ಕೃಚ್ಛ್ರಾಪ್ತೇ=ಕಷ್ಟದಿಂದ ಸಂಪಾದಿಸಿದ ಧನೇ=ಹಣದಲ್ಲಿ ಯಥಾ=ಹೇಗೆ ಸ್ನೇಹಃ=ಮಮತೆಯು ಬೆಳೆಯುವುದೋ ತಥಾ=ಹಾಗೆ ಸ್ನೇಹಃ=ಅಭಿಮಾನವು ಅನುದಿನಂ=ಪ್ರತಿದಿನವೂ ಅನ್ವವರ್ಧತ=ಬೆಳೆಯಿತು. || ೩೬ ||

ಮಾತುಸ್ತ್ವತಿತರಾಂ ಪುತ್ರೇ ಸ್ನೇಹೋ ಮೋಹಸಮುದ್ಭವಃ ।
ಕೃತದ್ಯುತೇಃ ಸಪತ್ನೀನಾಂ ಪ್ರಜಾಕಾಮಜ್ವರೋಽಭೂತ್ || ೩೭ ||

ತಾಯಿಯಾದ ಕೃತದ್ಯುತಿಗಾದರೋ ಮಗನಲ್ಲಿ ಮೋಹದಿಂದ ಬಂದ ಪ್ರೀತಿಯು ಅತಿತರಾಂ=ಅತ್ಯಂತವಾಗಿ ಅಭೂತ್=ಆಯಿತು. ಸಪತ್ನೀನಾಂ ತು=ಕೃತದ್ಯುತಿಯ

ಹಸುಗಳನ್ನೂ ದಾನ ಮಾಡಿದನು. ಪರ್ಜನ್ಯನು ಜನರ ಇಷ್ಟವನ್ನು ಮಳೆಗರೆವಂತೆ ಇತರರ ಇಷ್ಟಗಳನ್ನು ಪೂರೈಸಿದನು. ಮಹಿಮೋಪೇತನಾದ ಕುಮಾರನಿಗೆ ಧನ, ಯಶಸ್ಸು ಮತ್ತು ಆಯಸ್ಸುಗಳನ್ನು ಕೊಡುವ ದಾನಾದಿ ಜಾತಕರ್ಮವನ್ನು ಮಾಡಿದನು. ಮಗುವಿನ ತಂದೆಯಾದ ರಾಜನಿಗೆ ದರಿದ್ರನಿಗೆ ಕಷ್ಟದಿಂದ ಸಂಪಾದಿಸಿದ ಧನದಲ್ಲಿ ಮಮತೆಯು ಬೆಳೆಯುವಂತೆ ಅತಿಕಷ್ಟದಿಂದ ಪಡೆದ ಮಗನಲ್ಲಿ ದಿನದಿನಕ್ಕೂ ಅಭಿಮಾನವು ಬೆಳೆಯುತ್ತ ಬಂತು. ತಾಯಿಯಾದ ಕೃತದ್ಯುತಿಗೂ ಮಗನಲ್ಲಿ ಮೋಹದಿಂದ ಬಂದ ಪ್ರೀತಿಯು ಅತಿಶಯವಾಯಿತು. ಅವಳ ಸವತಿಯ

ಸವತಿಯರಿಗಾದರೋ ಪ್ರಜಾಕಾಮುಜ್ವರಃ=ಮಗುವಾಗಬೇಕೆಂಬ ಆಸೆ (ಜ್ವರವು) ಅತಿಯಾಗಿ ಆಯಿತು. ‖ ೩೭ ‖

ಚಿತ್ರಕೇತೋರತಿ ಪ್ರೀತಿರ್ಯಥಾ ದಾರೇ ಪ್ರಜಾವತಿ ।
ನ ತಥಾಽನ್ಯೇಷು ಸಂಜಜ್ಞೇ ಬಾಲಂ ಲಾಲಯತೋಽನ್ವಹಮ್ ‖

ಅನ್ವಹಂ= ಪ್ರತಿದಿನವೂ ಬಾಲಕನನ್ನು ಲಾಲಯತಃ – ಮುದ್ದಿಸುತ್ತಿದ್ದ ಚಿತ್ರಕೇತುವಿಗೆ ಪ್ರಜಾವತಿ=ಮಗನನ್ನು ಹಡೆದ ದಾರೇ=ಹೆಂಡತಿಯಲ್ಲಿ ಯಥಾ= ಹೇಗೆ ಅತಿಪ್ರೀತಿಃ=ಅತ್ಯಂತ ಪ್ರೀತಿಯು ಸಂಜಜ್ಞೇ=ಹುಟ್ಟಿತೋ ತಥಾ=ಹಾಗೆ (ಅಷ್ಟು) ಅನ್ಯೇಷು = ಇತರ (ದಾರೇಷು) – ಹೆಂಡತಿಯರಲ್ಲಿ ನ ಸಂಜಜ್ಞೇ= ಹುಟ್ಟಲಿಲ್ಲ. ‖ ೩೮ ‖

ತಾಃ ಪರ್ಯತಪ್ಯನ್ನಾತ್ಮಾನಂ ಗರ್ಹಯಂತ್ಯೋಽಭ್ಯಸೂಯಯಾ ।
ಅನಪತ್ಯೇನ ದುಃಖೇನ ರಾಜ್ಞಶ್ಚಾನಾದರೇಣ ಚ ‖ ೩೯ ‖

ತಾಃ=ಆ ಸವತಿಯರು ಅಭ್ಯಸೂಯಯಾ=ಹೊಟ್ಟೆಕಿಚ್ಚಿನಿಂದ ಆತ್ಮಾನಂ= ತಮ್ಮನ್ನು ಗರ್ಹಯಂತ್ಯಃ=ದೂಷಿಸಿಕೊಳ್ಳುವರಾಗಿ ಅನಪತ್ಯೇನ=ಮಗುವಿಲ್ಲದ ದುಃಖದಿಂದಲೂ ರಾಜನ ಅನಾದರದಿಂದಲೂ ಪರ್ಯತಪ್ಯನ್=ಅತ್ಯಂತ ಪರಿತಪಿಸಿ ದರು. ‖ ೩೯ ‖

ಧಿಗಪ್ರಜಾಂ ಸ್ತ್ರಿಯಂ ಪಾಪಾಂ ಪತ್ಯುಶ್ಚಾಗೃಹಸಂಮತಾಮ್ ।
ಸಪ್ರಜಾಭಿಃ ಸಪತ್ನೀಭಿರ್ದಾಸೀಮಿವ ತಿರಸ್ಕೃತಾಮ್ ‖ ೪೦ ‖

ಅಪ್ರಜಾಂ=ಸಂತತಿಯಿಲ್ಲದ ಆದ್ದರಿಂದಲೇ ಪಾಪಾಂ=ಪಾಪಿಯಾದ ಪತ್ಯುಃ= ಗಂಡನ ಅಗೃಹಸಂಮತಾಂ=ಮನೆಗೆ ಸಂಮತಳಲ್ಲದ ಸಪ್ರಜಾಭಿಃ=ಮಕ್ಕಳಿಂದ ಕೂಡಿದ ಸಪತ್ನೀಭಿಃ=ಸವತಿಯರಿಂದ ದಾಸೀಂ ಇವ=ದಾಸಿಯಂತೆ ತಿರಸ್ಕೃತಾಂ= ತಿರಸ್ಕೃತಳಾದ ಸ್ತ್ರಿಯಂ=ಸ್ತ್ರೀಗೆ ಧಿಕ್=ಧಿಕ್ಕಾರವು. ‖ ೪೦ ‖

ದಾಸೀನಾಂ ಕೋ ನು ಸಂತಾಪಃ ಸ್ವಾಮಿನಃ ಪರಿಚರ್ಯಯಾ ।
ಅಭೀಕ್ಷ್ಣಂ ಲಬ್ಧಮಾನಾನಾಂ ದಾಸ್ಯಾ ದಾಸೀವ ದುರ್ಭಗಾ ‖೪೧‖

ರಿಗೆ ತಮಗೂ ಮಗುವಾಗಬೇಕೆಂಬ ಆಸೆ ಅತಿಯಾಯಿತು. ನಿತ್ಯವೂ ಬಾಲಕನನ್ನು ಲಾಲಿಸುತ್ತಿದ್ದ ಚಿತ್ರಕೇತುವಿಗೆ ಮಗುವಿನ ತಾಯಿಯ ಮೇಲೆ ಉಂಟಾದಷ್ಟು ಪ್ರೇಮ ಇತರ ಹೆಂಡತಿಯರ ಮೇಲೆ ಉಂಟಾಗಲಿಲ್ಲ. ಹೊಟ್ಟೆಕಿಚ್ಚಿನಿಂದ ಸವತಿಯರು ತಮ್ಮನ್ನು ತಾವೇ ದೂಷಿಸಿಕೊಂಡರು. ತಮಗೆ ಮಗುವಾಗದಿದ್ದುದಕ್ಕೂ ರಾಜನು ತಮ್ಮಲ್ಲಿ ತೋರಿದ ಅನಾದರದಿಂದಲೂ ಅವರಿಗೆ ಅತ್ಯಂತ ವ್ಯಥೆಯಾಯಿತು. 'ಸಂತತಿಯಿಲ್ಲದ ಪಾಪಿಗೆ ಗಂಡನ ಮನೆಗೆ ಸಮ್ಮತಳಲ್ಲದವಳಿಗೆ—ಮಕ್ಕಳಿರುವ ಸವತಿಯರಿಂದ ದಾಸಿಯಂತೆ ತಿರಸ್ಕೃತಳಿಗೆ—ಸ್ತ್ರೀಗೆ ಧಿಕ್ಕಾರ! ದಾಸಿಯಾದರೂ ಪತಿಯ ಪರಿಚರ್ಯೆಯಿಂದ ಮೇಲಿಂದ ಮೇಲೆ ಗೌರವವನ್ನು ಸಂಪಾದಿಸಿಕೊಂಡವಳಿಗೆ

ಸ್ವಾಮಿಯ ಪ್ರೀತಿಯಿಲ್ಲದ ಮೇಲೆ ದಾಸೀತನವೂ ಅಪ್ರಯೋಜಕವೆಂದು ಹೇಳುತ್ತಾರೆ. ಸ್ವಾಮಿನಃ=ಯಜಮಾನನ ಪರಿಚರ್ಯೆಯಿಂದ ಅಭೀಕ್ಷ್ಣಂ=ಮತ್ತೆ ಮತ್ತೆ ಲಬ್ಧಮಾನಾನಾಂ=ಮರ್ಯಾದೆಯನ್ನು ಸಂಪಾದಿಸಿಕೊಂಡ ದಾಸೀನಾಂ= ದಾಸಿಯರಿಗೆ ಸಂತಾಪವು ಕಃ ನು = ಯಾವುದು ? ನಾನಾದರೋ ದಾಸ್ಯಾಃ = ದಾಸಿಯ ದಾಸೀ ಇವ=ದಾಸಿಯಂತೆ ದುರ್ಭಗಾ=ದೌರ್ಭಾಗ್ಯವತಿಯು. || ೪೧ ||

ಏವಂ ಸಂದಹ್ಯಮಾನಾನಾಂ ಸಪತ್ನ್ಯಾಃ ಪುತ್ರಸಂಪದಾ ।
ರಾಜ್ಞೋಽಸಂಮತವೃತ್ತೀನಾಂ ವಿದ್ವೇಷೋ ಬಲವಾನಭೂತ್ ॥

ಏವಂ – ಹೀಗೆ ಸವತಿಯ ಪುತ್ರಸಂಪತ್ತಿನಿಂದ ಸಂದಹ್ಯಮಾನಾನಾಂ= ಒಳಗೇ ಬೆಂದುಹೋಗುತ್ತಿರುವ, ರಾಜ್ಞಃ = ಚಿತ್ರಕೇತುವಿಗೆ ಅಸಂಮತವೃತ್ತೀನಾಂ = (ಬಂಜೆಯರಾದ್ದರಿಂದ) ಸಮ್ಮತವಲ್ಲದ ಜೀವನವುಳ್ಳ (ತಾಸಾಂ)=ಆ ಸವತಿಯರಿಗೆ (ಕುಮಾರೇ)–ಹುಡುಗನಲ್ಲಿ ವಿದ್ವೇಷಃ=ಅತಿಶಯ ದ್ವೇಷವು ಬಲವಾನ್=ದೃಢವಾದುದಾಗಿ ಅಭೂತ್=ಆಯಿತು. || ೪೨ ||

ವಿದ್ವೇಷಾನ್ನಷ್ಟಮತಯಃ ಸ್ತ್ರಿಯೋ ದಾರುಣಚೇತಸಃ ।
ಗರಂ ದದುಃ ಕುಮಾರಾಯ ವಿದ್ವೇಷಾನ್ನೃಪತಿಂ ಪ್ರತಿ ॥ ೪೩ ॥

ವಿದ್ವೇಷಾತ್=ಅತಿಶಯವಾದ ದ್ವೇಷದಿಂದ ನಷ್ಟಮತಯಃ=ಬುದ್ಧಿಯು ನಷ್ಟವಾದ (ವಿವೇಕವನ್ನು ಕಳೆದುಕೊಂಡ) ದಾರುಣಚೇತಸಃ=ಕ್ರೂರ ಮನಸ್ಸಿನ ಸ್ತ್ರಿಯಃ=ಆ ಹೆಂಗಸರು ನೃಪತಿಂ ಪ್ರತಿ=ಪತಿಯಾದ ರಾಜನಲ್ಲಿದ್ದ ವಿದ್ವೇಷಾತ್= ತಮ್ಮನ್ನು ಪ್ರೀತಿಸುತ್ತಿಲ್ಲವೆಂಬ ಆಕ್ರೋಶದಿಂದ ('ದುರ್ಮರ್ಷಾಃ' ಎಂಬ ಪಾಠದಲ್ಲಿ ಅಸಹನೆಯುಳ್ಳವರಾಗಿ ಎಂದರ್ಥ.) ಕುಮಾರಾಯ=ಆ ಗಂಡು ಮಗುವಿಗೆ ಗರಂ= ವಿಷವನ್ನು ದದುಃ=ಕೊಟ್ಟರು. || ೪೩ ||

ಕೃತದ್ಯುತಿರಜಾನಂತೀ ಸಪತ್ನೀನಾಮಘಂ ಮಹತ್ ।
ಸುಪ್ತ ಏವೇತಿ ಸಂಚಿಂತ್ಯ ನಿರೀಕ್ಷ್ಯ ವ್ಯಚರದ್ಗೃಹೇ ॥ ೪೪ ॥

ಸಪತ್ನೀನಾಂ=ಸವತಿಯರ ಮಹತ್ ಅಘಂ=ಮಗುವಿಗೆ ವಿಷಕೊಟ್ಟದ್ದೆಂಬ ಮಹಾಪಾಪವನ್ನು ಅಜಾನಂತೀ=ತಿಳಿಯದಿರುವ ಕೃತದ್ಯುತಿಯು—ಆ ಮಗುವಿನ

ಸಂತಾಪವೆಲ್ಲಿಯದು! ನಾನಾದರೋ ದಾಸಿಯ ದಾಸಿಯಂತೆ ದುರ್ಭಾಗ್ಯಶಾಲಿನಿ' ಎಂದು ಸವತಿಯಾದ ಕೃತದ್ಯುತಿಯ ಕುಮಾರಸಂಪತ್ತಿನಿಂದ ಮನಸ್ಸಿನಲ್ಲಿಯೇ ಸಂತಪ್ತರಾದ ಆ ರಾಜಪತ್ನಿಯರಿಗೆ—ಬಂಜೆಯರೆಂದು ರಾಜನಿಗೆ ಅಸಮ್ಮತ ಜೀವನವತಿಯರಿಗೆ—ಆ ಕುಮಾರನಲ್ಲಿ ಅತಿಶಯ ದ್ವೇಷವು ಬಲವಾಯಿತು. ಈ ವಿದ್ವೇಷದಿಂದ ವಿವೇಕಭ್ರಷ್ಟರಾದ ಆ ಕ್ರೂರಚಿತ್ತದ ಸ್ತ್ರೀಯರು ರಾಜನು ತಮ್ಮನ್ನು ಪ್ರೇಮಿಸುತ್ತಿಲ್ಲವೆಂಬ ಆಕ್ರೋಶದಿಂದ ಆ ಮಗುವಿಗೆ ವಿಷಹಾಕಿದರು. ಸವತಿಯರ ಈ ಮಹಾಪಾಪಕಾರ್ಯವನ್ನು ಕೃತದ್ಯುತಿ ತಿಳಿಯಲಿಲ್ಲ. ಮಗನು ಮಲಗಿದ್ದಾನೆಂದೇ

ತಾಯಿಯು ನಿರೀಕ್ಷ್ಯ=ನೋಡಿ (ಕುಮಾರಃ)=ಮಗುವು ಸುಪ್ತಃ ಏವ-ಮಲಗಿಯೇ ಇರುವನು ಇತಿ=ಎಂದು ಸಂಚಿಂತ್ಯ=ಚೆನ್ನಾಗಿ ಆಲೋಚಿಸಿ ಗೃಹೇ=ಮನೆಯಲ್ಲಿ ವ್ಯಚರತ್-ಓಡಾಡುತ್ತಿದ್ದಳು. || ೪೪ ||

ಶಯಾನಂ ಸುಚಿರಂ ಬಾಲಮುಪಧಾರ್ಯ ಮನೀಷಿಣೀ ।
ಪುತ್ರಮಾನಯ ಮೇ ಭದ್ರೇ ಇತಿ ಧಾತ್ರೀಮಚೋದಯತ್ ॥೪೫॥

ಮನೀಷಿಣೀ=ಬುದ್ಧಿವಂತಳಾದ ಆ ಕೃತದ್ಯುತಿಯು ಬಾಲಂ=ಮಗುವನ್ನು ಸುಚಿರಂ=ಬಹಳ ಹೊತ್ತು ಶಯಾನಂ=ಮಲಗಿರುವನೆಂದು ಉಪಧಾರ್ಯ-ತಿಳಿದು ಧಾತ್ರೀಂ-ಮಗುವಿಗೆ ಸ್ತನ್ಯವನ್ನು ಕೊಡುವ ದಾದಿಯನ್ನು ಭದ್ರೇ=ಮಂಗಳಕರಳೇ, ಮೇ=ನನ್ನ ಪುತ್ರಂ=ಮಗನನ್ನು ಆನಯ=ಎತ್ತಿಕೊಂಡು ಬಾ ಇತಿ=ಎಂದು ಅಚೋದಯತ್-ಪ್ರೇರಿಸಿದಳು. ದಾದಿಗೆ ಹೇಳಿದಳು. || ೪೫ ||

ಸಾ ಶಯಾನಮುಪಾವ್ರಜ್ಯ ದೃಷ್ಟ್ವಾ ಚೋತ್ತಾರಲೋಚನಮ್ ।
ಪ್ರಾಣೇಂದ್ರಿಯಾತ್ಮಭಿಸ್ತ್ಯಕ್ತಂ ಹತಾಽಸ್ಮೀತ್ಯಪತದ್ಭುವಿ ॥ ೪೬ ॥

ಸಾ=ಆ ದಾದಿಯು ಶಯಾನಂ=ಮಲಗಿರುವ ಮಗುವನ್ನು ಉಪಾವ್ರಜ್ಯ=ಸಮೀಪಿಸಿ ಪ್ರಾಣಗಳಿಂದಲೂ ಇಂದ್ರಿಯಗಳಿಂದಲೂ ಜೀವನಿಂದಲೂ ತ್ಯಕ್ತಂ=ಪರಿತ್ಯಕ್ತನಾದ ಆದ್ದರಿಂದಲೇ ಉತ್ತಾರಲೋಚನಂ-ಮೇಲಕ್ಕೆ ಹೋದ ಗುಡ್ಡೆಗಳುಳ್ಳ ಕಣ್ಣುಗಳುಳ್ಳವನನ್ನು ದೃಷ್ಟ್ವಾ-ನೋಡಿ ಹತಾ ಅಸ್ಮಿ-ನಾನು ಹಾಳಾದೆ (ಅನ್ಯಾಯವಾಯಿತು) ಇತಿ=ಎಂದು ಹೇಳುತ್ತಾ ಭುವಿ=ಭೂಮಿಯ ಮೇಲೆ ಅಪತತ್ ಚ=ಬಿದ್ದುಬಿಟ್ಟಳು. || ೪೬ ||

ತಸ್ಯಾಸ್ತದಾಕರ್ಣ್ಯ ಭೃಶಾತುರಂ ವಚೋ
ಘ್ನಂತ್ಯಾಃ ಕರಾಭ್ಯಾಮುರ ಉಚ್ಚಕೈರಪಿ ।
ಪ್ರವಿಶ್ಯ ರಾಜ್ಞೀ ತ್ವರಯಾಽಽತ್ಮಜಾಂತಿಕಂ
ದದರ್ಶ ಬಾಲಂ ಸಹಸಾ ಮೃತಂ ಸುತಮ್ ॥ ೪೭ ॥

ಭಾವಿಸಿ ಮನೆಯಲ್ಲಿ ಓಡಾಡುತ್ತಾ ಇದ್ದಳು. ಬಹು ಹೊತ್ತಾದರೂ ಮಗುವು ಮಲಗಿಯೇ ಇದ್ದಿತು. ಆ ಬುದ್ಧಿಮತಿಯಾದ ಕೃತದ್ಯುತಿಯು ಇದನ್ನು ತಿಳಿದು ದಾದಿಯನ್ನು ಕರೆದು 'ಭದ್ರೇ, ನನ್ನ ಮಗನನ್ನು ಎತ್ತಿಕೊಂಡು ಬಾ' ಎಂದು ಹೇಳಿದಳು. ದಾದಿಯು ಮಲಗಿದ್ದ ಮಗುವಿನ ಸಮೀಪಕ್ಕೆ ಹೋದಳು. ಪ್ರಾಣ-ಇಂದ್ರಿಯ ಮತ್ತು ಜೀವವಿಲ್ಲದಿದ್ದ, ಕಣ್ಣುಗುಡ್ಡೆ ಮೇಲಾಗಿದ್ದ, ಆ ಮಗುವನ್ನು ನೋಡಿ 'ಅಯ್ಯೋ! ಹತಳಾದ' ಎಂದು ನೆಲಕ್ಕೆ ಬಿದ್ದಳು. ದಾದಿಯ ಆ ಆರ್ತನಾದವನ್ನೂ ಕೈಗಳಿಂದ ಗಟ್ಟಿಯಾಗಿ ಎದೆ ಬಡಿದುಕೊಳ್ಳುವಿಕೆಯನ್ನೂ ಕೇಳಿದ ರಾಣಿಯು ಜಾಗ್ರತೆ ಮಗುವಿದ್ದ ಸ್ಥಳಕ್ಕೆ ಧಾವಿಸಿದಳು. ಇದ್ದಕ್ಕಿದ್ದಂತೆ ಸತ್ತುಹೋಗಿದ್ದ ಮಗನನ್ನು

ಕರಾಭ್ಯಾಂ=ಕೈಗಳಿಂದ ಉಚ್ಚೈಃ=ಶಬ್ದ ಕೇಳಿಬರುವಂತೆ ಗಟ್ಟಿಯಾಗಿ ಉರಃ ಅಪಿ=ಎದೆಯನ್ನೂ ಕೂಡ ಘ್ನಂತ್ಯಾಃ=ಹೊಡೆದುಕೊಳ್ಳುತ್ತಿದ್ದ ತಸ್ಯಾಃ=ಆ ದಾದಿಯ ಭೃಶಾತುರಂ=ಅತ್ಯಂತ ದುಃಖದ ತತ್ ವಚಃ=ಆ ಮಾತನ್ನು ಆಕರ್ಣ್ಯ=ಕೇಳಿ ರಾಜ್ಞೀ=ರಾಣಿಯಾದ ಕೃತದ್ಯುತಿಯು ತ್ವರಯಾ=ಶೀಘ್ರವಾಗಿ ಆತ್ಮಜಾಂತಿಕಂ = ಮಗುವಿನ ಸಮೀಪವನ್ನು ಪ್ರವಿಶ್ಯ=ಪ್ರವೇಶಿಸಿ, ಹೊಂದಿ, ಸಹಸಾ=ಇದ್ದಕ್ಕಿದ್ದಂತೆ ಮೃತಂ=ಸತ್ತುಹೋಗಿದ್ದ ಬಾಲಂ ಸುತಂ=ಸಣ್ಣಮಗನನ್ನು ದದರ್ಶ=ಕಂಡಳು. || ೪೭ ||

ಪಪಾತ ಭೂಮೌ ಪರಿವೃದ್ಧಯಾ ಶುಚಾ
ಮುಮೋಹ ವಿಭ್ರಷ್ಟಶಿರೋರುಹಾಂಬರಾ ।
ತತೋ ನೃಪಾಂತಃಪುರವರ್ತಿನೋ ಜನಾ
ನರಾಶ್ಚ ನಾರ್ಯಶ್ಚ ನಿಶಮ್ಯ ರೋದನಮ್ ।
ಆಗತ್ಯ ತುಲ್ಯವ್ಯಸನಾಃ ಸುದುಃಖಿತಾ-
ಸ್ತಾಶ್ಚ ವ್ಯಲೀಕಂ ರುರುದುಃ ಕೃತಾಗಸಃ || ೪೮ ||

ಪರಿವೃದ್ಧಯಾ=ಅತಿಯಾಗಿ ಬೆಳೆದ ಶುಚಾ=ದುಃಖದಿಂದ ವಿಭ್ರಷ್ಟಶಿರೋ-ರುಹಾಂಬರಾ= ತಲೆಗೂದಲು ಮತ್ತು ಮೈಮೇಲಿನ ಬಟ್ಟೆಗಳು ಕಳಚಿದವಳಾಗಿ ಮುಮೋಹ=ಮೂರ್ಛೆಬಿದ್ದಳು ; ಭೂಮೌ=ಭೂಮಿಯ ಮೇಲೆ ಪಪಾತ=ಬಿದ್ದಳು. ತತಃ=ಅನಂತರ ನೃಪ=ಪರೀಕ್ಷಿದ್ರಾಜನೇ, ಅಂತಃಪುರವರ್ತಿನಃ=ರಾಜನ ಅಂತಃ ಪುರಕ್ಕೆ ಸೇರಿದ ನರಾಃ ಚ=ಗಂಡಸರೂ ನಾರ್ಯಃ ಚ=ಹೆಂಗಸರೂ ಜನಾಃ= ಜನರು ರೋದನಂ=ಅಳುವನ್ನು ನಿಶಮ್ಯ=ಕೇಳಿ ಆಗತ್ಯ=ಬಂದು ತುಲ್ಯವ್ಯಸನಾಃ (ಸಂತಃ)=ಸಮಾನವಾದ ವ್ಯಸನವುಳ್ಳವರಾಗಿ ಸುದುಃಖಿತಾಃ=ಅತ್ಯಂತ ದುಃಖಿತ ರಾಗಿ (ಆಸನ್) ಆದರು. ಕೃತಾಗಸಃ = ಮಗುವಿಗೆ ವಿಷಕೊಟ್ಟು ಅಪರಾಧ ಮಾಡಿದ್ದ ತಾಃ ಚ=ಆ ಸವತಿಯರೂ ಕೂಡ ವ್ಯಲೀಕಂ=ಸುಳ್ಳಾಗಿ (ದುಃಖವಿಲ್ಲ ದಿದ್ದರೂ ದುಃಖಿತರಂತೆ) ರುರುದುಃ=ಅತ್ತರು. || ೪೮ ||

ಶ್ರುತ್ವಾ ಮೃತಂ ಪುತ್ರಮಲಕ್ಷಿತಾಂತಕಂ
ವಿನಷ್ಟದೃಷ್ಟಿಃ ಪ್ರಪತನ್ ಸ್ಖಲನ್ನಪಿ ।

ಕಂಡಳು. ದುಃಖವು ಬಹಳವಾಯಿತು. ತಲೆಗೂದಲು ಗಂಟು ಬಿಚ್ಚಿತು. ಉಟ್ಟಿದ್ದ ಬಟ್ಟೆಯು ಕಳಚಿತು. ನೆಲದಮೇಲೆ ಮೂರ್ಛೆ ಬಿದ್ದಳು. ಅಂತಃಪುರದಲ್ಲಿದ್ದ ಗಂಡಸರು ಹೆಂಗಸರೆಲ್ಲರೂ ರೋದನವನ್ನು ಕೇಳಿ ಓಡಿಬಂದರು. ಅವರೂ ವ್ಯಸನಗೊಂಡು ದುಃಖಪಟ್ಟರು. ಪಾಪವೆಸಗಿದ್ದ ಆ ಸವತಿಯರೂ ಸುಳ್ಳಾಗಿ ತಾವೂ ಅತ್ತರು. ಕಾರಣವೇ ತಿಳಿಯಲಾಗದೆ ಮಗನು ಸತ್ತ ವಾರ್ತೆಯನ್ನು ಕೇಳಿದ ಚಿತ್ರಕೇತುವು

ಸ್ನೇಹಾನುಬಂಧೈಧಿತಯಾ ಶುಚಾ ಭೃಶಂ
ವಿಮೂರ್ಛಿತೋಽನುಪ್ರಕೃತಿರ್ದ್ವಿಜೈರ್ವೃತಃ ॥ ೪೯ ॥

ಮುಂದಿನ ಪದ್ಯದಲ್ಲಿರುವ 'ಸಃ' ಎಂಬುದನ್ನು ಇಲ್ಲಿ ತೆಗೆದುಕೊಳ್ಳಬೇಕು. ಸಃ= ಆ ಚಿತ್ರಕೇತು ರಾಜನು ಅಲಕ್ಷಿತಾಂತಕಂ= ಸಾವಿಗೆ ಕಾರಣವೇ ತಿಳಿಯದಿರುವ ಪುತ್ರಂ= ಮಗನನ್ನು ಮೃತಂ= ಮೃತನಾದನೆಂದು ಶ್ರುತ್ವಾ= ಕೇಳಿ ವಿನಷ್ಟದೃಷ್ಟಿಃ (ಸನ್)= ಕಣ್ಣು ಕಾಣದವನಾಗಿ ಪ್ರಪತನ್= ಬೀಳುತ್ತಾ ಅಪಿ= ಮತ್ತು ಸ್ಖಲನ್= ಮುಗ್ಗರಿಸುತ್ತಾ ಸ್ನೇಹಾನುಬಂಧೈಧಿತಯಾ = ಪ್ರೀತಿಯ ಸಂಬಂಧದಿಂದ ಬೆಳೆದ ಶುಚಾ= ದುಃಖದಿಂದ ಅನುಪ್ರಕೃತಿಃ= ತನ್ನ ಹಿಂದೆ ಬಂದಿದ್ದ ಮಂತ್ರಿ ಮೊದಲಾದ ಪ್ರಕೃತಿಜನರಿಂದ ಕೂಡಿ ದ್ವಿಜೈಃ= ಜೊತೆಗೆ ಬಂದ ಬ್ರಾಹ್ಮಣರಿಂದ ವೃತಃ (ಸನ್)= ಕೂಡಿದವನಾಗಿ ಭೃಶಂ = ಅತ್ಯಂತ ವಿಮೂರ್ಛಿತಃ = ಪ್ರಜ್ಞೆತಪ್ಪಿ ಬಿದ್ದನು. 'ಅನುಪ್ರಕೃತಿರ್ದ್ವಿಜೈಃ' ಎಂಬ ಪಾಠದಲ್ಲಿ ಅನುಗತರಾದ ಪ್ರಕೃತಿಜನರಿಂದಲೂ ಬ್ರಾಹ್ಮಣರಿಂದಲೂ ಪರಿವೃತನಾಗಿ ಎಂದರ್ಥ. ॥ ೪೯ ॥

ಪಪಾತ ಬಾಲಸ್ಯ ಸ ಪಾದಮೂಲೇ
ಮೃತಸ್ಯ ವಿಸ್ರಸ್ತಶಿರೋರುಹಾಂಬರಃ ।
ದೀರ್ಘಂ ಶ್ವಸನ್ ಬಾಷ್ಪಕಲೋಪರೋಧತೋ
ನಿರುದ್ಧಕಂಠೋ ನ ಶಶಾಕ ಭಾಷಿತುಮ್ ॥ ೫೦ ॥

ವಿಸ್ರಸ್ತ....ಬರಃ= ತಲೆಗೂದಲು ಮತ್ತು ಬಟ್ಟೆಗಳು ಜಾರಿದ ಆ ಚಿತ್ರಕೇತುವು ಸತ್ತ ಹುಡುಗನ (ಮಗುವಿನ) ಪಾದಗಳ ಬುಡದಲ್ಲಿ ಬಿದ್ದನು. ದೀರ್ಘಂ ಶ್ವಸನ್= ನಿಟ್ಟುಸಿರು ಬಿಡುತ್ತಾ ಬಾಷ್ಪಕಲೋಪರೋಧತಃ= ಕಣ್ಣೀರಿನ ಕಣಗಳ ತಡೆಯುವಿಕೆ ಯಿಂದ ನಿರುದ್ಧಕಂಠಃ(ಸನ್)= ಗಂಟಲು ಕಟ್ಟಿದವನಾಗಿ ಭಾಷಿತುಂ= ಮಾತನಾಡಲು ನ ಶಶಾಕ= ಸಮರ್ಥನಾಗಲಿಲ್ಲ. ॥ ೫೦ ॥

ಪತಿಂ ನಿರೀಕ್ಷ್ಯೋರುಶುಚಾಽರ್ಪಿತಂ ತದಾ
ಮೃತಂ ಚ ಬಾಲಂ ಸುತಮೇಕಸಂತತಿಮ್ ।

ಕಣ್ಣು ಕಾಣದಾದನು. ಏಳುತ್ತಾ ಬೀಳುತ್ತಾ ಮುಗ್ಗರಿಸುತ್ತಾ ಮಗುವಿದ್ದೆಡೆಗೆ ಬಂದನು. ಅವನನ್ನು ಹಿಂಬಾಲಿಸಿ ಮಂತ್ರಿ ಮೊದಲಾದವರೂ ಬ್ರಾಹ್ಮಣರೂ ಬಂದಿದ್ದರು. ಅವರಿಂದ ಪರಿವೃತನಾದ ರಾಜನು ಮಗನ ಮೇಲಿನ ಅಭಿಮಾನದಿಂದ ಹೆಚ್ಚು ದುಃಖಿತನಾಗಿ ಮೂರ್ಛಿತನಾದನು. ತಲೆಗೂದಲು ಮತ್ತು ಬಟ್ಟೆ ಕಳಚಿದ ರಾಜನು ನಿಟ್ಟುಸಿರು ಬಿಡುತ್ತಾ ಸತ್ತಿದ್ದ ಹುಡುಗನ ಕಾಲಬುಡದಲ್ಲಿ ಬಿದ್ದನು. ಕಣ್ಣು ತುಂಬ ನೀರು ತುಂಬಿತು. ಗಂಟಲು ಕಟ್ಟಿ (ಸೆರೆಬಿಗಿದು) ಮಾತನಾಡಲಾರದಾದನು.

ಆಗ ಪತಿವ್ರತೆಯಾದ ರಾಣಿಯು ಬಹಳ ದುಃಖಗೊಂಡಿರುವ ಗಂಡನನ್ನೂ ಸತ್ತು ಬಿದ್ದಿರುವ ಒಬ್ಬನೇ ಮಗನನ್ನೂ ನೋಡಿ ಜನರ ಮತ್ತು ಅಮಾತ್ಯ

ಜನಸ್ಯ ರಾಜ್ಞೀ ಪ್ರಕೃತೇಶ್ಚ ಹೃದ್ರುಜಂ
ಸತೀ ದಧಾನಾ ವಿಲಲಾಪ ಚಿತ್ರಧಾ ॥ ೫೧ ॥

ತದಾ=ಆಗ ಸತೀ-ಪತಿವ್ರತೆಯಾದ ರಾಜ್ಞೀ=ರಾಣಿಯು ಉರುಶುಚಾ=ಬಹಳ ಶೋಕದಿಂದ ಅರ್ಪಿತಂ=ವ್ಯಾಪ್ತನಾದ ಪತಿಂ=ಗಂಡನನ್ನೂ ಏಕಸಂತತಿಂ=ಒಂದೇ ಸಂತತಿಯಾದ ಸುತಂ=ಮಗನಾದ ಬಾಲಂ=ಹುಡುಗನನ್ನು ಮೃತಂ ಚ=ಸತ್ತಿರುವವನನ್ನೂ ನಿರೀಕ್ಷ್ಯ-ನೋಡಿ ಜನಸ್ಯ=ಜನದ ಪ್ರಕೃತೇಃ ಚ=ಅಮಾತ್ಯ ಮೊದಲಾದ ಪ್ರಕೃತಿಗಳ ಹೃದ್ರುಜಂ=ಹೃದಯ ಸಂಕಟವನ್ನು ದಧಾನಾ=ಧರಿಸುವಳಾಗಿ ಚಿತ್ರಧಾ=ಅನೇಕ ರೀತಿಯಲ್ಲಿ ವಿಲಲಾಪ=ಹೇಳಿಕೊಂಡು ಅತ್ತಳು. ॥ ೫೧ ॥

ಸ್ತನದ್ವಯಂ ಕುಂಕುಮಪಂಕಮಂಡಿತಂ
ನಿಷಿಂಚತೀ ಸಾಂಜನಬಾಷ್ಪಬಿಂದುಭಿಃ ।
ವಿಕೀರ್ಯ ಕೇಶಾನ್ ವಿಗಲತ್ಸ್ರಜಃ ಸುತಂ
ಶುಶೋಚ ಚಿತ್ರಂ ಕುರರೀವ ಸುಸ್ವರಮ್ ॥ ೫೨ ॥

ರಾಜ್ಞೀ=ರಾಣಿಯು ಕುಂಕುಮಪಂಕಮಂಡಿತಂ=ಕೇಸರಿಯ ಹಸಿಗಂಧದಿಂದ ಅಲಂಕೃತವಾಗಿದ್ದ ಸ್ತನದ್ವಯಂ=ಎರಡು ಸ್ತನಗಳನ್ನು ಸಾಂಜನಬಾಷ್ಪಬಿಂದುಭಿಃ=ಕಾಡಿಗೆಯಿಂದ ಕೂಡಿದ ಕಣ್ಣೀರಿನ ಹನಿಗಳಿಂದ ನಿಷಿಂಚತೀ (ಸತೀ)=ಸ್ನಾನ ಮಾಡಿಸುವಳಾಗಿ ವಿಗಲತ್-ಉದುರಿ ಕೆಳಗೆ ಬೀಳುತ್ತಿರುವ ಸ್ರಜಃ-ಹೂಗಳುಳ್ಳ ಕೇಶಾನ್=ತಲೆಗೂದಲುಗಳನ್ನು ವಿಕೀರ್ಯ=ಹರಡಿಕೊಂಡು ಕುರರೀ ಇವ=ಹೆಣ್ಣು ಜಿಂಕೆಯಂತೆ ಸುಸ್ವರಂ=ಇಂಪಾದ ಧ್ವನಿಯುಳ್ಳ್ಳೇಣ ಹೇಗೋ ಹಾಗೆ ಚಿತ್ರಂ=ಕೇಳುವವರಿಗೆ ಬಗೆಬಗೆಯ ಮಾತಿನಿಂದ ಹೇಳುವಳಾಗಿ ಸುತಂ=ಮಗನನ್ನು ಕುರಿತು ಶುಶೋಚ-ಶೋಕಿಸಿದಳು. ॥ ೫೨ ॥

ಅಹೋ ! ವಿಧಾತಸ್ತ್ವಮತೀವ ಬಾಲಿಶೋ
ಯಸ್ತ್ವಾತ್ಮಸೃಷ್ಟ್ಯಪ್ರತಿರೂಪಮೀಹಸೇ ।

ಮೊದಲಾದವರ ಮನೋವ್ಯಥೆಯನ್ನೂ ಮನಗಂಡು ಅನೇಕ ರೀತಿಯಲ್ಲಿ ಪ್ರಲಪಿಸಿದಳು. ಅವಳ ಕಣ್ಣುಗಳಿಂದ ಹೊರಬರುತ್ತಿದ್ದ ನೀರು ಕಾಡಿಗೆಯೊಂದಿಗೆ ಕೆಳಕ್ಕೆ ಬೀಳುತ್ತಾ ಕೇಸರಿಯ ಗಂಧದಿಂದ ಅಲಂಕೃತಗಳಾಗಿದ್ದ ಎರಡು ಸ್ತನಗಳ ಮೇಲೂ ಬೀಳುತ್ತಿತ್ತು. ಬಿರಿಹಾಕಿದ್ದ ಕೂದಲುಗಳಿಂದ ಹೂಗಳು ಕಳಚಿಬಿದ್ದವು. ಹೆಣ್ಣು ಜಿಂಕೆಯಂತೆ ಒಳ್ಳೆಯ ಧ್ವನಿಯಲ್ಲಿ ಬಗೆಬಗೆಯಾಗಿ ಮಗನಿಗಾಗಿ ಅವಳು ಪರಿತಪಿಸಿದಳು. 'ಸೃಷ್ಟಿಕರ್ತನೇ, ನೀನು ಅತ್ಯಂತ ಮಂದಬುದ್ಧಿಯಾಗಿರುವೆ! ನಿನ್ನ ಸೃಷ್ಟಿ ಕಾರ್ಯಕ್ಕೆ ವಿರುದ್ಧವಾದುದನ್ನು ಇಷ್ಟಪಡುತ್ತಿರುವೆ! ವಯಸ್ಸಿನಲ್ಲಿ ಹಿರಿಯರಾದ ತಂದೆತಾಯಿಗಳು ಜೀವಿಸುವಾಗ ವಯಸ್ಸಿನಲ್ಲಿ ಕಿರಿಯರಾದ ಮಕ್ಕಳು ಸಾಯುವುದು

ಪರೇ ತು ಜೀವತ್ಯಪರಸ್ಯ ಯಾ ಮೃತಿ-
ರ್ವಿಪರ್ಯಯಶ್ಚೇತ್ತ್ವಮಸಿ ಧ್ರುವಂ ಪರಃ ॥ ೫೩ ॥

ಶ್ಲೋಕಿಸಿದ ಪ್ರಕಾರವನ್ನು ಹೇಳುತ್ತಾರೆ. ವಿಧಾತಃ=ಸೃಷ್ಟಿಕರ್ತನೇ, ತ್ವಂ= ನೀನು ಅತೀವ=ಅತ್ಯಂತ ಬಾಲಿಶಃ=ಬಾಲಕನು ಜಡಕ್ಕಿಂತ ಜಡನು. ಹೇಗೆ ನನಗೆ ಜಾಡ್ಯವನ್ನು ಆಪಾದಿಸುತ್ತೀ ಎಂದರೆ ಹೇಳುತ್ತಾರೆ. ಯಃ ತ್ವಂ=ಯಾವ ನೀನು ಆತ್ಮಸೃಷ್ಟ್ಯಪ್ರತಿರೂಪಂ=ನಿನ್ನ ಸೃಷ್ಟಿಕಾರ್ಯಕ್ಕೆ ವಿರುದ್ಧವಾದುದನ್ನೇ ಈಹಸೇ ತು=ಇಷ್ಟಪಡುತ್ತಲೇ ಇರುವೆ. ಇದು ಹೇಗೆ ಸೃಷ್ಟಿಗೆ ವಿರುದ್ಧವೆಂದರೆ ಹೇಳುತ್ತಾರೆ. ಪರೇ=ಮೊದಲು ಹುಟ್ಟಿದ ತಂದೆ ಅಥವಾ ತಾಯಿಯು ಜೀವತಿ (ಸತಿ)=ಬದುಕಿರುತ್ತಿರಲು ಅಪರಸ್ಯ=ಅನಂತರ ಹುಟ್ಟಿದ ಮಗ ಮೊದಲಾದವರ ಯಾ=ಯಾವ ಮೃತಿಃ ತು=ಮರಣವಾದರೋ ಸೃಷ್ಟಿಗೆ ಅನುಕೂಲವಲ್ಲದ ಕೆಲಸವು. ಸೃಷ್ಟಿಯನ್ನು ಬೆಳೆಸಹೊರಟ ನೀನು ಹುಟ್ಟಿಸುವ ಸಾಮರ್ಥ್ಯವಿಲ್ಲದ ಮುದುಕರನ್ನು ಬದುಕಿಸಿ ಹುಟ್ಟಿಸುವ ಸಾಮರ್ಥ್ಯವುಳ್ಳ ಹುಡುಗರನ್ನು ಸಾಯಿಸುತ್ತಿರುವುದರಿಂದ ಸೃಷ್ಟಿಯು ಮುಂದುವರಿಯಲಾರದಾದ್ದರಿಂದ ಸೃಷ್ಟಿಗೆ ಅನನುಕೂಲವಾದ ಇಂತಹ ಕಾರ್ಯವನ್ನು ಮಾಡುವ ನೀನು ಆಲೋಚನಾ ಸಾಮರ್ಥ್ಯವಿಲ್ಲದ ಮಂದಬುದ್ಧಿಯೆಂದರ್ಥ. 'ತು' ಎಂಬುದರಿಂದ ಸಂಹಾರದಲ್ಲಿ ಅನಂತರ ಹುಟ್ಟಿದ್ದು ಮೊದಲು ಹೋಗುವುದು ಕ್ರಮವಾದರೂ ಸ್ಥಿತಿಕಾಲದಲ್ಲಿ ಈ ಕ್ರಮವು ಅನುಪಪನ್ನವೆಂದು ಸೂಚಿಸಿರುವರು. ಹಾಗಾದರೆ ನನ್ನ ಮಂದಬುದ್ಧಿತ್ವಕ್ಕೆ ಪರಿಹಾರವೇನು? ಎಂದರೆ ಹೇಳುತ್ತಾರೆ. ವಿಪರ್ಯಯಃ ಚೇತ್=ಮೇಲಿನ ಕ್ರಮಕ್ಕೆ ವಿರುದ್ಧವಾದ ಕ್ರಮವಾದಲ್ಲಿ ಅಂದರೆ ಮೊದಲು ಹುಟ್ಟಿದವನು ಮೊದಲು ಸಾಯುವುದು. ಅನಂತರ ಹುಟ್ಟಿದವನು ಅನಂತರ ಸಾಯುವಂತೆ ಆದಲ್ಲಿ ಧ್ರುವಂ=ನಿಶ್ಚಯವಾಗಿಯೂ ತ್ವಂ=ನೀನು ಪರಃ= ಬಾಲಿಶ (ಮಂದ)ನಿಗಿಂತ ಭಿನ್ನನು ಅಂದರೆ ವಿವೇಕಿಯು ಅಸಿ=ಆಗುವೆ. ನಿನ್ನ ಚೇಷ್ಟೆಗೆ ತಕ್ಕ ಚೇಷ್ಟೆಮಾಡುವುದರಿಂದ ಬುದ್ಧಿವಂತನೆಂದರ್ಥ. ವಿಪರ್ಯಯಃ ಚೇತ್=ವ್ಯುತ್ಕ್ರಮವಾಗಿದ್ದಲ್ಲಿ ನೀನು ನಿಶ್ಚಯವಾಗಿಯೂ ಪರಃ=ಪ್ರಾಣಿಗಳಿಗೆ ದುಃಖಕಾರಿಯಾದ್ದರಿಂದ ಶತ್ರುವು ಆಗಿರುವೆ. ಕೃಪಾಳುವಲ್ಲವೆಂದೂ ಅರ್ಥ ಮಾಡಿರುವರು. 'ತು' ಎಂಬುದರಿಂದ ಈ ಬಾಲಿಶತ್ವವು ನಾನು ಶ್ಲೋಕದಿಂದ ಆಪಾದಿಸುತ್ತಿರುವುದೇ ಹೊರತು ನಿನ್ನಲ್ಲಿ ಅದು ವಾಸ್ತವವಾಗಿ ಇಲ್ಲವೆಂದು ಸೂಚಿಸುತ್ತಿರುವರು. 'ಸಂತಾಪ ಕ್ರೋಧ ರಾಗಾದಿಷ್ವನರ್ಥಜ್ಞವಚಃ ಕ್ವಚಿತ್' ಎಂಬ ಪ್ರಮಾಣದಂತೆ ಸಂತಾಪಾದಿಗಳಿಂದ ಕೆಲವು ವೇಳೆ ಅಸಂಗತ ಮಾತುಗಳು ಹೊರಡುವುವೆಂದು ತಿಳಿಯಬೇಕು. ॥ ೫೩ ॥

ನಿನ್ನ ಸೃಷ್ಟಿಕಾರ್ಯಕ್ಕೆ ಪ್ರತಿಕೂಲವಾದುದು! ಇದಕ್ಕೆ ಪ್ರತಿಯಾಗಿ ಮುದುಕರು ಮೊದಲು ಸತ್ತು ಕಿರಿಯರು ಅನಂತರ ಸಾಯುವಂತೆ ಮಾಡಿದರೆ ನೀನು ನಿಶ್ಚಯ

ನಹಿ ಕ್ರಮಶ್ಚೇದಿಹ ಮೃತ್ಯುಜನ್ಮನೋಃ
ಶರೀರಿಣಾಮಸ್ತು ತದಾತ್ಮಕರ್ಮಭಿಃ ।
ಯಃ ಸ್ನೇಹಪಾಶೋ ನಿಜಸರ್ಗವೃದ್ಧಯೇ
ಸ್ವಯಂ ಕೃತಸ್ತೇ ತಮಿಮಂ ವಿವೃಶ್ಚಸಿ ॥ ೫೪ ॥

ಮೇಲೆ ಹೇಳಿದ ಪ್ರಮಾಣದಂತೆ ಸಂತಾಪದಿಂದ ಅನನ್ವಿತವಾದ ಈ ಮಾತು ಉಕ್ತವಾಯಿತೆಂದು ಹೇಳುತ್ತಾರೆ. ಜೀವರ ಕರ್ಮಾನುಗುಣವಾಗಿ ಜನ್ಮಾದಿಗಳನ್ನು ಕೊಡುವೆನಾದ್ದರಿಂದ ನನ್ನದೇನು ತಪ್ಪು? ಎಂದರೆ ಹೇಳುತ್ತಾರೆ—ಇಹ=ಇಲ್ಲಿ ಶರೀರಿಣಾಂ=ಪ್ರಾಣಿಗಳಿಗೆ ಮೃತ್ಯುಜನ್ಮನೋಃ=ಮರಣ ಹುಟ್ಟುಗಳಿಗೆ ಕ್ರಮಃ= ಪುತ್ರನಿದ್ದಾಗಲೇ ತಂದೆಯು ಸಾಯುವನು. ತಂದೆಯು ಬದುಕಿದ್ದಾಗಲೇ ಮಗನು ಹುಟ್ಟುವನು ಎಂಬ ಕ್ರಮವು ನ ಹಿ ಚೇತ್-ಇಲ್ಲವಾದಲ್ಲಿ ತತ್=ಈ ಅಕ್ರಮವು ಆತ್ಮಕರ್ಮಭಿಃ=ಆಯಾಯಾ ಜೀವನ ಕರ್ಮಕ್ಕನುಗುಣವಾಗಿ (ಕರ್ಮನಿಮಿತ್ತಕ ವಾಗಿ) ಅಸ್ತು=ಆಗಲಿ. ನಿನ್ನಿಂದೇನು? ಎಂದರ್ಥ. ಕರ್ಮನಿಯಾಮಕನಾಗಿ ನನ್ನ ಅಗತ್ಯವಿದೆ ಎಂದಲ್ಲಿ ಇರಲಿ. ಆದರೂ ನಿಜಸರ್ಗವೃದ್ಧಯೇ=ನೀನು ಮಾಡುತ್ತಿರುವ ಸೃಷ್ಟಿಯ ಅಭಿವೃದ್ಧಿಗಾಗಿ ತೇ=ನಿನ್ನಿಂದ ಯಃ=ಯಾವ ಸ್ನೇಹಪಾಶಃ= 'ಇವನು ನನ್ನ ಮಗನು' ಎಂಬ ಅಭಿಮಾನದ ಬಂಧವು ಕೃತಃ=ಮಾಡಲ್ಪಟ್ಟಿರುವುದೋ ತಂ ಇಮಂ=ಆ ಈ ಸ್ನೇಹಪಾಶವನ್ನು ಸ್ವಯಂ=ನೀನೇ ವಿವೃಶ್ಚಸಿ= ಕತ್ತರಿಸಿಹಾಕುತ್ತಿರುವೆ. ಇದು ನಿನಗೆ ಸರಿಯಲ್ಲ ಎಂದೇ ನಮ್ಮ ಆಕ್ರೋಶವೆಂದರ್ಥ. ಇಂತಹ ದುಃಖವನ್ನು ಕಂಡು ಯಾರೂ ಮಕ್ಕಳು ಮೊದಲಾದ ಪದಾರ್ಥಗಳಲ್ಲಿ ಅಭಿಮಾನವನ್ನು ಮಾಡುವುದಿಲ್ಲವೆಂದು ಅಭಿಪ್ರಾಯ. ॥ ೫೪ ॥

ತ್ವಂ ತಾತ ನಾರ್ಹಸಿ ಚ ಮಾಂ ಕೃಪಣಾಮನಾಥಾಂ
ತ್ಯಕ್ತುಂ ವಿಚಕ್ಷ್ವ ಪಿತರಂ ತವ ಶೋಕತಪ್ತಮ್ ।

ವಾಗಿಯೂ ವಿವೇಕಿಯಾಗುವೆ. ಅದು ಬಿಟ್ಟು ವ್ಯುತ್ಕ್ರಮದಲ್ಲಿಯೇ ನೀನು ತೊಡಗಿದ್ದಲ್ಲಿ ಪ್ರಾಣಿಗಳಿಗೆ ಶತ್ರುವೇ ಹೊರತು ಮಿತ್ರನಲ್ಲ. ಜಗತ್ತಿನಲ್ಲಿ ಪ್ರಾಣಿಗಳಿಗೆ ಹುಟ್ಟುಸಾವುಗಳ ಕ್ರಮವಿಲ್ಲವೆಂದಾದರೆ ಅದು ಕರ್ಮಫಲವೆಂದೇ ಹೇಳಬೇಕು. ಆಗ ನಿನ್ನಿಂದ ಪ್ರಯೋಜನವಾದರೂ ಏನು? ಸ್ನೇಹಪಾಶವನ್ನು ನೀನೇ ನಿನ್ನ ಸೃಷ್ಟಿಕಾರ್ಯದ ಅಭಿವೃದ್ಧಿಗಾಗಿ ಹಾಕಿರುವೆ. ಅಂತಹ ಅಭಿಮಾನವನ್ನೇ ಕತ್ತರಿಸುತ್ತಿರುವೆ. (ಇದು ನಿನಗೆ ಯುಕ್ತವಲ್ಲ.) ಮಗು! ದೀನಳೂ ಅನಾಥಳೂ ಆದ ನಿನ್ನ ತಾಯಿಯಾದ ನನ್ನನ್ನು ಬಿಟ್ಟು ಹೋಗುವುದು ನಿನಗೆ ಯುಕ್ತವಲ್ಲ! ದುಃಖದಿಂದ ನೊಂದ ನಿನ್ನ ತಂದೆಯನ್ನು ನೋಡು! ಮಕ್ಕಳಿಲ್ಲದವರಿಂದ ದಾಟಲಾಗದ ನರಕವನ್ನು-ಕತ್ತಲೆಯನ್ನು ನಿನ್ನ ಸಹಾಯದಿಂದ ನಾವು ದಾಟಬೇಕು! ಯಮನು ನಿಷ್ಕರುಣಿ. ಅವನೊಂದಿಗೆ ನೀನು ನಮ್ಮನ್ನು ಬಿಟ್ಟು ದೂರ ಸರಿಯಬೇಡ.

ಅಂಜಸ್ತರೇಮ ಭವತಾಽಪ್ರಜದುಸ್ತರಂ ಯ-
ದ್ಧ್ವಾಂತಂ ನ ಯಾಹ್ಯಕರುಣೇನ ಯಮೇನ ದೂರಮ್ ॥

ತಾತ=ಮಗುವೇ, ತ್ವಂ - ನೀನು ಕೃಪಣಾಂ=ದೀನಳಾದ ಅನಾಥಾಂ=ರಕ್ಷಕರಿಲ್ಲದ ಮಾಂ=ತಾಯಿಯಾದ ನನ್ನನ್ನು ತ್ಯಕ್ತುಂ=ಬಿಡಲು ನಾರ್ಹಸಿ=ಯೋಗ್ಯನಲ್ಲ. ಶೋಕತಪ್ತಂ = ದುಃಖದಿಂದ ನೊಂದಿರುವ ತವ ಪಿತರಂ = ನಿನ್ನ ತಂದೆಯನ್ನು ವಿಚಕ್ಷ್ವ=ನೋಡು. ಭವತಾ=ನಿನ್ನಿಂದ ಅಪ್ರಜದುಸ್ತರಂ = ಮಕ್ಕಳಿಲ್ಲದವರು ದಾಟಲಾಗದ ಯತ್=ಯಾವ ಧ್ವಾಂತಂ=ಕತ್ತಲೆಯೋ ನರಕವೋ ತತ್=ಅದನ್ನು ಅಂಜಃ=ಸಂಪೂರ್ಣವಾಗಿ ತರೇಮ=ದಾಟೋಣ. ತ್ವಂ ನೀನು ಅಕರುಣೇನ=ನಿರ್ದಯನಾದ ಯಮೇನ ಸಹ = ಯಮನೊಂದಿಗೆ ದೂರಂ = ಬಹುದೂರ ನ ಯಾಹಿ = ಹೋಗಬೇಡ. ಇದು ಕ್ರೋಧದಿಂದಾಡಿದ ಅಸಂಗತ ಮಾತು. ಅಕರುಣನಾದ್ದರಿಂದ ಯಮನು ದೂರ ಕರೆದುಕೊಂಡುಹೋಗುವನೆಂದರ್ಥ. ॥ ೫೫ ॥

ಉತ್ತಿಷ್ಠ ತಾತ ತ ಇಮೇ ಶಿಶವೋ ವಯಸ್ಯಾ-
ಸ್ತ್ವಾಮಾಹ್ವಯಂತಿ ನೃಪನಂದನ ಸಂವಿಹರ್ತುಮ್ ।
ಸುಪ್ತಶ್ಚಿರಂ ಹ್ಯಶನಯಾ ಚ ಭವಾನ್ಪರೀತೋ
ಭುಂಕ್ಷ್ವ ಸ್ತನಂ ಪಿಬ ಶುಚೋ ಹರ ನಃ ಸ್ವಕಾನಾಮ್ ॥೫೬॥

ಮಗುವೇ, ಉತ್ತಿಷ್ಠ=ಏಳು. ನೃಪನಂದನ–ರಾಜಪುತ್ರನೇ, ವಯಸ್ಯಾಃ= ನಿನ್ನ ಸಮಾನ ವಯಸ್ಸಿನ ಗೆಳೆಯರಾದ ತೇ ಇಮೇ ಶಿಶವಃ = ಆ ಈ ಮಕ್ಕಳು ಸಂವಿಹರ್ತುಂ=ವಿಹಾರಕ್ಕಾಗಿ ತ್ವಾಂ=ನಿನ್ನನ್ನು ಆಹ್ವಯಂತಿ=ಕರೆಯುತ್ತಿರುವರು. ನೀನು ಚಿರಂ=ಬಹಳ ಹೊತ್ತು ಸುಪ್ತಃ=ಮಲಗಿರುವೆ. ಅಶನಯಾ=ಊಟದ ಅಭಿಲಾಷೆಯಿಂದ (ಹಸಿವಿನಿಂದ) ಪರೀತಃ=ಯುಕ್ತನಾಗಿರುವೆ. ಭುಂಕ್ಷ್ವ=ಊಟ ಮಾಡು. ಸ್ತನಂ=ಎದೆಹಾಲನ್ನು ಪಿಬ - ಕುಡಿ. ಸ್ವಕಾನಾಂ=ನಿನ್ನವರಾದ ನಃ= ನಮ್ಮ ಶುಚಃ=ದುಃಖಗಳನ್ನು ಹರ=ಹೋಗಲಾಡಿಸು. ಇದು ರಾಗದಿಂದ ಆಡಿದ ಅಸಂಗತ ಮಾತು. ಹಸಿವೆಯೆಂದು ಹೇಳಿದ್ದರಿಂದ ಅಸಂಗತವೆಂಬುದು ಸ್ಪಷ್ಟಪಡುವುದು. ॥ ೫೬ ॥

ನಾಹಂ ತನೂಜ ದದೃಶೇ ಹತಮಂಗಳಾ ತೇ
ಮುಗ್ಧಸ್ಮಿತಂ ಮುದಿತವೀಕ್ಷಣಮಾನನಾಬ್ಜಮ್ ।

ಏಳಪ್ಪಾ ಮಗು! ನೀನು ರಾಜಪುತ್ರ! ನಿನ್ನ ಗೆಳೆಯರಾದ ಮಕ್ಕಳು ನಿನ್ನನ್ನು ಆಟಕ್ಕೆ ಕರೆಯುತ್ತಿದ್ದಾರೆ! ನೀನು ಮಲಗಿ ತುಂಬ ಹೊತ್ತಾಯಿತು! ನಿನಗೆ ತುಂಬ ಹಸಿವೆಯಾಗಿದೆ! ಉಣ್ಣು! ಈ ಸ್ತನ್ಯವನ್ನು ಪಾನಮಾಡು! ನಿನ್ನವರಾದ ನಮ್ಮ ದುಃಖವನ್ನು ಹೋಗಲಾಡಿಸು. ಮಗನೇ, ಭಾಗ್ಯರಹಿತಳಾದ ನಾನು ನಿನ್ನ ಸುಂದರ

ಕಿಂ ವಾ ಗತೋಽಸ್ಯಪುನರನ್ವಯಮನ್ಯಲೋಕಂ
ನೀತೋಽಘೃಣೇನ ನ ಶೃಣೋಮಿ ಕಲಾ ಗಿರಸ್ತೇ ॥ ೫೭ ॥

ತನೂಜ=ಮಗನೇ, ಹತಮಂಗಲಾ=ಪುಣ್ಯಹೀನೆಯಾದ ಅಹಂ=ನಾನು ತೇ=ನಿನ್ನ ಮುಗ್ಧಸ್ಮಿತಂ=ಮೋಹಗೊಳಿಸುವ ಸುಂದರ ಮಂದಹಾಸವುಳ್ಳ ಮುದಿತ-ವೀಕ್ಷಣಂ=ಸಂತೋಷದ ಪ್ರಸನ್ನವಾದ ನೋಟವುಳ್ಳ ಆನನಾಬ್ಜಂ=ಮುಖ ಕಮಲವನ್ನು ನ ದದೃಶೇ=ನೋಡಲಿಲ್ಲ. ಇದೂ ರಾಗ ನಿಮಿತ್ತವಾಗಿ ಹೇಳಿದ್ದು. ಕ್ರೋಧವನ್ನು ಸೂಚಿಸುತ್ತಾ ದುಃಖಿಸುತ್ತಾಳೆ. ಅಘೃಣೇನ=ಕರುಣಾರಹಿತನಾದ ಯಮನಿಂದ ನೀತಃ ಸನ್=ಕರೆದುಕೊಂಡು ಹೋಗಲ್ಪಟ್ಟವನಾಗಿ ಅಪುನರನ್ವಯಂ=ಮತ್ತೆ ಹಿಂದಕ್ಕೆ ಬಾರದಿರುವಂತೆ, ಮತ್ತೆ ಸಂಬಂಧವಿಲ್ಲದ ಅನ್ಯಲೋಕಂ=ಬೇರೊಂದು ಲೋಕಕ್ಕೆ ಕಿಂ ಗತಃ ಅಸಿ ವಾ ಹೋಗಿರುವೆಯೇನು? ತೇ=ನಿನ್ನ ಕಲಾಃ=ಅವ್ಯಕ್ತಮಧುರಗಳಾದ ಗಿರಃ=ಮಾತುಗಳನ್ನು ನ ಶೃಣೋಮಿ-ಕೇಳುತ್ತಿಲ್ಲ. ಆದ್ದರಿಂದ ಪರಲೋಕಕ್ಕೆ ಹೋಗಿರುವೆಯೇನು? ಎಂದು ಪ್ರಶ್ನೆಗೆ ಅವಕಾಶ. ॥ ೫೭ ॥

ಶ್ರೀ ಶುಕ ಉವಾಚ—

ವಿಲಪಂತ್ಯಾಂ ಮೃತಂ ಪುತ್ರಮಿತಿ ಚಿತ್ರವಿಲಾಪನೈಃ ।
ಚಿತ್ರಕೇತುರ್ಭೃಶಂ ತಪ್ತೋ ಮುಕ್ತಕಂಠೋ ರುರೋದ ಹ ॥೫೮॥

ಇವಳೊಬ್ಬಳೇ ಅತ್ತಳೇ ಇನ್ನು ಯಾರೂ ಅಳಲಿಲ್ಲವೇ? ಎಂದರೆ ಹಿಂದೆ ಹೇಳಿದ ವಿಲಾಪವನ್ನೇ ಸ್ಪಷ್ಟಪಡಿಸುತ್ತಾರೆ. ಮೃತನಾದ ಮಗನನ್ನು ಕುರಿತು ಇತಿ=ಮೇಲೆ ಹೇಳಿದಂತೆ ಬಗೆಬಗೆಯ ಮಾತುಗಳಿಂದ ವಿಲಪಂತ್ಯಾಂ ಸತ್ಯಾಂ=ಕೃತದ್ಯುತಿಯು ಅಳುತ್ತಿರಲು ಭೃಶಂ ತಪ್ತಃ=ಬಹಳ ನೊಂದ ಚಿತ್ರಕೇತುವು ಮುಕ್ತಕಂಠಃ (ಸನ್)=ಗಟ್ಟಿಯಾಗಿ ಬಿಕ್ಕಿ ಬಿಕ್ಕಿ ರುರೋದ ಹ=ಅತ್ತನಷ್ಟೆ. ॥ ೫೮ ॥

ತಯೋರ್ವಿಲಪತೋಃ ಸರ್ವೇ ದಂಪತ್ಯೋಸ್ತದನುವ್ರತಾಃ ।
ರುರುದುಃ ಸ್ಮ ನರಾ ನಾರ್ಯಃ ಸರ್ವಮಾಸೀದಚೇತನಮ್ ॥ ೫೯ ॥

ತಯೋಃ ದಂಪತ್ಯೋಃ=ಆ ರಾಜ ರಾಣಿಯರು ವಿಲಪತೋಃ (ಸತ್ಯೋಃ)=ಅಳುತ್ತಿರಲು ತದನುವ್ರತಾಃ=ಅವರ ಅನುಚರರಾದ ಸರ್ವೇ=ಎಲ್ಲ ನರಾಃ=ಗಂಡಸರೂ ಎಲ್ಲ ಹೆಂಗಸರೂ ರುರುದುಃ ಸ್ಮ=ಅಳುತ್ತಿದ್ದರು. ಸರ್ವಂ=ಎಲ್ಲವೂ

ಮಂದಸ್ಮಿತದಿಂದಲೂ ಆನಂದದ ನೋಟದಿಂದಲೂ ಆಕರ್ಷಕವಾದ ಮುಖಕಮಲವನ್ನು ನೋಡಲಿಲ್ಲ! ಆ ಕ್ರೂರಿ ಯಮನು ನಿನ್ನನ್ನು ಕರೆದುಕೊಂಡುಹೋಗಿ ಮತ್ತೆ ಬಾರದಿರುವಂತೆ ಮತ್ತೊಂದು ಲೋಕಕ್ಕೆ ಸೇರಿಸಿರುವನೇ! ನೀನು ಬೇರೆ ಲೋಕಕ್ಕೆ ಹೋಗಿರುವೆಯಾ? ನಿನ್ನ ಆ ತೊದಲು ಮಾತುಗಳು ನನಗೆ ಕೇಳಿಸುತ್ತಿಲ್ಲ!' ಎಂದು ವಿವಿಧವಾಗಿ ಅಸಂಗತವಾಗಿ ಹಲುಬಿದಳು.

ಅಚೇತನಂ=ಬುದ್ಧಿ ಶೂನ್ಯವಾಗಿ, ಕಲ್ಲಿನಂತೆ ಪ್ರವೃತ್ತಿರಹಿತವಾಗಿ ಆಸೀತ್=ಇತ್ತು. ಪಟ್ಟಣವೆಲ್ಲ ಪ್ರವೃತ್ತಿರಹಿತವಾಗಿತ್ತು ಎಂದಾದರೂ ಅರ್ಥ. ‖ ೫೯ ‖

ಏವಂ ಕಶ್ಮಲಮಾಪನ್ನಂ ನಷ್ಟಸಂಜ್ಞಮನಾಯಕಮ್ ।
ಜ್ಞಾತ್ವಾಂಗಿರಾನಾಮ ಮುನಿರಾಜಗಾಮ ಸನಾರದಃ ‖ ೬೦ ‖

ಈ ಸಂದರ್ಭದಲ್ಲಿ ಅಕಾರಣಮಿತ್ರರಾದ ಅಂಗಿರಸರ ಆಗಮನವನ್ನು ಹೇಳುತ್ತಾರೆ—ಏವಂ=ಮೇಲೆ ಹೇಳಿದಂತೆ ಕಶ್ಮಲಂ=ದುಃಖದಿಂದ ಆಪನ್ನಂ=ವ್ಯಾಪ್ತವಾದ ಆದ್ದರಿಂದ ನಷ್ಟಸಂಜ್ಞಂ=ಪ್ರಜ್ಞಾಶೂನ್ಯವಾದ ಅನಾಯಕಮ್=ಬೋಧಕರಿಲ್ಲದುದನ್ನಾಗಿ (ಸರ್ವಂ)=ಎಲ್ಲ ಪಟ್ಟಣವನ್ನೂ ಜ್ಞಾತ್ವಾ=ತಿಳಿದು ಅಂಗಿರಸರೆಂಬ ಮುನಿಗಳು ಸನಾರದಃ (ಸನ್)=ನಾರದರೊಂದಿಗೆ ಆಜಗಾಮ=ಅಲ್ಲಿಗೆ ಬಂದರು. ಇದರಿಂದ ಋಷಿಗಳು ತ್ರಿಕಾಲಜ್ಞಾನಿಗಳೆಂದು ಸ್ಪಷ್ಟಪಡಿಸಲ್ಪಟ್ಟಿತು. ‖ ೬೦ ‖

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಚತುರ್ದಶೋಽಧ್ಯಾಯಃ

ಅಥ ಪಂಚದಶೋಽಧ್ಯಾಯಃ

ಶ್ರೀ ಶುಕ ಉವಾಚ—
ಊಚತುರ್ಮೃತಕೋಪಾಂತೇ ಪತಿತಂ ಮೃತಕೋಪಮಮ್ ।
ಶೋಕಾಭಿಭೂತಂ ರಾಜಾನಂ ಬೋಧಯಂತೌ ಸದುಕ್ತಿಭಿಃ ‖ ೧ ‖

ಹೀಗೆ ಬಗೆಬಗೆಯಿಂದ ಮೃತಪುತ್ರನನ್ನು ಕುರಿತು ಕೃತದ್ಯುತಿ ಅಳುತ್ತಿರಲು ಚಿತ್ರಕೇತುವು ಅತ್ಯಂತ ದುಃಖಿತನಾಗಿ ಗಳಗಳನೆ ತಾನೂ ಅತ್ತನು. ಈ ದಂಪತಿಗಳು ಹೀಗೆ ಅಳುತ್ತಿರಲು ಅವರ ಪರಿವಾರದ ಎಲ್ಲ ಗಂಡುಸರೂ ಹೆಂಗುಸರೂ ಅಳುತ್ತಿದ್ದರು. ಎಲ್ಲರೂ - ಪಟ್ಟಣವೇ - ದುಃಖದಿಂದ ಚೈತನ್ಯರಹಿತವಾದಂತೆ ಇತ್ತು.

ಹೀಗೆ ದುಃಖತಪ್ತವಾಗಿ ಪ್ರಜ್ಞಾರಹಿತವಾಗಿ ತಿಳಿಯಹೇಳುವರಿಲ್ಲದೆ ಪಟ್ಟಣವೇ ಜಡವಾಗಿದ್ದುದನ್ನು ಕಂಡು ಅಂಗೀರಸರು ನಾರದರೊಂದಿಗೆ ಅಲ್ಲಿಗೆ ಬಂದರು.

ಹದಿನೈದನೆಯ ಅಧ್ಯಾಯ

ಶವದ ಬಳಿ ಬಿದ್ದಿರುವ, ಶವದಂತೆ ನಿಶ್ಚೇಷ್ಟಿತನಾಗಿರುವ, ದುಃಖತಪ್ತ ರಾಜನನ್ನು (ಚಿತ್ರಕೇತುವನ್ನು) ನಾರದಾಂಗೀರಸರು ಒಳ್ಳೆ ಮಾತುಗಳಿಂದ ಬೋಧಿಸುವರಾಗಿ ನುಡಿದರು.

ಸಂಸಾರವು (ಬಂಧವು) ಅನಿತ್ಯವಾದುದು. ಅದರ ಉಚ್ಛೇದವು ಜ್ಞಾನದಿಂದಲೇ. ಆ ಜ್ಞಾನವೂ ನಿರಂತರವಾಗಿ ಉಪಾಸಿಸಲ್ಪಟ್ಟ ಶ್ರೀಹರಿಯ ಅನುಗ್ರಹದಿಂದಲೇ ಹುಟ್ಟುವುದು. ಇವೆಲ್ಲ ಪ್ರಮೇಯುಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಮೊದಲು ಆಂಗಿರ ನಾರದರು ಬಂದು ಏನು ಮಾಡಿದರು ? ಎಂದರೆ ಹೇಳುತ್ತಾರೆ. ಮೃತಕೋಪಾಂತೇ = ಶವದ ಹತ್ತಿರ ಪತಿತಂ = ಬಿದ್ದಿರುವ ಮೃತಕೋಪಮಂ = ಶವಕ್ಕೆ ಸದೃಶನಾದ ಶೋಕಾಭಿಭೂತಂ = ದುಃಖದಿಂದ ಸಂತಪ್ತನಾದ ರಾಜಾನಂ = ರಾಜನಾದ ಚಿತ್ರಕೇತುವನ್ನು ಸದುಕ್ತಿಭಿಃ = ಒಳ್ಳೆ ಮಾತುಗಳಿಂದ ಬೋಧಯಂತೌ = ತಿಳಿಯಹೇಳುವರಾಗಿ ನಾರದಾಂಗಿರರು ಊಚತುಃ = ಹೇಳಿದರು. || ೧ ||

ಕೋಽಯಂ ಸ್ಯಾತ್ತವ ರಾಜೇಂದ್ರ ಭವಾನ್ ಯಮನುಶೋಚತಿ ।
ತ್ವಂ ಚಾಸ್ಯ ಕತಮಃ ಸೃಷ್ಟೌ ಪುರೇದಾನೀಮತಃ ಪರಮ್ ॥ ೨ ॥

ರಾಜೇಂದ್ರನೇ, ಭವಾನ್ = ನೀನು ಯಂ = ಯಾವನನ್ನು ಕುರಿತು ಅನುಶೋಚತಿ = ದುಃಖಿಸುತ್ತಿರುವೆಯೋ ಅಯಂ ಈ ದೇಹದಲ್ಲಿರುವ ಜೀವನು ತವ = ನಿನಗೆ ಕಃ ಸ್ಯಾತ್ = ಎಂತಹ ಬಂಧುವಾಗಿರುವನು. ಈಗ ಮಗನೆಂಬ ಭ್ರಾಂತಿ ಎಂದಾದರೆ ಆಗ ಸೃಷ್ಟೌ ಬ್ರಹ್ಮದೇವರ ಸೃಷ್ಟಿಯಲ್ಲಿ ಪುರಾ ಹಿಂದೆ ತ್ವಂ = ನೀನು ಅಸ್ಯ - ಈ ಬಾಲಕನಿಗೆ ಕತಮಃ = ಬಂಧುಗಳ ಮಧ್ಯೆ ಯಾವ ಬಂಧುವು ? ತಂದೆಯೋ ? ಸೋದರಮಾವನೇ ? ಸಹೋದರನೇ ? ಅತಃಪರಂ = (ಪ್ರವಾಹ ರೂಪವಾದ ಈ ಸೃಷ್ಟಿಯಲ್ಲಿ) ಮುಂದೆ ಕತಮಃ ಬಂಧುಃ = ಎಂತಹ ಬಂಧುವು ? ಇದಾನೀಂ = ಈ ಜನ್ಮದಲ್ಲಿ ಎಂತಹ ಬಂಧುವು ? ಹಿಂದಿನ ಜನ್ಮದಲ್ಲಿ ತಂದೆಯಾಗಿ ಜೊತೆಯಲ್ಲಿದ್ದವರು ಸತ್ತಮೇಲೆ ಆ ಜೀವನಿಂದ ವಿಮುಕ್ತರಾಗಿ ಮತ್ತೊಂದು ಜನ್ಮದಲ್ಲಿ ಅವನ ಅಥವಾ ಇತರರ ಮಕ್ಕಳು ಮೊದಲಾದವರು ಆಗುವರು. ತಂದೆಯು ಎಲ್ಲ ಜನ್ಮಗಳಲ್ಲಿಯೂ ಅವನ ತಂದೆಯೇ ಆಗಿರುವನೆಂಬ ನಿಯಮವಿಲ್ಲವೆಂದು ಅಭಿಪ್ರಾಯ. ಹೀಗೆ ಇವನೂ ಹಿಂದೆ ಮತ್ತು ಮುಂದೆ ನಿನಗೆ ಎಂತಹ ಬಂಧುವೋ ? ಎಂದೂ ಸೇರಿಸಿಕೊಳ್ಳಬೇಕು. ಹೇಗೆ ಹಿಂದೆ ಮುಂದಿನ ಕಾಲಗಳಲ್ಲಿ ನಿಮ್ಮಿಬ್ಬರಿಗೂ ಸಂಬಂಧ ವಾವುದೂ ಇರಲಿಲ್ಲವೋ ಇರುವುದಿಲ್ಲವೋ ಹಾಗೆಯೇ ಈ ಜನ್ಮದಲ್ಲಿಯೂ ಸಂಬಂಧಿಯೆಂಬ ಭ್ರಾಂತಿಯೇ ಹೊರತು ಬೇರೆಯಲ್ಲ. (ನಿಯತವಾಗಿ ಮಗನೇ ಮೊದಲಾದ ಸಂಬಂಧವಿಲ್ಲವಾದ್ದರಿಂದ) ಇವನಿಗಾಗಿ ದುಃಖಪಡಬೇಕಾಗಿಲ್ಲವೆಂದು ಅಭಿಪ್ರಾಯ. || ೨ ||

ಯಥಾ ಪ್ರಯಾಂತಿ ಸಂಯಾಂತಿ ಸ್ರೋತೋವೇಗೇನ ವಾಲುಕಾಃ ।
ಸಂಯುಜ್ಯಂತೇ ವಿಯುಜ್ಯಂತೇ ತಥಾ ಕಾಲೇನ ದೇಹಿನಃ ॥ ೩ ॥

ರಾಜೇಂದ್ರ, ನಿನ್ನ ದುಃಖಕ್ಕೆ ಕಾರಣನಾದ ಈ ದೇಹಗತ ಜೀವನು ನಿನಗೆ ಏನಾಗಬೇಕು ? ಹಿಂದೆ ನೀನು ಇವನಿಗೆ ಏನಾಗಿದ್ದೆ ? ಮುಂದೆ ಏನಾಗುವೆ ? (ಈಗ

ಹಾಗಾದರೆ ಇದೆಲ್ಲವೂ ಅಜ್ಞಾನಕಲ್ಪಿತವೆಂದಾಗಲಿ ಎಂದರೆ ಹೇಳುತ್ತಾರೆ. ಯಥಾ=ಹೇಗೆ ಸ್ರೋತೋವೇಗೇನ=ನದೀಪ್ರವಾಹದ ರಭಸದಿಂದ ವಾಲುಕಾಃ= ಮರಳುಗಳು (ಕಲ್ಲಿನ ಸಣ್ಣ ಸಣ್ಣ ಚೂರುಗಳು) ಪ್ರಯಾಂತಿ=ಒಂದನ್ನೊಂದು ಬಿಟ್ಟು ದೂರ ದೂರ ಸರಿಯುವುವೋ ಮತ್ತು ಸಂಯಾಂತಿ ಒಂದು ಕಡೆ ಸೇರಿ ರಾಶಿಯಾಗುವುವೋ ತಥಾ = ಹಾಗೆ ಕಾಲೇನ = (೧) ಕಾಲವೇಗದಿಂದ (೨) ಪ್ರೇರಕನಾದ ಶ್ರೀಹರಿಯ ನಿಮಿತ್ತದಿಂದ (೩) ಸೇರಿಸಬೇಕೆಂಬ ಜ್ಞಾನಮೂರ್ತಿಯಾದ ಪರಮಾತ್ಮನಿಂದ ದೇಹಿನಃ=ದೇಹವುಳ್ಳ ಜೀವರು ಸಂಯುಜ್ಯಂತೇ=ಸಂಬಂಧವುಳ್ಳವರಾಗಿ ಆಗುವರು. ಕಾಲೇನ=ಸಂಹಾರಮಾಡಬೇಕೆಂಬ ಜ್ಞಾನಮೂರ್ತಿ ಪರಮಾತ್ಮನಿಂದ ಜೀವರು ವಿಯುಜ್ಯಂತೇ=ಮೃತರಾಗಿ ಸಂಬಂಧರಹಿತರಾಗುವರು. ಆದ್ದರಿಂದ ಇದೆಲ್ಲ ಅಜ್ಞಾನಕಲ್ಪಿತವಲ್ಲವೆಂದರ್ಥ. || ೩ ||

ಯಥಾ ಧಾನಾಸು ವೈ ಧಾನಾ ಭವಂತಿ ನ ಭವಂತಿ ಚ ।
ಏವಂ ಭೂತೇಷು ಭೂತಾನಿ ಚೋದಿತಾನೀಶಮಾಯಯಾ || ೪ ||

ದೇಹವನ್ನು ಬಿಟ್ಟವರು ಮತ್ತೆ ಮತ್ತೊಂದು ದೇಹವನ್ನು ಹೊಂದುವರೆ? ಅಥವಾ ಶೂನ್ಯವಾಗುವರೆ? (ನಷ್ಟವಾಗುವರೆ?) ಅಥವಾ ಹಿಂದಕ್ಕೆ ಮತ್ತೆ ಬಾರದ ಅವಸ್ಥೆಯನ್ನು ಹೊಂದುವರೆ? ಎಂದರೆ ಹೇಳುತ್ತಾರೆ. ಯಥಾ=ಹೇಗೆ ಧಾನಾಸು= ಬೀಜಗಳಲ್ಲಿ ಅಂಕುರಾದಿ ಸಮೃದ್ಧಿಯಿಂದ ಪರಿಪಕ್ವವಾದವುಗಳಲ್ಲಿ ಅವುಗಳಿಂದ ಧಾನಾಃ=ಬೇರೆ ಬೀಜಗಳು ಭವಂತಿ=ಆಗುವುವೋ ಕೆಲವದರಲ್ಲಿ ಕೆಲವು ವೇಳೆ ಪ್ರತಿಬಂಧದಿಂದ ನ ಭವಂತಿ=ಬೇರೆ ಬೀಜಗಳು ಹುಟ್ಟುವುವೇ ಇಲ್ಲವೋ ಚ=ಕೆಲವು ವೇಳೆ ಹುಟ್ಟಿ ನಷ್ಟವಾಗುವುವೋ ಏವಂ=ಹಾಗೆಯೇ ಭೂತೇಷು ಚ=ಪ್ರಾಣಿಗಳಲ್ಲಿಯೂ ಈಶಮಾಯಯಾ=ನಾರಾಯಣನ ಇಚ್ಛೆಯಿಂದ ಚೋದಿತಾನಿ= ಪ್ರೇರಿತಗಳಾದ ಭೂತಾನಿ=ಜೀವರು ಭವಂತಿ=ಮಗ ಮೊದಲಾದ ವ್ಯವಹಾರಕ್ಕೆ ಯೋಗ್ಯರಾಗಿ ಹುಟ್ಟುವರು. ನ ಭವಂತಿ=ಕೆಲವು ವೇಳೆ ಹುಟ್ಟುವುದೇ ಇಲ್ಲ. ಚ=ಹುಟ್ಟಿಯೂ ಸಾಯುವರು. ವೈ ಎಂಬುದರಿಂದ ಹೇಗೆ ಹುರಿಯುವಿಕೆ ಮೊದಲಾದ ಕರ್ಮ ಪ್ರತಿಬಂಧದಿಂದ ಬೀಜಗಳು ಅಂಕುರಾದಿ ಕಾರ್ಯವನ್ನೇ ಹುಟ್ಟಿಸುವುದಿಲ್ಲವೋ ಹಾಗೆ ಜ್ಞಾನಾಗ್ನಿಯಿಂದ ಹುರಿಯಲ್ಪಟ್ಟ ಸಂಸಾರಬೀಜಗಳುಳ್ಳ ಜೀವರು ಪುನರಾವೃತ್ತಿ ಇಲ್ಲವೆಂಬ ಅವಸ್ಥೆಯೆನಿಸಿದ ಮೋಕ್ಷವನ್ನು ಹೊಂದಿ ಹುಟ್ಟದೆಯೇ

ಏನಾಗಿರುವೆ?) ನದಿಯ ವೇಗದಿಂದ ಮರಳು ಹರಳುಗಳು ಒಂದನ್ನೊಂದನ್ನು ಬಿಟ್ಟು ದೂರ ಸರಿಯುವಂತೆ, ಒಂದು ಕಡೆ ರಾಶಿಯಾಗುವಂತೆ ಕಾಲವೇಗದಿಂದ, ಪ್ರೇರಕನಾದ ಶ್ರೀಹರಿಯಿಂದ ದೇಹಿಗಳು ಸಂಬಂಧಿಗಳಾಗುವರು, ಸಂಬಂಧವನ್ನು ಕಳೆದುಕೊಳ್ಳುವರು. ಬೀಜಗಳಿಂದ ಬೇರೆ ಬೀಜಗಳಾಗುವಂತೆ ಅಥವಾ ಕೆಲವು ವೇಳೆ ಆಗದಿರುವಂತೆ, ಕೆಲವು ವೇಳೆ ಹುಟ್ಟಿ ನಷ್ಟವಾಗುವಂತೆ ಪ್ರಾಣಿಗಳಲ್ಲಿಯೂ

ಇರುವರು ಎಂಬ ವಿಶೇಷವನ್ನು ಸೂಚಿಸಿರುವರು. ಇದರಿಂದ ಬೀಜದಿಂದ ಬೀಜಗಳು ಆಗಿಯೇ ಆಗುತ್ತವೆಯೆಂಬ ನಿಯಮವಿಲ್ಲವೆಂದು ತಿಳಿಸಿದಂತಾಯಿತು. ಇದರಂತೆ ಮಕ್ಕಳು ಆಗಿಯೇ ಆಗುತ್ತಾರೆಂಬ ನಿಯಮವೂ ಇಲ್ಲವೆಂದಾಯಿತು. ಬೀಜಗಳಿಗೆ ಜನ್ಯಜನಕಭಾವವಿದ್ದರೂ ಹೇಗೆ ತಂದೆ ಮಕ್ಕಳು ಎಂಬ ವ್ಯವಹಾರವಿಲ್ಲವೋ ಹಾಗೆಯೇ ಜೀವರಲ್ಲಿಯೂ ಇಲ್ಲವೆಂದರ್ಥ. ಆದ್ದರಿಂದ ಮುದಿತನದಲ್ಲಿ ಆದ ಮಗನು ಸತ್ತನೆಂದೂ ದುಃಖಿಸಬೇಕಾಗಿಲ್ಲವೆಂದು ಅಭಿಪ್ರಾಯ. || ೪ ||

ವಯಂ ಚ ತ್ವಂ ಚ ಯೇ ಚೇಮೇ ತುಲ್ಯಕಾಲಾಶ್ಚರಾಚರಾಃ ।
ಜನ್ಮಮೃತ್ಯೋರ್ಯಥಾ ಪಶ್ಚಾತ್ಪ್ರಾಗೇವಮಧುನಾ ವಿಭೋ ॥ ೫ ॥

ಈ ಕಾರಣದಿಂದಲೂ ಮಗ ಮೊದಲಾದ ಸಂಬಂಧವು ಈ ಬಗೆಯದು ಎಂದು ಹೇಳುತ್ತಾರೆ. ವಿಭೋ=ರಾಜನೇ, ತುಲ್ಯಕಾಲಾಃ=ಈ ಕ್ಷಣದಲ್ಲಿ ಒಂದೇ ಕಾಲ ದಲ್ಲಿರುವ ವಯಂ ಚ=ನಾವೂ ತ್ವಂ ಚ=ನೀನೂ ಇಮೇ=ಈ ಯೇ ಚರಾಚರಾಃ ಚ=ಜಂಗಮ ಸ್ಥಾವರ ಪ್ರಾಣಿಗಳೂ ದೇಹನಾಶದಿಂದ ಬೇರೆ ಕ್ಷಣದಲ್ಲಿ ಹೇಗೆ ಇಲ್ಲವೋ ಹಾಗೆಯೇ ಈಗಲೂ ಎಂದು ಅಭಿಪ್ರಾಯ. ದೇಹನಾಶ ಮತ್ತು ಅನಾಶ ಗಳಿಂದ ಯಾವಾಗಲೂ ಸಮಾನಕಾಲತ್ವವಿಲ್ಲವೆಂದಾದರೆ ಯಾವಾಗಲೂ ಸಮಾನ ಕಾಲತ್ವವು ಯಾರಿಗೆ? ಎಂದರೆ ಹೇಳುತ್ತಾರೆ. ಯಥಾ=ಹೇಗೆ ಜನ್ಮಮೃತ್ಯೋಃ= ಹುಟ್ಟು ಸಾವುಗಳ ಪಶ್ಚಾತ್=ಅನಂತರದಲ್ಲಿಯೂ ಪ್ರಾಕ್=ಮೊದಲೂ ಸೃಷ್ಟ್ಯಾದಿ ಗಳನ್ನು ಮಾಡುತ್ತಿರುವನೋ ಹಾಗೆಯೇ ಅಧುನಾ ಈಗಲೂ ಏವಂ=ಹೀಗೆಯೇ ಸೃಷ್ಟ್ಯಾದಿಗಳನ್ನು ಮಾಡುತ್ತಿರುವನು. ಇದರಿಂದ ಶ್ರೀಹರಿಗೇ ದೇಹದಿಂದ ಸಾರ್ವ ಕಾಲದಲ್ಲಿ ಇರುವಿಕೆಯನ್ನು ಹೇಳಿರುವರು. ಜೀವರ ಚೈತನ್ಯವು ಎಲ್ಲ ಕಾಲದಲ್ಲಿ ಇರುವುದಾದರೂ ದೇಹಕ್ಕೆ ನಾಶವಿರುವುದರಿಂದ ಎಲ್ಲ ಕಾಲದ ಇರುವಿಕೆ ಇಲ್ಲವೆಂಬ ವಿಶೇಷವೆಂದು ಅಭಿಪ್ರಾಯ. 'ದೇಹಸ್ಯ ಸರ್ವಥಾ ನಾಶಾತ್ ಅನಾಶಾಚ್ಚೇತನಸ್ಯ ತು' ಎಂದು ಸ್ಮೃತಿಯಿರುವುದು. (೨) ತುಲ್ಯಕಾಲಾಃ=ಈ ಕಾಲದಲ್ಲಿರುವ ನಾವೂ ನೀನೂ ಈ ಪ್ರಾಣಿಗಳೂ ಜನ್ಮದ ಮೊದಲು ಮೃತಿಯ ಅನಂತರ ಹೇಗೆ ತಂದೆ ಮಗ ಮೊದಲಾದ ಸಂಬಂಧವಿಲ್ಲದವರೋ ಅಧುನಾ=ಬದುಕಿರುವಾಗ ಈಗಲೂ ಏವಂ=ಸಂಬಂಧವಿಲ್ಲದವರೇ ಎಂದು ತಿಳಿ ಎಂದೂ ಅರ್ಥ. ಈ ಸಂಬಂಧವು ಸಾರ್ವ ಕಾಲಿಕವಲ್ಲವೆಂದು ಅಭಿಪ್ರಾಯ. || ೫ ||

ಭೂತೈರ್ಭೂತಾನಿ ಭೂತೇಶಃ ಸೃಜತ್ಯವತಿ ಹಂತ್ಯಜಃ ।
ಆತ್ಮಸೃಷ್ಟೈರಸ್ವತಂತ್ರೈರನಪೇಕ್ಷೋಽಪಿ ಬಾಲವತ್ ॥ ೬ ॥

ಶ್ರೀಹರಿಯ ಇಚ್ಛೆಯಿಂದ ಪ್ರೇರಿತರಾದ ಜೀವರು ಸಂಬಂಧಿಗಳಾಗಿ ಹುಟ್ಟುವರು, ಹುಟ್ಟದಿರುವರು ಅಥವಾ ಹುಟ್ಟಿ ಸಾಯುವರು. ಈ ಕಾಲದಲ್ಲಿ ಒಟ್ಟಿಗೇ ಸೇರಿರುವ ನಾವೂ ನೀನೂ ಜಂಗಮ ಸ್ಥಾವರಗಳೂ ದೇಹನಾಶದಿಂದ ಮುಂದೆ ಹೇಗೆ ಇರುವು

ಹಾಗಾದರೆ ನಾನಿವನ ತಂದೆ ಮೊದಲಾದ ಅಭಿಮಾನ ಪ್ರಾಣಿಗಳಿಗೆ ಹೇಗೆ? ಎಂದರೆ ಶ್ರೀಹರಿಯು ಅವರನ್ನು ನಿಮಿತ್ತಮಾಡಿಕೊಂಡಿರುವುದರಿಂದ ಎಂದು ಹೇಳುತ್ತಾರೆ. ಭೂತೇಶಃ=ಎಲ್ಲ ಪ್ರಾಣಿಗಳಿಗೂ ನಿಯಾಮಕನಾದ ಅಜಃ=ಹುಟ್ಟುಸಾವುಗಳಿಲ್ಲದ ಶ್ರೀಹರಿಯು ಅನಪೇಕ್ಷಃ ಅಪಿ=ಜೀವರ ಸೃಷ್ಟ್ಯಾದಿಗಳಿಂದ ತನಗೆ ಯಾವ ಪ್ರಯೋಜನಾಪೇಕ್ಷೆಯು ಇಲ್ಲದಿದ್ದರೂ ಬಾಲವತ್=ಹುಡುಗರು ಆಟದ ಸಾಮಾನುಗಳಿಂದ ಆಟವಾಡುವಂತೆ ಅಸ್ವತಂತ್ರೈಃ=ತಾವೇ ಹುಟ್ಟಲಾಗದ ಪರತಂತ್ರರಾದ ಆತ್ಮಸೃಷ್ಟೈಃ = ಆದ್ದರಿಂದಲೇ ತನ್ನಿಂದ ಸೃಷ್ಟರಾದ ಭೂತೈಃ = ಪ್ರಾಣಿಗಳಿಂದ ಭೂತಾನಿ=ಪ್ರಾಣಿಗಳನ್ನು ಸೃಜತಿ=ಸೃಷ್ಟಿಸುವನು ಅವತಿ=ರಕ್ಷಿಸುವನು ಹಂತಿ=ಸಂಹರಿಸುವನು. ಯಾರಿಂದ ಹುಟ್ಟಿದ ಪ್ರಾಣಿಗಳೆಂದರೆ 'ಆತ್ಮಸೃಷ್ಟೈಃ' ಎಂದೂ, ಪ್ರಾಣಿಗಳು ತಾವಾಗಿಯೇ ಏಕೆ ಹುಟ್ಟಬಾರದೆಂದರೆ 'ಅಸ್ವತಂತ್ರೈಃ' ಎಂದೂ ಶ್ರೀಹರಿಯು ಪ್ರಯೋಜನಾಪೇಕ್ಷೆಯಿಂದ ಸೃಷ್ಟ್ಯಾದಿಗಳನ್ನು ಮಾಡುವನೇ? ಎಂದರೆ 'ಅನಪೇಕ್ಷಃ' ಎಂದೂ, ಈ ಸೃಷ್ಟ್ಯಾದಿಗಳಿಂದ ಶ್ರೀಹರಿಗೆ ಪ್ರಯೋಜನವಿಲ್ಲವಾದರೆ ಈ ಸೃಷ್ಟ್ಯಾದಿಗಳು ಹೇಗೆ ಆಗುವುವು? ಪ್ರಯೋಜನವಿಲ್ಲದೆ ಪ್ರವೃತ್ತಿಯೇ ಕಾಣುವುದಿಲ್ಲವಲ್ಲಾ ಎಂದರೆ 'ಬಾಲವತ್' ಎಂದೂ ಉತ್ತರ ಕೊಟ್ಟಿರುವರೆಂದು ತಿಳಿಯಬೇಕು. 'ಲೋಕವತ್ತು ಲೀಲಾಕೈವಲ್ಯಮ್' ಎಂದು ಸೂತ್ರವಿದೆ. ಹೀಗೆ ಎಲ್ಲಕ್ಕೂ ಕಾರಣನಾದ್ದರಿಂದ ಶ್ರೀಹರಿಯನ್ನು ಸೇವಿಸಬೇಕೇ ಹೊರತು ದುಃಖಿಸಬಾರದೆಂದು ಅಭಿಪ್ರಾಯ. 'ನಾನಾ ಹ್ಯೇನಂ ವ್ಯಪದಿಶಂತಿ ಪಿತೇತಿ ಪುತ್ರೇತಿ ಭ್ರಾತೇತಿ' ಎಂಬ ಶ್ರುತಿಯೂ 'ಪುತ್ರಭ್ರಾತೃಪಿತೃತ್ವೇನ ಸ್ವಾಮಿತ್ವೇನ ಯತೋ ಹರಿಃ | ಬಹುಧಾ ಗೀಯತೇ ದೇವೈಃ' ಇತ್ಯಾದಿ ಪುರಾಣ ವಾಕ್ಯಗಳೂ ಶ್ರೀಹರಿಯನ್ನೇ ಆ ರೀತಿಯಲ್ಲಿ ಉಪಾಸಿಸಬೇಕೆಂದು ತಿಳಿಸುವುವು. || ೬ ||

ದೇಹೇನ ದೇಹಿನೋ ರಾಜನ್ ದೇಹಾದ್ದೇಹೋಭಿಜಾಯತೇ ।
ಬೀಜಾದೇವ ಯಥಾ ಬೀಜಂ ದೇಹ್ಯರ್ಥ ಇವ ಶಾಶ್ವತಃ || ೭ ||

ಪ್ರಾಣಿಗಳ ಮೂಲಕ ಶ್ರೀಹರಿಯು ಹೇಗೆ ಸೃಷ್ಟಿಸುವನು? ಎಂದರೆ ಆ ಪ್ರಕಾರವನ್ನು ತಿಳಿಸುತ್ತಾರೆ. ರಾಜನೇ, ದೇಹೇನ=ತಂದೆಯ ದೇಹದಿಂದ (ಸಂಯುಕ್ತಾತ್)=

ದಿಲ್ಲವೋ ಹಾಗೆ ಈಗಲೂ ಸಂಬಂಧಿಗಳಲ್ಲ. ಹುಟ್ಟು ಸಾವುಗಳ ನಂತರ ಮತ್ತು ಮೊದಲು ಸೃಷ್ಟ್ಯಾದಿಗಳನ್ನು ಶ್ರೀಹರಿಯು ಮಾಡುತ್ತಿರುವಂತೆ ಈಗಲೂ ಮಾಡುತ್ತಲೇ ಇರುವನು. (ಅವನೊಬ್ಬನೇ ದೇಹನಾಶವಿಲ್ಲದೆ ಎಲ್ಲ ಕಾಲಗಳಲ್ಲಿಯೂ ಇರುವವನು.) ಸರ್ವ ಪ್ರಾಣಿ ನಿಯಾಮಕನಾದ ಶ್ರೀಹರಿಯು ಸ್ವಪ್ರಯೋಜನವಿಲ್ಲದಿದ್ದರೂ ಮಕ್ಕಳಂತೆ ಪರತಂತ್ರರಾಗಿ ತನ್ನಿಂದ ಸೃಷ್ಟರಾದ ಪ್ರಾಣಿಗಳಿಂದ ಪ್ರಾಣಿಗಳನ್ನು ಸೃಷ್ಟಿಸುವನು, ರಕ್ಷಿಸುವನು, ಸಂಹರಿಸುವನು. ತಂದೆಯ ದೇಹದಿಂದ ಸಂಬಂಧ ಹೊಂದಿದ ತಾಯಿಯ ದೇಹದಿಂದ ಕರ್ಮಾನುಗುಣವಾಗಿ ಹುಟ್ಟಲಿರುವ

ಸಂಯೋಗಹೊಂದಿದ ದೇಹಾತ್ = ತಾಯಿಯ ದೇಹದಿಂದ ದೇಹಿನಃ=ಹುಟ್ಟಲಿರುವ ಮಗು (ಜೀವ) ವಿನ ದೇಹಃ=ದೇಹವು ಅಭಿಜಾಯತೇ = ಹುಟ್ಟುವುದು. ಚೇತನನು (ಜೀವವು) ಹುಟ್ಟುವುದಿಲ್ಲ. ಏಕೆಂದರೆ, ಜೀವವು ನಿತ್ಯ. ಹೀಗೆ ಹೇಳಿದ್ದರಿಂದ ನಿತ್ಯನಾದ ಚೇತನನು ಹುಟ್ಟುವುದಾದರೂ ಹೇಗೆ? ಎಂಬ ಶಂಕೆಗೆ ಉತ್ತರವಾಗಿ ಹುಟ್ಟು ಮೊದಲಾದ ವ್ಯವಹಾರವು ದೇಹಗಳಿಗೇ ಹೊರತು ಚೇತನನಿಗಲ್ಲವೆಂದು ಹೇಳಿದಂತಾಯಿತು. ದೇಹ-ಉಪಚಯೇ ಎಂಬ ಧಾತುವಿನ ರೂಪವಾಗಿ ದೇಹಶಬ್ದವು ರೂಪಗೊಂಡಿದೆ. ಅಥವಾ (೨) ದೇಹೇನ=ದೇಹಶಬ್ದದಿಂದ ಉಪ-ಲಕ್ಷಿತವಾದ ಪೂರ್ವಕರ್ಮದಿಂದ-ಫಲಕೊಡುವುದಕ್ಕಾಗಿ ಶ್ರೀಹರಿಯಿಂದ ಪ್ರೇರಿತವಾದ್ದರಿಂದ ದೇಹಿನಃ=ತಂದೆ, ತಾಯಿ ಶಬ್ದಗಳಿಂದ ವಾಚ್ಯವಾದುದರ ದೇಹಾತ್-ಉಪಾದಾನಕಾರಣವಾದ್ದರಿಂದ (ಪುತ್ರಸ್ಯ) ದೇಹಃ = ಮಗನ ದೇಹವು ಅಭಿ-ಜಾಯತೇ-ಹುಟ್ಟುವುದು. ಅಭಿ ಎಂಬ ಉಪಸರ್ಗದಿಂದ ಅನೇಕ ಮುಖವಾದ ಪರಂಪರಾ ಸೃಷ್ಟಿಯನ್ನು ಸೂಚಿಸಿರುವರು (ಸಂಗ್ರಹಿಸಿರುವರು). ಈ ವಿಷಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ. ಬೀಜಾತ್ ಏವ= ಹಲಸು ಮೊದಲಾದ ಬೀಜದಿಂದ —ನೀರು ತೇಜಸ್ಸು (ಶಾಖ) ಮೊದಲಾದ ಸಾಧನ ಸಾಮಗ್ರೀ ಯುಕ್ತವಾದುದರಿಂದ—ಲೇವೇ, ಯಥಾ- ಹೇಗೆ ಬೀಜಂ - ಅಂಕುರವೆಂಬ ವೃಕ್ಷವಾಗಿ ಹುಟ್ಟಲಿರುವ ಜೀವನ ಶರೀರವು ಅಭಿಜಾಯತೇ=ಅದರೊಂದಿಗೆ ಹುಟ್ಟುವುದೋ, ನೀರು ಮೊದಲಾದವುಗಳಿಂದ ಸಾರವನ್ನು ಸಂಪಾದಿಸಿಕೊಂಡ ಅದರಿಂದ ಬೇರೆ ಹಲಸಿನ ಬೀಜ ಮೊದಲಾದ ಬೀಜಗಳು ಹುಟ್ಟುವುವೋ ಅದರಿಂದ ಮತ್ತೆ ವೃಕ್ಷ ಅದರಿಂದ ಮತ್ತೆ ಬೀಜ ಹೀಗೆ ಕಾರ್ಯ ಪರಂಪರೆಯು ಆಗುವುದೋ (ಹಾಗಾದರೆ ಅನವಸ್ಥೆ ಬರುವುದಲ್ಲವೇ! ಎನ್ನಬಹುದು. ಆದರೆ ಮೂಲಕಾರ್ಯವು ಪ್ರಕೃತಿಯ ಸ್ವರೂಪವಾದ್ದರಿಂದ ಅನವಸ್ಥೆಗೆ ಅವಕಾಶವಿಲ್ಲ.) (ತಥಾ) ಅದರಂತೆ ತಂದೆ, ತಾಯಿ ದೇಹ ವಿಕಾರವಾದ ಶುಕ್ರ ಶೋಣಿತಗಳ ಸಂಬಂಧದಿಂದ ಕಲಿಲ (ಮಾಂಸಪಿಂಡ) ಮೊದಲಾದ ಕಾರ್ಯವು ಅಭಿಮಾನಿ ಜೀವನೊಂದಿಗೆ ಹುಟ್ಟುವುದು. ಅದರಿಂದ ಅವಯವಗಳುಳ್ಳ ಸ್ತ್ರೀಪುರುಷ ದೇಹಗಳು. ಅವುಗಳ ರೇತಸ್ಸು ರಜಸ್ಸು ಇತ್ಯಾದಿ ಕ್ರಮದಿಂದ ಬೇರೆ ದೇಹರೂಪಕಾರ್ಯಗಳು ಕ್ರಮವಾಗಿ ಹುಟ್ಟುವುವು. ಈ ಕ್ರಮದಿಂದ ಶ್ರೀಹರಿಯು ಭೂತಗಳಿಂದ ಸೃಷ್ಟಿಮಾಡುವನು. ಇದರಂತೆ ಸ್ಥಿತಿ-ಸಂಹಾರ ಕಾರ್ಯಗಳನ್ನೂ ಊಹಿಸಿಕೊಳ್ಳಬೇಕು. ಇವೆಲ್ಲವೂ ಅವರವರ ಅದೃಷ್ಟಕ್ಕೆ ನಿಯಾಮಕನಾದ ಶ್ರೀಹರಿಯ ಇಚ್ಛೆಗಧೀನವಾಗಿ ನಡೆಯುವುದೆಂದು ತಿಳಿಯಬೇಕು. ದೇಹವು ನಾಶವಾದಂತೆ ದೇಹಿಯೂ (ಜೀವನೂ) ನಾಶವಾದಲ್ಲಿ ಪುರುಷಾರ್ಥವೇ ಉಪಪನ್ನವಾಗುವುದಿಲ್ಲವೆಂದರೆ ಹೇಳುತ್ತಾರೆ. ದೇಹೀ = ದೇಹ-ದೇಹಿಗಳಲ್ಲಿ ದೇಹಿಯು

ಜೀವನ ದೇಹವು ಹುಟ್ಟುವುದು. ಹಲಸು ಮೊದಲಾದ ಬೀಜಗಳಿಂದ—ನೀರು ಶಾಖ ಮೊದಲಾದ ಸಾಮಗ್ರಿಗಳಿಂದ ಕೂಡಿದವುಗಳಿಂದ—ಅಂಕುರೋತ್ಪತ್ತಿಯಾಗು

(ಜೀವನು) ಅರ್ಥಃ ಇವ=(೧) ಮೋಕ್ಷವೆಂಬ ಪುರುಷಾರ್ಥದಂತೆ (೨) ಶಬ್ದಗಳ ಅರ್ಥಗಳಂತೆ ಶಾಶ್ವತಃ=ಅಭಿಮಾನವಿಲ್ಲದೆ ಜನ್ಮ ನಾಶಗಳಿಲ್ಲದವನಾದ್ದರಿಂದ ಮೂರು ಕಾಲಗಳಲ್ಲಿಯೂ ಒಂದೇ ಪ್ರಕಾರವಾಗಿ ಇರುವವನು. ಹಾಗಾದರೆ ಬ್ರಹ್ಮವಸ್ತುವಿನ ಸಾಮ್ಯವೇ ಬಂದಿತಲ್ಲಾ ಎಂದರೆ ಅದಕ್ಕೂ ಇದೇ ಉತ್ತರ. ದೇಹೀ ಅರ್ಥಃ=ಜೀವ ನೆಂಬ ಪದಾರ್ಥವು ಶಾಶ್ವತಃ ಇವ='ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ | ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ||' ಎಂದಿದೆಯಾಗಿ ಜೀವನ ನಿತ್ಯತ್ವವು ಶ್ರೀಹರಿಯ ಅಧೀನವಾದ್ದರಿಂದ (ಔಪಚಾರಿಕ ನಿತ್ಯತೆ) ನಿತ್ಯನೋ ಎಂಬಂತೆ ಇರುವನು. ನಿರುಪಚರಿತ ನಿತ್ಯತ್ವವು ಶ್ರೀಹರಿಗೇ ಆದ್ದರಿಂದ ಸಾಮ್ಯವಿಲ್ಲ ವೆಂದು ತಿಳಿಯಬೇಕು. ವಿ.ಟ. 'ಅಥಾತೋ ರೇತಸಃ ಸೃಷ್ಟಿಃ' ಎಂಬ ಶ್ರುತಿಯು ಶ್ರೀಹರಿಪ್ರೇರಿತವಾದ ರೇತಸ್ಸಿನಿಂದ ಸೃಷ್ಟಿಯನ್ನು ಹೇಳುವುದು. ಇಲ್ಲಿ ವಿಜಯಧ್ವಜತೀರ್ಥರು 'ಕೆಲವು ಕಾರ್ಯಗಳು ನಾರಾಯಣನಿಂದಲೇ ಆಗುವುವು. (ನಾರಾಯಣಾಯನಗಳು) ಕೆಲವು ತದಧೀನಗಳಾಗಿ ಪರಂಪರೆಯಿಂದ ಆಗುವುವು. (ನಾರಾಯಣ ಪರಾಯಣಗಳು) ಅಂತೂ ಎಲ್ಲ ಕೆಲಸಗಳೂ ನಾರಾಯಣಾಧೀನಗಳೇ. ಈ ವಿಶೇಷವನ್ನು ಹಿಂದಿನ ಅಧ್ಯಾಯದ ೫ನೆಯ ಶ್ಲೋಕದಲ್ಲಿ ಉದಹರಿಸಿದ 'ನಾರಾಯಣಾಯನಾ ದೇವಾ ಋಷ್ಯಾದ್ಯಾಸ್ತತ್ಪರಾಯಣಾಃ | ಬ್ರಹ್ಮಾದ್ಯಾಃ ಕೇಚನೈವಂ ಸ್ಯುಃ ನಿಪ್ರೋ ಯೋಗಂ ಸುಖಂ ಲಭೇತ್ ||' ಇಲ್ಲಿಯೂ ಇಂತಹ ವರು ಎಷ್ಟು ಮಂದಿ? ಎಂಬ ಆಶಂಕೆಯನ್ನು 'ನವಕೋಟ್ಯಸ್ತು ದೇವಾನಾಂ ಋಷೀಣಾಂ ಶತಕೋಟಯಃ | ನಾರಾಯಣಾಯನಾಃ ಸರ್ವೇ ಯೇ ಕೇಚಿತ್ ತತ್ಪರಾಯಣಾಃ' ಎಂಬ ಪ್ರಮಾಣದಿಂದ ಪರಿಹರಿಸಿಕೊಳ್ಳಬೇಕು. ಈ ಎರಡು ಪ್ರಮಾಣಗಳನ್ನೂ 'ಮುಕ್ತಾನಾಮಪಿ ಸಿದ್ಧಾನಾಂ' ಎಂಬಲ್ಲಿ ಹೇಳವೆ ಇಲ್ಲಿಯೇ ಹೇಳಿರುವೆವು. ಕಾರಣವೇನೆಂದರೆ, 'ಎಲ್ಲವೂ ನಾರಾಯಣಾಶ್ರಯದಿಂದಲೇ ನಡೆಯು ವುದೆಂದು ಹೇಳಬೇಕಾಗಿದೆ. ಅದಕ್ಕಾಗಿ ಇಲ್ಲಿಯೇ ಹೇಳಿದ್ದೇವೆ. ಎರಡು ಕಡೆಗೂ ಇವೇ ಪ್ರಮಾಣಗಳು ಎಂದು ಸಂತೋಷಪಡಬೇಕು' ಎಂದಿರುವರು. ಈ ಶ್ಲೋಕ ದಲ್ಲಿ ದೇಹ್ಯರ್ಥ ಇವ ಎಂಬಲ್ಲಿ ಪರಕೀಯರು ದೇಹೀ-ಜೀವನು ಅರ್ಥಃ ಇವ= ನರತ್ವ ಮೊದಲಾದ ಎಲ್ಲ ಜಾತಿಗಳಂತೆ ಶಾಶ್ವತಃ=ನಿತ್ಯನು ಜಾತಿಯು ಹೇಗೆ ನಿತ್ಯವೋ ಹಾಗೆ ಜೀವನೂ ನಿತ್ಯನು ಎಂದು ವ್ಯಾಖ್ಯಾನಮಾಡಿರುವರು. ಅದು ಸರಿಯಲ್ಲ. 'ಕುತೋ ಭಸ್ಮತ್ವಮಾಪ್ತಸ್ಯ ನರತ್ವಂ ಪುನರಿಷ್ಯತೇ' (ಭಸ್ಮವಾದವ ನಿಗೆ ಮತ್ತೆ ನರತ್ವವೆಲ್ಲಿ?) ಎಂಬ ವಚನದಂತೆ ಆಯಾಯಾ ನರನಲ್ಲಿರುವ ನರತ್ವವು ಆಯಾಯಾ ನರನ ನಾಶದೊಂದಿಗೆ ನಾಶವಾಗುವುದರಿಂದ ನರತ್ವಾದಿಗಳು ನಿತ್ಯವಲ್ಲ. || ೭ ||

ವುದಲ್ಲವೇ! ದೇಹ-ಜೀವರಲ್ಲಿ ಜೀವನು ಮಾತ್ರ ಪುರುಷಾರ್ಥದಂತೆ ಶಾಶ್ವತನು. ಆದರೆ ಇವನ ನಿತ್ಯತೆಯು ಶ್ರೀಹರಿಯ ಅಧೀನವಾದ್ದರಿಂದ ಅಮುಖ್ಯವಾದುದು.

ದೇಹ ದೇಹ್ಯವಿಭಾಗೋಽಯಮವಿವೇಕಕೃತಃ ಪುರಾ ।
ಜಾತಿವ್ಯಕ್ತಿ ವಿಭಾಗೋಽಯಂ ಯಥಾ ವಸ್ತುನಿ ಕಲ್ಪಿತಃ ॥ ೮ ॥

ಹುಟ್ಟು ಮೊದಲಾದುವು ದೇಹಕ್ಕೇ ಹೊರತು ಜೀವನಿಗಲ್ಲ ಎಂದುದು ಸರಿಯಲ್ಲ. ನಾನು ತೆಳ್ಳಗೆ, ನಾನು ದಪ್ಪಗೆ ಎಂಬ ಅನುಭವದಿಂದ ದೇಹವೂ ಆತ್ಮವೂ ಬೇರೆಯಲ್ಲವೆಂದು ತೋರಿಬರುವುದಾದ್ದರಿಂದ ದೇಹಕ್ಕಿಂತ ಭಿನ್ನನಾದ ಜೀವನೇ ಇಲ್ಲ. ಅಂದ ಮೇಲೆ ದೇಹಿ ನಿತ್ಯ, ದೇಹ ಅನಿತ್ಯವೆಂಬ ವಿಶೇಷವಾದರೂ ಹೇಗೆ ಸಂಘಟಿಸುವುದು? ಎಂದರೆ ಹೇಳುತ್ತಾರೆ. ಅಯಂ='ಕೃಶೋಽಹಂ' 'ಸ್ಥೂಲೋಽಹಂ' ಎಂಬ ಅನುಭವದಿಂದ ಸಿದ್ಧಿಸುವುದೆನ್ನಲಾದ ದೇಹದೇಹ್ಯ-ವಿಭಾಗಃ=ದೇಹವೂ ಜೀವನೂ ವಿಭಿನ್ನರಲ್ಲವೆಂಬುದು ಪುರಾ=ಪುರಾತನವಾದ ಅನಾದಿ ಸಿದ್ಧವಾದ ಅವಿವೇಕಕೃತಃ=ಅಜ್ಞಾನ ನಿರ್ಮಿತವಾದುದು. ಪುರಾ ಎಂಬುದರಿಂದ ಶುಕ್ತಿ ರಜತಗಳಿಗೆ ತೋರುವ ಅವಿಭಾಗದಂತೆ ಆಧುನಿಕವಲ್ಲವೆಂದು (ಸಾದಿ-ಯಲ್ಲವೆಂದು) ಹೇಳಿರುವರು. ಇದರಿಂದ ವಿಭಾಗಜ್ಞಾನದಿಂದ ವಿಭಾಗಾಜ್ಞಾನವು ನಷ್ಟವಾಗಲು ಮೇಲೆ ಹೇಳಿದ ವಿಶೇಷವು ಕೂಡುವುದೆಂದು ತಿಳಿಸಿದಂತಾಯಿತು. ಈ ವಿಷಯದಲ್ಲಿ ದೃಷ್ಟಾಂತ ಕೊಡುತ್ತಾರೆ. (ಅವಿಭಾಗಾರೋಪವೆಂದು ಹೇಳಿದ ವಿಷಯದಲ್ಲಿ ವಿಭಾಗಾರೋಪದ ದೃಷ್ಟಾಂತವನ್ನು ಕೊಡುತ್ತಾರೆ.) ಯಥಾ= ಹೇಗೆ ವಸ್ತುನಿ=ಗೋವು ಮೊದಲಾದ ವಸ್ತುಗಳಲ್ಲಿ ಜಾತಿವ್ಯಕ್ತಿ ವಿಭಾಗಃ=ಗೋತ್ವ ಮತ್ತು ಗೋಪಿಂಡ (ವ್ಯಕ್ತಿ) ಗಳಿಗೆ ಭೇದವು ಅಯಂ=ಗೋವಿನಲ್ಲಿ ಗೋತ್ವವಿದೆ ಎಂಬ ಅನುಭವ ಸಿದ್ಧವಾದುದು ಕಲ್ಪಿತಃ=ಕಣಾದ ಮೊದಲಾದ ವೈಶೇಷಿಕಾದಿ ಮತಪ್ರವರ್ತಕರ ಅಜ್ಞಾನದಿಂದ ಕಲ್ಪಿತವೋ, ವಾಸ್ತವವಲ್ಲವೋ, ಅಥವಾ ವಸ್ತುನಿ=ಶ್ರೀಹರಿಯಲ್ಲಿ ಜಾತಿವ್ಯಕ್ತಿವಿಭಾಗಃ=ಗೋಪಾಲತ್ವ ಜಾತಿ ಗೋಪಾಲನೆಂಬ ವ್ಯಕ್ತಿ ಇವುಗಳ ಭೇದವು ಯಥಾಕಲ್ಪಿತಃ=ಹೇಗೆ ಆರೋಪಿತವೋ ತಥಾ= ಹಾಗೆ ಅವಿವೇಕದಿಂದ ನಿರ್ಮಿತವಾದುದು. ಗೋತ್ವ ಗೋವ್ಯಕ್ತಿ ಭೇದವೆಂಬ ದೃಷ್ಟಾಂತವು ಅಜ್ಞಾನಕೃತವೆಂದಿಷ್ಟುಮಾತ್ರಕ್ಕೇ ಕೊಟ್ಟದ್ದು. ಆದ್ದರಿಂದ ಜಾತಿ ವ್ಯಕ್ತಿಗಳಿಗೆ ಭೇದಾಭೇದವಿದ್ದರೂ ಪ್ರಯೋಜನವಿಲ್ಲ. ಕಣಾದ ಮೊದಲಾದವರೂ ತಮೋಯೋಗ್ಯರೇ ಎಂದು ಪ್ರಕಟಪಡಿಸಲು ಆ ಮತದ ಉದಾಹರಣೆಯನ್ನು ಕೊಟ್ಟದ್ದು. ॥ ೮ ॥

ನಾನು ಕೃಶ, ನಾನು ಸ್ಥೂಲನೆಂಬ ಅನುಭವದಿಂದ ಸಿದ್ಧಿಸುವ ದೇಹ-ದೇಹಿಗಳ ಅಭಿನ್ನತೆಯು ಅನಾದಿಸಿದ್ಧವಾದ ಅಜ್ಞಾನದಿಂದ ನಿರ್ಮಿತವಾದುದು. ಕಣಾದ ಮೊದಲಾದವರು ಅಜ್ಞಾನದಿಂದ ಗೋವು ಮೊದಲಾದ ವಸ್ತುಗಳಲ್ಲಿ ಗೋತ್ವ ಮತ್ತು ಗೋವ್ಯಕ್ತಿಗಳ ಭೇದವನ್ನು 'ಗೋವಿನಲ್ಲಿ ಗೋತ್ವವಿದೆ' ಎಂಬ ಅನುಭವದಿಂದ ಕಲ್ಪಿಸಿದಂತೆ. ಶ್ರೀಹರಿಯಲ್ಲಿ ಗೋಪಾಲತ್ವ, ಗೋಪಾಲವ್ಯಕ್ತಿ ರೂಪಭೇದವನ್ನು

ನಾನಾತ್ವಂ ಜನ್ಮ ನಾಶಶ್ಚ ಕ್ಷಯೋ ವೃದ್ಧಿಃ ಕ್ರಿಯಾಫಲಮ್ ।
ದ್ರಷ್ಟುಶ್ಚ ಭ್ರಾಂತ್ಯತದ್ಧರ್ಮಾ ಯಥಾಽಗ್ನೇರ್ದಾಹ್ಯವಿಕ್ರಿಯಾಃ ||೯||

ದೇಹ ಮತ್ತು ದೇಹಿ(ಜೀವ) ಗಳು ವಿಭಿನ್ನರಲ್ಲವೆಂದು ಮೇಲೆ ಹೇಳಿದ ಅನುಭವವಿರುವುದರಿಂದ ಜೀವನಿಗೆ ಬೇರೆಬೇರೆ ದೇಹಗಳ ಪ್ರಯುಕ್ತ ಬರುವ ನಾನು ದೇವತೆ, ನಾನು ಮನುಷ್ಯ ಇತ್ಯಾದಿ ತಿಳಿವಳಿಕೆ (ಜ್ಞಾನ) ಗಳು ಭ್ರಮಾತ್ಮಕ ಗಳೆಂಬುದು ಹೇಗೆ? ಎಂದರೆ ಹೇಳುತ್ತಾರೆ. ಯಥಾ=ಹೇಗೆ ದಾಹ್ಯವಿಕ್ರಿಯಾಃ= ಬೆಂಕಿಯಿಂದ ಸುಟ್ಟುಹೋಗುವ ಕಟ್ಟಿಗೆ ಮೊದಲಾದವುಗಳಲ್ಲಿ ಆಗುವ ವೃದ್ಧಿ ಕ್ಷಯ ಮೊದಲಾದ ವಿಕಾರಗಳು ಅಗ್ನೇಃ= ಸುಡುವ ಬೆಂಕಿಗೆ ಸಂಬಂಧಪಟ್ಟವುಗಳೆಂದು ಭ್ರಾಂತಿ=ಭ್ರಮಾತ್ಮಕವಾಗಿ ತಿಳಿದು ಬರುವುವೋ (ತಥಾ)=ಹಾಗೆ ಅತದ್ಧರ್ಮಾಃ= ಜೀವನಿಗಿಂತ ಬೇರೆಯಾದ ಶರೀರದ ಧರ್ಮಗಳಾದ ಕ್ರಿಯಾಫಲಂ=ಜೀವನ ಕರ್ಮಗಳ ಫಲವಾಗಿ ಬಂದ ನಾನಾತ್ವಂ=ನಾನು ದೇವತೆ, ನಾನು ಮನುಷ್ಯ ಇತ್ಯಾದಿ ಆಯಾಯಾ ದೇಹಪ್ರಯುಕ್ತ ಭೇದಗಳು ಜನ್ಮ= ಹುಟ್ಟು, ನಾಶಃ = ಸಾವು, ಕ್ಷಯಃ=ಕೃಶತೆ ಚ= ಮತ್ತು ವೃದ್ಧಿಃ= ಹೆಚ್ಚಾಗುವಿಕೆ (ಬೆಳೆವಣಿಗೆ) ಇತ್ಯಾದಿಗಳು ದ್ರಷ್ಟುಃ ಚ=ದೇಹಾಭಿಮಾನಿಯಾದ ಜೀವನಿಗೇ ಸಂಬಂಧಿಸಿದವುಗಳೆಂದು ಭ್ರಾಂತಿ= ಭ್ರಮಾತ್ಮಕ ಜ್ಞಾನದಿಂದ ತಿಳಿದುಬರುವುವು. 'ಕ್ರಿಯಾಫಲಂ' ಎಂಬುದು ಕರ್ಮ ಫಲವಾದ್ದರಿಂದ ಎಂದು ಹೇತುವಾಗಿ ಹೇಳಿರುವ ವಿಶೇಷಣ. ಕಟ್ಟಿಗೆ ಮೊದಲಾದುವು ಸಮೃದ್ಧವಾದರೆ ಅಗ್ನಿಯು ಸಮೃದ್ಧವೆಂದೂ ಅವು ಕ್ಷೀಣವಾದರೆ ಅಗ್ನಿಯು ಕ್ಷೀಣ ವೆಂದೂ ಮೊದಲಾಗಿ ಭ್ರಾಂತಿಯಿಂದ ತಿಳಿಯುವಂತೆ ಶರೀರಧರ್ಮಗಳಾದ ಬೇರೆ ಬೇರೆ ಜಾತಿ ಮೊದಲಾದುವನ್ನು ಜೀವನಧರ್ಮಗಳೆಂದು ಭ್ರಾಂತಿಯಿಂದ ತಿಳಿಯುವ ರೆಂದು ಅಭಿಪ್ರಾಯ. ದ್ರಷ್ಟುಃ ಚ= ಜ್ಞಾನಿಯಾದ ಶ್ರೀಹರಿಗಾದರೋ ಅತ-ದ್ಧರ್ಮಾಃ= ಜೀವನ ಧರ್ಮಗಳಲ್ಲವೆಂದೇ ಭ್ರಾಂತಿ= ತಿಳಿದುಬರುವುವು. 'ನ ಹಿ ದ್ರಷ್ಟುಃ ದೃಷ್ಟೇರ್ವಿಪರಿಲೋಪೋ ವಿದ್ಯತೇ' (ದ್ರಷ್ಟುಃ = ಶ್ರೀಹರಿಯ ದೃಷ್ಟೇಃ= ಜ್ಞಾನಕ್ಕೆ ವಿಪರಿಲೋಪಃ= ವೈಪರೀತ್ಯವು ನ ಹಿ ವಿದ್ಯತೇ= ಎಂದೂ ಇಲ್ಲ.) ಎಂಬ ಶ್ರುತಿಯಂತೆ ಇವು ಜೀವನ ಧರ್ಮಗಳಲ್ಲವೆಂದು ತಿಳಿಯುವ ಶ್ರೀಹರಿಯ ಜ್ಞಾನವು ಯಾವ ಕಾಲದಲ್ಲಿಯೂ ಭ್ರಾಂತ(ಭ್ರಮಾತ್ಮಕ ಜ್ಞಾನಾವೃತವಾಗಿ) ವಾಗುವುದಿಲ್ಲ. ಜೀವಜ್ಞಾನವೇ ಭ್ರಾಂತವು. ಈ ಶ್ಲೋಕದಿಂದ ದೇಹ-ದೇಹಿಗಳು ಭಿನ್ನರೆಂಬಲ್ಲಿ ಶ್ರೀಹರಿಯ ಜ್ಞಾನವೇ ಪ್ರಮಾಣವೆಂದೂ ತಿಳಿಸಿರುವರೆಂದೂ ತಿಳಿಯಬಹುದು. ||೯||

ಅವಿವೇಕದಿಂದ ಆರೋಪಿಸಿದಂತೆ. ಸುಡುವ ಕಟ್ಟಿಗೆ ಮೊದಲಾದವುಗಳಲ್ಲಿ ಆಗುವ ವೃದ್ಧಿ ಕ್ಷಯ ವಿಕಾರಗಳನ್ನು ಅಗ್ನಿಯವುಗಳೆಂದು ಭ್ರಮದಿಂದ ತಿಳಿಯುವಂತೆ ಜೀವನಿಗಿಂತ ಭಿನ್ನಗಳಾದ ಶರೀರಗಳ ಧರ್ಮಗಳಾದ—ಜೀವನ ಕರ್ಮಫಲಗಳಾದ —ನಾನು ದೇವತೆ, ನಾನು ಮನುಷ್ಯ ಇತ್ಯಾದಿ ಭೇದಗಳು, ಹುಟ್ಟು-ಸಾವು,

ತ ಇಮೇ ದೇಹಸಂಯೋಗಾದಾತ್ಮನ್ಯಾಭಾಂತ್ಯಸದ್ಗ್ರಹಾತ್ ।
ಸ್ವಪ್ನೇ ಯಥಾ ತಥಾ ನಾನ್ಯದ್ಧ್ಯಾಯೇತ್ಸರ್ವಂ ಭಯಂ ಚ ಯತ್

ಇದನ್ನೇ ವಿವರಿಸುತ್ತಾರೆ—(೧) ತೇ ಇಮೇ=ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ ಸಿದ್ಧಗಳಾಗಿ ಪ್ರಾಮಾಣಿಕಗಳಾಗಿರುವ ಈ ಜನ್ಮ ನಾಶ ಮೊದಲಾದುವು (ಜೀವಸ್ಯ)=ಜೀವನಿಗೆ ದೇಹಸಂಯೋಗಾತ್ – ಕರ್ಮಫಲವಾಗಿ ಬಂದ ದೇಹ ಸಂಬಂಧದಿಂದ ಅಸದ್ಗ್ರಹಾತ್–ಅನಾದಿಸಿದ್ಧವಾದ ದೇಹವೇ ನಾನೆಂಬ ದುರಭಿಮಾನದಿಂದ ಆತ್ಮನಿ=ಜೀವನಲ್ಲಿ, ಮನಸ್ಸಿನಲ್ಲಿ ಆಭಾಂತಿ=ತೋರುವುವು. ಈ ವಿಷಯದಲ್ಲಿ ಉದಾಹರಣೆ ಕೊಡುತ್ತಾರೆ. ಯತ್=ಯಾವ ಕಾರಣದಿಂದ ಯಥಾ=ಹೇಗೆ ಸ್ವಪ್ನೇ=ಜಾಗ್ರದವಸ್ಥೆಯಲ್ಲಿ ಕಂಡ ಹಾವು ಹುಲಿ ಮೊದಲಾದ ವಸ್ತುಗಳ ಸಂಸ್ಕಾರವಶದಿಂದ ಸ್ವಪ್ನದಲ್ಲಿ ಕಂಡ ಸರ್ವಂ ಚ=ವಾಸನಾಮಯವಾದ ಅಂತಹ ಎಲ್ಲ ಪದಾರ್ಥಗಳೂ ಭಯಂ=ಭಯವನ್ನುಂಟುಮಾಡುವುವೋ ಅವುಗಳ ನೋಡುವಿಕೆಯಿಂದ ಭಯ ಮೊದಲಾದ ಅನರ್ಥಸಮೂಹವೇ ಉಂಟಾಗುವುದೋ ತಥಾ=ಹಾಗೆ ಅನಾದಿ ಕಾಲದ ಮಿಥ್ಯಾ ಅಭಿಮಾನದಿಂದ ಸಂಸಾರವು ಅನರ್ಥಕರವಾಗುವುದೋ ತತ್=ಆ ಕಾರಣದಿಂದ ಅನ್ಯತ್–ಅನರ್ಥವನ್ನುಂಟುಮಾಡುವುದನ್ನು ಯಾವುದನ್ನೂ ನ ಧ್ಯಾಯೇತ್=ಯೋಚಿಸಬಾರದು. ಇದರಿಂದ ಅನರ್ಥಕರ ಸಂಸಾರದ ನಿವೃತ್ತಿಗೆ ಉಪಾಯವನ್ನೂ ಹೇಳಿರುವರು. (೨) ಶುಕ್ತಿಯೆಂಬ ಅಧಿಷ್ಠಾನದಲ್ಲಿ ರಜತವು ತೋರುವಂತೆ ಹುಟ್ಟು ಮೊದಲಾದುವು ಯಾವ ಅಧಿಷ್ಠಾನದಲ್ಲಿ ತೋರುವುವು ? ಎಂಬ ಮುಂದರ ಆಶಂಕೆಯನ್ನು ಪರಿಹರಿಸುತ್ತಾರೆ. ಈ ಹುಟ್ಟು ಮೊದಲಾದುವು ನಾನೇ ದೇಹವೆಂಬ ದುರಭಿಮಾನದಿಂದ ಆತ್ಮನಿ=ಆತ್ಮಾಧಿಷ್ಠಾನದಲ್ಲಿ ಆಭಾಂತಿ=ತೋರುವುವು. ಆತ್ಮನೇ ಅಧಿಷ್ಠಾನವೆಂದರ್ಥ. ಹಾಗಾದರೆ ಶುಕ್ತಿಯಲ್ಲಿ ತೋರುವ ರಜತವು ಹೇಗೆ ಸುಳ್ಳೋ ಹಾಗೆ ಹುಟ್ಟು ಮೊದಲಾದುವೂ ಸುಳ್ಳಾಗಬೇಕಾಯಿತು ಎಂದರೆ ಸ್ವಪ್ನಪದಾರ್ಥಗಳು ಅರ್ಥಕ್ರಿಯಾಕಾರಿಗಳಾದ್ದರಿಂದ ಹೇಗೆ ಅವುಗಳನ್ನು ಸತ್ಯವೆಂದು ಒಪ್ಪಬೇಕೋ ಹಾಗೆ ಹುಟ್ಟು ಮೊದಲಾದುವನ್ನೂ ಸತ್ಯವೆಂದು ಒಪ್ಪಬೇಕು ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಸ್ವಪ್ನದಲ್ಲಿ ಕಂಡ ಪದಾರ್ಥಗಳು ಹೇಗೋ ಹಾಗೆ ಸರ್ವಂ ಭಯಂ=ಆತ್ಮಾಧಿಷ್ಠಾನದಲ್ಲಿ ಕಂಡ ಹುಟ್ಟು

ಕೃಶಾಭಿವೃದ್ಧಿಗಳು ದೇಹಾಭಿಮಾನಿ ಜೀವನಲ್ಲಿ ಆರೋಪಿತಗಳು. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧಗಳಾದ ಹುಟ್ಟು ಸಾವು ಮೊದಲಾದುವು ಕರ್ಮಫಲವಾಗಿ ಬಂದ ದೇಹಸಂಬಂಧದಿಂದ ಅನಾದಿಸಿದ್ಧ 'ದೇಹವೇ ನಾನು' ಎಂಬ ದುರಭಿಮಾನದಿಂದ ಜೀವನಲ್ಲಿ ಮನಸ್ಸಿನಲ್ಲಿ–ಜೀವನಿಗೆ ತೋರುವುವು. ಜಾಗ್ರದವಸ್ಥೆಯಲ್ಲಿ ಕಂಡ ಹಾವು ಹುಲಿ ಮೊದಲಾದ ವಸ್ತುಗಳ ಸಂಸ್ಕಾರದಿಂದ ಸ್ವಪ್ನದಲ್ಲಿ ಕಂಡ ವಾಸನಾಮಯ ಅಂತಹ ಎಲ್ಲ ಪದಾರ್ಥಗಳೂ ಭಯವನ್ನುಂಟುಮಾಡುವಂತೆ ಅನಾದಿಸಿದ್ಧ

ಮೊದಲಾದ ಅನರ್ಥಕರ ಪದಾರ್ಥಗಳೆಲ್ಲವೂ ಸತ್ಯಗಳೇ. ಯತ್=ಯಾವ ಕಾರಣ ದಿಂದ ಆತ್ಮನಲ್ಲಿ ಕಂಡ ಇವು ಅನರ್ಥಕರಗಳೋ (ತತ್) = ಆ ಕಾರಣದಿಂದ ಅನ್ಯತ್=ದೇಹವೇ ಆತ್ಮವೆಂಬುದನ್ನು ನ ಧ್ಯಾಯೇತ್=ತಿಳಿಯಬಾರದು. (೩) ತೇ= ದೇಹದಲ್ಲಿ ಪ್ರಸಿದ್ಧವಾದ ಈ ಹುಟ್ಟು ಮೊದಲಾದುವು ದೇಹಸಂಯೋಗನಿಮಿತ್ತದಿಂದ ಆತ್ಮನಿ=ಆತ್ಮನಲ್ಲಿ ತೋರುವುವು ದೇಹಸಂಯೋಗವಿದ್ದರೂ ಜ್ಞಾನಿಗಳಿಗೆ ಹಾಗೆ ತೋರುವುದಿಲ್ಲವಾದ್ದರಿಂದ ಅದಕ್ಕೆ ಮುಖ್ಯಕಾರಣವು ಅಸದ್ಗ್ರಹವೆಂದು ತಿಳಿಸಲು ಅಸದ್ಗ್ರಹಾತ್ ಎಂದಿರುವರು. ಇದಕ್ಕೆ ಉದಾಹರಣೆ ಯಥಾ=ಹೇಗೆ ಸ್ವಪ್ನೇ= ಸ್ವಪ್ನಾವಸ್ಥೆಯಲ್ಲಿ ಜಾಗ್ರತ್ತ್ವವು ತೋರುವುದೋ ತಥಾ = ಹಾಗೆ ಎಂದರ್ಥ. ಮಿಥ್ಯಾಜ್ಞಾನಕ್ಕೆ ಫಲವನ್ನು ಹೇಳಿ ಅದನ್ನು ನಿಷೇಧಿಸುತ್ತಾರೆ. ಯತ್ ಅನ್ಯತ್= ಯಾವ ವಸ್ತುಸ್ವರೂಪಕ್ಕಿಂತ ವಿಪರೀತವಾದ ದೇಹಾತ್ಮೈಕ್ಯ ಮೊದಲಾದುವೋ ತತ್ಸರ್ವಂ=ಅವೆಲ್ಲವನ್ನೂ ಭಯಂ=ಭಯಪ್ರದವಾದ್ದರಿಂದ ನ ಧ್ಯಾಯೇತ್=ತಿಳಿಯ ಬಾರದು. 'ಯತ್ಕಿಂಚಿದನ್ಯಥಾ ಸಂಸ್ಥಂ ಅನ್ಯಥಾ ಧ್ಯಾತಮಂಜಸಾ | ಅನರ್ಥ- ಕಾರಣಂ ಲೋಕೇ, ಕಮು ಸರ್ವೇಶ್ವರೋ ಹರಿಃ ||' ಎಂಬ ಪ್ರಮಾಣವು ಅನ್ಯಥೋ- ಪಾಸನೆಯು ಅನರ್ಥಕರವೆಂದು ತಿಳಿಸುವುದು. || ೧೦ ||

ಪ್ರಸುಪ್ತಸ್ಯಾನಹಂ ಮಾನಾನ್ನ ಘೋರಾ(ऽऽ)ಭಾತಿ ಸಂಸೃತಿಃ |
ಜೀವತೋಽಪಿ ಯಥಾ ತದ್ವದ್ವಿಮುಕ್ತಸ್ಯಾನಹಂ ಮತೇಃ || ೧೧ ||

ಅನನ್ಯ (ಅನರ್ಥಕಾರಕವಲ್ಲದ್ದರ) ಧ್ಯಾನಫಲವನ್ನು ಸದೃಷ್ಟಾಂತವಾಗಿ ಪ್ರತಿ ಪಾದಿಸುತ್ತಾರೆ. ಯಥಾ = ಹೇಗೆ ಪ್ರಸುಪ್ತಸ್ಯ = ಅತಿಶಯವಾಗಿ ನಿದ್ರಿಸಿದವನಿಗೆ ಜೀವತಃ ಅಪಿ = ಪ್ರಾಣವುಳ್ಳವನಾಗಿದ್ದರೂ (ದೇಹವಿಶಿಷ್ಟನಾಗಿದ್ದರೂ) ಜ್ಞಾನ ಪೂರ್ವಕವಾಗಿ ಬಾಹ್ಯಪ್ರವೃತ್ತಿ ಇಲ್ಲದವನಿಗೆ ಅನಹಂ ಮಾನಾತ್=ದೇಹಾತ್ಮ ಭ್ರಾಂತಿಜ್ಞಾನವಿಲ್ಲದ್ದರಿಂದ ಘೋರಾ = ಅನರ್ಥಕಾರಿಯಾದ ಸಂಸೃತಿಃ=ವಿಷಯ ವ್ಯಾವೃತ್ತಿಯೆಂಬ ಸಂಸಾರವು ನ (ಆ) ಭಾತಿ = ತೋರುವುದಿಲ್ಲವೋ ತದ್ವತ್ = ಹಾಗೆ ಅನಹಂ ಮತೇಃ=ಅಹಂಭಾವ ಬುದ್ಧಿ ಇಲ್ಲದ ವಿಮುಕ್ತಸ್ಯ ಜೀವತಃ ಅಪಿ= ಜೀವನ್ಮುಕ್ತನಿಗೂ ಘೋರವಾದ ಸಂಸಾರವು ನ (ಆ) ಭಾತಿ = ತೋರುವುದಿಲ್ಲ.

ಮಿಥ್ಯಾ ಅಭಿಮಾನದಿಂದ ಸಂಸಾರವು ಅನರ್ಥಕರವಾಗುವುದು. ಆದ್ದರಿಂದ ಅನರ್ಥ ಕಾರಿಯಾದ ಈ ಯಾವುದನ್ನೂ ಯೋಚಿಸಬಾರದು. ಇವು ಆತ್ಮಾಧಿಷ್ಠಾನದಲ್ಲಿ ನಾನೇ ದೇಹವೆಂಬ ದುರಭಿಮಾನದಿಂದ ತೋರುವುವು. ಸ್ವಪ್ನ ಪದಾರ್ಥಗಳಂತೆ ಇವೂ ಸತ್ಯಗಳೇ. ಅನರ್ಥಕರಗಳಾದ ಇವುಗಳನ್ನು-ದೇಹವೇ ಆತ್ಮವೆಂಬುದನ್ನು- ತಿಳಿಯಬಾರದು. ಗಾಢನಿದ್ರೆಯಲ್ಲಿರುವವನಿಗೆ-ಜೀವಂತನಾಗಿದ್ದರೂ ಬಾಹ್ಯಪ್ರವೃತ್ತಿ ಇಲ್ಲದಿರುವವನಿಗೆ-ದೇಹಾತ್ಮಭ್ರಾಂತಿಯಿಲ್ಲದ್ದರಿಂದ ಅನರ್ಥಕರವಾದ ವಿಷಯವೃತ್ತಿ ಜ್ಞಾನವು ತೋರದಿರುವಂತೆ ಅಹಂಭಾವಜ್ಞಾನವಿಲ್ಲದ ಜೀವನ್ಮುಕ್ತನಿಗೂ ಘೋರ

ಪ್ರಸುಪ್ತಿಯು ಮರಣಕ್ಕೆ ಪರ್ಯಾಯವಾದ್ದರಿಂದ ಅದನ್ನು ನಿವಾರಿಸಲು 'ಜೀವ-ತೋಪಿ' ಎಂದಿರುವರು. ವಿಮುಕ್ತಾಹಂಭಾವಬುದ್ಧಿಯಾದ್ದರಿಂದಲೇ ಜೀವನ್ಮುಕ್ತನಿಗೆ ಸಂಸಾರದ ಕೋಟಲೆ ಇಲ್ಲವೆಂದರ್ಥ. ಇದರಿಂದ ಅನನ್ಯ ಧ್ಯಾನದಿಂದ ಕೈವಲ್ಯವು ದೊರೆಯುವುದೆಂದು ಸೂಚಿಸಿದಂತಾಯಿತು. || ೧೧ ||

ತಸ್ಮಾದನ್ಯನ್ಮನೋಮಾತ್ರಂ ಜಹ್ಯಹಂಮಮತಾ ತಮಃ ।
ವಾಸುದೇವೇ ಭಗವತಿ ಮನೋ ಧೇಹ್ಯಾತ್ಮನೀಶ್ವರೇ || ೧೨ ||

ಅಭಿಮಾನ ತ್ಯಾಗವು ಸಂಸಾರನಿವೃತ್ತಿಗೆ ಕಾರಣವಾದ್ದರಿಂದ ಅಭಿಮಾನವನ್ನು ಬಿಟ್ಟು ಶ್ರೀಹರಿಯನ್ನು ಭಜಿಸೆಂದು ಫಲಿತವನ್ನು ಬೋಧಿಸುತ್ತಾರೆ—ತಸ್ಮಾತ್= ಅಹಂಮಾನಿಯಲ್ಲದವನಿಗೆ ಘೋರ ಸಂಸಾರವಿಲ್ಲದಿದ್ದು ಅಹಂಮಾನಿಗೆ ಘೋರ ಸಂಸಾರವಿರುವುದರಿಂದ ಅನ್ಯತ್ = ಪುತ್ರ ಮೊದಲಾದುವು ಮನೋಮಾತ್ರಂ= ಮನಸ್ಸಿನಲ್ಲಿರುವ ರಾಗದ್ವೇಷಗಳಿಂದ ಬಂದ ಪುಣ್ಯ ಪಾಪಗಳೇ ನಿಮಿತ್ತವಾಗಿ ಉಳ್ಳವುಗಳು. ಆಗಲಿ. ಅದರಿಂದ ಪ್ರಕೃತದಲ್ಲಿ ಏನೆಂದರೆ ಹೇಳುತ್ತಾರೆ. ಅಹಂಮಮತಾ-ತಮಃ=ಅಹಂತಾ, ಮಮತಾ ಎಂಬ ಅಜ್ಞಾನವನ್ನು (ಅನ್ಯಥಾಜ್ಞಾನವನ್ನು) ಜಹಿ= ಹೋಗಲಾಡಿಸು. ಹೋಗಲಾಡಿಸಲು ಉಪಾಯವನ್ನು ಹೇಳುತ್ತಾರೆ. ಆತ್ಮನಿ= ಬಿಂಬರೂಪಿಯಾದ ಈಶ್ವರೇ=ಸರ್ವನಿಯಾಮಕನಾದ ಆದ್ದರಿಂದಲೇ ದೇಹದಲ್ಲಿದ್ದರೂ ದೇಹಗತದುಃಖಾದಿಗಳ ಸ್ಪರ್ಶವಿಲ್ಲದೆ ಇರಲು ಸಮರ್ಥನಾದ ಭಗವತಿ=ಸಮಗ್ರ ಷಡ್ಗುಣೈಶ್ವರ್ಯವಂತನಾದ ವಾಸುದೇವೇ=ಸರ್ವತ್ರ ವ್ಯಾಪ್ತನಾದ ಶ್ರೀಹರಿಯಲ್ಲಿ ಮನಃ=ಮನಸ್ಸನ್ನು ಧೇಹಿ=ಇಡು. ಮನೋಧಾರಣೆಯಿಂದ ಉಂಟಾದ ಶ್ರೀಹರಿಯ ಅನುಗ್ರಹದಿಂದ ಹುಟ್ಟಿದ ಜ್ಞಾನವೆಂಬ ಖಡ್ಗದಿಂದ ಅಹಂ ಮಮತೆಯೆಂಬ ಅಜ್ಞಾನವನ್ನು ಸಮೂಲವಾಗಿ ನಾಶ ಮಾಡೆಂದರ್ಥ. ಪುತ್ರಾದಿಗಳು ಪುಣ್ಯ ಪಾಪ ನಿಮಿತ್ತ (ಮನೋ ಮಾತ್ರ) ವೆಂದು ಹೇಳಿದ್ದರಿಂದ ಅವರ ದೀರ್ಘಾಯುಷ್ಯಾದಿಗಳೂ ತನ್ನಿಮಿತ್ತಕಗಳೇ ಎಂದು ಹೇಳಿದಂತಾಯಿತು. ಮನೋಮಾತ್ರವೆಂಬುದರ ಅಭಿಪ್ರಾಯವಿದು:—ಅಹಂ ಮಾನದಿಂದ ಮನಸ್ಸಿನಲ್ಲಿ ರಾಗದ್ವೇಷಗಳು; ಅವುಗಳಿಂದ ಪುಣ್ಯ ಪಾಪಗಳು; ಅವುಗಳ ಫಲವಾಗಿ ಮಕ್ಕಳು ಮೊದಲಾದುವು. 'ಮನಸೋ ದ್ವೇಷರಾಗಾಭ್ಯಾಂ ಪುಣ್ಯಪಾಪಸಮುದ್ಭವಃ। ಪುತ್ರಾದಿ ಪುಣ್ಯ-ಪಾಪಾಭ್ಯಾಂ ತಸ್ಮಾತ್ಸರ್ವಂ ಮನೋಮಯಮ್ ||' ಈ ಪ್ರಮಾಣವು ಪುತ್ರಾದಿಗಳು ಮನೋಮಾತ್ರವೆಂಬುದು ಹೇಗೆ ಎಂಬುದನ್ನು ತಿಳಿಸುವುದು. 'ಮಮ ದೇಹ ಇತಿ

ವಾದ ಸಂಸಾರವು ತೋರುವುದಿಲ್ಲ. ಆದ್ದರಿಂದ ಪುತ್ರಾದಿಗಳು ಮನೋಗತ ರಾಗ ದ್ವೇಷಜನ್ಯ ಪುಣ್ಯ ಪಾಪ ನಿಮಿತ್ತಕಗಳು. ಈ ಅಹಂಕಾರ ಮಮಕಾರರೂಪ ಅಜ್ಞಾನವನ್ನು ಹೋಗಲಾಡಿಸು. ಬಿಂಬರೂಪಿಯೂ ಸರ್ವನಿಯಾಮಕನೂ ಆದ ಭಗವಾನ್ ವಾಸುದೇವನಲ್ಲಿ ಮನಸ್ಸಿಡು' ಎಂದು ಸಮಾಧಾನಪಡಿಸಿದರು.

ಹ್ಯೇವ ನ ದೇಹೋऽಹಮಿತಿಭ್ರಮಃ' ಎಂಬ ಅನುವ್ಯಾಖ್ಯಾನ, ಅದಕ್ಕೆ ಸಂಬಂಧಿಸಿದ ಸುಧಾ ಗ್ರಂಥಗಳನ್ನು ನೋಡಿ. || ೧೨ ||

ಶ್ರೀ ಶುಕ ಉವಾಚ—

ಏವಮಾಶ್ವಾಸಿತೋ ರಾಜಾ ಚಿತ್ರಕೇತುರ್ದ್ವಿಜೋಕ್ತಿಭಿಃ ।
ವಿಮೃಜ್ಯ ಪಾಣಿನಾ ವಕ್ತ್ರ ಮಾಧಿಮ್ಲಾನಮಭಾಷತ ॥ ೧೩ ॥

ದ್ವಿಜೋಕ್ತಿಭಿಃ=ಅಂಗೀರಸ-ನಾರದರ, ಬ್ರಾಹ್ಮಣರ ಮಾತುಗಳಿಂದ ಏವಂ= ಮೇಲೆ ಹೇಳಿದಂತೆ ಆಶ್ವಾಸಿತಃ=ಸಮಾಧಾನಪಡಿಸಲ್ಪಟ್ಟ ರಾಜನಾದ ಚಿತ್ರಕೇತುವು ಪಾಣಿನಾ=ಕೈಯಿಂದ ಬಾಡಿದ್ದ ವಕ್ತ್ರಂ=ಮುಖವನ್ನು ವಿಮೃಜ್ಯ=ಒರೆಸಿಕೊಂಡು ಅಭಾಷತ=ಹೇಳಿದನು. || ೧೩ ||

ರಾಜೋವಾಚ—

ಕೌ ಯುವಾಂ ಜ್ಞಾನಸಂಪನ್ನೌ ಮಹಿಷ್ಠೌ ಚ ಮಹೀಯಸಾಮ್ ।
ಅವಧೂತೇನ ವೇಷೇಣ ಗೂಢಾವಿಹ ಸಮಾಗತೌ ॥ ೧೪ ॥

ಜ್ಞಾನಸಂಪನ್ನೌ = ಜ್ಞಾನಿಗಳಾದ ಮಹೀಯಸಾಂ ಚ = ಮಹನೀಯರಿಗೂ (ಪೂಜ್ಯರಿಗೂ) ಮಹಿಷ್ಠೌ=ಪೂಜ್ಯರಾದ ಅವಧೂತೇನ ವೇಷೇಣ=ಧೂಳು ಮುಚ್ಚಿಕೊಂಡಿರುವ ಆಕಾರದಿಂದ ಗೂಢೌ=ಸ್ವರೂಪವನ್ನು ಮರೆಮಾಚಿರುವ ಇಹ=ಇಲ್ಲಿಗೆ ಸಮಾಗತೌ=ಬಂದಿರುವ ಯುವಾಂ ನೀವಿಬ್ಬರೂ ಕೌ=ಯಾರು? || ೧೪ ||

ಚರಂತಿ ಹ್ಯವನೌ ಕಾಮಂ ಬ್ರಾಹ್ಮಣಾ ಭಗವತ್ಪ್ರಿಯಾಃ ।
ಮಾದೃಶಾಂ ಗ್ರಾಮ್ಯಬುದ್ಧೀನಾಂ ಬೋಧಾಯೋನ್ಮತ್ತಲಿಂಗಿನಃ ॥

ಮಾದೃಶಾಂ = ನನ್ನಂತಹ ಗ್ರಾಮ್ಯ ಬುದ್ಧೀನಾಂ = ವಿಷಯಸುಖಗಳಲ್ಲಿಯೇ ಬುದ್ಧಿಯುಳ್ಳ ಜನರ ಬೋಧಾಯ=ಜ್ಞಾನೋಪದೇಶಕ್ಕಾಗಿ ಉನ್ಮತ್ತಲಿಂಗಿನಃ= ಹುಚ್ಚರ ಧರ್ಮಗಳನ್ನು ಹೊಂದಿರುವ ಭಗವತ್ಪ್ರಿಯಾಃ=ಶ್ರೀಹರಿಗೆ ಪ್ರಿಯರಾದ ಬ್ರಾಹ್ಮಣಾಃ=ಬ್ರಹ್ಮಜ್ಞಾನಿಗಳು ಅವನೌ=ಭೂಮಿಯಲ್ಲಿ ಕಾಮಂ=ಶ್ರೀಹರಿಯ ಇಚ್ಛೆಯಂತೆ ಚರಂತಿ ಹಿ=ಸಂಚರಿಸುವರಷ್ಟೆ! || ೧೫ ||

ಶ್ರೀ ಶುಕಾಚಾರ್ಯರು—ಅಂಗೀರಸ ನಾರದರ ಮಾತುಗಳಿಂದ ಹೀಗೆ ಸಮಾಧಾನ ಮಾಡಿಸಿಕೊಂಡ ಚಿತ್ರಕೇತುವು ಮನೋವ್ಯಥೆಯಿಂದ ಬಾಡಿದ್ದ ಮುಖವನ್ನು ಕೈಯಿಂದ ಒರೆಸಿಕೊಂಡು ಹೇಳಿದನು.

ಚಿತ್ರಕೇತು—ಜ್ಞಾನಿಗಳೂ ಆದ್ದರಿಂದ ಪೂಜ್ಯರಿಗೂ ಪೂಜ್ಯರೂ ಅವಧೂತ ವೇಷದಿಂದ ಗೂಢರೂ ಇಲ್ಲಿಗೆ ಬಂದಿರುವವರೂ ಆದ ನೀವಿಬ್ಬರೂ ಯಾರು? ವಿಷಯಾಸಕ್ತ ಬುದ್ಧಿಯುಳ್ಳ ನಮ್ಮಂತಹವರಿಗೆ ಉಪದೇಶಿಸಲು ಉನ್ಮತ್ತಧರ್ಮಿಗಳಾಗಿ ಶ್ರೀಹರಿಪ್ರಿಯ ಬ್ರಾಹ್ಮಣರು (ಅಪರೋಕ್ಷಿಗಳು) ಭೂಮಿಯಲ್ಲಿ ಇಷ್ಟಬಂದಂತೆ

ಕುಮಾರೋ ನಾರದ ಋಭುರಂಗಿರಾ ದೇವಲೋಽಸಿತಃ ।
ಅಪಾಂತರತಮೋ ವ್ಯಾಸೋ ಮಾರ್ಕಂಡೇಯೋಽಥ ಗೌತಮಃ ॥
ವಸಿಷ್ಠೋ ಭಗವಾನ್ ರಾಮಃ ಕಪಿಲೋ ಬಾದರಾಯಣಿಃ ।
ದುರ್ವಾಸಾ ಯಾಜ್ಞವಲ್ಕ್ಯಶ್ಚ ಜಾತೂಕರ್ಣ್ಯಸ್ತಥಾಽರುಣಿಃ ॥ ೧೭ ॥
ರೋಮಶಶ್ಚ್ಯವನೋ ದತ್ತ ಆಸುರಿಃ ಸ ಪತಂಜಲಿಃ ।
ಪರಾಶರೋಽಥ ಮೈತ್ರೇಯೋ ಭಾರದ್ವಾಜಶ್ಚ ಆರುಣಃ ॥
ಋಷಿರ್ವೇದಶಿರಾ ಬೋಧ್ಯೋ ಮುನಿಃ ಪಂಚಶಿಖಸ್ತಥಾ ॥ ೧೮ ॥
ಹಿರಣ್ಯನಾಭಃ ಕೌಶಲ್ಯಃ ಶ್ರುತದೇವಃ ಕ್ರತುಧ್ವಜಃ ।
ಏತೇ ಪರೇ ಚ ಸಿದ್ಧೇಶಾಶ್ಚರಂತಿ ಜ್ಞಾನಹೇತವಃ ॥ ೧೯ ॥

ಸನತ್ಕುಮಾರರು, ನಾರದರು, ಋಭಗಳು, ಅಂಗಿರಸರು, ದೇವಲರು, ಅಸಿತರು, ಅಪಾಂತರತಮರು, ವ್ಯಾಸರು, ಮಾರ್ಕಂಡೇಯರು, ಗೌತಮರು (ಮಾರ್ಕಂಡೇಯ ಮತ್ತು ಗೌತಮರ ಮಧ್ಯೆ ಬೇರೊಬ್ಬರಿಲ್ಲವೆಂದು ಸೂಚಿಸುವುದಕ್ಕಾಗಿ 'ಅಥ' ಶಬ್ದವನ್ನು ಪ್ರಯೋಗಿಸಿದ್ದಾರೆ), ವಸಿಷ್ಠರು, ಶ್ರೀಹರಿಯ ಅವತಾರರಾದ ಪರಶುರಾಮರು, ಕಪಿಲರು, ಶುಕಾಚಾರ್ಯರು (ಬಾದರಾಯಣರ ಮಕ್ಕಳು), ದುರ್ವಾಸರು, ಯಾಜ್ಞವಲ್ಕ್ಯರು (ಇವರಿಬ್ಬರಲ್ಲಿ ವಿಶೇಷವನ್ನು ತಿಳಿಸಲು 'ಚ' ಶಬ್ದವನ್ನು ಪ್ರಯೋಗಿಸಿದ್ದಾರೆ), ಜಾತೂಕರ್ಣ್ಯರು ಮತ್ತು ಆರುಣಿಗಳು, ರೋಮಶರು, ಚ್ಯವನರು, ದತ್ತರು, ಆಸುರಿಗಳು, ಮಹಾಭಾಷ್ಯಕರ್ತರೆಂದು ಪ್ರಸಿದ್ಧರಾದ ಪತಂಜಲಿಗಳು, ಪರಾಶರರು, ಮೈತ್ರೇಯರು, ಭಾರದ್ವಾಜರು, ಆರುಣರು, ಋಷಿಗಳಾದ ವೇದಶಿರರು, ಬೋಧ್ಯರು, ಮುನಿಗಳಾದ ಪಂಚಶಿಖರು, ಹಿರಣ್ಯನಾಭರು, ಕೌಶಲ್ಯರು, ಶ್ರುತದೇವರು, ಕ್ರತುಧ್ವಜರು — (ಲೋಕಾನಾಂ=ಜನರಿಗೆ, ಅಜ್ಞಾನಿಗಳಿಗೆ) ಜ್ಞಾನಹೇತವಃ=ಜ್ಞಾನಕ್ಕೆ ಕಾರಣರಾದ ಏತೇ=ಇವರೂ ಚ=ಮತ್ತು ಪರೇ=ಇತರರೂ ಸಿದ್ಧೇಶಾಃ=ಯೋಗಸಿದ್ಧಿಗಳನ್ನು ಪಡೆದವರಲ್ಲಿ ಶ್ರೇಷ್ಠರು ಚರಂತಿ=ಸಂಚರಿಸುವರು. ವಿ.ಅ. ಬ್ರಾಹ್ಮಣಾಃ, ಭಗವತ್ಪ್ರಿಯಾಃ, ಸಿದ್ಧೇಶಾಃ, ಜ್ಞಾನಹೇತವಃ ಎಂಬೀ ವಿಶೇಷಣಗಳಿಂದ ವಿಶಿಷ್ಟತೆಯನ್ನು ಪ್ರತಿಪಾದಿಸುವುದರಿಂದ ಇವರೆಲ್ಲರೂ ಸಮಾನರೆಂದು ತಿಳಿಯಬಾರದು. ಇದೇ ಅಧ್ಯಾಯದ ೭ನೆಯ ಶ್ಲೋಕದಲ್ಲಿ ಹೇಳಿದ ಪ್ರಮಾಣದಂತೆ 'ನಾರಾಯಣಪರಾ ದೇವಾ, ಮನುಷ್ಯಾಃ

ಶ್ರೀಹರಿಯ ಇಚ್ಛೆಯಿಂದ ಸಂಚರಿಸುವರು. ಸನತ್ಕುಮಾರ, ನಾರದ, ಋಭು, ಆಂಗೀರಸ, ದೇವಲ, ಅಸಿತ, ಅಪಾಂತರತಮ, ವ್ಯಾಸ, ಮಾರ್ಕಂಡೇಯ, ಗೌತಮ, ವಸಿಷ್ಠ, ಭಗವಂತನಾದ ಪರಶುರಾಮ, ಕಪಿಲ, ಶುಕ, ದುರ್ವಾಸ, ಯಾಜ್ಞವಲ್ಕ್ಯ, ಜಾತೂಕರ್ಣ್ಯ, ಆರುಣಿ, ರೋಮಶ, ಚ್ಯವನ, ದತ್ತ, ಆಸುರಿ, ಪತಂಜಲಿ, ಪರಾಶರ, ಮೈತ್ರೇಯ, ಭಾರದ್ವಾಜ, ಆರುಣ, ವೇದಶಿರಸ್ಸು, ಬೋಧ್ಯ, ಪಂಚಶಿಖ,

ತತ್ಪರಾಯಣಾಃ' ಎಂಬ ಸ್ಮೃತಿಯಂತೆ ಅವಾಂತರ ವಿಶೇಷವು ತಿಳಿದುಬರುವುದು. ಈ ಮೇಲಿನ ವಾಕ್ಯವು 'ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ' ಎಂಬ ಹಿಂದಿನ ಅಧ್ಯಾಯದ ಶ್ಲೋಕದಲ್ಲಿಯೂ 'ಬ್ರಾಹ್ಮಣಾ ಭಗವತ್ಪ್ರಿಯಾಃ' ಎಂಬೀ ಶ್ಲೋಕದಲ್ಲಿಯೂ ಪ್ರಮಾಣವಾಗಿ ಈ ಅಧ್ಯಾಯದಲ್ಲಿ ಆಚಾರ್ಯರಿಂದ ಉದಾಹೃತವಾಗಿದೆ. ಬ್ರಾಹ್ಮಣ ಎಂಬ ಪದಕ್ಕೆ ಬ್ರಹ್ಮದೇವರ ಮೂಲಕ ಶ್ರೀಹರಿಯನ್ನು ಆಶ್ರಯಿಸುವವರು ಎಂದೂ ಅರ್ಥವಾಗುವುದರಿಂದ ದೇವತೆಗಳ ಮೂಲಕ ನಾರಾಯಣಾಯನತ್ವವು ಈ ಪದದ ಅರ್ಥವಾಯಿತು. 'ಸಿದ್ಧೇಶಾಃ' ಎಂಬುದಕ್ಕೆ ಯೋಗ್ಯಸುಖವುಳ್ಳವರು ಎಂದಾಯಿತು. ಸ್ಮೃತಿಯಲ್ಲಿ ಹೇಳಿದ ಈ ಎರಡು ಅರ್ಥವೂ ಸಿದ್ಧವಾಯಿತು. ಇಂತಹವರು ಎಷ್ಟು ಮಂದಿ? ಎಂಬ ಆಶಂಕೆಯನ್ನು 'ನವ-ಕೋಟ್ಯಸ್ತು ದೇವಾನಾಂ ಋಷಯಃ ಶತಕೋಟಯಃ' ಇತ್ಯಾದಿ ಪ್ರಮಾಣದಿಂದ ಪರಿಹರಿಸಿಕೊಳ್ಳಬೇಕು. || ೧೬–೧೯ ||

ತಸ್ಮಾದ್ಯುವಾಂ ಗ್ರಾಮ್ಯಪಶೋರ್ಮಮ ಮೂಢಧಿಯಃ ಪ್ರಭೂ ।
ಅಂಧೇ ತಮಸಿ ಮಗ್ನಸ್ಯ ಜ್ಞಾನದೀಪ ಉದೀರ್ಯತಾಮ್ || ೨೦ ||

ತಸ್ಮಾತ್=ಅಜ್ಞಾನಿಗಳ ಉಪದೇಶಕ್ಕಾಗಿಯೇ ಜ್ಞಾನಿಗಳು ತಮ್ಮಂತಹವರು ಸಂಚರಿಸುವುದರಿಂದ ಯುವಾಂ=ಜ್ಞಾನಿಗಳಾದ ನೀವಿಬ್ಬರೂ **ಮೂಢಧಿಯಃ**=ಮೂಢಬುದ್ಧಿಯುಳ್ಳ ಆದ್ದರಿಂದಲೇ ಗ್ರಾಮ್ಯಪಶೋಃ=ಪಶುವಿನಂತೆ ವಿಷಯಸುಖಗಳಲ್ಲಿ ಮಗ್ನನಾದ ಮಮ=ನನಗೆ ಪ್ರಭೂ=ರಕ್ಷಕರು. ಸಮಾನರು. ಅಂಧೇ ತಮಸಿ=ಅಜ್ಞಾನದ ಕಗ್ಗತ್ತಲೆಯಲ್ಲಿ ಮಗ್ನಸ್ಯ=ಮುಳುಗಿರುವ (ಮಮ)=ನನಗೆ ಜ್ಞಾನದೀಪಃ=ಜ್ಞಾನವೆಂಬ ದೀಪವು ಯುವಾಭ್ಯಾಂ ನಿಮ್ಮಿಂದ ಉದೀರ್ಯತಾಂ=ಪ್ರಾರಂಭಿಸಲ್ಪಡಲಿ. || ೨೦ ||

ಅಂಗಿರಾ ಉವಾಚ—

ಅಹಂ ತೇ ಪುತ್ರಕಾಮಸ್ಯ ಪುತ್ರದೋಽಸ್ಮ್ಯಂಗಿರಾ ನೃಪ ।
ಏಷ ಬ್ರಹ್ಮಸುತಃ ಸಾಕ್ಷಾನ್ನಾರದೋ ಭಗವಾನೃಷಿಃ || ೨೧ ||

ಹಿರಣ್ಯನಾಭ, ಕೌಶಲ್ಯ, ಶ್ರುತದೇವ, ಕ್ರತುಧ್ವಜ—ಇನ್ನೂ ಇತರ ಸಿದ್ಧೇಶರು ಅಜ್ಞಾನಿಗಳಿಗೆ ಜ್ಞಾನವನ್ನು ಉಪದೇಶಿಸಲು ಸಂಚರಿಸುವರು. ಸಮರ್ಥರಾದ ನೀವಿಬ್ಬರೂ ಮೂಢನೂ, ಪಶುವಿನಂತೆ ವಿಷಯಾಸಕ್ತನೂ ಆದ ನನಗೆ ರಕ್ಷಕರು. ಅಜ್ಞಾನದ ಗಾಂಢಾಂಧಕಾರದಲ್ಲಿ ಮುಳುಗಿರುವ ನನಗೆ ಜ್ಞಾನದೀಪವನ್ನು ನೀವಿಬ್ಬರೂ ಹಚ್ಚಿರಿ.

ಆಂಗೀರಸರು—ಚಿತ್ರಕೇತೋ, ಪುತ್ರನನ್ನು ಅಪೇಕ್ಷಿಸಿದ ನಿನಗೆ ಸುಖ-ದುಃಖಕರನಾದ ಮಗನನ್ನು ಕೊಟ್ಟ ಆಂಗೀರಸನೇ ನಾನು. ಈತನು ಸಾಕ್ಷಾದ್ಬ್ರಹ್ಮಪುತ್ರ

'ನೀವಿಬ್ಬರೂ ಯಾರು?' ಎಂಬೀ ಪ್ರಶ್ನೆಗೆ ಉತ್ತರ ಕೊಡುತ್ತಾರೆ. ನೃಪ= ಚಿತ್ರಕೇತುವೇ, ಅಹಂ=ನಾನು ಪುತ್ರಕಾಮಸ್ಯ=ಮಗನನ್ನು ಅಪೇಕ್ಷಿಸಿದ ತೇ=ನಿನಗೆ ಪುತ್ರದಃ=ಸುಖದುಃಖಕರನಾದ ಮಗನನ್ನು ಕೊಟ್ಟ ಆಂಗೀರಸ ಋಷಿಯು ಅಸ್ಮಿ= ಆಗಿದ್ದೇನೆ. ಏಷಃ=ಈತನು ಸಾಕ್ಷಾತ್=ಸಾಕ್ಷಾತ್ತಾಗಿ ಬ್ರಹ್ಮಸುತಃ=ಬ್ರಹ್ಮದೇವರ ಮಗನಾದ ಋಷಿಃ=ತ್ರಿಕಾಲಜ್ಞಾನಿಯಾದ ಭಗವಾನ್=ಪೂಜ್ಯನಾದ ನಾರದ ಋಷಿಯು (ಆಗಿರುವನು). || ೨೧ ||

ಇತ್ಥಂ ತ್ವಾಂ ಪುತ್ರಶೋಕೇನ ಮಗ್ನಂ ತಮಸಿ ದುಸ್ತರೇ ।
ಅತದರ್ಹಮನುಸ್ಮೃತ್ಯ ಮಹಾಪುರುಷಗೋಚರಮ್ ॥ ೨೨ ॥
ಅನುಗ್ರಹಾಯ ಭವತಃ ಪ್ರಾಪ್ತಾವಾವಾಮಿಹ ಪ್ರಭೋ ।
ಬ್ರಹ್ಮಣ್ಯೋ ಭಗವದ್ಭಕ್ತೋ ನಾವಸೀದ(ದಿ)ತುಮರ್ಹತಿ ॥ ೨೩ ॥

ಪ್ರಭೋ=ರಾಜನೇ, ಪುತ್ರಶೋಕೇನ=ಮಗನ ಮರಣದ ದುಃಖದಿಂದ ಇತ್ಥಂ=ಹೀಗೆ ದುಸ್ತರೇ=ದಾಟಲಾಗದ ತಮಸಿ ಅಜ್ಞಾನವೆಂಬ ಕತ್ತಲೆಯಲ್ಲಿ ಮಗ್ನಂ=ಮುಳುಗಿದ ಮಹಾಪುರುಷಗೋಚರಂ=(೧) ಭಕ್ತಿ ಸ್ಮರಣಾದಿಗಳನ್ನು ಹೊಂದಿರುವುದರಿಂದ ಶ್ರೀಹರಿಯನ್ನೇ ವಿಷಯವಾಗಿ ಉಳ್ಳ (೨) ಶ್ರೀಹರಿಯ ಭಕ್ತನಾದ ಆದ್ದರಿಂದಲೇ ಅತದರ್ಹಂ=ಅಜ್ಞಾನದಲ್ಲಿ ಮಗ್ನನಾಗುವಿಕೆಗೆ ಅರ್ಹನಲ್ಲದ ತ್ವಾಂ=ನಿನ್ನನ್ನು ಅನುಸ್ಮೃತ್ಯ=ಯೋಚಿಸಿ ಭವತಃ=ನಿನಗೆ ಅನುಗ್ರಹಾಯ= ಅನುಗ್ರಹಮಾಡಲು ಇಹ=ಇಲ್ಲಿಗೆ ಆವಾಂ=ನಾವಿಬ್ಬರೂ ಪ್ರಾಪ್ತೌ=ಬಂದಿರುವೆವು. 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ಭಗವಂತನು ಪ್ರತಿಜ್ಞೆ ಮಾಡಿರುವುದರಿಂದ ಭಗವದ್ಭಕ್ತಿಯುಳ್ಳವನಿಗೆ ನಾಶವಿಲ್ಲವೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಬ್ರಹ್ಮಣ್ಯಃ=ಬ್ರಹ್ಮಜ್ಞಾನಿಗಳಲ್ಲಿ ಭಕ್ತಿಯುಳ್ಳ ಭಗವದ್ಭಕ್ತಃ=ಶ್ರೀಹರಿಭಕ್ತನು ಅವಸೀದ(ದಿ)ತುಂ=ಹಾಳಾಗಲು (ಮೋಕ್ಷವಿಲ್ಲದವನಾಗಲು) ನಾರ್ಹತಿ=ಅರ್ಹ ನಲ್ಲ. ಭಕ್ತನಾದ ನೀನು ಪುತ್ರನಿಮಿತ್ತಕವಾದ ಶೋಕದಿಂದ ನಷ್ಟವಾಗಬಾರದು ಎಂದು ನಮ್ಮ ಆಗಮನವೆಂದಭಿಪ್ರಾಯ. || ೨೨, ೨೩ ||

ನಾದ ನಾರದಋಷಿಯು. ಪುತ್ರನಿಮಿತ್ತ ಶೋಕದಿಂದ ಹೀಗೆ ನೀನು ದಾಟಲಾಗದ ಅಜ್ಞಾನಾಂಧಕಾರದಲ್ಲಿ ಮುಳುಗಿರುವೆ. ನೀನು ಶ್ರೀಹರಿಯ ಭಕ್ತನು. ಭಕ್ತಿಯಿಂದ ಶ್ರೀಹರಿಯನ್ನು ಸ್ಮರಿಸುವವನು. ಅಜ್ಞಾನದಲ್ಲಿ ಮುಳುಗುವುದಕ್ಕೆ ನಿನಗೆ ಯುಕ್ತವಲ್ಲ. ಇದನ್ನು ಯೋಚಿಸಿ ನಿನ್ನನ್ನು ಅನುಗ್ರಹಿಸಲು ನಾವಿಬ್ಬರೂ ಇಲ್ಲಿಗೆ ಬಂದಿದ್ದೇವೆ. ಭಗವದ್ಭಕ್ತರಲ್ಲಿ ಮತ್ತು ಭಗವಂತನಲ್ಲಿ ಭಕ್ತನು ಎಂದೂ ಹಾಳಾಗ ಬಾರದು. ಆಗಲೇ ನಿನಗೆ ಉತ್ತಮ ಜ್ಞಾನವನ್ನು ಕೊಡಲೆಂದೇ ನಿನ್ನ ಮನೆಗೆ ಬಂದೆ. ಆದರೆ ನಿನಗಿದ್ದ ಪುತ್ರಾಸಕ್ತಿಯನ್ನು ಕಂಡು ಪುತ್ರನನ್ನೇ ಕೊಟ್ಟೆ. ಮಕ್ಕಳಿದ್ದವರ

ತದೈವ ತೇ ಪರಂ ಜ್ಞಾನಂ ದದಾಮಿ ಗೃಹಮಾಗತಃ ।
ಜ್ಞಾತ್ವಾಽನ್ಯಾಭಿನಿವೇಶಂ ತೇ ಪುತ್ರಮೇವ ದದಾಮ್ಯಹಮ್ ॥ ೨೪ ॥

ಹಾಗಾದರೆ ಆಗಲೇ ಮಗನನ್ನೇಕೆ ಕೊಟ್ಟಿರಿ? ಜ್ಞಾನವನ್ನೇಕೆ ಕೊಡಲಿಲ್ಲವೆಂದರೆ ಜ್ಞಾನಾಂಗವಾದ ವೈರಾಗ್ಯವಿರದಿದ್ದರಿಂದ ಕೊಡಲಿಲ್ಲವೆಂದು ಹೇಳುತ್ತಾರೆ. ತದಾ=ಹಿಂದೆ ನಾನು ಬಂದಿದ್ದಾಗ ತೇ=ಸ್ವರೂಪತಃ ಭಗವದ್ಭಕ್ತನಾದ ನಿನಗೆ ಪರಂ ಜ್ಞಾನಂ ಏವ=ಮೋಕ್ಷೋಪಯೋಗಿ ಜ್ಞಾನವನ್ನೇ ದದಾಮಿ (ಇತಿ)=ಕೊಡುತ್ತೇನೆ ಎಂದು ಗೃಹಂ=ಮನೆಗೆ ಆಗತಃ=ಬಂದ ಅಹಂ=ನಾನು ತೇ=ನಿನಗೆ ಅನ್ಯಾಭಿನಿವೇಶಂ=ಪುತ್ರನಾಗಬೇಕೆಂದಿದ್ದ ಆಸಕ್ತಿಯನ್ನು ಜ್ಞಾತ್ವಾ=ತಿಳಿದು ಪುತ್ರಂ ಏವ=ಮಗನನ್ನೇ ದದಾಮಿ=ಕೊಟ್ಟೆನು. ಈಗ ವೈರಾಗ್ಯ ಬಂದಿದೆಯಾಗಿ ಜ್ಞಾನವನ್ನು ಕೊಡುವೆನು. ॥ ೨೪ ॥

ಅಧುನಾ ಪುತ್ರಿಣಾಂ ತಾಪೋ ಭವತೈವಾನುಭೂಯತೇ ।
ಏವಂ ದಾರಾ ಗೃಹಾ ರಾಯೋ ವಿವಿಧೈಶ್ವರ್ಯಸಂಪದಃ ॥ ೨೫ ॥
ಶಬ್ದಾದಯಶ್ಚ ವಿಷಯಾಶ್ಚಲಾ ರಾಜನ್ ವಿಭೂತಯಃ ।

ಈಗ ವಿಷಯದಲ್ಲಿ ದೋಷವನ್ನು ಮನಗಂಡು ವಿರಕ್ತನಾದ ನಿನಗೆ ಜ್ಞಾನೋಪದೇಶ ಹೊಂದುವಲ್ಲಿ ಅಧಿಕಾರವಿದೆಯಾಗಿ ಈಗ ಜ್ಞಾನೋಪದೇಶಕ್ಕೆ ಕಾಲವೆಂದು ಹೇಳುತ್ತಾರೆ. ಅಧುನಾ=ಈಗ ಪುತ್ರಿಣಾಂ=ಮಕ್ಕಳನ್ನು ಹೊಂದಿದ್ದವರ ತಾಪಃ=ದುಃಖವು ಭವತಾ ಏವ ಪುತ್ರನನ್ನು ಕಳೆದುಕೊಂಡ ನಿನ್ನಿಂದಲೇ ಅನುಭೂಯತೇ=ಅನುಭವಿಸಲ್ಪಡುತ್ತಿದೆ. ಪುತ್ರವಿಷಯದೋಷವು ಮನದಟ್ಟಾಗಿದೆ ಎಂದರ್ಥ. ಹೀಗೆ ವಿಯೋಗದಿಂದಾಗುವ ದುಃಖವು ಮಕ್ಕಳಿರುವವರಿಗೆ ಮಾತ್ರವೇ ಅಲ್ಲ. ಹೆಂಡತಿ ಮೊದಲಾದವರನ್ನು ಹೊಂದಿದವರಿಗೂ ಇದು ತಪ್ಪಿದ್ದಲ್ಲವೆಂದು ಹೇಳುತ್ತಾರೆ. ರಾಜನ್=ರಾಜನೇ ಏವಂ=ಮಕ್ಕಳಂತೆಯೇ ದಾರಾಃ=ಹೆಂಡತಿ, ಗೃಹಾಃ=ಮನೆ ರಾಯಃ=ಧನ ವಿವಿಧವಾದ ಐಶ್ವರ್ಯ ಸಂಪತ್ತುಗಳು, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳು ವಿಭೂತಯಃ=ಬಗೆ ಬಗೆಯ ಸಿದ್ಧಿಗಳು ಚ=ಇವೆಲ್ಲ ಚಲಾಃ=ಅನಿತ್ಯವಾದುವು. ॥ ೨೫ ॥

ರಾಜ್ಯಂ ಮಹೀ ಬಲಂ ಕೋಶೋ ಭೃತ್ಯಾಮಾತ್ಯಸುಹೃಜ್ಜನಾಃ ॥
ಸರ್ವೇಽಪಿ ಶೂರಸೇನೇಮೇ ಶೋಕಮೋಹಭಯಾರ್ತಿದಾಃ ।
ಗಂಧರ್ವನಗರಪ್ರಖ್ಯಾಃ ಸ್ವಪ್ನಮಾಯಾಮನೋರಥಾಃ ॥ ೨೬ ॥

ದುಃಖವೇನೆಂಬುದು ಈಗ ನಿನ್ನ ಅನುಭವಕ್ಕೇ ಬಂದಿದೆ. ರಾಜನೇ ಹೆಂಡತಿ, ಮನೆ, ಐಶ್ವರ್ಯ, ಧನ, ವಿವಿಧ ಸಂಪತ್ತು, ಶಬ್ದಾದಿ ವಿಷಯಗಳು ಮತ್ತು ವಿವಿಧ ಸಿದ್ಧಿಗಳು—ಇವೆಲ್ಲ ಹೀಗೆಯೇ ಅನಿತ್ಯಗಳು. ಗಂಧರ್ವ ನಗರದಂತೆ ಯಾವಾಗಲೋ ಬಂದು ಹೋಗುವ ಈ ರಾಜ್ಯ, ಭೂಮಿ, ಬಲ, ಕೋಶ, ಭೃತ್ಯರು, ಅಮಾತ್ಯರು,

ದೃಶ್ಯಮಾನಾ ವಿನಾಽರ್ಥೇನ ನ ದೃಶ್ಯಂತೇ ಮನೋಭವಾಃ ।
ಕರ್ಮಭಿರ್ಧ್ಯಾಯತೋ ನಾನಾ ಕರ್ಮಾಣಿ ಮನಸೋಽಭವನ್ ॥

ಶೂರಸೇನ=ಚಿತ್ರಕೇತುವೇ, ಗಂಧರ್ವ ನಗರ ಪ್ರಖ್ಯಾಃ=ಗಂಧರ್ವನಗರದಂತೆ ಯಾವಾಗಲೋ ಬಂದು ಹೋಗುವ (ನಶ್ವರಗಳಾದ) ಇಮೇ=ಪ್ರತ್ಯಕ್ಷಸಿದ್ಧಗಳಾದ ರಾಜ್ಯ, ಭೂಮಿ, ಬಲ, ಕೋಶ, ಭೃತ್ಯರು, ಅಮಾತ್ಯರು, ಸ್ನೇಹಿತರು—ಸರ್ವೇಽಪಿ=ಎಲ್ಲರೂ ಜೀವನಿಗೆ ಶೋಕಮೋಹಭಯಾರ್ತಿದಾಃ=ದುಃಖ, ಮೋಹ, ಭಯ, ಮನೋವ್ಯಥೆಗಳನ್ನು ಕೊಡುವರು. (ಯತಃ)-ಯಾವ ಕಾರಣದಿಂದ ಕರ್ಮ=ಇಷ್ಟವಾದ ಕರ್ಮವನ್ನು ಅಭಿಧ್ಯಾಯತಃ (ಪುಂಸಃ)=ಯಾವಾಗಲೂ ಯೋಚಿಸುವ ಪುರುಷನಿಗೆ ಮನಸಃ-ರಾಗದ್ವೇಷಗಳಿಂದ ಕ್ಷೋಭೆಗೊಂಡ ಮನಸ್ಸಿನಿಂದ ನಾನಾ ಕರ್ಮಾಣಿ=ನರಕ, ಮನುಷ್ಯಲೋಕ, ಸ್ವರ್ಗ, ಮುಕ್ತಿ ಇತ್ಯಾದಿಗಳಿಗೆ ಕಾರಣಗಳಾದ ಪಾಪ ಪುಣ್ಯಾತ್ಮಕ ಅನೇಕ ಕರ್ಮಗಳು ಅಭವನ್=ಆಗುವುವೋ (ತತಃ)=ಆ ಕಾರಣದಿಂದಲೇ ಮನೋಭವಾಃ=ಮನಸ್ಸಿನ ನಿಮಿತ್ತದಿಂದ ಬಂದ ಕರ್ಮಗಳ ಫಲಗಳಾದ್ದರಿಂದ ಮನಸ್ಸಿನಿಂದ ಹುಟ್ಟಿದವುಗಳಾದ ಈ ಹೆಂಡತಿ ಮಕ್ಕಳು ಮುಂತಾದುವು ಸ್ವಪ್ನಮಾಯಾ ಮನೋರಥಾಃ (ಇವ)=ಸ್ವಪ್ನದಲ್ಲಿ ಕಾಣುವ ಜಾಗ್ರತ್ತ್ವ, ಇಂದ್ರಜಾಲ, ಮನೋಭಿಲಾಷೆಗಳಂತೆ ದೃಶ್ಯಮಾನಾಃ=ಪ್ರತೀತಿಗೆ ಮಾತ್ರ ವಿಷಯಗಳಾಗಿ ಅರ್ಥೇನ ವಿನಾ=ಪುರುಷಾರ್ಥವೆಂಬ ಪ್ರಯೋಜನವಿಲ್ಲದೆಯೇ (ಪ್ರಯೋಜನಕಾರಿಗಳಲ್ಲದೆಯೇ) ದೃಶ್ಯಂತೇ = ಕಂಡು ಬರುವುವು ಎಂಬ ನಿಯಮವು ನ (ಅಸ್ತಿ) - ಇಲ್ಲವು. ಏಕೆಂದರೆ, ಯೋಗ್ಯತಾನುಸಾರವಾಗಿ ಕೆಲವು ವೇಳೆ ಪುರುಷಾರ್ಥಕ್ಕೆ ಕಾರಣಗಳಾಗುವುವು; ಕೆಲವು ವೇಳೆ ಆಗುವುದಿಲ್ಲವೆಂಬ ನಿಯಮವೇ ಇರುವುದು. ಅಥವಾ ಅರ್ಥೇನ ವಿನಾ=ಪಾರಮಾರ್ಥಿಕ ಸ್ವರೂಪವಿಲ್ಲದವುಗಳೆಂದು (ಮಿಥ್ಯೆಯೆಂದು) ನ ದೃಶ್ಯಂತೇ=ಕಂಡುಬರುವುದಿಲ್ಲ. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸತ್ಯವೇ ಆಗಿರುವುವೆಂದರ್ಥ. ವಿ.ಅ. ಹೆಂಡತಿ ಮೊದಲಾದ ಅರ್ಥಗಳು ಮನೋಜನ್ಯ ಕರ್ಮಗಳ ಫಲಗಳಾಗಿ ಮನೋಭವಗಳೆನಿಸುವುವು. 'ಮನಸೋ ದ್ವೇಷರಾಗಾಭ್ಯಾಂ ಪುಣ್ಯಪಾಪಸಮುದ್ಭವಃ | ಪುತ್ರಾದಿ

ಸ್ನೇಹಿತರು—ಇವೆಲ್ಲ ಜೀವನಿಗೆ ದುಃಖ, ಮೋಹ, ಭಯ, ಮನೋವ್ಯಥೆಗಳನ್ನು ಕೊಡುವವುಗಳೇ. ಇಷ್ಟವಾದ ಕರ್ಮವನ್ನೇ ಯೋಚಿಸುವ ಪುರುಷನಿಗೆ ರಾಗದ್ವೇಷಗಳಿಂದ ಕ್ಷೋಭೆಗೊಂಡ ಮನಸ್ಸಿನಿಂದ ನರಕಾದಿಗಳಿಗೆ ಕಾರಣಗಳಾದ ಅನೇಕ ಪಾಪ ಪುಣ್ಯಾತ್ಮಕ ಕರ್ಮಗಳು ಉಂಟಾಗುವುವು. ಆದ್ದರಿಂದ ಈ ಕರ್ಮ ಫಲಗಳಾದ ಹೆಂಡತಿ ಮಕ್ಕಳು ಮನಸ್ಸಿನಿಂದ ಹುಟ್ಟಿದವೆನಿಸುವುವು. ಇವು ಸ್ವಪ್ನದಲ್ಲಿ ಕಾಣುವ ಜಾಗ್ರತ್ತ್ವ, ಇಂದ್ರಜಾಲ, ಮನೋಭಿಲಾಷೆಗಳಂತೆ ಪ್ರತೀತಿಗೆ ಮಾತ್ರ ವಿಷಯಗಳಾಗಿ ಪುರುಷಾರ್ಥಕಾರಿಗಳಲ್ಲದೆಯೇ ಕಂಡುಬರುವುವೆಂಬ ನಿಯಮವಿಲ್ಲ.

ಪುಣ್ಯಾಪಾಪಾಭ್ಯಾಂ ತಸ್ಮಾತ್ಸರ್ವಂ ಮನೋಭವಮ್ ||' ಎಂಬ ಪ್ರಮಾಣವು ಇದನ್ನು ಸಮರ್ಥಿಸುವುದು. || ೨೬—೨೮ ||

ಅಯಂ ಹಿ ದೇಹಿನೋ ದೇಹೋ ದ್ರವ್ಯಜ್ಞಾನಕ್ರಿಯಾತ್ಮಕಃ ।
ದೇಹಿನೋ ವಿವಿಧಕ್ಲೇಶಸಂತಾಪಕೃದುದಾಹೃತಃ ॥ ೨೯ ॥

ದೇಹ ಮೊದಲಾದುವು ಅರ್ಥಕ್ರಿಯಾಕಾರಿಗಳಾದ್ದರಿಂದ ಅವುಗಳನ್ನು ಮಿಥ್ಯೆಯೆಂದು ಹೇಳುವುದು ಸರಿಯಲ್ಲ. ಆದ್ದರಿಂದ ಗಂಧರ್ವನಗರ ದೃಷ್ಟಾಂತವು ಅನಿತ್ಯವೆಂಬುದಕ್ಕೇ ಹೊರತು ಸುಳ್ಳು ಎಂಬುದಕ್ಕಲ್ಲವೆಂದು ಅಭಿಪ್ರಾಯಪಟ್ಟು ಹೇಳುತ್ತಾರೆ. ಹಿ=ಯಾವ ಕಾರಣದಿಂದ ಅಯಂ=ಸ್ಥೂಲವಾಗಿ ಕಣ್ಣಿಗೆ ಕಾಣುವ ಈ ದೇಹಿನಃ=ಜೀವನ ದೇಹಃ=ದೇಹವು ದ್ರವ್ಯಜ್ಞಾನಕ್ರಿಯಾತ್ಮಕಃ=ಆಕಾಶಾದಿ ಪಂಚಭೂತಾತ್ಮಕವಾದ್ದರಿಂದ ದ್ರವ್ಯಾತ್ಮಕವೋ, ಶ್ರೋತ್ರ ಮೊದಲಾದ ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು ಹೀಗೆ ಜ್ಞಾನೇಂದ್ರಿಯಾತ್ಮಕವಾದ್ದರಿಂದ ಜ್ಞಾನಾತ್ಮಕವೋ, ವಾಕ್ ಮೊದಲಾದ ಕರ್ಮೇಂದ್ರಿಯಾತ್ಮಕವಾದ್ದರಿಂದ ಕ್ರಿಯಾತ್ಮಕವೋ ಆ ಕಾರಣದಿಂದ ದೇಹಿನಃ=ನನ್ನ ದೇಹವೆಂದು ಅಭಿಮಾನವುಳ್ಳ ಜೀವನಿಗೆ ವಿವಿಧಕ್ಲೇಶಸಂತಾಪಕೃತ್=ಅನೇಕ ಬಗೆಯ ಕ್ಲೇಶತಾಪಕಾರಕವೆಂದು ಉದಾಹೃತಃ=ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಹಿ ಶಬ್ದವು ಕಾರಣವೆಂದು ತಿಳಿಸುವುದು. ದೇಹಿನಃ ಎಂದು ಮತ್ತೆ ಹೇಳಿದ್ದು ಅಭಿಮಾನದಿಂದ ಚೇತನನಿಗೆ ಸುಖಾದ್ಯನುಭವವೇ ಹೊರತು ಕೇವಲ ದೇಹದಿಂದಲ್ಲವೆಂದು ತಿಳಿಸುವುದಕ್ಕಾಗಿ. ಅಯಂ ಎಂಬುದರಿಂದ ಸ್ಥೂಲದೇಹವು ಸಿದ್ಧವಾಗಿದ್ದರೂ ಸ್ಪಷ್ಟತೆಗಾಗಿ ದ್ರವ್ಯಾತ್ಮಕವೆಂದೂ, ಬೆಟ್ಟದ ಬುಡದ ಸಣ್ಣ ಸಣ್ಣ ಬೆಟ್ಟಗಳು ಸ್ಥೂಲವಾಗಿದ್ದರೂ ಭೋಗಾಶ್ರಯವಲ್ಲವಾದ್ದರಿಂದ ಜ್ಞಾನ ಕ್ರಿಯಾತ್ಮಕವೆಂದೂ ಹೇಳಿರುವರು. ಜ್ಞಾನೇಂದ್ರಿಯ ಕರ್ಮೇಂದ್ರಿಯ ಮನಸ್ಸು-ಏತದಾತ್ಮಕವಾಗಿ ವಿಲಕ್ಷಣವಾದ್ದರಿಂದ ಭೋಗಕ್ಕೆ ಆಶ್ರಯತೆಯು ಕೂಡುವುದೆಂದು ಅಭಿಪ್ರಾಯ. ಇಂದ್ರಿಯಕಾರ್ಯಗಳಾದ ಜ್ಞಾನಕ್ರಿಯೆಗಳಿಂದ ಇಂದ್ರಿಯಗಳನ್ನು ಹೇಳಿರುವುದು 'ಕಾರ್ಯಕಾರಣಯೋರೇಕಶಬ್ದವ್ಯವಹೃತಿರ್ಭವೇತ್' ಎಂಬ ವಚನಕ್ಕೆ ಅನುಗುಣವಾಗಿದೆ. ಉದಾಹೃತಃ ಎಂಬುದರಿಂದ 'ಅಸನ್ನಪಿ ಕ್ಲೇಶದ ಆಸ ದೇಹಃ' ಇತ್ಯಾದಿ ವಾಕ್ಯಗಳಲ್ಲಿ ಸಿದ್ಧವೆಂದು ತಿಳಿಸಿರುವರು. ಇದರಿಂದ ದೇಹದಂತೆ ಅಸದುಪಾಸನೆಯು ಕ್ಲೇಶಕಾರಕವೆಂಬ ವಿಷಯವನ್ನೂ ಸೂಚಿಸಿರುವರೆಂದು ತಿಳಿಯಬೇಕು. 'ದ್ರವ್ಯಾತ್ಮಕಃ ಸ್ಥೂಲದೇಹಃ ಕ್ರಿಯಾ ಕರ್ಮೇಂದ್ರಿಯಾಣಿ ಚ ।

ಮಿಥ್ಯೆಯೆಂದು ಕಂಡುಬರುವುದಿಲ್ಲ. ಈ ಕಣ್ಣಿಗೆ ಕಾಣುವ ಜೀವನ ಸ್ಥೂಲದೇಹವು ಪಾಂಚಭೌತಿಕ; ಜ್ಞಾನೇಂದ್ರಿಯ ಮತ್ತು ಮನೋ ಆತ್ಮಕ; ಕರ್ಮೇಂದ್ರಿಯಾತ್ಮಕ. ಇದು ದೇಹಾಭಿಮಾನಿ ಜೀವನಿಗೆ ವಿವಿಧ ಕ್ಲೇಶ ಸಂತಾಪಕಾರಕವೆಂದು ಶಾಸ್ತ್ರದಲ್ಲಿ

ಜ್ಞಾನೇಂದ್ರಿಯಾಣಿ ಚ ಮನೋ ಜ್ಞಾನಾತ್ಮಕಮುದಾಹೃತಮ್ ||' ಎಂಬ ಪ್ರಮಾಣವು ಮೇಲಿನ ಅರ್ಥವನ್ನು ಸ್ಪಷ್ಟಪಡಿಸುವುದು. || ೨೯ ||

ತಸ್ಮಾತ್ ಸ್ವಸ್ಥೇನ ಮನಸಾ ವಿಮೃಶ್ಯ ಗತಿಮಾತ್ಮನಃ ।
ದ್ವೈತೇ ಧ್ರುವಾರ್ಥವಿಸ್ರಂಭಂ ತ್ಯಜೋಪಶಮಮಾವಿಶ ॥ ೩೦ ॥

ದೇಹ, ಪುತ್ರಾದಿಗಳು ನಾನಾ ಕ್ಲೇಶಕರವೆಂದಮೇಲೆ ಅದು ಹೋಗುವುದಾದರೂ ಹೇಗೆ ಎಂದರೆ ವೈರಾಗ್ಯ ಮತ್ತು ಹರಿನಿಷ್ಠೆಗಳಿಂದ ಎಂದು ತಿಳಿಸುತ್ತಾ ಉಪಸಂಹರಿಸುತ್ತಾರೆ. ತಸ್ಮಾತ್=ದೇಹ ಮೊದಲಾದುವು ಕ್ಲೇಶಕರವಾದ್ದರಿಂದ ಸ್ವಸ್ಥೇನ=ವ್ಯಗ್ರವಲ್ಲದ ಮನಸಾ=ಮನಸ್ಸಿನಿಂದ ಆತ್ಮನಃ=(೧) ಶ್ರೀಹರಿಯ ಗತಿಂ=ಸ್ವತಂತ್ರತೆಯನ್ನೂ (೨) ಜೀವನ ಅಸ್ವತಂತ್ರತೆಯನ್ನೂ ವಿಮೃಶ್ಯ=ವಿಚಾರ ಮಾಡಿ ತಿಳಿದು ದ್ವೈತೇ=ಅನ್ಯಾಪೇಕ್ಷನಾದ್ದರಿಂದ ದ್ವಯನೆಂದು ಕರೆಸುವ ಜೀವನಿಂದ ಪ್ರಾಪ್ತವಾದ ದೇಹದಲ್ಲಿ ಧ್ರುವಾರ್ಥವಿಸ್ರಂಭಂ=ಇದು ಶಾಶ್ವತವೆಂಬ ವಿಶ್ವಾಸವನ್ನು (ಈ ಪದಾರ್ಥಗಳು ನಿತ್ಯವೆಂಬ ಭಾವನೆಯನ್ನು) ತ್ಯಜ=ಬಿಡು. ವೈರಾಗ್ಯಯುಕ್ತನಾಗು. ಇಷ್ಟೇ ಸಾಲದು. ಉಪಶಮಂ (೧) ನಾನು ಸ್ವತಂತ್ರಕರ್ತನೆಂಬ ಅಭಿಮಾನದ ಅಭಾವವನ್ನು (೨) ಶ್ರೀಹರಿಯಲ್ಲಿ ನಿರಂತರ ಮನೋನಿಷ್ಠೆಯೆಂಬ ಉಪಶಾಂತಿಯನ್ನು ಆವಿಶ=ಆಶ್ರಯಿಸು. ಇದನ್ನು ದೃಢಪಡಿಸುವುದಕ್ಕಾಗಿ ವಿಮೃಶ್ಯ ಎಂದು ಹೇಳಿದ್ದು. ಸ್ವಸ್ಥೇನ ಎಂದು ಹೇಳಿದ್ದರಿಂದ ಮನಸ್ಸು ಇದ್ದರೂ ವ್ಯಗ್ರವಾಗಿದ್ದುದರಿಂದ ವಿಮರ್ಶೆಗೆ ಅವಕಾಶವಿಲ್ಲವೆಂದು ತಿಳಿಸಿರುವರು. 'ಅನನ್ಯಾಪೇಕ್ಷತಸ್ತ್ವೇಕೋ ಹರಿಃ, ಅನ್ಯದ್ದ್ವಯಂ ಸ್ಮೃತಂ। ಅನ್ಯಾಪೇಕ್ಷತ್ವತಃ, ತೇನ ಪ್ರಾಪ್ತತ್ವಾದ್ದ್ವೈತಂ ಉಚ್ಯತೇ ||' ಎಂಬ ಪ್ರಮಾಣವು ದ್ವೈತ ಶಬ್ದಕ್ಕೆ ಮೇಲಿನ ಅರ್ಥವನ್ನು ಸ್ಪಷ್ಟಪಡಿಸುವುದು. (ಅನ್ಯಾಪೇಕ್ಷೆಯಿಲ್ಲದ್ದರಿಂದ ಶ್ರೀಹರಿ ಏಕನೆನಿಸುವನು. ಅನ್ಯಾಪೇಕ್ಷೆಯುಳ್ಳದ್ದರಿಂದ ಜೀವಾದಿಗಳು ದ್ವಯರೆನಿಸುವರು. ಅವರಿಂದ ಇತ=ಪ್ರಾಪ್ತವಾದ್ದರಿಂದ ದೇಹಾದಿಗಳು ದ್ವೈತವೆನಿಸುವುವು.) ಜೀವನ ಸಾಧನೆಗೆ ಸಹಾಯಕವಾಗಿ ಎರಡನೆಯದಾಗಿ ಬಂದಿದೆಯಾದ್ದರಿಂದ ದೇಹವು ದ್ವೈತವೆನಿಸುವುದು. ಆದ್ದರಿಂದ ಭೇದಕ್ಕೆ ಮಿಥ್ಯಾತ್ವವು ಇಲ್ಲಿ ಹೇಳಿಲ್ಲವೆಂದು ತಿಳಿಯಬೇಕು. ||೩೦||

ಭೋಜೋ ನಾಮ ನೃಪಃ ಸ್ವಪ್ನೇ ಶತ್ರುಗ್ರಸ್ತಾನ್ನಭೋಜನಃ ।
ದುಃಖಂ ದುರ್ವಿಷಹಂ ಪ್ರಾಪ್ತಃ ಶೋಕಮೋಹಭಯಾರ್ತಿದಮ್ ||

ಉಕ್ತವಾಗಿದೆ. ಆದ್ದರಿಂದ ಸ್ವಸ್ಥವಾದ (ಏಕಾಗ್ರವಾದ) ಮನಸ್ಸಿನಿಂದ ಶ್ರೀಹರಿಯ ಸ್ವಾತಂತ್ರ್ಯವನ್ನೂ ಜೀವರ ಅಸ್ವಾತಂತ್ರ್ಯವನ್ನೂ ವಿಮರ್ಶಿಸಿ ತಿಳಿದು ಪರಾಪೇಕ್ಷಿಯಾದ ಜೀವನಿಂದ ಹೊಂದಲ್ಪಟ್ಟ ಈ ದೇಹದಲ್ಲಿ ನಿತ್ಯಪದಾರ್ಥವೆಂಬ ವಿಶ್ವಾಸವನ್ನು ಬಿಡು. ನಾನೇ ಸ್ವತಂತ್ರನೆಂಬ ಅಭಿಮಾನವನ್ನು ತೊರೆದು ಶ್ರೀಹರಿಯಲ್ಲಿ ನಿರಂತರ ಮನೋನಿಷ್ಠೆಯನ್ನಿಡು. (ಆಗಲೇ ಈ ದೇಹವು ನಾಶವಾಗುವುದು.)

*

ಶಾಸ್ತ್ರದ ಶ್ರವಣಮನನಗಳಿಂದ ತೀಕ್ಷ್ಣವಾದ ಭಕ್ತಿಯೇ ಮೊದಲಾದ ಸಾಧನ ಸಾಮಗ್ರೀ ಸಂಪಾದನೆಯಿಂದ ಮನೆ ಮೊದಲಾದುವನ್ನು ಬಿಡುವುದು ಮೊದಲನೆಯ ಸಾಧನವೆಂಬ ವಿಷಯದಲ್ಲಿ ಇತಿಹಾಸವನ್ನು ಹೇಳುತ್ತಾರೆ. ಭೋಜನೆಂಬ ರಾಜನು ಸ್ವಪ್ನೇ=ಸ್ವಪ್ನದಲ್ಲಿ ಶತ್ರುಗ್ರಸ್ತಾನ್ನಭೋಜನಃ (ಸ೯)=ಶತ್ರುವು ತಿಂದು ಮಿಕ್ಕ ಅನ್ನವನ್ನೇ ತಿಂದವನಾಗಿ (ಶತ್ರುವಿನ ಎಂಜಲು ತಿಂದವನಾಗಿ) ಶೋಕ, ಮೋಹ, ಭಯ ಮತ್ತು ದುಃಖವನ್ನು ಕೊಡುವ ದುರ್ವಿಷಹಂ=ಸಹಿಸಲಾಗದ ದುಃಖವನ್ನು ಪ್ರಾಪ್ತಃ(ಅಭೂತ್)=ಹೊಂದಿದನು. || ೩೧ ||

ಕೇಚಿದ್ವಿಲುಲುಪುರ್ಭೋಗಾನಪರೇಽವಧಿಷುಃ ಶ್ರಿತಾನ್ ।
ಪೂರ್ವವೈರಗ್ರಹೈರ್ಜಾಯಾ ಅನ್ಯ ಆತ್ಮಶಿರೋಽಹರನ್ || ೩೨ ||

ಪೂರ್ವವೈರಗ್ರಹೈಃ=ಹಿಂದಿನ ಶತ್ರುತನವನ್ನು ತೋರಿಸುವ ಕರ್ಮಗಳಿಂದ, ಹಿಂದಿನ ಶತ್ರುತ್ವಸ್ಮರಣೆಯಿಂದ ಕೇಚಿತ್=ಕೆಲವು ಶತ್ರುಗಳು ಭೋಗಾನ್=ಭೋಗ ಸಾಧನಗಳಾದ ಪ್ರಾಸಾದ, ಉದ್ಯಾನ ಇವುಗಳನ್ನು ವಿಲುಲುಪುಃ=ಹಾಳುಮಾಡಿದರು. ಅಪರೇ=ಮತ್ತೆ ಕೆಲವು ಶತ್ರುಗಳು ಶ್ರಿತಾನ್=ರಾಜನನ್ನು ಆಶ್ರಯಿಸಿದ ನಿಯುಕ್ತರನ್ನು ಅವಧಿಷುಃ=ಕೊಂದರು. ಅನ್ಯೇ=ಮತ್ತೆ ಕೆಲವು ಶತ್ರುಗಳು ಜಾಯಾಃ=ಭೋಜನ ಹೆಂಡತಿಯರನ್ನು ಆತ್ಮಶಿರಃ=ರಾಜನ ಶಿರಸ್ಸನ್ನು ಅಹರನ್=ಅಪಹರಿಸಿದರು. ತೆಗೆದರು. (ಕೊಂದರು). || ೩೨ ||

ಇತ್ಥಂ ದುರಂತದುಃಖೌಘಾದುತ್ಥಿತಸ್ತದನುಸ್ಮರನ್ ।
ತಾವದ್ಭೃಶಂ ಸುನಿರ್ವಿಣ್ಣೋ ನಿರ್ಜಗಾಮ ತತೋ ಗೃಹಾತ್ ||

ಇತ್ಥಂ=ಹೀಗೆ ದುರಂತದುಃಖೌಘಾತ್ = ದುಃಖದಲ್ಲಿ ಕೊನೆಯಾಗುವ ದುಃಖಗಳ ಸಮೂಹವುಳ್ಳ ಆ ಸ್ವಪ್ನದಿಂದ ಉತ್ಥಿತಃ (ಸ೯)=ಎಚ್ಚೆತ್ತವನಾಗಿ ತತ್=ಆ ಸ್ವಪ್ನದಲ್ಲಿ ಅನುಭವಿಸಿದ್ದನ್ನು ಅನುಸ್ಮರನ್ = ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾ ಭೃಶಂ = ಅತಿಶಯವಾಗಿ ಸುನಿರ್ವಿಣ್ಣಃ (ಸ೯) ಅತ್ಯಂತ ವಿರಕ್ತನಾಗಿ ತತಃ

ಭೋಜನೆಂಬ ರಾಜನು ಸ್ವಪ್ನದಲ್ಲಿ ಶತ್ರುವು ತಿಂದು ಉಳಿದ ಅನ್ನವನ್ನು ಊಟ ಮಾಡಿ ಶೋಕ, ಮೋಹ, ಭಯ ಮತ್ತು ನೋವಿಗೆ ಕಾರಣವಾದ ಸಹಿಸಲಸಾಧ್ಯವಾದ ದುಃಖವನ್ನು ಹೊಂದಿದನು. ಅವನ ಶತ್ರುಗಳು ಕೆಲವರು ಅವನ ಅರಮನೆ ಉದ್ಯಾನವನಗಳನ್ನು ಹಾಳುಮಾಡಿದರು. ಮತ್ತೆ ಕೆಲವರು ರಾಜನ ನಿಯುಕ್ತರನ್ನು ಕೊಂದರು. ಇನ್ನೂ ಕೆಲವರು ಅವನ ಹೆಂಡತಿಯರನ್ನು ಹಾಳು ಮಾಡಿದರು. ಕೆಲವರು ರಾಜನ ಶಿರಸ್ಸನ್ನೇ ಅಪಹರಿಸಿದರು. ಹಿಂದಿನ ಶತ್ರುತನವನ್ನು ನೆನೆಸಿಕೊಂಡು ಅವರು ಹೀಗೆ ಮಾಡಿದ್ದರು. ಹೀಗೆ ದುಃಖದಲ್ಲಿ ಕೊನೆಗೊಳ್ಳುವ ದುಃಖಸಮೂಹವನ್ನೇ ಆ ರಾಜನು ಸ್ವಪ್ನದಲ್ಲಿ ಕಂಡನು. ಎಚ್ಚೆತ್ತ ಅವನು ಆ ಸ್ವಪ್ನಾನುಭವವನ್ನೇ ಸ್ಮರಿಸುತ್ತಾ ಅತಿ ವಿರಕ್ತನಾಗಿ ಕೂಡಲೇ ಮನೆಯಿಂದ

ಗೃಹಾತ್=ಆ ಮನೆಯಿಂದ ತಾವತ್=ಆಗಲೇ ನಿರ್ಜಗಾಮ=ಹೊರಹೊರಟನು. (ಸನ್ಯಾಸಿಯಾದನು.) || ೩೩ ||

ದರ್ಶಯನ್ನಾತ್ಮನಾಽಽತ್ಮಾನಂ ನಿಃಸಂಗಃ ಶಾಂತವಿಗ್ರಹಃ ।
ಪ್ರವಿಷ್ಟೋ ಬ್ರಹ್ಮ ನಿರ್ವಾಣಂ ಕುಲಾಯಂ ನಾವಿದಚ್ಚ ತಮ್ ॥

(೧) ಆತ್ಮಾನಂ=ತನ್ನನ್ನು ದರ್ಶಯನ್=ಜಡನಂತೆ ಉನ್ಮತ್ತನಂತೆ ಜನರಿಗೆ ತೋರಿಸುತ್ತಾ ಈ ಅರ್ಥದಲ್ಲಿ ಆತ್ಮನಾ=ಸ್ವೇಚ್ಛೆಯಿಂದ ಎಂದೂ ಅರ್ಥಮಾಡಿರುವರು. (೨) ಆತ್ಮನಾ-ಮನಸ್ಸಿನಿಂದ ಆತ್ಮಾನಂ=ಶ್ರೀಹರಿಯನ್ನು ದರ್ಶಯನ್=ಆಲೋಚಿಸುತ್ತಾ ನಿಃಸಂಗಃ=ದುಷ್ಟಸಂಗವನ್ನು ಬಿಟ್ಟವನಾಗಿ ಶಾಂತವಿಗ್ರಹಃ=ವೈರವನ್ನು ತೊರೆದು (ಮನಸ್ಸಿನಿಂದ) ನಿರ್ವಾಣಂ=ಅಪ್ರಾಕೃತ ಶರೀರವುಳ್ಳ, ಪ್ರಾಕೃತ ಶರೀರವಿಲ್ಲದ, ಜನ್ಮವಲ್ಲದ ನಿತ್ಯವಾದ ಆನಂದದಿಂದ ಪೂರ್ಣನಾದ, ಬ್ರಹ್ಮ=ಗುಣಪೂರ್ಣನಾದ ನಾರಾಯಣನೆಂಬ ಪರಬ್ರಹ್ಮವಸ್ತುವನ್ನು ಪ್ರವಿಷ್ಟಃ(ಸ್ಸ)=ಪ್ರವೇಶಿಸಿದವನಾಗಿ ತಂ=ತಾನು ಯಾವ ದೇಹದಲ್ಲಿ ಇದ್ದನೋ ಆ ಕುಲಾಯಂ=ದೇಹವನ್ನು ಚ=ಅಸಂಪ್ರಜ್ಞಾತ ಸಮಾಧಿಯಲ್ಲಿ ಇದ್ದ ಕಾರಣದಿಂದ ನ ಅವಿದತ್=ತಿಳಿಯಲಿಲ್ಲ. ದೇಹಾಭಿಮಾನರಹಿತನಾದನೆಂದರ್ಥ. ಇಲ್ಲಿ ನಿಸ್ಸಂಗಃ ಶಾಂತವಿಗ್ರಹಃ ಆತ್ಮನಾ (ಸ್ವೇಚ್ಛೆಯಿಂದ) ಆತ್ಮಾನಂ ದರ್ಶಯನ್ ಗೃಹಾತ್ ನಿರ್ಜಗಾಮ. ತತಃ ಆತ್ಮನಾ=ಮನಸ್ಸಿನಿಂದ ನಿರ್ವಾಣಂ ಪ್ರವಿಷ್ಟಃ ಎಂದೂ ಅನ್ವಯ ಮಾಡಿರುವರು. || ೩೪ ||

ನಾರದ ಉವಾಚ—

ಇಮಾಂ ಮಂತ್ರೋಪನಿಷದಂ ಪ್ರತೀಚ್ಛ ಪ್ರಯತೋ ಮಮ ।
ಯಾಂ ಧಾರಯನ್ ಸಪ್ತರಾತ್ರಾದ್ದ್ರಷ್ಟಾ ಸಂಕರ್ಷಣಂ ವಿಭುಮ್ ॥

ನನಗಾದರೂ ಈ ಬಗೆಯ ಅವಸ್ಥೆಯನ್ನು ಹೊಂದಬೇಕಾದರೆ ಉಪಾಯವೇನು? ಎಂದರೆ ಹೇಳುತ್ತಾರೆ. ರಾಜನೇ, ಪ್ರಯತಃ (ಸನ್)=ವಿನಯಾದಿಗುಣ

ಹೊರಹೊರಟು ಸನ್ಯಾಸಿಯಾದನು. ಸ್ವೇಚ್ಛೆಯಿಂದ ಜನರಿಗೆ ಉನ್ಮತ್ತನಂತೆ ತೋರಿಸಿಕೊಂಡನು. ಮನಸ್ಸಿನಲ್ಲಿ ಶ್ರೀಹರಿಯನ್ನೇ ಆಲೋಚಿಸುತ್ತಾ ಬಂದನು. ದುಷ್ಟಸಹವಾಸವನ್ನು ತೊರೆದು ಯಾರಲ್ಲಿಯೂ ವೈರಭಾವವನ್ನು ಮಾಡದೆ ಅಪ್ರಾಕೃತ ಶರೀರಿಯೂ ನಿತ್ಯಾನಂದ ಪೂರ್ಣನೂ ಆದ ನಾರಾಯಣನನ್ನು ಪ್ರವೇಶಿಸಿದನು. (ಮನಸ್ಸನ್ನು ಶ್ರೀಹರಿಯಲ್ಲಿಯೇ ಲೀನಗೊಳಿಸಿದನು.) ಅಸಂಪ್ರಜ್ಞಾತ ಸಮಾಧಿಯಲ್ಲಿದ್ದ ಆ ರಾಜನು ತಾನಿದ್ದ ದೇಹವನ್ನೇ ಮರೆತನು.

ನಾರದರು—ಚಿತ್ರಕೇತುವೇ, ನಾನು ಹೇಳಿಕೊಡುವ ಮಂತ್ರವನ್ನು ವಿನೀತನಾಗಿ ಪರಿಗ್ರಹಿಸು. ಉಪನಿಷತ್ತಿನಂತಿರುವ ಆ ಮಂತ್ರವು ಅತ್ಯಂತ ಶ್ರೇಯಸ್ಕರ. ಏಳು ರಾತ್ರಿಗಳು ಆ ವಿದ್ಯೆಯನ್ನು ಉಪಾಸಿಸಿದ್ದೇ ಆದರೆ ಸರ್ವೋತ್ತಮನೂ

ಗಳಿಂದ ಕೂಡಿದವನಾಗಿ ಇಮಾಂ=ಮುಂದಿನ ಅಧ್ಯಾಯದಲ್ಲಿ ತಿಳಿಸುವ ಮಂತ್ರೋಪನಿಷದಂ=ಅತ್ಯಂತ ಶ್ರೇಯಸ್ಕರವಾದ ಉಪನಿಷತ್ತಿನಂತಿರುವ ಮಂತ್ರವನ್ನು (ವಿದ್ಯೆಯನ್ನು) ಮಮ (ಸಕಾಶಾತ್)=ನನ್ನ ದೆಸೆಯಿಂದ ಪ್ರತೀಚ್ಛ=ಪರಿಗ್ರಹಿಸು. ಇದು ಬಹುಕಾಲದಲ್ಲಿ ಇಷ್ಟಾರ್ಥ ಪ್ರದವಾಗುವುದಾದರೆ ಇದರಿಂದ ನನಗೇನು? ಎಂದು ಇದರಲ್ಲಿ ಅಸಡ್ಡೆ ಮಾಡಬೇಡವೆಂದು ಹೇಳುತ್ತಾರೆ. ಯಾಂ=ಯಾವ ಈ ಮಂತ್ರೋಪನಿಷತ್ತನ್ನು ಧಾರಯನ್=ಏಳು ರಾತ್ರಿಗಳು ಉಪಾಸಿಸಿದ್ದೇ ಆದರೆ ಭವಾನ್=ನೀನು ವಿಭುಂ=ಸರ್ವೋತ್ತಮನಾದ ಸಂಕರ್ಷಣಂ=ಶೇಷಾಂತರ್ಯಾಮಿಯಾದ ಸಂಕರ್ಷಣನಾಮಕನಾದ ಶ್ರೀಹರಿಯನ್ನು ದ್ರಷ್ಟಾ=ನೋಡುವೆ. ಇದರಿಂದ ಈ ವಿದ್ಯೆ ಕ್ಷಿಪ್ರ ಫಲವನ್ನು ಕೊಡುವುದೆಂದು ಹೇಳಿದಂತಾಯಿತು. ವಿ.ಅ. ಇಲ್ಲಿ ಸಂಕರ್ಷಣಪದದಿಂದ ಶೇಷನೆಂದು ಅರ್ಥ ಮಾಡಬಾರದು. ಏಕೆಂದರೆ, ಮುಂದೆ ಹೇಳುವ ಬಂಧನಿರ್ಮೂಲನ ಮೊದಲಾದ ಸಾಮರ್ಥ್ಯವು ಶೇಷದೇವರಿಗಿಲ್ಲ. ಆದ್ದರಿಂದ ಶೇಷಾಂತರ್ಯಾಮಿಯಾದ ಸಂಕರ್ಷಣ (ವ್ಯೂಹರೂಪದಲ್ಲಿ ಎರಡನೆಯದಾದ) ನೆಂಬ ಶ್ರೀಹರಿಯೆಂದೇ ಅರ್ಥಮಾಡಬೇಕು. ಇದಕ್ಕೆ ಪ್ರಮಾಣ. 'ರುದ್ರಾದ್ಯಾಃ ಶೇಷದೇಹಸ್ಥಂ ವಿಷ್ಣುಂ ಸಂಕರ್ಷಣಾಭಿಧಮ್ ಶೇಷಾಂತರ್ಯಾಮಿಣಂ ಜ್ಞಾತ್ವಾ ಸ್ವಪದಂ ಪ್ರಾಪುರಂಜಸಾ ||' (ರುದ್ರಾದಿ ದೇವತೆಗಳು ಶೇಷನ ದೇಹದಲ್ಲಿದ್ದ ಶೇಷಾಂತರ್ಯಾಮಿ ಸಂಕರ್ಷಣನೆಂಬ ವಿಷ್ಣುವನ್ನು ತಿಳಿದು (ಉಪಾಸಿಸಿ) ತಮ್ಮ ತಮ್ಮ ಪದವಿಗಳನ್ನು ಹೊಂದಿದರು). || ೩೫ ||

ಯತ್ಪಾದಮೂಲಮುಪಸೃತ್ಯ ನರೇಂದ್ರ ಪೂರ್ವೇ ।
ಶರ್ವಾದಯೋ ಭ್ರಮಮಿಮಂ ದ್ವಿತಯಂ ವಿಸೃಜ್ಯ ।
ಸದ್ಯಸ್ತದೀಯಮತುಲಾನಧಿಕಂ ಮಹಿತ್ವಂ
ಪ್ರಾಪುರ್ಭವಾನಪಿ ಪರಂ ನಚಿರಾದುಪೈತಿ || ೩೬ ||

ಇಲ್ಲಿನ ಸಂಕರ್ಷಣನು ಶೇಷನಲ್ಲವೆಂದು ತೋರಿಸಲು ಶೇಷನಿಗೆ ಸಂಭಾವಿತವಲ್ಲದ ವಿಶೇಷಣಗಳಿಂದ ಸಂಕರ್ಷಣನನ್ನು ವರ್ಣಿಸುತ್ತಾರೆ. ನರೇಂದ್ರ=ಚಿತ್ರಕೇತು ರಾಜನೇ, ಪೂರ್ವೇ=ತಮ್ಮ ತಮ್ಮ ಪದವಿಗಳನ್ನು ಹೊಂದದಿರುವ ಪೂರ್ವಾವಸ್ಥೆಯಲ್ಲಿನ ಶರ್ವಾದಯಃ=ರುದ್ರ ಮೊದಲಾದ ಪದವಿಗಳನ್ನು ಹೊಂದುವ ಯೋಗ್ಯತೆಯುಳ್ಳ ಜೀವರು ಯತ್ಪಾದಮೂಲಂ=ಯಾವ ಶೇಷಾಂತರ್ಯಾಮಿಯಾದ ಈ ಸಂಕರ್ಷಣನಾಮಕ ಹರಿಯ ಪಾದಗಳನ್ನು ಉಪಸೃತ್ಯ=ಉಪಾಸನೆ ಮಾಡಿ

ಶೇಷಾಂತರ್ಯಾಮಿಯೂ ಆದ ಶ್ರೀ ಸಂಕರ್ಷಣ ನಾಮಕ ಶ್ರೀಹರಿಯನ್ನು ನೀನು ಕಾಣುವೆ. ಇನ್ನೂ ತಮ್ಮ ತಮ್ಮ ಪದವಿಗಳನ್ನು ಹೊಂದದಿರುವ ರುದ್ರಾದಿ ಪದ ಯೋಗ್ಯ ಜೀವರು ಈ ಶೇಷಾಂತರ್ಯಾಮಿ ಸಂಕರ್ಷಣರೂಪಿಯ ಪಾದಗಳನ್ನು ಉಪಾಸಿಸಿ ಈ ದೇಹಾಭಿಮಾನವನ್ನೂ ದೇಹಾನುಬಂಧಿಗಳಲ್ಲಿರುವ ಸ್ನೇಹಬಂಧ

ಇಮಂ ಭ್ರಮಂ=ದೇಹದಲ್ಲಿರುವ ನನ್ನದು ಎಂಬ ಈ ಭ್ರಾಂತಿಯನ್ನೂ ಇಮಂ ದ್ವಿತಯಂ=(ಭ್ರಾಂತಿಯಿಂದ ಬಂದ) ಅನ್ಯಥಾ ಜ್ಞಾನದ ಕಾರ್ಯವಾದ ಮಕ್ಕಳು ಮೊದಲಾದವರಲ್ಲಿ ಇರುವ ಸ್ನೇಹರೂಪವಾದ ಈ ಬಂಧವನ್ನೂ ವಿಸೃಜ್ಯ= ಸಂಪೂರ್ಣ ವಾಗಿ ಬಿಟ್ಟು ಸದ್ಯಃ = ಸಾಧನ ಸಾಮಗ್ರಿಯಲ್ಲಿ ಕಾಲಕ್ಷೇಪವಿಲ್ಲದೆ ತದೀಯಂ= (೧) ಅವರವರಿಗೆ ಯೋಗ್ಯವಾದ (೨) ಶ್ರೀಹರಿಯ ಅನುಗ್ರಹದಿಂದಲೇ ಲಭ್ಯವಾದ್ದ ರಿಂದ ಶ್ರೀಹರಿಯ ಸಂಬಂಧಿ ಎನಿಸಿದ (೩) ಶ್ರೀಹರಿಯ ಅಧೀನವಾದ (೪) ಅವರವ ರಲ್ಲಿಯೇ (ಅವ್ಯಕ್ತವಾಗಿ) ಇರುವ ಅತುಲಾನಧಿಕಂ=(೧) ಸಾಮ್ಯಾಧಿಕ್ಯಗಳಿಲ್ಲದ (೨) ಶ್ರೀಹರಿಯ ಮಹಿಮೆಗೆ ಸಮಾನವೂ ಅಧಿಕವೂ ಅಲ್ಲದ (೩) ಸಮಾಧಿಕಪ್ರಾಪ್ತಿ ರಹಿತವಾದ (ಏಕಪ್ರಕಾರವಾದ) ಮಹಿತ್ವಂ = (೧) ಆಯಾಯಾ ಪದವಿಯನ್ನು (೨) ಮುಕ್ತಿಯಲ್ಲಿ ತಮ್ಮ ತಮ್ಮ ಯೋಗ್ಯಾನಂದಾನುಭವ(ಭಿವ್ಯಕ್ತಿ) ರೂಪ ಮಹಿಮೆ ಯನ್ನು ಪ್ರಾಪುಃ=ಹೊಂದಿದರೋ (ಹೊಂದುವರೋ) ಭವಾನ್ ಅಪಿ=ನೀನೂ ಕೂಡ ಆ ಶೇಷಾಂತರ್ಯಾಮಿ ಶ್ರೀಹರಿಯನ್ನು ಉಪಾಸಿಸಿ ಅವನನ್ನು ಕಂಡು ಅವನ ಪ್ರಸಾದ ದಿಂದ ನಚಿರಾತ್=ನಿನ್ನ ಪ್ರಾರಬ್ಧ ಕರ್ಮದ ಫಲವಾಗಿ ಬಂದ ಕೊನೆಯ ಶರೀರವು ಹೋದಮೇಲೆ ತದೀಯಂ = ಶ್ರೀಹರಿಯ ಅನುಗ್ರಹದಿಂದಲೇ ಸಿಗುವ ಅತುಲಾ- ನಧಿಕಂ=ಹಿಂದಿನ ನಿನ್ನ ಮಹಿಮೆಗೆ ಸಮವಲ್ಲದ (ಉತ್ತಮವಾದ) ಆದರೆ ಮುಂದೆ ಅಭಿವೃದ್ಧಿಯಾಗದಿರುವ (ಯೋಗ್ಯತೆಗೆ ತಕ್ಕಷ್ಟು ಪೂರ್ಣವಾದ) ಪರಂ=ರುದ್ರಾದಿ ಮಹಿಮೆಗಿಂತ ಭಿನ್ನವಾದ ಮಹಿತ್ವಂ ಸ್ವರೂಪಾನಂದಾನುಭವರೂಪವಾದ ನಿನಗೆ ಯೋಗ್ಯವಾದ ಮಹಿಮೆಯನ್ನು (ಮೋಕ್ಷವನ್ನು) ಉಪೈತಿ=ಹೊಂದುವೆ. ವಿ.ಅ. ಶ್ರೀಹರಿಯ ಅನುಗ್ರಹದಿಂದ ಲಭ್ಯವಾಗಬೇಕಾದರೆ ಆ ಮಹಿಮೆಯಾದರೂ ಎಂತ ಹುದು ಎಂದರೆ 'ಅತುಲಾನಧಿಕಂ' ಎಂಬುದರಿಂದ ತಿಳಿಸಿರುವರು. ಹಾಗಾದರೆ ಅದು ಶ್ರೀಹರಿಯ ಮಾಹಾತ್ಮ್ಯವೇ ಆಯಿತಲ್ಲಾ ಎಂಬುದಕ್ಕೆ ಉತ್ತರ 'ತದೀಯಂ'=ಅವರವರಿಗೆ ಯೋಗ್ಯ ಎಂದು. ಅದು ಅವರವರದೇ ಆಗಿದ್ದಲ್ಲಿ ಅದು ಸ್ವತಃ ಸಿದ್ಧವೆಂದಾಯಿತು. ಅಂದಮೇಲೆ ಅದನ್ನು ಹೊಂದುವಲ್ಲಿ ಕ್ಲೇಶಸಾಧ್ಯವಾದ ಮತ್ತೊಬ್ಬರ (ಶ್ರೀಹರಿಯ) ಉಪಾಸನೆಯಿಂದಾದರೂ ಏನು ಪ್ರಯೋಜನ? ಎಂಬ ಪ್ರಶ್ನೆಗೂ 'ತದೀಯಂ' ಎಂದೇ ಉತ್ತರ. ಶ್ರೀಹರಿ ಪ್ರಸಾದ ಲಭ್ಯವಾದ್ದರಿಂದಲೇ ಶ್ರೀಹರಿಯ ಸಂಬಂಧಿ ಎಂದು. ಶ್ರೀಹರಿ ಮಹಿಮೆಗೆ ಭಿನ್ನಮಹಿಮೆಗೆ ಸಾಮ್ಯಾಧಿಕ್ಯ ವರ್ಜನವಾದರೂ ಹೇಗೆ ಸಂಘಟಿಸುವುದು? ಎಂಬುದಕ್ಕೂ ಇದೇ ಉತ್ತರ ತದೀಯಂ. ಇಂದ್ರಾದಿ ಪದಕ್ಕಿಂತ ರುದ್ರಾದಿಗಳಿಂದ ಹೊಂದಲಾಗುವ ಶೇಷಾದಿ

ವನ್ನೂ ಪೂರ್ಣವಾಗಿ ತೊರೆದು ವಿಳಂಬವಿಲ್ಲದೆ ತಮ್ಮ ತಮ್ಮ ಯೋಗ್ಯಪದವಿಗಳನ್ನು ಹೊಂದಿ ಮುಕ್ತರಾಗಿ ಯೋಗ್ಯಾನಂದಾಭಿವ್ಯಕ್ತಿ ಎಂಬ ಮಹಿಮೆಯನ್ನು (ಮೋಕ್ಷ ವನ್ನು ಪಡೆದರು (ಪಡೆಯುವರು). ನೀನೂ ಕೂಡ ಆ ಶ್ರೀಹರಿಯನ್ನು ಉಪಾಸಿಸಿ ನಿನ್ನ ಪ್ರಾರಬ್ಧಕರ್ಮಾನುಗುಣವಾದ ಕೊನೆಯ ದೇಹವು ಹೋದಮೇಲೆ ಶ್ರೀಹರಿಯ

ಪದಕ್ಕೆ ಸಾಮ್ಯಾಧಿಕ್ಯವಿಲ್ಲವೆಂಬುದೂ ಯುಕ್ತವೇ. (ಇಂದ್ರಪದಕ್ಕೆ ಶೇಷಪದ ಸಮವಲ್ಲ. ಇಂದ್ರಪದವು ಶೇಷಪದಕ್ಕೆ ಅಧಿಕವಲ್ಲ). ಮತ್ತು ಶೇಷದೇವರು ಹೊಂದುವ ಮುಕ್ತಿಯು (ಮುಕ್ತಶೇಷ ಪದವಿಯು) ಸಂಸಾರಾವಸ್ಥೆಯ ಶೇಷಪದ ದಂತೆ ಸಾಮ್ಯಾಧಿಕ್ಯವನ್ನು ಹೊಂದಿದುದಲ್ಲ. (ಸಂಸಾರಾವಸ್ಥೆಯಲ್ಲಿ ಕ್ಷಣಕ್ಷಣಕ್ಕೂ ಅಭಿವೃದ್ಧಿಯಾಗುವುದರಿಂದ ಸಾಮ್ಯಾಧಿಕ್ಯಗಳುಂಟು) 'ನಿರಂಜನಃ ಪರಮಂ ಸಾಮ್ಯಂ ಉಪೈತಿ' ಎಂದು ಹೇಳಿದೆಯಾಗಿ ಶ್ರೀಹರಿಯ ಮಹಿಮೆಯನ್ನೇ ಹೊಂದುವರೆಂದು ಏಕೆ ಹೇಳಬಾರದು? ಎಂಬ ಪ್ರಶ್ನೆಗೂ ತದೀಯಂ ಎಂಬುದೇ ಉತ್ತರ. ಅವರವರಲ್ಲಿ (ಅವ್ಯಕ್ತವಾಗಿ) ಇರುವುದು ಎಂದು. ತಮ್ಮಲ್ಲಿದ್ದ ಮಹಿಮೆ ಯನ್ನೇ ಅಭಿವ್ಯಕ್ತವಾಗುವಂತೆ ಮಾಡಿಕೊಳ್ಳುವರೇ ಹೊರತು ಶ್ರೀಹರಿಯಲ್ಲಿದ್ದ ಮಹಿಮೆಯನ್ನು ಶೇಷಾದಿಗಳು ಹೊಂದುವುದಿಲ್ಲ. ಹಾಗಾದರೆ ಶ್ರೀಹರಿಯ ಮಹಿಮೆ ಯನ್ನು ಬ್ರಹ್ಮಾದಿಗಳು ಹೊಂದುವರೇ? ಎಂದರೆ ಅದೂ ಇಲ್ಲ. ಈ ವಿಷಯಗಳಲ್ಲಿ ಪ್ರಮಾಣಗಳು. 'ತೇಷಾಂ ತೇಷಾಂ ಪದಾನ್ಯೇವ ವೈಷ್ಣವಾನಿ ಪದಾನಿ ತು| ತೇಷಾಂ ಮಹಿತ್ವಂ ಚ ತಥಾ ಹರೇಃ ತದ್ವಶಗಂ ಯತಃ || ಅತುಲ್ಯಾನಧಿಕಂ ಚೈವ ತಸ್ಯ ತಸ್ಯೈವ ಮುಕ್ತಿಗಮ್ | ತಸ್ಯೈವ ಪೂರ್ವಮಾಹಾತ್ಮ್ಯಮಪೇಕ್ಷ್ಯ, ನ ಹರೇಃ ಕ್ವಚಿತ್ ಮಾಹಾತ್ಮ್ಯಮನ್ಯಪ್ರಾಪ್ಯಂ ಸ್ಯಾತ್ ನ ತೇ ವಿಷ್ಣೋರಿತಿ ಶ್ರುತೇಃ || ಬ್ರಹ್ಮೇಶಾನಾದಿಭಿರ್ದೇವೈಃ ಯತ್ಪ್ರಾಪ್ತುಂ ನೈವ ಶಕ್ಯತೇ | ತದ್ಯತ್ಸ್ವಭಾವಃ ಕೈವಲ್ಯಂ ಸ ಭವಾನ್ ಕೇವಲೋ ಹರಿಃ ||' (ಶ್ರೀಹರಿಯ ವಶವಾದ್ದರಿಂದ ಅವರವರ ಪದಗಳೂ ವೈಷ್ಣವ ಪದಗಳೇ, ಅವರವರ ಮಹಿಮೆಯೂ ಶ್ರೀಹರಿಗೆ ಸಂಬಂಧಿಸಿದ್ದೇ. ಮುಕ್ತಿಯಲ್ಲಿರುವ ಅವರವರ ಪದವಿಯು ಸಂಸಾರಾವಸ್ಥೆಯ ಅವರವರ ಮಹಿಮೆಗಿಂತ ಅತುಲ್ಯಾನಧಿಕವೇ ಆಗಿರುವುದು. ಶ್ರೀಹರಿಯ ಮಹಿಮೆಯು ಎಂದೂ ಮತ್ತೊಬ್ಬ ರಿಂದ ಹೊಂದಲ್ಪಡತಕ್ಕದ್ದಲ್ಲವೆಂದು 'ನ ತೇ ವಿಷ್ಣೋ ಜಾಯಮಾನೋ ನ ಜಾತಃ, ದೇವ ಮಹಿಮ್ನಃ ಪರಮಂತಮಾಪ' ಎಂಬ ಶ್ರುತಿಯು ಹೇಳುವುದು. ಬ್ರಹ್ಮ ರುದ್ರಾದಿ ದೇವತೆಗಳಿಂದ ಹೊಂದಲಾಗದ ಕೈವಲ್ಯ ಸ್ವಭಾವದವನೇ ನೀನು ಶ್ರೀಹರಿ). 'ಭ್ರಮಮಿಮಂ ವಿಸೃಜ್ಯ' ಎಂಬುದರಿಂದ ಉಪಾಸನೆಯು ಹೀಗಿರಬೇಕೆಂದು ತಿಳಿಸಿರುವರು. ಕಾರ್ಯಕಾರಣಗಳು ಒಂದೇ ಶಬ್ದದಿಂದ ವ್ಯವಹರಿಸಲ್ಪಡುವುವು ಎಂಬ ನ್ಯಾಯದಂತೆ ದ್ವಿತಯ ಎಂಬ ಕಾರಣ ಪದದಿಂದ ಬಂಧವೆಂಬ ಕಾರ್ಯವು ಲಕ್ಷ್ಯವಾಗಿರುವುದು. ದ್ವಿತೀಯವೆಂದರೆ ಯಥಾರ್ಥಜ್ಞಾನಕ್ಕೆ ಎರಡನೆಯದಾದ 'ಅನ್ಯಥಾ ಜ್ಞಾನ'. 'ದ್ವೈತೇನ ಬಂಧಸಂತ್ಯಾಗಾತ್ ದ್ವೈತತ್ಯಾಗೀ ಭವತ್ಯುತ'

ಅನುಗ್ರಹಮಾತ್ರದಿಂದಲೇ ಸಿಗುವ, ನಿನ್ನ ಹಿಂದಿನ ಮಹಿಮೆಗಿಂತ ಉತ್ತಮವಾದ ಆದರೆ ಮುಂದೆ ಅಭಿವೃದ್ಧಿ ಹೊಂದದಿರುವ ಅಂದರೆ ಯೋಗ್ಯತೆಗೆ ತಕ್ಕಂತೆ ಪೂರ್ಣ ವಾದ, ರುದ್ರಾದಿ ಮಹಿಮೆಗಿಂತ ಭಿನ್ನವಾದ, ನಿನ್ನ ಯೋಗ್ಯತಾನುಗುಣ ಸ್ವರೂಪಾ ನಂದಾನುಭವರೂಪ ಮಹಿಮೆಯನ್ನು (ಮೋಕ್ಷವನ್ನು) ಹೊಂದುವೆ.

ದ್ವೈತೇನ=ಅನ್ಯಥಾಜ್ಞಾನದಿಂದ ಹುಟ್ಟಿದ ಎಂದರ್ಥ. ಬಂಧವನ್ನು ಬಿಟ್ಟು ಎಂದು ಹೇಳಿದ್ದರಿಂದ ಮುಕ್ತಿಯಲ್ಲಿ ಶೇಷಾದಿಗಳಿಂದ ಪ್ರಾಪ್ಯವಾದ ಪದವೆಂದು ಸೂಚಿಸಿದಂತಾಯಿತು. ಸದ್ಯಃ ಎಂಬುದರ ಅರ್ಥವನ್ನು 'ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯತೇ' ಎಂಬ ಶ್ರುತಿಯು ತಿಳಿಸುವುದು. ಇದರಂತೆ ಚಿತ್ರಕೇತುವೂ ಸ್ವಯೋಗ್ಯ ಮುಕ್ತಿಯನ್ನು ಹೊಂದುವನೆಂದು ಭವಾನಪಿ ಇತ್ಯಾದಿ ವಾಕ್ಯದಿಂದ ತಿಳಿಸಿದರು. ಇದನ್ನೇ 'ಯದ್ಯೇಷೋಪರತಾ ದೇವೀ ಮಾಯಾ ವೈಶಾರದೀ ಮತಿಃ | ಸಂಪನ್ನ ಏವೇತಿ ವಿದುಃ ಮಹಿಮ್ನಿ ಸ್ವೇ ಮಹೀಯತೇ' ಎಂಬ ಸ್ಮೃತಿಯು ಸ್ಪಷ್ಟಪಡಿಸುವುದು. || ೩೬ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಪಂಚದಶೋಽಧ್ಯಾಯಃ

ಅಥ ಷೋಡಶೋಽಧ್ಯಾಯಃ

ಶ್ರೀ ಶುಕ ಉವಾಚ—

ಅಥ ದೇವಋಷೀ ರಾಜನ್ ಸಂಪರೇತಂ ನೃಪಾತ್ಮಜಮ್ |
ದರ್ಶಯಿತ್ವೇತಿ ಹೋವಾಚ ಜ್ಞಾತೀನಾಮನುಶೋಚತಾಮ್ ||

ಸಂಸಾರವೆಂದರೆ ಮಕ್ಕಳು ಸ್ನೇಹಿತರು ಇತ್ಯಾದಿ ಯುಕ್ತವಾಗಿ ಅನಿತ್ಯವಾದುದೇ. ಸಂಸಾರಿಯಾದ ಚೇತನನು ಶ್ರೀಹರಿಯ ನಿಯಮನಕ್ಕೆ ಒಳಪಟ್ಟ ನಿತ್ಯತೆಯುಳ್ಳವನು. ಪರಮಚೇತನವಾದ ಶ್ರೀಹರಿಯೇ ಮುಖ್ಯನಿತ್ಯನು. ಅವನ ಜ್ಞಾನವೇ ಪುರುಷಾರ್ಥಕ್ಕೆ ಸಾಧನ—ಈ ಮೊದಲಾದ ಪ್ರಮೇಯಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಅದರಲ್ಲಿಯೂ ಮೊದಲು ಮಗನ ಮುಖದಿಂದಲೇ ತಂದೆ-ಮಗ ಇತ್ಯಾದಿ ಸಂಬಂಧ ಅನಿತ್ಯವೆಂದು ಹೇಳಿಸಲು ನಾರದರು ಯೋಗ ಮಹಿಮೆಯನ್ನು ಪ್ರಕಾಶಪಡಿಸುತ್ತಾ ರಾಜಕುಮಾರನನ್ನು ಎಬ್ಬಿಸಿ (ಬದುಕಿಸಿ) ಮುಂದಿನ ಮಾತನ್ನು ಹೇಳಿದರೆಂದು ಹೇಳುತ್ತಾರೆ. ರಾಜನ್=ಪರೀಕ್ಷಿದ್ರಾಜನೇ, ಅಥ=ಅನಂತರ ದೇವಋಷಿಃ=ನಾರದರು ಅನುಶೋಚತಾಂ=ದುಃಖಿಸುತ್ತಿದ್ದ ಜ್ಞಾತೀನಾಂ=ರಾಜ ಮೊದಲಾದ ಜ್ಞಾತಿಗಳಿಗೆ ಸಂಪರೇತಂ=ಮೃತನಾಗಿದ್ದ

ಹದಿನಾರನೆಯ ಅಧ್ಯಾಯ

ಶುಕಾಚಾರ್ಯರು—ಪರೀಕ್ಷಿದ್ರಾಜ, ಅನಂತರ ದೇವರ್ಷಿಗಳಾದ ನಾರದರು ದುಃಖಪಡುತ್ತಿದ್ದ ಆ ರಾಜನ ಜ್ಞಾತಿಗಳಿಗೆ ಮೃತನಾಗಿದ್ದ ಆ ರಾಜಕುಮಾರನನ್ನು ತಮ್ಮ ಯೋಗಬಲದಿಂದ ತೋರಿಸಿ ಆ ರಾಜಪುತ್ರನನ್ನು ಕುರಿತು 'ಜೀವನೇ, ನಿನಗೆ

ನೃಪಾತ್ಮಜಂ=ರಾಜಕುಮಾರನನ್ನು ತಮ್ಮ ಯೋಗಬಲದಿಂದ ದರ್ಶಯಿತ್ವಾ=ತೋರಿಸಿ ಇತಿ=ಮುಂದೆ ಹೇಳುವಂತೆ (ತಂ)=ಆ ರಾಜಪುತ್ರನನ್ನು ಕುರಿತು ಉವಾಚ ಹ=ಹೇಳಿದರಷ್ಟೆ! ‖ ೧ ‖

ನಾರದ ಉವಾಚ—

ಜೀವಾತ್ಮನ್ ಪಶ್ಯ ಭದ್ರಂ ತೇ ಮಾತರಂ ಪಿತರಂ ಚ ತೇ ।
ಸುಹೃದೋ ಬಾಂಧವಾಂಸ್ತಪ್ತಾನ್ ಶುಚಾ ತ್ವತ್ಕೃತಯಾ ಭೃಶಮ್ ॥

ಜೀವಾತ್ಮನ್=ಜೀವನೇ, ತೇ=ನಿನಗೆ ಭದ್ರಂ=ಒಳ್ಳೆಯದಾಗಲಿ. ತೇ=ನಿನ್ನ ಮಾತರಂ=ತಾಯಿಯನ್ನೂ ಪಿತರಂ=ತಂದೆಯನ್ನೂ ತ್ವತ್ಕೃತಯಾ=ನಿನ್ನ ನಿಮಿತ್ತಕವಾದ ಶುಚಾ=ಶೋಕದಿಂದ ಭೃಶಂ=ಅತಿಶಯವಾಗಿ ತಪ್ತಾನ್=ದುಃಖಿತರಾಗಿರುವ ಸುಹೃದಃ=ಸ್ನೇಹಿತರನ್ನೂ ಬಾಂಧವಾನ್ ಚ=ಬಂಧುಗಳನ್ನೂ ಪಶ್ಯ=ನೋಡು ‖ ೨ ‖

ಕಲೇವರಂ ಸ್ವಮಾವಿಶ್ಯ ಶೇಷಮಾಯುಃ ಸುಹೃದ್ವೃತಃ ।
ಭುಂಕ್ಷ್ವ ಭೋಗಾನ್ ಪಿತೃಪ್ರಾಪ್ತಾನಧಿತಿಷ್ಠನ್ನೃಪಾಸನಮ್ ॥ ೩ ॥

ಸ್ವಂ=ನಿನ್ನ ಪ್ರಾರಬ್ಧಕರ್ಮದಿಂದ ಬಂದದ್ದರಿಂದ ನಿನ್ನದಾದ ಕಲೇವರಂ=ದೇಹವನ್ನು ಆವಿಶ್ಯ=ಪ್ರವೇಶಿಸಿ ನೃಪಾಸನಂ=ರಾಜಾಸನದಲ್ಲಿ ಅಧಿತಿಷ್ಠನ್=ಕುಳಿತವನಾಗಿ ಸುಹೃದ್ವೃತಃ ಸನ್=ಸ್ನೇಹಿತರಿಂದ ಪರಿವೃತನಾಗಿ ಶೇಷಂ ಆಯುಃ=ಅಪಮೃತ್ಯುವಿನಿಂದ ಮೃತನಾಗಿರುವೆಯಾದ್ದರಿಂದ ಉಳಿದಿರುವ ಆಯುಸ್ಸೆಲ್ಲ ಪಿತೃಪ್ರಾಪ್ತಾನ್=ತಂದೆಯು ಕೊಟ್ಟ ಭೋಗಾನ್=ರಾಜ್ಯಾಧಿಪತ್ಯ ಮೊದಲಾದ ಭೋಗಗಳನ್ನು ಭುಂಕ್ಷ್ವ=ಅನುಭವಿಸು. ‖ ೩ ‖

ಜೀವ ಉವಾಚ—

ಕಸ್ಮಿನ್ ಜನ್ಮನ್ಯಮೀ ಬ್ರಹ್ಮನ್ ಪಿತರೋ ಮಾತರೋಽಭವನ್ ।
ಕರ್ಮಭಿರ್ಭ್ರಾಮ್ಯಮಾಣಸ್ಯ ದೇವ-ತಿರ್ಯಙ್-ನೃಯೋನಿಷು ॥

ಹೀಗೆ ಹೇಳಿದರೆ ಜೀವನು ಏನು ಹೇಳಿದನೆಂದರೆ ಹೇಳುತ್ತಾರೆ. ಬ್ರಹ್ಮನ್=ನಾರದರೆ, ಕರ್ಮಭಿಃ=ತಾನು ಮಾಡಿದ ಕರ್ಮಗಳ ಫಲವಾಗಿ ದೇವಯೋನಿಯಲ್ಲಿ

ಒಳ್ಳೆಯದಾಗಲಿ. ನಿನ್ನ ತಾಯಿ ತಂದೆಗಳನ್ನೂ ನಿನಗಾಗಿ ಅತ್ಯಂತ ಶೋಕತಪ್ತರಾಗಿರುವ ಸ್ನೇಹಿತರನ್ನೂ ಬಂಧುಗಳನ್ನೂ ನೋಡು. ನಿನ್ನ ಈ ದೇಹವನ್ನು ಪ್ರವೇಶಿಸಿ ರಾಜಾಸನದಲ್ಲಿ ಕುಳಿತು ಸ್ನೇಹಿತರೊಡನೆ ನಿನ್ನ ಉಳಿದ ಆಯುಸ್ಸನ್ನು (ಅಪಮೃತ್ಯುವಿಗೆ ತುತ್ತಾಗಿರುವೆಯಾದ್ದರಿಂದ) ರಾಜ್ಯ ಮೊದಲಾದ ಭೋಗಗಳನ್ನು —ತಂದೆಯಿಂದ ಬಂದವುಗಳನ್ನು—ಅನುಭವಿಸು' ಎಂದರು. ಆಗ ಆ ಜೀವನು 'ಬ್ರಹ್ಮಜ್ಞಾನಿಗಳಾದ ನಾರದರೆ, ಜೀವನು ತಾನೆಸಗಿದ ಕರ್ಮಕ್ಕೆ ತಕ್ಕಂತೆ ದೇವತೆಯಾಗಿಯೋ ತಿರ್ಯಗ್ಜಂತುವಾಗಿಯೋ ಮನುಷ್ಯನಾಗಿಯೋ ಹುಟ್ಟುತ್ತಲೇ

ತಿರ್ಯಗ್‌ಜಂತುಗಳ ಯೋನಿಯಲ್ಲಿ ಮನುಷ್ಯಯೋನಿಯಲ್ಲಿ—ಈ ಯೋನಿಗಳಲ್ಲಿ ಭ್ರಾಮ್ಯಮಾಣಸ್ಯ=ಅಲೆಯುತ್ತಿರುವ (ಹುಟ್ಟುತ್ತಿರುವ) ಜೀವನಿಗೆ ಕಸ್ಮಿನ್ ಜನ್ಮನಿ=ಯಾವ ಜನ್ಮದಲ್ಲಿ ಅಮೀ=ಇವರು ಪಿತರಃ=ತಂದೆಗಳು ಮಾತರಃ=ತಾಯಂದಿರು ಅಭವನ್=ಆಗಿರುವರು. ಇಲ್ಲಿ ಜೀವನು ಅದೇ ಶರೀರವನ್ನು ಪ್ರವೇಶಿಸಿಯಾಗಲೀ ಅಥವಾ ಅಂತರಾಳದಲ್ಲಿ ಪ್ರೇತಶರೀರದಲ್ಲಿ ಇದ್ದಾಗಲಿ ಮಾತನಾಡಿದನೆಂದು ತಿಳಿಯಬೇಕು. || ೪ ||

ಬಂಧು ಜ್ಞಾತ್ಯರಿ ಮಧ್ಯಸ್ಥ ಮಿತ್ರೋದಾಸೀನ ವಿದ್ವಿಷಃ ।
ಸರ್ವ ಏವ ಹಿ ಸರ್ವೇಷಾಂ ಭವಂತಿ ಕ್ರಮಶೋ ಮಿಥಃ || ೫ ||

ನಾನು ಸತ್ತರೆ ಮಗನೆಂದು ದುಃಖವಾಗುವುದಾದರೆ ಶತ್ರುವೆಂದು ಸಂತೋಷವೇಕೆ ಆಗುತ್ತಿಲ್ಲ? ಎಂಬ ಅಭಿಪ್ರಾಯದಿಂದ ಸಂಬಂಧವು ಅನಿತ್ಯವೆಂದು ಹೇಳುತ್ತಾರೆ. ಹಿ=ಏಕೆಂದರೆ, ಸರ್ವೇಷಾಂ=ಎಲ್ಲರಿಗೂ ಸರ್ವೇ=ಎಲ್ಲರೂ ಕ್ರಮಶಃ=ಕ್ರಮವಾಗಿ ಮಿಥಃ=ಪರಸ್ಪರ ಬಂಧು=ಮದುವೆ ಮೊದಲಾದವುಗಳಿಂದ ಸಂಬಂಧಿಗಳಾಗಲಿ, ಜ್ಞಾತಿ=ಸಪಿಂಡರಾದ ದಾಯಾದಿಗಳಾಗಲಿ, ಅರಿ=ಬಂಧ ಮೊದಲಾದವುಗಳಿಗೆ ಕಾರಣರಾದ ಶತ್ರುಗಳಾಗಲಿ ಮಧ್ಯಸ್ಥ=ಮಾಡಬೇಕಾದ ಉಪಕಾರ ಅಥವಾ ಅಪಕಾರವನ್ನು ಮಾಡುವವರಾಗಿಯಾಗಲಿ ಮಿತ್ರ=ತಾವೇ ಕಷ್ಟಪರಿಸ್ಥಿತಿಯನ್ನು ತಿಳಿಸಿ ಉಪಕಾರ ಮಾಡುವರಾಗಿಯಾಗಲಿ, ಉದಾಸೀನ-ಉಪಕಾರದಲ್ಲಿ ಅಥವಾ ಅಪಕಾರದಲ್ಲಿ ಉದಾಸೀನ ಮಾಡುವವರಾಗಿಯಾಗಲಿ ವಿದ್ವಿಷಃ=ಅನಿಷ್ಟವನ್ನು ಮಾಡುವವರಾಗಿಯಾಗಲಿ ಭವಂತಿ ಏವ=ಆಗಿಯೇ ಆಗುವರು. 'ದ್ವೇಷ್ಯೋಽವಾಸಿತಂ ಕೃತ್ವಾಽಯಂ ಮಾತ್ರಕಾರೀ ತು ಮಧ್ಯಮಃ। ಪ್ರಿಯಕೃತ್ ಪ್ರಿಯೋ ನಿರೂಪ್ಯಾಪಿ-ಕ್ಲೇಶಂ ಯಃ ಪರಿರಕ್ಷತಿ । ಸ ಮಿತ್ರಂ, ಉಪಕಾರಂ ತ್ವನಪೇಕ್ಷ್ಯೋಪಕಾರಕೃತ್ । ಯಸ್ತತಃ ಸುಹೃತ್ ಪ್ರೋಕ್ತಃ ಶತ್ರುಶ್ಚಾಪಿ ವಧಾದಿಕೃತ್ ||' ಹೀಗೆ ದ್ವೇಷ್ಯಾದಿಗಳ ಲಕ್ಷಣಗಳನ್ನು ಹೇಳಿರುವರು. || ೫ ||

ಯಥಾ ವಸ್ತೂನಿ ಪಣ್ಯಾನಿ ಹೇಮಾದೀನಿ ತತಸ್ತತಃ ।
ಪರ್ಯಟಂತಿ ನರೇಷ್ವೇವಂ ಜೀವೋ ಯೋನಿಷು ಕರ್ತೃಷು || ೬ ||

ಕರ್ಮ ಫಲವಾಗಿ ಬೇರೆ ಬೇರೆ ಯೋನಿಗಳಲ್ಲಿ ಸಂಚರಿಸುವ ವಿಷಯದಲ್ಲಿ ಉದಾಹರಣೆ ಕೊಡುತ್ತಾರೆ. ಯಥಾ = ಹೇಗೆ ಪಣ್ಯಾನಿ = ಮಾರಾಟಕ್ಕಿರುವ

ಇರುತ್ತಾನೆ. ಅವನಿಗೆ ಇವರು ಯಾವ ಜನ್ಮದಲ್ಲಿ ತಂದೆತಾಯಿಗಳು ! ಎಲ್ಲ ಜೀವರೂ ಇತರ ಜೀವರಿಗೆ ಕ್ರಮವಾಗಿ ಬಂಧುಗಳೋ, ಜ್ಞಾತಿಗಳೋ, ಶತ್ರುಗಳೋ, ಮಧ್ಯಸ್ಥರೋ, ಸ್ನೇಹಿತರೋ, ಉದಾಸೀನರೋ, ದ್ವೇಷಿಗಳೋ ಆಗಿಯೇ ಆಗಿರುತ್ತಾರೆ. ಮಾರಾಟಕ್ಕಿರುವ ಬಂಗಾರ ಮೊದಲಾದ ವಸ್ತುಗಳು ಕೊಳ್ಳುವವರಲ್ಲಿ ಒಬ್ಬರಿಂದೊಬ್ಬರಿಗೆ ಬದಲಾಗುತ್ತಿರುವಂತೆ ಜೀವರು ರೇತಸ್ಸೇಚನ ಮಾಡುವ ತಂದೆಯಿಂದ ತಾಯಿಯ

ಹೇಮಾದೀನಿ = ಬಂಗಾರ ಮೊದಲಾದ ವಸ್ತೂನಿ = ಪದಾರ್ಥಗಳು ನರೇಷು = ವ್ಯವಹರಿಸುವ ಜನರಲ್ಲಿ ತತಸ್ತತಃ=ಒಬ್ಬರಿಂದ ಮತ್ತೊಬ್ಬರಿಗೆ ಪರ್ಯಟಂತಿ= ವ್ಯವಹಾರಕ್ಕೆ ವಿಷಯವಾಗುವುವೋ ಏವಂ=ಹಾಗೆ ಜೀವಃ=ಜೀವರು ಕರ್ತೃಷು= ರೇತಸ್ಸನ್ನು ಸುರಿಸುವ ತಂದೆ ಮೊದಲಾದ ಕರ್ತೃಗಳ ಯೋನಿಷು=ಹಡೆಯುವ ತಾಯಂದಿರ ಜಾತಿಗಳಲ್ಲಿ ಪರ್ಯಟಂತಿ=(ಹುಟ್ಟುವರು)ಸಂಚರಿಸುವರು. || ೬ ||

ನಿತ್ಯಸ್ಯಾರ್ಥಸ್ಯ ಸಂಬಂಧೋ ಹ್ಯನಿತ್ಯೋ ದೃಶ್ಯತೇ ನೃಷು ।
ಯಾವದ್ಯಸ್ಯ ಹಿ ಸಂಬಂಧೋ ಮಮತ್ವಂ ತಾವದೇವ ಹಿ ॥ ೭ ॥

ಹಾಗಾದರೆ ಬಂಗಾರದಂತೆ ಜೀವನೂ ಅನಿತ್ಯನಾಗಬೇಕಾಯಿತು ಎಂದಾ ಶಂಕಿಸಿ ಸಂಬಂಧವು ಅನಿತ್ಯವೇ ಹೊರತು ಜೀವನು ಅನಿತ್ಯನಲ್ಲವೆಂದು ಹೇಳುತ್ತಾರೆ. ಯಥಾ=ಹೇಗೆ ನಿತ್ಯಸ್ಯ=ಬದುಕಿರುವ ಅರ್ಥಸ್ಯ=ಪಶು ಮೊದಲಾದವುಗಳ, ಬಹುಕಾಲವಿರುವ ಮನೆ ಮೊದಲಾದವುಗಳ, ಸಂಬಂಧಃ = ಸಂಬಂಧವು (ಸ್ವಾಮಿತ್ವವು) ನೃಷು=ಮನುಷ್ಯರಲ್ಲಿ ಅನಿತ್ಯಃ=ಕೆಲವು ಕಾಲ ಮಾತ್ರ (ಮಾರುವ ವರೆಗೂ) ಇರುವುದಾಗಿ ದೃಶ್ಯತೇ ಹಿ = ಕಂಡುಬರುವುದೋ ಹೇಗೆ ಸಂಬಂಧ ಅನಿತ್ಯವೋ ಹಾಗೆ ನನ್ನ ಮಗನೆಂಬ ಮಮತೆಯೂ ಅನಿತ್ಯವೆಂದು ಹೇಳುತ್ತಾರೆ. ಯಸ್ಯ=ಯಾವನಿಗೆ ಸಂಬಂಧವು ಯಾವತ್=ಎಲ್ಲಿಯವರೆಗೋ ತಾವತ್ ಏವ= ಅಷ್ಟೇ ಕಾಲವೇ ಮಮತ್ವಂ=ಮಮತೆಯು ಹಿ=ಅಲ್ಲವೇ ! ಮಾರಿದಮೇಲೆ ಸಂಬಂಧ ತಪ್ಪಿ ಮಮತೆಯೂ ತಪ್ಪಿಹೋಗುವುದೆಂದರ್ಥ. ಎರಡು 'ಹಿ' ಶಬ್ದಗಳಿಂದ ಇದು ಪ್ರತ್ಯಕ್ಷ ಪ್ರಮಾಣಸಿದ್ಧವೆಂದು ತಿಳಿಸಿರುವರು. ಏವಕಾರದಿಂದ ನಂತರ ಮಮತೆಯು ಸಂಬಂಧವಿಲ್ಲವೆಂದು ಸೂಚಿಸಿರುವರು. ಅದೇ ಜನ್ಮದಲ್ಲಿಯೂ ಸಂಬಂಧವು ಅನಿತ್ಯ ವೆಂದು ಹೇಳಿದಂತಾಯಿತು. || ೭ ||

ಏವಂ ಯೋನಿಗತೋ ಜೀವಃ ಸ ನಿತ್ಯೋ ನಿರಹಂಕೃತಃ ।
ಯಾವದ್ಯತ್ರೋಪಲಭ್ಯೇತ ತಾವತ್ಸ್ವತ್ವಂ ಹಿ ತಸ್ಯ ತತ್ ॥ ೮ ॥

ಏವಂ=ಹೀಗೆ ಯೋನಿಗತಃ (ಅಪಿ)=ಬೇರೆ ಬೇರೆ ಜನ್ಮಗಳಲ್ಲಿ ಬಂದಿದ್ದರೂ ನಿರಹಂಕೃತಃ=ಸ್ವಾಭಾವಿಕವಾಗಿ ದೇಹಾಭಿಮಾನವಿಲ್ಲದ (ದೇಹದೊಂದಿಗೆ ಜೀವನೂ

ಯೋನಿಯಲ್ಲಿ ಬಂದು ಆಯಾಯಾ ಜಾತಿಗಳಲ್ಲಿ ಸಂಚರಿಸುತ್ತಿರುತ್ತಾರೆ (ಹುಟ್ಟುತ್ತಿರು ತ್ತಾರೆ). ಜೀವಂತವಾದ ಪಶು ಮೊದಲಾದವುಗಳ ಸಂಬಂಧವು ಮನುಷ್ಯರಿಗೆ ಹೇಗೆ ಕೆಲವು ಕಾಲದ್ದು ಮಾತ್ರವೆಂದೇ ಕಂಡುಬಂದಿರುವುದೋ ಅದರಂತೆ ದೇಹಸಂಬಂಧಿ ಗಳಲ್ಲಿನ ಮಮತೆಯೂ ದೇಹಸಂಬಂಧವಿರುವವರೆಗೆ ಮಾತ್ರವೇ ಇರುವುದು ಕಂಡು ಬಂದಿರುವುದು. ಹೀಗೆ ಬೇರೆ ಬೇರೆ ಯೋನಿಗಳಲ್ಲಿ ಬಂದಿದ್ದರೂ ಸ್ವಾಭಾವಿಕವಾಗಿ ದೇಹಾಭಿಮಾನವಿಲ್ಲದ ಜೀವನು ನಿತ್ಯನಾಗಿರುವನು. ಆಯಾಯಾ ಜನ್ಮದಲ್ಲಿ

ಉತ್ಪನ್ನನಾಗುವುದಿಲ್ಲವಾಗಿ ವಸ್ತುತಃ ಅವನಿಗೆ ನನ್ನ ದೇಹವೆಂಬ ಅಭಿಮಾನವಿಲ್ಲವೆಂದರ್ಥ। ಸಃ ಜೀವಃ=ಆ ಜೀವನು ನಿತ್ಯನು. ಯತ್ರ=ಯಾವ ಯೋನಿಯಲ್ಲಿ ಯಾವತ್ ಉಪಲಭ್ಯೇತ = ಕರ್ಮವಶದಿಂದ ಎಷ್ಟು ಕಾಲ ಸಂಬಂಧವಿರುವುದೋ ತಾವತ್=ಅಷ್ಟು ಕಾಲವೇ ತಸ್ಯ=ಆ ಜೀವನಿಗೆ ತತ್=ಆ ಜನ್ಮದಲ್ಲಿ ಸ್ವತ್ವಂ ಹಿ=ತನ್ನದೆಂಬ ಅಭಿಮಾನವು. ಮರಣಾನಂತರ ಆ ಅಭಿಮಾನವಿಲ್ಲವೆಂದರ್ಥ. ಇದು ಅನುಭವಸಿದ್ಧ. ಅಥವಾ 'ಕಲೇವರಂ ಸ್ವಂ ಆವಿಶ್ಯ' ಎಂದು ಹೇಳಿದ್ದಕ್ಕೆ ಈ ಎರಡು ಶ್ಲೋಕಗಳಿಂದ ನನಗೆ ಆ ದೇಹದಲ್ಲಿ ಈಗ ಅಭಿಮಾನವಿಲ್ಲವೆಂದು ಉತ್ತರಕೊಟ್ಟಿರುವನೆಂದಾದರೂ ಅರ್ಥ. || ೮ ||

ಏಷ ನಿತ್ಯೋಽವ್ಯಯಃ ಸೂಕ್ಷ್ಮ ಏಕಃ ಸರ್ವಾಶ್ರಯಃ ಸ್ವದೃಕ್ ।
ಆತ್ಮಮಾಯಾಗುಣೈರ್ವಿಶ್ವಮಾತ್ಮಾನಂ ಸೃಜತೇ ಪ್ರಭುಃ ॥ ೯ ॥

ಹಾಗಾದರೆ ಈ ಜೀವನಿಗೆ ಯಾರೊಡನೆ ನಿತ್ಯಸಂಬಂಧವೆಂದರೆ ಹೇಳುತ್ತಾರೆ. (ಯಃ)=ಯಾವನು ಆತ್ಮಮಾಯಾಗುಣೈಃ = ತನ್ನ ಅಧೀನವಾದ ಪ್ರಕೃತಿಯ ಸತ್ವಾದಿ ಗುಣಗಳಿಂದ ವಿಶ್ವಂ=ಪರಾವರ ಜಗತ್ತನ್ನು ಸೃಜತೇ=ಸೃಷ್ಟಿಸುವನೋ ಆತ್ಮಾನಂ = ತನ್ನನ್ನು ಅವತಾರರೂಪಗಳಿಂದ ಸೃಜತೇ = ವ್ಯಕ್ತಪಡಿಸುವನೋ ಏಷಃ=ಈ ನಿತ್ಯಃ = ಶಾಶ್ವತನಾದ ಅವ್ಯಯಃ = ಚತುರ್ವಿಧ ನಾಶರಹಿತನಾದ ಸೂಕ್ಷ್ಮಃ=ಅತ್ಯಂತ ಸೂಕ್ಷ್ಮನಾದ ಏಕಃ=ಜೀವರಂತೆ ಅನೇಕ ಸಂಖ್ಯಾವಿಶಿಷ್ಟನಲ್ಲದೆ ಸ್ವಗತಭೇದಶೂನ್ಯನಾಗಿ ಒಬ್ಬನೇ ಆಗಿರುವ ಸ್ವದೃಕ್=ಯಾವಾಗಲೂ ತನ್ನ ಜ್ಞಾನದಿಂದ ಕೂಡಿರುವ ಸ್ವತಂತ್ರ ಜ್ಞಾನವುಳ್ಳ ಪ್ರಭುಃ=ಆದ್ದರಿಂದಲೇ ಅತ್ಯಂತ ಸಮರ್ಥನಾದ ಶ್ರೀಹರಿಯು ಸರ್ವಾಶ್ರಯಃ=ಎಲ್ಲರಿಗೂ ಆಶ್ರಯನು. ಎಲ್ಲರೊಡನೆ ಎಲ್ಲ ಕಾಲದಲ್ಲಿಯೂ ಸಂಬಂಧವುಳ್ಳವನೆಂದರ್ಥ. ಅನಿತ್ಯನಾಗಿದ್ದಲ್ಲಿ ನಿತ್ಯಸಂಬಂಧವು ಹೇಗೆ ಕೂಡುವುದೆಂಬ ಶಂಕೆಯನ್ನು ನಿತ್ಯಶಬ್ದದಿಂದ ಪರಿಹರಿಸಿರುವರು. ಅದರ ಅರ್ಥವೇ ಅವ್ಯಯ ಪದದಿಂದ ವಿವೃತವಾಗಿರುವುದು. ಹಾಗಾದರೆ ಅವನೇಕೆ ಕಾಣುತ್ತಿಲ್ಲವೆಂದರೆ ಸೂಕ್ಷ್ಮನೆಂದಿರುವರು. ಏಕಃ ಎಂಬುದರಿಂದ ಜೀವರಂತೆ ಪಾರಮಾರ್ಥಿಕವಾಗಿ ಬಹುತ್ವ ವಿಶಿಷ್ಟನಲ್ಲವೆಂದು ತಿಳಿಸಿರುವರು. ಸ್ವದೃಕ್

ಕರ್ಮಾನುಗುಣವಾಗಿ ದೇಹಸಂಬಂಧವಿರುವಷ್ಟು ಕಾಲ ಮಾತ್ರ ಅವನಿಗೆ ಆ ದೇಹದಲ್ಲಿ ತನ್ನದೆಂಬ ಅಭಿಮಾನವು ಇರುವುದು. (ದೇಹ ವಿಯೋಗವಾದ ಮೇಲೆ ಅಭಿಮಾನವಿರುವುದಿಲ್ಲ. ಆದ್ದರಿಂದ ನನಗೆ ದೇಹದಲ್ಲಿ ಈಗ ಅಭಿಮಾನವಿಲ್ಲ.) ಜೀವನಿಗೆ ನಿತ್ಯಸಂಬಂಧವಿರುವುದು ಶ್ರೀಹರಿಯೊಂದಿಗೆ. ಏಕೆಂದರೆ, ಶ್ರೀಹರಿಯು ತನ್ನ ಅಧೀನವಾದ ಪ್ರಕೃತಿಯ ಸತ್ವ ಮೊದಲಾದ ಗುಣಗಳಿಂದ ಈ ಜಗತ್ತನ್ನು ಸೃಷ್ಟಿಸುವನು. ಅವತಾರ ರೂಪಗಳಿಂದ ವ್ಯಕ್ತನಾಗುವನು. ಇವನು ಶಾಶ್ವತನೂ ಚತುರ್ವಿಧ ನಾಶರಹಿತನೂ ಸೂಕ್ಷ್ಮತಮನೂ ಸ್ವಗತಭೇದರಹಿತನೂ ತನ್ನ ಜ್ಞಾನ

ಎಂಬುದರಿಂದ ಸೃಷ್ಟಿಯಲ್ಲಿ ತೊಡಗಿದರೂ ಸೃಜ್ಯರ ಸಂಬಂಧದಿಂದ ಅವನ ಜ್ಞಾನವು ತಿರೋಹಿತವಾಗುವುದಿಲ್ಲವೆಂದು ಹೇಳಿರುವರು. ಸ್ವರೂಪವಾಗಿರುವ ಜ್ಞಾನಕ್ಕೂ ಪ್ರಬಲ ಪ್ರತಿಬಂಧಕದಿಂದ ಅಭಿಭವವು (ತಿರೋಭಾವವು) ಏಕಾಗಬಾರದು? ಎಂಬುದಕ್ಕೆ ಉತ್ತರ 'ಪ್ರಭು' ಎಂದು. ಇದರಿಂದ ಶ್ರೀಹರಿಯೊಡನೆ ಜೀವನಿಗೆ ನಿತ್ಯಸಂಬಂಧ; ತಂದೆ ಮುಂತಾದವರೊಡನೆ ಅನಿತ್ಯಸಂಬಂಧವೆಂದು ತಿಳಿಸಿದಂತಾಯಿತು. 'ಅನಿತ್ಯಸಂಬಂಧಯುತಾಃ ಪಿತ್ರಾದ್ಯಾ, ನಿತ್ಯಯುಗ್ಘರಿಃ ||' || ೯ ||

ನ ಹ್ಯಸ್ಯಾತಿಪ್ರಿಯಃ ಕಶ್ಚಿನ್ನಾಪ್ರಿಯಃ ಸ್ವಃ ಪರೋಽಪಿ ವಾ ।
ಏಕಃ ಸರ್ವಧಿಯಾಂ ದ್ರಷ್ಟಾ ಕರ್ತೄಣಾಂ ಗುಣದೋಷಯೋಃ ||

ಇಂತಹ ಶ್ರೀಹರಿಗೆ ಅವರವರ ಯೋಗ್ಯತೆಗೆ ಮೀರಿ ಯಾರೂ ಪ್ರಿಯರಾಗಲಿ ಅಪ್ರಿಯರಾಗಲಿ ಇಲ್ಲವೆಂದು ಹೇಳುತ್ತಾರೆ— ಅಸ್ಯ=ಈ ಶ್ರೀಹರಿಗೆ ಕಶ್ಚಿತ್=ಯಾವನೂ ಅತಿಪ್ರಿಯಃ-ತನ್ನ ಯೋಗ್ಯತೆಗೆ ಮೀರಿ ಪ್ರಿಯನಾದವನು ನ ಹಿ=ಇಲ್ಲವು. ಹಾಗೆಯೇ ಅತಿ ಅಪ್ರಿಯಃ=ತನ್ನ ಯೋಗ್ಯತೆಗೆ ಮೀರಿ ಅಪ್ರಿಯನಾದವನೂ ನ ಹಿ=ಇಲ್ಲವು. ವಾ=ಮತ್ತು ಸ್ವಃ=ತನ್ನವನೂ ಪರಃ ಅಪಿ=ತನ್ನವನಲ್ಲದವನೂ ಯಾರೂ ನ ಹಿ=ಇಲ್ಲವು. ಅತಿಪ್ರಿಯರೇ ಮೊದಲಾದವರು ಏಕೆ ಇಲ್ಲ? ಎಂದರೆ ಹೇಳುತ್ತಾರೆ— ಗುಣದೋಷಯೋಃ=ಒಳ್ಳೆಯದು ಕೆಟ್ಟದ್ದು-ಇವುಗಳ ಕರ್ತೄಣಾಂ=ಕರ್ತಾರರಾದ ಪುರುಷರ ಮತ್ತು ಸ್ತ್ರೀಯರ ಸರ್ವಧಿಯಾಂ-ಸರ್ವ ಬುದ್ಧಿಗಳ ದ್ರಷ್ಟಾ=ಸಾಕ್ಷಿಯಾದ ಶ್ರೀಹರಿಯು ಏಕಃ-ಏಕಪ್ರಕಾರನು. ಒಬ್ಬನೇ. ಅಂತಹವರು ಮತ್ತೊಬ್ಬರಿಲ್ಲ. ಎಲ್ಲರ ಪುಣ್ಯಪಾಪಗಳ ಸಾಕ್ಷಿಯಾದ್ದರಿಂದ ಅದಕ್ಕನುಸಾರವಾಗಿ ಫಲಕೊಡುವನಾದ್ದರಿಂದ ಅತಿಪ್ರಿಯರಾಗಲಿ ಅತ್ಯಪ್ರಿಯರಾಗಲಿ ಸ್ವಕೀಯರಾಗಲಿ ಪರಕೀಯರಾಗಲಿ ಇಲ್ಲವೆಂದರ್ಥ. ಇಂತಹವನು ಮತ್ತೊಬ್ಬನಿದ್ದರೆ ಅವನ ಹೆದರಿಕೆಯಿಂದ ಯಾರೊಬ್ಬರಲ್ಲಿಯಾದರೂ, ಅತಿಪ್ರಿಯತೆಯನ್ನು ಮಾಡಬಹುದಲ್ಲಾ ಎಂದರೆ ಅದಕ್ಕೂ ಅವಕಾಶವಿಲ್ಲವೆಂಬುದನ್ನು 'ಏಕಃ' ಎಂಬುದರಿಂದ ತಿಳಿಸಿರುವರು. ಸರ್ವಸಮನಾದ ಶ್ರೀಹರಿಗೆ ಶತ್ರು ಮಿತ್ರರೆಂಬ ಭಾವನೆಯಿಲ್ಲ. ಆದರೂ ಜೀವರ ಅನಾದಿ ಯೋಗ್ಯತಾಕರ್ಮಾನುಸಾರ ಅವರವರಿಗೆ ಫಲದಾತನಾದ್ದರಿಂದ ಕಂಸನು ಶತ್ರು, ಪಾಂಡವರು ಬಂಧುಗಳು ಇತ್ಯಾದಿ ವ್ಯವಹಾರವು ಕೂಡುವುದೆಂದರ್ಥ. || ೧೦ ||

ದಿಂದ ಕೂಡಿದವನೂ ಪ್ರಭುವೂ ಆಗಿ ಎಲ್ಲರಿಗೂ ಆಶ್ರಯನಾಗಿರುವನು. ಇವನಿಗೆ ಯಾವನೂ ತನ್ನ ಯೋಗ್ಯತೆಗೆ ಮೀರಿ ಪ್ರಿಯನಾಗುವುದಿಲ್ಲ. ಯೋಗ್ಯತೆಗೆ ಮೀರಿ ಅಪ್ರಿಯನೂ ಆಗುವುದಿಲ್ಲ. ತನ್ನವನು ಅಥವಾ ಪರನು ಎನಿಸುವುದಿಲ್ಲ. ಶ್ರೀಹರಿಯು ಪುಣ್ಯ ಪಾಪಕರ್ತರಾದ ಸ್ತ್ರೀ ಪುರುಷರ ಎಲ್ಲ ಬುದ್ಧಿ ವ್ಯಾಪಾರಗಳನ್ನೂ ಸಾಕ್ಷಿಸ್ಥನಾಗಿ ಕಾಣುತ್ತಿರುವನು. ಆದ್ದರಿಂದ ಏಕಪ್ರಕಾರನಾಗಿ ಅದ್ವಿತೀಯನಾಗಿರುವನು.

ನಾದತ್ತ ಆತ್ಮಾ ಹಿ ಗುಣಂ ನ ದೋಷಂ ನ ಕ್ರಿಯಾಫಲಮ್ ।
ಉದಾಸೀನ ಇವಾಸೀನಃ ಪರಾವರದೃಗೀಶ್ವರಃ ॥ ೧೧ ॥

ಶ್ರೀಹರಿಯು ಸಾಕ್ಷಿ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಹಿ=ಯಾವ ಕಾರಣದಿಂದ ಆತ್ಮಾ=ಪರಮಾತ್ಮನು ಉದಾಸೀನಃ ಇವ=ಎಲ್ಲಕ್ಕಿಂತಲೂ ಉತ್ತಮನಾಗಿದ್ದುಕೊಂಡೇ ಆಸೀನಃ=ಆಯಾಯಾ ವಸ್ತುಗಳಲ್ಲಿ ಒಳಗೂ ಹೊರಗೂ ಇದ್ದುಕೊಂಡು ಪರಾವರದೃಕ್=ಉತ್ತಮಾಧಮ ಜಗತ್ತನ್ನು ನೋಡುತ್ತಿರುವನೋ ಪರಾಪರ ಎಂಬ ಪಾಠದಲ್ಲಿ ಕಳೆದ ಮತ್ತು ಮುಂದೆ ಆಗಲಿರುವ ಜಗತ್ತನ್ನು ನೋಡುವನೋ ಈಶ್ವರಃ=ಸರ್ವನಿಯಾಮಕನೋ ಆ ಕಾರಣದಿಂದ ಗುಣಂ=ಶುಭವಿಷಯವನ್ನು ನ ಆದತ್ತೇ=ಅನುಭವಿಸುತ್ತಿಲ್ಲ. ಲೋಕರಂತೆ ಆದರಿಂದ ವೃದ್ಧಿಯನ್ನು ಹೊಂದುತ್ತಿಲ್ಲ. ದೋಷಂ=ಅಶುಭವಿಷಯವನ್ನು ನ ಆದತ್ತೇ=ಸರ್ವಥಾ ಅನುಭವಿಸುತ್ತಿಲ್ಲ. ಕ್ರಿಯಾಫಲಂ = ಕರ್ಮಫಲವನ್ನು ನ ಆದತ್ತೆ = ಹೊಂದುತ್ತಿಲ್ಲ. ಪುಣ್ಯಪಾಪಗಳ ಲೇಪವಿಲ್ಲವೆಂದರ್ಥ. ವಿ.ಅ. 'ಷಾಡ್ಗುಣ್ಯಕಂ ಜಘ್ನತಿ ಷಡ್ಗುಣೇಶಃ' ಎಂದಿರುವಾಗ ಗುಣೋಪಭೋಗವಿಲ್ಲವೆಂಬುದು ಹೇಗೆ? ಎಂದರೆ ಸರ್ವಥಾ ಅನುಭವವಿಲ್ಲವೆಂದಲ್ಲ. ಮತ್ತೇನೆಂದರೆ, ತತ್ಪ್ರಯುಕ್ತವಾದ ವೃದ್ಧಿ ಮೊದಲಾದವು ಇಲ್ಲವಾದ್ದರಿಂದ ಅಭೋಕ್ತನೆನಿಸುವನು ಎಂದು ತಿಳಿಯಬೇಕು. 'ಭೋಕ್ತಾ ಸದ್ಗುಣಭೋಕ್ತೃತ್ವಾತ್, ನ ಭೋಕ್ತಾ ತದವೃದ್ಧಿತಃ । ಅಚಿಂತ್ಯಶಕ್ತಿತಸ್ತಚ್ಚ ಯುಜ್ಯತೇ ಪರಮೇಶಿತುಃ ॥' ಎಂಬ ಪ್ರಮಾಣವು ಮೇಲಿನ ಪ್ರಮೇಯವನ್ನು ಸಮರ್ಥಿಸುವುದು. ಅಭೋಕ್ತನೆಂದೇ ಅರ್ಥಮಾಡಿದಲ್ಲಿ ಈ ಪ್ರಮಾಣವಿರೋಧವು ತಪ್ಪಿದ್ದಲ್ಲ. ಲೋಕದಲ್ಲಿ ವಿರುದ್ಧವೆಂದು ಕಂಡುಬಂದಿರುವ ಭೋಕ್ತೃತ್ವ ಮತ್ತು ಅಭೋಕ್ತೃತ್ವಗಳು ಒಬ್ಬನೇ ಶ್ರೀಹರಿಯಲ್ಲಿ ಹೇಗೆ? ಎಂದರೆ ಅಚಿಂತ್ಯಶಕ್ತಿಯುಳ್ಳವನಾದ್ದರಿಂದ ಎಂದು ತಿಳಿಸಲು ಈಶ್ವರನೆಂಬ ವಿಶೇಷಣವನ್ನು ಕೊಟ್ಟಿರುವರು. 'ಆಸೀನಃ' ಎಂಬುದರಿಂದ ಋಷಿಗಳಂತೆ 'ಪರಾವರದೃಕ್' ಅಲ್ಲವೆಂದು ತಿಳಿಸಿರುವರು. 'ಉದಾಸೀನ' ಎಂಬುದಕ್ಕೆ ಉದಾಸೀನ ಪುರುಷನಂತೆ ಸೃಷ್ಟಿ ಮೊದಲಾದವುಗಳಲ್ಲಿ ಅನಾದರದಿಂದ (ಅನಾಯಾಸದಿಂದ) ತೊಡಗಿರುವನೆಂದೂ ಅರ್ಥಮಾಡಿರುವರು. ಆದ್ದರಿಂದಲೇ ಇವನಿಗೆ ಕರ್ಮಬಂಧವಿಲ್ಲವೆಂದರ್ಥ. ಹೀಗೆ ಮಹಾಮಹಿಮನಾಗಿದ್ದರೂ ಶ್ರೀಹರಿಯು ನಿತ್ಯವೂ ಜೀವನೊಂದಿಗೆ ಸಂಬದ್ಧನಾಗಿರುವುದರಿಂದ ಅವನೇ ತಂದೆ, ಮಗ, ಸ್ನೇಹಿತ ಮುಂತಾದ ರೀತಿಯಲ್ಲಿ ಸೇವಿಸಲ್ಪಡಬೇಕಾದವನು. ನಿಮ್ಮ ನಮ್ಮ ಸಂಬಂಧವು ಈಗ ಇಲ್ಲವಾಗಿ ದುಃಖಿಸಬೇಕಾದುದಿಲ್ಲವೆಂದು ಈ ಪ್ರಕರಣದ ಅಭಿಪ್ರಾಯ. ॥ ೧೧ ॥

ಶ್ರೀಹರಿಯು ಉತ್ತಮನಾಗಿದ್ದುಕೊಂಡೇ ಆಯಾಯಾ ವಸ್ತುಗಳ ಒಳಹೊರಗಿದ್ದು ಕಳೆದ ಮತ್ತು ಬರಲಿರುವ ಉತ್ತಮಾಧಮ ಜಗತ್ತನ್ನು ನೋಡುತ್ತಿರುವನು. ಸರ್ವನಿಯಾಮಕನು. ಆದ್ದರಿಂದ ಶುಭ ವಿಷಯಾನುಭವದಿಂದ ಅವನಿಗೆ ವೃದ್ಧಿಯಿಲ್ಲ. ಅಶುಭದ ಅನುಭವವೇ ಅವನಿಗಿಲ್ಲ. ಕರ್ಮಲೇಪವಿಲ್ಲ.' ಎಂದು ನುಡಿದು ಹೊರಟು

ಶ್ರೀ ಶುಕ ಉವಾಚ—

ಇತ್ಯುದೀರ್ಯ ಗತೋ ಜೀವೋ ಜ್ಞಾತಯಸ್ತಸ್ಯ ತೇ ತದಾ ।
ವಿಸ್ಮಿತಾ ಮುಮುಚುಃ ಶೋಕಂ ಛಿತ್ವಾಽಽತ್ಮಸ್ನೇಹಶೃಂಖಲಾಮ್ ॥

ಜೀವಃ=ಋಷಿಗಳ ಯೋಗಸಾಮರ್ಥ್ಯದಿಂದ ಮರಳಿ ಬಂದಿದ್ದ ಆ ಜೀವನು ಇತಿ ಉದೀರ್ಯ=ಮೇಲೆ ಹೇಳಿದಂತೆ ಮಾತನಾಡಿ ಗತಃ=ಹೊರಟುಹೋದನು. ತದಾ=ಆಗ ತಸ್ಯ=ಆ ಜೀವನ ತೇ ಜ್ಞಾತಯಃ=ಆ ಜನ್ಮದ ದಾಯಾದಿಗಳು (ಸಪಿಂಡರು) ವಿಸ್ಮಿತಾಃ (ಸಂತಃ)=ಆಶ್ಚರ್ಯಗೊಂಡವರಾಗಿ ಆತ್ಮಸ್ನೇಹ-ಶೃಂಖಲಾಂ=ತಮಗೆ ಆ ಶರೀರಿಯಲ್ಲಿದ್ದ (ಮಗನಲ್ಲಿದ್ದ) ಸ್ನೇಹವೆಂಬ ಸರಪಳಿಯನ್ನು ಛಿತ್ವಾ=ಕತ್ತರಿಸಿ (ಸ್ನೇಹವನ್ನು ಬಿಟ್ಟು) ಶೋಕಂ=ದುಃಖವನ್ನು ಮುಮುಚುಃ= ಬಿಟ್ಟರು. ಸ್ನೇಹಂ ಎಂಬ ಪಾಠದಲ್ಲಿ ಸ್ನೇಹಕಾರ್ಯವಾದ ಶೋಕವನ್ನು ಎಂದರ್ಥ ಮಾಡಿಕೊಳ್ಳಬೇಕು. ॥ ೧೨ ॥

ನಿರ್ಹೃತ್ಯ ಜ್ಞಾತಯೋ ಜ್ಞಾತೇರ್ದೇಹಂ ಕೃತ್ವೋಚಿತಾಃ ಕ್ರಿಯಾಃ
ತತ್ಯಜುರ್ದುಸ್ತ್ಯಜಂ ಸ್ನೇಹಂ ಶೋಕಮೋಹಭಯಾರ್ತಿದಮ್ ॥

ಜ್ಞಾತಯಃ = ಸಪಿಂಡರು ಜ್ಞಾತೇಃ = ಸಪಿಂಡನಾದ ಅವನ ದೇಹವನ್ನು ನಿರ್ಹೃತ್ಯ=ಸುಟ್ಟು ಉಚಿತಾಃ ಕ್ರಿಯಾಃ=ಮರಣಕಾಲದಲ್ಲಿ ಮಾಡಬೇಕಾದ ಶ್ರಾದ್ಧ ಮೊದಲಾದ ಕರ್ಮಗಳನ್ನು ಕೃತ್ವಾ=ಮಾಡಿ ಶೋಕ, ಮೋಹ, ಭಯ ಮತ್ತು ದುಃಖವನ್ನುಂಟುಮಾಡುವ ಆದರೆ ದುಸ್ತ್ಯಜಂ= ಸಾಮಾನ್ಯವಾಗಿ ಬಿಡಲಾಗದ ಸ್ನೇಹಂ=ಆ ಪುತ್ರನಲ್ಲಿದ್ದ ಪ್ರೀತಿಯನ್ನು ತತ್ಯಜುಃ=ಬಿಟ್ಟರು. ॥ ೧೩ ॥

ಬಾಲಘ್ನ್ಯೋ ವ್ರೀಡಿತಾಸ್ತತ್ರ ಬಾಲಹತ್ಯಾಹತಪ್ರಭಾಃ ।
ಬಾಲಹತ್ಯಾವ್ರತಂ ಚೇರುರ್ಬ್ರಾಹ್ಮಣೈರ್ಯನ್ನಿರೂಪಿತಮ್ ।
ಯಮುನಾಯಾಂ ಮಹಾರಾಜ ಸ್ಮರಂತ್ಯೋ ದ್ವಿಜಭಾಷಿತಮ್ ॥

ಹೋದನು. ಆಗ ಆ ಜೀವನ ಆ ಜನ್ಮದ ದಾಯಾದಿಗಳು ಆಶ್ಚರ್ಯಚಕಿತರಾಗಿ ತಮಗೆ ಆ ಮಗುವಿನಲ್ಲಿದ್ದ ಸ್ನೇಹಪಾಶವನ್ನು ಕಿತ್ತೊಗೆದು ದುಃಖಪಡುವುದನ್ನು ಬಿಟ್ಟರು. ಜ್ಞಾತಿಯಾದ ಆ ಮಗುವಿನ ದೇಹವನ್ನು ಸುಟ್ಟು ಪ್ರೇತಕಾರ್ಯಗಳನ್ನು ಮುಗಿಸಿ ಶೋಕ, ಮೋಹ, ಭಯ ಮತ್ತು ದುಃಖಗಳಿಗೆ ಕಾರಣವಾದ ಆದರೆ ಸುಲಭವಾಗಿ ಬಿಡಲಾಗದ ಆ ಪುತ್ರಸ್ನೇಹವನ್ನು ತೊರೆದರು. ಪರೀಕ್ಷಿದ್ರಾಜ! ಶಿಶುಹತ್ಯೆ ಮಾಡಿದ ಆ ಸವತಿಯರು ಆಗ ತಮ್ಮ ಅಕಾರ್ಯಕ್ಕಾಗಿ ತಾವೇ ನಾಚಿದರು. ಶಿಶುಹತ್ಯೆಯಿಂದ ಅವರ ಮುಖಗಳು ಕಾಂತಿಯನ್ನು ಕಳೆದುಕೊಂಡಿದ್ದುವು. ಅಂಗೀರಸರು ಹೇಳಿದ್ದ 'ಸುಖದುಃಖಪ್ರದನಾದ ಪುತ್ರ'ನೆಂಬ ಮಾತನ್ನು ನೆನೆಸಿಕೊಂಡರು. ಧರ್ಮಜ್ಞರೂ ಬ್ರಹ್ಮಜ್ಞಾನಿಗಳೂ ಆದ ಬ್ರಾಹ್ಮಣರನ್ನು ಕೇಳಿ

ಮಹಾರಾಜ=ಪರೀಕ್ಷಿದ್ರಾಜನೇ, ತತ್ರ=ಆ ಕಾಲದಲ್ಲಿ ವ್ರೀಡಿತಾಃ=ನಾಚಿಕೆಗೊಂಡ (ತಮ್ಮ ಅಕಾರ್ಯಕ್ಕಾಗಿ) ಬಾಲಹತ್ಯಾದಿಂದ ನಷ್ಟವಾದ ಮುಖಕಾಂತಿಯುಳ್ಳ ಬಾಲಘ್ನ್ಯಃ=ಮಗುವನ್ನು ವಿಷಹಾಕಿ ಕೊಂದ ಸವತಿಯರು ದ್ವಿಜಭಾಷಿತಂ=ಅಂಗೀರಸರು ಹೇಳಿದ ಪುತ್ರನು ಸುಖದುಃಖಪ್ರದನೆಂಬ ಮಾತನ್ನು ಸ್ಮರಂತ್ಯಃ (ಸತ್ಯಃ)=ನೆನಸಿಕೊಳ್ಳುವವರಾಗಿ ಯತ್=ಯಾವ ವ್ರತವು ಬ್ರಾಹ್ಮಣೈಃ=ಧರ್ಮಜ್ಞರಾದ ಬ್ರಹ್ಮಜ್ಞಾನಿಗಳಿಂದ ನಿರೂಪಿತಂ=ಶಿಶುಹತ್ಯೆಯ ಪ್ರಾಯಶ್ಚಿತ್ತವಾಗಿ ಹೇಳಲ್ಪಟ್ಟಿತೋ (ತತ್)=ಅಂತಹ ಬಾಲಹತ್ಯಾವ್ರತವನ್ನು ಯಮುನಾಯಾಂ=ಯಮುನಾ ತೀರದಲ್ಲಿ ಪುತ್ರಕಾಮನಾರಹಿತರೂ ನಿರ್ಮತ್ಸರರೂ ಆಗಿ ಚೇರುಃ=ಆಚರಿಸಿದರು. ‖ ೧೪ ‖

ಸ ಇತ್ಥಂ ಪ್ರತಿಬುದ್ಧಾತ್ಮಾ ಚಿತ್ರಕೇತುರ್ದ್ವಿಜೋಕ್ತಿಭಿಃ ।
ಗೃಹಾಂಧಕೂಪಾನ್ನಿಷ್ಕ್ರಾಂತಃ ಸರಃಪಂಕಾದಿವ ದ್ವಿಪಃ ‖ ೧೫ ‖

ಕಾಲಿಂದ್ಯಾಂ ವಿಧಿವತ್ ಸ್ನಾತ್ವಾ ಕೃತಪುಣ್ಯಜಲಕ್ರಿಯಃ ।
ಮೌನೇನ ಸಂಯತಪ್ರಾಣೋ ಬ್ರಹ್ಮಪುತ್ರಾವವಂದತ ‖ ೧೬ ‖

ಚಿತ್ರಕೇತುವು ಏನು ಮಾಡಿದನೆಂದರೆ ಹೇಳುತ್ತಾರೆ. ಇತ್ಥಂ=ಈ ರೀತಿಯಲ್ಲಿ ದ್ವಿಜೋಕ್ತಿಭಿಃ=ನಾರದಾಂಗೀರಸರ ಮಾತುಗಳಿಂದ ಪ್ರತಿಬುದ್ಧಾತ್ಮಾ=ಜ್ಞಾನವನ್ನು ಸಂಪಾದಿಸಿಕೊಂಡ ಮನಸ್ಸುಳ್ಳ, ತತ್ವವನ್ನು ಅರಿತ, ಸಃ ಚಿತ್ರಕೇತುಃ=ಆ ಚಿತ್ರಕೇತುವು ಸರಃ ಪಂಕಾತ್=ಸರೋವರದ ಕೆಸರಿನಿಂದ ದ್ವಿಪಃ ಇವ=ಆನೆಯಂತೆ ಗೃಹಾಂಧಕೂಪಾತ್=ಮನೆಯೆಂಬ ಕತ್ತಲೆಯ ಭಾವಿಯಿಂದ ನಿಷ್ಕ್ರಾಂತಃ (ಸ್ನ್)=ಹೊರಟವನಾಗಿ ಕಾಲಿಂದ್ಯಾಂ=ಯಮುನೆಯಲ್ಲಿ ವಿಧಿವತ್=ಶಾಸ್ತ್ರೋಕ್ತ ಕ್ರಮದಿಂದ ಸ್ನಾತ್ವಾ=ಸ್ನಾನಮಾಡಿ ಕೃತಪುಣ್ಯಜಲಕ್ರಿಯಃ (ಸ್ನ್)=ಪುಣ್ಯಕರಗಳಾದ ನೀರುಗಳಿಂದ ಪಿತೃತರ್ಪಣಾದಿ ಕ್ರಿಯೆಗಳನ್ನು ಮಾಡಿದವನಾಗಿ ಮೌನೇನ=

ಶಿಶುಹತ್ಯಾ ಪ್ರಾಯಶ್ಚಿತ್ತವನ್ನರಿತು ಯಮುನಾತೀರದಲ್ಲಿ ಬಾಲಹತ್ಯಾ ವ್ರತವನ್ನಾಚರಿಸಿದರು. (ಅವರಿಗೀಗ ಮಗನಾಗಬೇಕೆಂಬ ಆಸೆಯಾಗಲಿ ಪುತ್ರವತಿಯಲ್ಲಿ ಮಾತ್ಸರ್ಯವಾಗಲಿ ಇರಲಿಲ್ಲ.)

ಹೀಗೆ ನಾರದಾಂಗೀರಸರ ಮಾತುಗಳಿಂದ ಚಿತ್ರಕೇತುವಿನ ಮನಸ್ಸಿನಲ್ಲಿ ಜ್ಞಾನೋದಯವಾಯಿತು. ತತ್ತ್ವವನ್ನು ತಿಳಿದ ಅವನು ಸರೋವರದ ಕೆಸರಿನಿಂದ ಆನೆಯು ಹೊರಬರುವಂತೆ ಮನೆಯೆಂಬ ಕಗ್ಗತ್ತಲೆಯ ಭಾವಿಯಿಂದ ಹೊರಬಿದ್ದನು. ಯಮುನೆಯಲ್ಲಿ ವಿಧಿವತ್ತಾಗಿ ಸ್ನಾನಮಾಡಿ ಆ ಪವಿತ್ರ ಜಲಗಳಿಂದ ಪಿತೃತರ್ಪಣಾದಿ ಕರ್ಮಗಳನ್ನು ಮುಗಿಸಿದನು. ಲೌಕಿಕ ಮಾತುಗಳನ್ನಾಡದೆ ಇಂದ್ರಿಯಗಳನ್ನು ನಿಗ್ರಹಿಸಿ ಆ ಬ್ರಹ್ಮಪುತ್ರರೀರ್ವರು ಋಷಿಗಳಿಗೂ ಬಂದು ವಂದಿಸಿದನು.

ಬೇರೆ ಲೌಕಿಕ ಮಾತುಗಳನ್ನಾಡದೆ ಇರುವುದರಿಂದ ಸಂಯತಪ್ರಾಣಃ(ಸನ್)= ಇಂದ್ರಿಯಗಳನ್ನು ನಿಯಮನ ಮಾಡಿಕೊಂಡು ಬ್ರಹ್ಮಪುತ್ರೌ=ನಾರದ ಮತ್ತು ಅಂಗೀರಸರನ್ನು ಅವಂದತ=ವಂದಿಸಿದನು. ಆನೆಯ ದೃಷ್ಟಾಂತದಿಂದ ಕೆಸರು ತುಂಬಿದ ಸರೋವರಕ್ಕೆ ಸದೃಶವಾದ ವಿಷಯಪೂರ್ಣ ಗೃಹದಿಂದ ಹೊರಹೊರಡುವುದು ಧೀರಮತಿಯಾದ ಚಿತ್ರಕೇತುವಿಗೆ ಮಾತ್ರ ಸಾಧ್ಯವೆಂದು ತೋರಿಸಿರುವರು. || ೧೫, ೧೬ ||

ಅಥ ತಸ್ಮೈ ಪ್ರಪನ್ನಾಯ ಭಕ್ತಾಯ ಪ್ರಯತಾತ್ಮನೇ ।
ಭಗವಾನ್ನಾರದಃ ಪ್ರೀತೋ ವಿದ್ಯಾಮೇತಾಮುವಾಚ ಹ ॥ ೧೭ ॥

ಅಥ=ಅನಂತರ ಭಗವಾನ್=ವಿವಕ್ಷಿತಾರ್ಥ ತತ್ವಜ್ಞಾನ ಮೊದಲಾದ ಗುರುಲಕ್ಷಣಗಳುಳ್ಳ ನಾರದಃ=ಆ ಇಬ್ಬರು ಬ್ರಹ್ಮಪುತ್ರರಲ್ಲಿ ಒಬ್ಬರಾದ ನಾರದರು ಪ್ರಪನ್ನಾಯ= ಉಪದೇಶಮಾಡಿ ಉದ್ಧರಿಸಿರೆಂದು ಶರಣುಹೊಂದಿದ ಭಕ್ತಾಯ= ಶ್ರೀಹರಿಯ ಭಕ್ತಿಯಿಂದ ಕೂಡಿದ ಪ್ರಯತಾತ್ಮನೇ= ಮನೋನಿಗ್ರಹಾದಿ ಗುಣಗಳುಳ್ಳ ತಸ್ಮೈ=ಆ ಚಿತ್ರಕೇತುವಿಗೆ ಪ್ರೀತಃ ಸನ್=ಪ್ರಸನ್ನರಾಗಿ ಏತಾಂ ವಿದ್ಯಾಂ= ಮುಂದೆ ಹೇಳುವ ಸಂಕರ್ಷಣ ವಿದ್ಯೆಯನ್ನು ಉವಾಚ=ಹೇಳಿದರು. ಹ=ವಿದ್ಯೆಯು ಸಂಪೂರ್ಣ ಪ್ರಯೋಜನವನ್ನು ತಂದುಕೊಟ್ಟಿತು. ಪ್ರಪನ್ನಾಯ ಮೊದಲಾದ ವಿಶೇಷಣಗಳಿಂದ ಶಿಷ್ಯಾಧಿಕಾರ ಸಂಪತ್ತನ್ನೂ ಭಗವಾನ್ ಎಂಬುದರಿಂದ ಗುರುಗಳಿಗೆ ಇರಬೇಕಾದ ಗುಣಗಳನ್ನೂ ಪ್ರೀತಃ ಎಂಬುದರಿಂದ ಗುರುಪ್ರಸಾದವನ್ನೂ ಹೇಳಿದ್ದರಿಂದ ಅಂಗವೈಕಲ್ಯವಿಲ್ಲದ್ದರಿಂದ ಉಪದೇಶಿಸಿದ ವಿದ್ಯೆಯು ಸಂಪೂರ್ಣ ಫಲಕಾರಿಯೆಂದು ಸೂಚಿಸಿರುವರು. ಅಂಗವಿಕಲವಾದ ವಿದ್ಯೆಯು ಯಥೋಕ್ತ ಫಲದಾಯಕವಲ್ಲ. 'ಗುರುಶಿಷ್ಯಯೋರಯೋಗ್ಯತ್ವಾತ್ ಗುರುವೃತ್ತೇರಪೂರ್ತಿತಃ । ಅಪ್ರಸಾದಾದ್ಗುರೋರ್ವಿದ್ಯಾ ನ ಯಥೋಕ್ತಫಲಪ್ರದಾ ॥' ಎಂದು ಪ್ರಮಾಣವು ತಿಳಿಸುವುದು. || ೧೭ ||

ನಾರದ ಉವಾಚ—

ನಮಸ್ತುಭ್ಯಂ ಭಗವತೇ ವಾಸುದೇವಾಯ ಧೀಮಹಿ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥ ೧೮ ॥

ಆಗ ಪೂಜ್ಯರಾದ ನಾರದರು ಉಪದೇಶ ಮಾಡಿರೆಂದು ಮರೆಹೊಕ್ಕ ಮತ್ತು ಹರಿಭಕ್ತನೂ ಮನೋ ನಿಗ್ರಹಾದಿಗುಣವಂತನೂ ಆದ ಚಿತ್ರಕೇತುವಿಗೆ ಪ್ರಸನ್ನರಾಗಿ ಮುಂದೆ ಹೇಳುವ ಸಂಕರ್ಷಣ ವಿದ್ಯೆಯನ್ನು ಉಪದೇಶಿಸಿದರು. ಆ ವಿದ್ಯೆಯು ವೀರ್ಯವತ್ತರವಾಗಿ ಫಲಿಸಿತು.

ನಾರದರು—'ಷಡ್ಗುಣಪೂರ್ಣನೂ ಲಕ್ಷ್ಮೀಸಮೇತನೂ ಜಗತ್ಸೃಷ್ಟ್ಯಾದಿ ಕರ್ತನೂ ಮನಸ್ಸಿನಲ್ಲಿ ಸನ್ನಿಹಿತನೂ ಆಗಿರುವ ಶ್ರೀಹರಿಯೇ, ನಿನಗೆ ನಮಸ್ಕಾರ.

ಭಗವತೇ=ಷಡ್ಗುಣಪೂರ್ಣನಾದ, ಲಕ್ಷ್ಮೀಸಮೇತನಾದ, ಜಗತ್ತಿನ ಸೃಷ್ಟಿ ಮೊದಲಾದವುಗಳಿಗೆ ಕರ್ತನಾದ ತುಭ್ಯಂ=ಮನಸ್ಸಿನಲ್ಲಿ ಸನ್ನಿಹಿತನಾಗಿರುವ ಶ್ರೀಹರಿಯೇ, ನಿನಗೆ ನಮಃ=ನಮಸ್ಕಾರವನ್ನು ಧೀಮಹಿ=ಧ್ಯಾನಮಾಡುತ್ತೇವೆ. ಮನಸ್ಸಿನಿಂದ ನಮಸ್ಕರಿಸುತ್ತೇವೆ ಎಂದರ್ಥ. ಚ=ಮತ್ತು ವಾಸುದೇವಾಯ=ಎಲ್ಲೆಡೆಯೂ ವಾಸಿಸುವ, ಎಲ್ಲವನ್ನೂ ತನ್ನಲ್ಲಿ ಇಟ್ಟುಕೊಂಡಿರುವ ಕ್ರೀಡಾದಿ ಗುಣ ವಿಶಿಷ್ಟನಾದ, ಪ್ರದ್ಯುಮ್ನಾಯ=ಅತಿಶಯ ಪ್ರಕಾಶ ಸ್ವರೂಪನಾದ ಅನಿರುದ್ಧಾಯ=ಯಾರಿಂದಲೂ ನಿರುದ್ಧನಲ್ಲದ, ಪ್ರಯತ್ನವಂತರಿಂದ ಅಥವಾ ಮುಖ್ಯ ಪ್ರಾಣದೇವರ ಸೇವಕರಿಂದ ಹೃದಯದಲ್ಲಿ ರುದ್ಧನಾದ, ಸಂಕರ್ಷಣಾಯ=ಸಮಸ್ತ ಜೀವರಿಗೂ ಅವರವರ ಯೋಗ್ಯತೆಗೆ ತಕ್ಕಂತೆ ಶುಭಾಶುಭ ಫಲಗಳನ್ನು ತಂದುಕೊಡುವ ನಿನಗೆ ನಮಃ = ನಮಸ್ಕಾರವು. ಭಗವತೇ ಮೊದಲಾದ ವಿಶೇಷಣಗಳು ಆಯಾಯಾ ಪ್ರವೃತ್ತಿನಿಮಿತ್ತಗಳಂತೆ ಗುಣಸಾಮಗ್ರಿಯನ್ನು ಸೂಚಿಸುವುವು. 'ಗುಣವಾನ್ ಭಗವಾನೇವ ಸೃಷ್ಟಿಸಂಹಾರರಕ್ಷಕಃ | ದ್ವೌ ದ್ವೌ ಗುಣಾವಧಿಷ್ಠಾಯ ಸರ್ಗಾದ್ಯ ಮಕರೋತ್ಪ್ರಭುಃ || ಪ್ರದ್ಯುಮ್ನಶ್ಚಾನಿರುದ್ಧಶ್ಚ ಸಂಕರ್ಷಣ ಇತೀರಿತಃ | ಭಗವಾನ್ ವಾಸುದೇವೋಽಸೌ ಸೃಷ್ಟ್ವಾದ್ಯಮಕರೋತ್ ಸ್ವಯಂ || ಐಶ್ವರ್ಯಂ ವೀರ್ಯ ವಾನ್ ಸರ್ಗೇ ಪ್ರದ್ಯುಮ್ನಃ ಪ್ರತ್ಯಪದ್ಯತ | ತೇಜಃ ಶಕ್ತೀ ಸಮಾವಿಶ್ಯಾನಿರುದ್ಧೋ ಹ್ಯಪಾಲಯತ್ || ಬಲಜ್ಞಾನೇ ತಥಾ ದ್ವೇ ತು ಸಂಕರ್ಷಣಸ್ಸಮಧಿಷ್ಠಿತಃ | ಅಕರೋದ್ಭಗವಾನೇವ ಸಂಹಾರಂ ಜಗತೋಽಸ್ಯ ತು || ಏವಂ ಷಡ್ಗುಣಪೂರ್ಣತ್ವಾ-ದಪಿ ಯೋಗೇನ ಚ ಶ್ರಿಯಃ | ಸರ್ಗಾದಿ ಕಾರಣತ್ವಾಚ್ಚ ಭಗವಾನಿತಿ ಚೋಚ್ಯತೇ ||' 'ಸರ್ವತ್ರಾಸೌ ಸಮಸ್ತಂ ಚ ಸ್ವಸ್ಮಿನ್ ವಾಸಯತೇ ಯತಃ | ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ ||' 'ಪ್ರದ್ಯುಮ್ನೋ ದ್ಯುತಿರೂಪತ್ವಾತ್ ವಿಷ್ಣುರೇವ ಪ್ರಕೀರ್ತಿತಃ ||' ಇತ್ಯಾದಿ ಪ್ರಮಾಣಗಳು ಮೇಲಿನ ಅರ್ಥವನ್ನು ಸ್ಪಷ್ಟಪಡಿಸುವುವು. || ೧೮ ||

ನಮೋ ವಿಜ್ಞಾನಮಾತ್ರಾಯ ಪರಮಾನಂದರೂಪಿಣೇ |
ಆತ್ಮಾರಾಮಾಯ ಶಾಂತಾಯ ನಿವೃತ್ತದ್ವೈತದೃಷ್ಟಯೇ || ೧೯ ||

ಇದನ್ನೇ ಧ್ಯಾನಿಸುತ್ತೇವೆ. ನೀನು ಎಲ್ಲೆಡೆಯಲ್ಲಿಯೂ ವಾಸಿಸುವುದರಿಂದ ಎಲ್ಲವನ್ನೂ ನಿನ್ನಲ್ಲಿ ಇಟ್ಟುಕೊಂಡಿರುವುದರಿಂದ ಕ್ರೀಡಾದಿಗುಣವಿಶಿಷ್ಟನಾದ್ದರಿಂದ ವಾಸುದೇವನು; ಅತಿಶಯ ಪ್ರಕಾಶಸ್ವರೂಪನಾದ್ದರಿಂದ ಪ್ರದ್ಯುಮ್ನನು ; ಯಾರಿಂದಲೂ ನಿರುದ್ಧನಲ್ಲದ್ದ ರಿಂದ ಮತ್ತು ಪ್ರಯತ್ನವಂತರಾದ ವಾಯುದೇವರ ಸೇವಕರಿಂದ ಹೃದಯದಲ್ಲಿ ರುದ್ಧನಾದ್ದರಿಂದ ಅನಿರುದ್ಧನು. ಜೀವರಿಗೆಲ್ಲ ಅವರವರ ಯೋಗ್ಯತೆಗೆ ತಕ್ಕಂತೆ ಪುಣ್ಯ ಪಾಪಗಳ ಫಲವನ್ನು ಕೊಡುವನಾದ್ದರಿಂದ ಸಂಕರ್ಷಣನು. ಇಂತಹ ನಿನಗೆ ನಮಸ್ಕಾರ. ಪೂರ್ಣಾನಂದ ಸ್ವರೂಪನೂ ನಿರವಧಿಕಾನಂದಶರೀರಿಯೂ

ವಿಜ್ಞಾನಮಾತ್ರಾಯ = ಪೂರ್ಣಜ್ಞಾನಸ್ವರೂಪನಾದ, ಪರಮಾನಂದ-ರೂಪಿಣೇ=ನಿರವಧಿಕ ಆನಂದವೇ ಶರೀರವಾಗಿ ಉಳ್ಳ, ಆತ್ಮಾರಾಮಾಯ=ಸ್ವರಮಣನಾದ ಶಾಂತಾಯ=ಪೂರ್ಣಸುಖನಾದ ನಿವೃತ್ತದ್ವೈತದೃಷ್ಟಯೇ = (೧) ತನ್ನ ಅವತಾರಗಳಲ್ಲಿ ಭೇದಜ್ಞಾನವಿಲ್ಲದ (೨) ಅನ್ಯಥಾ ಜ್ಞಾನ(ಭ್ರಮ)ವಿಲ್ಲದ (೩) ನಿವೃತ್ತ ದ್ವೈತ ವೃತ್ತಯೇ ಎಂಬ ಪಾಠದಲ್ಲಿ ಭ್ರಮ ಜ್ಞಾನವಿಲ್ಲದೆ ಇರುವವನಾದ ಎಂದರ್ಥ. (೪) ಅವಿದ್ಯೆಯ ಪಂಚಪರ್ವಗಳೂ ಇಲ್ಲದ, (೫) ಅಶುಭದೃಷ್ಟಿಯಾಗಲಿ ಅಶುಭ ವ್ಯಾಪಾರವಾಗಲಿ ಇಲ್ಲದ ತುಭ್ಯಂ = ನಿನಗೆ ನಮಸ್ಕಾರವು. 'ಭಿನ್ನಸ್ಯಾಭೇದತೋ ದೃಷ್ಟಿರಪಿ ಭೇದದೃಶಿರ್ಮತಾ । ವಸ್ತು ಯಾಥಾತ್ಮ್ಯತಸ್ತಸ್ಯ ಭಿನ್ನತ್ವಾದಿತಿ ಸೂರಿಭಿಃ । ಅನ್ಯಥಾಜ್ಞಾನಮೇವಾತೋ ಭೇದಜ್ಞಾನಂ ವಿನಿಂದಿತಂ । ನ ವಿದ್ಯಮಾನ ಭೇದಸ್ಯ ದರ್ಶನಂ ನಿಂದಿತಂ ಕ್ವಚಿತ್ ॥' ಎಂಬ ಪ್ರಮಾಣವು ಅನ್ಯಥಾಜ್ಞಾನ (ದ್ವೈತವು) ನಿಂದಿತವೆಂದು ತಿಳಿಸುವುದು. ಅನ್ಯಥಾಜ್ಞಾನಕ್ಕೆ ಕಾರಣವಾದ ಅವಿದ್ಯೆಯೂ ದ್ವೈತಶಬ್ದದಿಂದ ಉಕ್ತವಾಗುವುದು ; ಅದರ ವೃತ್ತಿಗಳು ಐದು. ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ ಮತ್ತು ಅಂಧತಾಮಿಸ್ರ. 'ತಮಸ್ತು ಶಾರ್ವರಂ ಪ್ರೋಕ್ತಂ, ಮೋಹಶ್ಚೈವ ವಿಪರ್ಯಯಃ । ತದಾಗ್ರಹೋ ಮಹಾಮೋಹಃ ತಾಮಿಸ್ರಂ ಕ್ರೋಧ ಉಚ್ಯತೇ । ನರಕಂ ತ್ವಂಧತಾಮಿಸ್ರಮವಿದ್ಯಾ ಪಂಚಪರ್ವಿಕಾ ॥' ಎಂಬ ಪ್ರಮಾಣವನ್ನು ಇಲ್ಲಿ ನೋಡಬಹುದು. 'ಏಕಂ ತು ಶುಭಮುದ್ದಿಷ್ಟಂ ಅಶುಭಂ ದ್ವೈತಮುಚ್ಯತೇ ॥' ದೇಹಾದಿ ಅಹಂ ಮಮತಾಭಿಮಾನವು ಯಾವಾಗಲೂ ಇಲ್ಲದವನೆಂದರ್ಥ. ॥ ೧೯ ॥

ಆತ್ಮಾನಂದಾನುಭೂತ್ಯೈವ ಸಮ್ಯಕ್ ತ್ಯಕ್ತೋರ್ಮಯೇ ನಮಃ ।
ಹೃಷೀಕೇಶಾಯ ಮಹತೇ ನಮಸ್ತೇಽನಂತಮೂರ್ತಯೇ ॥ ೨೦ ॥

ಆತ್ಮಾನಂದಾನುಭೂತ್ಯಾ ಏವ = ಸ್ವರೂಪಭೂತವಾದ ಆನಂದದ ಅನುಭವದಿಂದಲೇ ಸಮ್ಯಕ್=ಸಂಪೂರ್ಣವಾಗಿ ತ್ಯಕ್ತೋರ್ಮಯೇ= (೧) ಜನನ ಮೊದಲಾದ ಆರು ಊರ್ಮಿಗಳನ್ನು ತ್ಯಜಿಸಿರುವ (೨) ಅಶನಾಯಾ ಮೊದಲಾದ ಆರು ಊರ್ಮಿಗಳು ಇಲ್ಲದವನಾದ ತುಭ್ಯಂ=ನಿನಗೆ ನಮಸ್ಕಾರವು. ಮಹತೇ=ಸರ್ವೋತ್ತಮನಾದ ಅನಂತಮೂರ್ತಯೇ=(೧) ಅನಂತರೂಪಗಳುಳ್ಳ (೨) ಶೇಷನನ್ನು ಪ್ರತಿಮಾಸ್ಥಾನವಾಗಿ ಹೊಂದಿರುವ ಹೃಷೀಕೇಶಾಯ = (೧) ಇಂದ್ರಿಯ ಪ್ರೇರಕನಾದ

ಸ್ವರಮಣನೂ ಪೂರ್ಣಸುಖನೂ ಅವತಾರಗಳು ಭಿನ್ನವೆಂದು ತಿಳಿಯದವನೂ ಭ್ರಮಜ್ಞಾನ ರಹಿತನೂ ಅವಿದ್ಯಾರಹಿತನೂ ಅಶುಭವ್ಯಾಪಾರಗಳೇ ಇಲ್ಲದವನೂ ಆದ ನಿನಗೆ ನಮಸ್ಕಾರ. ತನ್ನ ಸ್ವರೂಪಾನಂದಾನುಭವದಿಂದ ಜನ್ಮಾದಿ ಷಡೂರ್ಮಿಗಳೂ ಹಸಿವೆ ಮೊದಲಾದ ಷಡೂರ್ಮಿಗಳೂ ಇಲ್ಲದ ಸರ್ವೋತ್ತಮನೂ ಅನಂತ ರೂಪಿಯೂ ಶೇಷಾಂತಸ್ಥನೂ ಇಂದ್ರಿಯ ಪ್ರೇರಕನೂ ಹರ್ಷಕಾರಕ ಕೇಶವಂತನೂ

(೨) ಹರ್ಷಕ್ಕೆ ಕಾರಣಗಳಾದ ಕೇಶಗಳುಳ್ಳ ತೇ=ನಿನಗೆ ನಮಸ್ಕಾರವು. 'ಅಶನಾಯಾ ಪಿಪಾಸೇ ಶೋಕಂ ಮೋಹಂ ಜರಾಂ ಮೃತ್ಯುಮತ್ಯೇತಿ' ಎಂದು ಶ್ರುತಿಯಿದೆ. ಶ್ರೀಹರಿಗೆ ಹಸಿವು ಮೊದಲಾದುವು ಇಲ್ಲವೆಂದರ್ಥ. ಶ್ರೀಹರಿಯು ಅಗ್ನಿ ಮೊದಲಾದವರಲ್ಲಿ ಇದ್ದುಕೊಂಡು ತನ್ನ ಕೇಶಗಳಿಂದ ನಿಯತಗಳಾದ ಅವರ ಕಿರಣಗಳಿಂದ ಜಗತ್ತಿಗೆ ಎಚ್ಚರಿಕೆ ಸ್ಥಿತಿಗಳ ಮೂಲಕ ಸಂತೋಷಪಡಿಸುವನಾದ್ದರಿಂದ ಹೃಷೀಕೇಶನೆನಿಸುವನು. ಮೋಕ್ಷಧರ್ಮದಲ್ಲಿ 'ಸೂರ್ಯಾಚಂದ್ರಮಸೌ ಶಶ್ವತ್ ಕೇಶೈರ್ಮೇಂಶುಸಂಜ್ಞಿತೈಃ | ಬೋಧನಾತ್ ಸ್ಥಾಪನಾಚ್ಚೈವ ಜಗತೋ ಹರ್ಷ-ಸಂಭವಾತ್ ಹೃಷೀಕೇಶೋऽಹಂ' ಇತ್ಯಾದಿ ವಚನಗಳಿವೆ. || ೨೦ ||

ವಚಸ್ಯುಪರತೇಽಪ್ರಾಪ್ಯೋ ಯ ಏಕೋ ಮನಸಾ ಸಹ |
ಅನಾಮರೂಪಶ್ಚಿನ್ಮಾತ್ರಃ ಸೋಽವ್ಯಾನ್ನಃ ಸದಸತ್ಪರಃ || ೨೧ ||

ಯಃ ಏಕಃ=ಸರ್ವ ಜಗದ್ಭಿನ್ನನೂ ಮುಖ್ಯನೂ ಆದ ಯಾವನು ಮನಸಾ ಸಹ-ಬಾಹ್ಯ ಮನಸ್ಸಿನ ಜೊತೆಯಲ್ಲಿ ವಚಸಿ=ಮಾತು ಮೊದಲಾದ ಎಲ್ಲ ಇಂದ್ರಿಯಗಳೂ ಉಪರತೇ ಸತಿ=ನಷ್ಟವಾಗಿರಲು ಲೀನವಾಗಿರಲು ಮನಸಾ ಸಹ=ಚಿನ್ಮಾತ್ರ ಮನಸ್ಸಿನೊಂದಿಗೆ ಚಿನ್ಮಾತ್ರ ವಾಗಾದಿ ಇಂದ್ರಿಯಗಳಿಂದ ಪ್ರಾಪ್ಯಃ=ಹೊಂದಲು ಯೋಗ್ಯನೋ ಸಃ=ಅಂತಹ ಸದಸತ್ಪರಃ=೧) ಸ್ಥೂಲ ಸೂಕ್ಷ್ಮ ಪ್ರಪಂಚ ವಿಲಕ್ಷಣನಾದ ೨) ಕಾರ್ಯಕಾರಣ ವಿಲಕ್ಷಣನಾದ (ಕಾರ್ಯಕಾರಣಗಳಿಗೂ ಕಾರಣನಾದ) ಅನಾಮರೂಪಶ್ಚಿನ್ಮಾತ್ರಃ=೧) ಶಬ್ದ ಪ್ರವೃತ್ತಿ ನಿಮಿತ್ತಗಳು ಅನಂತವಾದ್ದರಿಂದ ತಿಳಿಯಲಾಗದ್ದರಿಂದಲೂ ಪ್ರಾಕೃತ ರೂಪರಹಿತನಾದ್ದರಿಂದಲೂ ಅನಾಮರೂಪನೆನಿಸಿ ಜ್ಞಾನ ಮಾತ್ರ ಸ್ವರೂಪನಾದ (ಭವಾನ್)=ನೀನು ನಃ=ನಮ್ಮನ್ನು ಅವ್ಯಾತ್=ರಕ್ಷಿಸು. ಇದರಿಂದ ಮಂತ್ರವನ್ನು ಉಪದೇಶಿಸುತ್ತಾ ಧ್ಯಾನದ ಪ್ರಕಾರವನ್ನೂ ತಿಳಿಸಿದಂತಾಯಿತು. 'ಅಪ್ರಸಿದ್ಧೇಃ ತದ್ಗುಣಾನಾಂ ಅನಾಮಾಸೌ ಪ್ರಕೀರ್ತಿತಃ | ಅಪ್ರಾಕೃತತ್ವಾದ್ರೂಪಸ್ಯಾಪ್ಯರೂಪೋಽಸಾವುದೀರ್ಯತೇ' || ೨೧ ||

ಯಸ್ಮಿನ್ನಿದಂ ಯತಶ್ಚೇದಂ ತಿಷ್ಠತ್ಯಪ್ಯೇತಿ ಜಾಯತೇ |
ಮೃನ್ಮಯೇಷ್ವಿವ ಮೃಜ್ಜಾತಿಸ್ತಸ್ಮೈ ತೇ ಬ್ರಹ್ಮಣೇ ನಮಃ || ೨೨ ||

ಆದ ನಿನಗೆ ನಮಸ್ಕಾರ. ಸರ್ವಜಗದ್ಭಿನ್ನನೂ ಮುಖ್ಯನೂ ಆದ ನೀನು ನಮ್ಮ ಬಾಹ್ಯ ಮನಸ್ಸೂ ಇಂದ್ರಿಯಗಳೂ ಲೀನವಾಗಿದ್ದಾಗ ಚಿನ್ಮಾತ್ರ ಮನಸ್ಸು ಮತ್ತು ಚಿನ್ಮಾತ್ರ ಇಂದ್ರಿಯಗಳಿಂದ ಪ್ರಾಪ್ಯನಾಗಿರುವೆ. ಸ್ಥೂಲಸೂಕ್ಷ್ಮ ಪ್ರಪಂಚಕ್ಕಿಂತ ಭಿನ್ನನು. ಕಾರ್ಯಕಾರಣ ವಿಲಕ್ಷಣನು. ಅನಂತಶಬ್ದಪ್ರವೃತ್ತಿ ನಿಮಿತ್ತದಿಂದಲೂ ಪ್ರಾಕೃತ ರೂಪರಾಹಿತ್ಯದಿಂದಲೂ ಅನಾಮರೂಪನೂ ಜ್ಞಾನಮಾತ್ರಸ್ವರೂಪನೂ ಆದ ನೀನು ನಮ್ಮನ್ನು ರಕ್ಷಿಸು. ಮಣ್ಣಿನಿಂದುದ್ಭವಿಸುವ ಗಿಡ ಮೊದಲಾದುವು ವೃದ್ಧಿಕಾರಗಳಾದ ಭೂಮಿ ಪರ್ವತಗಳಲ್ಲಿ ಇರುವಂತೆ ನಾಶವಾಗುವಂತೆ ಮತ್ತು

ಅಲೌಕಿಕ ವಸ್ತುವಿನ ಲಕ್ಷಣ ಜ್ಞಾನವಿಲ್ಲದೆ ಆ ವಸ್ತುವಿನ ಜ್ಞಾನ ಬರುವುದು ದುಸ್ಸಾಧ್ಯವೆಂದು ಜಗದ್ವಿಲಕ್ಷಣ ವಸ್ತುವಿನ (ಶ್ರೀಹರಿಯ) ಲಕ್ಷಣವನ್ನು ಹೇಳುತ್ತಾರೆ. ಮೃಜ್ಜಾತಿಃ=ಮಣ್ಣಿನಿಂದ ಹುಟ್ಟುವ ಗಿಡ ಮೊದಲಾದುವು ಮೃನ್ಮಯೇಷು ಇವ=ಮಣ್ಣಿನ ವಿಕಾರಗಳಾದ ಭೂಮಿ, ಪರ್ವತ ಮೊದಲಾದುವುಗಳಲ್ಲಿ ಹೇಗೆ ಇರುವುವೋ, ನಾಶವಾಗುವುವೋ ಮತ್ತು ಅವುಗಳಿಂದ ಹುಟ್ಟುವುವೋ ಹಾಗೆ ಯಸ್ಮಿನ್= ಯಾವ ಜಗದ್ವಿಲಕ್ಷಣ ವಸ್ತುವಿನಲ್ಲಿ ಇದಂ= ಈ ಪ್ರಮಾಣಸಿದ್ಧವಾದ ಸ್ಥೂಲ-ಸೂಕ್ಷ್ಮಾತ್ಮಕ, ಕಾರ್ಯ-ಕಾರಣಾತ್ಮಕ ಜಗತ್ತು ತಿಷ್ಠತಿ=ಇರುವುದೋ, ಯಸ್ಮಿನ್= ಯಾವುದರಲ್ಲಿ ಇದಂ=ಈ ಜಗತ್ತು ಅಪ್ಯೇತಿ=ಲಯವನ್ನು ಹೊಂದುವುದೋ ಯತಃ ಚ=ಮತ್ತು ಯಾವನಿಂದ ಇದಂ=ಈ ಪ್ರಪಂಚವು ಜಾಯತೇ=ಸೃಷ್ಟವಾಗುವುದೋ ತಸ್ಮೈ=ಅಂತಹ ಬ್ರಹ್ಮಣೇ=ಗುಣಪೂರ್ಣನಾದ ತೇ=ನಿನಗೆ ನಮಸ್ಕಾರ. ವಿ.ಅ. ಮೇಲಿನ ಹೇಳಿದ ಅರ್ಥದಿಂದ ಬ್ರಹ್ಮನಿಗೂ ಪ್ರಪಂಚಕ್ಕೂ ಮೃತ್ತು ಮತ್ತು ಘಟಗಳಿಗಿದ್ದಂತೆ ಉಪಾದಾನೋಪಾದೇಯಭಾವವೆಂದೂ ಆದ್ದರಿಂದ ಅವೆರಡಕ್ಕೂ ಅಭೇದವೆಂದೂ ಹೇಳುವ ವಾದವು ನಿರಸ್ತವಾಯಿತು. ಉಪಾದಾನೋಪಾದೇಯ ಭಾವಗಳಿಲ್ಲದವುಗಳನ್ನೇ ಇಲ್ಲಿ ದೃಷ್ಟಾಂತವಾಗಿ ಹೇಳಿರುವುದು. ಆದ್ದರಿಂದ ಮೃಜ್ಜಾತಿಃ=ಮೃತ್ತ್ವವು ಮೃನ್ಮಯೇಷು ಇವ=ಘಟ ಮೊದಲಾದುವುಗಳಲ್ಲಿ ಅನುಗತವಾಗಿರುವಂತೆ ಎಂಬ ಅರ್ಥವು ಸರಿಯಲ್ಲ. ಬ್ರಹ್ಮವಸ್ತುವಿನಲ್ಲಿ ಬಹುತ್ವವಿಲ್ಲ. 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿಯು ಅಂತಹ ವಸ್ತುವು ಒಂದೇ ಎಂದು ಹೇಳುತ್ತಿದೆ. 'ಪೃಥಿವೀ ಪರ್ವತಾಶ್ಚೈವ ಮೃಣ್ಮಯಾಃ ಸಮುದೀರಿತಾಃ | ತೇಷು ಮೃಜ್ಜಾತಯಃ ಸರ್ವೇ ಜಾಯಂತೇ ಸ್ಥಾವರಾದಯಃ' || (ಭೂಮಿ, ಪರ್ವತಗಳು ಮೃಣ್ಮಯ ಶಬ್ದದಿಂದ ಉಕ್ತವಾಗಿವೆ. ಅವುಗಳಲ್ಲಿ ಮೃಜ್ಜಾತಿ ಎಂದು ಕರೆಸುವ ಎಲ್ಲ ವೃಕ್ಷ ಮೊದಲಾದುವು ಹುಟ್ಟುವುವು) ಎಂಬ ಪ್ರಮಾಣವಿರೋಧವೂ ತಪ್ಪಿದ್ದಲ್ಲ. || ೨೨ ||

ಯನ್ನ ಸ್ಪೃಶಂತಿ ನ ವಿದುರ್ಮನೋ ಬುದ್ಧೀಂದ್ರಿಯಾಸವಃ |
ಅಂತರ್ಬಹಿಶ್ಚ ವಿತತಂ ವ್ಯೋಮವತ್ತಂ ನತೋಽಸ್ಮ್ಯಹಮ್ || ೨೩ ||

ವ್ಯೋಮವತ್=ಆಕಾಶದಂತೆ ಅಂತರ್ಬಹಿಃ ಚ=ಒಳಗೂ ಹೊರಗೂ ವಿತತಂ= ವ್ಯಾಪ್ತನಾದ ಯಂ=ಯಾವನನ್ನು ಮನಃ=ಮನಸ್ಸೂ, ಮನೋಭಿಮಾನಿ ರುದ್ರ

ಅವುಗಳಿಂದ ಹುಟ್ಟುವಂತೆ ಈ ಜಗದ್ವಿಲಕ್ಷಣ ವಸ್ತುವಿನಲ್ಲಿ ಈ ಜಗತ್ತು ಇದೆ; ಲಯವನ್ನು ಹೊಂದುತ್ತದೆ. ಇದರಿಂದ ಹುಟ್ಟುತ್ತದೆ. ಆ ಗುಣಪೂರ್ಣ ವಸ್ತುವಾದ ನಿನಗೆ ನಮಸ್ಕಾರ. ಆಕಾಶದಂತೆ ನೀನು ಒಳಗೂ ಹೊರಗೂ ವ್ಯಾಪ್ತ. ನಿನ್ನನ್ನು ಮನಸ್ಸೂ ಮನೋಭಿಮಾನಿಯೂ ಜ್ಞಾನೇಂದ್ರಿಯಗಳೂ ಅವುಗಳ ಅಭಿಮಾನಿಗಳೂ ಕರ್ಮೇಂದ್ರಿಯಗಳೂ ಅವುಗಳ ಅಭಿಮಾನಿಗಳೂ ವಿಷಯೀಕರಿಸಲಾರವು;

ದೇವರೂ, ಬುದ್ಧೀಂದ್ರಿಯಾಣಿ= ಕಣ್ಣು ಮೊದಲಾದ ಜ್ಞಾನೇಂದ್ರಿಯಗಳು, ಅವುಗಳ ಅಭಿಮಾನಿಗಳಾದ ಸೂರ್ಯ ಮೊದಲಾದವರು ಅಸವಃ=ಪ್ರಾಣಗಳು, ಕರ್ಮೇಂದ್ರಿಯಗಳು ಅವುಗಳ ಅಭಿಮಾನಿದೇವತೆಗಳೂ ನ ಸ್ಪೃಶಂತಿ= ವಿಷಯೀಕರಿಸಲಾರವೋ ನ ವಿದುಃ=ಸಾಕಲ್ಯೇನ ತಿಳಿಯಲಾರವೋ ತಂ=ಅಂತಹ ಇಂದ್ರಿಯಾತೀತನಾದ ಶ್ರೀಹರಿಯನ್ನು ಅಹಂ=ನಾನು ನತಃ ಅಸ್ಮಿ=ನಮಸ್ಕರಿಸುವ ನಾಗಿದ್ದೇನೆ. ಇದರಿಂದ ಲೌಕಿಕ ಪ್ರಮಾಣಾವಿಷಯನಾದ್ದರಿಂದ ಪ್ರಪಂಚ ವಿಲಕ್ಷಣ ನೆಂದು (ಸದಸತ್ಪರನೆಂದು) ಸಮರ್ಥಿಸಿದಂತಾಯಿತು. || ೨೩ ||

ದೇಹೇಂದ್ರಿಯ ಪ್ರಾಣಮನೋಧಿಯೋsಮೀ
ಯದಂಶವಿದ್ಧಾಃ ಪ್ರಚರಂತಿ ಕರ್ಮಸು ।
ನೈವಾನ್ಯದಾ ಲೋಹಮಿವ ಪ್ರತಪ್ತಂ
ಸ್ಥಾನೇಷು ತದ್ದ್ರಷ್ಟೃಪದೇಶಮೇಮಿ || ೨೪ ||

ಭಗವದನುಗ್ರಹವು ಭಗವದ್ವಿಷಯಕ ಜ್ಞಾನಕ್ಕೂ ಭಗವದನುಗ್ರಹಾಭಾವವು ಭಗವದ್ವಿಷಯಕಾ ಜ್ಞಾನಕ್ಕೂ ಕಾರಣವೆಂದು ಹೇಳಿದ್ದನ್ನು ಸ್ಪಷ್ಟಪಡಿಸುತ್ತಾರೆ. ಅಮೀ=ಈ ಮೇಲೆ ಹೇಳಿದ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿಗಳು, ತದಭಿಮಾನಿ ದೇವತೆಗಳು ಪ್ರತಪ್ತಂ=ಚೆನ್ನಾಗಿ ಕಾದಿರುವ ಲೋಹಂ ಇವ=ಕಬ್ಬಿಣ ದಂತೆ (ಕಬ್ಬಿಣವು ಸುಡುವಂತೆ) ಯದಂಶವಿದ್ಧಾಃ=ಯಾವ ಶ್ರೀಹರಿಯ ರೂಪ ವಿಶೇಷಗಳಿಂದ ಪ್ರೇರಿತಗಳಾಗಿ ಕರ್ಮಸು=ತಮ್ಮ ತಮ್ಮ ವಿಷಯಗಳಲ್ಲಿ ಪ್ರಚರಂತಿ= ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳಲ್ಲಿ ಪ್ರಸಕ್ತವಾಗುವುವೋ ಅನ್ಯದಾ=ಪ್ರೇರಿತ ಗಳಲ್ಲದ ಕಾಲದಲ್ಲಿ (ಕಾಯದಿರುವ ಕಬ್ಬಿಣವು ಸುಡದಿರುವಂತೆ) ಸುಷುಪ್ತಿ ಮತ್ತು ಮೋಹಾವಸ್ಥೆಗಳಲ್ಲಿ ನೈವ ಪ್ರಚರಂತಿ = ತಮ್ಮ ತಮ್ಮ ವಿಷಯಗಳಲ್ಲಿ ಪ್ರಸಕ್ತ ಗಳಾಗುವುದಿಲ್ಲವೋ ತಂ=ಅಂತಹ ಸ್ಥಾನೇಷು=ಆಯಾಯಾ ಇಂದ್ರಿಯಾದಿ ಸ್ಥಾನ ಗಳಲ್ಲಿ, ಜಾಗ್ರತಾದಿ ಅವಸ್ಥೆಗಳಲ್ಲಿ (ಸ್ಥಿತ್ವಾ)=ಇದ್ದುಕೊಂಡು ದ್ರಷ್ಟೃಪದೇಶಂ= ಸಾಕ್ಷಿಯಲ್ಲಿದ್ದು ಸಾಕ್ಷಿ ಎನಿಸಿಕೊಳ್ಳುವ ಪರಬ್ರಹ್ಮ ವಸ್ತುವನ್ನು ಏಮಿ=ಶರಣು ಹೊಂದುತ್ತೇನೆ. ಅಗ್ನಿಶಕ್ತಿಯಿಂದಲೇ ಸುಡುವ ಕಬ್ಬಿಣವು ಅಗ್ನಿಯನ್ನು ಹೇಗೆ

ಸಾಕಲ್ಯೇನ ತಿಳಿಯಲಾರರು. ಅಂತಹ ಇಂದ್ರಿಯಾತೀತನಾದ ನಿನ್ನನ್ನು ವಂದಿಸು ತ್ತೇನೆ. ಚೆನ್ನಾಗಿ ಕಾದಿರುವ ಕಬ್ಬಿಣವು ಮಾತ್ರವೇ ಸುಡುವಂತೆ ಶ್ರೀಹರಿಯ ರೂಪ ವಿಶೇಷಗಳಿಂದ ಪ್ರೇರಿತಗಳಾದ ಇಂದ್ರಿಯ ಮತ್ತು ಇಂದ್ರಿಯಾಭಿಮಾನಿಗಳೇ ಜಾಗ್ರತ್ ಸ್ವಪ್ನಾವಸ್ಥೆಗಳಲ್ಲಿ ತಮ್ಮ ತಮ್ಮ ವಿಷಯಗಳಲ್ಲಿ ಪ್ರವೃತ್ತವಾಗುವುವು; ಆಗುವರು. ಪ್ರೇರಿತಗಳಾಗದ, ಪ್ರೇರಿತರಾಗದ ಸುಷುಪ್ತಿ ಮತ್ತು ಮೋಹಾವಸ್ಥೆ ಗಳಲ್ಲಿ ತಮ್ಮ ತಮ್ಮ ವಿಷಯಗಳಲ್ಲಿ ಪ್ರವೃತ್ತರಾಗುವುದಿಲ್ಲ. ಹೀಗೆ ಆಯಾಯಾ ಇಂದ್ರಿಯಗಳಲ್ಲಿದ್ದುಕೊಂಡು ಆಯಾಯಾ ಅವಸ್ಥೆಗಳಲ್ಲಿ ಪ್ರೇರಕನಾಗಿ ಸಾಕ್ಷಿ

ಪಡಲಾರದೋ ಹಾಗೆ ಶ್ರೀಹರಿಯ ಶಕ್ತಿಯಿಂದಲೇ ವಿಷಯಗಳನ್ನು ತಿಳಿಯುವ ಸಾಮರ್ಥ್ಯವುಳ್ಳ ಇಂದ್ರಿಯಾದಿಗಳು ಅವುಗಳ ಅಭಿಮಾನಿಗಳು ಶ್ರೀಹರಿಯನ್ನು (ಸಾಕಲ್ಯೇನ) ತಿಳಿಯಲಾರರೆಂದರ್ಥ. || ೨೪ ||

ಗ || ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ ಮಹಾವಿಭೂತಯೇ ಸಕಲಸಾತ್ವತಪರಿವೃಢನಿಕರಕರಕಮಲಕುಡ್ಮಲೋ-ಪಲಾಲಿತಚರಣಾರವಿಂದಯುಗಲ ಪರಮ ಪರಮೇಷ್ಠಿನ್ನಮಸ್ತೇ || ೨೫ ||

ಸಕಲ=ಸಮಸ್ತ ಸಾತ್ವತ=ಜ್ಞಾನ ಭಕ್ತಿ ಮೊದಲಾದ ಗುಣಗಳುಳ್ಳ ಭಗವದ್ಭಕ್ತರಲ್ಲಿ ಪರಿವೃಢ = ಶ್ರೇಷ್ಠರಾದ ಬ್ರಹ್ಮಾದಿಗಳ ನಿಕರ=ಸಮೂಹದ ಕರಕಮಲಕುಡ್ಮಲ - ಕೈಗಳೆಂಬ ಕಮಲದ ಮೊಗ್ಗುಗಳಿಂದ ಉಪಲಾಲಿತ=ಸೇವಿತವಾದ ಚರಣಾರವಿಂದಯುಗಲ= ಎರಡು ಪಾದಾರವಿಂದಗಳುಳ್ಳ, ಪರಮ=ಪರಮೋತ್ಕೃಷ್ಟನಾದ ಪರಮೇಷ್ಠಿನ್ = ಸರ್ವೇಶ್ವರನಾದ ಶ್ರೀಹರಿಯೇ, ಮಹಾಪುರುಷನಾದ, ಮಹಾಸಾಮರ್ಥ್ಯವಂತನಾದ, ಮಹಾವಿಭೂತಿಸ್ವರೂಪನಾದ, ಭಗವತೇ= ಸಮಗ್ರೈಶ್ವರ್ಯಸಂಪನ್ನನಾದ ಓಂ= ಗುಣಪೂರ್ಣನಾದ ತೇ=ನಿನಗೆ ನಮೋ ನಮಃ. || ೨೫ ||

ಶ್ರೀ ಶುಕ ಉವಾಚ—

ಭಕ್ತಾಯೈತಾಂ ಪ್ರಪನ್ನಾಯ ವಿದ್ಯಾಮಾದಿಶ್ಯ ನಾರದಃ ।
ಯಯಾವಂಗಿರಸಾ ಸಾಕಂ ಧಾಮ ಸ್ವಾಯಂಭುವಂ ವಿಭೋ ||೨೬||

ಹೇ ವಿಭೋ=ಸಮರ್ಥನಾದ ಪರೀಕ್ಷಿದ್ರಾಜನೇ, ನಾರದರು ಪ್ರಪನ್ನಾಯ= ಶರಣುಹೊಂದಿದ ಭಕ್ತಾಯ = ಭಕ್ತನಾದ ಚಿತ್ರಕೇತುವಿಗೆ ಏತಾಂ ವಿದ್ಯಾಂ = ಈ ಸಂಕರ್ಷಣವಿದ್ಯೆಯನ್ನು ಆದಿಶ್ಯ=ಉಪದೇಶಿಸಿ ಅಂಗಿರಸಾ ಸಾಕಂ—ಅಂಗೀರಸರೊಂದಿಗೆ ಸ್ವಾಯಂಭುವಂ ಧಾಮ=ಬ್ರಹ್ಮದೇವರ ಲೋಕವಾದ ಸತ್ಯಲೋಕಕ್ಕೆ ಯಯೌ—ಹೋದರು. ಹಿಂದೆ 'ಅಂಗಿರಾ ಮುನಿರಾಜಗಾಮ ಸನಾರದಃ' ಎಂದು ಅಂಗೀರಸರಿಗೆ ಪ್ರಾಧಾನ್ಯವನ್ನೂ ನಾರದರಿಗೆ ಅಪ್ರಾಧಾನ್ಯವನ್ನೂ ಹೇಳಿದ್ದರು.

ಎನ್ನಿಸಿಕೊಳ್ಳುವ ಪರಬ್ರಹ್ಮವಸ್ತುವಾದ ನಿನ್ನನ್ನೇ ಶರಣುಹೊಂದುತ್ತೇನೆ. ಜ್ಞಾನ ಭಕ್ತ್ಯಾದಿ ಗುಣವಂತರಾದ ಎಲ್ಲ ಭಕ್ತರಲ್ಲಿ ಶ್ರೇಷ್ಠರಾದ ಬ್ರಹ್ಮಾದಿ ಸಮೂಹದ ಕೈಕಮಲಮೊಗ್ಗುಗಳಿಂದ ಸೇವಿತವಾದ ಪಾದಕಮಲದ್ವಯನೂ ಪರಮೋತ್ಕೃಷ್ಟನೂ ಸರ್ವೇಶ್ವರನೂ ಆದ ಶ್ರೀಹರಿಯೇ ಮಹಾಪುರುಷನೂ ಮಹಾ ಸಾಮರ್ಥ್ಯವಂತನೂ ಮಹಾ ವಿಭೂತಿ ಸ್ವರೂಪನೂ ಸಮಗ್ರೈಶ್ವರ್ಯಸಂಪನ್ನನೂ ಗುಣಪೂರ್ಣನೂ ಆದ ನಿನಗೆ ನಮೋ ನಮಃ.'

ಶ್ರೀ ಶುಕಾಚಾರ್ಯರು—ಪರೀಕ್ಷಿದ್ರಾಜ! ನಾರದರು ಶರಣುಹೊಂದಿದ ಭಕ್ತನಾದ ಚಿತ್ರಕೇತುವಿಗೆ ಮೇಲೆ ಹೇಳಿದ ಸಂಕರ್ಷಣವಿದ್ಯೆಯನ್ನು ಉಪದೇಶಿಸಿ

ಚಿತ್ರಕೇತುವಿಗೆ ಮಗನನ್ನು ಕರುಣಿಸಿ ಪ್ರಥಮಗುರುವಾದ್ದರಿಂದ ಅದು ಉಚಿತ. ಈಗ 'ನಾರದಃ ಅಂಗಿರಸಾ ಸಾಕಂ ಯಯೌ' ಎಂದು ನಾರದರಿಗೆ ಪ್ರಾಧಾನ್ಯ ಅಂಗಿರಸರಿಗೆ ಅಪ್ರಾಧಾನ್ಯ ಹೇಳಿದ್ದಾರೆ. ಇಲ್ಲಿ ನಾರದರು ಚಿತ್ರಕೇತುವಿಗೆ ವಿದ್ಯೆಯನ್ನು ಹೇಳಿಕೊಟ್ಟು ಉತ್ತಮ ವೈರಾಗ್ಯ ಹುಟ್ಟುವಂತೆ ಮಾಡಿದ್ದಾರಾದ್ದರಿಂದ ಅವರಿಗೆ ಪ್ರಾಧಾನ್ಯವೆಂದು ತಿಳಿಯಬೇಕು. || ೨೬ ||

ಚಿತ್ರಕೇತುಸ್ತು ವಿದ್ಯಾಂ ತಾಂ ಯಥಾ ನಾರದಭಾಷಿತಾಂ ।
ಧಾರಯಾಮಾಸ ಸಪ್ತಾಹಮಬ್ಭಕ್ಷಃ ಸುಸಮಾಹಿತಃ ॥ ೨೭ ॥

ಚಿತ್ರಕೇತುವಾದರೋ ನಾರದರು ಹೇಳಿಕೊಟ್ಟ ತಾಂ ವಿದ್ಯಾಂ=ಆ ಸಂಕರ್ಷಣ ವಿದ್ಯೆಯನ್ನು ಸುಸಮಾಹಿತಃ(ಸ೯)-ಅತ್ಯಂತ ಸಾವಧಾನಮನಸ್ಕನಾಗಿ ಅಬ್ಭಕ್ಷಃ (ಸ೯)=ನೀರನ್ನು ಮಾತ್ರ ಸೇವಿಸುವವನಾಗಿ ಯಥಾ=ಯಥಾವತ್ತಾಗಿ ಸಪ್ತಾಹಂ= ಏಳು ದಿನಗಳೂ ಪೂರ್ತಿಯಾಗಿ ಧಾರಯಾಮಾಸ=ಉಪಾಸನೆ ಮಾಡಿದರು. || ೨೭ ||

ತತಶ್ಚ ಸಪ್ತರಾತ್ರಾಂತೇ ವಿದ್ಯಯಾ ಧಾರ್ಯಮಾಣಯಾ ।
ವಿದ್ಯಾಧರಾಧಿಪತ್ಯಂ ಸ ಲೇಭೇಽಪ್ರತಿಹತಂ ನೃಪಃ ॥ ೨೮ ॥

ತತಃ=ಅನಂತರ ಸಃ ನೃಪಃ=ಆ ಚಿತ್ರಕೇತುವು ಸಪ್ತರಾತ್ರಾಂತೇ=ಏಳು ರಾತ್ರಿಗಳ ನಂತರ ಧಾರ್ಯಮಾಣಯಾ=ಉಪಾಸನೆ ಮಾಡುತ್ತಿದ್ದ ವಿದ್ಯಯಾ= ಆ ಸಂಕರ್ಷಣ ವಿದ್ಯೆಯ ಪ್ರಭಾವದಿಂದ ಅಪ್ರತಿಹತಂ=ಯಾವ ಬಗೆಯ ಆಜ್ಞಾ ಭಂಗವೂ ಇಲ್ಲದ ವಿದ್ಯಾಧರರ ಆಧಿಪತ್ಯವನ್ನು ಲೇಭೇ ಚ=ಹೊಂದಿದನು. || ೨೮ ||

ತತಃ ಕತಿಪಯಾಹೋಭಿರ್ವಿದ್ಯಯೇದ್ಧಮನೋಗತಿಃ ।
ಜಗಾಮ ದೇವದೇವಸ್ಯ ಶೇಷಸ್ಯ ಚರಣಾಂತಿಕಮ್ ॥ ೨೯ ॥

ತತಃ=ಅನಂತರ ಕತಿಪಯಾಹೋಭಿಃ=ಕೆಲವು ಹಗಲುಗಳಲ್ಲಿ ವಿದ್ಯಯಾ= ಸಂಕರ್ಷಣ ವಿದ್ಯೆಯಿಂದ ಇದ್ಧಮನೋಗತಿಃ=ದೀಪ್ತವಾದ ಮನಸ್ಸಿನಿಂದ ಗಮನ ವುಳ್ಳವನಾಗಿ ಆ ಚಿತ್ರಕೇತುವು ದೇವದೇವಸ್ಯ=ರುದ್ರದೇವರಿಗೂ ಪೂಜ್ಯರಾದ ಶೇಷ ದೇವರ ಚರಣಾಂತಿಕಂ=ಚರಣಸಮೀಪಕ್ಕೆ ಜಗಾಮ=ಹೋದನು. ವಿ.ಅ. ವಿಷ್ಣು ವಿನ ಉಪಾಸನೆಯಿಂದ ಶೇಷಸಮೀಪಗಮನವು ಹೇಗೆ ಸಾಧ್ಯ? ಎಂದರೆ ಅದಕ್ಕೆ

ಅಂಗೀರಸರೊಂದಿಗೆ ಸತ್ಯಲೋಕಕ್ಕೆ ತೆರಳಿದರು. ಚಿತ್ರಕೇತುವಾದರೋ ಸಾವಧಾನ ಮನಸ್ಕನೂ ನೀರನ್ನು ಮಾತ್ರ ಆಹಾರವಾಗಿ ಸೇವಿಸುವವನೂ ಆಗಿ ಆ ಸಂಕರ್ಷಣ ವಿದ್ಯೆಯನ್ನು ವಿಧಿವತ್ತಾಗಿ ಏಳು ದಿನಗಳು ಬಿಡದೆ ಉಪಾಸಿಸಿದನು. ಏಳನೇ ರಾತ್ರಿಯು ಕಳೆದಮೇಲೆ ಉಪಾಸಿಸಿದ ಆ ವಿದ್ಯೆಯ ಪ್ರಭಾವದಿಂದ ವಿದ್ಯಾಧರಾಧಿಪತ್ಯ ವನ್ನು ಹೊಂದಿದನು. ಅವನ ಆಜ್ಞೆಯನ್ನು ಯಾರೂ ಮೀರುತ್ತಿರಲಿಲ್ಲ. ಕೆಲವು ದಿನಗಳ ನಂತರ ಈ ವಿದ್ಯೆಯಿಂದ ದೀಪ್ತವಾದ ಮನಸ್ಸಿನಿಂದ ಶೇಷಾಂತರ್ಯಾಮಿ

ಹೀಗೆ ಸಮಾಧಾನವನ್ನು ತಿಳಿಯಬೇಕು. ಆಯಾಯಾ ದೇವತಾಂತರ್ಯಾಮಿ ವಿಷ್ಣುವನ್ನು ಉಪಾಸನೆ ಮಾಡುವುದರಿಂದ ಆಯಾಯಾ ದೇವತೆಗಳ ಸಮೀಪ ಪ್ರಾಪ್ತಿಯು ಕೂಡುವುದು. ಶೇಷಾಂತರ್ಯಾಮಿ ಸಂಕರ್ಷಣನನ್ನು ಉಪಾಸಿಸಿದ್ದರಿಂದ ಶೇಷನನ್ನು ಹೊಂದಿದನೆಂದು ಅಭಿಪ್ರಾಯ. 'ಅನ್ಯಾಂತರ್ಯಾಮಿಣಂ ವಿಷ್ಣುಂ ಉಪಾಸ್ಯಾನ್ಯಸಮೀಪಗಃ। ಭವೇದ್ಯೋಗ್ಯತಯಾ ತಸ್ಯ ಪದಂ ವಾ ಪ್ರಾಪ್ನುಯಾನ್ನರಃ ॥' ಅನ್ಯದೇವತಾಂತರ್ಯಾಮಿ ವಿಷ್ಣುವನ್ನು ಉಪಾಸಿಸಿದವನು ಆ ದೇವತಾ ಪದವಿಗೆ ಯೋಗ್ಯನಾಗಿದ್ದಲ್ಲಿ ಆ ಪದವಿಯನ್ನೂ ಹೊಂದುವನು. ಅಂದಮೇಲೆ ಆಯಾಯಾ ದೇವತಾಸಮೀಪಗಮನವು ಅತಿಶಯವೇನೂ ಅಲ್ಲವೆಂದು ಹೇಳಿದಂತಾಯಿತು. ಆದ್ದರಿಂದ ಚಿತ್ರಕೇತುವು ಶೇಷನನ್ನು ಕಂಡನೆಂದು ಹೇಳಿದ್ದರಿಂದ ಮತ್ತೆ ಮತ್ತೆ ಶೇಷದೇವರ ಸಮೀಪಕ್ಕೆ ಹೋಗುತ್ತಿದ್ದನೆಂಬ ಮಾತೂ ಕೂಡುತ್ತದೆ. ಇರಲಿ. ಚಿತ್ರಕೇತುವು ಶೇಷಾಂತರ್ಯಾಮಿ ವಿಷ್ಣುವನ್ನು ಉಪಾಸಿಸಿದನೆಂಬುದು ಯಾವ ಪ್ರಮಾಣದಿಂದ ತಿಳಿದುಬರುವುದು? ಎಂದರೆ 'ಶೇಷಾಂತರ್ಯಾಮಿಣಂ ವಿಷ್ಣುಂ ಚಿತ್ರಕೇತುರುಪಾಸ್ಯ ತು। ಶೇಷಾವಿಷ್ಟಹರೇಶ್ಚಾಪಿ ವರಾನ್ ಪ್ರಾಪ್ಯಾಪ ತದ್ಗತಿಮ್ ॥' ಎಂಬ ಪ್ರಮಾಣವಾಕ್ಯವು ಇದನ್ನು ಸ್ಪಷ್ಟಪಡಿಸುವುದು. ॥ ೨೯ ॥

ಮೃಣಾಲಗೌರಂ ಶಿತಿವಾಸಸಂ ಸ್ಫುರ-
ತ್ಕಿರೀಟ-ಕೇಯೂರ-ಕಟಿತ್ರ ಕಂಕಣಮ್ ।
ಪ್ರಸನ್ನವಕ್ತ್ರಾರುಣಲೋಚನಂ ವೃತಂ
ದದರ್ಶ ಸಿದ್ಧೇಶ್ವರಮಂಡಲೈಃ ಪ್ರಭುಮ್ ॥ ೩೦ ॥

ಮೃಣಾಲಗೌರಂ=ತಾವರೆಯ ಕಾಂಡಿನಂತೆ ಬೆಳ್ಳಗಿರುವ, ಶಿತಿವಾಸಸಂ=ನೀಲ ವಸ್ತ್ರವನ್ನು ಉಟ್ಟಿರುವ, ಸ್ಫುರತ್=ಪ್ರಕಾಶಿಸುವ ಕಿರೀಟ, ಕೇಯೂರ–ಕೇಶಾಭರಣ, ಕಟಿತ್ರ=ಉಡುದಾರ, ಮತ್ತು ಕಂಕಣಂ=ಕೈಕಡಗಗಳುಳ್ಳ, ಪ್ರಸನ್ನವಾದ ಮುಖ ಮತ್ತು ಕೆಂಪಗಿರುವ ಕಣ್ಣುಗಳುಳ್ಳ, ಸಿದ್ಧೇಶ್ವರ ಮಂಡಲೈಃ=ಸನಕ ಮೊದಲಾದ ಸಿದ್ಧೇಶ್ವರರ ಸಮೂಹಗಳಿಂದ ವೃತಂ = ಪರಿವೃತನಾದ ಪ್ರಭುಂ=ರುದ್ರಾದಿಗಳ ಸೃಷ್ಟಿ ಮೊದಲಾದವುಗಳಲ್ಲಿ ಸಮರ್ಥರಾದ ಶೇಷದೇವರನ್ನು ದದರ್ಶ=ನೋಡಿದನು. ॥ ೩೦ ॥

ಯನ್ನು ಹೊಂದಿ ಅದರ ಫಲವಾಗಿ ರುದ್ರಾದಿ ಪೂಜ್ಯರಾದ ಶೇಷದೇವರ ಪಾದ ಸಮೀಪಕ್ಕೆ ಹೋದನು. ತಾವರೆಯ ದಂಟಿನಂತೆ ಬೆಳ್ಳಗೂ, ನೀಲವಸ್ತ್ರಧಾರಿಗಳಾಗಿಯೂ ಪ್ರಕಾಶಮಾನ ಕಿರೀಟ–ಕೇಯೂರ–ಉಡುದಾರ–ಕೈಕಡಗಯುಕ್ತರಾಗಿಯೂ ಪ್ರಸನ್ನಮುಖ ಮತ್ತು ಕೆಂಪು ಕಣ್ಣುಗಳಿಂದ ಶೋಭಿತರಾಗಿಯೂ ಸನಕ ಮೊದಲಾದ ಸಿದ್ಧೇಶ್ವರರಿಂದ ಪರಿವೃತರಾಗಿಯೂ ಇದ್ದ ಶೇಷದೇವರನ್ನು ಕಂಡರು.

ತದ್ದರ್ಶನಧ್ವಸ್ತಸಮಸ್ತಕಿಲ್ಬಿಷಃ
ಸ್ವಸ್ಥಾಮಲಾಂತಃಕರಣೋಽಭ್ಯಯಾನ್ಮುಹುಃ ।
ಪ್ರವೃದ್ಧಭಕ್ತ್ಯಾ ಪ್ರಣಯಾಶ್ರುಲೋಚನಃ
ಪ್ರಹೃಷ್ಟರೋಮಾ ತಮನಾದಿಪೂರುಷಮ್ ॥ ೩೧ ॥

ತದ್ದರ್ಶನ=ಆ ಶೇಷಾಂತರ್ಯಾಮಿ ಶ್ರೀಹರಿಯ ದರ್ಶನದಿಂದ ಧ್ವಸ್ತಸಮಸ್ತ-ಕಿಲ್ಬಿಷಃ=ಎಲ್ಲ ಪಾಪಗಳನ್ನೂ ಕಳೆದುಕೊಂಡ, ಸ್ವಸ್ಥಾಮಲಾಂತಃಕರಣಃ=ಏಕಾಗ್ರವಾದ ರಾಗ ಮೊದಲಾದ ದೋಷಗಳಿಲ್ಲದ ಮನಸ್ಸುಳ್ಳ, ಪ್ರಣಯಾಶ್ರುಲೋಚನಃ=ಸ್ನೇಹದಿಂದ ಕಣ್ಣೀರು ತುಂಬಿದ ಕಣ್ಣುಗಳುಳ್ಳ, ಪ್ರವೃದ್ಧಭಕ್ತ್ಯಾ=ಹೆಚ್ಚಾಗಿ ಬೆಳೆದ (ಪೂರ್ಣವಾದ) ಭಕ್ತಿಯಿಂದ ಪ್ರಹೃಷ್ಟರೋಮಾ=ರೋಮಾಂಚನವುಳ್ಳ (ಸಃ)=ಆ ಚಿತ್ರಕೇತುವು ಅನಾದಿಪೂರುಷಂ=ವಾಯುದೇವರಿಗೆ ಕಾರಣವಾದ ಪೌರುಷವುಳ್ಳ ತಂ=ಸಂಕರ್ಷಣನನ್ನು (ಶೇಷಾಂತರ್ಯಾಮಿಯನ್ನು) ಮುಹುಃ=ಮತ್ತೆ ಮತ್ತೆ ಅಭ್ಯಯಾತ್=ಈ ಪ್ರಕಾರದಿಂದಲೇ ಹೊಂದುತ್ತಿದ್ದನು. ಈಗ ಶೇಷಾಂತರ್ಯಾಮಿಯನ್ನು ವಿದ್ಯೆಯಿಂದ ಉಪಾಸಿಸಿ ಹೇಗೆ ಅವನ ಸಮೀಪಕ್ಕೆ ಬಂದಿದ್ದನೋ ಹಾಗೆಯೇ ಇದೇ ಪ್ರಕಾರದಿಂದಲೇ ಅನೇಕವೇಳೆ ಅವನ ಸಮೀಪಕ್ಕೆ ಹೋಗಿದ್ದನೆಂದರ್ಥ. ||೩೧||

ಸ ಉತ್ತಮಶ್ಲೋಕ ಪದಾಬ್ಜವಿಷ್ಟರಂ
ಪ್ರೇಮಾಶ್ರುಲೇಶೈರುಪಸೇಚಯನ್ಮುಹುಃ ।
ಪ್ರೇಮೋಪರುದ್ಧಾಖಿಲವರ್ಣನಿರ್ಗಮೋ
ನೈವಾಶಕತ್ತಂ ಪ್ರಸಮೀಡಿತುಂ ಚಿರಮ್ ॥ ೩೨ ॥

ಪ್ರೇಮ=ಪ್ರೀತಿಯಿಂದ ಉಪರುದ್ಧ=ಬಿಗಿದುಬಂದ ಅಖಿಲವರ್ಣನಿರ್ಗಮಃ=ಎಲ್ಲ ವರ್ಣಗಳ ಶಬ್ದಗಳ ದ್ವಾರವುಳ್ಳ (ಕಂಠವು ಬಿಗಿದ) ಸಃ=ಚಿತ್ರಕೇತುವು ಪ್ರೇಮಾಶ್ರುಲೇಶೈಃ=ಭಕ್ತಿಯಿಂದ ಹೊರಹೊಮ್ಮಿದ ಕಣ್ಣೀರಿನ ಹನಿಗಳಿಂದ ಉತ್ತಮ

ಅವರು ರುದ್ರಾದಿ ಜಗತ್ತಿನ ಸೃಷ್ಟ್ಯಾದಿಗಳಲ್ಲಿ ಸಮರ್ಥರಾಗಿದ್ದರು. ಆ ಶೇಷಾಂತರ್ಯಾಮಿ ಶ್ರೀಹರಿಯ ದರ್ಶನದಿಂದ ಚಿತ್ರಕೇತುವಿನ ಎಲ್ಲ ಪಾಪಗಳೂ ಪರಿಹೃತವಾದುವು. ಅವನ ಮನಸ್ಸು ದೋಷರಹಿತವಾಗಿ ಏಕಾಗ್ರವಾಗಿತ್ತು. ಭಕ್ತಿಯು ಅಭಿವೃದ್ಧವಾಗಿ ಕಣ್ಣುಗಳು ನೀರುತುಂಬಿದುವು. ಮೈನವಿರೆದ್ದಿತು. ವಾಯುವಿಗೂ ಕಾರಣವಾದ ಪೌರುಷವುಳ್ಳ ಆ ಶೇಷಾಂತರ್ಯಾಮಿ ಶ್ರೀಹರಿಯನ್ನು ಹೀಗೆಯೇ ಮತ್ತೆ ಮತ್ತೆ ಹೊಂದುತ್ತಲೇ ಇದ್ದನು. ಪ್ರೀತಿಯಿಂದ ಗಂಟಲು ಬಿಗಿದು ಬಂದಿದ್ದ ಆತನು ಭಕ್ತಿಯನಿಮಿತ್ತ ಹೊರಹೊಮ್ಮಿದ ಕಣ್ಣೀರಿನ ಹನಿಗಳಿಂದ ಆ ಶೇಷಾಂತರ್ಯಾಮಿಯ ಪಾದಕಮಲಗಳ ಆಸನವನ್ನು ಮತ್ತೆ ಮತ್ತೆ ಅಭಿಷೇಕಿಸುತ್ತಿದ್ದನು. ಬಹಳ ಹೊತ್ತಾದರೂ ಆ ಶ್ರೀಹರಿಯನ್ನು ಸ್ತೋತ್ರಮಾಡಲು ಆತನಿಗೆ ಸಾಧ್ಯವಾಗಲಿಲ್ಲ.

ಶ್ಲೋಕ=ಶೇಷಾಂತರ್ಯಾಮಿ ಶ್ರೀಹರಿಯ ಪದಾಬ್ಧವಿಷ್ಟರಂ=ಪಾದಕಮಲಗಳ ಆಸನವನ್ನು ಮುಹುಃ=ಮತ್ತೆ ಮತ್ತೆ ಉಪಸೇಚಯನ್=ಅಭಿಷೇಕಿಸುತ್ತಾ ತಂ= ಆ ಶ್ರೀಹರಿಯನ್ನು ಚಿರಂ=ಬಹಳ ಹೊತ್ತು ಪ್ರಸಮೀಡಿತುಂ=ಭಕ್ತಿಯಿಂದ ಸ್ತೋತ್ರ ಮಾಡಲು ನೈವ ಅಶಕತ್=ಸಮರ್ಥನಾಗಲಿಲ್ಲ. ಸರ್ಗತ ಎಂಬ ಪಾಠದಲ್ಲಿ ಉಚ್ಚಾರಣೆ ಎಂದರ್ಥ. ಚಿರಕಾಲ ಸ್ತೋತ್ರಮಾಡದಿರುವುದರಲ್ಲಿ ಕಂಠವು ಬಿಗಿದು ಬಂದದ್ದು ಕಾರಣವೆಂದು ತಿಳಿಯಬೇಕು. || ೩೨ ||

ತತಃ ಸಮಾಧಾಯ ಮನೋ ಮನೀಷಯಾ
ಬಭಾಷ ಏತತ್ಪ್ರತಿಲಬ್ಧವಾಗ್ರಸಃ ।
ನಿಯಮ್ಯ ಸರ್ವೇಂದ್ರಿಯಬಾಹ್ಯವರ್ತನಂ
ಜಗದ್ಗುರುಂ ಸಾತ್ವತ ಶಾಸ್ತ್ರ(ಸ್ತೃ) ವಿಗ್ರಹಮ್ || ೩೩ ||

ತತಃ=ಅನಂತರ ಮನಃ=ಮನಸ್ಸನ್ನು ಸಮಾಧಾಯ=ಏಕಾಗ್ರವಾಗಿಮಾಡಿ ಮನೀಷಯಾ=ಧೃತಿರೂಪವಾದ ಪ್ರಜ್ಞೆಯಿಂದ ಪ್ರತಿಲಬ್ಧ=ಮತ್ತೆ ಹೊಂದಲ್ಪಟ್ಟ ವಾಗ್ರಸಃ (ಸರ್ಗ)=ಮಾತನಾಡುವ ಶಕ್ತಿಯುಳ್ಳವನಾಗಿ, ವಚನವೀರ್ಯವುಳ್ಳವ ನಾಗಿ, ಸರ್ವೇಂದ್ರಿಯಬಾಹ್ಯವರ್ತನಂ=ಎಲ್ಲ ಇಂದ್ರಿಯಗಳ ಬಾಹ್ಯ ವಿಷಯ ವ್ಯಾಪಾರಗಳನ್ನು ನಿಯಮ್ಯ=ನಿಯಮನ ಮಾಡಿಕೊಂಡು ಸಾತ್ವತ=ತನ್ನ ಭಕ್ತರ ಶಾಸ್ತ್ರ (ಸ್ತೃ)=ಶಿಕ್ಷಕವಾದ ವಿಗ್ರಹಂ=ಅವತಾರವುಳ್ಳ, ಭಕ್ತರಿಗೆ ತತ್ತ್ವೋಪದೇಶ ವಿಶೇಷವನ್ನು ಮಾಡುವ ಶರೀರವುಳ್ಳ ಜಗದ್ಗುರುಂ=ಆದ್ದರಿಂದಲೇ ಜಗತ್ತಿಗೇ ಗುರು ವಾದ ಆ ಶೇಷಾಂತರ್ಯಾಮಿ ಶ್ರೀಹರಿಯನ್ನು ಕುರಿತು ಏತತ್=ಮುಂದೆ ಹೇಳುವ ಸ್ತೋತ್ರವನ್ನು ಬಭಾಷೇ=ಹೇಳಿದನು. || ೩೩ ||

ಚಿತ್ರಕೇತುರುವಾಚ—

ಅಜಿತ ಜಿತಃ ಸಮಮತಿಭಿಃ ಸಾಧುಭಿ-
ರ್ಭವಾನ್ ಜಿತಾತ್ಮಭಿರ್ಭವತಾ ।
ವಿಜಿತಾಸ್ತೇಽಪಿ ಚ ಭಜತಾ-
ಮಕಾಮಾನಾಂ ಯ ಆತ್ಮದೋಽತಿಕರುಣಃ || ೩೪ ||

ಅನಂತರ ಮನಸ್ಸನ್ನು ಏಕಾಗ್ರವಾಗಿ ಮಾಡಿ ಪ್ರಜ್ಞೆಯಿಂದ ಮಾತನಾಡುವ ಶಕ್ತಿಯನ್ನು ಮತ್ತೆ ಸಂಪಾದಿಸಿಕೊಂಡು ಬಾಹ್ಯೇಂದ್ರಿಯ ವ್ಯಾಪಾರಗಳನ್ನು ನಿಯಮನ ಮಾಡಿ ಚಿತ್ರಕೇತುವು ಭಕ್ತರಿಗೆ ತತ್ತ್ವೋಪದೇಶ ಮಾಡಲೋಸುಗವೇ ಶರೀರಧಾರಿಯಾದ (ರುದ್ರಾದಿ) ಜಗತ್ತಿಗೇ ಗುರುವಾದ ಶೇಷಾಂತರ್ಯಾಮಿ ಶ್ರೀಹರಿ ಯನ್ನು ಮುಂದೆ ಹೇಳುವಂತೆ ಸ್ತೋತ್ರಮಾಡಿದನು.

'ಸ್ವಾಮಿನ್, ನೀನು ಯಾರಿಂದಲೂ ಜಿತನಲ್ಲ. ಅತ್ಯಂತ ಕೃಪಾಶಾಲಿಯಾದ ನೀನು ನಿನ್ನನ್ನು ಬಿಟ್ಟು ಮತ್ತೆ ಯಾವುದನ್ನೂ ಅಪೇಕ್ಷಿಸದಿರುವ ನಿನ್ನ ಭಜಕರಾದ

ಶ್ರೀಹರಿಯಲ್ಲಿರುವ ಭಕ್ತವಾತ್ಸಲ್ಯವೆಂಬ ಗುಣವನ್ನು ಸ್ಮರಿಸುವುದರಿಂದ ಶ್ರೀಹರಿಯು ಕ್ಷಿಪ್ರವಾಗಿ ಅನುಗ್ರಹಿಸುವನು ಎಂಬ ಅಭಿಪ್ರಾಯದಿಂದ ಅದನ್ನೇ ಮೊದಲು ಸ್ಮರಿಸುತ್ತಾರೆ. ಹೇ ಅಜಿತ-ಯಾರಿಂದಲೂ ಜಿತನಲ್ಲದ ಶ್ರೀಹರಿಯೇ, ಅತಿಕರುಣಃ-ಅತ್ಯಂತ ಕೃಪಾಶಾಲಿಯಾದ ಯಃ (ತ್ವಂ)=ಯಾವ ನೀನು ಅಕಾಮಾನಾಂ-ನಿನ್ನ ವಿನಹ ಮತ್ತೊಂದನ್ನು ಅಪೇಕ್ಷಿಸದಿರುವ ಭಜತಾಂ-ನಿನ್ನನ್ನು ಸೇವಿಸುವ ಸಾಧುಗಳಿಗೆ (ಯತಃ)=ಯಾವ ಕಾರಣದಿಂದ ಆತ್ಮದಃ=ನಿನ್ನನ್ನೇ ಕೊಡುವೆಯೋ (ಅಪರೋಕ್ಷನಾಗುವೆಯೋ) (ಅತಃ)=ಆ ಕಾರಣದಿಂದ ತೇಽಪಿ-ಅಕಾಮರಾದ ಅವರೂ ಭವತಾ ನಿನ್ನಿಂದ ವಿಜಿತಾಃ-ಜಯಿಸಲ್ಪಟ್ಟಿರುವರು. ಮತ್ತು ಜಿತಾತ್ಮಭಿಃ=ಮನಸ್ಸನ್ನು ಜಯಿಸಿದ ಸಮಮತಿಭಿಃ-ಎಲ್ಲ ಅಧಿಷ್ಠಾನಗಳಲ್ಲಿಯೂ ನಿರ್ದೋಷನಾಗಿ ನಿನ್ನನ್ನು ಕಾಣುವ ಸಾಧುಭಿಃ=ಭಕ್ತರಿಂದ ಭವಾನ್ ಚ-ಯಾರಿಂದಲೂ ಜಿತನಲ್ಲದ ನೀನೂ ಕೂಡ ಜಿತಃ=ವಶೀಕೃತನಾಗಿರುವೆ. ಚ ಎಂಬುದರಿಂದ ಭಕ್ತರನ್ನು ನೀನು ಆಕರ್ಷಿಸುವುದೂ ಭಕ್ತರು ನಿನ್ನನ್ನು ಭಕ್ತಿಯಿಂದ ವಶಮಾಡಿಕೊಂಡಿರುವುದೂ ನಿಯತವೆಂದು ಸೂಚಿಸಿರುವರು. ಇದರಿಂದ ಶ್ರೀಹರಿಯಲ್ಲಿ ಮಾಡುವ ಭಕ್ತಿ ಮತ್ತು ಶ್ರೀಹರಿಯ ಕರುಣೆ ಇವು ಅವನನ್ನು ವಶಮಾಡಿಕೊಳ್ಳುವಲ್ಲಿ ಕಾರಣಗಳೆಂದು ಹೇಳಿದಂತಾಯಿತು. || ೩೪ ||

ತವ ವಿಭವಃ ಖಲು ಭಗವನ್
ಜಗದುತ್ಪತ್ತಿಸ್ಥಿತಿಲಯಾದೀನಿ ।
ವಿಶ್ವಸೃಜಸ್ತೇಽಂಶಾಂಶಾ-
ಸ್ತತ್ರ ಮೃಷಾ ಸ್ಪರ್ಧಂತಿ ಪೃಥಗಭಿಮತ್ಯಾ ॥ ೩೫ ॥

ಶ್ರೀಹರಿಯು ಅಜಿತನೆಂಬಲ್ಲಿ ಪ್ರಮಾಣವನ್ನು ಹೇಳುತ್ತಾರೆ. (ಶ್ರೀಹರಿಯು ಅನನ್ಯಾಧೀನನೆಂಬುದು ಮಿಕ್ಕೆಲ್ಲವೂ ಅವನ ಅಧೀನವಾದ ಜನ್ಮಾದಿಗಳನ್ನು ಹೊಂದಿರುವುದರಿಂದಲೇ ಸಿದ್ಧಿಸುವುದೆಂದು ಹೇಳುತ್ತಾರೆ.) ಹೇ ಭಗವನ್=ಶ್ರೀಹರಿಯೇ, ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ, ಆದಿಪದದಿಂದ ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳು ತವ=ನಿನ್ನ ವಿಭವಃ ಖಲು=ಸ್ವರೂಪ ಲಕ್ಷಣಗಳಷ್ಟೆ! ತತ್ರ-ಶಾಸ್ತ್ರದಿಂದ ಇದು ಸಿದ್ಧವಾಗುತ್ತಿರಲು ತೇ=ನಿನ್ನ

ಸಜ್ಜನರಿಗೆ ನಿನ್ನ ದರ್ಶನ ಕೊಡುವೆ. ಇದರಿಂದ ನೀನವರನ್ನು ಜಯಿಸಿರುವೆ. ಮನಸ್ಸನ್ನು ಜಯಿಸಿ ಸರ್ವಾಧಿಷ್ಠಾನಗಳಲ್ಲಿಯೂ ನಿರ್ದೋಷನೆಂದೇ ನಿನ್ನನ್ನು ಕಾಣುವ ಭಕ್ತರಿಂದ ನೀನು ಜಿತನಾಗಿರುವೆ. ಅವರ ವಶವರ್ತಿಯಾಗಿರುವೆ. ಶ್ರೀಹರಿಯೇ, ಜಗತ್ತಿನ ಸೃಷ್ಟ್ಯಾದಿಗಳು ನಿನ್ನ ಸ್ವರೂಪ ಲಕ್ಷಣಗಳು. ಇದು ಶಾಸ್ತ್ರಸಿದ್ಧ. ಹೀಗಿರುವಾಗ ನಿನ್ನ ಭಿನ್ನಾಂಶರಾದ (ಬ್ರಹ್ಮಾದಿ) ಪ್ರಜೇಶ್ವರರು 'ನಾನು ಜಗನ್ನಿಯಾಮಕ, ನಾನು ಜಗನ್ನಿಯಾಮಕ' ಎಂದು ಪ್ರತ್ಯೇಕ

ಅಂಶಾಂಶಾಃ=ಭಿನ್ನಾಂಶರಾದ ವಿಶ್ವಸೃಜಃ=ಬ್ರಹ್ಮಾದಿ ಪ್ರಜೇಶ್ವರರು ಪೃಥಕ್–ನಾನು ಜಗನ್ನಿಯಾಮಕನು, ನಾನು ಜಗನ್ನಿಯಾಮಕನು, ನಾನು ಜಗತ್ತನ್ನು ಸೃಷ್ಟಿಸುವವನು ಎಂದು ಪ್ರತ್ಯೇಕ ಅಭಿಮತ್ಯಾ = ಜಗದೀಶ್ವರತ್ವಾಭಿಮಾನದಿಂದ ವೃಷಾ=ವ್ಯರ್ಥವಾಗಿ ಸ್ಪರ್ಧಂತಿ (ತೇ)=ಸ್ಪರ್ಧಿಸುವರು. ಶ್ರೀಹರಿಗಿಂತ ಭಿನ್ನರಾದ ದೇವತೆಗಳ ಜನ್ಮಾದಿಗಳು ಶ್ರೀಹರಿಯ ಅಧೀನವೆಂದು ಹೇಳಿದ್ದರಿಂದ ದೇವತೆಗಳ ಸಾಮರ್ಥ್ಯಕ್ಕೆ ವಿರುದ್ಧವಾಗಿ ಶ್ರೀಹರಿಯ ಮಹಿಮೆಯು ಅನಂತವೆಂದು ತೋರಿಸಿರುವರು. 'ಶೇಷಾಂತರ್ಯಾಮಿಣಂ' ಇತ್ಯಾದಿ ಮೇಲೆ ಹೇಳಿದ ಪ್ರಮಾಣದಿಂದ ಇದು ಶೇಷಾಂತರ್ಯಾಮಿಯ ಸ್ತೋತ್ರವೇ ಹೊರತು ಶೇಷದೇವರದಷ್ಟೇ ಸ್ತೋತ್ರವೆಂದು ತಿಳಿಯಬಾರದು. ಬ್ರಹ್ಮಾದಿಗಳು ತೇ – ನಿನ್ನ ಅಂಶ–ಜೀವರ ಬಿಂಬವಾದ ರೂಪಗಳ ಅಂಶಾಃ=ಪ್ರತಿಬಿಂಬರು. ನಿನ್ನ ಅಧೀನರೆಂದರ್ಥ. ವಿಭವ ಪದದಿಂದ ಸೃಷ್ಟ್ಯಾದಿಗಳು ಶ್ರೀಹರಿಗೆ ಕ್ರೀಡೆಯೇ ಹೊರತು ಆಯಾಸಕರಗಳಲ್ಲವೆಂದೂ ಆದ್ದರಿಂದ ಅವು ಮಹಿಮೆಗಳೆಂದೂ ತಿಳಿಸಿರುವರು. || ೩೫ ||

ಪರಮಾಣುಪರಮಮಹತೋ-
ಸ್ತ್ವಮಾದ್ಯಂತಾಂತರವರ್ತೀ ತ್ರಯವಿಧುರಃ ।
ಆದಾವಂತೇ ಚ ಸತ್ವಾನಾಂ
ಯದ್ಧ್ರುವಂ ತದೇವಾಂತರಕಾಲೇಽಪಿ ॥ ೩೬ ॥

'ತವ ವಿಭವಃ' ಎಂಬುದರಿಂದ ಗುಣಾನಂತ್ಯವನ್ನು ಹೇಳಿದ್ದಾಯಿತು. ಈಗ ದೇಶಾನಂತ್ಯ ಕಾಲಾನಂತ್ಯಗಳನ್ನು ಶ್ರೀಹರಿಗೆ ಹೇಳುತ್ತಾರೆ. ತ್ವಂ=ನೀನು ತ್ರಯ-ವಿಧುರಃ (ಅಪಿ)=ಸ್ವತಃ ಪ್ರಾಕೃತಪರಿಮಾಣವಿಲ್ಲದವನಾದ್ದರಿಂದ ಅಣು, ಮಹತ್ತು ಮತ್ತು ಮಧ್ಯಮ ಪರಿಮಾಣಗಳೆಂಬ ಮೂರೂ ಇಲ್ಲದವನಾದರೂ ಪರಮಾಣು ಮತ್ತು ಪರಮ ಮಹತ್ತುಗಳ ಆದ್ಯಂತಾಂತರವರ್ತೀ–ಆದಿಯಲ್ಲಿಯೂ (ಪರಮಾಣು ಕಾಲಾವಯವದಲ್ಲಿಯೂ), ಅಂತದಲ್ಲಿಯೂ ಪರಮ ಮಹತ್ಕಾಲಾವಯವದಲ್ಲಿಯೂ) ಅಂತರದಲ್ಲಿಯೂ (ಮಧ್ಯಮ ಪರಿಮಾಣದಲ್ಲಿಯೂ) ಇರುವ ಸ್ವಭಾವದವನು. ಸತ್ವಾನಾಂ=ಗಡಿಗೆ ಮೊದಲಾದ ಎಲ್ಲ ವಸ್ತುಗಳ (ಪ್ರಾಣಿಗಳ) ಆದೌ – ಉತ್ಪತ್ತಿಗೆ ಮೊದಲೂ ಅಂತೇ ಚ=ನಾಶದ ನಂತರವೂ ಯತ್–ಯಾವ ನಿನ್ನ ಸ್ವರೂಪವು

ಜಗದೀಶ್ವರರೆಂಬ ಅಭಿಮಾನದಿಂದ ವ್ಯರ್ಥವಾಗಿ ಸ್ಪರ್ಧಿಸುವರು. ಬ್ರಹ್ಮಾದಿಗಳು ನಿನ್ನ ಪ್ರತಿಬಿಂಬರು. ಅಪ್ರಾಕೃತನಾದ ನೀನು ಅಣು, ಮಹತ್ತು ಮತ್ತು ಮಧ್ಯಮ ಪರಿಮಾಣಗಳೆಂಬ ಮೂರು ಪರಿಮಾಣಗಳೂ ಇಲ್ಲದವನು. ಆದರೂ ಪರಮಾಣುಗಳ ಪರಮ ಮಹತ್ತುಗಳ ಆದಿಯಲ್ಲಿಯೂ ಅಂತ್ಯದಲ್ಲಿಯೂ ಮಧ್ಯದಲ್ಲಿಯೂ ಇರುವ ಸ್ವಭಾವದವನು. ಎಲ್ಲ ವಸ್ತುಗಳ ಪ್ರಾಣಿಗಳ ಉತ್ಪತ್ತಿಗೆ ಮೊದಲೂ ನಾಶದ ನಂತರವೂ ನಿನ್ನ ಸ್ವರೂಪವು ನಿಯತವಾಗಿ ಇದ್ದೇ ಇರುವುದು. ಅದೇ ಸ್ವರೂಪವೇ

ಧ್ರುವಂ=ತಪ್ಪದೆ ನಿಯತವಾಗಿ ಇರುವುದೋ ತತ್ ಏವ=ಅದೇ ಸ್ವರೂಪವೇ ಅಂತರ ಕಾಲೇ ಅಪಿ = ಮಧ್ಯಕಾಲದಲ್ಲಿಯೂ (ವರ್ತತೇ) = ಇರುವುದು. ಅಥವಾ ಪರಮಾಣು ವೆಂದರೆ ಸೂಕ್ಷ್ಮ (ಮೂಲ) ಕಾರಣ, ಪರಮ ಮಹತ್ತೆಂದರೆ ಅಂತಿಮ ಕಾರ್ಯ. ಇವುಗಳ ಆದಿ, ಅಂತ ಮತ್ತು ಮಧ್ಯಗಳಲ್ಲಿಯೂ ಇರುವ ಸ್ವಭಾವದವನು. ಆದ್ದರಿಂದಲೇ ಆದ್ಯಂತ ಮಧ್ಯ ಶೂನ್ಯನು. ನೀನೇ ಶಾಶ್ವತನು. ನಿನ್ನಿಂದ ಸೃಷ್ಟರಾದ ಬ್ರಹ್ಮಾದಿಗಳು ಶಾಶ್ವತರಲ್ಲ. ಏಕೆಂದರೆ, ಯಾವುದು ಸತ್ವಾನಾಂ= ಗುಣತ್ರಯ ಕಾರ್ಯಗಳ ಮೊದಲಿನಲ್ಲಿಯೂ ಕೊನೆಯಲ್ಲಿಯೂ ಮಧ್ಯದಲ್ಲಿಯೂ ಇರುವುದೋ ಅದೇ ಧ್ರುವ (ಶಾಶ್ವತ) ವೆನಿಸುವುದು ಎಂದೂ ಅರ್ಥ ಮಾಡಿರುವರು. ಇದರಿಂದ ನೀನೇ ಸೃಷ್ಟ್ಯಾದಿ ಕರ್ತನೆಂಬುದನ್ನು ಪ್ರತಿಪಾದಿಸಿದಂತಾಯಿತು. || ೩೬ ||

ಕ್ಷಿತ್ಯಾದಿಭಿರೇಷ ಕಿಲಾವೃತಃ ಸಪ್ತಭಿ-
ರ್ದಶಗುಣೋತ್ತರೋತ್ತರೈರಾಂಡಕೋಶಃ ।
ಯತ್ರ ಭಗವತ್ಯಣುಭ್ಯೋಽಣುಕಲ್ಪಃ
ಸಹಾಂಡಕೋಟಿಭಿಸ್ತದನಂತಮ್ || ೩೭ ||

ಯಃ=ಯಾವ ಬ್ರಹ್ಮಾಂಡಕೋಶವು ದಶಗುಣೋತ್ತರೋತ್ತರೈಃ=ಹಿಂದಿನದಕ್ಕಿಂತ ಮುಂದಿನ ತತ್ವವು ಹತ್ತರಷ್ಟು ಹೆಚ್ಚಾಗಿರುವ ಕ್ಷಿತ್ಯಾದಿಭಿಃ ಸಪ್ತಭಿಃ=ಭೂಮಿಯನ್ನು ಬಿಟ್ಟು ನೀರು, ತೇಜಸ್ಸು, ವಾಯು, ಆಕಾಶ, ಅಹಂಕಾರ, ಮಹತ್ತತ್ವ ಮತ್ತು ಗುಣತ್ರಯಗಳೆಂಬ ಏಳರಿಂದ ಆವೃತಃ=ಆವರಿಸಲ್ಪಟ್ಟಿರುವುದೋ (ಸಃ) ಏಷಃ ಆಂಡಕೋಶಃ— ಈ ಬ್ರಹ್ಮಾಂಡಕೋಶವು ಅಂಡಕೋಟಿಭಿಃ ಸಹ = ಇಂತಹ ಕೋಟಿಗಟ್ಟಲೆ ಬ್ರಹ್ಮಾಂಡಗಳೊಂದಿಗೆ ಯತ್ರ ಭಗವತಿ = ಯಾವ ಶ್ರೀಹರಿಯಲ್ಲಿ ಅಣುಭ್ಯಃ=ಸೂಕ್ಷ್ಮವಾದವುಗಳಿಗಿಂತ ಅಣುಕಲ್ಪಃ=ಸೂಕ್ಷ್ಮವಾದುದಾಗಿ ಇದೆಯೋ ತತ್=ಆ ಶ್ರೀಹರಿಯ ಸ್ವರೂಪವು ಅನಂತಂ=ಅಪರಿಚ್ಛಿನ್ನವಾದುದು. ಅಪರಿಚ್ಛಿನ್ನವಾದ್ದರಿಂದ ಇದು ಉಚಿತವೆಂದು ಕಾರಣವನ್ನು ತಿಳಿಸಲು ಈ ವಿಶೇಷಣವನ್ನು ಕೊಟ್ಟಿರುವರು. ವಿ.ಅ. ಕ್ಷಿತ್ಯಾದಿ ಎಂಬಲ್ಲಿ ಅತದ್ಗುಣಸಂವಿಜ್ಞಾನ ಬಹುವ್ರೀಹಿ

ಮಧ್ಯಕಾಲದಲ್ಲಿಯೂ ಇರುವುದು. ಆದ್ದರಿಂದ ನೀನೇ ಶಾಶ್ವತನು. ಈ ಬ್ರಹ್ಮಾಂಡ ಕೋಶವು ಪೃಥಿವಿಗಿಂತ ಹತ್ತು ಪಟ್ಟು ಹೆಚ್ಚಾದ ನೀರು, ಅದಕ್ಕಿಂತ ಹತ್ತು ಪಟ್ಟು ಹೆಚ್ಚಾದ ತೇಜಸ್ಸು, ಅದಕ್ಕಿಂತ ಹತ್ತು ಪಟ್ಟು ಹೆಚ್ಚಾದ ವಾಯು, ಅದಕ್ಕಿಂತ ಹತ್ತು ಪಟ್ಟು ಹೆಚ್ಚಾದ ಆಕಾಶ, ಅದಕ್ಕಿಂತ ಹತ್ತರಷ್ಟು ಹೆಚ್ಚಾದ ಅಂಹಕಾರ, ಅದಕ್ಕಿಂತ ಹತ್ತರಷ್ಟು ಹೆಚ್ಚಾದ ಮಹತ್ತತ್ವ, ಅದಕ್ಕಿಂತ ಹತ್ತರಷ್ಟು (ತಮಸ್ಸು, ಅದಕ್ಕೆ ಎರಡರಷ್ಟು ರಜಸ್ಸು, ಅದಕ್ಕೆ ಎರಡರಷ್ಟು ಸತ್ವ ಹೀಗೆ) ಗುಣತ್ರಯಗಳು ಹೀಗೆ ಏಳು ಆವರಣಗಳಿಂದ ಕೂಡಿರುವುದು. ಇಂತಹ ಕೋಟಿಗಟ್ಟಲೆ ಬ್ರಹ್ಮಾಂಡ ಗಳು ನಿನ್ನಲ್ಲಿ ಸೂಕ್ಷ್ಮಕ್ಕಿಂತ ಸೂಕ್ಷ್ಮವಾಗಿರುವುವು. ಆದ್ದರಿಂದ ನಿನ್ನ ಸ್ವರೂಪವು

ಎಂದು ತಿಳಿಯಬೇಕು. ಆದ್ದರಿಂದ ಕ್ಷಿತಿಯನ್ನು ಬಿಟ್ಟು ಎಂದರ್ಥವಾಗುವುದು. ಕ್ಷಿತಿಯನ್ನು ಸೇರಿಸಿದಲ್ಲಿ ಎಂಟು ಆವರಣಗಳಾಗುವುವು. ಸಪ್ತಭಿಃ ಎಂಬುದು ತಪ್ಪಾಗುವುದು. ದಶಗುಣಾಧಿಕಗಳಾದವುಗಳು ಏಳು. ಪೃಥಿವಿಯು ದಶಗುಣಾಧಿಕ ವಲ್ಲ. ಪೃಥಿವಿಗಿಂತ ನೀರು ಹತ್ತರಷ್ಟು ಅಧಿಕವೆಂದು ತಿಳಿಸಲು ಕ್ಷಿತಿ ಪದವನ್ನು ಹೇಳಿರುವರು. 'ಅಬಗ್ನೀರನಭೋಽಹಂಕೃನ್ಮಹತ್ತತ್ವಗುಣತ್ರಯೈಃ | ಕ್ರಮಾದ್ದಶೋತ್ತರೈರೇತದಾವೃತಂ ಪರತಸ್ತತಃ ||' ಎಂಬ ಪ್ರಮಾಣವೇ ಇದಕ್ಕೆ ಆಧಾರ. ಇದರಂತೆ ತಮಸ್ಸು, ರಜಸ್ಸು ಮತ್ತು ಸತ್ವ ಮೂರು ಗುಣಗಳೂ ಸೇರಿ ಹತ್ತರಷ್ಟು ಮಾತ್ರ ಅಧಿಕ. ಆದ್ದರಿಂದ ಮೇಲಿನ ಪ್ರಮಾಣದಲ್ಲಿ 'ಗುಣೈಃ' ಎಂದು ಹೇಳದೆ 'ಗುಣತ್ರಯೈಃ' ಎಂದು ಹೇಳಿರುವರು. ಗುಣಗಳು ಪರಸ್ಪರ ದ್ವಿಗುಣಾಧಿಕವೆಂದು ಪ್ರಸಿದ್ಧಿಯು. 'ತಮಸೋ ರಜಸ್ತು ದ್ವಿಗುಣಂ, ರಜಸಃ ಸತ್ವಮೇವ ಚ | ಪರಿಮಾಣತ ಏವಂ ಸ್ಯುಸ್ತ್ರಯಂ ಪ್ರಕೃತಿಜಾ ಗುಣಾಃ' ಎಂಬ ಪ್ರಮಾಣವು ಈ ಅರ್ಥವನ್ನು ಸ್ಪಷ್ಟಪಡಿಸುವುದು. ಇದು ಬಿಟ್ಟು ಒಂದೊಂದು ಗುಣವೂ ದಶಗುಣಾಧಿಕವೆಂದು ಹೇಳಿದಲ್ಲಿ ಸಪ್ತಭಿಃ ಎಂಬುದಕ್ಕೆ ವಿರೋಧ ಬರುವುದು. || ೩೭ ||

ವಿಷಯತೃಷೋ ನರಪಶವೋ ಯೇ (ಯ)
ಉಪಾಸತೇ ವಿಭೂತೀರ್ನ ಪರಂ ತ್ವಾಮ್ |
ತೇಷಾಮಾಶಿಷ ಈಶ ತದನು
ವಿನಶ್ಯಂತಿ ಯಥಾಽರಾಜಕುಲಮ್ || ೩೮ ||

ಹೀಗೆ ಶ್ರೀಹರಿಯ ಸ್ವರೂಪವನ್ನು ಹೇಳಿ ಅದನ್ನು ತಿಳಿಯುವುದರಿಂದ ಆಗುವ ಫಲವನ್ನೂ ತಿಳಿಯದಿರುವುದರಿಂದ ಆಗುವ ಅನರ್ಥವನ್ನೂ ಹೇಳುತ್ತಾರೆ. ವಿಷಯತೃಷಃ=ಶಬ್ದ ಮೊದಲಾದ ವಿಷಯಗಳಲ್ಲಿಯೇ ಆಸೆಯಿರುವ ಆದ್ದರಿಂದಲೇ ನರಪಶವಃ=ಮನುಷ್ಯಾಕಾರದ ಪಶುಗಳಾದ ಯೇ=ಯಾವ ಮಂದಾಧಿಕಾರಿಗಳಿರುವರೋ (ತೇ)=ಅವರು ವಿಭೂತೀಃ=(ನಿನ್ನ ವಿಶೇಷ ಸನ್ನಿಧಾನಯುಕ್ತರಾದ) ಬ್ರಹ್ಮ, ರುದ್ರ, ಇಂದ್ರ ಮೊದಲಾದವರನ್ನೇ ಉಪಾಸತೇ=ತಮ್ಮ ಕಾರ್ಯ ಸಿದ್ಧಿಗಾಗಿ ಉಪಾಸಿಸುವರು. ಪರಂ=ಅವರ ಪಾಲಕನೂ ಅವರಿಗೆ ಜ್ಞಾನಾದಿಗಳ ಪೂರ್ತಿಯನ್ನು

ಅಪರಿಚ್ಛಿನ್ನ (ಅನಂತ) ವಾದುದು. ಶಬ್ದಾದಿ ಲೌಕಿಕ ವಿಷಯಗಳಲ್ಲಿ ಆಶೆಯಿರುವವರು ನರ ಪಶುಗಳು. ಇವರು ಮಂದಾಧಿಕಾರಿಗಳು. ಇವರು ನಿನ್ನ ವಿಶೇಷ ಸನ್ನಿಧಾನ ಯುಕ್ತರಾದ ಬ್ರಹ್ಮ ರುದ್ರ ಇಂದ್ರ ಮೊದಲಾದವರನ್ನೇ ತಮ್ಮ ಇಷ್ಟಸಿದ್ಧಿಗಾಗಿ ಪೂಜಿಸುವರು. ಈ ಬ್ರಹ್ಮಾದಿಗಳಿಗೆ ಪಾಲಕನೂ ಉತ್ತಮನೂ ಆದ್ದರಿಂದ ಅವರಿಗಿಂತ ಭಿನ್ನನೂ ಆದ ನಿನ್ನನ್ನು ಉಪಾಸಿಸುತ್ತಿಲ್ಲ. ಈಶನೇ, ಹೀಗೆ ಬ್ರಹ್ಮಾದಿಗಳನ್ನು ಉಪಾಸಿಸುವ ಅವರ ಇಷ್ಟಾರ್ಥಗಳು ಪ್ರಾಪ್ತವಾದ ಕೂಡಲೇ (ಅನುಭವಿಸಿದ ಕೂಡಲೇ) ಅರಾಜಕ ಜನರಂತೆ, ಧರ್ಮವಿರೋಧಿ ರಾಜವಂಶದಂತೆ ನಾಶವಾಗುವುವು.

ಕೊಡುವವನೂ ಆದ್ದರಿಂದಲೇ ಅವರಿಗಿಂತ ಉತ್ತಮನೂ ಆದ್ದರಿಂದಲೇ ಭಿನ್ನನೂ ಆದ ತ್ವಾಂ=ನಿನ್ನನ್ನು ನ (ಉಪಾಸತೇ)=ಉಪಾಸಿಸುವುದಿಲ್ಲ. ಹೇ ಈಶ=ನಿಯಾಮಕ ನಾದ ಶ್ರೀಹರಿಯೇ, ತೇಷಾಂ=ಹೀಗೆ ಬೇರೆ ದೇವತೆಗಳನ್ನು ಉಪಾಸಿಸುವ ಅವರ ಆಶಿಷಃ=ಇಷ್ಟಾರ್ಥಗಳು ತದನು=ಹೊಂದಿದ ಕೂಡಲೇ, ಸ್ವಲ್ಪಕಾಲ ಫಲವನ್ನು ಅನುಭವಿಸಿದ ಕೂಡಲೇ ಯಥಾ ಅರಾಜಕುಲಂ (ತಥಾ)=(೧) ಪಾಲಕನಾದ ರಾಜ ನಿಲ್ಲದ ಜನಸಮುದಾಯದಂತೆ, (೨) ಧರ್ಮ ವಿರುದ್ಧರಾದ ರಾಜರ ವಂಶದಂತೆ (ರಾಜಕುಲಂ ಎಂದು ಪದಚ್ಛೇದ ಮಾಡಿದಾಗ ರಾಜರ ವಂಶವು ನಾಶವಾದಮೇಲೆ ಅವರ ಸೇವಕರ ಇಷ್ಟಾರ್ಥಗಳು ನಾಶವಾಗುವಂತೆ ಎಂದರ್ಥ.) ವಿನಶ್ಯಂತಿ=ನಾಶ ವಾಗುವುವು. 'ತದ್ಯಥಾಸ್ಯಾಂತತಃ ಕ್ಷೀಯತ ಏವ' ಎಂಬ ಶ್ರುತಿ ಸಿದ್ಧವಿದು. ವಿಷಯ ಕಾಮನೆಯಿಂದ ಅನ್ಯೋಪಾಸಕರು ಮಂದರೆಂದರ್ಥ. || ೩೮ ||

ಕಾಮಧಿಯಸ್ತ್ವಯೀಶ ರಚಿತಾ
ನ ಪುನರಾರೋಹಂತಿ ಯಥಾ ಕರಂಭಬೀಜಾನಿ ।
ಜ್ಞಾನಾತ್ಮನ್ಯಗುಣಮಯೇ
ಗುಣಗಣತೋಽಸ್ಯ ದ್ವಂದ್ವಜಾಲಾನಿ || ೩೯ ||

ವಿಷಯ ಕಾಮನೆಯಿಂದಲಾದರೂ ಸರಿಯೇ ನಿನ್ನನ್ನು ಸೇವಿಸಿದಲ್ಲಿ ಕ್ರಮವಾಗಿ ಮೋಕ್ಷವೇ ಸಿಗುವುದು. ಇದು ಧ್ರುವರಾಜರೇ ಮೊದಲಾದವರ ವಿಷಯದಲ್ಲಿ ದೃಷ್ಟ ವಾಗಿದೆಯೆಂಬ ಅಭಿಪ್ರಾಯದಿಂದ ಹೇಳುತ್ತಾರೆ. ಹೇ ಈಶ=ನಿಯಾಮಕನೇ, ಕಾಮಧಿಯಃ (ಅಪಿ)=ಶಬ್ದಾದಿಗುಣ ವಿಷಯ ಕಾಮನೆಗಳೇ ಆಗಿದ್ದರೂ ಜ್ಞಾನಾತ್ಮನಿ=ಜ್ಞಾನಾನಂದಾದಿ ಕಲ್ಯಾಣಗುಣಗಣಸ್ವರೂಪನಾದ ಆದ್ದರಿಂದಲೇ ಅಗುಣಮಯೇ=ತ್ರಿಗುಣವಿಕಾರವಾದ ದೇಹವಿಲ್ಲದ ತ್ವಯಿ=ನಿನ್ನಲ್ಲಿ (ನಿನ್ನ ವಿಷಯಕಗಳಾಗಿ) ರಚಿತಾ (ಯದಿ)=ಮಾಡಿದವುಗಳಾದಲ್ಲಿ ಕರಂಭ ಬೀಜಾನಿ ಯಥಾ (ತಥಾ)=ಹುರಿದ ಬೀಜಗಳಂತೆ ಪುನಃ ನ ಆರೋಹಂತಿ=ಮತ್ತೆ ಹುಟ್ಟು ವುದಿಲ್ಲ. ದೇಹಾಂತರಾವೃತ್ತಿಗೆ ಕಾರಣಗಳಾಗುವುದಿಲ್ಲ. ಅಸ್ಯ=ಈ ಜೀವ ಜಗತ್ತಿಗೆ ಗುಣಗಣತಃ=ಸತ್ವಾದಿ ಪ್ರಾಕೃತ ಗುಣ (ವಿಷಯ) ಸಂಬಂಧದಿಂದಲೇ ದ್ವಂದ್ವ ಜಾಲಾನಿ=ಸುಖದುಃಖ ಸಮೂಹಗಳು (ಭವಂತಿ)=ಆಗುವುವು. ನಿರ್ಗುಣನಾದ ನಿನ್ನ ಸಂಬಂಧದಿಂದ ಕ್ರಮವಾಗಿ ಮೋಕ್ಷವೇ ಆಗುವುದೆಂದರ್ಥ. || ೩೯ ||

ವಿಷಯಾಪೇಕ್ಷೆಗಳೇ ಆದರೂ ಜ್ಞಾನಾನಂದಾದಿ ಕಲ್ಯಾಣಗುಣಸ್ವರೂಪನೂ ಆದ್ದ ರಿಂದಲೇ ಸತ್ವಾದಿ ತ್ರಿಗುಣ ವಿಕಾರ ದೇಹಶೂನ್ಯನೂ ಆದ ನಿನ್ನನ್ನೇ ವಿಷಯೀಕರಿಸ ದಲ್ಲಿ ಹುರಿದ ಬೀಜಗಳಂತೆ ಅವು ಮತ್ತೆ ದೇಹಾಂತರ ಪ್ರವೃತ್ತಿಗೆ ಕಾರಣಗಳಾಗು ವುದಿಲ್ಲ. ಈ ಜೀವರಿಗೆ ಪ್ರಾಕೃತ ಗುಣ ಸಂಬಂಧದಿಂದಲೇ ದುಃಖಮಿಶ್ರವಾದ ಸುಖವಾಗುತ್ತಿರುವುದು. ಅಪ್ರಾಕೃತನಾದ ನಿನ್ನ ಸಂಬಂಧದಿಂದ ಕ್ರಮವಾಗಿ

ಜಿತಮಜಿತ ತದಾ ಭವತಾ
ಯದಾಽಽಹ ಭಾಗವತಂ ಧರ್ಮಮನವದ್ಯಮ್ ।
ನಿಷ್ಕಿಂಚನಾ ಯೇ ಮುನಯ
ಆತ್ಮಾರಾಮಾ ಯಮುಪಾಸತೇಽಪವರ್ಗಾಯ ॥ ೪೦ ॥

ದುಃಖಾತ್ಮಕವಾದ ಸಂಸಾರ ನಿವೃತ್ತಿಯು ಯಾವುದರಿಂದಾಗುವುದೆಂದು ಆಶಂಕಿಸಿ ಭಾಗವತ ಧರ್ಮಾನುಷ್ಠಾನದಿಂದ ಅದರ ನಿವೃತ್ತಿಯಾಗುವುದೆಂದು ಅಭಿಪ್ರಾಯವುಳ್ಳವರಾಗಿ ಹೇಳುತ್ತಾರೆ. ಅಜಿತ=ಯಾವುದರಿಂದಲೂ ಜಿತನಾಗದ ಹೇ ಸ್ವಾಮಿಯೇ, ಯೇ=ಯಾರು ನಿಷ್ಕಿಂಚನಾಃ=ಯಾವ ಅಪೇಕ್ಷೆಯೂ ಇಲ್ಲದವರೋ ಆದ್ದರಿಂದಲೇ ಆತ್ಮಾರಾಮಾಃ=ನಿನ್ನಲ್ಲಿಯೇ ಅತಿಶಯವಾದ ರತಿಯುಳ್ಳವರೋ ತೇ=ಅಂತಹ ಮುನಯಃ=ಮನನಶೀಲರಾದ ಸನಕಾದಿಗಳು ಅಪವರ್ಗಾಯ=ಮೋಕ್ಷಕ್ಕಾಗಿ ಯಂ=ಯಾವ ನಿವೃತ್ತಿ (ಭಾಗವತ) ಧರ್ಮವನ್ನು ಉಪಾಸತೇ = ಉಪಾಸಿಸುವರೋ ತಂ - ಆ ಅನವದ್ಯಂ = ಸಂಸಾರಕಾರಣತ್ವ ಮೊದಲಾದ ದೋಷಗಳಿಲ್ಲದ ಭಾಗವತಂ ಧರ್ಮಂ=ನಿವೃತ್ತಿ ಧರ್ಮವನ್ನು ಯದಾ=ಯಾವಾಗ ಭವಾ=ನೀನು ಆಹ=ಅವರಿಗೆ ಉಪದೇಶಿಸಿದೆಯೋ ತದಾ=ಆಗಲೇ ಭವತಾ=ನಿನ್ನಿಂದ ಜಿತಂ=ಸಂಸಾರ ಸ್ವರೂಪವು ಜಯಿಸಲ್ಪಟ್ಟಿತು. ಭಾಗವತ ಧರ್ಮವನ್ನು ಹೇಳುವ ಮೂಲಕ ಭಕ್ತರಿಗೆ ಸಂಸಾರವನ್ನು ಜಯಿಸುವ ಉಪಾಯವನ್ನು ಹೇಳಿದೆಯೆಂದರ್ಥ. 'ತಥಾ ಯಥಾ' ಎಂಬ ಪಾಠದಲ್ಲಿ ನೀನು ಭಾಗವತ ಧರ್ಮವನ್ನು ಹೇಗೆ ಹೇಳಿದೆಯೋ ಹಾಗೆ ನಿನ್ನಿಂದ ಸರ್ವೋತ್ಕೃಷ್ಟತೆಯಿಂದ ಇರಲ್ಪಟ್ಟಿತು. ಅಥವಾ ನೀನು ಯಥಾವತ್ತಾಗಿ ಉಪದೇಶಿಸಿದೆ. ನಿನ್ನಿಂದ ಜಯಿಸೋಣವೂ ಆಯಿತು. ಎಂದಾದರೂ ಅರ್ಥ. ಯಂ=ಯಾವ ಪರಮಾತ್ಮನನ್ನು ಉಪಾಸಿಸುವರೋ ಆ ನಿನ್ನಿಂದ ಎಂದೂ ಅನ್ವಯ ಮಾಡಿರುವುದುಂಟು. ಇದರಿಂದ ಫಲಕಾಮನೆಯಿಂದ ನಿನ್ನನ್ನೂ ಆರಾಧಿಸಿದರೂ ಮೋಕ್ಷ ಸಿಗುವಾಗ ಭಾಗವತ ಧರ್ಮಕ್ಕೆ ನೀನೇ ಸಂಪ್ರದಾಯ ಪ್ರವರ್ತಕ ಆದರ ಮಹಿಮೆಯನ್ನು ಹೇಳುವುದೇನು? ಎಂದಂತಾಯಿತು. ॥ ೪೦ ॥

ವಿಷಮಮತಿರ್ನ ಯತ್ರ ನೃಣಾಂ
ತ್ವಮಹಮಿತಿ ಮಮ ತವೇತಿ ಚ ಯೋಽನ್ಯತ್ರ ।

ಕೇವಲ ಸುಖವೇ-ಮೋಕ್ಷವೇ-ಆಗುವುದು. ಹೇ ಅಜಿತ, ಯಾವ ಅಪೇಕ್ಷೆಯೂ ಇಲ್ಲದವರಾದ್ದರಿಂದಲೇ ನಿನ್ನಲ್ಲಿಯೇ ರತಿಯನ್ನು ಕಾಣುವ ಸನಕಾದಿ ಮುನಿಗಳು ಮೋಕ್ಷಕ್ಕಾಗಿ ಭಾಗವತ (ನಿವೃತ್ತಿ) ಧರ್ಮವನ್ನು ಉಪಾಸಿಸುವರು. ಅಂತಹ ನಿರ್ದೋಷವಾದ ಆ ಧರ್ಮವನ್ನು ನೀನೇ ಉಪದೇಶಿಸಿದೆ. ಆಗಲೇ ನೀನು ಭಕ್ತರಿಗೆ ಸಂಸಾರವನ್ನು ಜಯಿಸುವ ಉಪಾಯವನ್ನು ತಿಳಿಸಿಕೊಟ್ಟೆ. ಆ ಭಾಗವತ ಧರ್ಮ

ವಿಷಮಧಿಯಾ ರಚಿತಃ ಸ
ಹ್ಯಶುದ್ಧಃ ಕ್ಷಯಿಷ್ಣುರಧರ್ಮಬಹುಲಃ ॥ ೪೧ ॥

ಆ ಧರ್ಮಜ್ಞಾನದಿಂದ ಫಲವೇನು? ಎಂದರೆ ಹೇಳುತ್ತಾರೆ. ಯತ್ರ= ಯಾವ ಧರ್ಮವನ್ನು ತಿಳಿದದ್ದೇ ಆದರೆ ನೃಣಾಂ=ಜನರಿಗೆ ತ್ವಂ=ನೀನು (ಸ್ವತಂತ್ರನು) ಅಹಂ=ನಾನು (ಸ್ವತಂತ್ರನು) ಇತಿ=ಎಂಬ ತವ=ನಿನ್ನದು ಮಮ=ನನ್ನದು ಇತಿ= ಎಂಬ ವಿಷಮಮತಿಃ=ಶಾಸ್ತ್ರ ನಿಷಿದ್ಧ ಬುದ್ಧಿಯು ನ (ಭವತಿ) ಆಗುವುದಿಲ್ಲವೋ ಚ=ಎಲ್ಲವೂ ಶ್ರೀಹರಿಯ ಅಧೀನ, ಅವನಿಂದ ಪ್ರೇರಿತರಾದ ನಾನು ನೀನು ಕಾರ್ಯ ದಲ್ಲಿ ಪ್ರವೃತ್ತರಾಗುವೆವು ಎಂಬ ಶಾಸ್ತ್ರ ವಿಹಿತ (ಸಮ) ಬುದ್ಧಿಯು (ಭವತಿ)= ಆಗುವುದೋ ಅಂತಹ ಅನವದ್ಯ ಧರ್ಮವನ್ನು ನೀನು ಉಪದೇಶಿಸಿದೆ ಎಂದು ಹಿಂದಕ್ಕೆ ಅನ್ವಯ. ಯತ್ರ=ಯಾವ ಧರ್ಮದಿಂದ ನಿನ್ನನ್ನು ತಿಳಿದಲ್ಲಿ ಎಂದಾದರೂ ಅರ್ಥ. ಯಃ=ಯಾವ ಪ್ರವೃತ್ತಿ ಧರ್ಮವಾದರೆ ಅನ್ಯತ್ರ=ಶ್ರೀಹರಿಯನ್ನು ಬಿಟ್ಟು (ಅವನ ಸ್ವಾತಂತ್ರ್ಯವನ್ನು ಅರಿಯದೆ) ವಿಷಮಧಿಯಾ - ವಸ್ತು ಸ್ಥಿತಿಗೆ ವಿರುದ್ಧವಾದ ಜ್ಞಾನದಿಂದ, ನಾನೇ ಸ್ವತಂತ್ರನೆಂಬ ಅಹಂಕಾರದಿಂದ ಸ್ವರ್ಗಾದಿಫಲಾಪೇಕ್ಷೆಯಿಂದ ರಚಿತಃ=ಮಾಡಲ್ಪಡುವುದೋ ಸಃ=ಆ ಪ್ರವೃತ್ತಿಧರ್ಮವು, ಜ್ಯೋತಿಷ್ಟೋಮಾದಿ ಯಾಗಗಳು ಅವಿಶುದ್ಧಃ=ಸಂಸಾರಕ್ಕೆ ಕಾರಣವಾದ್ದರಿಂದ ದೋಷರಹಿತವಲ್ಲ. ರಾಗಾದಿ ದೋಷವುಳ್ಳದ್ದು. ಕ್ಷಯಿಷ್ಣುಃ=ನಶ್ವರವಾದ ಸ್ವರ್ಗಾದಿ ಫಲವುಳ್ಳದಾದ್ದ ರಿಂದ ನಶ್ವರವಾದುದು. ಅಧರ್ಮ ಬಹುಲಃ=ಅಹಂತಾ ಮಮತಾದಿಗಳಿಂದ ಪ್ರಚುರ ವಾದುದು. ಹಿಂಸಾದಿಗಳಿಂದ ತುಂಬಿದುದು. ಹಿ=ಇದು ಶಾಸ್ತ್ರಸಿದ್ಧವು ॥ ೪೧ ॥

ಕಃ ಕ್ಷೇಮಃ ನಿಜಪರಯೋಃ
ಕಿಯಾನರ್ಥಃ ಸ್ವಪರದ್ರುಹಾ ಧರ್ಮೇಣ ।

ವನ್ನು ತಿಳಿದವರಿಗೆ (ಪರಸ್ಪರ ಜೀವರಲ್ಲಿ) ನೀನು ಸ್ವತಂತ್ರ, ನಾನು ಸ್ವತಂತ್ರ, ಇದು ನಿನ್ನದು ಇದು ನನ್ನದು ಎಂಬ ಅಶಾಸ್ತ್ರೀಯ ಬುದ್ಧಿಯು ಬರುವುದಿಲ್ಲ. ಎಲ್ಲವೂ ಶ್ರೀಹರಿಯ ಅಧೀನ. ಅವನ ಪ್ರೇರಣೆಯಂತೆ ನೀನು ನಾನು ಕಾರ್ಯದಲ್ಲಿ ಪ್ರವೃತ್ತರಾಗುವೆವು ಎಂಬ ಶಾಸ್ತ್ರವಿಹಿತ ಬುದ್ಧಿಯೇ ಬರುವುದು. ಶ್ರೀಹರಿಯು ಸ್ವತಂತ್ರನೆಂದರಿಯದೆ ಅಯಥಾರ್ಥವಾಗಿ ನಾನೇ ಸ್ವತಂತ್ರನೆಂಬ ಅಭಿಮಾನದಿಂದ ಮಾಡಿದ ಪ್ರವೃತ್ತಿಧರ್ಮವು ಸಂಸಾರಕ್ಕೆ ಕಾರಣವಾದ್ದರಿಂದ ವಿಶುದ್ಧವಲ್ಲ; ನಶ್ವರ ಫಲಯುಕ್ತ; ಮತ್ತು ಅಹಂತಾ ಮಮತಾದಿಗಳಿಂದ ತುಂಬಿದ್ದು. ಆದ್ದರಿಂದಲೇ ಕೇವಲ ಹಿಂಸಾತ್ಮಕ. ಇದು ಶಾಸ್ತ್ರಸಿದ್ಧ. ಕರ್ಮಕರ್ತನಿಗೆ ಕ್ಲೇಶವನ್ನೂ ಅವನಿಂದ ಸಾಯಿಸಲ್ಪಡುವ ಪಶುವಿಗೆ ಹಿಂಸೆಯನ್ನೂ ಕೊಡುವ ಇಂತಹ ಪ್ರವೃತ್ತಿ ಕರ್ಮ ಗಳಿಂದ ಕರ್ತನಿಗಾಗಲಿ ಪಶುವಿಗಾಗಲಿ ಕ್ಷೇಮವೆಲ್ಲಿ ಬಂತು? ಬರುವ ಸ್ವರ್ಗಾದಿ ಫಲವಾದರೋ ನಶ್ವರವಾದ್ದರಿಂದ ಅದೆಷ್ಟುಮಾತ್ರದ ಫಲ! ಈ ಪ್ರವೃತ್ತಿ ಕರ್ಮ

ಸ್ವದ್ರೋಹಾತ್ತವ ಕೋಪಃ
ಪರಸಂಪೀಡಯಾ ಚ ತಥಾಽಧರ್ಮಃ ॥ ೪೨ ॥

ತಾನು ಸ್ವತಂತ್ರನೆಂಬ ಜ್ಞಾನದ ಫಲವು ತಮಸ್ಸೇ ಎಂದು ಹೇಳುತ್ತಾರೆ. ಸ್ವಪರದ್ರುಹಾ=ಕರ್ಮಮಾಡುವ ತನಗೆ ಕಾಯಕ್ಲೇಶರೂಪವಾಗಿ ದ್ರೋಹಮಾಡುವ, ತನ್ನಿಂದ ಸಾಯಿಸಲ್ಪಡುವ ಪಶುವಿಗೆ ಹಿಂಸಾಜನಕವಾದ್ದರಿಂದ ದ್ರೋಹಮಾಡುವ ಧರ್ಮೇಣ=ಧರ್ಮಾಭಿಮಾನದಿಂದ ಮಾಡಿದ ಯಾಗಾದಿಕರ್ಮದಿಂದ ನಿಜ-ಪರಯೋಃ=ಕರ್ಮಮಾಡುವ ತನಗಾಗಲಿ ಕೊಲ್ಲಲ್ಪಡುವ ಪಶುವಿಗಾಗಲಿ ಕ್ಷೇಮಃ ಕಃ=ಮೋಕ್ಷವೆಲ್ಲಿ? ತಮಸ್ಸೇ ಗತಿಯೆಂದರ್ಥ. ಯಾಗಾದಿಕರ್ಮರೂಪಧರ್ಮ ದಿಂದ ಪುರುಷಾರ್ಥವು ದೊರೆಯುವುದಿಲ್ಲಾ ಎಂದರೆ ಹೇಳುತ್ತಾರೆ. ತನಗಾಗಲಿ, ತನ್ನಿಂದ ಕೊಲ್ಲಲ್ಪಡುವ ಪಶುವಿಗಾಗಲಿ ಕಿಯಾನ್ ಅರ್ಥ=ದೊರೆಯುವ ಸ್ವರ್ಗಾದಿ ಫಲವು ಎಷ್ಟು ಮಾತ್ರದ್ದು? ನಶ್ವರವಾದ್ದರಿಂದ ಅದು ಪ್ರಯೋಜನವೇ ಅಲ್ಲ ವೆಂದಭಿಪ್ರಾಯ. ಏಕೆ ಶಾಶ್ವತಫಲವಿಲ್ಲವೆಂದರೆ ಕಾರಣವನ್ನು ಹೇಳುತ್ತಾರೆ. ಸ್ವದ್ರೋಹಾತ್=ನಿನ್ನ ಆಜ್ಞಾರೂಪಗಳಾದ ಶ್ರುತಿಸ್ಮೃತಿಗಳಲ್ಲಿ ವಿಹಿತವಾದ ರೀತಿ ಯಲ್ಲಿ ಶರೀರಕ್ಲೇಶಾದಿಗಳನ್ನು ಹೊಂದದೆ ತನ್ನ ವಿನಾಶಕ್ಕೇ ಕಾರಣವಾದ್ದರಿಂದಲೂ ಪರಸಂಪೀಡಯಾ ಚ=ಪಶುಹಿಂಸಾರೂಪವಾದ್ದರಿಂದಲೂ ತವ=ಫಲದಾತನಾದ ಸ್ವಾಮಿಯಾದ ನಿನಗೆ ಕೋಪಃ=ಕೋಪವೇ ಬರುವುದು. ಕೋಪದ ಫಲವೇ ತಮಸ್ಸೆಂದರ್ಥ. ತಥಾ=ಈ ರೀತಿಯಲ್ಲಿ ಅಧರ್ಮಃ=ಸ್ವಾತಂತ್ರ್ಯಾಭಿಮಾನದಿಂದ ಮಾಡಿದ ಕರ್ಮವು ಅಧರ್ಮವೇ. ಧರ್ಮವಲ್ಲ. ಇದರಿಂದ ಕ್ಷೇಮವಿಲ್ಲದಿರುವುದಷ್ಟೇ ಅಲ್ಲ. ಅನರ್ಥವೂ ಆಗುವುದೆಂದು ಹೇಳಿದಂತಾಯಿತು ॥ ೪೨ ॥

ನ ವ್ಯಭಿಚರತಿ ತವೇಕ್ಷಾ
ಯಥಾ ಹ್ಯಭಿಹಿತೋ ಭಾಗವತೋ ಧರ್ಮಃ ।
ಸ್ಥಿರ ಚರ ಸತ್ತ್ವ ಕದಂಬೇ-
ಷ್ವಪೃಥಗ್ಧಿಯೋ ಯಮುಪಾಸತೇ ತ್ವಾರ್ಯಾಃ ॥ ೪೩ ॥

ಶಿವನೇ ಮೊದಲಾದವರು ಹೇಳಿದ ಪ್ರವೃತ್ತಿಮಾರ್ಗಗಳಂತೆ ನೀನು ಹೇಳಿದ ಧರ್ಮವೂ (ಪ್ರವೃತ್ತಿಧರ್ಮವು) ವಸ್ತುಸ್ಥಿತಿಗೆ ವಿರುದ್ಧವಾದ್ದರಿಂದ ನೀನು ಹೇಳಿದ್ದೆಂಬ

ಮಾಡುವುದರಿಂದ ನಿನ್ನ ಆಜ್ಞಾರೂಪ ಶ್ರುತಿ ಸ್ಮೃತಿಗಳನ್ನುಲ್ಲಂಘಿಸಿ ತನಗೆ ತಮಸ್ಸನ್ನೂ ಪಶುವಿಗೆ ಹಿಂಸೆಯನ್ನೂ ಮಾಡಿಕೊಂಡದ್ದರಿಂದ ಫಲದಾತನಾದ ನಿನಗೆ ಕೋಪವೇ ಬರುವುದು. ಹೀಗೆ ಪ್ರವೃತ್ತಿ ಕರ್ಮವು ಅಧರ್ಮವೇ ಆಗಿರುವುದು. ನೀನು ಉಪದೇಶಿಸಿದ ಭಾಗವತ ಧರ್ಮವು ಯಥಾವತ್ತಾದುದು. ಆದ್ದರಿಂದಲೇ ನಿನ್ನ ಜ್ಞಾನವು ಎಂದೂ ಅಯಥಾರ್ಥವಲ್ಲ. ಸ್ಥಾವರ ಜಂಗಮ ಪ್ರಾಣಿಸಮೂಹ ದಲ್ಲಿ ಇದ್ದುದನ್ನು ಇದ್ದಂತೆಯೇ ತಿಳಿಯುವ ಜ್ಞಾನಿಗಳಾದ ಸನಕಾದಿಗಳು ಮಾತ್ರವೇ

ಆಜ್ಞೆಯ ಉಲ್ಲಂಘನ ನಿಮಿತ್ತಕವಾದ ಕೋಪವು ಇಲ್ಲವಾಗುತ್ತದೆಯಾಗಿ ನಿನ್ನ ದೃಷ್ಟಿ (ಜ್ಞಾನವೂ) ಅಯಥಾರ್ಥವೇ ಎಂದರೆ ಉತ್ತರ ಕೊಡುತ್ತಾರೆ. ಹಿ = ಯಾವ ಕಾರಣದಿಂದ ಯಥಾವತ್ತಾಗಿ ತತ್ತ್ವದೃಷ್ಟಿಯಿಂದ ಭಾಗವತಧರ್ಮವು (ನಿವೃತ್ತಿ ಮಾರ್ಗವು) ಅಭಿಹಿತಃ= ನಿನ್ನಿಂದ ಹೇಳಲ್ಪಟ್ಟದೆಯೋ ಆ ಕಾರಣದಿಂದ ತವ ಈಕ್ಷಾ= ನಿನ್ನ ಜ್ಞಾನವು ನ ವ್ಯಭಿಚರತಿ= ಅಯಥಾರ್ಥವಾದುದಲ್ಲ. ಯಥಾರ್ಥವಾದುದು. ಯಯಾ ಎಂಬ ಪಾಠದಲ್ಲಿ ಯಾವ ನಿನ್ನ ಜ್ಞಾನದಿಂದ ಎಂದರ್ಥ. ಯಥಾರ್ಥ ವಾಗಿರುವುದಕ್ಕೆ ಕಾರಣವೇನೆಂದರೆ ಹಿಂದೆ ಹೇಳಿದುದನ್ನು ಸ್ಮರಣೆಗೆ ತಂದು ಕೊಡುತ್ತಾರೆ. ಸ್ಥಿರ= ಸ್ಥಾವರ ಚರ= ಜಂಗಮ ಸತ್ವಕದಂಬೇಷು= ಪ್ರಾಣಿಸಮೂಹಗಳಲ್ಲಿ ಅಪೃಥಗ್ಧಿಯಃ= ಇದ್ದದ್ದು ಇದ್ದಂತೆಯೇ ತಿಳಿಯುವ ಆರ್ಯಾಃ ತು= ಆದ್ದರಿಂದಲೇ ಜ್ಞಾನಿಗಳಾದ ಸನಕಾದಿಗಳು ಮಾತ್ರ ತಮ್ಮ ತಮ್ಮ ತಾರತಮ್ಯಕ್ಕೆ ತಕ್ಕಂತೆ ಯಂ= ಯಾವ ಈ ಭಾಗವತ ಧರ್ಮವನ್ನು, ಯಾವ ಈ ನಿನ್ನನ್ನು ಉಪಾಸತೇ= ಉಪಾಸಿಸುವರು. ನೀನು ಪ್ರವೃತ್ತಿಧರ್ಮವನ್ನು ಹೇಳಿದ್ದರೂ ಅದು ವೇದಮಾರ್ಗದಲ್ಲಿ ಹೇಗಾದರೂ ಅವರನ್ನು ಪ್ರವೃತ್ತರನ್ನಾಗಿ ಮಾಡಬೇಕೆಂದು ಹೇಳಿದ್ದೇ ಹೊರತು ತತ್ತ್ವದೃಷ್ಟಿಯಿಂದಲ್ಲ. ಭಾಗವತಧರ್ಮವನ್ನಾದರೋ ತತ್ತ್ವದೃಷ್ಟಿಯಿಂದಲೇ ಹೇಳಿರುವೆ. ಅದನ್ನು ತತ್ತ್ವಜ್ಞಾನಿಗಳು ಉಪಾಸಿಸುವರು. ಆದ್ದರಿಂದ ಭಾಗವತ ಧರ್ಮವೇ ಅನವದ್ಯವಾದುದೆಂದು ಅಭಿಪ್ರಾಯ. ಇರುವ ಪ್ರಕಾರಕ್ಕಿಂತ ವಿರುದ್ಧ ವಾದ ಪ್ರಕಾರಕ್ಕೆ ಪೃಥಕ್ ಎಂದು ಹೆಸರು. ಅದನ್ನು ವಿಷಯೀಕರಿಸುವ ಬುದ್ಧಿ ಪೃಥಗ್ಧೀ ಎನಿಸುವುದು. ಅದಿಲ್ಲದವರು ಅಪೃಥಕ್‌ಧೀಗಳು. ಇದನ್ನೇ 'ವಿಷ್ಣ್ವಧೀನ ಜಗತ್ಸತ್ತಾ ಪ್ರತೀತಿಃ ಚೇಷ್ಟಿತಂ ಗತಿಃ | ಇತಿ ಯನ್ನಿಶ್ಚಿತಂ ಜ್ಞಾನಂ ಅಪೃಥಗ್ದರ್ಶನಂ ಸ್ಮೃತಂ | ಮಿಥ್ಯಾಜ್ಞಾನಂ ಪೃಥಗ್‌ಜ್ಞಾನಂ ತತ್‌ಪೃಥಗ್ದೃಷ್ಟಿರುಚ್ಯತೇ || ಎಂಬ ಪ್ರಮಾಣವು ತಿಳಿಸುವುದು. ಆರ್ಯಾಃ ಎಂಬುದರಿಂದ ಆ ಬಗೆಯ ಯಥಾರ್ಥ ಜ್ಞಾನವು ಅವರಿಗೆ ಯುಕ್ತವೆಂದೂ ತು ಎಂಬುದರಿಂದ ಅದರಲ್ಲಿಯೂ ತಾರತಮ್ಯವಿದೆ ಯೆಂದೂ ಆರ್ಯರಿಗೆ ಮಾತ್ರ ಅಂತಹ ಜ್ಞಾನವಿರುವುದೆಂದೂ ತಿಳಿಸಿರುವರು || ೪೩ ||

ನಹಿ ಭಗವನ್ನಘಟಿತಮಿದಂ
ತ್ವದ್ದರ್ಶನಾನ್ನೃಣಾಮಖಿಲಪಾಪಕ್ಷಯಃ |
ಯನ್ನಾಮ ಸಕೃಚ್ಛ್ರವಣಾ-
ತ್ಪುಲ್ಕಸಕೋಽಪಿ ವಿಮುಚ್ಯತೇ ಸಂಸಾರಾತ್ || ೪೪ ||

ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಈ ಧರ್ಮವನ್ನು-ಅರ್ಥಾತ್ ನಿನ್ನನ್ನು-ಉಪಾಸಿಸುವರು. ಭಗವನ್, ನಿನ್ನ ದರ್ಶನದಿಂದ ಅಧಿಕಾರಿ ಚೇತನರಿಗೆ ಎಲ್ಲ ಪಾಪಗಳೂ ಹೋಗುವುವೆಂಬುದು ಅಸಂಭಾವಿತವೇನೂ ಅಲ್ಲ. ನಿನ್ನ ನಾಮವನ್ನು ಒಂದು ಸಲ ಭಕ್ತಿಯಿಂದ ಶ್ರವಣಮಾಡಿದಲ್ಲಿ ಹಿಂಸಾಜೀವಿಯಾದ ಕಿರಾತನೂ (ಕ್ರಮವಾಗಿ)

ಆರ್ಯರೂ ಪ್ರಾರಬ್ಧಕರ್ಮವಶದಿಂದ ನಿವೃತ್ತಿಧರ್ಮವನ್ನು ಉಪಾಸಿಸಿರ ಬಹುದು. ಫಲವು ಸಿಕ್ಕಿತೆಂದಲ್ಲ. ಆದ್ದರಿಂದ ಇದು ಅಸಂಭಾವಿತವಾದುದರ ಸ್ತೋತ್ರವೇ ಹೊರತು ಪರಮಾರ್ಥವಲ್ಲ ಎಂದಾಕ್ಷೇಪಿಸಿದರೆ ಉತ್ತರ ಕೊಡುತ್ತಾರೆ. ಭಗವನ್=ಸಮಗ್ರೈಶ್ವರ್ಯಸಂಪನ್ನನಾದ ಶ್ರೀಹರಿಯೇ, ತ್ವದ್ದರ್ಶನಾತ್=ನಿನ್ನ ಕಾಣುವಿಕೆಯಿಂದ (ನಿನ್ನನ್ನು ನೋಡುವುದರಿಂದ) ನೃಣಾಂ=ಜನರಿಗೆ ಅಖಿಲಪಾಪ ಗಳೂ ನಾಶವಾಗುವುವು (ಇತಿ) ಇದಂ=ಎಂಬಿದು ಅಘಟಿತಂ ನಹಿ=ಅಸಂಭಾವಿತ ವೇನೂ ಅಲ್ಲ. ಯನ್ನಾಮ=ಯಾವ ನಿನ್ನ ಹೆಸರನ್ನು ಸಕೃತ್=ಒಂದು ಸಲ ಶ್ರವಣಾತ್=ಭಕ್ತಿಯಿಂದ ಕೇಳುವುದರಿಂದ ಪುಲ್ಕಸಕಃ ಅಪಿ=ಕಿರಾತಕನೂ ಕೂಡ ಸಂಸಾರದಿಂದ ವಿಮುಕ್ತನಾಗುವನು. ಮೇಲೆ ಹೇಳಿದಂತಹ ನಿರ್ದುಷ್ಟ ಭಾಗವತ ಧರ್ಮಪ್ರವರ್ತಕನಾದ ನಿನ್ನ ದರ್ಶನದಿಂದ ಸರ್ವಪಾಪಕ್ಷಯವಾಗುವುದೇನೂ ಆಶ್ಚರ್ಯವಲ್ಲವೆಂದು ಅಭಿಪ್ರಾಯ || ೪೪ ||

ಅಥ ಭಗವನ್ ವಯಮಧುನಾ
ತ್ವದವಲೋಕ ಪರಿಮೃಷ್ಟಾಶಯಮಲಾಃ ।
ಸುರಋಷಿಣಾ ಯದುದಿತಂ
ತಾವಕೇನ ಕಥಮನ್ಯಥಾ ಭವತಿ || ೪೫ ||

ಅಥ=ಸಂಸಾರವನ್ನು ದಾಟುವಲ್ಲಿ ಒಂದು ಸಲ ನಿನ್ನ ನಾಮಶ್ರವಣ ಮಾತ್ರ ಸಾಲದು. ಮತ್ತೇನೆಂದರೆ ನಿನ್ನ ದರ್ಶನವೂ ಅಗತ್ಯವಾದ್ದರಿಂದ ಭಗವನ್=ಶ್ರೀಹರಿಯೇ, ವಯಂ=ನಾವು ಅಧುನಾ=ಈಗ ತ್ವದವಲೋಕ=ನಿನ್ನ ದರ್ಶನದಿಂದ ಪರಿಮೃಷ್ಟ=ಸಂಪೂರ್ಣವಾಗಿ ಹೋಗಲಾಡಿಸಲ್ಪಟ್ಟ ಆಶಯಮಲಾಃ=ಮನಸ್ಸಿನ ದೋಷಗಳುಳ್ಳವರಾಗಿ (ಅಭೂಮ)=ಆಗಿರುವೆವು. ಭಗವಂತನ ದರ್ಶನವು ಯಥಾರ್ಥವೆಂಬುದರಲ್ಲಿ ನಾರದರ ಮಾತೇ ಲಿಂಗವೆನ್ನುತ್ತಾರೆ. ತಾವಕೇನ=ನಿನ್ನ ಭಕ್ತರಾದ ಸುರಋಷಿಣಾ=ನಾರದರಿಂದ ಯತ್ ಉದಿತಂ=ಏನು ಹೇಳಲ್ಪಟ್ಟಿತೋ (ತತ್)=ಅದು ಅನ್ಯಥಾ=ವಿರುದ್ಧವಾಗಿ, ವ್ಯರ್ಥವಾಗಿ ಕಥಂ ಭವತಿ=ಹೇಗೆ ತಾನೇ ಆದೀತು? ಆಗುವುದಿಲ್ಲವೆಂದರ್ಥ. ನಾರದರ ಉಪದೇಶದಿಂದ ನಿನ್ನ ದರ್ಶನ ವಾಯಿತೆಂದರ್ಥ || ೪೫ ||

ವಿದಿತಮನಂತ ಸಮಸ್ತಂ ತವ
ಜಗದಾತ್ಮನೋ ಜನೈರಿಹಾಚರಿತಮ್ ।

ಸಂಸಾರದಿಂದ ಮುಕ್ತನಾಗುವನು. ಮೋಕ್ಷಕ್ಕೆ ನಿನ್ನ ಅಪರೋಕ್ಷವು (ದರ್ಶನವು) ಅಗತ್ಯವಾದ್ದರಿಂದ ನಾವೀಗ ನಿನ್ನ ದರ್ಶನದಿಂದ ಮನಸ್ಸಿನ ಎಲ್ಲ ದೋಷಗಳನ್ನೂ ಕಳೆದುಕೊಂಡಿರುವೆವು. ನಿನ್ನ ಭಕ್ತರಾದ ನಾರದರು ಹೇಳಿದ್ದು ವಿರುದ್ಧವಾಗಲಿ ವ್ಯರ್ಥವಾಗಲಿ ಹೇಗಾದೀತು! ಎಲ್ಲವನ್ನೂ ಬಲ್ಲ ಅವರು ನಿನ್ನ ಜ್ಞಾನವು

ವಿಜ್ಞಾಪ್ಯಂ ಪರಮಗುರೋಃ
ಕಿಯದಿವ ಸವಿತುರಿವ ಖದ್ಯೋತೈಃ || ೪೬ ||

ಇಲ್ಲಿ ವಿಜಯಧ್ವಜತೀರ್ಥರು ಹಿಂದಿನ ಶ್ಲೋಕದೊಂದಿಗೆ ಅನ್ವಯಮಾಡಿ ಹೇ ಅನಂತ–ಶೇಷಾಂತರ್ಯಾಮಿ ಅನಂತನಾಮಕ ಶ್ರೀಹರಿಯೇ, ತಾವಕೇನ–ನಿನ್ನವರಾದ ಸುರಋಷಿಣಾ=ನಾರದರಿಂದ ಸಮಸ್ತಂ=ಎಲ್ಲವೂ ವಿದಿತಂ=ತಿಳಿಯುಲ್ಪಟ್ಟದ್ದು ಯತ್ ಉದಿತಂ=ಭಗವಂತನ ಜ್ಞಾನವು ಅವ್ಯಭಿಚಾರಿ ಎಂದು ಏನು ಹೇಳಲ್ಪಟ್ಟತೋ ತತ್–ಅದು ಕಥಂ ಅನ್ಯಥಾ ಭವತಿ=ಹೇಗೆತಾನೇ ವ್ಯತ್ಯಾಸವಾದೀತು ಎಂದು ಅರ್ಥಮಾಡಿರುವರು. ಜಗದಾತ್ಮನಃ = ಎಲ್ಲ ಚೇತನರ ಅಂತರ್ಯಾಮಿಯಾದ ಪರಮ ಗುರೋಃ=ಗುರುಗಳಿಗೆ ಗುರುವಾದ, ಸರ್ವಜ್ಞನಾದ ತವ–ನಿನಗೆ ಎಲ್ಲವೂ ತಿಳಿದಿದೆ. ಇಹ – ಈ ಜಗತ್ತಿನಲ್ಲಿ ಜನೈಃ=ಜೀವರಿಂದ ಆಚರಿತಂ–ಮಾಡಿದ್ದು ಕಿಯತ್–ಏನುತಾನೇ ಇಹ=ಜ್ಯೋತಿಸ್ಸುಗಳಲ್ಲಿ ಸವಿತುಃ–ಅತ್ಯಂತ ಪ್ರಕಾಶಮಾನವಾಗಿರುವ ಸೂರ್ಯನಿಗೆ ಖದ್ಯೋತೈಃ ಇವ–ಗೇಣುಜಾಗದಲ್ಲಿ ಮಾತ್ರ ಪ್ರಕಾಶವುಳ್ಳ ಮಿಣುಕು ಹುಳುಗಳಿಂದ ಹೇಗೋ ಹಾಗೆ ವಿಜ್ಞಾಪ್ಯಂ (ಅಸ್ತಿ)–ವಿಶೇಷವಾಗಿ ಜ್ಞಾಪಿಸುವುದಿದೆ! ಸರ್ವವನ್ನೂ ಬಲ್ಲ ನಿನಗೆ ವಿಜ್ಞಾಪಿಸಿಕೊಂಡಲ್ಲಿ ಎಲ್ಲ ಜಗತ್ತನ್ನೂ ಪ್ರಕಾಶಗೊಳಿಸುವ ಸೂರ್ಯನಿಗೆ ಮಿಣಕು ಹುಳುಗಳು ತಮ್ಮ ಪ್ರಕಾಶದಿಂದ ಪದಾರ್ಥ ಜ್ಞಾನವನ್ನುಂಟುಮಾಡಿದಂತೆ ಹಾಸ್ಯಾಸ್ಪದವಾಗುವುದೆಂದು ಅಭಿಪ್ರಾಯ. ಇದರಿಂದ ನಾನು ಹಿಂದೆ ಅತಿ ಮೂಢನಾಗಿದ್ದು ನಾರದರಿಂದ ಅನುಗೃಹೀತನಾಗಿ ನಿನ್ನ ದರ್ಶನಕ್ಕೆ ಅರ್ಹನಾದೆನೆಂಬ ವಿಷಯವನ್ನು ನಾನು ಹೇಳಿಕೊಳ್ಳಬೇಕಾಗಿಲ್ಲವೆಂದು ತಾತ್ಪರ್ಯ || ೪೬ ||

ನಮಸ್ತುಭ್ಯಂ ಭಗವತೇ
ಸಕಲ ಜಗತ್ಸ್ಥಿತಿಲಯೋದಯೇಶಾಯ ।
ದುರವಸಿತಾತ್ಮಗತಯೇ
ಕುಯೋಗಿನಾಂ ಪರಮಹಂಸಾಯ || ೪೭ ||

ಯಥಾರ್ಥವೆಂದೇ ಉಪದೇಶಿಸಿರುವರು. ನೀನು. ಎಲ್ಲರ ಅಂತರ್ಯಾಮಿ. ಗುರುಗಳಿಗೆ ಗುರು. ಅಂದಮೇಲೆ ಮುಖ್ಯ ಸರ್ವಜ್ಞ. ನಿನಗೆ ಎಲ್ಲವೂ ತಿಳಿದೇ ಇದೆ. ಈ ಜಗತ್ತಿನಲ್ಲಿ ಜೀವರು ಮಾಡಿದ್ದನ್ನು ಏನುತಾನೇ ವಿಜ್ಞಾಪಿಸಿಕೊಳ್ಳುವುದಿದೆ? ಸೂರ್ಯನಿಗೆ ಮಿಣುಕುಹುಳುಗಳು ತಮ್ಮ ಪ್ರಕಾಶದಿಂದ ಪದಾರ್ಥಗಳನ್ನು ತೋರಿಸಿಕೊಡಬೇಕೇ? ' ಜಗತ್ತಿನ ರಕ್ಷಣೆ, ನಾಶ ಮತ್ತು ಉತ್ಪತ್ತಿ ಮೊದಲಾದವುಗಳಿಗೆ ನಿಯಾಮಕನು ನೀನು. ಭಕ್ತರಲ್ಲದವರಿಗೆ ಎಂದೂ ನಿನ್ನ ಜ್ಞಾನವನ್ನು ನೀನು ಕೊಡುವುದಿಲ್ಲ. ಅತ್ಯಂತ ಶುದ್ಧನಾದ ಭಗವಂತನಾದ ನಿನಗೆ ನಮಸ್ಕಾರ.

ಇದೇ ನಾವು ಮಾಡುವ ವಿಜ್ಞಾಪನೆಯೆನ್ನುತ್ತಾರೆ. ಸಮಸ್ತ ಜಗತ್ತಿನ ರಕ್ಷಣೆ, ಲಯ ಮತ್ತು ಉತ್ಪತ್ತಿಗಳಿಗೆ ನಿಯಾಮಕನಾದ ಕುಯೋಗಿನಾಂ=ಭಕ್ತರಲ್ಲದವರಿಗೆ ದುರವಸಿತಾತ್ಮಗತಯೇ=ತನ್ನ ಜ್ಞಾನವನ್ನು ಕೊಡದಿರುವ ಪರಮಹಂಸಾಯ=ಅತ್ಯಂತ ಶುದ್ಧನಾದ, ನಿರ್ದೋಷನಾದ ಭಗವತೇ=ಸಮಗ್ರೈಶ್ವರ್ಯ ಸಂಪನ್ನನಾದ ತುಭ್ಯಂ = ನಿನಗೆ ನಮಃ = ನಮಸ್ಕಾರ. ಸ್ಥಿತಿ ಮೊದಲಾದ ಎಂಟನ್ನೂ ಪರಿಗ್ರಹಿಸಿಕೊಳ್ಳಬೇಕು. || ೪೭ ||

ಯಂ ವೈ ಶ್ವಸಂತಮನುವಿಶ್ವಸೃಜಃ ಶ್ವಸಂತಿ
ಯಂ ಚೇಕಿತಾನಮನು ಚಿತ್ತಯ ಉಚ್ಚಕಂತಿ ।
ಭೂಮಂಡಲಂ ಸರ್ಷಪಾಯತಿ ಯಸ್ಯ ಮೂರ್ಧ್ನಿ
ತಸ್ಮೈ ನಮೋ ಭಗವತೇಽಸ್ತು ಸಹಸ್ರಮೂರ್ಧ್ನೇ || ೪೮ ||

ಇದೂ ನಿನ್ನ ಅನುಗ್ರಹವಿಲ್ಲದೆ ಸಾಧ್ಯವಿಲ್ಲವೆನ್ನುತ್ತಾರೆ. ಶ್ವಸಂತಂ=ಚೇಷ್ಟಿಸುತ್ತಿರುವ ಯಂ ಅನು=ಯಾವ ನಿನ್ನನ್ನು ಅನುಸರಿಸಿ ವಿಶ್ವಸೃಜಃ=ಬ್ರಹ್ಮಾದಿಗಳು ಶ್ವಸಂತಿ=ಚೇಷ್ಟೆಮಾಡುವರೋ ವೈ ಇದು 'ಪ್ರಾಣಂತಮನು ಪ್ರಾಣಂತಿ' ಎಂಬ ಶ್ರುತಿಸಿದ್ಧವು. ಚೇಕಿತಾನಂ = ತಿಳಿಯುತ್ತಿರುವ ಯಂ ಅನು = ಯಾವನನ್ನು ಅನುಸರಿಸಿ ವೃತ್ತಯಃ=ಆಯಾಯಾ ವಸ್ತುಗಳಿಗೆ ಅನುಗತವಾದ ಜ್ಞಾನವುಳ್ಳವರು. ಉಚ್ಚಕಂತಿ=ತಿಳಿಯುತ್ತಿರುವರೋ, (೨) ನೋಡುತ್ತಿರುವ ನಿನ್ನನ್ನು ಅನುಸರಿಸಿ ಜ್ಞಾನೇಂದ್ರಿಯಗಳು ಚನ್ನಾಗಿ ನೋಡುವುವೋ ಯಸ್ಯ=ಯಾವ ನಿನ್ನ ಮೂರ್ಧ್ನಿ=ಶಿರಸ್ಸಿನಲ್ಲಿ ಭೂಮಂಡಲಂ=ಬ್ರಹ್ಮಾಂಡವು ಸರ್ಷಪಾಯತಿ=ಸಾಸುವೆ ಕಾಳಿನಂತೆ ಹಗುರವಾಗಿರುವುದೋ ತಸ್ಮೈ=ಅಂತಹ ಸಹಸ್ರ ಮೂರ್ಧ್ನೇ=ಅನಂತ ಶಿರಸ್ಸುಳ್ಳ ಭಗವಂತನಾದ ನಿನಗೆ ನಮಃ ಅಸ್ತು=ನಮಸ್ಕಾರವು ಆಗಲಿ. ಸಹಸ್ರ ಶೀರ್ಷಾ ಪುರುಷಃ ಎಂಬ ಪುರುಷ ಸೂಕ್ತಾನುಗುಣವಾಗಿ ಶ್ರೀಹರಿಗೂ ಸಹಸ್ರ ಮೂರ್ಧನೆಂಬ ಪ್ರಯೋಗವು ಸಲ್ಲುವುದು. || ೪೮ ||

ಶ್ರೀಶುಕ ಉವಾಚ

ಸಂಸ್ತುತೋ ಭಗವಾನೇವಮನಂತಸ್ತಮಭಾಷತ ।
ವಿದ್ಯಾಧರಪತಿಂ ಪ್ರೀತಶ್ಚಿತ್ರಕೇತುಂ ಕುರೂದ್ವಹ || ೪೯ ||

ಚೇಷ್ಟಿಸುವ ನಿನ್ನನ್ನು ಅನುಸರಿಸಿ ಬ್ರಹ್ಮಾದಿಗಳು ತಾವೂ ಚೇಷ್ಟಿಸುವರು. ತಿಳಿಯುವ ನಿನ್ನನ್ನು ಅನುಸರಿಸಿ ಪದಾರ್ಥಗಳನ್ನು ತಿಳಿಯುವರೆಲ್ಲರೂ ತಿಳಿಯುವರು. ನೋಡುವ ನಿನ್ನನ್ನು ಅನುಸರಿಸಿ ಜ್ಞಾನೇಂದ್ರಿಯಗಳು ನೋಡುವುವು. ನಿನ್ನ ಶಿರಸ್ಸಿನಲ್ಲಿ ಬ್ರಹ್ಮಾಂಡವು ಸಾಸುವೆಯಂತಿರುವುದು. ಅನಂತ ಶಿರಸ್ಕನಾದ ನಿನಗೆ ನಮಸ್ಕಾರ' ಎಂದು ಚಿತ್ರಕೇತುವು ಶೇಷಾಂತರ್ಯಾಮಿ ಅನಂತನನ್ನು ಸ್ತುತಿಸಿದನು.

ಶ್ರೀ ಶುಕಾಚಾರ್ಯರು—ಪರೀಕ್ಷಿದ್ರಾಜ ! ಈ ರೀತಿಯಲ್ಲಿ ಭಕ್ತಿಯಿಂದ ಸ್ತೋತ್ರ

ಕುರೂದ್ವಹ=ಪರೀಕ್ಷಿದ್ರಾಜನೇ ಏವಂ=ಮೇಲೆ ಹೇಳಿದಂತೆ ಸಂಸ್ತುತಃ=ಭಕ್ತಿಯಿಂದ ಸ್ತೋತ್ರಮಾಡಿಸಿಕೊಂಡ ಭಗವಾನ್=ಸರ್ವೋತ್ತಮನಾದ ಅನಂತಃ=ಶೇಷಾಂತರ್ಯಾಮಿ ಅನಂತ ನಾಮಕನಾದ ಶ್ರೀ ಹರಿಯು ಪ್ರೀತಃ(ಸ್ಸ)=ಸಂಪ್ರೀತನಾಗಿ ವಿದ್ಯಾಧರ ರಾಜನಾದ ಆ ಚಿತ್ರಕೇತುವನ್ನು ಕುರಿತು ಅಭಾಷತ=ಹೇಳಿದನು. ಅನಂತ ಶಬ್ದದ ಪ್ರವೃತ್ತಿಗೆ ನಿಮಿತ್ತವಾದ ಕ್ರಿಯೆಯುಳ್ಳವನಾದ್ದರಿಂದ ಶ್ರೀಹರಿಯು ಅನಂತ ಶಬ್ದವಾಚ್ಯನು. ಹರಿಗುಣಗಳನ್ನು ಅಂತವಾಗುವವರೆಗೂ ಹೇಳಲು ಮತ್ತು ನೋಡಲು ಅಸಮರ್ಥನಾದ್ದರಿಂದ ಶೇಷದೇವರು ಅನಂತ ಶಬ್ದದಿಂದ ಅಮುಖ್ಯವಾಚ್ಯನು || ೪೯ ||

ಶ್ರೀ ಭಗವಾನುವಾಚ

ಯನ್ನಾರದಾಂಗಿರೋಭ್ಯಾಂ ತೇ ವ್ಯಾಹೃತಂ ಮಮ ಶಾಸನಮ್ ।
ಸಂಸಿದ್ಧೋಽಸಿ ತಯಾ ರಾಜನ್ ವಿದ್ಯಯಾ ದರ್ಶನಾಚ್ಚ ಮೇ ॥

ರಾಜನ್=ಚಿತ್ರಕೇತುವೇ ನಾರದ ಮತ್ತು ಅಂಗೀರಸರಿಂದ ಯತ್=ಯಾವ ಮಮ ಶಾಸನಂ=ನನ್ನ ವಿಷಯಕವಾದ ವಿದ್ಯೋಪದೇಶವು ವ್ಯಾಹೃತಂ=ಮಾಡಲ್ಪಟ್ಟಿತೋ ಅದನ್ನನುಸರಿಸಿ ನನ್ನ ಮಂತ್ರ (ವಿದ್ಯೆ)ಯನ್ನು ಏನು ಅಭ್ಯಾಸ ಮಾಡಿದೆಯೋ ತಯಾ ವಿದ್ಯಯಾ=ಆ ವಿದ್ಯೆಯಿಂದಲೂ ಅದರ ಫಲವಾಗಿ ಆದ ಮೇ=ನನ್ನ ದರ್ಶನಾತ್‌ಚ=ದರ್ಶನದಿಂದಲೂ ಸಂಸಿದ್ಧಃ ಅಸಿ=(೧) ಅಪೇಕ್ಷಿತವಾದ ಎಲ್ಲ ಪುರುಷಾರ್ಥವೂ ಸಿದ್ಧಿಯಾದವನಾಗಿ ಆಗಿರುವೆ. (೨) ಜೀವನ್ಮುಕ್ತನಾಗಿರುವೆ || ೫೦ ||

ಅಹಂ ವೈ ಸರ್ವಭೂತಾನಿ ಭೂತಾತ್ಮಾ ಭೂತಭಾವನಃ ।
ಶಬ್ದಬ್ರಹ್ಮ ಪರಂಬ್ರಹ್ಮ ಮಮೋಭೇ ಶಾಶ್ವತೀ ತನೂ ॥ ೫೧ ॥

ಹಿಂದೆ ಹೇಳಿದ್ದನ್ನು ಸ್ಥಿರೀಕರಿಸುವುದಕ್ಕಾಗಿಯೂ ಸ್ವಲ್ಪ ವಿಶೇಷವನ್ನು ತಿಳಿಸುವುದಕ್ಕಾಗಿಯೂ ಈಗ ನಾನು ಸ್ವಲ್ಪ ಉಪದೇಶಿಸುತ್ತೇನೆ ಎಂಬ

ಮಾಡಿಸಿಕೊಂಡ ಅನಂತನಾಮಕ ಶ್ರೀಹರಿಯು ಸಂಪ್ರೀತನಾಗಿ ವಿದ್ಯಾಧರ ರಾಜನಾದ ಆ ಚಿತ್ರಕೇತುವನ್ನು ಕುರಿತು 'ರಾಜನ್, ನಾರದಾಂಗೀರಸರು ನನ್ನ ವಿದ್ಯೆಯನ್ನು ನಿನಗೆ ಉಪದೇಶಿಸಿದರು. ಅದನ್ನು ನೀನು ಅಭ್ಯಾಸಮಾಡಿದೆ. ಅದರ ಫಲವಾಗಿ ನಿನಗೆ ನನ್ನ ದರ್ಶನವಾಯಿತು. ಅದರಿಂದ ನಿನ್ನ ಇಷ್ಟಾರ್ಥಗಳು ಸಿದ್ಧಿಸುವುವು. ನೀನು ಜೀವನ್ಮುಕ್ತನಾದೆ. ನಾನು ಎಲ್ಲ ಪ್ರಾಣಿಗಳಲ್ಲಿಯೂ ಇದ್ದು ಆದಾನಾದಿಕರ್ತನು. ಎಲ್ಲ ವಸ್ತುಗಳನ್ನೂ ಇರುವಂತೆ ಮಾಡುವವನು. ಆದ್ದರಿಂದ ಎಲ್ಲವೂ ನನ್ನ ಅಧೀನ. ಈ ಅಭಿಪ್ರಾಯದಿಂದ ನಾನೇ ಎಲ್ಲವೆನ್ನುವರು. ನನ್ನ ಗುಣಪೂರ್ಣತೆಯನ್ನು ತಿಳಿಸುವ ಶಬ್ದಾತ್ಮಕ ವೇದಗಳೂ ಅದಕ್ಕೆ ವಿಷಯವಾದ ಸಚ್ಚಿದಾನಂದ ಗುಣಪೂರ್ಣ ವಸ್ತುವೂ ಇವೆರಡು ನನ್ನ ಶಾಶ್ವತ ರೂಪಗಳು.

ಅಭಿಪ್ರಾಯದಿಂದ ಹೇಳುತ್ತಾರೆ. ಭೂತಾತ್ಮಾ=ಎಲ್ಲ ಪ್ರಾಣಿಗಳಲ್ಲಿಯೂ ಇದ್ದು ಆದಾನಾದಿಕರ್ತನಾದ ಭೂತಭಾವನಃ=ಎಲ್ಲ ಪ್ರಾಣಿ(ವಸ್ತು) ಗಳನ್ನೂ ಇರುವಂತೆ ಮಾಡುವ ಅಹಂ=ನಾನು ಸರ್ವ ಭೂತಾನಿ=ಎಲ್ಲ ಪ್ರಾಣಿಗಳು ಆಗಿರುವೆ. ಮೇಲೆ ಹೇಳಿದ ವಿಶೇಷಣಗಳಿಂದ ಅಭೇದ ವ್ಯಪದೇಶವು ಏತತ್ಪ್ರಯುಕ್ತವೇ ಹೊರತು ವಾಸ್ತವವಲ್ಲವೆಂದು ತಿಳಿಸಿರುವರು. ವೈ=ಈ ವ್ಯಪ ದೇಶ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿಸಿದ್ಧವು. 'ಹರಿಸ್ತು ಸರ್ವ ಭೂತಾನಿ ತದಂತರ್ಯಾಮ್ಯಪೇಕ್ಷಯಾ' ಎಂಬ ಪ್ರಮಾಣವೂ ಇದೇ ಅರ್ಥವನ್ನೇ ಸ್ಪಷ್ಟಪಡಿಸುತ್ತದೆ. ಇದನ್ನೂ ನೀನು ಅವಶ್ಯವಾಗಿ ತಿಳಿಯಬೇಕೆಂದು ಹೇಳುತ್ತಾರೆ. ಶಬ್ದ ಬ್ರಹ್ಮ=ನನ್ನ ವಿಷಯವನ್ನೂ (ನಾನು ಗುಣಪೂರ್ಣನೆಂದು) ತಿಳಿಸಿಕೊಡುವ ವೇದರಾಶಿಯೂ ಪರಂ ಬ್ರಹ್ಮ=ಅದಕ್ಕೆ ವಿಷಯವಾದ ಸಚ್ಚಿದಾನಂದ ಗುಣಪೂರ್ಣ ವಸ್ತುವೂ ಉಭೇ=ಇವೆರಡೂ ಮಮ = ನನ್ನ ಶಾಶ್ವತೀ = ಎಲ್ಲ ಕಾಲದಲ್ಲಿಯೂ ಇರುವ ತನೂ = ರೂಪಗಳು. ಇವೆರಡರಲ್ಲಿ ವೇದರಾಶಿಯು ಪ್ರತಿಮಾರೂಪ. ಸಚ್ಚಿದಾನಂದಾತ್ಮಕವಾದದ್ದು ಸ್ವರೂಪರೂಪ. ಇವೆರಡೂ ನಾಶವಿಲ್ಲದವುಗಳು. 'ಯಾವದ್ಬ್ರಹ್ಮ ವಿಷ್ಠಿತಂ ತಾವತೀ ವಾಕ್' ಎಂಬ ಶ್ರುತಿಯು ವೇದ ನಿತ್ಯವಾದದ್ದೆಂದು ತಿಳಿಸುತ್ತದೆ. 'ಏಷ ನಿತ್ಯೋಽವ್ಯಯಃ ಸೂಕ್ಷ್ಮಃ ಎಂದು ಈ ಹಿಂದೆಯೇ ಸ್ವರೂಪವು ನಿತ್ಯವೆಂದು ಹೇಳಿದೆ. ಸರ್ವವೇದ ಪ್ರತಿಪಾದ್ಯನಾಗಿ ಶ್ರೀ ಹರಿಯು ವೇದದಲ್ಲಿ, ಸನ್ನಿಹಿತನಾಗಿರುವುದ ರಿಂದ ವೇದವು ಶ್ರೀಹರಿಯ ಪ್ರತಿಮೆ. 'ತಿಙ್ ಪದಾನಿ ಚ ಸರ್ವಾಣಿ ಸುಪ್ಪದಾನಿ ತಥೈವ ಚ। ತಸ್ಮಿನ್ನೇವ ಪ್ರವರ್ತಂತೇ ಮುಖ್ಯ ವೃತ್ತ್ಯಾ ವಿಶೇಷತಃ॥' ಎಲ್ಲ ಕ್ರಿಯಾಪದಗಳೂ ಎಲ್ಲ ನಾಮಪದಗಳೂ ವಿಶೇಷ ಮುಖ್ಯ ವೃತ್ತಿಯಿಂದ ಶ್ರೀಹರಿ ಯನ್ನೇ ಹೇಳುವುವು. ಈ ಪ್ರಮಾಣದಿಂದ ಶ್ರುತಿಯಲ್ಲಿರುವ ಅಹಂ ಅಸ್ಮಿ ಮೊದ ಲಾದ ಪದಗಳೂ ಅಂತರ್ಯಾಮಿಯಲ್ಲಿ ಮುಖ್ಯ ವೃತ್ತಿಯಿಂದ ಪ್ರವೃತ್ತವಾಗಿರುವು ವೆಂದು ತಿಳಿಸಿದಂತಾಯಿತು. (ಈ ಕಾರಣದಿಂದ ಅಭೇದ ವ್ಯಪದೇಶವೆಂದರ್ಥ.) ॥ ೫೧ ॥

ಲೋಕೇಽ ವಿತತಮಾತ್ಮಾನಂ ಲೋಕಂ ಚಾತ್ಮನಿ ಸಂತತಮ್ ।
ಉಭಯಂ ಚ ಮಯಾ ವ್ಯಾಪ್ತಂ ಮಯಿ ಚೈವೋಭಯಂ ಕೃತಮ್

ಆತ್ಮಾನಂ=(೧) ಜೀವನನ್ನು (೨) ಮನಸ್ಸನ್ನು ಲೋಕೇ=ಪ್ರಪಂಚದಲ್ಲಿ ಅವಿತತಂ=ಅವ್ಯಾಪ್ತನನ್ನಾಗಿ (೨) ವಿತತಂ=ತನ್ನ ವಿಷಯಗಳಲ್ಲಿ ವ್ಯಾಪ್ತವಾದು

ಮೊದಲನೆಯದು ಪ್ರತಿಮಾರೂಪ, ಎರಡನೆಯದು ಸ್ವರೂಪರೂಪ. ಜೀವನು ಲೋಕದಲ್ಲಿ ಅವ್ಯಾಪ್ತ. ಅವನ ಮನಸ್ಸು ತನ್ನ ವಿಷಯಗಳಲ್ಲಿ ವ್ಯಾಪ್ತವಾದುದು. ಪ್ರಪಂಚವಾದರೋ ಜೀವನಲ್ಲಿ-ಮನಸ್ಸಿನಲ್ಲಿ-ವಾಸನಾರೂಪದಿಂದ ಸೇರಿಕೊಂಡಿರು ವುದು. ಈ ಪ್ರಪಂಚ-ಆತ್ಮಗಳೆರಡೂ ಬ್ರಹ್ಮವಸ್ತುವಾದ ನನ್ನಿಂದ ವ್ಯಾಪ್ತ

ದನ್ನಾಗಿ (ವಿಜಾನೀಹಿ)=ತಿಳಿ. ಲೋಕಂ ಚ=ಪ್ರಪಂಚವನ್ನೂ ಆತ್ಮನಿ=(೧) ಜೀವನಲ್ಲಿ (೨) ಮನಸ್ಸಿನಲ್ಲಿ ಸಂತತಂ=ವಾಸನಾರೂಪದಿಂದ ಸೇರಿಕೊಂಡಿರುವು ದನ್ನಾಗಿ (ವಿಜಾನೀಹಿ)=ತಿಳಿ. ವಿಸ್ತೃತವಾದ ಪ್ರಪಂಚಕ್ಕೆ ಜೀವಪ್ರದೇಶ ವ್ಯಾಪ್ತಿ ಯಿಲ್ಲದೆ ಬಾಹುಲ್ಯವು ಕೂಡುವುದಿಲ್ಲ. ಉಭಯಂ ಚ=ಲೋಕ ಮತ್ತು ಆತ್ಮ ಇವೆರಡೂ ಮಯಾ=ಬ್ರಹ್ಮ ವಸ್ತುವಾದ ನನ್ನಿಂದ ವ್ಯಾಪ್ತಂ=ವ್ಯಾಪ್ತವೆಂದು ತಿಳಿ. ಹಾಗಾದರೆ ಲೋಕ ಮತ್ತು ಜೀವರಿಗೆ ಆಧಾರವಾವುದು? ಎಂದರೆ ಹೇಳುತ್ತಾರೆ. ಉಭಯಂ ಚ=ಎರಡನ್ನೂ ಮಯಿ=ನನ್ನಲ್ಲಿ ಕೃತಂ ಏವ (ವಿದ್ಧಿ)=ಸಮಾಶ್ರಿತ ವಾದುದನ್ನಾಗಿಯೇ ತಿಳಿ. ಏಕೆಂದರೆ ಎರಡಕ್ಕೂ ನಾನೇ ಆಧಾರನೆಂದು ಸಮಾಧಾನ ತಂದುಕೋ ಎಂದರ್ಥ. ೫೪ನೆಯ ಪದ್ಯದಲ್ಲಿ ಬರುವ ಸ್ಮರೇತ್ ಎಂಬುದರೊಂದಿ ಗಾದರೂ ಅನ್ವಯ. ಇಲ್ಲಿ 'ಚಿಟ್ಟೀ' ವ್ಯಾಖ್ಯಾನಕಾರರು 'ಅವಿತತ ಎಂದು ಪದಚ್ಛೇದಮಾಡಿ ಆತ್ಮ ಶಬ್ದಕ್ಕೆ ಜೀವವೆಂದರ್ಥ ಮಾಡಿದ್ದು ಪ್ರಕೃತಾನುಪಯುಕ್ತ ಮತ್ತು ಪ್ರಕರಣಾನನುಗುಣ'ವೆಂದು ಆಕ್ಷೇಪಿಸಿ ಎರಡನೇ ವ್ಯಾಖ್ಯಾನವೇ ಸರಿ ಎಂದು ಸಮರ್ಥಿಸಿರುವರು || ೫೨ ||

ಯಥಾ ಸುಷುಪ್ತಃ ಪುರುಷೋ ವಿಶ್ವಂ ಪಶ್ಯತಿ ಚಾತ್ಮನಿ ।
ಆತ್ಮಾನಮೇಕದೇಶಸ್ಥಂ ಮನ್ಯತೇ ಸ್ವಪ್ನ ಉತ್ಥಿತಃ || ೫೩ ||

'ವ್ಯಾಪ್ತಾ ಹ್ಯಾತ್ಮಾನಃ ಚೇತನಾ ನಿರ್ಗುಣಾಶ್ಚ' ಎಂಬ ಶ್ರುತಿಯನ್ನನುಸರಿಸಿ 'ಲೋಕೇ ವಿತತಂ ಆತ್ಮಾನಂ' ಎಂಬುದಕ್ಕೆ ಯಥಾಶ್ರುತವಾದ ಲೋಕದಲ್ಲಿ ವ್ಯಾಪ್ತ ವಾದ ಎಂಬ ಅರ್ಥವನ್ನೇ ಏಕೆ ಹೇಳಬಾರದು? ಎಂದರೆ ದೃಷ್ಟಾಂತಕ್ಕೆ ಅನುಗುಣ ವಾಗಿ ಹಾಗೆ ಅರ್ಥಮಾಡಿದ್ದೇವೆ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಸುಷುಪ್ತಃ (ಸನ್)=ಸ್ವಪ್ನವನ್ನು ಅನುಭವಿಸುತ್ತಾ ಪುರುಷ=ಜೀವನು ವಿಶ್ವಂ=ಜಗತ್ತನ್ನು ಆತ್ಮನಿ=ವಾಸನಾರೂಪದಿಂದ ಮನಸ್ಸಿನಲ್ಲಿ ಸ್ಫುರಿತವಾದುದನ್ನು ಚ=ತನಗಿಂತ ಭಿನ್ನವಾದುದನ್ನು ಯಥಾ=ಹೇಗೆ ಪಶ್ಯತಿ=ನೋಡುವನೋ ಸ್ವಪ್ನೇ=ಸ್ವಪ್ನದಲ್ಲಿ ಆತ್ಮಾನಂ=ತನ್ನನ್ನು ಏಕದೇಶಸ್ಥಂ=ಜಗತ್ತಿನ ಯಾವುದೋ ಒಂದು ಕಡೆ ಇದ್ದವ ನನ್ನಾಗಿ (ಜಗತ್ತೆಲ್ಲವನ್ನೂ ವ್ಯಾಪಿಸಿದವನನ್ನಾಗಿ ಅಲ್ಲ) ಮನ್ಯತೇ=ತಿಳಿಯುವನೋ ಉತ್ಥಿತಃ (ಚ)=ಸ್ವಪ್ನದಿಂದ ಎಚ್ಚೆತ್ತವನೂ ತನ್ನನ್ನು ಎಲ್ಲಿಯೋ ಒಂದು ಕಡೆ ಮಂಚದಲ್ಲಿ ಇರುವವನನ್ನಾಗಿ ತಿಳಿಯುವನೋ ಹಾಗೆ (ಅದರಂತೆ) ಅವನು ಲೋಕದಲ್ಲಿ ಅವ್ಯಾಪ್ತನು. ಹಾಗಾದರೆ 'ವ್ಯಾಪ್ತಾ ಹ್ಯಾತ್ಮಾನಃ' ಎಂಬ ಶ್ರುತಿಗೆ ಅರ್ಥವೇನು?

ವಾದುವು. ಇವೆರಡೂ ನನ್ನನ್ನೇ ಆಶ್ರಯಿಸಿರುವುವು. ಸ್ವಪ್ನವನ್ನು ಅನುಭವಿಸುವ ಜೀವನು ಜಗತ್ತನ್ನು ವಾಸನಾರೂಪದಿಂದ ಮನಸ್ಸಿನಲ್ಲಿ ಸ್ಫುರಿತವಾದುದನ್ನು ತನಗಿಂತ ಭಿನ್ನವಾದುದನ್ನು ಕಾಣುವನು. ತನ್ನನ್ನು ಆ ಪ್ರಪಂಚದ ಯಾವುದೋ ಒಂದು ಪ್ರದೇಶದಲ್ಲಿ ಮಾತ್ರ ಇರುವವನನ್ನಾಗಿ ತಿಳಿಯುವನು. ಸ್ವಪ್ನದಿಂದ ಎಚ್ಚರ

ಎಂದರೆ ಆ ಶ್ರುತಿಯಲ್ಲಿ ಇರುವ ಆತ್ಮಶಬ್ದವು ಪರಮಾತ್ಮನನ್ನು ಹೇಳುವುದು. ಆತ್ಮಾನಃ- ಪರಮಾತ್ಮನ ರೂಪಗಳು ವ್ಯಾಪ್ತಗಳು, ಎಂದರ್ಥ. ಅಥವಾ ಆತ್ಮಾನಃ ಜೀವನ ಸ್ವರೂಪ ಗುಣಗಳು (ಜ್ಞಾನಾತ್ಮಕವಾದುವು) ವ್ಯಾಪ್ತಾಃ-ಜೀವನು ಇರುವ ವರೆಗೂ ಅಥವಾ ಜೀವನಿರುವ ಕಡೆಗಳಲ್ಲೆಲ್ಲ ಇರುವವುಗಳು ಎಂದು ಅರ್ಥಮಾಡ ಬೇಕೆಂದು ತಿಳಿಯಬೇಕು. ಈ ಶ್ಲೋಕದಿಂದ ಜಾಗ್ರದಾದ್ಯವಸ್ಥೆಗಳು ಭಗವದಧೀನ ವೆಂದು ತಿಳಿದಿರುವ ದೃಷ್ಟಾಂತದಿಂದ ಹೇಳುತ್ತಾರೆ. ನಿದ್ರಿತನಾದ ಜೀವನು ಸ್ವಪ್ನಾ ವಸ್ಥೆಯಲ್ಲಿ ಮನಸ್ಸಿನಲ್ಲಿ ವಾಸನಾಮಯವಾಗಿರುವ ಪ್ರಪಂಚವನ್ನು ನೋಡುವನೋ ಸ್ವಪ್ನದಿಂದ ಎಚ್ಚೆತ್ತವನು ಏಕದೇಶದಲ್ಲಿ (ಮಂಚಾದಿಗಳಲ್ಲಿ ಹಾಸಿಗೆಯಲ್ಲಿ)ರುವ ತನ್ನನ್ನು ಕಾಣುವನೋ ಸ್ವಾಪ್ನಪ್ರಪಂಚವನ್ನು ಹೇಗೆ ಕಾಣುವುದಿಲ್ಲವೋ ಎಂದಾದರೂ ಅರ್ಥ || ೫೩ ||

ಏವಂ ಜಾಗರಣಾದೀನಿ ಜೀವಸ್ಥಾನಾನಿ ಚಾತ್ಮನಃ |
ಮಾಯಾಮಾತ್ರಾಣಿ ವಿಜ್ಞಾಯ ತದ್ದ್ರಷ್ಟಾರಂ ಪರಂ ಸ್ಮರೇತ್ ||

'ಮಾಯಾಮಾತ್ರಂತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್' ಎಂಬ ಸೂತ್ರದಂತೆ ಭಗವಂತನೇ ಸ್ವಪ್ನಾದಿಗಳಿಗೆ ನಿಮಿತ್ತಕಾರಣನೆಂದು ಹೇಗೆ ಸಿದ್ಧವಾಗು ವುದೋ ಹಾಗೆ 'ಅತಃ ಪ್ರಬೋಧೋ ಅಸ್ಮಾತ್' ಎಂಬ ಸೂತ್ರದಂತೆ ಜಾಗ್ರದಾದ್ಯ ವಸ್ಥೆಗಳಿಗೂ ಭಗವಂತನೇ ಕಾರಣನು ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಏವಂ-ಹೇಗೆ ಮೇಲೆ ಹೇಳಿದ ಸ್ವಪ್ನಾವಸ್ಥೆಯು ಮಾಯಾ-ಪ್ರಕೃತಿ ಎಂದು ಕರೆಸುವ ಈಶ್ವರೇಚ್ಛಾನಿರ್ಮಿತವೋ ಹಾಗೆ ಜಾಗರಣಾದೀನಿ=ಜಾಗ್ರತಾವಸ್ಥೆಯೇ ಮೊದಲಾದ ಜೀವಸ್ಥಾನಾನಿ ಚ-ಜೀವನ ಸುಖಾದ್ಯನುಭವಸ್ಥಾನಗಳೂ ಆತ್ಮನಃ- ಶ್ರೀಹರಿಯ ಮಾಯಾಮಾತ್ರಾಣಿ=ಇಚ್ಛೆಯೆಂಬ ಪ್ರಕೃತಿಯಿಂದ ನಿರ್ಮಿತವಾದು ವನ್ನಾಗಿ ವಿಜ್ಞಾಯ= ತಿಳಿದು ತದ್ದ್ರಷ್ಟಾರಂ- ಆ ಅವಸ್ಥೆಗಳಲ್ಲಿ ಇದ್ದ ಜೀವನ ಸುಖಾದ್ಯನುಭವಗಳಿಗೆ ಕಾರಣನಾದ ಸಾಕ್ಷಿಯಾದ ಶ್ರೀಹರಿಯನ್ನು ಪರಂ-ಜೀವನಿ ಗಿಂತ ಭಿನ್ನನನ್ನಾಗಿ ಸ್ಮರೇತ್=ತಿಳಿಯಬೇಕು. 'ಅನಶ್ನನ್ನನ್ಯೋಭಿಚಾಕಶೀತಿ' ಎಂಬ ಶ್ರುತಿಯ ಅರ್ಥವೇ ಇದು. ಈ ಎರಡು ಶ್ಲೋಕಗಳಿಗೂ ಸೇರಿ ಸ್ವಪ್ನದಲ್ಲಿ ನಿದ್ರಿಸುವ ಪುರುಷನು ತನ್ನ ಮನಸ್ಸಿನಲ್ಲಿ ವಾಸನಾರೂಪದಿಂದ ಇರುವ ಗಿರಿ, ವನ ಮೊದಲಾದ ರೂಪದ ಜಗತ್ತನ್ನೂ ಅದರಲ್ಲಿರುವ ತನ್ನನ್ನೂ ಕಾಣುವನು. ಸ್ವಪ್ನ

ಗೊಂಡಮೇಲೂ ಮಂಚದಲ್ಲಿ ಒಂದುಕಡೆ ಇದ್ದ ತನ್ನನ್ನು ಕಾಣುವನು. ಪರಮಾತ್ಮನ ರೂಪಗಳು ವ್ಯಾಪ್ತವಾದುವು. ಸ್ವಪ್ನಾವಸ್ಥೆಯು ಈಶ್ವರೇಚ್ಛಾನಿರ್ಮಿತವಾಗಿರುವಂತೆ ಜಾಗ್ರದಾದ್ಯವಸ್ಥೆಗಳೂ-ಜೀವನು ಸುಖಾದಿಗಳನ್ನು ಅನುಭವಿಸುವ ಈ ಎಲ್ಲ ಅವಸ್ಥೆ ಗಳೂ-ಈಶ್ವರೇಚ್ಛೆಯಿಂದ ನಿರ್ಮಿತವಾದುವೇ. ಅದನ್ನು ತಿಳಿದು ಈ ಎಲ್ಲ ಅವಸ್ಥೆ ಗಳಲ್ಲಿಯೂ ಜೀವನ ಸುಖಾದ್ಯನುಭವಗಳಿಗೆ ಕಾರಣನಾಗಿ ಸಾಕ್ಷಿಯಾದ ಶ್ರೀಹರಿ

ಮಧ್ಯದಲ್ಲಿ ಸ್ವಪ್ನವನ್ನು ಕಾಣುವನು. ಸ್ವಪ್ನದಲ್ಲಿಯೇ ಎಚ್ಚೆತ್ತವನು ತನ್ನನ್ನು ಏಕದೇಶಸ್ಥನನ್ನಾಗಿ ತಿಳಿಯುವನು. ಈ ಅವಸ್ಥೆಗಳು ಜೀವನಿಗೆ ಸ್ವಾತಂತ್ರವಿಲ್ಲದ್ದರಿಂದ ಹೇಗೆ ಈಶ್ವರೇಚ್ಛಾ ಮತ್ತು ವಾಸನಾ ನಿರ್ಮಿತಗಳೋ ಹಾಗೆಯೇ ಪ್ರಸಿದ್ಧಗಳಾದ ಜಾಗ್ರದಾದ್ಯವಸ್ಥೆಗಳೂ ಈಶ್ವರೇಚ್ಛಾನಿರ್ಮಿತಗಳೇ ಎಂದು ತಿಳಿದು ಇವುಗಳ ಸಾಕ್ಷಿಯಾದ ಶ್ರೀಹರಿಯನ್ನು ತನಗಿಂತ ಭಿನ್ನ ಮತ್ತು ಸರ್ವೋತ್ತಮನೆಂದು ಉಪಾಸಿಸಬೇಕು. ಈ ಪ್ರಕರಣದಿಂದ 'ಶ್ರೀಹರಿಯು ಮೇಲೆ ಹೇಳಿದ ಮಹಿಮೆಯುಳ್ಳವನಿರಲಿ, ಅದರಿಂದ ನಮಗೇನು?' ಎಂದಾಶಂಕಿಸಿದರೆ ಜಾಗ್ರದಾದ್ಯವಸ್ಥಾನುಭವವೆಂಬ ಬಂಧವು ಅನಾದಿ ವಿಷಯವಾಸನೆಗಳಿಂದ ತುಂಬಿದ ಅಂತಃಕರಣಪ್ರಯುಕ್ತವಾದ್ದರಿಂದ ಅವೆರಡೂ ಶ್ರೀಹರಿಯ ಅಧೀನವಾದ್ದರಿಂದ ಅದರ ನಿವೃತ್ತಿಗಾಗಿ ನನ್ನನ್ನು ಮೇಲೆ ಹೇಳಿದ ಮಹಿಮೋಪೇತನನ್ನಾಗಿ ಸ್ಮರಿಸಬೇಕೆಂದು ತಿಳಿಸಿರುವರೆಂದು ಪರಮಾರ್ಥ. 'ಮಾಯೇತೀಚ್ಛಾ ಸಮುದ್ದಿಷ್ಟಾ ಮಾಯಾಮಾತ್ರಂ ತದುದ್ಭವಂ' || 'ಮನೋಗತಾಂಸ್ತು ಸಂಸ್ಕಾರಾನ್ ಸ್ವೇಚ್ಛಯಾ ಪರಮೇಶ್ವರಃ | ಪ್ರದರ್ಶಯತಿ ಜೀವಾಯ ಸ ಸ್ವಪ್ನ ಇತಿ ಗೀಯತೆ' || ೫೪ ||

ಯೇನ ಪ್ರಸುಪ್ತಃ ಪುರುಷಃ ಸ್ವಾಪಂ ವೇದಾತ್ಮನಸ್ತದಾ |
ಸುಖಂ ಚ ನಿರ್ಗುಣಂ ಬ್ರಹ್ಮ ತಮಾತ್ಮಾನಮವೈಹಿ ಮಾಮ್ ||

'ತದ್ದ್ರಷ್ಟಾರಂ' ಎಂಬಲ್ಲಿ ಜೀವಾತ್ಮನಿಗಿಂತ ಪರಮಾತ್ಮನು ಭಿನ್ನನೆಂದು ಸ್ಪಷ್ಟವಾಗಿ ತೋರಿಬರುವುದಿಲ್ಲವಾದ್ದರಿಂದ ಅಲ್ಲಿನ ಅರ್ಥವನ್ನು ಸ್ಪಷ್ಟಪಡಿಸುತ್ತಾರೆ. ಯೇನ–ಯಾವ ಶ್ರೀಹರಿಯಿಂದ ಪ್ರಸುಪ್ತಃ (ಸನ್)=ಗಾಢನಿದ್ರೆಯನ್ನು ಹೊಂದಿಸಲ್ಪಟ್ಟವನಾಗಿ ಪುರುಷಃ=ಜೀವನು ತದಾ–ನಿದ್ರಾವಸ್ಥೆಯಲ್ಲಿ ಆತ್ಮನಃ–ತನ್ನ ಸ್ವಾಪಂ–ಇಷ್ಟು ಕಾಲವೂ ನಾನೇನನ್ನೂ ತಿಳಿಯಲಿಲ್ಲವೆಂಬ ಸ್ವಾಪ ಶಬ್ದದಿಂದ ಕರೆಯಲ್ಪಡುವ ಜ್ಞಾನವನ್ನೂ ಸುಖಂ ಚ=ಸುಖವಾಗಿ ಇದುವರೆಗೂ ಮಲಗಿದ್ದೆನು ಎಂಬ ಅನುಭವಕ್ಕೆ ವಿಷಯವಾದ ಸುಖವನ್ನೂ ಸುಖಿಯಾದ ತನ್ನನ್ನೂ ವೇದ–ತಿಳಿಯುವನೋ ಮತ್ತೇನನ್ನೂ ತಿಳಿಯುವುದಿಲ್ಲವೋ ತಂ=ಇವುಗಳಿಗೆ ಕಾರಣನಾದ ಆತ್ಮಾನಂ=ಅಂತರ್ಯಾಮಿಯಾದ ನಿರ್ಗುಣಂ=ಪ್ರಾಕೃತಗುಣರಹಿತನಾದ ಬ್ರಹ್ಮ=ಗುಣಪೂರ್ಣನಾದ ಶ್ರೀಹರಿಯನ್ನು ಮಾಂ=ನಾನೆಂದು ಅವೈಹಿ = ತಿಳಿ. ಇದು

ಯನ್ನು ಜೀವನಿಗಿಂತ ಭಿನ್ನನನ್ನಾಗಿ ತಿಳಿಯಬೇಕು. ಶ್ರೀಹರಿಯಿಂದ ಜೀವನು ಗಾಢನಿದ್ರೆಯನ್ನು ಹೊಂದಿಸಲ್ಪಡುವನು. ಆ ಅವಸ್ಥೆಯಲ್ಲಿ 'ಇಷ್ಟುಕಾಲವೂ ನಾನೇನನ್ನೂ ತಿಳಿಯಲಿಲ್ಲ'ವೆಂಬ ಜ್ಞಾನವನ್ನೂ 'ಸುಖವಾಗಿ ಇದುವರೆಗೂ ಮಲಗಿದ್ದೆನು' ಎಂದು ಅನುಭವ ವಿಷಯವಾದ ಸುಖವನ್ನೂ ಸುಖಿಯಾದ ತನ್ನನ್ನೂ ಜೀವನು ತಿಳಿಯುವನು. ಮತ್ತೇನನ್ನೂ ತಿಳಿಯುವುದಿಲ್ಲ. ಹೀಗೆ ಈ ಎಲ್ಲ ಅವಸ್ಥೆಗಳಿಗೆ ಕಾರಣನೂ ಅಂತರ್ಯಾಮಿಯೂ ಪ್ರಾಕೃತಗುಣರಹಿತನೂ ಗುಣಪೂರ್ಣನೂ

ಶೇಷಾಂತರ್ಯಾಮಿಯ ಮಾತು. ಇದರಿಂದ ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರ್ಯರೂಪಗಳಿಗೂ ತನಗೂ ಭೇದವಿಲ್ಲವೆಂದು ತಿಳಿಸಿರುವನು || ೫೫ ||

ಉಭಯಂ ಸ್ಮರತಃ ಪುಂಸಃ ಪ್ರಸ್ವಾಪಪ್ರತಿಬೋಧಯೋಃ ।
ಅನ್ವೇತಿ ವ್ಯತಿರಿಚ್ಯೇತ ತಜ್ ಜ್ಞಾನಂ ಬ್ರಹ್ಮ ತತ್ಪರಮ್ || ೫೬ ||

ಈ ಕಾರಣದಿಂದಲೂ ಪರಮಾತ್ಮನು ಜಾಗ್ರದಾದಿ ಅವಸ್ಥೆಗಳನ್ನು ಅನುಭವಿಸುವ ಜೀವನಿಗಿಂತ ಭಿನ್ನನೆಂದು ಹೇಳುತ್ತಾರೆ. ಉಭಯಂ–ಜಾಗ್ರದವಸ್ಥೆ ಮತ್ತು ಸುಪ್ತಿಅವಸ್ಥೆ (ಸುಪ್ತಿ ಶಬ್ದದಿಂದ ನಿದ್ರೆ ಮತ್ತು ಸ್ವಪ್ನ ಎರಡನ್ನೂ ತೆಗೆದುಕೊಳ್ಳಬೇಕು.) ಈ ಎರಡು ಅವಸ್ಥೆಗಳನ್ನೂ ಸ್ಮರತಃ=ಅನುಭವಿಸುವ ಪುಂಸಃ–ಜೀವನಿಗೆ ಪ್ರಸ್ವಾಪ ಪ್ರತಿಬೋಧಯೋಃ=ಆಯಾಯ ವಸ್ತುವಿನ ಪರಿಜ್ಞಾನವೆಂಬ ಜಾಗ್ರದವಸ್ಥೆ (ಪ್ರತಿಬೋಧ) ಯಲ್ಲಿ ಯತ್–ಯಾವ ಬ್ರಹ್ಮವೆಂಬ ವಸ್ತುವು ಅನ್ವೇತಿ=ತಾನೂ ಜ್ಞಾನವುಳ್ಳದ್ದರಿಂದ ಪ್ರತಿಬುದ್ಧವೆನಿಸಿ ಅನುಸಾರವಾಗಿರುವುದೋ, ಸುಪ್ತಿಯಲ್ಲಾದರೋ ತತ್ತದ್ವಸ್ತುಗಳ ಪರಿಜ್ಞಾನವಿಲ್ಲವೆಂಬ ನಿದ್ರೆಯಲ್ಲಿ ತಾನು ನಿದ್ರಿಸದಿರುವುದರಿಂದ ವ್ಯತಿರಿಚ್ಯೇತ=ಜೀವನು ವಸ್ತುಜ್ಞಾನರಹಿತನಾದರೂ ತಾನು ಸರ್ವಜ್ಞಾನವನ್ನೂ ಹೊಂದಿರುವುದರಿಂದ ಅನುಸಾರವಾಗಿ ಇಲ್ಲವೋ ಸ್ವಪ್ನಕ್ಕೂ ಪ್ರಸ್ವಾಪವೆಂಬ ಹೆಸರಿರುವುದರಿಂದ ಅನ್ಯಥಾಜ್ಞಾನವೆಂಬ ಸ್ವಪ್ನಾವಸ್ಥೆಯಲ್ಲಿ ತನಗೆ ಅನ್ಯಥಾಜ್ಞಾನವಿಲ್ಲವಾದ್ದರಿಂದ ಯಾವುದು ಅನುಸಾರವಾಗಿ ಇಲ್ಲವೋ ತತ್=ಆ ವಸ್ತುವೇ ಪರಂಬ್ರಹ್ಮ=ಭಿನ್ನವಾದ ಗುಣಪೂರ್ಣವಾದ ವಸ್ತುವು. ತತ್–ಅದೇ ಜ್ಞಾನಂ=ಸರ್ವದಾ ಜ್ಞಾನಾತ್ಮಕವೇ ಆದ್ದರಿಂದ ಜ್ಞಾನಶಬ್ದ ಮುಖ್ಯವಾಚ್ಯವು. ಮಾಂ ಅವೈಹಿ ಎಂದು ಹಿಂದಕ್ಕೆ ಅನ್ವಯ. 'ಬ್ರಹ್ಮವಿದಾಪ್ನೋತಿ ಪರಂ' 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂಬ ಶ್ರುತಿಗಳಲ್ಲಿ ಪರ ಮತ್ತು ಜ್ಞಾನಶಬ್ದಗಳು ಬ್ರಹ್ಮವಾಚಕಗಳೆಂದು ಸ್ಪಷ್ಟವಾಗಿರುವುದು. ಇದರಿಂದ ಸುಪ್ತ್ಯಾದಿ ಅವಸ್ಥೆಗಳನ್ನು ಜೀವನು ಅನುಭವಿಸುತ್ತಿದ್ದರೂ ಅವುಗಳನ್ನು ಅನುಭವಿಸದೆ ಜೀವನೊಂದಿಗೆ ಇರುವ ಪರಮಾತ್ಮನು ಭಿನ್ನನೆಂದು ಹೇಳಿದಂತಾಯಿತು. ಅಥವಾ ಜ್ಞಾನವೇ ಎಂಬ ಅವಧಾರಣದಿಂದ ಜೀವನಿಗೆ ಅಜ್ಞಾನ ಬರಬಹುದೆಂದೂ ಪರಮಾತ್ಮನಿಗೆ ಅದಿಲ್ಲ

ಆದ ಶ್ರೀಹರಿಯೇ ನಾನು. ಹೀಗೆಂದು ನನ್ನನ್ನು ತಿಳಿ. ಹೀಗೆ ಜಾಗ್ರತ್ ಸ್ವಪ್ನ-ಸುಷುಪ್ತಿ ಅವಸ್ಥೆಗಳನ್ನು ಅನುಭವಿಸುವ ಜೀವನಿಗೆ ವಸ್ತು ಪರಿಜ್ಞಾನರೂಪವಾದ ಜಾಗ್ರದವಸ್ಥೆಯಲ್ಲಿ ಬ್ರಹ್ಮವಸ್ತುವೂ ಪ್ರತಿಬುದ್ಧವೆನಿಸಿ ಅನುಸಾರವಾಗಿರುವುದು. ಉಳಿದ ಅವಸ್ಥೆಗಳಲ್ಲಿ ಜೀವನಿಗೆ ಆಯಾಯಾ ವಸ್ತು ಪರಿಜ್ಞಾನವಿಲ್ಲದಿರುವಾಗ ಬ್ರಹ್ಮವಸ್ತುವು ಪ್ರತಿಬುದ್ಧವಾಗಿಯೇ ಇರುವುದರಿಂದ ಅನುಸಾರವಾಗಿರುವುದಿಲ್ಲ. ಹೀಗೆ ಅನುಸಾರಿ ಅನನುಸಾರಿಯಾಗಿರುವ ವಸ್ತುವೇ ಜೀವನಿಗಿಂತ ಭಿನ್ನವಾದ ಗುಣಪೂರ್ಣ ವಸ್ತು. ಅದು ಯಾವಾಗಲೂ ಜ್ಞಾನಾತ್ಮಕವಾದ್ದರಿಂದ ಜ್ಞಾನಶಬ್ದ

ವೆಂದೂ ಬ್ರಹ್ಮನೇ ಎಂಬ ಅವಧಾರಣದಿಂದ ಪೂರ್ಣಗುಣನೇ ಹೊರತು ಜೀವನಂತೆ ಅಲ್ಪಗುಣನಲ್ಲವೆಂದೂ ಪರನೇ ಎಂಬುದರಿಂದ ಅಪರಿಚ್ಛಿನ್ನನೇ ಹೊರತು ಜೀವನಂತೆ ಪರಿಚ್ಛಿನ್ನನಲ್ಲವೆಂದೂ ಈ ಶ್ಲೋಕದಲ್ಲಿ ತಿಳಿಸಿರುವರು. ತದೇವಜ್ಞಾನಂ, ತದೇವ ಬ್ರಹ್ಮ, ತದೇವ ಪರಂ ಎಂದು ಅನ್ವಯ. 'ತದೇವರ್ತಂ ತದು ಸತ್ಯಮಾಹುಃ ತದೇವ ಬ್ರಹ್ಮ ಪರಮಂ ಕವೀನಾಮ್' ಎಂಬ ಶ್ರುತಿಯನ್ನು ನೋಡಿ 'ಸ್ವಪ್ನೇನ ಶಾರೀರಮಭಿಪ್ರಹತ್ಯಾಸುಪ್ತಃ ಸುಪ್ತಾನಭಿಚಾಕಶೀತಿ' ಎಂಬ ಶ್ರುತಿಯು ಪರಮಾತ್ಮನಿಗೆ ಸ್ವಪ್ನಾದಿಗಳಿಲ್ಲವೆಂದು ತಿಳಿಸುವುದು. ಪ್ರತಿಬೋಧವೆಂದರೆ ಸಮ್ಯಕ್ ಜ್ಞಾನ. ಅದಿದ್ದಾಗ ಜೀವನು ತಾನು ಬ್ರಹ್ಮನಲ್ಲವೆಂದು ತಿಳಿಯುವನಾದ್ದರಿಂದ ಬ್ರಹ್ಮನಿಗಿರುವ ಭೇದ ಜ್ಞಾನಕ್ಕೆ ಅನುಗುಣವಾಗಿರುವುದು. ಅಜ್ಞಾನ ಅನ್ಯಥಾಜ್ಞಾನಾವಸ್ಥೆಗಳಲ್ಲಿ ಜೀವನು ಹಾಗೆ ತಿಳಿಯುವುದಿಲ್ಲವಾದ್ದರಿಂದ ಬ್ರಹ್ಮನಿಗಿರುವ ಭೇದಜ್ಞಾನವು ಇದಕ್ಕಿಂತ ವ್ಯತಿರಿಕ್ತವಾದುದು. ಇದರಿಂದ ಬಂಧನಿವೃತ್ತಿಗೆ ಜಾಗ್ರದಾದ್ಯವಸ್ಥಾನಿಯಾಮಕ ಪರಮಾತ್ಮನೆಂದಿಷ್ಟು ಮಾತ್ರ ತಿಳಿದರೆ ಸಾಲದು, ಅವನು ಜೀವರಿಗಿಂತ ಭಿನ್ನನೆಂದು ತಿಳಿಯುವುದೂ ಆವಶ್ಯಕವೆಂದು ತೋರಿಸಿರುವರು. || ೫೬ ||

ಯದ್ಯೇಷ ವಿಸ್ಮೃತಃ ಪುಂಸೋ ಮದ್ಭಾವೋ ಭಿನ್ನ ಆತ್ಮನಃ ।
ತತಃ ಸಂಸಾರ ಏಕಸ್ಯ ದೇಹಾದ್ದೇಹೋ ಮೃತೇರ್ಮೃತಿಃ || ೫೭ ||

ಭೇದಜ್ಞಾನವು ಅಗತ್ಯವೆಂದು ಹೇಳಿದ್ದಾಯಿತು. ಅದಿಲ್ಲದಿದ್ದರೆ ಅನರ್ಥವನ್ನೂ ಹೇಳುತ್ತಾರೆ. ಆತ್ಮನಃ=ಜೀವನಿಗಿಂತ ಭಿನ್ನಃ-ಶ್ರೀಹರಿಯು ಭಿನ್ನನು ಏಷಃ=ಎಂಬ ಈ ಮದ್ಭಾವಃ=ನನ್ನ ಸ್ಥಿತಿಯ ಪ್ರಕಾರವು ಪುಂಸಃ=ಜೀವನಿಗೆ ವಿಸ್ಮೃತಃ ಯದಿ= ಮರೆತುಹೋದದ್ದೇ ಆದರೆ ತತಃ=ಆ ಅಜ್ಞಾನದಿಂದ ಏಕಸ್ಯ=ಸಯುಜರೂ ಸಖಾಯರೂ ಆದ ಜೀವ ಪರಮಾತ್ಮರಿಬ್ಬರಲ್ಲಿ ಒಬ್ಬನಾದ ಜೀವನಿಗೆ ದೇಹಾತ್ ದೇಹಃ= ದೇಹ ಬರುವುದು ಹೋಗುವುದೆಂಬ ಸಂಸಾರಃ=ಬಂಧವು (ಭವತಿ)=ಆಗುವುದು. ವಿಸ್ಮೃತಃ ಯದಿ=ವಿರುದ್ಧವಾಗಿ ತಿಳಿಯಲ್ಪಟ್ಟದ್ದೇ ಆದರೆ ಜೀವನೂ ಪರಮಾತ್ಮನೂ ಒಂದೇ ಎಂದು ತಿಳಿದಲ್ಲಿ ಎಂದರ್ಥ. ಏಕಸ್ಯ=ಜೀವಪರಮಾತ್ಮರಲ್ಲಿ ಒಬ್ಬನಾದ ಜೀವನಿಗೆ ಐಕ್ಯಜ್ಞಾನಿಗೆ ಮೃತೇಃ ಮೃತಿಃ=ದುಃಖದಿಂದ ದುಃಖವು. ಅಂದರೆ ಸಂತತದುಃಖರೂಪವಾದ ಅಂಧಂತಮಸ್ಸೇ ಆಗುವುದೆಂದರ್ಥ. 'ಸರ್ವ ಭಿನ್ನಂ

ಮುಖ್ಯವಾಚ್ಯ. ಅದೇ ನಾನು. ಜೀವನಿಗಿಂತ ಶ್ರೀಹರಿಯು ಭಿನ್ನನೆಂಬ ಈ ನನ್ನ ಸ್ಥಿತಿಯು ಜೀವನಿಗೆ ಮರೆತುಹೋದಲ್ಲಿ ಆ ಅಜ್ಞಾನದಿಂದ ಜೀವಪರಮಾತ್ಮರಲ್ಲಿ ಒಬ್ಬನಾದ ಜೀವನಿಗೆ ದೇಹಾನಂತರ ಮತ್ತೊಂದು ದೇಹ ಹೊಂದುವುದೆಂಬ ಸಂಸಾರವು-ಬಂಧವು-ಉಂಟಾಗುವುದು. ಜೀವನೂ ಪರಮಾತ್ಮನೂ ಒಂದೇ ಎಂದು ವಿರುದ್ಧವಾಗಿ ತಿಳಿದಲ್ಲಿ ಜೀವನಿಗೆ ದುಃಖದಿಂದ ದುಃಖ ಅಂದರೆ ಸಂತತ ದುಃಖ ರೂಪವಾದ ಅಂಧಂತಮಸ್ಸೇ ಆಗುವುದು.

ಪರಾತ್ಮಾನಂ ವಿಸ್ಮರ್ತ ಸಂಸರೇದಿಹ| ಅಭಿನ್ನಂ ಸಂಸ್ಮರ್ತ ಯಾತಿ ತಮೋ ನಾಸ್ತ್ಯತ್ರ ಸಂಶಯಃ' || ಎಂಬ ಪ್ರಮಾಣವು ಈ ಅರ್ಥವನ್ನು ಸ್ಪಷ್ಟಪಡಿಸುವುದು. || ೫೭ ||

ಲಬ್ಧ್ವೇಹ ಮಾನುಷೀಂ ಯೋನಿಂ ಜ್ಞಾನವಿಜ್ಞಾನಸಂಭವಾಮ್
ಆತ್ಮಾನಂ ಯೋ ನ ಬುದ್ಧ್ಯೇತ ನ ಕ್ವಚಿತ್ ಕ್ಷೇಮಮಾಪ್ನು-
ಯಾತ್ || ೫೮ ||

ಮದ್ಭಾವಃ ಎಂದರೆ ನನ್ನ ಐಕ್ಯಜ್ಞಾನವೆಂದು ಅರ್ಥಮಾಡುವುದು ತಪ್ಪೆಂದು ಈ ಶ್ಲೋಕದಿಂದ ತಿಳಿಸುತ್ತಾರೆ. ಇಹ=ಈ ಜಂಬೂದ್ವೀಪದಲ್ಲಿ ಭರತಖಂಡದಲ್ಲಿ ಕರ್ಮಭೂಮಿಯಲ್ಲಿ ಜ್ಞಾನವಿಜ್ಞಾನಸಂಭವಾಂ=ಜ್ಞಾನವನ್ನೂ ವಿಜ್ಞಾನವನ್ನೂ ಹೊಂದಬಹುದಾದ ಮಾನುಷೀಂ ಯೋನಿಂ=ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮನುಷ್ಯ ಜನ್ಮವನ್ನು ಲಬ್ಧ್ವಾ=ಹೊಂದಿ ಯಃ=ಯಾವ ಅಧಿಕಾರಿ ಚೇತನನು ಆತ್ಮಾನಂ=ತನ್ನನ್ನೂ ಶ್ರೀಹರಿಯನ್ನೂ ನ ಬುದ್ಧ್ಯೇತ=ಯಥಾವತ್ತಾಗಿ ತಿಳಿಯುವುದಿಲ್ಲವೋ (ಸಃ)=ಆ ಅಧಿಕಾರಿಯು ಕ್ವಚಿತ್=ಮತ್ತೆ ಯಾವ ಜನ್ಮದಲ್ಲಿಯೂ ಕ್ಷೇಮಂ=ಮೋಕ್ಷಸಾಧನವಾದ ಈ ಜ್ಞಾನವನ್ನು ಆಪ್ನುಯಾತ್=ಹೊಂದುವುದಿಲ್ಲ. ಕ್ವಚಿತ್=ಎಂದೂ ಕ್ಷೇಮಂ=ಮೋಕ್ಷವನ್ನು ನ ಆಪ್ನುಯಾತ್=ಹೊಂದುವುದಿಲ್ಲ. ವಿ.ಅ. ಜ್ಞಾನವಿಜ್ಞಾನಗಳೆಂದರೆ ಜೀವಾತ್ಮ ಜ್ಞಾನ ಪರಮಾತ್ಮ ಜ್ಞಾನಗಳೆಂದರ್ಥ. ಸಾಮಾನ್ಯಜ್ಞಾನ ವಿಶೇಷಜ್ಞಾನಗಳೆಂದೂ ವ್ಯಾವಹಾರಿಕ ಪಾರಮಾರ್ಥಿಕ ಜ್ಞಾನಗಳೆಂದೂ ಶಾಸ್ತ್ರಾರ್ಥ ವಿಷಯಕವಾದ್ದು ಜ್ಞಾನ, ಅನುಭವಜನ್ಯವಾದದ್ದು ವಿಜ್ಞಾನವೆಂದೂ ಕೆಲವರು ಅರ್ಥಮಾಡಿರುವರು. ನಿರ್ವಿಶೇಷವಾದಿಗಳಾದ ಇವರಿಗೆ ಸಾಮಾನ್ಯ ವಿಶೇಷಭೇದವು ಅಂಗೀಕಾರ್ಯವಲ್ಲ. ವ್ಯಾವಹಾರಿಕವೆಂಬುದು ಯಾವ ಪ್ರಮಾಣದಿಂದಲೂ ಸಿದ್ಧವಾಗುವುದಿಲ್ಲ. ಶಾಸ್ತ್ರಾನುಭವಭೇದವೂ ಸರಿಯಾದುದಲ್ಲ. || ೫೮ ||

ಸ್ಮೃತ್ವೇಹಾಯಾಂ ಪರಿಕ್ಲೇಶಂ ತತಃ ಫಲವಿಪರ್ಯಯಮ್ |
ನೋಭಯಂ ವಾಪ್ಯನೀಹಾಯಾಂ ಪಶ್ಯಂಸ್ತದ್ವಿರಮೇತ್ಕವಿಃ ||೫೯||

'ಈ ಜಂಬೂದ್ವೀಪ–ಭರತಖಂಡ ಕರ್ಮಭೂಮಿ. ಇಲ್ಲಿ ಜ್ಞಾನವನ್ನೂ ವಿಜ್ಞಾನವನ್ನೂ ಹೊಂದಬಹುದಾದ ಜನ್ಮ ಮನುಷ್ಯ ಜನ್ಮ. ಅದರಲ್ಲಿಯೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜನ್ಮಗಳು ಶಾಸ್ತ್ರಾಭ್ಯಾಸಕ್ಕೆ ಯೋಗ್ಯಗಳಾದ್ದರಿಂದ ಜ್ಞಾನ ವಿಜ್ಞಾನಕ್ಕೆ ಯೋಗ್ಯಗಳು. ಅವುಗಳನ್ನು ಹೊಂದಿದ ಅಧಿಕಾರಿ ಚೇತನನು ತಮ್ಮನ್ನೂ ಶ್ರೀಹರಿಯನ್ನೂ ಯಥಾವತ್ತಾಗಿ ತಿಳಿಯಬೇಕು. ಇಲ್ಲಿ ತಿಳಿಯದ ಚೇತನನು ಮತ್ತೆ ಯಾವ ಜನ್ಮದಲ್ಲಿಯೂ ಮೋಕ್ಷಸಾಧನ ಜ್ಞಾನವನ್ನು ಹೊಂದುವುದಿಲ್ಲ. ಕಾಮನೆಯಿಂದ ಮಾಡುವ ಯಜ್ಞಾದಿ ಪ್ರವೃತ್ತಿ ಕರ್ಮಗಳಲ್ಲಿ ಎಲ್ಲ

ಜ್ಞಾನದಿಂದ ಮೋಕ್ಷವೇ ಬೇಡ. ಯಜ್ಞಾದಿಕರ್ಮದಿಂದ ಅದನ್ನು ಸಂಪಾದಿಸ ಬಹುದಲ್ಲಾ ಎಂದರೆ ಹೇಳುತ್ತಾರೆ. ಈಹಾಯಾಂ=ಯಜ್ಞಾದಿ ಪ್ರವೃತ್ತಿಕರ್ಮ ಮಾಡುವಿಕೆಯಲ್ಲಿ ಪರಿಕ್ಲೇಶಂ = ಎಲ್ಲ ರೀತಿಯ ಕ್ಲೇಶವನ್ನು ಸ್ಮೃತ್ವಾ=ತಿಳಿದು ತತಃ=ಆ ಕರ್ಮದಿಂದ ಫಲವಿಪರ್ಯಯಂ=ನಿರತಿಶಯ ಸುಖವು ಬಾರದಿರುವುದೂ ದುಃಖವು ಪರಿಹಾರವಾಗದಿರುವುದೂ ಇತ್ಯಾದಿ ಫಲವ್ಯತ್ಯಯವನ್ನು, ಪಶ್ಯನ್ = ಕಾಣುತ್ತಾ ಅನೀಹಾಯಾಂ=ಯಾವ ಕಾಮನೆಯೂ ಇಲ್ಲದೆ ಶ್ರೀಹರಿಯ ಪ್ರೀತಿಗಾಗಿ ಮಾಡುವ ಕರ್ಮಗಳನ್ನು ಶ್ರೀಹರಿಗೆ ಸಮರ್ಪಿಸಿ ಮಾಡುವ ಜ್ಞಾನಮಾರ್ಗ ಪ್ರವೃತ್ತಿಯಲ್ಲಿ ಉಭಯಂ ಅಪಿ = ಪರಿಕ್ಲೇಶವನ್ನೂ ಫಲವಿಪರ್ಯಯವನ್ನೂ ನ ಪಶ್ಯೇ = ಕಾಣದೆ ಇರುವವನಾಗಿ ನಿರತಿಶಯಸುಖಪ್ರಾಪ್ತಿ ದುಃಖಪರಿಹಾರ ಗಳನ್ನೇ ಅಥವಾ ಅವುಗಳ ಮಿಶ್ರಣವಿಲ್ಲದಿರುವುದನ್ನೇ ಕಂಡು ತತ್ = ಅದರಿಂದ ವಿರಕ್ತನಾಗಿ ತತಃ=ಆ ಪ್ರವೃತ್ತಿಕರ್ಮದಿಂದ ವಿರಮೇತ್ = ವಿರತನಾಗಬೇಕು. ಪ್ರವೃತ್ತಿಕರ್ಮಮಾಡುವುದನ್ನು ಬಿಡಬೇಕು ಎಂದರ್ಥ. ಭಯಂ ಎಂದಾದರೂ ಪದಚ್ಛೇದ ಪುನರ್ಜನನ ಮರಣ ಭಯವನ್ನು ಕಾಣದೆ ಎಂದರ್ಥ. || ೫೯ ||

ಸುಖಾಯ ದುಃಖಮೋಕ್ಷಾಯ ಕುರ್ವಾತೇ ದಂಪತೀ ಕ್ರಿಯಾಃ |
ತತೋಽನಿವೃತ್ತಿರಪ್ರಾಪ್ತಿರ್ದುಃಖಸ್ಯ ಚ ಸುಖಸ್ಯ ಚ || ೬೦ ||

ಹೇಳಿದುದನ್ನೇ ವಿಶದ ಮಾಡುತ್ತಾರೆ. ದಂಪತೀ=ಯಜ್ಞಾದಿಕರ್ಮಯೋಗ್ಯರಾದ ಪತಿ-ಪತ್ನಿಯರು ಸುಖಾಯ=ಸುಖಪ್ರಾಪ್ತಿಗಾಗಿಯೂ ದುಃಖಮೋಕ್ಷಾಯ= ದುಃಖದ ಪರಿಹಾರಕ್ಕಾಗಿಯೂ ಕ್ರಿಯಾಃ=ಈ ಪ್ರವೃತ್ತಿಕರ್ಮಗಳನ್ನು ಕುರ್ವಾತೇ= ಅಭೀಪ್ಸಿತ ಫಲ ಜನಕಗಳೆಂಬ ಭ್ರಾಂತಿಯಿಂದ ಮಾಡುವರು. ಆದರೆ ತತಃ= ಆ ಕರ್ಮಗಳಿಂದ ದುಃಖದ ಅನಿವೃತ್ತಿಯೂ ಸುಖದ ಅಪ್ರಾಪ್ತಿಯೂ ಆಗುವುದೇ ಹೊರತು ಅಭೀಷ್ಟ ಸಿದ್ಧಿಸುವುದಿಲ್ಲ. || ೬೦ ||

ರೀತಿಯ ಕ್ಲೇಶವನ್ನು ಅರಿತು ಆ ಕರ್ಮದಿಂದ ಸ್ವಯೋಗ್ಯ ಪೂರ್ಣ ಸುಖವು ಬಾರದಿರುವುದನ್ನೂ ದುಃಖವು ಪರಿಹಾರವಾಗದಿರುವುದನ್ನೂ ಮನಗಂಡು ಮತ್ತು ನಿಷ್ಕಾಮನೆಯಿಂದ ಶ್ರೀಹರಿಪ್ರೀತಿಗಾಗಿ ಮಾಡಿದ ಕರ್ಮಗಳನ್ನು ಶ್ರೀಹರಿಗೆ ಸಮರ್ಪಿಸಿ ಮಾಡುವ ನಿವೃತ್ತಿಯಲ್ಲಿ ಪರಿಕ್ಲೇಶ ಮತ್ತು ಫಲಾಭಾವಗಳನ್ನು ಕಾಣದೆ ಕ್ಲೇಶಾಭಾವ ಮತ್ತು ಫಲಗಳನ್ನೇ ಕಂಡು ಜ್ಞಾನಿಯು ಪ್ರವೃತ್ತಿಮಾರ್ಗ ದಲ್ಲಿ ವಿರಕ್ತನಾಗಿ ಪ್ರವೃತ್ತಿ ಕರ್ಮ ಮಾಡುವುದನ್ನು ಬಿಡಬೇಕು. ದಂಪತಿಗಳು ಸುಖಪ್ರಾಪ್ತಿ-ದುಃಖಪರಿಹಾರಗಳಿಗಾಗಿ ಅಭೀಪ್ಸಿತ ಫಲಗಳನ್ನು ಕೊಡುವುವೆಂಬ ಭ್ರಾಂತಿಯಿಂದ ಪ್ರವೃತ್ತಿ ಕರ್ಮಗಳನ್ನು ಮಾಡುವರು. ಆದರೆ ಅವರಿಗೆ ಅವುಗಳಿಂದ ದುಃಖನಿವೃತ್ತಿಯಾಗುವುದಿಲ್ಲ. ಸುಖದ ಪ್ರಾಪ್ತಿಯೂ ಆಗುವುದಿಲ್ಲ. ಕರ್ಮವನ್ನು

ಏವಂ ವಿಪರ್ಯಯಂ ಬುದ್ಧ್ವಾ ನೃಣಾಂ ವಿದ್ಯಾಭಿಮಾನಿನಾಮ್ ।
ಆತ್ಮನಶ್ಚ ಗತಿಂ ಸೂಕ್ಷ್ಮಾಂ ಸ್ಥಾನತ್ರಯವಿಲಕ್ಷಣಾಮ್ ॥ ೬೧ ॥

ದೃಷ್ಟಶ್ರುತಾಭಿರ್ಮಾತ್ರಾಭಿರ್ನಿರ್ಮುಕ್ತಃ ಸ್ವೇನ ತೇಜಸಾ ।
ಜ್ಞಾನವಿಜ್ಞಾನಸಂತೃಪ್ತೋ ಮದ್ಭಕ್ತಃ ಪುರುಷೋ ಭವೇತ್ ॥೬೨॥

ಏವಂ = ಮೇಲೆ ಹೇಳಿದ ರೀತಿಯಲ್ಲಿ ವಿದ್ಯಾಭಿಮಾನಿನಾಂ = ಕರ್ಮವನ್ನು ಹೇಳುವ ವಿದ್ಯಾಭಾಸದಲ್ಲಿ ವಿದ್ಯೆಯೆಂಬ ಅಭಿಮಾನವುಳ್ಳ, ಪಂಡಿತರೆಂಬ ಅಭಿಮಾನ ವುಳ್ಳ ನೃಣಾಂ= ಜನರ ವಿಪರ್ಯಯಂ= ಅಭಿಷ್ಟಾಪ್ರಾಪ್ತಿಯನ್ನು, ಭ್ರಾಂತಿಯನ್ನು ಬುದ್ಧ್ವಾ- ತಿಳಿದು ಆತ್ಮನಃ = ಜೀವನ ಸ್ಥಾನತ್ರಯ ವಿಲಕ್ಷಣಾಂ = ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ ಶ್ರೀಹರಿಯ ಅಧೀನತೆಯೆಂಬ ಸೂಕ್ಷ್ಮಾಂ= ವಿಮರ್ಶೆ ಯಿಲ್ಲದೆ ತಿಳಿಯಲಾಗದ ಸೂಕ್ಷ್ಮವಾದ ಗತಿಂ= ಸ್ಥಿತಿಯನ್ನೂ ಆತ್ಮನಃ- ಶ್ರೀಹರಿಯ ಸ್ಥಾನತ್ರಯ ವಿಲಕ್ಷಣಾಂ=(೧) ವೈಕುಂಠ, ಶ್ವೇತದ್ವೀಪ, ಅನಂತಾಸನಗಳೆಂಬ ಮೂರು ಸ್ಥಳಗಳನ್ನು ಸ್ವಧಾಮಗಳೆಂದು ಹೊಂದಿರುವ ವಿಲಕ್ಷಣವಾದ (೨) ದೇಶ, ಕಾಲ, ಗುಣಗಳಿಂದ ವ್ಯಾಪ್ತತೆಯೆಂಬ ಅಪ್ರತಿಮ ವಿಭೂತಿಯನ್ನು ಹೊಂದಿರುವುದ ರಿಂದ ವಿಲಕ್ಷಣವಾದ (೩) ಜಾಗ್ರದಾದಿ ಅವಸ್ಥಾತ್ರಯವಿಲ್ಲದ ಸೂಕ್ಷ್ಮಾಂ= ಅದ್ದ ರಿಂದಲೇ ಗಹನವಾದ ಗತಿಂ ಚ= ಸ್ವರೂಪವನ್ನೂ ಬುದ್ಧ್ವಾ= ತಿಳಿದು ಮದ್ಭಕ್ತಃ= ಸ್ವರೂಪತಃ ನನ್ನ ಭಕ್ತನಾದ ಅಂದರೆ ಮುಕ್ತಿಯೋಗ್ಯನಾದ ಪುರುಷಃ - ಅಧಿಕಾರಿ ಚೇತನನು ದೃಷ್ಟಶ್ರುತಾಭಿಃ- ಐಹಿಕ ಮತ್ತು ಆಮುಷ್ಮಿಕಗಳಾದ ಮಾತ್ರಾಭಿಃ= ಶಬ್ದಾದಿ ವಿಷಯಗಳಿಂದ ವಿಮುಕ್ತಃ (ಸನ್) - ವಿರಕ್ತನಾಗಿ ಸ್ವೇನ ತೇಜಸಾ= ಇದರಿಂದ ಬಂದ ವಿಶುದ್ಧಬುದ್ಧಿಯ ಅತಿಶಯ ಸಾಮರ್ಥ್ಯದಿಂದ ಜ್ಞಾನವಿಜ್ಞಾನ ಗಳಿಂದ ಸಂತುಷ್ಟನಾಗಿ (ಅಪರೋಕ್ಷವನ್ನು ಹೊಂದಿ) (ಮುಕ್ತಃ)- ಮುಕ್ತನಾಗಿ ಭವೇತ್=ಆಗುವನು. ಅಥವಾ ಪುರುಷಃ ಮದ್ಭಕ್ತೋ ಭವೇತ್ ಎಂದಾದರೂ ಅನ್ವಯ. ॥ ೬೧, ೬೨ ॥

ಹೇಳುವ ವಿದ್ಯಾಭಾಸವನ್ನೇ ವಿದ್ಯೆಯೆಂದು ತಿಳಿದಿರುವ ಪಂಡಿತಂಮನ್ಯರಾದ ಜನರು ಹೀಗೆ ಫಲವನ್ನು ಹೊಂದದೆ ಭ್ರಾಂತರಾಗಿರುವುದನ್ನು ಮನಗಂಡು ಉತ್ತಮನಾದ ಭಕ್ತಜೀವನು ತಾನು ಎಲ್ಲ ಅವಸ್ಥೆಗಳಲ್ಲಿಯೂ ಹರಿಯ ಅಧೀನನೆಂಬ ಸೂಕ್ಷ್ಮ ಪರಿಸ್ಥಿತಿಯನ್ನೂ ಶ್ರೀಹರಿಯು ಜಾಗ್ರದಾದಿ ಅವಸ್ಥಾತೀತನೆಂಬುದನ್ನೂ ವೈಕುಂಠಾದಿ ಮೂರು ಲೋಕಗಳಲ್ಲಿ ಲೋಕವಿಲಕ್ಷಣ ಸ್ವರೂಪವುಳ್ಳವನೆಂಬುದನ್ನೂ ದೇಶ, ಕಾಲ ಮತ್ತು ಗುಣಗಳಿಂದ ವ್ಯಾಪ್ತನಾಗಿ ಅನುಪಮ ವಿಭೂತಿಯುಳ್ಳವನಾದ್ದ ರಿಂದ ವಿಲಕ್ಷಣ ಸೂಕ್ಷ್ಮಸ್ವರೂಪನೆಂಬುದನ್ನೂ ತಿಳಿದು ಐಹಿಕ ಆಮುಷ್ಮಿಕ ವಿಷಯ ಗಳಲ್ಲಿ ವಿರಕ್ತನಾಗಿ ಇದರಿಂದ ಬುದ್ಧಿ ವಿಶುದ್ಧತೆಯನ್ನು ಹೊಂದಿ ಜ್ಞಾನ ವಿಜ್ಞಾನ ಗಳಿಂದ ಸಂತೃಪ್ತನಾಗಿ ಅಪರೋಕ್ಷವನ್ನು ಪಡೆದು ಮುಕ್ತನಾಗುವನು. ಶ್ರೀಹರಿಗೆ

ಏತಾವಾನೇವ ಮನುಜೈರ್ಯೋಗನೈಪುಣ್ಯಬುದ್ಧಿಭಿಃ ।
ಸ್ವಾರ್ಥಃ ಸರ್ವಾತ್ಮನಾ ಜ್ಞೇಯೋ ಯತ್ಪರಾತ್ಮೈಕದರ್ಶನಮ್ ॥

ಶ್ರೀಹರಿಯ ಜ್ಞಾನಕ್ಕಿಂತ ಬೇರೆ ಪುರುಷಾರ್ಥವಿಲ್ಲವೆಂದು ಪ್ರಶಂಸಿಸುತ್ತಾರೆ. ಯತ್=ಯಾವ ಪರಾತ್ಮೈಕದರ್ಶನಂ=ಸರ್ವೋತ್ತಮನಾದ ಶ್ರೀಹರಿಗೆ ಸಮರೂ ಅಧಿಕರೂ ಇಲ್ಲವೆಂಬ ಜ್ಞಾನವೇನಿದೆಯೋ ಏತಾವಾನ್ ಏವ=ಇದಿಷ್ಟೇ ಯೋಗನೈಪುಣ್ಯಬುದ್ಧಿಭಿಃ = ಶ್ರೀಹರಿಯಲ್ಲಿನ ಭಕ್ತಿಯೋಗದಿಂದ ನಿಪುಣವಾದ (ತತ್ವ-ವಿಮರ್ಶಾಯೋಗ್ಯವಾದ) ಬುದ್ಧಿಯುಳ್ಳ ಮನುಜೈಃ = ಅಧಿಕಾರಿ ಜೀವರಿಂದ ಸರ್ವಾತ್ಮನಾ=ಎಲ್ಲ ರೀತಿಯ ಸ್ವಾರ್ಥ=ಪುರುಷಾರ್ಥವೆಂದು ಜ್ಞೇಯಃ=ತಿಳಿಯಲ್ಪಡಬೇಕಾದುದು. ಸರ್ವೋತ್ತಮನಾದ ನನ್ನ ದರ್ಶನವೊಂದೇ ಎಂದೂ ಅರ್ಥ ಮಾಡಬಹುದು. ॥ ೬೩ ॥

ತ್ವಮೇತಚ್ಛ್ರದ್ಧಯಾ ರಾಜನ್ನಪ್ರಮತ್ತೋ ವಚೋ ಮಮ ।
ಜ್ಞಾನವಿಜ್ಞಾನಸಂಪನ್ನೋ ಧಾರಯನ್ನಾಶು ಸಿದ್ಧ್ಯಸಿ ॥ ೬೪ ॥

ನಿನಗೂ ಇದೇ ಯೋಗ್ಯವೇ ಹೊರತು ಬೇರೆ ಯಾವುದೂ ಅಲ್ಲವೆಂದು ಹೇಳುತ್ತಾರೆ. ರಾಜನ್=ರಾಜನೇ, ಅಪ್ರಮತ್ತನಾದ ನೀನು ಈ ನನ್ನ ಮಾತನ್ನು ಶ್ರದ್ಧೆಯಿಂದ ಧರಿಸುತ್ತಾ (ಉಪಾಸಿಸುತ್ತಾ) ಜ್ಞಾನ ಮತ್ತು ವಿಜ್ಞಾನಗಳಿಂದ ಕೂಡಿದವನಾಗಿ ಆಶು = ಕಾಲವಿಳಂಬವಿಲ್ಲದೆ ಸಿದ್ಧ್ಯಸಿ = ಜೀವನ್ಮುಕ್ತನಾಗುವೆ. ॥ ೬೪ ॥

ಶ್ರೀ ಶುಕ ಉವಾಚ—

ಆಶ್ವಾಸ್ಯ ಭಗವಾನಿತ್ಥಂ ಚಿತ್ರಕೇತುಂ ಜಗದ್ಗುರುಃ ।
ಪಶ್ಯತಸ್ತಸ್ಯ ವಿಶ್ವಾತ್ಮಾ ತತಶ್ಚಾಂತರ್ದಧೇ ಹರಿಃ ॥ ೬೫ ॥

ಬಹಳ ಹೊತ್ತಿದ್ದದ್ದರಿಂದ ಮತ್ತೆ ಪ್ರಶ್ನೆ ಮಾಡಿಯಾನು? ಎಂದು ಶ್ರೀಹರಿಯ ಅಂತರ್ಧಾನವನ್ನು ಹೇಳುತ್ತಾರೆ. ವಿಶ್ವಾತ್ಮಾ=ಜಗನ್ನಿಯಾಮಕನಾದ ಜಗತ್ತಿಗೇ ಗುರುವಾದ ಭಗವಂತನಾದ ಶ್ರೀಹರಿಯು ಹೀಗೆ ಚಿತ್ರಕೇತುವನ್ನು ಸಮಾಧಾನಪಡಿಸಿ ತಸ್ಯ ಪಶ್ಯತಃ = ಅವನು ನೋಡುತ್ತಿದ್ದಂತೆಯೇ ತತಃ = ಆ ಸ್ಥಳದಿಂದ ಅಂತರ್ದಧೇ ಚ=ಅವ್ಯಕ್ತನಾದನು. ಇದರಿಂದ ಮೇಲೆ ಹೇಳಿದ ಸ್ತೋತ್ರವೆಲ್ಲವೂ ಶ್ರೀಹರಿಗೆ ಸಂಬಂಧಿಸಿದ್ದೆಂದು ಹೇಳಿದುದು ಸ್ಪಷ್ಟಪಟ್ಟಿತು. ॥ ೬೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಷೋಡಶೋಽಧ್ಯಾಯಃ

ಸಮರೂ ಅಧಿಕರೂ ಇಲ್ಲವೆಂಬ ಜ್ಞಾನವೇ–ಶ್ರೀಹರಿಯ ಅಪರೋಕ್ಷವೇ ಪುರುಷಾರ್ಥವೆಂದು ಭಕ್ತಿಯೋಗಕುಶಲ ಬುದ್ಧಿಗಳಾದ ಜನರು ತಿಳಿಯಬೇಕು. ರಾಜನ್, ಪ್ರಮತ್ತನಾಗದೆ ನೀನು ಶ್ರದ್ಧೆಯಿಂದ ನನ್ನ ಈ ಉಪದೇಶವನ್ನು ಧರಿಸಿ ಜ್ಞಾನ ವಿಜ್ಞಾನಗಳನ್ನು ಸಂಪಾದಿಸಿಕೊಂಡು ಜಾಗ್ರತೆಯಾಗಿ ಜೀವನ್ಮುಕ್ತನಾಗು' ಎಂದು

*

ಅಥ ಸಪ್ತದಶೋಽಧ್ಯಾಯಃ

ಶ್ರೀ ಶುಕ ಉವಾಚ—

ಯತಶ್ಚಾಂತರ್ಹಿತೋಽನಂತಸ್ತಸ್ಯೈ ಕೃತ್ವಾ ದಿಶೇ ನಮಃ ।
ವಿದ್ಯಾಧರಶ್ಚಿತ್ರಕೇತುಶ್ಚಚಾರ ಗಗನೇಚರಃ ॥ ೧ ॥

ಶಾಸ್ತ್ರಾರ್ಥ ತತ್ವಕ್ಕೆ ಅನುಗುಣವಾಗಿ ತಿಳಿದವನಾದರೆ ನಾರಾಯಣನು ಮೋಕ್ಷವನ್ನು ಕೊಡುವನು. ಇಲ್ಲದಿದ್ದರೆ ಮೋಕ್ಷವನ್ನು ಕೊಡುವುದಿಲ್ಲ. ಶಾಸ್ತ್ರಾರ್ಥ ತತ್ವವು ಸರಿಯಾಗಿ ಯೋಗ್ಯರಿಗೇ ತಿಳಿಯಲು ಸುಲಭಸಾಧ್ಯ. ಅಯೋಗ್ಯರಿಗಲ್ಲ. ಏಕೆಂದರೆ 'ಪರೋಕ್ಷಪ್ರಿಯಾ ಇವ ಹಿ ದೇವಾಃ' ಎಂಬ ಶ್ರುತಿಯಂತೆ ತತ್ವವು ಗೂಢವಾಗಿ ಉಕ್ತವಾಗಿರುವುದು. ತಿಳಿಯಲು ಕಷ್ಟವಾದ ಶಾಸ್ತ್ರಾರ್ಥತತ್ವವು ಶ್ರೀಹರಿಯ ಪ್ರೀತಿಗೆ ಕಾರಣವಾಗುವುದು. ಹಾಗೆಯೇ ಅದರ ಪ್ರತಿಪಾದನೆಯು ಶ್ರೀಹರಿಯ ಪ್ರೀತಿಗೆ ಕಾರಣ. ಎಂಬೀ ಪ್ರಮೇಯ ರೀತಿಯನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ. ಅದರಲ್ಲಿಯೂ ಚಿತ್ರಕೇತುವಿಗೆ ಪಾರ್ವತಿಯ ಶಾಪ ಹೇಗೆ ಬಂದಿತೆಂಬುದನ್ನು ತಿಳಿಸಲು ಮೊದಲು ಅವನು ಮಾಡಿದ ಕೆಲಸವನ್ನು ಹೇಳುತ್ತಾರೆ. ಯತಃ–ಯಾವ ದಿಕ್ಕಿನಲ್ಲಿ ಅನಂತನಾಮಕ ಶ್ರೀಹರಿಯು ಅಂತರ್ಹಿತಃ – ಅವ್ಯಕ್ತನಾದನೋ ತಸ್ಯೈ ದಿಶೇ–ಆ ದಿಕ್ಕಿಗೆ ನಮಃ ಕೃತ್ವಾ–ನಮಸ್ಕಾರಮಾಡಿ ಗಗನೇಚರಃ–ಗಗನ ಸಂಚಾರಿಯಾದ ವಿದ್ಯಾಧರನಾದ ಚಿತ್ರಕೇತುವು ಚಚಾರ ಚ= ಸಂಚರಿಸುತ್ತಿದ್ದನು. ॥ ೧ ॥

ಸ ಲಕ್ಷಂ ಲಕ್ಷವರ್ಷಾಣಾಮವ್ಯಾಹತಬಲೇಂದ್ರಿಯಃ ।
ಸ್ತೂಯಮಾನೋ ಮಹಾಯೋಗೀ ಮುನಿಭಿಃ ಸಿದ್ಧಚಾರಣೈಃ ॥ ೨ ॥

ಕುಲಾಚಲೇಂದ್ರದ್ರೋಣೀಷು ನಾನಾಸಂಕಲ್ಪಸಿದ್ಧಿಷು ।
ರೇಮೇ ವಿದ್ಯಾಧರಸ್ತ್ರೀಭಿರ್ಗಾಯಯನ್ ಹರಿಮೀಶ್ವರಮ್ ॥ ೩ ॥

ಜಗನ್ನಿಯಾಮಕನೂ ಜಗದ್ಗುರುವೂ ಭಗವಂತನೂ ಆದ ಶ್ರೀಹರಿಯು ಸಂಭಾಷಿಸಿ ಅವನನ್ನು ಸಮಾಧಾನಪಡಿಸಿ ಅವನು ನೋಡುತ್ತಿದ್ದಂತೆಯೇ ಅಲ್ಲಿಯೇ ಅವ್ಯಕ್ತನಾದನು.

ಹದಿನೇಳನೆಯ ಅಧ್ಯಾಯ

ಶ್ರೀ ಶುಕಾಚಾರ್ಯರು—ಗಗನ ಸಂಚಾರಿ ವಿದ್ಯಾಧರ ಚಿತ್ರಕೇತುವು ಶ್ರೀಹರಿ ಅದೃಶ್ಯನಾದ ದಿಕ್ಕಿಗೆ ನಮಸ್ಕಾರಮಾಡಿ ಸಂಚರಿಸುತ್ತಿದ್ದನು. ಲಕ್ಷ ವರ್ಷಗಳ ಲಕ್ಷವಾದರೂ ಅವನ ಬಲವಾಗಲಿ ಇಂದ್ರಿಯ ಪಾಟವವಾಗಲಿ ಕುಗ್ಗಲಿಲ್ಲ. ಋಷಿಗಳೂ ಸಿದ್ಧರೂ ಚಾರಣರೂ ಅವನನ್ನು ಸ್ತೋತ್ರಮಾಡುತ್ತಿದ್ದರು. ಸರ್ವೋತ್ತಮ

ಲಕ್ಷ ವರ್ಷಗಳ ಲಕ್ಷಂ=ಒಂದು ಸಾವಿರ ಕೋಟಿ ವರ್ಷಗಳ ಕಾಲ ಮುನಿಭಿಃ= ಮನನಶೀಲರಾದ (ಋಷಿಗಳಿಂದ) ಸಿದ್ಧ ಚಾರಣರಿಂದ ಸ್ತೂಯಮಾನಃ=ಸ್ತೋತ್ರ ಮಾಡಿಸಿಕೊಳ್ಳುತ್ತಿದ್ದ ಮಹಾಯೋಗೀ=ಸರ್ವೋತ್ತಮನೆಂದು ಶ್ರೀಹರಿಯಲ್ಲಿ ಭಕ್ತಿ ಮಾಡುವ ಸಃ=ಆ ಚಿತ್ರಕೇತುವು ಅವ್ಯಾಹತ ಬಲೇಂದ್ರಿಯಃ (ಸರ್ಗ)=ಬಲವೂ ಇಂದ್ರಿಯ ಪಟುತ್ವವೂ ಕುಗ್ಗದವನಾಗಿ ಈಶ್ವರಂ=ಸರ್ವ ನಿಯಾಮಕನಾದ ಹರಿಯನ್ನು ವಿದ್ಯಾಧರಸ್ತ್ರೀಯರಿಂದ ಗಾಯಯನ್=ಗಾನ ಮಾಡಿಸುತ್ತಾ ನಾನಾಸಂಕಲ್ಪಸಿದ್ಧಿಷು=ಸ್ತ್ರೀ ಪುರುಷರ ಅನೇಕ ಬಗೆಯ ಸಂಕಲ್ಪಗಳಿಂದಲೇ ಸಿದ್ಧಿ ಯುಂಟಾಗುವ ಪ್ರದೇಶಗಳಾದ ಕುಲಾಚಲೇಂದ್ರದ್ರೋಣೀಷು=ಆ ಕುಲಪರ್ವತ ಶ್ರೇಷ್ಠದ (ಕೈಲಾಸದ) ತಗ್ಗಿನ ತಟಪ್ರದೇಶಗಳಲ್ಲಿ (ಕಂದರಗಳಲ್ಲಿ) ರೇಮೇ=ವಿದ್ಯಾ ಧರಿಯರೊಂದಿಗೆ ಕ್ರೀಡಿಸುತ್ತಿದ್ದನು. || ೨, ೩ ||

ಏಕದಾ ಸ ವಿಮಾನೇನ ವಿಷ್ಣುದತ್ತೇನ ಭಾಸ್ವತಾ ।
ಗಿರಿಶಂ ದದೃಶೇ ಗಚ್ಛನ್ ಪರೀತಂ ಸಿದ್ಧಚಾರಣೈಃ || ೪ ||

ಅದರಿಂದ ಪ್ರಕೃತದಲ್ಲಿ ಏನು? ಎಂದರೆ ಹೇಳುತ್ತಾರೆ. ಅಂದರೆ ಅಸುರಜನ್ಮ ಅವನಿಗೆ ಬರುವುದಕ್ಕೆ ಕಾರಣವನ್ನು ಹೇಳಲು ಪ್ರಾರಂಭಿಸುತ್ತಾರೆ. ಸಃ= ಆ ಚಿತ್ರಕೇತುವು ಏಕದಾ=ಒಂದು ದಿನ ವಿಷ್ಣುದತ್ತೇನ=ಶ್ರೀಹರಿಯು ಕೊಟ್ಟಿದ್ದ ಭಾಸ್ವತಾ=ಪ್ರಕಾಶಮಾನವಾದ ವಿಮಾನೇನ=ಆಕಾಶದಲ್ಲಿ ಸಂಚರಿಸುವ ವಾಹನ ದಿಂದ ಗಚ್ಛನ್=ಹೋಗುತ್ತಾ ಸಿದ್ಧಚಾರಣೈಃ=ಸಿದ್ಧ ಮತ್ತು ಚಾರಣರಿಂದ (ಆ ಜಾತಿಯ ದೇವತೆಗಳಿಂದ) ಪರೀತಂ=ಸುತ್ತುವರೆಯಲ್ಪಟ್ಟಿದ್ದ ಗಿರಿಶಂ=ರುದ್ರ ದೇವರನ್ನು ದದೃಶೇ=ಕಂಡನು. || ೪ ||

ಆಲಿಂಗ್ಯಾಂಕೇ ಕೃತಾಂ ದೇವೀಂ ಬಾಹುನಾ ಮುನಿಸಂಸದಿ ।
ಉವಾಚ ದೇವ್ಯಾಂ ಶೃಣ್ವಂತ್ಯಾಂ ಜಹಾಸೋಚ್ಚೈಸ್ತದಂತಿಕೇ || ೫ ||

ನೆಂದು ಶ್ರೀಹರಿಯನ್ನು ತಿಳಿದು ಭಕ್ತಿ ಮಾಡುತ್ತಿದ್ದ ಅವನು ಆ ಸರ್ವನಿಯಾಮಕ ಶ್ರೀಹರಿಯನ್ನು ವಿದ್ಯಾಧರಿಯರಿಂದ ಗಾನಮಾಡಿಸುತ್ತ ಕೈಲಾಸದ ಕಂದರಗಳಲ್ಲಿ ಅವರೊಂದಿಗೆ ಕ್ರೀಡಿಸುತ್ತಿದ್ದನು. ಆ ಕಂದರ ಪ್ರದೇಶಗಳು ಸ್ತ್ರೀಪುರುಷರ ವಿವಿಧ ಸಂಕಲ್ಪಗಳ ಸಿದ್ಧಿಪ್ರದೇಶಗಳಾಗಿದ್ದುವು.

ಅವನೊಂದು ದಿನ ಶ್ರೀಹರಿಯು ಕೊಟ್ಟ ಪ್ರಕಾಶಮಾನ ವಿಮಾನದಲ್ಲಿ ಕುಳಿತು ಆಕಾಶದಲ್ಲಿ ಹೋಗುತ್ತಿದ್ದನು. ಸಿದ್ಧಚಾರಣರಿಂದ ಪರಿವೃತರಾಗಿದ್ದ ರುದ್ರದೇವರನ್ನು ಕಂಡನು. ಋಷಿಗಳು ನೆರೆದಿದ್ದ ಸಭೆಯಲ್ಲಿ ರುದ್ರದೇವರು ಪಾರ್ವತಿಯನ್ನು ತೊಡೆಯಮೇಲೆ ಕೂಡಿಸಿಕೊಂಡು ತೋಳಿನಿಂದ ಆಲಿಂಗಿಸಿಕೊಂಡಿದ್ದರು. ಇದನ್ನು ಕಂಡು ಚಿತ್ರಕೇತುವು ಪಾರ್ವತಿ ಕೇಳುವಂತೆ ಮಾತನಾಡಿದನು. ರುದ್ರದೇವರ ಸಮೀಪದಲ್ಲಿ ನಿಂತು ಗಹಗಹಿಸಿ ನಕ್ಕನು.

ಮುನಿಸಂಸದಿ=ಋಷಿಗಳಿದ್ದ ಆ ಸಭೆಯಲ್ಲಿ ಅಂಕೇ=ತೊಡೆಯಲ್ಲಿ ಕೃತಾಂ=ಕೂಡಿಸಿಕೊಂಡಿರುವ ದೇವೀಂ = ಪಾರ್ವತಿಯನ್ನು ಬಾಹುನಾ = ತೋಳಿನಿಂದ ಆಲಿಂಗ್ಯ=ಆಲಿಂಗನೆ ಮಾಡಿಕೊಂಡು (ಸ್ಥಿತಂ)=ಇದ್ದ ಈಶ್ವರನನ್ನು ಕಂಡು ದೇವ್ಯಾಂ=ಪಾರ್ವತಿಯು ಶೃಣ್ವಂತ್ಯಾಂ (ಸತ್ಯಾಂ)=ಕೇಳುತ್ತಿರಲು ಉವಾಚ=ಹೇಳಿದನು. ತದಂತಿಕೇ=ಆ ಈಶ್ವರನ ಸಮೀಪದಲ್ಲಿ (ಸ್ಥಿತಃ ಸನ್)=ಇದ್ದುಕೊಂಡು ಜಹಾಸ=ಗಹಗಹಿಸಿ ನಕ್ಕನು. || ೫ ||

ಚಿತ್ರಕೇತುರುವಾಚ—

ಏಷ ಲೋಕಗುರುಃ ಸಾಕ್ಷಾದ್ಧರ್ಮವಕ್ತಾ ಶರೀರಿಣಾಮ್ ।
ಆಸ್ತೇ ಮುಖ್ಯಃ ಸಭಾಯಾಂ ವೈ ಮಿಥುನೀಭೂಯ ಭಾರ್ಯಯಾ ॥

ಏಷಃ=ಇವನು ಸಾಕ್ಷಾತ್=ಪರಂಪರೆಯಿಂದಲ್ಲದೆ ತಾನೇ ಲೋಕಗುರುಃ=ಇಂದ್ರಾದಿ ಜಗತ್ತಿಗೆ ಗುರುವು. ಶರೀರಿಣಾಂ = ಮನುಷ್ಯರಿಗೆ ಮುಖ್ಯಃ=ಮುಖ್ಯವಾಗಿ ಧರ್ಮವಕ್ತಾ=ಧರ್ಮವನ್ನು ಉಪದೇಶಿಸುವವನು. ಸಭಾಯಾಂ=ಸಭೆಯಲ್ಲಿ ಭಾರ್ಯಯಾ (ಸಹ) ಹೆಂಡತಿಯೊಂದಿಗೆ ಮಿಥುನೀಭೂಯ=ಸೇರಿಕೊಂಡು ಆಸ್ತೇ ವೈ=ಇರುವನಷ್ಟೆ! || ೬ ||

ಜಟಾಧರಸ್ತೀವ್ರತಪಾ ಬ್ರಹ್ಮವಾದೀ ಸತಾಂ ಪತಿಃ ।
ಅಂಕೇ ಕೃತ್ವ ಸ್ತ್ರಿಯಂ ಚಾಸ್ತೇ ಗತಹ್ರೀಃ ಪ್ರಾಕೃತೋ ಯಥಾ ॥

ಜಟಾಧಾರಿಯೂ ತೀವ್ರತಪಾಃ = ಕಠಿಣವಾಗಿ ತಪಸ್ಸುಮಾಡುವವನೂ ಬ್ರಹ್ಮವಾದೀ=ಗುಣಪೂರ್ಣನಾದ ಶ್ರೀಹರಿಯನ್ನು ಹೇಳುವವನೂ ಸತಾಂ=ಸಜ್ಜನರಿಗೆ ಪತಿಃ=ಪಾಲಕನೂ, ಸಜ್ಜನೋತ್ತಮನೂ ಆದ ಇವನು ಪ್ರಾಕೃತಃ ಯಥಾ=ಮೂಢನಂತೆ ಗತಹ್ರೀಃ (ಸನ್) ನಾಚಿಕೆ ಇಲ್ಲದವನಾಗಿ ಸ್ತ್ರಿಯಂ=ಹೆಂಗುಸನ್ನು ಹೆಂಡತಿಯನ್ನು ಅಂಕೇ ಕೃತ್ವಾ = ತೊಡೆಯಲ್ಲಿ ಕೂಡಿಸಿಕೊಂಡು ಆಸ್ತೇ ಚ=ಇರುವನು. || ೭ ||

ಪ್ರಾಯಶಃ ಪ್ರಾಕೃತಾಶ್ಚಾಪಿ ಸ್ತ್ರಿಯಂ ರಹಸಿ ಬಿಭ್ರತಿ ।
ಅಯಂ ಮಹಾವ್ರತಧರೋ ಬಿಭರ್ತಿ ಸದಸಿ ಸ್ತ್ರಿಯಮ್ ॥ ೮ ॥

ಚಿತ್ರಕೇತು—'ಈ ರುದ್ರದೇವರು ಇಂದ್ರಾದಿ ಜಗತ್ತಿಗೆ ಸಾಕ್ಷಾದ್ಗುರುವು. ಮನುಷ್ಯರಿಗೆ ಮುಖ್ಯವಾಗಿ ಧರ್ಮೋಪದೇಶಕ. ತುಂಬಿದ ಸಭೆಯಲ್ಲಿ ಹೆಂಡತಿಯೊಂದಿಗೆ ಕಲೆತು ಕುಳಿತಿದ್ದಾನೆ. ಜಟಾಧಾರಿ; ತೀವ್ರ ತಪಸ್ವಿ; ಬ್ರಹ್ಮವಾದಿ; ಸಜ್ಜನ ಪಾಲಕ; ಸಜ್ಜನಶ್ರೇಷ್ಠನಾದ ಇವನು ಪ್ರಾಕೃತನಂತೆ ನಿರ್ಲಜ್ಜನಾಗಿ ಹೆಂಡತಿಯನ್ನು ತೊಡೆಯಮೇಲೆ ಕೂಡಿಸಿಕೊಂಡಿದ್ದಾನೆ. ಬಹುಮಟ್ಟಿಗೆ ಪ್ರಾಕೃತರೂ ಕೂಡ ಏಕಾಂತದಲ್ಲಿ ಹೆಂಡತಿಯರನ್ನು ಧರಿಸುವರು. ಮಹಾವ್ರತಿಯಾದ ಈ ರುದ್ರದೇವನು ಸಭೆಯಲ್ಲಿಯೇ ಸ್ತ್ರೀಯನ್ನು ಧರಿಸಿದ್ದಾನೆ!!'

ಪ್ರಾಯಶಃ ಬಹುಮಟ್ಟಿಗೆ ಪ್ರಾಕೃತಾಃ ಚ=ಮೂಢರೂ ಸ್ತ್ರಿಯಂ ಅಪಿ= ಹೆಂಗುಸನ್ನೂ ಹೆಂಡತಿಯನ್ನೂ ರಹಸಿ= ಏಕಾಂತದಲ್ಲಿ ಬಿಭ್ರತಿ = ಧರಿಸುವರು. ಮಹಾವ್ರತಧರಃ = ಮಹಾವ್ರತವನ್ನು ಆಚರಿಸುವ ಅಯಂ = ಈ ರುದ್ರದೇವನು ಸದಸಿ-ತುಂಬು ಸಭೆಯಲ್ಲಿ ಸ್ತ್ರೀಯನ್ನು ಬಿಭರ್ತಿ=ಧರಿಸಿರುವನು. ಮೂಢರಿಗಿಂತ ಮೂಢನೆಂದರ್ಥ. || ೮ ||

ಭಗವಾನಪಿ ತಚ್ಛ್ರುತ್ವಾ ಪ್ರಹಸ್ಯಾಗಾಧಧೀರ್ನೃಪ ।
ತೂಷ್ಣೀಂ ಬಭೂವ ಸದಸಿ ಸಭ್ಯಾಶ್ಚ ತದನುವ್ರತಾಃ || ೯ ||

ಮತ್ತೊಬ್ಬರು ಮಾಡುವ ಅಗೌರವದಿಂದ ವಿಕಾರಗೊಳ್ಳದಿರುವುದೇ ಈಶ್ವರನ ಈಶ್ವರತ್ವವೆಂಬ ಅಭಿಪ್ರಾಯದಿಂದ ರುದ್ರದೇವರು ಕ್ಷಮಿಸಿದ ರೀತಿಯನ್ನು ಹೇಳುತ್ತಾರೆ. ಪರೀಕ್ಷಿದ್ರಾಜನೇ, ಅಗಾಧಧೀಃ=ತನಗಿಂತ ಕೆಳಗಿನವರಿಂದ ಇಷ್ಟೇ ಇವರ ಜ್ಞಾನವೆಂದು ತಿಳಿಯಲಾಗದವರಾದ ಭಗವಾನ್ ಅಪಿ=ಪೂಜ್ಯರಾದ ರುದ್ರದೇವರೂ ತತ್ ಶ್ರುತ್ವಾ=ಆ ಚಿತ್ರಕೇತುವಿನ ಆಕ್ಷೇಪಕರ ಮಾತುಗಳನ್ನು ಕೇಳಿ ಸದಸಿ=ಸಭೆಯಲ್ಲಿ ಪ್ರಹಸ್ಯ=ಗಟ್ಟಿಯಾಗಿ ನಕ್ಕು ತೂಷ್ಣೀಂ ಬಭೂವ = ಮೌನವಾಗಿದ್ದರು. ತದನುವ್ರತಾಃ = ಆ ರುದ್ರದೇವರ ಅನುಯಾಯಿಗಳಾದ ಸಭ್ಯಾಃ ಚ - ಸಭಿಕರೂ ತೂಷ್ಣೀಂ ಬಭೂವುಃ=ಮೌನವಾಗಿದ್ದುಬಿಟ್ಟರು. || ೯ ||

ಇತ್ಯತದ್ವೀರ್ಯವಿದುಷಿ ಬ್ರುವಾಣೇ ಬಹ್ವಶೋಭನಮ್ ।
ರುಷಾಽಽಹ ದೇವೀ ಧೃಷ್ಟಾಯ ನಿರ್ಜಿತಾತ್ಮಾಭಿಮಾನಿನೇ || ೧೦ ||

ಸ್ತ್ರೀ ನಿಮಿತ್ತಕವಾದ ಅಗೌರವದ ಪರಿಹಾರವು ಸ್ತ್ರೀಯಿಂದಲೇ ಆಗಬೇಕೆಂಬ ಈಶ್ವರನ ಮನೋಽಭಿಪ್ರಾಯವನ್ನು ತಿಳಿದ ಪಾರ್ವತೀದೇವಿಯವರು ಆ ಚಿತ್ರಕೇತುವಿಗೆ ಉತ್ತರ ಕೊಡುತ್ತಾರೆಂದು ಹೇಳುತ್ತಾರೆ. ಅತದ್ವೀರ್ಯವಿದುಷಿ=ರುದ್ರದೇವರ ಸಾಮರ್ಥ್ಯದ ಅರಿವಿಲ್ಲದ ಆ ಚಿತ್ರಕೇತುವು ಇತಿ = ಮೇಲೆ ಹೇಳಿದಂತೆ ಬಹ್ವ-ಶೋಭನಂ=ಬಹು ಕೆಟ್ಟನುಡಿಗಳನ್ನು ಬ್ರುವಾಣೇ (ಸತಿ)=ಹೇಳುತ್ತಿರಲು ದೇವೀ-ಪಾರ್ವತೀ ದೇವಿಯವರು ರುಷಾ = ಕೋಪದಿಂದ ಧೃಷ್ಟಾಯ=ಪ್ರಗಲ್ಭನಾದ,

---

ಪೂಜ್ಯರಾದ ರುದ್ರದೇವರು—ಕೆಳಗಿನವರಿಂದ ಅಳೆಯಲಾಗದ ಜ್ಞಾನವುಳ್ಳವರು—ಆ ಚಿತ್ರಕೇತುವಿನ ಮಾತನ್ನು ಕೇಳಿ ಸಭೆಯಲ್ಲಿ ಗಟ್ಟಿಯಾಗಿ ನಕ್ಕು ಸುಮ್ಮನಾದರು. ಅವರ ಅನುಯಾಯಿಗಳಾದ ಸಭಿಕರೂ ಮಾತನಾಡದೆ ಸುಮ್ಮನಿದ್ದರು.

(ರುದ್ರದೇವರ ಅಭಿಪ್ರಾಯವನ್ನರಿತ) ಪಾರ್ವತೀದೇವಿಯವರು ಕೋಪಗೊಂಡರು. ರುದ್ರದೇವರ ಸಾಮರ್ಥ್ಯದ ಅರಿವಿಲ್ಲದ ಚಿತ್ರಕೇತು ಬಹು ಕೆಟ್ಟ ಮಾತುಗಳನ್ನಾಡಿದ್ದನು. ತಾನು ಜಿತೇಂದ್ರಿಯನೆಂದು ಅಭಿಮಾನಪೂರ್ಣನಾಗಿ ಗರ್ವಿಷ್ಠನಾದ ಅವನನ್ನು ಕುರಿತು ಹೀಗೆಂದು ನುಡಿದರು.

ಗರ್ವಿಷ್ಠನಾದ ನಿರ್ಜಿತಾತ್ಮಾಭಿಮಾನಿನೇ=(೧) ಆತ್ಮದರ್ಪವನ್ನು ಗೆದ್ದ (೨) ಆತ್ಮ ವಿಜ್ಞಾನವನ್ನು ಗೆದ್ದ (ಸಂಪಾದಿಸಿದ್ದ) (೩) ತಾನು ಜಿತೇಂದ್ರಿಯನೆಂದು ಅಭಿಮಾನ ಪೂರ್ಣನಾಗಿದ್ದ ಚಿತ್ರಕೇತುವಿಗೆ ಆಹ=ಹೇಳಿದರು. ‖ ೧೦ ‖

ಪಾರ್ವತ್ಯುವಾಚ—

ಅಯಂ ಕಿಮಧುನಾ ಲೋಕೇ ಶಾಸ್ತಾ ದಂಡಧರಃ ಪ್ರಭುಃ ।
ಅಸ್ಮದ್ವಿಧಾನಾಂ ದುಷ್ಟಾನಾಂ ನಿರ್ಲಜ್ಜಾನಾಂ ನಿಷೇಧಕೃತ್ ‖ ೧೧ ‖

ಅಧುನಾ=ಈಗ ಲೋಕೇ=ಪ್ರಪಂಚದಲ್ಲಿ ಅಯಂ=ಇವನು ಶಾಸ್ತಾ=ಶಾಸಕ ನಾದ ಪ್ರಭುಃ=ಸಮರ್ಥನಾದ ದಂಡಧರಃ ಕಿಂ=ಯಮನೇನು ? (ಯತಃ)= ಏಕೆಂದರೆ, ಅಸ್ಮದ್ವಿಧಾನಾಂ = ನಮ್ಮಂತಹ ನಿರ್ಲಜ್ಜಾನಾಂ = ನಾಚಿಕೆ ಇಲ್ಲದ ದುಷ್ಟಾನಾಂ=ದುಷ್ಟರಿಗೆ (ಅಯಂ)=ಇವನು ನಿಷೇಧಕೃತ್=ಹೀಗೆ ಮಾಡಬಾರದು ಎಂದು ನಿಷೇಧಿಸುವವನಾಗಿ ಜಾತಃ=ಆಗಿರುವನು. ‖ ೧೧ ‖

ನ ವೇದ ಧರ್ಮಂ ಕಿಲ ಪದ್ಮಯೋನಿ-
ರ್ನ ಬ್ರಹ್ಮಪುತ್ರಾ ಭೃಗು ನಾರದಾದ್ಯಾಃ ।
ನ ವೈ ಕುಮಾರಃ ಕಪಿಲೋ ಮನುಶ್ಚ
ಯೇ ನೋ ನಿಷೇಧಂತ್ಯತಿವರ್ತಿನಂ ಹರಮ್ ‖ ೧೨ ‖

ಈ ಅಪರಾಧವು ಶಾಪಕ್ಕೆ ಯೋಗ್ಯವಾದುದೆಂದು ತಿಳಿಸುವ ಅಭಿಪ್ರಾಯದಿಂದ ಹೇಳುತ್ತಾರೆ. ಪದ್ಮಯೋನಿಃ=ಬ್ರಹ್ಮದೇವರು ಧರ್ಮಂ=ಧರ್ಮವನ್ನು ನ ವೇದ ಕಿಲ = ತಿಳಿದಿಲ್ಲವಲ್ಲವೇ ! ಬ್ರಹ್ಮಪುತ್ರಾಃ = ಬ್ರಹ್ಮದೇವರ ಮಕ್ಕಳಾದ ಭೃಗು, ನಾರದ ಮೊದಲಾದವರು ಧರ್ಮವನ್ನು ನ ವಿದುಃ ಕಿಲ = ತಿಳಿದಿಲ್ಲವಲ್ಲವೇ ! ಕುಮಾರಃ=ಸನತ್ಕುಮಾರನೂ ಕಪಿಲಃ=ಕಪಿಲರೂಪಿ ಶ್ರೀಹರಿಯೂ ಮನುಃ ಚ= ವೈವಸ್ವತ ಮನುವೂ ಧರ್ಮವನ್ನು ನ ವಿದುಃ ವೈ=ತಿಳಿದಿಲ್ಲವಲ್ಲವೇ ! ಯೇ=ಯಾವ (ಏತೇ)=ಇವರು ಅತಿವರ್ತಿನಂ=(೧) ಅಸಂಪ್ರಜ್ಞಾತ ಸಮಾಧಿಯಲ್ಲಿರುವ (೨) ಶಾಸ್ತ್ರವನ್ನು ಅತಿಕ್ರಮಿಸಿ ಇರುವ ಸ್ವಭಾವವುಳ್ಳ ಹರಂ=ರುದ್ರದೇವರನ್ನು ನೋ ನಿಷೇಧಂತಿ=ನಿವಾರಿಸುತ್ತಿಲ್ಲ. ಧರ್ಮವನ್ನು ತಿಳಿದೇ ಇರುವರು ; ಆದರೂ ನಿವಾರಿಸು ತ್ತಿಲ್ಲ. ಅಂದಮೇಲೆ ನಿವಾರಿಸುತ್ತಿರುವ ಇವನು ಶಾಪ ಕೊಡಬೇಕಾದ ಮಹಾಪರಾಧ ವನ್ನೇ ಮಾಡಿರುವನೆಂದು ಅಭಿಪ್ರಾಯ. ‖ ೧೨ ‖

ಪಾರ್ವತೀದೇವಿ—' ಈಗ ಪ್ರಪಂಚದಲ್ಲಿ ಇವನೇ ಶಾಸಕನೇನು ? ಸಮರ್ಥ ನಾದ ದಂಡಧರನೇನು ? ನಮ್ಮಂತಹ ನಿರ್ಲಜ್ಜರಾದ ದುಷ್ಟರಿಗೆ ನಿಷೇಧಕನಾಗಿ ದ್ದಾನೆ ! ಪಾಪ ! ಬ್ರಹ್ಮದೇವರಿಗೆ ಧರ್ಮ ತಿಳಿಯದು ! ಅವರ ಮಕ್ಕಳು ಭೃಗು ನಾರದಾದಿಗಳಿಗೆ ಧರ್ಮ ತಿಳಿಯದು ! ! ಸನತ್ಕುಮಾರ, ಕಪಿಲ ಮತ್ತು ಮನುಗಳೂ ಧರ್ಮವನ್ನರಿಯರು ! ! ! ಇವರು ಯಾರೂ ಅಸಂಪ್ರಜ್ಞಾತ ಸಮಾಧಿಯಲ್ಲಿದ್ದು

ಏಷಾಮನುಧ್ಯೇಯಪದಾಬ್ಜಯುಗ್ಮಂ
ಜಗದ್ಗುರುಂ ಮಂಗಲಮಂಗಲಂ ಸ್ವಯಮ್ ।
ಯಃ ಕ್ಷತ್ರಬಂಧುಃ ಪರಿಭೂಯ ಸೂರೀನ್
ಪ್ರಶಾಸ್ತಿ ಧೃಷ್ಟಸ್ತದಯಂ ಹಿ ದಂಡ್ಯಃ ॥ ೧೩ ॥

ಅವರು ನಿವಾರಿಸದೆ ಇರುವುದಕ್ಕೆ ಕಾರಣವನ್ನು ಹೇಳುತ್ತಾರೆ. ಏಷಾಂ= ಈ ಮೇಲೆ ಹೇಳಿದ ಬ್ರಹ್ಮಾದಿಗಳ (ಪಕ್ಷೇ=ಪಕ್ಷದಲ್ಲಿ (ತದವರಾಣಾಂ)=ರುದ್ರ ದೇವರಿಗಿಂತ ಕೆಳಗಿನವರಾದ ಇಂದ್ರಾದಿಗಳಿಂದ ಅನುಧ್ಯೇಯಪದಾಬ್ಜಯುಗ್ಮಂ= ಯಾವಾಗಲೂ ಧ್ಯಾನ ಮಾಡಬೇಕಾದ ಪಾದಕಮಲದ್ವಯಗಳುಳ್ಳ ಆದ್ದರಿಂದಲೇ ಜಗದ್ಗುರುಂ=ಇಂದ್ರಾದಿ ಜಗತ್ತಿಗೆ ಗುರುವಾದ ಸ್ವಯಂ – ಸ್ವರೂಪದಿಂದ ಮಂಗಲ ಮಂಗಲಂ=ಅತ್ಯಂತ ಮಂಗಳಕರನಾದ (ಶಿವನೆನಿಸಿದ) ಈ ರುದ್ರದೇವರನ್ನು ಯಃ = ಯಾವ ಈ ಕ್ಷತ್ರಬಂಧುಃ = ಕ್ಷತ್ರಿಯಾಧಮನು ಹಿ = ಯಾವ ಕಾರಣದಿಂದ ಸೂರೀನ್ = ಮೇಲೆ ಹೇಳಿದ ಜ್ಞಾನಿಗಳಾದ ಬ್ರಹ್ಮಾದಿಗಳನ್ನೂ ಪರಿಭೂಯ= ಧರ್ಮವನ್ನು ತಿಳಿದವರಲ್ಲವೋ ಎನ್ನುವಂತೆ ತಿರಸ್ಕರಿಸಿ ಪ್ರಶಾಸ್ತಿ=ಸಭೆಯಲ್ಲಿ ಸ್ತ್ರೀಯೊಂದಿಗೆ ಇರಬಾರದೆಂದು ಶಾಸನ ಮಾಡುತ್ತಿರುವನೋ ತತ್–ಆಕಾರಣದಿಂದ ಅಯಂ ಧೃಷ್ಟಃ=ಧಾರ್ಷ್ಟ್ಯವಂತನಾದ ಇವನು ದಂಡ್ಯಃ=ಶಿಕ್ಷಿಸಲ್ಪಡಬೇಕಾದವನು. ಆಗಿರುವನು. ವಿ.ಅ. ಏಷಾಂ=ಬ್ರಹ್ಮಾದಿಗಳಿಂದ ಅನುಧ್ಯೇಯಗಳಾದ ಪಾದಾಬ್ಜ ಯುಗ್ಮಗಳುಳ್ಳ ಎಂದು ಅರ್ಥಮಾಡಬಾರದು. ರುದ್ರದೇವರು ಬ್ರಹ್ಮಾದಿಗಳಿಂದ ಧ್ಯೇಯರಲ್ಲ. ಆದ್ದರಿಂದಲೇ ಬಹು ಪ್ರಮಾಣ ವಿರೋಧವನ್ನು ಪರಿಹರಿಸಲು ಶ್ರೀಮದಾಚಾರ್ಯರು 'ಪಕ್ಷೇ', 'ತದವರಾಣಾಂ' ಎಂಬೆರಡು ಪದಗಳನ್ನು ಸೇರಿಸಿ ಕೊಳ್ಳಬೇಕೆಂದು ತಿಳಿಸಿರುವರು. ಇದಕ್ಕೆ ಆಧಾರವೇನು? ಎಂದರೆ 'ವಿಷ್ಣು-ಬ್ರಹ್ಮ-ಪ್ರಾಣವೀಂದ್ರಾಃ-ತದ್ದಾರಾನಪ್ಸ್ಯತೇ ಹರಃ | ಧ್ಯೇಯೋ ಹರೇಃ ಪಾರ್ಷದಾದ್ಯೈ-ರ್ಧ್ಯಾಯನ್ ಹರಿ ಚತುರ್ಮುಖೌ ಪ್ರಾಣಮೇಷಾಂ ತಥಾ ದಾರಾನ್ನ ಸ್ವತಂತ್ರತಯಾ ಕ್ವಚಿತ್ ||' (ಹರಿಯ ದ್ವಾರಪಾಲಕರೇ ಮೊದಲಾದವರಿಂದ ಅಂದರೆ ವಿಷ್ಣು, ಬ್ರಹ್ಮ, ವಾಯು, ಗರುಡ, ಶೇಷ, ಅವರ ಹೆಂಡತಿಯರನ್ನು ಬಿಟ್ಟು ಉಳಿದವರಿಂದ ರುದ್ರದೇವರು ಧ್ಯೇಯರು. ಅದೂ ಹರಿಯನ್ನೂ ಬ್ರಹ್ಮದೇವರನ್ನೂ ವಾಯುದೇವ

ಶಾಸ್ತ್ರಾತಿಕ್ರಮಿಯೆನಿಸಿದ ರುದ್ರದೇವರನ್ನು ನಿವಾರಿಸಲಿಲ್ಲ! ಈ ಬ್ರಹ್ಮಾದಿಗಳ ಅಭಿಪ್ರಾಯದಂತೆ ಈ ರುದ್ರದೇವರು ಇಂದ್ರಾದಿಗಳಿಂದ ಯಾವಾಗಲೂ ಧ್ಯಾನಿಸ ಬೇಕಾದ ಪಾದಕಮಲಗಳುಳ್ಳವರು. ಇಂದ್ರಾದಿ ಜಗತ್ತಿಗೆ ಗುರುಗಳು. ಸ್ವರೂಪ ದಿಂದ ಅತ್ಯಂತ ಮಂಗಳರು. ಇಂತಹ ರುದ್ರದೇವರನ್ನು ಈ ಕ್ಷತ್ರಿಯಾಧಮನು ತಾನು ಶಾಸನಮಾಡುತ್ತಿದ್ದಾನೆ. ಬ್ರಹ್ಮಾದಿಗಳೂ ಧರ್ಮಜ್ಞಾನಿಗಳಲ್ಲವೆಂದು ತಿರಸ್ಕಾರ ಭಾವನೆಯನ್ನು ತೋರಿದ್ದಾನೆ. ಆದ್ದರಿಂದ ಈ ಧೃಷ್ಟನು ದಂಡನೆಗೆ ಅರ್ಹನು.

ರನ್ನೂ ಮತ್ತು ಅವರ ಹೆಂಡತಿಯರನ್ನೂ—ಲಕ್ಷ್ಮೀ, ಸರಸ್ವತೀ, ಭಾರತೀಗಳನ್ನೂ—ಧ್ಯಾನಿಸುತ್ತಾ ರುದ್ರದೇವರನ್ನು ಧ್ಯಾನಮಾಡಬೇಕು. ಎಂದೂ ಸ್ವತಂತ್ರರೆಂದು ರುದ್ರದೇವರನ್ನು ಧ್ಯಾನಿಸಬಾರದು) ಎಂಬ ಪ್ರಮಾಣವೇ ಆಧಾರ. ಆದ್ದರಿಂದಲೇ ವಿಜಯಧ್ವಜತೀರ್ಥರು ಈ ಅಧ್ಯಾಯದ ಪ್ರಾರಂಭದಲ್ಲಿ ಅವತಾರಿಕೆ ಕೊಡುತ್ತಾ ಪರೋಕ್ಷವಾಗಿ ಹೇಳುವುದೇ ದೇವತೆಗಳಿಗೆ ಪ್ರೀತಿಕರವಾದ್ದರಿಂದ ಗೂಢವಾಗಿ ಹೇಳಿರುವ ಈ ಶಾಸ್ತ್ರಾರ್ಥವು ದುರವಗಾಹವೆಂದು ಹೇಳಿರುವರು. || ೧೩ ||

ನಾಯಮರ್ಹತಿ ವೈಕುಂಠಪಾದಮೂಲೋಪಸರ್ಪಣಮ್ ।
ಸಂಭಾವಿತಾತ್ಮಾ ನಿಸ್ತಬ್ಧಃ ಸಾಧುಭಿಃ ಪರ್ಯುಪಾಸಿತಮ್ ॥ ೧೪ ॥

ಯಾವ ಶಿಕ್ಷೆಗೆ ಅರ್ಹನೆಂದರೆ ಹೇಳುತ್ತಾರೆ—ಸಂಭಾವಿತಾತ್ಮಾ=ತಾನೇ ಅಧಿಕ ಜ್ಞಾನಿ ಎಂದು ತಿಳಿದಿರುವ ಆದ್ದರಿಂದಲೇ ನಿಸ್ತಬ್ಧಃ=ಅತ್ಯಂತ ಗರ್ವಿಷ್ಠನಾದ ಅಯಂ=ಇವನು ಸಾಧುಭಿಃ ತಾವು ಅಲ್ಪಜ್ಞಾನಿಗಳೆಂದು ತಿಳಿದವರೂ ಅತ್ಯಂತ ನಮ್ರರೂ ಆದ ಸಜ್ಜನರಿಂದ ಪರ್ಯುಪಾಸಿತಂ=ಸರ್ವವಿಧದಿಂದಲೂ ಉಪಾಸಿತವಾದ ವೈಕುಂಠ=ನಿರ್ದೋಷನಾದ ಶ್ರೀಹರಿಯ ಪಾದಮೂಲೋಪಸರ್ಪಣಮ್=ಪಾದಮೂಲಗಳ ಸೇವೆಯನ್ನು ನ ಅರ್ಹತಿ=ಹೊಂದಲು ಯೋಗ್ಯನಾಗಿಲ್ಲ. ಅನರ್ಹನೆಂಬುದಕ್ಕೆ ಕಾರಣವನ್ನು ಸಂಭಾವಿತಾತ್ಮಾ ಎಂಬುದರಿಂದ ತಿಳಿಸಿರುವರು. || ೧೪ ||

ಅತಃ ಪಾಪೀಯಸೀಂ ಯೋನಿಮಾಸುರೀಂ ಯಾಹಿ ದುರ್ಮತೇ ।
ಯಥೇಹ ಭೂಯೋ ಮಹತಾಂ ನ ಕರ್ತಾsಮುತ್ರ ಕಿಲ್ಬಿಷಮ್ ॥

ಶ್ರೀಹರಿಯ ಪಾದಮೂಲಗಳನ್ನು ಸೇವಿಸದಿರುವುದಕ್ಕೆ ಉಪಾಯವೇನು? ಎಂದರೆ ಹೇಳುತ್ತಾರೆ. ದುರ್ಮತೇ=ದುರ್ಬುದ್ಧಿಯುಳ್ಳವನೇ, ಅತಃ=ಶ್ರೀಹರಿ ಪಾದಸೇವೆಗೆ ಅನರ್ಹನಾದ್ದರಿಂದ ಯಥಾ=ಹೇಗೆ ಭೂಯಃ ಮತ್ತೆ ಇಹ=(೧) ಇಲ್ಲಿ ಇರುವ (೨) ನಮ್ಮ ಸಮೀಪದಲ್ಲಿ ಅಮುತ್ರ=(೧) ಪರಲೋಕದಲ್ಲಿ ಇರುವ (೨) ಹೊರಗಡೆ ಮಹತಾಂ=ದೊಡ್ಡವರಲ್ಲಿ ಕಿಲ್ಬಿಷಂ=ಅಪರಾಧವನ್ನು ನ ಕರ್ತಾ=ಮಾಡದಿರುವೆಯೋ ಹಾಗೆ ಪಾಪೀಯಸೀಂ=ಅತ್ಯಂತ ಪಾಪಯುಕ್ತವಾದ ಆಸುರೀಂ ಯೋನಿಂ=ಅಸುರಜನ್ಮವನ್ನು ಯಾಹಿ=ಹೊಂದು. ಈಗ ಮಾಡಿದ ಅಪರಾಧಕ್ಕೆ ಶಿಕ್ಷೆ ಮಾಡಿದ್ದರಿಂದ ಮುಂದೆ ಇಂತಹ ಅಪರಾಧಗಳನ್ನು ನೀನು ಮಾಡುವುದಿಲ್ಲವೆಂದು ಅಭಿಪ್ರಾಯ. || ೧೫ ||

ತಾನೇ ಅಧಿಕಜ್ಞಾನಿಯೆಂದು ತಿಳಿದು ಅತ್ಯಂತ ಗರ್ವಿಯಾದ ಇವನು ಶ್ರೀಹರಿಯ ಪಾದಮೂಲಗಳನ್ನು ಸೇವಿಸಲು ಅರ್ಹನಲ್ಲ. ಅವುಗಳನ್ನು ಸಜ್ಜನರು ಸರ್ವವಿಧದಿಂದ ಸೇವಿಸುವರು. ಆದ್ದರಿಂದ ಎಲೋ ದುರ್ಬುದ್ಧಿಯೇ, ನೀನು ಅತ್ಯಂತ ಪಾಪದಿಂದ ಕೂಡಿದ ಅಸುರಯೋನಿಯಲ್ಲಿ ಹುಟ್ಟು. ಹೀಗಾದರೆ ನೀನು ಮತ್ತೆ ನಮ್ಮ ಬಳಿ ಮತ್ತು ಹೊರಗೆ ದೊಡ್ಡವರಲ್ಲಿ ಅಪರಾಧ ಮಾಡದೆ ಇರುವೆ' ಎಂದು ಶಪಿಸಿದಳು.

ಶ್ರೀ ಶುಕ ಉವಾಚ—

ಏವಂ ಶಪ್ತಶ್ಚಿತ್ರಕೇತುರ್ವಿಮಾನಾದವರುಹ್ಯ ಸಃ ।
ಪ್ರಸಾದಯಾಮಾಸ ಸತೀಂ ಮೂರ್ಧ್ನಾ ನಮ್ರೇಣ ಭಾರತ ॥ ೧೬ ॥

ಹೀಗೆ ಶಪ್ತನಾದ ಸದ್ಭಕ್ತನಾದ ಚಿತ್ರಕೇತುವು ಪಾರ್ವತಿಯನ್ನು ಆಶ್ರಯಿಸಿದ ಪ್ರಕಾರವನ್ನು ಹೇಳುತ್ತಾರೆ. ಭಾರತ=ಪರೀಕ್ಷಿದ್ರಾಜನೇ, ಏವಂ=ಮೇಲೆ ಹೇಳಿದಂತೆ ಶಪ್ತಃ=ಶಾಪಗ್ರಸ್ತನಾದ ಸಃ ಚಿತ್ರಕೇತುಃ=ಆ ಭಕ್ತನಾದ ಚಿತ್ರಕೇತುವು ವಿಮಾನದಿಂದ ಅವರುಹ್ಯ=ಕೆಳಗಿಳಿದು ನಮ್ರೇಣ=ತಗ್ಗಿಸಿದ ಮೂರ್ಧ್ನಾ=ತಲೆಯಿಂದ ಸತೀಂ=ಪಾರ್ವತಿಯನ್ನು ಪ್ರಸಾದಯಾಮಾಸ=ಪ್ರಸನ್ನೀಕರಿಸಿಕೊಂಡನು. ॥ ೧೬ ॥

ಚಿತ್ರಕೇತುರುವಾಚ—

ಪ್ರತಿಗೃಹ್ಣಾಮಿ ತೇ ಶಾಪಮಾತ್ಮನೋಽಂಜಲಿನಾಽಂಬಿಕೇ ।
ದೇವೈರ್ಮರ್ತ್ಯಾಯ ಯತ್ಪ್ರೋಕ್ತಂ ಪೂರ್ವದಿಷ್ಟಂ ಹಿ ತಸ್ಯ ತತ್ ॥

ಅಂಬಿಕೇ=ಪಾರ್ವತೀದೇವಿಯೇ, ತೇ ಶಾಪಂ=ನೀನು ಕೊಟ್ಟ ಶಾಪವನ್ನು ಆತ್ಮನಃ=ನನ್ನ ಅಂಜಲಿನಾ=ಬೊಗಸೆಯಿಂದ (ಎರಡೂ ಕೈಗಳಿಂದ) ಪ್ರತಿ-ಗೃಹ್ಣಾಮಿ=ಸ್ವೀಕರಿಸುತ್ತೇನೆ. ಹಿ=ಏಕೆಂದರೆ, ಪೂರ್ವದಿಷ್ಟಂ=ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯಪಾಪಗಳೆಂಬ ಕರ್ಮವು ದೇವೈಃ=ದೇವತೆಗಳಿಂದ ಮರ್ತ್ಯಾಯ=ಮನುಷ್ಯನಿಗೆ ಯತ್=ಯಾವುದು ಪ್ರೋಕ್ತಂ=ವಿಹಿತವೋ ತತ್ ಹಿ=ಆ ಕರ್ಮವೇ ತಸ್ಯ=ಅವನ ಸುಖದುಃಖಗಳಿಗೆ ಕಾರಣವು ಎಂದು ಸೇರಿಸಿಕೊಳ್ಳಬೇಕು. ದೇವತೆಗಳಿಂದ ಯತ್=ಯಾವ ವರ ಶಾಪ ಮೊದಲಾದುವು ಮನುಷ್ಯನಿಗೆ ಪ್ರೋಕ್ತಂ=ಹೇಳಲ್ಪಟ್ಟವೋ ತತ್=ಅವು ತಸ್ಯ=ಆ ಮನುಷ್ಯನ ಪೂರ್ವದಿಷ್ಟಂ ಹಿ=ಪ್ರಾಚೀನ ಕರ್ಮೋದ್ಬೋಧಕವಾಗಿ ಶ್ರೀಹರಿಯಿಂದ ಕ್ಲೃಪ್ತವಾಗಿರುವುದೇ. ಎಂದಾದರೂ ಅನ್ವಯ. ಇದರಿಂದ ಇದು ಭಗವಂತನಿಂದ ಕ್ಲೃಪ್ತವಾದ್ದರಿಂದ ಶಾಪಕೊಟ್ಟ ನಿನ್ನಲ್ಲಿ ನನಗೆ ಕೋಪವಿಲ್ಲವೆಂದಭಿಪ್ರಾಯ. ॥ ೧೭ ॥

ಸಂಸಾರಚಕ್ರ ಏತಸ್ಮಿನ್ ಜಂತುರಜ್ಞಾನಮೋಹಿತಃ ।
ಭ್ರಾಮ್ಯನ್ ಸುಖಂ ಚ ದುಃಖಂ ಚ ಭುಂಕ್ತೇ ಸರ್ವತ್ರ ಸರ್ವದಾ ॥

ಹೀಗೆ ಶಾಪಗ್ರಸ್ತನಾದ ಆ ಸದ್ಭಕ್ತ ಚಿತ್ರಕೇತುವು, ಪರೀಕ್ಷಿದ್ರಾಜ, ವಿಮಾನದಿಂದ ಇಳಿದು ತಲೆತಗ್ಗಿಸಿ ನಮ್ರತೆಯಿಂದ ಸತೀದೇವಿಯನ್ನು ಪ್ರಸನ್ನಳಾಗೆಂದು ಪ್ರಾರ್ಥನೆ ಮಾಡಿದನು. 'ಅಮ್ಮ ಅಂಬಿಕೇ, ನೀನು ಕೊಟ್ಟ ಶಾಪವನ್ನು ನಮ್ರನಾಗಿ ನಾನು ಒಪ್ಪಿಕೊಂಡಿದ್ದೇನೆ. ದೇವತೆಗಳು ಕೊಡುವ ವರ ಅಥವಾ ಶಾಪಗಳು ಮನುಷ್ಯರಿಗೆ ಅವರ ಪೂರ್ವಜನ್ಮದ ಕರ್ಮಫಲಗಳು. ಜೀವನು ಶ್ರೀಹರಿಯ ಅಜ್ಞಾನದಿಂದ ಮೋಹಿತನಾಗಿದ್ದಾನೆ. ಆ ಕಾರಣದಿಂದ ಈ ಸಂಸಾರಚಕ್ರದಲ್ಲಿ

ಅದನ್ನೇ ವಿಶದಪಡಿಸುತ್ತಾರೆ. ಅಜ್ಞಾನಮೋಹಿತಃ=ಶ್ರೀಹರಿಯ ಅಜ್ಞಾನದಿಂದ ಮೋಹಗೊಂಡಿರುವ ಜಂತುಃ=ಜೀವನು ಏತಸ್ಮಿನ್=ಈ ಸಂಸಾರಚಕ್ರೇ=ಸಂಸಾರವೆಂಬ ಚಕ್ರದಲ್ಲಿ ಭ್ರಾಮ್ಯನ್=ಸುತ್ತುತ್ತಾ ಸರ್ವತ್ರ=ಎಲ್ಲ ಜನ್ಮಗಳಲ್ಲಿಯೂ ಸರ್ವದಾ=ಎಲ್ಲ ಕಾಲಗಳಲ್ಲಿಯೂ ಸುಖಂ ಚ ದುಃಖಂ ಚ=ಸುಖದುಃಖಗಳೆರಡನ್ನೂ ಕ್ರಮವಾಗಿ ಭುಂಕ್ತೇ=ಅನುಭವಿಸುವನು ಇದು ಸ್ವಾಭಾವಿಕವಾದ್ದರಿಂದ ಆಶ್ಚರ್ಯವಲ್ಲವೆಂದರ್ಥ. || ೧೮ ||

ನೈವಾತ್ಮಾ ನ ಪರಶ್ಚಾಪಿ ಕರ್ತಾ ಸ್ಯಾತ್ಸುಖದುಃಖಯೋಃ ।
ಕರ್ತಾರಂ ಮನ್ಯತೇಽತ್ರಾಜ್ಞ ಆತ್ಮಾನಂ ಪರಮೇವ ಚ || ೧೯ ||

ಸುಖದುಃಖಗಳುಂಟಾಗಲು ಅನುಭವಿಸುವವನು ಕಾರಣನೇ? ಅಥವಾ ಬೇರೊಬ್ಬನು ಕಾರಣನೇ? ಎಂದಾಶಂಕಿಸಿ ಜ್ಞಾನಿಯಾದವನು ಭಗವಂತನು ಕ್ಲೃಪ್ತವಾಗಿ ಮಾಡಿರುವ ನಿಯತಕರ್ಮವೇ ಕಾರಣವೆಂದು ತಿಳಿಯುವನೆಂದೂ ಅಜ್ಞಾನಿಯಾದರೋ ತನ್ನನ್ನೋ ಬೇರೆ ಜೀವನನ್ನೋ ಕಾರಣವೆಂದು ತಿಳಿಯುವನೆಂದೂ ಹೇಳುತ್ತಾರೆ. ಸುಖದುಃಖಗಳಿಗೆ ಕರ್ತಾ=ಉತ್ಪಾದಕನು ಆತ್ಮಾ=ತಾನು ನೈವ ಸ್ಯಾತ್=ಆಗುವುದಿಲ್ಲ. ಪರಃ ಚ=ಮತ್ತೊಬ್ಬ ಜೀವನೂ ನ ಸ್ಯಾತ್ ಅಪಿ=ಆಗಲೇಲಾರ. ಅತ್ರ=ಹೀಗಿರುವ ಈ ವಿಷಯದಲ್ಲಿ ಅಜ್ಞಃ=ಅಜ್ಞಾನಿಯು ಆತ್ಮಾನಂ=ತನ್ನನ್ನೂ ಚ=ಮತ್ತು ಪರಂ=ಮತ್ತೊಬ್ಬನನ್ನೂ ಸುಖದುಃಖಗಳಿಗೆ ಕರ್ತನೆಂದು ಮನ್ಯತೇ ಏವ=ತಿಳಿದೇ ತಿಳಿಯುವನು. ಅಂ=ಶ್ರೀಹರಿಯನ್ನು ಜ್ಞಃ=ತಿಳಿದ ಜ್ಞಾನಿಯು ಶ್ರೀಹರಿಯ ತತ್ವಜ್ಞಾನಿಯು ಪರಂ ಆತ್ಮಾನಂ ಏವ=ಪರಮಾತ್ಮನನ್ನೇ ಕರ್ತೃವೆಂದು ತಿಳಿಯುವನು ಎಂದೂ ಅನ್ವಯ. 'ಯತ್ತದ್ಭಗವತಾ ಕ್ಲೃಪ್ತಂ ತದೇವ ನಿಯತಂ ಭವೇತ್ ||' ಎಂಬ ಪ್ರಮಾಣವು ಇದಕ್ಕೆ ಆಧಾರ. ಇದರಿಂದ ತನ್ನನ್ನಾಗಲಿ ಇತರ ಜೀವರನ್ನಾಗಲಿ ಕಾರಣವೆಂದು ತಿಳಿಯುವುದು ಭ್ರಾಂತಿಜ್ಞಾನವೆಂದಾಯಿತು. || ೧೯ ||

ಗುಣಪ್ರವಾಹ ಏತಸ್ಮಿನ್ ಕಃ ಶಾಪಃ ಕೋಽನ್ವನುಗ್ರಹಃ ।
ಕಃ ಸ್ವರ್ಗೋ ನರಕಃ ಕೋ ವಾ ಕಿಂ ದುಃಖಂ ಸುಖಮೇವ ಚ ||

ಸುತ್ತುತ್ತಿರುತ್ತಾನೆ. ಎಲ್ಲ ಜನ್ಮಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಸುಖದುಃಖಗಳನ್ನು ಒಂದಾದ ನಂತರ ಮತ್ತೊಂದನ್ನು ಅನುಭವಿಸುತ್ತಲೇ ಇರುತ್ತಾನೆ. ಈ ಸುಖದುಃಖಗಳಿಗೆ ಇವನು ಸ್ವತಂತ್ರಕಾರಣನಲ್ಲ. ಮತ್ತೊಬ್ಬ ಜೀವನೂ ಸ್ವತಂತ್ರಕಾರಣನಲ್ಲ. ಆದರೂ ಅಜ್ಞಾನಿಯು ತಾನೇ ಅಥವಾ ಮತ್ತೊಬ್ಬ ಜೀವನೇ ಸ್ವತಂತ್ರಕಾರಣನೆಂದು ತಿಳಿಯುತ್ತಾನೆ. ಜ್ಞಾನಿಯಾದರೋ ಸರ್ವೋತ್ತಮನಾದ ಶ್ರೀಹರಿಯೇ ಸ್ವತಂತ್ರಕಾರಣನೆಂದು ತಿಳಿಯುತ್ತಾನೆ. ಈ ಸಂಸಾರವು ಸತ್ವರಜಸ್ತಮೋಗುಣಗಳ ಪ್ರವಾಹ. ಇದರಲ್ಲಿ ಶಾಪವಾವುದು? ಅನುಗ್ರಹವಾವುದು?

ಹೀಗಿರುವಾಗ ಶ್ರೀಹರಿಯಿಂದ ಕ್ಲುಪ್ತವಾದದ್ದು ಬಂದೇ ಬರುತ್ತದೆಯಾಗಿ ಶಾಪಾದಿಗಳು ಬಂದಲ್ಲಿ ದುಃಖಾದಿ ಪಡಬೇಕಾಗಿಲ್ಲವೆಂದು ಹೇಳುತ್ತಾರೆ. ಗುಣ-ಪ್ರವಾಹೇ = ಸತ್ವರಜಸ್ತಮೋಗುಣಗಳ ಪ್ರವಾಹರೂಪವಾದ ಏತಸ್ಮಿನ್= ಈ ಸಂಸಾರಾವಸ್ಥೆಯಲ್ಲಿ ಶಾಪಃ ಕಃ=ಶಾಪವಾವುದು ? ಕಃ ನು=ಯಾವುದು ತಾನೇ ಅನುಗ್ರಹಃ=ಅನುಗ್ರಹವು ? ಈ ಶಾಪಾನುಗ್ರಹಗಳಿಗೆ ಶ್ರೀಹರಿಯ ಇಚ್ಛೆಗೆ ಅಧೀನವಾದ ಹಿಂದಿನ ಪಾಪಪುಣ್ಯಗಳೇ ಕಾರಣವೆಂದರ್ಥ. ಸ್ವರ್ಗವಾವುದು ? ಅನಿತ್ಯ ಮತ್ತು ಅಲ್ಪಸುಖವಾದ್ದರಿಂದ ಉಪಯೋಗವಿಲ್ಲವೆಂದರ್ಥ. ನರಕವಾದರೂ ಯಾವುದು ? ಸ್ವಲ್ಪಕಾಲ ಅನುಭವಿಸಿದ ಮೇಲೆ ಮುಗಿಯುವುದರಿಂದ ಅದೂ ಶಾಶ್ವತವಲ್ಲವೆಂದರ್ಥ. ದುಃಖವಾವುದು ? ಸುಖವಾವುದು ? ಇವು ಅಲ್ಪ ಮತ್ತು ಅನಿತ್ಯವೆಂದರ್ಥ. ಗುಣಪ್ರವಾಹದಲ್ಲಿಯೇ ಬಿದ್ದಿರುವವನಿಗೆ ಶಾಪಾದಿಗಳು ಅಲ್ಪವಾದ್ದರಿಂದ ಅದಕ್ಕಾಗಿ ದುಃಖಪಡಬೇಕಾಗಿಲ್ಲವೆಂದು ತಾತ್ಪರ್ಯ. ವಿ.ಅ. ವಿಜಯಧ್ವಜತೀರ್ಥರು ಇಲ್ಲಿ ಈ ತಾತ್ಪರ್ಯೋಕ್ತ ಪ್ರಮಾಣವನ್ನು ಉದಹರಿಸಿರುವರು. 'ಅತೋಽನ್ಯೇಷಾಂ ವರಃ ಶಾಪೋ ಗುಣದೋಷ ಪ್ರಕರ್ತೃತಾ | ಸ್ವತಃ ಪ್ರಾಪ್ತಾ ಭೇದಕೃತಿರ್ವಾಸನಾರೂಪಿಣೋ ಯಥಾ | ವಿದ್ಯಮಾನಸ್ಯ ಮನಸಿ ಪುನಃ ಸ್ವಪ್ನೇಪಿ ದರ್ಶನಮ್ | ಭಗವದ್ವಶತಾ ಯಸ್ಮಾತ್ಸರ್ವೇಷಾಂ ಜ್ಞೇಯಮೇವ ತತ್ ||' (ಆದ್ದರಿಂದ ಮತ್ತೊಬ್ಬರಿಂದ ಬರುವ ವರ, ಶಾಪ, ಪುಣ್ಯ ಪಾಪಗಳು ಕರ್ತೃತ್ವ ಇವೆಲ್ಲವೂ ಶ್ರೀಹರಿಯಿಂದಲೇ ಬಂದವು. ಆದರೆ ಇತರರೇ ಇದಕ್ಕೆ ಸ್ವತಂತ್ರರೆಂಬುದು ಮನಸ್ಸಿನಲ್ಲಿ ಇರುವ ವಾಸನಾಮಯವಾದ ಆನೆ ಮೊದಲಾದವು ಸ್ವಪ್ನದಲ್ಲಿ ಕಂಡವು ಜಾಗ್ರದವಸ್ಥೆಯ ಆನೆ ಮೊದಲಾದವುಗಳೆಂಬುದು ಹೇಗೆ ಭ್ರಾಂತಿಜ್ಞಾನವೋ ಹಾಗೆ ಭ್ರಾಂತಿಯು. ಎಲ್ಲವೂ ಶ್ರೀಹರಿಯ ಅಧೀನವಾದ್ದರಿಂದ ಹಾಗೆಯೇ ಅದನ್ನು ತಿಳಿಯಬೇಕು. ಇದರಿಂದ ಇಷ್ಟು ಹೇಳಿದಂತಾಯಿತು. ಮನಸ್ಸಿನಲ್ಲಿರುವ ವಾಸನಾರೂಪಿಯಾದ ವಸ್ತುವು ಸ್ವಪ್ನದಲ್ಲಿ ಹೇಗೆ ಕಾಣುವುದೋ ಹಾಗೆ ಇತರರಿಂದ ಅನಿತ್ಯ ಸುಖಾದಿಗಳು ಕಾಣುವುವು. ಇವೆಲ್ಲ ಅವರವರ ಅಧೀನವಲ್ಲ. ಮತ್ತೇನೆಂದರೆ ಶ್ರೀಹರಿಯ ಇಚ್ಛೆಗೆ ಅಧೀನವಾದುದು. ಈ ಶ್ಲೋಕದಲ್ಲಿನ ಕಿಂ ಪದ ಆಕ್ಷೇಪಾರ್ಥಕ. ಎಷ್ಟು ಮಾತ್ರ ? ಅಲ್ಪವೆಂದರ್ಥ. 'ಆಕ್ಷಿಪ್ಯತೇ ಕಿಮೇತತ್ ಯತ್ರಾಲ್ಪಫಲತಾ ಭವೇತ್ | ಯಸ್ಯ ವಸ್ತುಷು ಚಾಲ್ಪತ್ವಂ ಪುಂಸೋ ವಾ ನೇತಿ ಚೋಚ್ಯತೇ ||' ಎಂಬ ಪ್ರಮಾಣವು ಈ ಅರ್ಥವನ್ನು ಸ್ಪಷ್ಟಪಡಿಸುವುದು. || ೨೦ ||

ಏಕಃ ಸೃಜತಿ ಭೂತಾನಿ ಭಗವಾನಾತ್ಮಮಾಯಯಾ |
ಏಷಾಂ ಬಂಧಂ ಚ ಮೋಕ್ಷಂ ಚ ಸುಖಂ ದುಃಖಂ ಚ ನಿಷ್ಕಲಃ ||

ಸ್ವರ್ಗವಾವುದು ? ನರಕವಾವುದು ? ಸುಖವಾವುದು ? ದುಃಖವಾವುದು ? (ಇವೆಲ್ಲ ಅಲ್ಪ ಮತ್ತು ಅನಿತ್ಯ). ಶ್ರೀಹರಿಯೊಬ್ಬನೇ ತನ್ನ ಇಚ್ಛೆಯಿಂದ ತನ್ನ ಅಧೀನವಾದ

ಶಾಪಾದಿಗಳು ಹರೀಚ್ಛಾನಿಯತವೆಂದು ಯಾವ ಕಾರಣದಿಂದ ಹೇಳುತ್ತೀರಿ? ಎಂದರೆ ಹೇಳುತ್ತಾರೆ. ನಿಷ್ಕಲಃ=ಸ್ವಯಂ ಬಂಧಾದಿದೋಷಗಳಿಲ್ಲದ ಭಗವಾನ್= ಸರ್ವೋತ್ತಮನಾದ ಶ್ರೀಹರಿಯು ಏಕಃ=ಒಬ್ಬನೇ ಆತ್ಮಮಾಯಯಾ=ತನ್ನ ಇಚ್ಛೆಯೆಂಬ ನಿಮಿತ್ತಕಾರಣದಿಂದ, ತನ್ನ ಅಧೀನವಾದ ಪ್ರಕೃತಿಯೆಂಬ ಉಪಾದಾನ ಕಾರಣದಿಂದ ಭೂತಾನಿ=ಜೀವರನ್ನು ಸೃಜತಿ=ದೇಹಾದಿ ಸಂಬಂಧ ಕೊಟ್ಟು ಸೃಷ್ಟಿಸುವನು. ಏಷಾಂ=ಈ ಜೀವರ ಬಂಧವನ್ನೂ ಮೋಕ್ಷವನ್ನೂ ಸುಖವನ್ನೂ ದುಃಖವನ್ನೂ ಉಂಟುಮಾಡುವನು. ಏಕಃ ಎಂದು ಹೇಳಿದ್ದರಿಂದ ಕರ್ಮ ಮೊದಲಾದವುಗಳ ಇರುವಿಕೆಯೂ ಪರಮಾತ್ಮನ ಅಧೀನವೆಂದು ಸೂಚಿಸಿರುವರು. ಆತ್ಮಮಾಯಯಾ ಎಂಬುದರಿಂದ ಶ್ರೀಹರಿಯು ಮತ್ತೊಬ್ಬರಿಂದ ನಿಯತನಲ್ಲವೆಂದು ತಿಳಿಸಿರುವರು. || ೨೧ ||

ನ ಚಾಸ್ಯ ಕಶ್ಚಿದ್ದಯಿತಃ ಪ್ರತೀಪೋ
ನ ಜ್ಞಾತಿಬಂಧುರ್ನ ಪರೋ ನ ಚ ಸ್ವಃ ।
ಸಮಸ್ಯ ಸರ್ವತ್ರ ನಿರಂಜನಸ್ಯ
ಕುತೋಽನುರಾಗಃ ಕುತ ಏವ ರೋಷಃ || ೨೨ ||

ಎಲ್ಲವೂ ಶ್ರೀಹರಿಯ ಅಧೀನವಾದರೆ ಅವನಿಗೆ ಪ್ರಿಯ ಶತ್ರು ಮೊದಲಾದ ವೈಷಮ್ಯಗಳಿಲ್ಲವಾದ್ದರಿಂದ ಇಂತಹ ವಿಷಮಸೃಷ್ಟಿಯಲ್ಲಿ ಕಾರಣವೇನು? ಎಂದಾಶಂಕಿಸಿ ಶ್ರೀಹರಿಗೆ ವೈಷಮ್ಯವಿಲ್ಲದಿದ್ದರೂ ಅವರವರ ಯೋಗ್ಯತಾ ಕರ್ಮವಶದಿಂದ ಎಲ್ಲವೂ ಕೂಡುವುದೆಂದು ಮುಂದಿನ ಎರಡು ಶ್ಲೋಕಗಳಿಂದ ತಿಳಿಸುತ್ತಾರೆ. ಸರ್ವತ್ರ= ಎಲ್ಲ ಜೀವರ ವಿಷಯದಲ್ಲಿಯೂ ಸಮಸ್ಯ= ಅವರವರ ಯೋಗ್ಯತೆಗೆ ಕರ್ಮಕ್ಕೆ ತಕ್ಕಂತೆ ಸುಖದುಃಖಾದಿ ಫಲಗಳನ್ನು ಕೊಡುವ ನಿರಂಜನಸ್ಯ=ನಿಸ್ಸಂಗನಾದ ಅಸ್ಯ = ಈ ಶ್ರೀಹರಿಗೆ ಕಶ್ಚಿತ್=ಯಾವನೂ ದಯಿತಃ=ಪ್ರಿಯನು ನ ಚ= ಇಲ್ಲವು. ಪ್ರತೀಪಃ=ಅಪ್ರಿಯನು ನ ಚ=ಇಲ್ಲವು. ಜ್ಞಾತಿ ಬಂಧುವೆಂಬುವನೂ ಇಲ್ಲವು. ಪರಃ=ಇತರನು ಇಲ್ಲ. ಸ್ವಃ=ತನ್ನವನು ಇಲ್ಲ. ಅಂದಮೇಲೆ ಅನುರಾಗಃ= ಪ್ರೀತಿಯು ಕುತಃ=ಹೇಗೆ ಬಂದೀತು? ಪ್ರೀತಿಯೇ ಇಲ್ಲದಮೇಲೆ ರೋಷಃ= ತನ್ನಿಮಿತ್ತಕವಾದ ಕೋಪವು ಎಲ್ಲಿಯದು? ವಿ.ಅ. ಶ್ರೀಹರಿಯು ಸಮನೆಂಬುದಕ್ಕೆ

ಪ್ರಕೃತಿಯಿಂದ—ಜೀವರಿಗೆ ದೇಹಾದಿಗಳನ್ನು ಕೊಟ್ಟು ಸೃಷ್ಟಿಸುವನು. ಬಂಧವನ್ನೂ ಮೋಕ್ಷವನ್ನೂ ಸುಖವನ್ನೂ ದುಃಖವನ್ನೂ ಕೊಡುವನು. ಸರ್ವೋತ್ತಮನಾದ ಅವನಿಗೆ ಬಂಧಾದಿ ದೋಷಗಳಿಲ್ಲ. ಎಲ್ಲ ಜೀವರಿಗೂ ಅವರವರ ಕರ್ಮದಂತೆ ಫಲ ಕೊಡುವ ಅವನು ಸಮನು. ಅವನಿಗೆ ಕರ್ಮಲೇಪವಿಲ್ಲ. ಯೋಗ್ಯತೆಗೆ ಮೀರಿ ಪ್ರಿಯನೂ ಅಪ್ರಿಯನೂ ಇಲ್ಲ. ಜ್ಞಾತಿಬಂಧುವಿಲ್ಲ. ಇತರನು ತನ್ನವನು ಎಂಬುದಿಲ್ಲ. ಇಂತಹವನಿಗೆ ಒಬ್ಬರಮೇಲೆ ಅನುರಾಗವೆಲ್ಲಿಯದು? ಅನುರಾಗವೇ ಇಲ್ಲ

ಸ್ವಭಕ್ತರ ಸೇವೆಗೆ ಮೀರಿ ಫಲವನ್ನೂ, ಶತ್ರುಗಳಿಗೂ ಅಪರಾಧಕ್ಕೆ ಮೀರಿ ಶಿಕ್ಷೆಯನ್ನೂ ಕೊಡುವವನಲ್ಲವೆಂದು ಅರ್ಥ. 'ಸೇವಾಯೋಗ್ಯಾತಿರೇಕೇಣ ಸ್ವಾನಾಮಪಿ ನ ದಾಸ್ಯತಿ । ಅಪರಾಧಾತಿರೇಕೇಣ ನಾನ್ಯಸ್ಯಾತಃ ಸಮೋ ಹರಿಃ ॥ ಎಂಬ ಪ್ರಮಾಣವು ಇದನ್ನು ತಿಳಿಸುತ್ತದೆ. ॥ ೨೨ ॥

ತಥಾಪಿ ತಚ್ಛಕ್ತಿವಿಸರ್ಗ ಏಷಾಂ
ಸುಖಾಯ ದುಃಖಾಯ ಹಿತಾಹಿತಾಯ ।
ಬಂಧಾಯ ಮೋಕ್ಷಾಯ ಚ ಮೃತ್ಯುಜನ್ಮನೋಃ
ಸಂಸಾರಿಣಾಂ ಸಂಸೃತಯೇ ಚ ಕಲ್ಪತೇ ॥ ೨೩ ॥

ತಥಾಪಿ=ಶ್ರೀಹರಿಗೆ ಅವರವರ ಯೋಗ್ಯತೆ ಮೀರಿ ವಿಶೇಷ ಅನುರಾಗಾದಿಗಳು ಇಲ್ಲದಿದ್ದರೂ ತಚ್ಛಕ್ತಿ ವಿಸರ್ಗಃ=(೧) ಶ್ರೀಹರಿಯ ಶಕ್ತಿಯ ವಿಶಿಷ್ಟಭಾವವು (ಅವರವರ ಯೋಗ್ಯತೆ ಕರ್ಮಗಳನ್ನು ಅನುಸರಿಸಿ ಫಲಕೊಡುತ್ತೇನೆಂಬ ತಾನೇ ಮಾಡಿಕೊಂಡ ನಿಯಮವು) (೨) ಪರಮಾತ್ಮನ ಸಾಮರ್ಥ್ಯದಿಂದ ನಿಯತವಾದ ಆಯಾಯಾ ಜೀವರ ಕರ್ಮಗಳ ವಿವಿಧ ಸಮೂಹವು ಏಷಾಂ = ಈ ಲಿಂಗಶರೀರ ವಿಶಿಷ್ಟರಾದ ಸಂಸಾರಿ ಜೀವರ ಸುಖಕ್ಕೂ, ದುಃಖಕ್ಕೂ, ಹಿತಾಹಿತಕ್ಕೂ, ಬಂಧಕ್ಕೂ, ಮೋಕ್ಷಕ್ಕೂ, ಸಾವಿಗೂ, ಹುಟ್ಟಿಗೂ, ಸಂಸಾರಕ್ಕೂ ಕಲ್ಪತೇ= ಸಮರ್ಥವಾಗುವುದು. ತಥಾಪಿ = ಭಗವಂತನೇ ಮುಖ್ಯಕರ್ತನಾದರೂ ಎಂದೂ ಅರ್ಥ. ವಿ.ಅ. ಯೋಗ್ಯತಾನುಸಾರ ಫಲದಾತನೆಂದು ಹೇಳಿದ್ದರಿಂದ ಶ್ರೀಹರಿಯು ಎಲ್ಲರಲ್ಲಿಯೂ ಸಮನೆಂಬುದನ್ನು ಸಮರ್ಥಿಸಿದಂತಾಯಿತು. ಇದನ್ನೇ ಸೂತ್ರಕಾರರು 'ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ತಥಾಹಿ ದರ್ಶಯತಿ' ಎಂಬುದರಿಂದ ನಿರ್ಣಯಿಸಿರುವರು. ಭಗವಂತನು ಸಾಪೇಕ್ಷನಾದ ಮೇಲೆ ಪರತಂತ್ರನಾಗಲಿಲ್ಲವೆ? ಎಂಬುದನ್ನು ತಚ್ಛಕ್ತಿ ವಿಸರ್ಗ ಎಂಬುದರಿಂದ ಪರಿಹರಿಸಿರುವರು. ಅವನ ಶಕ್ತಿ ನಿಯತವೆಂದಮೇಲೆ ಮತ್ತೆ ವೈಷಮ್ಯಾದಿಗಳು ಬರಲಿಲ್ಲವೇ? ಎಂದರೆ ಅಂತಹ ವೈಷಮ್ಯಾದಿಗಳು ಅಂಗೀಕಾರ್ಯಗಳೆಂದು ಅದೇ ಸೂತ್ರಕಾರರು 'ಉಪಪದ್ಯತೇ ಚಾಪ್ಯುಪಲಭ್ಯತೇ ಚ' ಎಂಬ ಸೂತ್ರದಲ್ಲಿ ನಿರ್ಣಯಿಸಿಕೊಟ್ಟಿರುವರು ವೇದಾನುಗುಣವಾದ ವೈಷಮ್ಯಾದಿ ದೋಷವಲ್ಲದೆಂದು ತೀರ್ಮಾನ. 'ವೈಷಮ್ಯಂ ನಿರ್ಘೃಣತ್ವಂ ಚ ವೇದಾಪ್ರಾಮಾಣ್ಯಕಾರಣಮ್ । ನಾಂಗೀಕಾರ್ಯಂ, ಅತೋಽನ್ಯತ್ತು ನ ವೈಷಮ್ಯಾದಿನಾಮಕಮ್ ॥' ಎಂದು ಪ್ರಮಾಣವಿರುವುದು. ॥ ೨೩ ॥

ದಿರುವಾಗ ರೋಷವಾದರೂ ಎಲ್ಲಿಯದು? ಆದರೂ ಅವರವರ ಯೋಗ್ಯತೆಗೆ ತಕ್ಕಂತೆ ಫಲ ಕೊಡುತ್ತೇನೆಂದು ಅವನೇ ಹಾಕಿಕೊಂಡಿರುವ ನಿಯಮರೂಪವಾದ ಅವನ ಶಕ್ತಿವೈಭವವು ಸಂಸಾರಿಜೀವರ ಸುಖಕ್ಕೂ ದುಃಖಕ್ಕೂ ಹಿತಕ್ಕೂ ಅಹಿತಕ್ಕೂ ಬಂಧಕ್ಕೂ ಮೋಕ್ಷಕ್ಕೂ ಸಾವಿಗೂ ಹುಟ್ಟಿಗೂ ಸಂಸಾರಕ್ಕೂ ಕಾರಣವಾಗಿರುವುದು.

ಅಥ ಪ್ರಸಾದಯೇ ನ ತ್ವಾಂ ಶಾಪಮೋಕ್ಷಾಯ ಭಾಮಿನಿ ।
ಯನ್ಮನ್ಯಸೇ ಅಸಾಧೂಕ್ತಂ ಮಮ ತತ್ ಕ್ಷಮ್ಯತಾಂ ಸತಿ ॥ ೨೪ ॥

ಹೇ ಭಾಮಿನಿ = ಸುಂದರಿಯೇ, ಕೋಪಸ್ವಭಾವದವಳೇ, ಸತಿ = ಸತೀ ದೇವಿಯೇ, ಅಥ=ಎಲ್ಲವೂ ಈಶ್ವರಾಧೀನವಾದ್ದರಿಂದ ಶಾಪಮೋಕ್ಷಾಯ = ಶಾಪ ಪರಿಹಾರಕ್ಕಾಗಿ ತ್ವಾಂ=ನಿನ್ನನ್ನು ನ ಪ್ರಸಾದಯೇ=ಪ್ರಸನ್ನೀಕರಿಸಿಕೊಳ್ಳುವುದಿಲ್ಲ. ಪ್ರಸನ್ನಳಾಗೆಂದು ಪ್ರಾರ್ಥಿಸುತ್ತೇನೆ ಆದರೆ ಶಾಪವನ್ನು ಹಿಂತೆಗೆದುಕೊಳ್ಳೆಂದು ಪ್ರಾರ್ಥಿಸುವುದಿಲ್ಲವೆಂದರ್ಥ. ಆದರೆ ಮತ್ತೇನನ್ನು ಅಪೇಕ್ಷಿಸುವೆ? ಎಂದರೆ ಹೇಳು ತ್ತಾರೆ ಯತ್=ಯಾವ ಕಾರಣದಿಂದ ಮಮ=ನನ್ನ ಉಕ್ತಂ=ಹೇಳಿದ ಮಾತನ್ನು ಅಸಾಧು-ಸಾಧುವಲ್ಲವೆಂದು ಮನ್ಯಸೇ=ತಿಳಿಯುವೆಯೋ ತತ್=ಆ ಕಾರಣದಿಂದ ಕ್ಷಮ್ಯತಾಂ=ನನ್ನನ್ನು ಕ್ಷಮಿಸು ಎಂದು ಪ್ರಸನ್ನೀಕರಿಸಿಕೊಳ್ಳುತ್ತೇನೆ ಎಂದರ್ಥ. ನಿನ್ನ ಮನಸ್ಸಿನಲ್ಲಿ ಏತನ್ನಿಮಿತ್ತಕ ಕೋಪವು ಮುಂದುವರಿದಲ್ಲಿ ಜ್ಞಾನಲೋಪರೂಪ ವಾದ ಮಹಾ ಅನರ್ಥವು ಉಂಟಾಗುವುದಾದ್ದರಿಂದ ಪ್ರಸನ್ನಳಾಗೆಂದು ಕೇಳಿಕೊಳ್ಳು ತ್ತೇನೆ ಎಂದು ತಾತ್ಪರ್ಯ. ॥ ೨೪ ॥

ಬಾದರಾಯಣಿರುವಾಚ—

ಇತಿ ಪ್ರಸಾದ್ಯ ಗಿರಿಶೌ ಚಿತ್ರಕೇತುರರಿಂದಮ ।
ಜಗಾಮ ಸ್ವವಿಮಾನೇನ ಪಶ್ಯತೋಃ ಸ್ಮಯತೋಸ್ತಯೋಃ ॥ ೨೫ ॥

ಹೇ ಅರಿಂದಮ -ಶತ್ರುಸಂಹಾರಕ ಪರೀಕ್ಷಿದ್ರಾಜನೇ ಚಿತ್ರಕೇತುವು ಇತಿ= ಮೇಲೆ ಹೇಳಿದಂತೆ ಗಿರಿಶೌ=ಪರಮೇಶ್ವರ ಪಾರ್ವತಿಯರನ್ನು ಪ್ರಸಾದ್ಯ=ಕ್ಷಮಿಸಿ ರೆಂದು ಪ್ರಾರ್ಥಿಸಿ ಸ್ಮಯತೋಃ= ಮುಗುಳುನಗೆ ನಗುತ್ತಿದ್ದ ತಯೋಃ=ಅವರು ಪಶ್ಯತೋಃ (ಸತೋಃ)=ನೋಡುತ್ತಿದ್ದಂತೆಯೇ ತನ್ನ ವಿಮಾನದಿಂದ ಜಗಾಮ= ಹೊರಟುಹೋದನು. ಸ್ಮಯತೋಃ ಎಂಬುದರಿಂದ ಅವರು ಕ್ಷಮಿಸಿದರೆಂದು ತೋರಿಸಿರುವರು. ॥ ೨೫ ॥

ತತಸ್ತು ಭಗವಾನ್ ರುದ್ರೋ ರುದ್ರಾಣೀಮಿದಮಬ್ರವೀತ್ ।
ದೇವರ್ಷಿದೈತ್ಯಸಿದ್ಧಾನಾಂ ಪಾರ್ಷದಾನಾಂ ಚ ಶೃಣ್ವತಾಮ್ ॥

ಆದ್ದರಿಂದ ಶಾಪಮೋಕ್ಷಕ್ಕಾಗಿ ಪ್ರಸನ್ನಳಾಗೆಂದು ನಿನ್ನನ್ನು ನಾನು ಪ್ರಾರ್ಥಿಸುವುದಿಲ್ಲ. ನಾನಾಡಿದ ಮಾತುಗಳನ್ನು ಅಸಾಧುವೆಂದು ನೀನು ಬಗೆದಿರುವೆ. ದೇವಿ! ಅದನ್ನು ಕ್ಷಮಿಸು' ಎಂದು ಬೇಡಿಕೊಂಡನು.

ಹೀಗೆ ಗೌರೀಶಂಕರರನ್ನು ಪ್ರಸನ್ನರನ್ನಾಗಿ ಮಾಡಿಕೊಂಡು, ಪರೀಕ್ಷಿದ್ರಾಜ! ಆ ಚಿತ್ರಕೇತುವು ನಗುತ್ತಿದ್ದ ಅವರು ನೋಡುತ್ತಿದ್ದಂತೆ ತನ್ನ ವಿಮಾನದಲ್ಲಿ ಕುಳಿತು ಹೊರಟುಹೋದನು.

ಅನಂತರ ಪೂಜ್ಯರಾದ ರುದ್ರದೇವರು ದೇವತೆಗಳೂ ಋಷಿಗಳೂ ದೈತ್ಯರೂ

ತತಃ=ಅನಂತರ ಪೂಜ್ಯರಾದ ರುದ್ರದೇವರಾದರೋ ದೇವತೆಗಳೂ ಋಷಿಗಳೂ ದೈತ್ಯರೂ ಸಿದ್ಧರೂ ಪಾರ್ಷದಾನಾಂ ಚ=ದ್ವಾರಪಾಲಕರೂ ಶೃಣ್ವತಾಂ (ಸತಾಂ)=ಕೇಳುತ್ತಿದ್ದಂತೆಯೇ ರುದ್ರಾಣೀಂ=ಭವಾನಿಯನ್ನು ಕುರಿತು ಇದಂ=ಮುಂದೆ ಹೇಳುವ ಮಾತನ್ನು ಅಬ್ರವೀತ್=ಹೇಳಿದರು. ಶೃಣ್ವತಾಂ ಎಂದು ಹೇಳಿದ್ದರಿಂದ ಇದು ಏಕಾಂತದಲ್ಲಿ ಹೇಳಿದ ಮಾತಲ್ಲ. ಸಭೆಯಲ್ಲಿ ಎಲ್ಲರಿಗೂ ಕೇಳಿಸುವಂತೆ ಹೇಳಿದ್ದು ಎಂದು ತಿಳಿಸಿರುವರು. || ೨೬ ||

ದೇವದೇವ ಉವಾಚ—

ದೃಷ್ಟವತ್ಯಸಿ ಸುಶ್ರೋಣಿ ಹರೇರದ್ಭುತಕರ್ಮಣಃ ।
ಮಾಹಾತ್ಮ್ಯಂ ಭೃತ್ಯಭೃತ್ಯಾನಾಂ ನಿಃಸ್ಪೃಹಾಣಾಂ ಮಹಾತ್ಮನಾಮ್ || ೨೭ ||

ಹೇ ಸುಶ್ರೋಣಿ=ಸುಂದರವಾದ ಕಟಿಪಶ್ಚಾದ್ಭಾಗಗಳುಳ್ಳ ಸುಂದರಿಯೇ, ನಿಃಸ್ಪೃಹಾಣಾಂ=ಶ್ರೀಹರಿಯನ್ನು ಬಿಟ್ಟು ಮತ್ತಾವುದನ್ನೂ ಅಪೇಕ್ಷಿಸದಿರುವ ಆದ್ದರಿಂದಲೇ ಮಹಾತ್ಮನಾಂ=ಮಹನೀಯರಾದ ಅದ್ಭುತ ಕರ್ಮಣಃ=ಆಶ್ಚರ್ಯಕರವಾದ ಕೆಲಸಗಳನ್ನು ಮಾಡುವ ಶ್ರೀಹರಿಯ ಭೃತ್ಯಭೃತ್ಯಾನಾಂ=ಸೇವಕರ ಸೇವಕರಾದ (ತಾರತಮ್ಯದಲ್ಲಿ ಕೆಳಗಿನ) ಭಕ್ತರ ಮಾಹಾತ್ಮ್ಯಂ=ದೇಹವು ಹೋಗುವ ಅವಸ್ಥೆ ಬಂದರೂ ಹೆದರದಿರುವುದೆಂಬ ಮಹಿಮೆಯನ್ನು ದೃಷ್ಟವತೀ=ನೋಡಿದವಳು ಅಸಿ=ಆಗಿರುವೆಯಾ! ಭೃತ್ಯಭೃತ್ಯಾನಾಂ ಎಂದು ಹೇಳಿದ್ದರಿಂದ ಕೆಳಗಣ ಭಕ್ತರೇ ಹೀಗಿರುವಾಗ ಉತ್ತಮ ಭಕ್ತರದು ಹೇಳತಕ್ಕದ್ದೇನು ಎಂದು ಕೈಮುತ್ಯವನ್ನು ಹೇಳಿರುವರು. || ೨೭ ||

ನಾರಾಯಣಪರಾಃ ಸರ್ವೇ ನ ಕುತಶ್ಚನ ಬಿಭ್ಯತಿ ।
ಸ್ವರ್ಗಾಪವರ್ಗನರಕೇಷ್ವಪಿ ತುಲ್ಯಾರ್ಥದರ್ಶಿನಃ || ೨೮ ||

ಇವನೊಬ್ಬನ ಮಹಿಮೆ ಮಾತ್ರ ಹೀಗಲ್ಲ. ಇನ್ನೂ ಇತರ ಭಕ್ತರ ಮಹಿಮೆಯೂ ಹೀಗೆಯೇ ಇದೆ ಎಂದು ಹೇಳುತ್ತಾ ನಾರಾಯಣಪರಾಃ=ಶ್ರೀಹರಿಯಲ್ಲಿಯೇ ಆಸಕ್ತರಾದ ಸರ್ವೇ=ಎಲ್ಲರೂ ಕುತಶ್ಚನ=ಯಾವ ಕಾರಣದಿಂದಲೂ ನ ಬಿಭ್ಯತಿ=ಹೆದರುವುದಿಲ್ಲ. ಏಕೆ ಹೆದರುವುದಿಲ್ಲವೆಂದರೆ ಹೇಳುತ್ತಾರೆ. ಸ್ವರ್ಗ=ಸ್ವರ್ಗದಲ್ಲಿಯೂ ಅಪವರ್ಗ=(೧) ಮೋಕ್ಷದಲ್ಲಿಯೂ (೨) ಜೀವನ್ಮುಕ್ತಿಯಲ್ಲಿಯೂ

ಸಿದ್ಧರೂ ದ್ವಾರಪಾಲಕರೂ ಕೇಳುತ್ತಿದ್ದಂತೆ ರುದ್ರಾಣಿಯನ್ನು ಕುರಿತು 'ಸುಶ್ರೋಣಿ, ಅದ್ಭುತಕರ್ಮನಾದ ಶ್ರೀಹರಿಯ ಭೃತ್ಯರ ಭೃತ್ಯಮಹಿಮೆಯನ್ನು ನೋಡಿದೆಯಲ್ಲವೆ? ಅವರಿಗೆ ಶ್ರೀಹರಿಯ ವಿನಹ ಮತ್ತೊಂದರಲ್ಲಿ ಆಸೆಯಿಲ್ಲ. ಆದ್ದರಿಂದಲೇ ಮಹನೀಯರವರು. ಅವರೆಲ್ಲರೂ ಶ್ರೀಹರಿಯಲ್ಲಿಯೇ ಆಸಕ್ತರು. ಯಾವ ಕಾರಣದಿಂದಲೂ ಹೆದರುವವರಲ್ಲ. ಸ್ವರ್ಗ ಜೀವನ್ಮುಕ್ತಿ ನರಕಗಳೆಲ್ಲ ನಶ್ವರ ಪ್ರಯೋಜನ

ನರಕೇಷು ಅಪಿ=ನರಕಗಳಲ್ಲಿಯೂ ತುಲ್ಯಾರ್ಥದರ್ಶಿನಃ=ಸಮಾನವಾದ (ನಶ್ವರವಾದ) ಪ್ರಯೋಜನವೆಂದು ತಿಳಿಯುವ ಸ್ವಭಾವದವರು. ಸ್ವರ್ಗ-ನರಕಗಳು ಹಾಗಿರಬಹುದು. ಅಪವರ್ಗವು ಶಾಶ್ವತವಾದ ದುಃಖರಹಿತ ಸುಖವಾದ್ದರಿಂದ ಅದನ್ನು ಇವುಗಳಿಗೆ ಸಮಾನ ಪ್ರಯೋಜನವಾಗಿ ಹೇಗೆ ಕಾಣುವರು? ಎಂಬುದಕ್ಕೆ ಉತ್ತರವನ್ನು 'ನಾರಾಯಣಪರಾಃ' ಎಂಬುದರಿಂದ ತಿಳಿಸಿರುವರು. ನಾರಾಯಣನೇ ಅವರಿಗೆ ಪರಮ ಪುರುಷಾರ್ಥ. ಮೋಕ್ಷದಲ್ಲಿಯೂ ಸ್ವರ್ಗದಲ್ಲಿದ್ದಂತೆ ಅವರಿಗೆ ಆದರವಿಲ್ಲವೆಂದು ಅಭಿಪ್ರಾಯ. ಜೀವನ್ಮುಕ್ತಿ ಎಂಬ ಅರ್ಥದಲ್ಲಿ ಈ ಬಗೆಯ ಶಂಕೆಗೂ ಅವಕಾಶವಿಲ್ಲ. ಶ್ರೀಹರಿಯು ಕೊಟ್ಟದ್ದು ಎಂದು ಯಾವುದನ್ನೂ ಸಂತೋಷದಿಂದ ಅನುಭವಿಸುವರೆಂದು ತಾತ್ಪರ್ಯ. || ೨೮ ||

ದೇಹಿನಾಂ ದೇಹಸಂಯೋಗಾದ್ದ್ವಂದ್ವಾನೀಶ್ವರಲೀಲಯಾ |
ಸುಖಂ ದುಃಖಂ ಮೃತಿರ್ಜನ್ಮ ಶಾಪೋಽನುಗ್ರಹ ಏವ ಚ || ೨೯ ||

ಶ್ರೀಹರಿಯ ಇಚ್ಛಾರೂಪವಾದ ಕ್ರೀಡೆಯಿಂದ ದೇಹಿನಾಂ=ಜೀವರಿಗೆ ದೇಹ-ಸಂಯೋಗಾತ್=ಸ್ಥೂಲದೇಹಸಂಬಂಧದಿಂದ ಸುಖ, ದುಃಖ, ಸಾವು, ಹುಟ್ಟು, ಶಾಪ ಮತ್ತು ಅನುಗ್ರಹಗಳೇ ಎಂಬ ದ್ವಂದ್ವಾನಿ=ದ್ವಂದ್ವಗಳು (ಭವಂತಿ)=ಆಗುವುವು. ಈಶ್ವರಲೀಲಯಾ ಎಂದು ಹೇಳಿದ್ದರಿಂದ ಈಶ್ವರೇಚ್ಛಾ ಕ್ಲುಪ್ತವಾದ್ದರಿಂದ ಅಪರಿಹಾರ್ಯವೆಂದು ಅವರು ಅದಕ್ಕಾಗಿ ಹೆದರುವುದಿಲ್ಲವೆಂದು ತಿಳಿಸಿದಂತಾಯಿತು. || ೨೯ ||

ಅವಿವೇಕಕೃತಃ ಪುಂಸೋ ಹ್ಯರ್ಥಭೇದ ಇಹಾತ್ಮನಿ |
ಗುಣದೋಷವಿಕಲ್ಪಶ್ಚ ಭಿದೇವ ಸ್ವಪ್ನಕಲ್ಪಿತಾ || ೩೦ ||

(೧) ದೇಹಸಂಬಂಧದಿಂದ ಜೀವನಿಗೆ ದ್ವಂದ್ವಗಳು ಬರಲಿ. ನಾಯಿ ನರಿ ಮೊದಲಾದ ಆಕಾರಗಳಿಂದ ಭೇದವು ಹೇಗೆ ಬಂತು? ಎಂದರೆ ಹೇಳುತ್ತಾರೆ. ಇಹ=ಪ್ರಪಂಚದಲ್ಲಿ ಆತ್ಮನಿ=ಜೀವರಲ್ಲಿ ಅರ್ಥಭೇದಃ=ಇದು ನಾಯಿ ಇದು ನರಿ ಎಂಬ ಆಕಾರ ನಿಮಿತ್ತ ವ್ಯವಹಾರಭೇದವೂ ಚ=ಮತ್ತು ಆತ್ಮನಿ=ಜೀವರಲ್ಲಿ ಗುಣದೋಷವಿಕಲ್ಪಃ=ಈ ಗುಣವಿದೆ ಈ ದೋಷವಿದೆಯೆಂಬ ವಿವಿಧಕಲ್ಪವೂ ಸ್ವಪ್ನ-ಕಲ್ಪಿತಾ=ಸ್ವಪ್ನಾವಸ್ಥೆಯಲ್ಲಿ ಮನಸ್ಸಿನ ಸಂಸ್ಕಾರ (ವಾಸನೆ) ವನ್ನೇ ಉಪಾದಾನವಾಗಿಟ್ಟುಕೊಂಡು ಬಂದ ಆನೆ ಮೊದಲಾದುವೆಂಬ ವ್ಯವಹಾರ ಭೇದದಂತೆ ಹಿ=ಯಾವ ಕಾರಣದಿಂದ ಪುಂಸಃ=ಚೇತನನ ಅವಿವೇಕಕೃತಃ=ಶ್ರೀಹರಿಯ ಮತ್ತು ತನ್ನ ಸ್ವರೂಪ ವಿಷಯಜ್ಞಾನವಿಲ್ಲದ ಪ್ರಯುಕ್ತ ಬಂದದ್ದೋ ಆ ಕಾರಣದಿಂದ

ಗಳೆಂದು ತಿಳಿದವರವರು. ಅಷ್ಟೇ ಏಕೆ? ಮೋಕ್ಷವೂ ಅವರಿಗೆ ಆದರಣೀಯವಲ್ಲ. ಶ್ರೀಹರಿಯ ಇಚ್ಛೆಯಿಂದ ಜೀವರಿಗೆ ಸ್ಥೂಲದೇಹಸಂಬಂಧವೂ ಸುಖ, ದುಃಖ, ಹುಟ್ಟು-ಸಾವು, ಶಾಪಾನುಗ್ರಹಗಳೆಂಬ ದ್ವಂದ್ವಗಳು ಸಂಭವಿಸುವುವು. ಈ ಲೋಕ

ಈ ಅನರ್ಥ ಪರಂಪರೆಯು ಉಂಟಾಗಿರುವುದೆಂದು ಅನ್ವಯ. ಸ್ವಪ್ನದಲ್ಲಿ ಹೇಗೆ ಗಜತುರಗಾದಿಗಳು ಅನಿತ್ಯಗಳೋ ಹಾಗೆ ನಾಯಿ ನರಿ ಮುಂತಾದ ವ್ಯವಹಾರಗಳು ಆಯಾಯಾ ದೇಹಕ್ಕೆ ಸಂಬಂಧಿಸಿದ್ದು ಅನಿತ್ಯಗಳೆಂದು ತಿಳಿಸಲು ಈ ಹೋಲಿಕೆ ಯನ್ನು ಕೊಟ್ಟಿರುವರೇ ಹೊರತು ಸುಳ್ಳು ಎಂದು ತಿಳಿಸುವುದಕ್ಕಲ್ಲ; ಸುಳ್ಳಾಗಿದ್ದಲ್ಲಿ ಅರ್ಥಕ್ರಿಯಾಕಾರಿತ್ವವು ಕೂಡುತ್ತಿರಲಿಲ್ಲ. (೨) ಮೇಲಿನ ಶ್ಲೋಕದಲ್ಲಿ ಹೇಳಿದ ಈಶ್ವರನೇ ಸುಖಾದಿಕರ್ತನೆಂಬ ಮಾತು ಯುಕ್ತವಲ್ಲ. ದೇವದತ್ತನು ಸುಖಪಡಿಸು ತ್ತಾನೆ; ಯಜ್ಞದತ್ತನು ದುಃಖಪಡಿಸುತ್ತಾನೆ ಎಂದು ಜೀವರಿಗೇ ಕರ್ತೃತ್ವವು ವ್ಯವಹಾರದಲ್ಲಿ ಕಂಡು ಬರುತ್ತಿರುವುದು. ಎಂದು ಶಂಕಿಸಿದರೆ ಆ ವ್ಯವಹಾರವು ಭ್ರಾಂತಿ ಮೂಲಕವೆಂದು ಹೇಳುತ್ತಾರೆ. ಪುಂಸಃ–ಜೀವರಿಗೆ ಆತ್ಮನಿ–ಜೀವರಲ್ಲಿ ಅರ್ಥಭೇದಃ = ಪರಮಾತ್ಮಕರ್ತೃಕ ಸುಖಾದಿಗಳ ವೈಲಕ್ಷಣ್ಯವು ಅಂದರೆ ಅವು ಜೀವಕರ್ತೃಕಗಳೆಂದು ತಿಳಿಯುವುದು ಅವಿವೇಕ ಕೃತಃ ಹಿ=ಭ್ರಾಂತಿಕಲ್ಪಿತವಷ್ಟೆ! ಈಶ್ವರ ಕರ್ತೃಕ ಗುಣದೋಷಗಳ ಅಂದರೆ ಸುಖದುಃಖ ಕಾರಣಗಳಾದ ಪುಣ್ಯ ಪಾಪಗಳನ್ನು ಜೀವನೇ ಸ್ವತಂತ್ರನಾಗಿ ಮಾಡಿದನೆಂದು ತಿಳಿಯುವುದೂ ಭ್ರಾಂತಿ ಯಿಂದಲೇ. ಇದಕ್ಕೆ ಉದಾಹರಣೆ ಆತ್ಮನಿ=ಮನಸ್ಸಿನಲ್ಲಿ (ವಿದ್ಯಮಾನೇ) ವಾಸನಾ ಮಯವಾಗಿ ಇರುತ್ತಿರಲು ಭಿದಾ=ಅವು ವಾಸನಾಮಯಗಳಲ್ಲ. ಬಾಹ್ಯವಸ್ತುಗಳೇ ಎಂದು ತಿಳಿಯುವುದು ಸ್ವಪ್ನಾವಸ್ಥೆಯಲ್ಲಿ ಕಲ್ಪಿತಾ ಇವ=ಹೇಗೆ ಭ್ರಾಂತಿಯೋ ಹಾಗೆ ಎಂದರ್ಥ. ಈ ಎರಡನೆಯ ಅರ್ಥದಲ್ಲಿ ೨೦ನೆಯ ಪದ್ಯದಲ್ಲಿ ಹೇಳಿದ ಪ್ರಮಾಣವನ್ನು ಇಲ್ಲಿಯೂ ಪ್ರಮಾಣವಾಗಿ ತೆಗೆದುಕೊಳ್ಳಬೇಕು. || ೩೦ ||

ವಾಸುದೇವೇ ಭಗವತಿ ಭಕ್ತಿಮುದ್ವಹತಾಂ ನೃಣಾಮ್ ।
ಜ್ಞಾನವಿಜ್ಞಾನವೀರ್ಯಾಣಾಂ ನಹಿ ಕಶ್ಚಿದ್ವ್ಯಪಾಶ್ರಯಃ ॥ ೩೧ ॥

ಹಾಗಾದರೆ ಈ ಅನರ್ಥದ ನಿವೃತ್ತಿಗೆ ಸಾಧನವೇನು? ಎಂದರೆ ಹೇಳುತ್ತಾರೆ. ಭಗವಂತನಾದ ವಾಸುದೇವನಲ್ಲಿ ಭಕ್ತಿಯನ್ನು ಉದ್ವಹತಾಂ–ಹೊಂದಿರುವ ಆದ್ದರಿಂದಲೇ ಜ್ಞಾನ ಮತ್ತು ವಿಜ್ಞಾನಗಳೇ ವೀರ್ಯ (ಸಾಮರ್ಥ್ಯ) ಗಳಾಗಿಯುಳ್ಳ ನೃಣಾಂ=ಜೀವರಿಗೆ ಕಶ್ಚಿತ್ = ಮತ್ತೊಂದು ವ್ಯಪಾಶ್ರಯಃ = ವಿಶೇಷವಾಗಿ ಆಶ್ರಯಿಸುವ ವಸ್ತುವು ನಹಿ=ಇಲ್ಲವು. ಭಕ್ತಿಜ್ಞಾನಗಳೇ ವಿಶೇಷವಾಗಿ ಅಪೇಕ್ಷಣೀಯ ಗಳು ಎಂದು ಸೇರಿಸಿಕೊಳ್ಳಬೇಕು. ಅದೇ ಅನರ್ಥನಿವೃತ್ತಿಗೆ ಸಾಧನ. || ೩೧ ||

ದಲ್ಲಿ ಜೀವರು ಬೇರೆಬೇರೆ ವಿವಿಧಯೋನಿಗಳಲ್ಲಿ ಬಂದು ವಿವಿಧಾಕಾರ ನಿಮಿತ್ತ ವ್ಯವಹಾರ ಭೇದವನ್ನು ಹೊಂದುವರು. ಗುಣವಂತರು ದುಷ್ಟರು ಎಂಬ ವ್ಯವಹಾರಕ್ಕೆ ವಿಷಯರಾಗುವರು. ಇವೆಲ್ಲ ಸ್ವಪ್ನಾವಸ್ಥೆಯಲ್ಲಿ ಮನೋವಾಸನಾಮಯಗಳಾದ ಗಜತುರಗಾದಿಗಳಂತೆ ಅನಿತ್ಯಗಳು. ಇವಕ್ಕೆ ಕಾರಣ ಜೀವರಿಗೆ ಶ್ರೀಹರಿಯ ಮತ್ತು ತಮ್ಮ ಸ್ವರೂಪ ವಿಷಯ ಜ್ಞಾನವಿಲ್ಲದಿರುವುದು. ಸರ್ವತ್ರ ವ್ಯಾಪ್ತನಾದ ಶ್ರೀಹರಿಯಲ್ಲಿ

*

ನಾಹಂ ವಿರಿಂಚೋ ನ ಕುಮಾರನಾರದೌ
ನ ಬ್ರಹ್ಮಪುತ್ರಾ ಮುನಯಃ ಸುರೇಶಾಃ ।
ವಿದಾಮ ಯಸ್ಯೇಹಿತಮಂಶಕಾಂಶಕಾ
ನ ತತ್ಸ್ವರೂಪಂ ಪೃಥಗೀಶಮಾನಿನಃ ॥ ೩೨ ॥

ದೇವದತ್ತನನ್ನು (ಜೀವನನ್ನು) ತಿಳಿಯುವಂತೆ ಈ ಶ್ರೀಹರಿಯನ್ನು ತಿಳಿಯುವುದು ಅಷ್ಟು ಸುಲಭವಲ್ಲವೆಂದು ಹೇಳುತ್ತಾರೆ. ಅಂಶಕಾಂಶಕಾಃ = ಶ್ರೀಹರಿಯ ಪ್ರತಿಬಿಂಬರಿಗೂ ಪ್ರತಿಬಿಂಬರಾದ ಪೃಥಕ್ = ತಾರತಮ್ಯಾನುಗುಣವಾಗಿ ಒಬ್ಬೊಬ್ಬರೂ ಈಶಮಾನಿನಃ = ಲೋಕೇಶರೆಂದು ಅಭಿಮಾನವುಳ್ಳ ಸುರೇಶಾಃ= ದೇವಶ್ರೇಷ್ಠರಾದ ನಾವೆಲ್ಲರೂ ಬ್ರಹ್ಮಪುತ್ರಾಃ=ಬ್ರಹ್ಮದೇವರ ಮಕ್ಕಳಾದ ಸನಕಾದಿಗಳೂ ಮುನಯಃ=ಇತರ ಋಷಿಗಳೂ ಯಸ್ಯ=ಯಾವ ಈ ಶ್ರೀಹರಿಯ ಈಹಿತಂ= ಅಭಿಪ್ರಾಯವನ್ನು ಲೀಲೆಯನ್ನು ತತ್ಸ್ವರೂಪಂ=ಆ ಶ್ರೀಹರಿಯ ಸ್ವರೂಪವನ್ನೂ ನ ವಿದಾಮ=ತಿಳಿಯಲಾರೆವು. ಅದನ್ನೇ ಬಿಡಿಸಿ ಹೇಳುತ್ತಾರೆ. ಅಹಂ=ರುದ್ರನಾದ ನಾನು ನ (ವೇದ್ಮಿ) = ತಿಳಿದಿಲ್ಲ. ವಿರಿಂಚಃ = ಬ್ರಹ್ಮದೇವರು ನ (ವೇತ್ತಿ) = ಸಾಕಲ್ಯೇನ ತಿಳಿದಿಲ್ಲ. ಕುಮಾರ ನಾರದರೂ ನ (ವಿತ್ತಃ)= ತಿಳಿದಿಲ್ಲ. ಇಂತಹ ಮಹಿಮೋಪೇತ ಶ್ರೀಹರಿಯ ದಾಸನಾದ ಈ ಚಿತ್ರಕೇತುವಿನಲ್ಲಿ ಇದೇನೂ ಆಶ್ಚರ್ಯವಲ್ಲವೆಂದು ಅಭಿಪ್ರಾಯ. ॥ ೩೨ ॥

ನ ಹ್ಯಸ್ಯಾತಿಪ್ರಿಯಃ ಕಶ್ಚಿತ್ ನಾಪ್ರಿಯಃ ಸ್ವಃ ಪರೋಽಪಿ ವಾ ।
ಆತ್ಮತ್ವಾತ್ಸರ್ವಭೂತಾನಾಂ ಸರ್ವಭೂತಪ್ರಿಯೋ ಹರಿಃ ॥ ೩೩ ॥

ಅಸ್ಯ= ಈ ಶ್ರೀಹರಿಗೆ ಕಶ್ಚಿತ್=ಯಾವ ಜೀವನೂ ಅತಿ=ಯೋಗ್ಯತೆಯನ್ನು ಅತಿಕ್ರಮಿಸಿ ಪ್ರಿಯನಲ್ಲವು. (ಅತಿ) ಅಪ್ರಿಯಃ = ಯೋಗ್ಯತೆಯನ್ನು ಮೀರಿ ದ್ವೇಷಿಯೂ ನ=ಇಲ್ಲ. ವಾ=ಮತ್ತು ಸ್ವಃ=ತನ್ನವನು ಪರಃ ಅಪಿ=ಇತರನು ಎಂದೂ ನ=ಇಲ್ಲ. ಸರ್ವಭೂತಾನಾಂ=ಎಲ್ಲ ಪ್ರಾಣಿಗಳ ಆತ್ಮತ್ವಾತ್=ಸ್ವಾಮಿಯಾದ್ದರಿಂದ ಹರಿಃ=ಶ್ರೀಹರಿಯು ಸರ್ವಜೀವ ಪ್ರಿಯನು. ಸರ್ವಭೂತ ಸ್ವಾಮಿಯಾದವನಿಗೆ ಸ್ವ-ಪರಭೇದಕಲ್ಪನೆಯು ಯುಕ್ತವಲ್ಲ, ಇದಕ್ಕೇ ಮತ್ತೊಂದು ಕಾರಣ

ಭಕ್ತಿಯುಳ್ಳ ಜೀವರಿಗೆ – ಜ್ಞಾನವಿಜ್ಞಾನಗಳೇ ವೀರ್ಯವಾಗಿ ಉಳ್ಳವರಿಗೆ – ಇವುಗಳನ್ನು ಬಿಟ್ಟು ಬೇರೊಂದರ ಅಪೇಕ್ಷೆಯಿಲ್ಲ. ಶ್ರೀಹರಿಯ ಪ್ರತಿಬಿಂಬರೂ ತಾರತಮ್ಯಕ್ಕೆ ತಕ್ಕಂತೆ ಲೋಕೇಶರೆಂಬ ಅಭಿಮಾನವುಳ್ಳವರೂ ಆದ ದೇವತೆಗಳಾದ ನಾವೆಲ್ಲರೂ, ಸನಕಾದಿಗಳೂ, ಋಷಿಗಳೂ ಶ್ರೀಹರಿಯ ಲೀಲೆಯನ್ನು – ಅವನ ಸ್ವರೂಪವನ್ನು – (ಸಂಪೂರ್ಣವಾಗಿ) ತಿಳಿದಿಲ್ಲ. ರುದ್ರನಾದ ನಾನೂ ಬ್ರಹ್ಮದೇವರೂ ಸಾಕಲ್ಯೇನ ತಿಳಿದಿಲ್ಲ. ಶ್ರೀಹರಿಗೆ ಯೋಗ್ಯತೆ ಮೀರಿ ಯಾವನೂ ಪ್ರಿಯನಲ್ಲ, ಅಪ್ರಿಯನೂ ಅಲ್ಲ. ತನ್ನವನು ಇತರನೆಂದಿಲ್ಲ. ಅವನು ಎಲ್ಲ ಜೀವರ ಸ್ವಾಮಿ.

ಸರ್ವಭೂತಪ್ರಿಯನೆಂಬುದು. ಎಲ್ಲ ಜೀವರೂ ಶ್ರೀಹರಿಯನ್ನು ಪ್ರೀತಿಸುವುದಿಲ್ಲ ವೆಂಬುದನ್ನೂ ಇದರಿಂದ ತಿಳಿಸಿರುವರು. || ೩೩ ||

ತಸ್ಯ ಚಾಯಂ ಮಹಾಭಾಗಶ್ಚಿತ್ರಕೇತುಃ ಪ್ರಿಯೋಽನುಗಃ ।
ಸರ್ವತ್ರ ಸಮದೃಕ್ ಶಾಂತೋ ಹ್ಯಹಂ ಚೈವಾಚ್ಯುತಪ್ರಿಯಃ ॥

ಅಯಂ = ಈ ಮಹಾಭಾಗಃ = ಪುಣ್ಯಶಾಲಿಯಾದ ಚಿತ್ರಕೇತುವಾದರೋ ತಸ್ಯ=ಅಂತಹ ಮಹಿಮೋಪೇತ ಶ್ರೀಹರಿಯ ಪ್ರಿಯಃ=ಪ್ರೀತಿಪಾತ್ರನಾದ ಅನುಗಃ= ಸೇವಕನು. ಸರ್ವತ್ರ=ಎಲ್ಲ ವಿಷಯದಲ್ಲೂ ಸಮದೃಕ್ =ನಿರ್ದೋಷನಾದ ಶ್ರೀಹರಿಯೇ ಕಾರಣನೆಂದು ತಿಳಿದವನು; ಆದ್ದರಿಂದಲೇ ಶಾಂತಃ = ಭಗವನ್ನಿಷ್ಠ ಬುದ್ಧಿಯುಳ್ಳವನು. ಅಚ್ಯುತಪ್ರಿಯಃ=ಶ್ರೀಹರಿಯನ್ನು ಪ್ರೀತಿಸುವ ಅಹಂ ಚ ಏವ=ನಾನೂ ಕೂಡ ಸಮದೃಕ್ ಮತ್ತು ಶಾಂತನು. ಹಿ=ಇದು ಶಾಸ್ತ್ರಸಿದ್ಧ. ಆದ್ದರಿಂದಲೇ ಇವನ ಮೇಲೆ ನಾನು ಕೋಪ ಮಾಡಲಿಲ್ಲವೆಂದು ಭಾವ. || ೩೪ ||

ತಸ್ಮಾನ್ನ ವಿಸ್ಮಯಃ ಕಾರ್ಯಃ ಪುರುಷೇಷು ಮಹತ್ಸು ಚ ।
ಮಹಾಪುರುಷಭಕ್ತೇಷು ಶಾಂತೇಷು ಸಮದರ್ಶಿಷು ॥ ೩೫ ॥

ತಸ್ಮಾತ್ = ಆದ್ದರಿಂದ ಮಹತ್ಸು ಪುರುಷೇಷು = ಉತ್ತಮ ಜೀವರಲ್ಲಿಯೂ ಶಾಂತರೂ ಸಮದರ್ಶಿಗಳೂ ಆದ ಶ್ರೀಹರಿಯ ಭಕ್ತರಲ್ಲಿಯೂ ವಿಸ್ಮಯಃ = ಶಾಪ ಕೊಟ್ಟರೂ ಸಿಟ್ಟಾಗಲಿಲ್ಲವೆಂದು ಆಶ್ಚರ್ಯವನ್ನು ನ ಕಾರ್ಯಃ=ಪಡಬೇಕಾಗಿಲ್ಲ. || ೩೫ ||

ಶ್ರೀ ಶುಕ ಉವಾಚ—

ಇತಿ ಶ್ರುತ್ವಾ ಭಗವತಃ ಶಿವಸ್ಯೋಮಾಽಭಿಭಾಷಿತಮ್ ।
ಬಭೂವ ಶಾಂತಧೀಃ ರಾಜನ್ ದೇವೀ ವಿಗತವಿಸ್ಮಯಾ ॥ ೩೬ ॥

ಪರೀಕ್ಷಿದ್ರಾಜನೇ, ಪೂಜ್ಯರಾದ ರುದ್ರದೇವರ ಇತಿ=ಮೇಲೆ ಹೇಳಿದ ಅಭಿ- ಭಾಷಿತಂ = ಪ್ರಮೇಯ ಪೂರ್ಣವಾದ ಮಾತನ್ನು ಕೇಳಿ ಉಮಾ ದೇವಿಯವರು

ಆದ್ದರಿಂದ ಎಲ್ಲ ಜೀವರನ್ನೂ ಪ್ರೀತಿಸುವನು. (ಆದರೆ ಎಲ್ಲ ಜೀವರೂ ಅವನನ್ನು ಪ್ರೀತಿಸುವುದಿಲ್ಲ.) ಈ ಚಿತ್ರಕೇತು ಅವನ ಭಕ್ತ. ಪ್ರಿಯನಾದ ಅನುಚರ. ಆದ್ದರಿಂದ ಮಹಾಭಾಗ್ಯಶಾಲಿ. ಎಲ್ಲೆಡೆಯಲ್ಲಿಯೂ ನಿರ್ದೋಷನಾದ ಶ್ರೀಹರಿಯನ್ನು ನೋಡುವನು. ಶಾಂತನು, ನಾನೂ ಅಚ್ಯುತಪ್ರಿಯನು. ಆದ್ದರಿಂದ ಸರ್ವೋತ್ತಮನ ಭಕ್ತರೂ ಶಾಂತರೂ ಸಮದರ್ಶಿಗಳೂ ಆದ ಮಹಾಪುರುಷರು ಶಾಪಕ್ಕೂ ಸಿಟ್ಟಿಗೇಳ ಲಿಲ್ಲವೆಂದು ಆಶ್ಚರ್ಯಪಡಬೇಕಾಗಿಲ್ಲ' ಎಂದು ನುಡಿದರು.

ಪೂಜ್ಯರಾದ ರುದ್ರದೇವರ ಈ ತತ್ವಪೂರ್ಣ ಮಾತುಗಳನ್ನು ಕೇಳಿ ಉಮಾ ದೇವಿಯು ಆಶ್ಚರ್ಯರಹಿತರಾಗಿ ಶ್ರೀಹರಿಯನ್ನೇ ಧ್ಯಾನಿಸುವರಾದರು.

ವಿಗತವಿಸ್ಮಯಾ (ಸತೀ)=ಆಶ್ಚರ್ಯರಹಿತರಾಗಿ ಶಾಂತಧೀಃ=ಇವೆಲ್ಲಕ್ಕೂ ಕಾರಣನಾದ ಶ್ರೀಹರಿಯನ್ನೇ ಧ್ಯಾನಿಸುವರಾಗಿ ಬಭೂವ=ಆದರು. || ೩೬ ||

ಇತಿ ಭಾಗವತೋ ದೇವ್ಯಾಃ ಪ್ರತಿಶಪ್ತುಮಲಂತಮಃ ।
ಮೂರ್ಧ್ನಾ ಸಂಜಗೃಹೇ ಶಾಪಮೇತಾವತ್ಸಾಧುಲಕ್ಷಣಮ್ || ೩೭ ||

'ಅಥ ಪ್ರಸಾದಯೇ ನ ತ್ವಾಂ ಶಾಪಮೋಕ್ಷಾಯ ಭಾಮಿನಿ' ಎಂಬುದಕ್ಕೆ ನಾಲ್ಕು ರೀತಿಯಲ್ಲಿ ಅರ್ಥ ಹೇಳಲು ಬರುವುದು (೧) ಶಾಪವು ಇಷ್ಟವಾದ್ದರಿಂದ ಅದರ ಬಿಡುಗಡೆಗಾಗಿ ಪ್ರಸನ್ನೀಕರಿಸಿಕೊಳ್ಳದಿರುವುದು. ೨) ಶಾಪವು ಅನಿಷ್ಟವಾದರೂ ಅನಿರೀಕ್ಷಿತವಾಗಿ ಬಂದಿದೆಯಾದ್ದರಿಂದ ಅಭಿಮತವೇ ಎಂದಿಟ್ಟುಕೊಂಡು ೩) ಶಾಪವನ್ನು ಪರಿಹರಿಸಿಕೊಳ್ಳುವಲ್ಲಿ ಸಮರ್ಥನೆಂದು ೪) ಅಥವಾ ಪ್ರತಿಯಾಗಿ ಶಾಪಕೊಡಲು ಸಮರ್ಥನೆಂದು ತಿಳಿದುಕೊಂಡು. ಈ ನಾಲ್ಕರಲ್ಲಿ ಇವನು ಅಂಗೀಕರಿಸಿದ ಪಕ್ಷವಾವುದು? ಎಂದರೆ ಹೇಳುತ್ತಾರೆ. ದೇವ್ಯಾಃ=ಪಾರ್ವತಿಯ ಪ್ರತಿಶಪ್ತುಂ=ಶಾಪಕ್ಕೆ ಪ್ರತಿ ಶಾಪಕೊಡಲು ಅಲಂತಮಃ=ಅತ್ಯಂತ ಸಮರ್ಥನಾದರೂ ಭಾಗವತಃ=ಭಗವದ್ಭಕ್ತನಾದ ಚಿತ್ರಕೇತುವು ಇತಿ ಶಾಪಂ=ಪಾರ್ವತೀದೇವಿಯು ಕೊಟ್ಟ ಮೇಲೆ ಹೇಳಿದ ಶಾಪವನ್ನು ಮೂರ್ಧ್ನಾ=ಶಿರಸ್ಸಿನಿಂದ ಸಂಜಗೃಹೇ=ಸ್ವೀಕರಿಸಿದನು. ಏತಾವತ್=ಇದು ಸಾಧುಲಕ್ಷಣಮ್=ಭಗವದ್ಭಕ್ತರ ಲಕ್ಷಣವು. 'ಮೂರ್ಧ್ನಾ ಸಂಜಗೃಹೇ' ಎಂಬುದರಿಂದ ಎರಡನೆಯ ಪಕ್ಷವೇ ಅಭಿಮತವೆಂದು ತಿಳಿಸಿರುವರು. ನಮ್ರತೆಯು ಸಾಧುಗಳ ಲಕ್ಷಣ. ಇವನೂ ಸಾಧುಗಳಲ್ಲಿ ಒಬ್ಬ. ನಾಲ್ಕನೆಯ ಪಕ್ಷವನ್ನೇ ಒಪ್ಪಿಕೊಂಡು ಎಂದು ಅಂಗೀಕರಿಸಲು ಸಾಧ್ಯವಿಲ್ಲ. ದೇವತೆಗಳೇ ಇತರರಿಗೆ ಶಾಪಕೊಡಲು ಶಕ್ತರು ಎಂದು ಪ್ರಮಾಣವಿರುವುದು. ಆದ್ದರಿಂದ 'ಪ್ರತಿಶಪ್ತುಮಲಂತಮಃ' ಎಂಬುದಕ್ಕೆ ಚಿತ್ರಕೇತುವು ಪಾರ್ವತಿಗಿಂತ ಅಧಿಕನೆಂದು ಅಭಿಪ್ರಾಯವಲ್ಲ. ಮತ್ತೇನೆಂದರೆ, ಕೆಳಗಿನವರೂ ಉತ್ತಮರಿಗೆ ಶಾಪಕೊಡುವ ಸಂಭವವಿದೆ ಎಂಬ ಅಭಿಪ್ರಾಯದಿಂದ ಹೇಳಿದ ಮಾತದು. ವಿ. ಅ. ಈ ಸಂದರ್ಭದಲ್ಲಿ ಆಚಾರ್ಯರು ಪ್ರಮಾಣಾಧಾರದಿಂದ ಹೀಗೆ ನಿರ್ಣಯಿಸಿರುವರು. 'ದೇವಾ ಏವ ತದನ್ಯೇಭ್ಯಃ ಶಕ್ತಾ ನಾಸ್ತ್ಯತ್ರ ಸಂಶಯಃ। ಅಶಕ್ತಾ ಅಪಿ ಶಕ್ತಾನಾಂ ಶಕ್ತಾಃ ಶಾಪಾದಿಷು ಸ್ಫುಟಮ್। ತಥಾಪಿ ಅಶಕ್ತೈರ್ವಿಹಿತಾಃ ಶಾಪಾದ್ಯಾಃ ಶಕ್ತಿಮತ್ಸು ವೈ। ಅತ್ಯಲ್ಪಾಶ್ಚ ಅಲ್ಪಕಾಲಾಶ್ಚ ನ ಸಮ್ಯಕ್ ಪ್ರಭವಂತಿ ಚ। ಯತ್ನೇನಾಪೋಹಿತುಂ ಶಕ್ಯಾ ಉತ್ತಮೈಃ ತು ನ ಸಂಶಯಃ। ಉತ್ತಮೇಷು ಕೃತಾಃ ಶಾಪಾಃ ಕರ್ತೄಣಾಂ ಜ್ಞಾನಪುಣ್ಯಯೋಃ। ನಿಶ್ಶೇಷೇಣ ನಿಹಂತಾರಃ ತದನುಗ್ರಹವಂತರಾ। ಸದಾರಯೋ-ಬ್ರ್ಹಹ್ಮವಿಷ್ಣ್ವೋರ್ವರಶಾಪಾದಯೋಽಖಿಲಾಃ। ತದನ್ಯೇನ ಕೃತಾಃ ಸರ್ವೇ

ದೇವಿಗೆ ಪ್ರತಿ ಶಾಪಕೊಡುವ ಸಂಭವವಿದ್ದರೂ ಭಗವದ್ಭಕ್ತನಾದ ಚಿತ್ರಕೇತುವು ಶಾಪವನ್ನು ಮಾನ್ಯಮಾಡಿ ಸಾಧುತ್ವವನ್ನು ತೋರಿಸಿಕೊಂಡನು.

ನಿಷ್ಫಲಾ ಏವ ನಿಶ್ಚಯಾತ್ । ನ ಚಾಪ್ಯವಾಂತರಾಃ ಶಾಪಾ ಭವಂತ್ಯೇಷಾಂ ತು ಕುತ್ರಚಿತ್ । ವರಾ ವಿಷ್ಣೋಃ ಶ್ರಿಯಶ್ಚ ಸ್ಯುಃ ಬ್ರಹ್ಮಣಶ್ಚ ಯಥಾಕ್ರಮಮ್ । ಉತ್ತಮೈರಧಮಾನಾಂ ತು ವರಾಃ ಶಾಪಾ ಯಥೋದಿತಂ । ಸಂಪೂರ್ಣ ಫಲದಾ ಏವ ನಾತ್ರ ಕಾರ್ಯಾ ವಿಚಾರಣಾ' ॥ ಇಲ್ಲಿ ಇರುವ ವಿಶೇಷವನ್ನು ಈ ಪ್ರಮಾಣವು ಹೀಗೆ ತಿಳಿಸುತ್ತದೆ. ದೇವತೆಗಳೇ ಬೇರೆ ದೇವತೆಗಳಿಗೆ ಶಾಪ (ವರ) ಕೊಡಲು ಸಮರ್ಥರು. ಇದರಲ್ಲಿ ಸಂಶಯವಿಲ್ಲ. ಅದರಲ್ಲಿಯೂ ಅಶಕ್ತರೂ (ಅಧಮರೂ) ಶಕ್ತರಿಗೆ (ಉತ್ತಮರಿಗೆ) ಶಾಪ ವರಗಳನ್ನು ಕೊಡಲು ಸಮರ್ಥರು. ಆದರೂ ಅಶಕ್ತರು ಶಕ್ತರಿಗೆ ಕೊಟ್ಟ ಶಾಪ ವರಗಳು ಅತ್ಯಲ್ಪ, ಅಲ್ಪಕಾಲಿಕ ಮತ್ತು ಸರಿಯಾಗಿ ಫಲಿಸುವುದಿಲ್ಲ. ಉತ್ತಮರು ತಮ್ಮ ಯತ್ನದಿಂದ ಅವುಗಳನ್ನು ಹೋಗಲಾಡಿಸಿ ಕೊಳ್ಳಬಹುದು. ಸಂದೇಹವಿಲ್ಲ. ಆದರೆ ಉತ್ತಮರಿಗೆ ಕೊಟ್ಟ ಶಾಪದಿಂದ ಅಧಮರು ತಮ್ಮ ಜ್ಞಾನ ಮತ್ತು ಪುಣ್ಯಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುವರು. ಉತ್ತಮರು ಅನುಗ್ರಹಿಸಿದರೆ ಮಾತ್ರ ಇವರ ಜ್ಞಾನ ಪುಣ್ಯಗಳು ಉಳಿಯಲು ಸಾಧ್ಯ. ಅದರಲ್ಲಿಯೂ ವಿಷ್ಣು, ಲಕ್ಷ್ಮೀ, ಬ್ರಹ್ಮ, ವಾಯು, ಸರಸ್ವತೀ ಭಾರತಿಯರಿಗೆ ಅಧಮರು ಕೊಟ್ಟ ವರ ಶಾಪಗಳು ಎಲ್ಲಾ ನಿಷ್ಫಲ. ಇದು ನಿಶ್ಚಯ. ಅಷ್ಟೇ ಅಲ್ಲ ; ಅವಾಂತರವಾದ ಐಶ್ವರ್ಯನಾಶಾದಿಗಳೂ ಕೂಡ ಆಗುವುದಿಲ್ಲ. ಆದರೆ ವರಗಳು ಯಥಾಕ್ರಮವಾಗಿ ಫಲಿಸುವುವು. ಉತ್ತಮರು ಅಧಮರಿಗೆ ಕೊಟ್ಟ ವರ ಶಾಪಗಳು ಹೇಳಿದ ಫಲಗಳನ್ನು ಸಂಪೂರ್ಣವಾಗಿ ಕೊಡುವುವು. ಈ ವಿಷಯದಲ್ಲಿ ವಿಚಾರ ಮಾಡಬೇಕಾದ್ದಿಲ್ಲ. ॥ ೩೭ ॥

ಜಜ್ಞೇ ತ್ವಷ್ಟುರ್ದಕ್ಷಿಣಾಗ್ನೌ ದಾನವೀಂ ಯೋನಿಮಾಶ್ರಿತಃ ।
ವೃತ್ರ ಇತ್ಯಭಿವಿಖ್ಯಾತೋ ಜ್ಞಾನವಿಜ್ಞಾನಸಂಯುತಃ ॥ ೩೮ ॥

ಎಲ್ಲಿ ಇವನ ಜನ್ಮವಾಯಿತು? ಎಂದರೆ ಹೇಳುತ್ತಾರೆ. ಆ ಚಿತ್ರಕೇತುವು ಜ್ಞಾನವಿಜ್ಞಾನಗಳಿಂದ ಕೂಡಿದವನಾಗಿ ವೃತ್ರ ಎಂಬ ಹೆಸರಿನಿಂದ ಪ್ರಸಿದ್ಧನಾಗಿ ತ್ವಷ್ಟುಃ=ತ್ವಷ್ಟೃವು ಮಾಡಿದ ಆಭಿಚಾರಿಕಯಾಗದಲ್ಲಿ ದಕ್ಷಿಣವೆಂಬ ಅಗ್ನಿಯಲ್ಲಿ ದಾನವೀಂ ಯೋನಿಂ=ಅಸುರ ಯೋನಿಯನ್ನು ಆಶ್ರಿತಃ (ಸ೯)=ಆಶ್ರಯಿಸಿದವನಾಗಿ ಜಜ್ಞೇ=ಹುಟ್ಟಿದನು. ದಾನವೀಂ ಯೋನಿಂ ಎಂದು ಹೇಳಿದ್ದರಿಂದ ಅಸುರ ವಂಶದಲ್ಲಿ ಹುಟ್ಟಲಿಲ್ಲವೆಂದೂ ಆದರೆ ಕಾರ್ಯದಿಂದ ಅಸುರನೆಂದು ಕರೆಸಿಕೊಂಡನೆಂದೂ ತಿಳಿಸಿರುವರು. ॥ ೩೮ ॥

ಇದು ಭಗವದ್ಭಕ್ತರ ಲಕ್ಷಣ. ತ್ವಷ್ಟೃವು ಮಾಡಿದ ಆಭಿಚಾರಿಕ ಯಾಗದಲ್ಲಿ ದಕ್ಷಿಣಾಗ್ನಿಯಲ್ಲಿ ಅಸುರಯೋನಿಯನ್ನು ಆಶ್ರಯಿಸಿ ಹುಟ್ಟಿದನು. ಅವನಿಗೆ ಜ್ಞಾನ-ವಿಜ್ಞಾನಗಳು ಇದ್ದೇ ಇದ್ದುವು. ವೃತ್ರನೆಂದು ಪ್ರಸಿದ್ಧಿ ಪಡೆದನು.

ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ವೃತ್ರಸ್ಯಾಸುರಜಾತೇಶ್ಚ ಕಾರಣಂ ಭಗವನ್ಮತೇಃ ॥ ೩೯ ॥

ಪರಮ ಪ್ರಮೇಯವನ್ನು ಮುಗಿಸುತ್ತಾರೆ. ವೃತ್ರನ ಯತ್ (ಚರಿತಂ)= ಯಾವ ಚರಿತ್ರೆಯನ್ನು ಅಸುರಜಾತೇಃ – ಅ ಸು ರ ಭಾ ವ ದಿಂ ದ ಜನನಕ್ಕೂ ಭಗವನ್ಮತೇಃ–ಶ್ರೀಹರಿಯಲ್ಲಿ ಜ್ಞಾನಭಕ್ತಿಯ ಇರುವಿಕೆಗೂ ಕಾರಣಂ ಚ– ಕಾರಣ ವನ್ನೂ ತ್ವಂ– ನೀನು ಮಾಂ– ನನ್ನನ್ನು ಪರಿಪೃಚ್ಛಸಿ – ಕೇಳಿದೆಯೋ ಏತತ್- ಸರ್ವಂ – ಇದೆಲ್ಲವು ತೇ – ನಿನಗಾಗಿ (ಮಯಾ) – ನನ್ನಿಂದ ಆಖ್ಯಾತಂ – ಹೇಳ ಲ್ಪಟ್ಟಿತು. ಇದೆಲ್ಲವನ್ನೂ ಹೇಳಿದೆ. ಭಗವದ್ಭಕ್ತನಾದ ಅವನಿಗೆ ಅಸುರ ಜಾತಿ ಯಲ್ಲಿ ಬರುವುದಕ್ಕೆ ಕಾರಣವನ್ನೂ ಹೇಳಿದೆ ಎಂದೂ ಅನ್ವಯ ಮಾಡಿರುವರು. ಅಸುರ ಜಾತಿಯಲ್ಲಿ (ಸ್ವಭಾವದಲ್ಲಿ) ಜನಿಸಿದ ವೃತ್ರನಿಗೆ ಭಗವಂತನಲ್ಲಿ ಜ್ಞಾನಕ್ಕೆ ಕಾರಣವನ್ನೂ ಹೇಳಿದೆ ಎಂದಾದರೂ ಅನ್ವಯ. ॥ ೩೯ ॥

ಇತಿಹಾಸಮಿಮಂ ಪುಣ್ಯಂ ಚಿತ್ರಕೇತೋರ್ಮಹಾತ್ಮನಃ ।
ಮಾಹಾತ್ಮ್ಯಂ ವಿಷ್ಣುಭಕ್ತಾನಾಂ ಶ್ರುತ್ವಾ ಬಂಧಾದ್ವಿಮುಚ್ಯತೇ ॥

ಶ್ರವಣಫಲವನ್ನು ಹೇಳುತ್ತಾರೆ. ವಿಷ್ಣುಭಕ್ತಾನಾಂ=ಶ್ರೀಹರಿಯ ಭಕ್ತರಾದ ರುದ್ರ, ರುದ್ರಾಣೀ, ನಾರದ ಮತ್ತು ಅಂಗೀರಸರ ಮಾಹಾತ್ಮ್ಯಂ– ಮಹಿಮೆಯ ರೂಪವಾದ ಮಹಾತ್ಮನಃ – ಭಗವದ್ಭಕ್ತನಾದ ಚಿತ್ರಕೇತುವಿನ ಈ ಪವಿತ್ರಕರ ಇತಿಹಾಸವನ್ನು ಶ್ರುತ್ವಾ–ಕೇಳಿ, ಅಧಿಕಾರಿ ಚೇತನನು ಬಂಧಾತ್ – ಬಂಧನದಿಂದ ವಿಮುಚ್ಯತೇ=ಮುಕ್ತನಾಗುವನು. ॥ ೪೦ ॥

ಯ ಏತತ್ ಪ್ರಾತರುತ್ಥಾಯ ಶ್ರದ್ಧಯಾ ವಾಗ್ಯತಃ ಪಠೇತ್ ।
ಇತಿಹಾಸಂ ಹರಿಂ ಸ್ಮೃತ್ವಾ ಸ ಯಾತಿ ಪರಮಾಂ ಗತಿಮ್ ॥ ೪೧ ॥

ಬೇಡಿ ಮೊದಲಾದ ಬಂಧದಿಂದ ಮೋಕ್ಷವೂ ಬಂಧ ಮೋಕ್ಷವಾಗುವುದು. ಸಂಸಾರ ಬಂಧದಿಂದ ಮೋಕ್ಷವಾಗಿ ವೈಕುಂಠಲೋಕ ಪ್ರಾಪ್ತಿಯಿದರಿಂದಾಗುವು ದೆಂದು ತಿಳಿದುಬರಲಿಲ್ಲವಲ್ಲಾ ಎಂದಾಶಂಕಿಸಿ ನಾವು ಹೇಳಿದಂತೆ ಮಾಡಿದರೆ ಕಾಲ

ನೀನು ಕೇಳಿದುದೆಲ್ಲವನ್ನೂ ಹೇಳಿದ್ದೇನೆ. ವೃತ್ರನು ಅಸುರಜಾತಿಯವನಾಗಲು ಮತ್ತು ಭಗವಂತನ ಜ್ಞಾನವುಳ್ಳವನಾಗಿರಲು ಕಾರಣವನ್ನು ಹೇಳಿದ್ದೇನೆ. ಇದು ವಿಷ್ಣುಭಕ್ತರ ಮಹಿಮೆ. ಇಂತಹ ಮಹಾತ್ಮನಾದ ಚಿತ್ರಕೇತುವಿನ ಪವಿತ್ರಕರ ಇತಿಹಾಸವನ್ನು ಕೇಳಿದವನು ಬಂಧನದಿಂದ ಮುಕ್ತನಾಗುವನು. ಯಾವನು ಬೆಳಗ್ಗೆ ಎದ್ದು ಶ್ರದ್ಧೆಯಿಂದ ವಾಕ್‌ಸಂಯಮದಿಂದ ಈ ಇತಿಹಾಸವನ್ನು ಪಠಿಸುವನೋ ಅವನು ಹರಿಸ್ಮರಣೆಯನ್ನು ಹೊಂದಿ (ಕಾಲಕ್ರಮದಲ್ಲಿ) ಉತ್ತಮ ಗತಿಯನ್ನು–ಮೋಕ್ಷ ವನ್ನು–ಹೊಂದುವನು.

ವಿಶೇಷದಲ್ಲಿ ಅದೂ ಆಗುವುದೆಂದು ಹೇಳುತ್ತಾರೆ. ಯಃ=ಯಾವನಾದರೆ ಪ್ರಾತಃ ಉತ್ಥಾಯ=ಬೆಳಗ್ಗೆ ಎದ್ದು ಹರಿಂ ಸ್ಮೃತ್ವಾ=ಶ್ರೀಹರಿಯನ್ನು ಸ್ಮರಿಸಿ ವಾಗ್ಯತಃ= ಮತ್ತೇನನ್ನೂ ಮಾತನಾಡದೆ ಶ್ರದ್ಧೆಯಿಂದ ಏತತ್ (ಏತಂ) = ಈ ಇತಿಹಾಸವನ್ನು ಪಠಿಸುವನೋ ಸಃ=ಅವನು ಹರಿಂ ಸ್ಮೃತ್ವಾ – ಶ್ರೀಹರಿ ಸ್ಮರಣೆಯನ್ನು (ಧ್ಯಾನವನ್ನು) ಹೊಂದಿದವನಾಗಿ ಪರಮಾಂ ಗತಿಂ=ಪರಮ ಪುರುಷಾರ್ಥವಾದ ಮೋಕ್ಷವನ್ನು ಯಾತಿ=ಹೊಂದುವನು. ಶ್ರೀಹರಿಯ ಅಪರೋಕ್ಷವನ್ನು ಹೊಂದಿ ಮುಕ್ತನಾಗುವನೆಂದು ತಾತ್ಪರ್ಯ. ॥ ೪೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಸಪ್ತದಶೋಽಧ್ಯಾಯಃ

ಅಥ ಅಷ್ಟಾದಶೋಽಧ್ಯಾಯಃ

ಶ್ರೀ ಶುಕ ಉವಾಚ—

ಪೃಶ್ನಿಸ್ತು ಪತ್ನೀ ಸವಿತುಃ ಸಾವಿತ್ರೀಂ ವ್ಯಾಹೃತೀಂ ತ್ರಯೀಮ್ ।
ಅಗ್ನಿಹೋತ್ರಂ ಪಶುಂ ಸೋಮಂ ಚಾತುರ್ಮಾಸ್ಯಂ ಮಹಾಮಖಾನ್

ಹಿಂದೆ ದಕ್ಷನ ಮಗಳು ಅದಿತಿದೇವಿಯಲ್ಲಿ 'ವಿವಸ್ವಾನರ್ಯಮಾ' ಇತ್ಯಾದಿ ಹನ್ನೆರಡು ಮಕ್ಕಳನ್ನು ಹೇಳಿ ಅವರಲ್ಲಿ ತ್ವಷ್ಟೃವಿನ ವಂಶವನ್ನು ಇದುವರೆಗೂ ಹೇಳಿದರು. ಈಗ ಈ ಅಧ್ಯಾಯದಲ್ಲಿ ಉಳಿದ ಸೃಷ್ಟಿಯನ್ನು ಹೇಳುತ್ತಾ ಸವಿತೃವಿನ ವಂಶವನ್ನು ಹೇಳುತ್ತಾರೆ. ಸವಿತೃವಿನ ಹೆಂಡತಿಯಾದ ಪೃಶ್ನಿಯಾದರೋ ಸಾವಿತ್ರಿಯನ್ನೂ ವ್ಯಾಹೃತಿಯನ್ನೂ ತ್ರಯೀ (ಮೂರು ವೇದಗಳ ಅಭಿಮಾನಿ) ಯನ್ನೂ ಅಗ್ನಿಹೋತ್ರನನ್ನೂ ಪಶು (ಯಾಗ) ವನ್ನೂ ಸೋಮ(ರಸ) ವನ್ನೂ ಚಾತುರ್ಮಾಸ್ಯ ಯಾಗವನ್ನೂ ಮಹಾಯಾಗಗಳನ್ನೂ ಪಂಚಯಜ್ಞಗಳನ್ನೂ (ಅದರದರ ಅಭಿಮಾನಿಗಳೆಂದರ್ಥ) ಪ್ರಾಸೂತ=ಹಡೆದಳು ಎಂದು ಮುಂದಿನ ಶ್ಲೋಕದೊಡನೆ ಅನ್ವಯ. ಚ ಎಂಬುದಕ್ಕೆ ತು ಎಂದರ್ಥ. ಇದರಿಂದ ಹಿಂದಿನ ವಂಶಕ್ಕಿಂತ ಫಲವಿಶೇಷವನ್ನು ಸೂಚಿಸಿರುವರು. ॥ ೧ ॥

ಸಿದ್ಧಿರ್ಭಗಸ್ಯ ಭಾರ್ಯಾಂಗ ಮಹಿಮಾನಂ ವಿಭುಂ ಪ್ರಭುಮ್ ।
ಆಶಿಷಂ ಚ ವರಾರೋಹಾಂ ಕನ್ಯಾಂ ಪ್ರಾಸೂತ ಸುವ್ರತಾಮ್ ॥ ೨ ॥

ಹದಿನೆಂಟನೆಯ ಅಧ್ಯಾಯ

ಶ್ರೀ ಶುಕಾಚಾರ್ಯರು—ಸವಿತೃವಿನ ಹೆಂಡತಿ ಪೃಶ್ನಿ ಸಾವಿತ್ರಿ, ವ್ಯಾಹೃತಿ, ತ್ರಯೀಗಳನ್ನೂ ಅಗ್ನಿಹೋತ್ರ, ಪಶು, ಸೋಮ, ಚಾತುರ್ಮಾಸ್ಯ ಮತ್ತು ಮಹಾಯಾಗರನ್ನು (ಅವುಗಳ ಅಭಿಮಾನಿಗಳಾದ ಆ ಹೆಸರಿನ ದೇವತೆಗಳನ್ನು) ಹಡೆದಳು. ಭಗನ ಹೆಂಡತಿ ಸಿದ್ಧಿ ಮಹಿಮ, ವಿಭು, ಪ್ರಭುಗಳನ್ನೂ ಆಶೀ ಎಂಬ ಕನ್ಯೆಯನ್ನೂ

ಅಂಗ–ಪರೀಕ್ಷಿದ್ರಾಜನೇ, ಭಗನ ಹೆಂಡತಿಯಾದ ಸಿದ್ಧಿಯು ಮಹಿಮನನ್ನೂ ವಿಭುವನ್ನೂ ಪ್ರಭುವನ್ನೂ ಆಶೀ ಎಂಬ ಶ್ರೇಷ್ಠವಾದ ಪೃಷ್ಠಭಾಗಗಳುಳ್ಳ ಸುವ್ರತಳಾದ ಕನ್ಯೆಯನ್ನೂ ಹಡೆದಳು. ॥ ೨ ॥

ಧಾತುಃ ಕುಹೂಃ ಸಿನೀವಾಲೀ ರಾಕಾ ಚಾನುಮತಿಸ್ತಥಾ ।
ಸಾಯಂ ದರ್ಶಮಥ ಪ್ರಾತಃ ಪೂರ್ಣಮಾಸಮನುಕ್ರಮಾತ್ ॥ ೩ ॥

ಧಾತೃವಿನ (ಭಾರ್ಯಾಃ) – ಕರ್ಮನಾಮ ವಿಶಿಷ್ಟರಾದ ಹೆಂಡತಿಯರಾದ ಕುಹೂಃ (ಚಂದ್ರನ ಕಲೆಯಿಲ್ಲದ ದರ್ಶ), ಸಿನೀವಾಲೀ (ಚಂದ್ರನ ಕಲೆ ಇರುವ ದರ್ಶ), ರಾಕಾ (ಹದಿನಾರು ಕಲೆಗಳಿಂದ ಕೂಡಿದ ಚಂದ್ರನಿರುವ ಹುಣ್ಣಿಮೆ), ಅನುಮತಿ (ಒಂದು ಕಲೆ ಕಡಿಮೆಯಾದ ಚಂದ್ರನಿರುವ ಹುಣ್ಣಿಮೆ) ಎಂಬುವರು ಅನುಕ್ರಮಾತ್–ಕ್ರಮವಾಗಿ ಸಾಯಂ (ಕಾಲಾಭಿಮಾನಿ), ದರ್ಶ (ಸೂರ್ಯ-ಚಂದ್ರರು ಒಂದೇ ಕಡೆ ಇರುವ ಅಮಾವಾಸ್ಯೆ), ಪ್ರಾತಃ (ಕಾಲಾಭಿಮಾನಿ) ಮತ್ತು ಪೂರ್ಣಮಾಸ (ಹುಣ್ಣಿಮೆಗೆ ಅಭಿಮಾನಿ) ರನ್ನು ಆಧತ್ತ–ಪಡೆದರು ಎಂದು ಮುಂದಿನ ಶ್ಲೋಕದೊಡನೆ ಅನ್ವಯ. ಒಬ್ಬೊಬ್ಬರಿಗೂ ಅನ್ವಯವಾಗುವುದರಿಂದ ಏಕವಚನ. ॥ ೩ ॥

ಅಗ್ನೀನ್ ಪುರೀಷಾನಾಧತ್ತ ಕ್ರಿಯಾಯಾಂ ಸಮನಂತರಃ ।
ಚರ್ಷಣೀ ವರುಣಸ್ಯಾಸೀದ್ಯಸ್ಯಾಂ ಜಾತೋ ಭೃಗುಃ ಪುನಃ ॥ ೪ ॥

ಸಮನಂತರಃ–ಆಮೇಲಿನ ವಿಧಾತನು ಕ್ರಿಯಾಯಾಂ–ಕ್ರಿಯಾ ಎಂಬ ಹೆಂಡತಿಯಲ್ಲಿ ಪುರೀಷಾನ್ ಅಗ್ನೀನ್ – ಪುರೀಷರೆಂಬ ಇಪ್ಪತ್ತೈದು ಅಗ್ನಿಗಳನ್ನು ಆಧತ್ತ–ಪಡೆದನು. ವರುಣನಿಗೆ (ವರುಣನಾಮಕ ಸೂರ್ಯನಿಗೆ) ಚರ್ಷಣೀ ಎಂಬ ಹೆಂಡತಿಯು ಆಸೀತ್–ಇದ್ದಳು. ಯಸ್ಯಾಂ–ಆ ವರುಣನ ಹೆಂಡತಿಯಲ್ಲಿ ಭೃಗುಃ–ಹಿಂದೆ ಬ್ರಹ್ಮದೇವರಿಂದ ಹುಟ್ಟಿದ ಭೃಗುವು ಪುನಃ–ಮತ್ತೆ ಜಾತಃ–ಹುಟ್ಟಿದನು. ॥ ೪ ॥

ವಾಲ್ಮೀಕಿಶ್ಚ ಮಹಾಯೋಗೀ ವಲ್ಮೀಕಾದಭವತ್ಕಿಲ ।
ಅಗಸ್ತ್ಯಶ್ಚ ವಸಿಷ್ಠಶ್ಚ ಮಿತ್ರಾವರುಣಯೋರ್ಋಷೀ ॥ ೫ ॥

ಪ್ರಸವಿಸಿದಳು. ಧಾತೃವಿನ ಹೆಂಡತಿ ಕುಹೂ ಎಂಬುವಳು ಸಾಯಂ ಎಂಬುವನನ್ನೂ, ಸಿನೀವಾಲಿ ಎಂಬುವಳು ದರ್ಶನನ್ನೂ, ರಾಕಾ ಎಂಬುವಳು ಪ್ರಾತಃ ಎಂಬುವನನ್ನೂ, ಅನುಮತಿ ಎಂಬುವಳು ಪೂರ್ಣಮಾಸನನ್ನೂ ಹಡೆದಳು. ವಿಧಾತನು ತನ್ನ ಹೆಂಡತಿ ಕ್ರಿಯೆಯಲ್ಲಿ ಇಪ್ಪತ್ತೈದು ಪುರೀಷಾಗ್ನಿಗಳಿಗೆ ಜನ್ಮವಿತ್ತನು. ವರುಣನು ತನ್ನ ಹೆಂಡತಿ ಚರ್ಷಣಿಯಲ್ಲಿ ಭೃಗುವನ್ನು ಮತ್ತೆ ಪಡೆದನು. ಈ ವರುಣನ ವೀರ್ಯದಿಂದ ವಲ್ಮೀಕದಿಂದ ಹುಟ್ಟಿದವನೇ ವಾಲ್ಮೀಕಿ. ಮಿತ್ರ ಮತ್ತು ವರುಣರು ಊರ್ವಶಿಯ ದರ್ಶನ

ಮಹಾಯೋಗಿಯಾದ ವಾಲ್ಮೀಕಿಯು ಆ ವರುಣನ ವೀರ್ಯದಿಂದ ವಲ್ಮೀಕಾತ್=ಹುತ್ತದಿಂದ ಅಭವತ್ ಕಿಲ=ಹುಟ್ಟಿದನಷ್ಟೆ. ಋಷಿಗಳಾದ ಅಗಸ್ತ್ಯನೂ ವಸಿಷ್ಠನೂ ಮಿತ್ರಾವರುಣಯೋಃ=ಮಿತ್ರ-ವರುಣ ಇವರಿಬ್ಬರ ವೀರ್ಯದಿಂದ ಕುಂಭ ದಿಂದ ಅಭವತಾಂ=ಮತ್ತೆ ಹುಟ್ಟಿದರು. ವಸಿಷ್ಠರು ಬ್ರಹ್ಮದೇವರಿಂದಲೂ ಅಗಸ್ತ್ಯರು ಪುಲಸ್ತ್ಯರಿಂದಲೂ ಹಿಂದೆ ಹುಟ್ಟಿದ್ದರು. ಭೃಗು, ವಾಲ್ಮೀಕಿಗಳು ಕೇವಲ ವರುಣನ ಮಕ್ಕಳು. ಮುಂದೆ ಹೇಳುವ ಉತ್ಸರ್ಗ ಮೊದಲಾದವರು ಕೇವಲ ಮಿತ್ರನ ಮಕ್ಕಳು. ಅಗಸ್ತ್ಯ-ವಸಿಷ್ಠರು ಮಿತ್ರಾವರುಣರಿಬ್ಬರ ಮಕ್ಕಳೆಂದು ತಿಳಿಯಬೇಕು. || ೫ ||

ರೇತಃ ಸಿಷಿಚತುಃ ಕುಂಭೇ ಊರ್ವಶ್ಯಾಃ ಸನ್ನಿಧೌ ದ್ರುತಮ್ ।
ರೇವತ್ಯಾಂ ಮಿತ್ರ ಉತ್ಸರ್ಗಮರಿಷ್ಟಂ ಪಿಪ್ಪಲಂ ವ್ಯಧಾತ್ || ೬ ||

ಅಗಸ್ತ್ಯ-ವಸಿಷ್ಠರು ಹುಟ್ಟಿದ ರೀತಿಯನ್ನು ಹೇಳುತ್ತಾರೆ. ಈ ಮಿತ್ರಾವರುಣರು ಊರ್ವಶಿಯ ದರ್ಶನದಿಂದ ಅವಳ ಸನ್ನಿಧಿಯಲ್ಲಿ ದ್ರುತಂ=ಹೊರಬಂದ ರೇತಃ= ತಮ್ಮ ರೇತಸ್ಸನ್ನು (ಅದು ಅಮೋಘವಾದ್ದರಿಂದ) ಕುಂಭೇ=ಗಡಿಗೆಯಲ್ಲಿ ಅನಂತರ ಸಿಷಿಚತುಃ=ಸುರಿಸಿದರು. ಆದ್ದರಿಂದ ಈ ಇಬ್ಬರು ಋಷಿಗಳಿಗೂ ಕುಂಭ ಸಂಭವ ರೆಂದು ಪ್ರಸಿದ್ಧಿ. ಮಿತ್ರನು ರೇವತಿಯೆಂಬ ಹೆಂತಿಯಲ್ಲಿ ಉತ್ಸರ್ಗ, ಅರಿಷ್ಟ ಮತ್ತು ಪಿಪ್ಪಲರನ್ನು ವ್ಯಧಾತ್=ಪಡೆದನು (ಉಂಟುಮಾಡಿದನು). ' ಸತ್ರೇಹ ಜಾತಾದಿ-ಷಿತಾನಮೋಭಿಃ ಕುಂಭೇ ರೇತಃ ಸಿಷೇಚತುಃ ಸಮಾನಂ ' ಎಂಬ ಶ್ರುತಿ ಈ ಕುಂಭ ಸಂಭವರ ಕಥೆಯನ್ನು ತಿಳಿಸುವುದು. || ೬ ||

ಪೌಲೋಮ್ಯಾಮಿಂದ್ರ ಆಧತ್ತ ತ್ರೀನ್ ಪುತ್ರಾನಿತಿ ನಃ ಶ್ರುತಮ್ ।
ಜಯಂತಮೃಷಭಂ ತಾತ ತೃತೀಯಂ ಮೀಢುಷಂ ಪ್ರಭುಃ || ೭ ||

ತಾತ=ಪರೀಕ್ಷಿದ್ರಾಜನೇ, ಪ್ರಭುಃ=ಸಮರ್ಥರಾದ ಇಂದ್ರಃ=ಇಂದ್ರದೇವರು ಪೌಲೋಮ್ಯಾಂ=ಪುಲೋಮನ ಮಗಳಾದ ಶಚೀದೇವಿಯಲ್ಲಿ ಜಯಂತ, ಋಷಭ ಮತ್ತು ಮೂರನೆಯವನಾದ ಮೀಢುಷರೆಂಬ ಮೂರು ಮಕ್ಕಳನ್ನು ಆಧತ್ತ=ಪಡೆದ ರೆಂದು ನಃ=ನಮಗೆ ಶ್ರುತಂ=ಕೇಳಿಬಂದಿದೆ. || ೭ ||

ದಿಂದ ಕಳಚಿದ ವೀರ್ಯವನ್ನು ಕುಂಭದಲ್ಲಿಟ್ಟರು. ಅದರಿಂದ ಅಗಸ್ತ್ಯ ಮತ್ತು ವಸಿಷ್ಠರು ಜನಿಸಿದರು. ಮಿತ್ರನು ತನ್ನ ಹೆಂಡತಿ ರೇವತಿಯಲ್ಲಿ ಉತ್ಸರ್ಗ, ಅರಿಷ್ಟ ಮತ್ತು ಪಿಪ್ಪಲರನ್ನು ಪಡೆದನು.

ರಾಜನ್, ಇಂದ್ರದೇವರು ಪುಲೋಮನ ಪುತ್ರಿ ಶಚೀದೇವಿಯಲ್ಲಿ ಜಯಂತ, ಋಷಭ ಮತ್ತು ಮೀಢುಷರೆಂಬ ಮೂರು ಮಕ್ಕಳನ್ನು ಹೊಂದಿದರೆಂದು ಕೇಳಿದ್ದೇವೆ.

ಉರುಕ್ರಮಸ್ಯ ದೇವಸ್ಯ ಮಾಯಾವಾಮನರೂಪಿಣಃ ।
ಕೀರ್ತ್ಯಾಂ ಪತ್ನ್ಯಾಂ ಬೃಹಚ್ಛ್ಲೋಕಸ್ತಸ್ಯಾಸನ್ ಸೌಭಗಾದಯಃ ॥

ಮಾಯಾವಾಮನರೂಪಿಣಃ – ತನ್ನ ಇಚ್ಛೆಯಿಂದ ಗಿಡ್ಡರೂಪವನ್ನು ಧರಿಸಿದ್ದ ಉರುಕ್ರಮಸ್ಯ– ಉರುಕ್ರಮ (ತ್ರಿವಿಕ್ರಮ) ನಾದ ದೇವಸ್ಯ=ಉಪೇಂದ್ರನಿಗೆ ಕೀರ್ತಿ ಎಂಬ (ಇದು ಲಕ್ಷ್ಮಿಯರೂಪ) ಹೆಂಡತಿಯಲ್ಲಿ ಬೃಹತ್‌ಶ್ಲೋಕನು ಹುಟ್ಟಿದನು. ತಸ್ಯ=ಆ ಬೃಹತ್‌ಶ್ಲೋಕನಿಗೆ ಸೌಭಗ ಮೊದಲಾದವರು ಮಕ್ಕಳು ಆಸನ್– ಆದರು. ॥ ೮ ॥

ತತ್ಕರ್ಮಗುಣವೀರ್ಯಾಣಿ ಕಶ್ಯಪಸ್ಯ ಮಹಾತ್ಮನಃ ।
ಪಶ್ಚಾದ್ವಕ್ಷ್ಯಾಮಹೇಽದಿತ್ಯಾಂ ಯಥೈವಾವತತಾರ ಹ ॥ ೯ ॥

(ಅಸೌ)=ಈ ಉರುಕ್ರಮನು ಮಹಾತ್ಮರಾದ ಕಶ್ಯಪರ ಹೆಂಡತಿ ಅದಿತ್ಯಾಂ– ಅದಿತಿ ದೇವಿಯಲ್ಲಿ ಯಥಾ=ಹೇಗೆ ಅವತತಾರ=ಅವತರಿಸಿದನು? ಹ=ಆ ಪ್ರಸಿದ್ಧಿಯನ್ನೂ ತತ್ಕರ್ಮಗುಣವೀರ್ಯಾಣಿ–ಅವನ ಕರ್ಮ, ಗುಣ ಮತ್ತು ಪರಾಕ್ರಮಗಳನ್ನೂ ಪಶ್ಚಾತ್ – ಮುಂದೆ ಎಂಟನೆಯ ಸ್ಕಂಧದಲ್ಲಿ ವಕ್ಷ್ಯಾಮಹೇ = ಹೇಳುತ್ತೇವೆ. ॥ ೯ ॥

ಅಥ ಕಶ್ಯಪದಾಯಾದಾನ್ ದೈತೇಯಾನ್ ಕೀರ್ತಯಾಮಿ ತೇ ।
ಯತ್ರ ಭಾಗವತಃ ಶ್ರೀಮಾನ್ ಪ್ರಹ್ಲಾದೋ ಬಲಿರೇವ ಚ ॥ ೧೦ ॥

ಅಥ– ಇನ್ನು ಮುಂದೆ, ಮಂಗಳವಾಗಲಿ. ಕಶ್ಯಪ ದಾಯಾದಾನ್–ಕಶ್ಯಪರ ಮಕ್ಕಳಾದ ಜ್ಞಾತಿಗಳಾದ ದೈತೇಯಾನ್–ದಿತಿಯ ಮಕ್ಕಳನ್ನು ತೇ– ನಿನಗಾಗಿ ಕೀರ್ತಯಾಮಿ=ಹೇಳುತ್ತೇನೆ. ದೈತ್ಯವಂಶವರ್ಣನವನ್ನೇಕೆ ಮಾಡಬೇಕು? ಅದರ ಕಥನವು ಶ್ರೇಯಃ ಸಾಧನೆಗೆ ಉಪಯುಕ್ತವಲ್ಲವಲ್ಲಾ! ಎಂದರೆ ಹೇಳುತ್ತಾರೆ. ಯತ್ರ = ಯಾವ ಈ ದಿತಿಯ ಸಂತತಿಯಲ್ಲಿ ಭಾಗವತಃ – ಭಗವದ್ಭಕ್ತರಾದ ಶ್ರೀಮಾನ್–ಭಕ್ತಿ ಮೊದಲಾದ ಗುಣಸಂಪತ್ತಿನಿಂದ ಕೂಡಿದ ಪ್ರಹ್ಲಾದ ರಾಜರೂ ಚ=ಮತ್ತು ಬಲಿಃ ಏವ = ಬಲಿಚಕ್ರವರ್ತಿಗಳೂ (ಬಭೂವತುಃ) – ಹುಟ್ಟಿದರು. ಪ್ರಹ್ಲಾದ ಬಲಿಗಳ ಚರಿತ್ರೆಯ ಕೀರ್ತನ ಮತ್ತು ಶ್ರವಣಗಳಿಂದ ಶ್ರೇಯಃ (ಮೋಕ್ಷ) ಸಾಧನೆಯಾಗುವುದೆಂದರ್ಥ. ॥ ೧೦ ॥

ತನ್ನ ಇಚ್ಛೆಯಿಂದ ಗಿಡ್ಡನಾಗಿದ್ದು ತ್ರಿವಿಕ್ರಮನಾದ ಉಪೇಂದ್ರನಿಗೆ ಕೀರ್ತಿದೇವಿಯಲ್ಲಿ ಬೃಹತ್ ಶ್ಲೋಕನೆಂಬ ಮಗನಾದನು. ಅವನಿಗೆ ಸೌಭಗ ಮೊದಲಾದ ಮಕ್ಕಳು ಜನಿಸಿದರು. ಈ ತ್ರಿವಿಕ್ರಮನಾದ ವಾಮನನು ಕಶ್ಯಪರ ಹೆಂಡತಿ ಅದಿತಿ ದೇವಿಯಲ್ಲಿ ಹೇಗೆ ಅವತರಿಸಿದನೆಂಬುದನ್ನೂ ಅವನು ಮಾಡಿದ ಕೆಲಸ, ಅವನ ಗುಣ ಮತ್ತು ಪರಾಕ್ರಮಗಳನ್ನೂ ಮುಂದೆ (ಎಂಟನೆಯ ಸ್ಕಂಧದಲ್ಲಿ) ಹೇಳುತ್ತೇವೆ.

ರಾಜನೇ, ನಿನಗೆ ಒಳ್ಳೆಯದಾಗಲಿ. ಇನ್ನು ಮುಂದೆ ಕಶ್ಯಪರ ಮಕ್ಕಳಾದ

ದಿತೇರ್ದ್ವಾವೇವ ದಾಯಾದೌ ದೈತ್ಯದಾನವವಂದಿತೌ ।
ಹಿರಣ್ಯಕಶಿಪುರ್ನಾಮ ಹಿರಣ್ಯಾಕ್ಷಶ್ಚ ಕೀರ್ತಿತೌ ॥ ೧೧ ॥

ದಿತಿ ದೇವಿಯ ದ್ವೌ – ಇಬ್ಬರು ದಾಯಾದೌ = ಮಕ್ಕಳು ದೈತ್ಯರಿಂದಲೂ ದಾನವರಿಂದಲೂ ವಂದಿತರಾದ ಹಿರಣ್ಯಕಶಿಪು ಎಂಬುವನೂ ಹಿರಣ್ಯಾಕ್ಷನೂ ಕೀರ್ತಿತೌ ಏವ– ಮೂರನೆಯ ಸ್ಕಂಧದಲ್ಲಿ ಈಗಾಗಲೇ ಉಕ್ತರಾಗಿರುವರು. ॥ ೧೧ ॥

ಹಿರಣ್ಯಕಶಿಪೋರ್ಭಾರ್ಯಾ ಕಯಾಧುರ್ನಾಮ ದಾನವೀ ।
ಜಂಭಸ್ಯ ತನಯಾ ದತ್ತಾ ಸುಷುವೇ ಚತುರಃ ಸುತಾನ್ ॥ ೧೨ ॥
ಸಂಹ್ಲಾದಂ ಪ್ರಾಗನುಹ್ಲಾದಂ ಪ್ರಹ್ಲಾದಂ ಹ್ಲಾದಮೇವ ಚ ।

ಜಂಭಸ್ಯ – ಜಂಭನೆಂಬ ಅಸುರನ ತನಯಾ = ಮಗಳಾದ ಕಯಾಧುವೆಂಬ ದಾನವಿಯು ದತ್ತಾ = ವಿಧಿವತ್ತಾಗಿ ವಿವಾಹದಲ್ಲಿ ಕೊಡಲ್ಪಟ್ಟ ಹಿರಣ್ಯಕಶಿಪುವಿನ ಹೆಂಡತಿಯು ಹಿರಣ್ಯಕಶಿಪುವಿನಿಂದ ಮೊದಲು ಸಂಹ್ಲಾದನನ್ನೂ ಅನುಹ್ಲಾದನನ್ನೂ ಪ್ರಹ್ಲಾದನನ್ನೂ ಹ್ಲಾದನನ್ನೂ ಚತುರಃ = ನಾಲ್ಕು ಸುತಾನ್ – ಮಕ್ಕಳನ್ನು ಸುಷುವೇ– ಹಡೆದಳು. ॥ ೧೨ ॥

ತತ್ಸ್ವಸಾ ಸಿಂಹಿಕಾನಾಮ ರಾಹುಂ ವಿಪ್ರಚಿತೋಽಗ್ರಹೀತ್ ॥ ೧೩ ॥
ಶಿರೋಽಹರದ್ಯಸ್ಯ ಹರಿಶ್ಚಕ್ರೇಣ ಪಿಬತೋಽಮೃತಮ್ ।

ತತ್‌ಸ್ವಸಾ = ಆ ಕಯಾಧುವಿನ ತಂಗಿಯಾದ ಸಿಂಹಿಕೆಯೆಂಬುವಳು ವಿಪ್ರಚಿತಃ= ವಿಪ್ರಚಿತ್ತೆಂಬ ದೈತ್ಯನಿಂದ ರಾಹುಂ = ರಾಹುವೆಂಬ ಮಗನನ್ನು ಅಗ್ರ-ಹೀತ್– ಪಡೆದಳು. ಅಮೃತಂ—ಅಮೃತವನ್ನು ಪಿಬತಃ–(ದೇವತೆಗಳ ಮಧ್ಯದಲ್ಲಿ ಕುಳಿತು) ಕುಡಿಯುತ್ತಿದ್ದ ಯಸ್ಯ = ಯಾವ ಈ ರಾಹುವಿನ ಶಿರಃ = ತಲೆಯನ್ನು ಹರಿಃ= ಶ್ರೀಹರಿಯು ಚಕ್ರೇಣ – ಚಕ್ರದಿಂದ ಅಹರತ್– ಕತ್ತರಿಸಿದನು. ॥ ೧೩ ॥

ಸಂಹ್ಲಾದಸ್ಯ ಕೃತಿರ್ಭಾರ್ಯಾಽಸೂತ ಪಂಚಜನಂ ತತಃ ॥ ೧೪ ॥

ಸಂಹ್ಲಾದನ ಹೆಂಡತಿಯಾದ ಕೃತಿ ಎಂಬುವಳು ತತಃ – ಆ ಸಂಹ್ಲಾದನಿಂದ ಪಂಚಜನನೆಂಬುವನನ್ನು ಅಸೂತ = ಹಡೆದಳು. ॥ ೧೪ ॥

ದೈತ್ಯ (ದಿತಿಯ ಮಕ್ಕಳು) ರ ವಂಶವನ್ನು ನಿನಗೆ ತಿಳಿಸುತ್ತೇನೆ. ಈ ದೈತ್ಯರ ವಂಶದಲ್ಲಿ ಭಗವದ್ಭಕ್ತರಾದ ಪ್ರಹ್ಲಾದ ರಾಜರೂ, ಬಲಿಚಕ್ರವರ್ತಿಗಳೂ ಹುಟ್ಟಿರುವರು. ದಿತಿಯ ಇಬ್ಬರು ಮಕ್ಕಳು ಹಿರಣ್ಯಕಶಿಪು, ಹಿರಣ್ಯಾಕ್ಷ ; ಇವರಿಬ್ಬರೂ ದೈತ್ಯ-ದಾನವರಿಂದ ವಂದಿತರಾಗಿದ್ದರು. ಇವರನ್ನು ಹಿಂದೆಯೇ (ತೃತೀಯ ಸ್ಕಂಧದಲ್ಲಿ) ಹೇಳಿದ್ದಾಗಿದೆ. ಜಂಭನೆಂಬ ದಾನವನ ಮಗಳಾದ ಕಯಾಧು ಹಿರಣ್ಯಕಶಿಪುವಿನ ಮದುವೆಯಾದ ಹೆಂಡತಿ. ಅವಳು ಸಂಹ್ಲಾದ, ಅನುಹ್ಲಾದ, ಪ್ರಹ್ಲಾದ ಮತ್ತು ಹ್ಲಾದರೆಂದು ನಾಲ್ವರು ಮಕ್ಕಳನ್ನು ಪ್ರಸವಿಸಿದಳು. ಅವಳ ತಂಗಿ ಸಿಂಹಿಕೆಯು ವಿಪ್ರಚಿತನಿಂದ ರಾಹುವನ್ನು ಪಡೆದಳು. ಈ ರಾಹುವು ಅಮೃತಪಾನ ಮಾಡುತ್ತಿದ್ದಾಗ ಶ್ರೀಹರಿಯು

ಹ್ಲಾದಸ್ಯ ಧಮನಿರ್ಭಾರ್ಯಾಽಸೂತ ವಾತಾಪಿಮಿಲ್ವಲಮ್ ।
ಯೋಽಗಸ್ತ್ಯಾಯಾಪ್ಯತಿಥಯೇ ಪೇಚೇ ವಾತಾಪಿಮಿಲ್ವಲಃ ॥ ೧೫ ॥

ಹ್ಲಾದನ ಹೆಂಡತಿಯಾದ 'ಧಮನಿ' ಎಂಬುವಳು ವಾತಾಪಿಯನ್ನೂ ಇಲ್ವಲನನ್ನೂ ಹಡೆದಳು. ಯಃ ಇಲ್ವಲಃ = ಯಾವ ಈ ಇಲ್ವಲನು ಅತಿಥಯೇ=ಅತಿಥಿಯಾಗಿ ಬಂದಿದ್ದ ಅಗಸ್ತ್ಯಾಯ ಅಪಿ=ಅಗಸ್ತ್ಯ ಋಷಿಗಳಿಗೂ ಕೂಡ ವಾತಾಪಿಂ=ಮೇಕೆಯ ಆಕಾರದಲ್ಲಿದ್ದ ವಾತಾಪಿಯನ್ನು ಪೇಚೇ=ಬೇಯಿಸಿ ಹಾಕಿದನು. ॥ ೧೫ ॥

ಅನುಹ್ಲಾದಸ್ಯ ಸೂರ್ಮ್ಯಾಯಾಂ ಬಾಷ್ಕಲೋ ಮಹಿಷಸ್ತಥಾ ।

ಅನುಹ್ಲಾದನಿಗೆ ಸೂರ್ಮ್ಯಯೆಂಬ ಹೆಂಡತಿಯಲ್ಲಿ ಬಾಷ್ಕಲನೆಂಬುವನೂ ತಥಾ=ಹಾಗೆಯೇ ಮಹಿಷಃ=ಮಹಿಷನೆಂಬುವನೂ ಮಕ್ಕಳಾದರು.

ವಿರೋಚನಸ್ತು ಪ್ರಾಹ್ಲಾದಿರ್ಬಲಿಸ್ತಸ್ಯಾಭವತ್ ಕಿಲ ॥ ೧೬ ॥

ಬಾಣಜ್ಯೇಷ್ಠಂ ಕೇತುಶತಮಶನಾಯಾಂ ತತೋಽಭವತ್ ।
ತಸ್ಯಾನುಭಾವಃ ಸುಶ್ಲೋಕ್ಯಃ ಪಶ್ಚಾದೇವಾಭಿಧಾಸ್ಯತೇ ॥ ೧೭ ॥

ವಿರೋಚನನಾದರೋ ಪ್ರಾಹ್ಲಾದಿಃ=ಪ್ರಹ್ಲಾದರಾಜರ ಮಗನು. ತಸ್ಯ=ಆ ವಿರೋಚನನಿಗೆ ಬಲಿಃ = ಬಲಿಯೆಂಬ ಮಗನು ಅಭವತ್ ಕಿಲ = ಆದನಷ್ಟೆ! ತತಃ=ಆ ಬಲಿಯಿಂದ ಅಶನಾಯಾಂ = ಅಶನಾ ಎಂಬುವಳಲ್ಲಿ ಬಾಣಜ್ಯೇಷ್ಠಂ=ಬಾಣಾಸುರನೇ ಹಿರಿಯನಾಗಿರುವ ಕೇತುಶತಂ=ನೂರು ಕೇತುಗಳು ಅಭವತ್=ಹುಟ್ಟಿದರು. ತಸ್ಯ=ಆ ಬಲಿಚಕ್ರವರ್ತಿಗಳ ಸುಶ್ಲೋಕ್ಯಃ=ಪುಣ್ಯಕೀರ್ತಿರೂಪವಾದ ಅನುಭಾವಃ = ಮಹಿಮೆಯು ಪಶ್ಚಾತ್ = ಮುಂದೆ ಎಂಟನೆಯ ಸ್ಕಂಧದಲ್ಲಿ ಅಭಿಧಾಸ್ಯತೇ ಏವ=ವ್ಯಾಸರಿಂದ ಅಥವಾ ನನ್ನಿಂದ ಹೇಳಲ್ಪಟ್ಟೇ ಪಡುವುದು. ಅನುಭಾವಂ ಎಂಬ ಪಾಠದಲ್ಲಿ ಮಹಿಮೆಯನ್ನು ಹೇಳುವರು ಎಂದರ್ಥ. ॥ ೧೬, ೧೭ ॥

ಬಾಣಸ್ತ್ವಾರಾಧ್ಯ ಗಿರಿಶಂ ಲೇಭೇ ತದ್ಗಣಮುಖ್ಯತಾಮ್ ।
ಯತ್ಪಾರ್ಶ್ವೇ ಭಗವಾನಾಸ್ತೇ ಅದ್ಯಾಪಿ ಪುರಪಾಲಕಃ ॥ ೧೮ ॥

ಇವನ ತಲೆಯನ್ನು ಚಕ್ರದಿಂದ ಕತ್ತರಿಸಿದನು. ಸಂಹ್ಲಾದನ ಹೆಂಡತಿ ಮತಿಯು ಪಂಚಜನನನ್ನು ಪಡೆದಳು. ಹ್ಲಾದನ ಹೆಂಡತಿ ಧಮನಿಗೆ ವಾತಾಪಿ, ಇಲ್ವಲರೆಂಬ ಇಬ್ಬರು ಮಕ್ಕಳು. ಈ ಇಲ್ವಲನು ಅತಿಥಿಗಳಾಗಿ ಬಂದಿದ್ದ ಅಗಸ್ತ್ಯರಿಗೆ (ಮೇಕೆಯ ಆಕಾರದಲ್ಲಿದ್ದ) ವಾತಾಪಿಯನ್ನು ಅಡುಗೆ ಮಾಡಿ ಹಾಕಿದ್ದನು. ಅನುಹ್ಲಾದನ ಹೆಂಡತಿ ಸೂರ್ಮ್ಯಯಲ್ಲಿ ಬಾಷ್ಕಲ ಮತ್ತು ಮಹಿಷರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಪ್ರಹ್ಲಾದ ರಾಜರ ಮಗನೇ ವಿರೋಚನ. ಅವನ ಮಕ್ಕಳು ಬಲಿಚಕ್ರವರ್ತಿಗಳು. ಅವರಿಗೆ ಅಶನೆಯೆಂಬ ಹೆಂಡತಿಯಲ್ಲಿ ಬಾಣ ಮೊದಲಾದ ನೂರು ಕೇತುಗಳು ಮಕ್ಕಳಾದರು. ಬಲಿಚಕ್ರವರ್ತಿಗಳ ಪವಿತ್ರ ಕೀರ್ತಿರೂಪವಾದ ಮಹಿಮೆಯನ್ನು

ಬಾಣಃ ತು = ಬಲಿಯ ನೂರು ಮಕ್ಕಳಲ್ಲಿ ದೊಡ್ಡವನಾದ ಬಾಣನಾದರೋ ಗಿರಿಶಂ=ರುದ್ರದೇವರನ್ನು ಆರಾಧ್ಯ = ಆರಾಧಿಸಿ ತದ್ಗಣ ಮುಖ್ಯತಾಂ=ಆ ರುದ್ರನ ಭೂತಗಣಗಳಲ್ಲಿ ಪ್ರಧಾನತೆಯನ್ನು ಲೇಭೇ=ಹೊಂದಿದನು. ಯತ್ಪಾರ್ಶ್ವೇ= ಯಾವ ಈ ಬಾಣಾಸುರನ ಪಕ್ಕದಲ್ಲಿ ಭಗವಾನ್ = ಪೂಜ್ಯರಾದ ರುದ್ರದೇವರು ಅದ್ಯಾಪಿ=ಇಂದಿಗೂ ಪುರಪಾಲಕಃ=ಬಾಣಾಸುರನ ಪಟ್ಟಣದ ರಕ್ಷಕರಾಗಿ ಆಸ್ತೇ= ಇರುವರು. || ೧೮ ||

ಮರುತಶ್ಚ ದಿತೇಃ ಪುತ್ರಾಶ್ಚತ್ವಾರಿಂಶನ್ನವಾಧಿಕಾಃ ।
ತ ಆಸನ್ನಪ್ರಜಾಸ್ಸರ್ವೇ ನೀತಾ ಇಂದ್ರೇಣ ಸಾತ್ಮತಾಮ್ || ೧೯ ||

ದಿತಿಯ ಮಕ್ಕಳಾದ ಮರುತಃ ಚ = ಮರುತ್ತರಾದರೋ ನವಾಧಿಕಾಃ = ಒಂಭತ್ತು ಹೆಚ್ಚಾದ ಚತ್ವಾರಿಂಶತ್=ನಲವತ್ತು ಮಂದಿ. ಅಂದರೆ ನಲವತ್ತೊಂಭತ್ತು ಜನ. ತೇ ಸರ್ವೇ=ಅವರೆಲ್ಲರೂ ಅಪ್ರಜಾಃ = ಸಂತತಿ ಇಲ್ಲದವರಾಗಿ ಆಸನ್= ಆದರು. ತೇ ಸರ್ವೇ=ಆ ನಲವತ್ತೊಂಭತ್ತು ಜನವೂ ಇಂದ್ರೇಣ = ಇಂದ್ರ ದೇವ ರಿಂದ ಸಾತ್ಮತಾಂ = ಸಮಾನ ಜಾತಿತ್ವವನ್ನು ಅಂದರೆ ಸೋದರ ಭಾವವನ್ನು ಅರ್ಥಾತ್ ದೇವತ್ವವನ್ನು ನೀತಾಃ=ಹೊಂದಿಸಲ್ಪಟ್ಟರು. ದಿತಿಯ ಮಕ್ಕಳಾದರೂ ದೈತ್ಯರೆನಿಸದೆ ದೇವತೆಗಳಾದರೆಂದರ್ಥ. || ೧೯ ||

ರಾಜೋವಾಚ—

ಕಥಂ ತ ಆಸುರಂ ಭಾವಮಪೋಹ್ಯೌತ್ಪತ್ತಿಕಂ ಗುರೋ ।
ಇಂದ್ರೇಣ ಪ್ರಾಪಿತಾಃ ಸಾತ್ಮ್ಯಂ ಕಿಂ ನು ಸಾಧು ಕೃತಂ ಹಿ ತೈಃ ||
ಇಮೇ ಶ್ರದ್ದಧತೇ ವಿದ್ವನ್ನೃಷಯೋ ಹಿ ಮಯಾ ಸಹ ।
ಪರಿಜ್ಞಾನಾಯ ಭಗವಂಸ್ತನ್ನೋ ವ್ಯಾಖ್ಯಾತುಮರ್ಹಸಿ || ೨೦ ||

ಗುರೋ = ಗುರುಗಳಾದ ಶುಕಾಚಾರ್ಯರೇ, ತೇ = ಆ ನಲವತ್ತೊಂಭತ್ತು ಮರುತ್ತುಗಳು ಔತ್ಪತ್ತಿಕಂ=ಹುಟ್ಟಿನಿಂದ ಬಂದ ಆಸುರಂ ಭಾವಂ=ದೈತ್ಯತನವನ್ನು

ಮುಂದೆ (ಎಂಟನೆಯ ಸ್ಕಂಧದಲ್ಲಿ) ಹೇಳುತ್ತೇವೆ. ಬಾಣನಾದರೋ ರುದ್ರದೇವರನ್ನು ಆರಾಧಿಸಿ ಅವರ ಭೂತಗಣಗಳಲ್ಲಿ ಮುಖ್ಯನೆನಿಸಿದನು. ಅವನ ಪಾರ್ಶ್ವದಲ್ಲಿ ಪೂಜ್ಯ ರಾದ ರುದ್ರದೇವರು ಇಂದಿಗೂ ಅವನ ಪಟ್ಟಣದ ಪಾಲಕರಾಗಿ ಇದ್ದುಬಿಟ್ಟಿರುವರು. ನಲವತ್ತೊಂಭತ್ತು ಮರುತ್ತರೂ ದಿತಿಯ ಪುತ್ರರೇ. ಅವರು ಯಾರಿಗೂ ಮಕ್ಕಳಿಲ್ಲ. ಇಂದ್ರದೇವರು ಅವರನ್ನು ತಮ್ಮಂತೆಯೇ ದೇವತೆಗಳನ್ನು ಮಾಡಿದರು.

ಪರೀಕ್ಷಿದ್ರಾಜರು—ಗುರುಗಳೇ, ಆ ಮರುತ್ತರು ಹುಟ್ಟಿನಿಂದ ದೈತ್ಯರು. ಅದನ್ನು ತಪ್ಪಿಸಿ ಇಂದ್ರದೇವರು ಅವರನ್ನು ದೇವತೆಗಳನ್ನಾಗಿ ಹೇಗೆ ಮಾಡಿದರು? ಅಂತಹ ಒಳ್ಳೆಯ ಕೆಲಸವನ್ನವರೇನು ಮಾಡಿದರು? ತಾವು ಜ್ಞಾನಿಗಳು; ಪೂಜ್ಯರು ನನ್ನೊಂದಿಗೆ ಈ ನೆರೆದಿರುವ ಋಷಿಗಳೂ ಇದನ್ನು ತಿಳಿಯಲು ಶ್ರದ್ಧಾವಂತರಾಗಿ

ಅಪೋಹ್ಯ - ಕಳೆದು (ಬಿಟ್ಟು) ಇಂದ್ರದೇವರಿಂದ ಸಾತ್ಮ್ಯಂ-ದೇವತ್ವವನ್ನು ಕಥಂ ಪ್ರಾಪಿತಾಃ = ಹೇಗೆ ಹೊಂದಿಸಲ್ಪಟ್ಟರು? ತೈಃ = ಅವರಿಂದ ಸಾಧು - ಪುಣ್ಯವು ಕಿಂ ನು = ಏನು ತಾನೇ ಕೃತಂ-ಮಾಡಲ್ಪಟ್ಟಿತು. ಹಿ-ಇದು ಶಾಸ್ತ್ರಸಿದ್ಧವು. ವಿದ್ವನ್ - ಜ್ಞಾನಿಗಳಾದ ಭಗವನ್ - ಪೂಜ್ಯರೇ, ಇಮೇ-ಇಲ್ಲಿ ನೆರೆದಿರುವ ಈ ಋಷಯಃ ಹಿ=ಋಷಿಗಳಾದರೋ ಮಯಾ ಸಹ-ನನ್ನೊಂದಿಗೆ ಪರಿಜ್ಞಾನಾಯ-ತಿಳಿಯಲು ಶ್ರದ್ದಧತೇ - ಶ್ರದ್ಧೆಯುಳ್ಳವರಾಗಿದ್ದಾರೆ. ತತ್-ಆ ಕಾರಣದಿಂದ ನಃ-ನಮಗೆ ತತ್-ಆ ವಿಷಯವನ್ನು ವ್ಯಾಖ್ಯಾತುಂ-ವಿಸ್ತಾರವಾಗಿ ಹೇಳಲು ಅರ್ಹಸಿ-ಅರ್ಹರಾಗಿರುವಿರಿ. || ೨೦, ೨೧ ||

ಸೂತ ಉವಾಚ—

ತದ್ವಿಷ್ಣುರಾತಸ್ಯ ಸ ಬಾದರಾಯಣಿ-
ರ್ವಚೋ ನಿಶಮ್ಯಾದೃತಮರ್ಥವನ್ಮುನಿಃ ।
ಸಭಾಜಯಂಸ್ತನ್ನಿಭೃತೇನ ಚೇತಸಾ
ಜಗಾದ ಸತ್ರಾಯಣ ಸರ್ವದರ್ಶನಃ || ೨೨ ||

ಹೇ ಸತ್ರಾಯಣ = ಸತ್ರಯಾಗವೇ ಆಶ್ರಯವಾಗಿ ಉಳ್ಳ, ಸತ್ರಯಾಗದಲ್ಲಿ ಪ್ರಧಾನರಾದ ಶೌನಕರೇ, ಸರ್ವದರ್ಶನಃ= ಈ ಬಗೆಯ ಕಥೆಗಳೆಲ್ಲವನ್ನೂ ಬಲ್ಲ, ಸರ್ವಜ್ಞ (ಕಲ್ಪ) ರಾದ ಮುನಿಃ = ಶ್ರೀಹರಿಯನ್ನೇ ಮನನ ಮಾಡುವ ಸಃ ಬಾದರಾಯಣಿಃ = ಬಾದರಾಯಣ (ವ್ಯಾಸ) ರ ಮಕ್ಕಳಾದ ಆ ಶುಕಾಚಾರ್ಯರು ವಿಷ್ಣುರಾತಸ್ಯ = ಪರೀಕ್ಷಿದ್ರಾಜರ ಆದೃತಂ= ಆದರದಿಂದ ಕೂಡಿದ ಅರ್ಥವತ್-ಬಹು ಅರ್ಥವುಳ್ಳ, ತದ್ವಚಃ=ಆ ಪ್ರಶ್ನೆರೂಪವಾದ ಮಾತನ್ನು ನಿಶಮ್ಯ-ಕೇಳಿ ಸಭಾಜಯನ್ = ಪರೀಕ್ಷಿದ್ರಾಜರನ್ನು ಪ್ರಶಂಸಿಸಿದವರಾಗಿ ತನ್ನಿಭೃತೇನ - ಆ ಪರೀಕ್ಷಿದ್ರಾಜರಲ್ಲಿ ಸ್ನೇಹಪೂರ್ಣವಾದ ಚೇತಸಾ = ಮನಸ್ಸಿನಿಂದ ಜಗಾದ= ಹೇಳಿದರು. || ೨೨ ||

ಶ್ರೀ ಶುಕ ಉವಾಚ—

ಹತಪುತ್ರಾ ದಿತಿಃ ಶಕ್ರಪಾರ್ಷ್ಣಿಗ್ರಾಹೇಣ ವಿಷ್ಣುನಾ ।
ಮನ್ಯುನಾ ಶೋಕದೀಪ್ತೇನ ಜ್ವಲಂತೀ ಪರ್ಯಚಿಂತಯತ್ || ೨೩ ||

ದ್ದಾರೆ. ಆದ್ದರಿಂದ ಅದನ್ನು ನಮಗೆ ವಿಸ್ತಾರವಾಗಿ ಹೇಳಿರೆಂದು ಪ್ರಾರ್ಥಿಸುತ್ತೇನೆ.

ಸೂತರು—ಸತ್ರಯಾಗದಲ್ಲಿ ದೀಕ್ಷಿತರಾಗಿರುವ ಶೌನಕಾದಿಗಳೇ, ಬಾದರಾಯಣ ದೇವರ ಮಕ್ಕಳಾದ ಶುಕಾಚಾರ್ಯರು ಈ ಬಗೆಯ ಕಥೆಗಳೆಲ್ಲವನ್ನೂ ಬಲ್ಲವರು. ಶ್ರೀಹರಿಯ ಗುಣಗಳನ್ನು ಮನನ ಮಾಡುವವರು. ಪರೀಕ್ಷಿದ್ರಾಜರು ಆದರಪೂರ್ವಕ ವಾಗಿ ಕೇಳಿದ ಆ ಅರ್ಥವತ್ತಾದ ಮಾತನ್ನು ಕೇಳಿ ರಾಜರನ್ನು ಪ್ರಶಂಸಿಸಿದರು. ಅವರಲ್ಲಿ ಸ್ನೇಹ ತುಂಬಿದ ಮನಸ್ಸಿನಿಂದ ಮರುತ್ತರ ಕಥೆಯನ್ನು ಹೇಳಲಾರಂಭಿಸಿದರು.

ಶ್ರೀ ಶುಕಾಚಾರ್ಯರು—ಇಂದ್ರನ ಪಕ್ಷಪಾತಿಯಾದ ಶ್ರೀಹರಿಯಿಂದ ತನ್ನ

ಶಕ್ರಪಾರ್ಷ್ಣಿಗ್ರಾಹೇಣ=ಇಂದ್ರನಲ್ಲಿ ಪಕ್ಷಪಾತದಿಂದ ಕೆಲಸಮಾಡಿದ, ಇಂದ್ರನಿಗೆ ಹಿಂದಿನಿಂದ ಸಹಾಯಕನಾದ ವಿಷ್ಣುವಿನಿಂದ ಹತಪುತ್ರಾ=ಮಕ್ಕಳನ್ನು ಕಳೆದುಕೊಂಡ (ಹಿರಣ್ಯಾಕ್ಷ ಹಿರಣ್ಯಕಶಿಪುಗಳನ್ನು ಕಳೆದುಕೊಂಡ) ದಿತಿ ದೇವಿಯು ಶೋಕದೀಪ್ತೇನ=ದುಃಖದಿಂದ ಹೆಚ್ಚಾದ (ಶೋಕದೊಂದಿಗೆ ಬೆಳೆದ) ಮನ್ಯುನಾ=ಕೋಪದಿಂದ ಜ್ವಲಂತೀ = ಪ್ರಜ್ವಲಿಸುವಳಾಗಿ ಪರ್ಯಚಿಂತಯತ್ = ಆಲೋಚಿಸಿದಳು. || ೨೩ ||

ಕದಾ ನು ಭ್ರಾತೃಹಂತಾರಮಿಂದ್ರಿಯಾರಾಮಮುಲ್ಬಣಮ್ ।
ಅಕ್ಲಿನ್ನಹೃದಯಂ ಪಾಪಂ ಘಾತಯಿತ್ವಾ ಸ್ವಪೇ ಸುಖಮ್ ॥ ೨೪ ॥

ಭ್ರಾತೃಹಂತಾರಂ=ತಮ್ಮಂದಿರಾದ ದೈತ್ಯರನ್ನು ಕೊಂದ, ಇಂದ್ರಿಯಾರಾಮಂ =ಇಂದ್ರಿಯಗಳನ್ನು ತೃಪ್ತಿಪಡಿಸುವಲ್ಲಿ ಸಂತೋಷಿಸುವ ಉಲ್ಬಣಂ=ಕ್ರೂರಿಯಾದ ಅಕ್ಲಿನ್ನಹೃದಯಂ = ಆರ್ದ್ರಮನಸ್ಸನಲ್ಲದ (ನಿಷ್ಕರುಣಿಯಾದ) ಪಾಪಂ=ಪಾಪಿಯಾದ ಇಂದ್ರನನ್ನು ಘಾತಯಿತ್ವಾ=ಸಂಹಾರಮಾಡಿಸಿ ಕದಾ ನು=ಯಾವಾಗ ನಾನು ಸುಖಂ ಯಥಾತಥಾ=ಸುಖವಾಗಿ ಸ್ವಪೇ=ನಿದ್ರಿಸುವೆನು ! || ೨೪ ||

ಕೃಮಿವಿಟ್‌ಭಸ್ಮ ಸಂಜ್ಞಾಂತೇ ಯಸ್ಯೇಶಾಭಿಹಿತಸ್ಯ ವಾ ।
ಭೂತಧೃಕ್ ತತ್ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ ॥ ೨೫ ॥

ಈಶಾಭಿಹಿತಸ್ಯ ವಾ (ಅಪಿ)= ಈಶನು ನಾನು, ರಾಜನು ನಾನು ಎಂಬ ಮಾತುಗಳಿಂದ ಕರೆಯಲ್ಪಡುವುದಾಗಿದ್ದರೂ ಯಸ್ಯ=ಯಾವ ದೇಹಕ್ಕೆ ಅಂತೇ= ಮರಣಾನಂತರ ಕೃಮಿ ವಿಟ್ ಭಸ್ಮ ಸಂಜ್ಞಾ (ಭವೇತ್)=ಮೂರಾರು ದಿನಗಳಿಟ್ಟಲ್ಲಿ ಹುಳಗಳು ಬಿದ್ದು ಹುಳು ಎಂಬ ಹೆಸರೂ, ನಾಯಿ ಮೊದಲಾದುವು ತಿಂದು ಹೋದಲ್ಲಿ 'ವಿಟ್' (ಅಮೇಧ್ಯ) ಎಂಬ ಸಂಜ್ಞೆಯೂ, ಅಗ್ನಿಯಲ್ಲಿ ಸುಟ್ಟರೆ 'ಭಸ್ಮ' (ಬೂದಿ ಎಂಬ ಸಂಜ್ಞೆಯೂ ಬರುವುದೋ ತತ್ಕೃತೇ=ಅಂತಹ ದೇಹಕ್ಕಾಗಿ ಭೂತಧೃಕ್=ಎಲ್ಲ ಪ್ರಾಣಿಗಳ ಹಿಂಸಕನು ಸ್ವಾರ್ಥಂ = ಸ್ವಪ್ರಯೋಜನವನ್ನು ಕಿಂ ವೇದ=ಏನು ತಾನೇ ತಿಳಿದಿರುವನು? ಏನೂ ತಿಳಿದಿಲ್ಲವೆಂದರ್ಥ. (ಯಃ)= ಯಾವನು ಸ್ವಾರ್ಥಂ ಕುರುತೇ = ಸ್ವಪ್ರಯೋಜನವನ್ನೇ ಮಾಡಿಕೊಳ್ಳುವನೋ

ಮಕ್ಕಳನ್ನು (ಹಿರಣ್ಯಾಕ್ಷ, ಹಿರಣ್ಯಕಶಿಪುಗಳನ್ನು) ಕಳೆದುಕೊಂಡ ದಿತಿದೇವಿಯು ಶೋಕದಿಂದ ಉದ್ದೀಪಿತವಾದ ಕೋಪದಿಂದ ಪ್ರಜ್ವಲಿಸುತ್ತ ಹೀಗೆಂದು ಆಲೋಚಿಸಿದಳು. 'ಈ ಇಂದ್ರನು ಮಹಾಪಾಪಿ, ನಿಷ್ಕರುಣಿ, ಕ್ರೂರಿ, ಇಂದ್ರಿಯ ತೃಪ್ತಿಲೋಲುಪ. ಇವನ ತಮ್ಮಂದಿರಾಗಿರುವ ನನ್ನ ಮಕ್ಕಳನ್ನು ಶ್ರೀಹರಿಯಿಂದ ಸಂಹಾರ ಮಾಡಿಸಿದ್ದಾನೆ. ಈ ಪಾಪಿಯನ್ನು ಸಂಹಾರ ಮಾಡಿಸಿ ನಾನು ಎಂದು ಸುಖನಿದ್ರೆ ಮಾಡಿಯೇನು? ನಾನು ಈಶ, ನಾನು ರಾಜ ಅನ್ನಿಸಿಕೊಳ್ಳುವ ದೇಹ ಮರಣಾನಂತರ ಕೆಲದಿನಗಳಿಟ್ಟರೆ ಹುಳು ಬಿದ್ದು 'ಕೃಮಿ'ಯೆಂದೂ, ನಾಯಿನರಿಗಳ ಆಹಾರವಾಗಿ

(ಸಃ)-ಅವನು ವೇದ ಕಿಂ-ತಿಳಿದವನೇನು? ಜ್ಞಾನಿಯಲ್ಲವೆಂದರ್ಥ. ಯತಃ=ಏಕೆಂದರೆ, ಆ ಭೂತ ದ್ರೋಹದಿಂದ, ಸ್ವರೂಪಾಜ್ಞಾನದಿಂದ ನಿರಯಃ (ಭವತಿ)=ನರಕವಾಗುವುದು. ಇಷ್ಟಪ್ರದದೈವವಿಲ್ಲದವನಾಗುವನು. ಆದ್ದರಿಂದ ಅವನು ಸ್ವಪ್ರಯೋಜನವನ್ನೇ ಹಾಳುಮಾಡಿಕೊಂಡವನೆಂದರ್ಥ. || ೨೫ ||

ಆಶಾಸಾನಸ್ಯ ತಸ್ಯೇದಂ ಧ್ರುವಮುನ್ನದ್ಧಚೇತಸಃ ।
ಮದಶೋಷಣಮಿಂದ್ರಸ್ಯ ಭೂಯಾದ್ಯೇನ ಸುತೋ ಹಿ ಮೇ || ೨೬ ||

ಇದಂ = ಈ ದೇಹ ಮೊದಲಾದ ಜಗತ್ತು ಧ್ರುವಂ ಇತಿ = ಶಾಶ್ವತವೆಂದು ಆಶಾಸಾನಸ್ಯ=ತಿಳಿದಿರುವ ಅಪೇಕ್ಷಿಸುವ ಆದ್ದರಿಂದಲೇ ಉನ್ನದ್ಧ ಚೇತಸಃ=ಉದ್ಧತ ಮನಸ್ಸುಳ್ಳ, ಉಚ್ಛೃಂಖಲ ಬುದ್ಧಿಯುಳ್ಳ ತಸ್ಯ ಇಂದ್ರಸ್ಯ= ಆ ದ್ರೋಹಿ ಇಂದ್ರನ ಮದಶೋಷಣಂ - ಅಹಂಕಾರ ಶೋಷಣೆಯು ಯೇನ = ಯಾವ ಮಗನಿಂದ ಭೂಯಾತ್ = ಆಗುವುದೋ (ಸಃ) ಸುತಃ = ಅಂತಹ ಮಗನು ಮೇ = ನನಗೆ ಭೂಯಾತ್ ಹಿ=ಆಗಬೇಕಲ್ಲವೆ! || ೨೬ ||

ಇತಿ ಭಾವೇನ ಸಾ ಭರ್ತುರಾಚಚಾರಾಸಕೃತ್ಪ್ರಿಯಮ್ ।
ಶುಶ್ರೂಷಯಾಽನುರಾಗೇಣ ಪ್ರಶ್ರಯೇಣ ದಮೇನ ಚ || ೨೭ ||
ಭಕ್ತ್ಯಾ ಪರಮಯಾ ರಾಜನ್ ಮನೋಜ್ಞೈರ್ವಲ್ಗುಭಾಷಿತೈಃ ।
ಮನೋ ಜಗ್ರಾಹ ಭಾವಜ್ಞಾ ಸುಸ್ಮಿತಾಪಾಂಗವೀಕ್ಷಣೈಃ || ೨೮ ||

ಇತಿ ಭಾವೇನ - ಈ ಅಭಿಪ್ರಾಯದಿಂದ ಸಾ - ಆ ದಿತಿದೇವಿಯು ಶುಶ್ರೂಷಯಾ= ಸೇವೆಯಿಂದಲೂ ಅನುರಾಗೇಣ= ಪ್ರೀತಿಯಿಂದಲೂ ಪ್ರಶ್ರಯೇಣ= ವಿನಯದಿಂದಲೂ ದಮೇನ ಚ - ಇಂದ್ರಿಯ ನಿಗ್ರಹದಿಂದಲೂ ಭರ್ತುಃ= ಪತಿಯಾದ ಕಶ್ಯಪರ ಪ್ರಿಯಂ= ಇಷ್ಟವಾದುದನ್ನು ಅಸಕೃತ್ = ಮೇಲಿಂದಮೇಲೆ ಆಚಚಾರ = ಆಚರಿಸಿದಳು. ರಾಜನ್ = ಪರೀಕ್ಷಿದ್ರಾಜನೇ, ಭಾವಜ್ಞಾ = ಪತಿಯ ಭಾವವನ್ನು ಅರಿತ ಆಕೆಯು

'ವಿಟ್' ಎಂದೂ ಬೆಂಕಿಯಲ್ಲಿ ಸುಟ್ಟಾಗ 'ಭಸ್ಮ'ವೆಂದೂ ಕರೆಸಿಕೊಳ್ಳುವುದು. ಈ ದೇಹಕ್ಕಾಗಿ ಪ್ರಾಣಿಗಳನ್ನು ಹಿಂಸಿಸುವವನು ಸ್ವಪ್ರಯೋಜನವನ್ನರಿಯನು. ಸ್ವಾರ್ಥಿಯು ಜ್ಞಾನಿಯಲ್ಲ. ಆ ಭೂತದ್ರೋಹದಿಂದ ಅವನು ನರಕವನ್ನೇ ಸೇರುವನು. (ಹೀಗಾಗಿ ಪ್ರಯೋಜನವನ್ನು ಹಾಳುಮಾಡಿಕೊಂಡವನು). ಈ ದೇಹ ಮೊದಲಾದುವನ್ನು ಶಾಶ್ವತವೆಂದು ತಿಳಿದಿರುವ ಉದ್ಧತ ಮನಸ್ಕನಾದ ಆ ಇಂದ್ರನ ಅಹಂಕಾರ ಶೋಷಣೆಮಾಡುವ ಮಗನೊಬ್ಬನು ನನಗೆ ಆಗಬೇಕಾಗಿದೆ.

ಈ ಭಾವನೆಯಿಂದ ದಿತಿಯು ಸೇವೆಯಿಂದ, ಪ್ರೀತಿಯಿಂದ, ವಿನಯದಿಂದ, ಇಂದ್ರಿಯ ನಿಗ್ರಹದಿಂದ ಗಂಡನಿಗೆ ಪ್ರಿಯವಾದುದನ್ನು ಮತ್ತೆಮತ್ತೆ ಮಾಡುತ್ತ ಬಂದಳು. ಪತಿಯ ಇಂಗಿತವನ್ನರಿತ ಆಕೆ ಪರಮ ಭಕ್ತಿಯಿಂದ ಮನಮೋಹಕ ಮಧುರ ಮಾತುಗಳಿಂದ, ಮುಗುಳುನಗೆಯಿಂದ ಕೂಡಿದ ಕಟಾಕ್ಷ ವೀಕ್ಷಣೆಗಳಿಂದ

ಪರಮಯಾ ಭಕ್ತ್ಯಾ=ಅತಿಶಯವಾದ ಭಕ್ತಿಯಿಂದ, ಮನೋಜ್ಞೈಃ=ಮನೋಹರಗಳಾದ ವಲ್ಗುಭಾಷಿತೈಃ=ಇಂಪಾದ ಮಾತುಗಳಿಂದ ಸುಸ್ಮಿತಾಪಾಂಗವೀಕ್ಷಣೈಃ=ಒಳ್ಳೆಯ ಮಂದಹಾಸದಿಂದ ಕೂಡಿದ ಕುಡಿಗಣ್ಣಿನ ನೋಟಗಳಿಂದ ಮನಃ=ಪತಿಯಾದ ಕಶ್ಯಪರ ಮನಸ್ಸನ್ನು ಜಗ್ರಾಹ=ತನ್ನ ವಶಮಾಡಿಕೊಂಡಳು. || ೨೭, ೨೮ ||

ಏವಂ ಸ್ತ್ರಿಯಾ ಜಡೀಭೂತೋ ವಿದ್ವಾನಪಿ ವಿದಗ್ಧಯಾ ।
ಬಾಢಮಿತ್ಯಾಹ ವಿವಶೋ ನ ತಚ್ಚಿತ್ರಂ ಹಿ ಯೋಷಿತಿ ॥ ೨೯ ॥

ವಿದ್ವಾನ್ ಅಪಿ=ಜ್ಞಾನಿಗಳಾಗಿದ್ದರೂ ಕಶ್ಯಪರು ವಿದಗ್ಧಯಾ=ಪ್ರೌಢೆಯಾದ (ಚತುರೆಯಾದ) ಸ್ತ್ರಿಯಾ=ಸ್ತ್ರೀಯಾದ ಆ ದಿತಿಯಿಂದ ಏವಂ=ಮೇಲೆ ಹೇಳಿದಂತೆ ಜಡೀಭೂತಃ ಸನ್=ವಿಚಾರಮಾಡುವ ಸಾಮರ್ಥ್ಯವಿಲ್ಲದವನಂತೆ ಮಾಡಲ್ಪಟ್ಟವರಾಗಿ ವಿವಶಃ (ಸನ್)=ಸ್ತ್ರೀಗೆ ವಿಶೇಷವಶರಾಗಿ ಬಾಢಂ ಇತಿ= ಹಾಗೆಯೇ ಆಗಲಿ, ನಿನ್ನ ಇಷ್ಟವನ್ನು ನೆರವೇರಿಸುವೆನು ಎಂದು ಆಹ=ಹೇಳಿದರು. ತತ್=ಹೀಗೆ ಪತಿಯನ್ನು ವಶಪಡಿಸಿಕೊಳ್ಳುವುದು ಯೋಷಿತಿ=ಹೆಂಗಸಿನ ವಿಷಯದಲ್ಲಿ ಚಿತ್ರಂ ನ ಹಿ=ಆಶ್ಚರ್ಯವೇನೂ ಅಲ್ಲ! ಜಡೀಕರಣದಲ್ಲಿ ಸ್ತ್ರೀ ಮತ್ತು ವಿದಗ್ಧೆಯೆಂಬೆರಡು ಕಾರಣಗಳನ್ನು ಹೇಳಿರುವರು. || ೨೯ ||

ವಿಲೋಕ್ಯೈಕಾಂತಭೂತಾನಿ ಭೂತಾನ್ಯಾದೌ ಪ್ರಜಾಪತಿಃ ।
ಸ್ತ್ರಿಯಂ ಚಕ್ರೇ ಸ್ವದೇಹಾರ್ಧಾಂ ಯಯಾ ಪುಂಸಾಂ ಮತಿರ್ಹೃತಾ ॥

ಆದೌ=ಜಗತ್ತಿನ ಸೃಷ್ಟಿಯ ಪ್ರಾರಂಭದಲ್ಲಿ ಪ್ರಜಾಪತಿಃ=ಬ್ರಹ್ಮದೇವರು ಭೂತಾನಿ = ಪ್ರಾಣಿಗಳು ಏಕಾಂತಭೂತಾನಿ = ಪರಸ್ಪರ ಸ್ನೇಹವಿಲ್ಲದವುಗಳಾಗಿ, ಕೇವಲ ಒಂದಕ್ಕೊಂದು ವೃತ್ತ್ಯುಗಳಾಗಿ ಆದದ್ದನ್ನು ವಿಲೋಕ್ಯ=ನೋಡಿ ಅವುಗಳಲ್ಲಿ ಪರಸ್ಪರ ಸ್ನೇಹ ಹುಟ್ಟಿಸುವುದಕ್ಕಾಗಿ ಸ್ವದೇಹಾರ್ಧಾಂ=ತನ್ನ ದೇಹದ ಅರ್ಧವಾದ ಸ್ತ್ರಿಯಂ=ಹೆಂಗುಸನ್ನು ಚಕ್ರೇ=ಸೃಷ್ಟಿಸಿದರು. ಸ್ವದೇಹಾರ್ಧಾತ್ ಎಂಬ ಪಾಠದಲ್ಲಿ ತನ್ನ ದೇಹಾರ್ಧದಿಂದ ಎಂದರ್ಥ. ಯಯಾ=ಯಾವ ಈ ಸ್ತ್ರೀಯಿಂದ ಪುಂಸಾಂ=ಪುರುಷರ ಮತಿಃ=ಬುದ್ಧಿಯು ಹೃತಾ=ಅಪಹರಿಸಲ್ಪಟ್ಟಿತು. ಇದರಿಂದ ಪುರುಷವಶೀಕರಣವು ಸ್ತ್ರೀಯರಿಗೆ ನಿಸರ್ಗಸಿದ್ಧವೆಂದಾಯಿತು. || ೩೦ ||

ಕಶ್ಯಪರ ಮನಸ್ಸನ್ನು ಒಲಿಸಿಕೊಂಡಳು. ಕಶ್ಯಪರು ಜ್ಞಾನಿಗಳೇ ಅಹುದು. ಆದರೂ ಚತುರಳಾದ ದಿತಿಯ ಉಪಚಾರಕ್ಕೆ ಸೋತು ವಿಚಾರ ಸಾಮರ್ಥ್ಯವನ್ನೇ ಕಳೆದುಕೊಂಡು ಸ್ತ್ರೀವಶರಾಗಿ 'ನಿನ್ನ ಇಷ್ಟದಂತಾಗಲಿ' ಎಂದು ಮಾತುಕೊಟ್ಟರು. ಹೆಂಗುಸು ಗಂಡನನ್ನು ವಶಪಡಿಸಿಕೊಳ್ಳುವುದು ಆಶ್ಚರ್ಯವೇನಲ್ಲ. ಬ್ರಹ್ಮದೇವರು ಸೃಷ್ಟಿಯ ಪ್ರಾರಂಭದಲ್ಲಿ ಪ್ರಾಣಿಗಳನ್ನು ಸೃಷ್ಟಿಸಿದರು. ಅವುಗಳಲ್ಲಿ ಪರಸ್ಪರ ಸ್ನೇಹವಿಲ್ಲದೆ ಒಂದಕ್ಕೆ ಮತ್ತೊಂದು ವೃತ್ತ್ಯುಗಳಾದುವು. ಇದನ್ನು ಕಂಡ ಅವರು

*

ಏವಂ ಶುಶ್ರೂಷಿತಸ್ತಾತ ಭಗವಾನ್ ಕಶ್ಯಪಃ ಸ್ತ್ರಿಯಾ ।
ಪ್ರಹಸ್ಯ ಪರಮಪ್ರೀತೋ ದಿತಿಮಾಹಾಭಿನಂದ್ಯ ಚ ॥ ೩೧ ॥

ತಾತ = ಮಗು ಪರೀಕ್ಷಿದ್ರಾಜ, ಸ್ತ್ರಿಯಾ = ಹೆಂಗುಸಾದ ದಿತಿಯಿಂದ ಏವಂ = ಮೇಲೆ ಹೇಳಿದಂತೆ ಶುಶ್ರೂಷಿತಃ = ಸೇವಿತರಾದ ಪೂಜ್ಯರಾದ ಕಶ್ಯಪರು ಪರಮ ಪ್ರೀತರಾಗಿ ಪ್ರಹಸ್ಯ = ದೊಡ್ಡದಾಗಿ ನಕ್ಕು ಚ = ಮತ್ತು ಅಭಿನಂದ್ಯ = ಆಕೆಯನ್ನು ಮೆಚ್ಚು ಮಾತುಗಳಿಂದ ಪ್ರಶಂಸಿಸಿ ದಿತಿ ದೇವಿಯನ್ನು ಕುರಿತು ಆಹ = ಹೇಳಿದರು. ॥ ೩೧ ॥

ಕಶ್ಯಪ ಉವಾಚ—

ವರಂ ವರಯ ವಾಮೋರು ಪ್ರೀತಸ್ತೇಽಹಮನಿಂದಿತೇ ।
ಸ್ತ್ರೀಣಾಂ ಭರ್ತರಿ ಸುಪ್ರೀತೇ ಕಃ ಕಾಮ ಇಹ ಚಾಗಮಃ ॥ ೩೨ ॥

ಹೇ ವಾಮೋರು = ಸುಂದರ ತೊಡೆಯವಳೇ (ಸುಂದರಿಯೇ), ವರವನ್ನು ವರಯ = ಕೇಳಿಕೋ. ಹೇ ಅನಿಂದಿತೇ = ನಿಂದೆಯಿಲ್ಲದವಳೇ (ಪತಿವ್ರತೆಯೇ), ತೇ = ನಿನ್ನ ವಿಷಯದಲ್ಲಿ ಅಹಂ = ಪತಿಯಾದ ನಾನು ಪ್ರೀತಃ = ಸುಪ್ರೀತನಾಗಿದ್ದೇನೆ. ಭರ್ತರಿ = ಗಂಡನು ಸ್ತ್ರೀಣಾಂ = ಸ್ತ್ರೀಯರ (ಹೆಂಡತಿಯ) ವಿಷಯದಲ್ಲಿ ಸುಪ್ರೀತ ನಾಗಿರಲು ಇಹ = ಈ ಲೋಕದಲ್ಲಿಯೂ ಚ = ಪರಲೋಕದಲ್ಲಿಯೂ ಕಃ ಕಾಮಃ = ಯಾವ ಆಶೆಯು, ಯಾವ ಪುರುಷಾರ್ಥವು ಅಗಮಃ = ಹೊಂದಲಾಗದುದು. ಎಲ್ಲವೂ ಹೊಂದಲಾಗುವುದೆಂದು ಅಭಿಪ್ರಾಯ. ॥ ೩೨ ॥

ಪತಿರೇವ ಹಿ ನಾರೀಣಾಂ ದೈವತಂ ಪರಮಂ ಸ್ಮೃತಮ್ ।
ಮಾನಸಃ ಸರ್ವಭೂತಾನಾಂ ವಾಸುದೇವಃ ಶ್ರಿಯಃ ಪತಿಃ ॥ ೩೩ ॥

ಪರಮ ದೈವತೆಯು ಪ್ರಸನ್ನವಾದರೆ ಸರ್ವ ಪುರುಷಾರ್ಥ ದೊರೆಯುವುದೆಂದು ಪ್ರಸಿದ್ಧಿಯುಂಟು. ಗಂಡನು ಸುಪ್ರೀತನಾದರೆ ಸರ್ವ ಪುರುಷಾರ್ಥ ಲಾಭ ಹೇಗೆ? ಎಂದರೆ ಹೇಳುತ್ತಾರೆ. ಹಿ = ಏಕೆಂದರೆ, ನಾರೀಣಾಂ ಹೆಂಗುಸರಿಗೆ ಪತಿಃ ಏವ = ಗಂಡನೇ ಪರಮ ದೈವತೆಯೆಂದು ಸ್ಮೃತಂ = ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದು. 'ತದೇತತ್ ಪ್ರೇಯಃ' ಎಂಬ ಶ್ರುತಿಯಂತೆ ನಿಸ್ಸಂಶಯವಾಗಿ ಎಲ್ಲರಿಗೂ ಶ್ರೀಧರನೇ

ಸ್ನೇಹಪರಗಳನ್ನಾಗಿಸಲು ತಮ್ಮ ಅರ್ಧದೇಹದಿಂದ ಹೆಂಗುಸನ್ನು ಸೃಷ್ಟಿಸಿದರು. ಸ್ತ್ರೀಯಿಂದ ಪುರುಷರ ಬುದ್ಧಿಯೇ ಅಪಹೃತವಾಯಿತು. ಪರೀಕ್ಷಿದ್ರಾಜ, ದಿತಿಯಿಂದ ಈ ರೀತಿಯಲ್ಲಿ ಸೇವಿತರಾದ ಕಶ್ಯಪರು ಅತ್ಯಂತ ಸಂತುಷ್ಟರಾಗಿ ನಕ್ಕು ಆಕೆಯನ್ನು ಪ್ರಶಂಸಿಸಿ 'ಸುಂದರಿ, ಬೇಕಾದ ವರವನ್ನು ಕೇಳಿಕೋ. ನಿಂದೆಯಿಲ್ಲದವಳೇ, ನಿನ್ನ ವಿಷಯದಲ್ಲಿ ನಾನು ಪ್ರೀತನಾಗಿದ್ದೇನೆ. ಗಂಡನು ಸಂತುಷ್ಟನಾದನೆಂದರೆ ಹೆಂಗುಸರಿಗೆ ಸಿಗದಿರುವಂಥಾ ಇಷ್ಟವಾವುದು? ನಾರಿಯರಿಗೆ ಪತಿಯೇ ಪರದೇವತೆಯೆಂದು ಶಾಸ್ತ್ರಗಳು ಹೇಳುತ್ತಿವೆ. ಲಕ್ಷ್ಮಿಗೆ ಪಾಲಕನೂ ಸರ್ವವ್ಯಾಪಿಯೂ ಆದ

ಪರಮೇಷ್ಟ ದೇವತೆಯೆಂದಿರುವಾಗ ಹೆಂಗುಸರಿಗೆ ಗಂಡನೇ ಪರಮ ದೇವತೆಯೆಂದು ಬೇರೆಯಾಗಿ ಹೇಗೆ ಹೇಳುತ್ತೀರಿ? ಎಂದರೆ ಹೇಳುತ್ತಾರೆ. ಶ್ರಿಯಃ-ಲಕ್ಷ್ಮಿಗೆ ಪತಿಃ- ಪಾಲಕನಾದ ವಾಸುದೇವಃ = ಸರ್ವತ್ರ ವ್ಯಾಪ್ತನಾದ ಶ್ರೀಹರಿಯು ಸರ್ವ-ಭೂತಾನಾಂ=ಎಲ್ಲ ಪ್ರಾಣಿಗಳ ಮಾನಸಃ-ಮನಸ್ಸಿನಲ್ಲಿರುವವನಾಗಿ ಮನಸ್ಸಿನಿಂದ ಪೂಜ್ಯನು. ಇದರಿಂದ ಪತಿಯ ಮನಸ್ಸಿನಲ್ಲಿ ಸನ್ನಿಹಿತನಾಗಿರುವ ಶ್ರೀಹರಿಯೇ ಪರಮ ದೈವತೆಯೆಂದು ಹೇಳಿದಂತಾಯಿತು. ವಾಸುದೇವನಾರು? ಎಂದರೆ ಶ್ರಿಯಃ ಪತಿಃ ಎಂದು ಉತ್ತರ. || ೩೩ ||

ಸ ಏವ ದೇವತಾಲಿಂಗೈರ್ನಾಮರೂಪವಿಕಲ್ಪಿತೈಃ ।
ಇಜ್ಯತೇ ಭಗವಾನ್ ಪುಂಭಿಃ ಸ್ತ್ರೀಭಿಶ್ಚ ಪತಿರೂಪಧೃಕ್ || ೩೪ ||

ಇದನ್ನೇ ವಿಶದಪಡಿಸುತ್ತಾರೆ. ಭಗವಾನ್ = ಸಮಗ್ರ ಐಶ್ವರ್ಯವಂತನಾದ ಸಃ ಏವ – ಆ ವಾಸುದೇವನೇ ಸ್ತ್ರೀಯರಿಂದಲೂ ಪುರುಷರಿಂದಲೂ ನಾಮರೂಪಗಳಿಂದ ವಿವಿಧವಾಗಿ ಮಾಡಲ್ಪಟ್ಟ ದೇವತಾಲಿಂಗೈಃ = ದೇವತಾ ವಿಗ್ರಹಗಳಿಂದ ವಿಶೇಷವಾಗಿ ಅವುಗಳಲ್ಲಿ ಸನ್ನಿಹಿತನಾಗಿ ಇಜ್ಯತೇ = ಪೂಜಿಸಲ್ಪಡುವನು. ಅದರಲ್ಲಿಯೂ ಸ್ತ್ರೀಯರಿಂದ ಪತಿರೂಪಧೃಕ್=ಪತಿಯಲ್ಲಿ ಸನ್ನಿಹಿತವಾದ ರೂಪ ವಿಶೇಷಧರನಾಗಿ ಇಜ್ಯತೇ=ಪೂಜಿಸಲ್ಪಡುವನು. ಬೇರೆಯಾಗಿ ಪೂಜಿಸಲ್ಪಡುವುದಿಲ್ಲ. ಪುರುಷರಿಂದ ದೇವತಾ ವಿಗ್ರಹಗಳಲ್ಲಿ ವಿವಿಧ ನಾಮ ಮತ್ತು ರೂಪಗಳಿಂದ ಪೂಜಿಸಲ್ಪಡುವನು. ಅಲೌಕಿಕಾರ್ಥಗಳಾದ ನಾಮುಗಳಿಂದಲೂ ಅಪ್ರಾಕೃತರೂಪಗಳಿಂದಲೂ ಕೂಡಿದವನನ್ನಾಗಿ ವಿವಿಧವಾಗಿ ಅಭಿವ್ಯಕ್ತಗಳಾದ ದೇವತೆಗಳಲ್ಲಿರುವ ಮೂರ್ತಿ ವಿಶೇಷಗಳಿಂದ ಆಯಾಯಾ ಅಧಿಕಾರಿ ಪುರುಷರಿಂದ ಪೂಜಿತನಾಗುವನೆಂದರ್ಥ. ಇದರಿಂದ ಭಗವತ್ಪ್ರೀತಿಯು ಪುರುಷಾರ್ಥ ಸಾಧನವಾಗಿದ್ದಲ್ಲಿ ಭಗವಂತನನ್ನೇ ಬೇರೆಯಾಗಿ ಹೆಂಗುಸರು ಪೂಜಿಸಬೇಕಿತ್ತು. ಪತಿಯನ್ನೇಕೆ ಸೇವಿಸಬೇಕು? ಎಂಬ ಆಶಂಕೆಗೆ ಉತ್ತರಕೊಟ್ಟಂತಾಯಿತು. ಲಿಂಗವೆಂದರೆ ಲಕ್ಷಣ ಮತ್ತು ವಿಗ್ರಹ. || ೩೪ ||

ತಸ್ಮಾತ್ಪತಿವ್ರತಾ ನಾರ್ಯಃ ಶ್ರೇಯಃಕಾಮಾಃ ಸುಮಧ್ಯಮೇ ।
ಯಜಂತೇಽನನ್ಯಭಾವೇನ ಪತಿಮಾತ್ಮಾನಮೀಶ್ವರಮ್ || ೩೫ ||

ಪತಿಯಲ್ಲಿ ಸನ್ನಿಹಿತನಾಗಿ ಶ್ರೀಹರಿ ಇರುವುದರಿಂದ ಪತಿಯನ್ನು ಪೂಜಿಸುವುದರಿಂದ ಶ್ರೀಹರಿಯನ್ನೇ ಪೂಜಿಸಿದಂತಾಗುವುದೆಂದು ಮುಗಿಸುತ್ತಾರೆ. ತಸ್ಮಾತ್=

ಶ್ರೀಹರಿಯು ಎಲ್ಲರ ಮನಸ್ಸಿನಲ್ಲಿದ್ದು ಪೂಜ್ಯನಾಗಿರುವನು. ಅವನೇ ನಾಮರೂಪಗಳಿಂದ ವಿವಿಧ ರೀತಿಯಲ್ಲಿ ನಿರ್ಮಿತಗಳಾದ ದೇವತಾ ವಿಗ್ರಹಗಳಿಂದ ಅವುಗಳಲ್ಲಿ ಸನ್ನಿಹಿತನಾಗಿದ್ದು ಸ್ತ್ರೀ ಪುರುಷರಿಂದ ಪೂಜಿತನಾಗಿರುವನು. ಸ್ತ್ರೀಯರಿಂದಲಾದರೋ ಪತಿಗತರೂಪದಿಂದಲೇ ಪೂಜಿತನು. ಆದ್ದರಿಂದ ಪತಿವ್ರತೆಯರಾದ ನಾರಿಯರು—

ಪತಿಯಲ್ಲಿಯೇ ಶ್ರೀಹರಿಯನ್ನು ಸೇವಿಸಬೇಕಾದ್ದರಿಂದ ಸುಮಧ್ಯಮೇ=ಸುಂದರಿಯೇ, ಶ್ರೇಯಃಕಾಮಾಃ = ಶ್ರೇಯಸ್ಸನ್ನು ಹೊಂದಲಪೇಕ್ಷಿಸುವ ಪತಿವ್ರತಾಃ = ಪತಿವ್ರತೆಯರಾದ ನಾರ್ಯಃ=ಸ್ತ್ರೀಯರು ಪತಿಂ=ಗಂಡನಲ್ಲಿ ಸನ್ನಿಹಿತನಾಗಿ (ಮುಖ್ಯ ಪತಿ) ಇರುವ ಈಶ್ವರಂ = ಸರ್ವಾಭೀಷ್ಟಗಳನ್ನು ಕೊಡಲು ಸಮರ್ಥನಾದ ಆತ್ಮಾನಂ= ಪರಮಾತ್ಮನನ್ನೇ ಅನನ್ಯಭಾವೇನ=ಅವನನ್ನು ಬಿಟ್ಟು ಮತ್ತೊಂದನ್ನು ಯೋಚಿಸದೆ ಏಕಾಗ್ರಭಕ್ತಿಯಿಂದ ಯಜಂತೇ=ಪೂಜಿಸುವರು. ॥ ೩೫ ॥

ಯೋಽಹಂ ತ್ವಯಾಽರ್ಚಿತೋ ಭದ್ರೇ ಈದೃಗ್ಭಾವೇನ ಭಕ್ತಿತಃ ।
ಕಿಂ ತೇ ಸಂಪಾದಯೇ ಕಾಮಮಸತೀನಾಂ ಸುದುರ್ಲಭಮ್ ॥ ೩೬ ॥

ಭದ್ರೇ=ಮಂಗಳಕರಳೇ, ಯಃ ಅಹಂ=ಯಾವ ನಾನು ತ್ವಯಾ=ಪತಿವ್ರತೆಯಾದ ನಿನ್ನಿಂದ ಈದೃಕ್ ಭಾವೇನ=ಪತಿಯಲ್ಲಿ ಸನ್ನಿಹಿತನಾಗಿರುವ ಶ್ರೀಹರಿಯು ಪ್ರಸನ್ನನಾಗಲಿ ಎಂಬ ಭಾವನೆಯಿಂದ ಭಕ್ತಿತಃ=ಭಕ್ತಿಯಿಂದ ಅರ್ಚಿತಃ=ಪೂಜಿತನಾಗಿರುವೆನೋ ಸಃ ಅಹಂ = ಆ ನಾನು ಅಸತೀನಾಂ = ಪತಿವ್ರತೆಯರಲ್ಲದವರಿಗೆ ಸುದುರ್ಲಭಂ=ಅತ್ಯಂತ ದುರ್ಲಭವಾದ ತೇ=ನಿನ್ನ ಕಾಮಂ=ಇಷ್ಟವನ್ನು ಕಿಂ=ಏನನ್ನು ಸಂಪಾದಯೇ=ಒದಗಿಸಲಿ? ಮುಂದಿನ ಸ್ಕಂಧದಲ್ಲಿ 'ಯಾ ಪತಿಂ ಹರಿಭಾವೇನ ಭಜೇತ್, ಶ್ರೀರಿವ ತತ್ಪರಾ । ಹರ್ಯಾತ್ಮನಾ, ಹರೇರ್ಲೋಕೇ ಪತ್ಯಾ ಶ್ರೀರಿವ ಮೋದತೇ ॥' ಎಂದು ಮೂಲದಲ್ಲಿಯೂ 'ಹರಿಃ ಅಸ್ಮಿನ್ ಸ್ಥಿತ ಇತಿ ಸ್ತ್ರೀಣಾಂ ಭರ್ತರಿ ಭಾವನಾ । ಶಿಷ್ಯಾಣಾಂ ಚ ಗುರೌ ನಿತ್ಯಂ, ಶೂದ್ರಾಣಾಂ ಬ್ರಾಹ್ಮಣಾದಿಷು ॥ ಭೃತ್ಯಾನಾಂ ಸ್ವಾಮಿನಿ ತಥಾ ಹರಿಭಾವ ಇತೀರಿತಃ ॥' ಎಂದು ತಾತ್ಪರ್ಯದಲ್ಲಿಯೂ ಹೇಳಿರುವುದನ್ನು ಇಲ್ಲಿ ತಿಳಿಯಬಹುದು. ॥ ೩೬ ॥

ದಿತಿರುವಾಚ—

ವರದೋಽಸಿ ಯದಿ ಬ್ರಹ್ಮನ್ ಪುತ್ರಮಿಂದ್ರಹಣಂ ವೃಣೇ ।
ಅಮೃತ್ಯುಂ ಮೃತಪುತ್ರಾಽಹಂ ಯೇನ ಮೇ ಘಾತಿತೌ ಸುತೌ ॥ ೩೭ ॥

ಬ್ರಹ್ಮನ್ = ಬ್ರಹ್ಮಜ್ಞಾನಿಗಳೇ, ವರದಃ = ವರಕೊಡುವವರು ಯದಿ ಅಸಿ = ಆಗಿರುವಿರಿ ಆದರೆ ಮೃತಪುತ್ರಾ = ಇಬ್ಬರು ಮಕ್ಕಳು ಸತ್ತಿರುವ ಅಹಂ = ನಾನು ಯೇನ = ವಿಷ್ಣುವಿನ ಸಹಾಯವನ್ನು ಪಡೆದ ಯಾವ ಇಂದ್ರನಿಂದ ಮೇ ಸುತೌ =

ಶ್ರೇಯಸ್ಸನ್ನು ಬಯಸುವವರು—ಪತಿಯಲ್ಲಿ ಸನ್ನಿಹಿತವಾಗಿರುವ ಸರ್ವಾಭೀಷ್ಟಪ್ರದನಾದ ಪರಮಾತ್ಮನನ್ನೇ ಅನನ್ಯ ಭಕ್ತಿಯಿಂದ ಅರ್ಚಿಸುತ್ತಾರೆ. ಭದ್ರೆ, ಈ ಭಾವದಿಂದ ನನ್ನನ್ನು ಭಕ್ತಿಯಿಂದ ಪೂಜಿಸಿರುವೆ. ನಿನ್ನ ಯಾವ ಅಪೇಕ್ಷೆಯನ್ನು ನಾನು ಪೂರೈಸಲಿ. ಈ ಇಷ್ಟಸಿದ್ಧಿಯು ಅಸತಿಯರಿಗೆ ಎಂದೂ ದೊರೆಯುವುದಲ್ಲ' ಎಂದು ಅನುಗ್ರಹಿಸಿದರು.

ಅದಕ್ಕಾದಿತಿಯು 'ಬ್ರಹ್ಮಜ್ಞಾನಿಗಳೇ, ತಾವು ವರಪ್ರದರಾಗುವಿರಾದರೆ ಇಂದ್ರ

ನನ್ನ ಇಬ್ಬರು ಮಕ್ಕಳು ಘಾತಿತೌ=ಸಾಯಿಸಲ್ಪಟ್ಟರೋ ಆ ಇಂದ್ರಹಣಂ=ಇಂದ್ರನನ್ನು ಸಂಹರಿಸುವ ಅಮೃತ್ಯುಂ=ಸಾವಿಲ್ಲದ ಪುತ್ರಂ=ಮಗನನ್ನು ವೃಣೇ=ಅನುಗ್ರಹಿಸಬೇಕೆಂದು ಬೇಡುತ್ತೇನೆ. || ೩೭ ||

ನಿಶಮ್ಯ ತದ್ವಚೋ ವಿಪ್ರೋ ವಿಮನಾಃ ಪರ್ಯತಪ್ಯತ ।
ಅಹೋ ಅಧರ್ಮಃ ಸುಮಹಾನದ್ಯ ಮೇ ಸಮುಪಸ್ಥಿತಃ ॥ ೩೮ ॥

ತದ್ವಚಃ=ಆ ದಿತಿಯ ಮಾತನ್ನು ನಿಶಮ್ಯ=ಕೇಳಿ ವಿಪ್ರಃ=ಬ್ರಾಹ್ಮಣರಾದ ಕಶ್ಯಪರು ವಿಮನಾಃ=ಮನನೊಂದವರಾಗಿ ಪರ್ಯತಪ್ಯತ=ಪರಿತಪಿಸಿದರು. **ಅಹೋ**=ಅಯ್ಯೋ! ಅದ್ಯ=ಈಗ ಸುಮಹಾನ್=ಅತಿ ದೊಡ್ಡದಾದ, ಅತಿಶಯವಾದ, ಅಧರ್ಮಃ=ಅಧರ್ಮವು ಮೇ=ನನಗೆ ಸಮುಪಸ್ಥಿತಃ=ಒದಗಿಬಂದಿದೆ. || ೩೮ ||

ಅಹೋ ಅದ್ಯೇಂದ್ರಿಯಾರಾಮೋ ಯೋಷಿನ್ಮಯ್ಯೇಶಮಾಯಯಾ ।
ಗೃಹೀತಚೇತಾಃ ಕೃಪಣಃ ಪತಿಷ್ಯೇ ನರಕೇ ಧ್ರುವಮ್ ॥ ೩೯ ॥

ಅಹೋ=ಅಯ್ಯೋ! ಅದ್ಯ=ಇಂದು ಇಂದ್ರಿಯಾರಾಮಃ=ಇಂದ್ರಿಯಗಳನ್ನು ತೃಪ್ತಿಪಡಿಸುವುದರಲ್ಲಿಯೇ ಆನಂದಿಸುವ, ಆದ್ದರಿಂದಲೇ ಯೋಷಿನ್ಮಯ್ಯಾ=ಹೆಂಗುಸೆಂಬ ಈಶಮಾಯಯಾ=ಶ್ರೀಹರಿಯ ಬಂಧಕೇಚ್ಛೆಯಿಂದ ಗೃಹೀತಚೇತಾಃ=ಅಪಹೃತವಾದ ಮನಸ್ಸುಳ್ಳ ಆದ್ಧರಿಂದಲೇ ಕೃಪಣಃ=ಕ್ಷುದ್ರನಾದ (ಅಹಂ)=ನಾನು ನರಕದಲ್ಲಿ ಧ್ರುವಂ=ನಿಶ್ಚಯವಾಗಿಯೂ ಪತಿಷ್ಯೇ=ಬೀಳುವೆನು. || ೩೯ ||

ಕೋಽತಿಕ್ರಮೋಽನುವರ್ತಂತ್ಯಾಃ ಸ್ವಭಾವಮಿಹ ಯೋಷಿತಃ ।
ಧಿಙ್ ಮಾಂ ಬತಾಬುಧಂ ಸ್ವಾರ್ಥೇ ಯದಹಂ ತ್ವಜಿತೇಂದ್ರಿಯಃ ॥

ಇಹ=ಈ ವಿಷಯದಲ್ಲಿ ಸ್ವಭಾವಂ=ಗೂಢವಾದ ಚೌರ್ಯಭಾವವನ್ನು, ಸೌಶೀಲ್ಯವನ್ನು ಅನುವರ್ತಂತ್ಯಾಃ=ಅನುಸರಿಸಿ ನಡೆಯುವ ಯೋಷಿತಃ=ಹೆಂಗುಸಿನ ಅತಿಕ್ರಮಃ=ಅನ್ಯಾಯವು, ಅಪರಾಧವು ಕಃ=ಯಾವುದು? ಅವಳ ಅಪರಾಧವೇನೂ ಇಲ್ಲ. ಅಬುಧಂ ಮಾಂ=ಮೂರ್ಖನಾದ ನನಗೆ ಧಿಕ್=ಧಿಕ್ಕಾರವು! ಬತ=

ನನ್ನು ಸಂಹರಿಸುವ ಮಗನನ್ನು ಅಪೇಕ್ಷಿಸುತ್ತೇನೆ. ಕರುಣಿಸಿರಿ. ನನ್ನ ಇಬ್ಬರು ಮಕ್ಕಳನ್ನೂ ಅವನು ಕೊಲ್ಲಿಸಿದ್ದಾನೆ. ಮಕ್ಕಳನ್ನು ಕಳೆದುಕೊಂಡ ನಾನು ಮೃತ್ಯುವಿಲ್ಲದ ಮಗನನ್ನು ಬಯಸುತ್ತೇನೆ' ಎಂದು ನುಡಿದಳು.

ಆಕೆಯ ಮಾತನ್ನು ಕೇಳಿ ಬ್ರಾಹ್ಮಣರಾದ ಕಶ್ಯಪರು ಮನನೊಂದು ಮರುಗಿದರು. 'ಆಹಾ! ಈಗ ನನಗೆ ಬಹು ದೊಡ್ಡ ಪಾಪವೇ ಬಂದೊದಗಿತು. ಅಯ್ಯೋ! ಇಂದ್ರಿಯಲೋಲುಪನಾಗಿ ಹೆಂಗುಸಿನ ರೂಪದಲ್ಲಿರುವ ಶ್ರೀಹರಿಯ ಬಂಧಕೇಚ್ಛೆಯಿಂದ ಅಪಹೃತಮನಸ್ಕನಾಗಿ ಅಲ್ಪನಂತಾದ ನಾನು ಈಗ ನರಕದಲ್ಲಿ ಬೀಳುವುದು ನಿಜ. ಈ ವಿಷಯದಲ್ಲಿ ದಿತಿಯದೇನೂ ಅಪರಾಧವಿಲ್ಲ. ಅವಳು

ಖೇದವು ! ಯತ್ - ಏಕೆಂದರೆ, ಸ್ವಾರ್ಥೇ - ಸ್ವಪ್ರಯೋಜನದಲ್ಲಿ ಅಹಂ ತು-ನಾನಾದರೋ ಅಜಿತೇಂದ್ರಿಯಃ=ಜಿತೇಂದ್ರಿಯನಲ್ಲ ! ಜಿತೇಂದ್ರಿಯನಲ್ಲದೆ ಹೋದ ನನ್ನದೇ ತಪ್ಪೆಂದು ಅಭಿಪ್ರಾಯ. || ೪೦ ||

ಶರಚ್ಚಂದ್ರೋಪಮಂ ವಕ್ತ್ರಂ ವಚಶ್ಚ ಶ್ರವಣಾಮೃತಮ್ ।
ಹೃದಯಂ ಕ್ಷುರಧಾರಾಭಂ ಸ್ತ್ರೀಣಾಂ ಕೋ ವೇದ ಚೇಷ್ಟಿತಮ್ ॥

ಸ್ತ್ರೀಯರ ವಕ್ತ್ರಂ=ಮುಖವು ಶರತ್ಕಾಲದ ಚಂದ್ರನಿಗೆ ಸಮಾನವು. ವಚಃ ಚ (ತು)=ಮಾತಾದರೋ ಶ್ರವಣಾಮೃತಂ=ಕಿವಿಗೆ ಅಮೃತದಂತಿರುವುದು. ಆದರೆ ಹೃದಯಂ = ಮನಸ್ಸು ಕ್ಷುರಧಾರಾಭಂ - ಕತ್ತಿಯ ಅಲಗಿನಂತೆ ಕ್ರೂರವಾದುದು. ಸ್ತ್ರೀಯರ ಚೇಷ್ಟಿತಂ = ಚೇಷ್ಟೆಯನ್ನು, ಇಂಗಿತವನ್ನು ಕಃ ವೇದ - ಯಾವನು ತಿಳಿದಾನು ! ಯಾರೂ ತಿಳಿಯಲಾರರು ಎಂದರ್ಥ. || ೪೧ ||

ನಹಿ ಕಶ್ಚಿತ್ಪ್ರಿಯಃ ಸ್ತ್ರೀಣಾಮಂಜಸಾ ಸ್ವಾಶಿಷಾತ್ಮನಾಮ್ ।
ಪತಿಂ ಪುತ್ರಂ ಭ್ರಾತರಂ ವಾ ಘ್ನಂತ್ಯರ್ಥೇ ಘಾತಯಂತಿ ಹಿ ॥ ೪೨ ॥

ಅಂಜಸಾ = ಮುಖ್ಯವಾಗಿ ಸ್ವಾಶಿಷಾತ್ಮನಾಂ = ತಮ್ಮ ಪ್ರಯೋಜನಕ್ಕಾಗಿ ಅಪೇಕ್ಷೆಮಾಡುವ ಮನಸ್ಸುಳ್ಳ ಪ್ರಿಯರಂತೆ ತೋರಿಸಿಕೊಳ್ಳುವ ಸ್ತ್ರೀಯರಿಗೆ ಕಶ್ಚಿತ್-ಯಾವನೂ ಪ್ರಿಯಃ-ಪ್ರೀತಿಪಾತ್ರನು ನಹಿ-ಇಲ್ಲ. ಅರ್ಥೇ-ತಮ್ಮ ಪ್ರಯೋಜನಕ್ಕಾಗಿ ಪತಿಂ=ಗಂಡನನ್ನು, ಪುತ್ರಂ=ಮಗನನ್ನು, ಭ್ರಾತರಂ ವಾ- ಸಹೋದರನನ್ನೂ ಘ್ನಂತಿ=ಕೊಲ್ಲುವರು. ಘಾತಯಂತಿ-ಕೊಲ್ಲಿಸುವರು. ಹಿ-ಇದು ಅನುಭವಸಿದ್ಧವು. ಮೇಲಿನ ಎರಡು ಶ್ಲೋಕಗಳಿಂದ ಸ್ತ್ರೀಯರ ಸ್ವಭಾವವನ್ನು ವರ್ಣಿಸಿರುವರು. || ೪೨ ||

ಪ್ರತಿಶ್ರುತಂ ದದಾಮೀತಿ ವಚಸ್ತನ್ನ ಮೃಷಾ ಭವೇತ್ ।
ವಧಂ ನಾರ್ಹತಿ ಚೇಂದ್ರೋಽಪಿ ತತ್ರೇದಮುಪಕಲ್ಪಯೇ ॥ ೪೩ ॥

ದದಾಮಿ ಇತಿ=ಕೇಳಿದ್ದನ್ನು ಕೊಡುತ್ತೇನೆ ಎಂದು ವಚಃ=ಮಾತು ಪ್ರತಿಶ್ರುತಂ-ಪ್ರತಿಜ್ಞೆ ಮಾಡಲ್ಪಟ್ಟಿತು. ತತ್ - ಆ ನನ್ನ ಮಾತು ಮೃಷಾ- ಸುಳ್ಳು

ಹೆಂಗುಸಿನ ಸ್ವಭಾವಕ್ಕನುಗುಣವಾಗಿ ನಡೆದಿದ್ದಾಳೆ. ಸ್ವಾರ್ಥಕ್ಕಾಗಿ ಜಿತೇಂದ್ರಿಯನಲ್ಲದ ಮೂರ್ಖನಾದ ನನಗೇ ಧಿಕ್ಕಾರ ! ಇದು ಖೇದಕರ ! ಹೆಂಗುಸರ ಮುಖ ಶರತ್ಕಾಲದ ಚಂದ್ರನಂತೆ ಆಹ್ಲಾದಜನಕ ; ಮಾತೋ ಕಿವಿಗೆ ಅಮೃತದಂತೆ ಇಂಪು ; ಹೃದಯ ಮಾತ್ರ ಕತ್ತಿಯ ಧಾರೆಯಂತೆ ಅತಿ ತೀಕ್ಷ್ಣ.' ಅವರ ಚೇಷ್ಟೆಯ ಅರ್ಥವನ್ನು ಯಾರೂ ತಿಳಿಯಲಾರರು ! ಮುಖ್ಯವಾಗಿ ತಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳುವ ಮನಸ್ಸುಳ್ಳ ಹೆಂಗುಸರಿಗೆ ಪ್ರಿಯರಾದವರು ಯಾರೂ ಇಲ್ಲ. ತಮ್ಮ ಪ್ರಯೋಜನಕ್ಕಾಗಿ ಅವರು ಗಂಡನನ್ನಾಗಲಿ ಮಗನನ್ನಾಗಲಿ ಸಹೋದರನನ್ನಾಗಲಿ ಕೊಲ್ಲುವರು ! ಕೊಲ್ಲಿಸುವರು ! ಇದು ಅವರ ಸ್ವಭಾವ. ನಾನು ವರ ಕೊಡುತ್ತೇನೆಂದು ಮಾತುಕೊಟ್ಟಿದ್ದೇನೆ. ಅದು ವ್ಯರ್ಥವಾಗುವಂತಿಲ್ಲ. ಇಂದ್ರನಾದರೋ

(ವ್ಯರ್ಥ) ನ ಭವೇತ್—ಆಗುವುದಿಲ್ಲ. ಇಂದ್ರಃ ಅಪಿ=ಇಂದ್ರನಾದರೋ ವಧಂ—ಕೊಲೆಯನ್ನು ನಾರ್ಹತಿ ಚ=ಹೊಂದಲು ಯೋಗ್ಯನಲ್ಲ. ತತ್ರ=ವರವನ್ನು ಕೊಟ್ಟರ ಬೇಕು. ಇಂದ್ರನು ಸಾಯಬಾರದು. ಇದಕ್ಕಾಗಿ ಇದಂ—ಮುಂದೆ ಹೇಳುವ ಉಪಾಯ ವನ್ನು ಉಪಕಲ್ಪಯೇ=ಮಾಡುತ್ತೇನೆ. || ೪೩ ||

ಇತಿ ಸಂಚಿಂತ್ಯ ಭಗವಾನ್ ಮಾರೀಚಃ ಕುರುನಂದನ ।
ಉವಾಚ ಕಿಂಚಿತ್ಕುಪಿತ ಆತ್ಮಾನಂ ಚ ವಿಗರ್ಹಯನ್ ॥ ೪೪ ॥

ಕುರುವಂಶಕ್ಕೇ ಸಂತೋಷಕರನಾದ ಪರೀಕ್ಷಿದ್ರಾಜನೇ, ಭಗವಾನ್ — ಪೂಜ್ಯ ರಾದ ಮಾರೀಚಃ—ಮರೀಚಿಗಳ ಪುತ್ರರಾದ ಕಶ್ಯಪರು ಇತಿ—ಮೇಲೆ ಹೇಳಿದಂತೆ ಸಂಚಿಂತ್ಯ—ಆಲೋಚಿಸಿ ಆತ್ಮಾನಂ—ತಮ್ಮನ್ನು ವಿಗರ್ಹಯನ್=ನಿಂದಿಸಿಕೊಳ್ಳುತ್ತಾ ಕಿಂಚಿತ್ಕುಪಿತಃ—ಸ್ವಲ್ಪ ಸಿಟ್ಟುಗೊಂಡು ಉವಾಚ ಚ=ಮಾತನಾಡಿದರು. || ೪೪ ||

ಕಶ್ಯಪ ಉವಾಚ—

ಪುತ್ರಸ್ತೇ ಭವಿತಾ ಭದ್ರೇ ಇಂದ್ರಹಾ ದೇವಬಾಂಧವಃ ।
ಸಂವತ್ಸರಂ ವ್ರತಮಿದಂ ಯದ್ಯಂಜೋ ಧಾರಯಿಷ್ಯಸಿ ॥ ೪೫ ॥

ಹೇ ಭದ್ರೇ=ಮಂಗಳಕರಳೇ, ಇದಂ=ನಾನು ಹೇಳಲಿರುವ ವ್ರತಂ—ನಿಯಮ ವನ್ನು ಸಂವತ್ಸರಂ—ಒಂದು ವರ್ಷ ಪೂರ್ತಿ ಒಂದು ದಿನವೂ ಬಿಡದೆ ಅಂಜಃ—ಶ್ರದ್ಧೆ ಯಿಂದ ಯಥಾವತ್ತಾಗಿ ಯದಿ ಧಾರಯಿಷ್ಯಸಿ = ಮಾಡುವೆಯಾದರೆ ತೇ = ನಿನಗೆ ದೇವಬಾಂಧವಃ—ದೇವತೆಗಳಿಗೆ ಬಂಧುವಾದ ಇಂದ್ರಹಾ=ಇಂದ್ರಸಂಹಾರಕನಾದ ಪುತ್ರಃ—ಮಗನು ಭವಿತಾ=ಆಗುವನು. ಸಾಂಗವಾದರೆ ಇಂದ್ರಸಂಹಾರಕನು ಪುತ್ರ ನಾಗುವನು. ವಿಗುಣವಾದರೆ ವೈಷ್ಣವ ವ್ರತವು ನಿಷ್ಫಲವಲ್ಲವಾದ್ದರಿಂದ ದೇವಬಂಧುವು ಜನಿಸುವನು. ವೈಷ್ಣವ ವ್ರತವನ್ನು ಉಪದೇಶಿಸುತ್ತೇನೆ. ಅದರಿಂದ ಇವಳ ಮನಸ್ಸು ಶುದ್ಧವಾಗಿ ಇಂದ್ರನ ಮೇಲಿನ ಕೋಪವು ತಾನಾಗಿಯೇ ಹೋಗುವುದು. ವ್ರತವು ಸಾಂಗವಾಗದೆ ಹೋಗಿ ಇಂದ್ರನಿಗೆ ತೊಂದರೆಯೂ ಆಗುವುದಿಲ್ಲವೆಂದು ಅಭಿಪ್ರಾಯ. || ೪೫ ||

ದಿತಿರುವಾಚ—

ಧಾರಯಿಷ್ಯೇ ವ್ರತಂ ಬ್ರಹ್ಮನ್ ಬ್ರೂಹಿ ಕಾರ್ಯಾಣಿ ಯಾನಿ ಮೇ ।
ಯಾನಿ ಚೇಹ ನಿಷಿದ್ಧಾನಿ ನ ವ್ರತಂ ಘ್ನಂತಿ ಯಾನ್ಯುತ ॥ ೪೬ ॥

ವಧೆಗೆ ಯೋಗ್ಯನಲ್ಲ. ಇದಕ್ಕೊಂದು ಉಪಾಯ ಮಾಡುತ್ತೇನೆ' ಎಂದಾಲೋಚಿಸಿ ಕಶ್ಯಪರು ಪರೀಕ್ಷಿದ್ರಾಜ! ಸ್ವಲ್ಪ ಕುಪಿತರಾಗಿ ತಮ್ಮನ್ನು ಹಳಿದುಕೊಳ್ಳುತ್ತಾ ದಿತಿ ಯನ್ನು ಕುರಿತು 'ಭದ್ರೇ, ನಾನು ಹೇಳುವ ವ್ರತವನ್ನು ಒಂದು ವರ್ಷಕಾಲ ಸ್ವಲ್ಪವೂ ನ್ಯೂನತೆಯಿಲ್ಲದೆ ನೀನು ಆಚರಿಸಿದಲ್ಲಿ ಇಂದ್ರಸಂಹಾರಕ ಪುತ್ರನು ಜನಿಸುವನು. ವಿಗುಣವಾದಲ್ಲಿ ದೇವಬಂಧುವಿನ ಉತ್ಪತ್ತಿಯಾಗುವುದು' ಎಂದು ನುಡಿದರು.

ದಿತಿ—ಬ್ರಹ್ಮಜ್ಞಾನಿಗಳೇ, ತಾವು ಹೇಳಿದ ವ್ರತವನ್ನು ಹಿಡಿಯುತ್ತೇನೆ- ವ್ರತ

ಬ್ರಹ್ಮಜ್ಞಾನಿಗಳೇ, ವ್ರತವನ್ನು ಅನುಷ್ಠಿಸುತ್ತೇನೆ. ಯಾನಿ – ಯಾವುವು ಮೇ=ನನ್ನಿಂದ ಕಾರ್ಯಾಣಿ=ವ್ರತಕಾಲದಲ್ಲಿ ಮಾಡಬೇಕಾದವು ? ಇಹ=ಈ ವ್ರತದಲ್ಲಿ ಯಾನಿ ಚ – ಯಾವುವು ನಿಷಿದ್ಧಾನಿ = ಮಾಡಬಾರದವು ? ಉತ = ಮತ್ತು ಯಾನಿ=ಯಾವುವು ವ್ರತಂ ನ ಘ್ನಂತಿ=ವ್ರತವನ್ನು ಕೆಡಿಸುವುದಿಲ್ಲ? ಇವುಗಳನ್ನು ಬ್ರೂಹಿ=ಹೇಳಿರಿ. || ೪೬ ||

ಕಶ್ಯಪ ಉವಾಚ—

ನ ಹಿಂಸ್ಯಾತ್ಸರ್ವಭೂತಾನಿ ನ ಶಪೇನ್ನಾನೃತಂ ವದೇತ್ ।
ನ ಛಿಂದ್ಯಾನ್ನಖರೋಮಾಣಿ ನ ಸ್ಪೃಶೇದ್ಯದಮಂಗಲಮ್ || ೪೭ ||

ಮುಂದಿನ ಐದು ಶ್ಲೋಕಗಳಿಂದ ಮೂವತ್ತೊಂದು ನಿಷೇಧಗಳನ್ನು ಹೇಳುತ್ತಾರೆ. ಸರ್ವಭೂತಾನಿ=ಎಲ್ಲ ಪ್ರಾಣಿಗಳನ್ನೂ (ಯಾವ ಪ್ರಾಣಿಯನ್ನೂ) ನ ಹಿಂಸ್ಯಾತ್ = ಹಿಂಸಿಸಬಾರದು. ನ ಶಪೇತ್ – ಯಾರ ಮೇಲೂ ಆಕ್ರೋಶಮಾಡಬಾರದು. ಅನೃತಂ=ಸುಳ್ಳನ್ನು ನ ವದೇತ್=ಹೇಳಬಾರದು. ನಖರೋಮಾಣಿ=ಉಗುರು, ಕೂದಲನ್ನು ನ ಛಿಂದ್ಯಾತ್=ಕತ್ತರಿಸಿಕೊಳ್ಳಬಾರದು. ಯತ್=ಯಾವುದು ಅಮಂಗಲಮ್=ಶುಭವಲ್ಲವೋ ಅಂತಹ ತಲೆಬುರುಡೆ, ಮೂಳೆ ಮೊದಲಾದುವನ್ನು ನ ಸ್ಪೃಶೇತ್=ಮುಟ್ಟಬಾರದು. ಅಪ್ಯಮಂಗಲಂ ಎಂಬ ಪಾಠದಲ್ಲಿ ಅಪಿ ಎಂಬುದು ನಿಷೇಧ ಸಮುಚ್ಚಯವನ್ನು ತಿಳಿಸುವುದು. || ೪೭ ||

ನಾಪ್ಸು ಸ್ನಾಯಾನ್ನ ಕುಪ್ಯೇತ ನ ಸಂಭಾಷೇತ ದುರ್ಜನೈಃ ।
ನ ವಸೀತಾಧೌತವಾಸಃ ಸ್ರಜಂ ವಾ ವಿಧೃತಾಂ ಕ್ವಚಿತ್ || ೪೮ ||

ಅಪ್ಸು = ನೀರಿನಲ್ಲಿ ಪ್ರವೇಶಿಸಿ ನ ಸ್ನಾಯಾತ್ = ಸ್ನಾನಮಾಡಬಾರದು. ನ ಕುಪ್ಯೇತ=ಯಾರ ಮೇಲೂ ಕೋಪಗೊಳ್ಳಬಾರದು. ದುರ್ಜನೈಃ ಸಹ=ವಿಷ್ಣುದ್ವೇಷಿಗಳಾದ ದುಷ್ಟರೊಂದಿಗೆ ನ ಸಂಭಾಷೇತ=ಮಾತನಾಡಬಾರದು. ಅಧೌತವಾಸಃ = ಒಗೆಯದಿರುವ ಬಟ್ಟೆಯನ್ನು ನ ವಸೀತ = ಉಡಬಾರದು. ಕ್ವಚಿತ್ = ಯಾವ ಕಾಲದಲ್ಲಿಯೂ ವಿಧೃತಾಂ=ಮತ್ತೊಬ್ಬರು ಉಪಯೋಗಿಸಿದ್ದ ಸ್ರಜಂ ವಾ=ಹಾರವನ್ನಾದರೂ ನ ವಸೀತ(ಧಾರಯೇತ್)=ಧರಿಸಬಾರದು. ಒಂದು ಸಲ ಧರಿಸಿದ್ದ ಹಾರವನ್ನು ಮತ್ತೊಮ್ಮೆ ಧರಿಸಬಾರದು ಎಂದಾದರೂ ಅರ್ಥ. || ೪೮ ||

ಕಾಲದಲ್ಲಿ ಮಾಡಬೇಕಾದವು ಯಾವುವು ? ಮಾಡಬಾರದವು ಯಾವುವು ? ವ್ರತವನ್ನು ಕೆಡಿಸದಿರುವ ಕೆಲಸಗಳಾವುವು ? ದಯವಿಟ್ಟು ತಿಳಿಸಿರಿ.

ಕಶ್ಯಪರು—ಯಾವ ಪ್ರಾಣಿಯನ್ನೂ ಹಿಂಸಿಸಬಾರದು. ಯಾರ ಮೇಲೂ ಆಕ್ರೋಶ ಮಾಡಬಾರದು. ಸುಳ್ಳು ಹೇಳಬಾರದು. ಉಗುರು-ಕೂದಲುಗಳನ್ನು ಕತ್ತರಿಸಿಕೊಳ್ಳಬಾರದು. ಅಮಂಗಳ (ಅಶುದ್ಧ)ಗಳಾದ ಮೂಳೆ ಮೊದಲಾದುವನ್ನು ಮುಟ್ಟಬಾರದು. ನೀರಿನಲ್ಲಿ ಪ್ರವೇಶಿಸಿ ಸ್ನಾನಮಾಡಬಾರದು. ಕೋಪ ಮಾಡ

ನೋಚ್ಛಿಷ್ಟಂ ಚಂಡಿಕಾನ್ನಂ ಚ ಸಾಮಿಷಂ ವೃಷಲಾಹೃತಮ್ ।
ಭುಂಜೀತೋದಕ್ಯಯಾ ದೃಷ್ಟಂ ಪಿಬೇನ್ನಾಂಜಲಿನಾ ತ್ವಪಃ ॥ ೪೯ ॥

ತಿನ್ನುವುದರಲ್ಲಿ ಐದು ನಿಷೇಧಗಳನ್ನು ಹೇಳುತ್ತಾರೆ. ಉಚ್ಛಿಷ್ಟಂ=ಎಂಜಲಾದ ಆಹಾರವನ್ನು ನ ಭುಂಜೀತ=ತಿನ್ನಬಾರದು. ಚ=ಮತ್ತು ಚಂಡಿಕಾನ್ನಂ=ಶಕ್ತಿ ದೇವತೆಗಳಿಗೆ (ಭದ್ರಕಾಳಿ ಮೊದಲಾದುವಕ್ಕೆ) ಅಥವಾ ಸಪ್ತಮಾತೃಗಳಿಗೆ ನಿವೇದಿಸಿದ ಅನ್ನವನ್ನು ತಿನ್ನಬಾರದು. ಸಾಮಿಷಂ=ಇರುವೆ, ಇಲಿ ಮೊದಲಾದುವು ತಿಂದುದನ್ನು, ಮಾಂಸಯುಕ್ತವಾದುದನ್ನು, ನಿಂಬೆ (ಜಂಬೀರ) ಹಣ್ಣಿನಿಂದ ಯುಕ್ತ ವಾದುದನ್ನು ತಿನ್ನಬಾರದು. ವೃಷಲಾಹೃತಂ=ಶೂದ್ರರು ತಂದ ಅನ್ನವನ್ನು ತಿನ್ನ ಬಾರದು. ಕರ್ಮಭ್ರಷ್ಟರು ತಂದ ಅನ್ನವನ್ನು ತಿನ್ನಬಾರದು. ಉದಕ್ಯಯಾ= ರಜಸ್ವಲೆಯಾದ ಸ್ತ್ರೀಯಿಂದ ದೃಷ್ಟಂ=ನೋಡಲ್ಪಟ್ಟ ಆಹಾರವನ್ನು ತಿನ್ನಬಾರದು. ಅಂಜಲಿನಾ=ಬೊಗಸೆಯಿಂದ ಅಪಃ=ನೀರನ್ನು ನ ಪಿಬೇತ್ ತು=ಕುಡಿಯಲೇ ಬಾರದು. 'ವೃಷೋ ಧರ್ಮಃ ಸಮುದ್ದಿಷ್ಟಃ ತಸ್ಯ ಯಃ ಕುರುತೇ ಲಯಮ್ । ವೃಷಲಂ ತಂ ವಿಜಾನೀಯಾತ್ ಸರ್ವಕರ್ಮಸು ಗರ್ಹಿತಮ್ ॥' ಎಂಬ ಪ್ರಮಾಣ ದಂತೆ ಕರ್ಮಭ್ರಷ್ಟನೂ ವೃಷಲನೇ. ॥ ೪೯ ॥

ನೋಚ್ಛಿಷ್ಟಾಽಸ್ಪೃಷ್ಟಸಲಿಲಾ ಸಂಧ್ಯಯೋರ್ಮುಕ್ತಮೂರ್ಧಜಾ ।
ಅನರ್ಚಿತಾಽಸಂಯತವಾಕ್ ನಾಸಂವೀತಾ ಬಹಿಶ್ಚರೇತ್ ॥ ೫೦ ॥

ಮನೆಯಿಂದ ಹೊರಗೆ ಹೋಗುವಾಗ ಏಳು ನಿಷೇಧಗಳನ್ನು ಹೇಳುತ್ತಾರೆ— ಉಚ್ಛಿಷ್ಟಾ=ಎಂಜಲು ಕೈಯಲ್ಲಿ ನ ಬಹಿಃ ಚರೇತ್=ಹೊರಗೆ ಹೋಗಬಾರದು. ಅಸ್ಪೃಷ್ಟಸಲಿಲಾ=ಜಲಸ್ಪರ್ಶ ಮಾಡದೆ (ಶುದ್ಧಿ ಮಾಡಿಕೊಳ್ಳದೆ) ಹೊರಗೆ ಹೋಗ ಬಾರದು. ಸಂಧ್ಯಯೋಃ=ಬೆಳಗ್ಗೆ, ಸಾಯಂಕಾಲ ಎರಡು ಸಂಧ್ಯಾಕಾಲಗಳಲ್ಲಿ ಹೊರಗೆ ಹೋಗಬಾರದು. ಮುಕ್ತಮೂರ್ಧಜಾ=ತಲೆಗೂದಲು ಬಿರಿ ಹಾಕಿಕೊಂಡು ಹೊರಗೆ ಹೋಗಬಾರದು. ಅನರ್ಚಿತಾ=ಅಲಂಕಾರ ಮಾಡಿಕೊಳ್ಳದೆ ಹೊರಗೆ ಹೋಗಬಾರದು. ಅಸಂಯತವಾಕ್=ಮಾತು ಸಂಯತಮಾಡಿಕೊಳ್ಳದೇ (ಹಿಡಿತ ವಿಲ್ಲದೆ) ಹೊರಗೆ ಹೋಗಬಾರದು. ಅಸಂವೀತಾ=ಮೇಲೆ ಹೊದ್ದುಕೊಳ್ಳದೆ ನ ಬಹಿಶ್ಚರೇತ್=ಹೊರಗೆ ಹೋಗಬಾರದು. ॥ ೫೦ ॥

ಕೂಡದು. ವಿಷ್ಣುದ್ವೇಷಿಗಳಾದ ದುರ್ಜನರೊಂದಿಗೆ ಸಂಭಾಷಿಸಬಾರದು. ಕೊಳೆ ಬಟ್ಟೆಯನ್ನುಡಬಾರದು. ಒಂದುಸಲ ಉಪಯೋಗಿಸಿದ ಹಾರವನ್ನು ಮತ್ತೊಮ್ಮೆ ಧರಿಸಬಾರದು. ಎಂಜಲು ತಿನ್ನಬಾರದು. ಶಕ್ತಿದೇವತೆಗಳಿಗೆ ನಿವೇದಿತವಾದುದನ್ನು ತಿನ್ನಬಾರದು. ನಿಂಬೆಹಣ್ಣಿನ ರಸದಿಂದ ಕೂಡಿದ್ದನ್ನೂ ಮಾಂಸಯುಕ್ತವಾದುದನ್ನೂ ಶೂದ್ರನು ತಂದುದನ್ನೂ ಪತಿತನು ತಂದುದನ್ನೂ ರಜಸ್ವಲೆಯು ನೋಡಿದ್ದನ್ನೂ ಊಟ ಮಾಡಬಾರದು. ನೀರನ್ನಾದರೂ ಬೊಗಸೆಯಿಂದ ಕುಡಿಯಬಾರದು. ಎಂಜಲು ಕೈಯಲ್ಲಿ ಶುದ್ಧಳಾಗದೆ, ತಲೆಗೂದಲನ್ನು ಬಿರಿ ಹಾಕಿಕೊಂಡು, ಸಂಧ್ಯಾ

ನಾಧೌತಪಾದಾಽಪ್ರಯತಾ ನಾರ್ದ್ರಪಾನ್ನಾಪ್ಯುದಕ್ಛಿರಾಃ ।
ಶಯೀತ ನಾಪರಾಜ್ ನಾನ್ಯೈರ್ನ ನಗ್ನಾ ನ ಚ ಸಂಧ್ಯಯೋಃ ॥

ಮಲಗುವುದರಲ್ಲಿ ಎಂಟು ನಿಷೇಧಗಳನ್ನು ಹೇಳುತ್ತಾರೆ. ಅಧೌತಪಾದಾ-ಕಾಲು ತೊಳೆಯದೆ ನ ಶಯೀತ – ಮಲಗಬಾರದು. ಅಪ್ರಯತಾ – ವಿನಯವಿಲ್ಲದೆ ಮಲಗಬಾರದು. ಆರ್ದ್ರಪಾತ್=ಒದ್ದೆ ಕಾಲಿನಲ್ಲಿ ಮಲಗಬಾರದು. ಉದಕ್ ಶಿರಾಃ=ಉತ್ತರಕ್ಕೆ ತಲೆಯಿಟ್ಟು ಮಲಗಬಾರದು. ಅಪರಾಕ್ (ಶಿರಾಃ)=ಪಶ್ಚಿಮಕ್ಕೆ ತಲೆಯಿಟ್ಟು ಮಲಗಬಾರದು. ಅನ್ಯೈಃ (ಸಹ)=ಮತ್ತೊಬ್ಬರ ಜೊತೆಗೆ ಮಲಗಬಾರದು. ನಗ್ನಾ = ಮೈಮೇಲೆ ಬಟ್ಟೆಯಿಲ್ಲದೆ (ಬೆತ್ತಲೆಯಾಗಿ) ಮಲಗಬಾರದು. ಸಂಧ್ಯಾ ಕಾಲಗಳಲ್ಲಿ ಮಲಗಬಾರದು. || ೫೧ ||

ಧೌತವಾಸಾಃ ಶುಚಿರ್ನಿತ್ಯಂ ಸರ್ವಮಂಗಲಸಂಯುತಾ ।
ಪೂಜಯೇತ್ಪ್ರಾತರಾಶಾತ್ಪ್ರಾಕ್ ಗೋವಿಪ್ರಾನ್ ಶ್ರಿಯ-
ಮಚ್ಯುತಮ್ ॥ ೫೨ ॥

ಮಾಡಬೇಕಾದುದನ್ನು ಹೇಳುತ್ತಾರೆ. ನಿತ್ಯಂ – ಪ್ರತಿದಿನವೂ ಒಗೆದ ಬಟ್ಟೆಯನ್ನುಟ್ಟು, ಶುಚಿಯಾಗಿ, ಎಲ್ಲ ಮಂಗಳದ್ರವ್ಯಗಳೊಡನೆ ಪ್ರಾತಃ ಆಶಾತ್–ಬೆಳಗಿನ ಊಟಕ್ಕೆ ಪ್ರಾಕ್–ಮೊದಲು ಗೋವನ್ನೂ ಬ್ರಾಹ್ಮಣರನ್ನೂ ಲಕ್ಷ್ಮಿಯನ್ನೂ ಪೂಜಿಸಬೇಕು. || ೫೨ ||

ಸ್ತ್ರಿಯೋ ವರವತೀರ್ಶ್ಚಾರ್ಚೇತ್ಸ್ರಗ್ಗಂಧಬಲಿಮಂಡಲೈಃ ।
ಪತಿಂ ಚಾರ್ಚ್ಯೋಪತಿಷ್ಠೇತ ಧ್ಯಾಯೇತ್ಕೋಷ್ಠಗತಂ ಚ ತಮ್ ॥

ನಿತ್ಯವೂ ವರವತೀಃ=ಮುತ್ತೈದೆಯರಾದ ಸ್ತ್ರಿಯಃ ಚ=ಸ್ತ್ರೀಯರನ್ನು ಸ್ರಕ್=ಹೂವಿನಹಾರ, ಗಂಧ, ಬಲಿ – ಉಪಹಾರ, ಮಂಡಲೈಃ = ಮಂಡಲಗಳಿಂದ ಅರ್ಚೇತ್– ಪೂಜಿಸಬೇಕು. ಪತಿಂ ಚ–ಗಂಡನನ್ನೂ ಅರ್ಚ್ಯ=ಸ್ರಗ್ಗಂಧಾದಿಗಳಿಂದ ಪೂಜಿಸಿ ಉಪತಿಷ್ಠೇತ=ಸ್ತೋತ್ರಮಾಡಬೇಕು. ತಂ–ಪ್ರಸಿದ್ಧನಾದ ಪತಿಯಲ್ಲಿ

ಕಾಲಗಳಲ್ಲಿ ಅಲಂಕರಿಸಿಕೊಳ್ಳದೆ, ಮಾತನ್ನು ತಡೆಹಿಡಿಯದೆ, ಮೇಲೆ ಹೊದ್ದು ಕೊಳ್ಳದೆ ಹೊರಕ್ಕೆ ಹೋಗಬಾರದು. ಕಾಲು ತೊಳೆಯದೆ, ಇಂದ್ರಿಯಗಳನ್ನು ನಿಗ್ರಹಿಸದೆ, ಒದ್ದೆ ಕಾಲಿನಲ್ಲಿ, ಉತ್ತರಕ್ಕೆ ತಲೆಯಿಟ್ಟು, ಪಶ್ಚಿಮಕ್ಕೆ ತಲೆಯಿಟ್ಟು, ಮತ್ತೊಬ್ಬರೊಂದಿಗೆ, ಬೆತ್ತಲೆಯಾಗಿ, ಸಂಜೆಗಳಲ್ಲಿ ಮಲಗಬಾರದು. ನಿತ್ಯವೂ ಒಗೆದ ಬಟ್ಟೆಯನ್ನುಟ್ಟು ಶುಚಿಯಾಗಿ, ಮಂಗಳ ದ್ರವ್ಯಗಳೊಂದಿಗೆ, ಪ್ರಾತಃ ಉಪಹಾರಕ್ಕೆ ಮುಂಚೆಯೇ ಗೋವುಗಳನ್ನೂ ವಿಪ್ರರನ್ನೂ ಲಕ್ಷ್ಮಿಯನ್ನೂ ಪರಮಾತ್ಮನನ್ನೂ ಪೂಜೆಮಾಡಬೇಕು. ಗಂಡಂದಿರಿರುವ (ಮುತ್ತೈದೆ) ಹೆಂಗುಸರನ್ನು ಹೂಹಾರ, ಗಂಧ, ಕಾಣಿಕೆ ಮತ್ತು ಮಂಡಲಗಳಿಂದ ಅರ್ಚಿಸಬೇಕು. ಹೀಗೆಯೇ

ಸನ್ನಿಹಿತನಾದ, ತನ್ನ ಒಳಗೂ ಹೊರಗೂ ಇರುವ ಶ್ರೀಹರಿಯನ್ನು ಕೋಷ್ಠಗತಂ= ತನ್ನ ಹೃದ್ಗುಹಾವಾಸಿಯನ್ನಾಗಿ (ತನ್ನ ಹೃದಯದಲ್ಲಿರುವವನೂ ಪತಿಯಲ್ಲಿರುವವನೂ ಒಬ್ಬನೇ ಎಂದು) ಧ್ಯಾಯೇತ್=ಧ್ಯಾನಮಾಡಬೇಕು. ಅಥವಾ ತಂ=ಆ ಪತಿಯನ್ನೇ ಕೋಷ್ಠಗತಂ=ಗರ್ಭದಲ್ಲಿ ಇರುವವನನ್ನಾಗಿ ಧ್ಯಾಯೇತ್= ಯೋಚಿಸಬೇಕು. 'ಆತ್ಮಾ ವೈ ಪುತ್ರ ನಾಮಾಸಿ' ಎಂದು ಶ್ರುತಿಯಿದೆ. || ೫೩ ||

ಸಂವತ್ಸರಂ ಪುಂಸವನಂ ವ್ರತಮೇತದವಿಪ್ಲುತಮ್ ।
ಧಾರಯಿಷ್ಯಸಿ ಚೇತ್ತುಭ್ಯಂ ಶಕ್ರಹಾ ಭವಿತಾ ಸುತಃ || ೫೪ ||

ಪುಂಸವನಂ=ಗಂಡುಮಗುವನ್ನು ಕೊಡುವ ಪುಂಸವನವೆಂಬ ಏತತ್ ವ್ರತಂ= ಈ ವ್ರತವನ್ನು ಸಂವತ್ಸರಂ=ಒಂದು ವರ್ಷಕಾಲ ಅವಿಪ್ಲುತಂ ಯಥಾತಥಾ= ಸ್ವಲ್ಪವೂ ನ್ಯೂನತೆ ಇಲ್ಲದಂತೆ ಧಾರಯಿಷ್ಯಸಿ ಚೇತ್=ಮಾಡುವೆಯಾದರೆ ತುಭ್ಯಂ= ನಿನಗೆ ಶಕ್ರಹಾ=ಇಂದ್ರಸಂಹಾರಕನಾದ ಸುತಃ=ಮಗನು ಭವಿತಾ=ಆಗುವನು. ನ್ಯೂನವಾದಲ್ಲಿ ದೇವಬಾಂಧವನು ಆಗುವನೆಂದು ಅಭಿಪ್ರಾಯ || ೫೪ ||

ಶ್ರೀ ಶುಕ ಉವಾಚ—

ಬಾಢಮಿತ್ಯಭ್ಯುಪೇತ್ಯಾಥ ದಿತೀ ರಾಜನ್ಮಹಾಮನಾಃ ।
ಕಶ್ಯಪಾದ್ಗರ್ಭಮಾಧತ್ತ ವ್ರತಂ ಚಾಂಜೋ ದಧಾರ ಸಾ || ೫೫ ||

ಪರೀಕ್ಷಿದ್ರಾಜನೇ, ಮಹಾಮನಾಃ=ಸರ್ವೋತ್ತಮನಾದ ಶ್ರೀಹರಿಯನ್ನು ಮನನಮಾಡುವ ದಿತಿಯು ಅಥ=ಅನಂತರ ಬಾಢಂ=ಹಾಗೆಯೇ ಆಗಲಿ ಇತಿ= ಎಂದು ಅಭ್ಯುಪೇತ್ಯ=ಕಶ್ಯಪರ ಮಾತನ್ನು ಅಂಗೀಕರಿಸಿ ಕಶ್ಯಪರಿಂದ ಗರ್ಭವನ್ನು ಆಧತ್ತ=ಧರಿಸಿದಳು. ಸಾ=ಅವಳು ಅಂಜಃ=ವಿಧಿವತ್ತಾಗಿ ವ್ರತಂ ಚ=ಪುಂಸವನ ವ್ರತವನ್ನೂ ದಧಾರ=ಹಿಡಿದಳು || ೫೫ ||

ಪತಿಯನ್ನೂ ಪೂಜಿಸಿ ಸ್ತೋತ್ರಮಾಡಬೇಕು. ಪತಿಯಲ್ಲಿರುವ ಶ್ರೀಹರಿಯನ್ನು ತನ್ನ ಹೃದಯದಲ್ಲಿರುವವನನ್ನಾಗಿ ಧ್ಯಾನಿಸಬೇಕು. ಪತಿಯಂತಹ ಮಗುವೇ ಗರ್ಭದಲ್ಲಿದೆಯೆಂದು ಭಾವಿಸಬೇಕು. ಇದು ಗಂಡುಮಗನನ್ನು ಹಡೆಯಲು ಕಾರಣ ವಾಗುವ 'ಪುಂಸವನ' ವ್ರತ. ಇದನ್ನು ಒಂದು ವರ್ಷಕಾಲ ಯಾವ ನ್ಯೂನತೆಯೂ ಇಲ್ಲದೆ ಆಚರಿಸಿದ್ದೇ ಆದರೆ ನಿನಗೆ ಇಂದ್ರಹಂತಕನಾದ ಮಗನು ಜನಿಸುವನು. (ನ್ಯೂನವಾದಲ್ಲಿ ವೈಷ್ಣವ ವ್ರತಾಚರಣೆಯು ವ್ಯರ್ಥವಲ್ಲವಾದ್ದರಿಂದ ದೇವ ಬಾಂಧವನೇ ಜನಿಸುವನು.)

ಶುಕಾಚಾರ್ಯರು—ರಾಜ್ಞ, ಶ್ರೀಹರಿಯನ್ನು ಧ್ಯಾನಿಸುವ ದಿತಿಯು ಹಾಗೆಯೇ ಆಗಲೆಂದು ಒಪ್ಪಿ ಕಶ್ಯಪರಿಂದ ಗರ್ಭಧಾರಣ ಮಾಡಿದಳು. ವಿಧಿವತ್ತಾಗಿ ವ್ರತ ಹಿಡಿದಳು.

ಮಾತೃಷ್ವಸುರಭಿಪ್ರಾಯಮಿಂದ್ರ ಆಜ್ಞಾಯ ಮಾನದ।
ಶುಶ್ರೂಷಣೇನಾಶ್ರಮಸ್ಥಾಂ ದಿತಿಂ ಪರ್ಯಚರತ್ಕವಿಃ ॥ ೫೬ ॥

ಹೇ ಮಾನದ = ಶತ್ರುಗಳ ಅಭಿಮಾನವನ್ನು ಹೋಗಲಾಡಿಸುವ ಪರೀಕ್ಷಿದ್ರಾಜನೇ, ಕವಿಃ=ಜ್ಞಾನಿಗಳಾದ ಇಂದ್ರದೇವರು ಮಾತೃಷ್ವಸುಃ=ತಾಯಿಯಾದ ಅದಿತಿಯ ತಂಗಿಯಾದ ದಿತಿಯ ಅಭಿಪ್ರಾಯವನ್ನು ಆಜ್ಞಾಯ=ಚನ್ನಾಗಿ ತಿಳಿದು ಆಶ್ರಮಸ್ಥಾಂ=ಪುಂಸವನ ವ್ರತಕ್ಕಾಗಿ ಆಶ್ರಮದಲ್ಲಿ ವಾಸಿಸುತ್ತಿದ್ದ ದಿತಿ ದೇವಿಯನ್ನು ಶುಶ್ರೂಷಣೇನ = ಸೇವೆಯಿಂದ ಪರ್ಯಚರತ್ = ಪರಿಚರ್ಯೆ ಮಾಡಿದರು. ॥ ೫೬ ॥

ನಿತ್ಯಂ ವನಾತ್ಸುಮನಸಃ ಫಲಮೂಲಸಮಿತ್ಕುಶಾನ್ ।
ಪತ್ರಾಂಕುರಮೃದಾಪಶ್ಚ ಕಾಲೇ ಕಾಲೇ ಉಪಾಹರತ್ ॥ ೫೭ ॥

ಪ್ರತಿನಿತ್ಯವೂ ಕಾಡಿನಿಂದ ಸುಮನಸಃ - ಹೂಗಳನ್ನೂ ಫಲ=ಹಣ್ಣುಗಳನ್ನೂ ಮೂಲ ಗಡ್ಡೆ ಗೆಣಸುಗಳನ್ನೂ ಸಮಿತ್ತುಗಳನ್ನೂ ಕುಶಾನ್=ದರ್ಭೆಗಳನ್ನೂ ಪತ್ರ=ಎಲೆಗಳನ್ನೂ ಅಂಕುರ=ಎಳೆ ಮೊಳಕೆಗಳನ್ನೂ ಮೃತ್=ಮಣ್ಣನ್ನೂ ಆಪಃ ಚ=ನೀರನ್ನೂ ಕಾಲೇ ಕಾಲೇ=ಆಯಾಯಾ ಕಾಲಕ್ಕೆ ಸರಿಯಾಗಿ ಉಪಾಹರತ್=ತಂದುಕೊಡುತ್ತಿದ್ದರು. ॥ ೫೭ ॥

ಏವಂ ತಸ್ಯಾಂ ವ್ರತಸ್ಥಾಯಾಂ ವ್ರತಚ್ಛಿದ್ರಂ ಹರಿರ್ನೃಪ ।
ಪ್ರೇಪ್ಸುಃ ಪರ್ಯಚರಜ್ಜಿಹ್ಮೋ ಮೃಗಹೇವ ಮೃಗಾಕೃತಿಃ ॥ ೫೮ ॥

ರಾಜನೇ, ತಸ್ಯಾಂ=ದಿತಿಯು ವ್ರತಸ್ಥಾಯಾಂ=ಪುಂಸವನ ವ್ರತಾಚರಣೆಯಲ್ಲಿರಲು ವ್ರತಛಿದ್ರಂ=ವ್ರತಹಾನಿಯನ್ನು ಪ್ರೇಪ್ಸುಃ=ಹೊಂದಲು ಅಪೇಕ್ಷೆಯುಳ್ಳ ಹರಿಃ=ಇಂದ್ರದೇವರು ಮೃಗಹಾ= ಬೇಟೆಗಾರನು ಮೃಗಾಕೃತಿಃ ಇವ=ಮೃಗವಂಚನೆಗಾಗಿ ಮೃಗದಂತೆ ಆಕಾರವುಳ್ಳವನಾಗಿರುವಂತೆ ಜಿಹ್ಮಃ=ಮೋಸಗಾರನಾಗಿ ಸಾಧುವಿನಂತೆ ಏವಂ=ಮೇಲೆ ಹೇಳಿದ ರೀತಿಯಲ್ಲಿ ಪರ್ಯಚರತ್=ಸೇವಿಸಿದರು. ವ್ರತಲೋಪವನ್ನೇ ಕಾಯುತ್ತಿದ್ದರೆಂದರ್ಥ. ॥ ೫೮ ॥

ಶತ್ರುಗಳ ಗರ್ವಹರನಾದ ರಾಜನೇ, ಚಿಕ್ಕಮ್ಮನ ಈ ಅಭಿಪ್ರಾಯವನ್ನು ಇಂದ್ರದೇವರು ತಿಳಿದರು. ಜ್ಞಾನಿಗಳಾದ ಅವರು ಆಶ್ರಮದಲ್ಲಿದ್ದ ಆಕೆಯನ್ನು ಸೇವಿಸುತ್ತಾ ಉಪಚರಿಸಿದರು. ನಿತ್ಯವೂ ವನದಿಂದ ಹೂ, ಹಣ್ಣು, ಗಡ್ಡೆ, ಸಮಿತ್ತು, ದರ್ಭೆ, ಎಲೆ, ಚಿಗುರು, ಮೃತ್ತಿಕೆ, ನೀರುಗಳನ್ನು ಕಾಲಕಾಲಕ್ಕೆ ತಂದು ಕೊಡುತ್ತಿದ್ದರು. ಮೃಗವನ್ನು ಕೊಲ್ಲುವುದಕ್ಕಾಗಿ ಮೃಗಾಕಾರನಾಗಿ ಇರುವ ಬೇಟೆಗಾರನಂತೆ ಕಪಟಿಗಳಾದ ಇಂದ್ರದೇವರು ದಿತಿಯು ವ್ರತವನ್ನಾಚರಿಸುತ್ತಿರಲು

ನಾಧ್ಯಗಚ್ಛದ್ವ್ರತಚ್ಛಿದ್ರಂ ತತ್ಪರೋಽಥ ಮಹೀಪತೇ ।
ಚಿಂತಾಂ ತೀವ್ರಾಂ ಗತಃ ಶಕ್ರಃ ಕೇನ ಮೇ ಸ್ಯಾಚ್ಛಿವಂ ತ್ವಿಹ ॥ ೫೯ ॥

ರಾಜನೇ, ತತ್ಪರಃ=ವ್ರತಲೋಪವನ್ನೇ ಹುಡುಕುತ್ತಿದ್ದ ಇಂದ್ರದೇವರು ವ್ರತಲೋಪವನ್ನು ನ ಅಧ್ಯಗಚ್ಛತ್=ಕಾಣಲಿಲ್ಲ. ಅಥ=ಅನಂತರ ಇಹ=ಈ ವ್ರತಾಚರಣೆಯಲ್ಲಿ ಕೇನ=ಯಾವ ರೀತಿಯ ವ್ರತಲೋಪದಿಂದ ಮೇ=ನನಗೆ ಶಿವಂ=ಒಳ್ಳೆಯದು. (ದಿತಿಗೆ ಇಂದ್ರಘಾತುಕ ಮಗನಾಗದಿರುವುದು) ಸ್ಯಾತ್=ಆದೀತು (ಇತಿ)=ಎಂದು ತೀವ್ರಾಂ=ಅತಿಶಯವಾದ ಚಿಂತಾಂ ತು=ಚಿಂತೆಯನ್ನಾದರೋ ಗತಃ=ಹೊಂದಿದರು. ವ್ರತಲೋಪವಾಗುತ್ತಿಲ್ಲ. ನನ್ನ ಹಂತಕನೇ ಜನಿಸುವನು ಎಂದು ಆತಂಕಗೊಂಡನೆಂದರ್ಥ. ॥ ೫೯ ॥

ಏಕದಾ ಸಾ ತು ಸಂಧ್ಯಾಯಾಮುಚ್ಛಿಷ್ಟಾ ವ್ರತಕರ್ಶಿತಾ ।
ಅಸ್ಪೃಷ್ಟವಾರ್ಯಧೌತಾಂಘ್ರಿಃ ಸುಷ್ವಾಪ ವಿಧಿಮೋಹಿತಾ ॥ ೬೦ ॥

ಏಕದಾ=ಒಂದುದಿನ ವಿಧಿಮೋಹಿತಾ=ಅದೃಷ್ಟನಿಯಾಮಕ ಶ್ರೀಹರಿಯಿಂದ ಮಂಕು ಕವಿದ ಸಾ ತು=ಆ ದಿತಿಯಾದರೋ ವ್ರತಕರ್ಶಿತಾ (ಸತೀ)=ವ್ರತಾಚರಣೆಯಿಂದ ಕರ್ಶಿತಳಾಗಿ ಸಂಧ್ಯಾಯಾಂ=ಸಂಜೆಯಲ್ಲಿ ಉಚ್ಛಿಷ್ಟಾ=ಎಂಜಲಾದ್ದನ್ನು ಶುದ್ಧಮಾಡಿಕೊಳ್ಳದೆ ಅಸ್ಪೃಷ್ಟವಾರಿ=ಜಲಸ್ಪರ್ಶವಿಲ್ಲದೆ ಅಧೌತಾಂಘ್ರಿಃ=ಕಾಲು ತೊಳೆಯದೆ ಸುಷ್ವಾಪ=ನಿದ್ರಿಸಿದಳು. ॥ ೬೦ ॥

ಲಬ್ಧ್ವಾ ತದಂತರಂ ಶಕ್ರೋ ನಿದ್ರೋಪಹತಚೇತಸಃ ।
ದಿತೇಃ ಪ್ರವಿಷ್ಟ ಉದರಂ ಯೋಗೇಶೋ ಯೋಗಮಾಯಯಾ ॥

ಯೋಗೇಶಃ=ಅಣಿಮಾದಿ ಯೋಗಸಿದ್ಧಿಯುಳ್ಳ ಶಕ್ರಃ=ಇಂದ್ರದೇವರು ತದಂತರಂ=ವ್ರತಹಾನಿಯಾದ ಈ ಅವಕಾಶವನ್ನು ಲಬ್ಧ್ವಾ=ಹೊಂದಿದವರಾಗಿ ಯೋಗಮಾಯಯಾ=ಯೋಗ ಸಾಮರ್ಥ್ಯದಿಂದ ನಿದ್ರೋಪಹತಚೇತಸಃ=ನಿದ್ರೆಯಿಂದ ಮನಸ್ಸು ಉಪರತವಾಗಿದ್ದ ದಿತಿದೇವಿಯ ಉದರಂ=ಗರ್ಭಕೋಶವನ್ನು ಪ್ರವಿಷ್ಟಃ (ಅಭೂತ್) ಪ್ರವೇಶಿಸಿದರು. ॥ ೬೧ ॥

ಛಿದ್ರವನ್ನೇ ಕಾಯುತ್ತಾ ಸಾಧುವಿನಂತೆ ಆಕೆಯನ್ನು ಸೇವಿಸಿದರು. ರಾಜನೇ, ಅದನ್ನೇ ಅರಸುತ್ತಿದ್ದರೂ ವ್ರತಲೋಪವು ಇಂದ್ರದೇವರ ಕಣ್ಣಿಗೆ ಬೀಳಲಿಲ್ಲ. ಆಗ ಅವರು ಬಹಳ ಚಿಂತಾಕ್ರಾಂತರಾದರು. ನನಗೆ ಈ ಸಂದರ್ಭದಲ್ಲಿ ಕ್ಷೇಮವು ಯಾವುದರಿಂದಾದೀತು? ಎಂದು ಬಗೆದರು.

ಒಂದುದಿನ ದೈವಿಕವಾಗಿ ಕರ್ತವ್ಯದಲ್ಲಿ ಅವಧಾನರಹಿತಳಾದ ಆ ದಿತಿದೇವಿ ವ್ರತಾಚರಣೆಯಿಂದ ಕೃಶಳಾಗಿ ಕೈತೊಳೆಯದೆ, ಜಲಸ್ಪರ್ಶದಿಂದ ಶುದ್ಧಳಾಗದೆ, ಕಾಲು ತೊಳೆಯದೆ ಸಂಜೆಯಲ್ಲಿ ಮಲಗಿದಳು. ಅದೇ ಅವಕಾಶವನ್ನು ಪಡೆದ ಇಂದ್ರದೇವರು ನಿದ್ರೆಯಿಂದ ಉಪರತಮನಸ್ಕಳಾಗಿದ್ದ (ಎಚ್ಚರವಿಲ್ಲದಿದ್ದ) ದಿತಿಯ ಉದರವನ್ನು ಪ್ರವೇಶಿಸಿದರು. ಅವರು ಅಣಿಮಾ ಮೊದಲಾದ ಯೋಗಸಿದ್ಧಿ

ಚಕರ್ತ ಸಪ್ತಧಾ ಗರ್ಭಂ ವಜ್ರೇಣ ಕನಕಪ್ರಭಮ್ ।
ರುದಂತಂ ಸಪ್ತಧೈಕೈಕಂ ಮಾ ರೋದೀರಿತಿ ತಾನ್ ಪುನಃ ॥ ೬೨ ॥

ಇಂದ್ರದೇವರು ಕನಕಪ್ರಭಂ-ಬಂಗಾರದಂತೆ ಪ್ರಕಾಶಿಸುತ್ತಿದ್ದ ಗರ್ಭಂ-ದಿತಿ ದೇವಿಯ ಗರ್ಭ(ದಲ್ಲಿದ್ದ ಪಿಂಡ)ವನ್ನು ವಜ್ರಾಯುಧದಿಂದ ಸಪ್ತಧಾ-ಏಳು ಭಾಗ ವಾಗಿ ಚಕರ್ತ-ಕತ್ತರಿಸಿದರು. ಪುನಃ-ಮತ್ತೆ ತಾನ್-ಆ ಏಳು ಭಾಗಗಳನ್ನೂ ಮಾ ರೋದೀಃ ಇತಿ (ವದನ್)-ಅಳಬೇಡಿರೆಂದು ಸಮಾಧಾನ ಹೇಳುತ್ತಾ ರುದಂತಂ-ಅಳುತ್ತಿದ್ದ ಏಕೈಕಂ-ಒಂದೊಂದು ಭಾಗವನ್ನೂ ಸಪ್ತಧಾ-ಏಳು ಭಾಗ ವಾಗಿ ಚಕರ್ತ-ಕತ್ತರಿಸಿದರು. ೭×೭-೪೯ ಭಾಗಮಾಡಿದರೆಂದರ್ಥ. ॥ ೬೨ ॥

ತೇ ತಮೂಚುಃ ಪಾಟ್ಯಮಾನಾಃ ಸರ್ವೇ ಪ್ರಾಂಜಲಯೋ ನೃಪ ।
ನೋ ಜಿಘಾಂಸಸಿ ಕಿಂತ್ವಿಂದ್ರ ಭ್ರಾತರೋ ಮರುತಸ್ತವ ॥ ೬೩ ॥

ರಾಜನೇ, ಪಾಟ್ಯಮಾನಾಃ - ಸೀಳಲ್ಪಡುತ್ತಿದ್ದ ತೇ ಸರ್ವೇ = ಆ ನಲವ ತ್ತೊಂಭತ್ತು ಭಾಗಗಳೂ ಪ್ರಾಂಜಲಯಃ (ಸಂತಃ)-ಕೈ ಮುಗಿದವರಾಗಿ ತಂ- ಇಂದ್ರದೇವರನ್ನು ಕುರಿತು ಊಚುಃ-ಹೇಳಿದರು. ಇಂದ್ರನೇ, ನಃ=ನಮ್ಮನ್ನು ಜಿಘಾಂಸಸಿ-ಕೊಲ್ಲಲು ಎಳಸುತ್ತಿರುವೆ. ಕಿಂತು-ಆದರೆ ನಾವು ತವ-ನಿನ್ನ ಭ್ರಾತರಃ-ಬಂಧುಗಳಾದ ಮರುತಃ-ಮರುದ್ಗಣಗಳು. ಆದ್ದರಿಂದ ನಮ್ಮನ್ನು ಕೊಲ್ಲುವುದು ಸೂಕ್ತವಲ್ಲವೆಂದು ಅಭಿಪ್ರಾಯ. ॥ ೬೩ ॥

ಮಾ ಭೈಷ್ಟ ಭ್ರಾತರೋ ಮಹ್ಯಂ ಯೂಯಮಿತ್ಯಾಹ ಕೌಶಿಕಃ ।
ಅನನ್ಯಭಾವಾನ್ ಪಾರ್ಷದಾನಾತ್ಮನೋ ಮರುತಾಂ ಗಣಾನ್ ॥ ೬೪ ॥

ಕೌಶಿಕಃ = ಇಂದ್ರದೇವರು ಅನನ್ಯಭಾವಾನ್ - ತನ್ನಲ್ಲಿ ಭಕ್ತಿ ಮಾಡುತ್ತಿದ್ದ ಆತ್ಮನಃ-ತನ್ನ ಪಾರ್ಷದಾನ್-ಪರಿವಾರ (ದ್ವಾರಪಾಲಕ) ದವರಾದ ಮರುತಾಂ ಗಣಾನ್ - ಏಳೇಳರ ಒಂದೊಂದು ಗುಂಪಾದ ಆ ಏಳು ಮರುದ್ಗಣಗಳನ್ನು ಮಾ ಭೈಷ್ಟ=ಭಯಪಡಬೇಡಿರಿ. ನಾನು ನಿಮ್ಮನ್ನು ಕೊಲ್ಲುವುದಿಲ್ಲವೆಂದರ್ಥ. ಯೂಯಂ=ನೀವು ಮಹ್ಯಂ ನನಗೆ ಭ್ರಾತರಃ=ತಮ್ಮಂದಿರು ಇತಿ=ಎಂದು ಆಹ= ಆಶ್ವಾಸನೆಯಿತ್ತರು. ॥ ೬೪ ॥

ಯುಳ್ಳವರು. ಯೋಗ ಸಾಮರ್ಥ್ಯದಿಂದ ಹಾಗೆ ಮಾಡಿದರು. ಬಂಗಾರದಂತೆ ಹೊಳೆಯುತ್ತಿದ್ದ ಗರ್ಭವನ್ನು ವಜ್ರಾಯುಧದಿಂದ ಏಳು ಭಾಗವಾಗಿ ಕತ್ತರಿಸಿದರು. ಅಳುತ್ತಿದ್ದ ಆ ಒಂದೊಂದು ಭಾಗವನ್ನೂ ಅಳಬೇಡವೆನ್ನುತ್ತಾ ಮತ್ತೆ ಏಳು ಭಾಗವಾಗಿ ಕತ್ತರಿಸಿದರು. ಸೀಳಲ್ಪಡುತ್ತಿದ್ದ ಅವರೆಲ್ಲರೂ ಅಂಜಲಿಬದ್ಧರಾಗಿ 'ಇಂದ್ರದೇವ, ನಮ್ಮನ್ನು ಕೊಲ್ಲಲೆಳಸುತ್ತಿದ್ದಿ. ಆದರೆ ನಾವು ನಿನ್ನ ಬಂಧುಗಳು—ಮರುದ್ಗಣಗಳು' ಎಂದು ಬೇಡಿದರು. ಆದಕ್ಕೆ ಇಂದ್ರದೇವರು 'ನನ್ನಲ್ಲಿ ಭಕ್ತಿ ಮಾಡುತ್ತಿದ್ದೀರಿ. ನನ್ನ ಪರಿವಾರವಾದ ಮರುದ್ಗಣಗಳು ನೀವು. ಹೆದರಬೇಡಿ. ನೀವು ನನ್ನ ಸಹೋದರರು' ಎಂದು ಸಂತೈಸಿದರು.

ನ ಮಮಾರ ದಿತೇರ್ಗರ್ಭಃ ಶ್ರೀನಿವಾಸಾನುಕಂಪಯಾ ।
ಬಹುಧಾ ಕುಲಿಶಕ್ಷುಣ್ಣೋ ದ್ರೌಣ್ಯಸ್ತ್ರೇಣ ಯಥಾ ಭವಾ‌ನ್ ॥ ೬೫ ॥

ಶ್ರೀನಿವಾಸನಾದ ಶ್ರೀಹರಿಯ ಅನುಗ್ರಹದಿಂದ ದ್ರೌಣ್ಯಸ್ತ್ರೇಣ=ಅಶ್ವತ್ಥಾಮನ ಅಸ್ತ್ರದಿಂದ ಭವಾನ್ = ನೀನು ಯಥಾ ನ ಮಮಾರ=ಹೇಗೆ ಮೃತನಾಗಲಿಲ್ಲವೋ ತಥಾ=ಹಾಗೆ ಶ್ರೀಹರಿಯ ಅನುಗ್ರಹದಿಂದ ಬಹುಧಾ=ಅನೇಕ ಭಾಗವಾಗಿ ಕುಲಿಶಕ್ಷುಣ್ಣಃ = ವಜ್ರಾಯುಧದಿಂದ ಕತ್ತರಿಸಲ್ಪಟ್ಟ ದಿತಿಯ ಗರ್ಭವು ಸಾಯಲಿಲ್ಲ. || ೬೫ ||

ಸಕೃದಿಷ್ಟ್ವಾಽಽದಿಪುರುಷಂ ಪುರುಷೋ ಯಾತಿ ಸಾಮ್ಯತಾಮ್ ।
ಸಂವತ್ಸರಂ ಕಿಂಚಿದೂನಂ ದಿತ್ಯಾ ಯದ್ಧರಿರರ್ಚಿತಃ ॥ ೬೬ ॥

ದಿತಿಯ ಗರ್ಭವು ಸಾಯಲಿಲ್ಲವೆಂಬುದು ಆಶ್ಚರ್ಯವೇನಲ್ಲ ಎಂದು ತಿಳಿಸುತ್ತಾರೆ. ಪುರುಷಃ=ಅಧಿಕಾರಿ ಜೀವನು ಆದಿಪುರುಷಂ=ಶ್ರೀಹರಿಯನ್ನು ಸಕೃತ್= ಒಂದು ಸಲ ಇಷ್ಟ್ವಾ=ಭಕ್ತಿಯಿಂದ ಸೇವಿಸಿ ಸಾಮ್ಯತಾಂ=ಸಾರೂಪ್ಯವನ್ನು ಯಾತಿ =ಹೊಂದುವನು. ಯತಃ=ಯಾವ ಕಾರಣದಿಂದ ಹರಿಃ=ಶ್ರೀಮನ್ನಾರಾಯಣನು ದಿತ್ಯಾ=ದಿತಿಯಿಂದ ಕಿಂಚಿದೂನಂ=ಸ್ವಲ್ಪ ನ್ಯೂನವಾಗಿ ಸಂವತ್ಸರಂ=ಒಂದು ವರ್ಷ ಕಾಲ ಅರ್ಚಿತಃ=ಪೂಜಿಸಲ್ಪಟ್ಟನೋ ಆ ಕಾರಣದಿಂದ ಸಾರೂಪ್ಯವನ್ನು ಹೊಂದುತ್ತಾನೆಂದು ಹೇಳುವುದೇನು? ಸಾರೂಪ್ಯವನ್ನೇ ಹೊಂದುವಾಗ ಸಾಯಲಿಲ್ಲವೆಂಬುದು ಆಶ್ಚರ್ಯವೇನೂ ಅಲ್ಲವೆಂದು ಅಭಿಪ್ರಾಯ. ಅಥವಾ ಇದರಿಂದ ದಿತಿಯ ಮಕ್ಕಳಾದರೂ ಮರುದ್ಗಣಗಳು ದೇವತ್ವವನ್ನು ಪಡೆದುದು ಆಶ್ಚರ್ಯವಲ್ಲವೆಂದಾದರೂ ಅಭಿಪ್ರಾಯ. || ೬೬ ||

ಸಜೂರಿಂದ್ರೇಣ ಪಂಚಾಶದ್ದೇವಾಸ್ತೇ ಮರುತೋಽಭವನ್ ।
ವ್ಯಪೋಹ್ಯ ಮಾತೃದೋಷಂ ತೇ ಹರಿಣಾ ಸೋಮಪಾಃ ಕೃತಾಃ ॥

ಇಂದ್ರೇಣ ಸಜೂಃ=ಇಂದ್ರನೊಂದಿಗೆ (ಇಂದ್ರದೇವರೂ ಸೇರಿ) ತೇ=ಅವರು ಪಂಚಾಶತ್=ಐವತ್ತು ಮರುತಃ=ಮರುತ್ತುಗಳೆಂದು ಅಭವನ್= ಪ್ರಸಿದ್ಧರಾದರು.

ಶ್ರೀಹರಿಯ ದಯೆಯಿಂದ ದಿತಿಯ ಗರ್ಭವು ಬಹುಪ್ರಕಾರವಾಗಿ ವಜ್ರಾಯುಧದಿಂದ ಛಿನ್ನವಾಗಿದ್ದರೂ ಸಾಯಲಿಲ್ಲ. ಅಶ್ವತ್ಥಾಮಾಚಾರ್ಯರ ಅಸ್ತ್ರದಿಂದ ಹತನಾದರೂ ಕೃಷ್ಣನ ಅನುಗ್ರಹದಿಂದ ನೀನು ಸಾಯಲಿಲ್ಲವಲ್ಲವೇ! ಅಂತೆಯೇ ಆ ಗರ್ಭವೂ ಸಾಯಲಿಲ್ಲ. ಪುರುಷನು ಒಂದುಸಲ ಶ್ರೀಹರಿಯನ್ನು ಪೂಜಿಸಿ ಸಾರೂಪ್ಯವನ್ನು ಹೊಂದುವನು. ದಿತಿಯು ಸ್ವಲ್ಪ ನ್ಯೂನವಾಗಿ ಒಂದು ವರ್ಷಕಾಲ ಶ್ರೀಹರಿಯನ್ನು ಸೇವಿಸಿರುವಾಗ ಹೇಳುವುದೇನು? ಇಂದ್ರದೇವರೂ ಸೇರಿ ಇವರು ಐವತ್ತು ಮರುತ್ತರೆಂದು ಪ್ರಸಿದ್ಧರಾದರು. ಇಂದ್ರದೇವರು ತಾಯಿಯ ದೋಷವನ್ನು ಹೋಗಲಾಡಿಸಿ ಅವರನ್ನು ಸೋಮಪಾನಾರ್ಹರನ್ನಾಗಿ ಮಾಡಿದರು.

ತೇ=ಅವರು ಮಾತೃದೋಷಂ=ತಾಯಿಯಾದ ದಿತಿಯ ದೋಷವನ್ನು ವ್ಯಪೋಹ್ಯ= ಹೋಗಲಾಡಿಸಿ ಹರಿಣಾ=ಇಂದ್ರದೇವರಿಂದ, ದಿತಿಯಿಂದ ಸೇವಿತನಾದ ಶ್ರೀಹರಿ ಯಿಂದ, ಸೋಮಪಾಃ = ಸೋಮರಸವನ್ನು ಪಾನಮಾಡುವವರಾಗಿ ಕೃತಾಃ = ಮಾಡಲ್ಪಟ್ಟರು. ಸಂಪೂರ್ಣ ದೇವತ್ವವನ್ನು ಪಡೆದರೆಂದರ್ಥ. || ೬೭ ||

ದಿತಿರುತ್ಥಾಯ ದದೃಶೇ ಕುಮಾರಾನನಲಪ್ರಭಾನ್ ।
ಇಂದ್ರೇಣ ಸಹಿತಾನ್ ದೇವೀ ಪರ್ಯತುಷ್ಯದನಿಂದಿತಾ ॥ ೬೮ ॥

ದಿತಿದೇವಿಯು ಉತ್ಥಾಯ=ನಿದ್ರೆಯಿಂದ ಎಚ್ಚೆತ್ತು ಇಂದ್ರನಿಂದ ಕೂಡಿದ ಅನಲಪ್ರಭಾನ್ = ಅಗ್ನಿಯಂತೆ ಜ್ವಲಿಸುತ್ತಿದ್ದ ಕುಮಾರರನ್ನು ದದೃಶೇ = ಕಂಡಳು. ಅನಿಂದಿತಾ (ಸತೀ)=ಇಂದ್ರನ ವಿಷಯದಲ್ಲಿ ಕೋಪರಹಿತಳಾಗಿ ಪರ್ಯತುಷ್ಯತ್= ಗರ್ಭವನ್ನು ಕತ್ತರಿಸಿದರೂ ಮಕ್ಕಳು ಬದುಕಿದ್ದುದನ್ನು ಕಂಡು ಸಂತೋಷಪಟ್ಟಳು. || ೬೮ ||

ಅಥೇಂದ್ರಮಾಹ ತಾತಾಹಮಾದಿತ್ಯಾನಾಂ ಭಯಾವಹಮ್ ।
ಅಪತ್ಯಮಿಚ್ಛಂತ್ಯಚರಂ ವ್ರತಮೇತತ್ಸುದುಷ್ಕರಮ್ ॥ ೬೯ ॥

ಅಥ=ಅನಂತರ ಇಂದ್ರನನ್ನು ಕುರಿತು ಆಹ=ಹೇಳಿದಳು. ಏನೆಂದರೆ, ಹೇಳು ತ್ತಾರೆ. ತಾತ=ಮಗು! ಅಹಂ=ನಾನು ಆದಿತ್ಯಾನಾಂ=ನಮ್ಮ ಅಕ್ಕ ಅದಿತಿಯ ಮಕ್ಕಳಿಗೆ ಭಯಾವಹಂ = ಭಯವನ್ನುಂಟುಮಾಡುವ ಅಪತ್ಯಂ = ಮಗನನ್ನು ಇಚ್ಛಂತೀ (ಸತೀ)=ಅಪೇಕ್ಷಿಸುವವಳಾಗಿ ಸುದುಷ್ಕರಂ=ಮಾಡಲಸಾಧ್ಯವಾದ, ಕಠಿಣವಾದ ಈ ವ್ರತವನ್ನು ಅಚರಂ=ಆಚರಿಸಿದೆನು. || ೬೯ ||

ಏಕಃ ಸಂಕಲ್ಪಿತಃ ಪುತ್ರಃ ಸಪ್ತಸಪ್ತಾಭವನ್ ಕಥಮ್ ।
ಯದಿ ತೇ ವಿದಿತಂ ಪುತ್ರ ಸತ್ಯಂ ಕಥಯ ಮಾ ಮೃಷಾ ॥ ೭೦ ॥

ಒಬ್ಬ ಮಗನು ಆಗಬೇಕೆಂದು ನನ್ನಿಂದ ಸಂಕಲ್ಪಿತಃ=ಅಪೇಕ್ಷಿಸಲ್ಪಟ್ಟಿತ್ತು. ಸಪ್ತಸಪ್ತ = ನಲವತ್ತೊಂಭತ್ತು (ಪುತ್ರಾಃ) = ಮಕ್ಕಳು ಕಥಂ ಅಭವನ್ = ಹೇಗೆ ಆದರು? ಪುತ್ರನೇ, ತೇ=ನಿನಗೆ ವಿದಿತಂ ಯದಿ=ತಿಳಿದಿದ್ದರೆ ಸತ್ಯಂ=ನಿಜವಾದ ಸಂಗತಿಯನ್ನು ಕಥಯ=ಹೇಳು. ಮೃಷಾ=ಸುಳ್ಳು ಮಾ ಕಥಯ=ಹೇಳಬೇಡ. || ೭೦ ||

ದಿತಿಯು ನಿದ್ರೆಯಿಂದೆಚ್ಚೆತ್ತು ಅಗ್ನಿಯಂತೆ ಜ್ವಲಿಸುತ್ತಿದ್ದ ಮಕ್ಕಳನ್ನು ಕಂಡಳು. ಇಂದ್ರದೇವರೂ ಜೊತೆಯಲ್ಲಿದ್ದರು. ಇಂದ್ರನಮೇಲಿನ ಕೋಪವು ಅವಳಿಗೆ ಈಗ ಇರಲಿಲ್ಲ. ಸಂತೋಷಪಟ್ಟಳು. ಆಗವಳು ಇಂದ್ರದೇವರನ್ನು ಕುರಿತು 'ಮಗು, ಅದಿತಿಯ ಮಕ್ಕಳಿಗೆ ಭಯಂಕರನಾದ ಮಗನಾಗಬೇಕೆಂದು ನಾನು ಈ ಕಠಿಣ ವ್ರತವನ್ನಾಚರಿಸಿದೆ. ನಾನು ಸಂಕಲ್ಪಿಸಿದ್ದು ಒಬ್ಬ ಮಗನನ್ನು. ಇದೇನು! ಏಳರ

ಇಂದ್ರ ಉವಾಚ—

ಅಂಬ ತೇऽಹಂ ವ್ಯವಸಿತಮುಪಧಾರ್ಯಾಗತೋऽಂತಿಕಮ್ ।
ಲಬ್ಧಾಂತರೋऽಚ್ಛಿದಂ ಗರ್ಭಮರ್ಥಬುದ್ಧಿರ್ನ ಧರ್ಮವಿತ್ ॥ ೭೧ ॥

ತಾಯಿ, ನಾನು ತೇ ವ್ಯವಸಿತಂ = ನೀನು ಮಾಡಬೇಕೆಂದಿದ್ದುದನ್ನು (ನನ್ನ ಹಂತಕನಾದ ಮಗನನ್ನು ಪಡೆಯಬೇಕೆಂಬ ನಿನ್ನ ಪ್ರಯತ್ನವನ್ನು) ಉಪಧಾರ್ಯ– ತಿಳಿದು ಅಂತಿಕಂ ಆಗತಃ – ನಿನ್ನ ಸಮೀಪಕ್ಕೆ ಬಂದವನು ಅರ್ಥಬುದ್ಧಿಃ – ಸ್ವಪ್ರಯೋಜನವನ್ನು ಮಾತ್ರ ನೋಡಿದ ನ ಧರ್ಮವಿತ್–ಧರ್ಮದಲ್ಲಿ ದೃಷ್ಟಿಯಿಲ್ಲ ದವನಾಗಿ ಲಬ್ಧಾಂತರಃ - ಅವಕಾಶವನ್ನು ಹೊಂದಿ ಗರ್ಭಂ ಅಚ್ಛಿದಂ= ನಿನ್ನ (ಉದರ ವನ್ನು ಪ್ರವೇಶಿಸಿ) ಗರ್ಭವನ್ನು ಕತ್ತರಿಸಿದೆನು. ॥ ೭೧ ॥

ಕೃತೋ ಮೇ ಸಪ್ತಧಾ ಗರ್ಭ ಆಸನ್ ಸಪ್ತ ಕುಮಾರಕಾಃ ।
ತೇऽಪಿ ಚೈಕೈಕಶೋ ವೃಕ್ಣಾಃ ಸಪ್ತಧಾ ನಾಪಿ ಮಮ್ರಿರೇ ॥ ೭೨ ॥

ಮೇ–ನನ್ನಿಂದ ಗರ್ಭವು ಏಳು ಭಾಗವಾಗಿ ಮಾಡಲ್ಪಟ್ಟಿತು. ಏಳು ಕುಮಾರರು ಆದರು. ತೇ ಅಪಿ=ಆ ಏಳು ಮಕ್ಕಳೂ ಏಕೈಕಶಃ- ಒಬ್ಬೊಬ್ಬರೂ ಏಳು ಭಾಗವಾಗಿ ವೃಕ್ಣಾಃ=ಕತ್ತರಿಸಲ್ಪಟ್ಟರು. ಅಪಿ–ಆದರೂ ನ ಮಮ್ರಿರೇ– ಸಾಯಲಿಲ್ಲ. ॥ ೭೨ ॥

ತತಸ್ತತ್ಪರಮಾಶ್ಚರ್ಯಂ ವೀಕ್ಷ್ಯಾಧ್ಯವಸಿತಂ ಮಯಾ ।
ಮಹಾಪುರುಷಪೂಜಾಯಾಃ ಸಿದ್ಧಿಃ ಕಾರ್ಯಾನುಷಂಗಿಣೀ ॥ ೭೩ ॥

ತತಃ – ಅನಂತರ ಪರಮಾಶ್ಚರ್ಯಂ ತತ್ – ಅತ್ಯಂತ ಆಶ್ಚರ್ಯಕರವಾದ ಆ ವಿಷಯವನ್ನು ವೀಕ್ಷ್ಯ=ನೋಡಿ ಮಯಾ–ನನ್ನಿಂದ ಅಧ್ಯವಸಿತಂ–ನಿಶ್ಚಯಿ ಸಲ್ಪಟ್ಟಿತು. ನಿಶ್ಚಯ ಪ್ರಕಾರವನ್ನು ಹೇಳುತ್ತಾರೆ. ಮಹಾಪುರುಷ ಪೂಜಾಯಾಃ– ಸರ್ವೋತ್ತಮನಾದ ಶ್ರೀಹರಿಯ ಪೂಜೆಯಿಂದ ಆಗುವ ಸಿದ್ಧಿಃ=ಫಲವು, ಪ್ರಸಾದವು ಕಾರ್ಯಾನುಷಂಗಿಣೀ = ಅಭೀಷ್ಟ ಕಾರ್ಯದೊಂದಿಗೆ ಸೇರಿಕೊಂಡೇ ಇರುವುದು.

ಗುಂಪಿನ ಏಳು ಮಕ್ಕಳು ಹೇಗಾದರು? ಪುತ್ರ! ನಿನಗೆ ತಿಳಿದಿದ್ದರೆ ಹೇಳು. ಸತ್ಯ ವನ್ನು ನುಡಿ. ಸುಳ್ಳು ಹೇಳಬೇಡ' ಎಂದಳು.

ಇಂದ್ರದೇವರು—ಅಮ್ಮಾ, ನಿನ್ನ ಸಂಕಲ್ಪವನ್ನು ತಿಳಿದು ನಾನು ನಿನ್ನ ಸಮೀಪಕ್ಕೆ ಬಂದೆ. ಅವಕಾಶ ಸಿಕ್ಕಿದಕೂಡಲೆ ನಿನ್ನ ಉದರವನ್ನು ಪ್ರವೇಶಿಸಿ ಗರ್ಭವನ್ನು ಕತ್ತರಿಸಿದೆ. ಸ್ವಪ್ರಯೋಜನದಲ್ಲಿ ದೃಷ್ಟಿಯಿಟ್ಟೆನೇ ಹೊರತು ಧರ್ಮದ ಕಡೆ ಇಡಲಿಲ್ಲ. ಗರ್ಭವನ್ನು ಏಳು ಹೋಳು ಮಾಡಿದೆ. ಏಳು ಕುಮಾರರಾದರು. ಅವರು ಒಬ್ಬೊಬ್ಬರನ್ನೂ ಏಳು ತುಂಡು ಮಾಡಿದೆ. ಆದರೂ ಅವರು ಸಾಯಲಿಲ್ಲ. ಈ ಪರಮಾಶ್ಚರ್ಯವನ್ನು ನೋಡಿ 'ಸರ್ವೋತ್ತಮನಾದ ಶ್ರೀಹರಿಯ ಪೂಜೆ

ಶ್ರೀಹರಿಯ ಪೂಜೆಯಿಂದ ತಪ್ಪದೆ ಅಭೀಷ್ಟ ಸಿದ್ಧಿಯಾಗುವುದೆಂದರ್ಥ (ಎಂದು ನಿಶ್ಚಯಮಾಡಿದೆನು.) ಇದರಿಂದ ನೀನು ಮಾಡಿದ ಹರಿ ಸೇವೆಯ ಫಲವಾಗಿ ನಾನು ಎಷ್ಟು ಕತ್ತರಿಸಿದರೂ ನಿನ್ನ ಗರ್ಭವು ಸಾಯಲಿಲ್ಲವೆಂದು ಹೇಳಿದಂತಾಯಿತು. || ೭೩ ||

ಆರಾಧನಂ ಭಗವತ ಈಹಮಾನಾ ನಿರಾಶಿಷಃ ।
ಯೇ ತು ನೇಚ್ಛಂತ್ಯಪಿ ವರಂ ತೇ ಸ್ವಾರ್ಥಕುಶಲಾಃ ಸ್ಮೃತಾಃ || ೭೪ ||

ಫಲಾಪೇಕ್ಷೆಯಿಂದ ಮಾಡಿದ ಹರಿಪೂಜೆಯೇ ಈ ಬಗೆಯ ಸಿದ್ಧಿಯನ್ನು ಕೊಡುವಾಗ ಫಲಾಪೇಕ್ಷೆಯಿಲ್ಲದೆ ಮಾಡಿದ ಪೂಜೆಯಿಂದ ಆಗುವುದನ್ನು ಹೇಳುವುದೇನಿದೆ! ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಯೇ ತು=ಯಾರಾದರೆ ನಿರಾಶಿಷಃ (ಸಂತಃ)=ಯಾವ ಕಾಮನೆಯೂ ಇಲ್ಲದವರಾಗಿ ಭಗವತಃ=ಶ್ರೀಹರಿಯ ಆರಾಧನೆಯನ್ನು ಈಹಮಾನಾಃ (ಸಂತಃ)=ಮಾಡುವವರಾಗಿ ವರಂ ಅಪಿ=ಶ್ರೇಷ್ಠ ಪುರುಷಾರ್ಥವಾದ ಮೋಕ್ಷವನ್ನೂ ನ ಇಚ್ಛಂತಿ = ಅಪೇಕ್ಷಿಸುವುದಿಲ್ಲವೋ ತೇ = ಅಂತಹ ಏಕಾಂತಭಕ್ತರು ಸ್ವಾರ್ಥಕುಶಲಾಃ=ಸ್ವಾರ್ಥಸಾಧನೆಯಲ್ಲಿ ನಿಪುಣರೆಂದು ಸ್ಮೃತಾಃ = ಶಾಸ್ತ್ರದಲ್ಲಿ ಉಕ್ತರಾಗಿರುವರು. ಅವರ ಮೇಲೆ ಶ್ರೀಹರಿಯು ಪರಮಾನುಗ್ರಹಮಾಡುವನೆಂದರ್ಥ. ಇದರಿಂದ ಸರ್ವೇಷ್ಟವನ್ನು ಕೊಡುವನಾದರೂ ಶ್ರೀಹರಿಯು ನಿಷ್ಕಾಮನೆಯಿಂದ ಸೇವ್ಯನೆಂದು ದಿತಿಗೆ ತಿಳಿಸಿರುವರೆಂದು ತಿಳಿಯಬೇಕು. || ೭೪ ||

ಆರಾಧ್ಯಾತ್ಮಪ್ರದಂ ದೇವಮಾತ್ಮಾನಂ ಜಗದೀಶ್ವರಮ್ ।
ಕೋ ವೃಣೀತ ಗುಣಸ್ಪರ್ಶಂ ಬುಧಃ ಸ್ಯಾನ್ನರಕೇಽಪಿ ಯತ್ || ೭೫ ||

ಬುಧಃ=ಜ್ಞಾನಿಯಾದ ಕಃ=ಯಾವನು ತಾನೇ ದೇವಂ=ಸೃಷ್ಟ್ಯಾದಿಕ್ರೀಡೆಗಳಿಂದ ವಿಶಿಷ್ಟನಾದ ಜಗತ್ತಿಗೇ ನಿಯಾಮಕನಾದ ಆತ್ಮಪ್ರದಂ=ಆರಾಧಿಸುವವರಿಗೆ ತನ್ನನ್ನೇ ಕೊಡುವ ಆತ್ಮಾನಂ=ಪರಮಾತ್ಮನನ್ನು ಆರಾಧಿಸಿ ಗುಣಸ್ಪರ್ಶಂ=ವಿಷಯ ಭೋಗವನ್ನು (ಪುತ್ರಾದಿ ಐಹಿಕ ಸಂಪತ್ತನ್ನು) ವೃಣೀತ=ಬೇಡುವನು? ಜ್ಞಾನಿಯು ಎಂದೂ ಬೇಡುವುದಿಲ್ಲವೆಂದರ್ಥ. ಯತ್=ಏಕೆಂದರೆ, ನರಕೇ ಅಪಿ=ನರಕದಲ್ಲಿಯೂ ಈ ವಿಷಯಸುಖವು ಸ್ಯಾತ್=ಆಗಿಯೇ ಆಗುವುದು. ಪುತ್ರಕಾಮನೆಯಿಂದ ನೀನು ಹರಿಯನ್ನು ಆರಾಧಿಸಿದ್ದರಿಂದ ಜ್ಞಾನಿ ಎನಿಸಲಿಲ್ಲವೆಂದಭಿಪ್ರಾಯ. || ೭೫ ||

ಯಿಂದಾಗುವ ಸಿದ್ಧಿಯು ಅಭೀಷ್ಟವನ್ನು ಪೂರೈಸಿಯೇ ತೀರುವುದೆಂದು ನಿಶ್ಚಯ ಮಾಡಿದೆ. ಫಲಾಪೇಕ್ಷೆಯಿಲ್ಲದೆ ಶ್ರೀಹರಿಯನ್ನು ಆರಾಧಿಸಿ ವರವೂ ಬೇಡವೆನ್ನುವವರು ಸ್ವಾರ್ಥಸಾಧನೆಯಲ್ಲಿ ಅತ್ಯಂತ ನಿಪುಣರು. ಆರಾಧಿಸುವವರಿಗೆ ಶ್ರೀಹರಿಯು ತನ್ನನ್ನೇ ಕೊಡುವನು. ಅವನು ಜಗದೀಶ್ವರ; ಪರಮಾತ್ಮ. ಜ್ಞಾನಿಯಾದವನು ಯಾವನು ತಾನೇ ಅವನನ್ನು ಆರಾಧಿಸಿ ವಿಷಯ ಭೋಗಗಳನ್ನು ಬೇಡುವನು?

ತದಿದಂ ಮಮ ದೌರ್ಜನ್ಯಂ ಬಾಲಿಶಸ್ಯ ಮಹೀಯಸಿ ।
ಕ್ಷಂತುಮರ್ಹಸಿ ಮಾತಸ್ತ್ವಂ ದಿಷ್ಟ್ಯಾ ಗರ್ಭೋ ಮೃತೋತ್ಥಿತಃ ॥

ಹೇ ಮಹೀಯಸಿ ಮಹತ್ತಮಳೇ, ಮಾತಃ = ತಾಯಿಯೇ ನೀನು ಬಾಲಿಶಸ್ಯ= ಹುಡುಗುತನದ ಚಾಪಲ್ಯವುಳ್ಳ ನನ್ನ ತತ್ ಇದಂ ದೌರ್ಜನ್ಯಂ= ಈ ಗರ್ಭಚ್ಛೇದನ ರೂಪವಾದ ದುಷ್ಟಜನಕಾರ್ಯವನ್ನು ಕ್ಷಂತುಂ = ಕ್ಷಮಿಸಲು ಅರ್ಹಸಿ = ಅರ್ಹ ಳಾಗಿರುವೆ. ಗರ್ಭವು ಮೃತೋತ್ಥಿತಃ= ಸತ್ತು ಬದುಕಿತು. ದಿಷ್ಟ್ಯಾ= ಮಂಗಳವು, ಒಳ್ಳೆಯದಾಗಲಿ. || ೭೬ ||

ಶ್ರೀ ಶುಕ ಉವಾಚ—

ಇಂದ್ರಸ್ತಯಾಽಭ್ಯನುಜ್ಞಾತಃ ಶುಕ್ಲಭಾವೇನ ತುಷ್ಟಯಾ ।
ಮರುದ್ಭಿಃ ಸಹ ತಾಂ ನತ್ವಾ ಜಗಾಮ ತ್ರಿದಿವಂ ಪ್ರಭುಃ ॥ ೭೭ ॥

ಶುಕ್ಲಭಾವೇನ = ದ್ವೇಷಭಾವನೆಯಿಲ್ಲದೆ ಶುದ್ಧ ಭಾವದಿಂದ ತುಷ್ಟಯಾ= ಇಂದ್ರನ ವಿಷಯದಲ್ಲಿ ಸಂತುಷ್ಟಳಾದ ತಯಾ - ಆ ದಿತಿಯಿಂದ ಅಭ್ಯನುಜ್ಞಾತಃ= ಅಪ್ಪಣೆ ಪಡೆದ ಪ್ರಭುಃ = ಸಮರ್ಥರಾದ ಇಂದ್ರದೇವರು ಆಕೆಗೆ ನಮಸ್ಕಾರಮಾಡಿ ತ್ರಿದಿವಂ= ಸ್ವರ್ಗಕ್ಕೆ ಮರುದ್ಗಣಗಳೊಂದಿಗೆ ಹೋದರು. || ೭೭ ||

ಏವಂ ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಮಂಗಲಂ ಮರುತಾಂ ಜನ್ಮ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೭೮ ॥

ರಾಜನೇ, ನೀನು ನನ್ನನ್ನು (' ದಿತಿಯ ಮಕ್ಕಳು ಆಸುರಭಾವವನ್ನು ಬಿಟ್ಟು ದೇವತೆಗಳು ಹೇಗಾದರು? ಎಂದು ೨೦) ಏನು ಕೇಳಿದೆಯೋ (ತತ್) ಸರ್ವಂ= ಅದೆಲ್ಲವನ್ನೂ ಏವಂ = ಮೇಲೆ ಹೇಳಿದಂತೆ ವಿಸ್ತಾರವಾಗಿ ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಮರುತ್ತರ ಹುಟ್ಟು (ಶ್ರೀಹರಿಯ ಮಹಿಮಾವರ್ಣನೆಯೇ ಆದ್ದರಿಂದ) ಮಂಗಳಕರವು. ಮತ್ತೇನನ್ನು ಕೇಳಲು ಇಚ್ಛಿಸುತ್ತೀ? || ೭೮ ||

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಠಸ್ಕಂಧೇ ಅಷ್ಟಾದಶೋಽಧ್ಯಾಯಃ

ನರಕದಲ್ಲಿಯೂ (ನೀಚ ಯೋನಿಗಳಲ್ಲಿಯೂ) ಅವು ಇದ್ದೇ ಇವೆ. ಮಹನೀಯಳೇ, ತಾಯಿ, ಹುಡುಗನಾದ ಈ ನನ್ನ ದೌರ್ಜನ್ಯವನ್ನು ಕ್ಷಮಿಸಲು ನೀನು ಅರ್ಹಳಿರುವೆ. ನಿನ್ನ ಗರ್ಭವು ಸತ್ತು ಬದುಕಿದೆ. ಮಂಗಳವಾಗಲಿ.

ಶ್ರೀ ಶುಕಾಚಾರ್ಯರು—ದ್ವೇಷಭಾವವನ್ನು ಬಿಟ್ಟು ಶುದ್ಧ ಭಾವನೆಯಿಂದ ಸಂತುಷ್ಟಳಾಗಿದ್ದ ದಿತಿಯಿಂದ ಅನುಜ್ಞೆ ಪಡೆದ ಪ್ರಭುಗಳಾದ ಇಂದ್ರದೇದರು ಮರುತ್ತರೊಂದಿಗೆ ಆಕೆಯನ್ನು ನಮಸ್ಕರಿಸಿ ಸ್ವರ್ಗಕ್ಕೆ ಹಿಂತಿರುಗಿದರು. ರಾಜನ್, ನೀನು ಕೇಳಿದ ಎಲ್ಲ ಕಥೆಯನ್ನೂ ಹೇಳಿದ್ದೇನೆ. ಮರುದ್ಗಣಗಳ ಹುಟ್ಟು (ಕತೆ) ಮಂಗಳಕರವಾದುದು. ಮತ್ತೇನನ್ನು ಕೇಳಬಯಸುವೆ?

ಅಥ ಏಕೋನವಿಂಶೋಽಧ್ಯಾಯಃ

ರಾಜೋವಾಚ—

ವ್ರತಂ ಪುಂಸವನಂ ಬ್ರಹ್ಮನ್ ಭವತಾ ಯದುದೀರಿತಮ್ ।
ತಸ್ಯ ವೇದಿತುಮಿಚ್ಛಾಮಿ ಯೇನ ವಿಷ್ಣುಃ ಪ್ರಸೀದತಿ ॥ ೧ ॥

ನಿಷ್ಕಾಮನೆಯಿಂದ ಆಚರಿಸಲ್ಪಡುವ ಪುಂಸವನವೆಂಬ ವ್ರತವು ಶ್ರೀಮನ್ನಾರಾಯಣನ ಅನುಗ್ರಹಕ್ಕೆ ಕಾರಣವು. ಜ್ಞಾನವನ್ನು ಹುಟ್ಟಿಸುವ ಮೂಲಕ ಮೋಕ್ಷಕ್ಕೆ ಸಾಧನವಾಗುವುದು ಎಂಬ ಅಭಿಪ್ರಾಯದಿಂದ ಈ ಅಧ್ಯಾಯದಲ್ಲಿ ಪ್ರಶ್ನೋತ್ತರ ರೂಪವಾಗಿ ಈ ವ್ರತವನ್ನು ನಿರೂಪಿಸುತ್ತಾರೆ. ಹೇ ಬ್ರಹ್ಮಜ್ಞಾನಿಗಳಾದ ಶುಕಾಚಾರ್ಯರೇ, ಭವತಾ=ನಿಮ್ಮಿಂದ ಯತ್=ಯಾವ ಪುಂಸವನವೆಂಬ ವ್ರತವು ಉದೀರಿತಂ= ಹೇಳಲ್ಪಟ್ಟಿತೋ ಯೇನ= ಯಾವ ವ್ರತದಿಂದ ವಿಷ್ಣುವು ಪ್ರಸನ್ನನಾಗುವನೋ ತಸ್ಯ= ಆ ಪುಂಸವನ ವ್ರತದ (ವಿಧಾನಂ)=ಪ್ರಕಾರವನ್ನು (ಅದನ್ನು ಮಾಡುವ ವಿಧಾನವನ್ನು) ವೇದಿತುಂ= ತಿಳಿಯಲು ಇಚ್ಛಾಮಿ= ಇಷ್ಟಪಡುತ್ತೇನೆ. ॥ ೧ ॥

ಶ್ರೀ ಶುಕ ಉವಾಚ—

ಶುಕ್ಲೇ ಮಾರ್ಗಶಿರೇ ಪಕ್ಷೇ ಯೋಷಿದ್ಭರ್ತುರನುಜ್ಞಯಾ ।
ಆರಭೇತ ವ್ರತಮಿದಂ ಸಾರ್ವಕಾಮಿಕಮಾದಿತಃ ॥ ೨ ॥

ಯೋಷಿತ್=(ಮುತ್ತೈದೆಯಾದ) ಹೆಂಗುಸು ಭರ್ತುಃ ಅನುಜ್ಞಯಾ=ಗಂಡನ ಅಪ್ಪಣೆಯಂತೆ (ಅಪ್ಪಣೆ ಪಡೆದು), ಮಾರ್ಗಶಿರೇ= ಮಾರ್ಗಶೀರ್ಷ ಮಾಸದಲ್ಲಿ, ಸೌರಮಾನದ ಧನುರ್ಮಾಸದಲ್ಲಿ ಶುಕ್ಲಪಕ್ಷದಲ್ಲಿ ಆದಿತಃ=ಪಾಡ್ಯಮಿಯಿಂದ ಹಿಡಿದು, ಸಾರ್ವಕಾಮಿಕಂ=ಮೋಕ್ಷಾದಿ ಎಲ್ಲ ಇಷ್ಟಾರ್ಥಗಳನ್ನೂ ಕೊಡುವ ಈ 'ಪುಂಸವನ' ವ್ರತವನ್ನು ಆರಂಭಿಸಬೇಕು. ॥ ೨ ॥

ಹತ್ತೊಂಭತ್ತನೆಯ ಅಧ್ಯಾಯ

ಪರೀಕ್ಷಿದ್ರಾಜರು— ಬ್ರಹ್ಮಜ್ಞಾನಿಗಳೇ, ತಾವು ಪುಂಸವನ ವ್ರತವೆಂದು ಹೇಳಿದಿರಿ. ಆ ವ್ರತದಿಂದ ಶ್ರೀಹರಿಯು ಪ್ರಸನ್ನನಾಗುವನು. ಅದರ ವಿಧಾನ (ಮಾಡುವ ಪ್ರಕಾರ)ವನ್ನು ತಿಳಿಯಲಪೇಕ್ಷಿಸುವೆನು.

ಶ್ರೀ ಶುಕಾಚಾರ್ಯರು—ಹೆಂಗುಸು ಗಂಡನ ಅಪ್ಪಣೆಯನ್ನು ಪಡೆದು ಮಾರ್ಗಶಿರ (ಧನುರ್) ಮಾಸ ಶುಕ್ಲಪಕ್ಷ ಪಾಡ್ಯಮಿಯಿಂದ ಈ ವ್ರತವನ್ನು ಪ್ರಾರಂಭಿಸ

ನಿಶಮ್ಯ ಮರುತಾಂ ಜನ್ಮ ಬ್ರಾಹ್ಮಣಾನನುಮಂತ್ರ್ಯ ಚ ।
ಸ್ನಾತ್ವಾ ಶುಕ್ಲದತೀ ಶುಕ್ಲೇ ವಸೀತಾಲಂಕೃತಾಂಬರೇ ॥ ೩ ॥

ಮರುತ್ತುಗಳ ಜನ್ಮ ಪ್ರಾರಂಭಿಸಿ ನಿಶಮ್ಯ – ಕೇಳಿ ಬ್ರಾಹ್ಮಣರನ್ನು ಅನು-ಮಂತ್ರ್ಯ – ಕೇಳಿ ಅಪ್ಪಣೆ ಪಡೆದು ಶುಕ್ಲದತೀ (ಸತೀ) = ಶುಭ್ರ ದಂತಳಾಗಿ ಸ್ನಾನ ಮಾಡಿ ಶುಕ್ಲೇ – ಶುದ್ಧಗಳಾಥ ಅಂಬರೇ – ಬಟ್ಟೆಗಳನ್ನು ವಸೀತ – ಉಟ್ಟುಕೊಳ್ಳ ಬೇಕು. ಅಲಂಕೃತಾ ಸತೀ – ಅಲಂಕಾರ ಮಾಡಿಕೊಂಡು. ॥ ೩ ॥

ಪೂಜಯೇತ್ಪ್ರಾತರಾಶಾತ್ಪ್ರಾಕ್ ಭಗವಂತಂ ಶ್ರಿಯಾ ಸಹ ।
ನಮಸ್ತೇ ನಿರಪೇಕ್ಷಾಯ ಪೂರ್ಣಕಾಮ ನಮೋಽಸ್ತುತೇ ॥
ಮಹಾವಿಭೂತಿಪತಯೇ ನಮಃ ಸಕಲಸಿದ್ಧಯೇ ॥ ೪ ॥

ಪ್ರಾತರಾಶಾತ್ – ಬೆಳಗಿನ ಉಪಹಾರಕ್ಕಿಂತ ಪ್ರಾಕ್ = ಮೊದಲೇ ಶ್ರಿಯಾ ಸಹ – ಲಕ್ಷ್ಮಿಯೊಂದಿಗೆ ಭಗವಂತಂ – ನಾರಾಯಣನನ್ನು ಪೂಜಿಸಬೇಕು. ನಿರಪೇಕ್ಷಾಯ – ಯಾರ ಅಪೇಕ್ಷೆಯೂ ಇಲ್ಲದ, ಯಾವ ಅಪೇಕ್ಷೆಯೂ ಇಲ್ಲದ ನಿನಗೆ ನಮಸ್ಕಾರ. ಪೂರ್ಣಕಾಮನೇ ನಿನಗೆ ನಮಸ್ಕಾರವಾಗಲಿ. ಮಹಾ ಐಶ್ವರ್ಯ ನಾಮಕಳಾದ ಲಕ್ಷ್ಮಿಗೆ ಪತಿಯಾದ, ಸಕಲಸಿದ್ಧ ಸ್ವರೂಪನಾದ ಸಕಲಸಿದ್ಧಿಗಳನ್ನೂ ಕೊಡುವ ನಿನಗೆ ನಮಸ್ಕಾರ. ॥ ೪ ॥

ಯತಸ್ತ್ವಂ ಕೃಪಯಾ ಭೂತ್ಯಾ ತೇಜಸಾ ಮಹತೌಜಸಾ ।
(ಜು) ತುಷ್ಟ ಈಶ ಗುಣೈಃ ಸರ್ವೈಸ್ತತೋಽಸಿ ಭಗವಾನ್ ವಿಭುಃ ॥ ೫ ॥

ಭೋ ಈಶ – ನಿಯಾಮಕನೇ, ಯತಃ = ಯಾವ ಕಾರಣದಿಂದ ತ್ವಂ = ನೀನು ಕೃಪಯಾ – ದಯೆಯಿಂದಲೂ ಭೂತ್ಯಾ – ಐಶ್ವರ್ಯದಿಂದಲೂ ತೇಜಸ್ಸಿನಿಂದಲೂ ಮಹತಾ = ಅತಿಶಯವಾದ ಓಜಸಾ – ಪರಾಕ್ರಮದಿಂದಲೂ ಸರ್ವೈಃ ಗುಣೈಃ = ಇನ್ನೂ ಅನೇಕ ಸತ್ಯ ಸಂಕಲ್ಪ ಮೊದಲಾದ ಗುಣಗಳಿಂದಲೂ (ಜುಷ್ಟಃ – ಯುಕ್ತನೋ)

ಬೇಕು. ಇದು ಎಲ್ಲ ಇಷ್ಟಾರ್ಥಗಳನ್ನೂ ಕೊಡುವುದು. ಮರುದ್ಗಣಗಳ ಹುಟ್ಟಿನ ಕತೆಯನ್ನು ಪ್ರಾರಂಭದಿಂದ ಕೇಳಿ, ಬ್ರಾಹ್ಮಣರ ಅನುಜ್ಞೆ ಪಡೆದು, ಶುಭ್ರ ಹಲ್ಲು ಗಳುಳ್ಳವಳಾಗಿ ಸ್ನಾನಮಾಡಿ ಶುದ್ಧ ಉಡೆಯನ್ನುಟ್ಟು ಅಲಂಕಾರ ಮಾಡಿಕೊಂಡು ಪ್ರಾತಃ ಉಪಹಾರಕ್ಕೆ ಮೊದಲೇ ಲಕ್ಷ್ಮಿಯೊಂದಿಗೆ ಶ್ರೀಹರಿಯನ್ನು ಪೂಜಿಸಬೇಕು. ನಿರಪೇಕ್ಷನೂ ಪೂರ್ಣಕಾಮನೂ ಆದ ನಿನಗೆ ನಮಸ್ಕಾರ. ಮಹಾವಿಭೂತಿ ನಾಯಕಳಾದ ಲಕ್ಷ್ಮಿಗೆ ಪತಿಯೂ ಸಕಲಸಿದ್ಧಿ ಸ್ವರೂಪನೂ ಆದ ನಿನಗೆ ನಮಸ್ಕಾರ. ಈಶನೇ ನೀನು ದಯೆ, ಭೂತಿ, ತೇಜಸ್ಸು ಅತಿಶಯ ಪರಾಕ್ರಮ ಇವೇ ಮೊದಲಾದ ಎಲ್ಲ ಗುಣಗಳಿಂದ ಯುಕ್ತನಾಗಿ ಪೂರ್ಣನಾಗಿರುವೆಯಾದ್ದರಿಂದ

ತುಷ್ಟಃ = ಸಂತೃಪ್ತನೋ ಪೂರ್ಣನೋ ತತಃ = ಆ ಕಾರಣದಿಂದ ವಿಭುಃ — ಸರ್ವ ಸಮರ್ಥನಾದ ಭಗವಂತನಾಗಿರುವೆ (ಭಗವಚ್ಛಬ್ದವಾಚ್ಯನಿರುವೆ). || ೫ ||

ವಿಷ್ಣುಪತ್ನಿ ಮಹಾಮಾಯೇ ಮಹಾಪುರುಷಲಕ್ಷಣೇ ।
ಪ್ರೀಯೇಥಾ ಮೇ ಮಹಾಭಾಗೇ ಲೋಕಮಾತರ್ನಮೋಽಸ್ತು ತೇ ||

ವಿಷ್ಣುವಿನ ಹೆಂಡತಿಯೇ, ಮಹಾಸಾಮರ್ಥ್ಯವಂತಳೇ, ಮಹಾಪುರುಷನಾದ ಶ್ರೀಹರಿಯ ನಿರಪೇಕ್ಷತ್ವ ಮೊದಲಾದ ಲಕ್ಷಣಗಳುಳ್ಳವಳೇ, ಮಹಾಸೌಭಾಗ್ಯವತಿಯೇ, ಲೋಕಮಾತೆಯೇ ನಿನಗೆ ನಮಸ್ಕಾರವಾಗಲಿ. ಮೇ — ನನ್ನ ವಿಷಯದಲ್ಲಿ ಪ್ರೀಯೇಥಾಃ — ಪ್ರೀತಳಾಗು. || ೬ ||

ಗ|| ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ ।
ಮಹಾವಿಭೂತಿಪತಯೇ ಸಹ ಮಹಾವಿಭೂತಿಭಿರ್ಬಲಿ-
ಮುಪಾಹರಾನೀತಿ ||
ಅನೇನಾಹರಹರ್ಮಂತ್ರೇಣ ವಿಷ್ಣೋರಾಸನಾರ್ಘ್ಯ ಪಾದ್ಯೋಪ-
ಸ್ಪರ್ಶನ ।
ಸ್ನಾನ ವಾಸ ಉಪವೀತ ವಿಭೂಷಣ ಗಂಧ ಪುಷ್ಪ ಧೂಪ ದೀಪೋ
ಪಹಾರಾ-
ದ್ಯುಪಚಾರಾಂಶ್ಚ ಸಮಾಹಿತ (ತಾ) ಉಪಾಹರೇತ್ || ೭ ||

ಪೂಜಾಮಂತ್ರವನ್ನು ಹೇಳುತ್ತಾರೆ — ಓಂ — ಗುಣಪೂರ್ಣನಾದ ಶ್ರೀಹರಿಗೆ ನಮಸ್ಕಾರವು. ಪುರುಷೋತ್ತಮನಾದ, ಮಹಾಸಾಮರ್ಥ್ಯವಂತನಾದ, ಮಹಾ ವಿಭೂತಿಗೆ ಪಾಲಕನಾದ, ಮಹಾವಿಭೂತಿಗಳೆಂಬ ಪರಿವಾರಗಳಿಂದ ಸಹ (ವರ್ತಮಾನಾಯ) — ಕೂಡಿಕೊಂಡಿರುವ ಭಗವತೇ = ಶ್ರೀಹರಿಗೆ ಬಲಿಂ = ಪೂಜೆಯನ್ನು ಉಪಾಹರಾನಿ = ಮಾಡುತ್ತೇನೆ. ಇತಿ ಅನೇನ ಮಂತ್ರೇಣ = ಎಂಬೀ ಮಂತ್ರದಿಂದ ಅಹರಹಃ = ಪ್ರತಿದಿನವೂ ವಿಷ್ಣುವಿಗೆ ಆಸನ, ಅರ್ಘ್ಯ, ಪಾದ್ಯ, ಆಚಮನ (ಉಪಸ್ಪರ್ಶನ) ಸ್ನಾನ, ವಸ್ತ್ರ, ಉಪವೀತ, ಆಭರಣ, ಗಂಧ, ಪುಷ್ಪ, ಧೂಪ, ದೀಪ, ಉಪಹಾರ = ನೈವೇದ್ಯ ಆದಿ — ಮೊದಲಾದ ಉಪಚಾರಾನ್ ಚ = ಉಪಚಾರಗಳನ್ನು ಸಮಾಹಿತಳಾಗಿ ಉಪಾಹರೇತ್ = ಮಾಡಬೇಕು. || ೭ ||

ಸರ್ವಸಮರ್ಥನಾಗಿ ಭಗವಚ್ಛಬ್ದವಾಚ್ಯನಾಗಿರುವೆ. ವಿಷ್ಣುವಿನ ಪತ್ನಿಯೂ ಮಹಾ ಸಮರ್ಥಳೂ ಸರ್ವೋತ್ತಮನಾದ ಶ್ರೀಹರಿಯ ನಿರಪೇಕ್ಷತ್ವ ಮೊದಲಾದ ಲಕ್ಷಣಗಳುಳ್ಳವಳೂ ಮಹಾ ಭಾಗ್ಯವಂತಳೂ ಆದ ಲೋಕಮಾತೆಯೇ, ನಿನಗೆ ನಮಸ್ಕಾರ. ಗುಣಪೂರ್ಣನಾದ ಶ್ರೀಹರಿಗೆ ನಮಸ್ಕಾರ. ಪುರುಷೋತ್ತಮನೂ ಮಹಾ ಸಮರ್ಥನೂ ಮಹಾ ವಿಭೂತಿಪಾಲಕನೂ ಮಹಾ ವಿಭೂತಿಗಳೊಂದಿಗೆ ಇರುವನೂ ಆದ ಭಗವಂತನಿಗೆ ಪೂಜೆ ಮಾಡುತ್ತೇನೆ ಎಂಬ ಮಂತ್ರದಿಂದ ಪ್ರತಿನಿತ್ಯವೂ

ಹವಿಃ ಶೇಷಂ ತು ಜುಹುಯಾದನಲೇ ದ್ವಾದಶಾಹುತೀಃ ।
ಓಂ ನಮೋ ಭಗವತೇ ಮಹಾಪುರುಷಾಯ ಮಹಾ ವಿಭೂತಿಪತಯೇ ಸ್ವಾಹೇತಿ ॥

ಹವಿಃ ಶೇಷಂ ತು – ನೈವೇದ್ಯ ಶೇಷವನ್ನು ಓಂ ನಮೋ ಭಗವತೇ ಮಹಾಪುರುಷಾಯ ಮಹಾವಿಭೂತಿಪತಯೇ ಸ್ವಾಹಾ ಇತಿ ಮಂತ್ರೇಣ–ಎಂಬ ಮಂತ್ರದಿಂದ ಅನಲೇ – ಅಗ್ನಿಯಲ್ಲಿ ದ್ವಾದಶ ಆಹುತೀಃ – ಹನ್ನೆರಡು ಆಹುತಿಗಳನ್ನು ಜುಹುಯಾತ್–ಹೋಮಮಾಡಬೇಕು.

ಶ್ರಿಯಂ ವಿಷ್ಣುಂ ಚ ವರದಾವಾಶಿಷಾಂ ಪ್ರಭವಾವುಭೌ ।
ಭಕ್ತ್ಯಾ ಸಂಪೂಜಯೇನ್ನಿತ್ಯಂ ಯದೀಚ್ಛೇತ್ಸರ್ವಸಂಪದಃ ॥ ೮ ॥

ಸರ್ವಸಂಪದಃ – ಎಲ್ಲ ಸಂಪತ್ತುಗಳನ್ನೂ ಯದಿ ಇಚ್ಛೇತ್ – ಇಚ್ಛಿಸಿದಲ್ಲಿ ವರದೌ–ವರಗಳನ್ನು ಕೊಡುವ ಆಶಿಷಾಂ–ಅಭೀಷ್ಟಗಳ ಪ್ರಭವೌ–ಕೊಡುವಿಕೆಯಲ್ಲಿ ಅತ್ಯಂತ ಸಮರ್ಥರಾದ ಶ್ರಿಯಂ–ಲಕ್ಷ್ಮಿಯನ್ನೂ ವಿಷ್ಣುವನ್ನೂ ಉಭೌ–ಇವರಿಬ್ಬರನ್ನೂ ಭಕ್ತ್ಯಾ–ಭಕ್ತಿಯಿಂದ ನಿತ್ಯಂ–ಯಾವಾಗಲೂ ಸಂಪೂಜಯೇತ್–ವಿಧಿವತ್ತಾಗಿ ಪೂಜಿಸಬೇಕು. ॥ ೮ ॥

ಪ್ರಣಮೇದ್ದಂಡವದ್ಭೂಮೌ ಭಕ್ತಿಪ್ರಹ್ವೇಣ ಚೇತಸಾ ।
ದಶವಾರಂ ಜಪೇನ್ಮಂತ್ರಂ ತತಃ ಸ್ತೋತ್ರಮುದೀರಯೇತ್ ॥ ೯ ॥

ದಂಡವತ್ – ಕಟ್ಟಿಗೆಯಂತೆ ಉದ್ದವಾಗಿ ಭೂಮಿಯಲ್ಲಿ ಪ್ರಣಮೇತ್ – ನಮಸ್ಕರಿಸಬೇಕು. ಭಕ್ತಿಯಿಂದ ನಮ್ರವಾದ ಮನಸ್ಸಿನಿಂದ ಮಂತ್ರವನ್ನು ದಶವಾರಂ–ಕನಿಷ್ಠಪಕ್ಷ ಹತ್ತು ಸಲವಾದರೂ (ಅದಕ್ಕಿಂತ ಹೆಚ್ಚಾಗಿ ಯಥಾಶಕ್ತಿ ಮಾಡಲು ಅಡ್ಡಿಯಿಲ್ಲ) ಜಪಿಸಬೇಕು. ಹತ್ತು ಸಲ ಮಾಡಲೇಬೇಕೆಂದರ್ಥ. ತತಃ–ಅನಂತರ ಸ್ತೋತ್ರವನ್ನು (ಮುಂದೆ ಹೇಳುವುದನ್ನು) ಉದೀರಯೇತ್–ಉಚ್ಚರಿಸಬೇಕು. ॥ ೯ ॥

ಯುವಾಂ ತು ವಿಶ್ವಸ್ಯ ವಿಭೂ ಜಗತಃ ಕಾರಣಂ ಪರಮ್ ।
ಇಯಂ ಹಿ ಪ್ರಕೃತಿಃ ಸೂಕ್ಷ್ಮಾ ಮಾಯಾಶಕ್ತಿರ್ದುರತ್ಯಯಾ ॥೧೦॥

ಶ್ರೀಹರಿಗೆ ಆಸನ ಮೊದಲಾದ ಷೋಡಶ ಉಪಚಾರಗಳನ್ನು ಏಕಾಗ್ರ ಮನಸ್ಸಿನಿಂದ ಮಾಡಬೇಕು. ನೈವೇದ್ಯ ಶೇಷವನ್ನು 'ಓಂ ನಮೋ ಭಗವತೇ ಮಹಾ ಪುರುಷಾಯ ಮಹಾ ವಿಭೂತಿಪತಯೇ ಸ್ವಾಹಾ' ಎಂಬ ಮಂತ್ರದಿಂದ ಅಗ್ನಿಯಲ್ಲಿ ಹನ್ನೆರಡು ಆಹುತಿಗಳನ್ನು ಹೋಮಮಾಡಬೇಕು. ಎಲ್ಲ ಸಂಪತ್ತನ್ನು ಬಯಸಿದಾಗ ವರಪ್ರದರೂ ಅಭೀಷ್ಟದಾನ ಸಮರ್ಥರೂ ಆದ ಲಕ್ಷ್ಮೀ ನಾರಾಯಣರಿಬ್ಬರನ್ನೂ ಭಕ್ತಿಯಿಂದ ನಿತ್ಯವೂ ವಿಧಿವತ್ತಾಗಿ ಪೂಜಿಸಬೇಕು. ದಂಡಾಕಾರವಾಗಿ ಭೂಮಿಯಲ್ಲಿ ನಮಸ್ಕರಿಸಬೇಕು. ಭಕ್ತಿ ನಮ್ರ ಮನಸ್ಸಿನಿಂದ ಹತ್ತು ಸಲಕ್ಕೆ ಕಮ್ಮಿಯಿಲ್ಲದೆ ಜಪಿಸಬೇಕು.

ಯುವಾಂ ತು=ಲಕ್ಷ್ಮೀನಾರಾಯಣರು ನೀವಿಬ್ಬರಾದರೋ ವಿಶ್ವಸ್ಯ=ಸಮಸ್ತ ಜಗತ್ತಿಗೂ ವಿಭೂ=ಸ್ವಾಮಿಗಳು. ಜಗತಃ=ಜಗತ್ತಿಗೆ ಪರಂ=ಉತ್ತಮವಾದ, ಮುಖ್ಯವಾದ ಕಾರಣಂ=ಕಾರಣರು. ಕೆಲವು ಶಾಸ್ತ್ರಗಳಲ್ಲಿ ಪ್ರಕೃತಿ ಪುರುಷರು ಕಾರಣರೆಂದೂ ಮತ್ತು ಕೆಲವು ಶಾಸ್ತ್ರಗಳಲ್ಲಿ ಅವ್ಯಕ್ತ ಮೊದಲಾದುವು ಕಾರಣವೆಂದೂ ಹೇಳುತ್ತದೆಯಲ್ಲಾ? ಎಂದರೆ ಹೇಳುತ್ತಾರೆ. ಇಯಂ ಹಿ=ಈ ಲಕ್ಷ್ಮಿಯೇ ಪ್ರಕೃತಿಃ=ಪ್ರಕೃತಿಯೆಂದು ಕರೆಸುವಳು (ಜಡಪ್ರಕೃತಿಗೆ ಅಭಿಮಾನಿಯಾದ ಚೇತನ ಪ್ರಕೃತಿಯು.) ಸೂಕ್ಷ್ಮಾ=ತಿಳಿಯಲಾಗದವಳು. ಇದರಿಂದ ಅವ್ಯಕ್ತಪದವಾಚ್ಯಳೂ ಇವಳೇ ಎಂದು ತಿಳಿಸಿರುವರು. ಮಾಯಾ ಅಜ್ಞಾನಾದಿಗಳಿಂದ ಜಗತ್ತನ್ನು ಬದ್ಧವನ್ನಾಗಿ ಮಾಡುವಳಾದ್ದರಿಂದ ಮಾಯಾ ಶಬ್ದವಾಚ್ಯಳು. ಶಕ್ತಿಃ=ಶ್ರೀಹರಿಯ ಸ್ವರೂಪಶಕ್ತಿಯಿಂದ ಶಕ್ಯಳಾದ್ದರಿಂದ ಭಿನ್ನಶಕ್ತಿಯೆನಿಸುವಳು. ದುರತ್ಯಯಾ=ಶ್ರೀಹರಿಯ ಅನುಗ್ರಹವಿಲ್ಲದವರಿಂದ ತಪ್ಪಿಸಿಕೊಳ್ಳಲಾಗದವಳು. || ೧೦ ||

ತಸ್ಯಾ ಅಧೀಶ್ವರಃ ಸಾಕ್ಷಾತ್ತ್ವಮೇಕಃ ಪುರುಷಃ ಪರಃ ।
ತ್ವಂ ಸರ್ವಯಜ್ಞ ಇಜ್ಯೇಯಂ ಕ್ರಿಯೇಯಂ ಫಲಭುಗ್ಭವಾನ್ ||೧೧||

ತಸ್ಯಾಃ=ಇಂತಹ ಲಕ್ಷ್ಮಿಗೆ ಏಕಃ=ಮುಖ್ಯನಾದ ಪರಃ=ಸರ್ವೋತ್ತಮನಾದ ಪುರುಷಃ=ಪುರುಷನಾಮಕನಾದ ತ್ವಂ=ನೀನು ಸಾಕ್ಷಾತ್ ಅಧೀಶ್ವರಃ=ಅವ್ಯವಹಿತ ನಿಯಾಮಕನು. ಇದರಿಂದ ಶ್ರೀಹರಿಯು ಜಗತ್ತಿಗೆ ಮುಖ್ಯಕಾರಣನೆಂದೂ ಲಕ್ಷ್ಮಿಯು ಅವನ ಅಧೀನಕಾರಣಳೆಂದೂ ತಿಳಿಸಿ ಇಬ್ಬರೂ ಕಾರಣರೆಂಬ ಮಾತಿನಿಂದ ತೋರಿಬಂದ ಕಾರಣ ಸಾಮ್ಯವನ್ನು ಪರಿಹರಿಸಿರುವರು. ತ್ವಂ=ಸರ್ವೋತ್ತಮ ಕಾರಣನಾದ ನೀನು ಸರ್ವಯಜ್ಞಃ=ಸರ್ವ ಯಜ್ಞಗಳ ಅಂತರ್ಯಾಮಿಯು. ಇಯಂ=ಈ ನಿನ್ನ ಅಧೀನ ಕಾರಣಳಾದ ಲಕ್ಷ್ಮಿಯು ಇಜ್ಯಾ=ಇಜ್ಯೆಯ (ಯಜ್ಞ ಸಾಧನಗಳ) ಅಂತರ್ಯಾಮಿಣಿಯು. ಇಯಂ=ಇವಳು ಕ್ರಿಯಾ=ಕ್ರಿಯೆಯ ಅಂತರ್ಯಾಮಿಣಿಯು. ಭವಾನ್=ನೀನು ಫಲಭುಕ್=ಯಜ್ಞಗಳ ಫಲವನ್ನು ಅನುಭವಿಸುವ ಯಜಮಾನರಲ್ಲಿ ಇದ್ದು ಫಲಾನುಭವಮಾಡಿಕೊಡುವವನು. ವಿ.ಅ. ಯಜ್ಞ ಇಜ್ಯಾ ಮೊದಲಾದ ಸ್ವರೂಪವೇ ನಾರಾಯಣ ಲಕ್ಷ್ಮಿಯರೆಂದು ಅರ್ಥ ಮಾಡಬಾರದು. 'ಅಂತರ್ಯಾಮೀ ತು ಯಜ್ಞಾದೇಃ ವಿಷ್ಣುಃ, ಇಜ್ಯಾದಿನಾಂ ರಮಾ । ತತ್ತಚ್ಛಬ್ದೈಸ್ತತೋ ವಾಚ್ಯೌ ನ ತು ಸರ್ವಸ್ವರೂಪತಃ || ಅಂತರ್ಯಾಮೀ ಶ್ರಿಯಶ್ಚಾಪಿ ವಿಷ್ಣುರೇವ ನ ಸಂಶಯಃ । ನಾಂತರ್ಯಾಮೀ ಕಶ್ಚಿದಸ್ತಿ ವಿಷ್ಣೋಃ ಕ್ವಾಪಿ ಕುತಶ್ಚನ || ಎಂಬ ಪ್ರಮಾಣವು ವಿಷ್ಣು ಯಜ್ಞ ಮೊದಲಾದವುಗಳ

ಅನಂತರ ಸ್ತೋತ್ರವನ್ನು ಹೇಳಬೇಕು. 'ನೀವಿಬ್ಬರೂ ಜಗತ್ತಿಗೆ ಪ್ರಭುಗಳು. ಮುಖ್ಯ ಕಾರಣರು. ಈ ಲಕ್ಷ್ಮಿಯೇ ಚೇತನ ಪ್ರಕೃತಿ. ಸೂಕ್ಷ್ಮಳಾದ್ದರಿಂದ

ಅಂತರ್ಯಾಮಿಯೆಂದೂ, ಲಕ್ಷ್ಮಿಯು ಇಜ್ಯೆ ಮೊದಲಾದವುಗಳ ಅಂತರ್ಯಾಮಿಣಿಯೆಂದೂ, ಆದ್ದರಿಂದಲೇ ಅವರು ಆ ಶಬ್ದಗಳ ವಾಚ್ಯರಾಗಿರುವರೆಂದೂ, ಅವುಗಳ ಸ್ವರೂಪರಾದ್ದರಿಂದ ಅಲ್ಲವೆಂದೂ, ಅವರಲ್ಲಿಯೂ ಲಕ್ಷ್ಮಿಗೆ ಅಂತರ್ಯಾಮಿ ಶ್ರೀಹರಿಯೇ ಎಂದೂ ಶ್ರೀಹರಿಗೆ ಯಾರೂ ಅಂತರ್ಯಾಮಿಗಳಿಲ್ಲವೆಂದೂ ತಿಳಿಸುವುದು. || ೧೧ ||

ಗುಣವ್ಯಕ್ತಿರಿಯಂ ದೇವೀ ವ್ಯಂಜಕೋ ಗುಣಭುಗ್ಭವಾನ್ ।
ತ್ವಂ ಹಿ ಸರ್ವಶರೀರಾತ್ಮಾ ಶ್ರೀಃ ಶರೀರೇಂದ್ರಿಯಾಶಯಾ || ೧೨ ||

ಇಯಂ ದೇವೀ – ಈ ಲಕ್ಷ್ಮೀದೇವಿಯು ಗುಣವ್ಯಕ್ತಿಃ – ಸತ್ವ ಮೊದಲಾದ ಗುಣಗಳ ಅಭಿವ್ಯಕ್ತಿಗೆ ಕಾರಣಳು. ಭವಾನ್–ನಾರಾಯಣನಾದ ನೀನು ವ್ಯಂಜಕಃ (ಸನ್) = ೧) ಫಲ ವ್ಯಕ್ತಿಯನ್ನುಂಟುಮಾಡುವವನಾಗಿ, ಗುಣಾಭಿವ್ಯಕ್ತಿಯನ್ನು ಗುಣಭುಕ್ – ಪ್ರಾಕೃತ ಗುಣಭೋಕ್ತನಾದ ಜೀವನಲ್ಲಿ ಇದ್ದು ಸುಖದುಃಖಾದಿಗಳನ್ನು ಅನುಭವಿಸುವಂತೆ ಮಾಡುವವನು. ತ್ವಂ ಹಿ–ನೀನೇಯೇ ಸರ್ವಶರೀರಾತ್ಮಾ=ಎಲ್ಲ ಶರೀರವಂತರ (ಜೀವರ) ಅಂತರ್ಯಾಮಿಯು ಶ್ರೀಃ=ಲಕ್ಷ್ಮೀದೇವಿಯು ಶರೀರೇಂದ್ರಿಯಗಳ ಅಭಿಮಾನಿದೇವತೆಯು. ಅವುಗಳ ಅಂತರ್ಯಾಮಿಣಿಯು. || ೧೨ ||

ನಾಮರೂಪೇ ಭಗವತೀ ಪ್ರತ್ಯಯಸ್ತ್ವಮು (ಮು) ಪಾಶ್ರಯಃ ।
ಯಥಾ ಯುವಾಂ ತ್ರಿಲೋಕಸ್ಯ ವರದೌ ಪರಮೇಷ್ಠಿನೌ ||
ತಥೇಮಾ ಉತ್ತಮಶ್ಲೋಕ ಸಂತು ಸತ್ಯಾ ಮಮಾಶಿಷಃ || ೧೩ ||

ಭಗವತೀ–ಲಕ್ಷ್ಮೀದೇವಿಯು ನಾಮರೂಪೇ=ಗುಣಕಾರ್ಯಗಳಾದ ಹೆಸರು ಮತ್ತು ಆಕಾರಗಳಿಗೆ ಕಾರಣಳು. ನಾಮರೂಪಗಳು ಗುಣಕಾರ್ಯಗಳು;

ಅವ್ಯಕ್ತಳು. ಮಾಯಾಶಬ್ದವಾಚ್ಯಳು. ಶ್ರೀಹರಿಯ ಭಿನ್ನ ಶಕ್ತಿ. ಅವಳಿಗೆ ನೀನು ಸಾಕ್ಷಾದಧೀಶ್ವರ. ಮುಖ್ಯ ಮತ್ತು ಸರ್ವೋತ್ತಮ. ನೀನು ಎಲ್ಲ ಯಜ್ಞಗಳ ಅಂತರ್ಯಾಮಿ. ಇವಳು ಯಜ್ಞಕ್ರಿಯೆಯಲ್ಲಿಯೂ ಸಾಮಗ್ರಿಗಳಲ್ಲಿಯೂ ಇರುವವಳು. ನೀನು ಯಜಮಾನನಲ್ಲಿದ್ದು ಯಜ್ಞಫಲವನ್ನು ಅನುಭವಕ್ಕೆ ತಂದು ಕೊಡುವವನು. ಈ ಲಕ್ಷ್ಮಿಯು ಸತ್ವ ಮೊದಲಾದ ಗುಣಗಳ ಅಭಿವ್ಯಕ್ತಿಗೆ ಕಾರಣಳು. ನೀನು ಫಲಾಭಿವ್ಯಕ್ತಿಗೆ ಕಾರಣನಾಗಿ ಜೀವನದಲ್ಲಿದ್ದು ಸುಖದುಃಖಗಳನ್ನು ಅನುಭವಿಸುವಂತೆ ಮಾಡುವವನು. ನೀನೇ ಎಲ್ಲ ಜೀವರ ಅಂತರ್ಯಾಮಿ. ಈ ಲಕ್ಷ್ಮಿಯು ಶರೀರೇಂದ್ರಿಯಗಳ ಅಭಿಮಾನಿ (ಮತ್ತು ಅಂತರ್ಯಾಮಿ.) ಇವಳು ಗುಣಕಾರ್ಯಗಳಾದ ನಾಮರೂಪಗಳಿಗೆ ಕಾರಣಳು. ಯಾರ ಆಶ್ರಯವೂ ಇಲ್ಲದ, ಲಕ್ಷ್ಮಿಗೆ ಆಶ್ರಯನಾದ ನೀನು ನಿಶ್ಚಯ ಜ್ಞಾನಕ್ಕೆ ಕಾರಣನು. ಉತ್ತಮ ಕೀರ್ತಿ

ಲಕ್ಷ್ಮಿಯು ಗುಣಾಭಿಮಾನಿಯು; ಆದ್ದರಿಂದ ಆ ಶಬ್ದಗಳಿಂದ ಕರೆಸುವಳು. ಅಪಾಶ್ರಯಃ = ಯಾರ ಆಶ್ರಯವೂ ಇಲ್ಲದ (ಉಪಾಶ್ರಯಃ = ಎಲ್ಲರ ಅಧಿಕಳಾದ ಲಕ್ಷ್ಮಿಗೆ ಅಂತರ್ಯಾಮಿಯಾಗಿ ಆಶ್ರಯನಾದ) ತ್ವಂ= ನೀನು (ನಾರಾಯಣನು) ಪ್ರತ್ಯಯಃ=ನಿಶ್ಚಯ ಜ್ಞಾನ ಕಾರಣನು. ನಿನ್ನ ಪ್ರಸಾದಕ್ಕೆ ಕಾರಣವಾದ ಜ್ಞಾನ ವನ್ನು ಕೊಡುವವನು. ಮೇಲೆ ಹೇಳಿದ ಪ್ರಮಾಣಗಳು ಈ ಅರ್ಥವನ್ನು ಸ್ಪಷ್ಟ ಪಡಿಸುವುವು. ಹೇ ಉತ್ತಮ ಶ್ಲೋಕ= ಪವಿತ್ರಕೀರ್ತಿವಂತನಾದ ಶ್ರೀಹರಿಯೇ, ಪರಮೇಷ್ಠಿನೌ=ಅತ್ಯುತ್ತಮ ಸ್ಥಾನದಲ್ಲಿ ಇರುವ ತ್ರಿಲೋಕಸ್ಯ= ಮೂರು ಲೋಕ ಗಳಿಗೂ ವರದೌ=ವರಪ್ರದರಾದ ಯುವಾಂ= ನೀವೀರ್ವರೂ ಯಥಾ (ಸತ್ಯೌ)= ಹೇಗೆ ಸತ್ಯಭೂತರೋ ತಥಾ = ಹಾಗೆ ಇಮಾಃ = ನನ್ನ ಮನಸ್ಸಿನಲ್ಲಿರುವ ಮಮ ಆಶಿಷಃ=ನನ್ನ ಅಪೇಕ್ಷೆಗಳು ಸತ್ಯಾಃ=ಸತ್ಯಗಳಾಗಿ (ಪೂರ್ಣಗಳಾಗಿ) ಸಂತು= ಆಗಲಿ. ‖ ೧೩ ‖

ಇತ್ಯಭಿಷ್ಟೂಯ ವರದಂ ಶ್ರೀನಿವಾಸಂ ಶ್ರಿಯಾ ಸಹ ।
ತನ್ನಿಃಸಾರ್ಯೋಪಹರಣಂ ದತ್ವಾಽಽಚಮನಮರ್ಚಯೇತ್ ‖ ೧೪ ‖

ವರಪ್ರದನಾದ, ಲಕ್ಷ್ಮೀದೇವಿಯೊಡನೆ ಇರುವ, ಶ್ರೀಹರಿಯನ್ನು ಇತಿ=ಮೇಲೆ ಹೇಳಿದ ಸ್ತೋತ್ರದಿಂದ ಅಭಿಷ್ಟೂಯ=ಭಕ್ತಿಯಿಂದ ಸ್ತುತಿಸಿ ತತ್ ಉಪಹರಣಂ= ಆ ನೈವೇದ್ಯವನ್ನು ನಿಃಸಾರ್ಯ=ಆ ಸ್ಥಳದಿಂದ ತೆಗೆದು ಆಚಮನಂ= ಭೋಜನಾ- ನಂತರದ ಆಚಮನವನ್ನು ದತ್ವಾ=ಕೊಟ್ಟು ಅರ್ಚಯೇತ್= ಪೂಜಿಸಬೇಕು. ‖ ೧೪ ‖

ತತಃ ಸ್ತುವಾನಾ ಸ್ತೋತ್ರೇಣ ಭಕ್ತಿಪ್ರಹ್ವೇಣ ಚೇತಸಾ ।
ಯಜ್ಞೋಚ್ಛಿಷ್ಟಮವಘ್ರಾಯ ಪುನರಭ್ಯರ್ಚಯೇದ್ಧರಿಮ್ ‖
ಪತಿಂ ಚ ಪರಯಾ ಭಕ್ತ್ಯಾ ಮಹಾಪುರುಷಚೇತಸಾ ‖ ೧೫ ‖

ಅನಂತರ ಭಕ್ತಿಯಿಂದ ನಮ್ರವಾದ ಮನಸ್ಸಿನಿಂದ ಸ್ತೋತ್ರದಿಂದ ಸ್ತೋತ್ರ ಮಾಡುವವಳಾಗಿ ಯಜ್ಞೋಚ್ಛಿಷ್ಟಂ = ಪೂಜಾಶೇಷವನ್ನು (ನಿರ್ಮಾಲ್ಯವನ್ನು) ಅವಘ್ರಾಯ=ಆಘ್ರಾಣಿಸಿ ಪುನಃ=ಮತ್ತೆ ಹರಿಂ=ನಾರಾಯಣನನ್ನು ಅಭ್ಯರ್ಚ- ಯೇತ್=ಭಕ್ತಿಯಿಂದ ಪೂಜಿಸಬೇಕು. (ಪುನಃ ಪೂಜೆಯನ್ನು ಮಾಡಬೇಕು.)

ವಂತನೇ, ಅತ್ಯುನ್ನತ ಸ್ಥಾನದಲ್ಲಿದ್ದು ಮೂರು ಲೋಕಗಳಿಗೂ ವರಪ್ರದರಾದ ನೀವು ಸತ್ಯವಾಗಿರುವಂತೆ ನನ್ನ ಅಪೇಕ್ಷೆಗಳೂ ಪೂರ್ಣಗಳಾಗಿ ಸತ್ಯಗಳಾಗಲಿ' ಎಂದು ಭಕ್ತಿಯಿಂದ ವರದನೂ ಲಕ್ಷ್ಮೀಯುಕ್ತನೂ ಆದ ಶ್ರೀಹರಿಯನ್ನು ಸ್ತೋತ್ರ ಮಾಡಿ ನೈವೇದ್ಯವನ್ನು ಅಲ್ಲಿಂದ ತೆಗೆದು ಪುನರಾಚಮನದಿಂದ ಪೂಜಿಸಬೇಕು. ಅನಂತರ ಭಕ್ತಿ ನಮ್ರ ಮನಸ್ಸಿನಿಂದ ಸ್ತುತಿಸುತ್ತಾ ನಿರ್ಮಾಲ್ಯವನ್ನು ಆಘ್ರಾಣಿಸಿ ಮತ್ತೆ ಶ್ರೀಹರಿಯನ್ನು ಪೂಜಿಸಬೇಕು. ಗಂಡನನ್ನೂ ಕೂಡ ಉಚಿತವಾದ ಉತ್ತಮ

ಪರಯಾ ಭಕ್ತ್ಯಾ = ಉಚಿತವಾದ ಅತಿಶಯವಾದ ಭಕ್ತಿಯಿಂದ ಮಹಾಪುರುಷ ಚೇತಸಾ = ಸರ್ವೋತ್ತಮನಾದ ಶ್ರೀಹರಿಯು ಪತಿಯಲ್ಲಿ ಸನ್ನಿಹಿತನಾಗಿರುವನೆಂಬ ಮನಸ್ಸಿನಿಂದ (ಅನುಸಂಧಾನದಿಂದ) ಪತಿಂ ಚ – ಗಂಡನನ್ನೂ. || ೧೫ ||

ಪ್ರಿಯೈಸ್ತೈಸ್ತೈರುಪನಮೇತ್ ಪ್ರೇಮಶೀಲಃ ಸ್ವಯಂ ಪತಿಃ ।
ಬಿಭೃಯಾತ್ಸರ್ವ ಕರ್ಮಾಣಿ ಪತ್ನ್ಯಾ ಉಚ್ಚಾವಚಾನಿ ಚ ॥
ಕೃತಮೇಕತರೇಣಾಪಿ ದಂಪತ್ಯೋರುಭಯೋರಪಿ ॥ ೧೬ ॥

ತೈಃ ತೈಃ – ಆಯಾಯಾ ಪ್ರಿಯೈಃ = ಸಂತೋಷಕರಗಳಾದ ವಿಷಯಗಳಿಂದ ಉಪನಮೇತ್ – ನಮಿಸಬೇಕು. ಉಪಚರೇತ್ ಎಂಬ ಪಾಠದಲ್ಲಿ ಉಪಚರಿಸ ಬೇಕೆಂದು ಅರ್ಥ. ಸ್ವಯಂ – ತಾನಾಗಿಯೇ ಪ್ರೇಮಶೀಲಃ – ಹೆಂಡತಿಯಲ್ಲಿ ಪ್ರೀತಿ ಮಾಡುವ ಸ್ವಭಾವವುಳ್ಳ ಪತಿಃ ಚ – ಗಂಡನೂ ಕೂಡ ಪತ್ನ್ಯೈ = ಹೆಂಡತಿಗಾಗಿ ಉಚ್ಚಾವಚಾನಿ = ದೊಡ್ಡ ಮತ್ತು ಸಣ್ಣ ಸರ್ವಕರ್ಮಾಣಿ – ಎಲ್ಲ ಕೆಲಸಗಳನ್ನೂ ಬಿಭೃಯಾತ್ = ಭರಿಸಬೇಕು, ಮಾಡಬೇಕು. ಪ್ರೇಮಶೀಲನಾಗಿದ್ದಲ್ಲಿ ಮಾಡ ಬೇಕೆಂದರ್ಥ. ಪತ್ನ್ಯಾಃ = ಹೆಂಡತಿಯ ಎಂದೂ ಪದಚ್ಛೇದ ಮಾಡಿರುವರು. ಹೆಂಡತಿಗೆ ಅನುಕೂಲನಾಗಿರಬೇಕೆಂದು ತಾತ್ಪರ್ಯ. ಗಂಡನು ಮಾಡಿದಲ್ಲಿ ಹೆಂಡತಿ ಮಾಡದಂತಾಗಲಿಲ್ಲವಲ್ಲಾ ಎಂದರೆ ಹೇಳುತ್ತಾರೆ. ಯತಃ = ಏಕೆಂದರೆ, ದಂಪತ್ಯೋಃ (ಮಧ್ಯೇ) – ಗಂಡಹೆಂಡಿರಲ್ಲಿ ಏಕತರೇಣ – ಯಾರಾದರೊಬ್ಬರಿಂದ ಕೃತಂ ಅಪಿ = ಮಾಡಲ್ಪಟ್ಟ ಕರ್ಮವೂ ಉಭಯೋಃ ಅಪಿ = ಇಬ್ಬರಿಗೂ (ಭವತಿ) = ಸೇರುವುದು. ಆದ್ದರಿಂದ ಗಂಡನು ಮಾಡಿದರೂ ಹೆಂಡತಿ ಮಾಡಿದಂತೆಯೇ ಎಂದರ್ಥ. ಅಥವಾ ಮುಂದಿನ ಪದ್ಯದಲ್ಲಿ ಹೇಳುವ ವಿಷಯಕ್ಕೆ ಕಾರಣವನ್ನಾಗಿಯಾದರೂ ಇದನ್ನು ಹೇಳಿರುವರೆಂದು ತಿಳಿಯಬೇಕು. || ೧೬ ||

ಪತ್ನ್ಯಾಂ ಕುರ್ಯಾದನರ್ಹಾಯಾಂ ಪತಿರೇವ ಸಮಾಹಿತಃ ।
ವಿಷ್ಣೋರ್ವ್ರತಮಿದಂ ಬಿಭ್ರನ್ನ ವಿಹನ್ಯಾತ್ಕಥಂಚನ ॥ ೧೭ ॥

ರಜಸ್ವಲೆಯಾಗಿ ಹೆಂಡತಿ ವ್ರತಕ್ಕೆ ಅನರ್ಹಳಾದಾಗ ವ್ರತವನ್ನು ಬಿಟ್ಟುಬಿಡು ವುದೇ ? ಎಂದರೆ ಹೇಳುತ್ತಾರೆ. ಪತ್ನ್ಯಾಂ – ಹೆಂಡತಿಯು ಅನರ್ಹಾಯಾಂ ಸತ್ಯಾಂ–

ಭಕ್ತಿಯಿಂದ ಶ್ರೀಹರಿ ಅಲ್ಲಿ ಸನ್ನಿಹಿತನಾಗಿರುವನೆಂದು ಅನುಸಂಧಾನಪೂರ್ವಕ ಆಯಾಯಾ ಪ್ರೀತಿಕರ ವಿಷಯಗಳಿಂದ ಪೂಜಿಸಿ ನಮಿಸಬೇಕು. ಸ್ವಾಭಾವಿಕ ವಾಗಿಯೇ ಹೆಂಡತಿಯಲ್ಲಿ ಪ್ರೀತಿಮಾಡುವ ಪತಿಯೂ ಕೂಡ ಹೆಂಡತಿಯ ಸಣ್ಣ ದೊಡ್ಡ ಎಲ್ಲ ಕೆಲಸಗಳನ್ನೂ ಮಾಡುತ್ತ ಅನುಕೂಲನಾಗಿರಬೇಕು. ದಂಪತಿಗಳಲ್ಲಿ ಯಾರೊಬ್ಬರು ಮಾಡಿದರೂ ಇಬ್ಬರೂ ಅದಕ್ಕೆ ಭಾಗಿಗಳು. ವ್ರತಮಧ್ಯದಲ್ಲಿ ರಜೋದರ್ಶನ ಮೊದಲಾದ ದೋಷಗಳಿಂದ ಪತ್ನಿಯು ವ್ರತಾಚರಣೆಗೆ ಅನರ್ಹ ಳಾದಾಗ ಪತಿಯೇ ಏಕಾಗ್ರತೆಯಿಂದ ಈ ವೈಷ್ಣವ ವ್ರತವನ್ನಾಚರಿಸಬೇಕು.

ವ್ರತಹಿಡಿದ ನಂತರ ಮಧ್ಯದಲ್ಲಿ ರಜೋದರ್ಶನ ಇತ್ಯಾದಿ ದೋಷಗಳಿಂದ ವ್ರತವನ್ನಾಚರಿಸಲು ಯೋಗ್ಯಳಲ್ಲದೆ ಹೋಗಲು ಪತಿಃ ಏವ=ಗಂಡನೇ ಸಮಾಹಿತಃ (ಸ್ಸ್)=ಏಕಾಗ್ರಮನಸ್ಕನಾಗಿ ಬಿಭ್ರನ್=ಅನುಷ್ಠಾನ ಮಾಡುತ್ತಾ ಈ ವಿಷ್ಣುವಿನ (ಪ್ರೀತಿಗಾಗಿ ಮಾಡುವ ವಿಷ್ಣುದೇವತಾಕವಾದ) ವ್ರತವನ್ನು ಕುರ್ಯಾತ್=ಮುಂದುವರಿಸಬೇಕು (ಆಚರಿಸಬೇಕು). ಕಥಂಚನ=ಯಾವ ಕಾರಣದಿಂದಲೂ ನ ವಿಹನ್ಯಾತ್=ವಿಚ್ಛಿನ್ನವಾಗುವಂತೆ ಮಾಡಬಾರದು. ಹಿಂದಿನ ನ್ಯಾಯದಿಂದ ಗಂಡನು ಮಾಡಿದರೂ ಹೆಂಡತಿ ಮಾಡಿದಂತೆಯೇ. ಆದ್ದರಿಂದ ವ್ರತವಿಚ್ಛಿತ್ತಿಯಾಗುವುದಿಲ್ಲವೆಂದು ತಾತ್ಪರ್ಯ. || ೧೭ ||

ವಿಪ್ರಾನ್ ಸ್ತ್ರಿಯೋ ವೀರವತೀಃ ಸ್ರಗ್ಗಂಧಬಲಿಮಂಡನೈಃ ।
ಅರ್ಚೇದಹರಹರ್ಭಕ್ತ್ಯಾ ದೇವಂ ನಿಯಮಮಾಸ್ಥಿತಾ || ೧೮ ||

ನಿಯಮವನ್ನು ಆಸ್ಥಿತಾ=ಹೊಂದಿದವಳಾಗಿ ಸ್ರಕ್=ಹಾರ, ಗಂಧ, ಬಲಿ=ಪೂಜೆ ಮಂಡನೈಃ=ಅಲಂಕಾರಗಳಿಂದ ಅಹರಹಃ=ನಿತ್ಯವೂ ಭಕ್ತಿಯಿಂದ ವಿಪ್ರಾನ್=ಬ್ರಾಹ್ಮಣರನ್ನೂ ವೀರವತೀಃ=ಗಂಡನಿರುವ ಸ್ತ್ರಿಯಃ=ಮುತ್ತೈದೆಯರನ್ನೂ ದೇವಂ=ತತ್ತದ್ಗತನಾದ ಶ್ರೀಹರಿಯನ್ನೂ ಅರ್ಚೇತ್=ಪೂಜಿಸಬೇಕು. || ೧೮ ||

ಉದ್ವಾಸ್ಯ ದೇವಂ ಸ್ವೇ ಧಾಮ್ನಿ ತನ್ನಿವೇದಿತಮಗ್ರತಃ ।
ಅದ್ಯಾದಾತ್ಮವಿಶುದ್ಧ್ಯರ್ಥಂ ಸರ್ವಕಾಮಾಪ್ತಯೇ ತಥಾ || ೧೯ ||

ದೇವಂ=ಪ್ರತಿಮೆಯಲ್ಲಿ ಆವಾಹನೆ ಮಾಡಿದ್ದ ಲಕ್ಷ್ಮೀಸಹಿತ ನಾರಾಯಣನನ್ನು ಉದ್ವಾಸ್ಯ=ಉದ್ವಾಸನೆ (ವಿಸರ್ಜನೆ) ಮಾಡಿ ಅಗ್ರತಃ=ಪ್ರತಿಮೆಯ ಮುಂದೆ ತನ್ನಿವೇದಿತಂ=ಶ್ರೀಹರಿಗೆ ನಿವೇದನ ಮಾಡಿದ ನೈವೇದ್ಯವನ್ನು ಸ್ವೇ ಧಾಮ್ನಿ = ತನ್ನ ಮನೆಯಲ್ಲಿ ಆತ್ಮವಿಶುದ್ಧ್ಯರ್ಥಂ=ಮನಶ್ಶುದ್ಧಿಗಾಗಿ ತಥಾ=ಹಾಗೂ ಸರ್ವಕಾಮಾಪ್ತಯೇ=ತನ್ನ ಎಲ್ಲ ಅಪೇಕ್ಷೆಗಳ ಸಿದ್ಧಿಗಾಗಿ ಅದ್ಯಾತ್=ಊಟ ಮಾಡಬೇಕು. ಸ್ವೇ ಧಾಮ್ನಿ=ಸ್ವಸ್ಥಾನಕ್ಕೆ ಉದ್ವಾಸ್ಯ ಎಂದಾದರೂ ಅರ್ಥ. || ೧೯ ||

ಏತೇನ ಪೂಜಾವಿಧಿನಾ ಮಾಸಾನ್ ದ್ವಾದಶ ಹಾಯನಮ್ ।
ನೀತ್ವಾ ಥೋಪರಮೇತ್ಸಾಧ್ವೀ ಕಾರ್ತಿಕೇ ಚರಮೇಽಹನಿ || ೨೦ ||

ಹೇಗಾದರೂ ವ್ರತವಿಚ್ಛಿತ್ತಿಗೆ ಅವಕಾಶ ಕೊಡಬಾರದು. ನಿಯಮಸ್ಥಳಾಗಿ ಹಾರ-ಗಂಧ-ಪೂಜೆ-ಅಲಂಕಾರಗಳಿಂದ ನಿತ್ಯವೂ ಭಕ್ತಿಯಿಂದ ಬ್ರಾಹ್ಮಣ, ಮುತ್ತೈದೆ, ಅವರ ಅಂತರ್ಯಾಮಿ ಶ್ರೀಹರಿ-ಇವರನ್ನು ಅರ್ಚಿಸಬೇಕು. ಶ್ರೀಹರಿಯನ್ನು ಯಥಾಸ್ಥಾನಕ್ಕೆ ಉದ್ವಾಸನಮಾಡಿ ಪ್ರತಿಮೆಯ ಎದುರಿನಲ್ಲಿ ನೈವೇದ್ಯವನ್ನು ಭುಂಜಿಸಬೇಕು. ಇದರಿಂದ ಮನಸ್ಸು ಶುದ್ಧವಾಗಿ ಸಮಸ್ತ ಇಷ್ಟಾರ್ಥ ಸಿದ್ಧಿಯಾಗುವುದು.

ಈ ವಿಧಿಯಿಂದ ಹನ್ನೆರಡು ತಿಂಗಳಿನ ವರ್ಷಪೂರ್ತಿ ವ್ರತವನ್ನಾಚರಿಸಿ

ಏತೇನ – ಮೇಲೆ ಹೇಳಿದ ಈ ಪೂಜಾ ವಿಧಾನದಿಂದ ದ್ವಾದಶಮಾಸಾನ್= ಹನ್ನೆರಡು ತಿಂಗಳು ಹಾಯನಂ=ಆಗುವ ವರ್ಷವನ್ನು ನೀತ್ವಾ=ವ್ರತವನ್ನಾಚರಿಸಿ ಸಾಧ್ವೀ=ಪತಿವ್ರತೆಯಾದ ಆ ಸ್ತ್ರೀಯು ಕಾರ್ತಿಕಮಾಸದಲ್ಲಿ ಚರಮೇ ಅಹನಿ= ಕೊನೆಯ ದಿನದಲ್ಲಿ (ಅಮಾವಾಸ್ಯೆಯ ದಿನ) (ಪೂರ್ಣಿಮಾಂತ ಮಾಸವಾದಲ್ಲಿ ಹುಣ್ಣಿಮೆಯ ದಿನ) ಉಪರಮೇತ್ ಚ – ವ್ರತನಿಯಮಗಳಿಂದ ಉಪರತಳಾಗಬೇಕು. ನಿಯಮಗಳನ್ನು ಬಿಡಬೇಕು. ವಿ.ಅ. ಹನ್ನೆರಡು ತಿಂಗಳು ಎಂದಿಷ್ಟೇ ಹೇಳಿದ್ದಲ್ಲಿ ಒಂದು ವೇಳೆ ಮಧ್ಯದಲ್ಲಿ ಅಧಿಕಮಾಸ ಬಂದಿದ್ದು ಹದಿಮೂರು ತಿಂಗಳಾದಾಗ ಹನ್ನೆರಡಕ್ಕೇ ನಿಲ್ಲಿಸಿ ಶುದ್ಧವಾದ ಒಂದು ತಿಂಗಳನ್ನು ಬಿಡಬೇಕಾದೀತು. ವರ್ಷ ವೆಂದಿಷ್ಟೇ ಹೇಳಿದ್ದಲ್ಲಿ ಅಧಿಕಮಾಸವೂ ಸೇರಿ ಹದಿಮೂರು ತಿಂಗಳ ವ್ರತವೆಂದು ಅರ್ಥವಾದೀತು. ಈ ಎರಡು ಪ್ರಸಂಗಗಳನ್ನೂ ನಿವಾರಿಸಿ ಅಧಿಕಮಾಸ ಬಿಟ್ಟು ಹನ್ನೆರಡು ತಿಂಗಳೆಂದು ತಿಳಿಸುವುದಕ್ಕಾಗಿ ಹನ್ನೆರಡು ತಿಂಗಳಿನ ವರ್ಷವೆಂದು ಹೇಳಿರುವರೆಂದು ತಿಳಿಯಬೇಕು. || ೨೦ ||

ಶ್ವೋಭೂತೇಽಪ ಉಪಸ್ಪೃಶ್ಯ ಕೃಷ್ಣಮಭ್ಯರ್ಚ್ಯ ಪೂರ್ವವತ್ ।
ಪಯಃಶೃತೇನ ಜುಹುಯಾಚ್ಚರುಣಾ ಸಹ ಸರ್ಪಿಷಾ || ೨೧ ||

ಪಾಕಯಜ್ಞವಿಧಾನೇನ ದ್ವಾದಶೈವಾಹುತೀಃ ಪತಿಃ || ೨೨ ||

ಪತಿಃ=ಗಂಡನು ಶ್ವೋಭೂತೇ=ಮಾರನೆಯದಿನ ಅಪಃ ಉಪಸ್ಪೃಶ್ಯ= ಸ್ನಾನಮಾಡಿ ಪೂರ್ವವತ್ – ಹಿಂದಿನಂತೆಯೇ ಕೃಷ್ಣಂ=ಶ್ರೀಹರಿಯನ್ನು ಪೂಜಿಸಿ ಪಯಃಶೃತೇನ=ಹಾಲಿನಲ್ಲಿ ಬೇಯಿಸಿದ ಚರುಣಾ=ಚರುವಿನಿಂದ ಸರ್ಪಿಷಾ ಸಹ= ತುಪ್ಪದೊಂದಿಗೆ ಪಾಕಯಜ್ಞವಿಧಾನೇನ – (೧) ಸ್ಮಾರ್ತ (ಗೃಹ್ಯ) ಸೂತ್ರಗಳಲ್ಲಿ ಹೇಳಿದ ಪ್ರಕಾರ (೨) ಆಥರ್ವಣದಲ್ಲಿ ಹೇಳಿದ ಸ್ಥಾಲೀಪಾಕ ವಿಧಾನದಿಂದ ದ್ವಾದಶೈವ – ಹನ್ನೆರಡು ಮಾತ್ರ ಆಹುತಿಗಳನ್ನು ಜುಹುಯಾತ್ – ಅಗ್ನಿಯಲ್ಲಿ ಹೋಮಿಸಬೇಕು. ಹೋಮಮಂತ್ರವನ್ನು ಹಿಂದೆಯೇ ಹೇಳಿದೆ. || ೨೧, ೨೨ ||

ಬ್ರಾಹ್ಮಣಾನ್ ಭೋಜಯೇದ್ಭಕ್ತ್ಯಾ ತ್ವನ್ನಾದ್ಯೈರ್ದ್ವಾದಶಾತ್ಮವಿತ್ ।
ತೇಭ್ಯೋ ದದ್ಯಾತ್ತ್ರಿಲಾನ್ ರಾಜನ್ ಸೋದಪಾತ್ರಾನಿಡಾನ್ವಿತಾನ್ ||

ಸಾಧ್ವಿಯು ಕಾರ್ತಿಕದ ಕೊನೆಯದಿನ ವ್ರತವನ್ನು ಮುಗಿಸಬೇಕು. ಗಂಡನು ಮಾರನೆಯದಿನ ಸ್ನಾನಮಾಡಿ ಹಿಂದಿನಂತೆ ಶ್ರೀಹರಿಯನ್ನು ಪೂಜಿಸಿ ಸ್ಥಾಲೀಪಾಕ ವಿಧಾನದಿಂದ ಹಾಲಿನಲ್ಲಿ ಬೇಯಿಸಿದ ಚರುವಿನಿಂದ ತುಪ್ಪದೊಂದಿಗೆ ಹನ್ನೆರಡೇ ಆಹುತಿಗಳನ್ನು (ಹಿಂದೆ ಹೇಳಿದ ಮಂತ್ರದಿಂದ) ಹೋಮಿಸಬೇಕು. ಕೇಶವ ಮೊದಲಾಗಿ ದಾಮೋದರಾಂತ ಮೂರ್ತಿಗಳ ಲಕ್ಷಣಗಳನ್ನು ಬಲ್ಲವನಾದ ಪತಿಯು ಅನ್ನಾದಿಗಳಿಂದ ಭಕ್ತಿಯಿಂದ ಹನ್ನೆರಡು ಬ್ರಾಹ್ಮಣರನ್ನು ಭೋಜನ ಮಾಡಿಸ

ಪರೀಕ್ಷಿದ್ರಾಜನೇ, ದ್ವಾದಶಾತ್ಮವಿತ್=ಕೇಶವಾದಿ ದಾಮೋದರಾಂತ ಹನ್ನೆರಡು ಮೂರ್ತಿಗಳ ಲಕ್ಷಣವನ್ನು ಬಲ್ಲ ಪತಿಯು ಭಕ್ತ್ಯಾ = ಭಕ್ತಿಯಿಂದ ಬ್ರಾಹ್ಮಣರನ್ನು ಅನ್ನಾದ್ಯೈಃ=ಅನ್ನ ಮೊದಲಾದ ಭಕ್ಷಭೋಜ್ಯಗಳಿಂದ ಭೋಜಯೇತ್ತು=ಊಟ ಮಾಡಿಸಲೇಬೇಕು. ಅಥವಾ ಆತ್ಮವಿತ್='ಬ್ರಹ್ಮಾರ್ಪಣಂ ಬ್ರಹ್ಮಹವಿಃ' ಇತ್ಯಾದಿ ರೀತ್ಯಾ ಭೋಕ್ತೃ ಭೋಜ್ಯ ಭೋಜನ ಗತ ಶ್ರೀಹರಿಯ ರೂಪಗಳನ್ನು ಬಲ್ಲ ಪತಿಯು ದ್ವಾದಶ ಬ್ರಾಹ್ಮಣಾನ್=ಹನ್ನೆರಡು ಬ್ರಾಹ್ಮಣರನ್ನು ಎಂದಾದರೂ ಅರ್ಥ. ದ್ವಾದಶ ಮೂರ್ತಿಗಳ ಪ್ರೀತಿಗಾಗಿ ದ್ವಾದಶ ಬ್ರಾಹ್ಮಣ (ದಂಪತಿ) ರನ್ನು ಊಟ ಮಾಡಿಸಬೇಕೆಂದರ್ಥ. ತೇಭ್ಯಃ=ಊಟಮಾಡಿದ ಆ ಬ್ರಾಹ್ಮಣರಿಗೆ ಇಡಾನ್ವಿತಾನ್=ಭೂಮಿಯಿಂದ ಕೂಡಿದ ಸೋದಪಾತ್ರಾನ್=ಜಲಪೂರ್ಣ ಪಾತ್ರೆಗಳನ್ನು ತಿಲಾನ್=ಎಳ್ಳನ್ನು ದದ್ಯಾತ್=ದಾನಮಾಡಬೇಕು. ಗೋ, ಭೂ, ತಿಲ, ಇತ್ಯಾದಿ ದಶದಾನಗಳನ್ನು ವ್ರತ ಸಾಂಗತೆಗಾಗಿ ಮಾಡಬೇಕೆಂದರ್ಥ. ಭೂಮಿ ಎಳ್ಳು ಇವುಗಳಿಂದ ಕೂಡಿದ ಗುಡಶಬ್ದವಾಚ್ಯಗಳಾದ ಪಾಯಸ ಮೊದಲಾದ ಅಧಿಕಾನ್ನಗಳಿಂದ ಕೂಡಿದ ಎಂದಾದರೂ ಅರ್ಥ. || ೨೩ ||

ಆಶಿಷಃ ಶಿರಸಾಽಽದಾಯ ದ್ವಿಜೈಃ ಪ್ರೀತೈಃ ಸಮೀರಿತಾಃ ।
ಪ್ರಣಮ್ಯ ಶಿರಸಾ ಭಕ್ತ್ಯಾ ಭುಂಜೀತ ತದನುಜ್ಞಯಾ ॥ ೨೪ ॥

(ತಾನ್)=ಆ ಬ್ರಾಹ್ಮಣರನ್ನು ಭಕ್ತಿಯಿಂದ ಶಿರಸ್ಸಿನಿಂದ ಸಾಷ್ಟಾಂಗ ನಮಸ್ಕರಿಸಿ ಪ್ರೀತೈಃ = ಭೋಜನದಾನಗಳಿಂದ ತೃಪ್ತರಾದ ದ್ವಿಜೈಃ = ಬ್ರಾಹ್ಮಣರಿಂದ ಸಮೀರಿತಾಃ = ವೇದ ಮಂತ್ರಪುರಸ್ಸರವಾಗಿ ಮಾಡಲ್ಪಟ್ಟ ಆಶಿಷಃ = ಆಶೀರ್ವಾದಗಳನ್ನು ಶಿರಸಾ=ತಲೆಯಿಂದ (ತಲೆತಗ್ಗಿಸಿ ನಮ್ರತೆಯಿಂದ) ಆದಾಯ=ಸ್ವೀಕರಿಸಿ ತದನುಜ್ಞಯಾ=ಆ ಬ್ರಾಹ್ಮಣರ ಅಪ್ಪಣೆ ಪಡೆದು. || ೨೪ ||

ಆಚಾರ್ಯಮಗ್ರತಃ ಕೃತ್ವಾ ವಾಗ್ಯತಃ ಸುಸಮಾಹಿತಃ ।
ದದ್ಯಾತ್ಪತ್ನ್ಯೈ ಚರೋಃ ಶೇಷಂ ಸುಪ್ರಜಾಸ್ತ್ವಂ ಸುಸೌಭಗಮ್ ॥

ಆಚಾರ್ಯಂ = ಪುರೋಹಿತನನ್ನು ಅಗ್ರತಃ ಕೃತ್ವಾ = ಮೊದಲಿಗನನ್ನಾಗಿ ಮಾಡಿ ವಾಗ್ಯತಃ=ಮೌನವಾಗಿ ಸುಸಮಾಹಿತಃ=ಪರಮಾತ್ಮನಲ್ಲೇ ಮನಸ್ಸಿಟ್ಟು ಭುಂಜೀತ = ಭೋಜನ ಮಾಡಬೇಕು ಎಂದು ಹಿಂದಕ್ಕೆ ಅನ್ವಯ. ಸು-

---

ಬೇಕು. ಆ ಬ್ರಾಹ್ಮಣರಿಗೆ ಭೂ, ಜಲಕುಂಭ, ತಿಲ (ಎಳ್ಳು) ಮುಂತಾದ ದಶದಾನಗಳನ್ನು ಕೊಡಬೇಕು. ಅವರಿಗೆ ಭಕ್ತಿಯಿಂದ ನಮಸ್ಕಾರಮಾಡಿ ತುಷ್ಟರಾದ ಆ ಬ್ರಾಹ್ಮಣರು ಮಾಡಿದ ಆಶೀರ್ವಾದಗಳನ್ನು ತೆಗೆದುಕೊಂಡು ಅವರ ಅಪ್ಪಣೆ ಪಡೆದು ಪುರೋಹಿತರನ್ನು ಮುಂದುಮಾಡಿಕೊಂಡು ಮೌನವಾಗಿ ಏಕಾಗ್ರ ಮನಸ್ಸಿನಿಂದ ಊಟಮಾಡಬೇಕು. ಒಳ್ಳೆಯ ಮಗನನ್ನೂ ಸುಂದರ ರೂಪವನ್ನೂ ಕೊಡುವ ಚರುಶೇಷವನ್ನು ಹೆಂಡತಿಗೆ ತಿನ್ನಲು ಕೊಡಬೇಕು.

ಪ್ರಜಾಸ್ತಂ-ಒಳ್ಳೆಯ ಮಗನನ್ನು ಹೊಂದಲು ಕಾರಣವಾದ ಸುಸೌಭಗಂ - ಒಳ್ಳೆಯ ರೂಪವನ್ನು ಹೊಂದಲು ಕಾರಣವಾದ ಚರೋಃ ಶೇಷಂ=ಹೋಮಮಾಡಿ ಉಳಿದ ಚರುವನ್ನು ಪತ್ನಿಗೆ ದದ್ಯಾತ್=ತಿನ್ನಲು ಕೊಡಬೇಕು. || ೨೫ ||

ಏತಚ್ಚರಿತ್ವಾ ವಿಧಿವದ್ವ್ರತಂ ವಿಭೋ-
ರಭೀಪ್ಸಿತಾರ್ಥಂ ಲಭತೇ ಪುಮಾನಿಹ ।
ಸ್ತ್ರೀರ್ವಾ ತದಾಸ್ಥಾಯ ಲಭೇತ ಸೌಭಗಂ
ಶ್ರಿಯಂ ಪ್ರಜಾಂ ಜೀವಪತಿಂ ಯಶೋ ಗೃಹಾನ್ ॥ ೨೬ ॥

ಪುಮಾನ್=ಪುರುಷನು ವಿಭೋಃ=ಶ್ರೀಹರಿಯ ಈ ವ್ರತವನ್ನು ವಿಧಿಗೆ ತಕ್ಕಂತೆ ಚರಿತ್ವಾ=ಆಚರಿಸಿ ಇಹ=ಈ ಲೋಕದಲ್ಲಿ ಇಷ್ಟಾರ್ಥವನ್ನು ಲಭತೇ=ಪಡೆಯುವನು. ಸ್ತ್ರೀಃ ವಾ - ಹೆಂಗುಸಾದರೂ (ಏ) ತತ್=ಈ ವ್ರತವನ್ನು ಆಸ್ಥಾಯ=ಆಚರಿಸಿ ಸೌಭಗಂ=ಸೌಂದರ್ಯವನ್ನೂ (ಪತಿಯ ಪ್ರೇಮವನ್ನೂ), ಸಂಪತ್ತನ್ನೂ, ಮಕ್ಕಳನ್ನೂ ಜೀವಪತಿಂ=ದೀರ್ಘಾಯುವಾದ ಗಂಡನನ್ನೂ ಯಶಃ=ಕೀರ್ತಿಯನ್ನೂ ಗೃಹಾನ್ (ಗೃಹಾಣಿ)=ಮನೆಗಳನ್ನೂ ಲಭೇತ=ಹೊಂದುವಳು. || ೨೬ ||

ಕನ್ಯಾಽಪಿ ವಿಂದೇತ ಸಮಗ್ರಲಕ್ಷಣಂ
ಪತಿಂ ತ್ವವೀರಾ ಹತ ಕಿಲ್ಬಿಷಾ ಗತಿಂ ।
ಮೃತಪ್ರಜಾ ಜೀವಸುತಾ ಧನೇಶ್ವರೀ
ಸುದುರ್ಭಗಾ ಸುಭಗಾ ರೂಪಮಗ್ರ್ಯಮ್ ॥ ೨೭ ॥

ವಿಂದೇದ್ವಿರೂಪಾ ವಿರುಜೋ ವಿಮುಚ್ಯತೇ
ಯ ಆಮಯಾವೀಂದ್ರಿಯದೇಹಕಲ್ಪಾ ।
ಏತತ್ಪಠನ್ನಭ್ಯುದಯೇ ಚ ಕರ್ಮ-
ಣ್ಯನಂತತೃಪ್ತಿಂ ಪಿತೃದೇವತಾನಾಂ ॥ ೨೮ ॥

ಈ ವ್ರತವನ್ನಾಚರಿಸಿ ಕನ್ಯೆಯೂ ಕೂಡ ಸಮಗ್ರಲಕ್ಷಣಂ-ಸಮಸ್ತ ಲಕ್ಷಣಗಳುಳ್ಳ ಪತಿಯನ್ನು ಹೊಂದುವಳು. ಅವೀರಾ ತು=ವಿಧವೆಯಾದರೋ ಹತಕಿಲ್ಬಿಷಾ

ಪುರುಷನು ಈ ವೈಷ್ಣವ ವ್ರತವನ್ನಾಚರಿಸಿ ಐಹಿಕ ಇಷ್ಟಾರ್ಥಗಳನ್ನು ಪಡೆಯುವನು. ಸ್ತ್ರೀಯು ಆಚರಿಸಿ ಸೌಂದರ್ಯ-ಸಂಪತ್ತು-ಮಕ್ಕಳು-ದೀರ್ಘಾಯುವಾದ ಪತಿ-ಕೀರ್ತಿ ಮತ್ತು ಮನೆಗಳನ್ನೂ ಹೊಂದುವಳು. ಕನ್ಯೆಯು ಸರ್ವ ಲಕ್ಷಣೋಪೇತನಾದ ಗಂಡನನ್ನೂ, ವಿಧವೆಯು ಪಾಪಗಳನ್ನು ಕಳೆದುಕೊಂಡು ಸದ್ಗತಿಯನ್ನೂ, ಮಕ್ಕಳು ಸಾಯುತ್ತಿರುವವಳು ದೀರ್ಘಾಯು ಮಕ್ಕಳನ್ನೂ, ಧನವಂತಳಾದರೂ ದೌರ್ಭಾಗ್ಯವತಿಯು ಸೌಭಾಗ್ಯವನ್ನೂ, ಕುರೂಪಿಯಾಗಿರುವವಳು ಒಳ್ಳೆಯ ರೂಪವನ್ನೂ, ಇಂದ್ರಿಯದೇಹ ಪಾಟವವಿಲ್ಲದವಳು ಸಮಸ್ತ

ಸತೀ=ಪಾಪವನ್ನು ಕಳೆದುಕೊಂಡವಳಾಗಿ, ಗತಿಂ=ಸದ್ಗತಿಯನ್ನು ಹೊಂದುವಳು. ಮೃತಪ್ರಜಾ=ಮಕ್ಕಳು ಸಾಯುತ್ತಿರುವವಳು ಜೀವಸುತಾ=ಬದುಕುವ ಮಕ್ಕಳನ್ನು ಹೊಂದುವಳು. ಧನೇಶ್ವರೀ ಸತ್ಯಪಿ= ಐಶ್ವರ್ಯವಂತಳಾಗಿದ್ದೂ ಯಾ ಸುದುರ್ಭಗಾ=ಯಾರು ದೌರ್ಭಾಗ್ಯವಂತಳೋ ಸಾ=ಅವಳು ಸುಭಗಾ=ಸೌಭಾಗ್ಯವತಿಯು (ಭವತಿ)=ಆಗುವಳು. ವಿರೂಪಾ=ನೋಡಲು ಕುರೂಪಿಯಾಗಿರುವವಳು ಅಗ್ರ್ಯಂ ರೂಪಂ=ಶ್ರೇಷ್ಠವಾದ ರೂಪವನ್ನು ಹೊಂದುವಳು. ಯಃ=ಯಾವನು ಆಮಯಾವೀ=ರೋಗಗ್ರಸ್ತನೋ ಸಃ=ಅವನು ವಿರುಜಃ=ಬಗೆಬಗೆಯ (ವಿಶಿಷ್ಟ) ರೋಗಗಳಿಂದ ವಿಮುಚ್ಯತೇ= ಬಿಡಲ್ಪಡುವನು. ಇಂದ್ರಿಯದೇಹಕಲ್ಪಾ=ಸ್ವಲ್ಪ ನ್ಯೂನ ಇಂದ್ರಿಯ ದೇಹಗಳುಳ್ಳವಳು, ಇಂದ್ರಿಯದೇಹಶಕ್ತಿ ಇಲ್ಲದವಳು ರೋಗಗಳಿಂದ ಬಿಡಲ್ಪಡುವಳು. ಅಭ್ಯುದಯೇ ಕರ್ಮಣಿ=ಮದುವೆ ಮೊದಲಾದ ಮಂಗಳ ಕರ್ಮದಲ್ಲಿ ಏತತ್=ಈ ಮರುತ್ತುಗಳ ಜನ್ಮವನ್ನು ಪಠನ್=ಪಠಿಸುತ್ತಾ ಪಿತೃ-ದೇವತಾನಾಂ=ಪಿತೃದೇವತೆಗಳ ಪಿತೃಗಳ ಮತ್ತು ದೇವತೆಗಳ ಅನಂತತೃಪ್ತಿಂ=ಸಂಪೂರ್ಣ ತೃಪ್ತಿಯನ್ನು ಹೊಂದುವನು. ಪಿತೃದೇವತೆಗಳು ತೃಪ್ತರಾಗುವರು ಎಂದರ್ಥ. || ೨೭, ೨೮ ||

ತುಷ್ಟಾಃ ಪ್ರಯಚ್ಛಂತಿ ಸಮಸ್ತಕಾಮಾನ್
ಹೋಮಾವಸಾನೇ ಹುತಭುಕ್ ಶ್ರೀಹರಿಶ್ಚ ।
ರಾಜನ್ ಮಹನ್ಮರುತಾಂ ಜನ್ಮ ಪುಣ್ಯಂ
ದಿತೇರ್ವ್ರತಂ ಚಾಭಿಹಿತಂ ಮಹತ್ತೇ ॥ ೨೯ ॥

ತುಷ್ಟಾಃ=ಸಂತುಷ್ಟರಾದ ಹುತಭುಕ್=ಅಗ್ನಿಯೂ ಶ್ರೀಹರಿಃ=ಲಕ್ಷ್ಮೀಯುಕ್ತನಾದ ಪರಮಾತ್ಮನೂ ಚ=ದೇವತೆಗಳೂ ಹೋಮಾವಸಾನೇ=ಹೋಮದ ಕೊನೆಯಲ್ಲಿ ಸಮಸ್ತಕಾಮಾ=ವ್ರತಮಾಡಿದವರ ಎಲ್ಲ ಅಭೀಷ್ಟಗಳನ್ನೂ ಪ್ರಯಚ್ಛಂತಿ=ಅನುಗ್ರಹಿಸುವರು. ಉಪಸಂಹರಿಸುತ್ತಾರೆ. ಪರೀಕ್ಷಿದ್ರಾಜನೆ, ಮಹಾಪುಣ್ಯಕರ

ವಿಧವಾದ ರೋಗಗಳಿಂದ ಬಿಡುಗಡೆಯನ್ನೂ ಹೊಂದುವಳು. ರೋಗಿಯಾದವನು ಬಗೆಬಗೆಯ ರೋಗಗಳಿಂದ ಮುಕ್ತನಾಗುವನು. ಸಂತೃಪ್ತರಾದ ಅಗ್ನಿ, ಲಕ್ಷ್ಮೀಸಹಿತನಾದ ಶ್ರೀಹರಿ ಮತ್ತು ದೇವತೆಗಳು ಹೋಮವು ಮುಗಿದಮೇಲೆ ಎಲ್ಲ ಆಸೆಗಳನ್ನೂ ನೆರವೇರಿಸುವರು.

ರಾಜನೇ, ಅತಿಶಯ ಪುಣ್ಯಕರವಾದ ಮರುದ್ಗಣಗಳ ಹುಟ್ಟನ್ನೂ ದಿತಿಯು ಆಚರಿಸಿದ ಶ್ರೀಹರಿ ಪ್ರೀತಿಕರವಾದ್ದರಿಂದ ಉತ್ತಮವಾದ ವ್ರತವನ್ನೂ ನಿನಗೆ ತಿಳಿಸಿದ್ದೇನೆ.

...ವಾದ ಮರುತ್ತುಗಳ ಜನ್ಮವೂ ದಿತಿಯ ಮಹದ್ವ್ರತವೂ (ಶ್ರೀಹರಿಪ್ರೀತಿಕರವಾದ ವ್ರತವೂ) ತೇ=ನಿನಗಾಗಿ ಮಯಾ ಅಭಿಹಿತಂ=ನನ್ನಿಂದ ಹೇಳಲ್ಪಟ್ಟಿತು. || ೧೯ ||

ಶಬ್ದಶಕ್ತ್ಯನುಸಾರೇಣ ವಿಜಯಧ್ವಜಭಿಕ್ಷುಣಾ ।
ಪದರತ್ನಾವಲೀ ಭಾತಿ ಷಷ್ಠಸ್ಕಂಧಗತಾ ಕೃತಾ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ
ಅಷ್ಟಾದಶಸಾಹಸ್ರ್ಯಾಂ ಪಾರಮಹಂಸ್ಯಾಯಾಂ
ಸಂಹಿತಾಯಾಂ ಪುಂಸವನವ್ರತ
ವರ್ಣನಂ ನಾಮ

ಏಕೋನವಿಂಶೋಽಧ್ಯಾಯಃ

ಷಷ್ಠ ಸ್ಕಂಧಃ ಸಮಾಪ್ತಃ

ಶ್ರೀಮಧುಸೂದನಾರ್ಪಣಮಸ್ತು